
# ಓಂ

# ಋಗ್ವೇದ ದರ್ಶನ

ಮತ್ತು ಮಧ್ಯಪ್ರಾಚ್ಯ ಧರ್ಮಗಳು

(ಪರಿಷ್ಕರಿಸಲಾಗಿದೆ)




ಇಂದ್ರ ದರ್ಶನ ಮತ್ತು ಅನುಗ್ರಹವಾಗದೇ ಋಗ್ವೇದವನ್ನು ಅರಿಯಲು ಸಾಧ್ಯವಿಲ್ಲ.
ಭಾರತ ವಿಶ್ವಗುರು ಆಗಬೇಕಿದ್ದರೆ ಋಗ್ವೇದ ರಹಸ್ಯವನ್ನು
ಅರಿತು ಇತರರಿಗೆ ಮಾರ್ಗದರ್ಶನ ಮಾಡಬೇಕಾಗಿದೆ.

| | | |
|---|---|---|
| **೧. ಋಗ್ವೇದ ದರ್ಶನ**<br>ಲೇಖಕರು: ಮೋಹನ್<br>ಕಾಪಿರೈಟ್: ಲೇಖಕರು<br>ಪುಟಗಳು: ೧೫೧ | **೨. ಅಗ್ನಿಹೋತ್ರ**<br>ಲೇಖಕರು: ಮೋಹನ್<br>ಕಾಪಿರೈಟ್: ಲೇಖಕರು<br>ಪುಟಗಳು: ೧೫೨ ರಿಂದ ೨೦೪ | **೩. ಮಧ್ಯಪ್ರಾಚ್ಯ ಧರ್ಮಗಳು**<br>ಲೇಖಕರು: ಮೋಹನ್<br>ಕಾಪಿರೈಟ್: ಲೇಖಕರು<br>ಪುಟಗಳು: ೨೦೫ ರಿಂದ ೨೫೯ |

## ಸಮರ್ಪಣೆ

**ನನ್ನ ಜೀವನದಲ್ಲಿ ಬಂದ ಅನೇಕ ಗುರುಗಳಿಗೆ,** ನನಗೆ ಜನ್ಮವನ್ನು ಕೊಟ್ಟ ದಿವಂಗತರಾದ ನನ್ನ ತಂದೆತಾಯಿಗಳಾದ ಎ. ವೆಂಕಟರಮಣಪ್ಪ ಮತ್ತು ಲಕ್ಷ್ಮಮ್ಮ ಹಾಗು ನನ್ನ ಜೀವನದ ಕಷ್ಟನಷ್ಟಗಳನ್ನು ಹಂಚಿಕೊಂಡ ಪತ್ನಿ ಎಸ್. ಜಿ. ಶಾರದ ಇವರೆಲ್ಲರಿಗೂ ಕೃತಜ್ಞತಾಪೂರ್ವಕ ಸಮರ್ಪಣೆ.

## ಗ್ರಂಥ ಋಣ

'ಋಗ್ವೇದ ಸಂಹಿತಾ' ಸಾಯಣ ಭಾಷ್ಯ
ಶ್ರೀಮನ್ಮಹಾರಾಜ ಶ್ರೀ ಜಯಚಾಮರಾಜೇಂದ್ರ ಒಡೆಯರ್‌ರವರ
ಮಾರ್ಗದರ್ಶನದಲ್ಲಿ ಪ್ರಥಮವಾಗಿ ಪ್ರಕಟನೆಯಾದ ಋಗ್ವೇದಸಂಹಿತಾ
ಅನುವಾದಕರು: ಆಸ್ಥಾನ್ ವಿದ್ವಾನ್ ಎಚ್. ಪಿ. ವೆಂಕಟರಾವ್
ಪುನರ್ ಪ್ರಕಟನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರ್ಕಾರ

'ಋಗ್ವೇದ ಸಂಹಿತಾ' ಆರ್ ಎಲ್ ಕಶ್ಯಪ್‌ರವರ ಭಾಷ್ಯ

'ಋಗ್ವೇದ' ಸಾಯಣ ಭಾಷ್ಯ ಅನುವಾದಕರು ರಾಲ್ಫ ಟಿ ಎಚ್. ಗ್ರಿಫಿತ್

ಶ್ರೀಮನ್ ನಿಜಗುಣಶಿವಯೋಗಿಗಳು

## ಮಾನವರೇ ಜಾಗೃತರಾಗಿ

ಮನುಕುಲವೆಲ್ಲವೂ ಅಸುರಶಕ್ತಿಗಳಿಂದ ಆವೃತರಾಗಿದ್ದಾರೆ. ಆದ್ದರಿಂದ ಇದುವರೆಗೂ ಯಾರೂ ಸಹ ಋಗ್ವೇದ ದೇವತೆಗಳ ಸಂಪೂರ್ಣ ಮಹಿಮೆಯನ್ನು ತಿಳಿದುಕೊಳ್ಳಲು ಸಾಧ್ಯವಾಗಿಲ್ಲ. ಋಗ್ವೇದವನ್ನು ಓದಿ ಹೇಗೆ ಅಸುರಶಕ್ತಿಗಳ ಹಿಡಿತದಿಂದ ಹೊರಬರುವುದು ತಿಳಿದುಕೊಳ್ಳಿ.. ಮೊದಲು ವಾಗ್ದೇವತೆಗಳಾದ ಬೃಹಸ್ಪತಿ, ಬ್ರಹ್ಮಣಸ್ಪತಿ ಮತ್ತು ಸರಸ್ವತಿಯರ ಮಹಿಮೆಯನ್ನು ಅಧ್ಯಾಯ ೧೫ರಲ್ಲಿ ತಿಳಿಸಿದೆ. ಅದನ್ನು ಮೊದಲು ಓದಿ.

# ಪರಿವಿಡಿ

ಪ್ರಸ್ತಾವನೆ ಪುಟ ೪
ಋಗ್ವೇದವೇ ಸರ್ವ ಧರ್ಮದ ಮೂಲ
ವಿಶ್ವಸೃಷ್ಟಿ ಮತ್ತು ವಿನಾಶ ಸಂಕ್ಷಿಪ್ತವಾಗಿ

ಭಾಗ-೧
ಅಧ್ಯಾಯ ೧ ದೀಕ್ಷೆ ಮತ್ತು ಸಾಧನೆ ೧೦
ಅಧ್ಯಾಯ ೨ ನಾನು ಕಂಡ ಇಂದ್ರ ದರ್ಶನ ೧೨
ಮತ್ತು ನಾರಾಯಣ ದರ್ಶನ
ಅಧ್ಯಾಯ ೩ ನಾನು ಕಂಡ ವಿಷ್ಣು ದರ್ಶನ ೧೪
ಅಧ್ಯಾಯ ೪ ಕುಂಡಲಿನಿ ಮಾತೆಯರ ದರ್ಶನ ೧೫
ಅಧ್ಯಾಯ ೫ ನಾನು ಕಂಡ ಶಿವ ದರ್ಶನ ೧೭
ಅಧ್ಯಾಯ ೬ ಸರಸ್ವತಿ ದೇವಿಯ ದರ್ಶನ ೧೯
ಅಧ್ಯಾಯ ೭ ಅಸುರರ ಪಾತಾಳದ ಮಾರ್ಗ ೨೧
ಅಧ್ಯಾಯ ೮ ಆತ್ಮ ಪೂಜಾ ವಿಧಾನ ೨೨
ಅಧ್ಯಾಯ ೯ ಅಶ್ವಮೇದ ಯಾಗ/ಮೋಕ್ಷ ಮಾರ್ಗ ೨೭

ಭಾಗ-೨
ಅಧ್ಯಾಯ ೧೦ ಆದಿಯುಗದ ಸೃಷ್ಟಿ ೨೯
ಅಧ್ಯಾಯ ೧೧ ವಾಯುವಿನ ಮಹಿಮೆ ೩೬
ಅಧ್ಯಾಯ ೧೨ ಸಲಿಲ/ಅನಾದಿಯಾದ ಮಹಾಸಮುದ್ರ ೪೮

ಭಾಗ-೩
ಅಧ್ಯಾಯ ೧೩ ಅದಿತಿ ಮತ್ತು
ದೇವತೆಗಳ ಜನ್ಮ ರಹಸ್ಯ ೫೨
ಅಧ್ಯಾಯ ೧೪ ವಿಶ್ವ ಸಾಮ್ರಾಟ್ ಇಂದ್ರ ಜನನ ೫೮
ಅಧ್ಯಾಯ ೧೫ ವಾಗ್ದೇವತೆಗಳು ೮೩
ಅಧ್ಯಾಯ ೧೬ ಪುರುಷ ಸೂಕ್ತ ೯೩

ಭಾಗ-೩
ಅಧ್ಯಾಯ ೧೭ ವಿಶ್ವಸೃಷ್ಟಿ ೯೯
(ಆದಿತ್ಯರ, ವಿಷ್ಣುವಿನ ಮತ್ತು ಅಗ್ನಿಯ ಮಹಿಮೆ
ಹಾಗು ಪಂಚಭೂತಗಳ ಸೃಷ್ಟಿ)
ಅಧ್ಯಾಯ ೧೮ ಸೋಮರಸ ೧೨೬
ಅಧ್ಯಾಯ ೧೯ ಋತ ಅಥವಾ ದೈವೀಶಾಸನ ೧೩೫
ಅಧ್ಯಾಯ ೨೦ ಯಮ; ದ್ಯಾವಾ-ಪೃಥಿವಿ ೧೪೦
ಅಧ್ಯಾಯ ೨೧ ಶ್ರಾದ್ಧ ಕರ್ಮ ೧೪೭

## ಅಗ್ನಿಹೋತ್ರ (ಪುಸ್ತಕ – ೨)

ಪ್ರಸ್ತಾವನೆ ಪುಟ ೧೫೨
ಅಧ್ಯಾಯ ೧ ಅಗ್ನಿಹೋತ್ರದ ಮಹಿಮೆ ೧೫೩
ಅಧ್ಯಾಯ ೨ ಅಗ್ನಿಹೋತ್ರ/ಅತ್ಯಂತ ಸರಳ ವಿಧಾನ ೧೬೪
ಅಧ್ಯಾಯ ೩ ಅಗ್ನಿಹೋತ್ರ/ಮಂತ್ರ ಸಹಿತ ವಿಧಾನ ೧೭೨
ಅಧ್ಯಾಯ ೪ ಶ್ರಾದ್ಧ ವಿಧಾನ ೨೦೦

## ಮಧ್ಯಪ್ರಾಚ್ಯ ಧರ್ಮಗಳು (ಪುಸ್ತಕ – ೩)

ಪ್ರಸ್ತಾವನೆ ಪುಟ ೨೦೬
ಅಧ್ಯಾಯ ೧ ದೇವವಾಣಿಗಳ ಮಹತ್ವ ೨೦೯
ಅಧ್ಯಾಯ ೨ ಜಲ ಮತ್ತು ಹೋಲಿಸ್ಪಿರಿಟ್ ೨೧೫
ಅಧ್ಯಾಯ ೩ ದೈವೀಮನಸ್ಸಿನ ಅಲ್ಲಾಹ್ ೨೧೫
ಅಧ್ಯಾಯ ೪ ಪಿರಮಿಡ್ ಧರ್ಮ ೨೨೧
ಅಧ್ಯಾಯ ೫ ಇಲೋಹಿಂ/ದೇವಚರರ ಮಹಿಮೆ ೨೨೯
ಅಧ್ಯಾಯ ೬ ಪವಿತ್ರ ಕುರಾನ್‌ನ
ಪ್ರಮುಖ ಸೂಕ್ತಗಳು ೨೪೨

(ತಿಜಟ್ಠಾಜ ತಿ.ತಿ.ತಿ.ಣುಜಾಟುಡಿಜಾಡಿಡಿಟಾಜಜ.ಚಿ.ಟು)

(ಉಚಿತ ಇ-ಪುಸ್ತಕಗಳು)

# ಪ್ರಸ್ತಾವನೆ

## ಋಗ್ವೇದವೇ ಸರ್ವ ಧರ್ಮದ ಮೂಲ

(ದೇವತೆಗಳ ದರ್ಶನದಿಂದ ಪಡೆದ ಋಗ್ವೇದದ ಒಳ ನೋಟ)

ನಾಕಸ್ಯ ಪೃಷ್ಠೇ ಅಧಿ ತಿಷ್ಠತಿ ಶ್ರಿತೋ ಯಃ ಪೃಣಾತಿ ಸ ಹ ದೇವೇಷು ಗಚ್ಛತಿ ၊
ತಸ್ಮಾ ಆಪೋ ಘೃತಮರ್ಷಂತಿ ಸಿಂಧವಸ್ತಸ್ಮಾ ಇಯಂ ದಕ್ಷಿಣಾ ಪಿನ್ವತೇ ಸದಾ ।। (ಋ ೧-೧೨೫-೫ ಸಾಭಾ)
"ದೇವತೆಗಳನ್ನು ಹವಿರಾದಿಗಳಿಂದ ತೃಪ್ತಿಪಡಿಸಿದರೆ ಮನುಷ್ಯನು ಸ್ವರ್ಗಲೋಕದಲ್ಲಿ ಪೂಜಿತನಾಗುತ್ತಾನೆ. ಅಲ್ಲದೇ ದೇವತೆಗಳಲ್ಲಿ ಒಬ್ಬನಾಗುತ್ತಾನೆ; ಅಂಥವನಿಗೆ ಪ್ರವಾಹ ಸ್ವಭಾವದ ನೀರೂ ತೇಜೋವಿಷ್ಟವಾಗುತ್ತದೆ (ರಸವತ್ತಾಗುತ್ತದೆ); ಭೂಮಿಯೂ ಸಸ್ಯಾದಿಫಲಗಳನ್ನು ಕೊಟ್ಟು ಸರ್ವಕಾಲದಲ್ಲಿಯೂ ಸಂತೋಷವನ್ನು ಕೊಡುತ್ತಾಳೆ.

ಪ್ರಪಂಚದ ಎಲ್ಲಾ ಧರ್ಮಗಳ ಅನುಯಾಯಿಗಳು ನಮ್ಮ ದೇವರೆ ನಿಜವಾದ ದೇವರು ಎಂದು ಪರಸ್ಪರ ದ್ವೇಷಿಸುತ್ತಾ ಒಬ್ಬರಿಗೊಬ್ಬರು ಹೊಡೆದಾಡಿಕೊಂಡು ರಕ್ತವನ್ನು ಹರಿಸುತ್ತಿರುವರು. ಈಗ ಇರುವ ಪ್ರಶ್ನೆಯೆಂದರೆ ನಿಜವಾಗಿಯೂ ದೇವರು ಇರುವನೇ? ದೇವರು ಒಬ್ಬನೇ ಇದ್ದಾನೆಯೇ? ಅಥವಾ ಒಂದೊಂದು ಧರ್ಮಕ್ಕೆ ಒಬ್ಬ ದೇವರಿರುವನೇ?

ಆದ್ದರಿಂದ ಮೇಲಿನ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳಲು ಪೃಥ್ವಿಯ ಪ್ರಥಮ ಅಪೌರುಷೇಯ ಗ್ರಂಥವಾದ ದೇವಭಾಷೆಯಲ್ಲಿ ಬಂದ ಋಗ್ವೇದವನ್ನು ಅರ್ಥಮಾಡಿಕೊಳ್ಳೋಣ. ಸನಾತನಧರ್ಮವು ಮೊದಲಾಗಿದ್ದೇ ಋಗ್ವೇದದಿಂದ. ಜೀವವಿಕಾಸ ಕ್ರಿಯೆಯಲ್ಲಿ ಆದಿಮಾನವರು ಪೃಥ್ವಿಯ ಮೇಲೆ ಕಾಣಿಸಿಕೊಂಡಾಗ ಅವರೂ ಸಹ ಪ್ರಾಣಿಗಳಂತೆ ವರ್ತಿಸುತ್ತಿದ್ದರು. ಆಗ ಯಾವುದೇ ಭಾಷೆ ಇರಲಿಲ್ಲ, ಪಶುಪಕ್ಷಿಪ್ರಾಣಿಗಳ ಮತ್ತು ನದಿ ಬೆಟ್ಟ ಗಿರಿಗಳ ಹೆಸರಿನ ಜ್ಞಾನವಿರಲಿಲ್ಲ. ಕೇವಲ ಆಹಾರಕ್ಕಾಗಿ ಅಲೆದಾಡುತ್ತಾ ಜೀವನ ಸಾಗಿಸುತ್ತಿದ್ದರು. ಮಾನವರು ಉದಯಿಸಿದ ಸಹಸ್ರಾರು ವರ್ಷಗಳ ನಂತರ ದೇವರು ಮನುಕುಲವನ್ನು ಉದ್ಧಾರ ಮಾಡಲು, ಭೂಮಿಯ ಮೇಲೆ ಯಾವುದೇ ಭಾಷೆ ಇಲ್ಲದುದರಿಂದ ದೇವಭಾಷೆಯಲ್ಲಿಯೇ ದೇವತೆಗಳ ಮಹಿಮೆಯುಳ್ಳ ಜ್ಞಾನವನ್ನು ಭಗವಂತನು ಅನುಗ್ರಹಿಸಿದನು.

ಆ ದೇವಭಾಷೆಯ ಜ್ಞಾನವನ್ನು ಋಗ್ವೇದ ಎಂದು ಕರೆಯಲಾಗುತ್ತದೆ. ಋಗ್ವೇದವು ನಮಗೆ ಎರಡು ರೀತಿಯ ಜ್ಞಾನವನ್ನು ಕೊಡುತ್ತದೆ. ಒಂದು ಭೌತಿಕ ಪ್ರಪಂಚದ ಜ್ಞಾನ, ಇನ್ನೊಂದು ದೇವತೆಗಳ ಮಹಿಮೆ ಹಾಗು ಭಗವಂತನ ಕಡೆಗೆ ಹೋಗುವ ಜ್ಞಾನವನ್ನು ಕೊಡುತ್ತದೆ. ಮಾನವರು ಭೌತಿಕ ಪ್ರಪಂಚದ ಜ್ಞಾನವನ್ನು ಸುಲಭವಾಗಿ ಅರ್ಥ ಮಾಡಿಕೊಂಡು ಮಾನವರ ಹೆಸರು, ನದಿ ಬೆಟ್ಟ, ಪ್ರಕೃತಿ, ಪಶು, ಪಕ್ಷಿ ಪ್ರಾಣಿಗಳಿಗೆ ಋಗ್ವೇದದಲ್ಲಿ ಹೇಳಿರುವ ಹೆಸರನ್ನು ಇಟ್ಟುಕೊಂಡರು ಹಾಗು ಮಾನವ ಸಂಬಂಧಗಳನ್ನು ಅರ್ಥ ಮಾಡಿಕೊಂಡು ಉತ್ತಮ ಸಮಾಜವನ್ನು ಕಟ್ಟಿಕೊಂಡರು.

ಋಗ್ವೇದವನ್ನು ಪಡೆದುಕೊಂಡ ವೈದಿಕ ಜನಾಂಗದವರು ಅದರ ಭೌತಿಕ ಪ್ರಪಂಚದ ಜ್ಞಾನವನ್ನು ಅರ್ಥಮಾಡಿಕೊಂಡರೂ ಅವರಿಗೆ ದೇವತೆಗಳ ಮಹಿಮೆ ಅರ್ಥವಾಗದ ಕಾರಣ ಯಾರು ನಿಜವಾದ ದೇವರು ಎಂದು ತಿಳಿಯಲಾಗಲಿಲ್ಲ. ಆದ್ದರಿಂದ ವೈದಿಕರು ಯಾವ ದೇವತೆಯನ್ನು ಪೂಜಿಸಿದರೂ, ಯಾವ ರೂಪದಲ್ಲಿ ಪೂಜಿಸಿದರೂ ಒಬ್ಬನೇ ಆದ ಭಗವಂತನಿಗೆ ತಲುಪುತ್ತದೆ ಎಂಬ ತೀರ್ಮಾನಕ್ಕೆ ಬಂದಿರುವರು. ಕೆಲವರು ಋಗ್ವೇದದಲ್ಲಿ ಹೇಳಿರುವ ಪುರುಷನೇ ಶ್ರೇಷ್ಟ ಎಂದು ಭಾವಿಸಿರುವರು.

ಸರಸ್ವತೀ ನದಿ ತೀರದಲ್ಲಿದ್ದ ಆ ಜನಾಂಗವು ದೇವರ ಆದೇಶದಂತೆ ತಮ್ಮ ಸಂಪರ್ಕಕ್ಕೆ ಬಂದ ಎಲ್ಲರಿಗೂ ತಾವು ಪಡೆದುಕೊಂಡ ಜ್ಞಾನವನ್ನು ಹಂಚಿಕೊಂಡರು. ಆ ಕಾಲಘಟ್ಟದಲ್ಲಿ ಭೂಮಿಯ ಮೇಲೆಲ್ಲಾ ದೇವಭಾಷೆಯು ಹರಡಿಕೊಂಡಿತ್ತು ಎಂದು ಒಂದು ಧರ್ಮ ಗ್ರಂಥವು ಹೇಳುತ್ತದೆ. (ದಿ ಟವರ್ ಆಫ್ ಬೇಬಲ್ ಕಥೆಯನ್ನು ತಿಳಿಯಿರಿ)

ವೈದಿಕರಿಗೆ ದೇವಭಾಷೆಯು ಅರ್ಥವಾಗದ ಕಾರಣ ಭಾರತೀಯರ ಉಪನಿಷತ್‌ಗಳಿಂದ ಹಿಡಿದು ಎಲ್ಲಾ ಧರ್ಮ ಗ್ರಂಥಗಳೂ ಸಂಪೂರ್ಣ ಸತ್ಯವನ್ನು ತಿಳಿಸಿಕೊಡಲು ವಿಫಲವಾಗಿವೆ. ಋಗ್ವೇದಕ್ಕೆ ಅನೇಕ ಋಷಿಗಳು, ಆಚಾರ್ಯರೂ ತಾವು ಅರ್ಥಮಾಡಿಕೊಂಡಂತೆ ಭಾಷ್ಯವನ್ನು ಬರೆದಿರುವರು. ಆದರೆ ಎಲ್ಲಾ ಋಗ್ವೇದ ಭಾಷ್ಯಗಳು ಬೇರೆ ಬೇರೆ ರೀತಿಯ ಅರ್ಥವನ್ನು ಕೊಡುತ್ತದೆ. ಇದರಲ್ಲಿ ಆಶ್ಚರ್ಯವೇನಿಲ್ಲ. ಏಕೆಂದರೆ ನಮಗೆ ಆಫ್ರಿಕನ್ ಭಾಷೆಯ ಪುಸ್ತಕವನ್ನು ಓದಲು ಕೊಟ್ಟರೆ ಆ ಪುಸ್ತಕವನ್ನು ಅರ್ಥಮಾಡಿಕೊಳ್ಳಲು ನಮಗೆ ಸಾಧ್ಯವಾಗುವುದಿಲ್ಲ.

ಆದ್ದರಿಂದ ಋಗ್ವೇದಕ್ಕೆ ಸ್ಪಷ್ಟತೆಯನ್ನು ಕೊಡುವ ಜವಬ್ದಾರಿ ದೇವರ ಮೇಲೆಯೇ ಇದೆ. ಯಾವಾಗ ಇತರ ಭಾಷೆಗಳು ಭೂಮಿಯ ಮೇಲೆ ಬೆಳೆದವೋ ಆಗ ದೇವರು ಆ ಭಾಷೆಗಳಲ್ಲಿ ಋಗ್ವೇದಕ್ಕೆ ಸ್ಪಷ್ಟತೆಯನ್ನು ಕೊಟ್ಟಿರುವನು. ನನಗೆ

**ತಿಳಿದಂತೆ ಪಿರಮಿಡ್ ಟೆಕ್ಸ್ಟ್**, ತೋಹ್ರಾ, ಜೆನೆಸಿಸ್ ಮತ್ತು ಕುರಾನ್ ದೇವವಾಣಿಗಳಲ್ಲಿ ಋಗ್ವೇದಕ್ಕೆ ಕೆಲವು ಸ್ಪಷ್ಟತೆಯನ್ನು ದೇವರು ಕೊಟ್ಟಿರುವನು. ಆದ್ದರಿಂದ ಋಗ್ವೇದವನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಲು ಈ ದೇವವಾಣಿಗಳನ್ನೂ ಸಹ ಓದಿ ಅರ್ಥಮಾಡಿಕೊಳ್ಳಬೇಕಾಗುತ್ತದೆ.

ಆದರೆ ಮಾನವರು ಅಜ್ಞಾನ ಮತ್ತು ಅಂಧಕಾರದಿಂದ ಆವರಿಸಲ್ಪಟ್ಟು ಈ ಸತ್ಯವನ್ನು ತಿಳಿಯಲು ಸೋತಿರುವರು. ಈ ಪರಿಸ್ಥಿತಿಗೆ ಕಾರಣ ನಾವೆಲ್ಲರೂ ಅಸುರಶಕ್ತಿಗಳಿಂದ ಆವರಿಸಲ್ಪಟ್ಟಿದ್ದೇವೆ. ಋಗ್ವೇದವನ್ನು ಅರ್ಥಮಾಡಿಕೊಳ್ಳಲು ಮೊದಲು ದೇವತೆಗಳ ಮಹಿಮೆ, ವಿಶ್ವದ ಸೃಷ್ಟಿ ಮತ್ತು ವಿನಾಶವು ಹೇಗೆ ಆಗುತ್ತದೆಂದು ತಿಳಿದುಕೊಳ್ಳುವುದು ಅವಶ್ಯಕ.

**ಇಂದ್ರ ಸ್ವರೂಪ:** ಅಗ್ನಿಹೋತ್ರ ಸಮಯದಲ್ಲಿ ಸೋಮರಸವನ್ನು ಸ್ವೀಕಾರ ಮಾಡುವಾಗ ಇಂದ್ರನು ಸಿಂಹಾಸನಾರೂಢನಾಗಿ ಮಾನವ ರೂಪದಲ್ಲಿ ಪ್ರಕಟನಾಗುತ್ತಾನೆ. ಆತನ ಶರೀರದಿಂದ ಹಿರಣ್ಯ ವರ್ಣದ ಕಿರಣಗಳು ಸರ್ವತ್ರ ಹರಡುತ್ತಿರುವುದನ್ನು ಆರಾಧಕರು ನೋಡುತ್ತಾರೆ. ಇತರ ದೇವತೆಗಳ ಶರೀರದಿಂದ ಈ ರೀತಿಯಲ್ಲಿ ಕಿರಣಗಳು ಹೊರಹೊಮ್ಮುವುದಿಲ್ಲ. ಕೆಲವು ಸಾಧಕರಿಗೆ ಜ್ಯೋತಿರೂಪದಲ್ಲಿ ಕಾಣಿಸಿಕೊಳ್ಳುವನು. ಇಂದ್ರ ಜ್ಯೋತಿಯು ಯಜಮಾನನ ಇಚ್ಛೆಯಂತೆ ದೊಡ್ಡದಾಗುತ್ತದೆ. ಆಗ ದಿವ್ಯಜ್ಯೋತಿಯೊಳಗೆ ಇಂದ್ರನು ವಿಶ್ವ ಸಿಂಹಾಸನದ ಮೇಲೆ ಕುಳಿತಿರುವುದನ್ನು ಕಾಣಬಹುದು. ಆ ದಿವ್ಯಜ್ಯೋತಿಯಿಂದ ಮತ್ತು ಇಂದ್ರನ ಶರೀರದಿಂದ ಹಿರಣ್ಯ ವರ್ಣದ ಕಿರಣಗಳು ಸರ್ವತ್ರ ಹರಡುತ್ತಿರುತ್ತದೆ. ಆದ್ದರಿಂದ ಇಂದ್ರನನ್ನು ಹಿರಣ್ಯಗರ್ಭ ಎಂದು ಕರೆಯುತ್ತಾರೆ. ನಾನು ಇಂದ್ರನ ಮೂರೂ ಸ್ವರೂಪವನ್ನು ನೋಡಿರುವೆನು.

## ವಿಶ್ವ ಸೃಷ್ಟಿ ಮತ್ತು ವಿನಾಶ ಸಂಕ್ಷಿಪ್ತವಾಗಿ

ನಮ್ಮ ಭಾರತೀಯ ಪರಂಪರೆಯಲ್ಲಿ ಸೃಷ್ಟಿ, ಸ್ಥಿತಿ ಮತ್ತು ವಿನಾಶವನ್ನು ಈ ರೀತಿಯಾಗಿ ವಿವರಿಸಿದ್ದಾರೆ. ಬ್ರಹ್ಮ ಸೃಷ್ಟಿ ಮಾಡಿದರೇ, ವಿಷ್ಣುವು ಸೃಷ್ಟಿಯನ್ನು ಪಾಲಿಸುತಾನೆ ಮತ್ತು ಶಿವನು ಸೃಷ್ಟಿಯ ನಾಶವನ್ನು ಮಾಡುತ್ತಾನೆಂದು ಪುರಾಣವು ಹೇಳುತ್ತದೆ. ಶೈವ ಸಿದ್ಧಾಂತದಲ್ಲಿ ನಿರಾಕಾರ ಶಿವನಿಂದ ಸಕಲ ಸೃಷ್ಟಿಯಾಗಿದೆಯೆಂದೂ, ಶಕ್ತಿಯ ಆರಾಧಕರು ಶಕ್ತಿಯಿಂದಲೇ ಸೃಷ್ಟಿಯಾಗಿದೆ ಎಂದು ಹೇಳುತ್ತಾರೆ. ಉಪನಿಷತ್ ಮತ್ತು ಅದ್ವೈತ ಸಿದ್ಧಾಂತವು ಸಕಲವೂ ಪರಬ್ರಹ್ಮನೇ ಆಗಿದ್ದಾನೆ ಎಂದು ತಿಳಿಸುತ್ತದೆ.

ಆದರೆ ಋಗ್ವೇದವು ಏನು ಹೇಳುತ್ತದೆಂದು ತಿಳಿಯೋಣ. "ಯದ್ ಬ್ರಹ್ಮಾಂಡೇ ತದ್ ಪಿಂಡಾಂಡೆ" ಎಂಬ ಸೂಕ್ತದೊಂದಿಗೆ ಮೊದಲು ಮುಂದಿನ ಕಾಲದಲ್ಲಿ ಸೃಷ್ಟಿ ನಾಶವು ಹೇಗೆ ಆಗುತ್ತದೆ ಎಂದು ತಿಳಿಯೋಣ. ಹೇಗೆ ನಮ್ಮ ಪಿಂಡಾಂಡದ ಪಂಚಪ್ರಾಣಗಳನ್ನು ಹಿಂತೆಗೆದುಕೊಂಡಾಗ ನಮ್ಮ ಶರೀರವು ಮರಣಿಸುತ್ತದೋ ಹಾಗೆಯೇ ಬ್ರಹ್ಮಾಂಡದಲ್ಲಿ ಪಂಚಪ್ರಾಣಗಳನ್ನು ಅಂದರೆ ಗುರುತ್ವಾಕರ್ಷಣಸಕ್ತಿ, ವಿದ್ಯುತ್–ಆಯಸ್ಕಾಂತಸಕ್ತಿ, ಬಲಯುತವಾದಶಕ್ತಿ ಹಾಗು ಬಲಹೀನವಾದ ಶಕ್ತಿಯನ್ನು ಇಂದ್ರನ ಇಚ್ಛೆಯಂತೆ (ಉದಾನ ವಾಯುವನ್ನು) ಹಿಂತೆಗೆದುಕೊಂಡಾಗ ಇಡೀ ವಿಶ್ವದಲ್ಲಿ ಮಹಾಕಂಪನ ಉಂಟಾಗಿ ಘನಸ್ಪೋಟ ಸಂಭವಿಸುತ್ತದೆ. ಸಕಲ ಸೂರ್ಯ, ಗ್ರಹ, ನಕ್ಷತ್ರಾದಿಗಳು ಕೂಡಲೇ ಪರಮಾಣುವಿನ ಮೂಲಕಣಗಳಾಗಿ ಮಾರ್ಪಟ್ಟು ಆಕಾಶದ ತುಂಬೆಲ್ಲಾ ವ್ಯಾಪಿಸಿಕೊಳ್ಳುತ್ತದೆ. ಪರಮಾಣುವಿನ ಮೂಲಕಣಗಳು ಉದಕದಂತೆ ವರ್ತಿಸುವುದರಿಂದ ಇದನ್ನು ಸಂಸ್ಕೃತದಲ್ಲಿ ಸಲಿಲ ಎಂದೂ ಅನಾದಿಯಾದ ಮಹಾಸಮುದ್ರವೆಂದೂ ಕರೆಯುತ್ತಾರೆ.

ಓಜಸ್ತದಸ್ಯ ತಿತ್ವಿಷ ಉಭೇಯತ್ಸಮವರ್ತಯತ್ ।
ಇಂದ್ರಶ್ಚರ್ಮೇವ ರೋದಸೀ ।। (ಋಗ್ವೇದ ೮–೬–೫ ಸಾಭಾ)
"ಚರ್ಮವನ್ನು ಸುಲಭವಾಗಿ ಮಡಿಸಿಯೂ, ಬೇಕಾದ ಹಾಗೆ ಹರಡಿಯೂ ಇಟ್ಟುಕೊಳ್ಳುವಂತೆ ಇಂದ್ರನು ಯಾವ ಓಜಸ್ಸಿನಿಂದ ದ್ಯಾವಾಪೃಥ್ವಿಗಳೆರಡನ್ನೂ ತನ್ನ ಇಷ್ಟ ಬಂದಾಗ ವಿಸ್ತೃತವಾದುದನ್ನಾಗಿಯೂ ಅಥವಾ ಸಂಕುಚಿತವಾದುದನ್ನಾಗಿಯೂ ಮಾಡುವನೋ ಅಂತಹ ಈ ಇಂದ್ರನ ಪ್ರಸಿದ್ಧವಾದ ವೀರ್ಯವು (ತೇಜಸ್ಸು) ಪ್ರಕಾಶಿಸುತ್ತದೆ." (ದ್ಯಾವಾಪೃಥ್ವಿ: ಸ್ಥೂಲ ಪ್ರಪಂಚ ಮತ್ತು ಸೂರ್ಯ ಸೃಷ್ಟಿಸಿದ ಸಪ್ತಸ್ವರ್ಗಗಳು.)

## ಆದಿ ಯುಗದ ಸೃಷ್ಟಿ

ಸೃಷ್ಟಿಯನ್ನು ಎರಡು ವಿಭಾಗಗಳನ್ನಾಗಿ ವಿಂಗಡಿಸಬಹುದು. ಪರಬ್ರಹ್ಮನ ಅಂಧಕಾರದಲ್ಲಿ ಲಯವಾಗಿದ್ದ ವಿಶ್ವಮನಸ್ಸು ಜಾಗೃತವಾಗಿ **ಮೊದಲು ಅ–ಕ–ಥ ಎಂದು ಕರೆಯಲ್ಪಡುವ ಅಧೋಮುಖ ಹಂಸ ತ್ರಿಕೋನವನ್ನು ಸೃಷ್ಟಿಸುತ್ತದೆ.** ಆ ತ್ರಿಕೋನದೊಳಗೆ ಪರಬ್ರಹ್ಮನ ಅಂಧಕಾರವು ಬಂದಿತವಾಗಿರುತ್ತದೆ ಮತ್ತು ತ್ರಿಕೋನದ ಮೂರು ಬಿಂದುವಿನಲ್ಲಿ ವಾಮ, ಜ್ಯೇಷ್ಟ ಮತ್ತು ರೌದ್ರಿ ಎಂಬ ಮೂರು ಮಾತೆಯರು ಇರುವರು ಎಂದು ತಂತ್ರಶಾಸ್ತ್ರವು ತಿಳಿಸುತ್ತದೆ.

ಸಹಸ್ರಾರದ ಮಧ್ಯೆ ಇರುವ ಈ ಮೂರು ಮಾತೆಯರೇ ಮೂರು ಕುಂಡಲಿನೀ ಸ್ವರೂಪವನ್ನು ತಾಳಿ ೭ ಚಕ್ತಗಳನ್ನು (೩ ಥ ೭ + ೧= ೨೨ ಚಕ್ರಗಳು) ,ಅನಾದಿಯಾದ ಮಹಾಸಮುದ್ರವನ್ನು ಆವರಿಸಿರುವ ವಾಯುಮಂಡಲದಲ್ಲಿ ಸೃಷ್ಟಿಸುವರು. ಈ ೨೨ ಚಕ್ರಗಳು ವಾಯುವನ್ನು ತೀವ್ರವಾಗಿ ಹೆಚ್ಚು ಮಾಡುತ್ತದೆ (ಸ್ಟೆಪ್ ಅಪ್ ಟ್ರಾನ್ಸಫರ್‌ನಂತೆ). ಹಾಗೆಯೇ ಚಕ್ರಗಳೊಂದಿಗೆ ಮೂರು ಕುಂಡಲಿನೀ ಮಾತೆಯರು ,ಅನಾದಿಯಾದ ಮಹಾಸಮುದ್ರವನ್ನು ಪ್ರವೇಶಿಸಿ ಮಹಾಸಮುದ್ರವನ್ನು ಅಂದರೆ ಸಿಹಿ ಅಥವಾ ಕ್ಷೀರಸಮುದ್ರವನ್ನು ಊರ್ಧ್ವಮುಖವಾಗಿ ನದಿಗಳಂತೆ (ಒಟು ೨೨ ನದಿಗಳು) ಚಲಿಸುವಂತೆ ಮಾತೆಯರು ಮಾಡುವರು.

ಈ ನದಿಗಳ ಹೆಸರನ್ನುಋಗ್ವೇದದಲ್ಲಿ ಕೊಡಲಾಗಿದೆ. ಮೂರು ರೂಪವನ್ನು ಪಡೆದ ಕುಂಡಲಿನಿ ಮಾತೆಯರನ್ನು ಅಧಃಕುಂಡಲಿನಿ, ನಾಭಿಕುಂಡಲಿನಿ ಮತ್ತು ಊರ್ಧ್ವಕುಂಡಲಿನಿ ಎಂದು ಕರೆಯುತ್ತಾರೆ. ಅವರು ತಮ್ಮ ತಮ್ಮ ಸ್ಥಾನದಲ್ಲಿ ನಾಡಿಕಾಂಡಗಳನ್ನು ರಚಿಸಿಕೊಂಡು ಅಲ್ಲಿಂದ ೭೨,೦೦೦ ನಾಡಿಗಳು ಸಿಹಿ ಸಮುದ್ರದಲೆಲ್ಲಾ ಹರಡಿಕೊಂಡು ಅದರ ಕೊನೆಯ ಭಾಗಗಳು ಸಮುದ್ರದ ತುಟ್ಟ ತುದಿಯಲ್ಲಿ ಕೊನೆಗೊಳ್ಳುತ್ತದೆ. ಈ ನಾಡಿಗಳ ಮುಖಾಂತರ ಮಹಾಸಮುದ್ರದಲ್ಲಿ ಮಾತೆಯರು ಉಸಿರಾಡುತ್ತಿರುವರು. ಈ ಪ್ರಥಮ ಭಾಗದ ಸೃಷ್ಟಿಯನ್ನು ಆದಿಯುಗದ ಸೃಷ್ಟಿ ಎಂದು ಋಗ್ವೇದವು ಹೇಳುತ್ತದೆ.

## ದೇವತೆಗಳ ಸೃಷ್ಟಿ

ಈಗ ನಾವು ನೋಡುತ್ತಿರುವ ವಿಶ್ವಸೃಷ್ಟಿಯನ್ನು ದೇವತೆಗಳು ಸೃಷ್ಟಿ ಮಾಡಿದ್ದಾರೆ. ನಾಭಿ ಕುಂಡಲಿನಿ ಮಾತೆಯು ವಮನ ಮಾಡಿ ಸರ್ಪಶರೀರದಿಂದ ಜ್ಯೋತಿರೂಪದಲ್ಲಿ ಹೊರಬಂದು ಧ್ಯೌಃ ನಲ್ಲಿ ಏಳು ಚಕ್ರಗಳನ್ನು ಸೃಷ್ಟಿಸಿ ಆದಿತ್ಯರಿಗೆ ಜನ್ಮವನ್ನು ಕೊಡುತ್ತಾಳೆ. ಆದಿತ್ಯರು ಇಂದ್ರ, ವರುಣ, ಮಿತ್ರಾ, ಅರ್ಯಮಾ, ಭಗ, ಅಂಶ, ದಕ್ಷ ಮತ್ತು ಮಾರ್ತಾಂಡ ಆಗಿದ್ದಾರೆ. ಅವರ ಜನ್ಮಾನಂತರ ಇತರ ಎಲ್ಲಾ ದೇವತೆಗಳು ಪ್ರಕಟರಾದರು.

(ಧ್ಯೌಃ – ಅನಾದಿಯಾದ ಮಹಾಸಮುದ್ರದ ಹೊರ ಮೇಲ್ಮೆ)

ಅದಿತಿಯ ಜ್ಯೇಷ್ಟ ಪುತ್ರನಾದ ಇಂದ್ರನು ಪ್ರಥಮವಾಗಿ ಮನಸ್ಸನ್ನು ಹೊಂದಿರುವನು. ಆತನು ತನ್ನ ಮಾನಸಿಕ ಶಕ್ತಿಯಿಂದ ಸಕಲ ದೇವತೆಗಳನ್ನೂ ಮತ್ತು ವಿಶ್ವವನ್ನು ಆವರಿಸಿಕೊಂಡಿರುವನು. ಇಂದ್ರನು ತನ್ನ ಮನಸ್ಸಿನಲ್ಲಿ ಏನು ಯೋಚಿಸುವನೋ ಅದನ್ನು ದೇವತೆಗಳು ಕಾರ್ಯರೂಪಕ್ಕೆ ತರುವರು. ಇಂದ್ರನ ಮಾನಸಿಕ ಶಕ್ತಿಯನ್ನು ನಮ್ಮ ಸ್ಥೂಲಶರೀರಕ್ಕೆ ಹೋಲಿಸಬಹುದು. ನಮ್ಮ ಸ್ಥೂಲಶರೀರದ ಸಕಲ ಕ್ರಿಯೆಗಳನ್ನು ನಿಯಂತ್ರಿಸುತ್ತಿರುವುದು ನಮ್ಮ ಮನಸ್ಸಾಗಿದೆ. ನಮ್ಮ ಮನಸ್ಸು ಏನನ್ನು ಮಾಡಬೇಕೆಂದು ಆಲೋಚಿಸುತ್ತದೆಯೋ ಅದನ್ನು ನಮ್ಮ ಶರೀರವು ಮಾಡುತ್ತದೆ.




ಮೇಲಿನ ಮೂರು ಚಿತ್ರಗಳು ಕುಂಡಲಿನಿ ಮಾತೆಯರಿಂದಾಗಿದೆ.
ಕೆಳಗಿನ ಮೂರು ಚಿತ್ರಗಳು ದೇವತೆಗಳ ಸೃಷ್ಟಿಯನ್ನು ವಿವರಿಸುತ್ತದೆ.
ಇದರ ಮೇಲಿನ ವಿವರಣೆಯನ್ನು ಮಧ್ಯಪ್ರಾಚ್ಯ ಧರ್ಮಗಳು, ಅಧ್ಯಾಯ ೨ ಪುಟ ೨೨೭ರಲ್ಲಿ ಕೊಟ್ಟಿದೆ

ಅದೇ ರೀತಿಯಾಗಿ ಇಂದ್ರನು ಸೃಷ್ಟಿಮಾಡಬೇಕೆಂದು ಆಲೋಚಿಸಿದ ಕೂಡಲೇ ತಕ್ಷಣ ಆದಿತ್ಯರಾದ ಮಿತ್ರಾ, ವರುಣ, ಅರ್ಯಮಾ ಭಗ, ಅಂಶ ದೇವತೆಗಳು ಅನಂತವಾದ ಪ್ರತಿರೂಪಗಳನ್ನು ಹೊಂದಿ ಊರ್ಧ್ವಮುಖವಾಗಿ ಹರಿಯುತ್ತಿದ್ದ, ಆಕಾಶವನ್ನೆಲ್ಲಾ ವ್ಯಾಪಿಸಿಕೊಂಡಿದ್ದ ಸಿಹಿ ಸಮುದ್ರವನ್ನೆಲ್ಲಾ ಸರಸ್ಸಿನಂತೆ, ಜಲಗೋಳದಂತೆ ಸಂಗ್ರಹಿಸಿದರು. ಆನಂತರ ವಾಯು ಮತ್ತು ಜಲವನ್ನು ಸಂಕೋಚ ಮತ್ತು ವಿಕಿರಣದಿಂದ ಅಗ್ನಿಗೋಳವನ್ನಾಗಿ ಪರಿವರ್ತಿಸಿದರು. ತದನಂತರ ಆದಿತ್ಯರ ತೇಜಸ್ಸು ಅಗ್ನಿಗೋಳವನ್ನು ಆವರಿಸಿಕೊಂಡಾಗ ಸೂರ್ಯನು ಪ್ರಕಟನಾದನು. ಆ ಸೂರ್ಯನ ತೇಜಸ್ಸಿನಲ್ಲಿ ಸವಿತೃ ದೇವತೆಯು ಪ್ರಕಟನಾದನು. ಈ ರೀತಿಯಾಗಿ ಸಕಲ ಗೆಲಾಕ್ಸಿಗಳು ಮತ್ತು ಸೂರ್ಯರಲ್ಲಿ ಆದಿತ್ಯರು ಇರುವರು ಏಕೆಂದರೆ ಗೆಲಾಕ್ಸಿ ಮತ್ತು ಸೂರ್ಯರ ತೇಜಸ್ಸಿಗೆ ಆದಿತ್ಯರೇ ಕಾರಣ. ಪ್ರತಿಯೊಂದು ಸೂರ್ಯರಲ್ಲಿಯೂ ಮಿತ್ರಾ, ವರುಣ, ಅರ್ಯಮಾ, ಭಗ, ಅಂಶ ಇತರ ದೇವತೆಗಳಿರುವರು. ಇಂದ್ರನು ಮಾತ್ರ ವಿಶ್ವದ ಮೇಲಿರುವ ಬೆಳಕಿನ ಲೋಕದಲ್ಲಿರುವನು.

ಯದ್ದೇವಾ ಅದಃ ಸಲಿಲೇ ಸುಸಂರಬ್ಧಾ ಅತಿಷ್ಠತ ।
ಅತ್ರಾ ವೋ ನೃತ್ಯತಾಮಿತ ತೀವ್ರೋ ರೇಣುರಪಾಯತ ।। (ಋಗ್ವೇದ ೧೦-೭೨-೬ ಸಾಭಾ)
"ಎಲೈ ದೇವತೆಗಳೇ, ಯಾವಾಗ ನೀವು ಈ ಸರಸ್ಸಿನಲ್ಲಿ ಉತ್ತಮವಾದ ಚೇತಸ್ಸುಳ್ಳವರಾಗಿ ಸ್ಥಿತರಾದಿರೋ ಆಗ ಇದೇ ಸರಸ್ಸಿನಲ್ಲಿ ನೀವು ನರ್ತನ ಮಾಡುತ್ತಿರುವಿರೋ ಎಂಬಂತೆ ನಿಮಗೆ ಸೇರಿದುದೂ, ತೀಕ್ಷ್ಣವಾದುದೂ ಆದ ತೇಜಸ್ಸಿನ ಅಂಶವು ಉದ್ಭೂತವಾಯಿತು."

ಯದ್ದೇವಾ ಯತಯೋ ಯಥಾ ಭುವನಾನ್ಯಪಿನ್ವತ ।
ಅತ್ರಾ ಸಮುದ್ರ ಆ ಗೂಳ್ಹಮಾ ಸೂರ್ಯಮಜಭರ್ತನ ।। (ಋಗ್ವೇದ ೧೦-೭೨-೭ ಸಾಭಾ)
"ಎಲೈ ದೇವತೆಗಳೇ, ಮೇಘಗಳು ವೃಷ್ಟಿಯಿಂದ ಲೋಕಗಳನ್ನು ತುಂಬುವಂತೆ, ಈ ಲೋಕಗಳನ್ನು ನಿಮ್ಮ ತೇಜಸ್ಸಿನಿಂದ ತುಂಬಿದಿರೋ ಆಗ ಉದಕಸಂಘದಲ್ಲಿ ಅಡಗಿದ್ದ ಸೂರ್ಯನನ್ನು ಹೊರಕ್ಕೆ ಬರಮಾಡಿ ಪ್ರಕಾಶಪಡಿಸಿದಿರಿ."

ಆದರೆ ಅಂಧಕಾರದಲ್ಲಿದ್ದ ಅಸುರರಿಗೆ ದೇವತೆಗಳ ತೇಜಸ್ಸನ್ನು ಸಹಿಸಿಕೊಳ್ಳಲಾಗದೇ ಸೂರ್ಯನನ್ನು ಮತ್ತು ಸಪ್ತನದಿಗಳನ್ನು ಅಂಧಕಾರ ಮತ್ತು ಅಜ್ಞಾನದಿಂದ ಆವರಿಸಿಕೊಂಡು ಸಪ್ತನದಿಗಳನ್ನು ಊರ್ಧ್ವಮುಖವಾಗಿ ಚಲಿಸುತ್ತಿರುವುದನ್ನು ನಿಲ್ಲಿಸಿ ಹರಿಯದ ನಿಂತ ನೀರಾಯಿತು ಮತ್ತು ಸೂರ್ಯನು ಕತ್ತಲಿನಲ್ಲಿ ಮುಳುಗಿದನು. ಸೃಷ್ಟಿಕ್ರಿಯೆಯು ಸ್ಥಗಿತವಾಯಿತು. ಉದಾಹರಣೆಗೆ ಕೆಳಗಿನ ಮಂತ್ರವನ್ನು ಓದಿರಿ.

ತ ಆದಿತ್ಯಾಸ ಉರವೋ ಗಭೀರಾ ಅದಬ್ಧಾಸ್ತೋ ದಿಪ್ಸನ್ತೋ ಭೂರ್ಯಕ್ಷಾಃ ೧

ಅನ್ತಃ ಪಶ್ಯನ್ತಿ ವೃಜಿನೋತ ಸಾಧು ಸರ್ವಂ ರಾಜಭ್ಯಃ ಪರಮಾ ಚಿದನ್ತಿ ೧೧ (ಋ ೨–೨೭–೩ ಸಾಭಾ)

"ಅದಿತಿಯ ಪುತ್ರರೂ, ಮಹತಾದ ಸ್ವರೂಪವುಳ್ಳವರೂ ಗಾಂಭೀರ್ಯದಿಂದ ಕೂಡಿದವರೂ, ಶತ್ರುಗಳಿಂದ ಹಿಂಸಿತವಾಗದವರೂ, ಪ್ರಭೂತವಾದ ತೇಜಸ್ಸುಳ್ಳವರೂ ಆದ ಆದಿತ್ಯರು (ವರುಣ, ಮಿತ್ರಾ, ಆರ್ಯಮಾ ಮತ್ತು ಭಗ) ಪ್ರಾಣಿಗಳ ಹೃದಯದಲ್ಲಿದ್ದುಕೊಂಡು ಮಾನವರ ಪಾಪಗಳನ್ನೂ ಮತ್ತು ಪುಣ್ಯ ಕಾರ್ಯಗಳನ್ನೂ ತಿಳಿಯುತ್ತಾರೆ. **ಅತ್ಯಂತ ದೂರದಲ್ಲಿದ್ದರೂ ಸಹ ಸಕಲ ವಸ್ತುಗಳು ಪ್ರಭುಗಳಾದ ಆದಿತ್ಯರಿಗೆ ಅತ್ಯಂತ ಸಮೀಪದಲ್ಲಿರುವಂತೆಯೇ ಇರುತ್ತದೆ.**"

(ಇದೇ ರೀತಿ ವಿರಾಟ್‌ಪುರುಷನಲ್ಲಿ ಸೂರ್ಯನು ಪ್ರಕಟವಾದ ಮೇಲೆ ಅಸುರಲೋಕದಲ್ಲಿ ಕತ್ತಲಿನಲ್ಲಿದ್ದ ವೃತ್ರಾಸುರ ಮತ್ತು ಅಸುರರಿಗೆ ಸೂರ್ಯನ ತೇಜಸ್ಸನ್ನು ಸಹಿಲಾಗದೇ ಸೂರ್ಯನನ್ನು ಅಂಧಕಾರದಿಂದ ಆವರಿಸಿಕೊಂಡನು.)

ಆನಂತರ ಇಂದ್ರನು ವೃತ್ರಾಸುನ ವಧೆಯನ್ನು ಮಾಡಿ ಸೃಷ್ಟಿಕ್ರಿಯೆಗೆ ಚಾಲನೆ ಕೊಟ್ಟನು. ಸೂರ್ಯ–ಸವಿತೃ ಮತ್ತು ಆದಿತ್ಯರು ಸ್ವರ್ಗ–ನರಕ–ಪೃಥ್ವಿಯನ್ನು ಮತ್ತು ಚರಾಚರ ಜೀವಿಗಳನ್ನು ಸೃಷ್ಟಿಯನ್ನು ಮಾಡಿದ್ದಾರೆ. ಆದರೆ ಜೀವಿಗಳ ಸೃಷ್ಟಿಯನ್ನು ಅದಿತಿಯ ಎಂಟನೆಯ ಪುತ್ರನಾದ ಮಾರ್ತಾಂಡನ'ನ್ನು ಉಪಯೋಗಿಸಿಕೊಂಡು ಸೃಷ್ಟಿಸಿದ್ದಾರೆ. ಅಂದರೆ ನಮ್ಮ ಸ್ಥೂಲಶರೀರವೆಲ್ಲವೂ ಮಾರ್ತಾಂಡನಿಂದಾಗಿದೆ. ಮಾರ್ತಾಂಡ ಪದದ ಅರ್ಥ ಮರ್ತ್ಯ+ಅಂಡ ಎಂದಾಗುತ್ತದೆ. ವಿಜ್ಞಾನಿಗಳ ಪ್ರಕಾರ ಜೀವಕೋಶಗಳಿಂದಾಗಿ ನಮ್ಮ ಶರೀರವು ಸೃಷ್ಟಿಯಾಗಿದೆ. ಮಾರ್ತಾಂಡನು ಬಹುಶಃ ಜೀವಕೋಶಗಳ ಮುದ್ದೆಯಂತೆ ಜನಿಸಿದ ಕಾರಣ ಅದಿತಿಯು ಅವನನ್ನು ಮೇಲಕ್ಕೆ ಎಸೆದಳು. ಅಂದರೆ ಆಕಾಶದ ತುಂಬೆಲ್ಲಾ ಜೀವಕೋಶಗಳು ಹರಡಿರಬೇಕು. ವಿಶ್ವದಲ್ಲಿ ಎಲ್ಲೆಲ್ಲಿ ಸೂಕ್ತ ಗ್ರಹಗಳಿವೆಯೋ ಅಂದರೆ ಸೃಷ್ಟಿಯ ವಾತಾವರಣವಿರುವುದೋ ಅಲ್ಲೆಲ್ಲ ಜೀವರಾಶಿಗಳ ಸೃಷ್ಟಿಯನ್ನು ದೇವತೆಗಳು ಮಾಡುವರು.

## ಗ್ರಂಥಕರ್ತರ ಪರಿಚಯ

ನಾನು ಮೇ ೩೧ ೧೯೫೭ರಲ್ಲಿ ಬೆಂಗಳೂರಿನ ಸಾಮಾನ್ಯ ಕುಟುಂಬದಲ್ಲಿ ಜನಿಸಿದೆನು. ನನ್ನ ತಂದೆ ದಿವಂಗತರಾದ ಎ. ವೆಂಕಟರಮಣಪ್ಪ ಮತ್ತು ತಾಯಿ ಲಕ್ಷ್ಮಮ್ಮನವರಲ್ಲಿ ಎರಡನೆಯ ಗಂಡು ಮಗನಾಗಿ ಜನಿಸಿದೆನು. ನಾವು ಐದು ಜನ ಅಕ್ಕ ತಂಗಿಯರು ಮತ್ತು ನಾಲ್ಕು ಜನ ಗಂಡು ಮಕ್ಕಳ ದೊಡ್ಡ ಕುಟುಂಬವಾಗಿತ್ತು. ನಮ್ಮೆಲ್ಲರ ಬಾಲ್ಯವು ಬಹಳಷ್ಟು ಕಷ್ಟದಲ್ಲಿಯೇ ಕಳೆಯಿತು. ನಾನು ಸುಮಾರು ಎಂಟು ವರ್ಷದವನಾಗಿದ್ದಾಗ ನನ್ನ ತಂದೆ ತಾಯಿಗಳು ಈಗಿನ ಗೋವಿಂದರಾಜ ನಗರದಲ್ಲಿರುವ ಪರಮಹಂಸ ಸನ್ಯಾಸ ಆಶ್ರಮಕ್ಕೆ ಕರೆದುಕೊಂಡು ಹೋಗುತ್ತಿದ್ದರು.

ನಾನು ಮತ್ತು ನಮ್ಮ ಅಣ್ಣನವರಾದ ವಿ, ರಾಮಚಂದ್ರರವರು ಪ್ರತೀ ವಾರ ಅಲ್ಲಿಗೆ ಹೋಗುತ್ತಿದ್ದೆವು. ಆಶ್ರಮದ ಸ್ವಾಮೀಜಿಗಳಾದ ಶ್ರೀ ಶ್ರೀ ಪರಮಹಂಸ ಜ್ಯೋತಿರ್ಮಯಾನಂದ ಸರಸ್ವತಿ ಸ್ವಾಮೀಜಿ ಮತ್ತು ಹಿಂದಿನ ವಾನಪ್ರಸ್ಥಾಶ್ರಮದ ಪತ್ನಿಯಾದ ಶ್ರೀ ಶ್ರೀ ಪರಮಹಂಸ ಜ್ಯೋತಿರ್ಮಯಾನಂದ ಮಾತಾಜಿಯವರ ಕೃಪಾಕಟಾಕ್ಷವು ಸಂಪೂರ್ಣವಾಗಿ ನಮ್ಮ ಮೇಲೆ ಇದ್ದಿತು. ಸ್ವಾಮೀಜಿಯವರು ಪ್ರವಚನವನ್ನು ಕೊಡುವಾಗ ಪ್ರಾಣಾಯಾಮದ ನಾಡಿಗಳಾದ ಇಡಾ ಪಿಂಗಳ ನಾಡಿಗಳನ್ನು ಮತ್ತು ಪ್ರಾಣವನ್ನು ಹೇಗೆ ನಿಧಾನವಾಗಿ ಹುಲಿ ಮತ್ತು ಸಿಂಹವನ್ನು ಪಳಗಿಸುವರೋ ಹಾಗೆ ಪಳಗಿಸಬೇಕೆಂದು ಹೇಳುತ್ತಿದ್ದರು. ಈ ವಿಷಯವು ಚಿಕ್ಕವನಾದ ನನ್ನ ಮನಸ್ಸಿನ ಮೇಲೆ ಅತ್ಯಂತ ಪರಿಣಾಮವನ್ನು ಬೀರಿ ಕುಂಡಲಿನಿ ಯೋಗಕ್ಕೆ ಮಾರುಹೋದೆನು.

ಅಂದು ನನ್ನ ಮನಸ್ಸಿನಲ್ಲಿ ಬಿತ್ತಿದ ಬೀಜವು ೧೯೯೦ರಲ್ಲಿ ವಿಫಲ ಪ್ರಯತ್ನವಾಗಿ ತೊಂದರೆಗಳನ್ನು ಅನುಭವಿಸಿದೆನು. ಆದರೆ ನನ್ನ ಅರವತ್ತನೆಯ ವಯಸ್ಸಿನಲ್ಲಿ ಪೂರ್ಣ ಫಲಕೊಟ್ಟಿತು. ಆದ್ದರಿಂದ ಸ್ವಾಮೀಜಿ ಮತ್ತು ಅಮ್ಮನವರ ಪ್ರೀತಿ ಮತ್ತು ಅವರ ಕೈ ಅಡಿಗೆಯನ್ನು ಉಂಡ ನಾನು ಅವರನ್ನು ಮೊದಲ ಗುರುವೆಂದು ಭಾವಿಸುತ್ತೇನೆ. ನನ್ನ ವಿದ್ಯಾಭ್ಯಾಸವು ೧೦ನೆಯ ತರಗತಿಯವರೆಗೆ ಮಾತ್ರ ನಡೆಯಿತು. ನಮ್ಮ ಮನೆಯ ದೇವರು ವೆಂಕಟೇಶ್ವರನಾದರೂ ನನ್ನ ತಂದೆ ತಾಯಿಯವರು ಶಿವನ ಭಕ್ತರಾಗಿದ್ದುದರಿಂದ ನಾನೂ ಸಹ ಶಿವನ ಭಕ್ತನಾದೆನು. ಆಶ್ರಮ ಸಂಪರ್ಕದ ಪರಿಣಾಮದಿಂದ ನಾನು ಶಿವ ಪಂಚಾಕ್ಷರಿ ಜಪವನ್ನು ಆಗಾಗ ಮಾಡುತ್ತಿದ್ದೆನು ಮತ್ತು ಚಿಕ್ಕ ವಯಸ್ಸಿನಿಂದಲೂ ಶಿವನನ್ನು ನನ್ನ ಗುರುವೆಂದು ದೃಢವಾಗಿ ನಂಬಿರುವೆನು.

ನನ್ನ ವಿದ್ಯಾಭ್ಯಾಸವು ಹತ್ತನೆಯ ತರಗತಿಯಲ್ಲಿ ಕೊನೆಗೊಂಡಿತು. ಇದರಲ್ಲಿ ಫೇಲಾದ ನಂತರ ನಾನು ಇಂಡಸ್ಟ್ರಿಯಲ್ ಟ್ರೈನಿಂಗ್ ಇನ್ಸ್ಟಿಟ್ಯೂಟ್‌ನಲ್ಲಿ ಫಿಟ್ಟರ್ ತರಬೇತಿಯನ್ನು ಮಾಡತೊಡಗಿದೆನು. ಎರಡು ವರ್ಷದ ತರಬೇತಿಯಲ್ಲಿ ಒಂದುವರೆ ವರ್ಷ ತರಬೇತಿಯನ್ನು ಮುಗಿಸಿ ಸೇನೆಯ ಆಕರ್ಷಣೆಗೆ ಒಳಗಾಗಿ ಸೆಪ್ಟಂಬರ್ ೧೮

೧೯೬೭ರಲ್ಲಿ ಭಾರತೀಯ ನೌಕಾದಳಕ್ಕೆ ಸೇರಿಕೊಂಡೆನು. ಅಲ್ಲಿಯವರೆಗೂ ಸಾಧಾರಣ ವಿದ್ಯಾರ್ಥಿಯಾಗಿದ್ದ ನಾನು ನೌಕಾದಳದಲ್ಲಿ ಉತ್ತಮ ವಿದ್ಯಾರ್ಥಿಯಾಗಿ ಬದಲಾದೆನು. ೬೪ ವಾರಗಳ ಟೆಲೆಗ್ರಫಿ ತರಬೇತಿಯಲ್ಲಿ ಪ್ರಥಮ ರ್‍ಯಾಂಕ್ ಪಡೆದೆನು ಹಾಗೆಯೇ ಅತ್ಯುತ್ತಮ ವಿದ್ಯಾರ್ಥಿ ಸ್ಥಾನವನ್ನೂ ಸಹ ಗಳಿಸಿದೆನು ಮತ್ತು ಪ್ರ್ಯಾಕ್ಟಿಕಲ್ಸ್‌ನಲ್ಲಿ ಪ್ರಥಮ ಟ್ರೋಫಿಯನ್ನು ಪಡೆದೆನು. ನಾನು ಮೊದಲ ಬಾರಿಗೆ ಭಾರತೀಯ ನೌಕಾದಳದಿಂದ ರಜೆಯ ಮೇಲೆ ಬಂದಾಗ, ನಮ್ಮ ತಾಯಿಯ ಸಂಕಟವನ್ನು ನೋಡಲಾಗದೆ ಪರಮಹಂಸ ಸನ್ಯಾಸ ಆಶ್ರಮದ ಸ್ವಾಮೀಜಿಯವರು ನನ್ನ ರಕ್ಷಣೆಗಾಗಿ ತಾವು ಅಲ್ಲಿಯವರೆಗೆ ಮಾಡಿದ ಪುಣ್ಯವನ್ನು ಧಾರೆಯೆರೆದು ಕೊಟ್ಟಿದ್ದು ನನ್ನ ಮನಸ್ಸಿನಲ್ಲಿ ಚಿರಸ್ಥಾಯಿಯಾಗಿ ನಿಂತಿದೆ. ಈ ಘಟನೆಯಾದ ಒಂದು ವರ್ಷದಲ್ಲಿ ನಾನು ಕೆಲಸ ಮಾಡುತಿದ್ದ ಹಡಗು ಯುದ್ದದಲ್ಲಿ ಮುಳುಗಿ ಹೋಯಿತು. ಆದರೆ ಅದಕ್ಕೂ ಮೂರು ತಿಂಗಳ ಮೊದಲೇ ನನಗೆ ಬೇರೆಯ ಕಡೆ ವರ್ಗವಾಗಿತ್ತು. ಸ್ವಾಮೀಜಿಯವರ ಕೃಪೆಯಿಂದಾಗಿಯೇ ನಾನು ಈ ಗಂಡಾಂತರದಿಂದ ಪಾರಾದೆನೆಂದು ಭಾವಿಸುತ್ತೇನೆ.

ಆನಂತರ ನಾನು ಅನೇಕ ಯುದ್ಧ ಹಡಗುಗಳಲ್ಲಿ ಕೆಲಸ ಮಾಡಿದೆನು. ಅದರಲ್ಲಿ ಪ್ರಮುಖವಾಗಿ ಐ.ಎನ್.ಎಸ್. ಕುಕ್ರಿ (ಮುಳುಗಿಹೋದ ಹಡಗು), ಐ.ಎನ್.ಎಸ್. ಹಿಮಗಿರಿ, ಐ.ಎನ್.ಎಸ್. ಉದಯಗಿರಿ ಯುದ್ಧ ಹಡಗುಗಳಲ್ಲಿ ಮತ್ತು ಇತರ ಸ್ಥಳಗಳಲ್ಲಿ ಸೇವೆಯನ್ನು ಮಾಡಿರುವೆನು. ಐ.ಎನ್.ಎಸ್. ಉದಯಗಿರಿ ಹಡಗಿನಲ್ಲಿ ಸೇವೆಯನ್ನು ಸಲ್ಲಿಸುತ್ತಿರುವ ವೇಳೆಯಲ್ಲಿ ಬ್ರಿಟಿಷ್ ರಾಣಿ ಎಲಿಝಬೆತ್‌ರವರು ೨೫ ವರ್ಷ ರಾಜ್ಯಭಾರ ಮಾಡಿದ ನೆನಪಿಗಾಗಿ ಬ್ರಿಟಿಷ್ ಸರ್ಕಾರವು ಆಚರಿಸಿದ ಸಂಭ್ರಮಾಚರಣೆಯಲ್ಲಿ ನಮ್ಮ ಹಡಗು ಭಾಗವಹಿಸಿತು. ಭಾರತ ದೇಶವು ರಾಣಿಯವರಿಗೆ ಗೌರವವನ್ನು ಸೂಚಿಸುವ ಸಲುವಾಗಿ ನಮ್ಮ ಹಡಗನ್ನು ೧೯೭೭ರಲ್ಲಿ ಪೋರ್ಟ್ಸ್‌ಮೌತ್‌ನಲ್ಲಿ ನಡೆದ ಯುದ್ಧ ಹಡಗುಗಳ ಫ್ಲೀಟ್ ರೆವ್ಯೂನಲ್ಲಿ ಪಾಲ್ಗೊಳ್ಳಲು ಕಳುಹಿಸಿತು. ಆನಂತರ ನಾನು ಫೆಬ್ರವರಿ ೧೮ ೧೯೭೯ರಲ್ಲಿ ನೌಕಾದಳದಿಂದ ನಿವೃತ್ತನಾದೆನು.

ನಾನು ಜೂನ್ ೧೫ ೧೯೮೦ರಲ್ಲಿ ಉತ್ತಮ ಗುಣವುಳ್ಳ ಎಸ್.ಜಿ. ಶಾರದ ಎಂಬುವವರನ್ನು ಮದುವೆಯಾದೆನು. ಆಕೆಯು ನನ್ನ ಅನೇಕ ಕಷ್ಟ–ನಷ್ಟಗಳಲ್ಲಿ ಭಾಗಿಯಾಗಿ ನಮ್ಮ ಕುಟುಂಬಕ್ಕೆ ಆಧಾರ ಸ್ತಂಭವಾಗಿರುವರು. ಅಂತಹ ಪತ್ನಿಯನ್ನು ಪಡೆದಿರುವುದುದು ನನ್ನ ಪುಣ್ಯವೇ ಸರಿ. ನಮಗೆ ಇಬ್ಬರು ಮಕ್ಕಳು. ದೊಡ್ಡವನಾದ ಬಿ.ಎಮ್.ಕಿರಣ್ ಅನುರೂಪಳಾದ ಕುಸುಮ ಎಂಬ ಪತ್ನಿಯನ್ನು ಪಡೆದು ಸಮರ್ಥ್ ಎಂಬ ಮಗನನ್ನು ಮತ್ತು ಜಾನ್ಹವಿ ಎಂಬ ಮಗಳನ್ನು ಪಡೆದಿದ್ದಾರೆ. ನನ್ನ ಮಗಳಾದ ಬಿ.ಎಮ್ ಪಲ್ಲವಿಯು ಕುಮಾರ್ ಶಿತೇಂದು ಜಾ ಎಂಬುವರನ್ನು ಮದುವೆಯಾಗಿ ದೇವಾಂಶ್ ಜಾ ಎಂಬ ಮಗನನ್ನು ಪಡೆದು ಎಲ್ಲರೂ ಸುಖವಾಗಿರುವರು.

**(ತಿಜ್ಞಾಾಜ** ತಿತಿತಿ.ಣುಚ್ಞಚುಡಿಜಾಾಜಿಡಿಯಾಾಜಚಿ.ಯ

ಪಾತಂಜಲ ಯೋಗ ದರ್ಶನದ ಮೇಲೆ ಒಂದು ಕಿರುನೋಟ

ಪ್ರಾತಃಸ್ಮರಣೀಯರಾದ ಪಾತಂಜಲ ಮಹರ್ಷಿಗಳು "ಯೋಗದರ್ಶನ" ಎಂಬ ಪುಸ್ತಕವನ್ನು ಬರೆದಿರುವರು. ಅಧ್ಯಾಯ ೨ ಸೂಕ್ತ ೨೮ ಮತ್ತು ೨೯ರಲ್ಲಿ ಮಹರ್ಷಿಗಳು ಹೇಳಿರುವುದೇನೆಂದರೆ, ಯೋಗ ದರ್ಶನದ ಎಂಟು ಅಂಗಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ, ಅಂತಹ ವ್ಯಕ್ತಿಯು ಯೋಗ ಮಾರ್ಗಕ್ಕೆ ಸಿದ್ಧನಾಗುವನು. ಆದ್ದರಿಂದ ನಾವು ಯಾವುದೇ ತರನಾದ ಸಾಧನೆಯನ್ನು ಮಾಡಿದರೂ ಯೋಗ ದರ್ಶನದ ಆಷ್ಟಾಂಗ ಯೋಗವು ಎಲ್ಲರಿಗೂ ಸರ್ವೆ ಸಾಮಾನ್ಯವಾಗಿದೆ. ಅಂದರೆ ಯಮ, ನಿಯಮ, ಅಸನ, ಮತ್ತು ಪ್ರಾಣಾಯಾಮವು ಎಲ್ಲಾ ಸಾಧ್‌ಕರಿಗೂ, ಎಲ್ಲ ಧರ್ಮದವರಿಗೂ ಹಾಗೂ ಮನುಕುಲಕ್ಕೂ ಸಾಮಾನ್ಯವಾಗಿವೆ. ಈ ನಾಲ್ಕು ಅಂಗಗಳು ನಮ್ಮನ್ನು ದೇವರ ಕಡೆಗೆ ತೆರಳಲು ಅತ್ಯಂತ ಸಹಾಯಕವಾಗಿದೆ. ಆದರೆ ಕೊನೆಯ ನಾಲ್ಕು ಅಂಗಗಳಾದ ಪ್ರತ್ಯಾಹಾರ, ಧಾರಣ, ಧ್ಯಾನ ಮತ್ತು ಸಮಾಧಿ ಇವುಗಳು ಅವರವರ ಮಾರ್ಗ, ಸಿದ್ಧಾಂತ, ಪಂಗಡ ಮತ್ತು ಮತಗಳನ್ನು ಅನುಸರಿಸಿ ಬೇರೆ ಬೇರೆಯಾಗಿರುತ್ತದೆ.

ಆದರೆ ಯೋಗಮಾರ್ಗದಿಂದ ಋಗ್ವೇದ ದೇವತೆಗಳನ್ನು ನೋಡಲು ಸಾಧ್ಯವಿಲ್ಲ.

# ಭಾಗ ೧

## ಅಧ್ಯಾಯ ೧ – ದೀಕ್ಷೆ ಮತ್ತು ಸಾಧನೆ

ನಹಿ ತ್ವಾ ಶೂರ ದೇವಾ ನ ಮರ್ತಾಸೋ ದಿತ್ಸಂತಂ ।
ಭೀಮಂ ನ ಗಾಂ ವಾರಯಂತೇ ।। (ಋಗ್ವೇದ ೮-೮೧-೩ ಸಾಭಾ)

"ವೃಷಭದ ವೇಗವನ್ನು ತಡೆಯಲು ಹೇಗೆ ಸಾಧ್ಯವಿಲ್ಲವೋ ಹಾಗೆ ಇಂದ್ರನು ತನ್ನ ಔದಾರ್ಯವನ್ನು ಪ್ರಕಾಶಪಡಿಸುತ್ತಾ ಯಜಮಾನನಿಗೆ ಸಂಪತ್ತನ್ನು ಹಂಚಲು ಇಷ್ಟಪಟ್ಟಿದ್ದೇ ಆದರೆ ಅದನ್ನು ವಿರೋಧಿಸಲು ದೇವತೆಗಳಿಗಾಗಲಿ ಅಥವಾ ಮಾನವರಿಗಾಗಲಿ ಸಾಧ್ಯವಾಗಲಾರದು."

ನಾನು ಕೇವಲ ಸರಸ್ವತಿ ನಾಡಿಯನ್ನು ಜಾಗೃತಮಾಡಿದೆನು. ಆಶ್ಚರ್ಯದ ಸಂಗತಿ ಏನೆಂದರೆ ನನ್ನ ಅನುಭವಗಳು ಭಗವಂತನ ಅನುಗ್ರಹದಿಂದಲೇ ಆಗಿದೆ. ನಾನಾಗಿ ಯಾವ ದೇವತೆಗಳನ್ನು ಉಪಾಸನೆ ಮಾಡದೇ, ಮನಸ್ಸಿನಲ್ಲಿ ನೆನೆಸಿಕೊಳ್ಳದೆ ಅಥವಾ ಅವರ ರೂಪವನ್ನು ಧ್ಯಾನ ಮಾಡದೇ ಇದ್ದಾಗಲೂ ಸಹ ದೇವತೆಗಳು ತಾವಾಗಿಯೇ ದರ್ಶನವನ್ನು ಕೊಟ್ಟಿರುವರು.

ಓದುಗರಿಗೆ ನನ್ನ ಅನುಭವದ ಬಗ್ಗೆ ಅಚ್ಚರಿಯಾಗಬಹುದು ಮತ್ತು ನಂಬಲಸಾಧ್ಯವಾಗಬಹುದು. ಬೇರೆ ಸಾಧಕರು ದೇವರನ್ನು ದರ್ಶಿಸಲು ತಮ್ಮ ಜೀವನವನ್ನೆಲ್ಲಾ ಸವೆಸಿದರೂ ಅವರಿಗೆ ಯಾವ ದರ್ಶನವೂ ಆಗುತ್ತಿಲ್ಲ. ಆದರೆ ನನಗೆ ಬಹಳಷ್ಟು ದರ್ಶನವು ಹೇಗೆ ಸಾಧ್ಯವಾಯಿತು ಎಂಬ ಪ್ರಶ್ನೆಯು ಏಳುತ್ತದೆ. ಇದಕ್ಕೆ ಕಾರಣವು ನಾನು ಕೇವಲ ಕುತೂಹಲಕ್ಕೆ ಮಾತ್ರ ಸಾಧನೆಯನ್ನು ಮಾಡಿರುವುದಾಗಿದೆ ಎಂದು ಭಾವಿಸುತ್ತೇನೆ. ಮತ್ತೆ

- ೧೯೯೦ರಲ್ಲಿ ಕುಂಡಲಿನಿ ದೀಕ್ಷೆಯನ್ನು ಪಡೆದ ಬಳಿಕ ಉಂಟಾದ ಅಗ್ನಿ-ವಾಯುಗಳ ತೀವ್ರ ಜಾಗೃತಿಯಿಂದ ಮಂತ್ರಸಿದ್ಧಿಯನ್ನು ಪಡೆದು ದೇವತೆಗಳ ದರ್ಶನವು ಸಾಧ್ಯವಾಗಿರಬಹುದು. ಮೊದಮೊದಲು ಈ ಜಾಗೃತಿಯನ್ನು ಕುಂಡಲಿನಿ ಜಾಗೃತಿ ಎಂದು ತಿಳಿದಿದ್ದೆನು.
- ೨೦೧೧ರಲ್ಲಿ ಇಂದ್ರದೇವರ ದರ್ಶನವಾಯಿತು. ಇಂದ್ರ ದರ್ಶನವಾದರೆ ಸಕಲ ದೇವತೆಗಳು ಯಜಮಾನನ ಶರೀರವನ್ನು ಆಶ್ರಯಿಸುವರು ಎಂದು ಋಗ್ವೇದವು ಹೇಳುತ್ತದೆ. ಇಂದ್ರದೇವರ ಅನುಗ್ರಹದಿಂದ ಮಂತ್ರಸಿದ್ಧಿಯನ್ನು ಪಡೆದಿರಬಹುದು.
- ಅಂತರ್ಯಜ್ಞದಲ್ಲಿ ಅಗ್ನಿಯನ್ನು ನಾಭಿಯಲ್ಲಿ ಸ್ಥಾಪಿಸಿದಾಗ, ಅಗ್ನಿಯು ದೇವದೂತನಾಗಿ ಸಕಲ ದೇವತೆಗಳನ್ನು ಕರೆತರುವನೆಂದು ಋಗ್ವೇದವು ತಿಳಿಸುತ್ತದೆ.

ಇತರ ಸಾಧಕರು ವರ್ಷಾನುಗಟ್ಟಲೆ ಮಂತ್ರ ಜಪ ಮಾಡಿದರೂ ಅವರಿಗೆ ಫಲ ಸಿಗದಿರಬಹುದು. ಆದರೆ ನನ್ನ ವಿಷಯದಲ್ಲಿ, ಮಂತ್ರವನ್ನು ಕೇವಲ ಒಂದು ಸಾರಿ ಹೇಳಿದ ತಕ್ಷಣ ಫಲವನ್ನು ಕೊಡುತ್ತದೆ. ಈ ಕಾರಣದಿಂದಾಗಿ ನನಗೆ ಋಗ್ವೇದದಲ್ಲಿ ಹೇಳಿರುವ ಅನೇಕ ಸತ್ಯದ ಅನುಭವಗಳು ಆಗಿರುತ್ತದೆ ಮತ್ತು ಈ ಪುಸ್ತಕವು ನನ್ನ ಅನುಭವವನ್ನು ಆಧರಿಸಿದೆ.

ನನ್ನ ಸತ್ಯಶೋಧನೆಯು ೧೯೯೦ರ ಜೂನ್ ತಿಂಗಳಿನಲ್ಲಿ ಶುರುವಾಯಿತು. ಆಗ ನನ್ನ ಗುರುಗಳಾ ಕೆ.ಪಿ. ರಾಧಾಕೃಷ್ಣನ್ ಎಂಬುವವರಿಂದ ಕುಂಡಲಿನೀ ಯೋಗ (ಸಿಂಪ್ಲಿಫೈಡ್ ಕುಂಡಲಿನಿ ಯೋಗ ಸಂಸ್ಥೆ) ದೀಕ್ಷೆಯನ್ನು ಕೊಟ್ಟರು. ಮೊದಲಿನಲ್ಲಿ ಈ ದೀಕ್ಷೆಯ ಬಗ್ಗೆ ನಂಬಿಕೆ ಇಲ್ಲದಿದ್ದರೂ ಮೂರು ತಿಂಗಳು ಪ್ರಯತ್ನಿಸೋಣವೆಂದು ನನ್ನ ಸಾಧನೆಯನ್ನು ಪ್ರಾರಂಭಿಸಿದೆನು. ಕೇವಲ ಎರಡೇ ತಿಂಗಳಿನಲ್ಲಿ ಕುತೂಹಲದ ಕಾರಣಕ್ಕಾಗಿ ಗುರುಗಳ ಅಪ್ಪಣೆಯಿಲ್ಲದೆ ಸ್ವಯಂ ಕುಂಡಲಿನಿಯ ಚಕ್ರಗಳನ್ನು ಜಾಗೃತಮಾಡಿದೆನು. ನನ್ನ ಆಶ್ಚರ್ಯಕ್ಕೆ ಚಕ್ರಗಳು ಬಹಳ ಸ್ಪುಟವಾಗಿ ಜಾಗೃತವಾಗಿ ಚಕ್ರಗಳಿಂದ ಶಕ್ತಿಯು ನದಿಯಂತೆ ದೀವಾರಾತ್ರಿ ಹರಿಯತೊಡಗಿತು. ವೃಷಣಗಳಲ್ಲಿ ಯಾವುದೋ ಶಕ್ತಿಯು ಜಾಗೃತವಾಗಿ, ಒಂದಕ್ಕೊಂದು ಹಿಂಡುವಂತೆ ಮತ್ತು ಚಕ್ರಾಕಾರವಾಗಿ ತಿರುಗುವಂತಹ ಅನುಭೂತಿಯಾಗಿ ಊರ್ಧ್ವಮುಖವಾಗಿ ಶಕ್ತಿಯು ಹರಿಯತೊಡಗಿತು. ತಂತ್ರಶಾಸ್ತ್ರದಲ್ಲಿ ಇದನ್ನು ಊರ್ಧ್ವರೇತಸ್ಕ ಸ್ಥಿತಿಯೆಂದು ಕರೆಯುತ್ತಾರೆ. ಚಕ್ರಗಳನ್ನು ಜಾಗೃತ ಮಾಡಿದ ಕಾರಣದಿಂದಾಗಿ ನನ್ನ ಶರೀರವು ಪರಿಶುದ್ಧವಾಯಿತು. ಇದನ್ನು ತಂತ್ರ ಶಾಸ್ತ್ರದಲ್ಲಿ ಭೂತಶುದ್ಧಿ ಎಂದು ಕರೆಯುತ್ತಾರೆ.

ಒಂದು ದಿವಸ ಸಂಜೆ ಸುಮ್ಮನೆ ಕುಳಿತಿರುವಾಗ ಒಂದು ಮಂತ್ರದ ಮಹಿಮೆ ಏನೆಂದು ನೋಡೋಣವೆಂದು ಉಚ್ಚರಿಸಿದೆನು. ಆ ಮಂತ್ರವನ್ನು ಉಚ್ಚರಿಸಿದ ಕೂಡಲೆ ಎದೆಯ ಮಧ್ಯ ಭಾಗದಲ್ಲಿ ಸಿಡಿಲು ಮಿಂಚು ಹೊಡೆದ ಹಾಗಾಯಿತು. ತಕ್ಷಣ ಅಗ್ನಿ ಮತ್ತು ವಾಯುಗಳು ಅತ್ಯಂತ ಶಕ್ತಿಯಿಂದ ಕೂಡಿ ವೇಗವಾಗಿ ಊರ್ಧ್ವಮುಖವಾಗಿ ಸಂಚಾರವಾಯಿತು. ಕಾಲಿನ ಹೆಬ್ಬೆರಳಿನಿಂದ ವಾಯುವು ಮತ್ತು ಮೂಲಾಧಾರಚಕ್ರದ ಬಳಿ ಅಗ್ನಿಯು ತೀವ್ರವಾಗಿ

ಜಾಗೃತವಾಯಿತು. ಅದು ಎಷ್ಟು ತೀವ್ರವಾಗಿತ್ತೆಂದರೆ ಹಡಗಿನಲ್ಲಿರುವ ಅಶುದ್ಧ ಗಾಳಿಯನ್ನು ಹೊರಹಾಕುವ ಎಕ್ಸಾಸ್ಟ ಫ್ಯಾನ್‌ನಿಂದ ಹೊರಬರುವ ಗಾಳಿಯಷ್ಟು ತೀವ್ರವಾಗಿದ್ದಿತು.

ಆಗ ನನಗೆ ಮುಂದೆ ಏನು ಮಾಡಬೇಕೆಂದು ತಿಳಿಯಲಿಲ್ಲ. ನನಗೆ ದೀಕ್ಷೆ ಕೊಟ್ಟ ಗುರುಗಳಿಗೂ ಈ ವಿಷಯದ ಬಗ್ಗೆ ಏನೂ ತಿಳಿದಿರಲಿಲ್ಲ. ಕುಳಿತುಕೊಂಡಿದ್ದರೆ ಅಗ್ನಿ ವಾಯುಗಳು ಮತ್ತಷ್ಟು ತೀವ್ರವಾಗುತಿತ್ತು, ತಡೆಯಲಾರದೆ ನಿಂತುಕೊಂಡರೆ ಅಗ್ನಿ ವಾಯುಗಳ ತೀವ್ರತೆಯಿಂದಾಗಿ ಕಾಲುಗಳು ಸೊಟ್ಟಗಾಗುತ್ತಿದ್ದವು. ಕೆಲ ದಿನಗಳ ನಂತರ ಒಂದು ಸಾರಿ ಹೀಗೆ ನಡೆದುಕೊಂಡು ಹೋಗುತ್ತಿರುವಾಗ ಅಗ್ನಿ ವಾಯುಗಳ ತೀವ್ರತೆಯು ಹೆಚ್ಚಾಗಿ ಸಿಡಿಲು ಮಿಂಚಿನಂತೆ ಹೊಡೆದು ಬಲಗಾಲಿನ ಪಾದದ ಕಡೆಗೆ ಹೊಡೆಯಿತು. ತಕ್ಷಣ ವಾಯುವು ಪಾದದ ಕಡೆಗೆ ಸಣ್ಣ ಮಿಂಚಿನ ಬಣ್ಣದ ನಾಡಿಯ ಮುಖಾಂತರ ಹರಿಯಲಾರಂಭಿಸಿತು. ಇಂತಹ ಕಠಿಣ ಪರಿಸ್ಥಿತಿಯಿಂದ ಹೊರಬರಲು ಅನೇಕ ತಿಂಗಳುಗಳು, ವರ್ಷಗಳೇ ಬೇಕಾಯಿತು. ಅಂತರ್ಜಾಲದಲ್ಲಿ ನಾವು ಕಾಣುವ, ಆಕಸ್ಮಿಕವಾಗಿ ಕುಂಡಲಿನಿ ಜಾಗ್ರತೆಯಿಂದ ಅನೇಕ ಸಾಧಕರು ಅನುಭವಿಸಿದ ತೊಂದರೆಗಳನ್ನು ನಾನೂ ಸಹ ಅನುಭವಿಸಿದೆನು. ಆದರೂ ನನ್ನ ಪ್ರಯತ್ನದಿಂದ ಒಂದು ಅನುಕೂಲವೇ ಆಯಿತು. ಅದೇನೆಂದರೆ ನನ್ನ ದೇಹವು ಪರಿಪೂರ್ಣವಾಗಿ ಶುದ್ಧಿಯಾಗಿದ್ದಿತು. ಆದಾಗ್ಯೂ ಬಲ ಪಾದದ ಕಡೆಗೆ ವಾಯುವು ಹರಿದ ಪರಿಣಾಮವನ್ನು ಈಗಲು ಅನುಭವಿಸುತ್ತಿದ್ದೇನೆ. ಬಹಳಷ್ಟು ವರ್ಷಗಳು ಧ್ಯಾನ ಮಾಡುವುದನ್ನು ನಿಲ್ಲಿಸಬೇಕಾಯಿತು.

ಆದರೆ ೨೦೧೧ರಲ್ಲಿ ಅಂದರೆ ೨೧ ವರ್ಷಗಳ ಬಳಿಕ ನನ್ನ ಅದೃಷ್ಟ ಕೂಡಿಬಂದಿತ್ತು. ನಾನು ಮತ್ತೆ ಗಾಯತ್ರಿ ಸಾಧನೆಯಲ್ಲಿ ತೊಡಗಿಕೊಂಡೆನು. ಕೆಲವು ದಿನಗಳ ತರುವಾಯ ಇಂದ್ರದೇವರ ಕುರಿತು ಯಾವ ಜಪವನ್ನೂ, ವ್ರತವನ್ನೂ ಮತ್ತು ಯಜ್ಞಯಾಗಾದಿಗಳನ್ನು ಮಾಡದೇ ಇದ್ದರೂ ಸಹ ಇಂದ್ರಸ್ವರೂಪವನ್ನು ದರ್ಶಿಸಿದೆನು. ಬಯಸದೇ ಬಂದ ಭಾಗ್ಯವೆಂದರೆ ಇದೇ ಇರಬಹುದು. ಇಂದ್ರದೇವರು ದರ್ಶನ ಕೊಟ್ಟಾಗ ನನಗೆ ಇಂದ್ರದೇವರ ಬಗ್ಗೆ ಏನೂ ತಿಳಿದಿರಲಿಲ್ಲ. ಕೇವಲ ಪುರಾಣದಲ್ಲಿ ಹೇಳಿರುವ ಪ್ರಸಂಗಗಳು ಮಾತ್ರ ತಿಳಿದಿತ್ತು. ಅಲ್ಲಿಯವರೆಗೂ ನಾನು ಮಂತ್ರಚೈತನ್ಯವನ್ನು ಪಡೆದಿರುವ ವಿಷಯವು ನನಗೇ ತಿಳಿದಿರಲಿಲ್ಲ.

ಆನಂತರ ನಾನು ಆರ್ ಎಲ್ ಕಶ್ಯಪ್‌ರವರ 'ಋಗ್ವೇದ ಸಂಹಿತೆ'ಯ ಮೇಲೆ ಬರೆದಿರುವ ಭಾಷ್ಯವನ್ನೂ ಮತ್ತು ಕರ್ನಾಟಕ ಸರ್ಕಾರ ಪ್ರಕಟಿಸಿರುವ 'ಸಾಯಣ ಭಾಷ್ಯ'ವನ್ನು ಖರೀದಿಸಿ ಇಂದ್ರದೇವರ ಮಹಿಮೆಯನ್ನು ತಿಳಿದು ಕೊಂಡೆನು. ಇವೆರಡು ಭಾಷ್ಯಗಳ ಅಧ್ಯಯನದಿಂದಾಗಿ ದೇವತೆಗಳ ಅನುಗ್ರಹವನ್ನೂ, ಮಹಿಮೆಯನ್ನೂ ಮತ್ತು ಇಂದ್ರದೇವರ ಮಹಿಮೆಯನ್ನೂ ತಿಳಿದುಕೊಂಡೆನು. ಕುಂಡಲಿನಿ ಮಾತೆಯರ ಬಗ್ಗೆ ಸರ್ ಜಾನ್ ಉಡ್‌ರೂಫ್‌ರವರು ಬರೆದಿರುವ "ದಿ ಸರ್ಪೆಂಟ್ ಪವರ್" ಪುಸ್ತಕದಿಂದಲೂ ತಿಳಿದುಕೊಂಡೆನು. ಆದರೆ ಸಕಲ ರಹಸ್ಯವನ್ನು ಇಂದ್ರದೇವರೇ ಮುಂದೆ ನಿಂತು ನನಗೆ ತೋರಿಸಿಕೊಟ್ಟಿರುವರು. **ಈ ಪುಸ್ತಕದಲ್ಲಿ ಹೇಳಿರುವ ಪ್ರತಿಯೊಂದು ದರ್ಶನವನ್ನು ಮತ್ತು ಮಹಿಮೆಯನ್ನು ಸ್ವಾನುಭವದಿಂದ ಕಂಡುಕೊಂಡಿರುವೆನು.**

"ವೃತಾಸುರನನ್ನು ಸಂಹಾರಮಾಡಿದ ನಂತರ ಇಂದ್ರನು ಸೂರ್ಯನನ್ನು ಅಂತರಿಕ್ಷದಲ್ಲಿ (ಸೃಷ್ಟಿಕಾರ್ಯಕ್ಕಾಗಿ ವಿರಾಟ್ ಪುರುಷನ ಶಿರಸ್ಸನಲ್ಲಿ) ಸ್ಥಾಪಿಸಿದ್ದಾನೆ." (೧-೭-೩ ಸಾಭಾ)

"ಎಲೈ ಇಂದ್ರನೇ, ಅಂತರಿಕ್ಷದಲ್ಲಿ ಪ್ರಭಾಯುತವಾದ ಸೂರ್ಯನನ್ನು ನೀನು ಸ್ಥಾಪಿಸಿದೊಡನೆಯೇ ಸಕಲ ಲೋಕಗಳೂ ಕೃತಜ್ಞತೆಯಿಂದ ನಿನಗೆ ತಲೆಭಾಗಿದವು. (೮-೧೨-೩೦ ಸಾಭಾ)

ಸೂರ್ಯ ರಕ್ಷಕನಾದ ಇಂದ್ರನನ್ನು ಯಾಕೆ ಭಾರತೀಯರು ತಿರಸ್ಕರಿಸಿದರೋ ತಿಳಿದಿಲ್ಲ.

# ಅಧ್ಯಾಯ ೨ – ನಾನು ಕಂಡ ಇಂದ್ರ ದರ್ಶನ ಮತ್ತು ನಾರಾಯಣ ದರ್ಶನ

ಹೃದಯದಿಂದ ಒಂದು ಅಮೃತನಾಡಿಯು ಊರ್ಧ್ವಲೋಕಕ್ಕೆ ಹೋಗುವುದೆಂದು ಉಪನಿಷತ್‌ನಲ್ಲಿ ಓದಿ ತಿಳಿದಿದ್ದೆನು. ನಾನು ೨೦೧೧ರ ಆಗಸ್ಟ್ ಅಥವಾ ಸೆಪ್ಟಂಬರ್ ತಿಂಗಳಿನ ಒಂದು ದಿನ ಧ್ಯಾನಕ್ಕೆ ಕುಳಿತಾಗ ಪರೀಕ್ಷಾರ್ಥವಾಗಿ ನೋಡೋಣವೆಂದು ಅಷ್ಟದಳ ಪದ್ಮವನ್ನು ಊರ್ಧ್ವಮುಖ ಮಾಡಲು ಪ್ರಯತ್ನಿಸಿದೆನು. (ಈ ಮೊದಲಿನ ಕುಂಡಲಿನಿ ಜಾಗೃತಿಯ ಸಮಯದಲ್ಲಿ ಅಷ್ಟದಳ ಕಮಲದೊಳಗಿರುವ ಆತ್ಮನ ಬಗ್ಗೆ ತಿಳಿದಿದ್ದೆನು.) ಆಗ ಅಷ್ಟದಳ ಪದ್ಮವು ಊರ್ಧ್ವಮುಖವಾಯಿತು.

ನಂತರ ಆಶ್ಚರ್ಯದಿಂದ ಅಮೃತನಾಡಿಯನ್ನು ಮಂತ್ರದಿಂದ ಜಾಗೃತ ಮಾಡಲು ಪ್ರಯತ್ನಿಸಿದೆನು. ಕೂಡಲೆ ಅಮೃತನಾಡಿಯು ಜಾಗೃತವಾಯಿತು. ಅಷ್ಟದಳ ಪದ್ಮದ ಮಧ್ಯೆ ಇರುವ ಆತ್ಮಜ್ಯೋತಿಯನ್ನು ಮೇಲಕ್ಕೆ ಹೋಗಲು ಸಂಕಲ್ಪಿಸಿ ಮಂತ್ರವನ್ನು ಪಠಿಸಿದಾಗ, ಜ್ಯೋತಿಯು ಅಮೃತನಾಡಿಯ ಮುಖಾಂತರ ಮೇಲಕ್ಕೆ ಹೋಗಲಾರಂಭಿಸಿತು. ಜ್ಯೋತಿಯನ್ನು ಸತ್ಯಲೋಕದ ಸ್ಥಳಕ್ಕೆ ತೆಗೆದುಕೊಂಡು ಹೋದೆನು. ನಂತರ ಏನು ಮಾಡುವುದೆಂದು ತಿಳಿಯಲಿಲ್ಲ. ಅಲ್ಲಿಯ ಸ್ಥಳವು ಪರಿಚಿತವಾಗಿರುವಂತೆಯೂ ಮತ್ತು ನಾನು ಮೊದಲು ಅಲ್ಲಿ ಬಂದಿದ್ದಂತೆಯೂ ಅನಿಸಿತು. ಒಂದು ಕ್ಷಣ–'ಈಗೇನು ಮಾಡುವುದು' ಎಂದು ಯೋಚಿಸಿದೆನು. ತಕ್ಷಣವೆ ಒಂದು ಮಂತ್ರವು ಹೃದಯದಾಳದಿಂದ ತನ್ನಷ್ಟಕ್ಕೆ ತಾನೆ ಹೊರಹೊಮ್ಮಿತು. ಕೂಡಲೆ ಇಂದ್ರದೇವರು ಮೇಲಿನಿಂದ ಕೆಳಗೆ ಇಳಿದು ಪ್ರಕಟರಾದರು. ಇಂದ್ರದೇವರು ವಿಶ್ವಸಿಂಹಾಸನದಲ್ಲಿ ಕುಳಿತು ನನಗೆ ಕಾಣಿಸಿಕೊಂಡರು. ನಾನು ಅವರ ಪಾದಪೂಜೆ ಮಾಡಿ ತುಸು ಹೊತ್ತು ಧ್ಯಾನಮಗ್ನನಾಗಿ ಪೂಜೆಯನ್ನು ಮುಗಿಸಿದೆನು.

ಇಂದ್ರದೇವರು ನೋಡಲು ಅತಿ ಸುಂದರವಾಗಿ, ೧೬ ವರ್ಷದ ಪ್ರಾಯದಿಂದ ಕೂಡಿರುವರು. ಅವರು ತೆಳುಕಾಯವನ್ನು ಹೊಂದಿದ್ದು ಹಿರಣ್ಯವರ್ಣದಿಂದ ಕಂಗೊಳಿಸುತ್ತಿರುವರು. ಅವರು ಕಚ್ಚೆಯನ್ನು ಧರಿಸಿದ್ದು ಮೇಲಿನ ಭಾಗದಲ್ಲಿ ವಸ್ತ್ರವನ್ನು ಧರಿಸಿರಲಿಲ್ಲ. ಇಂದ್ರದೇವರೊಬ್ಬರೇ ವಿಶ್ವ ಸಿಂಹಾಸನದಲ್ಲಿ ಕುಳಿತಿರುವುದು. ಇತರ ಆದಿತ್ಯದೇವತೆಗಳೆಲ್ಲ ನಿಂತಿರುವಂತೆ ನನಗೆ ಕಾಣಿಸಿಕೊಂಡರು. ಇನ್ನಿತರ ದೇವತೆಗಳಾದ ಸರಸ್ವತಿ, ಮಹಿ, ಭಾರತಿ ಮತ್ತು ಇಳಾ ದೇವಿಯರು ಕಮಲ ಮಧ್ಯದಲ್ಲಿ ಕುಳಿತಿರುವರು. ಅದಾದ ಕೆಲವು ತಿಂಗಳ ನಂತರ ಇಂದ್ರದೇವರು ನಮ್ಮೆಲ್ಲರ ಹೃದಯ ಗುಹೆಯಲ್ಲಿಯೂ ಸಹ ಇರುವುದನ್ನು ಕಂಡುಕೊಂಡೆನು. ಹೃದಯದಿಂದ ಕೆಳಗೆ ಹೋಗುವ ಒಂದು ಗುಹೆ ಇದೆ. ಆ ಗುಹೆಯ ತಳದಲ್ಲಿ ದೈವೀಮನಸ್ಸಿನ ಇಂದ್ರದೇವರು ಇರುವರು. ಇಲ್ಲಿರುವ ಇಂದ್ರದೇವರನ್ನು ಪೂಜಿಸಿದಾಗ ಅವರು ಅಲ್ಲಿಂದ ಮೇಲೆ ಬಂದು ಹೃದಯದಲ್ಲಿ ಪ್ರಕಟರಾಗುವರು.

ಹೃದಯ ಗುಹೆಯು ನೋಡಲು ನಾರಾಯಣ ಸೂಕ್ತದಲ್ಲಿ ಹೇಳಿರುವ ಬಿಂದುವಿನಂತೆ ಕಾಣುವುದು. ನಾನು ನನ್ನ ಧ್ಯಾನವನ್ನು ಪರಿಪೂರ್ಣಗೊಳಿಸಿದ ಮೇಲೆ ಇಂದ್ರದೇವರು ಸಕಲ ಬ್ರಹ್ಮಾಂಡದ ಮೇಲೆ ಅಂದರೆ ವಿರಾಟ್ ಪುರುಷನ ತಲೆಯಮೇಲೆ ತಮ್ಮ ಸಿಂಹಾನವನ್ನು ಸ್ಥಾಪಿಸಿರುವರು ಎಂಬುದನ್ನು ತಿಳಿದುಕೊಂಡೆನು. ಇಂದ್ರನು ನಮ್ಮ ಹೃದಯ ಮಧ್ಯದಲ್ಲಿರುವ ಗುಹೆಯ ಒಳಗೆ ಮತ್ತು ವಿಶ್ವದ ಆಚೆ ಎರಡೂ ಕಡೆ ನೆಲೆಸಿರುವರು. ಇಂದ್ರನು ನಮ್ಮ ಕಾರಣಶರೀರದ ಹೃದಯ ಗುಹೆಯಲ್ಲಿರುವ ಕಾರಣವೇನೆಂದರೆ ನಮ್ಮನ್ನು ಅಸುರಶಕ್ತಿಗಳಿಂದ ರಕ್ಷಿಸಲು ನೆಲೆಸಿರುವರು. ಇಂದ್ರದೇವರು ನಮ್ಮ ಪಿಂಡಾಂಡದಲ್ಲಿಲ್ಲದಿದ್ದರೆ ಅಸುರರನ್ನು ಗೆಲ್ಲಲು ಮಾನವರಿಗೆ ಅಸಾಧ್ಯವಾಗಿರುತ್ತದೆ.

**ನಾನು ಕಂಡ ನಾರಾಯಣ ದರ್ಶನ:** ನನಗೆ ನಾರಾಯಣನಾರೆಂದು ಈ ಮೊದಲು ತಿಳಿದಿರಲಿಲ್ಲ. ನಾರಾಯಣ ಸೂಕ್ತವನ್ನು ಓದಿದ ಮೇಲೆ ನಾರಾಯಣ ಸ್ವರೂಪವನ್ನು ದರ್ಶಿಸಬೇಕೆಂದು ಒಂದು ದಿನ ಅಷ್ಟದಳ ಕಮಲವನ್ನು ಜಾಗೃತಮಾಡಿ ನಾರಾಯಣ ಮಂತ್ರವನ್ನು ಜಪಿಸಿದೆನು. ಕೂಡಲೆ ಹೃದಯ ಮಧ್ಯದಲ್ಲಿ ಕಾರ್ಮೋಡವು ಕವಿಯಿತು. ಕಾರ್ಮೋಡದ ಮಧ್ಯೆ ನನ್ನ ಆತ್ಮಜ್ಯೋತಿಯು ಪ್ರಕಾಶಿಸುತ್ತಿದ್ದರೂ ತನ್ನ ಕಿರಣಗಳನ್ನು ಹೊರಸೂಸುತ್ತಿರಲಿಲ್ಲ. ಕಲವು ಹೊತ್ತು ತಲ್ಲೀನನಾಗಿದ್ದು ನಂತರ ಧ್ಯಾನವನ್ನು ಸಮಾಪ್ತಿ ಮಾಡಿದೆನು.

ಮಾರನೆಯ ದಿನ ಧ್ಯಾನದಲ್ಲಿ ಕುಳಿತುಕೊಂಡು ಹೃದಯ ಮಧ್ಯದಲ್ಲಿ ಗಮನವಿರಿಸಿ, ನಾರಾಯಣ ಮಂತ್ರವನ್ನು ಜಪಿಸಿದೆನು. ಕೂಡಲೆ ಹೃದಯ ಮಧ್ಯದಲ್ಲಿ ಕಾರ್ಮೋಡವು ಕವಿಯಿತು. ಅದರ ಮಧ್ಯದಲ್ಲಿ ಅತ್ಯಂತ ಸೂಕ್ಷ್ಮವಾದ ಮಿಂಚಿನ ಬಣ್ಣದಂತಹ ಸಣ್ಣ ಭತ್ತದ ಮೊನೆಯಂತಹ (ಬಿಂದು) ಕಾಣಿಸಿತು. ಹತ್ತು ನಿಮಿಷ ಪ್ರಯತ್ನಪಟ್ಟರೂ ನಾರಾಯಣ ದರ್ಶನವಾಗಲಿಲ್ಲ. ಆಗ ಇಂದ್ರ ದೇವರ ಪೂಜೆಯನ್ನಾದರೂ ಮಾಡೋಣವೆಂದು, ಹೃದಯಗುಹೆಯಲ್ಲಿರುವ ಇಂದ್ರನನ್ನು ಮೇಲೆ ಬರುವಂತೆ ವಿನಂತಿಸಿದೆನು, ಕೂಡಲೆ ಇಂದ್ರದೇವರು ಮಾನವರೂಪದಲ್ಲಿ ಮೇಲೆ ಬಂದರು ಮತ್ತು ಕ್ಷಣಕಾಲ ಮನಸ್ಸು ಸ್ತಬ್ಧವಾಯಿತು. ಮನಸ್ಸು ಮತ್ತೆ ಎಚ್ಚರಗೊಂಡಾಗ ಮಿಂಚಿನ ಬಿಂದುವಿನ ಮಧ್ಯದಿಂದ ಹೊರಬಂದು ಜ್ಯೋತಿಸ್ವರೂಪದಲ್ಲಿ ಕಾಣಿಸಿಕೊಂಡರು. ಇಷ್ಟು ದಿನ ಇಂದ್ರದೇವರು

ಷೋಡಶ ವರ್ಷದ ಯುವಕನಂತೆ ಸಿಂಹಾಸನದಲ್ಲಿ ಕುಳಿತು ಹೃದಯ ಗುಹೆಯಿಂದ ಮೇಲೆ ಬಂದು ಹೃದಯ ಮಧ್ಯದಲ್ಲಿ ಕಾಣಿಸುತ್ತಿದ್ದರು. ಪ್ರಥಮ ಭಾರಿಗೆ ಕಪ್ಪನೆಯ ಕಾರ್ಮೋಡವು ಶರೀರದಲ್ಲಿ ಕವಿಯಿತು ಮತ್ತು ಇಂದ್ರನು ಜ್ಯೋತಿ ಸ್ವರೂಪದಲ್ಲಿ ಕಾಣಿಸಿಕೊಂಡರು. ಆದ್ದರಿಂದ ಇಂದ್ರದೇವರು ಜ್ಯೋತಿರೂಪದಲ್ಲಿಯೂ ಮತ್ತು ಮಾನವ ರೂಪದಲ್ಲಿಯೂ ದರ್ಶನವನ್ನು ಕೊಡುತ್ತಾರೆ ಎಂದು ಕಂಡುಕೊಂಡೆನು.

ನನಗಾದ ಅನುಭವದ ಮೇಲೆ ಹೇಳುವುದಾದರೆ ಪ್ರತಿಯೊಂದು ಜೀವರಾಶಿಗಳ ಹೃದಯದಲ್ಲಿರುವ ಅಷ್ಟದಳ ಪದ್ಮದಲ್ಲಿ ಅಂಗುಷ್ಟ ಪ್ರಮಾಣದ ಜ್ಯೋತಿರೂಪನಾದ ಆತ್ಮನು ನೆಲೆಸಿರುವನು ಮತ್ತು ಜ್ಯೋತಿರೂಪದಲ್ಲಿರುವ ಪರಮಾತ್ಮನಾದ ಇಂದ್ರನು ಇರುವನು. ಇಂದ್ರನೇ ನಾರಾಯಣನಾಗಿದ್ದಾನೆ. ಬಹಳ ಮುಖ್ಯವಾದ ವಿಷಯವೆಂದರೆ ಇಂದ್ರಜ್ಯೋತಿಯು ತನ್ನ ಕಿರಣವನ್ನು ಸರ್ವತ್ರ ಹರಡುತ್ತದೆ ಆದರೆ ನಾರಾಯಣ ಜ್ಯೋತಿಯು ತನ್ನ ಕಿರಣವನ್ನು ಹಿಂತೆಗೆದುಕೊಂಡಿರುತ್ತದೆ. ಆದ್ದರಿಂದ ಕತ್ತಲು ಕವಿಯುತ್ತದೆ. ಇದರ ಅರ್ಥ ವಿಶ್ವಸೃಷ್ಟಿಯಲ್ಲಿ ಇಂದ್ರಜ್ಯೋತಿಯು ವಿಶ್ವದಲ್ಲೆಲ್ಲಾ ಹರಡುತ್ತದೆ ಮತ್ತು ವಿಶ್ವ ವಿನಾಶದ ವೇಳೆ ಇಂದ್ರಜ್ಯೋತಿಯು ತನ್ನ ಕಿರಣಗಳನ್ನು ಹಿಂತೆಗೆದುಕೊಳ್ಳುತ್ತದೆ. ಆಗ ಈ ಜ್ಯೋತಿಯನ್ನು ನಾರಾಯಣ ಎಂದು ಕರೆಯುತ್ತಾರೆ. (ಇನ್ನೂ ಹೆಚ್ಚಿನ ವಿವರಗಳಿಗೆ 'ಅಧ್ಯಾಯ ೮ ಆತ್ಮಪೂಜಾ ವಿದಾನ' ನೋಡಿ.)

ಇಂದ್ರನು ತನ್ನನ್ನು ಆರಾಧಿಸದವರನ್ನು ತ್ಯಜಿಸುವನು ಎಂಬುದಕ್ಕೆ ಋಗ್ವೇದ ಪ್ರಮಾಣ

ಪರಾ ಪೂರ್ವೇಷಾಂ ಸಖ್ಯಾ ವೃಣಕ್ತಿ ವಿತರ್ತುರಾಣೋ ಅಪರೇಭಿರೇತಿ ၊
ಅನಾನುಭೂತೀರವಧೂನ್ವಾನಃ ಪೂರ್ವೀರಿಂದ್ರಃ ಶರದಸ್ತರ್ತರೀತಿ ၊၊ (ಋಗ್ವೇದ ೬–೪೭–೧೭ ಆರ್ ಎಲ್ ಕ)
"ಇಂದ್ರನು ಯಾವಾಗ ಪೂರ್ವದಲ್ಲಿ ಸ್ನೇಹಿತರಾಗಿದ್ದು ತದನಂತರ ದೂರವಾಗುತ್ತಾರೋ ಅಂತಹವರ ಸ್ನೇಹವನ್ನು ತ್ಯಜಿಸುತ್ತಾನೆ. ಆನಂತರ ಅವರನ್ನು ಹಿಂಸಿಸುತ್ತಾ ಅವರಿಗಿಂತಲೂ ನಿಕೃಷ್ಟರಾದವರೊಂದಿಗೆ ಸಖಿತ್ವವನ್ನು ಹೊಂದುತ್ತಾನೆ. ಮತ್ತೆ ತನ್ನನ್ನು ಪೂಜಿಸದಿರುವವರನ್ನು ಪರಿತ್ಯಜಿಸುತ್ತಾ, (ತನ್ನನ್ನು ಯಾರು ಪೂಜಿಸುತ್ತಾರೋ) ಅವರೊಡನೆ ಅನೇಕ ಸಂವತ್ಸರಗಳ ಕಾಲ; ಅವರೊಡನೆ ಕಾಲ ಕಳೆಯುತ್ತಾನೆ."
ಯಾಕೆ ಬೇರೆಯ ಜನಾಂಗವು ನಿಕೃಷ್ಟ ಜನಾಂಗವೆಂದು ಋಗ್ವೇದವು ಹೇಳುತ್ತಿದೆ? ಏಕೆಂದರೆ ಯಜ್ಞದ ಮೂಲಕ ಭಗವಂತನನ್ನು ಮತ್ತು ದೇವತೆಗಳನ್ನು ಆರಾಧಿಸುವ ಕ್ರಮವೇ ಶ್ರೇಷ್ಟವಾಗಿದೆ.

ಸಮೀಂ ಪಣೇರಜತಿ ಭೋಜನಂ ಮುಷೇ ವಿ ದಾಶುಷೇ ಭಜತಿ ಸೂನಂ ವಸು ၊(ಋಗ್ವೇದ ೫–೩೪–೭ ಸಾಭಾ)
ದುರ್ಗೇ ಚನ ಧ್ರಿಯತೇ ವಿಶ್ವ ಆ ಪುರು ಜನೋ ಯೋ ಅಸ್ಯ ತವಿಶೀಮಚುಕ್ರುಧತ್ ၊၊
"....ಯಾವ ಪುರುಷನು ಇಂದ್ರನ ಬಲವನ್ನು ಅವಹೇಳನಮಾಡಿ ಕೆರಳಿಸುವನೋ ಅಂತಹ ಸಕಲಜನವೂ ಸಹ ಅತ್ಯಧಿಕವಾದ ದುಃಖಕ್ಕೆ ಭಾಗಿಯಾಗಬೇಕಾಗುತ್ತದೆ."

ಮತ್ತೆ ಭಾರತವು ತನ್ನ ಹಿಂದಿನ ಉತ್ತುಂಗವನ್ನು ಏರಬೇಕಾದರೆ ಮತ್ತು ಅಸುರಶಕ್ತಿಗಳಿಂದ ಬಿಡುಗಡೆ ಪಡೆಯಲು ಇಂದ್ರನ ಮೊರೆ ಹೋಗಲೇಬೇಕಾಗಿದೆ. ಏನೇ ಆದರೂ ಸಕಲವೂ ಇಂದ್ರನ ಇಚ್ಛೆಯೇ ಆಗಿದೆ. ರಾಮಾಯಣ ಮತ್ತು ಮಹಾಭಾರತ ಕಾಲದ ಮೊದಲು ಮಾಡುತ್ತಿದ್ದ ಯಜ್ಞವನ್ನು ತಿರಸ್ಕರಿಸಿದ ಫಲವೇ ನಮ್ಮ ಅಧೋಗತಿಗೆ ಕಾರಣವಾಗಿದೆ.

# ಅಧ್ಯಾಯ ೩ – ನಾನು ಕಂಡ ವಿಷ್ಣುವಿನ ದರ್ಶನ

ನಮ್ಮ ಶರೀರದ ಹಿಂಭಾಗದಲ್ಲಿರುವ ಶಿಖೆಯ ಕೆಳಭಾಗದಲ್ಲಿ ವಿಷ್ಣುವು ಪ್ರಕಟನಾದ ಕೂಡಲೆ ನಮ್ಮೊಳಗಿರುವ ಪುರುಷ ಅಂದರೆ ಸೂಕ್ಷ್ಮಶರೀರವು ಕೂಡಲೆ ನೀಲಿಕಾಂತಿಯಿಂದ ಬೆಳಗುವುದು.

ವಿಷ್ಣುದೇವತೆಯ ದರ್ಶನ ಮಾಡಲು ಇಚ್ಚಿಸಿ ಒಂದು ದಿವಸ ಹೃದಯದಲ್ಲಿ ಸೂರ್ಯಮಂಡಲವನ್ನು ಜಾಗೃತ ಮಾಡಿ ಮೇಲಕ್ಕೆ ತೆಗೆದುಕೊಂಡು ಹೋಗಿ ಸತ್ಯಲೋಕದಲ್ಲಿ (ಅಂಗನ್ಯಾಸ ಕರನ್ಯಾಸದಿಂಧ ಶಿರಸ್ಸಿನಲ್ಲಿ) ಸ್ಥಾಪಿಸಿದೆನು. ಅಷ್ಟದಳ ಕಮಲದ ಮಧ್ಯೆ ಇರುವ ನನ್ನ ಆತ್ಮಜ್ಯೋತಿಯನ್ನೂ ಸಹ ತೆಗೆದುಕೊಂಡು ಹೋಗಿ ಸತ್ಯಲೋಕದಲ್ಲಿ ಸ್ಥಾಪಿಸಿದೆನು. ಆನಂತರ ಸೂರ್ಯಮಂಡಲದ ಬಳಿ ವಿಷ್ಣುದೇವರನ್ನು ಸ್ತುತಿಸಿದಾಗ ಯಾವ ಪರಿಣಾಮವೂ ಕಾಣಲಿಲ್ಲ. ಆದ್ದರಿಂದ ಅಂದಿನ ಧ್ಯಾನವನ್ನು ಪರಿಸಮಾಪ್ತಿಗೊಳಿಸಿದೆನು. ವಿಷ್ಣುದೇವರ ದರ್ಶನವಾಗದಿದ್ದ ಕಾರಣವನ್ನು ಚಿಂತಿಸುತ್ತಾ; ನಾಳೆ ಸೂರ್ಯಮಂಡಲವನ್ನು ಜಾಗೃತ ಮಾಡದೆ ಪ್ರಯತ್ನಿಸೋಣವೆಂದು ಯೋಚಿಸಿದೆನು.

ಮಾರನೆಯ ದಿನ ಧ್ಯಾನದ ಮೂಲಕ ಮೆದುಳಿನ ಮಧ್ಯಸ್ಥಾನಕ್ಕೆ ಆತ್ಮನನ್ನು ತೆಗೆದುಕೊಂಡು ಹೋಗಿ ಸ್ಥಾಪಿಸಿದೆನು. ಆನಂತರ ಸೂರ್ಯಮಂಡಲವನ್ನು ಜಾಗೃತಮಾಡದೆ, ವಿಷ್ಣುವನ್ನು ಸ್ತುತಿಸಿದೆನು. ಕೂಡಲೆ ನನ್ನ ಸೂಕ್ಷ್ಮಶರೀರವೆಲ್ಲ ನೀಲಿ ಬಣ್ಣಕ್ಕೆ ತಿರುಗಿತು. ಆದರೆ ನನ್ನ ಅಂತರ್‌ದೃಷ್ಟಿಗೆ ವಿಷ್ಣುದೇವರು ಕಾಣಿಸಲಿಲ್ಲ. ಎರಡು ಮೂರು ದಿನ ಪ್ರಯತ್ನಿಸಿದಾಗಲೂ ವಿಷ್ಣುದೇವರ ದರ್ಶನವಾಗಲಿಲ್ಲ. ಆದರೆ ಸೂಕ್ಷ್ಮಶರೀರವೆಲ್ಲವೂ ನೀಲಿ ಬಣ್ಣವಾಗುತಿತ್ತು. ಈ ನನ್ನ ಪ್ರಯತ್ನದಿಂದ ಕುತ್ತಿಗೆಯ ಹಿಂಭಾಗದಲ್ಲಿ ನೋವು ಕಾಣಿಸಲಾರಂಬಿಸಿತು.

ನಾನು ಸಾಮಾನ್ಯವಾಗಿ ಸತ್ಯಲೋಕಕ್ಕೆ ಹೋದ ಮೇಲೆ ಜಾಲಂಧರಬಂಧವನ್ನು (ಗಲ್ಲವನ್ನು ಎದೆಯ ಕಡೆ ಬಗ್ಗಿಸುವುದು) ಹಾಕುತ್ತಿದ್ದೆನು. ಕುತ್ತಿಗೆಯಲ್ಲಿ ನೋವು ಕಾಣಿಸಿಕೊಂಡ ನಂತರ ನಾನು ಜಾಲಂದರಬಂಧವನ್ನು ಹಾಕದೆ ಪ್ರಯತ್ನಿಸೋಣವೆಂದು ಯೋಚಿಸಿದೆನು. ಮಾರನೆಯ ದಿನ ನನ್ನ ಆತ್ಮಜ್ಯೋತಿಯನ್ನು ಸತ್ಯಲೋಕಕ್ಕೆ ತೆಗೆದುಕೊಂಡು ಹೋಗಿ, ಜಾಲಂದರಬಂಧವನ್ನು ಹಾಕದೆ ವಿಷ್ಣುವನ್ನು ಪ್ರಾರ್ಥಿಸಿದೆನು. ಪ್ರಾರ್ಥಿಸಿದ ಕೂಡಲೆ, ನನ್ನ ಶರೀರವು ನೀಲಿ ಬಣ್ಣಕ್ಕೆ ತಿರುಗಿತು ಮತ್ತು ವಿಷ್ಣುದೇವರು ತಲೆಯ ಹಿಂಭಾಗದಲ್ಲಿ ಪ್ರಕಟವಾದರು. (ಶಿಖೆಯ ಸ್ವಲ್ಪ ಕೆಳಭಾಗದಲ್ಲಿ. ನಮ್ಮ ಹಿಂಭಾಗವು ಅಂತರಿಕ್ಷಲೋಕವನ್ನು ಪ್ರತಿನಿಧಿಸುತ್ತದೆ)

ವಿಷ್ಣುದೇವರು ನಮ್ಮಂತೆಯೆ ಮಾನವರ ರೂಪದಲ್ಲಿ ಇದ್ದು ಎರಡು ಕೈಗಳಿಂದ ಕೂಡಿದ್ದರು ಮತ್ತು ಕೈಯಲ್ಲಿ ಏನನ್ನೂ ಹಿಡಿದುಕೊಂಡಿರಲಿಲ್ಲ. ವಿಷ್ಣುವು ಶೇಷಶಾಯಿಯಾಗಿರಲಿಲ್ಲ. ಆದರೆ ವಿಷ್ಣುದೇವರ ಶರೀರವು ನೀಲಿ ಬಣ್ಣದಂತೆ ಇರದೆ ಬೇರೆ ತರಹದಾಗಿತ್ತು. ಅದನ್ನು ರಾಮ ಬಣ್ಣವೆಂದು ಹೇಳಬಹುದೇನೊ ನನಗೆ ತಿಳಿಯದು. ಭಗವಂತನ ತಲೆಯ ಸುತ್ತಲೂ ಕಪ್ಪು ಛಾಯೆ ವ್ಯಾಪಿಸಿಕೊಂಡಿತ್ತು. ಆಗ ಅದೇನೆಂಬ ಕುತೂಹಲದಿಂದ ನನ್ನ ಗಮನವು ವಿಷ್ಣುದೇವರ ತಲೆಯ ಮೇಲೆ ಹೋಯಿತು.

ಕೂಡಲೆ ನಾನು ವಿಷ್ಣುವಿನ ಅಂತ್ಯವಿಲ್ಲದ ಪರಮವ್ಯೋಮವನ್ನು ಪ್ರವೇಶಿಸಿದೆನು. ಅದು ಗಾಡಾಂಧಕಾರ ವಾಗಿ ಸರ್ವಥಾ ಹರಡುತ್ತಾ ಹಿಗ್ಗುತ್ತಲಿತ್ತು. ಆ ಅಗಾಧವಾದ ಹಿಗ್ಗುತ್ತಲಿರುವ ಆಕಾಶದಲ್ಲಿ ಮುಂದುಮುಂದಕ್ಕೆ ಪ್ರಯಾಣ ಮಾಡುತ್ತಾ ಎಲ್ಲಿ ಪರಮವ್ಯೋಮದಲ್ಲಿ ಲಯವಾಗುವೆನೋ ಎಂದು ಭಯವಾಯಿತು. ಕೂಡಲೆ ನನ್ನ ಮನಸ್ಸನ್ನು ವಿಷ್ಣುದೇವರ ಕಡೆಗೆ ಹರಿಸಿದೆನು. ತಕ್ಷಣ ಮೊದಲಿನಂತೆ ವಿಷ್ಣುವಿನ ದರ್ಶನವಾಯಿತು. ಆನಂತರ ವಿಷ್ಣುವನ್ನು ಪ್ರಾರ್ಥಿಸಿ ನನ್ನ ಧ್ಯಾನವನ್ನು ಮುಗಿಸಿದೆನು.

# ಅಧ್ಯಾಯ ೪ – ನಾನು ಕಂಡ ಕುಂಡಲಿನೀ ಮಾತೆಯರ ದರ್ಶನ

ನನಗಾದ ಮೂವರು ಕುಂಡಲಿನಿ ಮಾತೆಯರ ಅನುಭವವನ್ನು ತಿಳಿಸಲೇಬೇಕಾಗಿದೆ. ನಾನು ಇಂದ್ರದೇವರ ಪೂಜೆಯನ್ನು ಮಾಡುತ್ತಿರುವಾಗ ಒಂದು ದಿನ ಇಂದ್ರದೇವರು ಸರಸ್ವತಿಯ ಆರಾಧನೆಯನ್ನು ಮಾಡಲು ತಿಳಿಸಿದರು. ಆಗ ಸರಸ್ವತಿಯನ್ನು ಪ್ರಕಟಮಾಡಲು ಎಷ್ಟು ಪ್ರಯತ್ನಿಸಿದರೂ ಸರಸ್ವತಿಮಾತೆಯ ದರ್ಶನವಾಗಲಿಲ್ಲ. ಸಹಸ್ರಾರದಲ್ಲಿ ಪ್ರಯತ್ನಿಸಿದೆನು, ಎದೆಯ ಮಧ್ಯಭಾಗದಲ್ಲಿ ಪ್ರಯತ್ನಿಸಿದೆನು, ನಾಭಿಯಲ್ಲಿ ಸರಸ್ವತಿಯನ್ನು ಧ್ಯಾನಮಾಡಿ ದರ್ಶನ ಪಡೆಯಲು ಪ್ರಯತ್ನಿಸಿದೆನು ಆದರೆ ದರ್ಶನವಾಗಲಿಲ್ಲ.

ಕೆಲವು ದಿನಗಳು ಪ್ರಯತ್ನಿಸಿದ ನಂತರ ಮೇರುದಂಡದ ಹಿಂಭಾಗದಲ್ಲಿರುವ ಕುಂಡಲಿನಿಯೂ ಸಹ ಸರಸ್ವತಿ ಸ್ವರೂಪವೆಂದು ತಿಳಿದು ಮೂಲಾದಾರದ ಮೇಲಿರುವ ತ್ರಿಕೋನ ಮಧ್ಯದಲ್ಲಿರುವ ಕುಂಡಲಿನಿಯನ್ನು ಧ್ಯಾನಿಸತೊಡಗಿದೆನು. ಏಕೆಂದರೆ ಮಾತೆಯಿಂದಲೇ ಸಕಲ ದೇವದೇವಿಯರು ಪ್ರಕಟವಾಗಿರುವರು. ಆಗ ನನಗೆ ಇತರ ಕುಂಡಲಿನಿ ಮಾತೆಯರ ಬಗ್ಗೆ ತಿಳಿದಿರಲಿಲ್ಲ.

> ಸಹಸ್ರಾರು ವರ್ಷಗಳಿಂದ ಕುಂಡಲಿನಿಯೋಗ ಸಾಧನೆಯನ್ನು ಶಿವಯೋಗಿಗಳು ಮಾಡುತ್ತಿದ್ದರೂ, ಮೂರು ಕುಂಡಲಿನಿ ಸರ್ಪದ ಬಗ್ಗೆ ಮತ್ತು ಅವರ ಮಹಿಮೆಯು ಏನೆಂದು ತಿಳಿದಿಲ್ಲ. ಇದಕ್ಕೆ ಕಾರಣ ವಿರಾಟ್ ಪುರುಷನ ಪ್ರತಿರೂಪವಾದ ನಮ್ಮ ಸ್ಥೂಲ ಶರೀರದೊಳಗಿರುವ ಪುರುಷ ಶರೀರವನ್ನು ವೃತ್ರಾಸುರನು ಅಂಧಕಾರ ಮತ್ತು ಅಜ್ಞಾನದ ಕೋಟೆಯನ್ನು ನಮ್ಮ ಸುತ್ತಲೂ ಕಟ್ಟಿರುವನು. ಈ ಕಾರಣಕ್ಕಾಗಿ ಋಗ್ವೇದ ದೇವತೆಗಳ ಮಹಿಮೆಯು ಅವರಿಗೆ ತಿಳಿಯಲಿಲ್ಲ.

ಸುಮಾರು ಒಂದು ವಾರ ಕಳೆದ ನಂತರ ನಾಭಿ ಮಧ್ಯದಿಂದ ಮಿಂಚಿನ ಬಣ್ಣದ ಒಂದು ಸಣ್ಣನಾಡಿಯು ಕುತ್ತಿಗೆ ಮತ್ತು ಮೂಲಾದಾರದವರೆಗೂ ಚಾಚಿಕೊಂಡಿತು. ಆ ನಾಡಿಯ ಒಳಗೆ ನಿದ್ರಿಸುತ್ತಿರುವ ಸರ್ಪವೂ ಸಹ ಕೆಳಗೆ ಬಂದಿತು. ಅದನ್ನು ಗಮನಿಸಿ ಕೂಡಲೆ ನಾನು ಅದನ್ನು ಸ್ವಸ್ಥಾನಕ್ಕೆ ಹಿಂದಿರುಗುವಂತೆ ಮನಸ್ಸಿನಲ್ಲಿ ವಿನಂತಿಸಿದೆನು. ಆಗ ಆ ನಾಡಿ ಮತ್ತು ಸರ್ಪವು ವಾಪಸ್ಸು ನಾಭಿಯಲ್ಲಿ ಹೋಗಿ ಮಲಗಿಕೊಂಡಿತು. ಅಲ್ಲಿಯವರೆಗೂ ನನಗೆ ಮಧ್ಯಕುಂಡಲಿನಿಯ ಬಗ್ಗೆ ತಿಳಿದಿರಲಿಲ್ಲ.

ಅದನ್ನು ಗಮನಿಸಿ ನಾನು ಮಾರನೆಯ ದಿನದಿಂದ ಮಧ್ಯಕುಂಡಲಿನಿಯ ಮೇಲೆ ಧ್ಯಾನಮಾಡಿ, ಅದನ್ನು ಜಾಗೃತಮಾಡಿ ದೇಹದ ಮುಂದುಗಡೆಯಿರುವ ಚಕ್ರಗಳ ಮುಖಾಂತರ ಸಹಸ್ರಾರಕ್ಕೆ ಕೊಂಡೊಯ್ಯಲು ಸಫಲ ನಾದೆನು. ಆಗ ಸಹಸ್ರಾರಚಕ್ರವು ಮೇಲ್ಮುಖವಾಗಿ ಅರಳಿತು. ಮಧ್ಯಕುಂಡಲಿನಿಯ ಸಹಸ್ರಾರಚಕ್ರವು ಮೇಲ್ಮುಖವಾಗಿ ಅರಳುವುದೆಂದು ನನಗೆ ತಿಳಿದಿರಲಿಲ್ಲ. ನನ್ನ ಹಿಂದಿನ ಅನುಭವದ ಪ್ರಕಾರ ಸಹಸ್ರಾರಚಕ್ರವು ಕೆಳಮುಖವಾಗಿ ಅರಳಬೇಕಾಗಿತ್ತು. ಆದ್ದರಿಂದ ನಾನು ನನ್ನ ಇಚ್ಛಾಶಕ್ತಿಯಿಂದ ಸಹಸ್ರಾರಚಕ್ರವನ್ನು ಕೆಳಮುಖವಾಗುವಂತೆ ಮಾಡಿದೆನು.

ಆದರೆ ಇದರ ಪಲಿತಾಂಶವು ಬೇರೆಯೇ ಆಗಿತ್ತು. ಒಂದೆರಡು ದಿನದ ನಂತರ ಮಧ್ಯಕುಂಡಲಿನಿಯನ್ನು ಸಹಸ್ರಾರಕ್ಕೆ ತೆಗೆದುಕೊಂಡು ಹೋದ ಮೇಲೆ, ಮೂಲಾದಾರ ತ್ರಿಕೋನದಲ್ಲಿರುವ ಅಧಃಕುಂಡಲಿನಿಮಾತೆಯು ಚಿತ್ರಿಣಿನಾಡಿಯ ಮುಖಾಂತರ ಮೇಲೆ ಬರಲು ಪ್ರಯತ್ನಿಸುತ್ತಿರುವುದನ್ನು ಕಂಡೆನು. ನಾನು ಮೇಲೆ ಬರುವಂತೆ ಮನಸ್ಸಿನಲ್ಲಿ ವಿನಂತಿಸಿಕೊಂಡ ಕೂಡಲೆ ಚಿತ್ರಣಿ ನಾಡಿಯ ಮುಖಾಂತರ, ಯಾವ ಚಕ್ರಗಳನ್ನೂ ಜಾಗೃತಮಾಡದೆ ನೇರ ಮೇಲಕ್ಕೆ ಬಂದು ಸಹಸ್ರಾರವನ್ನು ಸೇರಿದಳು. ಮರುದಿನ ಇಬ್ಬರು ಮಾತೆಯರು ಸಹಸ್ರಾರವನ್ನು ಸೇರಿಸಿದ ಮೇಲೆ ಊರ್ದ್ವ ಕುಂಡಲಿನಿಯು ಏನಾದರೂ ಮೇಲೆ ಬರಬಹುದೇ ಎಂದು ಪ್ರಯತ್ನಿಸಿದೆನು. ಆಗ ಊರ್ದ್ವ ಕುಂಡಲಿನಿಯೂ ಸಹ ಪ್ರಕಟವಾಗಿ ಸಹಸ್ರಾರಕ್ಕೆ ಬಂದು ಸೇರಿದಳು. ಈ ರೀತಿಯಾಗಿ ಮೂವರು ಕುಂಡಲಿನಿ ಮಾತೆಯರ ಪ್ರತ್ಯಕ್ಷ ಅನುಭವವು ನನಗಾಯಿತು.

ಕೆಲವು ದಿನಗಳ ನಂತರ ಅಧಃಕುಂಡಲಿನಿಯನ್ನು, ಪ್ರಾಣವನ್ನು ಮತ್ತು ನನ್ನ ಆತ್ಮಜ್ಯೋತಿಯನ್ನು ಚಕ್ರಗಳನ್ನು ಜಾಗೃತ ಮಾಡುತ್ತಾ ಸುಷುಮ್ನಾನಾಡಿಯ ಮುಖಾಂತರ ಸಹಸ್ರಾರಚಕ್ರಕ್ಕೆ ತೆಗೆದುಕೊಂಡು ಹೋಗಿ ಪರಬ್ರಹ್ಮ ತ್ರಿಕೋನದಲ್ಲಿ ಆತ್ಮಜ್ಯೋತಿಯನ್ನೂ ಮತ್ತು ಕುಂಡಲಿನಿ ಮಾತೆಯನ್ನು ಪ್ರವೇಶಿಸುವಂತೆ ಮಾಡಿದೆನು. ಇಬ್ಬರೂ ಪ್ರವೇಶಿಸಿದ ಕೂಡಲೆ ಪರಬ್ರಹ್ಮನ ಅಂಧಕಾರದಲ್ಲಿ ಲಯವಾದರು.

ನಾವು ಸಾಧನೆಯನ್ನು ಮಾಡುವುದಾದರೆ ಕುಂಡಲಿನಿಯ ಮೂರು ಸ್ಥಾನಗಳಲ್ಲಿ ಯಾವುದಾದರು ಒಂದು ಸ್ಥಾನದಿಂದ ಶುರುಮಾಡಬೇಕಾಗುತ್ತದೆ. ಶೈವ ಧರ್ಮವು ಅಧಃಕುಂಡಲಿನಿ ಸ್ಥಾನದಿಂದ ಮಾಡುವ ಸಾಧನೆಯನ್ನು

ತಿಳಿಸುತ್ತದೆ. ಮೂವರು ಕುಂಡಲಿನಿ ಮಾತೆಯರಲ್ಲೆಲ್ಲ ಅಧಃಕುಂಡಲಿನಿಯು ಬಹು ಶಕ್ತಿಶಾಲಿಯು, ಅತ್ಯಂತ ಮಹಿಮೆಯಿಂದ ಕೂಡಿರುವವಳೂ ಆಗಿದ್ದಾಳೆ. ಅದೂ ಅಲ್ಲದೆ ಶಿವಲಿಂಗವು ಕಾಣುವುದೇ ಇಲ್ಲ.

ಕುಂಡಲಿನಿ ಯೋಗವು ಗುರುಗಳ ಮಾರ್ಗದರ್ಶನ ಮತ್ತು ೩೫ ವಯಸ್ಸಿನಿಂದ ೪೦ ವರ್ಷದ ವಯಸ್ಸಿನ ಸ್ಥಿರಸಂಕಲ್ಪವಿರುವ ಸಾಧಕರಿಗೆ ಮಾತ್ರ ಸೀಮಿತವಾಗಿದೆ. ಅತಿಯಾದ ಸಾಧನೆ, ಅತಿಯಾದ ಪ್ರಾಣಯಾಮ ಮಾಡುವುದನ್ನು ನಿಷೇಧಿಸಿದೆ ಈ ಯೋಗವನ್ನು ಗುರುಗಳ ಮಾರ್ಗದರ್ಶನದಲ್ಲೇ ಮಾಡಬೇಕಿದೆ. ಉತ್ಸಾಹದಿಂದ ಅತಿಯಾಗಿ ಸಾಧನೆಯಲ್ಲಿ ತೊಡಗಿಕೊಂಡರೆ ವಿವಿಧ ತೊಂದರೆಗೆ ಈಡಾಗಬಹುದು. ಏಕೆಂದರೆ ನಾವು ಬ್ರಹ್ಮಾಂಡವನ್ನು ಸೃಷ್ಟಿಸಿದ ಶಕ್ತಿಗಳೊಂದಿಗೆ ಆಟವಾಡಬಾರದು.

ನಮ್ಮ ಶರೀರವು ಕುಂಡಲಿನಿ ಉತ್ತಾನಕ್ಕೆ ಸಿದ್ಧವಾಗಿರಬೇಕು ಮತ್ತು ಭೂತಶುದ್ಧಿಯನ್ನು ಪಡೆದಿರಬೇಕು. ಭೂತಶುದ್ಧಿಯೆಂದರೆ ಪ್ರಾಣವು ನಾಡಿಗಳಲ್ಲಿ ಸರಾಗವಾಗಿ ಸಂಚರಿಸುವಂತೆ ಶುದ್ಧಿಯಾಗಿರಬೇಕು. ಅತಿಯಾದ ಪ್ರಾಣಾಯಾಮದಿಂದ ಪ್ರಾಣೋತ್ಕ್ರಮಣವಾಗುವ ಸಂಭವವಿದೆ. ಆಗ ಭೂತಶುದ್ಧಿಯಾಗಿರದಿದ್ದರೆ ಪ್ರಾಣವು ನಾಡಿಯೊಳಗೆ ಎಲ್ಲೆಂದರಲ್ಲಿ ನುಗ್ಗುವುದು. ನಾಡಿಗಳಲ್ಲಿ ಅಡಚಣೆ ಇದ್ದರೆ ತೀವ್ರತರವಾದ ನೋವಿಗೆ ಸಿಲಕಬಹುದು ಮತ್ತು ನಮ್ಮ ಮನಸ್ಸಿನ ಮೇಲೂ ಪರಿಣಾಮವನ್ನು ಬೀರುವುದು. ಮಾನಸಿಕ ಆತಂಕ, ಭಯ ಅಥವಾ ಮನಸ್ಸಿನ ಸ್ಥಿತ್ಯಂತರ ಉಂಟಾಗಿ ಕೆಲವು ಅವದೂತರಂತೆ ಹುಚ್ಚರಾಗಬಹುದು.

ಕುಂಡಲಿನಿಯು ಸಾಮಾನ್ಯವಾದ ಶಕ್ತಿಯಲ್ಲ, ಬ್ರಹ್ಮಾಂಡವನ್ನು ಸೃಷ್ಟಿಸಿದ ಶಕ್ತಿ. ವಿಶ್ವದಲ್ಲಿ ಅನೇಕ ಸಾಧಕರು ಕುಂಡಲಿನಿಯ ರಹಸ್ಯವನ್ನು ತಿಳಿಯದೇ ಕುಂಡಲಿನಿಯೋಗವನ್ನು ಮಾಡಿ ತೊಂದರೆಗೆ ಈಡಾಗಿರುವುದನ್ನು ನಾವು ಗೂಗಲ್‌ನಲ್ಲಿ ನೋಡಬಹುದು. ಎಲ್ಲಕ್ಕಿಂತಲೂ ಮುಖ್ಯವಾಗಿ ಚಕ್ರಗಳ ಎಲ್ಲಾ ಒಳಸುಳಿವುಗಳನ್ನು ಗುರುವಿನಿಂದ ತಿಳಿದಿರಬೇಕು. ಆದ್ದರಿಂದ ಎಲ್ಲವನ್ನು ತಿಳಿದಿರುವ ಗುರುಗಳ ಮಾರ್ಗದರ್ಶನದಲ್ಲಿಯೇ ಸಾಧನೆಯನ್ನು ಮಾಡಬೇಕು. ಇಲ್ಲದಿದ್ದರೆ ತೊಂದರೆಗಳು ಶತಃಸಿದ್ಧ.

ಕುಂಡಲಿನಿ ಮಾತೆಯ ಅನುಗ್ರಹವನ್ನು ಪಡೆಯುವ ಮೊದಲು ಇಂದ್ರನ ಅನುಮತಿಯನ್ನು ಪಡೆಯುವುದು ಅವಶ್ಯಕವಾಗಿದೆ. ಏಕೆಂದರೆ ಇಂದ್ರನು ವಿಶ್ವ ಸಾಮ್ರಾಟ್ ಆಗಿರುವುದರಿಂದ ಮತ್ತು ನಮ್ಮ ಆತ್ಮಜ್ಯೋತಿಯು ಇಂದ್ರನ ಅಂಶವಾಗಿರುವುದರಿಂದ ಆತನನ್ನು ದಿಕ್ಕರಿಸಿದರೆ ಕುಂಡಲಿನಿ ಸಾಧನೆಯು ಸಫಲವಾಗುವುದಿಲ್ಲ. ಆದ್ದರಿಂದಲೇ ಬೆರಳೆಣಿಕೆಯಷ್ಟು ಮಾತ್ರ ಕುಂಡಲಿನಿ ಯೋಗದ ಸಾಧಕರಿದ್ದಾರೆ. ಇದರ ಬಗ್ಗೆ ವಿಷದವಾಗಿ ತಿಳಿಯಲಿಚ್ಛಿಸುವವರು ಋಗ್ವೇದ ಪ್ರಥಮ ಮಂಡಲ ಸೂಕ್ತ ೧೬೫ರಿಂದ ೧೭೧ರವರೆಗೂ ಓದಿ ತಿಳಿಯಬಹುದು.

ಋಚೋ ಅಕ್ಷರೇ ಪರಮೇ ವ್ಯೋಮನ್ಯಸ್ಮಿನ್ದೇವಾ ಅಧಿ ವಿಶ್ವೇ ನಿಷೇದುಃ ।
ಯಸ್ತನ್ನ ವೇದ ಕಿಮೃಚಾ ಕರಿಷ್ಯತಿ ಯ ಇತ್ತದ್ವಿದುಸ್ತ ಇಮೇ ಸಮಸತೇ ।। (ಋಗ್ವೇದ ೧-೧೬೪-೩೯: ಸಾಭಾ)
"ಋಕ್ ಪ್ರಧಾನವಾದ ವೇದಗಳಿಂದ ಪ್ರತಿಪಾದವಾದ, ನಾಶರಹಿತವಾದ, ಉತ್ಕೃಷ್ಟವಾದ ಪರಮ ವ್ಯೋಮದಲ್ಲಿ ಸಕಲ ದೇವತೆಗಳು ಆಶ್ರಯವನ್ನು ಪಡೆದಿರುತ್ತಾರೆ. ಯಾವ ಮಾನವನು ವೇದಾಧ್ಯಯನದ ಗುರಿಯು ಪರತತ್ವವನ್ನರಿಯುವುದಲ್ಲಿದೆಯೆಂದು ತಿಳಿಯುವುದಿಲ್ಲವೋ ಅವನು ಕೇವಲ ಋಕ್ ಪಠನದಿಂದ ಯಾವ ಪ್ರಯೋಜನವನ್ನೂ ಹೊಂದುವುದಿಲ್ಲ. ಈ ತತ್ವವನ್ನು ತಿಳಿಯುವ ಜ್ಞಾನಿಗಳು ಮಾತ್ರ ಶ್ರೇಷ್ಟರು."

# ಅಧ್ಯಾಯ ೫ – ನಾನು ಕಂಡ ಶಿವ ದರ್ಶನ

೨೦೧೧ರಲ್ಲಿ ನನಗೆ ಇಂದ್ರಾದಿದೇವತೆಗಳ ದರ್ಶನವಾದಾಗ ಕೆಲವು ದಿನಗಳು ಅವರ ಪೂಜೆಯಲ್ಲಿಯೇ ಮಗ್ನನಾಗಿದ್ದು, ಚಿಕ್ಕ ವಯಸ್ಸಿನಿಂದ ಗುರುವಾಗಿ ಭಾವಿಸಿದ್ದ ಶಿವನ ಪೂಜೆಯ ಕಡೆ ಗಮನ ಹರಿಸಲಿಲ್ಲ. ಒಂದು ದಿನ ಸತ್ಯಲೋಕದಲ್ಲಿ ಧ್ಯಾನಮಗ್ನನಾಗಿದ್ದಾಗ, ಪದ್ಮಾಸನಾಸೀನನಾಗಿದ್ದ ಶಿವನು ನೆತ್ತಿಯ ಮಧ್ಯದಲ್ಲಿ ಪ್ರಕಟನಾದನು. ಪದ್ಮಾಸನದಲ್ಲಿ ಕುಳಿತಿದ್ದ ಶಿವನು ಕೂಡಲೆ ಎದ್ದು ನಡೆದುಕೊಂಡು ಹೊರ ಹೋಗಲಾರಂಭಿಸಿದನು. ಆಗ ನಾನು ಕೂಡಲೆ ನನ್ನ ಮನಸ್ಸಿನಲ್ಲಿಯೇ "ಪ್ರಭೂ ಹೋಗಬೇಡಿ ವಾಪಸ್ಸು ಬನ್ನಿ" ಎಂದು ಕೂಗಿದೆನು. ಆಗ ಈಶ್ವರನು ವಾಪಸ್ಸು ಬಂದು ನೆತ್ತಿಯ ಮಧ್ಯದಲ್ಲಿ ಕುಳಿತುಕೊಂಡನು. ಅಂದಿನಿಂದ ಗುರುವಾದ ಶಿವನ ಪೂಜೆ ಮಾಡುವುದನ್ನು ಮರೆಯುವುದಿಲ್ಲ. ಇದು ಏನು ತೋರಿಸುತ್ತದೆಯೆಂದರೆ ಯೋಗೀಶ್ವರನಾದ ಶಿವನು ನಮ್ಮ ಶಿರಸ್ಸಿನ ಮೇಲಿರುವ ಬೆಟ್ಟದಂತಿರುವ ಸ್ಥಾನದಲ್ಲಿ ನೆಲೆಸಿರುವವನು ಆದರೆ ಲಿಂಗವು ಸುಷುಮ್ನಾ ನಾಡಿಯ ಒಳಗಿದೆ. ಅಧಃಕುಂಡಲಿನಿ ಸಾಧನೆಯಲ್ಲಿ ಚಂದ್ರಮಂಡಲ ಮಧ್ಯದೊಳಗೆ ಇರುವ ಅ–ಕ–ಥ ಎಂಬ ಹಂಸ ತ್ರಿಕೋನದೊಳಗೆ ಪರಬ್ರಹ್ಮನ ಅಂಧಕಾರ ಅಥವಾ ಶಿವನು ಸರ್ವಾಭರಣಭೂಷಿತನಾಗಿ ಕಾಮೇಶ್ವರ ರೂಪದಲ್ಲಿಯೂ ಕಾಣಿಸಿಕೊಳ್ಳುತ್ತಾನೆ.

## ಶೈವ ದೇವಾಲಯದ ರಹಸ್ಯ

ಶೈವಧರ್ಮದಲ್ಲಿ ಶಿವನನ್ನು ಎರಡು ರೀತಿಯಲ್ಲಿ ಪೂಜಿಸುತ್ತಾರೆ. ಒಂದು ಕರಸ್ಥಲದಲ್ಲಿ ಲಿಂಗವನ್ನು ಇಟ್ಟುಕೊಂಡು ಪೂಜಾರ್ಚನೆಗಳನ್ನು ಮಾಡಿ ಪಂಚಾಕ್ಷರಿ ಮಂತ್ರವನ್ನು ಜಪಿಸುವರು. ಇನ್ನೊಂದು ಶಿವ ದೇವಾಲಯಕ್ಕೆ ಹೋಗಿ ಲಿಂಗವನ್ನು ಆರಾಧಿಸುವರು. ಶಿವಲಿಂಗವನ್ನು ರುದ್ರಸೂಕ್ತಗಳಿಂದ ಅಭಿಷೇಕ ಮತ್ತು ಪೂಜಾರ್ಚನೆಯನ್ನೂ ಸಹ ಮಾಡುವರು. ಇವೆರಡರಲ್ಲಿ ಶಿವ ದೇವಾಲಯದಲ್ಲಿ ಮಾಡುವ ಲಿಂಗಪೂಜೆಯು ಅತ್ಯಂತ ಪ್ರಾಚೀನವಾದುದು. ಶಿವ ದೇವಾಲಯದಲ್ಲಿ ಮಾಡುವ ಪೂಜೆಯ ಮಹಿಮೆಯನ್ನು ಅರಿಯುವುದು ಅತ್ಯವಶ್ಯಕ.

## ಶಿವ ದೇವಸ್ಥಾನವು ಏನನ್ನು ತೋರಿಸುತ್ತದೆ

ಶಿವ ದೇವಾಲಯವನ್ನು ಒಂದು ಸಾರಿ ಸೂಕ್ಷ್ಮವಾಗಿ ಅವಲೋಕಿಸೋಣ. ಒಂದು ಪೀಠದ ಮೇಲೆ ಲಿಂಗವನ್ನು ಇರಿಸಿರುವರು ಮತ್ತು ಅದಕ್ಕೆ ಮೂರು ವಿಭೂತಿ ಪಟ್ಟೆಯನ್ನು ಬಳಿದಿರುವರು. ಲಿಂಗದ ಮೇಲ್ಭಾಗದಲ್ಲಿ ಹಿತ್ತಾಳೆಯ ಅಥವಾ ಕಂಚಿನ ಪಾತ್ರೆಯನ್ನು ತೂಗುಹಾಕಿ ಅದರ ಕೆಳಭಾಗದಲ್ಲಿ ಒಂದು ಸಣ್ಣ ತೂತನ್ನು ಮಾಡಿರುವರು. ಪೂಜಾವೇಳೆಯಲ್ಲಿ ಪಾತ್ರೆಗೆ ನೀರನ್ನು ತುಂಬುವರು. ಆಗ ನೀರು ಅತಿ ಸಣ್ಣದಾಗಿ ಮೇಲಿಂದ ಕೆಳಮುಖವಾಗಿ ಹರಿದು ಲಿಂಗದ ಮೇಲೆ ಬೀಳುವುದು. ಲಿಂಗಕ್ಕೆ ಸರಿಸಮಾನವಾಗಿ ಅಥವಾ ಸ್ವಲ್ಪ ಮೇಲಕ್ಕೆ ಒಂದು ನಂದಾದೀಪವನ್ನು ಇರಿಸಿರುವರು. ಈ ರೀತಿಯಲ್ಲಿರುವ ಶಿವಮಂದಿರದಲ್ಲಿ ಶೈವರು ಶಿವನನ್ನು ಆರಾಧಿಸುವರು.

ಬಹಳ ಹಿಂದಿನ ಕಾಲದಲ್ಲಿ ಲಿಂಗವನ್ನು ಭೂಮಿಯ ಮೇಲೆಯೆ ಸ್ಥಾಪಿಸಿ ಪೂಜಿಸುತ್ತಿದ್ದರು. ಆದರೆ ಮೇಲಿನ ಪಾತ್ರೆಯಿಂದ ಬೀಳುವ ನೀರು ಲಿಂಗದ ಮೇಲೆ ಬಿದ್ದು ಸುತ್ತಲೂ ಹರಡುತ್ತಿತ್ತು ಭಕ್ತರು ಆ ಪವಿತ್ರವಾದ ನೀರಿನ ಮೇಲೆ ನಿಂತು ಶಿವನನ್ನು ಆರಾಧಿಸಲು ಮುಜುಗರ ಪಟ್ಟುಕೊಳ್ಳುತ್ತಿದ್ದರು. ಆದ್ದರಿಂದ ಲಿಂಗಕ್ಕೆ ಒಂದು ಪೀಠವನ್ನು ಮಾಡಿ ನೀರು ಒಂದು ಕಡೆಗೆ ಹರಿದು ಹೋಗುವಂತೆ ವ್ಯವಸ್ಥೆಯನ್ನು ಮಾಡಿದರು. ಇದು ಈಗಿರುವ ಶಿವ ದೇವಾಲಯದ ಚಿತ್ರಣ. ಈ ಚಿತ್ರಣವು ನಿಜವಾಗಿಯೂ ಕುಂಡಲಿನಿಯೋಗದ ಚಿತ್ರಣವಾಗಿದೆ. ಆದಿಗುರು, ಯೋಗೇಶ್ವರನಾದ ಶಿವನಿಂದ ಕುಂಡಲಿನಿಯೋಗವು ಧರೆಗೆ ಬಂದಿತು. ಯಾರೋ ಪುರಾತನ ಯೋಗಿಯು ಮೂಲಾಧಾರದ ಮೇಲಿರುವ ತ್ರಿಕೋನದಲ್ಲಿ ಲಿಂಗರೂಪಿ ಶಿವನು ಮತ್ತು ಮೂರುವರೆ ಸುತ್ತು ಹಾಕಿಕೊಂಡು, ಮೇಲಿನಿಂದ ಹರಿದು ಬರುತ್ತಿರುವ ಅಮೃತವನ್ನು ಪಾನ ಮಾಡುತ್ತಾ ಕುಂಡಲಿನಿ ಸರ್ಪವು ನಿದ್ರಿಸುತ್ತಿರುವುದನ್ನು ದರ್ಶಿಸಿದನು.

ಕುಂಡಲಿನಿಯೋಗವನ್ನು ಮಾಡಲು ಅಸಮರ್ಥರಾದ ಸಾಮಾನ್ಯ ಜನರು ಶಿವಶಕ್ತಿಯರನ್ನು ಆರಾಧಿಸಲೆಂದು ತಾನು ಕಂಡ ದರ್ಶನವನ್ನು ಕಲ್ಲಿನಲ್ಲಿ ಕೆತ್ತಿಸಲು ಯೋಚಿಸಿದನು. ಆಗ ಆ ಪುರಾತನ ಯೋಗಿಯು ಕಲ್ಲಿನಲ್ಲಿ ಲಿಂಗವನ್ನು ಕೆತ್ತಿಸಿ ಅದನ್ನು ನೆಲದಲ್ಲಿ ಸ್ಥಾಪಿಸಿದನು. ಮಿಂಚಿನ ಬಣ್ಣದ ಮಾತೆಯು ಲಿಂಗವನ್ನು ಮೂರುವರೆ ಸುತ್ತು ಹಾಕಿಕೊಂಡು ಮಲಗಿರುವುದನ್ನು ಚಿತ್ರಿಸಲು, ಆ ಕಾಲದಲ್ಲಿ ಯಾವುದೇ ಬಣ್ಣವಿಲ್ಲದ್ದರಿಂದ ಬೂದಿಯನ್ನೇ ನೀರಿನಲ್ಲಿ ಕಲಸಿ ಲಿಂಗಕ್ಕೆ ಮೂರುವರೆ ಸುತ್ತು ಬರುವಂತೆಯೂ ಮತ್ತು ಸರ್ಪದ ಹೆಡೆಯು ಲಿಂಗದ ಮೇಲಿರುವಂತೆಯೂ ಬಳಿದನು. ಸರ್ಪದ ಹೆಡೆಯು ಮುಂದಿದ್ದುದರಿಂದ ಮುಂದುಗಡೆ ಮೂರು ಸುತ್ತು ಕಾಣುತ್ತಿತ್ತು ಹಾಗು ಹಿಂದುಗಡೆಯಿಂದ ನೋಡಿದಾಗ ಮೂರುವರೆ ಸುತ್ತು ಕಾಣುತ್ತಿತ್ತು.

ಸಹಸ್ರಾರದಿಂದ ಹರಿದು ಬರುತ್ತಿರುವ ಅಮೃತವನ್ನು ಕುಂಡಲಿನಿ ಸರ್ಪವು ಕುಡಿಯುತ್ತಿರುವುದನ್ನು ತೋರಿಸಲು, ಪುರಾತನ ಯೋಗಿಯು ಲಿಂಗದ ಮೇಲೆ ಒಂದು ಮಡಕೆಯನ್ನು ತೂಗುಹಾಕಿ, ಅದರ ಕೆಳಗೆ ಸಣ್ಣ ತೂತನ್ನು ಮಾಡಿ ಮಡಕೆಯಲ್ಲಿ ನೀರನ್ನು ತುಂಬಿದನು. ಹರಿಯುತ್ತಿರುವ ನೀರು ನೋಡಲು ನಿಜವಾಗಿಯೂ

ಅಮೃತವು ಹರಿದುಬರುವಂತೆ ತೋರುತ್ತಿತ್ತು. ಜೀವಾತ್ಮನನ್ನು ತೋರಿಸಲು ಲಿಂಗ ಮತ್ತು ಅಮೃತ ಪಾತ್ರೆಯ ಮಧ್ಯದಲ್ಲಿ ಬರುವಂತೆ ನಂದಾದೀಪವನ್ನು ಯೋಗಿಯು ತೂಗು ಹಾಕಿದನು.

ಜನರು ಅದರ ಸುತ್ತಲೂ ಒಂದು ಗರ್ಭಗುಡಿಯನ್ನು ಕಟ್ಟಿ ಆರಾಧಿಸತೊಡಗಿದರು. ಮಡಕೆಯಿಂದ ಹರಿದು ಬರುತ್ತಿದ್ದ ನೀರು ಕುಂಡಲಿನಿ ಸರ್ಪದ ಹೆಡೆಯ ಮೇಲೆ ಬಿದ್ದು ಅದನ್ನು ಅಳಿಸಿ ಹಾಕುತ್ತಿತ್ತು. ಜನರು ಮುಂದುಗಡೆ ನಿಂತು ಆರಾಧಿಸುತ್ತಿದ್ದುದರಿಂದ ಅವರಿಗೆ ಕೇವಲ ಮೂರು ಸುತ್ತು ಬೂದು ಬಣ್ಣದ ಪಟ್ಟೆ ಮಾತ್ರ ಕಾಣುತ್ತಿತ್ತು. ಹಿಂದುಗಡೆ ಇದ್ದ ನಾಲ್ಕು ಪಟ್ಟೆ ಕಾಣುತ್ತಿರಲಿಲ್ಲ. ಕಾಲಕ್ರಮೇಣ ಮುಂದಿನ ಮೂರು ಪಟ್ಟೆಯೇ ಸ್ಥಿರವಾಯಿತು ಮತ್ತು ಮೂರುವರೆ ಪಟ್ಟೆಯು ಕುಂಡಲಿನಿ ಸರ್ಪವನ್ನು ಪ್ರತಿನಿಧಿಸುತ್ತದೆ ಎಂಬುದನ್ನು ಶೈವಭಕ್ತರು ಮರೆತೇಹೋದರು. ಈ ರೀತಿ ಶೈವಭಕ್ತರು ಲಿಂಗವನ್ನೇ ಮುಖ್ಯವೆಂದು ಭಾವಿಸಿ ಕುಂಡಲಿನಿಯ ಪ್ರಾಮುಖ್ಯತೆಯು ಕಡಿಮೆಯಾಗಿ ಶಿವನನ್ನು ಶೈವರು ಆರಾಧಿಸತೊಡಗಿದರು.

ಲಿಂಗವು ಬೇರೆ ಮತ್ತು ಯೋಗೀಶ್ವರನಾದ ಶಿವನೇ ಬೇರೆಯಾಗಿದ್ದಾರೆ. ಯೋಗೀಶ್ವರನಾದ ಶಿವನೇ ಕುಂಡಲಿನಿ ಯೋಗವನ್ನು ಪ್ರಥಮ ಭಾರಿಗೆ ಭೂಮಿಯ ಮೇಲೆ ತಂದ ಯೋಗಿಯಾಗಿದ್ದಾನೆ ಎಂಬುದು ನನ್ನ ಅನಿಸಿಕೆ. ಆದ್ದರಿಂದ ಶೈವಧರ್ಮದ ಕುಂಡಲಿನಿ ಯೋಗಕ್ಕೆ ಶಿವನೇ ಆದಿಗುರುವಾಗಿದ್ದಾನೆ. ಶಿವನು ಗುರುತತ್ವವನ್ನು ಪ್ರತಿಪಾಧಿಸುತ್ತಾನೆ. ಈಗ ಲಿಂಗವು ಏನನ್ನು ಪ್ರತಿಪಾದಿಸುತ್ತದೆ ಎಂಬುದನ್ನು ತಿಳಿಯೋಣ. ಕುಂಡಲಿನಿಮಾತೆಯು ಸಪ್ತಚಕ್ರಗಳನ್ನು ಸೃಷ್ಟಿಸುವಾಗ ನಿರಾಕಾರ ಮತ್ತು ಅಂಧಕಾರ ಸ್ವರೂಪನಾದ ಪರಬ್ರಹ್ಮನನ್ನು ಆವರಿಸಿಕೊಂಡು ಪ್ರಥಮ ತ್ರಿಕೋನವನ್ನು ಕಟ್ಟುತ್ತಾಳೆ. ಇದೇ ಪ್ರಥಮ ಸೃಷ್ಟಿ. ಈ ತ್ರಿಕೋನವನ್ನು ಹಂಸ ತ್ರಿಕೋನವೆಂದು ಕರೆಯುತ್ತಾರೆ. ಯೋಗಿಗಳು ತಮ್ಮ ಆತ್ಮಜ್ಯೋತಿಯನ್ನೂ ಮತ್ತು ಕುಂಡಲಿನಿಮಾತೆಯನ್ನೂ ಸುಷುಮ್ನಾನಾಡಿಯ ಮುಖಾಂತರ ಇಲ್ಲಿಗೆ ಬಂದು ಗಾಡಾಂಧಕಾರದ ತ್ರಿಕೋನವನ್ನು ಸೇರಿದ ಕೂಡಲೆ ಲಯವಾಗುವರು.

ಸೃಷ್ಟಿಪೂರ್ವ ವಿಶ್ವಮನಸ್ಸು ಹೇಗೆ ಲಯವಾಗಿತ್ತೋ ಅದೇ ರೀತಿ ಲಯವಾಗುತ್ತದೆ. **ಆದರೆ ಈ ಲಯವು ಹಂಸ ತ್ರಿಕೋನದಲ್ಲಿ ಆಗುತ್ತದೆ, ಹೊರಗಿರುವ ಗಾಡಾಂಧಕಾರದಲ್ಲಿ ಅಲ್ಲ ಎಂಬುದನ್ನು ಓದುಗರು ಗಮನಿಸಬೇಕು.** ವಿಶ್ವಮನಸ್ಸು ಅಂತಿಮವಾಗಿ ಲಯವನ್ನು ಮಾಡಿ ಗಾಡಾಂಧಕಾರವನ್ನು ಪ್ರವೇಶಿಸಿದಾಗ ಮಾತ್ರ ನಾವೂ ಸಹ ವಿಶ್ವಮನಸ್ಸಿನ ಭಾಗವಾಗಿ ಪರಬ್ರಹ್ಮನಲ್ಲಿ ಲಯವಾಗುತ್ತೇವೆ.

ಕುಂಡಲಿನಿಮಾತೆಯು ಸಪ್ತಚಕ್ರಗಳನ್ನು ಸೃಷ್ಟಿಸುವಾಗ ಇನ್ನೂ ಮೂರು ತ್ರಿಕೋನವನ್ನು ರಚಿಸುತ್ತಾಳೆ. ಆದರೆ ಈ ಮೂರೂ ತ್ರಿಕೋನದಲ್ಲಿರುವ ಅಂಧಕಾರವು ಲಿಂಗರೂಪವಾಗಿ ಪರಿವರ್ತನೆಯಾಗುತ್ತದೆ. ಈ ಪರಿವರ್ತನೆಯನ್ನು ಮಾತೆಯು ಮಾಡಲಿಲ್ಲ. ಅಂಧಕಾರರೂಪದಲ್ಲಿರುವ ಪರಬ್ರಹ್ಮನೇ ತಾನಾಗೇ ಮಾರ್ಪಟ್ಟನು. ಆದ್ದರಿಂದ ಲಿಂಗವನ್ನು ಸ್ವಯಂಭೂ ಎಂದು ಕರೆಯುತ್ತಾರೆ. ಪರಬ್ರಹ್ಮನು ಲಿಂಗರೂಪವನ್ನು ಏಕೆ ಪಡೆದನು ಎಂಬುದನ್ನು ತಿಳಿಯೋಣ.

ಅಂಧಕಾರರೂಪಿ ಪರಬ್ರಹ್ಮನು ಲಿಂಗರೂಪವನ್ನು ತಾಳದಿದ್ದರೆ ಕುಂಡಲಿನಿ ಮಾತೆಯು ಅಂಧಕಾರದಲ್ಲಿಯೇ ಲಯವಾಗುತ್ತಿದ್ದಳು. ಉದಾಹರಣೆಗೆ ಮೂಲಾಧಾರಚಕ್ರದಲ್ಲಿರುವ ತ್ರಿಕೋನದಲ್ಲಿ ಅಂಧಕಾರವು ಹಾಗೆಯೇ ಇದ್ದಿದ್ದರೆ ಮಾತೆಯು ಅಲ್ಲಿಯೇ ಲಯವಾಗುತ್ತಿದ್ದಳು ಮತ್ತು ಮುಂದಿನ ಸೃಷ್ಟಿಕಾರ್ಯಗಳು ಆಗುತ್ತಿರಲಿಲ್ಲ. ಇದೇ ರೀತಿ ಅನಾಹತಚಕ್ರದ ಮೇಲಿರುವ ತ್ರಿಕೋನದಲ್ಲಿ ಅಂಧಕಾರವು ಹಾಗೆಯೇ ಇರುತ್ತಿದ್ದಿದ್ದರೇ, ಮೂಲಾಧಾರಚಕ್ರದಿಂದ ಮೇಲೆ ಬಂದ ಕುಂಡಲಿನಿಮಾತೆಯು ಅನಾಹತಚಕ್ರದ ಮೇಲಿರುವ ತ್ರಿಕೋನಕ್ಕೆ ಬಂದಾಗ ಅಲ್ಲಿಯೇ ಲಯವಾಗುತ್ತಿದ್ದಳು. ಆದ್ದರಿಂದ ಪರಬ್ರಹ್ಮಸ್ವರೂಪಿ ಅಂಧಕಾರವು ತಾನಾಗೆ ಲಿಂಗರೂಪವನ್ನು ಸೃಷ್ಟಿಯ ಒಳಗೆ ಅಂದರೆ ತ್ರಿಕೋನದ ಒಳಗೆ ತಾಳುತ್ತದೆ. ಆದ್ದರಿಂದ ಲಿಂಗವನ್ನು ಸ್ವಯಂಭೂ ಲಿಂಗವೆಂದು ಕರೆಯುತ್ತಾರೆ.

## ಅಧ್ಯಾಯ ೬ – ನಾನು ಕಂಡ ಸರಸ್ವತಿ ದೇವಿಯ ದರ್ಶನ

ಇಂದ್ರದರ್ಶನವಾದ ಕೆಲವು ತಿಂಗಳ ನಂತರ ಇಂದ್ರದೇವರು ಸರಸ್ವತಿಯ ಅನುಗ್ರಹವನ್ನು ಪಡೆಯುವಂತೆ ತಿಳಿಸಿದರು. ಯಾವ ಕಾರಣಕ್ಕಾಗಿ ಇಂದ್ರದೇವರು ಹೇಳಿದರು ಎಂಬುದನ್ನು ಮೇಲಿನ ಮಂತ್ರಗಳು ತಿಳಿಸುತ್ತವೆ. ಅಥವಾ ೧೯೯೦ರಲ್ಲಿ ಸರಸ್ವತಿ ಜಾಗೃತಿಯ ವಿಫಲ ಪ್ರಯತ್ನಕ್ಕಾಗಿ ಆಕೆಯ ಅನುಗ್ರಹವನ್ನು ಪಡೆಯುವಂತೆ ಇಂದ್ರದೇವರು ಹೇಳಿರಬಹುದು.

೧೯೯೦ರಲ್ಲಿ ನಾನು ಕುಂಡಲಿನೀ ಯೋಗದ ದೀಕ್ಷೆಯನ್ನು ಪಡೆದುಕೊಂಡೆನು. ಸುಮಾರು ಎರಡು ತಿಂಗಳ ತೀವ್ರ ಸಾಧನೆಯಿಂದ ನನ್ನ ಶರೀರವು ಪರಿಪೂರ್ಣ ಶುದ್ಧವಾಯಿತು. ಆಗ ನಾನು ಸರಸ್ವತಿ ಮಂತ್ರದ ಮಹಿಮೆಯನ್ನು ತಿಳಿಯುವ ಉದ್ಧೇಶದಿಂದ ಏನಾಗುವುದೋ ನೋಡೋಣವೆಂದು ಮಂತ್ರವನ್ನು ಉಚ್ಚರಿಸಿದೆನು. ಕೂಡಲೆ ನನ್ನ ವಕ್ಷಸ್ಥಳದ ಎಡಭಾಗದ ತೊಟ್ಟಿನಿಂದ ಹಿಡಿದು ಬಲಗಡೆಯ ಪಕ್ಕೆಯ ಕೆಳಭಾಗದವರೆಗೆ ಮಿಂಚು ಮತ್ತು ಸಿಡಿಲು ಹೊಡೆಯಿತು. ಆಗ ಮಿಂಚಿನ ಬಣ್ಣದ ನಾಡಿಯನ್ನು ನೋಡಿದೆನು. ಕೂಡಲೆ ಅಗ್ನಿಯು ದೇಹದ ಮುಂದಿನ ಭಾಗದ ಅಂದರೆ ಮೂಲಾದಾರದಿಂದ ಜಾಗೃತವಾಯಿತು ಮತ್ತು ವಾಯುವು ಎರಡೂ ಕಾಲಿನ ಹೆಬ್ಬೆರಳಿನಿಂದ ಅತ್ಯಂತ ತೀವ್ರತೆಯಿಂದ ಚಂಡಮಾರುತದಂತೆ ಜಾಗ್ರತವಾಯಿತು.

ಅದು ಎಷ್ಟು ತೀವ್ರತೆಯಿಂದ ಕೂಡಿತ್ತೆಂದರೆ ಹಡಗಿನಲ್ಲಿರುವ ಅಥವಾ ದೊಡ್ಡ ಕಟ್ಟಡದಲ್ಲಿರುವ ಅಶುದ್ಧ ಗಾಳಿಯನ್ನು ಹೊರಹಾಕುವ (ಎಕ್ಸಾಸ್ಟ್ ಫ್ಯಾನ್) ಯಂತ್ರದಿಂದ ಹೊರಬರುವಷ್ಟು ತೀವ್ರತೆಯಿಂದ ಕೂಡಿತ್ತು. ಆ ಊರ್ಧ್ವಮುಖವಾದ ಅಗ್ನಿವಾಯುಗಳ ಶಕ್ತಿಯು ಸಾಮಾನ್ಯ ಸ್ಥಿತಿಗೆ ಬರಲು ಕೆಲವು ತಿಂಗಳೇ ಬೇಕಾಯಿತು. ಅದರ ಪರಿಣಾಮದಿಂದ ಹೊರ ಬರಲು ಅನೇಕ ವರ್ಷಗಳೇ ಬೇಕಾಯಿತು. ಮೂರ್ಖತನದಿಂದ ಮಾಡಿದ ಈ ಜಾಗೃತಿಯು ನನ್ನ ತೇಜಸ್ಸು ಮತ್ತು ಬಲವನ್ನೇ ನಾಶಮಾಡಿತು.

ಆಗ ನಾನು ಇದು ಕುಂಡಲಿನೀ ಜಾಗೃತಿಯೆಂದೇ ತಿಳಿದುಕೊಂಡಿದ್ದೆನು. ಒಂದು ರೀತಿಯಲ್ಲಿ ಅದು ನಿಜವೂ ಕೂಡ ಆಗಿದೆ. ಏಕೆಂದರೆ ಅಗ್ನಿವಾಯುಗಳ ಜಾಗೃತಿಯು ಕುಂಡಲಿನಿ ಸಾಧನೆಯಲ್ಲಿ ಸಿದ್ಧಿ ಪಡೆಯಲು ಬಹು ಮುಖ್ಯವಾಗಿದೆ. ಅಗ್ನಿವಾಯುಗಳ ಜಾಗೃತಿಯಾಗದೇ ದೇವತೆಗಳನ್ನು ನೋಡಲು ಮತ್ತು ಆಧ್ಯಾತ್ಮದ ಸಂಪೂರ್ಣ ಜ್ಞಾನವನ್ನು ಪಡೆಯಲು ಸಾಧ್ಯವಿಲ್ಲ. ಆದರೆ ಋಗ್ವೇದದಲ್ಲಿರುವ ಸರಸ್ವತಿಯ ಮಂತ್ರಗಳನ್ನು ಓದಿದ ಮೇಲೆಯೇ ನನ್ನ ಹಿಂದಿನ ಅನುಭವವು ಸರಸ್ವತಿ ಮತ್ತು ಮರುದ್ದೇವತೆಗಳ ಕಾರಣದಿಂದಾಗಿ ಜಾಗೃತಿಯಾಯಿತು ಎಂದು ತಿಳಿಯಿತು. ಏಕೆಂದರೆ ವಕ್ಷಸ್ಥಳದಲ್ಲಿ ಹೊಡೆದ ಸಿಡಿಲು ಮಿಂಚು ಸರಸ್ವತೀ ನಾಡಿಯು ಪ್ರಕಟವಾಗುವ ಕಾರಣದಿಂದಾಗುತ್ತದೆ. ಆನಂತರ ಅಂದರೆ ೨೦೧೧ರಲ್ಲಿ ಇಂದ್ರದೇವರ ಆಜ್ಞೆಯಂತೆ ನಾನು ಪ್ರಯತ್ನಪೂರ್ವಕವಾಗಿ ಹುಡುಕಿ, ಸರಸ್ವತಿಯ ಸ್ಥಾನವನ್ನು ಕಂಡುಹಿಡಿದು ಮಾತೆಯ ದರ್ಶನವನ್ನು ಪಡೆದೆನು.

ಸರಸ್ವತಿ ತ್ವಂಅಸ್ಮಾನ್ ಅವಿಡ್ಢಿ ಮರುತ್ವತಿ ಧೃಷತೀ ಜೇಷಿ ಶತ್ರೂನ್ ।
ತ್ಯಂ ಚಿಚ್ಛರ್ಧಂತಂ ತವಿಷೀಯಮಾಣಮಿಂದ್ರೋ ಹಂತಿ ವೃಷಭಂ ಶಂಡಿಕಾನಾಂ ।। (ಋಗ್ವೇದ ೨-೩೦-೮ ಸಾಭಾ)
"ಎಲೈ ಸರಸ್ವತಿ ದೇವಿಯೇ, ನೀನು ಸ್ತೋತ್ರುಗಳಾದ ನಮ್ಮನ್ನು ರಕ್ಷಿಸು. ಮರುದ್ದೇವತೆಗಳೊಡನೆ ಕೂಡಿದವಳೂ, ಶತ್ರುಗಳನ್ನು ಮರ್ದನಮಾಡುವವಳೂ ಆಗಿ ನೀನು ಶತ್ರುಗಳನ್ನು ಜಯಿಸು....."

ವಿದ್ಯುದ್ರಥಾ ಮರುತ ಋಷ್ಟಿಮಂತೋ ದಿವೋ ಮರ್ಯಾ ಋತಜಾತಾ ಅಯಾಸಃ ।
ಸರಸ್ವತೀ ಶೃಣವನ್ಯಜ್ಞಿಯಾಸೋ ಧಾತಾ ರಯಿಂ ಸಹವೀರಂ ತರಾಸಃ ।। (ಋಗ್ವೇದ ೩-೫೪-೧೩ ಸಾಭಾ)
"ಮಿಂಚಿನಂತೆ ಪ್ರಕಾಶಿಸುವ ರಥವುಳ್ಳವರೂ, ಕಾಂತಿಯುತವಾದ ಆಯುಧವುಳ್ಳವರೂ, ಪ್ರಕಾಶಮಾನರೂ, ಶತ್ರುನಾಶಕರೂ, ಉದಕದಿಂದ ಉತ್ಪನ್ನರಾದವರೂ, ಸತತವಾದ ಗುಣವುಳ್ಳವರೂ, ಯಜ್ಞಾರ್ಹರೂ ಆದ ಮರುದ್ದೇವತೆಗಳೂ (ಇಂದ್ರನ ಸೈನಿಕರು) ಮತ್ತು ಸರಸ್ವತಿಯೂ ಸಹ ನಮ್ಮ ಸ್ತೋತ್ರಗಳನ್ನು ಕೇಳಲಿ. ನಮಗೆ ಫಲವನ್ನು ಕೊಡಲು ಆತುರವುಳ್ಳ ಮರುದ್ದೇವತೆಗಳೇ, ವೀರಪುತ್ರರೊಡಗೂಡಿದ ಧನವನ್ನು ನಮಗೆ ಕೊಡಿ."

### ಸರಸ್ವತೀ ನಾಡಿಯ ಮುಖಾಂತರ ಊರ್ಧ್ವಲೋಕಕ್ಕೆ ಹೋಗುವ ವಿಧಾನ

ವಕ್ಷಸ್ಥಳದ ಎಡಭಾಗದ ತೊಟ್ಟಿನಿಂದ ಹಿಡಿದು ಬಲಗಡೆಯ ಪಕ್ಕೆಯ ಕೆಳಭಾಗದವರೆಗೆ ಸರಸ್ವತೀ ನಾಡಿಯು ಪ್ರಕಟವಾಯಿತೆಂದು ತಿಳಿದೆವು. ಆಗ ನಾನು ನಾಡಿಯು ನೇರವಾಗಲೆಂದು ಮಂತ್ರವನ್ನು ಉಚ್ಚರಿಸಿದೆನು. ಕೂಡಲೆ ಲಂಬಾಕಾರವಾಗಿ ನೇರವಾಯಿತು. ನಂತರ ನಾನು ಅಗ್ನಿಕುಂಡದಿಂದ ನೇರವಾಗಿ ಶಿರಸ್ಸಿನ ತುಟ್ಟ ತುದಿಗೆ ಹೋಗಲೆಂದು ಮಂತ್ರವನ್ನು ಉಚ್ಚರಿಸಿದೆನು. ಆಗ ನಾಡಿಯು ಅಗ್ನಿಕುಂಡದ ಬಳಿ ನಾಲ್ಕು ಭಾಗವಾಗಿ ನಾಲ್ಕು ದಿಕ್ಕುಗಳಿಗೆ ನೆಲೆಸಿತು ಮತ್ತು ನಾಡಿಯು ದೊಡ್ಡದಾಗಿ ಶಿರಸ್ಸಿನ ಬ್ರಹ್ಮಕಪಾಲದವರೆಗೂ ಹೋಗಿ ನೆಲೆಸಿತು.

ಸರಸ್ವತಿ ದೇವಿಯು ದರ್ಶನವನ್ನು ಕೊಡುವಾಗ ಮರುದ್ದೇವತೆಗಳು ಆರ್ಭಟಿಸುವರು. ಅವರು ಬರುವ ವೇಗವನ್ನು ಸಾಧಕನು ಸಹಿಸಿಕೊಳ್ಳುವುದು ಕಷ್ಟವಾಗುತ್ತದೆ. ಸಾಧಕನ ಶರೀರವು ತರಗೆಲೆಯಂತೆ ಕಂಪಿಸುವುದು. ಆದರೆ ಅದರಿಂದ ಅವನಿಗೆ ಸಾಧನೆಯಲ್ಲಿ ಮುಂದುವರೆಯಲು ಅನುಕೂಲವೇ ಆಗುವುದು. ಸರಸ್ವತಿದೇವಿಯು ಪ್ರಕಟವಾಗುವಾಗ ಸರಸ್ವತೀ ನಾಡಿಯು ಸಿಡಿಲು ಮಿಂಚಿನಂತೆ ಹೊಡೆಯುವುದು. ವೃತ್ರಾಸುರನ ಕೋಟೆಯು ಧ್ವಂಸವಾಗುವುದು.

ನಂತರ ನನ್ನ ಆತ್ಮ ಜ್ಯೋತಿಯನ್ನು ಮತ್ತು ಸಕಲ ದೇವತೆಗಳನ್ನು ಅಗ್ನಿಕುಂಡದ ಬಳ ತಂದು ನಾಡಿಯೊಳಗೆ ಉರ್ಧ್ವಮುಖವಾಗಿ ತೆಗದುಕೊಂಡು ಹೋದೆನು. ಕೆಲವು ಹೊತ್ತು ಅಲ್ಲಿಯೇ ಧ್ಯಾನ ಮಾಡಿ ನಂತರ ನನ್ನ ಆತ್ಮವನ್ನು ಮತ್ತು ದೇವತೆಗಳನ್ನು ಸ್ವಸ್ಥಾನಕ್ಕೆ ತೆಗೆದುಕೊಂಡು ಬಂದೆನು. ಈ ರೀತಿಯಾಗಿ ಸರಸ್ವತೀನಾಡಿಯ ಮುಖಾಂತರ ಊರ್ಧ್ವಲೋಕಕ್ಕೆ ಅಂದರೆ ವಿರಾಟ್ ಪುರುಷನ ಬೆಳಕಿನ ಲೋಕಕ್ಕೆ ಹೋಗಬಹುದು.

ನಾನು ಬಿಹಾರದ ಜಾ ಸಮುದಾಯದ ಮದುವೆಯಲ್ಲಿ ಭಾಗಿಯಾಗಿದ್ದೆನು. ಪುರೋಹಿತರು ಅಗ್ನಿಕುಂಡದ ಮೇಲೆ ಒಂದು ೬–೭ ಅಡಿಯಷ್ಟು ಒಂದುವರೆ ಇಂಚ್ಚಿನ ಬಿದಿರನ್ನು ತೆಗೆದುಕೊಂಡು ಅದರ ಒಂದು ಕಡೆ ಸೀಳ ನಾಲ್ಕು ಭಾಗ ಮಾಡಿ ಅದು ಅಗ್ನಿಕುಂಡದ ಮೇಲೆ ನಿಲ್ಲುವಹಾಗೆ ನಿಲ್ಲಿಸಿದರು. ಆಗ ನಾನು ಅವರನ್ನು ಯಾಕೆ ಹೀಗೆ ನಿಲ್ಲಿಸಿದ್ದೀರಿ ಎಂದು ಕೇಳಿದಕ್ಕೆ ಅವರು ಇದು ದೇವತೆಗಳ ಸಂಚಾರಕ್ಕಾಗಿ ಎಂದು ತಿಳಿಸಿದರು. ಆಗ ನನ್ನ ಅನುಭವವು ಜ್ಞಾಪಕಕ್ಕೆ ಬಂದಿತು.

"ಇಂದ್ರನು ಋಷಿಗಳ ನಿವಾಸಸ್ಥಾನದಲ್ಲಿಯಾಗಲಿ, ಅಥವಾ ರಹಸ್ಯ ಪ್ರದೇಶದಲ್ಲಿಯಾಗಲಿ ಸ್ತುತಿರೂಪವಾದ ವಾಕ್ಕಿನಿಂದ ಆಕರ್ಷಿಸಲ್ಪಡುವನು...." (೧೦–೨೨–೧ ಸಾ ಭಾ)

"ಈ ಇಂದ್ರನು ಸಹಸ್ರಸಂಖ್ಯಾಕವಾದ ಸ್ತುತಿಕರ್ತರಾದ ಋಷಿಗಳಿಂದ ಸ್ತುತನಾಗಿ ತನ್ನ ಶಕ್ತಿಯನ್ನು ಬೆಳೆಸಿಕೊಂಡು ಸಮುದ್ರದಂತೆ ವಿಸ್ತೃತನಾಗಿ ಬೆಳೆದಿದ್ದಾನೆ. ಈ ಇಂದ್ರನ ಸತ್ಯಾತ್ಮಕವಾದುದೂ, ಪ್ರಸಿದ್ಧವಾದುದೂ ಆದ ಮಹಾತ್ಮ್ಯವೂ ಮತ್ತು ಬಲವೂ ಸಹ ಯಜ್ಞಗಳಲ್ಲಿ ಸ್ತುತಿಕರ್ತರ ಸಂಘಗಳಲ್ಲಿ ಪ್ರಶಂಸಿತವಾಗುತ್ತದೆ." (೮–೩–೪ ಸಾ ಭಾ)

"ಈ ಇಂದ್ರನೇ ಬ್ರಹ್ಮಾಖ್ಯನೂ, ಬೃಹದ್ರೂಪವುಳ್ಳವನೂ ಆದ ಮುಖ್ಯದೇವನಾಗಿದ್ದಾನೆ. ಈ ಇಂದ್ರನೇ ಅತೀಂದ್ರಿಯ ಜ್ಞಾನವುಳ್ಳ ದ್ರಷ್ಟೃವಾಗಿದ್ದಾನೆ. ಇವನೇ ಅಧಿಕವಾಗಿ ಅನೇಕರ ಆಹ್ವಾನಕ್ಕೆ ಪಾತ್ರನೂ, ಮಹತ್ತಾದ ವೃತ್ರವಧಾದಿಕರ್ಮಯುಕ್ತನಾಗಿಯೂ ಮಹಾತ್ಮ್ಯವುಳ್ಳವನಾಗಿಯೂ ಇದ್ದಾನೆ." (೮–೧೬–೭ ಸಾ ಭಾ)

"ಎಲೈ ಇಂದ್ರನೇ, ಯಾವ ನಿನ್ನ ದಿವ್ಯಜ್ಯೋತಿಯಿಂದ ಹಿಂದಿನ ತತ್ವಗಳನ್ನೂ ಮತ್ತು ಭವಿಷ್ಯತ್ಕಾಲದ ತತ್ವಗಳನ್ನೂ ನೀನು ಉತ್ಪನ್ನ ಮಾಡಿದೆಯೋ ಮತ್ತು ನಿನ್ನ ಪ್ರೀತಿಕರವಾದ ಪುರಾತನವಾದ ಯಾವ ದಿವ್ಯಜ್ಯೋತಿಯನ್ನು ನಿನಗೆ ಪ್ರಿಯರಾದ ದೇವಮಾನವಾದಿ ಪಂಚಜನರೂ ಸೇವಿಸುವರೋ ಆ ದಿವ್ಯ ಜ್ಯೋತಿಯು ರಹಸ್ಯಾತ್ಮಕವಾಗಿಯೂ ಅನೇಕರಿಂದ ಅಪೇಕ್ಷಿತವಾದುದಾಗಿಯೂ ಅತ್ಯಂತ ಪ್ರವೃದ್ಧಮಾನವಾದುದಾಗಿಯೂ ಇರುತ್ತದೆ." (೧೦–೫೫–೨ ಸಾ ಭಾ)

ಇಂತಹ ಪರಮಾತ್ಮನಾದ ದಿವ್ಯಜ್ಯೋತಿಯಾದ ಇಂದ್ರನಿಗೆ ಪತ್ನಿಯುಂಟೇ? ಜ್ಯೋತಿಗಾಗಲೀ ಅಥವಾ ಮನಸ್ಸಿಗಾಗಲೀ ಪತ್ನಿಯರಿರುವುದನ್ನು ಯಾರಾದರೂ ಕೇಳಿರುವರೇ? ಆಕಾಶತತ್ವವನ್ನು ಪ್ರತಿನಿಧಿಸುವ ವಿಷ್ಣುವಿಗೆ ಪತ್ನಿಯಿರುವುದು ನಿಜವೇ? ಪತಿ–ಪತ್ನಿಯ ಸಂಬಂದವು ಕೇವಲ ಜೀವಕುಲವನ್ನು ಮುಂದುವರೆಸುವ ಪ್ರಕ್ರಿಯೆಗಾಗಿ ಇರುವುದು.

# ಅಧ್ಯಾಯ ೭ – ಅಸುರರ ಪಾತಾಳದ ಮಾರ್ಗ

ನಮ್ಮ ಶರೀರವೂ ಸಹ ಜಲದಿಂದಲೇ ಉತ್ಪತಿಯಾಗಿದೆ ಎಂದು ತಿಳಿದೆವು. ನಮ್ಮಲ್ಲಿಯೂ ಸಹ ಸಿಹಿಜಲ ಮತ್ತು ಅಸುರರ ಉಪ್ಪು ಮತ್ತು ಕಹಿ ಜಲವಿರುವುದು. ಯಾವ ಯೋಗಿಯು ಊರ್ಧ್ವಮುಖವಾಗಿ ಚಲಿಸುತ್ತಿರುವ ಸಿಹಿಜಲವನ್ನು ನೋಡುತ್ತಿರುವನೋ ಅಂತಹ ಯೋಗಿಯು ಕೆಳಗಿರುವ ಚಕ್ರದ ಬಳಿ, ಅಂದರೆ ಗುದದ್ವಾರದ ಮುಂದುಗಡೆ, ಸ್ವಲ್ಪ ಮೇಲೆ (ಲಿಂಗಮೂಲದಲ್ಲಿ) ಒಂದು ಬಾವಿಯನ್ನೂ ಸಹ ಕಾಣುವನು.

ಈ ಬಾವಿಯ ಹೊರ ಆವರಣದಿಂದ ಸಿಹಿಜಲವು ಊರ್ಧ್ವಮುಖವಾಗಿ ಚಲಿಸುವುದನ್ನು ಕಾಣುತ್ತಾನೆ. ಬಾವಿಯ ಒಳಗಡೆ ಇಣುಕಿ ನೋಡಿದರೆ ಅದು ಕತ್ತಲಿನಿಂದ ಕೂಡಿರುತ್ತದೆ. ಈ ಬಾವಿಯ ಒಳಗಡೆಯ ದಾರಿಯು ಅಸುರರ ಪಾತಾಳ ಲೋಕಕ್ಕೆ ಹೋಗುವ ದಾರಿಯಾಗಿದೆ. ವೃತ್ರಾಸುರನ ಮೇಲೆ ಜಯವನ್ನು ಸಾಧಿಸಿದ ಇಂದ್ರನು ಸಿಹಿಸಮುದ್ರದ ಜಲವನ್ನು ಮರುತ್ತರಿಗೆ ಅನುಗ್ರಹಿಸಿದನು ಎಂದು ಋಗ್ವೇದವು ಹೇಳುತ್ತದೆ. ಹಾಗೆಯೆ ಮರುತ್ತರು ಯೋಗಿಯ ಶರೀರದಲ್ಲಿ ಬಾವಿಯಿಂದ ಜಲವನ್ನು ಊರ್ಧ್ವಮುಖವಾಗಿ ಚಲಿಸುವಂತೆ ಮಾಡುವರು ಎಂದೂ ಸಹ ಋಗ್ವೇದವು ಹೇಳುತ್ತದೆ.

ಊರ್ಧ್ವಂ ನುನುದ್ರೇಅವತಂ ತ ಓಜಸಾ ದಾದೃಹಾಣಂ ಚಿದ್ಬಿಭಿದುರ್ವಿ ಪರ್ವತಂ ।
ಧಮಂತೋ ವಾಣಂ ಮರುತಃ ಸುದಾನವೋ ಮದೇ ಸೋಮಸ್ಯ ರಣ್ಯಾನಿ ಚಕ್ರಿರೇ ।। (ಋ ೧–೮೫–೧೦ ಆರ್‌ಎಲ್‌ಕ)

"ಆ ಮರುತ್ತುಗಳು ಬಾವಿಯಿಂದ ನೀರು ಊರ್ಧ್ವಮುಖವಾಗಿ ಹರಿಯುವಂತೆ ಮಾಡಿದರು. ಬಂಡೆಗಳಿಂದ ಕೂಡಿದ ತಮ್ಮ ಗಮನಕ್ಕೆ ಪ್ರತಿಬಂಧಕಗಳಾದ ಪರ್ವತವನ್ನು ಸೀಳಿದರು (ವೃತ್ರಾಸುರನಿಂದ ಕಟ್ಟಲ್ಪಟ್ಟ ಪರ್ವತದಿಂದ ಕೂಡಿದ ಕೋಟೆ)....... "

ನನ್ನ ಅನುಭವವನ್ನು ಹೇಳುವುದಾದರೆ, ಇಂದ್ರನನ್ನು ಹೃದಯದಲ್ಲಿ ಆಹ್ವಾನಿಸಿ ಅವರ ಸ್ವರೂಪದ ಜೊತೆ ಲೀನನಾಗಿದ್ದಾಗ, ಜಲದಲ್ಲಿದ್ದ ಈ ಬಾವಿಯನ್ನು ಕೆಲವು ತಿಂಗಳಿನಿಂದ ನೋಡುತ್ತಿದ್ದೆನು ಮತ್ತು ಆ ಸ್ಥಾನದಿಂದ ಉದಕಗಳು ಊರ್ಧ್ವಮುಖವಾಗಿ ಹರಿಯುತ್ತಿದ್ದಿತು. ಬಾವಿಯ ಒಳಭಾಗವು ಕತ್ತಲಿನಿಂದ ಕೂಡಿತ್ತು. ಅದರ ಮಹತ್ವವೇನೆಂದು ನನಗೆ ತಿಳಿದಿರಲಿಲ್ಲ. ಒಂದು ದಿವಸ ಭಗವಂತನ ಧ್ಯಾನದಲ್ಲಿ ಮಗ್ನನಾಗಿರುವಾಗ "ಈ ಬಾವಿಯ ದ್ವಾರವು ಪಾತಾಳಕ್ಕೆ ಹೋಗುವುದು" ಎಂಬ ಆಲೋಚನೆಯು ಮೋಡದಂತೆ ತೇಲಿಕೊಂಡು ಬಂದಿತು. ಕೂಡಲೆ ನನ್ನ ಮನಃಸಂಕಲ್ಪದಿಂದ ಬಾವಿಗೆ ಮುಚ್ಚಳವನ್ನು ಹಾಕಿ ಅದಕ್ಕೆ ಬೀಗವನ್ನು ಹಾಕಿ ಅದರ ಕೀಲಿಯನ್ನು ಇಂದ್ರನ ಕೈಗೆ ಕೊಟ್ಟೆನು. ಈ ಕ್ರಿಯೆಗಳೆಲ್ಲವೂ ಕ್ಷಣಮಾತ್ರದಲ್ಲಿ ನಡೆದು ಹೋಯಿತು. ಅಂದಿನಿಂದ ಆ ಬಾವಿಯನ್ನು ಮುಚ್ಚಿರುವ ಹಾಗೆ ಕಾಣುತ್ತಿರುವೆನು. ಈ ಬಾವಿಯ ಮೂಲಕವಾಗಿಯೇ ವೃತ್ರಾಸುರನು/ಸೈತಾನನು ಮೇಲೆದ್ದು ನಮ್ಮೆಲ್ಲರನ್ನು ಅಂಧಕಾರ ಮತ್ತು ಅಜ್ಞಾನದಿಂದ ಆಕ್ರಮಿಸಿಕೊಂಡಿರುವನು. ಆದ್ದರಿಂದ ನಮ್ಮೊಳಗಿರುವ ಭಗವಂತನು, ದೇವತೆಗಳು, ಸೂರ್ಯ ಮತ್ತು ದೇವಸಾಮ್ರಾಜ್ಯವು ಕಾಣುತ್ತಿಲ್ಲ. ಆದ್ದರಿಂದ ನಾವು ಇಂದ್ರನನ್ನು ಆರಾಧಿಸುವ ಮಾರ್ಗವನ್ನು ತಿಳಿದುಕೊಂಡು ಜಲದಲ್ಲಿರುವ ಅತ್ಯಂತ ಮಧುರವಾದ ಸೋಮರಸವನ್ನು ಇಂದ್ರನಿಗೆ ಅರ್ಪಿಸಿದಾಗ, ಇಂದ್ರನು ಅದನ್ನು ಕುಡಿದು ವೃತ್ರಾಸುರನನ್ನು ಸಂಹರಿಸಿ ನಮ್ಮನ್ನು ಪರಿಪೂರ್ಣ ಮಾಡುವನು. ಸಾವಿನ ಸಮಯ ಬಂದಾಗ ನಮ್ಮನ್ನು ತನ್ನ ರಾಜ್ಯಕ್ಕೆ ಕರೆದುಕೊಂಡು ಹೋಗುವನು. ವಿಶ್ವಪ್ರಳಯದ ದಿನದವರೆಗೂ ಕಾಯುವ ಅಗತ್ಯವಿಲ್ಲ.

ವಿಶ್ವಮನಸ್ಸಿನ ದೈವೀದ್ರುವವಾದ ಕುಂಡಲಿನಿಮಾತೆಯರಿಂದ ಸೃಷ್ಟಿಯಾದ ಚಕ್ರಗಳ ಮಹಿಮೆ ಏನು?

೧. ಮೂರು ಕುಂಡಲಿನಿ ಮಾತೆಯರಿಂದ ಸೃಷ್ಟಿಯಾದ ೩ ಥ ೭ = ೨೧ + ೧ = ೨೨ ಚಕ್ರಗಳಿಂದ ವಾಯುವು ಉತ್ತೇಜನಗೊಂಡು ತೀವ್ರವಾಗಿ ಹರಿಯುತ್ತದೆ.


೨. ಕುಂಡಲಿನಿ ಚಕ್ರಗಳು ಅನಾದಿಯಾದ ಮಹಾಸಮುದ್ರವನ್ನು ಪ್ರವೇಶಿಸಿದಾಗ ಸಿಹಿ/ಕ್ಷೀರ ಸಮುದ್ರವು ಊರ್ಧ್ವಮುಖವಾಗಿ ಹರಿಯುತ್ತದೆ. ಹಾಗೆಯೇ ವಿಶ್ವಮನಸ್ಸಿನ ವಿರುದ್ಧ ದೃುವವಾದ ಕಪ್ಪು ಕುಂಡಲಿನಿ ಮಾತೆಯರು ಕಹಿ ಮತ್ತು ಉಪ್ಪಿನ ಸಮುದ್ರನ್ನು ಪ್ರವೇಶಿಸಿದಾಗ ಈ ಸಮುದ್ರವು ಕೆಳಮುಖವಾಗಿ ಹರಿಯುತ್ತದೆ. ದೇವತೆಗಳು ಜನನ ತಾಳಿದ ನಂತರ ತ್ವಷ್ಟಾ ಪ್ರಜಾಪತಿಯು ಊಧ್ವ ಮತ್ತು ಅಧೋಮುಖವಾಗಿ ಹರಿಯುತ್ತಿರುವ ಮಹಾಸಮುದ್ರಕ್ಕೆ ವಿರಾಟ್ ಪುರುಷನ ರೂಪವನನು ಕೊಟ್ಟಿರುವನು.

# ಅಧ್ಯಾಯ ೮ – ಆತ್ಮ ಪೂಜಾವಿಧಾನ

ಆತ್ಮದ ಬಗ್ಗೆ ಭಾರತೀಯರಲ್ಲಿ ಅನೇಕ ಗೊಂದಲಗಳಿವೆ. ಮೊದಲು ಅದನ್ನು ಪರಿಹರಿಸಿಕೊಳ್ಳೋಣ. ಉಪನಿಷದಾದಿ ಗ್ರಂಥಗಳಲ್ಲಿ ಆತ್ಮ ಎಂದರೆ ಪರಬ್ರಹ್ಮನ ಅಣು ಮಾತ್ರ ಅಂಶ ಎಂದು ತಿಳಿಸಿದ್ದಾರೆ. ದ್ವೈತ ಅದ್ವೈತಾದಿ ಮತ್ತು ಇತರ ಭಾರತೀಯ ಸಿದ್ಧಾಂತಗಳಲ್ಲಿ ಯಾರನ್ನು ನಾನು ಎಂದು ಕರೆಯುತ್ತೇವೆಯೊ, ಆ ಚೈತನ್ಯ ಸ್ವರೂಪನಾದ ನಾನೇ ಜೀವನು. ಏಕೆಂದರೆ ಆತ್ಮ ಪದದ ಅರ್ಥ 'ನಾನು' ಎಂಬುದಾಗಿದೆ. ಆದ್ದರಿಂದ ಆತ್ಮನೇ ಜೀವ. ಈತನು ದೇಹವನ್ನು ಹೊಂದಿ ಮರಣಧರ್ಮವನ್ನು ಹೊಂದಿದ್ದಾನೆ. ಯಾರ ಶರೀರವು ಮರಣ ಹೊಂದಿದ ನಂತರ ಈ ದೇಹದಿಂದ ಹೊರಡುತ್ತಾನೆಯೋ ಆ ಜೀವನೇ ಆತ್ಮ ಅಂದರೆ ಪರಬ್ರಹ್ಮನ ಅಂಶ ಎಂದು ಹೇಳುತ್ತಾರೆ. (ಇನ್ನೂ ಹೆಚ್ಚಿನ ವಿವರಗಳಿಗೆ ಅಧ್ಯಾಯ ೧೧ 'ವಾಯುವಿನ ಮಹಿಮೆ' ನೋಡಿ.)

ಆದರೆ ಋಗ್ವೇದದ ಪ್ರಕಾರ ಆತ್ಮ ಬೇರೆ, ಪರಬ್ರಹ್ಮ ಬೇರೆಯಾಗಿದ್ದಾರೆ ಹಾಗೆಯೇ ಆತ್ಮ ಬೇರೆ ಜೀವನು ಬೇರೆ. ಆತ್ಮವು ಹೇಗಿದೆಯೆಂದರೆ ಅದು ಜ್ಯೋತಿಯ ರೂಪದಲ್ಲಿದೆ ಮತ್ತು ಈ ಜ್ಯೋತಿಯು ಇಂದ್ರಸ್ವರೂಪವೇ ಆಗಿದೆ. ಆತನು ಸಕಲ ಜೀವರಾಶಿಗಳ ಹೃದಯ ಗುಹೆಯಲ್ಲಿದ್ದಾನೆ. ಆತ್ಮನು ಅಷ್ಟದಳ ಕಮಲದ ಒಳಗಡೆ ಇರುವನು. ಜೀವನು ಕೆಳಗಿರುವ ಚಿತ್ರಪಠದ ಶರೀರದಂತೆ ಇರುವುದು.

ಭಗವಂತನಾದ ಇಂದ್ರನು ವೃತ್ರಾಸುರನನ್ನು ಸಂಹರಿಸಿದ ಮೇಲೆ ಅನಾದಿಯಾದ ಸಿಹಿಸಮುದ್ರ ಮತ್ತು ಉಪ್ಪು ಕಹಿ ಸಮುದ್ರದ ಮೇಲೆ ತನ್ನ ಸಾಮ್ರಾಜ್ಯವನ್ನು ಸ್ಥಾಪಿಸಿದ್ದಾನೆ. ಅಂದರೆ ಜ್ಯೋತಿರೂಪನಾದ ಇಂದ್ರನು ವಿಶ್ವದ ಮೇಲಿರುವ ಬೆಳಕಿನ ಲೋಕದಲ್ಲಿ ತನ್ನ ಸಿಂಹಾಸನವನ್ನು ಸ್ಥಾಪಿಸಿ ಅಲ್ಲಿಂದಲೇ ವಿಶ್ವವನ್ನು ಪಾಲಿಸುತ್ತಿರುವನು ಮತ್ತು ಸಕಲರ ಹೃದಯದಲ್ಲಿದ್ದಾನೆ.




ದೇವತೆಗಳೆಲ್ಲರೂ ಸಿಹಿ ಸಮುದ್ರದಲ್ಲಿಯೇ ನೆಲೆಸಿದ್ದರು ಮತ್ತು ಇಂದ್ರನು ಒಬ್ಬನೇ ಸಮುದ್ರದ ಮೇಲೆ ನೆಲೆಸಿದ್ದನು. ಆಗ ಇಂದ್ರನು ತಾನು ಬಹುವಾಗಬೇಕೆಂದು ನಿರ್ಧರಿಸಿದನು. ಅಗ ಕೂಡಲೇ ಸ್ವಮನಸ್ಸನ್ನು ಹೊಂದಿದ ಅನಂತವಾದ ಜ್ಯೋತಿಗಳು ಇಂದ್ರನ ಶರೀರದಿಂದ ಹೊರಬಂದವು. ಅವರೆಲ್ಲರೂ ಇಂದ್ರನ ಜೊತೆಯಲ್ಲಿಯೇ ಸಂತೋಷದಿಂದ ಇದ್ದರು.

ಇಂದ್ರನ ಇಚ್ಛೆಯಂತೆ ಯಾವಾಗ ದೇವತೆಗಳು ಸೂರ್ಯನನ್ನು, ಸಪ್ತಸ್ವರ್ಗ ಮತ್ತು ಭೂಮಿಯನ್ನು ಸೃಷ್ಟಿಸಿದರೋ ಆಗ ಇಂದ್ರನ ಬಳಿಯಿದ್ದ ಇಂದ್ರನ ಅಂಶವೇ ಆಗಿದ್ದ ಜ್ಯೋತಿಗಳು ಭೂಮಿಯಲ್ಲಿ ಹುಟ್ಟಲು ಇಚ್ಛಿಸಿದರು. ಆಗ ಇಂದ್ರನು ಕಾರಣ ಶರೀರವನ್ನು ರಚಿಸಿ, ಅದರಲ್ಲಿ ದಿವ್ಯಜ್ಯೋತಿಗಳನ್ನು ಸೇರಿಸಿ ತಾನು ಅವರ ರಕ್ಷಣೆಗಾಗಿ ಜೊತೆಯಲ್ಲಿ ಕೆಳಗೆ ಬಂದನು. ಏಕೆಂದರೆ ವಿರಾಟ್ ಪುರುಷನ ಪ್ರತಿಕೃತಿಯಲ್ಲಿ ಕಹಿ ಮತ್ತು ಉಪ್ಪು ಸಮುದ್ರದ ಪಾತಾಳದ ಬಾಗಿಲು ತೆರೆದಿದೆ ಮತ್ತು ಅಸುರರು ಜಾಗೃತ ಸ್ಥಿತಿಯಲ್ಲಿದ್ದಾರೆ ಹಾಗು ಅಸುರರಿಂದ ತನ್ನ ಸ್ವರೂಪವೇ ಆದ ಆತ್ಮನನ್ನು ರಕ್ಷಿಸಲು ಇಂದ್ರನು ಸ್ವತಃ ನಮ್ಮ ಜೊತೆ ಬಂದಿದ್ದಾನೆ. ಆನಂತರ ಅನಾದಿಯಾದ ಮಹಾಸಮುದ್ರವನ್ನೇ ಶರೀರವಾಗಿ ಉಳ್ಳ

ವಿರಾಟ್ ಪುರುಷನು ತನ್ನ ಪ್ರತಿಕೃತಿಯನ್ನು ಕಾರಣ ಶರೀರದೊಟ್ಟಿಗೆ ಸೇರಿಸಿದನು. ವಿರಾಟ್ ಪುರುಷನಲ್ಲಿಯೇ ದೇವತೆಗಳು, ಅಸುರರು ಮತ್ತು ಕುಂಡಲಿನೀ ಮಾತೆಯರು ಇರುವರು. ಆದ್ದರಿಂದ ನಮ್ಮ ಶರೀರದಲ್ಲಿಯೂ ಇರುವ ಪುರುಷನಲ್ಲಿ ಸಹ ದೇವತೆಗಳು, ಅಸುರರು ಮತ್ತು ಕುಂಡಲಿನೀ ಮಾತೆಯರು ಇರುವರು.

ಈ ಕಾರಣ ಮತ್ತು ಪುರುಷ ಶರೀರದೊಂದಿಗೆ ಬಂದ ಆತ್ಮನಿಗೆ ಸೂರ್ಯ-ಸವಿತೃ ಮತ್ತು ಆದಿತ್ಯರು ಪಂಚಪ್ರಾಣದೊಂದಿಗೆ ಕೂಡಿದ ಸ್ಥೂಲಶರೀರವನ್ನು ರಚಿಸಿದರು. ಆದ್ದರಿಂದ ನಮ್ಮ ಸ್ಥೂಲ ಶರೀರದೊಳಗೆ ಜೀವನೆಂದು ಕರೆಯಲ್ಪಡುವ ಪಂಚಪ್ರಾಣ ಮತ್ತು ಮನಸ್ಸಿರುವುದು. **ಸೂರ್ಯನೇ ಸ್ಥೂಲಶರೀರದ ಆತ್ಮ** (ಆದರೆ ಜೀವನ ಆತ್ಮವಲ್ಲ ಅದು ಕೇವಲ ಪ್ರಾಣ ಮತ್ತು ಮನೋಮಯ ಶರೀರ.) ಈ ಸ್ಥೂಲಶರೀರದೊಳಗೆ ವಿರಾಟ್‌ಪುರುಷನ ಶರೀರ ಮತ್ತು ಕಾರಣ ಶರೀರವಿದೆ ಹಾಗು ಕಾರಣ ಶರೀರದೊಳಗೆ ನಮ್ಮ ಆತ್ಮಜ್ಯೋತಿ ಮತ್ತು ಹೃದಯ ಗುಹೆಯೊಳಗೆ ಇಂದ್ರನು ಇರುವನು. ಆದ್ದರಿಂದ ನಮ್ಮೊಳಗೆ ಎರಡು ಆತ್ಮಜ್ಯೋತಿಗಳಿವೆ.

ಸ ಮಜ್ಮನಾ ಜನಿಮ ಮಾನುಷಾಣಾಮಮರ್ತ್ಯೇನ ನಾಮ್ನಾತಿ ಪ್ರ ಸರ್ಸ್ರೇ ।
ಸ ದ್ಯುಮ್ನೇನ ಸ ಶವಸೋತ ರಾಯಾ ಸ ವೀರ್ಯೇಣ ನೃತಮಃ ಸಮೋಕಾಃ ॥
(ಋಗ್ವೇದ ೬-೧೮-೭ ಆರ್ ಎಲ್ ಕಶ್ಯಪ್)
"ಮರಣರಹಿತವಾದ (ಆತ್ಮಗಳ) ರಹಸ್ಯ ಹೆಸರುಗಳಿಂದ ಮಾನವರ ಸಂತತಿಯನ್ನು ಇಂದ್ರನು ಅತಿಯಾಗಿ ವೃದ್ಧಿಪಡಿಸಿದನು. ತನ್ನ ಬೆಳಕು, ಶಕ್ತಿ, ಬಲ, ವೀರ್ಯ, ಸಾಮರ್ಥ್ಯದೊಂದಿಗೆ ಅವರ ಜೊತೆಯಲ್ಲಿಯೇ ವಾಸಮಾಡುತ್ತಾನೆ."

ಈಗ ನಾನು ಮಾಡುವ ಆತ್ಮಪೂಜಾ ವಿಧಾನವನ್ನು ವಿವರಿಸುವೆನು. ನಮ್ಮ ಹೃದಯಗುಹೆಯ ಮಧ್ಯೆ ಬತ್ತದ ಮೊನೆಯಿರುವಂತಹ ಹಿರಣ್ಯಕಾಂತಿಯನ್ನು ಹೊರಸೂಸುತ್ತಿರುವ ಬಿಂದುವಿರುವುದು. ಅದರ ಕೆಳಗೆ ಒಂದು ಸಣ್ಣ ಹಳ್ಳವಿರುವುದು. ಮಂತ್ರಸಿದ್ಧಿನ್ನು ಪಡೆದ ಸಾದಕನು ಮಂತ್ರವನ್ನು ಉಚ್ಚರಿಸಿದಾಗ ಈ ಹಳ್ಳದಿಂದ ಅಷ್ಠದಳ ಕಮಲವು ಹೊರಕ್ಕೆ ಚಾಚುವುದು. ಇದರೊಳಗೆ ಅಂಗುಷ್ಟ ಪ್ರಮಾಣದ ನಮ್ಮ ಆತ್ಮ ಜ್ಯೋತಿಯಿರುವುದು ಮತ್ತು ಹೃದಯಗುಹೆಯ ಮಧ್ಯಬಿಂದುವನ್ನು ಮಂತ್ರದಿಂದ ಉಚ್ಚರಿಸಿದಾಗ ಹೃದಯಗುಹೆಯು ತೆರೆದುಕೊಳ್ಳುವುದು ಮತ್ತು ಇಂದ್ರನನ್ನು ಆಹ್ವಾನಿಸಿದಾಗ ಅದರೊಳಗಿನಿಂದ ಇಂದ್ರನು ಅಥವಾ ಇಂದ್ರಜ್ಯೋತಿಯು ಹೊರಬರುವುದು. ಎರಡು ಜ್ಯೋತಿಯ ಮಧ್ಯೆ ಅಷ್ಠದಳಗಳು ಅಡ್ಡವಿರುತ್ತದೆ. ಆಗ ನಮ್ಮ ಆತ್ಮಜ್ಯೋತಿಯು ದಳಗಳು ಹಿಂದಕ್ಕೆ ಹೋಗೆಂದು ವಿನಂತಿಸಿಕೊಳ್ಳಬೇಕು ಮತ್ತು ದಳಗಳನ್ನು ಬಾವಿಯ ಹಗ್ಗ ಸೇದುವಂತೆ ಮಾನಸಿಕವಾಗಿ ಮಾಡಿದಾಗ ದಳಗಳು ಹಿಂದಕ್ಕೆ ಹೋಗುತ್ತದೆ. ಆಗ ನಮ್ಮ ಜ್ಯೋತಿಯು ಕೆಳಗಡೆ ಇರುತ್ತದೆ ಮತ್ತು ಇಂದ್ರಜ್ಯೋತಿಯು ಮೇಲ್ಭಾಗದಲ್ಲಿರುತ್ತದೆ.

ಆಗ ನಮ್ಮ ಆತ್ಮವು ಇಂದ್ರನನ್ನು ವಿನಂತಿಸಿಕೊಳ್ಳಬೇಕು "ಪ್ರಭು ನನ್ನನ್ನು ನಿಮ್ಮ ಮಂಡಲದೊಳಗೆ ಸೇರಿಸಿಕೊಳ್ಳಿರಿ" ಎಂದು ಪ್ರಾಥಿಸಬೇಕು. ಸಿದ್ಧಿ ಮಂತ್ರವನ್ನು ಉಚ್ಚರಿಸಿದಾಗ ನಮ್ಮ ಜ್ಯೋತಿಯು ಮೇಲಕ್ಕೆ ಹೋಗುತ್ತದೆ ಮತ್ತು ಇಂದ್ರಜ್ಯೋತಿಯೊಳಗೆ ಸೇರಿಕೊಳ್ಳುತ್ತದೆ. ನಮ್ಮ ಜ್ಯೋತಿಯು ಇಂದ್ರಜ್ಯೋತಿಯೊಂದಿಗೆ ಒಂದಾಗುತ್ತದೆ. ಕೆಲವು ಕಾಲ ಧ್ಯಾನವನ್ನು ಮಾಡಿ. ಆನಂತರ ಇಂದ್ರಜ್ಯೋತಿಯು ೬ ಇಂಚು ದೊಡ್ಡದಾಗುವಂತೆ ಪ್ರಾಥಿಸಿ, ಕೂಡಲೆ ಇಂದ್ರಜ್ಯೋತಿಯು ದೊಡ್ಡದಾಗುತ್ತದೆ. ಈ ಜ್ಯೋತಿಯೊಳಗೆ ಸಿಂಹಾಸನದ ಮೇಲೆ ಕುಳಿತಿರುವ ಇಂದ್ರನನ್ನು ಕಾಣಬಹುದು. ನಮ್ಮ ಆತ್ಮವೂ ಸಹ ಮಾನವ ಶರೀರದೊಂದಿಗೆ ಮೊಣಕಾಲೂರಿ ಇಂದ್ರನ ಪಾದದ ಬಳಿ ಇರುವುದನ್ನು ಕಾಣುತ್ತೇವೆ. ನಾವು ಇಚ್ಚಿಸಿದರೆ ಇಂದ್ರನ ಶರೀರದೊಳಗೂ ಒಂದಾಗಬಹುದು. ನಮ್ಮ ಶಕ್ತಿಯಿರುವಷ್ಟು ಹೊತ್ತು ಧ್ಯಾನವನ್ನು ಮಾಡಿದ ನಂತರ ಮತ್ತೆ ಎರಡೂ ಜ್ಯೋತಿಗಳನ್ನು ಅವುಗಳ ಸ್ಥಾನಕ್ಕೆ ಸೇರಿಸಿ.

## ಆತ್ಮಪೂಜಾ ವಿಧಾನಕ್ಕೆ ಪ್ರಮಾಣ

**ಋಗ್ವೇದ ಮಂಡಲದ ಮಂತ್ರಗಳು:** ಈಗ ಇಂದ್ರ ಮತ್ತು ಇಂದ್ರಪುತ್ರರ ಬಗ್ಗೆ ಕೆಲವು ಋಗ್ವೇದ ಮಂತ್ರಗಳನ್ನು ನೋಡೋಣ. ಇಂದ್ರಪುತ್ರರು, ಜೀವನು ಸ್ಥೂಲರೀರದಲ್ಲಿ ಅನುಭವಿಸುತ್ತಿರುವ ಸುಖ-ದುಃಖವೆಂಬ ಭೋಗಗಳನ್ನು ಚಲನಚಿತ್ರದಂತೆ ಆತ್ಮನು ನೋಡುತ್ತಿರುವನು. ಚಲನಚಿತ್ರವನ್ನು ನೋಡುತ್ತಿರುವ ವ್ಯಕ್ತಿಯು ಕೆಲವು ಸಾರಿ ನಗುತ್ತಾ, ಕೆಲವು ಸಾರಿ ಅಳುತ್ತಾ ಇರುವಂತೆ ಆತ್ಮನು ಇರುವನು. ಆತ್ಮನು ಜೀವನವೆಂಬ ಚಿತ್ರಕ್ಕೆ ಕೇವಲ ಸಾಕ್ಷಿಯಾಗಿರುವುದರಿಂದ ಮತ್ತು ಇಂದ್ರಸ್ವರೂಪನಾಗಿರುವುದರಿಂದ ಅವನು ಸ್ವರ್ಗ-ನರಕಗಳಿಗೆ ಹೋಗುವುದಿಲ್ಲ. ಅವನು ವಿರಾಟ್ ಪುರುಷನ್ನು ಸೇರಿಕೊಳ್ಳುತ್ತಾನೆ. ಜೀವನು ಮಾತ್ರ ಯಮನಿಂದ ನಿಯಂತ್ರಿಸಲ್ಪಡುತ್ತಿರುವ ಲೋಕಕ್ಕೆ ಹೋಗುವನು.

ದ್ವಾ ಸುಪರ್ಣಾ ಸಯುಜಾ ಸಖಾಯಾ ಸಮಾನಂ ವೃಕ್ಷಂ ಪರಿಷಸ್ವಜಾತೇ ।
ತಯೋರನ್ಯಃ ಪಿಪ್ಪಲಂ ಸ್ವಾದ್ವತ್ತ್ಯನಶ್ನನ್ನ್ಯೋ ಅಭಿ ಚಾಕಶೀತಿ ॥ (ಋಗ್ವೇದ ೧-೧೬೪-೨೦ ಸಾ ಭಾ)
"ಒಟ್ಟಿಗೆ ಇರುವುವೂ, ಒಂದೇ ಆಕಾರವಾಗಿ ತೋರುವುವೂ, ಶ್ರೇಷ್ಠವಾದ ಎರಡು ಹಕ್ಕಿಗಳು ಒಂದೇ ವೃಕ್ಷವನ್ನು ಆಶ್ರಯಿಸಿಕೊಂಡಿವೆ. ಅವೆರಡರಲ್ಲಿ ಒಂದು ಸಿಹಿಯಾದ ಫಲವನ್ನು ತಿನ್ನುತ್ತದೆ, ಇನ್ನೊಂದು ತಿನ್ನದೇ, ನೋಡುತ್ತಿದೆ."

(ಆತ್ಮ ಮತ್ತು ಪರಮಾತ್ಮರಿಬ್ಬರೂ ಜ್ಯೋತಿಸ್ವರೂಪರಾಗಿದ್ದಾರೆ ಮತ್ತು ಅವರನ್ನು ಹಕ್ಕಿಗಳಿಗೆ ಹೋಲಿಸಲಾಗಿದೆ ಏಕೆಂದರೆ ಅವರು ವಿರಾಟ್ ಪುರುಷನಿಂದ ಹಕ್ಕಿಗಳಂತೆ ಕೆಳಗೆ ಬರುತ್ತಾರೆ ಹಾಗು ಮೇಲಕ್ಕೆ ಹೋಗುತ್ತಾರೆ. ಪರಮಾತ್ಮನು ಯಾವುದರಲ್ಲಿಯೂ ಆಸಕ್ತಿ ತೋರದೆ ಕೇವಲ ಸಾಕ್ಷಿಯಾಗಿದ್ದಾನೆ ಆದರೆ ನಮ್ಮ ಆತ್ಮವು ಜೀವನು ಅನುಭವಿಸುವ ಸುಖದುಃಖಗಳನ್ನು ನೋಡುತ್ತಾ ತಾನೂ ಸಹ ಅನುಭವಿಸುತ್ತಿದ್ದೇನೆಂದು ಭಾವಿಸುತ್ತಾನೆ.)

ಯತ್ರಾ ಸುಪರ್ಣಾ ಅಮೃತಸ್ಯ ಭಾಗಮನಿಮೇಷಂ ವಿದಥಾಭಿಸ್ವರಂತಿ ।
ಇನೋ ವಿಶ್ವಸ್ಯ ಭುವನಸ್ಯ ಗೋಪಾಃ ಸ ಮಾ ಧೀರಃ ಪಾಕಮತ್ರಾ ವಿವೇಶ ।।
(ಋಗ್ವೇದ ೧-೧೬೪-೨೧ ಸಾ ಭಾ+ಆರ್ ಎಲ್ ಕ)
"ತಮ್ಮ ವೇದ (ಕರ್ತವ್ಯ) ಜ್ಞಾನವನ್ನು (ಅಗ್ನಿಹೋತ್ರದಿಂದ) ಸರ್ವದಾ ವೃದ್ಧಿಸಿಕೊಂಡ ಎರಡು ಹಕ್ಕಿಗಳು ಆನಂದಮಯವಾದ ಅಮರತ್ವವನ್ನು ಪಡೆಯುತ್ತವೆ. ಅವನು ಸಮಸ್ತವಾದ ವಿಶ್ವಕ್ಕೂ ಸ್ವಾಮಿಯಾಗಿಯೂ ರಕ್ಷಕನಾಗಿಯೂ ಆಗಿದ್ದಾನೆ. ಪರಮೇಶ್ವರನು ಅನುಗ್ರಹಾತ್ಮಕವಾದ ಬುದ್ಧಿಯುಳ್ಳವನಾಗಿ ನಾನು (ಆತ್ಮನಾದ ಹಕ್ಕಿ) ಅಪರಿಪಕ್ವವಾದ ಜ್ಞಾನದಿಂದ ಕೂಡಿದ್ದರೂ ಸಹ (ಶರಣಾಗತನಾದರೆ) ನನ್ನನ್ನೂ ಈ ತನ್ನ ಮಂಡಲದಲ್ಲಿ ಪ್ರವೇಶಿಸುವಂತೆ ಮಾಡುತ್ತಾನೆ."

ಯಸ್ಮಿನ್ವೃಕ್ಷೇ ಮಧ್ವದಃ ಸುಪರ್ಣಾ ನಿವಿಶಂತೇ ಸುವತೇ ಚಾಧಿ ವಿಶ್ವೇ ।
ತಸ್ಯೇದಾಹುಃ ಪಿಪ್ಪಲಂ ಸ್ವಾದ್ವಗ್ರೇ ತನ್ನೋನ್ನಶದ್ಯಃ ಪಿತರಂ ನ ವೇದ ।।
"ಎರಡು ಹಕ್ಕಿಗಳು ವೃಕ್ಷದ ಮೇಲೆ ಕುಳಿತುಕೊಂಡು ಮಧುರವಾದ ಸೋಮರೂಪದ ಫಲವನ್ನು ಸೇವಿಸುತ್ತಿವೆ. ರಸವತ್ತಾದುದೂ, ಉತ್ತಮವಾದುದೂ ಆದ ಫಲವನ್ನು ಸೇವಿಸುತ್ತಾ ಆನಂದವನ್ನು ಎಲ್ಲಾ ಕಡೆಗೆ ಹರಡುತ್ತಾರೆ. ಯಾವ ಮನುಷ್ಯನು ಪರಮೇಶ್ವರನನ್ನು (ಅಗ್ನಿಹೋತ್ರ) ಉಪಾಸನಾದಿಗಳಿಂದ ತಿಳಿಯುವುದಿಲ್ಲವೋ, ಅವನು ಆ ಆನಂದಮಯವಾದ ಫಲವನ್ನು ಪಡೆಯುವುದಿಲ್ಲ." (೧-೧೬೪-೨೨) (ಆರ್ ಎಲ್ ಕ)

(ಈ ಮಂತ್ರಗಳು ಇಂದ್ರ ಮತ್ತು ಜೀವಾತ್ಮನನ್ನು ಕುರಿತು ಹೇಳುತ್ತಿದೆ. ಹಂಸ ಎಂದು ಕರೆಯಲ್ಪಡುವ ಈ ಹಕ್ಕಿಗಳು ಶರೀರವನ್ನು ಸೇರಲು ವಿರಾಟ್ ಪುರುಷನಿಂದ ಕೆಳಗೆ ಬರುತ್ತವೆ ಮತ್ತು ಶರೀರದ ಮರಣಾನಂತರ ಮೇಲಕ್ಕೆ ವಿರಾಟ್ ಪುರುಷನ ಬಳಿ ಹೋಗುತ್ತದೆ.)

## ನಾರಾಯಣ ಸೂಕ್ತದ ಪ್ರಮಾಣ

ಓಮ್ ಸಹಸ್ರಶೀರ್ಷಂ ದೇವಂ ವಿಶ್ವಾಕ್ಷಂ ವಿಶ್ವಶಂಭುವಮ್ ।
ವಿಶ್ವಂ ನಾರಾಯಣಂ ದೇವಮಕ್ಷರಂ ಪರಮಂ ಪದಮ್ ।। (೧)
"ಅಸಂಖ್ಯ ಶಿರಗಳುಳ್ಳವನು, ಸ್ವಯಂಪ್ರಕಾಶನು, ಅಸಂಖ್ಯ ನಯನಗಳುಳ್ಳವನು, ವಿಶ್ವಕ್ಕೆ ಸುಖವನ್ನು ಉಂಟುಮಾಡುವನು, ನಾಶರಹಿತನು ಮತ್ತು ಪರಮಶ್ರೇಷ್ಟ ಗುರಿಯಾಗಿರುವನು. ಆದ ನಾರಾಯಣನನ್ನು ಈ ಜಗತ್ತು ಆಶ್ರಯಿಸಿಕೊಂಡಿದೆ".

(ಈ ಮಂತ್ರದ ಅರ್ಥ: ನಾರಾಯಣನು ಚಿತ್ರಪಟಗಳಲ್ಲಿ ತೋರಿಸಿರುವಂತೆ ವಿಶ್ವರೂಪದಲ್ಲಿಲ್ಲ, ಮಾನವರೂಪದಲ್ಲಿಯೇ ಇರುವನು. ಅವನು ಅಸಂಖ್ಯ ಪ್ರತಿಕೃತಿಗಳನ್ನು ಹೊಂದಿ ಸರ್ವರೊಳಗಿರುವನು.)

ವಿಶ್ವತಃ ಪರಮಾನೆನಿತ್ಯಂ-ವಿಶ್ವಂ ನಾರಾಯಣಗ್ಂ ಹರಿಮ್ ।
ವಿಶ್ವಮೇವೇದಂ ಪುರುಷ-ಸ್ತದ್ವಿಶ್ವ-ಮುಪಜೀವತಿ ।। (೨)
"ಈ ವಿಶ್ವಕ್ಕಿಂತಲೂ ಶ್ರೇಷ್ಟನು, ನಿತ್ಯನು ಅಂದರೆ ಎಲ್ಲಾ ಕಾಲದಲ್ಲೂ ಇರುವವನು, ವಿಶ್ವವೇ ತಾನಾಗಿರುವವನು, ಭಕ್ತರ ಅಜ್ಞಾನ ಮತ್ತು ಪಾಪಗಳನ್ನು ಅಪಹರಿಸುವವನು ಆದ ನಾರಾಯಣನನ್ನು ಈ ವಿಶ್ವವು ವಾಸ್ತವವಾಗಿ ಆಧರಿಸಿಕೊಂಡಿದೆ".

ಪತಿಂ-ವಿಶ್ವಸ್ಯಾತ್ಮೇಶ್ವರಗಂ ಶಾಶ್ವತಗಂ ಶಿವ-ಮಚ್ಯುತಮ್ ।
ನಾರಾಯಣಂ ಮಹಾಜ್ಞೇಯಂ-ವಿಶ್ವಾತ್ಮಾನಂ ಪರಾಯಣಂ ।। (೩)
"ವಿಶ್ವಪಾಲಕನಾದ, ಪ್ರತಿಯೊಬ್ಬ ಜೀವಿಗೂ ಒಡೆಯನಾದ, ಎಂದೆಂದಿಗೂ ಇರುವ ನಿತ್ಯನು, ಪರಮಮಂಗಳನಾದ, ಚ್ಯುತಿ ಇಲ್ಲದ, ನರರಲ್ಲಿ ನೆಲೆಸಿರುವ ನಾರಾಯಣನು, ತಿಳಿದುಕೊಳ್ಳಲು ಯೋಗ್ಯವಾದವುಗಳಲ್ಲಿ ಅತ್ಯಂತ ಶ್ರೇಷವಾದ ವಿಶ್ವಾತ್ಮನು ಜೀವನದ ಪರಮಗುರಿಯಾಗಿರುವನು."

ನಾರಾಯಣಪರೋ ಧ್ಯಾತಾ ಧ್ಯಾನಂ ನಾರಾಯಣಃ ಪರಃ ।
ಯಚ್ಚ ಕಿಂಚಿಜ್ಜಗತ್ಸರ್ವಂ ದೃಶ್ಯತೇ ಶ್ರೂಯತೇಽಪಿ ವಾ ।। (೪)

**"ನಾರಾಯಣನೇ ಪರಂಜ್ಯೋತಿಯು**. ನಾರಾಯಣನೇ ಪರಮಾತ್ಮನು ಆಗಿದ್ದಾನೆ. ನಾರಾಯಣನು ಪರಬ್ರಹವಲ್ಲದೆ ಬೇರಲ್ಲ. ನಾರಾಯಣನೇ ಪರತತ್ವನು. ನಾರಾಯಣನು ಅತ್ಯಂತ ಉತ್ತಮನಾದ ಧ್ಯಾತೃ. ಧ್ಯಾನದ ಗುರಿ ಕೂಡ ನಾರಾಯಣನೇ. ಅಂತಹ ಈ ನಾರಾಯಣನು ಸರ್ವಶ್ರೇಷ್ಟನು".

ಅಂತರ್ಬಹಿಶ್ಚ ತತ್ಸರ್ವಂ–ವ್ಯಾಪ್ಯ ನಾರಾಯಣಃ ಸ್ಥಿತಃ ।
ಅನಂತಮವ್ಯಯಂ ಕವಿಗ್ಂ ಸಮುದ್ರೇಂಅತಂ–ಇಶ್ವಶಂಭುವಮ್ ।। (೫)
"ಜಗತ್ತಿನಲ್ಲಿ ಏನೇನನ್ನು ಕಾಣಬಹುದಾಗಿದೆಯೋ ಹಾಗೂ (ದೂರದಲ್ಲಿರುವ) ಯಾವ ಯಾವ ವಸ್ತುಗಳ ವಿಷಯವಾಗಿ ಕೇಳಲಾಗುತ್ತದೆಯೋ ಅವೆಲ್ಲದರ ಒಳಗೂ ಹೊರಗೂ ವ್ಯಾಪಿಸಿಕೊಂಡು ನಾರಾಯಣನು ನೆಲೆಸಿರುವನು".

ಪದ್ಮಕೋಶ–ಪ್ರತೀಕಾಶಗ್ಂ ಹೃದಯಂ ಚಾಪ್ಯಧೋಮುಖಮ್ ।
ಅಧೋ ನಿಷ್ಟ್ಯಾ ವಿತಸ್ಯಾಂತೇ ನಾಭ್ಯಾಮುಪರಿ ತಿಷ್ಠತಿ ।। (೬)
"ಅನಂತವಾದ ಬದಲಾಗದೆ ಇರುವ, ಸರ್ವಜ್ಞನಾದ, ಸಂಸಾರ ಸಾಗರದ ಆಚೆಗಿರುವ, ಹಾಗೂ ಸಮಸ್ತ ವಿಶ್ವಕ್ಕೆ ಸುಖ–ಸಂತೋಷಗಳನ್ನುಂಟುಮಾಡುವ ನಾರಾಯಣನನ್ನು ಹೃದಯದ ಒಳಗಿರುವ ಆಕಾಶದಲ್ಲಿ ಧ್ಯಾನಮಾಡಬೇಕು; ಆ ಹೃದಯವಾದರೋ ತಾವರೆಯ ಮೊಗ್ಗಿನಂತಿದೆ, ಹಾಗು ಕೆಳಮುಖವಾಗಿದೆ".

(ಅಷ್ಟದಳ ಕಮಲದ ಒಳಗಿರುವ ಪರಮಾತ್ಮನ ಅಂಶವಾದ ಆತ್ಮನ ಕುರಿತು ಹೇಳುತ್ತಿದೆ.)

ಜ್ವಾಲಾಮಾಲಾಕುಲಂ ಭಾತೀ ವಿಶ್ವಸ್ಯಾಯತನಂ ಮಹತ್ ।
ಸಂತತಗ್ಂ ಶಿಲಾಭಿಸ್ತು ಲಂಬತ್ಯಾಕೋಶಸನ್ನಿಭಮ್ ।। (೭)
"ಕಮಲದ ಮೊಗ್ಗಿನಂತಿರುವ ಆ ಹೃದಯವು ಕಂಠದಿಂದ ಕೈಬೆರಳುಗಳ (ಒಂದು ಗೇಣಿನ) ಪ್ರಮಾಣದಷ್ಟು ಕೆಳಗೆ, ನಾಭಿಯಿಂದ ಒಂದು ಗೇಣಿನಷ್ಟು ಮೇಲೆ ಇದೆ. ಆ ಹೃದಯವು ಜ್ವಾಲೆಗಳ ಮಾಲೆಯಿಂದ ಕೂಡಿ ಜಾಜ್ವಲ್ಯಮಾನವಾಗಿದೆ. ಮತ್ತು ಸಮಸ್ತ ವಿಶ್ವಕ್ಕೆ ಅದು ಶ್ರೇಷ್ಟ ಆಶ್ರಯಸ್ಥಾನವಾಗಿದೆ".

ತಸ್ಯಾಂತೇ ಸುಷಿರಗ್ಂ ಸೂಕ್ಷ್ಮಂ ತಸ್ಮಿನ್ ಸರ್ವಂ ಪ್ರತಿಷ್ಠಿತಮ್ ।
ತಸ್ಯ ಮಧ್ಯೇ ಮಹಾನಗ್ನಿ–ರ್ವಿಶ್ವತೋಮುಖಃ ।। (೮)
"ತಾವರೆಯ ಮೊಗ್ಗಿನಂತಿರುವ ಹೃದಯವು ನಾಡಿಗಳಿಂದ ಸುತ್ತಲೂ ಆವೃತವಾಗಿದೆ, ಮತ್ತು ಕೆಳಮುಖವಾಗಿ ತೂಗುಹಾಕಿದಂತಿದೆ. ಆ ಹೃದಯಕಮಲದ ಒಳಗೆ ಕಿರಿದಾದ, ಸೂಕ್ಷ್ಮವಾದ ಆಕಾಶವಿದೆ. ಆ ಹೃದಯಾಕಾಶದಲ್ಲಿ ಎಲ್ಲವೂ ನೆಲೆಸಿದೆ". (ಅಷ್ಟದಳ ಕಮಲ)

ಸೋಽಗ್ರಭುಗ್ವಿಭಜಂತಿಷ್ಠ–––ನ್ನಾಹಾರಮಜರಃ ಕವಿಃ ।
ತಿರ್ಯಗೂರ್ಧ್ವಮಧಶ್ಶಾಯೀ ರಶ್ಮಯಸ್ತಸ್ಯ ಸಂತತಾ ।। (೯)
**"ಆ ಹೃದಯಾಕಾಶದ ಮಧ್ಯದಲ್ಲಿ ಮಹಾನ್ ಅಗ್ನಿಯು ನೆಲೆಸಿದೆ.** (ಆತ್ಮಜ್ಯೋತಿ) ಎಲ್ಲ ಕಡೆಗಳಿಗೂ ಪಸರಿಸುತ್ತಿರುವ ಜ್ವಾಲೆಗಳುಳ್ಳ ಈ ಅಗ್ನಿಯು ಎಲ್ಲ ಕಡೆ ಮುಖವುಳ್ಳದ್ದು. ತಿಂದ ಆಹಾರವನ್ನು ಪಚನ ಮಾಡುವುದು ಈ ಅಗ್ನಿಯೇ. ಇದು ಆಹಾರದ ಸಾರವನ್ನು ಎಲ್ಲ ಅಂಗಾಂಗಗಳಿಗೂ ತಲುಪಿಸುತ್ತದೆ. ಆಹಾರವನ್ನೆಲ್ಲ ಇದು ಜೀರ್ಣಮಾಡಿದರೂ ತಾನು ಮಾತ್ರ ಕ್ಷೀಣವಾಗದೆ ಸದಾ ಚೈತನ್ಯಭರಿತವಾಗಿರುತ್ತದೆ, ಅಲ್ಲದೆ, ಈ ಅಗ್ನಿಯು ಎಲ್ಲವನ್ನೂ ಬಲ್ಲ ಸರ್ವಜ್ಞ. ಅಕ್ಕಪಕ್ಕದಲ್ಲಿ, ಮೇಲೆ, ಕೆಳಗೆ ಎಲ್ಲ ದಿಸೆಗಳಲ್ಲೂ ಈ ಅಗ್ನಿಯ ಕಿರಣಗಳು (ಅಂದರೆ ಶಾಖವು) ಹರಡಿಕೊಂಡಿದೆ".

ಸಂತಾಪಯತಿ ಸ್ವಂ ದೇಹಮಾಪಾದತಲಮಸ್ತಕಃ ।
ತಸ್ಯ ಮಧ್ಯೇ ವಹ್ನಿಶಿಖಾ ಅಣೀಯೋರ್ಧ್ವಾ ವ್ಯವಸ್ಥಿತಃ ।। (೧೧)
"ಆ ಅಗ್ನಿಯು ತಾನು ಯಾವ ದೇಹದೊಳಗಿದೆಯೋ ಆ ಇಡೀ ದೇಹವನ್ನು ಪಾದದಡಿಯಿಂದ ಮುಡಿಯವರೆಗೆ ಬೆಚ್ಚಗಿಟ್ಟಿರುತ್ತದೆ. ಈ ಅಗ್ನಿಯು ಮಧ್ಯದಲ್ಲಿ ಸೂಕ್ಷ್ಮಾತಿ ಸೂಕ್ಷ್ಮವಾದ, **ಅಗ್ನಿಜ್ವಾಲೆಯಂತಹ ಆತ್ಮನಿದ್ದಾನೆ.** (ಮಂತ್ರ ೧೦)

.

ನೀಲತೋ–ಯದಮಧ್ಯಸ್ಥಾ–ದ್ವಿಧ್ಯುಲ್ಲೇಖೇವ ಭಾಸ್ವರಾ ।
ನೀವಾರಶೂಕವತ್ತನ್ವೀ ಪೀತಾ ಭಾಸ್ವತ್ಯಣೂಪಮಾ ।। (೧೨)
"ಕಪ್ಪು ಮೋಡದ ಮಧ್ಯದಲ್ಲಿ ಮೂಡಿದ ಮಿಂಚಿನ ಬಳ್ಳಿಯಂತೆ ಪ್ರಜ್ವಲಿಸುತ್ತಿದೆ, ಅದು ಭತ್ತದ ತುದಿಯಲ್ಲಿ ಮುಳ್ಳಿನ ಹಾಗೆ ಕಾಣುವ ನವುರಾದ ಭಾಗದಂತೆ ತೆಳ್ಳಗಿದೆ. ಕರಗಿಸಿದ ಬಂಗಾರದಂತೆ ಜಾಜ್ವಲ್ಯಮಾನವಾಗಿದೆ. ಅಣುವಿನಂಥ ಸೂಕ್ಷ್ಮ ವಸ್ತುಗಳನ್ನು ಹೋಲಿಸಲು ತಕ್ಕ ಉಪಮೆಯಂತಿದೆ".

ತಸ್ಯಾಃ ಶಿಖಾಯಾ ಮಧ್ಯೇ ಪರಮಾತ್ಮಾ ವ್ಯವಸ್ಥಿತಃ ।

ಸ ಬ್ರಹ್ಮ ಸ ಶಿವಂ ಸ ಹರಿಃ ಸೇಂದ್ರ ಸೋಽಕ್ಷರಃ ಪರಮಃ ಸ್ವರಾಟ್ ।। (೧೩)
"ಅಗ್ನಿ ಶಿಖೆಯ ಮಧ್ಯದಲ್ಲಿ ಆ ಪರಮಾತ್ಮನು ನೆಲಸಿರುವನು. ಅವನೇ ಸೃಷ್ಟಿಕರ್ತನಾದ ಬ್ರಹ್ಮ, ಅವನೇ ಸಂಹಾರಕರ್ತನಾದ ಶಿವ. ಅವನೇ ವಿಶ್ವಪಾಲಕನಾದ ವಿಷ್ಣು. ಅವನೇ ದೇವತೆಗಳ ರಾಜನಾದ ಇಂದ್ರ. ಅವನು ನಾಶವಿಲ್ಲದವನು. ಅವನು ಪರಮಶ್ರೇಷ್ಟನು; ಎಲ್ಲಕ್ಕೂ ಕಾರಣನಾದ ಒಡೆಯ. ಅವನು ತನ್ನ ಮಹಿಮೆಯಲ್ಲಿ ತಾನು ಬೆಳಗುತ್ತಿರುವ ಸರ್ವತಂತ್ರ ಸ್ವತಂತ್ರನಾದ ಸ್ವಾಮಿ".

ಋತಗ್ಂ ಸತ್ಯಂ ಪರಂ ಬ್ರಹ್ಮ ಪುರುಷಂ ಕೃಷ್ಣಪಿಂಗಲಮ್ ।
ಊರ್ಧ್ವರೇತಂ-ವಿರೂಪಾಕ್ಷಂ-ವಿಶ್ವರೂಪಾಯ ವೈ ನಮೋ ನಮಃ ।।
(ಈ ಮಂತ್ರ ವಿಷ್ಣುವಿನ ರೂಪವನ್ನು ವರ್ಣಿಸುತ್ತಿದೆ.)

ಓಂ ನಾರಾಯಣಾಯ ವಿದ್ಮಹೇ ವಾಸುದೇವಾಯ ಧೀಮಹಿ ।
ತನ್ನೋ ವಿಷ್ಣುಃ ಪ್ರಚೋದಯಾತ್ ।।
ಓಂ ಶಾಂತಿಃ ಶಾಂತಿಃ ಶಾಂತಿಃ ।।

ಇಂದ್ರಜ್ಯೋತಿಯು ತನ್ನ ಜ್ವಾಜಲ್ಯಮಾನವಾದ ಪ್ರಕಾಶದಿಂದ ಮತ್ತು ತನ್ನ ಮಾನಸಿಕ ಶಕ್ತಿಯಿಂದ ಬ್ರಹ್ಮಾಂಡವನ್ನೆಲ್ಲಾ ವ್ಯಾಪಿಸಿಕೊಂಡಿದ್ದಾನೆ. ನಾರಾಯಣ ಜ್ಯೋತಿಯು ಕಿರಣಗಳನ್ನು ಹಿಂಪಡೆಯುತ್ತದೆ. ಅಂದರೆ ಸೃಷ್ಟಿಯಲ್ಲಿ ಜ್ಯೋತಿಯು ಬೆಳಕನ್ನು ಪಸರಿಸುತ್ತದೆ, ಲಯದಲ್ಲಿ ಜ್ಯೋತಿಯ ಬೆಳಕು ತನ್ನೊಳಗೆ ಎಳೆದುಕೊಳ್ಳುತ್ತದೆ. ಆದ್ದರಿಂದ ಕಪ್ಪು ಮೋಡದಂತಹ ಅಂಧಕಾರವು ಶರೀರವನ್ನು ಆವರಿಸಿಕೊಳ್ಳುತ್ತದೆ. ಆತ್ಮ ಪರಮಾತ್ಮರಿಬ್ಬರೂ ಜ್ಯೋತಿಸ್ವರೂಪರಾಗಿದ್ದಾರೆ. ಜ್ಯೋತಿರೂಪದಲ್ಲಿರುವ ಇಂದ್ರನ/ನಾರಾಯಣನ ಮನಸ್ಸೇ ಮಾನವ ರೂಪವನ್ನು ಪಡೆದು ವಿಶ್ವಸಿಂಹಾಸನದಲ್ಲಿ ಕುಳಿತು ಬ್ರಹ್ಮಾಂಡವನ್ನು ಆಳುತ್ತಿದ್ದಾನೆ. ಯಜ್ಞದ ಮುಖಾಂತರ ಆರಾಧಿಸಿದಾಗ ಅಸುರಾಂತಕನಾದ ಇಂದ್ರಸ್ವರೂಪವನ್ನೂ ಮತ್ತು ನಾರಾಯಣನ ಉಪಾಸನೆಮಾಡಿದಾಗ ಕಿರಣಗಳನ್ನು ಹಿಂಪಡೆದ ಲಯಸ್ಥಿತಿಯಲ್ಲಿರುವ ಜ್ಯೋತಿಸ್ವರೂಪದಲ್ಲೂ ದರ್ಶನವನ್ನು ಕೊಡುತ್ತಾನೆ. ಆದರೆ ಸುತ್ತಲೂ ಅಂಧಕಾರ ಆವರಿಸುತ್ತದೆ. **"ಇಂದ್ರನೇ ನಾರಾಯಣನು. ಇಂದ್ರನ ಜ್ಯೋತಿಯು ಬೆಳಕನ್ನು ಪಸರಿಸುತ್ತದೆ, ಆದರೆ ನಾರಾಯಣ ಜ್ಯೋತಿಯು ಕಿರಣಗಳನ್ನು ಪಸರಿಸುವುದಿಲ್ಲ ಹಿಂಪಡೆಯುತ್ತಾನೆ. ಸೃಷ್ಟಿಯು ಶುರುವಾದಾಗ ಇಂದ್ರನಾಮಕನಾಗಿಯೂ, ಲಯದಲ್ಲಿ ನಾರಾಯಣನಾಮಕನಾಗಿಯೂ ಪರಮಾತ್ಮನು ಇರುವನು."**

**ಅಷ್ಟಾಂಗ ಯೋಗ:** ಎಲ್ಲರೂ ಪಾಲಿಸಬೇಕಾದ **ಯಮ:**
೧. ಅಹಿಂಸೆ, **೨.** ಸತ್ಯ, **೩.** ಅಸ್ತೇಯ (ಕಳ್ಳತನ, ಶಾಸ್ತ್ರ ವಿರುದ್ಧವಾಗಿ ಸಂಪಾದಿಸುವುದು. ಇವುಗಳಲ್ಲಿ ಆಸೆ ಪಡದಿರುವುದು.). **೪.** ಬ್ರಹ್ಮಚರ್ಯ (ವಿದ್ಯಾರ್ಥಿ ದೆಶೆಯಲ್ಲಿ ಬ್ರಹ್ಮಚರ್ಯವನ್ನು ಪಾಲಿಸುವುದು ಮತ್ತು ಮದುವೆಯಾದ ಮೇಲೆ ಸೂಕ್ತ ನಿಯಮದಂತೆ ವರ್ತಿಸುವುದು.), **೫.** ಅಪರಿಗ್ರಹ (ವಸ್ತುಗಳ ಸಂಪಾದನೆ, ಅವುಗಳ ರಕ್ಷಣೆಗಳಲ್ಲಿ ಆಸಕ್ತಿ ತೋರದಿರುವುದು.)

**ನಿಯಮ**

೧. ಶೌಚ (ದೇಹ ಮತ್ತು ಮನಸ್ಸನ್ನು ಶುದ್ಧಿಯಾಗಿಡುವುದು), ೨. ಸಂತೋಷ (ಸುಖ-ದುಃಖಗಳನ್ನು ಸಮನಾಗಿ ಸ್ವೀಕರಿಸಿ ಸರ್ವದಾ ಸಂತೋಷವಾಗಿರುವುದು), ೩. ತಪಸ್ಸು (ನಿತ್ಯ ಕರ್ಮಗಳು ಮತ್ತು ಜಪ ತಪಗಳನ್ನು ಶ್ರದ್ದೆಯಿಂದ ಮಾಡುವುದು.
೪. ಸ್ವಾಧ್ಯಾಯ (ಶಾಸ್ತ್ರಾಧ್ಯಾಯ ಮತ್ತು ಪ್ರಣವ ಜಪ)
೫. ಈಶ್ವರ ಪ್ರಣಿಧಾನ (ಈಶ್ವರನಲ್ಲಿ ಸರ್ವಕರ್ಮಗಳನ್ನು ಸಮರ್ಪಿಸುವುದು)

# ಅಧ್ಯಾಯ-೬: ಅಶ್ವಮೇಧ ಯಾಗ
## (ಋಗ್ವೇದದ ಪ್ರಕಾರ ಮೋಕ್ಷವನ್ನು ಪಡೆಯುವ ವಿಧಾನ)

ಅಶ್ವ ಎಂದರೆ ವಾಯು. ಮೇಧ ಎಂದರೆ ಆಹುತಿಯಾಗಿ ಕೊಡುವುದು. ಅಂದರೆ ನಮ್ಮ ಶರೀರದಲ್ಲಿ ಮತ್ತು ೭೨,೦೦೦ ನಾಡಿಯೊಳಗಿರುವ ವಾಯುವನ್ನು ಮತ್ತು ಅಂತರಿಕ್ಷದಲ್ಲಿರುವ ವಾಯುವನ್ನು ಪಿಂಡಾಂಡದೊಳಗೆ ಆಹ್ವಾನಿಸಿ, ನಾಭಿಯಲ್ಲಿ ಸ್ಥಾಪಿಸಿರುವ ಅಗ್ನಿಯಲ್ಲಿ ಆಹುತಿಯನ್ನು ಕೊಡುವುದು ಎಂದು ಅರ್ಥ. ಮೋಕ್ಷವನ್ನು ಪಡೆಯಬೇಕಾದರೆ, ನಾವು ಅಂತರ್ ಯಜ್ಞವನ್ನು ಮಾಡುವುದನ್ನು ಕಲಿಯಬೇಕು. ಮೊದಲು ಎರಡು ಆತ್ಮಜ್ಯೋತಿಗಳನ್ನು ಒಂದಾಗಿ ಮಾಡಬೇಕು. ಅಂತರ್ ಯಜ್ಞದಲ್ಲಿ ನಾಭಿಯಲ್ಲಿ ಯಜ್ಞಕುಂಡವನ್ನು ಜಾಗೃತಮಾಡಿ, ಅದರಲ್ಲಿ ಅಗ್ನಿಯನ್ನು ಸ್ಥಾಪಿಸಿ ಯೂಪಸ್ತಂಭವನ್ನು ಜಾಗೃತಮಾಡಬೇಕು. ಯಜ್ಞಕುಂಡದಿಂದ ನೆತ್ತಿಯಲ್ಲಿರುವ ಚಂದ್ರಮಂಡಲದವರೆಗೂ ವಿಸ್ತಾರವಾಗಿರುವ ಯೂಪಸ್ತಂಭವು ಪ್ರಕಟವಾಗುವುದು. ವಾಯುವನ್ನು ಆಹ್ವಾನಿಸಿ ಶರೀರವನ್ನು ಪ್ರಾಣಶಕ್ತಿಯಿಂದ ತುಂಬಿಕೊಳ್ಳಬೇಕು. ಈಗ ಗುದವನ್ನು ಸಂಕೋಚನ ಮಾಡಿದಾಗ ಅಪಾನವಾಯುವಿನ ಜೊತೆ ಪ್ರಾಣಶಕ್ತಿಯು ಮೇಲಕ್ಕೆ ಬರುವುದು. ನಂತರ ಜಾಲಂಧರ ಬಂಧದೊಂದಿಗೆ ಹೃದಯವನ್ನು ಸಂಕೋಚಿಸಿದಾಗ ಪ್ರಾಣವಾಯು ಮತ್ತು ಶರೀರದಲ್ಲಿರುವ ವಾಯುವು ಅಗ್ನಿಕುಂಡದ ಬಳಬರುತ್ತದೆ.

ವಾಯುವು ಕೆಳಗೆ ಹೋಗುತ್ತಿರುವಾಗ "ಹಂಸ ಸೋಹಂ" ಮಂತ್ರವನ್ನು ಉಚ್ಚರಿಸಿದಾಗ ಒಂದಾದ ಎರಡೂ ಜ್ಯೋತಿಗಳು ಅಗ್ನಿಕುಂಡದೊಳಗೆ ಇಳಿಯುತ್ತವೆ ಮತ್ತು ಯೂಪಸ್ತಂಭದ ದ್ವಾರದ ಬಳ ಬರುತ್ತದೆ. ನಂತರ ಅಗ್ನಿ-ವಾಯುಗಳನ್ನು ತನ್ನ ಬೆರಳುಗಳಿಂದ ತಿರುಗುವಂತೆ (ಟ್ವಿಸ್ಟ್) ಮಾಡಬೇಕು. ಆಗ ಅಗ್ನಿ-ವಾಯುಗಳು ವೇಗವಾಗಿ ತಿರುಗುತ್ತವೆ. ಪಂಚಪ್ರಾಣಗಳನ್ನು ಒಂದಾಗಿ ಮಾಡಿ ನಾಭಿಯ ಬಳ ಬರುವಂತೆ ಮಾಡಬೇಕು. ಆಗ ಜೀವನೂ ಸಹ ನಾಭಿಯ ಬಳ ಬರುವನು.

ಹೀಗೆ ಒಂದಾಗಿರುವ ಎರಡೂ ಆತ್ಮಗಳನ್ನು, ಅಗ್ನಿ-ವಾಯುಗಳನ್ನು ಮತ್ತು ನಮ್ಮೊಳಗಿರುವ ಪಂಚಪ್ರಾಣ ಮನಸ್ಸುಗಳೊಂದಿಗೆ ಜೀವನನ್ನು ಯೂಪಸ್ತಂಭದೊಳಗೆ ಬಳ ತೆಗೆದುಕೊಂಡು ಬಂದು "ಹುಂ ಹಂಸ ಸೋಹಂ" ಎಂಬ ಮಂತ್ರವನ್ನು ಉಚ್ಚರಿಸಿದಾಗ ಯೂಪಸ್ತಂಭದ ದ್ವಾರವು ತೆರೆದುಕೊಳ್ಳುತ್ತದೆ ಮತ್ತು ಆತ್ಮಜ್ಯೋತಿಯು ಮೊದಲು, ಅಗ್ನಿ-ವಾಯುಗಳ ನಂತರ ಪಂಚಪ್ರಾಣಗಳೊಂದಿಗೆ ಜೀವನು ಯೂಪಸ್ತಂಭವನ್ನು ಪ್ರವೇಶಿಸುವನು. ಸ್ಥೂಲಶರೀರದ ಪಂಚಕರ್ಮೇಂದ್ರಿಯ, ಪಂಚಜ್ಞಾನೇಂದ್ರಿಯದ ಶಕ್ತಿಯನ್ನು ಮತ್ತು ಮನಸ್ಸನ್ನು ಸಹ ಯೂಪಸ್ತಂಭದ ಒಳಗೆ ಸೆಳೆದುಕೊಂಡು ಮೇಲಕ್ಕೆ ಹೋಗಬೇಕು. ಯೂಫಸ್ತಂಭೆದ ಮೂಲಕ ಮೇಲಕ್ಕೆ ಪ್ರಯಾಣಮಾಡಿ ಚಂದ್ರಮಂಡಲದವರೆಗೂ ಹೋದಮೇಲೆ, ಎಲ್ಲಾ ತತ್ವಗಳನ್ನು ಅತ್ಮಜ್ಯೋತಿಯೊಳಗೆ ಸೇರಿಸಬೇಕು. ನಂತರ ಚಂದ್ರಮಂಡಲ ಮಧ್ಯದಲ್ಲಿರುವ ಬಿಂದುವಿನೊಳಗೆ 'ಸೋಹಂ' ಮಂತ್ರದೊಂದಿಗೆ ಚಂದ್ರಮಂಡಲವನ್ನು ಪ್ರವೇಶಿಸಬೇಕು. ಆಗ ಶರೀರವು ತಣ್ಣಗಾಗುವುದು ಮತ್ತು ಅಂಧಕಾರಮಯವಾಗುವುದು.

ಚಂದ್ರಮಂಡಲ ಮಧ್ಯದೊಳಗೆ ತ್ವಷ್ಟಾ ದೇವತೆ ಇರುವರು. ಅವರನ್ನು ಕೆಲ ಹೊತ್ತು ಪೂಜೆ ಮಾಡಿ ಊರ್ಧ್ವಮುಖವಾಗಿ ಮೇಲಕ್ಕೆ ಹೋಗಲು ಅನುಮತಿಯನ್ನು ಪಡೆಯಬೇಕು. ಆತ್ಮಜ್ಯೋತಿಯು ಮೇಲಕ್ಕೆ ಹೋಗುವಾಗ ನಮ್ಮ ಮನಸ್ಸನ್ನು ನೆತ್ತಿಯಲ್ಲಿ ಕೇಂದ್ರೀಕರಿಸಿ ಬ್ರಹ್ಮಕಪಾಲವನ್ನು (ಮಂತ್ರದೊಂದಿಗೆ) ಜಾಗೃತಮಾಡಬೇಕು. ಆಗ ಬ್ರಹ್ಮಕಪಾಲವು ಚಚ್ಚೌಕವಾಗಿ ನಾಲ್ಕು ದ್ವಾರಗಳು ತೆರೆದುಕೊಳ್ಳುವವು. ಬ್ರಹ್ಮಕಪಾಲದ ಮಧ್ಯೆ ಇರುವ ಚಚ್ಚೌಕವಾಗಿರುವ ಸ್ಥಾನದಲ್ಲಿ ಪಿರಮಿಡ್ ತ್ರಿಕೋನವು ಪ್ರಕಟವಾಗುವುದು. ಪಿರಮಿಡ್ ತ್ರಿಕೋನದ ತಳಭಾಗದಲ್ಲಿ ಒಂದು ಸಣ್ಣ ತೂತು ಇರುವುದು. ಅದರೊಳಗಿಂದ ನಮ್ಮ ಆತ್ಮಜ್ಯೋತಿಯು ಪಿರಮಿಡ್ ಮಧ್ಯ ಭಾಗಕ್ಕೆ ಬರುವುದು. ನಮ್ಮ ಆತ್ಮಜ್ಯೋತಿಯು ಪಿರಮಿಡ್ ಮಧ್ಯಭಾಗದಲ್ಲಿ ನೆಲೆಸಿದ ಮೇಲೆ "ಯದ್ ಬ್ರಹ್ಮಾಂಡೇ ತದ್ ಪಿಂಡಾಂಡೆ" ಎಂದು ಉಚ್ಚರಿಸಿದಾಗ ಬ್ರಹ್ಮಾಂಡ ಮತ್ತು ಪಿಂಡಾಂಡ ಒಂದಾದಂತೆ ಭಾಸವಾಗುವುದು. ಆಗ ಬ್ರಹ್ಮಾಂಡದ ಮೇಲಿರುವ ಇಂದ್ರ ದೇವರು ನಮ್ಮ ನೆತ್ತಿಯ ಮೇಲೆ ಬರುವರು. ಆನಂತರ ಸೂಕ್ತ ಮಂತ್ರದೊಂದಿಗೆ ಪಿರಮಿಡ್ ತುದಿಯನ್ನು ಅಂದರೆ ಶಿರಸ್ಸನ್ನು ಛೇಧಿಸಿಕೊಂಡು ಶರೀರವನ್ನು ತ್ಯಜಿಸಬೇಕು. ಒಂದು ಸಾರಿ ಅಗ್ನಿ-ವಾಯು ಮತ್ತು ಇತರ ದೇವತೆಗಳು ಜಾಗೃತರಾದರೆ ಅವರೇ ನಮಗೆ ಅವರ ಮಹಿಮೆಯನ್ನು ಮತ್ತು ಮೋಕ್ಷವನ್ನು ಪಡೆಯುವ ವಿಧಾನವನ್ನು ತಿಳಿಸುವರು.

ನನ್ನಿರ್ಣಿಜಾ ರೇಕ್ಣಸಾ ಪ್ರಾವೃತಸ್ಯ ರಾಶಿಂ ಗೃಭೀತಾಂ ಮುಖತೋ ನಯಂತಿ ၊
ಸುಪ್ರಾಂಅಜೊ ಮೇಮ್ಯದ್ವಿಶ್ವರೂಪ ಇಂದ್ರಾಪೂಷ್ಣೋಃ ಪ್ರಿಯಮಪ್ಯೇತಿ ಪಾಥಃ ။ (ಋಗ್ವೇದ ೧-೧೬೨-೨ ಕಶ್ಯಪ್)
"ಯಾವಾಗ ವಾಯುವು ನಮ್ಮಲ್ಲಿ ಪರಿಶುದ್ಧವಾಗಿ ಹಿರಣ್ಮಯ ವರ್ಣದಂತೆ ಆಗುವುದೋ ಆಗ ಅದನ್ನು ಆಹುತಿಯಾಗಿ ಅರ್ಪಿತವಾಗತಕ್ಕದ್ದೂ ಆದ ವಾಯುವನ್ನು ಮತ್ತು ಅಜವನ್ನು ಋತ್ವಿಕ್ಕುಗಳು ತರುವಾಗ, ಶ್ರೇಷ್ಠವಾದ ಗಮನವುಳ್ಳದ್ದೂ ಆದ ಆ ಅಜವು ಸೂಕ್ತವಾದ ಶಬ್ದವನ್ನು ಮಾಡುತ್ತಾ ಇಂದ್ರ ಮತ್ತು ಅಗ್ನಿರೂಪನಾದ ಪೂಷನ್ ಕಡೆಗೆ ನೇರವಾಗಿ ಹೋಗುತ್ತದೆ."

(ಅಜ ಶಬ್ದವನ್ನು ಮೇಕೆ ಎಂಬುದಾಗಿ ಸಾಯಣರು ಅರ್ಥೈಸಿದ್ದಾರೆ. ಆದರೆ ಅಜ ಎಂದರೆ ಜನ್ಮರಹಿತವಾದುದು ಅಂದರೆ ಅಜನ್ಮ ಅಥವಾ ಆತ್ಮಜ್ಯೋತಿ ಎಂದು ಅರ್ಥ. ವಾಯುವು ನಾಭಿಯಲ್ಲಿ ಸ್ಥಾಪಿತವಾಗಿರುವ ಅಗ್ನಿಯ ಕಡೆಗೆ ಹೋಗುವಾಗ ಸೂಕ್ತ ಶಬ್ದದೊಂದಿಗೆ ಆತ್ಮಜ್ಯೋತಿಯನ್ನೂ ಸಹ ತೆಗೆದುಕೊಂಡು ಹೋಗಬೇಕು.)

ಏಷ ಛಾಗಃ ಪುರೋ ಅಶ್ವೇನ ವಾಜಿನಾ ಪೂಷ್ಣೋ ಭಾಗೋ ನೀಯತೇ ವಿಶ್ವದೇವ್ಯಃ ।
ಅಭಿಪ್ರಿಯಂ ಯತ್ಪುರೋಳಾಶಮರ್ವತಾ ತ್ವಷ್ಟೇದೇನಂ ಸೌಶ್ರವಸಾಯ ಜಿನ್ವತಿ ।। (ಋಗ್ವೇದ ೧-೧೬೨-೩ ಸಾಭಾ)
"ಎಲ್ಲಾ ದೇವತೆಗಳಿಗೂ ಅರ್ಪಿಸಲು ಯೋಗ್ಯವಾದುದೂ, ಪೋಷಕನಾದ ಅಗ್ನಿಯ ಭಾಗಕ್ಕೆ ಸೇರತಕ್ಕದ್ದೂ ಆದ ಈ ಅಜವು ವೇಗಗಾಮಿಯಾದ ವಾಯುವಿನೊಂದಿಗೆ ಮುಂಭಾಗದಲ್ಲಿ ಒಯ್ಯಲ್ಪಡುತ್ತದೆ. ಆದುದರಿಂದಲೇ, ಪ್ರಿಯವನ್ನುಂಟುಮಾಡುವುದು, ಪ್ರಥಮದಲ್ಲಿ ಅರ್ಪಿತವಾಗತಕ್ಕದ್ದೂ ಆದ ಈ ಅಜವನ್ನು ತ್ವಷ್ಟೃವು ವಾಯುವಿನೊಂದಿಗೆ(ಅಶ್ವ) ಸೇರಿ ಪ್ರೀತಿದಾಯಕವಾಗಿಯೂ ಇರುವಂತೆ ಮಾಡುತ್ತಾನೆ."

ನ ವಾ ಉ ಏತನ್ಮ್ರಿಯಸೇ ನ ರಿಷ್ಯಸಿ ದೇವಾನ್ ಇದೇಷಿ ಪಥಿಭಿಃ ಸುಗೇಭಿಃ ।
ಹರೀ ತೇ ಯಂಜಾ ಪೃಷತೀ ಅಭೂತಾಮುಪಾಸ್ಥಾದ್ವಾಜೀ ಧುರಿ ರಾಸಭಸ್ಯ ।। (ಋಗ್ವೇದ ೧೦-೧೬೨-೨೧ ಸಾಭಾ)
"ಎಲೈ ಅಶ್ವವೇ (ವಾಯುವೇ), ಈ ಯಜ್ಞಕಾಲದಲ್ಲಿ ಇತರ ಅಶ್ವಗಳು ಮೃತಿಯನ್ನು ಹೊಂದುವ ರೀತಿಯಲ್ಲಿ ನೀಚವಾದ ಮೃತಿಯನ್ನು ನೀನು ಹೊಂದುವುದೇ ಇಲ್ಲವು. ಮತ್ತು ಛೇದನದಿಂದ ನಿನಗೆ ಯಾವ ಹಿಂಸೆಯೂ ಆಗುವುದೇ ಇಲ್ಲವು. ಸುಖವಾಗಿ ಸಂಚರಿಸಲು ಯೋಗ್ಯವಾದ ದೇವಯಾನಮಾರ್ಗದಿಂದ ನೀನು ದೇವತೆಗಳನ್ನೇ ಸೇರುತ್ತಿಯೆ. ನಿನ್ನನ್ನು ಕರೆದುಕೊಂಡುಹೋಗಲು ಹರಿ ಎಂಬ ಹೆಸರುಗಳುಳ್ಳ ಇಂದ್ರನ ಕುದುರೆಗಳು ರಥಕ್ಕೆ ಸೇರಿಸಿಕಟ್ಟಲ್ಪುಡುತ್ತವೆ. ಮರುತ್ತುಗಳ ವಾಹನವೂ ರಥಕ್ಕೆ ಸೇರಿಸಿ ಸಿದ್ಧವಾಗುತ್ತದೆ. ಅಶ್ವಿನೀದೇವತೆಗಳ ವಾಹನವಾದ ರಾಸಭವನ್ನು ಕಟ್ಟುವ ನೊಗದ ಪ್ರದೇಶದಲ್ಲಿ ಬೇರೊಂದು ಆಶ್ವವು ಕಟ್ಟಲ್ಪಟ್ಟು ನಿನ್ನನ್ನು ವಹಿಸಲು ಸಿದ್ಧವಾಗಿರುತ್ತದೆ."


ಸುಗವ್ಯಂ ನೋ ವಾಜೀ ಸ್ವಶ್ವ್ಯಂ ಪುಂಸಃ ಪುತ್ರಾನ್ ಉತ ವಿಶ್ವಾಪುಷಂ ರಯಿಂ
ಅನಾಗಾಸ್ತ್ವಂ ನೋ ಅದಿತಿಃ ಕೃಣೋತು ಕ್ಷತ್ರಂ ನೋ ಅಶ್ವೋ ವನತಾಂ ಹವಿಷ್ಮಾನ್।।(ಋಗ್ವೇದ ೧-೧೬೨-೨೨ ಕಶ್ಯಪ್)
"ಬಲಶಾಲಿಯಾದ ವಾಯುವು (ಅಶ್ವವು) ನಮಗೆ ಶುಭಕರವಾದ ಜ್ಞಾನವನ್ನು ಉತ್ತಮವಾದ ಶಕ್ತಿಯನ್ನೂ, ಉತ್ತರಾಧಿಕಾರಿಗಳನ್ನೂ ಮತ್ತು ವಿಶ್ವಪೋಷಕವಾದ (ಆಧ್ಯಾತ್ಮಿಕ) ಜ್ಞಾನವನ್ನೂ ಅನುಗ್ರಹಿಸಲಿ. ಹವಿಸ್ಸಿನ ರೂಪದಲ್ಲಿ ಅರ್ಪಿತವಾದ ಈ ಅಶ್ವವು (ವಾಯು) ನಮಗೆ ಬಲವನ್ನು ಒದಗಿಸಿಕೊಡಲಿ."

ನನ್ನ ಸಾಧನೆಯಲ್ಲಿ ಇನ್ನೂ ಅನೇಕ ಅನುಭವಗಳಾಗಿವೆ ಉದಾಹರಣೆಗೆ ಅಗ್ನಿ-ವಾಯುಗಳ ಜಾಗೃತಿ, ಸೂರ್ಯ-ಸವಿತೃ, ನಾಭಿಯಲ್ಲಿರುವ ಸೂರ್ಯ-ಯಮ ಮಂಡಲ, ಸೋಮರಸ, ಅಗ್ನಿಹೋತ್ರ ಮಾಡುವ ವಿಧಾನ ಇತ್ಯಾದಿ. ಇದುವರೆಗೂ ಹೇಳಿದ ಎಲ್ಲಾ ದರ್ಶನಗಳು ಸಾಧ್ಯವಾಗಿರುವುದು ಇಂದ್ರನ ಅನುಗ್ರಹ ಮತ್ತು ದರ್ಶನದಿಂದ ಜಾಗೃತವಾದ ನನ್ನ ಅಂತಃಪ್ರಜ್ಞೆಯಿಂದಾಗಿದೆ. ಯಹೂದಿಗಳ ಗ್ರಂಥವಾದ ಹೀಬ್ರೂ ೧೧-೩ ಹೇಳುವುದೇನೆಂದರೆ "ಭಗವಂತನ ಅಕ್ಷರಗಳಿಂದ" ವಿಶ್ವವು ಸೃಷ್ಟಿಸಲ್ಪಟ್ಟಿತು.

ಕುಂಡಲಿನಿ ಮಾತೆಯರ ಚಕ್ರಗಳು ಸಂಸ್ಕೃತ ಬೀಜಾಕ್ಷರಗಳಿಂದ ಸೃಷ್ಟಿಸಲ್ಪಟ್ಟವು.
ಹಾಗಾದರೆ ಸಪ್ತಸ್ವರ್ಗಗಳು ಯಾವ ಅಕ್ಷರಗಳಿಂದ ಸೃಷ್ಟಿಸಲ್ಪಟ್ಟಿತು?
ಸಪ್ತಸ್ವರ್ಗಗಳು ಭೂಃ, ಭುವಃ, ಸ್ವಃ, ಮಹಃ, ಜನಃ, ತಪಃ ಮತ್ತು ಸತ್ಯಂ ಎಂಬ ಅಕ್ಷರಗಳಿಂದ (ವ್ಯಾಹೃತಿಗಳಿಂದ) ಸೃಷ್ಟಿಸಲ್ಪಟ್ಟಿತು. ಹಾಗೆಯೆ ಗಾಯತ್ರೀ ಮಂತ್ರದಲ್ಲಿ ಭೂರ್ಭುವಸ್ವಃ ಮಂತ್ರದಲ್ಲಿ ಭೂ ಅಂದರೆ ಪೃಥ್ವಿ, ಭುವಃ ಎಂದರೆ ದ್ಯುಲೋಕ ಮತ್ತು ಸ್ವಃ ಎಂದರೆ ಅಂತರಿಕ್ಷಲೋಕ.
ದ್ಯಾವಾಪೃಥಿವಿಯ ವ್ಯವಸ್ಥೆಯು ವಿರಾಟ್ ಪುರುಷನಲ್ಲಿದೆ, ನಮ್ಮ ಪಿಂಡಾಡದಲ್ಲಿದೆ ಹಾಗೂ ನಮ್ಮ ಸೂರ್ಯ-ಪೃಥಿವಿಯ ನಡುವೆ ಇದೆ. ಸೂರ್ಯೋದಯದ ಕಾಲದಲ್ಲಿ ಸೂರ್ಯ-ಪೃಥಿವಿಯರ ನಡುವೆ ಸತ್ಯಲೋಕವಿದೆ.

# ಓಂ
# ಭಾಗ ೨

## ಅಧ್ಯಾಯ – ೧೦ ಆದಿ ಯುಗದ ಸ್ರ್ಷ್ಟಿ




ಸಕಲ ಮಾನವರು ಅಸುರರಿಂದ ಆವೃತರಾಗಿದ್ದಾರೆ.
ಅಸುರರೇ ನಮ್ಮ ಮನಸ್ಸನ್ನು ನಿಯಂತ್ರಿಸುತ್ತಿದಾರೆ.
ಆದ್ದರಿಂದ ನಮಗೆ ಋಗ್ವೇದ ದೇವತೆಗಳ ದರ್ಶನ ಸಾಧ್ಯವಿಲ್ಲ.

ಬ್ರಹ್ಮಾಂಡದ ರಹಸ್ಯವೇನು? ಈ ವಿಶ್ವದಲ್ಲಿರುವ ಕೋಟ್ಯಾಂತರ ನಕ್ಷತ್ರಪುಂಜಗಳು, ಗ್ರಹಉಪಗ್ರಹಗಳು ಯಾವ ರೀತಿ ಸೃಷ್ಟಿಯಾಯಿತು? ಪೃಥ್ವಿಯ ಮೇಲಾಗಿರುವ ಜೀವರಾಶಿಗಳ ಸೃಷ್ಟಿಗೆ ಕಾರಣ ಯಾರು? ವಿಜ್ಞಾನವು ಹೇಳುವ "ಬಿಗ್ ಬ್ಯಾಂಗ್" ಸೃಷ್ಟಿ ಸಿದ್ಧಾಂತಕ್ಕೂ ಋಗ್ವೇದವು ಹೇಳುವ ಸೃಷ್ಟಿಕ್ರಿಯೆಗೂ ಇರುವ ವ್ಯತ್ಯಾಸವೇನು? ಶೈವಧರ್ಮಕ್ಕೂ ಮತ್ತು ಋಗ್ವೇದಕ್ಕೂ ಏನಾದರೂ ಸಂಬಂಧವಿದೆಯೆ? ತಂತ್ರಶಾಸ್ತ್ರವು ಹೇಳುವ ಕುಂಡಲಿನಿಶಕ್ತಿಗೂ ಮತ್ತು ಋಗ್ವೇದಕ್ಕೂ ಏನಾದರೂ ಸಂಬಂಧವಿದೆಯೆ? ಅದಿತಿ ಮತ್ತು ದಿತಿಯು ಯಾರು? ದೇವತೆಗಳ ಜನನ ರಹಸ್ಯವೇನು? ವಿರಾಟ್‌ಪುರುಷನ ಮಹಿಮೆಯೇನು? ಬ್ರಹ್ಮ, ವಿಷ್ಣು, ಮಹೇಶ್ವರರು ಸೃಷ್ಟಿ, ಸ್ಥಿತಿ, ಲಯಕರ್ತರೇ? ಈ ವಿಶ್ವವನ್ನು ಆಳುತ್ತಿರುವ ಭಗವಂತನು ಯಾರು? ಸೃಷ್ಟಿಯಲ್ಲಿ ದೇವತೆಗಳ ಪಾತ್ರವೇನು? ಋಗ್ವೇದ ೧೦:೧೨೯ ರ ಮಂತ್ರವು ರೀತಿ ಹೇಳುತ್ತವೆ.

ಋವೇದ ಮಂಡಲ ೧೦ ಸೂಕ್ತ ೧೨೯ ಅನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಲು ಇತರ ಭಾಷೆಗಳಲ್ಲಿ ಬಂದಿರುವ ದೇವವಾಣಿಗಳಾದ ಪಿರಮಿಡ್ ಟೆಕ್ಸ್ಟ್, ತ್ಹೊರಾ ಮತ್ತು ಕುರಾನ್‌ಗಳನ್ನು ಓದಬೇಕಾಗುತ್ತದೆ.

ನಾಸದಾಸೀನ್ನೋ ಸದಾಸೀತ್ತದಾನೀಂ ನಾಸೀದ್ರಜೋ ನೋ ವ್ಯೋಮಾ ಪರೋ ಯತ್೧

ಕಿಮಾವರೀವಃ ಕುಹ ಕಸ್ಯ ಶರ್ಮನ್ನಂಭಃ ಕಿಮಾಸೀದ್ಗಹನಂ ಗಭೀರಂ ೧೧ (ಋಗ್ವೇದ ೧೦—೯–೧ ಸಾಭಾ)

ಸೃಷ್ಟಿಗೆ ಪೂರ್ವದಲ್ಲಿ ಜಗದಾದಿಗಳಿಗೆ ಕಾರಣಭೂತವಾದುದೂ, ಅವ್ಯಕ್ತ ಸ್ವರೂಪದಿಂದಿರುವುದೂ ಇಂದ್ರಿಯಜನ್ಯಜ್ಞಾನಗಳಿಗೆ ಅಗೋಚರವೂ, ನಾಮರೂಪಾದಿಗಳಿಂದ ನಿರ್ದೇಶಿಸಲಸಾಧ್ಯವಾದುದೂ, ಆದ ಅಸತ್ತಾಗಲಿ, ಇಂದ್ರಿಯಗಮ್ಯವಾದುದೂ, ವ್ಯಕ್ತಸ್ವರೂಪವುಳ್ಳದ್ದೂ, ಜಗದಾದಿಗಳಿಗೆ ಮೂಲಭೂತವಾದುದೂ ಆದ ಸತ್ ಎಂಬುದಾಗಲಿ ಇರಲಿಲ್ಲ. ಲೋಕಗಳೂ ಇರಲಿಲ್ಲ, ಅಂತರಿಕ್ಷವೂ ಇರಲಿಲ್ಲ. ಅಂತರಿಕ್ಷದಿಂದ ಆಚೆಗಿರುವ

ಸ್ವರ್ಗಾದಿಗಳೂ ಇರಲಿಲ್ಲ. ಹಾಗಾದರೆ ಇವೆಲ್ಲವನ್ನು ಆವರಿಸಿದ್ದ ಯಾವುದಾದರೂ ವಸ್ತುವಿದ್ದಿತೇ? ಭೋಕ್ತೃವಿನ (ಜೀವರಾಶಿಗಳಿಗೆ ಅಥವಾ ಪ್ರಾಣಿಗಳಿಗೆ) ಸುಖಸಾಧನಸಾಮಾಗ್ರಿಗಳು ಎಲ್ಲಿದ್ದವು? ಅಥವಾ ಪ್ರವೇಶಿಸಲಸಾಧ್ಯವಾದುದೂ ಆದ ಉದಕವಿದ್ದಿತೇ?

(ಸೃಷ್ಟಿಗೆ ಪೂರ್ವದಲ್ಲಿ ಕೇವಲ ಅಂಧಕಾರವಿತ್ತು ಮತ್ತು ಅದರ ಮಧ್ಯದೊಳಗೆ ಆದಿಅಂತ್ಯವಿಲ್ಲದ ಉದಕವಿತ್ತು. ಈ ಉದಕವನ್ನೇ ಸಲಿಲ ಅಥವಾ ಅನಾದಿಯಾದ ಮಹಾಸಮುದ್ರವೆಂದು ಕರೆಯಲ್ಪಡುತ್ತದೆ. ಈ ಸಲಿಲವೇ ಗೆಲಾಕ್ಸಿ ಮತ್ತು ಸೂರ್ಯರಾಗಿ ಪರಿವರ್ತನೆ ಹೊಂದುತ್ತದೆ ಮತ್ತೆ ಲಯವಾದಾಗ ಸಲಿಲವಾಗಿ ಮಾರ್ಪಡುತ್ತದೆ.)

ನ ಮೃತ್ಯುರಾಸೀದಮೃತಂ ನ ತರ್ಹಿ ನ ರಾತ್ರ್ಯಾಅಹ್ನ ಆಸೀತ್ಪ್ರಕೇತಃ ।
ಆನೀದವಾತಂ ಸ್ವಧಯಾ ತದೇಕಂ ತಸ್ಮಾದ್ಧಾನ್ಯನ್ನ ಪರಂ ಕಿಂ ಚನಾಸ ।। (ಋಗ್ವೇದ ೧೦-೧೨೯-೨ ಸಾಭಾ)
"ಸೃಷ್ಟಿಗೆ ಪೂರ್ವದಲ್ಲಿದ್ದ ಲಯಾವಸ್ಥೆಯಲ್ಲಿ ಮರಣವೂ, ಮರಣವಿಲ್ಲದಿರುವಿಕೆಯೂ ಇರಲಿಲ್ಲ. ರಾತ್ರಿ ಯಾವುದು ಹಗಲು ಯಾವುದು ಎಂಬ ಪರಿಜ್ಞಾನವಿರಲಿಲ್ಲ. **ಒಂದು ತತ್ವ ಮಾತ್ರವಿದ್ದು, ಶ್ವಾಸೋಚ್ಛ್ವಾಸರಹಿತವಾದ (*ಉಸಿರು*)** ಜೀವವಿಲ್ಲದ ಜಡವಸ್ತುವನ್ನು (ಸಲಿಲವನ್ನು) ತನ್ನ ಸಾಮರ್ಥ್ಯಾತಿಶಯದಿಂದ ಸಚೇತನವನ್ನಾಗಿ ಮಾಡಿತು. ಅದರ ಹೊರತು (ಉಸಿರು) ಬೇರೆ ಯಾವ ವಸ್ತುವೂ ಇರಲಿಲ್ಲ. ಆನಂತರ ಈ ಸೃಷ್ಟವಾದ ಈ ಜಗತ್ತು ಆಗ ಇರಲಿಲ್ಲ."
(ಋಗ್ವೇದ ೧೦-೧೨೯-೨ ಸಾ ಭಾ)

(ಅನಾದಿಯಾದ ಮಹಾಸಮುದ್ರದ ಹೊರಮೇಲ್ಮೆಯಲ್ಲಿ ಉಸಿರು/ವಾಯು/ಪ್ರಾಣ/ಶಕ್ತಿ ನೆಲೆಸಿತ್ತು. ಈ ವಾಯುವಿಗೆ ತಾನಾಗೆ ಯಾವ ಸೃಷ್ಟಿಕಾರ್ಯವನ್ನು ಮಾಡುವ ಸಾಮರ್ಥ್ಯವಿಲ್ಲ.)

ತಮ ಆಸೀತ್ತಮಸಾ ಗೂಳ್ಹಮಗ್ರೇಅಪ್ರಕೇತಂ ಸಲಿಲಂ ಸರ್ವಮಾ ಇದಂ ।
ತುಚ್ಛ್ಯೇನಾಭ್ವಪಿಹಿತಂ ಯದಾಸೀತ್ತಪಸಸ್ತನ್ಮಹಿನಾಜಾಯತೈಕಂ ।। (ಋಗ್ವೇದ ೧೦-೧೨೯-೩ ಸಾಭಾ)
"ಎಲ್ಲಕ್ಕಿಂತಲೂ ಮೊದಲು ಎಂದರೆ ಸೃಷ್ಟಿಯ ಆರಂಭದೆಶೆಯಲ್ಲಿ ಏನೊಂದನ್ನೂ ತಿಳಿಯಲು ಸಾಧ್ಯವಾಗದ ಅಂಧಕಾರದಿಂದ ದಟ್ಟವಾಗಿ ಕವಿದಿರುವ ಕತ್ತಲೆಯು ಎಲ್ಲೆಲ್ಲಿಯೂ ವ್ಯಾಪಿಸಿದ್ದಿತು. ಈಗ ಕಾಣುವ ಸಮಸ್ತ ಜಗತ್ತೂ ಈಗಿರುವಂತೆ ಇರದೆ ಎಲ್ಲವೂ ಉದಕಮಯವಾಗಿದ್ದಿತು. ಯಾವ ಆಧಾರವೂ ಆವರಣವೂ ಇಲ್ಲದೇ ಮತ್ತು ಕಾರ್ಯಕಾರಣಗಳೆಂಬ ಪ್ರತ್ಯೇಕವಿಭಾಗಗಳಿಲ್ಲದೆ ಒಂದೇ ಆಗಿದ್ದ **ಅವ್ಯಕ್ತ ಸ್ವರೂಪವು** ತನ್ನ ಸೃಷ್ಟಿಮಾಡಬೇಕೆಂಬ ಮಹಿಮೆಯಿಂದ ಕಾರ್ಯರೂಪವಾದ ಜಗತ್ತಾಗಿ ಪರಿಣಮಿಸಿತು." (೧೦-೧೨೯-೩ ಸಾ ಭಾ)

ಈ ಅವ್ಯಕ್ತ ಸ್ವರೂಪವೇ ವಿಶ್ವಮನಸ್ಸು ಆಗಿದೆ. ಈ ವಿಶ್ವ ಮನಸ್ಸೇ ಸಕಲ ಸೃಷ್ಟಿಗೆ ಮೂಲಕಾರಣ.

ಕಾಮಸ್ತದಗ್ರೇ ಸಮವರ್ತತಾಧಿ ಮನಸೋ ರೇತಃ ಪ್ರಥಮಂ ಯದಾಸೀತ್ ।
ಸತೋ ಬಂಧುಮಸತಿ ನಿರವಿಂಧನ್ಹೃದಿ ಪ್ರತೀಷ್ಯಾ ಕವಯೋ ಮನೀಷಾ ।। (ಋಗ್ವೇದ ೧೦-೧೨೯-೪ ಸಾಭಾ)
"ಮನಸ್ಸಿನ ಪಪ್ರಂಚಸೃಷ್ಟಿಗೆ ಬೀಜಭೂತವಾದ ಹಿಂದಿನ ಕಲ್ಪದಲ್ಲಿ ಪ್ರಾಣಿಗಳಿಂದ ಆಚರಿಸಲ್ಪಟ್ಟ ಕರ್ಮವು ಈಗಿನ ಜಗತ್‌ಸೃಷ್ಟಿಗೆ ಪೂರ್ವದಲ್ಲಿ ಜಗತ್‌ಸೃಷ್ಟಿ ಮಾಡಬೇಕೆಂಬ ಇಚ್ಛೆಯು (ವಿಶ್ವಮನಸ್ಸಿಗೆ) ಉಂಟಾಯಿತು. ಸಮಸ್ತ ಜಗತ್ತುಗಳಿಗೂ ಬಂಧಕವಾದ ಪ್ರಾಣಿಗಳ ಕರ್ಮಸಮೂಹವು (ಅಂದರೆ ಸೃಷ್ಟಿಯ ಮೂಲಬೀಜವಾದ ಕಾಮದ ಮೂಲವು) ಅವ್ಯಕ್ತಸ್ವರೂಪದಲ್ಲಿ ಬೀಜಭೂತವಾಗಿ ನೆಲೆಸಿರುವುದೆಂಬ ವಿಷಯವನ್ನು ಋಷಿಗಳು ತಮ್ಮ ಮನಸ್ಸಿನ ಬುದ್ಧಿಯಿಂದ ವಿಚಾರ ಮಾಡಿ ತಿಳಿದುಕೊಂಡರು." (೧೦-೧೨೯-೪ ಸಾ ಭಾ)

ತಿರಶ್ಚೀನೋ ವಿತತೋ ರಶ್ಮಿರೇಷಾಮಧಃ ಸ್ವಿದಾಸೀ ದುಪರಿ ಸ್ವಿದಾಸೀತ್ ।
ರೇತೋಧಾ ಆಸನ್ಮಹಿಮಾನ ಆಸನ್ತ್ಸ್ವಧಾ ಅವಸ್ತಾತ್ಪ್ರಯತಿಃ ಪರಸ್ತಾತ್ ।। (ಋಗ್ವೇದ ೧೦-೧೨೯-೫ ಸಾಭಾ)
"ಈ ಸೃಷ್ಟಿಕಾರ್ಯಗಳ ನಿರ್ವಹಣಕ್ಕಾಗಿ (ವಿಶ್ವಮನಸ್ಸು) ಕಾರ್ಯೋನ್ಮುಖವಾದಾಗ ಆ ಕಾರ್ಯಾರಂಭವು ರಶ್ಮಿಯಂತೆ ಮಿಂಚಿನವೇಗದಲ್ಲಿ ಅಡ್ಡಲಾಗಿಯೂ, ಕೆಳಕ್ಕೂ, ಮೇಲಕ್ಕೂ ಎಲ್ಲೆಲ್ಲಿಯೂ (ಸರ್ವತ್ರ) ವಿಸ್ತಾರವಾಗಿ ವ್ಯಾಪಿಸಿತು. ಈ ರೀತಿ ಸೃಷ್ಟಿಯಾದ ವಸ್ತುಗಳಲ್ಲಿ ಮುಖ್ಯವಾದ ಎರಡು ವಿಭಾಗಗಳಾದುವು. ವಿಯದಾದಿಪಂಚಭೂತಗಳೂ ಜಗದಾದಿಗಳೂ ಅವುಗಳಲ್ಲಿರುವ ನಾನಾವಸ್ತುಗಳೂ (ಸೂರ್ಯಗ್ರಹನಕ್ಷತ್ರಾದಿಗಳು) ಒಂದು ವಿಭಾಗ; ಈ ವಸ್ತುಗಳನ್ನು ಉಪಭೋಗಿಸುವ ಭೋಕ್ತವಾದ ಎಂದರೆ ಜೀವವಿರುವ ಮತ್ತು ಸುಖದುಃಖಾದಿಗಳನ್ನು ಅನುಭವಿಸಬಲ್ಲ ಪ್ರಾಣಿ ಮೊದಲಾದವುಗಳ ಇನ್ನೊಂದು ವಿಭಾಗ. ಈ ಎರಡು ವಿಭಾಗಗಳಲ್ಲಿ ಭೋಕ್ತೃವಾದ, ಚೈತನ್ಯಯುಕ್ತವಾದ ಪ್ರಾಣಿವರ್ಗವೇ ಶ್ರೇಷ್ಠವು."

(ಸೃಷ್ಟಿಕಾರ್ಯಗಳ ನಿರ್ವಹಣಕ್ಕಾಗಿ (ವಿಶ್ವಮನಸ್ಸು) ಕಾರ್ಯೋನ್ಮುಖವಾದಾಗ ಮೂರು ಕುಂಡಲಿನಿ ಮಾತೆಯರು ಮೊದಲು ವಾಯುವಿನಲ್ಲಿ ಚಕ್ರಗಳನ್ನು ಸೃಷ್ಟಿಸುತ್ತಾ ಉದಕಗಳನ್ನು ಪ್ರವೇಶಿಸಿ, ತಮ್ಮ ತಮ್ಮ ಸ್ಥಾನದಲ್ಲಿ ನಾಡಿಕಾಂಡಗಳನ್ನು ರಚಿಸಿಕೊಂಡು ಅಲ್ಲಿಂದ ೩ ಥ ೭೨,೦೦೦ ನಾಡಿಗಳು ರಶ್ಮಿಯಂತೆ ಮಿಂಚಿನವೇಗದಲ್ಲಿ

ಅಡ್ಡಲಾಗಿಯೂ, ಕೆಳಕ್ಕೂ, ಮೇಲಕ್ಕೂ ಎಲ್ಲೆಲ್ಲಿಯೂ (ಸರ್ವತ್ರ) ಅನಾದಿಯಾದ ಮಹಾಸಮುದ್ರದ ತುಂಬೆಲ್ಲಾ ವಿಸ್ತಾರವಾಗಿ ವ್ಯಾಪಿಸಿತು. ಇದು ಆದಿಯುಗದ ಸೃಷ್ಟಿ.)

ಸಕಲವನ್ನೂ ಆವರಿಸಿರುವ ಗಾಡಾಂಧಕಾರ ತತ್ವವನ್ನೇ ವೈದಿಕರು ಪರಬ್ರಹ್ಮವೆಂದೂ ಮತ್ತು ಶೈವರು ಶಿವ ಅಥವಾ ಮಂಗಳಸ್ವರೂಪನೆಂದೂ ಕರೆಯುತ್ತಾರೆ. ಆದ್ದರಿಂದ ಶಿವನ ಸ್ವರೂಪವು ಗಾಡಾಂಧಕಾರವಾಗಿದೆ. ಈ ಗಾಡಾಂಧಕಾರವು ಯಾವ ಪರಿವರ್ತನೆಯೂ ಆಗದೆ ನಿತ್ಯ ನಿರಂತರವಾಗಿದೆ. ಅದು ಏನು? ಅದರ ಗುಣಲಕ್ಷಣಗಳೇನು? ಶಿವನು ಸಕಲಕ್ಕೂ ಪ್ರೇರಕನೇ? ಸೃಷ್ಟಿಕ್ರಿಯಾದಿಗಳಲ್ಲಿ ಭಾಗವಹಿಸುತ್ತಾನೆಯೇ? ಎಂಬ ವಿಶ್ಲೇಷಣೆ ಅಥವಾ ಅನ್ವೇಷಣೆ ಮಾಡಲು ಸಾಧ್ಯವಿಲ್ಲ.

ಆದರೆ **ಅಂಧಕಾರದಿಂದ ಅವ್ಯಕ್ತ ಸ್ವರೂಪವು ಹೊರಹೊಮ್ಮಿತು. ಅದಕ್ಕೆ ಯಾವುದೇ ರೂಪವಿರಲಿಲ್ಲ**. ಆಗಾದರೆ ಆ ಅವ್ಯಕ್ತ ಸ್ವರೂಪವು ಯಾವುದು? ಅದು ಸೃಷ್ಟಿ ಮಾಡಬೇಕೆಂಬ ಇಚ್ಛೆಯಿಂದ ಕೂಡಿತ್ತು. ಯಾವ ಅವ್ಯಕ್ತ ಸ್ವರೂಪವು ಗಾಡಾಂಧಕಾರದಿಂದ ಮೇಲೆದ್ದಿತೋ ಅದೇ ವಿಶ್ವಮನಸ್ಸಾಗಿದೆ. ಅದು ಶಾಖದಿಂದ ಕೂಡಿತ್ತು. ಸೃಷ್ಟಿಯ ಮೂಲಬೀಜವಾದ ಕಾಮವು ಅವ್ಯಕ್ತಸ್ವರೂಪದಲ್ಲಿ ಬೀಜಭೂತವಾಗಿ ನೆಲೆಸಿರುವುದು. ಸೃಷ್ಟಿಮಾಡಬೇಕೆಂಬ ಕಾಮವು ಮತ್ತು ಇಚ್ಛೆಯು ಅವ್ಯಕ್ತ ಸ್ವರೂಪದಲ್ಲಿ ನೆಲೆಸಿದೆಯೆಂದರೆ ಅದು ನಿಶ್ಚಯವಾಗಿ ವಿಶ್ವಮನಸ್ಸಾಗಿರಲೇಬೇಕು. ಏಕೆಂದರೆ ಸಕಲ ಕಾಮನೆಗಳ ಮೂಲ ಮನಸ್ಸಾಗಿದೆ.

ಅಷ್ಟೇ ಅಲ್ಲ ಸಕಲ ಪ್ರಾಣಿಗಳ ಮನಸ್ಸಿನ ಕರ್ಮವು ಅದರಲ್ಲಿ ಬೀಜರೂಪದಲ್ಲಿದ್ದಿತು. ಅಂದರೆ ನಾವೂ ಸಹ ಅನಾದಿಸ್ವರೂಪರು. ಅವ್ಯಕ ಸ್ವರೂಪವು ಅಗಾಧವಾದ ಇಚ್ಛಾಶಕ್ತಿ, ಜ್ಞಾನಶಕ್ತಿ ಮತ್ತು ಕ್ರಿಯಾಶಕ್ತಿಯನ್ನು ಹೊಂದಿರುವ ವಿಶ್ವಮನಸ್ಸಾಗಿದ್ದಾಳೆ. ಇದರ ಅರ್ಥ ಮನಸ್ಸು ಜಡವಲ್ಲ. ಅದಕ್ಕೆ ಸ್ವರೂಪವಿಲ್ಲ. ಅದು ಅನಾದಿಯಾಗಿದೆ ಮತ್ತು ಇಡೀ ಸೃಷ್ಟಿ, ಸ್ಥಿತಿ ಲಯಗಳು ಮನಸ್ಸಿನಿಂದಲೇ ಅಗುತ್ತಿದೆ ಮತ್ತು ಪ್ರಳಯದಲ್ಲಿ ಪರಬ್ರಹ್ಮನಲ್ಲಿ ಲಯವಾಗುತ್ತದೆ. ಗಾಡಾಂಧಕಾರ ರೂಪನಾದ ಶಿವನು ವಿಶ್ವಮನಸ್ಸಿಗೆ ವಿಶ್ರಾಂತಿ ಸ್ಥಾನವಾಗಿದ್ದಾನೆ. ವಿಶ್ವಮನಸ್ಸು ತನ್ನ ಸೃಷ್ಟಿಯನ್ನು ಹಿಂತೆಗೆದುಕೊಂಡಾಗ ಶಿವನಲ್ಲಿ ಲಯವಾಗುತ್ತಾಳೆ. ವಿಶ್ವಮನಸ್ಸು ಶಿವನಲ್ಲಿ ಲಯವಾದರೂ ಅದು ಶಿವನ ಅಂಶವಲ್ಲ.

ವಿಶ್ವಮನಸ್ಸು ಎರಡು ಧೃವಗಳನ್ನು ಹೊಂದಿದೆ; ಒಂದು ಬೆಳಕು ಮತ್ತು ಜ್ಞಾನದಿಂದ ಕೂಡಿರುವ ಮನಸ್ಸು ಮತ್ತಿನ್ನೊಂದು ಅದರ ವಿರುದ್ಧ ಧೃವವಾದ ಅಂಧಕಾರ ಹಾಗು ಅಜ್ಞಾನದಿಂದ ಕೂಡಿರುವ ಮನಸ್ಸು ಇರುವುದು. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಎರಡೂ ಧೃವಗಳು ಪರಿಪೂರ್ಣವಾದ ಜ್ಞಾನವನ್ನು ಹೊಂದಿವೆ. ಏಕೆಂದರೆ ಒಂದು ಧೃವಕ್ಕೆ ಗೊತ್ತಾದ ಜ್ಞಾನವು ಇನ್ನೊಂದು ಧೃವಕ್ಕೂ ಗೊತ್ತಾಗುತ್ತದೆ. ಮನಸ್ಸು ವಿರುದ್ಧ ಧೃವಗಳಂದ ಕೂಡಿರುವುದರಿಂದ ಒಂದು ಧೃವವು ಇನ್ನೊಂದನ್ನು ಧೃವವನ್ನು ವಿರೋಧಿಸುತ್ತದೆ.

ಈಗ ಸೃಷ್ಟಿಯು ಹೇಗಾಯಿತೆಂದು ನೋಡೋಣ. ಅವ್ಯಕ್ತಸ್ವರೂಪವಾದ ವಿಶ್ವಮನಸ್ಸು ಎರಡು ಧೃವಗಳನ್ನು ಹೊಂದಿದೆ. **ವಿಶ್ವಮನಸ್ಸಿನ ಶಾಖದಿಂದ ಕೂಡಿದ ಧೃವವು ಮೊದಲು ಅ–ಕ–ಥ ತ್ರಿಕೋನವನ್ನು ರಚಿಸಿ ಅದರ ಮಧ್ಯದಲ್ಲಿ ಅಂದಕಾರದಿಂದ ಕೂಡಿದ ಪರಬ್ರಹ್ಮ ತತ್ವವನ್ನು ಬಂದಿಸುತ್ತದೆ.** ತ್ರಿಕೋಣದ ಮೂರು ಬಿಂದುವಿನಲ್ಲಿ ವಾಮ, ಜ್ಯೇಷ್ಠ ಮತ್ತು ರೌದ್ರಿ ಎಂಬ ಮೂರು ಮಾತೆಯರಿರುವರು. ಈ ಮೂರು ಮಾತೆಯರು ವಾಯುವನ್ನು ಉದ್ದವಾಗಿ ಪ್ರವೇಶಿಸಿದಾಗ ಪ್ರಾಣವು ಅದನ್ನು ಆವರಿಸಿ ಅದು ಪ್ರಾಣಶರೀರವನ್ನು ಪಡೆಯುತ್ತದೆ. ಆಗ ಅದು ನೋಡಲು ಮಿಂಚಿನ ಬಣ್ಣದ ಸರ್ಪದಂತೆ ಕಾಣುತ್ತದೆ. ವಿಶ್ವಮನಸ್ಸಿನ ಒಂದು ಧೃವವಾದ ಶಾಖದಿಂದ ಕೂಡಿದ ದೈವೀಧೃವವು ಸರ್ಪರೂಪವನ್ನು ತಾಳಿ ವಾಯುವಿನ ಪದರದಲ್ಲಿ ಚಕ್ರಗಳನ್ನು ಸೃಷ್ಟಿಸುತ್ತದೆ. (ಚಿತ್ರವನ್ನು ನೋಡಿ)

ಈ ಸರ್ಪವನ್ನು ಕುಂಡಲಿನೀಶಕ್ತಿ ಅಥವಾ ಕುಂಡಲಿನೀ ಸರ್ಪವೆಂದು ಕರೆಯುತ್ತಾರೆ. ಈ ಸರ್ಪರೂಪವು ವಾಯುವಿನಿಂದ ಉಂಟಾದ ಹೊರ ಆವರಣವಾಗಿದೆ. **ಸರ್ಪರೂಪದ ಹೊರಕವಚವು ವಿಶ್ವಮನಸ್ಸಲ್ಲ, ಕೇವಲ ದೈವೀಮನಸ್ಸಿನ ಧೃವದ ಹೊರ ಆವರಣ**. ವಿಶ್ವಮನಸ್ಸಿನಿಂದ ಹೊರಹೊಮ್ಮಿದ ವಾಕ್ಕು, ವಾಯುವಿನ (ಪ್ರಾಣ) ಮಹಿಮೆಯಿಂದ ಬೆಳಕು ಮತ್ತು ಚೈತನ್ಯವನ್ನು ಪಡೆಯುತ್ತದೆ. ವಾಯುವೂ ಸಹ ಅವ್ಯಕ್ತ ಸ್ವರೂಪದಂತೆ ಇದ್ದು ಅದನ್ನು ನಾವು ನೋಡಲಾಗದಿದ್ದರೂ ಅದರಲ್ಲಿ ಪರಾವಾಣಿ ವಾಕ್ಕಿನಿಂದ ಉಂಟಾದ ಸ್ಪಂದನದಿಂದ ಆಕಾರ, ಕಂಪನ ಮತ್ತು ರೂಪವನ್ನು ತಾಳುತ್ತದೆ. ಈ ರೂಪವನ್ನು ಯೋಗಿಗಳು ಮಾತ್ರ ನೋಡುತ್ತಾರೆ.

ಹೀಗೆ ವಿಶ್ವಮನಸ್ಸಿನ ದೈವೀಧ್ರವದ ಪರಾವಾಕ್ಕಿನಿಂದ ಪ್ರಕಟವಾದ ವಿವಿಧ ಬೀಜಾಕ್ಷರಗಳ ಕಂಪನವು ಆಕಾರ ಮತ್ತು ಚೈತನ್ಯವನ್ನು ಪಡೆದುಕೊಂಡು ವಾಯುವಿನಲ್ಲಿ ಸ್ಪಂದನಾಲೋಕದ ಸೃಷ್ಟಿಯು ಉಂಟಾಗುತ್ತದೆ. ಇದನ್ನು ಕುಂಡಲಿನಿಯೋಗದಲ್ಲಿ ಚಕ್ರಗಳೆಂದು ಕರೆಯುತ್ತಾರೆ. ಇಲ್ಲಿ ನಾವು ಗಮನಿಸಬೇಕಾದ ಅಂಶ, ಈ ಚಕ್ರಗಳ ರಚನೆ ಮೊದಲು ಬ್ರಹ್ಮಾಂಡದ ವಾಯುವಿನಲ್ಲಿ ಉಂಟಾಯಿತು.

ಚಕ್ರಗಳು ಒಂದು ರೀತಿಯಲ್ಲಿ ವಿದ್ಯುತ್‌ಅನ್ನು ಹೆಚ್ಚು ಅಥವಾ ಕಡಿಮೆ ಮಾಡಲು ಉಪಯೋಗಿಸುವ ಟ್ರಾನ್ಸಫಾರ್ಮರ್‌ನಂತೆ. ಈ ಚಕ್ರಗಳ ಮುಖಾಂತರ ವಾಯುವಿನ ಶಕ್ತಿಯು ತೀವ್ರಗತಿಯಲ್ಲಿ ಹರಿಯತ್ತದೆ. ಈ ಮೊದಲು ವಾಯುವು ಶಾಂತ ಸ್ಥಿತಿಯಲ್ಲಿತ್ತು. ಚಕ್ರಗಳ ಸೃಷ್ಟಿಯಾದ ಕೂಡಲೆ ವಾಯುವಿನ ಶಕ್ತಿಯು ತೀವ್ರವಾಗಿ ಹರಿಯಲು ಪ್ರಾರಂಭಿಸುತ್ತದೆ. ಈ ಚಕ್ರಗಳು ವಿವಿಧ ಶಬ್ದಗಳಿಂದ ತನ್ನದೇ ಆದ ರೂಪವನ್ನು ಪಡೆಯುತ್ತದೆ.

ಈ ವಿವಿಧ ಶಬ್ದಗಳನ್ನು ಮಾತೃಕೆಯರೆಂದು, ವರ್ಣಮಾಲೆಯೆಂದು ಅಥವಾ ಬೀಜಾಕ್ಷರಗಳೆಂದು ಕರೆಯುತ್ತಾರೆ. ಬೀಜಾಕ್ಷರಗಳನ್ನು ಬಿಂದು, ಬೀಜ ಮತ್ತು ನಾದವೆಂದು ವಿಭಜಿಸಲಾಗಿದೆ. ವಿಶ್ವಮನಸ್ಸಿನ ವಾಕ್ಕೇ ಬೀಜ ಮತ್ತು ಬಿಂದುವುವಾಗಿದೆ, ಏಕೆಂದರೆ ಬಿಂದು ಸಹಿತ ಬೀಜವನ್ನು ವಿಶ್ವಮನಸ್ಸೇ ಪರಾವಾಣಿ ವಾಕ್ಕಿನಿಂದ ತನ್ನ ಮನಸ್ಸಿನಲ್ಲಿಯೇ ಉಚ್ಚರಿಸುತ್ತದೆ. ನಾದವು ವಾಯುವಿನ ಕಂಪನದಿಂದ ಉಂಟಾಗುತ್ತದೆ ಮತ್ತು ಈ ಕಂಪನವು ಆಕಾರವನ್ನು ಚೈತನ್ಯವನ್ನು ಪಡೆದುಕೊಳ್ಳುತ್ತದೆ.

ವಿಶ್ವಮನಸ್ಸಿನ ಅಸುರೀ ಧೃವವಾದ ಕಪ್ಪುಸರ್ಪವು ಚಕ್ರಗಳನ್ನು ಸೃಷ್ಟಿಸಿದೆಯೇ ನಮಗೆ ತಿಳಿಯದು. ಅದನ್ನ ತಿಳಿದುಕೊಳ್ಳುವುದು ಬಹಳ ಅಪಾಯದ ಕೆಲಸ. ಏಕೆಂದರೆ ಕಪ್ಪುಸರ್ಪವು ಅಸುರರಿಗೆ ಜನ್ಮವನ್ನು ಕೊಟ್ಟಿರುವಳು. ಆದರೂ ಕಪ್ಪು ಸರ್ಪವೂ ಸಹ ಸ್ಪಂದನದಿಂದ ಚಕ್ರಗಳನ್ನು ಸೃಷ್ಟಿಸಿರಬಹುದು. ಕಪ್ಪುಸರ್ಪವೂ ಸಹ ಕುಂಡಲಿನೀ ಸರ್ಪದಂತೆ ಅನಂತ ಜ್ಞಾನವನ್ನು ಹೊಂದಿದೆ. ಏಕೆಂದರೆ ಮನಸ್ಸಿನ ಒಂದು ಧೃವವು ಜ್ಞಾನವನ್ನು ಹೊಂದಿದರೆ ಅದರ ಇನ್ನೊಂದು ಧೃವವೂ ಸಹ ಅದೇ ಜ್ಞಾನವನ್ನು ಹೊಂದಿರುತ್ತದೆ.

## ಕುಂಡಲಿನಿಮಾತೆಯ ಮಹಿಮೆ

ಬಹಳಷ್ಟು ಜನರು ಕುಂಡಲಿನಿಮಾತೆಯ ಸಾಧನೆಯನ್ನು ಮಾಡಿದ್ದಾರೆ. **ಆದರೆ ಮೂವರು ಕುಂಡಲಿನಿಮಾತೆಯರು ಇರುವರೆಂದು ಅನೇಕರಿಗೆ ಗೊತ್ತಿಲ್ಲ**. ಬ್ರಹ್ಮಾಂಡದ ಸೃಷ್ಟಿಕ್ರಿಯೆಯಲ್ಲಿ ಕುಂಡಲಿನಿ ಮಾತೆಯು ಮೂರು ಸ್ವರೂಪವನ್ನು ಪಡೆಯುತ್ತಾಳೆ. ಬೆನ್ನುಹುರಿಯ ಹಿಂಭಾಗದಲ್ಲಿರುವ ಕುಂಡಲಿನಿಯ ಒಂದು ಸ್ವರೂಪವನ್ನು ಎಲ್ಲರೂ ತಿಳಿದುಕೊಂಡಿದ್ದಾರೆ. ಇದನ್ನು ಮಹಾಕುಂಡಲಿನಿಶಕ್ತಿ ಅಥವಾ ಅಧಃಕುಂಡಲಿನಿ ಎಂದು ಕರೆಯುತ್ತಾರೆ. ಈ ಮಹಾಕುಂಡಲಿನಿ ಶಕ್ತಿಯೇ ಶೈವ ಮತ್ತು ಶಾಕ್ತಧರ್ಮದ ಮೂಲವಾಗಿದೆ. ಈಗ ಕುಂಡಲಿನಿ ಮಾತೆಯ ಇನ್ನೆರಡು ಸ್ವರೂಪವನ್ನು ನೋಡೋಣ.

ಕುಂಡಲಿನಿಮಾತೆಯು ಪರಬ್ರಹ್ಮ ತ್ರಿಕೋನದ ಮಧ್ಯೇ ಇರಲು ಸಾಧ್ಯವಿಲ್ಲ ಏಕೆಂದರೆ ಆಕೆಯು ಕೂಡಲೆ ಲಯವಾಗುತ್ತಾಳೆ. ಏನೇ ಆದರೂ ಈ ತ್ರಿಕೋನದಿಂದ ಹೊರಬಂದ ಕುಂಡಲಿನಿ ಮಾತೆಯು ಮೂರು ರೂಪವನ್ನು ಪಡೆದು ಸೃಷಿಕ್ರಿಯೆಯನ್ನು ಮಾಡುವಳು. ಮೂರೂ ಕುಂಡಲಿನಿಮಾತೆಯರು ಏಕಕಾಲದಲ್ಲಿ ಚಕ್ರಗಳನ್ನು ಸೃಷ್ಟಿಸುತ್ತಾ ಮಹಾಸಮುದ್ರದೊಳಗೆ ಪ್ರವೇಶಿಸಿ, ತಮ್ಮ ತಮ್ಮ ಸ್ಥಾನದಲ್ಲಿ ತ್ರಿಕೋನವನ್ನು ರಚಿಸಿ ಅದರೊಳಗೆ ನಿದ್ರಿಸುತ್ತಿರುವರು. ತ್ರಿಕೋನವನ್ನು ಆವರಿಸಿಕೊಂಡಿರುವ ಮೂರೂ ನಾಡಿಕಾಂಡಗಳಿಂದ ಏಕ ಕಾಲದಲ್ಲಿ ೭೨,೦೦೦ ನಾಡಿಗಳು ಮಹಾಸಮುದ್ರದ ಸರ್ವತ್ರ ಹರಡುವವು.

ಎರಡನೆಯ ಕುಂಡಲಿನಿಯು ಮಹಾಕುಂಡಲಿನಿಯ ಮೇರುದಂಡದ ಮುಂಭಾಗದಲ್ಲಿ ಏಳು ಚಕ್ರವನ್ನು ರಚಿಸುವಳು. ಮೂಲಾಧಾರದಿಂದ ಮೇಲೆ ಬಂದು ನಾಭಿಯ ಹತ್ತಿರ ಒಂದು ತ್ರಿಕೋನವನ್ನು ರಚಿಸಿ ಅದರಲ್ಲಿ ನಿದ್ರಿಸುತ್ತಿರುವಳು. ಈ ಕುಂಡಲಿನಿ ಮಾತೆಯನ್ನು ಮಧ್ಯಕುಂಡಲಿನಿ ಮಾತೆಯೆಂದು ಕರೆಯುವರು. ಮಾತೆಯು ಮುಂಭಾಗದ ಮೇರುದಂಡದ (ಬೆನ್ನಿನ ಮುಂಭಾಗ) ಬಳಿ ಇದೆ, ಈ ಮಧ್ಯಕುಂಡಲಿನಿ ಮಾತೆಯು ಏಳು ಚಕ್ರಗಳ ಧ್ಯೌಃ ಲೋಕವನ್ನೂ ಸಹ ಸೃಷ್ಟಿಸಿರುವಳು. ಈ ಚಕ್ರಗಳು ಮಾತ್ರ ಶರೀರದ ಮುಂಭಾಗದಲ್ಲಿದೆ.

ಮೂರನೆಯ ಕುಂಡಲಿನಿ ಮಾತೆಯು ಸಹಸ್ರಾರ ಚಕ್ರದಿಂದ ಕೆಳಗೆ ಬಂದು ಹಣೆಯಲ್ಲಿ ತ್ರಿಕೋನವನ್ನು ರಚಿಸಿಕೊಂಡು ನಿದ್ರಿಸುತ್ತಿರುವಳು ಮತ್ತು ತನ್ನ ಸುತ್ತ ನಾಡಿ ಕಾಂಡವನ್ನು ರಚಿಸಿಕೊಂಡು ನಿದ್ರಿಸುತ್ತಿರುವಳು.

ಈ ಮೂರೂ ನಾಡಿಕಾಂಡಗಳಿಂದ ೭೨,೦೦೦ ನಾಡಿಗಳು ಹೊರಹೊಮ್ಮಿ ಮಹಾಸಮುದ್ರವನ್ನೆಲ್ಲಾ ವ್ಯಾಪಿಸಿಕೊಂಡಿರುವುದು (ಋಗ್ವೇದ ೧೦-೧೨೯-೫ ಸಾಭಾ). ಈ ಮೂರು ಕುಂಡಲಿನಿ ಮಾತೆಯರು ನಮ್ಮ ಶರೀರದಲ್ಲಿಯೂ ಸಹ ಇರುವರು. ಕುಂಡಲಿನಿ ಮಾತೆಯರು ಸೃಷ್ಟಿಸಿದ ಚಕ್ರಗಳಿಂದ ಹೊರಹೊಮ್ಮುವ ಶಕ್ತಿಯು ಮಹಾಸಮುದ್ರವನ್ನು ನದಿಗಳ ರೂಪದಲ್ಲಿ ಹರಿಯುವಂತೆ ಮಾಡುತ್ತದೆ. ನಮ್ಮ ಪಿಂಡಾಂಡದ ಉದಾಹರಣೆಯನ್ನು ಕೊಡುವುದಾದರೆ ಮೇರುದಂಡವೆಂದು ಕರೆಯಲ್ಪಡುವ ಬೆನ್ನುಮೂಳೆಯ ಹಿಂಭಾಗದಲ್ಲಿ ಮಹಾಕುಂಡಲಿನಿಯೂ ಮತ್ತು ಬೆನ್ನಮೂಳೆಯ ಮುಂಭಾಗದಲ್ಲಿ ಮಧ್ಯಕುಂಡಲಿನಿಯೂ ಸಹಸ್ರಾರಚಕ್ರವನ್ನೂ ಸೇರಿಸಿ ಏಳು ಚಕ್ರಗಳನ್ನು ರಚಿಸಿಕೊಂಡು ತಮ್ಮ ನಾಡಿಕಾಂಡಗಳ ಮಧ್ಯ ಇರುವ ತ್ರಿಕೋನದಲ್ಲಿ ನಿದ್ರಿಸುತ್ತಿರುವರು.

ಆಧ್ಯಾತ್ಮ ಸಾಧನೆಯಲ್ಲಿ ವಿಶೇಷವಾದ ಆಸಕ್ತಿ ಇರುವವರಲ್ಲಿ ಕೆಲವು ಸಾಧಕರು ಅದರಲ್ಲೂ ಮುಖ್ಯವಾಗಿ ತಂತ್ರಶಾಸ್ತ್ರವನ್ನು ಅಭ್ಯಸಿಸುವವರು ಅಧಃಕುಂಡಲಿನಿ ಸ್ಥಾನದಿಂದ ತಮ್ಮ ಸಾಧನೆಯನ್ನು ಮಾಡುವರು, ಕೆಲವರು ಮಧ್ಯಕುಂಡಲಿನಿ ಸ್ಥಾನದಿಂದಲೂ ಮತ್ತೆ ಕೆಲವರು ಊರ್ಧ್ವಕುಂಡಲಿನಿ ಸ್ಥಾನದಿಂದ ತಮ್ಮ ಸಾಧನೆಯನ್ನು ಮಾಡುವರು. ಈ ಮೂರೂ ಸಾಧನೆಯಲ್ಲಿ ಬೇರೆ ಬೇರೆ ಅನುಭವಗಳು ಸಾಧಕರಿಗೆ ಆಗುತ್ತದೆ.

## ಚಕ್ರಗಳ ಸೃಷ್ಟಿ ಮತ್ತು ವಾಕ್ಕಿನ ನಾಲ್ಕು ವರ್ಗಗಳು

ಮೂರು ಕುಂಡಲಿನೀ ಮಾತೆಯರು ಸಂಸ್ಕೃತ ಬೀಜಾಕ್ಷರಗಳಿಂದ ಚಕ್ರಗಳನ್ನು ಸೃಷ್ಟಿಸಿರುವರು. ಚಕ್ರಗಳ ಸೃಷ್ಟಿಯಿಂದ ವಾಯುವು ಮಹತ್ತರವಾದ ಬಲವನ್ನು ಪಡೆದುಕೊಳ್ಳುವುದು (ಸ್ಟೆಪ್ ಅಪ್ ಟ್ರಾನ್ಸಫಾರಮರ್‌ನಂತೆ). ಈ ಚಕ್ರಗಳು ಅನಾದಿಯಾದ ಮಹಾಸಮುದ್ರವನ್ನು ಪ್ರವೇಶಿಸಿದಾಗ ಸಮುದ್ರವು ಚಕ್ರಗಳಿಂದ ನದಿಯಂತೆ ಊರ್ಧ್ವಮುಖವಾಗಿ ಹರಿಯುತ್ತದೆ.

ಋಗ್ವೇದವು ನಾಲ್ಕು ರೀತಿಯ ವಾಕ್ಕುಗಳ ಬಗ್ಗೆ ನಮಗೆ ತಿಳಿಸುತ್ತದೆ. ಈ ಸೃಷ್ಟಿಯೆಲ್ಲವೂ ಕುಂಡಲಿನಿ ಮಾತೆಯ ಪರಾವಾಕ್ಕಿನಿಂದಾಗಿದೆ. ಮಾತೆಯ ಪರಾವಾಕ್ಕಿನ ವಿಶೇಷವೇನೆಂದರೆ ಮಾತೆಯು ತನ್ನ ಮನಸ್ಸಿನಲ್ಲಿ ಉಚ್ಚರಿಸುವ ಅಕ್ಷರಗಳೆಲ್ಲವೂ ಬೆಳಕು, ರೂಪ ಮತ್ತು ಚೈತನ್ಯವನ್ನು ಪಡೆದಿರುತ್ತವೆ. ಬ್ರಹ್ಮಾಂಡದ ಸೃಷ್ಟಿಕ್ರಿಯೆಯಲ್ಲಿ ಈ ವಾಕ್ಕುಗಳನ್ನು ನಾಲ್ಕು ಭಾಗಗಳಾಗಿ ವಿಭಜಿಸಲಾಗಿದೆ. ಋಗ್ವೇದವು ಪವಿತ್ರವಾದ ವಾಕ್ಕುಗಳ ಬಗ್ಗೆ ಈ ರೀತಿ ಹೇಳುತ್ತದೆ.

ಚತ್ವಾರಿ ವಾಕ್ಪರಿಮಿತಾ ಪದಾನಿ ತಾನಿ ವಿದುರ್ಬ್ರಾಹ್ಮಣಾ ಯೇ ಮನೀಷಿಣಃ ೧
ಗುಹಾ ತ್ರೀಣಿ ನಿಹಿತಾ ನೇಂಗಯಂತಿ ತುರೀಯಂ ವಾಚೋ ಮನುಷ್ಯಾ ವದಂತಿ ೧೧(ಋಗ್ವೇದ ೧-೧೬೪-೪೫ ಸಾ ಭಾ)
"ವಾಕ್ಕಿನ ವರ್ಗಗಳು ನಾಲ್ಕು ಭಾಗಗಳಾಗಿ ನಿಯಮಿತವಾಗಿವೆ. ಅದನ್ನು ಪರಾ, ಪಶ್ಯಂತಿ, ಮಧ್ಯಮಾ, ವೈಖರಿ ಎಂದು ಕರೆಯುತ್ತಾರೆ. ಆ ವರ್ಗಗಳನ್ನು ಮೇದಾವಿಗಳಾದ ವೇದವಿತ್ತರು ಮಾತ್ರ ಅರಿಯುತ್ತಾರೆ. ಅವುಗಳಲ್ಲಿ ಮೂರು ವರ್ಗಗಳು ರಹಸ್ಯದಲ್ಲಿಡಲ್ಪಟ್ಟು ಸ್ಪಷ್ಟವಾಗಿ ತಿಳಿಯುವುದಿಲ್ಲ. ಮಾನವರೆಲ್ಲರೂ ವಾಕ್ಕಿನ ನಾಲ್ಕನೆಯ ಪಾದವನ್ನು ಮಾತ್ರ ಉಚ್ಚರಿಸಿ ವ್ಯವಹರಿಸುತ್ತಾರೆ."

(ಕಂಠದಿಂದ ಹೊರಹೊಮ್ಮಿದ ವಾಕ್ಕು ನಮಗೆ ಕೇಳಿಸುತ್ತದೆ ಆದರೆ ಇತರ ಮೂರ ವಾಕ್ಕುಗಳು ಕೇಳಿಸುವುದಿಲ್ಲ.)

ಗೌರೀರ್ಮಿಮಾಯ ಸಲಿಲಾನಿ ತಕ್ಷತ್ಯೇಕಪದೀ ದ್ವಿಪದೀ ಸಾ ಚತುಷ್ಪದೀ ೧
ಅಷ್ಟಾಪದೀ ನವಪದೀ ಬಭೂವುಷೀ ಸಹಸ್ರಾಕ್ಷರಾ ಪಮೇ ವ್ಯೋಮನ್ ೧೧ (ಋಗ್ವೇದ ೧-೧೬೪-೪೧ ಸಾ ಭಾ)
"ಅಂತರಿಕ್ಷಸ್ಥಳಾದ ಮಾಧ್ಯಮಿಕಾ ವಾಕ್ಕು ಶಬ್ದ ಮಾಡುತ್ತಾಳೆ. ಉದಕಗಳನ್ನು ಸಂಪಾದಿಸುವವಳಾಗಿಯೂ, (ಅವಳು ತನ್ನ ವಾಕ್ಕಿನಿಂದ ಉದಕದಲ್ಲಿ ಸಂಚಲನವನ್ನುಂಟುಮಾಡುತ್ತಾ) ಒಂದು, ಎರಡು, ನಾಲ್ಕು, ಎಂಟು ಮತ್ತು ಒಂಬತ್ತು ಅಧಿಷ್ಠಾನಗಳುಳ್ಳವಲಾಗಿಯೂ ಇರುತ್ತಾ ಉತ್ಕೃಷ್ಟವಾದ ಅಂತರಿಕ್ಷದಲ್ಲಿ ಅಪರಿಮಿತವಾದ ವ್ಯಾಪ್ತಿಯುಳ್ಳವಳಾಗುತ್ತಾಳೆ."

ತಸ್ಯಾಃ ಸಮುದ್ರಾ ಅಧಿ ವಿ ಕ್ಷರಂತಿ ತೇನ ಜೀವಂತಿ ಪ್ರದಿಶಶ್ಚತಸ್ರಃ ೧
ತತಃ ಕ್ಷರತ್ಯಕ್ಷರಂ ತದ್ವಿಶ್ವಮುಪ ಜೀವತಿ ೧೧ (೧-೧೬೪-೪೨) (ಆರ್ ಎಲ್ ಕ)
"(ಮಾಧ್ಯಮಿಕ ವಾಕ್ಕಿನ ಶಕ್ತಿಯಿಂದ) ಉದಕವು ಆಕೆಯ ವಾಕ್ಕಿನಿಂದ ಹರಿಯುತ್ತದೆ. ಅದರಿಂದ ನಾಲ್ಕು ದಿಕ್ಕುಗಳಲ್ಲೂ ಇರತಕ್ಕ ಪ್ರಜೆಗಳು ಜೀವಿಸುತ್ತಾರೆ. ಆನಂತರ ಉದಕವು ಸಸ್ಯಾದಿಗಳಿಗೆ ಪ್ರಸರಿಸುತ್ತದೆ. ಸಮಸ್ತ ಜೀವಜಗತ್ತು ಸಹ ಅದರ ಆಶ್ರಯದಿಂದ ಬದುಕುತ್ತದೆ."

ಮಾಧ್ಯಮಿಕ ವಾಕ್ಕಿನ ಮಹಿಮೆಯು ಅಪಾರವಾಗಿದೆ ಏಕೆಂದರೆ ಇಲ್ಲಿನ ಹೃದಯ ಗುಹೆಯಲ್ಲಿ ಇಂದ್ರನು ಉಪಸ್ಥಿತನಾಗಿರುವನು. ಅದೂ ಅಲ್ಲದೆ ಪಂಚಪ್ರಾಣಗಳಲ್ಲಿ ಒಂದಾದ ಮಹಿಮೆಯಿಂದ ಕೂಡಿದ ಪ್ರಾಣವಾಯುವಿನ ಸ್ಥಾನವಾಗಿದೆ. ಮಾಧ್ಯಮಿಕ ವಾಕ್ಕಿನಿಂದ ನಮ್ಮ ಪಿಂಡಾಂಡದಲ್ಲಿಯೂ ಸಪ್ತಸಿಂದು ನದಿಗಳು ಹರಿಯುತ್ತದೆ. ಜೀವರಾಶಿಗಳ ಸೃಷ್ಟಿಯಲ್ಲಿ ವಿಶೇಷ ಸ್ಥಾನವನ್ನು ಪಡೆದಿರುವ ಮಾನವನ ಕಂಠದಿಂದ ಹೊರಹೊಮ್ಮುವ ಶಬ್ದ ಅಥವಾ ವಾಕ್ಕು ನಾಲ್ಕು ಅವಸ್ಥೆಗಳನ್ನು ಮತ್ತು ಸ್ಥಾನವನ್ನು ಹೊಂದಿದೆ. ಇವುಗಳು ನಮ್ಮ ಶರೀರದ ನಾನಾ ಭಾಗಗಳಿಂದ ಹೊರಹೊಮ್ಮುವುದು. ವೇದದಲ್ಲಿರುವ ವಾಕ್ಕಿನ ಮಂತ್ರಗಳನ್ನು ಯೋಗಿಗಳು ಸಂಶೋಧಿಸಿ ಪರಾ, ಪಶ್ಯಂತಿ, ಮಧ್ಯಮ ಮತ್ತು ವೈಖರಿವಾಣಿಯ ಸ್ಥಾನವನ್ನೂ ಅದರ ಮಹಿಮೆಯನ್ನೂ ಕಂಡುಕೊಂಡಿದ್ದಾರೆ.

**ಪರಾವಾಣಿ:** ಪರಾವಾಣಿಯು ಸೂಕ್ಷ್ಮಾತಿಸೂಕ್ಷ್ಮವಾದದು ಮತ್ತು ಅದು ಅತೀ ಶಕ್ತಿಯುತವಾಗಿದೆ. ಇದರ ಮೂಲವು ಕುಂಡಲಿನಿಯೇ ಆಗಿದೆ. ಅವ್ಯಕ್ತಸ್ವರೂಪಳಾದ ಕುಂಡಲಿನಿಮಾತೆಯ ಮನಸ್ಸಿನಿಂದ ಹೊರಹೊಮ್ಮಿದ ಪರಾವಾಣಿಯು

ಬೆಳಕು ಮತ್ತು ಚೈತನ್ಯವನ್ನು ಹೊಂದಿದೆ. ಆ ಕಾರಣದಿಂದಾಗಿ ಜ್ಞಾನಸ್ವರೂಪಿಣಿಯಾದ ಮಾತೆಯಿಂದ ಉಚ್ಚರಿಸಲ್ಪಟ್ಟ ವಾಕ್ಕು ಮಹತ್ತರವಾದ ಕ್ರಿಯಾಶಕ್ತಿ ಮತ್ತು ಇಚ್ಛಾಶಕ್ತಿಯನ್ನು ಹೊಂದಿ ಅದರ ಪರಿಣಾಮವು ಪ್ರಳಯಕಾಲದವರೆಗೂ ಸ್ಥಿರವಾಗಿದೆ. ಕುಂಡಲಿನಿಯು ಮೂಲಾಧಾರದ ಮೇಲಿರುವ ತ್ರೈಪುರವೆಂಬ ತ್ರಿಕೋನದಲ್ಲಿ ಪವಡಿಸಿರುವುದರಿಂದ ಪರಾವಾಣಿ ವಾಕ್ಕಿನ ಮೂಲವು ಅದೇ ಆಗಿದೆ.

**ಪಶ್ಯಂತಿ:** ಪಶ್ಯಂತಿವಾಣಿಯು ನಾಭಿಯ ಸ್ಥಾನದಿಂದ ಹೊರಡುತ್ತದೆ. ಪಶ್ಯಂತಿವಾಣಿಯೂ ಸಹ ಮಂತ್ರಕ್ಕೆ ಬೆಳಕನ್ನು, ರೂಪವನ್ನು ಮತ್ತು ಚೈತನ್ಯವನ್ನು ಕೊಡುತ್ತದೆ. ಪಶ್ಯಂತಿವಾಣಿಯು ಕಂಪನ, ಕಂಪನದ ಶಕ್ತಿಯನ್ನು ಪಡೆದಿದೆ ಮತ್ತು ಕಂಪನವು ರೂಪವನ್ನು ತಾಳುತ್ತದೆ. ನಮ್ಮಲ್ಲಿ ಪಶ್ಯಂತಿವಾಣಿಯ ಜಾಗೃತವಾದಾಗ ನಾವು ಪಠಿಸುವ ಮಂತ್ರವು ಆಕಾರ, ತೇಜಸ್ಸು ಮತ್ತು ಚೈತನ್ಯವನ್ನು ಪಡೆದು ದೇವತಾ ಸ್ವರೂಪವನ್ನು ಪಡೆದುಕೊಳ್ಳುತ್ತದೆ. ಆದ್ದರಿಂದಲೇ ದೇವತೆಗಳ ಸ್ಥಾನವು ಪಶ್ಯಂತಿವಾಣಿಯಲ್ಲಿದೆಯೆಂದು ಹೇಳುವುದು.

**ಮಧ್ಯಮ:** ಪಂಚಪ್ರಾಣಗಳಲ್ಲಿ ಒಂದಾದ ಪ್ರಾಣವಾಯುವು ಹೃದಯದ ಸ್ಥಾನದಲ್ಲಿರುವುದರಿಂದ ಮಧ್ಯಮವಾಣಿ ಯಾದ ಮಂತ್ರವು ಪ್ರಾಣಶಕ್ತಿಯನ್ನು ಪಡೆದುಕೊಳ್ಳುತ್ತದೆ. ಮಂತ್ರದೇವತೆಯು ಪ್ರಾಣಶಕ್ತಿಯನ್ನು ಪಡೆದುಕೊಂಡು ಸಾಧಕನನ್ನು ಅವನ ಇಚ್ಛಾನುಸಾರ ಅನುಗ್ರಹಿಸುತ್ತದೆ. ಏಕೆಂದರೆ ಸಕಲ ರೋಗನಿವಾರಣೆ, ಪವಾಡ ಇತ್ಯಾದಿಗಳ ಮೂಲ ಪ್ರಾಣಶಕ್ತಿಯೇ ಆಗಿದೆ. ಈ ಮಧ್ಯಮವಾಣಿಯಿಂದ ಉದಕಗಳು ಸಂಚಲನವನ್ನು ಹೊಂದಿ ಸಮಸ್ತ ಜಗತ್ತು ಪ್ರಕಟಗೊಂಡಿದೆ.

**ವೈಖರಿ:** ವೈಖರಿವಾಣಿಯು ಕಂಠದಿಂದ ಹೊರಹೊಮ್ಮುತ್ತದೆ. ಬೆಳಕು, ಚೈತನ್ಯ ಮತ್ತು ಪ್ರಾಣಶಕ್ತಿಯಿಂದ ಕೂಡಿದ ಕಂಪನವು ನಮ್ಮ ಕಂಠದ ಧ್ವನಿಪೆಟ್ಟಿಗೆಯಲ್ಲಿ ಶಬ್ದರೂಪವನ್ನು ಪಡೆದು ಹೊರಹೊಮ್ಮುತ್ತದೆ. ವೈಖರಿವಾಣಿಯು ನಮ್ಮ ಸುತ್ತಲಿನ ಪರಿಸರ, ಜನ ಅಥವಾ ನಮ್ಮ ಧ್ಯೇಯದ ಮೇಲೆ ಉತ್ತಮ ಪರಿಣಾಮವನ್ನು ಬೀರುತ್ತದೆ. ಆದ್ದರಿಂದ ಶಬ್ದವು ಅಸಾಮಾನ್ಯವಾದುದು, ದೈವೀಶಕ್ತಿಯಿಂದ ಕೂಡಿರುವಂತಹದು ಆಗಿದೆ. ಆದ್ದರಿಂದ ಯೋಗಿಗೆ ಮೌನ ಬಂಗಾರವಲ್ಲ ಮಾತು ಬಂಗಾರವಾಗಿದೆ. ಯೋಗಿಗಳು ಅದರ ಸದ್ಬಳಕೆಯಿಂದ ಊರ್ಧ್ವಲೋಕಕ್ಕೆ ಹೋಗುತ್ತಾರೆ. ಆದರೆ ಅಜ್ಞಾನಿಯಾದ ಮಾನವನು ಅದರ ದುರ್ಬಳಕೆಯಿಂದ ಅಧಮ ಲೋಕಕ್ಕೆ ಹೋಗುತ್ತಾನೆ.

ನಾವು ಮಂತ್ರವನ್ನು ಮೂರು ರೀತಿಯಲ್ಲಿ ಉಚ್ಚರಿಸಬಹುದು. ನಾವು ಎಲ್ಲರಿಗೂ ಕೇಳುವಂತೆ ಮಂತ್ರವನ್ನು ಉಚ್ಚರಿಸಿದರೆ ಅದನ್ನು ವಾಚಿಕಜಪವೆಂದು ಕರೆಯುತ್ತಾರೆ. ನಾವು ಪಿಸುಧನಿಯಲ್ಲಿ ನಮ್ಮ ಕಿವಿಗೆ ಮಾತ್ರ ಕೇಳಿಸುವಂತೆ ಮಂತ್ರವನ್ನು ಉಚ್ಚರಿಸಿದಾಗ ಅದನ್ನು ಉಪಾಂಶು ಎಂದು ಕರೆಯುತ್ತಾರೆ. ಹಾಗೆಯೆ ನಾವು ಮಂತ್ರವನ್ನು ಮಾನಸಿಕವಾಗಿ ಅಂದರೆ ನಮ್ಮ ಧ್ವನಿಪೆಟ್ಟಿಗೆ ಅಥವಾ ನಾಲಿಗೆಯನ್ನು ಉಪಯೋಗಿಸದೇ ಮಂತ್ರವನ್ನು ಉಚ್ಚರಿಸಿದರೆ ಅದನ್ನು ಮಾನಸಿಕಜಪವೆಂದು ಕರೆಯುತ್ತಾರೆ. ಮಾನಸಿಕಜಪವು ಅತ್ಯಂತ ಶಕ್ತಿಯುತವಾದುದು. ನಮ್ಮಲ್ಲಿ ಮಂತ್ರಚೈತನ್ಯವು ಜಾಗೃತವಾಗಿದ್ದರೆ ಮಾನಸಿಕಜಪವು ಕುಂಡಲಿನಿಮಾತೆಯ ಪರಾವಾಣಿಗೆ ಸಮನಾಗಿದೆ.

ಯಾರಾದರೂ ಅದರಲ್ಲಿಯೂ ಮುಖ್ಯವಾಗಿ ವಿದೇಶಿಯರು ಸಂಸ್ಕೃತವನ್ನು ಕಲಿಯಬೇಕೆಂದು ಇಚ್ಛೆಪಟ್ಟರೆ ಅವರು ಮೊದಲು ಅಕ್ಷರಗಳನ್ನು ಸರಿಯಾದ ರೀತಿಯಲ್ಲಿ ಉಚ್ಚರಿಸುವುದನ್ನು ಕಲಿತುಕೊಳ್ಳಬೇಕು. ಅವರು ತಮ್ಮ ಕೈಯ ಬೆರಳನ್ನು ನಾಭಿಯಲ್ಲೂ, ಎದೆಯ ಮೇಲೆ ಮತ್ತು ಕಂಠಕೂಪದ ಮೇಲೆ ಮತ್ತು ಸೂಕ್ಷ್ಮಮನಸ್ಸಿನ ಸ್ಥಾನವಾದ ಹಣೆಯ ಮೇಲೆ ಬೆರಳನ್ನು ಇಟ್ಟುಕೊಂಡು ಅಕ್ಷರಗಳನ್ನು ಉಚ್ಚರಿಸಲು ಕಲಿಯಬೇಕು. ಏಕೆಂದರೆ ನಾಭಿಯ ಸ್ಥಾನವು ಪಶ್ಯಂತಿ, ಎದೆಯು ಮಧ್ಯಮಾ ಮತ್ತು ಕಂಠಕೂಪವು ವೈಖರಿ ಹಾಗು ಜೀವನ ಸೂಕ್ಷ್ಮಮನಸ್ಸು ಸ್ಥಾನದ ಮೂಲವಾಗಿದೆ. ಈ ನಾಲ್ಕೂ ಸ್ಥಾನದಲ್ಲಿ ಉಂಟಾಗುವ ಕಂಪನವನ್ನು ನಾವು ಅನುಭವಿಸಿದಾಗ ಮಂತ್ರವು ಸರಿಯಾದ ರೀತಿಯಲ್ಲಿ ಹೊರಹೊಮ್ಮುತ್ತಿರುವುದೆಂದು ತಿಳಿಯಬಹುದು.

ಈ ರೀತಿಯಾಗಿ ಅಕ್ಷರಗಳನ್ನು ಕಲಿತ ನಂತರ ಒಂದೊಂದೇ ಸಂಸ್ಕೃತಪದಗಳನ್ನು ಉಚ್ಚರಿಸಲು ಕಲಿಯ ಬೇಕು. ಏಕೆಂದರೆ ವೈದಿಕ ಮತ್ತು ಕುಂಡಲಿನಿ ಸಾಧನೆಯು "ಶಬ್ದ ವಿಜ್ಞಾನ" ವಾಗಿದೆ, ಆದ್ದರಿಂದ ಉಚ್ಚಾರಣೆ ತಪ್ಪಾದರೆ ನಾವು ಯಾವ ಸ್ಪಂದನವನ್ನು ಉಂಟುಮಾಡಬೇಕೆಂದು ಯೋಚಿಸುತ್ತೇವೋ ಅದಕ್ಕಿಂತ ಭಿನ್ನವಾಗುವ ಸಾಧ್ಯತೆ ಇದೆ. ಈ ರೀತಿಯ ಉಚ್ಚಾರಣೆಯು ಬೇರೆಯದೇ ರೀತಿಯ ಸ್ಪಂದನವನ್ನು ಉಂಟುಮಾಡಬಹುದು ಹಾಗು ನಮಗೆ ಅದರಿಂದ ತೊಂದರೆಯಾಗಬಹುದು. ಆದ್ದರಿಂದ ನಾವು ಮೊದಲು ಯಾರಾದರೂ ಉಪಾಧ್ಯಾಯರ ಮುಖಾಂತರ ಸಂಸ್ಕೃತ ಅಭ್ಯಾಸವನ್ನು ಮಾಡಬೇಕು. ಋಗ್ವೇದ ಮಂತ್ರವು ದೈವೀ ಮೂಲವಾಗಿರುವುದರಿಂದ ಅದರ ಮಹಿಮೆಯು ಅಪಾರವಾಗಿದೆ. ದೇವತೆಗಳ ಮಂತ್ರೋಚ್ಛಾರಣೆಯನ್ನು ಮಾಡುತ್ತಿದ್ದಂತೆ ಅವರು ವಿಶ್ವರೂಪವನ್ನು ತಾಳುವರು. ಋಗ್ವೇದವು ದೇವಭಾಷೆಯಾಗಿರುವುದರಿಂದ ಭೂಮಿಯಲ್ಲಿರುವ ಸಕಲರಿಗೂ ಕಲಿಯುವುದು ಕಷ್ಟಕರವಾಗಿದೆ. ಉದಾತ್ತ ಅನುದಾತ್ತದಿಂದ ಕೂಡಿದ ವಿವಿಧ ಪದಪಾಠಕ್ಕಿಂತಲೂ ಪದಗಳ ಸ್ಪಷ್ಟ ಉಚ್ಚಾರಣೆಯು ಪ್ರಮುಖವಾಗಿದೆ. ಯಾರು ಅಂತರ್‌ಯಜ್ಞ ವಿಧಾನದಲ್ಲಿ ಮುಂದುವರೆದಿರುವರೋ ಅವರು ಬ್ರಹ್ಮನನ್ನು ನಾಭಿಯಲ್ಲಿ ಪ್ರಕಟ ಮಾಡಬಹುದು.

ಸರಸ್ವತಿಯನ್ನು ಮಣಪೂರಕಚಕ್ರದ ಬಳಿ, ಮರುತ್ತರನ್ನು ಹೃದಯದ ಬಳಿ, ಮಹಿದೇವಿಯನ್ನು ಕಂಠದ ಬಳಿ, ಭಾರತಿಯನ್ನು ನಾಲಗೆಯ ಮೂಲದಲ್ಲಿ, ಇಳಾದೇವಿಯನ್ನು ಹುಬ್ಬಿನ ನಡುವೆ, ತ್ವಷ್ಟ್ರಾದೇವತೆಯನ್ನು ಚಂದ್ರಮಂಡಲ ಮಧ್ಯದಲ್ಲಿ, ಬೃಹಸ್ಪತಿಯನ್ನು ಕಂಠದಲ್ಲಿ ಮತ್ತು ಬ್ರಹ್ಮಣಸ್ಪತಿಯನ್ನು ಮುಖದಲ್ಲಿ ಸ್ಥಾಪಿಸಬೇಕು. ಆಗ ಮಂತ್ರೋಚ್ಚಾರಣೆಯ ಪೂರ್ಣಫಲಕೊಡುವುದು.

(ಪರಮ ಪವಿತ್ರವಾದ ವಾಕ್ಕನ್ನು ಕನ್ನಡಭಾಷೆಯು ಉತ್ಕೃಷ್ಟವಾಗಿ ಉಚ್ಚರಿಸಲು ಸಹಾಯ ಮಾಡುತ್ತದೆ. ಕನ್ನಡಭಾಷೆಯು ಪರಿಪೂರ್ಣವಾಗಿ ಪರಿಪಕ್ವಗೊಂಡ ಬಾಷೆಯಾಗಿದೆ. ಕನ್ನಡ ಭಾಷೆಯ ಲಿಪಿಯು ಸಂಸ್ಕೃತದ ಲಿಪಿಗಿಂತಲೂ ಒಂದು ಹೆಜ್ಜೆ ಮುಂದೆಹೋಗಿದೆ ಎಂದು ಹೇಳಬಹುದು. ಕನ್ನಡಭಾಷೆಯು ಸಂಸ್ಕೃತಕ್ಕಿಂತಲೂ ಎರಡು ಹೆಚ್ಚುವರಿ ಅಕ್ಷರಗಳನ್ನು ಹೊಂದಿದೆ. ಆದ್ದರಿಂದ ಕನ್ನಡದಲ್ಲಿ ಏನು ಹೇಳುತ್ತೇವೆಯೋ ಅದನ್ನೇ ಬರೆಯುತ್ತೇವೆ; ಏನು ಬರೆಯುತ್ತೇವೋ ಅದನ್ನೇ ಹೇಳುತ್ತೇವೆ. ಆದ್ದರಿಂದ ಆಚಾರ್ಯ ವಿನೋಬಭಾವೆಯವರು ಕನ್ನಡವನ್ನು "ಪ್ರಪಂಚದ ಅಕ್ಷರಗಳ ರಾಣಿ" ಎಂದು ಕರೆದಿದ್ದಾರೆ. ಈ ಭಾಷೆಯು ಕಂಪ್ಯೂಟರ್‌ಗೆ ಅಳವಡಿಸಿಕೊಳ್ಳಲು ಸಂಸ್ಕೃತಕ್ಕಿಂತಲೂ ಉತ್ತಮವಾಗಿದೆ ಎಂದು ನನ್ನ ಭಾವನೆ.)

ಈ ನಮ್ಮ ದೇಹದ ಆರೋಗ್ಯ ಸ್ಥಿತಿಯನ್ನು ಕಾಪಾಡಿಕೊಳ್ಳಲು ಮತ್ತು ನಮ್ಮ ನರನಾಡಿಗಳು ಶುದ್ಧಿಯಾಗಲು ನಾವು ಪ್ರತಿನಿತ್ಯ ಯೋಗಾಸನ ಮತ್ತು ಪ್ರಾಣಾಯಾಮವನ್ನು ಮಾಡುತ್ತಿರಬೇಕು. ಮೊದಲೇ ಹೇಳದ ಹಾಗೆ ಇದು ಆಸನ ಸಿದ್ಧಿ, ಧ್ಯಾನ ಮತ್ತು ಸಮಾಧಿಗೆ ಸಹಾಯ ಮಾಡುತ್ತದೆ. ಯೋಗಾಸನವನ್ನು ಮಾಡಿದ ಮೇಲೆ ನಮ್ಮ ಶರೀರವು ಶಕ್ತಿಯನ್ನು, ಬಲವನ್ನು ಮತ್ತು ಆರೋಗ್ಯವನ್ನು ಹೊಂದಿದೆ ಎಂಬ ಭಾವನೆಯು ನಮ್ಮಲ್ಲಿ ಮೂಡುತ್ತದೆ. ಈ ಭಾವನೆಯಿಂದ ನಮ್ಮ ಮನಸ್ಸು ಶುದ್ಧವಾಗುತ್ತದೆ. ಆರೋಗ್ಯ ಮತ್ತು ದೈಹಿಕ ಶುದ್ಧಿಯಿಂದ ಮನಸ್ಸಿನ ಶುದ್ಧಿಯು ಬರುತ್ತದೆ. ಇದರಿಂದ ಆಧ್ಯಾತ್ಮಿಕ ಪ್ರಯಾಣದಲ್ಲಿ ಮುನ್ನಡೆಯಲು ಸಹಾಯವಾಗುತ್ತದೆ. ನಮಗೆ ಮೂರು ರೀತಿಯಲ್ಲಿ ಖಾಯಿಲೆಗಳು ಬರುತ್ತದೆ.

- **ಆಧ್ಯಾತ್ಮಿಕ ಕಾರಣಗಳು:** ಪೂರ್ವ ಜನ್ಮದಲ್ಲಿ ನಾವು ಮಾಡಿದ ಕರ್ಮಗಳು ನಮ್ಮನ್ನು ಈ ಜನ್ಮದಲ್ಲಿ ಕಾಡುತ್ತದೆ.
- **ಆದಿ ದೈವಿಕ ಕಾರಣಗಳು:** ನೈಸರ್ಗಿಕವಾಗಿ ಉಂಟಾಗುವ ತೊಂದರೆಗಳು ಉದಾಹರಣೆಗೆ ಮಳೆ, ಬಿರುಗಾಳಿ, ಗುಡುಗು, ಸಿಡಿಲು, ಭೂಕಂಪನ, ಅಗ್ನಿಪರ್ವತ ಸ್ಫೋಟ ಇತ್ಯಾದಿ.
- **ಆದಿಭೌತಿಕ ಕಾರಣಗಳು:** ಬ್ಯಾಕ್ಟೀರಿಯಾ ಮತ್ತು ವೈರಸ್ಸಿನಿಂದ ಉಂಟಾಗುವ ಖಾಯಿಲೆಗಳು, ಸೊಳ್ಳೆ, ಇಲಿ, ಹಾವು ಇತ್ಯಾದಿ ಕ್ರಿಮಿಕೀಟಗಳಿಂದ ಉಂಟಾಗುವ ತೊಂದರೆಗಳು ಮತ್ತು ಖಾಯಿಲೆಗಳು.

ದಿನ ನಿತ್ಯದ ಯೋಗಾಸನ ಮತ್ತು ಪ್ರಾಣಾಯಾಮದಿಂದ ಈ ತೊಂದರೆಗಳನ್ನು ಸಂಪೂರ್ಣವಾಗಿ ತಡೆಗಟ್ಟಲಾಗದಿದ್ದರೂ ಬಹಳಷ್ಟು ತೊಂದರೆಗಳನ್ನು ನಿವಾರಿಸಿಕೊಳ್ಳಬಹುದು. ಇದರಲ್ಲಿ ಆಹಾರದ ಮೇಲಿನ ನಿಯಂತ್ರಣ ಬಹಳ ಪ್ರಮುಖವಾದದ್ದು.

# ಅಧ್ಯಾಯ – ೧೧: ವಾಯುವಿನ ಮಹಿಮೆ

ಮಾತೆಯ ಪ್ರಥಮ ಕ್ರಿಯೆ ಮೂಲಸ್ಪಂದನವಾಗಿದೆ. ಶಬ್ದವು ನಾದ ಮತ್ತು ಕಂಪನವನ್ನುಂಟುಮಾಡುತ್ತದೆ. ಸ್ಪಂದನವು ಉಂಟಾಗಲು ಮಾಧ್ಯಮವು ಬೇಕಾಗಿದೆ. ಯಾವುದೇ ಮಾಧ್ಯಮವಿಲ್ಲದೆ ಶೂನ್ಯದಲ್ಲಿ ಕಂಪನವು ಉಂಟಾಗುವುದಿಲ್ಲ. ಶಿವ ಸ್ವರೂಪವು ಅಂಧಕಾರರೂಪವಾದ, ಬಯಲಅನಂತಿರುವುದರಿಂದ ಮತ್ತು ಅವನು ಸ್ಪಂದನಾತೀತ ಅಥವಾ ಕಳಾತೀತನಾಗಿರುವುದರಿಂದ ಅವನಲ್ಲಿ ಕಂಪನವು ಉಂಟಾಗುವುದಿಲ್ಲ. ಅವ್ಯಕ್ತ ಸ್ವರೂಪವಾದ ಮನಸ್ಸಲ್ಲಿ ಕಂಪನವು ಉಂಟಾಗುವುದಿಲ್ಲ. ಶೂನ್ಯದಲ್ಲಿ ಹೇಗೆ ಸ್ಪಂದನವುಂಟಾಗುವುದಿಲ್ಲವೋ ಹಾಗೆ ಅವ್ಯಕ್ತ ಸ್ವರೂಪವಾದ ಮನಸ್ಸಿನಲ್ಲಿ ಸ್ಪಂದನವುಂಟಾಗುವುದಿಲ್ಲ.

ಹಾಗಾದರೆ ಕಂಪನವು ಯಾವುದರಲ್ಲಿ ಉಂಟಾಗುತ್ತದೆ? ಕಂಪನದ ಮಾಧ್ಯಮವು ಯಾವುದು? ಯಾವ ಮಾಧ್ಯಮದಲ್ಲಿ ಆಕಾರ ಮತ್ತು ಸ್ವರೂಪವನ್ನು ಪಡೆದುಕೊಳ್ಳುತ್ತದೆ? ಈ ವಿಷಯದ ಬಗ್ಗೆ ಋಗ್ವೇದವು ಯಾವ ರೀತಿಯ ಬೆಳಕನ್ನು ಚೆಲ್ಲುತ್ತದೆ ಎಂಬುದನ್ನು ನೋಡೋಣ.

ನ ಮೃತ್ಯುರಾಸೀದಮೃತಂ ನ ತರ್ಹಿ ನ ರಾತ್ರ್ಯಾಅಹ್ನ ಆಸೀತ್ಪ್ರಕೇತಃ ೧
ಆನೀದವಾತಂ ಸ್ವಧಯಾ ತದೇಕಂ ತಸ್ಮಾದ್ಧಾನ್ಯನ್ನ ಪರಂ ಕಿಂ ಚನಾಸ ೧೧ (ಋಗ್ವೇದ ೧೦–೧೨೯–೨ ಸಾಭಾ)
"ಸೃಷ್ಟಿಗೆ ಪೂರ್ವದಲ್ಲಿದ್ದ ಲಯಾವಸ್ಥೆಯಲ್ಲಿ ಮರಣವೂ, ಮರಣವಿಲ್ಲದಿರುವಿಕೆಯೂ ಇರಲಿಲ್ಲ. ರಾತ್ರಿ ಯಾವುದು ಹಗಲು ಯಾವುದು ಎಂಬ ಪರಿಜ್ಞಾನವಿರಲಿಲ್ಲ. **ಒಂದು ತತ್ವ ಮಾತ್ರವಿದ್ದು, ಶ್ವಾಸೋಚ್ಛ್ವಾಸರಹಿತವಾದ (*ಉಸಿರು*)** ಜೀವವಿಲ್ಲದ ಜಡವಸ್ತುವನ್ನು (ಸಲಿಲವನ್ನು) ತನ್ನ ಸಾಮರ್ಥ್ಯಾತಿಶಯದಿಂದ ಸಚೇತನವನ್ನಾಗಿ ಮಾಡಿತು. ಅದರ ಹೊರತು (ಉಸಿರು) ಬೇರೆ ಯಾವ ವಸ್ತುವೂ ಇರಲಿಲ್ಲ. ಆನಂತರ ಈ ಸೃಷ್ಟವಾದ ಈ ಜಗತ್ತು ಆಗ ಇರಲಿಲ್ಲ."
(ಋಗ್ವೇದ ೧೦–೧೨೯–೨ ಸಾ ಭಾ)

ಮೇಲಿನ ಸೂಕ್ತದ ಅರ್ಥ ಅಂಧಕಾರದ ಮಧ್ಯೆ ಅಂದರೆ ಅದರ ಗರ್ಭದಲ್ಲಿ ಶ್ವಾಸೋಚ್ಛ್ವಾಸರಹಿತವಾದ ಉಸಿರಿತ್ತು. ಈ ಉಸಿರನ್ನು ವಾಯು, ಪ್ರಾಣ ಅಥವಾ ವಿಜ್ಞಾನಿಗಳ ಮಾತಿನಲ್ಲಿ ಹೇಳುವುದಾದರೆ ಶಕ್ತಿ ಅಥವಾ ವಿಶ್ವಶಕ್ತಿ ಎಂದು ಹೇಳಬಹುದು. ವಿಶ್ವ ಸೃಷ್ಟಿಯ ಆದಿಯಲ್ಲಿ ಗುರುತ್ವಾಕರ್ಷಣಶಕ್ತಿ ಇತ್ಯಾದಿ ನಾಲ್ಕು ಶಕ್ತಿಗಳು (ವಾಯುಗಳು) ಒಂದಾಗಿ ಚಲನೆಯಿಲ್ಲದ ಸ್ಥಿತಿಯಲ್ಲಿತ್ತು. ಈ ವಾಯುವಿಗೆ ತಾನಾಗೆ ಏನನ್ನೂ ಮಾಡುವ ಅಂದರೆ ಸೃಷ್ಟಿ ಮಾಡುವ ಶಕ್ತಿ ಇಲ್ಲ. ಯಾರಾದರೂ ಅದರನ್ನು ಉಪಯೋಗಿಸಿಕೊಳ್ಳಬೇಕು. ವಾಯುವಿಗೆ ತನ್ನದೇ ಆದ ಸ್ವತಂತ್ರ ವ್ಯಕ್ತಿತ್ವವಿಲ್ಲ ಆದರೆ ಭಗವಂತನ ಅನುಗ್ರಹದಿಂದ ಸೃಷ್ಟಿಯ ಒಳಗಡೆ ವ್ಯಕ್ತಿತ್ವವನ್ನು ಪಡೆದುಕೊಳ್ಳತ್ತದೆ.

ವಿಶ್ವಮನಸ್ಸು ಮತ್ತು ದೇವತೆಗಳು ವಾಯುವನ್ನು ಮತ್ತು ಅನಾದಿಯಾದ ಕ್ಷೀರಸಮುದ್ರವನ್ನು ಉಪಯೋಗಿಸಿಕೊಂಡು ಜಗತ್ ಸೃಷ್ಟಿಯನ್ನು ಮಾಡುತ್ತಾರೆ.

ಯೋಗಶಾಸ್ತ್ರವು ವಾಯುವನ್ನು ಐದು ವಿಭಾಗಗಳನ್ನಾಗಿ ಮಾಡಿದ್ದಾರೆ. ಅವು ಯಾವುವೆಂದರೆ:

೧. ಪ್ರಾಣವಾಯು
೨. ಅಪಾನವಾಯು
೩. ವ್ಯಾನವಾಯು
೪. ಸಮಾನವಾಯು
೫. ಉದಾನವಾಯು

ನಮ್ಮ ಶರೀರದಲ್ಲಿಯೂ ಪ್ರಥಮ ನಾಲ್ಕು ವಾಯುಗಳು ನಮ್ಮ ಶರೀರವನ್ನು ನಿಯಂತ್ರಿಸುತ್ತದೆ. ಪ್ರಾಣವಾಯುವು ಎದೆಯ ಮಧ್ಯಭಾಗದಲ್ಲಿದೆ, ಅಪಾನವಾಯುವು ಲಿಂಗಮೂಲದಲ್ಲಿದೆ, ವ್ಯಾನವಾಯುವು ದೇಹವನ್ನೆಲ್ಲಾ ವ್ಯಾಪಿಸಿದೆ, ಸಮಾನವಾಯುವು ನಾಭಿಸ್ಥಾನದಲ್ಲಿದೆ ಮತ್ತು ಮರಣ ಸಮಯ ಬಂದಾಗ ಉದಾನವಾಯುವು ಜಾಗೃತವಾಗಿ ಸೂಕ್ಷ್ಮಶರೀರವನ್ನು ಸ್ಥೂಲಶರೀರದಿಂದ ಬೇರ್ಪಡಿಸುತ್ತದೆ ಎಂದು ಯೋಗಶಾಸ್ತ್ರವು ಹೇಳುತ್ತದೆ.

**ಪಿಂಡಾಡದ ಅಧ್ಯಯನದಿಂದ ಬ್ರಹಾಂಡದ ರಹಸ್ಯವನ್ನು ತಿಳಿಯಬಹುದು, ಎಂಬ ಸೂತ್ರವನ್ನು ಪ್ರಯೋಗಿಸಿದಾಗ ತಿಳಿಯುವುದೇನೆಂದರೆ;**

ಯಾವ ವಾಯುಗಳು ನಮ್ಮ ಸ್ಥೂಲಶರೀರವನ್ನು ನಿಯಂತ್ರಿಸುತ್ತದೋ ಆ ವಾಯುಗಳಿಂದಲೇ ವಿಶ್ವವು ಸೃಷ್ಟಿಯಾಗಿದೆ. ವಾಯುವೇ ಸೃಷ್ಟಿಯ ನಾಲ್ಕು ಶಕ್ತಿಗಳಾದ ಗುರುತ್ವಾಕರ್ಷಣಶಕ್ತಿ, ವಿದ್ಯುತ್–ಆಯಸ್ಕಾಂತಶಕ್ತಿ, ಬಲಯುತವಾದಶಕ್ತಿ ಮತ್ತು ಬಲಹೀನವಾದ ಶಕ್ತಿಯಾಗಿ ಮಾರ್ಪಟ್ಟು ವಿಶ್ವಸೃಷ್ಟಿಯಾಗಿದೆ. ಸೃಷ್ಟಿಯ ಅಂತಿಮ ಕಾಲ ಬಂದಾಗ ಭಗವಂತನ ಇಚ್ಛೆಯಂತೆ ಉದಾನವಾಯುವು ಜಾಗೃತವಾಗಿ ಸಕಲ ವಾಯುಗಳನ್ನು ಹಿಂತೆಗೆದುಕೊಳ್ಳುತ್ತದೆ. ಆಗ ವಿಶ್ವವು ಮತ್ತೆ ತನ್ನ ಮೂಲ ಸ್ವರೂಪವನ್ನು ಹೊಂದುತ್ತದೆ.

ವಾಯುವೇ ಪಂಚಪ್ರಾಣಗಳಾಗಿ ರೂಪಾಂತರಹೊಂದಿದೆ ಮತ್ತು ಪ್ರಳಯದಲ್ಲಿ ಪಂಚವಾಯುಗಳು ಒಂದಾಗಿ ಒಂದೇ ವಾಯುವಾಗಿ ಗಾಡಾಂಧಕಾರದ ಗರ್ಭದಲ್ಲಿರುತ್ತದೆ. ವಾಯುವಿನ ವಿಭಾಗವು ಕೇವಲ ಐದು ಅಲ್ಲ. ವಾಯುವಿನ ಶಕ್ತಿಯು ಅನಂತವಾಗಿದೆ. ಆದ್ದರಿಂದ ಇಂದ್ರನನ್ನು ಸಹಸ್ರ ಅಶ್ವಗಳ (ವಾಯು) ಸರದಾರನೆಂದು ಋಗ್ವೇದವು ಹೇಳುತ್ತದೆ. ಈಗ ವಾಯುವಿನ ಮಹಿಮೆಯನ್ನು ನೋಡೋಣ.

ಆತ್ಮಾ ತೇ ವಾತೋ ರಜ ಆ ನವೀನೋತ್ಪಶುರ್ನ ಭೂರ್ಣಿರ್ಯವಸೇ ಸಸವಾನ್ ।
ಅಂತರ್ಮಹೀ ಬೃಹತೀ ರೋದಸೀಮೇ ವಿಶ್ವಾ ತೇ ಧಾಮ ವರುಣ ಪ್ರಿಯಾಣಿ ।। (ಋಗ್ವೇದ ೭–೮೭–೨ ಸಾಭಾ)
"ಎಲೈ ವರುಣನೇ, ನಿನ್ನಿಂದ ಪ್ರೇರಿತವಾದ ವಾಯುವು ಸಕಲ ಜಗತ್ತಿಗೂ ಪ್ರಾಣರೂಪನಾಗಿದ್ದಾನೆ. ..... ಹುಲ್ಲನ್ನು ಹಾಕಿದೊಡನೆಯೇ ಪಶುವು ಭಾರವನ್ನು ಧರಿಸಲು ಶಕ್ಯವಾಗುವಂತೆ ಹವಿಸ್ಸನ್ನು ಸ್ವೀಕರಿಸಿದ ವಾಯುವು ಜಗತ್ತನ್ನು ಧರಿಸಲು ಸರ್ವಶಕ್ತನಾಗುತ್ತಾನೆ....."

ಸಂ ಪ್ರೇರತೇ ಅನು ವಾತಸ್ಯ ವಿಷ್ಠಾಂ ಐನಂ ಗಚ್ಛಂತಿ ಸಮನಂ ನ ಯೋಷಾ ।
ತಾಭಿಃ ಸಯುಕ್ಸರಥಂ ದೇವ ಈಯತೇೀಸ್ಯ ವಿಶ್ವಸ್ಯ ಭೂವನಸ್ಯ ರಾಜಾ ।। (ಋಗ್ವೇದ ೧೦–೧೬೮–೨ ಸಾಭಾ)
"ಸ್ಥಿರವಾಗಿ ನಿಂತಿರುವ ವೃಕ್ಷಾದಿಗಳು ವಾಯುವಿನ ಗತಿಯನ್ನನುಸರಿಸಿ ತಾವೂ ಕಂಪಿಸಿತ್ತವೆ. ಯುದ್ಧ ಭೂಮಿಗೆ ಅಶ್ವಗಳು ಆತುರದಿಂದ ಹೋಗುವಂತೆ ಈ ವಾಯುವನ್ನು ಅವನ ಅಶ್ವಗಳು ಸಮೀಪಿಸುತ್ತವೆ. ತಾವಾಗಿಯೇ ಹೂಡಲ್ಪಡುವ ರಥವನ್ನು ಹತ್ತಿ **ಪ್ರಕಾಶಮಾನನಾದ ಈ ವಾಯುವು (ಸರ್ವತ್ರ) ಸಂಚರಿಸುತ್ತಾನೆ ಮತ್ತು ಸಮಸ್ತ ಜಗತ್ತಿಗೂ ಸ್ವಾಮಿಯಾಗಿದ್ದಾನೆ.** ಈ ವಾಯುವನ್ನು ತರುಲತಾದಿಗಳು ಸ್ವಾಗತಿಸುತ್ತವೆ ಮತ್ತು ರಥದಲ್ಲಿ ಕುಳಿತು ವಾಯುವು ಸಂಚರಿಸುತ್ತಾನೆ."

ಆದಿತ್ಯರು ವಾಯವಿನ ಶಕ್ತಿಯನ್ನು ಉಪಯೋಗಿಸಿಕೊಂಡು ಸೃಷ್ಟಿಯನ್ನು ಮಾಡುವವರು. ಮಿತ್ರಾ, ವರುಣ, ಅರ್ಯಮಾ, ಭಗ ಮತ್ತು ಅಂಶ ಎಂದು ಕರೆಯಲ್ಪಡುವ ಆದಿತ್ಯರೇ ಸಕಲ ಸೃಷ್ಟಿಯನ್ನು ಮಾಡುವರು. ಆದ್ದರಿಂದ ಬ್ರಹ್ಮ, ವಿಷ್ಣು ಮತ್ತು ಮಹೇಶ್ವರು ಸೃಷ್ಟಿ, ಸ್ಥಿತಿ ಮತ್ತು ಲಯಕರ್ತರಲ್ಲ.

ದೇವತೆಗಳು ವಾಯುವನ್ನು ಉಪಯೋಗಿಸಿಕೊಂಡು ವಿಶ್ವವನ್ನೂ ಮತ್ತು ಸಕಲ ಜೀವರಾಶಿಯನ್ನು ಸೃಷ್ಟಿಸಿ ಸಕಲ ಜೀವರಿಗೆ ವಾಯುವನ್ನು ಅಧಿಪತಿಯನ್ನಾಗಿ ಮಾಡಿರುವರು. ಆದ್ದರಿಂದ ಸಕಲ ಸೃಷ್ಟಿಯನ್ನು ಮತ್ತು ಜೀವರಾಶಿಗಳನ್ನು ನಿಯಂತ್ರಿಸುತ್ತಿರುವವನು ವಾಯುವೇ ಆಗಿದ್ದಾನೆ. ಅವ್ಯಕ್ತ ಸ್ವರೂಪನಾದ ಭಗವಂತನೂ ಮತ್ತು ದೇವತೆಗಳು ವಾಯುವಿನ ಶರೀರವನ್ನು ಧರಿಸಿರುವುದರಿಂದ, ಭಗವಂತನು ವಾಯುವಿಗೆ ಮನಸ್ಸನ್ನು ಅನುಗ್ರಹಿಸಿರುವನು.

**ಆದ್ದರಿಂದ ನಮ್ಮ ಶರೀರದಲ್ಲಿರುವ ಜೀವನು ವಾಯುವೇ ಆಗಿದ್ದಾನೆ.**

ವಾಯುವು ಸೃಷ್ಟಿಕಾರ್ಯದ ಮೊದಲುಗೊಂಡು ತನ್ನನ್ನು ತೊಡಗಿಸಿಕೊಂಡ ಕಾರಣದಿಂದ ಸರ್ವಜ್ಞನಾಗಿದ್ದಾನೆ ಏಕೆಂದರೆ ತನ್ನ ಮನಸ್ಸಿನಿಂದ ಸಕಲವನ್ನೂ ದಾಖಲಿಸಿಕೊಳ್ಳುತ್ತಿದ್ದಾನೆ. ಬ್ರಹ್ಮಾಂಡವನ್ನು ಒಳಹೊರಗಿನಿಂದಲೂ ವ್ಯಾಪಿಸಿಕೊಂಡು ಸರ್ವವ್ಯಾಪಿಯಾಗಿದ್ದಾನೆ. ಹಾಗೆಯೇ ಸಕಲ ಜೀವರಾಶಿಗಳ ಚಕ್ರವರ್ತಿಯಾಗಿದ್ದಾನೆ. ಏಕೆಂದರೆ ಪ್ರಾಣವಿಲ್ಲದೇ ಜೀವರಾಶಿಗಳು ಬದುಕಲು ಸಾಧ್ಯವಿಲ್ಲ. ಆದ್ದರಿಂದ ವಾಯುವು ಬಹಳ ಶಕ್ತಿಶಾಲಿಯಾದ ವ್ಯಕ್ತಿತ್ವವನ್ನು ಹೊಂದಿದ್ದಾನೆ ಮತ್ತು ದೇಹವನ್ನು ಪಂಚಪ್ರಾಣಗಳಿಂದ ನಿಯಂತ್ರಿಸುತ್ತಿದ್ದಾನೆ.

ವಾಯುವಿನ ವಿವಿಧ ರೀತಿಯ ಶಕ್ತಿಗಳನ್ನು ಋಗ್ವೇದವು ಅಶ್ವಗಳು ಎಂದು ಕರೆಯುತ್ತದೆ. ಸಕಲ ಪವಾಡಗಳ ಹಿಂದಿರುವ ಶಕ್ತಿಯೂ ಅವನೇ. ಸಕಲ ಜಡವಸ್ತುವಿನಲ್ಲೂ ಸಹ ವಾಯುವಿದೆ. ವಿಗ್ರಹದಲ್ಲಿರುವ ಪ್ರಾಣದೇವತೆಯೂ ಸಹ ಅವನೇ. ಅನೇಕ ಪವಾಡಗಳ ಹಿಂದಿರುವ ಶಕ್ತಿ ವಾಯು ಮತ್ತು ವಾಯುವಿನ ಮನಸ್ಸೇ ಆಗಿದೆ. ಆದ್ದರಿಂದ ಪ್ರಾಣದೇವತೆಯನ್ನು ಯಾವುದೇ ಕಾರಣಕ್ಕೂ ಅವಮಾನಿಸಬಾರದು. ಅವರವರ ಮನೆದೇವರನ್ನು ತಿರಸ್ಕರಿಸಬಾರದು.

ಜಡವಸ್ತುವಿನಲ್ಲಿರುವ ಪ್ರಾಣವು ಮಾನವರಂತೆ ತನ್ನಷ್ಟಕ್ಕೆ ತಾನೆ ವರ್ಧಿಸಿಕೊಳ್ಳಲಾಗುವುದಿಲ್ಲ. ಆದರೆ ಮಾನವರು ಪ್ರಾಣವನ್ನು ವರ್ಧಿಸಿಕೊಳ್ಳಬಹುದು, ಬೇರೆಯ ಕಡೆ ಕಳುಹಿಸಬಹುದು. ಪ್ರಾಣಯಾಮವು ನಮ್ಮ ಋಷಿಗಳಿಂದ ಮಾನವರಿಗೆ ಕೊಟ್ಟ ಮಹತ್ತರವಾದ ಕೊಡುಗೆಯಾಗಿದೆ. ಆದಾಗ್ಯೂ ವಾಯುವಿನ ಮಹಿಮೆಯ ಬಗ್ಗೆ ಋಗ್ವೇದವು ಏನು ಹೇಳುತ್ತದೆ ಎಂದು ತಿಳಿಯೋಣ.

ಆತ್ಮಾ ದೇವಾನಾಂ ಭುವನಸ್ಯ ಗರ್ಭೋ ಯಥಾವಶಂ ಚರತಿ ದೇವಾ ಏಷಃ ।
ಘೋಷಾ ಇದಸ್ಯ ಶೃಣ್ವಿರೇ ನ ರೂಪಂ ತಸ್ಮೈ ವಾತಾಯ ಹವಿಷಾ ವಿಧೇಮ ।। (ಋ ೧೦-೧೬೮-೪ ಸಾಭಾ)
"ಈ ವಾಯುವು ಇಂದ್ರಾದಿದೇವತೆಗಳಿಗೂ ಜೀವರೂಪದಲ್ಲಿರುವನು. ಸಮಸ್ತ ಪ್ರಾಣಿವರ್ಗದ **ಶರೀರಮಧ್ಯದಲ್ಲಿ ಗರ್ಭಧಂತೆ ಪ್ರಾಣರೂಪದಿಂದಿರುವನು.** ಇಂತಹ ವಾಯುದೇವನು ತನ್ನಿಷ್ಟ ಬಂದಂತೆ ಸಂಚರಿಸುತ್ತಾನೆ. ಈ ವಾಯುವಿನ ಬೀಸುವ ಶಬ್ದವು ಮಾತ್ರ ಎಲ್ಲರಿಗೂ ಕೇಳಿಸುತ್ತದೆ. ಆದರೆ ಇವನ ರೂಪವನ್ನು ಯಾರೂ ನೋಡಲಾರರು. ಇಂತಹ ಮಹಿಮಾನ್ವಿತನಾದ ವಾಯುವನ್ನು ಹವಿಸ್ಸಿನಿಂದ ಸೇವಿಸುತ್ತೇವೆ."

ವಿಶ್ವಮನಸ್ಸಿನಿಂದ ಉತ್ಪನ್ನರಾದ ಇಂದ್ರಾದಿದೇವತೆಗಳಿಗೆ ಸ್ಥೂಲಸೂಕ್ಷ್ಮರೂಪವಿಲ್ಲ. ಏಕೆಂದರೆ ಮನಸ್ಸಿಗೆ ಯಾವುದೇ ರೂಪವಿಲ್ಲ. ಅವರು ವಾಯುವನ್ನು ಶರೀರದಂತೆ ಧರಿಸಿರುವುದರ ಕಾರಣದಿಂದ ಮಾತ್ರ ನಮ್ಮ ಒಳಗಣ್ಣಿಗೆ ಕಾಣಿಸುತ್ತಾರೆ, ಆದ್ದರಿಂದ ಸೃಷ್ಟಿಯಲ್ಲಿ ಸಕಲ ದೇವತೆಗಳು ಪ್ರಾಣಶರೀರವನ್ನು ಧರಿಸಿದ್ದಾರೆ. ಜೀವ ಮತ್ತು ದೇವತೆಗಳ ವ್ಯತ್ಯಾಸ ಇಷ್ಟೇ; ದೇವತೆಗಳು ಅದಿತಿಯ ಪುತ್ರರು ಮತ್ತು ಜೀವರು ಸೂರ್ಯಸವಿತೃವಿನಿಂದ ರಚಿತವಾದ ಸ್ಥೂಲಶರೀರದ ಪ್ರಾಣ-ಮನಸ್ಸಿನ ಶರೀರ. (ಎನರ್ಜಿ ದೇಹ). ಇಂದ್ರನು ವಾಯುವಿಗೆ ಮನಸ್ಸನ್ನು ಅನುಗ್ರಹಿಸಿದ್ದಾನೆ.

ವಾತ ಆ ವಾತು ಭೇಷಜಂ ಶಂಭು ಮಯೋಭು ನೋ ಹೃದೇ ।
ಪ್ರ ಣ ಆಯೂಂಷಿ ತಾರಿಷತ್ ।। (ಋಗ್ವೇದ ೧೦-೧೮೬-೧ ಸಾಭಾ)
"ನಮ್ಮ ಮನಸ್ಸಿಗೆ ಸಂತೋಷವನ್ನುಂಟುಮಾಡುವುದಕ್ಕೋಸ್ಕರ ವಾಯುವು ರೋಗಶಮನಕಾರಕವಾದುದೂ ಮನಸ್ಸಿಗೆ ಸುಖವನ್ನುಂಟುಮಾಡುವುದೂ ಆದ, ಹಿತಕರವಾದ ಔಷಧಿಯನ್ನು ನಮ್ಮ ಬಳಿಗೆ ಬೀಸುತ್ತ ಬರಲಿ ಮತ್ತು ಆ ವಾಯುವು ನಮ್ಮ ಆಯಸ್ಸನ್ನು ಹೆಚ್ಚಿಸಲಿ ಎಂದರೆ ನಾವು ಬಹುಕಾಲ ಜೀವಿಸುವಂತೆ ಮಾಡಲಿ."

ಉತ ವಾತ ಪಿತಾಸಿ ನ ಉತ ಭ್ರಾತೋತ ನಃ ಸಖಾ ।
ಸ ನೋ ಜೀವಾತವೇ ಕೃಧಿ ।। (ಋಗ್ವೇದ ೧೦-೧೮೬-೨ ಸಾಭಾ)
"ಮತ್ತು ಎಲೈ ವಾಯುವೇ, ನೀನು ನಮಗೆ ತಂದೆಯಾಗಿದ್ದೀಯೆ ಎಂದರೆ ಉತ್ಪಾದಕನಾದ ತಂದೆಯಂತೆ ಹಿತಕಾರಿಯಾಗಿದ್ದೀಯೆ. ಮತ್ತೂ ಸಹೋದರನೂ ಸ್ನೇಹಿತನೂ ಆಗಿದ್ದೀಯೆ. ಇಂತಹ ನೀನು ಬಹುಕಾಲ ಬದುಕಿರುವಂತೆ ಅನುಗ್ರಹಿಸು."

ಯದದೋ ವಾತ ತೇ ಗೃಹೇಽಮೃತಸ್ಯ ನಿಧಿರ್ಹಿತಃ ।
ತತೋ ನೋ ದೇಹಿ ಜೀವಸೇ ।। (ಋಗ್ವೇದ ೧೦-೧೮೬-೩ ಸಾಭಾ)
"ಎಲೈ ವಾಯುವೇ, ನಿನ್ನ ಗೃಹದಲ್ಲಿ ಎಂದರೆ ವಾಸಸ್ಥಾನವಾದ ಸ್ವರ್ಗಲೋಕದಲ್ಲಿ ಯಾವ ಅಮೃತನಿಧಿಯು ಇರುವುದೋ ಆ ಅಮೃತದಿಂದ ಸ್ವಲ್ಪಭಾಗವನ್ನು ತಂದು ನಾವು ಬಹುಕಾಲ ಜೀವಿಸುವುದಕ್ಕಾಗಿ ನಮಗೆ ಕೊಡು."

ಆ ವಾತ ವಾಹಿ ಭೇಷಜಂ ವಿ ವಾತ ವಾಹಿ ಯದ್ರಪಃ ।
ತವಂ ಹಿ ವಿಶ್ವಭೇಷಜೋ ದೇವಾನಾಂ ದೂತ ಈಯಸೇ ।। (ಋಗ್ವೇದ ೧೦-೧೩೭-೩ ಸಾಭಾ)
"ಎಲೈ ವಾಯುವೇ, ವ್ಯಾಧಿಶಮನಮಾಡಬಲ್ಲ ಔಷಧವನ್ನು ನಮ್ಮ ಬಳಿಗೆ ವಹಿಸಿಕೊಂಡು ಬಾ, ಎಲೈ ವಾಯುವೇ, ನಮ್ಮ ಪಾಪವನ್ನು ನಮ್ಮ ಬಳಿಗೆ ಬರದಂತೆ ಹಿಂದಕ್ಕೆ ಅಟ್ಟು. **ನೀನು ದೇವತೆಗಳಿಗೆ ದೂತನಾಗಿಯೂ,** ಸಮಸ್ತ ಸುಖ ಅಥವಾ ಔಷಧಗಳನ್ನು ಒದಗಿಸುವವನಾಗಿಯೂ ಸಂಚರಿಸುತ್ತೀಯೆ."

ಆ ತ್ವಾಗಮಂ ಶಂತಾತಿಭಿರಥೋ ಅರಿಷ್ಟತಾತಿಭಿಃ ।
ದ್ಷಂ ತೇ ಭದ್ರಮಾಭಾರ್ಷಂ ಪರಾ ಯಕ್ಷ್ಮಂ ಸುವಾಮಿ ತೇ ।। (ಋ ೧೦-೧೩೭-೪ ಸಾಭಾ)
"(ವಾಯುವಿನ ವಾಕ್ಯ) ಎಲೈ ಸ್ತೋತೃವೇ, ಸುಖಕರವೂ ಅಹಿಂಸಾತ್ಮಕವೂ ಆದ ರಕ್ಷಣೆಗಳಿಂದ ನಿನ್ನ ಬಳಿಗೆ ಬರುತ್ತಿದ್ದೇನೆ. ನಿನಗೆ ಮಂಗಳವನ್ನೂ, ಬಲವನ್ನೂ ವಹಿಸಿ ತಂದಿದ್ದೇನೆ. ಹಾಗೆಯೇ ನಿನ್ನ ರೋಗವನ್ನು ನಾಶಮಾಡುತ್ತೇನೆ."

ಮೇಲಿನ ಮಂತ್ರಗಳು ಪ್ರಾಣಾಯಾಮದ ಬಗ್ಗೆ ಕುರಿತು ಹೇಳುತ್ತಿದೆ. ನಮ್ಮ ಸುತ್ತಲೂ ಪ್ರಾಣವಾಯುವಿರುವುದು. ನಮ್ಮ ಸೂಕ್ಷ್ಮಶರೀರವು ಪ್ರಾಣವಾಯುವನ್ನು ಉಸಿರಾಡುತ್ತಿದ್ದರೆ ಸ್ಥೂಲಶರೀರವು ಗಾಳಿಯನ್ನು ಉಸಿರಾಡುತ್ತಿದೆ. ವಾಯುವು ೭೨,೦೦೦ ಪ್ರಾಣನಾಡಿಗಳಲ್ಲಿ ಸಂಚರಿಸಿದರೆ ಗಾಳಿಯನ್ನು ಮೂಗಿನ ಹೊಳ್ಳೆಯ ಮೂಲಕ ಶ್ವಾಸಕೋಶದಲ್ಲಿ ತುಂಬಿಕೊಳ್ಳುವೆವು.

ಪ್ರಾಣಾಯಾಮವನ್ನು ನಾನಾ ರೀತಿಯಲ್ಲಿ ಮಾಡಬಹುದು. ಕುಂಡಲಿನಿ ಮಾತೆಯ ಮತ್ತು ದೇವತೆಗಳ ಕುರಿತು ಬೇರೆ ಬೇರೆ ರೀತಿಯಲ್ಲಿ ಪ್ರಾಣಾಯಾಮನ್ನು ಮಾಡಬೇಕಾಗುತ್ತದೆ. ಹಾಗೆಯೆ ಕೇವಲ ಸ್ಥೂಲಶರೀರದ ಆರೋಗ್ಯಕ್ಕೆ ಬೇರೆ ವಿಧವಾದ ಪ್ರಾಣಾಯಾಮವನ್ನು ಮಾಡಬೇಕಾಗುತ್ತದೆ. ಸ್ಥೂಲಶರೀರದ ಆರೋಗ್ಯಕ್ಕೆ ಶ್ವಾಸಕೋಶವನ್ನು ಗಾಳಿಯಿಂದ ತುಂಬಿಕೊಳ್ಳುವುದು ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತದೆ.

ವಾಯುವಿಗೆ ಮೂರು ಸ್ವರೂಪವಿದೆ. ವಾಯುವು ಸರ್ವತ್ರ ವ್ಯಾಪಿಸಿಕೊಂಡಿರುವನು. ಅವನು ದ್ಯಾವಾ-ಪೃಥ್ವಿ-ಅಂತರಿಕ್ಷಗಳ ಆಕಾಶವನ್ನೆಲ್ಲಾ ಒಳಹೊರಗೂ ವ್ಯಾಪಿಸಿಕೊಂಡಿದ್ದಾನೆ.

೧. ಅಂತರಿಕ್ಷ ಲೋಕದಲ್ಲಿ ಕಾಣಿಸುವ ಕುಂಡಲಿನಿ ಸರ್ಪವು ವಾಯುವಿನಿಂದಾಗಿ ಮಿಂಚಿನ ಬಣ್ಣವನ್ನು ಹೊಂದಿದೆ.
೨. ದ್ಯುಲೋಕದಲ್ಲಿರುವ ವಾಯುವನ್ನು ದೇವತೆಗಳು ಶರೀರದಂತೆ ಧರಿಸುತ್ತಾರೆ. ಆದ್ದರಿಂದ ಅವರು ಹಿರಣ್ಯವರ್ಣ ದಿಂದ ಕಂಗೊಳಿಸುವರು. ದೇವತೆಗಳಿಂದಾಗಿ ವಾಯುವೂ ಸಹ ಹಿರಣ್ಯವರ್ಣದಂತೆ ಕಾಣುವುದು.
೩. ಇನ್ನು ಮೂರನೆಯದಾದ ವಾಯುವು ಪೃಥ್ವಿಯ ಮೇಲಿರುವ ಗಾಳಿಯಾಗಿದೆ.

ವಾಯವಿನ ಮೂರು ಸ್ವರೂಪದಲ್ಲೂ ಆನಂದರಸವಿದೆ, ಔಷಧಗುಣವಿದೆ. ಆದ್ದರಿಂದ ನಾವು ದೀರ್ಘವಾಗಿ ಉಸಿರನ್ನು ಒಳಗೆ ಎಳೆದುಕೊಂಡಾಗ ವಾಯುವಿನ ಗುಣಗಳನ್ನು ನಮ್ಮ ಶರೀರವು ತನ್ನಲ್ಲಿ ತುಂಬಿಕೊಳ್ಳವುದು ಮತ್ತು ಉಸಿರನ್ನು ನಿಧಾನವಾಗಿ ಬಿಟ್ಟಾಗ ನಮ್ಮ ಶರೀರದಲ್ಲಿರುವ ರೋಗರುಜಿನಗಳು ಹೊರಹೋಗುವುದು. ಪ್ರತಿನಿತ್ಯ ಸಂದ್ಯಾಕಾಲದಲ್ಲಿ ಪ್ರಾಣಾಯಾಮವನ್ನು ಮಾಡುತ್ತಿದ್ದರೆ ನಮ್ಮಲ್ಲಿರುವ ಖಾಯಿಲೆಗಳು ಗುಣವಾಗುತ್ತವೆ ಮತ್ತು ಬಹುಕಾಲ ಜೀವಿಸುವಂತೆ ವಾಯುವಿನ ಅನುಗ್ರಹವು ಉಂಟಾಗುವುದು. ಆದರೆ ಇದಕ್ಕೆ ಪ್ರಶಸ್ಯವಾದ ಕಾಲ ದ್ವಿಸಂದ್ಯೆಯಾಗಿದೆ.

## ನಮ್ಮ (ಜೀವ) ಮನಸ್ಸಿನ ಮಹಿಮೆ

ಆತ್ಮಾ ತೇ ವಾತೋ ರಜ ಆ ನವೀನೋತ್ಪಶುರ್ನ ಭೂರ್ಣಿರ್ಯವಸೇ ಸಸವಾನ್ ।
ಅಂತರ್ಮಹೀ ಬೃಹತೀ ರೋದಸೀಮೇ ವಿಶ್ವಾ ತೇ ಧಾಮ ವರುಣ ಪ್ರಿಯಾಣಿ ।। (ಋಗ್ವೇದ ೭-೮೭-೨ ಸಾಭಾ)
"ಎಲೈ ವರುಣನೇ, ನಿನ್ನಿಂದ **ಪ್ರೇರಿತವಾದ ವಾಯುವು ಸಕಲ ಜಗತ್ತಿಗೂ ಪ್ರಾಣರೂಪನಾಗಿದ್ದಾನೆ.** ..... ಹುಲ್ಲನ್ನು ಹಾಕಿದೊಡನೆಯೇ ಪಶುವು ಭಾರವನ್ನು ಧರಿಸಲು ಶಕ್ತ್ಯವಾಗುವಂತೆ ಹವಿಸ್ಸನ್ನು ಸ್ವೀಕರಿಸಿದ ವಾಯುವು ಜಗತ್ತನ್ನು ಧರಿಸಲು ಸರ್ವಶಕ್ತನಾಗುತ್ತಾನೆ....."

ಸಂ ಪ್ರೇರತೇ ಅನು ವಾತಸ್ಯ ವಿಷ್ಠಾಂ ಐನಂ ಗಚ್ಛಂತಿ ಸಮನಂ ನ ಯೋಷಾ ।
ತಾಭಿಃ ಸಯುಕ್ಸರಥಂ ದೇವ ಈಯತೇಅಸ್ಯ ವಿಶ್ವಸ್ಯ ಭೂವನಸ್ಯ ರಾಜಾ ।। (ಋಗ್ವೇದ ೧೦-೧೬೮-೨ ಸಾಭಾ)
"ಸ್ಥಿರವಾಗಿ ನಿಂತಿರುವ ವೃಕ್ಷಾದಿಗಳು ವಾಯುವಿನ ಗತಿಯನ್ನನುಸರಿಸಿ ತಾವೂ ಕಂಪಿಸಿತ್ತವೆ. ಯುದ್ಧ ಭೂಮಿಗೆ ಅಶ್ವಗಳು ಆತುರದಿಂದ ಹೋಗುವಂತೆ ಈ ವಾಯುವನ್ನು ಅವನ ಅಶ್ವಗಳು ಸಮೀಪಿಸುತ್ತವೆ. ತಾವಾಗಿಯೇ ಹೂಡಲ್ಪಡುವ ರಥವನ್ನು ಹತ್ತಿ **ಪ್ರಕಾಶಮಾನನಾದ ಈ ವಾಯುವು (ಸರ್ವತ್ರ) ಸಂಚರಿಸುತ್ತಾನೆ ಮತ್ತು ಸಮಸ್ತ ಜಗತ್ತಿಗೂ ಸ್ವಾಮಿಯಾಗಿದ್ದಾನೆ.** ಈ ವಾಯುವನ್ನು ತರುಲತಾದಿಗಳು ಸ್ವಾಗತಿಸುತ್ತವೆ ಮತ್ತು ರಥದಲ್ಲಿ ಕುಳಿತು ವಾಯುವು ಸಂಚರಿಸುತ್ತಾನೆ."

ಬ್ರಹ್ಮಾಂಡವನ್ನು ಭಗವಂತನು ನಿಯಂತ್ರಿಸುತ್ತಿರುವನು, ಜೀವನನ್ನು ನಿಯಂತ್ರಿಸುತ್ತಿರುವವನು ಸೂರ್ಯ-ಸವಿತೃವಾಗಿದ್ದಾನೆ. ಜೀವನು ತನ್ನ ದೇವರನ್ನು (ಮಾನಸಿಕವಾಗಿ ಅಥವಾ ವಿಗ್ರಹಾರಾಧನೆಯ ಪ್ರಾಣದೇವತೆಗಳನ್ನು) ತಾನೆ ಸೃಷ್ಟಿಸಿಕೊಳ್ಳುತ್ತಾನೆ ಆದರೆ ಋಗ್ವೇದ ದೇವತೆಗಳು ಅದಿತಿಯ ಪುತ್ರರಾಗಿದ್ದಾರೆ.

ನಮ್ಮೊಳಗಿರುವ ವಾಯುವಿನ ವ್ಯಕ್ತಿತ್ವವನ್ನೇ ನಾವು 'ನಾನು' ಎಂದು ಭಾವಿಸಿರುವೆವು. ಅಂದರೆ ಪ್ರಾಣದಲ್ಲಿ ಇಂದ್ರಿಯಗಳ ಮುಖಾಂತರ ಮುದ್ರಿತವಾದ ಸಂಗತಿಗಳೇ ನಮ್ಮ ಮನಸ್ಸಾಗಿದೆ. ನಾನು ಮತ್ತು ನನ್ನ ವ್ಯಕ್ತಿತ್ವ ಎಂದು ಯಾವುದನ್ನು ನಾವು ತಿಳಿದಿದ್ದೇವೆಯೋ ಅದು ನಿಜವಾಗಿಯೂ ನಮ್ಮ ಶರೀರದಲ್ಲಿರುವ ವಾಯುವಿನ ವ್ಯಕ್ತಿತ್ವವಾಗಿದೆ.

ಪ್ರತಿಯೊಬ್ಬರ ಪಿಂಡಾಂಡದ ವ್ಯಕಿತ್ವವೂ ಬೇರೆ ಬೇರೆಯಾಗಿ ಪ್ರಾಣ–ಮನಸ್ಸಿನದಾಗಿದೆ. ಆತ್ಮನಾದ ನಾನು ಪ್ರಾಣ–ಮನಸ್ಸಿಗಿಂತಲೂ ಬೇರೆಯವನೇ ಆಗಿದ್ದೇನೆ.

ವಾಯುವು ಸೃಷ್ಟಿಯ ಸಕಲ ವಸ್ತುಗಳ ಮೇಲೆ ತನ್ನ ಅಧಿಪತ್ಯವನ್ನು ಸ್ಥಾಪಿಸಿರುವನು. ಏಕೆಂದರೆ ವಾಯುವಿಲ್ಲದೇ ಸೃಷ್ಟಿಯಿಲ್ಲ. ವಾಯುವು ಒಂದು ರೀತಿ ವಿದ್ಯುತ್‌ನಂತೆ. ಹೇಗೆ ವಿದ್ಯುತ್ ಇಲ್ಲದೇ ಯಾವ ಉಪಕರಣಗಳೂ ಕೆಲಸಮಾಡುವುದಿಲ್ಲವೋ ಹಾಗೆ ವಾಯುವಿಲ್ಲದೆ ಸೃಷ್ಟಿಯೇ ಇಲ್ಲ. ಪ್ರಾಣವು ನಮ್ಮ ಶರೀರದಿಂದ ಹೋಗಲು ಪ್ರಯತ್ನಿಸಿದರೆ ಸಕಲ ಇಂದ್ರಿಯಗಳೂ ಶರೀರವೂ ನಿಃಶಕ್ತಿಯನ್ನು ಹೊಂದಿ ನಿಶ್ಚಲವಾಗುತ್ತದೆ. ಆದ್ದರಿಂದ ನಮ್ಮ ಶರೀರದ ಸಕಲ ಕೆಲಸವು ಪ್ರಾಣದ ಮೇಲೆಯೇ ಅಲಂಬಿತವಾಗಿದೆ.

ನಮ್ಮ ಸ್ಥೂಲಶರೀರವನ್ನು ನಿಯಂತ್ರಿಸುತ್ತಿರುವ ಮನಸ್ಸೇ ಅಸುರಶಕ್ತಿಯ ಅಂಧಕಾರಕ್ಕೆ ಸಿಲುಕಿರುವುದು. ಪ್ರಾಣ–ಮನಸ್ಸೇ ನಮ್ಮ ಶರೀರದ ಯಜಮಾನನಾಗಿದ್ದಾನೆ. ನಮ್ಮ ಇಂದ್ರಿಯಗಳೆಲ್ಲವೂ ಪ್ರಾಣ–ಮನಸ್ಸಿನ ಆಧೀನವಾಗಿದೆ. ನಮ್ಮ ಪ್ರಾಣ–ಮನಸ್ಸು ಯಾವ ಸುಖ–ದುಃಖಗಳನ್ನು ಅನುಭವಿಸುತ್ತಿರುವುದೋ ಅದನ್ನು ಜೀವನು ತಾನೇ ಅನುಭವಿಸುತ್ತಿದ್ದೇನೆಂದು ತಿಳಿಯುತ್ತಾನೆ ಮತ್ತು ಜೀವನ ಮನಸ್ಸಿನಲ್ಲಿ ಮುದ್ರಿತವಾಗುತ್ತದೆ. ನಾವೆಲ್ಲರೂ ಸರ್ವಶಕ್ತನಾದ ಮನಸ್ಸಿನ ಅಂದರೆ ಪರೋಕ್ಷವಾಗಿ ವಾಯುವಿನ ಆಧೀನವಾಗಿದ್ದೇವೆ.

ಆದ್ದರಿಂದ ನಾವು ಮಾಡುವ ಯಾವುದೇ ಕಾರ್ಯಗಳು ಪ್ರಾಣ–ಮನಸ್ಸಿನ ಮೂಲಕವೇ ಆಗುತ್ತದೆ. ನಾವು ಮಾಡುವ ಜಪ, ತಪ, ಯೋಗಾದಿಗಳನ್ನು ಪ್ರಾಣ–ಮನಸ್ಸೇ ಮಾಡುತ್ತಿದೆ. ಸಿದ್ಧಿಪುರುಷರು, ಯೋಗಿಗಳು ಮತ್ತು ಸಾಧಕರು ಮಾಡುವ ಸಕಲ ಪವಾಡಗಳ ಹಿಂದೆ ಜೀವನ ಪ್ರಾಣಶಕ್ತಿಯ ಮತ್ತು ಮಾನಸಿಕಶಕ್ತಿಯ ಕೈವಾಡವೇ ಇದೆ. ಆದ್ದರಿಂದ ನಾವು ಮಾಡುವ ವಿವಿಧ ರೀತಿಯ ಆರಾಧನೆಗೆ ವಾಯುವೇ ಫಲವನ್ನು ಕೊಡುತ್ತದೆ. ಪ್ರಾಣ–ಮನಸ್ಸಿನ ಮುಖಾಂತರ ಮಾಡುವ ಸಾಧನೆಗಳಿಗೆ ಮೋಕ್ಷ ಅಥವಾ ಅಮರತ್ವವು ಲಭಿಸುವುದಿಲ್ಲ. ನಾವು ಸಪ್ತಸ್ವರ್ಗಗಳಿಗೆ ಹೋಗಬಹುದು ಆದರೆ ಅಮರತ್ವವನ್ನು ಪಡೆಯಲು ಸಾಧ್ಯವಿಲ್ಲ. ಈಗ ವಿವಿಧ ರೀತಿಯ ಜಪತಪಗಳ ಬಗ್ಗೆ ನೋಡೋಣ.

- ಅನಾದಿಕಾಲದಿಂದಲೂ ಪ್ರಪಂಚದಲ್ಲೆಲ್ಲಾ ಕಾಡು ಜನರು ಮತ್ತು ಆದಿವಾಸಿಗಳು ನರ್ತನ, ಡೋಲು ಇತ್ಯಾದಿ ವಾದ್ಯಗಳನ್ನು ಉಚ್ಚಸ್ವರದಿಂದ ನುಡಿಸಿ ಸ್ಥೂಲಶರೀರ ಮತ್ತು ಮನಸ್ಸಿನಲ್ಲಿ ದೇವರ ಆರಾಧನೆ ಮಾಡಿ ದೈವವನ್ನು ಆವಾಹನೆಮಾಡಿಕೊಳ್ಳುತ್ತಿದ್ದರು.
- ಕೆಲವರು ವಿಗ್ರಹಾರಾಧನೆಯ ಮುಖಾಂತರ ಆರಾಧನೆಯನ್ನು ಮಾಡುತ್ತಾರೆ. ಅದು ವಾಯುವಿನ ವ್ಯಕ್ತಿತ್ವವೇ ಆಗಿದೆ.
- ಕೆಲವರು ಸೈನಾಗಾಗ್, ಚರ್ಚ್, ಮಸೀದಿಗಳಲ್ಲಿ ಪ್ರಾರ್ಥನೆಯನ್ನು ಮಾಡುತ್ತಾರೆ. ಅವರೆಲ್ಲರೂ ತಮ್ಮ ಮನಸ್ಸಿನ ಮುಖಾಂತರವೇ ಪ್ರಾಥನೆ ಮಾಡುತ್ತಿರುವರು ಆದ್ದರಿಂದ ವಾಯುವೇ ಫಲವನ್ನು ಕೊಡುತ್ತದೆ.
- ಋಷಿಗಳು, ಯೋಗಿಗಳು ಜಪತಪಗಳನ್ನು ಮತ್ತು ಕೆಲವರು ಭಕ್ತಿಯೋಗ, ಕರ್ಮಯೋಗ, ಜ್ಞಾನಯೋಗ, ಪ್ರಾಣಾಯಾಮ ಮತ್ತು ಯೋಗಾಸನ ಇತ್ಯಾದಿಗಳನ್ನು ತಮ್ಮ ಮನಸ್ಸಿನ ಮುಖಾಂತರವೇ ಮಾಡುತ್ತಿರುವರು.
- ಕೆಲವರು ಸಾಧನೆಯಲ್ಲಿ ತಮ್ಮ ಮನಸ್ಸನ್ನು ಬೃಹದಾಕಾರವಾಗಿ ಮಾಡಿಕೊಂಡು ಆಕಾಶವನ್ನೆಲ್ಲಾ ವ್ಯಾಪಿಸಿಕೊಳ್ಳುವಂತೆ ವಿಸ್ತರಿಸುವರು. ಇವರೂ ಸಹ ತಮ್ಮ ಮನಸ್ಸಿನ ಮುಖಾಂತರವೇ ಸಾಧನೆಯನ್ನು ಮಾಡುವರು.
- ಕೆಲವರು 'ಸಾಕ್ಷೀಸ್ವರೂಪನು ನಾನು' ಎಂದು ತಮ್ಮ ಸಾಧನೆಯನ್ನು ಮನಸ್ಸಿನ ಮುಖಾಂತರವೇ ಮಾಡುತ್ತಾರೆ.
- ಕೆಲವು ಯೋಗಿಗಳು ಧ್ಯಾನದಲ್ಲಿ ತಮ್ಮನ್ನೇ ತಾವು ಮರೆತುಹೋಗುತ್ತಾರೆ. ಆ ಮರೆಯುವಿಕೆಯೇ ಅಂತಿಮ ಸತ್ಯವೆಂದು ಭಾವಿಸುತ್ತಾರೆ. ಇಲ್ಲಿ ಮರೆತುಹೋಗುವುದು ಮನಸ್ಸೇ ಆಗಿದೆ. ಮನಸ್ಸು ಸ್ತಂಭೀಭೂತವಾಗುತ್ತದೆ.
- ಉಪನಿಷತ್‌ಗಳ ಪ್ರಕಾರ ಆತ್ಮನು ಅತ್ಯಂತ ಸೂಕ್ಷ್ಮರೂಪನು. ಅವನು ಅಣುವಿನಂತಿರುವನು ಮತ್ತು ಆತ್ಮನು ಪರಬ್ರಹ್ಮನ ಸ್ವರೂಪನು ಎಂದು ಭಾವಿಸಿ ಅವರು ತಮ್ಮ ಮನಸ್ಸಿನ ಮುಖಾಂತರವೇ ಸಾಧನೆಯನ್ನು ಮಾಡುತ್ತಾರೆ.
- ಬೌದ್ಧರು ಪ್ರಾಣಾಯಾಮದ ವಿಧಾನವಾದ 'ವಿಪಸನಾ' ಪದ್ಧತಿಯಿಂದ ಮನಸ್ಸಿನ ಆಳದೊಳಗೆ ಇಳಿಯುತ್ತಾರೆ. ಈ ವಿಧಾನದಲ್ಲಿ ಮನಸ್ಸು ಲಯವಾಗಿ ಶೂನ್ಯಸ್ಥಿತಿಯನ್ನು ತಲುಪುತ್ತದೆ. ಈ ಸಾಧನೆಯನ್ನು ಪ್ರಾಣ–ಮನಸ್ಸಿನಿಂದಲೇ ಪ್ರಾಣಮನಸ್ಸಿನ ಆಳಕ್ಕೆ ಇಳಿಯುತ್ತಾರೆ ಮತ್ತು ಅದರಿಂದ ಶೂನ್ಯಸ್ಥಿತಿಯನ್ನು ತಲುಪುತ್ತಾರೆ.

- ಅದ್ವೈತಿಗಳೂ ಸಹ ಬೇರೆಯದೇ ಆದ ಮಾರ್ಗದಿಂದ ಪ್ರಾಣ–ಮನಸ್ಸನ್ನು ತಮ್ಮ ಹತೋಟಿಗೆ ತಂದುಕೊಂಡು ಈ ಶೂನ್ಯಸ್ಥಿತಿಯನ್ನು ಅಥವಾ ಸಾಕ್ಷಿಸ್ವರೂಪವನ್ನು ಪಡೆಯುತ್ತಾರೆ. ಈ ಸ್ಥಿತಿಯನ್ನು ಅವರು ಪರಬ್ರಹ್ಮನಲ್ಲಿ ಲಯವಾಗುವುದೆಂದು ಭಾವಿಸುತ್ತಾರೆ. (ಆದರೆ ನಮ್ಮ ಸುತ್ತಲೂ ವೃತ್ರಾಸುರನ ಕೋಟೆಯಿದೆ..)
- ಉಪಾಸಕರು ಸಾಮಾನ್ಯವಾಗಿ ವಿಗ್ರಹಮೂರ್ತಿ ಅಥವಾ ದೇವರ ಚಿತ್ರಪಟವನ್ನು ನೋಡಿ ತಮ್ಮ ಮನಃಪಟಲದಲ್ಲಿ ಆಕಾರವನ್ನು ಧರಿಸಿ ಪೂಜಾಜಪಧ್ಯಾನಾದಿಗಳನ್ನು ಮಾಡುವರು. ಮನಸ್ಸು ಮತ್ತು ಪ್ರಾಣವು ಒಂದೇ ಆಗಿರುವುದರಿಂದ ಮನಸ್ಸಿನಲ್ಲಿ ಕ್ರಮೇಣ ಪ್ರಕಟವಾಗುವ ದೇವರು ಪ್ರಾಣದೇವರೇ ಆಗಿದ್ದಾರೆ. ಬಹಳಷ್ಟು ಸಾಧಕರು ಇಂತಹ ಪ್ರಾಣದೇವರನ್ನು ಸಾಕ್ಷಾತ್ಕರಿಸಿಕಂಡು ತಾವು ನಿಜವಾದ ಭಗವಂತನ ಅನುಗ್ರಹವನ್ನು ಪಡೆದುಕೊಂಡಿರುವೆವೆಂದು ಸಂತೃಪ್ರ ಭಾವನೆಯನ್ನು ಹೊಂದಿರುವರು.

ಈ ಮೂರು ಆವರಣವಾದ ಸ್ಥೂಲಶರೀರ, ಪ್ರಾಣ–ಮನಸ್ಸಿನ ಶರೀರವಾದ ಜೀವನ ಹೊರತು ಇತರ ಒಳ ಶರೀರದಲ್ಲಿ ಅಂದರೆ ವಿರಾಟ್ ಪುರುಷನ ಪ್ರತಿಕೃತಿಯಾದ ಪುರುಷ ಶರೀರದಲ್ಲಿ ದೇವತೆಗಳು ಅಸುರರು ಮತ್ತು ಕುಂಡಲಿನಿ ಮಾತೆಯರಿರುವರು. ಪುರುಷನ ಶರೀರದಲ್ಲಿ ಸಾಧನೆಯನ್ನು ಯಾರೂ ಮಾಡಿಲ್ಲ. ಏಕೆಂದರೆ ನಮ್ಮಲ್ಲಿರುವ ಪುರುಷನ ಶರೀರವು ವೃತ್ರಾಸುರನ ಕೋಟೆಯಿಂದ ಆವೃತವಾಗಿದೆ.

ಈಗ ನಮ್ಮ ಮುಂದಿರುವ ಪ್ರಶ್ನೆ ಏನೆಂದರೆ;
**"**ಹಾಗಾದರೆ ನಾವು ಆಧ್ಯಾತ್ಮಿಕವಾಗಿ ಮುಂದುವರೆಯುತ್ತಿರುವೆವೆಂದು ಹೇಗೆ ತಿಳಿಯುವುದು?"

ನಮ್ಮ ಶರೀರದಲ್ಲಿ ಬೃಹಸ್ಪತಿ, ಬ್ರಹ್ಮಣಸ್ಪತಿ, ಸರಸ್ವತಿ ಹಾಗು ಮರುತ್ಗಣ ದೇವತೆಗಳುಗಳು ಜಾಗೃತವಾದ ಮೇಲೆಯೇ ನಾವು ಸಾಧನೆಯಲ್ಲಿ ಮುಂದುವರೆಯುತ್ತಿರುವವೆಂದು ಭಾವಿಸಬಹುದು. ಮರುತ್ಗಣಗಳ ಕಾರಣದಿಂದ ನಮ್ಮಲ್ಲಿ ಅಗ್ನಿ–ವಾಯುಗಳು ತೀವ್ರವಾಗಿ ಜಾಗೃತವಾಗುತ್ತಾರೆ. ಆನಂತರ ಒಬ್ಬೊಬ್ಬರಾಗಿ ಸಕಲ ದೇವತೆಗಳೂ ಮತ್ತು ಸೂರ್ಯ–ಸವಿತೃ ದೇವತೆಯು ಜಾಗೃತವಾಗುತ್ತಾರೆ. ದೇವತೆಗಳೇ ನಮ್ಮ ಸಾಧನೆಯನ್ನು ಅಂತಿಮ ಘಟ್ಟಕ್ಕೆ ತೆಗೆದುಕೊಂಡು ಹೋಗುತ್ತಾರೆ. ಋಗ್ವೇದದ ಈ ಮಂತ್ರವನ್ನು ನೋಡಿ.

ತ್ರ್ಯರ್ಯಮಾ ಮನುಷೋ ದೇವತಾತಾ ತ್ರೀ ರೋಚನಾ ದಿವ್ಯಾ ಧಾರಯಂತ ൧
ಅರ್ಚಂತಿ ತ್ವಾ ಮರುತಃ ಪೂತದಕ್ಷಾಸ್ತ್ವಮೇಷಾಮೃಷಿರಿಂದ್ರಾಸಿ ಧೀಃ ൧൧ (ಋಗ್ವೇದ ೫–೨೯–൧ ಸಾಭಾ)
"ಮನುವಿಗೆ (ಮಾನವನಿಗೆ) ಸಂಬಂಧಿಸಿದುದೂ, ದೇವತೆಗಳನ್ನು ಪೂಜಿಸತಕ್ಕದ್ದೂ ಆದ ಯಜ್ಞದಲ್ಲಿ ಮೂರು ತೇಜಸ್ಸುಗಳು ಸ್ಥಿತವಾಗಿವೆ. **ಮರುತ್ತುಗಳು ಅಂತರಿಕ್ಷಸ್ಥವಾದುದೂ ಅಗ್ನಿವಾಯ್ವಾದಿತ್ಯರೂಪವಾದುದೂ ಆದ ಮೂರು ತೇಜಃಪುಂಜಗಳನ್ನು ಧರಿಸಿದ್ದಾರೆ**. ಎಲೈ ಇಂದ್ರನೇ, ಪರಿಶುದ್ಧವಾದ ಬಲವುಳ್ಳ ಮರುತ್ತುಗಳು ನಿನ್ನನ್ನು ಪೂಜಿಸುತ್ತಾರೆ. ಆ ಮರುತ್ತುಗಳಿಗೆ ನೀನೇ ಪ್ರಜ್ಞಾವಂತನಾದ ಋಷಿಯಾಗಿದ್ದೀಯೆ."

ಯದ್ಗಾಯತ್ರೇ ಅಧಿ ಗಾಯತ್ರಮಾಹಿತಂ ತ್ರೈಷ್ಟುಭಾದ್ವಾ ತ್ರೈಷ್ಟುಭ್ಯಂ ನಿರತಕ್ಷತ ൧
ಯದ್ವಾ ಜಗಜ್ಜಗತ್ಯಾಹಿತಂ ಪದಂ ಯ ಇತ್ತದ್ವಿದುಸ್ತೇಅಮೃತತ್ವಮಾನುಶುಃ ൧൧ (ಋಗ್ವೇದ ൧–൧೬೪–೨೩ ಸಾ ಭಾ)
"ಪೃಥ್ವಿಯ ಮೇಲೆ ಅಗ್ನಿಯು ಸ್ಥಾಪಿತವಾಗಿರುವ ಯಾವ ಸತ್ಯವುಂಟೊ, ಅಂತರಿಕ್ಷದಲ್ಲಿ ವಾಯುವಿನ ಸ್ಥಾನವನ್ನು ದೇವತೆಗಳು ನಿರ್ಮಿಸಿರುವ ಯಾವ ಸತ್ಯವುಂಟೋ, ಅಥವಾ ದ್ಯುಲೋಕದಲ್ಲಿ ಆದಿತ್ಯನ ಸ್ಥಾನವು ಸ್ಥಾಪಿತವಾಗಿರುವ ಯಾವ ಸತ್ಯವುಂಟೊ, ಇದೆಲ್ಲವನ್ನೂ ತನ್ನ ಜ್ಞಾನದಿಂದ ತಿಳಿಯುವ ಪುರುಷನು ಮರಣರಹಿತವಾದ ಸ್ಥಾನವನ್ನು ಪಡೆಯುತ್ತಾನೆ."

(ಇಲ್ಲಿ ನನ್ನ ಸಾಧನೆಯ ಮಹತ್ವವನ್ನು ಓದುಗರು ಗಮನಿಸಬೇಕು. ನಾನು ಯಾವುದೇ ಸಿದ್ಧಾಂತವನ್ನು ಅನುಸರಿಸದೇ, ಯಾವುದೇ ಸ್ವರೂಪವನ್ನು ಮನಸ್ಸಿನಲ್ಲಿ ನೋಡದೇ, ಗ್ರಹಿಸದೇ ಕೇವಲ ಕುತೂಹಲದ ಕಾರಣಕ್ಕೆ ಮಾಡಿದ ಸಾಧನೆಯಿಂದ ൧೯೯೦ರಲ್ಲಿ ಸರಸ್ವತೀ–ಮರುದ್ಗಣಗಳ ಜಾಗೃತಿಯಾಯಿತು. ಆನಂತರ ೨೦൧൧ರಲ್ಲಿ ತಾನಾಗೆ ಭಗವಂತನೂ, ದೇವತೆಗಳೂ ಮತ್ತು ಕುಂಡಲಿನಿ ಮಾತೆಯ ದರ್ಶನವನ್ನು ಅನುಗ್ರಹಿಸಿರುವರು. ಭಗವಂತನ ಮತ್ತು ದೇವತೆಗಳ ದರ್ಶನವಾದ ನಂತರವೇ ಸಕಲ ಸೃಷ್ಟಿರಹಸ್ಯವು ತಾನಾಗೇ ತಿಳಿಯಿತು.)

ಆದ್ದರಿಂದ ಎಲ್ಲರ ಸಾಧನೆ ಮತ್ತು ಪ್ರಾರ್ಥನೆಗೆ ಪ್ರಾಣ–ಮನಸ್ಸಿನ ವಾಯುವೇ ಫಲವನ್ನು ಕೊಡುತ್ತಿದೆ. ಯಾರೂ ಈ ವಾಯುವಿನ ಅಧಿಪತ್ಯದಿಂದ ತಪ್ಪಿಸಿಕೊಳ್ಳಲಾಗುವುದಿಲ್ಲ. ವಾಯುವಿನ ಮಹಿಮೆಯೇ ಸಾಧಕರ ಪ್ರಾಣ–

ಮನಸ್ಸಿನಲ್ಲಿ ಇಳಿಯುತ್ತದೆ ಮತ್ತು ಅವರು ಸಕಲ ಪವಾಡಗಳನ್ನು ಮಾಡುತ್ತಾರೆ. ಆದ್ದರಿಂದ ಅಜ್ಞಾನ ಮತ್ತು ಅಂಧಕಾರಕ್ಕೆ ಒಳಗಾದ ಮನಸ್ಸು ಮಾಡುವ ಎಲ್ಲ ಸಾಧನೆಯು ನಮಗೆ ಅಮರತ್ವವನ್ನು ನೀಡುವುದಿಲ್ಲ. ನಮ್ಮ ಪ್ರಾಣ–ಮನಸ್ಸೇ ವೈಕುಂಠ, ಕೈಲಾಸ ಇತ್ಯಾದಿಗಳನ್ನು ಸೃಷ್ಟಿಸಿಕೊಳ್ಳುತ್ತದೆ. ಋಷಿಗಳು ಮತ್ತು ಯೋಗಿಗಳು ಮರಣಾನಂತರ ಸಪ್ತಮಸ್ವರ್ಗಕ್ಕೆ ಹೋಗಿ, ಅಲ್ಲಿ ತಾವು ಸೃಷ್ಟಿಸಿಕೊಂಡಿರುವ ಲೋಕದಲ್ಲಿರುತ್ತಾರೆ. ಕೆಲವು ಕಾಲಾನಂತರ ಅವರು ಮತ್ತೆ ಭೂಲೋಕಕ್ಕೆ ಬರಬೇಕಾಗುತ್ತದೆ.

## ವಿಗ್ರಹಾರಾಧನೆ:

ವಿಗ್ರಹಾರಾಧನೆಯು ನಿಜವಾಗಿಯೂ ಪ್ರಾಣದೇವತೆಯನ್ನು ಆರಾಧಿಸುವ ವಿಧಾನವಾಗಿದೆ. ಪ್ರಾಣವನ್ನು ವಿಗ್ರಹದಲ್ಲಿ ಸ್ಥಾಪಿಸಿ ಆರಾಧಿಸುವ ವಿಧಾನವನ್ನು ಋಷಿಗಳೂ ಸೇರಿ ನಮ್ಮ ಪೂರ್ವಜರು ಆಚರಣೆಗೆ ತಂದರು. ವಿಗ್ರಹಾರಾಧನೆಯನ್ನು ಅರ್ಥ ಮಾಡಿಕೊಳ್ಳುವ ಮೊದಲು ಪ್ರಾಣದೇವತೆಯ ಮಹಿಮೆಯನ್ನು ತಿಳಿದುಕೊಳ್ಳೋಣ.

ಭಾರತದಲ್ಲಿ ಜನರು ವಿವಿಧ ವಿಗ್ರಹಗಳಲ್ಲಿ ಪ್ರಾಣವನ್ನು ಪ್ರತಿಷ್ಟಾಪಿಸಿ ವಿಗ್ರಹಾರಾಧನೆಯನ್ನು ಮಾಡುತ್ತಿದ್ದಾರೆ. ಯಾವಾಗ ವಿಗ್ರಹವನ್ನು ಋಷಿಗಳು ಅಥವಾ ವೈದಿಕಬ್ರಾಹ್ಮಣರು ಪ್ರಾಣಪ್ರತಿಷ್ಟಾಪನೆ ಮಾಡಿ, ಯಾವ ದೇವತೆಯನ್ನು ಋಗ್ವೇದ ಮಂತ್ರ ಅಥವಾ ಇತರ ಮಂತ್ರಗಳಿಂದ ಪ್ರತಿನಿತ್ಯ ಪೂಜಿಸುವರೋ ಆಗ ವಿಗ್ರಹದಲ್ಲಿರುವ ಪ್ರಾಣವು ನಿಧಾನವಾಗಿ ವೃಧ್ಧಿಸಿಕೊಂಡು, ವ್ಯಕ್ತಿತ್ವವನ್ನು ಪಡೆದುಕೊಳ್ಳುತ್ತದೆ. ಪ್ರತಿನಿತ್ಯ ಜನರು ದೇವಾಲಯಕ್ಕೆ ಬಂದು ಭಕ್ತಿಪೂರ್ವಕವಾಗಿ ಆರಾಧಿಸುವರೋ ಆಗ ದೇವತೆಯು ವ್ಯಕ್ತಿತ್ವವನ್ನು ಪಡೆದುಕೊಂಡು ಆ ಪ್ರಾಣದೇವತೆಯು ನಿಗ್ರಹಾನುಗ್ರಹ ಶಕ್ತಿಯನ್ನು ಪಡೆದುಕೊಂಡು ಎಲ್ಲರನ್ನೂ ಅನುಗ್ರಹಿಸುತ್ತದೆ.

ವಿಗ್ರಹದೇವತೆಗಳು ತಮ್ಮ ಪ್ರಾಣ ಮತ್ತು ಮನಸ್ಸಿನ ಮುಖಾಂತರವೇ ಎಲ್ಲವನ್ನೂ ಗ್ರಹಿಸುತ್ತಾರೆ, ವಿಗ್ರಹದೇವತೆಗಳು ನಿದಾನವಾಗಿ ರೂಪವನ್ನು ಮತ್ತು ಪ್ರಾಣಶರೀರವನ್ನು ಪಡೆದುಕೊಳ್ಳುತ್ತಾರೆ. ಆದರೆ ಈ ಪ್ರಾಣಶರೀರವು ಸೂಕ್ಷ್ಮಶರೀರವಲ್ಲ, ಇದರಲ್ಲಿ ದೇವತೆಗಳು ಇರುವುದಿಲ್ಲ. ಈ ವಿಗ್ರಹದೇವತೆಗಳು ಕೇವಲ ಪ್ರಾಣ ಮತ್ತು ಮನಸ್ಸನ್ನು ಹೊಂದಿದ್ದಾರೆ.

ನಾವು ಲಿಂಗವನ್ನು ಸ್ಥಾಪಿಸಿದ್ದರೆ ಲಿಂಗರೂಪದಲ್ಲಿ ವಾಯುವು ನಮ್ಮನ್ನು ಆ ರೂಪದಲ್ಲಿಯೇ ಅನುಗ್ರಹಿಸುತ್ತದೆ. ರಾಮ, ಕ್ರಿಷ್ಣರ ರೂಪದಲ್ಲಿ ವಿಗ್ರಹವನ್ನು ಆರಾಧಿಸಿದರೆ; ವಿಗ್ರಹವು ಆ ವ್ಯಕ್ತಿತ್ವವನ್ನು ಪಡೆದು ಆ ರೂಪದಲ್ಲಿಯೇ ಪ್ರಕಟವಾಗಿ ನಮ್ಮನ್ನು ಅನುಗ್ರಹಿಸುತ್ತದೆ. ಆಂಜನೇಯನ ರೂಪದಲ್ಲಿರುವ ವಿಗ್ರಹವನ್ನು ರಚಿಸಿ ಪ್ರಾಣಪ್ರತಿಷ್ಟಾಪನೆ ಮಾಡಿದರೆ ಆ ವಿಗ್ರಹವು ಆಂಜನೇಯನ ರೂಪವನ್ನು ಪಡೆದುಕೊಂಡು ನಮ್ಮನ್ನು ಅನುಗ್ರಹಿಸುತ್ತಾನೆ. ಇವೆಲ್ಲವೂ ಕೇವಲ ಪ್ರಾಣಶರೀರಗಳಾಗಿವೆ.

ಬೇರೆ ಬೇರೆ ರೀತಿಯ ವಿಗ್ರಹಗಳು ಅದರದೇ ರೂಪವನ್ನು ಪಡೆದ ವಾಯುವು ತನ್ನ ಭಕ್ತರನ್ನು ಅನುಗ್ರಹಿಸುತ್ತಾನೆ. ಸೌಮ್ಯರೂಪದಲ್ಲಿರುವ ಮೂರ್ತಿಯು ಭಕ್ತರನ್ನು ಅನುಗ್ರಹಿಸಿದಾಗ ಸೌಮ್ಯರೂಪದಲ್ಲಿಯೇ ಇರುತ್ತದೆ. ದೇವಾಲಯದ ಸ್ಥಳ ಬದಲಾವಣೆ ಅಥವಾ ಪೂಜಾವಿದಿ ವಿಧಾನಗಳಲ್ಲಿ ಪರಿವರ್ತನೆ ಮಾಡಿದರೆ, ಅದು ವಿಗ್ರಹಮೂರ್ತಿಗೆ ಇಷ್ಟವಿಲ್ಲದಿದ್ದರೆ ಅನೇಕ ತೊಂದರೆಗಳನ್ನು ಮಾಡುತ್ತದೆ. ಕೆಲವು ಸಾರಿ ಪ್ರಾಣವನ್ನೂ ಸಹ ಬಲಿಪಡೆಯುವುದು. ಅದರಲ್ಲೂ ಮುಖ್ಯವಾಗಿ ರೌದ್ರರೂಪದಲ್ಲಿರುವ ವಿಗ್ರಹದೇವತೆಯು ಬಹಳ ಶೀಘ್ರವಾಗಿ ಅನುಗ್ರಹವನ್ನು ಕೊಡುವುದರ ಜೊತೆಗೆ ಶೀಘ್ರವಾಗಿ ಕೋಪವನ್ನೂ ಸಹ ಪ್ರದರ್ಶಿಸುತ್ತದೆ. ಆದ್ದರಿಂದ ರೌದ್ರರೂಪದಲ್ಲಿರುವ ಪ್ರಾಣದೇವತೆಯನ್ನು ಪೂಜಿಸುವಾಗ ಬಹಳ ನಮ್ರತೆಯಿಂದ ಪೂಜಿಸಬೇಕಾಗುತ್ತದೆ. ರೌದ್ರರೂಪದಲ್ಲಿರುವ ಮೂರ್ತಿ ಏನಾದರೂ ಕೋಪಗೊಂಡರೆ ನಮಗೆ ಅನೇಕ ತೊಂದರೆಗಳನ್ನು ಮತ್ತು ಕೆಲವು ಸಾರಿ ನಮ್ಮ ಜೀವವನ್ನೇ ಬಲಿ ತೆಗೆದುಕೊಳ್ಳುತ್ತದೆ.

ಈ ಕಾರಣದಿಂದಲೇ ಪ್ರಾಣದೇವತೆಯನ್ನು ಯಾವ ಕಾರಣಕ್ಕೂ ಅಗೌರವಿಸಬಾರದು ಮತ್ತು ಅದು ಕ್ಷಮಿಸಲಾರದ ತಪ್ಪಾಗುತ್ತದೆ. ಅದರಿಂದ ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ಮತ್ತು ಮರುಜನ್ಮ ಪಡೆದುಕೊಂಡ ಮೇಲೂ ಪ್ರಾಣದೇವತೆಯ ಕೋಪವು ನಮ್ಮ ಮೇಲಿರುತ್ತದೆ. ಆದ್ದರಿಂದ ಮನೆಯಲ್ಲಿ ದೊಡ್ಡ ವಿಗ್ರಹಗಳನ್ನೂ, ಪ್ರಾಣವನ್ನು ಆಕರ್ಷಿಸುವ ವಸ್ತಗಳಾದ ಯಂತ್ರ, ರುದ್ರಾಕ್ಷಿ ಇತ್ಯಾದಿಗಳನ್ನು ಇಟ್ಟುಕೊಳ್ಳಬಾರದೆಂದು ಬಲ್ಲವರು ಹೇಳುತ್ತಾರೆ. ಕೆಲವು ಸಾರಿ ನಮಗೆ ಗೊತ್ತಿಲ್ಲದೆ ಇವುಗಳು ಪ್ರಾಣಶಕ್ತಿಯನ್ನು ವೃಧ್ಧಿಸಿಕೊಂಡು ವ್ಯಕ್ತಿತ್ವವನ್ನು ಪಡೆದುಕೊಳ್ಳುತ್ತದೆ. ಆಗ ಅದಕ್ಕೆ ಸರಿಯಾದ ಗೌರವವನ್ನೂ ಪೂಜೆಯನ್ನೂ ಮಾಡದಿದ್ದರೆ ಅದು ಕೋಪಿಸಿಕೊಂಡು ನಾನಾ ತೊಂದರೆಗಳನ್ನು ಕೊಡುತ್ತದೆ.

ವಿಗ್ರಹಾರಾಧನೆಯ ಆಶ್ಚರ್ಯಕರವಾದ ವಿಷಯವೇನೆಂದರೆ ಪ್ರತೀ ದೇವಸ್ಥಾನದ ಪ್ರಾಣದೇವರು ಸ್ವತಂತ್ರ ವ್ಯಕ್ತಿತ್ವವನ್ನು ಹೊಂದಿರುತ್ತದೆ. ಏಕೆಂದರೆ ಪ್ರತೀ ವಿಗ್ರಹದಲ್ಲಿಯೂ ಪ್ರಾಣಪ್ರತಿಷ್ಠಾಪನೆಯೂ ಬೇರೆ ಬೇರೆ ಕಾಲದಲ್ಲಿ ಬೇರೆ ಬೇರೆಯವರಿಂದ ಮಾಡಲ್ಪಟ್ಟಿರುತ್ತದೆ. ಆದ್ದರಿಂದ ಪ್ರತೀ ವಿಗ್ರಹವು ಪ್ರತ್ಯೇಕ ವ್ಯಕ್ತಿತ್ವವನ್ನು ಹೊಂದಿರುತ್ತದೆ.

ಉದಾಹರಣೆಗೆ ವೆಂಕಟೇಶ್ವರನ ದೇವಾಲಯು ಬೇರೆ ಬೇರೆ ಕಡೆಗಳಲ್ಲಿದ್ದರೂ ಪ್ರಾಣದೇವರ ರೂಪವಾದ ವೆಂಕಟೇಶ್ವರನ ವ್ಯಕ್ತಿತ್ವವು ಬೇರೆ ಬೇರೆಯಾಗಿರುತ್ತದೆ. ಒಂದು ದೇವಾಲಯದಲ್ಲಿ ಪೂಜಿಸಿ ವೆಂಕಟೇಶ್ವರನ ಅನುಗ್ರಹವನ್ನು ಪಡೆದಿದ್ದೂ, ಯಾವುದೋ ನಿಮಿತ್ತವಾಗಿ ವೆಂಕಟೇಶ್ವರನ ಬೇರೆ ದೇವಾಲಯಕ್ಕೆ ಹೋಗಿ ಪೂಜಿಸಿದರೆ, ಮೊದಲಿನಿಂದಲೂ ಪೂಜಿಸುತ್ತಿದ್ದ ಪ್ರಾಣದೇವರು ಕೋಪಗೊಳ್ಳವರು. ಬೇರೆ ಊರಿನಲ್ಲಿ ಉದ್ಯೋಗ ನಿಮಿತ್ತವೋ ಅಥವಾ ಇತರ ಕಾರಣಗಳಿಗಾಗಿ ನೆಲೆಸಿದ್ದರೆ ಪ್ರಾಣದೇವರು ಅರ್ಥಮಾಡಿಕೊಳ್ಳವರು. ಆದರೆ ಮತ್ತೆ ಆ ಊರಿಗೆ ಬಂದಾಗ ದೇವಾಲಯದ ದೇವರ ದರ್ಶನ ಪಡೆಯುವುದು ಅನಿವಾರ್ಯವಾಗಿರುತ್ತದೆ. ಆದ್ದರಿಂದ ಭಾರತದಲ್ಲಿ ತಮ್ಮ ತಮ್ಮ ಮನೆತನದವರು ಯಾವ ಪ್ರಾಣದೇವರನ್ನು ಮನೆದೇವರೆಂದು ಪೂಜಿಸುತ್ತಿದ್ದರೋ ಆ ದೇವಾಲಯಕ್ಕೆ ವರ್ಷದಲ್ಲಿ ಒಂದು ಸಾರಿ ಹೋಗಿ ಪೂಜೆಯನ್ನು ಸಲ್ಲಿಸುವುದು ಕಡ್ಡಾಯವೆಂದು ಋಷಿಗಳು ತಿಳಿಸಿರುವರು.

ಅಂತಿಮವಾಗಿ ಹೇಳುವುದಾದರೆ ಸಕಲ ವಿಗ್ರಹಗಳ ಮಹಿಮೆ ಮತ್ತು ಪವಾಡಗಳು ವಾಯುವಿನದೇ ಆಗಿರುತ್ತದೆ. ಯಾವ ಯಾವ ದೇವಾಲಯಗಳು ಮಹಿಮೆಯನ್ನು ಪಡೆದಿರುತ್ತವೋ ಆ ದೇವಾಲಯಗಳು ಪ್ರಸಿದ್ಧಿಯನ್ನು ಪಡೆದಿರುತ್ತವೆ. ಆದರೆ ಇವೆಲ್ಲವೂ ಮಾನವ ನಿರ್ಮಿತವಾಗಿರುವುದೇ ಆಗಿದೆ. ಯಾರಾದರೂ ಒಂದು ದೇವಾಲಯದ ದೇವರನ್ನು ಪೂಜಿಸುತ್ತಾ ಆಧ್ಯಾತ್ಮ ಸಾಧನೆ ಮಾಡುತ್ತಿದ್ದರೆ, ಅವರು ವಿಗ್ರಹ ದೇವರ ಜೊತೆಗೆ ಬಂಧಿತರಾಗಿರುತ್ತಾರೆ. ಅಂತಹವರು ಪೂರ್ಣಸಾಧನೆಯನ್ನು ಮಾಡಿದ್ದರೂ ಅವರು ಮೋಕ್ಷವನ್ನು ಪಡೆಯಲು ಆಗುವುದಿಲ್ಲ.

ದೇವಾಲಯದಲ್ಲಿ ಸಾಧನೆ ಮಾಡಿದ ಋಷಿಗಳು ಮತ್ತು ಯೋಗಿಗಳು ಪ್ರತಿನಿತ್ಯ ರಾತ್ರಿ ಸೂಕ್ಷ್ಮರೂಪದಲ್ಲಿ ಬಂದು ಪೂಜೆಯನ್ನು ಮಾಡುವುದನ್ನು ನಾವೆಲ್ಲರೂ ಕೇಳಿದ್ದೇವೆ ಮತ್ತು ಕೆಲವರು ನೋಡಿದ್ದಾರೆ. ಇಂತಹ ದೇವಸ್ಥಾನದ ಮಹಿಮೆಯನ್ನು, ಇಲ್ಲಿ "ಋಷಿ ಸಂಚಾರ" ಅಥವಾ "ಮುನಿ ಸಂಚಾರ"ವಾಗುವುದು ಎಂದು ಕರೆಯುತ್ತಾರೆ.

ಆದ್ದರಿಂದ ಆಧ್ಯಾತ್ಮ ಸಾಧನೆಯನ್ನು ಮಾಡುವವರು ತಮ್ಮ ಶರೀರದ ಮಹಿಮೆಯನ್ನು ಅರ್ಥಮಾಡಿಕೊಂಡು ನಮ್ಮ ಶರೀರದ ಒಳಗಡೆಯೇ ಭಗವಂತನನ್ನು ದೇವತೆಗಳನ್ನು ಕಾಣಬೇಕು. ನಮ್ಮಲ್ಲಿರುವ ಧ್ಯೌಃ ಲೋಕವು ಕಾಣಿಸಿಕೊಳ್ಳುವ ಆಕಾಶದಲ್ಲಿ ಭಗವಂತನು ಮತ್ತು ದೇವತೆಗಳು ಕಾಣಿಸಿಕೊಳ್ಳುವರು. (ಸ್ಥೂಲ ಆಕಾಶ, ದ್ಯುಲೋಕದ ಆಕಾಶ ಮತ್ತು ಅಂತರಿಕ್ಷದ ಆಕಾಶವು ಬೇರೆ ಬೇರೆಯಾಗಿದೆ. ದೇವತೆಗಳು ಮತ್ತು ಕುಂಡಲಿನಿ ಮಾತೆಯರು ದ್ಯಾವಾಅಂತರಿಕ್ಷದಲ್ಲಿ ಕಾಣಿಸಿಕೊಳ್ಳುವರು.)

ಇಲ್ಲಿ ಗಮನಿಸಬೇಕಾದ ಸಂಗತಿ ಏನೆಂದರೆ ಸೃಷ್ಟಿವಿನಾಶದಲ್ಲಿ ವಾಯುವು ತನ್ನ ವ್ಯಕ್ತಿತ್ವನ್ನು ಕಳೆದುಕೊಳ್ಳುವನು. ಆಗ ಪ್ರಾಣದೇವರೆಲ್ಲರ ಜೊತೆಯಲ್ಲಿ ನಮ್ಮೆಲ್ಲರ ಪ್ರಾಣಶರೀರ ಮತ್ತು ಮಾನಸಿಕ ಶರೀರಗಳೆಲ್ಲವೂ ಮಾಯವಾಗುವುದು. ಪ್ರಾಣದೇವರು ಮತ್ತು ವೈದಿಕದೇವತೆಗಳ ನಡುವಿನ ವ್ಯತ್ಯಾಸವೆಂದರೆ ಪ್ರಾಣದೇವರುಗಳು ಮಾನವ ನಿರ್ಮಿತವಾದವುಗಳು, ಆದರೆ ದೇವತೆಗಳು ಅದಿತಿಯಿಂದ ಜನ್ಮವನ್ನು ಪಡೆದು ಸಕಲ ಸೃಷ್ಟಿಯನ್ನು ಆಳುತ್ತಿರುವರು. ಇಂದ್ರದೇವರು ಅಸುರಶಕ್ತಿಗಳನ್ನು ಸಂಹರಿಸಿ ವಿಶ್ವದ ಮೂರು ಲೋಕಗಳ ಪ್ರಭುವಾಗಿ ವಿಶ್ವಸಿಂಹಾಸನದ ಮೇಲೆ ಕುಳಿತಿರುವರು. ಆದ್ದರಿಂದ ನಾವು ಇಂದ್ರನ ಮೊರೆ ಹೋಗಿ ಅಮರತ್ವವನ್ನು ಪಡೆಯುವುದು ನಮ್ಮ ಕರ್ತವ್ಯವಾಗಿದೆ.

ಇನ್ನೊಂದು ವಿಷಯವೇನೆಂದರೆ ನಮ್ಮ ಶರೀರದಲ್ಲಿ ನಮ್ಮ ಆತ್ಮವಿರುವುದು ಪರಮಾತ್ಮನಿರುವನು, ದೇವತೆಗಳು ಮತ್ತು ಮೂರು ಕುಂಡಲಿನಿ ಮಾತೆಯರಿರುವರು. ಆದರೆ ವಿಗ್ರಹವು ಕೇವಲ ಪ್ರಾಣದೇವತೆಯಾಗಿದೆ. ವಿಗ್ರಹವು ಕೇವಲ ಪರಮಾಣುಗಳಿಂದಾಗಿದೆ. ಅದು ಜಡವಸ್ತುವಿನಿಂದ ಆಗಿದೆ.

## ಅಸುರಗುಣವುಳ್ಳ ವಾಯು

ನಾವು ವಾಯುವಿನ ಮಹಿಮೆಯನ್ನು ನೋಡಿದೆವು ಆದರೆ ಅದಕ್ಕೆ ಇನ್ನೊಂದು ಮುಖವಿದೆ. ದೇವತೆಗಳು ವಾಯುವನ್ನು ಉಪಯೋಗಿಸಿಕೊಂಡು ಸೃಷ್ಟಿಯಜ್ಞವನ್ನು ಮಾಡಿದರು. ಯೋಗಿಗಳು ವಾಯುವಿನ ಮಹಿಮೆಯಿಂದ ಸಾಕ್ಷಾತ್ಕಾರವನ್ನೂ ಅಮರತ್ವವನ್ನೂ ಪಡೆಯುವರು. ಬ್ರಾಹ್ಮಣರು ವಿಗ್ರಹದಲ್ಲಿ ಪ್ರಾಣಪ್ರತಿಷ್ಠಾಪನೆ ಮಾಡಿ ಅದರಲ್ಲಿ ದೇವರನ್ನು ಆವಾಹನೆ ಮಾಡಿ ಪ್ರಾಣದೇವತೆಯನ್ನು ಪೂಜಿಸುತ್ತಾರೆ. ಸಾಮಾನ್ಯ ಜನರು ದೇವಾಲಯಗಳಿಗೆ ಹೋಗಿ ತಮ್ಮ ಕಷ್ಟಗಳಿಂದ ಮುಕ್ತಿ ಪಡೆಯಲು ಅಥವಾ ಸಹಾಯಕ್ಕಾಗಿ ವಿಗ್ರಹದೇವರನ್ನು ಪೂಜಿಸುತ್ತಾರೆ.

ಬ್ರಾಹ್ಮಣರು ಭಗವಂತನನ್ನು ವಿಗ್ರಹದಲ್ಲಿ ಆವಾಹನೆ ಮಾಡಿ ಪಂಚಾಭಿಷೇಕ ಮಾಡುತ್ತಾರೆ ಅದಕ್ಕೆ ಅವರು ಮಂಗಳಕರವಾದ ದ್ರವ್ಯಗಳಿಂದ, ಅಂದರೆ ಹಾಲು, ಮೊಸರು, ತುಪ್ಪ, ಜೇನುತುಪ್ಪ, ಕತ್ತರಿಸಿದ ಹಣ್ಣುಗಳು, ಸಕ್ಕರೆ ಮತ್ತು

ಶುದ್ಧ ಜಲ ಇತ್ಯಾದಿ ವಸ್ತುಗಳಿಂದ ಅಭಿಷೇಕವನ್ನು ಮಾಡಿ ಆನಂತರ ಅದಕ್ಕೆ ಗಂಧವನ್ನು ಪೂಸಿ ಹೂವಿನ ಹಾರದಿಂದ ಅಲಂಕಾರ ಮಾಡಿ ಪೂಜೆಯನ್ನು ಸಲ್ಲಿಸುತ್ತಾರೆ.

ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಸೃಷ್ಟಿಮೂಲವಾದ ದೈವೀಜಲದಲ್ಲಿಯೂ ಸಹ ಹಾಲು, ಮೊಸರು, ತುಪ್ಪ, ಜೇನುತುಪ್ಪ, ಸೋಮರಸ ಮತ್ತು ಸಕಲ ಔಷಧಿಗಳು ಇರುವುವು. (ಇದನ್ನು ಮುಂದೆ ತಿಳಿಯೋಣ.) ಇಂತಹ ಮಂಗಳಕರವಾದ ವಸ್ತುಗಳಿಂದ ವಿಗ್ರಹಾರಾಧನೆ ಮಾಡಿ ಪ್ರಾಣದೇವತೆಯ ಆಶೀರ್ವಾದವನ್ನು ಪಡೆಯುತ್ತಾರೆ.

ಇದೇ ರೀತಿ ಕೆಲವು ಜನರು ಅಂಧಕಾರದ ಶಕ್ತಿಗಳ ಆಕರ್ಷಣೆಗೆ ಒಳಗಾಗುತ್ತಾರೆ. ಅಂಧಕಾರದ ಶಕ್ತಿಗಳು ಬಹಳ ಬೇಗ ಒಲಿಯುತ್ತವೆ ಮತ್ತು ಕೆಲವರು ಸುಲಭವಾಗಿ ಅಲೌಕಿಕ ಸಿದ್ಧಿಗಳನ್ನು ಪಡೆಯಲು ಇಚ್ಛೆಪಡುತ್ತಾರೆ. ಇಂತಹ ವ್ಯಕ್ತಿಗಳು ಮಧ್ಯರಾತ್ರಿ ಸ್ಮಶಾನದಲ್ಲಿ ಪೂಜೆಯನ್ನು ಮಾಡುತ್ತಾರೆ. ಅವರೂ ಸಹ ವಿಗ್ರಹವನ್ನೋ ಅಥವಾ ಯಂತ್ರಗಳನ್ನೋ ರಚಿಸಿ ಅಂಧಕಾರದ ಶಕ್ತಿಗಳನ್ನು ಆವಾಹನೆ ಮಾಡಿ ಅದನ್ನು ಅಮಂಗಳಕರವಾದ ವಸ್ತುಗಳಿಂದ ಅಂದರೆ ಹೆಣ್ಣುಮಕ್ಕಳ ಮಾಸಿಕ ರಕ್ತ, ಅಥವಾ/ಮತ್ತು ಪ್ರಾಣಿಗಳ ರಕ್ತ, ಕೂದಲು, ಉಗುರು ಇತ್ಯಾದಿ ಅಮಂಗಳಕರವಾದ ವಸ್ತುಗಳಿಂದ ಪೂಜೆಯನ್ನು ಮಾಡಿ ಒಲಿಸಿಕೊಳ್ಳುತ್ತಾರೆ. ವಿಗ್ರಹದಲ್ಲಿ ಹೇಗೆ ಪ್ರಾಣದೇವತೆಗಳಿರುವರೋ ಹಾಗೆಯೇ ಇದರಲ್ಲಿಯೂ ಅಂಧಕಾರದ ಶಕ್ತಿಗಳು ಪ್ರಕಟವಾಗುವವು. ಈ ಅಮಂಗಳಕರ ರೂಪವೂ ಸಹ ಪ್ರಾಣದ ರೂಪವೇ ಆಗಿದೆ.

ಸಾಮಾನ್ಯವಾಗಿ ಮಂತ್ರವಾದಿಗಳು ಧೈರ್ಯವನ್ನು, ಬಲವಾದ ಇಚ್ಛಾಶಕ್ತಿಯನ್ನು ಹೊಂದಿರುತ್ತಾರೆ. ಅವರು ಮಧ್ಯರಾತ್ರಿ ಸ್ಮಶಾನದಲ್ಲಿ ಒಂಟಿಯಾಗಿ ಕುಳಿತು ಸಾಧನೆಯನ್ನು ಮಾಡುತ್ತಾರೆ. ಅಂಧಕಾರ, ಸ್ಮಶಾನ ಮೌನ, ಒಂದು ರೀತಿಯ ಭಯ, ಒಂಟಿತನದಿಂದ ಕೂಡಿದ ಸಾಧನೆಯಲ್ಲಿ ಅವರ ಮನಸ್ಸು ಮತ್ತು ಪ್ರಾಣಶಕ್ತಿಯು ತೀವ್ರವಾದ ಮಾನಸಿಕ ಸ್ಪಂದನೆಗೆ ಒಳಗಾಗುತ್ತದೆ ಮತ್ತು ಸಾಧಕರು ಬೇಗನೆ ಮಂತ್ರಸಿದ್ಧಿಯನ್ನು ಪಡೆದುಕೊಳ್ಳುತ್ತಾರೆ. ಅವರು ಸಾಧನೆಗಾಗಿ ಕೃಷ್ಣಪಕ್ಷ ಅದರಲ್ಲೂ ಪ್ರಮುಖವಾಗಿ ಅಮಾವಾಸ್ಯೆಯ ದಿನವನ್ನು ಮತ್ತು ಸೂರ್ಯಗ್ರಹಣ ಹಾಗು ಚಂದ್ರಗ್ರಹಣ ಕಾಲವನ್ನು ಬಳಸಿಕೊಳ್ಳುತ್ತಾರೆ. ಅವರು ಪೂಜಿಸುವ ವಿಗ್ರಹಗಳು ಬಹುಬೇಗನೆ ಸಾಕಾರಗೊಂಡು ದುಷ್ಟಶಕ್ತಿಗಳು ಪ್ರಕಟಗೊಳ್ಳುತ್ತದೆ.

ಸೂರ್ಯಗ್ರಹಣ ಹಾಗು ಚಂದ್ರಗ್ರಹಣ ಕಾಲದಲ್ಲಿ ಭೂಮಿಯ ನೆರಳು ಮತ್ತು ಚಂದ್ರನ ನೆರಳು ಅಂಧಕಾರಯವಾಗಿರುತ್ತದೆ ಮತ್ತು ಅದು ಭೂಮಿಯ ಮೇಲೆ ಅಥವಾ ಚಂದ್ರನ ಮೇಲೆ ಬೀಳುತ್ತದೆ. ಆ ಅಂಧಕಾರದಲ್ಲಿ ಕ್ಷುದ್ರ ದೇವರುಗಳು ನೆಲೆಸಿರುತ್ತಾರೆ.

ಸೂರ್ಯಗ್ರಹಣ ಕಾಲದಲ್ಲಿ ಸೂರ್ಯನ ಪ್ರಾಣಶಕ್ತಿಯು ಭೂಮಿಯ ಮೇಲೆ ತಾತ್ಕಾಲಿಕವಾಗಿ ಕಡಿಮೆಯಾಗುತ್ತದೆ. ಆಗ ಯೋಗಿಗಳು, ಸಾಧಕರು, ಪ್ರಾಣಾಯಾಮ ಮಾಡುವವರು ಹೊರಗಡೆ ಆ ಸಮಯದಲ್ಲಿದ್ದರೆ ಪ್ರಕೃತಿಯು ಅವರ ಶರೀರದಲ್ಲಿರುವ ಪ್ರಾಣವನ್ನು ಸೆಳೆದುಕೊಳ್ಳುತ್ತದೆ. ಈ ಕಾರಣದಿಂದಲೇ ಯಾರೂ ಸಹ ಹೊರಗಡೆ ಹೋಗಬಾರದೆಂದು ಪೂರ್ವಜರು ಹೇಳಿರುವುದು. ಮತ್ತೆ ಅವರ ಶರೀರದಲ್ಲಿ ಪ್ರಾಣವು ವೃದ್ಧಿಯಾಗಲು ಕೆಲವು ದಿನಗಳು ಬೇಕಾಗುತ್ತದೆ.

ಚಂದ್ರಗ್ರಹಣ ಕಾಲದಲ್ಲಿ ಚಂದ್ರನ ಕಿರಣದಲ್ಲಿರುವ ಅಮೃತಮಯ ಅಂಶವು ಮರೆಯಾಗಿರುತ್ತದೆ. ಆಗ ಭೂಮಿಯ ನೆರಳಿನ ಅಂಧಕಾರದ ಭಾಗದಲ್ಲಿರುವ ಕ್ಷುದ್ರ ಪ್ರಾಣದೇವತೆಗಳು ಗ್ರಹಣ ಪ್ರದೇಶದಲ್ಲಿ ಜಾಗೃತ ಸ್ಥಿತಿಯಲ್ಲಿರುತ್ತಾರೆ. ಈ ಕಾಲವು ಮಂತ್ರವಾದಿಗಳಿಗೆ ಮಂತ್ರಸಿದ್ಧಿಮಾಡಿಕೊಳ್ಳಲು ಬಹಳ ಸೂಕ್ತವಾಗಿದೆ.

ಆನಂತರ ಮಂತ್ರವಾದಿಗಳು ತಮ್ಮ ಮಂತ್ರಶಕ್ತಿಯನ್ನು ಇತರರ ಮೇಲೆ ಉಪಯೋಗಿಸಿ ತಮ್ಮ ಇಷ್ಟಾರ್ಥಗಳನ್ನು ಪಡೆದುಕೊಳ್ಳುತ್ತಾರೆ. ಮಂತ್ರವಾದಿಗಳು ತಮ್ಮ ಶಕ್ತಿಗಳನ್ನು ಇತರರಿಗೆ ತೋರಿಸಲು ಉತ್ಸುಕರಾಗಿರುತ್ತಾರೆ. ಕೆಲವು ಜನಗಳು ತಮ್ಮ ದ್ವೇಷಸಾಧನೆಗಾಗಿ ಮಂತ್ರವಾದಿಗಳನ್ನು ಆಶ್ರಯಿಸಿ ತಮ್ಮ ದ್ವೇಷವನ್ನು ಪೂರೈಸಿಕೊಳ್ಳುತ್ತಾರೆ. ಕೆಲವು ಜನರು ಯಾವಾಗಲು ಮಂತ್ರವಾದಿಗಳ ಕಡೆಗೆ ಆಕರ್ಷಿಸಲ್ಪಡುತ್ತಾರೆ.

ಕೆಲ ಮಂತ್ರವಾದಿಗಳು ಮರಣಿಸಿದ ವ್ಯಕ್ತಿಗಳ ಪ್ರಾಣಶರೀರ ಮತ್ತು ಮಾನಸಿಕ ಶರೀರವುಳ್ಳ ಪ್ರೇತಾತ್ಮವನ್ನು (ಇದು ಕೇವಲ ಪ್ರಾಣ–ಮನಸ್ಸಿನ ಶರೀರವಾಗಿದೆ.) ತಮ್ಮ ವಶಪಡಿಸಿಕೊಂಡು ಇತರರ ಮೇಲೆ ಪ್ರಯೋಗಿಸುತ್ತಾರೆ. ಇಂತಹ ವ್ಯಕ್ತಿಗಳು ಮರಣಾನಂತರ ಎಲ್ಲಿಗೆ ಹೋಗುತ್ತಾರೆಂದು ಅವರಿಗೂ ಸಹ ತಿಳಿದಿದೆ. ಮದ್ಯವ್ಯಸನಿಗಳು ಹೇಗೆ

ಮದ್ಯದ ಮೇಲೆ ಅವಲಂಬಿತರಾಗಿರುತ್ತಾರೋ ಹಾಗೆ ಇವರೂ ಸಹ ತಮ್ಮ ಮಂತ್ರಶಕ್ತಿಗೆ ಮತ್ತು ಕತ್ತಲಿನ ಪ್ರಾಣದೇವತೆಗೆ ದಾಸರಾಗಿರುತ್ತಾರೆ. ಇವರು ಬಿಟ್ಟರೂ ಕತ್ತಲಿನ ಶಕ್ತಿಗಳು ಇವರನ್ನು ಬಿಡುವುದಿಲ್ಲ.

ಮಂತ್ರವಾದಿಗಳ ಕತ್ತಲಿನ ಪ್ರಾಣದೇವತೆಗಳಿಂದ ರಕ್ಷಿಸಿಕೊಳ್ಳಲು ಬ್ರಾಹ್ಮಣರು ಉಗ್ರದೇವತೆಗಳನ್ನು ಆರಾಧಿಸುತ್ತಾರೆ. ಉದಾಹರಣೆಗೆ ಅವರು ಉಗ್ರನರಸಿಂಹ, ಕಾಳಿ, ಹನುಮಾನ್, ರುದ್ರ, ಮುನೇಶ್ವರ ಅಥವಾ ಭೈರವ ಇತ್ಯಾದಿ ದೇವತೆಗಳ ಮೊರೆಹೊಕ್ಕು ತಮ್ಮನ್ನು ರಕ್ಷಿಸಿಕೊಳ್ಳುತ್ತಾರೆ. ಕೆಲವರು ತಾಂತ್ರಿಕ ರೀತಿಯಿಂದ ಈ ದೇವತೆಗಳನ್ನು ಒಲಿಸಿಕೊಳ್ಳುತ್ತಾರೆ ಮತ್ತು ಅವರು ಮಂತ್ರವಾದಿಗಳಿಂದ ಜನರನ್ನು ರಕ್ಷಿಸುತ್ತಾರೆ.

ಯಾರು ಋಗ್ವೇದದಲ್ಲಿ ಪ್ರತಿಪಾದಿತನಾದ ಭಗವಂತನ ರಕ್ಷಣೆಯಲ್ಲಿರುತ್ತಾರೊ ಅವರು ಈ ಕತ್ತಲಿನ ಪ್ರಾಣದೇವತೆಗಳಿಗೆ ಭಯಪಡುವ ಅಗತ್ಯವಿಲ್ಲ. ಏಕೆಂದರೆ ಭಗವಂತನಿಂದಲೇ ವಾಯುವು ವ್ಯಕ್ತಿತ್ವವನ್ನೂ ಮನಸ್ಸನ್ನೂ ಪಡೆದಿದ್ದಾನೆ. ಈ ಕತ್ತಲಿನ ಪ್ರಾಣದೇವತೆಗಳು ಅಸುರರೇನಲ್ಲ. ಅಸುರರೇನಾದರೂ ವಿಗ್ರಹದಲ್ಲಿ ಆವಿರ್ಭವಿಸಿದ್ದರೂ ಇಂದ್ರನು ಅವರನ್ನು ನಿಗ್ರಹಿಸುತ್ತಾನೆ.

ಆದ್ದರಿಂದ ನಮ್ಮ ಮನಸ್ಸು ಯಾವ ರೂಪವನ್ನು ನೋಡುತ್ತದೋ ಅದೇ ರೂಪ, ಪ್ರಾಣಶಕ್ತಿಯನ್ನುಪಡೆದುಕೊಂಡು ಪ್ರಕಟವಾಗುತ್ತದೆ. ಈ ರೀತಿಯಾಗಿ ಭಾರತದಲ್ಲಿ ಬೀಜಾಕ್ಷರ ಮತ್ತು ಶಬ್ದಗಳ ಮಹಿಮೆಯಿಂದಾಗಿ ಗುರುಗಳು ಮತ್ತು ಸಾಧಕರು ಅನಂತ ಪ್ರಾಣದೇವತೆಗಳನ್ನು ಸೃಷ್ಟಿಮಾಡಿದ್ದಾರೆ.

## ವಿಗ್ರಹಾರಾಧನೆ ಮತ್ತು ಸೂರ್ಯಾರಾಧನೆ

ವಾಯುದೇವರನ್ನು ಯಾವುದೇ ಕಾರಣಕ್ಕೂ ಅವಮಾನ ಮಾಡಬಾರದೆಂಬುದನ್ನು ಮನದಲ್ಲಿಟ್ಟುಕೊಂಡು, ವಿಗ್ರಹಾರಾಧನೆ ಮತ್ತು ಸೂರ್ಯಾರಾಧನೆ ಇವೆರಡರಲ್ಲಿ ಯಾವುದು ಶ್ರೇಷ್ಠ ಎಂಬುದನ್ನು ತಿಳಿಯೋಣ. ವಿಗ್ರಹಾರಾಧನೆಯ ಮಹತ್ವವನ್ನು ಓದಿದೆವು. ವಿಗ್ರಹಾರಾಧನೆಯು ನಿಜವಾಗಿಯೂ ವಾಯುದೇವತೆ/ಪ್ರಾಣದೇವತೆಯ ಪೂಜೆಯಾಗಿದೆ. ಅವುಗಳಿಗೂ ಸಹ ನಮ್ಮಂತೆ ವ್ಯಕ್ತಿತ್ವವಿದೆ. ವ್ಯಕ್ತಿತ್ವವಿದ್ದರೆ ಪ್ರಾಣದೇವತೆಗಳಿಗೆ ನಿಗ್ರಹಾನುಗ್ರಹ ಸಾಮರ್ಥ್ಯವೂ ಸಹ ಇರುತ್ತದೆ. ಏಕೆಂದರೆ ಸಕಲ ಪವಾಡಗಳ ಹಿಂದಿನ ಶಕ್ತಿ ವಾಯುದೇವರೇ ಆಗಿದ್ದಾರೆ. ವಿಗ್ರಹದೇವತೆಯು ತನ್ನ ಭಕ್ತರ ಇಷ್ಟಾರ್ಥವನ್ನು ಪೂರೈಸುತ್ತಾನೆ ಮತ್ತು ಕೆಲವು ಸಾರಿ ಶಿಕ್ಷಿಸುತ್ತಾನೆ.

ವಿಗ್ರಹದಲ್ಲಿ ಪ್ರಾಣದೇವರನ್ನು ಬಿಟ್ಟು ಇತರ ದೇವತೆಗಳಿಲ್ಲ, ವಿಗ್ರಹದಲ್ಲಿ ವಾಯುದೇವರ ಒಂದು ಅಂಶ ಮಾತ್ರವಿರುತ್ತದೆ. ವಾಯುದೇವರು ಪೂರ್ಣಪ್ರಮಾಣದಲ್ಲಿ ವಿಗ್ರಹದಲ್ಲಿ ಪ್ರಕಟವಾಗಲು ಸಾಧ್ಯವಿಲ್ಲ ಮತ್ತು ಇದರಲ್ಲಿ ಭಗವಂತನೂ ಇಲ್ಲ ಮತ್ತು ಕುಂಡಲಿನಿಮಾತೆಯರೂ ಸಹ ಇಲ್ಲ. ವಾಯು ಕೇವಲ ಶಕ್ತಿಯಷ್ಟೆ. ಆದ್ದರಿಂದ ಅಮರತ್ವವನ್ನು ಅಥವಾ ಮೋಕ್ಷವನ್ನು ಅನುಗ್ರಹಿಸುವ ಸಾಮರ್ಥ್ಯವಿಲ್ಲ ಮತ್ತು ನಾವು ಮಾಡಿದ ಪಾಪ–ಪುಣ್ಯಗಳನ್ನು ಕ್ಷಮಿಸುವ ಸಾಮರ್ಥ್ಯವಿಲ್ಲ. ಏಕೆಂದರೆ ಕ್ಷಮಿಸುವುದು ವಾಯುವಿನ ಕರ್ತವ್ಯವಲ್ಲ.

ಬ್ರಹ್ಮಾಂಡವನ್ನು ವಾಯುದೇವರು ಸರ್ವತ್ರ ವ್ಯಾಪಿಸಿಕೊಂಡಿದ್ದಾರೆ ಎಂದು ತಿಳಿದುಕೊಂಡಿರುವೆವು. ಬ್ರಹ್ಮಾಂಡದ ಪ್ರತಿರೂಪವಾದ ಪಿಂಡಾಂಡವನ್ನೂ ಸಹ ವಾಯುದೇವರು ವ್ಯಾಪಿಸಿಕೊಂಡಿರುವರು. ಆದ್ದರಿಂದ ಪೂರ್ಣಪ್ರಮಾಣದಲ್ಲಿ ವಾಯುದೇವರ ಅನುಗ್ರಹವನ್ನು ಪಡೆಯಬೇಕಾದರೆ ಬ್ರಹ್ಮಾಂಡದಲ್ಲಿರುವ ಮತ್ತು ಪಿಂಡಾಂಡದಲ್ಲಿರುವ ವಾಯುವನ್ನು ಆರಾಧಿಸಬೇಕು.

ಆದರೆ ಸೂರ್ಯನು ಪ್ರತ್ಯಕ್ಷ ಪ್ರಕಟವಾಗಿರುವ ದೇವರಾಗಿದ್ದಾನೆ. ಸಕಲ ಜೀವರಾಶಿಗಳ ಸ್ಥೂಲದೇಹಗಳ ಸೃಷ್ಟಿಗೆ ಸೂರ್ಯ–ಸವಿತೃವೇ ಕಾರಣನಾಗಿದ್ದಾನೆ. ಸೂರ್ಯ–ಸವಿತೃ ದೇವರನ್ನು ಪ್ರಜಾಪತಿ ಎಂದು ಕರೆಯುತ್ತಾರೆ. ಇಂತಹ ಪ್ರತ್ಯಕ್ಷ ದೇವರನ್ನು ಬಿಟ್ಟು ವಿಗ್ರಹದೇವರನ್ನು ಅಜ್ಞಾನಿ ಮಾನವರು ವಿಗ್ರಹಾರಾಧನೆಯನ್ನು ಮಾಡುತ್ತಿರುವರು. ಸೂರ್ಯಮಂಡಲದಲ್ಲಿ ಯಾವ ಯಾವ ದೇವತೆಗಳು ಇರುವರು ಎಂಬುದನ್ನು ನೋಡೋಣ.

೧. ಚಿತ್ರಂ ದೇವಾನಾಮುದಗಾದನೀಕಂ ಚಕ್ಷುರ್ಮಿತ್ರಸ್ಯ ವರುಣಸ್ಯಾಗ್ನೇಃ ೧
ಆಪ್ರಾ ದ್ಯಾವಾಪೃಥಿವೀ ಅಂತರಿಕ್ಷಂ ಸೂರ್ಯ ಆತ್ಮಾ ಜಗತಸ್ತಸ್ಥುಷಶ್ಚ ೧೧ (ಋಗ್ವೇದ ೧–೧೧೫–೧ ಸಾಭಾ)
"ಅತ್ಯಾಶ್ಚರ್ಯಕರವಾದುದೂ ಮಿತ್ರ, ವರುಣ, ಅಗ್ನಿಯೇ ಆದಿಯಾದಸಮಸ್ತ ಪ್ರಪಂಚಕ್ಕೂ, ಕಣ್ಣಿನಂತಿರುವುದೂ ಪ್ರಕಾಶಮಾನವಾದ ಕಿರಣಗಳ ಸಮೂಹವೆಂಬ ಸೂರ್ಯಮಂಡಲವು ಉದಿಸಿ, ಸ್ವರ್ಗಭೂಮ್ಯಾಕಾಶಗಳನ್ನು ವ್ಯಾಪಿಸಿದೆ. ಆ ಮಂಡಲಾಂತರ್ವರ್ತಿಯಾದ ಸೂರ್ಯನು ಚರಾಚರಾತ್ಮಕವಾದ ಈ ಜಗತ್ತಿಗೆ (ಆತ್ಮ) ಸ್ವರೂಪಭೂತನು."

**"ಸೂರ್ಯನು ಚರಚರಾತ್ಮಕವಾದ ಭೌತಿಕ ಪ್ರಪಂಚದ ಆತ್ಮನಾಗಿದ್ದಾನೆ.** ಈ ಕಾರಣದಿಂದ ಆತ್ಮಸ್ವರೂಪನಾಗಿ ನಮ್ಮ ಶರೀರದ ಹೃದಯದಲ್ಲಿ ನೆಲೆಸಿದ್ದಾನೆ. ನಮ್ಮ ಸಾಧನೆಯಿಂದ ಕತ್ತಲಿನಿಂದ ಆವರಿಸಿರುವ ಸೂರ್ಯ–ಸವಿತೃ ದೇವತೆಯು ಹೃದಯದಲ್ಲಿ ಪ್ರಕಟನಾಗುತ್ತಾನೆ."

ಸೂರ್ಯಮಂಡಲ ಮಧ್ಯದಲ್ಲಿ ವಾಯು ಅಂದರೆ ಪ್ರಾಣ ದೇವರಿದ್ದಾರೆ. ಪೂರ್ಣಪ್ರಮಾಣದಲ್ಲಿ ವಾಯುದೇವರು ಪ್ರಕಟವಾಗಿರುವರು. ಸೂರ್ಯನ ಕಿರಣಗಳ ಮೂಲಕ ಪ್ರಾಣವು ಪ್ರವಾಹದಂತೆ ಸರ್ವತ್ರ ಪೃಥ್ವಿಯ ಮೇಲೆ ಹರಡಿ ಸಕಲ ಜೀವರಾಶಿಗಳನ್ನು ಪೋಷಿಸುತ್ತಿದ್ದಾನೆ.

೨. ವಾಯುವನ್ನು ಆವರಿಸಿಕೊಂಡು ಅಗ್ನಿದೇವರಿರುವರು. ಸೂರ್ಯನು ನಿಜವಾಗಿಯೂ ಅಗ್ನಿ ಗೋಳವಾಗಿದ್ದಾನೆ. ಅಗ್ನಿಯು ಪ್ರಖರವಾದ ಶಾಖವನ್ನು ಭೂಮಿಯ ಮೇಲೆ ಹರಡುತ್ತಿದ್ದಾನೆ.

೩. ಸೂರ್ಯಮಂಡಲದೊಳಗೆ ಸಕಲ ಭೌತಿಕ ಪ್ರಪಂಚವನ್ನೂ ಮತ್ತು ಸಕಲ ಜೀವರಾಶಿಗಳನ್ನೂ ಸೃಷ್ಟಿಮಾಡಿದ ಆದಿತ್ಯದೇವತೆಗಳಾದ ಮಿತ್ರಾ, ವರುಣ, ಅರ್ಯಮಾ, ಭಗ ಮತ್ತು ಅಂಶ ದೇವತೆಗಳಿದ್ದಾರೆ. ಆದಿತ್ಯ ದೇವತೆಗಳ ತೇಜಸ್ಸು ಅಗ್ನಿಗೋಳವನ್ನು ಆವರಿಸಿಕೊಂಡು ಸೂರ್ಯನಂತೆ ಪ್ರಕಾಶಿಸುತ್ತಿರುವುದು. ಸೂರ್ಯನು ಆದಿತ್ಯರ ಕಣ್ಣು ಎಂದು ಋಗ್ವೇದವು ಹೇಳುತ್ತಿದೆ.

೪. ದೇವತೆಗಳ ವಾಕ್‌ಶಕ್ತಿಯಾಗಿ ವಾಗ್ದೇವತೆಗಳಾದ; ಮಂತ್ರಗಳ ಅಧಿದೇವತೆಯಾಗಿ ಬ್ರಹ್ಮ, ಮಂತ್ರಗಳಲ್ಲಿರುವ ಅನಂತವಾದ ವಿದ್ಯೆಗೆ ದೇವತೆಯಾದ ಸರಸ್ವತಿ ಮತ್ತು ಜೊತೆಯಲ್ಲಿ ಮಹಿ, ಭಾರತಿ, ಇಳಾ ಇರುವರು, ಕಂಠಸ್ಥನಾಗಿ, ಋತ್ವಿಜನಾಗಿ ಬೃಹಸ್ಪತಿಯು ಮತ್ತು ಮಂತ್ರಗಳ ಸ್ವಾಮಿಯಾಗಿ ಅಂದರೆ ಗಣಪತಿಯಾಗಿ ಬ್ರಹ್ಮಣಸ್ಪತಿಯು ಇರುವರು.

೫. ಆದಿತ್ಯರ ತೇಜಸ್ಸಿನಲ್ಲಿ ಸವಿತೃ ದೇವತೆಯು ಪ್ರಕಟನಾಗಿರುವನು.

೬. ಪೂಷಣ್ ದೇವತೆಯು ಸೂರ್ಯಕಿರಣದ ಮೂಲಕ ಆಗಮಿಸುವನು. ಪ್ರಾಣಶಕ್ತಿಯಿಂದ ಕೂಡಿದ ಸೂರ್ಯಕಿರಣದ ಅಧಿದೇವತೆಯಾದ ಪೂಷಣ್ ದೇವತೆಯು ಸೂರ್ಯಮಂಡಲದಿಂದ ಪ್ರವಾಹ ರೂಪದಲ್ಲಿ ಹರಿಯುತ್ತಿರುವನು

೭. ಸೂರ್ಯನು ಉದಯಿಸುವ ಮೊದಲು ಮನುಕುಲದ ಮಿತ್ರರೂ ಮತ್ತು ದೇವವೈದ್ಯರಾದ ಅಶ್ವಿನೀ ದೇವತೆಗಳು ಮತ್ತು ಸಕಲ ದೈವೀದ್ವಾರಗಳನ್ನು ತೆರೆಯುವ ಉಷಸ್ ದೇವತೆಯು ಆಗಮಿಸುವರು. ಆದ್ದರಿಂದ ಅವರ ಕೃಪೆಯೂ ಸಹ ನಮ್ಮ ಮೇಲೆ ಆಗುತ್ತದೆ.

೮. ಸೂರ್ಯಮಂಡಲವು ಸಪ್ತಮಸ್ವರ್ಗ ಅಥವಾ ಸತ್ಯಲೋಕಕ್ಕೆ ಅಭಿಮುಖವಾಗಿದೆ. ಅಂದರೆ ಸಪ್ತಮಸ್ವರ್ಗದಲ್ಲಿ ಸೂರ್ಯಮಂಡಲವನ್ನು ಇಂದ್ರನು ವೃತ್ರಾಸುರ ಸಂಹಾರದ ಬಳಿಕ ಸ್ಥಾಪಿಸಿದ್ದಾನೆ.

ಇಂತಹ ಮಹಿಮೆಯಿಂದ ಕೂಡಿದ ಮತ್ತು ನಮ್ಮೆಲ್ಲರ ಸ್ಥೂಲಶರೀರದ ಸೃಷ್ಟಿಗೆ ಕಾರಣನಾದ ಸೂರ್ಯ–ಸವಿತೃವಿನ ಆರಾಧನೆಯನ್ನು ಬಿಟ್ಟು ವಿಗ್ರಹಾರಾಧನೆ ಅಥವಾ ಇತರ ರೀತಿಯ ಆರಾಧನೆಯನ್ನು ಮಾನವರು ಮಾಡುತ್ತಿರುವರು. ಈ ಕೆಳಗಿನ ಋಗ್ವೇದ ಮಂತ್ರವನ್ನು ನೋಡಿ.

ಸುಪ್ರಾವೀರಸ್ತುಸ ಕ್ಷಯಃ ಪ್ರ ನು ಯಾಮನ್ತ್ಸುದಾನವಃ ।
ಯೇ ನೋ ಅಂಹೋಅತಿಪಿಪ್ರತಿ (ಅಂಹಃ ಅತಿ ಪಿಪ್ರತಿ) ।। (ಋಗ್ವೇದ ೭–೬೬–೫ ಸಾಭಾ)
"ಎಲೈ ಮಿತ್ರಾವರುಣಾರ್ಯಮರೇ, ನಮ್ಮ ಪಾಪಗಳನ್ನು ಪರಿಹರಿಸಿ ನಮ್ಮನ್ನು ದಾಟಿಸುವ ನೀವು ನಮ್ಮಲ್ಲಿಗೆ (ಅಗ್ನಿಹೋತ್ರಕ್ಕಾಗಿ) ಬಂದು ಹೋದನಂತರ ನಾವು ವಾಸಮಾಡುವ ಗೃಹವು ಯಾವ ಭಯವೂ ಇಲ್ಲದೆ ಸುರಕ್ಷಿತವಾಗುವುದು."

ಅಸ್ಯ ವಾಮಸ್ಯ ಪಲಿತಸ್ಯ ಹೋತುಸ್ತಸ್ಯ ಭ್ರಾತಾ ಮಧ್ಯಮೋ ಅಸ್ತ್ಯಶ್ನಃ ।
ತೃತೀಯೋ ಭ್ರಾತಾ ಘೃತಪೃಷ್ಠೋ ಅಸ್ಯಾತ್ರಾಪಶ್ಯಂ ವಿಶ್ಪತಿಂ ಸಪ್ತಪುತ್ರಂ ।। (ಋಗ್ವೇದ ೧–೧೬೪–೧ ಸಾ ಭಾ)
"ಸಕಲರಿಂದ ಸೇವಿಸಲ್ಪಡುವವನು, ಅಶ್ವದ ಪಾಲಕನೂ, ಆಹ್ವಾನಾರ್ಹನಾದವನೂ ಆದ ಯಾವ ಈ ಆದಿತ್ಯನುಂಟೋ ಅವನಿಗೆ ಮಧ್ಯಮಸ್ಥಾನೀಯನಾದವನೂ, ಸಕಲವನ್ನೂ ವ್ಯಾಪಿಸಿರುವವನೂ ಆದ ವಾಯುವು ಭ್ರಾತೃಸ್ಥಾನದಲ್ಲಿದ್ದಾನೆ, ಮತ್ತು ಆಹುತಿರೂಪವಾದ ಘೃತದಿಂದ ವ್ಯಾಪ್ತವಾದ ದೇಹವುಳ್ಳ ಮೂರನೆಯ ಭ್ರಾತೃವೂ (ಅಗ್ನಿ) ಇದ್ದಾನೆ. ಇವರುಗಳ ನಡುವೆ ಮಾನವರಿಗೆ ಒಡೆಯನಾದವನೂ ರಶ್ಮಿರೂಪವಾದ ಸಪ್ತಪುತ್ರರಿಂದೊಡಗೂಡಿದವನೂ (ಪೂಷನ್ ದೇವತೆ) ಆದ ಈ ಆದಿತ್ಯನು (ಸವಿತೃ) ನನ್ನ ಎದುರಿಗೆ ಗೋಚರನಾಗಿದ್ದಾನೆ".

ಮಾನವರು ತಮ್ಮ ಇಚ್ಛಾಶಕ್ತಿಯ ಕೊರತೆಯಿಂದ ಅನೇಕ ಪಾಪಕರ್ಮಗಳನ್ನು ಮಾಡುವರು. ಯಾರು ಸೂರ್ಯಾರಾಧನೆಯನ್ನು ಮಾಡಿ ಸೂರ್ಯ–ಸವಿತೃವಿನ ಅನುಗ್ರಹವನ್ನು ಪಡೆದುಕೊಳ್ಳವರೋ ಅಂತಹವರ ಪಾಪಕರ್ಮಗಳನ್ನು ಕ್ಷಮಿಸಿ ಆದಿತ್ಯರಿಗೆ ಆರಾಧಕನನ್ನು ಪಾಪರಹಿತನೆಂದು ಘೋಷಿಸುವನು. ಮತ್ತು ಮರಣಾನಂತರ ಊರ್ಧ್ವಲೋಕವಾದ ಸತ್ಯಲೋಕಕ್ಕೆ ಪ್ರವೇಶಿಸುವರು. ಅವರು ಕೆಲವು ಕಾಲ ಸತ್ಯಲೋಕದಲ್ಲಿದ್ದು ನಂತರ ಮತ್ತೆ ನಾವು

ಭೂಮಿಯಲ್ಲಿ ಉತ್ತಮ ವಾತಾವರಣದ ಮನೆ ಮತ್ತು ಪರಿಸರದಲ್ಲಿ ಹುಟ್ಟಿ ತನ್ನ ಜೀವನದ ಪ್ರಯಾಣವನ್ನು ಮುಂದುವರೆಸುವೆವು.


ಸೂರ್ಯನ ತೇಜಸ್ಸು ಅತಿ ಪ್ರಖರವಾಗಿರವ ಕಾರಣ ಸೂರ್ಯೋದಯದ ಒಳಗೆ ಅಂದರೆ ೪೫ ನಿಮಿಷಕ್ಕೂ ಮೊದಲು ಅರ್ಘ್ಯವನ್ನು ಕೊಡಬೇಕು. ಮಾನವರು ಪ್ರಖರವಾದ ಸೂರ್ಯನ ತೇಜಸ್ಸನ್ನು ತಮ್ಮ ಹೃದಯದಲ್ಲಿ ಧರಿಸಲು ಸಾಧ್ಯವಿಲ್ಲ. ಶರೀರದ ಉಷ್ಣತೆಯು ತುಂಬಾ ಜಾಸ್ತಿಯಾಗುವ ಸಾಧ್ಯತೆ ಇದೆ. ಆದ್ದರಿಂದ ಸೂರ್ಯ ಉದಯವಾಗುವ ಮೊದಲೇ ಆತನ ತೇಜಸ್ಸು ಭೂಮಿಯನ್ನು ಆವರಿಸಿಕೊಳ್ಳತೊಡಗುತ್ತದೆ. ಆ ಸಮಯದಲ್ಲಿ ಸೂರ್ಯನ ತೇಜಸ್ಸು ಸೌಮ್ಯವಾಗಿರುತ್ತದೆ. ಈ ಕಾರಣಕ್ಕೆ ದ್ವಿಸಂಧ್ಯಾ ಸಮಯದಲ್ಲಿ ಸೂರ್ಯನಿಗೆ ಅರ್ಘ್ಯವನ್ನು ಕೊಡಬೇಕು. ಈಗ ಓದುಗರೇ ತೀರ್ಮಾನಿಸಬೇಕು ಯಾವ ಉಪಾಸನೆಯು ಉತ್ತಮವೆಂದು; ವಿಗ್ರಹಾರಾಧನೆಯೋ ಅಥವಾ ಸೂರ್ಯೋಪಾಸನೆಯೋ?

ಯಃ ಸತ್ರಾಹಾ ವಿಚರ್ಷಣಿರಿಂದ್ರಂ ತಂ ಹೂಮಹೇ ವಯಂ ।
ಸಹಸ್ರಮುಷ್ಕ ತುವಿನೃಮ್ಣ ಸತ್ವತೇ ಭವಾ ಸಮುತ್ಸು ನೋ ವೃಧೇ ।। (ಋಗ್ವೇದ ೬-೪೬-೩ ಸಾಭಾ)

"ಯಾವ ಇಂದ್ರನು ಶತ್ರುನಾಶಕನೋ, ಸಕಲವನ್ನೂ ನೋಡಬಲ್ಲವನೋ ಅದೇ ಇಂದ್ರನನ್ನು ನಾವು ಪ್ರಾರ್ಥಿಸಿ ಕರೆಯುತ್ತೇವೆ. ಸಾವಿರಾರು ಭೋಗೇಂದ್ರಿಯವುಳ್ಳವನೂ, ಅನೇಕ ವಿಧವಾದ ಧನಗಳುಳ್ಳವನೂ ಸಜ್ಜನರ ಪಾಲಕನೂ ಆದ ಎಲೈ ಇಂದ್ರನೇ, ಯುದ್ಧಗಳಲ್ಲಿ ನಮಗೆ ವೃದ್ಧಿಕಾರಕನಾಗಿರು."

ಸಾವಿರಾರು ಭೋಗೇಂದ್ರಿಯವುಳ್ಳವನು ಪರಮಾತ್ಮನಾಗಲು ಹೇಗೆ ಸಾಧ್ಯ? ಸಕಲ ಜೀವರಾಶಿಗಳೂ ಇಂದ್ರನ ಸ್ವರೂಪವೇ ಆಗಿದ್ದಾರೆ. ಸಕಲ ಜೀವರಾಶಿಗಳ ಜ್ಯೋತಿಸ್ವರೂಪವಾದ ಆತ್ಮವು ಪರಮಾತ್ಮನ ಅಂಶವೇ ಆಗಿದೆ. ಹಾಗೆಯೇ ಸಕಲ ಜೀವರಾಶಿಗಳ ಮನಸ್ಸೂ ಪರಮಾತ್ಮನ ಮನಸ್ಸಿನ ಅಂಶವೇ ಆಗಿದೆ. ಪರೋಕ್ಷವಾಗಿ ಇಂದ್ರನೇ ಸಕಲ ಭೋಗಭಾಗ್ಯಗಳನ್ನು ಅನುಭವಿಸುತ್ತಿದ್ದಾನೆ.

# ಅಧ್ಯಾಯ–೧೨: ಸಲಿಲ/ಅನಾದಿಯಾದ ಮಹಾಸಮುದ್ರ




ಮೊದಲ ಮೂರು ಚಿತ್ರಗಳು ಮಾತೆಯರ ಮಹಿಮೆ

ಈಗ ಆದಿ–ಅಂತ್ಯವಿಲ್ಲದಷ್ಟು ದೊಡ್ಡದಾಗಿರುವ ಮಹಾಸಮುದ್ರದ ಮಹಿಮೆಯನ್ನು ನೋಡೋಣ. ಮೊದಲು ಆಕಾಶವಿರಲಿಲ್ಲ, ಸರ್ವತ್ರ ಉದಕಗಳೇ ತುಂಬಿದ್ದಿತು. ಇದನ್ನು ಸಂಸ್ಕೃತದಲ್ಲಿ ಸಲಿಲ ಎಂದು ಕರೆಯುತ್ತಾರೆ. ಈ ಮಹಾಸಮುದ್ರದಲ್ಲಿ ಎರಡು ರೀತಿಯ ಜಲವಿರುವುದು. ಅದನ್ನು ,ಸಿಹಿಸಮುದ್ರ/ಕ್ಷೀರ ಸಮುದ್ರ ಹಾಗು ಉಪ್ಪು ಮತ್ತು ಕಹಿಯ ಸಮುದ್ರವೆಂದು ಕರೆಯುತ್ತಾರೆ. ಈ ಉದಕಗಳು ಪರಮಾಣುವಿನ ಮೂಲಕಣಗಳಾಗಿವೆ ಮತ್ತು ಅದು ಶಕ್ತಿರಹಿತವಾಗಿವೆ. ಇದನ್ನು ವಿಜ್ಞಾನಿಗಳು ಮ್ಯಾಟರ್ ಮತ್ತು ಆಂಟಿಮ್ಯಾಟರ್ ಎಂದು ಕರೆಯುತ್ತಾರೆ ಎಂದು ಭಾವಿಸುತ್ತೇನೆ. ಈ ಎರಡೂ ಸಮುದ್ರಗಳ ಮಧ್ಯೆ ಒಂದು ತೆಳುವಾದ ತೆರೆಯಿದೆ ಮತ್ತು ಎರಡೂ ಜಲವು ಒಂದರೊಳಗೊಂದು ಸೇರದೇ ಪ್ರತ್ಯೇಕವಾಗಿರುತ್ತದೆ. (ಪೃಥ್ವಿಯ ಬೇರೆ ಭಾಷೆಗಳಲ್ಲಿರುವ ದೇವವಾಣಿಗಳಲ್ಲಿ ಇದರ ವಿವರಗಳಿವೆ.)

ಇದರ ಅರ್ಥ ಸಿಹಿಸಮುದ್ರ ಮತ್ತು ಉಪ್ಪು ಮತ್ತು ಕಹಿಯ ಸಮುದ್ರವು ಒಂದರೊಳಗೊಂದು ಸೇರಲಾರದು. ಸಿಹಿಸಮುದ್ರದಲ್ಲಿ ದೇವತೆಗಳು ನೆಲೆಸಿರುವರು ಮತ್ತು ಉಪ್ಪು ಮತ್ತು ಕಹಿಯ ಸಮುದ್ರದಲ್ಲಿ ಅಸುರರು ನೆಲೆಸಿರುವರು. ಅಸುರರು ತಮ್ಮ ಮಾನಸಿಕ ಶಕ್ತಿಯಿಂದ ಮೇಲೆ ಬಂದು ಸಿಹಿಸಮುದ್ರವನ್ನು ಆವರಿಸಿಕೊಳ್ಳುವರು. ದೇವತೆಗಳು ಉಪ್ಪು ಮತ್ತು ಕಹಿಯ ಸಮುದ್ರದೊಳಗೆ ಪ್ರವೇಶಿಸಲು ಇಚ್ಛಿಸುವುದಿಲ್ಲ ಆದರೆ ಭಗವಂತನು ಅಸುರ ಸಂಹಾರಮಾಡಿ ಅವರನ್ನು ಪಾತಾಳಕ್ಕೆ ತಳ್ಳಿರುವನು. ಕುಂಡಲಿನೀ ಮಾತೆಯರು ತಾವಿರುವ ತ್ರಿಕೋನದ ಸುತ್ತ ಪ್ರಾಣನಾಡಿಗಳಿಂದ ಕೂಡಿದ ನಾಡಿಕಾಂಡಗಳಿಂದ ಹೊರಟ ೭೨,೦೦೦ ನಾಡಿಗಳು ಆದಿ ಅಂತ್ಯವಿಲ್ಲದ ಮಹಾಸಮುದ್ರವನ್ನೆಲ್ಲಾ ವ್ಯಾಪಿಸಿಕೊಂಡಿವೆ. ಅಂದರೆ ಇಡೀ ಮಹಾಸಮುದ್ರವನ್ನು ಅಥವಾ ಇಡೀ ಬ್ರಹ್ಮಾಂಡವನ್ನು ಈ ನಾಡಿಗಳು ವ್ಯಾಪಿಸಿಕೊಂಡಿವೆ.

ಮೇಲಿನ ವಾಕ್ಯಗಳ ಅರ್ಥ; ಅಧಃ ಕುಂಡಲಿನಿಯ ಸುತ್ತ ಇರುವ ನಾಡಿಕಾಂಡದಿಂದ ಹೊರಹೊಮ್ಮಿದ ೭೨,೦೦೦ ನಾಡಿಗಳು ಊಧ್ವಮುಖವಾಗಿ ಹರಡಿಕೊಂಡು ಬ್ರಹ್ಮಾಂಡವನ್ನೆಲ್ಲಾ ವ್ಯಾಪಿಸಿಕೊಂಡಿದೆ. ಮಧ್ಯ ಕುಂಡಲಿನಿಯ ಸುತ್ತ ಇರುವ ನಾಡಿಕಾಂಡದಿಂದ ೭೨,೦೦೦ ನಾಡಿಗಳು ಅಡ್ಡಲಾಗಿ ಸರ್ವತ್ರ ಬ್ರಹ್ಮಾಂಡವನ್ನು ವ್ಯಾಪಿಸಿಕೊಂಡಿದೆ. ಊರ್ಧ್ವಕುಂಡಲಿನಿಯ ಸುತ್ತ ಇರುವ ನಾಡಿಕಾಂಡದಿಂದ ಹೊರಟ ೭೨,೦೦೦ ನಾಡಿಗಳು ಮಹಾಸಮುದ್ರವನ್ನೆಲ್ಲಾ ಕೆಳಮುಖವಾಗಿ ವ್ಯಾಪಿಸಿಕೊಂಡಿವೆ. ಈಗಾಗಿ ಇಡೀ ಬ್ರಹ್ಮಾಂಡವು ನಾಡಿಗಳಿಂದ ವ್ಯಾಪಿಸಲ್ಪಟ್ಟು ಅದರ ಮೂಲಕ ಪ್ರಾಣವು ಸಂಚಾರವಾಗುತ್ತದೆ.

ರಶ್ಮಿರೂಪದಲ್ಲಿರುವ ಸರ್ಪರೂಪದ ಮಾತೆಯು ಚಕ್ರಗಳನ್ನು ಸೃಷ್ಟಿಸಿಕೊಂಡು ಮಹಾಸಮುದ್ರವನ್ನು ಪ್ರವೇಶಿಸಿದ ಕೂಡಲೆ ಸಿಹಿಸಮುದ್ರವು ಚೈತನ್ಯವನ್ನು ಪಡೆದು ಊರ್ಧ್ವಮುಖವಾಗಿ ಹರಿಯುತ್ತದೆ. ಚಕ್ರಗಳಿಂದ ಹೊರಹೊಮ್ಮುವ ವಾಯುವಿನ ತೇಜಸ್ಸು ಮಹಾಸಮುದ್ರದಂತಿರುವ ಶಕ್ತಿಹೀನ ಕಣಗಳು ಚೈತನ್ಯವನ್ನು ಪಡೆಯುವಂತೆ ಮಾಡುತ್ತದೆ. ಋಗ್ವೇದವು ಚಕ್ರಗಳ ಬಗೆ ಏನೂ ಹೇಳದಿದ್ದರೂ ಮಹಾಸಮುದ್ರವನ್ನು ಮಾತೆಯರು ಪ್ರವೇಶಿಸಿ ತಮ್ಮ ತಮ್ಮ ಸುತ್ತಲೂ ನಾಡಿಕಾಂಡಗಳನ್ನು ಸೃಷ್ಟಿಸಿಕೊಂಡ ಬಗ್ಗೆ ಹೇಳುತ್ತಿದೆ. ಮೂರು ಮಾತೆಯರು ಸೃಷ್ಟಿಸಿದ ನಾಡಿಕಾಂಡಗಳಿಂದ ಸಹಸ್ರಾರು ನಾಡಿಗಳು ಸರ್ವತ್ರ ವ್ಯಾಪಿಸುವುದನ್ನು ಋಗ್ವೇದವು ಈ ರೀತಿ ಹೇಳುತ್ತಿದೆ.

ಸಕಲ ಸೃಷ್ಟಿಯ ಮೂಲವಸ್ತು ಅನಾದಿಯಾದ ಕ್ಷೀರಸಮುದ್ರವಾಗಿದೆ. ಶಕ್ತಿರಹಿತ ಪರಮಾಣುವಿನ ಮೂಲಕಣಗಳ ಸಮೂಹವೇ ಕ್ಷೀರಸಮುದ್ರದಂತೆ ವರ್ತಿಸುತ್ತದೆ.

ತಿರಶ್ಚೀನೋ ವಿತತೋ ರಶ್ಮಿರೇಷಾಮಧಃ ಸ್ವಿದಾಸೀ ದುಪರಿ ಸ್ವಿದಾಸೀತ್ ೧
ರೇತೋಧಾ ಆಸನ್ಮಹಿಮಾನ ಆಸನ್ತ್ಸ್ವಧಾ ಅವಸ್ತಾತ್ಪ್ರಯತಿಃ ಪರಸ್ತಾತ್ ೧೧ (ಋಗ್ವೇದ ೧೦–೧೨೯–೫ ಸಾಭಾ)
"ಈ ಸೃಷ್ಟಿಕಾರ್ಯಗಳ ನಿರ್ವಹಣಕ್ಕಾಗಿ ಕಾರ್ಯೋನ್ಮುಖರೂಪವಾದ ರಶ್ಮಿಯು ಅಥವಾ ಶೀಘ್ರವಾಗಿ ವ್ಯಾಪಿಸುವ ಕಾರ್ಯಾರಂಭವು ಅಡ್ಡಲಾಗಿಯೂ, ಕೆಳಭಾಗದಲ್ಲಿಯೂ, ಮೇಲುಭಾಗದಲ್ಲಿಯೂ ವಿಸ್ತಾರವಾಗಿ ಹರಡಿತು....." (೧೦–೧೨೯–೫ ಸಾಭಾ) (ಇಲ್ಲಿ ಸಾಯಣಭಾಷ್ಯದ ಪದಗಳ ಅರ್ಥವನ್ನು ಗ್ರಹಿಸಿದ್ದೇನೆ.)

ಅಂದರೆ ಅಧಃಕುಂಡಲಿನಿ ಮಾತೆಯ ನಾಡಿಗಳು ಊರ್ಧ್ವಮುಖವಾಗಿಯೂ, ನಾಭಿಕುಂಡಲಿನಿ ಮಾತೆಯ ನಾಡಿಗಳು ಅಡ್ಡಲಾಗಿಯೂ ಮತ್ತು ಊರ್ಧ್ವಕುಂಡಲಿನಿ ಮಾತೆಯ ನಾಡಿಗಳು ಕೆಳಭಾಗದಲ್ಲಿಯೂ ಹರಿಯುತ್ತದೆ. ಈ ನಾಡಿಗಳು ನೋಡಲು ರಶ್ಮಿಯಂತೆಯೇ ಕಾಣುತ್ತದೆ. ಕುಂಡಲಿನಿ ಮಾತೆಯು ಸೃಷ್ಟಿಸಿದ ಸಪ್ತಚಕ್ರಗಳಿಂದ ಹೊರಹೊಮ್ಮುವ ವಾಯುವಿನ ತೇಜಸ್ಸು ನದಿಗಳ ರೂಪದಲ್ಲಿ ಮಹಾಸಮುದ್ರಕ್ಕೆ ಹರಿಯುತ್ತದೆ. ಈ ಪ್ರವಾಹದ ನದಿಗಳನ್ನು ಸಪ್ತಸಿಂದೂ ನದಿಗಳೆಂದು ಋಗ್ವೇದವು ಕರೆಯುತ್ತದೆ.

ಋಗ್ವೇದ ೨–೩೫–೫: ಮೂರು ಜನ ಸ್ತ್ರಿಯರು ಅಹಿಂಸಾತ್ಮಕನಾದ ಅಪಾಂನಪಾತ್ ಸಂಜ್ಞಕನಾದ ಈ ಅಗ್ನಿಗೆ ಸೋಮರೂಪವಾದ ಅನ್ನವನ್ನು ವಹಿಸಿಕೊಂಡು ಹೋಗಿ ಅರ್ಪಿಸುತ್ತಾರೆ. ಉದಕಗಳಲ್ಲಿಯೇ ನಿರ್ಮಿತರಾದಂತೆ ಅವರು ಪ್ರಸರಿಸಿ ಹರಡುತ್ತಾರೆ..... ಉದಕಗಳ ಸಾರಭೂತವೂ ಆದ ಅಮೃತವನ್ನು ಈ ಅಗ್ನಿಯು ಪಾನಮಾಡುತ್ತಾನೆ.

ಅನಾದಿಯಾದ ಮಹಾಸಮುದ್ರವ ಕ್ಷೀರ ಸಮುದ್ರವಾಗಲು ಮೂರು ಕುಂಡಲಿನಿ ಮಾತೆಯರು ಕಾರಣ. ಅವರು ಸಮುದ್ರಕ್ಕೆ ಹಾಲು ಮಿಶ್ರಿತ ಮೊಸರು, ಘೃತ, ಜೇನುತುಪ್ಪ ಮತ್ತು ಸೋಮರಸವನ್ನು ಮಿಶ್ರ ಮಾಡುತ್ತಾರೆ. ಸಪ್ತನದಿಗಳಲ್ಲಿರುವ (ಸಪ್ತಚಕ್ರಗಳಿಂದ ಹರಿಯುವ ನದಿಗಳು) ಶಾಖವನ್ನು ಗರ್ಭರೂಪದಲ್ಲಿ ಧರಿಸಿರುವ ಏಳು ಚಕ್ರದೇವತೆಗಳು ಅದಕ್ಕೆ ಅಮೃತವನ್ನು ಕುಡಿಸಿ, ಶಾಖವು ವೃದ್ಧಿಯಾಗಿ ಅಗ್ನಿಯಾಗಿ ಪ್ರಜ್ವಲಿಸುವಂತೆ ಮಾಡುತ್ತಾರೆ. ದೇವತೆಗಳು ನದಿಯಲ್ಲಿರುವ ಈ ಅಗ್ನಿಯನ್ನು ನೋಡಿ ಯಜ್ಞಕಾರ್ಯಕ್ಕಾಗಿ ಆರಿಸಿಕೊಂಡರು. ಈ ಏಳು ಚಕ್ರದೇವತೆಗಳ ಕುರಿತು ಋಗ್ವೇದವು ಈ ರೀತಿಯಾಗಿ ವಿವರಿಸುತ್ತದೆ.

ವವ್ರಾಜಾ ಸೀಮನದತೀರದಬ್ಧಾ ದಿವೋ ಯಹ್ವೀರವಸಾನಾ ಅನಗ್ನಾಃ ೧
ಸನಾ ಅತ್ರ ಯುವತಯಃ ಸಯೋರೀನೇಕಂ ಗರ್ಭಂ ದಧಿರೇ ಸಪ್ತ ವಾಣೀಃ ೧೧(ಋಗ್ವೇದ ೩–೧–೬ ಸಾಭಾ)
".... ಅಂತರಿಕ್ಷರೂಪದ ಒಂದೇ ಮೂಲಸ್ಥಾನವನ್ನು ಹೊಂದಿರುವವೂ, ಸಪ್ತಸಂಖ್ಯಾತವೂ ಆದ ನದಿಗಳು ಒಬ್ಬನೇ ಆದ ಅಗ್ನಿಯನ್ನು ತಮ್ಮ ಗರ್ಭವಾಗಿ ಧರಿಸಿದರು." (ಶಾಖವು ಏಳೂ ಚಕ್ರಗಳಲ್ಲಿ ಗರ್ಭರೂಪವಾಗಿದ್ದು ಅದರ ಪೋಷಣೆಯಿಂದ ಅಗ್ನಿಯಾಗಿ ವೃದ್ಧಿಯನ್ನು ಹೊಂದುತ್ತದೆ.)

ಹಾಗೆಯೆ ಅಜ್ಞಾನ ಮತ್ತು ಅಂಧಕಾರದಿಂದ ಕೂಡಿದ ಕಪ್ಪುಸರ್ಪವು ಉಪ್ಪು ಮತ್ತು ಕಹಿಯ ಮಹಾಸಮುದ್ರವನ್ನು ಪ್ರವೇಶಿಸಿದ ಕೂಡಲೆ ಉಪ್ಪು ಮತ್ತು ಕಹಿಯ ಸಮುದ್ರವು ಚೈತನ್ಯವನ್ನು ಪಡೆದು ಕೆಳಮುಖವಾಗಿ ಹರಿಯುತ್ತದೆ.

ಸಕಲ ಸೃಷ್ಟಿಯ ಮೂಲಭೂತವಸ್ತು ಈ ಉದಕಗಳಾಗಿವೆ ಮತ್ತು ಅತ್ಯಂತ ಮಹತ್ವದಿಂದೊಡಗೂಡಿದೆ. ದೇವತೆಗಳು ಈ ಜಲದಲ್ಲಿಯೇ ಇರುವರು ಮತ್ತು ಸೃಷ್ಟಿಯಲ್ಲಿ ಏನೇನಿದೆಯೋ ಅವೆಲ್ಲವೂ ಸಿಹಿಸಮುದ್ರದಲ್ಲಿಯೇ ಇವೆ. ಸಿಹಿಸಮುದ್ರದಲ್ಲಿ ಹಾಲು, ಘೃತವೂ, ಮಧುವೂ, ಸೋಮವೂ ಮತ್ತು ಸಕಲ ಔಷಧವೂ ಇದೆ. ಆದ್ದರಿಂದ ಇದನ್ನು ಕ್ಷೀರಸಮುದ್ರವೆಂದು ಪುರಾಣವು ಹೇಳುತ್ತದೆ. ಇಂತಹ ಪರಮಪಾವನವಾದ ಉದಕಗಳು ನಾವು

ಆರೋಗ್ಯಕರವಾಗಿಯೂ ಮತ್ತು ಧೀರ್ಘಕಾಲ ಬಾಳುವಂತೆ ಔಷಧಿಗಳನ್ನು ಉತ್ಪತ್ತಿ ಮಾಡಿ ನಮ್ಮನ್ನು ಸಂರಕ್ಷಿಸಲಿ ಎಂದು ಋಗ್ವೇದ ಮಂತ್ರವು ಹೇಳುತ್ತದೆ.

**ಈಗ ಉದಕಗಳ ಮಹಿಮೆ ಏನು ಎಂಬುದನ್ನು ತಿಳಿಯೋಣ.**

ಅಂಬಯೋ ಯನ್ತ್ಯಧ್ವಭಿರ್ಜಾಮಯೋ ಅಧ್ವರೀಯತಾಮ್।
ಪೃಂಚತೀರ್ಮಧುನಾ ಪಯಃ।। (೧-೨೩-೧೬)
(ಅಂಬಯೋ ಯಂತಿ ಅಧ್ವಭಿಃ ಜಾಮಯೋ ಅಧ್ವರೀಯತಾಮ್। ಪೃಂಚತೀಃ ಮಧುನಾ ಪಯಃ।।)
ಮಾತೃಸ್ವರೂಪರಾದ ಉದಕಗಳು ತಮ್ಮ ಗೊತ್ತುಪಡಿಸಿದ ಮಾರ್ಗಗಳಲ್ಲಿ ಹರಿಯುತ್ತಿರುವುದು. ಯಜ್ಞಾನುಷ್ಠಾನ ವನ್ನಪೇಕ್ಷಿಸುವವರಿಗೆ ದೈವೀ ಸಹೋದರಿಯರು (ಕುಂಡಲಿನಿ ಮಾತೆಯರು) ಉದಕಗಳಿಗೆ ಮಧುವನ್ನು ಮತ್ತು ಹಾಲನ್ನು ಉದಕಗಳ ಜೊತೆ ಬೆರೆಸುವರು.

ಅಮೂರ್ಯಾ ಉಪ ಸೂರ್ಯೇ ಯಾಭಿರ್ವಾ ಸೂರ್ಯಃ ಸಹ।
ತಾ ನೋ ಹಿನ್ವಂತ್ವಧ್ವರಮ್।। (೧-೨೩-೧೭)
(ಅಮೂಃ ಯಾ ಉಪ ಸೂರ್ಯೇ ಯಾಭಿಃ ವಾ ಸೂರ್ಯಃ ಸಹ। ತಾ ನೋ ಹಿನ್ವನ್ತಿ ಅಧ್ವರಂ।।)
ಯಾವ ಉದಕಗಳು ಸೂರ್ಯನ ಸಮೀಪದಲ್ಲಿರುವವೋ ಅಥವಾ ಸೂರ್ಯನ ಒಟ್ಟಿಗೇ ಇರುವವೋ ಅಂಥಹ ಉದಕಗಳು ನಮ್ಮ ಯಜ್ಞವನ್ನು ಸಂತೋಷದಿಂದ ನೆರವೇರುವಂತೆ ಮಾಡಲಿ.

ಅಪೋ ದೇವೀರುಪ ಹ್ವಯೇ ಯತ್ರ ಗಾವಃ ಪಿಬಂತಿ ನಃ।
ಸಿಂಧುಭ್ಯಃ ಕರ್ತ್ವಂ ಹವಿಃ।। (೧-೨೩-೧೮)
ನಾವು ಉದಕಗಳನ್ನೂ ಮತ್ತು ದೈವೀ ಮಾತೆಯರನ್ನೂ ಆಹ್ವಾನಿಸುತ್ತೇವೆ. ನಮ್ಮ ಹಸುಗಳು (ಜ್ಞಾನವೆಂಬ ಹಸುಗಳು) ಯಾವ ಉದಕಗಳನ್ನು ಕುಡಿದು ಪೋಷಣೆಯಾಗುತ್ತವೋ, ಆ ಉದಕಗಳಿಂದ ಹವಿಸ್ಸನ್ನು ಪ್ರದಾನ ಮಾಡಬೇಕು.

ಅಪ್ಸ್ವ-ನ್ತರಮೃತಮಪ್ಸು ಭೇಷಜಮಪಾಮುತ ಪ್ರಶಸ್ತಯೇ।
ದೇವಾ ಭವತ ವಾಜಿನಃ।। (೧-೨೩-೧೯)
(ಅಪ್ಸು ಅಂತಃ ಅಮೃತಮ್ ಅಪ್ಸು ಭೇಷಜಮ್ ಅಪಾಮುತ ಪ್ರಶಸ್ತಯೆ। ದೇವಾ ಭವತ ವಾಜಿನಃ।।)
ಉದಕಗಳ ಮಧ್ಯದಲ್ಲಿ ಅಮೃತವಿರುವುದು. ಉದಕದಲ್ಲಿ ವ್ಯಾದಿಯನ್ನು ಗುಣಪಡಿಸುವ ಔಷಧ'ವಿರುವುದು. ಆದ್ದರಿಂದ ಎಲೈ ದೇವತೆಗಳೆ ನೀವು ಬೇಗನೆ ಆ ಉದಕಗಳನ್ನು ಸ್ತೋತ್ರಮಾಡಲು ಸಿದ್ಧರಾಗಿ.

ಅಪ್ಸು ಮೇ ಸೋಮೋ ಅಬ್ರವೀದನ್ತರ್ವಿಶ್ವಾನಿ ಭೇಷಜಾ। (ಅಬ್ರವೀತ್ ಅನ್ತರ್ವಿಶ್ವಾನಿ)
ಅಗ್ನಿಂ ಚ ವಿಶ್ವಶಂಭುವಮಾಪಶ್ಚ ವಿಶ್ವ ಭೇಷಜೀಃ।। (೧-೨೩-೨೦)
(ಅಪ್ಸು ಮೇ ಸೋಮೋ ಅಬ್ರವಿತ್ ಅನ್ತರ್ವಿಶ್ವಾನಿ ಭೇಷಜಾ। ಅಗ್ನಿಂ ಚ ವಿಶ್ವಶಂಭುವಮ್ ಆಪಶ್ಚ ವಿಶ್ವಭೇಷಜೀಃ।।)
ಜಲಮಧ್ಯದಲ್ಲಿ ವ್ಯಾದಿಗಳನ್ನು ಪರಿಹರಿಸುವ ಸಮಸ್ತ ಔಷಧಿಗಳು ಇರುವುವು. ಅಗ್ನಿಯು ಸಮಸ್ತ ಜಗತ್ತಿಗೂ ಸುಖಃವನ್ನುಂಟುಮಾಡುವವನು. ಉದಕಗಳು ಸಮಸ್ತ ಔಷಧಿಗಳಿಂದ ಕೂಡಿರುವುವು. ಹೀಗೆಂದು ನನಗೆ ಸೋಮ ದೇವತೆಯು ಹೇಳಿದನು."

ಅಪಃ ಪೃಣೀತ ಭೇಷಜಂ ವರೂಥಂ ತನ್ವೇ ೩ ಮಮ।
ಜ್ಯೋಕ್ ಚ ಸೂರ್ಯಂ ದೃಶೇ।। (೧-೨೩-೨೧)
ಎಲೈ ಉದಕಗಳೇ, ನನ್ನ ಶರೀರವು ರೋಗವಿಲ್ಲದಂತೆ ಇರುವುದಕ್ಕಾಗಿ ಉತ್ತಮವಾದ ಔಷಧವನ್ನು ಪೂರ್ಣಮಾಡಿ (ಸಿದ್ಧಪಡಿಸಿ), ಅದರಿಂದ ನಾನು ರೋಗರಹಿತನಾಗಿ ಬಹುಕಾಲ ಸೂರ್ಯನನ್ನು ನೋಡುವಂತಾಗಲಿ ಎಂದರೆ ಬಹುಕಾಲ ಜೀವಿಸುವಂತಾಗಲಿ.

ಇದಮಾಪಃ ಪ್ರ ವಹತ ಯತ್ ಕಿಂ ಚ ದುರಿತಂ ಮಯಿ।

ಯದ್ವಾಹಮಭಿದುದ್ರೋಹ ಯದ್ವಾ ಶೇಪ ಉತಾನೃತಂ।। (೧-೨೩-೨೨)
(ಯದ್ವಾ ಅಹಮ್ ಅಭಿದುದ್ರೋಹ ಯದ್ವಾ ಶೇಪ ಉತಾನೃತಂ।।)
ನನ್ನಲ್ಲಿರಬಹುದಾದ ಅಜ್ಞಾನವಶದಿಂದ ಮಾಡಿದ ಪಾಪಗಳು, ಅಥವಾ ನಾನು ಯಾರಿಗಾದರೂ ದ್ರೋಹವೆಣಿಸಿದ್ದರೂ, ಅಥವಾ ಕೆಟ್ಟಮಾತನ್ನಾಡಿದ್ದರೂ ಮತ್ತು ಸುಳ್ಳನ್ನು ಹೇಳಿದ್ದರೂ ಅಂತಹ ಪಾಪಗಳೆಲ್ಲವನ್ನು ಉದಕಗಳು ಪ್ರವಾಹರೂಪದಲ್ಲಿ ಕೊಚ್ಚಿಕೊಂಡು ಹೋಗಲಿ.

ಆಪೋ ಅದ್ಯಾನ್ವಚಾರಿಷಂ ರಸೇನ ಸಮಗಸ್ಮಹಿ।
ಪಯಸ್ವಾನಗ್ನ ಆ ಗಹಿ ತಂ ಮಾ ಸಂ ಸೃಜ ವರ್ಚಸಾ।। (೧-೨೩-೨೩)
(ಆಪೋ ಅದ್ಯ ಅನು ಅಚಾರಿಷಂ ರಸೇನ ಸಮಗಸ್ಮಹಿ। ಪಯಸ್ವಾನ್ ಅಗ್ನ)
ಈಗ (ಈ ದಿನದಲ್ಲಿ) ಉದಕಗಳನ್ನು ಸಂಪೂರ್ಣವಾಗಿ ಪಡೆದಿದ್ದೇನೆ. ನಾವು ಜಲದ ಸಾರದಿಂದ ಕೂಡಿರುವೆವು. ಎಲೈ ಅಗ್ನಿಯೇ ನೀರಿನಲ್ಲಿ ಇರುವ ನೀನು, ನನ್ನನ್ನು ತೇಜಸ್ವಿಯನ್ನಾಗಿ ಮಾಡು.
ಸಂ ಮಾಗ್ನೇ ವರ್ಚಸಾ ಸೃಜ ಸಂ ಪ್ರಜಯಾ ಸಮಾಯುಷಾ।
ವಿದ್ಯುರ್ಮೇ ಅಸ್ಯ ದೇವಾ ಇನ್ದ್ರೋ ವಿದ್ಯಾತ್ಸಹ ಋಷಿಭಿಃ।। (೧-೨೩-೨೪)
ಎಲೈ ಅಗ್ನಿಯೇ, ನನಗೆ ವರ್ಚಸ್ಸನ್ನೂ, ಪುತ್ರಸಂತಾನವನ್ನೂ, ದೀರ್ಘಾಯಸ್ಸನ್ನೂ ಕರುಣಿಸು. ನಾನು ಮಾಡಿದ ಯಜ್ಞವನ್ನು ದೇವತೆಗಳೂ ಋಷಿಗಳಿಂದ ಸಹಿತನಾದ ಇಂದ್ರನೂ ತಿಳಿಯಲಿ.


ನಾವು ಮಾಡುವ ಅಂತರ್‌ಯಜ್ಞಕ್ಕೆ ಕೊಡುವ ಆಹುತಿಗಳು ಉದಕ ಮೂಲವೇ ಆಗಿದೆಯೆಂದು ೧-೨೩-೧೮ ಹೇಳುತ್ತಿದೆ. ಏಕೆಂದರೆ ಉದಕದಲ್ಲಿಯೇ ಹಾಲು, ಘೃತ, ಮಧು, ಸೋಮ ಮತ್ತು ಸಕಲ ಔಷದಿಗಳು ಇವೆ. ಮೇಲಿನ ಸೂಕ್ತವು ಊರ್ಧ್ವಮುಖವಾಗಿ ಹರಿಯುವ ಸಿಹಿಸಮುದ್ರದ ಉದಕದ ಮಹಿಮೆಯನ್ನು ಹೊಗಳುತ್ತಿದೆ. ಕೇವಲ ಊರ್ಧ್ವಮುಖವಾಗಿ ಹರಿಯುವ ಉದಕಗಳಿಂದ ವಿಶ್ವಸೃಷ್ಟಿಯಾಗಿಲ್ಲ. ಕೆಳಮುಖವಾಗಿ ಹರಿಯುವ ಉಪ್ಪು ಮತ್ತು ಕಹಿಯ ಸಮುದ್ರಗಳ ಉದಕಗಳೂ ಸಹ ಸೃಷ್ಟಿ ಕಾರ್ಯದಲ್ಲಿ ಭಾಗಿಯಾಗುತ್ತದೆ. ಊರ್ಧ್ವಮುಖವಾಗಿ ಹರಿಯುವ ಉದಕಗಳು ದೈವೀಸೃಷ್ಟಿಗೆ ಕಾರಣವಾಗಿದ್ದರೆ. ಉಪ್ಪು ಮತ್ತು ಕಹಿಯ ಸಮುದ್ರದ ಉದಕಗಳಲ್ಲಿರುವ ಅಸುರರು ನಮನ್ನು ಆವರಿಸಿಕೊಂಡು ಅಂಧಕಾರ ಮತ್ತು ಅಜ್ಞಾನದಲ್ಲಿ ಮುಳುಗಿಸಿರಿವರು.

ಮೇಲಿನ ಸೂಕ್ತದಿಂದ ತಿಳಿಯುವುದೇನೆಂದರೆ ಉದಕಗಳಿಗೂ ತಮ್ಮದೇ ಆದ ಮನಸ್ಸಿದೆ. ಈ ಉದಕಗಳಲ್ಲಿ ಎಲ್ಲಾ ರೀತಿಯ ಔಷಧಿಗಳಿವೆ. ಆದ್ದರಿಂದ ಅವುಗಳ ಪ್ರಾರ್ಥನೆಯಿಂದ ನಮ್ಮ ರೋಗಗಳನ್ನು ಗುಣಪಡಿಸಿಕೊಳ್ಳಬಹುದು. ಪೃಥ್ವಿಯ ಮೇಲಿರುವ ಉದಕಗಳು ಸಿಹಿಸಮುದ್ರದ ಉದಕಗಳನ್ನು ಪ್ರತಿನಿಧಿಸುತ್ತವೆ. ಆದ್ದರಿಂದ ಪೃಥ್ವಿಯ ಜಲವೂ ಸಹ ದೈವೀಗುಣಗಳನ್ನು ಹೊಂದಿದೆ.

**ಆದಿ ಯುಗದ ಸೃಷ್ಟಿಯ ಪ್ರಥಮಪಾದ ಇಲ್ಲಿಗೆ ಮುಕ್ತಾಯವಾಯಿತು.**

# ಭಾಗ ೩

## ಅಧ್ಯಾಯ–೧೩: ಅದಿತಿ ಮತ್ತು ದೇವತೆಗಳ ಜನ್ಮ ರಹಸ್ಯ




ಕೊನೆಯ ಮೂರು ಚಿತ್ರಗ.ಳು ದೇವತೆಗಳ ಸೃಷ್ಟಿ

"ಅದಿತಿಯಿಂದ ದಕ್ಷ ಉತ್ಪನ್ನನಾದನು. ಪುನಃ ದಕ್ಷನಿಂದ ಅದಿತಿಯು ಉತ್ಪನ್ನಳಾದಳು."
ಈ ವಾಕ್ಯದ ಅರ್ಥವೇನು?

ಕುಂಡಲಿನಿ ಮಾತೆಯರು ನಿದ್ರಿಸುತ್ತಿರುವರು. ಮಹಾಸಮುದ್ರದ ಜಲವು ಊರ್ಧ್ವಮುಖವಾಗಿ ಹರಿಯುತ್ತಿದೆ. ಇನ್ನೂ ಯಾವ ಸೃಷಿಯು ಆಗಿಲ್ಲ. ಹಾಗಾದರೆ ಸೃಷ್ಟಿಯನ್ನು ಯಾರು ಮಾಡಿದರು? ದೇವತೆಗಳು ಹೇಗೆ ಸೃಷ್ಟಿಯಾದರು? ದೇವಮಾತೆಯಾದ ಅದಿತಿ ಮತ್ತು ಅಸುರಮಾತೆಯಾದ ದಿತಿಯು ಯಾರು? ಕುಂಡಲಿನಿ ಮಾತೆಯರಿಗೂ ಅದಿತಿ ಮತ್ತು ದಿತಿಗೂ ಏನಾದರೂ ಸಂಬಂಧವಿದೆಯೆ? ಎಂಬುದನ್ನು ನೋಡೋಣ.

ನನ್ನ ಅನುಭವವನ್ನು ಹೇಳುವುದಾದರೆ ಒಂದು ದಿನ ನಾಭಿಕುಂಡಲಿನಿಯ ಮೇಲೆ ಧ್ಯಾನ ಮಾಡುವ ತೀವ್ರ ಇಚ್ಛೆ ಉಂಟಾಯಿತು. ಹಾಗಾಗಿ ನಾನು ನಾಭಿಕುಂಡಲಿನಿ ಮೇಲೆ ಧ್ಯಾನವನ್ನು ಮಾಡಲು ತೊಡಗಿದೆನು. ಕೆಲ ಸಮಯದ ನಂತರ ಮಾತೆಯನ್ನು ವಮನ ಮಾಡುವಂತೆ ಮಾಡುವ ಇಚ್ಛೆಯುಂಟಾಯಿತು. ಆಗ ನಾನು ನನ್ನ ಮಾನಸಿಕ ಶಕ್ತಿಯಿಂದ ವಮನ ಮಾಡುವಂತೆ ನಾಭಿಯ ಮೇಲೆ ಒತ್ತಡ ಹಾಕಿದೆನು. ಕೂಡಲೆ ನಾಭಿಕುಂಡಲಿನಿಯು ಸರ್ಪ ಶರೀರದಿಂದ ವಮನ ಮಾಡಿ ತ್ರಿಕೋನ ಮಧ್ಯೆ ಜ್ಯೋತಿರೂಪದಿಂದ ಹೊರಬಂದಳು. ಸರ್ಪ ಶರೀರವು ಟೊಳ್ಳಾದಂತೆ ಕುಸಿಯಿತು ಮತ್ತು ಜ್ಯೋತಿಯು ತ್ರಿಕೋನದಿಂದ ಹೊರಬಂದು ದ್ಯೌಃ ಅಂದರೆ ಅನಾದಿಯಾದ ಮಹಾಸಮುದ್ರದ ಹೊರ ವಲಯಕ್ಕೆ ಬಂದಳು. ಕೆಲ ಹೊತ್ತು ಮಾತೆಯ ಮೇಲೆ ಧ್ಯಾನ ಮಾಡಿ ನಂತರ ತ್ರಿಕೋನದೊಳಗೆ ಬರುವಂತೆ ವಿನಂತಿಸಿದೆನು. ಆಗ ಮಾತೆಯು ಮತ್ತೆ ತ್ರಿಕೋನದೊಳಗೆ ಬಂದು ಟೊಳ್ಳಾದ ಸರ್ಪ ಶರೀರವನ್ನು ಪ್ರವೇಶಿಸಿದಳು. ಸರ್ಪವು ಮತ್ತೆ ಮೊದಲಿನಂತೆ ನಿದ್ರಿಸತೊಡಗಿದಳು.

ಆದಿಯುಗದ ನಂತರ ಜಾಗೃತವಾದ ಮಧ್ಯಕುಂಡಲಿನಿ ಸರ್ಪದ ಮಹಿಮೆಯ ಪರಿಣಾಮವೇ ಈ ಸೃಷ್ಟಿಯಾಗಿದೆ. ಮಧ್ಯಕುಂಡಲಿನಿಯನ್ನು ದೇವಮಾತೆಯೆಂದು ಕರೆಯುತ್ತಾರೆ. ನಾಭಿಯಲ್ಲಿ ಮೇರುದಂಡಕ್ಕೆ

ಅಂಟಿಕೊಂಡಂತಿರುವ ತ್ರಿಕೋನದಲ್ಲಿ ನಿದ್ರಿಸುತ್ತಿದ್ದ ಮಧ್ಯಕುಂಡಲಿನಿಯು ಜಾಗೃತಳಾಗಿ ತನ್ನ ಸರ್ಪರೂಪದ ಪ್ರಾಣಶರೀರವನ್ನು ತ್ಯಜಿಸಿ ಜ್ಯೋತಿರೂಪದಿಂದ ಹೊರಬರುವಳು. ಭೂಮಿಯ ಮೇಲಿರುವ ಸರ್ಪವು ಪೊರೆ ಬಿಟ್ಟಂತೆ; ಅದಿತಿಮಾತೆಯು ವಮನ ಮಾಡಿ ಪ್ರಾಣಮಯವಾದ ಸರ್ಪಶರೀರವನ್ನು ತ್ಯಜಿಸಿ ಜ್ಯೋತಿರೂಪದಿಂದ ಹೊರಬರುತ್ತಾಳೆ.

ಈ ರೀತಿ ಹೊರಬಂದ ಜ್ಯೋತಿಸ್ವರೂಪಳೇ ಅದಿತಿಯಾಗಿದ್ದಾಳೆ. ಅದಿತಿಯು ಜ್ಯೋತಿರೂಪಳು ಮತ್ತು ದೈವೀಮನಸ್ಸನ್ನು ಹೊಂದಿರುವವಳೂ ಆಗಿದ್ದಾಳೆ. ಹೊರಬಂದ ನಂತರ ೭ ಚಕ್ರಗಳಿಂದ ಕೂಡಿದ ಧ್ಯೌಃ ಲೋಕವನ್ನು ಅಂದರೆ ಮಹಾಸಮುದ್ರ ಹೊರವಲಯದಲ್ಲಿ ಸೃಷ್ಟಿಸುತ್ತಾಳೆ. ಧ್ಯೌಃ ದೇವತೆಗಳ ಮತ್ತು ಅಸುರರ ಪಿತೃತ್ವವನ್ನು ಪ್ರತಿನಿಧಿಸುತ್ತಾನೆ. ಏಕೆಂದರೆ ಈ ಲೋಕದಲ್ಲಿಯೇ ದೇವತೆಗಳು ಜನ್ಮತಾಳಿರುವುದು.

ಈ ರೀತಿ ಅದಿತಿಯು ಮಧ್ಯಕುಂಡಲಿನಿಯಿಂದ ಹೊರಬರುವ ವಿಷಯವು ಯಾರಿಗೂ ತಿಳಿದಿಲ್ಲ ಮತ್ತು ಎಲ್ಲಿಯೂ ಹೇಳಿಲ್ಲ. ಹಾಗಾದರೆ ನನಗೆ ಹೇಗೆ ತಿಳಿಯಿತು? **ನಾನು ಯಾವಾಗಲು ನನ್ನ ಅಂತರಾತ್ಮದ ಮಾತನ್ನು ಹಾಗು ಒಳಮನಸ್ಸಿನ ಪ್ರೇರಣೆಯನ್ನು ಪಾಲಿಸುತ್ತೇನೆ.** ಧ್ಯಾನದಲ್ಲಿ ಮುಳುಗಿರುವಾಗ ನನ್ನ ಮನಸ್ಸಿನಲ್ಲಿ ಉದ್ಭವಿಸುವ ಆಲೋಚನೆಯನ್ನು ಪಾಲಿಸುತ್ತೇನೆ. ಹಾಗೆಯೆ ಕೆಲವು ಸಾರಿ ನನ್ನ ಒಳಗಿನಿಂದ ತೀವ್ರವಾದ ಪ್ರಚೋದನೆಯಾಗುತ್ತದೆ, ಆಗ ಅದನ್ನು ಪಾಲಿಸುತ್ತೇನೆ. ಆದ್ದರಿಂದಲೇ ಭಗವಂತನ ಅನೇಕ ರಹಸ್ಯವನ್ನು ತಿಳಿದುಕೊಂಡಿದ್ದೇನೆ.

ದೇವತೆಗಳು ಪರೋಕ್ಷಪ್ರಿಯರಾದುದರಿಂದ ಮೇಲೆ ಹೇಳಿದ ರೀತಿಯಲ್ಲಿ ನಮ್ಮನ್ನು ಅನುಗ್ರಹಿಸುತ್ತಾರೆ. ದೇವತೆಗಳ ಮಾರ್ಗದರ್ಶನದ ವಿಷಯವು ನಮ್ಮ ಗಮನಕ್ಕೆ ಬರುವುದಿಲ್ಲ. ಸಾಮಾನ್ಯವಾಗಿ ಎಲ್ಲರೂ "ಇದು ನಾನು ಕಂಡುಕೊಂಡ ಸತ್ಯ" ಎಂದು ಭಾವಿಸುತ್ತಾರೆ.

## ದೇವಮಾತೆ ಅದಿತಿ

ವೇದದಲ್ಲಿ ಅದಿತಿಯನ್ನು ದೇವಮಾತೆಯೆಂದು ಕರೆಯಲಾಗಿದೆ. ಅದಿತಿ ಶಬ್ದದ ಅರ್ಥ ಅಖಂಡವಾಗಿರುವವಳು, ವಿಸ್ತಾರವಾಗಿರುವವಳು ಅಥವಾ ಅಗಾಧವಾದ ಸ್ವರೂಪವುಳ್ಳವಳು ಎಂದಾಗಿದೆ. ಅದಿತಿ ಪದದ ನಿಷ್ಪತ್ತಿಯು 'ದಾ' ಎಂಬ ಧಾತುವಿನಿಂದಾಗಿದೆ. ಇದರ ಅರ್ಥ ಬಂಧಿಸು, ನಮ್ಮನ್ನು ಕಟ್ಟಿ ಹಾಕು ಎಂದಾಗುತ್ತದೆ. ಅದಿತಿ ಎಂದರೆ ಬಂಧನದಿಂದ ಬಿಡಿಸು, ನಮ್ಮನ್ನು ಕಟ್ಟಿ ಹಾಕಿರುವ ಪಾಶಗಳಿಂದ ಬಿಡಿಸು ಎಂದು ಅರ್ಥೈಸಲಾಗಿದೆ. ಆದ್ದರಿಂದ ಸಾಧಕನು ತಮ್ಮ ಬಂಧನ ವಿಮೋಚನೆಗಾಗಿ ಅದಿತಿಯನ್ನು ಪ್ರಾರ್ಥಿಸುವುದು ಸ್ವಾಭಾವಿಕವಾಗಿದೆ. ಆದ್ದರಿಂದ ಋಗ್ವೇದದ ಕೆಲವು ಮಂತ್ರಗಳನ್ನು ನೋಡೋಣ.

ಅದಿತಿರ್ದ್ಯೌರದಿತಿರಂತರಿಕ್ಷಮದಿತಿರ್ಮಾತಾ ಸ ಪಿತಾ ಸ ಪುತ್ರಃ ।
ವಿಶ್ವೇ ದೇವಾ ಅದಿತಿಃ ಪಂಚ ಜನಾ ಅದಿತಿರ್ಜಾತಮದಿತಿರ್ಜನಿತ್ವಂ ।। (ಋಗ್ವೇದ ೧-೮೯-೧೦ ಸಾಭಾ)
"ಅಖಂಡಳಾದ ಅದಿತಿಯು ಸಕಲ ವಿಶ್ವಕ್ಕೂ ಜನ್ಮದಾತೆಯು. ಅವಳೇ ಜಗಜ್ಜನನಿಯು, ಜಗಜ್ಜನಕನು. ಉತ್ಪನ್ನವಾದ ಸಕಲ ವಸ್ತುವೂ ಅವಳೇ, ಅದಿತಿಯೇ ಉತ್ಪತ್ತಿ ಸ್ಥಾನವು. ವರ್ಣಾತ್ಮಕವಾದ ಮತ್ತು ನಿಷಾದರಿಂದ ಕೂಡಿದ ಐದು ಜಾತಿಯ ಜನರೂ ಅವಳೇ, (ಅಥವಾ ಮಾನವ, ಪಶು, ಪಕ್ಷಿ, ಜಲಚರ ಪ್ರಾಣಿಗಳು ಮತ್ತು ವೃಕ್ಷಗಳು) ಅದಿತಿಯೇ ಸಕಲ ದೇವತೆಗಳು, ಅವಳೇ ಪ್ರಕಾಶಮಾನವಾದ ಸ್ವರ್ಗವು. ಅವಳೇ ಅಂತರಿಕ್ಷವು, ಅವಳೇ ಸಕಲ ವಿಶ್ವವು, ಅವಳೇ ವಿಶ್ವನಿಯಾಮಕಳು." (ಅದಿತಿಯೇ ವಿಶ್ವಮನಸ್ಸಿನ ಬೆಳಕಿನಿಂದ ಕೂಡಿದ ದೈವೀದ್ರವವಾಗಿದ್ದಾಳೆ.)

ದೇವೈರ್ನೋ ದೇವ್ಯದಿತಿರ್ನಿ ಪಾತು ದೇವಸ್ತ್ರಾತಾ ತ್ರಾಯತಾಮಪ್ರಯುಚ್ಛನ್ ।
ತನ್ನೋ ಮಿತ್ರೋ ವರುಣೋ ಮಾಮಹಂತಾಮದಿತಿಃ ಸಿಂಧುಃ ಪೃಥಿವೀ ಉತ ದ್ಯೌಃ ।। (ಋಗ್ವೇದ ೧-೧೦೬-೭ ಸಾಭಾ)
"ದೇವತಾತ್ಮಳೂ, ಸಕಲ ದೇವತೆಗಳ ತಾಯಿಯೂ ಆದ ಅದಿತಿಯು ತನ್ನ ಪುತ್ರರಾದ ಸಕಲ ದೇವತೆಗಳೊಡನೆಯೂ ಕೂಡಿಕೊಂಡು ನಮ್ಮನ್ನು ಸಂಪೂರ್ಣವಾಗಿ ರಕ್ಷಿಸಲಿ. ಪ್ರಕಾಶಮಾನನೂ, ಸಕಲರಿಗೂ ರಕ್ಷಕನೂ ಆದ ಸವಿತೃವು ಯಾವಾಗಲೂ ಜಾಗರೂಕನಾಗಿದ್ದುಕೊಂಡು ನಮ್ಮನ್ನು ರಕ್ಷಿಸಲಿ. ಮಿತ್ರನು, ವರುಣನೂ, ಅದಿತಿಯೂ, ಸಿಂಧು ನದಿಯು, ಪೃಥಿವಿಯೂ ಮತ್ತು ದ್ಯುಲೋಕಾಧಿದೇವತೆಯೂ ನಮ್ಮ ಪ್ರಾರ್ಥಿತವಾದ ಇಷ್ಟಾರ್ಥವನ್ನು ರಕ್ಷಿಸಲಿ."
(ಸಿಂಧು ನದಿಯು ಪೃಥಿವಿಯನ್ನು ಪೋಷಿಸುತ್ತದೆ. ನಾಭಿಯಲ್ಲಿ ಪೃಥಿವಿಯನ್ನು ಪ್ರಕಟಮಾಡಿದ ನಂತರ ಈ ನದಿಯ ಹೆಸರನ್ನು ಉಚ್ಚರಿಸಿದಾಗ ಸಿಂಧು ನದಿಯು ಮೂಲಾಧಾರದ ಸ್ಥಳದಿಂದ ನಾಭಿಯಲ್ಲಿರುವ ಪೃಥಿವಿಯ ಕಡೆಗೆ ಹರಿಯುತ್ತದೆ. ಋಗ್ವೇದದಲ್ಲಿ ಹೇಳಿರುವ ನದಿಗಳ ಹೆಸರನ್ನೇ ಭಾರತದ ನದಿಗಳಿಗೆ ನಾಮಕರಣ ಮಾಡಿರುವರು. )

ಜೋತಿಷ್ಮತೀಮದಿತಿಂ ಧಾರಯತ್ಕ್ಷಿತಿಂ ಸ್ವರ್ವತೀಮಾ
ಸಚೇತೇ ದಿವೇದಿವೇ ಜಾಗೃವಾಂಸಾ ದಿವೇದಿವೇ ।

ಜ್ಯೋತಿಷ್ಮತ್ಕ್ಷತ್ರಮಾಶಾತೇ ಆದಿತ್ಯಾ ದಾನುನಸ್ಪತೀ ಮಿತ್ರಸ್ತರ್ಯೋವರುಣೋ
ಯಾತಯಜ್ಜನೋಽರ್ಯಮಾ ಯಾತಯಜ್ಜನಃ ೧೧ (ಋಗ್ವೇದ ೧-೧೩೬-೩ ಸಾಭಾ)
"ಜ್ಯೋತಿಷ್ಮತಿಯಾದ ಅದಿತಿಯು (ಅಂದರೆ ಜ್ಯೋತಿ ಸ್ವರೂಪಳಾಗಿದ್ದಾಳೆ) ಭೂಮಿಯನ್ನೂ ಸ್ವರ್ಗವನ್ನೂ ಧರಿಸಿದ್ದಾಳೆ. ಪ್ರಬುದ್ಧರಾದ ಎಲೈ ಮಿತ್ರಾವರುಣರೇ (ನೀವು) ಸ್ವರ್ಗಸಾಧನವಾದ ಈ ಯಾಗಕ್ಕೆ ಪ್ರತಿನಿತ್ಯವೂ ಬನ್ನಿ. ಆದಿತ್ಯರು ದಾನಗಳಿಗೆ ಒಡೆಯರೂ ಆದ ಮಿತ್ರಾವರುಣರಿಬ್ಬರೂ ಅಜ್ಯಾದಿ ಸ್ವೀಕಾರದಿಂದ ತೇಜೋವಿಷ್ಟರೂ ಬಲಯುತರೂ ಆಗುತ್ತಾರೆ. **ಅರ್ಯಮನು ಅವರಿಬ್ಬರ ಮಧ್ಯದಲ್ಲಿಯೇ ಇದ್ದು** ಸಮಸ್ತರನ್ನೂ ತಮ್ಮ ತಮ್ಮ ವ್ಯಾಪಾರನಿರತರನ್ನಾಗಿ ಮಾಡುತ್ತಾನೆ ಮತ್ತು (ಆಯಷ್ಟ್ಯಗಳಾದ) ಜನರನ್ನು (ನರಕಾದಿಗಳಿಗೆ) ಕಳುಹಿಸುತ್ತಾನೆ."

(ನನ್ನ ಅಭಿಪ್ರಯದಲ್ಲಿ ಹೇಳುವುದಾದರೆ; ವರುಣನು ಅನಾದಿಯಾದ ಮಹಾಸಮುದ್ರವನ್ನೂ, ಮಿತ್ರನು ವಿದ್ಯುತ್-ಆಯಸ್ಕಾಂತ ಶಕ್ತಿಯನ್ನೂ ಮತ್ತು ಅರ್ಯಮಾ ವಿಜ್ಞಾನಿಗಳು ಹೇಳುವ ಬಲಯುತ ಶಕ್ತಿಯ ಅಧಿದೇವತೆಗಳಾಗಿದ್ದಾರೆ.

...... ಅನಾಗಾಸ್ತವಂ ನೋ ಅದಿತಿಃ ಕೃಣೋತು.... (ಋಗ್ವೇದ ೧-೧೬೨-೨೨ ಆರ್ ಎಲ್ ಕ)
"ಅದಿತಿಯು ನಮಗೆ ಪಾಪರಹಿತವಾದ ಸ್ಥಿತಿಯನ್ನುಂಟುಮಾಡಲಿ.

ಅದಿತಿರ್ನೋ ದಿವಾ ಪಶುಮದಿತಿರ್ನಕ್ತಮದ್ವಯಾಃ ೧
ಅದಿತಿಃ ಪಾತ್ವಂಹಸಃ ಸದಾವೃಧಾ ೧೧ (ಋಗ್ವೇದ ೮-೧೮-೬ ಸಾ ಭಾ)
"ಅದಿತಿಯು ನಮ್ಮ ಪಶುಗಳನ್ನು ಹಗಲಿನಲ್ಲಿಯೂ ರಕ್ಷಿಸಲಿ. ವಂಚಕಬುದ್ಧಿಯಿಲ್ಲದಿರುವ ಅದಿತಿಯು ರಾತ್ರಿಯಲ್ಲಿಯೂ ರಕ್ಷಿಸಲಿ. ಅದೇ ಅದಿತಿಯು ಸರ್ವದಾ ವೃದ್ಧಿಯನ್ನುಂಟುಮಾಡುವ ರಕ್ಷಣೆಗಳಿಂದ ನಮ್ಮನ್ನು ಪಾಪದಿಂದ ರಕ್ಷಿಸಲಿ."

ಸೃಷ್ಟಿಯಲ್ಲಿರುವ ಸಕಲವನ್ನು ಪರೋಕ್ಷವಾಗಿ ಅದಿತಿಯೇ ಸೃಷ್ಟಿಸಿರುವಳು. ಸಕಲ ಜೀವಿಗಳ ರಕ್ಷಣೆಯನ್ನೂ ಸಹ ಮಾಡಿ ಮಾನವರಿಗೆ ಅಮರತ್ವವನ್ನು ಅನುಗ್ರಹಿಸುತ್ತಾಳೆ. ಅದಿತಿಯು ದೇವತೆಗಳಿಗೆ ಜನ್ಮವನ್ನು ಕೊಟ್ಟಿರುವಳು. ಋಗ್ವೇದವು ಅದಿತಿಯನ್ನು ಗೋವಿಗೆ ಹೋಲಿಸಿದೆ. ಸೌಮ್ಯತೆಯ ಮತ್ತು ತಾಯ್ತನದ ಪ್ರತೀಕವಾದ ಗೋಮಾತೆಯು ನಮಗೆ ಅಮೃತ ಸಮಾನವಾದ ಹಾಲನ್ನು (ಉದಕಗಳಿಗೆ ಹಾಲನ್ನು ಸೇರಿಸುವಳು) ಮತ್ತು ಸಂತಾನವನ್ನು (ದೇವತೆಗಳು) ಅನುಗ್ರಹಿಸುವ ಕಾರಣದಿಂದ ಅದಿತಿಯನ್ನು ಗೋವು ಎಂದು ವೇದಮಂತ್ರಗಳು ಕರೆಯುತ್ತವೆ. ಅಂತರ್ ಸಾಧನೆಯನ್ನು ಮಾಡಿರುವ ಸಾಧಕನು ಮಧ್ಯಕುಂಡಲಿನಿಯ ಮೇಲೆ ಧ್ಯಾನಾಸಕ್ತನಾಗಿ, ಆಕೆಯ ದರ್ಶನವನ್ನು ಪಡೆದು, ತನ್ನ ಮನಸ್ಸಿನ ಇಚ್ಛಾಶಕ್ತಿಯಿಂದ ಅದಿತಿಯು ಪ್ರಾಣಶರೀರವನ್ನು ತ್ಯಜಿಸುವಂತೆ ಮಾಡಬಹುದು.

**<u>ಧ್ಯೌಃ ಲೋಕ:</u>** ನಾಭಿ ಕುಂಡಲಿನಿ ಮಾತೆಯು ವಮನ ಮಾಡಿ ಸರ್ಪರೂಪನ್ನು ತ್ಯಜಿಸಿ ಜ್ಯೋತಿರೂಪದಲ್ಲಿ ಹೊರಬರುತ್ತಾಳೆ. ಅದಿತಿಯು ಮೊದಲು ಸಿಹಿಸಮುದ್ರದ ಹೊರಭಾಗಕ್ಕೆ ಬರುತ್ತಾಳೆ ಮತ್ತು ಏಳುಚಕ್ರಗಳನ್ನು ರಚಿಸುತ್ತಾಳೆ. ಇದೇ ರೀತಿ ವಿಶ್ವಮನಸ್ಸಿನ ವಿರುದ್ಧ ಧೃವವಾದ ಕಪ್ಪು ಕುಂಡಲಿನಿಯು ದಿತಿ ರೂಪದಲ್ಲಿ ಹೊರಬಂದು ಕಪ್ಪು ಮತ್ತು ಉಪ್ಪಿನ ಸಮುದ್ರದಲ್ಲಿ ಏಳು ಚಕ್ರಗಳನ್ನು ಸೃಷ್ಟಿಸುತ್ತಾಳೆ. ದಿತಿ ಮತ್ತು ಅದಿತಿಯರು ಸೃಷ್ಟಿಸಿದ ಚಕ್ರಗಳ ಹೊರ ಆವರಣವನ್ನು ಧ್ಯೌಃ ಅಥವಾ ಧ್ಯೌಃ ಲೋಕ ಎಂದು ಕರೆಯುತ್ತಾರೆ. ಈ ಹೊರ ಆವರಣದಲ್ಲಿ ಅದಿತಿಯು ದೇವತೆಗಳಿಗೆ ಜನ್ಮವನ್ನು ಕೊಡುತ್ತಾಳೆ ಹಾಗೆಯೆ ದಿತಿಯು ಅಸುರರಿಗೆ ಜನ್ಮವನ್ನು ಕೊಡುತ್ತಾಳೆ. ದೇವತೆಗಳ ಲೋಕವು ಬೆಳಕನ್ನು ಪ್ರತಿನಿಧಿಸುತ್ತದೆ ಮತ್ತು ಅಸುರರು ಲೋಕವು ಕತ್ತಲನ್ನು ಪ್ರತಿನಿಧಿಸುತ್ತದೆ. ದೇವಾಸುರರು **ಧ್ಯೌಃ**ನಲ್ಲಿ ಹುಟ್ಟಿದ ಕಾರಣಕ್ಕೆ **ಧ್ಯೌಃ** ದೇವಾಸುರರ ಪಿತೃತ್ವವನ್ನು ಪಡೆದಿದ್ದಾನೆ.

೧. ಧ್ಯೌಃ ನಲ್ಲಿ ಊರ್ಧ್ವಮುಖವಾಗಿ ಹರಿಯುತ್ತಿದ್ದ ಉದಕಗಳಿಂದ ಸೂರ್ಯ-ಸವಿತೃವನ್ನು ದೇವತೆಗಳು ಸೃಷ್ಟಿಮಾಡುತ್ತಾರೆ.
೨. ನಾಭಿ ಕುಂಡಲಿನಿಯ ಸಪ್ತಚಕ್ರಗಳಿಂದ ಹರಿಯುವ ನದಿಗಳಲ್ಲಿರುವ ಸಪ್ತ ಅಗ್ನಿಯನ್ನು ದೇವತೆಗಳು ಯಜ್ಞಕ್ಕಾಗಿ ಬಳಸಿಕೊಳ್ಳುತ್ತಾರೆ. ಈ ಕಾರಣಕ್ಕಾಗಿ ಅಗ್ನಿಯನ್ನು ಸಪ್ತಜ್ವಾಲೆಗಳಿಂದ ಕೂಡಿದವನು ಎಂದು ಹೇಳುತ್ತಾರೆ.

ಆದರೆ ಯಾವಾಗ ಅಸುರ ರಾಜನಾದ ವೃತ್ರಾಸುರ ಮತ್ತು ಇತರ ರಾಕ್ಷಸರನ್ನು ಸಂಹರಿಸಿ ಪಾತಾಳಕ್ಕೆ ತಳ್ಳಿ ಅದರ ಬಾವಿಯಂತಹ ಗುಹೆಯನ್ನು ಮುಚ್ಚಿದ್ದಕ್ಕಾಗಿ ಧ್ಯೌಃ ಇಂದ್ರನನ್ನು ವಿರೋದಿಸುತ್ತಾನೆ. ಆಗ ಇಂದ್ರನು **ಧ್ಯೌಃ**ನನ್ನು ನಿಗ್ರಹಿಸುತ್ತಾನೆ. ಈ ಕಾರಣಕ್ಕಾಗಿ ತನ್ನ ತಾಯಿಯಾದ ಅದಿತಿಯನ್ನು ವಿಧವೆಯನ್ನಾಗಿ ಇಂದ್ರನು ಮಾಡಿದ್ದಾನೆಂದು ಋಗ್ವೇದವು ಹೇಳುತ್ತದೆ.

ನಮ್ಮ ಶರೀರವನ್ನು ಉದಾಹರಣೆ ಕೊಡುವುದಾದರೆ; ನಮ್ಮ ಶರೀರದ ಹಿಂಭಾಗದಲ್ಲಿ ಅಧಃಕುಂಡಲಿನಿಯು ಏಳು ಚಕ್ರಗಳನ್ನು ಸೃಷ್ಟಿಸಿ ಬೆನ್ನು ಹುರಿಯು ಲಂಬವಾಗಿರುವಂತೆ ಮಾಡಿದ್ದಾಳೆ. ಬೆನ್ನು ಹುರಿಯ ಮುಂಭಾಗದಲ್ಲಿ ನಾಭಿಯ ಬಳಿ ನಾಭಿ ಕುಂಡಲಿನಿಯು ಏಳು ಚಕ್ರಗಳನ್ನು ಸೃಷ್ಟಿಸಿ, ಅದಿತಿಯ ರೂಪದಲ್ಲಿ ಹೊರಬಂದು **ಧ್ಯೌಃ** ಲೋಕವನ್ನೂ ಸೃಷ್ಟಿಸಿದ್ದಾಳೆ. ಊರ್ಧ್ವಕುಂಡಲಿನಿಯು ಬಹುಷಃ ಸಿಹಿ ಸಮುದ್ರದ ಮೇಲ್ಭಾಗವನ್ನು ಅತಿಯಾಗಿ ಮೇಲ್ಮುಖವಾಗಿ ಹೋಗುವುದನ್ನು ನಿಯಂತ್ರಿಸಬಹುದು.

ಈ ಕೆಳಗಿನ ಋಗ್ವೇದ ಮಂತ್ರಗಳಿಂದ **ಅದಿತಿಯಿಂದ ಜನ್ಮ ತಾಳಿದ ದೇವತೆಗಳ ಉತ್ಪತ್ತಿಯನ್ನು ತಿಳಿಯೋಣ.**

ದೇವಾನಾಂ ನು ವಯಂ ಜಾನಾ ಪ್ರ ವೋಚಾಮ ವಿಪನ್ಯಯಾ ।
ಉಕ್ಥೇಷು ಶಸ್ಯಮಾನೇಷು ಯಃ ಪಶ್ಯಾದುತ್ತರೇ ಯುಗೇ ।। (ಋಗ್ವೇದ ೧೦-೭೨-೧ ಸಾ ಭಾ)
"ಹಿಂದಿನ ಯುಗಗಳಲ್ಲಿ ಉತ್ಪನ್ನವಾಗಿದ್ದರೂ ಸಹ ಯಾವ ಆದಿತ್ಯಾದಿ ದೇವತೆಗಳು ಈಗಲೂ ಮತ್ತು ಮುಂದಿನ ಯುಗಗಳಲ್ಲೂ ಅವರನ್ನು ಪ್ರಶಂಸಿಸುವ ಉಕ್ಥಮಂತ್ರಗಳು ಪಠಿತವಾಗುವಾಗ ಮಾನವರನ್ನು ಅನುಗ್ರಹದೃಷ್ಟಿಯಿಂದ ನೋಡಬಲ್ಲರೋ, ಅಂತಹ ಆದಿತ್ಯಾದಿ ದೇವತೆಗಳ ಉತ್ಪತ್ತಿಕ್ರಮಗಳನ್ನು ನಾವು ಈಗ ಸ್ಪಷ್ಟವಾದ ಸ್ತುತಿವಾಕ್ಯಗಳಿಂದ ಪ್ರಶಂಸಿಸಿ ಪಠಿಸೋಣ."

ದೇವಾನಾಂ ಯುಗೇ ಪ್ರಥಮೇಽಸತಃ ಸದಜಾಯತ ।
ತದಾಶಾ ಅನ್ವಜಾಯಂತ ತದುತ್ತಾನಪದಸ್ಪರಿ ।। (ಋಗ್ವೇದ ೧೦-೭೨-೩ ಸಾ ಭಾ)
"ದೇವತೆಗಳು ಪ್ರಥಮ ಯುಗದಲ್ಲಿ (ಆದಿಕಾಲದಲ್ಲಿ) ಉತ್ಪನ್ನರಾದರು. ನಾಮರೂಪರಹಿತವಾದ (ಅಸತ್) ತತ್ವದಿಂದ ನಾಮರೂಪಗಳಿಂದ ಕೂಡಿದ ಜಗತ್ತತ್ವವು (ಸತ್) ಉತ್ಪನ್ನವಾಯಿತು. ಅದಾದ ನಂತರ ದಿಕ್ಕುಗಳು ಉತ್ಪನ್ನವಾದವು. ಆ ನಂತರ (ಸೃಷ್ಟಿಯು) ಊರ್ಧ್ವಮುಖವಾಗಿ (ವೃಕ್ಷ, ಪ್ರಾಣಿ ಮನಷ್ಯರು ಇತ್ಯಾದಿ) ಬೆಳೆಯಿತು..."

ಭೂರ್ಜಜ್ಞ ಉತ್ತಾನಪದೋ ಭುವ ಆಶಾ ಅಜಾಯಂತ ।
ಅದಿತೇರ್ದಕ್ಷೋ ಅಜಾಯತ ದಕ್ಷಾದದಿತಿಃ ಪರಿಃ ।। (ಋಗ್ವೇದ ೧೦-೭೨-೪ ಸಾಭಾ)
"ವೃಕ್ಷದಿಂದ ಭೂಲೋಕವು ಉತ್ಪನ್ನವಾಯಿತು. ಪೃಥ್ವಿಯಿಂದ ದಿಕ್ಕುಗಳು ಉತ್ಪನ್ನವಾದವು. ಅದಿತಿಯಿಂದ ದಕ್ಷ ಉತ್ಪನ್ನನಾದನು. ಪುನಃ ದಕ್ಷನಿಂದ ಅದಿತಿಯು ಉತ್ಪನ್ನಳಾದಳು."

(ಈ ವೃಕ್ಷವು ಊರ್ಧ್ವಮೂಲ ವೃಕ್ಷವಾಗಿದೆ. ಇದರ ಕೊಂಬೆಗಳು ದ್ಯಾವ-ಪೃಥ್ವಿ-ಅಂತರಿಕ್ಷ ಲೋಕಗಳು.)

ನಾನು ನನ್ನ ಇಚ್ಛಾಶಕ್ತಿಯಿಂದ ಮಧ್ಯಕುಂಡಲಿನಿ ಮಾತೆಯು ಜ್ಯೋತಿರೂಪದಿಂದ ಹೊರಬರುವಂತೆ ಮಾಡಿದೆನು. ಆದರೆ ದಕ್ಷನೆಂದರೆ ಯಾರು, ದಕ್ಷ ಪದದ ಅರ್ಥ ಏನೆಂದು ನನಗೆ ತಿಳಿದಿರಲಿಲ್ಲ. ನನಗೆ ಸಮಾದಾನವಾಗುವಂತಹ ಪದದ ಅರ್ಥ ಎಲ್ಲೂ ಬರೆದಿರಲಿಲ್ಲ. ಕೆಲವು ತಿಂಗಳ ನಂತರ ಗೂಗಲ್‌ನಲ್ಲಿರುವ ವಿಸ್ಡಮ್ ಲೈಬ್ರರಿಯಲ್ಲಿ ಆ ಪದದ ಅರ್ಥವನ್ನು ತಿಳಿದುಕೊಂಡೆನು. ಅದರಲ್ಲಿ ದಕ್ಷ ಪದದ ಅರ್ಥವನ್ನು "ಮನಸ್ಸಿನ ಇಚ್ಛಾಶಕ್ತಿಯಿಂದ ಸೃಷ್ಟಿಸಲ್ಪಟ್ಟವನು" ಎಂದು ಬರೆದಿದ್ದಿತು.

ಆಗ ನನಗೆ ದಕ್ಷ ಪದದ ಅರ್ಥ ತಿಳಿಯಿತು. ಅಂದರೆ ದೈವೀ ಮನಸ್ಸಿನ ಅದಿತಿಯ ಇಚ್ಛಾಶಕ್ತಿ ದಕ್ಷನಾಗಿದ್ದಾನೆ ಮತ್ತು ದಕ್ಷನ ಇಚ್ಛಾಶಕ್ತಿಯಿಂದ ಅದಿತಿಯು ತನ್ನ ಸರ್ಪರೂಪದಿಂದ ಹೊರಬಂದಳು. ಆದ್ದರಿಂದ ದಕ್ಷನ ಮಗಳು ಅದಿತಿಯು ಮತ್ತು ಅದಿತಿಯ ಪುತ್ರನು ದಕ್ಷನಾಗಿದ್ದಾನೆ. ಅಂದರೆ ದೈವೀಮನಸ್ಸಿನವಳು ಅದಿತಿ ಮತ್ತು ದೈವೀಮನಸ್ಸಿನ ಇಚ್ಛಾಶಕ್ತಿ ದಕ್ಷ ಆಗಿದ್ದಾನೆ ಅಥವಾ **ವಿಶ್ವಮನಸ್ಸಿನ ಇಚ್ಛಾಶಕ್ತಿ ದಕ್ಷನಾಗಿರಬಹುದು**. ಏಕೆಂದರೆ ಕಪ್ಪುಸರ್ಪದಿಂದ ಹೊರಬಂದ ದಿತಿಯೂ ಸಹ ಇದೇ ರೀತಿ ಅಸುರರಿಗೆ ಜನ್ಮವನ್ನು ಕೊಟ್ಟಿರಬಹುದು.

ಅದಿತಿರ್ಹ್ಯಜನಿಷ್ಟ ದಕ್ಷ ಯಾ ದುಹಿತಾ ತವ
ತಾಂ ದೇವಾ ಅನ್ವಜಾಯಂತ ಭದ್ರಾ ಅಮೃತಬಂಧವಃ (ಋಗ್ವೇದ ೧೦-೭೨-೫ ಸಾ ಭಾ)
"ಎಲೈ ದಕ್ಷದೇವನೇ, ನಿನ್ನ ಪುತ್ರಿಯಾದ ಅದಿತಿಯು ಆದಿತ್ಯಾದಿ ಪುತ್ರರನ್ನು ಹಡೆದಳು. ಅವಳನ್ನು ಹಿಂಬಾಲಿಸಿ ಮಂಗಳಕರರೂ, ಮರಣರೂಪವಾದ ಬಂಧನರಹಿತರೂ ಆದ ಇತರ ದೇವತೆಗಳು ಉತ್ಪನ್ನರಾದರು." (ತ್ವಷ್ಟಾ, ಪುರುಷ, ವಾಗ್ದೇವತಾದಿ ದೇವತೆಗಳು)

## ಸೃಷ್ಟಿಕರ್ತರಾದ ಆದಿತ್ಯರ ಜನನ

ಅಷ್ಟೌ ಪುತ್ರಾಸೋ ಅದಿತೇರ್ಯೇ ಜಾತಾಸ್ತನ್ವಸ್ಪರಿ।
ದೇವಾನ್ ಉಪ ಪ್ರೈತ್ಸಪ್ತಭಿಃ ಪರಾ ಮಾರ್ತಾಂಡಮಾಸ್ಯತ್ ।। (ಋಗ್ವೇದ ೧೦-೭೨-೮ ಸಾ ಭಾ)

“ಯಾವ ದೇವತೆಗಳು ಅದಿತಿಯ ದೇಹದಿಂದ ಉತ್ಪನ್ನರಾದರೋ ಅಂತಹ ಅದಿತಿಯ ಪುತ್ರರು ಎಂಟು ಮಂದಿ. ಅವರಲ್ಲಿ ಏಳು ಪುತ್ರರೊಂದಿಗೆ ದೇವತೆಗಳನ್ನು ಸಮೀಪಿಸಿದಳು. (ಎಂಟನೆಯವನಾದ) ಮಾರ್ತಾಂಡನನ್ನು ಮೇಲಕ್ಕೆ ಎಸೆದಳು.”

ಅದಿತಿಯ ಪುತ್ರರು ಇಂದ್ರ, ಮಿತ್ರಾ, ವರುಣ, ಆರ್ಯಮಾ, ಭಗ, ದಕ್ಷ, ಅಂಶ ಮತ್ತು ಮಾರ್ತಾಂಡರಾಗಿದ್ದಾರೆ. ಇಂದ್ರನು ಜ್ಯೇಷ್ಠಪುತ್ರನಾಗಿ, ಕ್ಷತ್ರಿಯ ಸ್ವಭಾವದಿಂದ ಕೂಡಿ ಅಸುರಶಕ್ತಿಗಳನ್ನು ಸೋಲಿಸುವವನಾದುದರಿಂದ ತನ್ನ ಸಾಮ್ರಾಜ್ಯವನ್ನು ವಿಶ್ವದ ಮೇಲೆ ಸ್ಥಾಪಿಸಿ ಮೂರು ಲೋಕಗಳನ್ನು ಆಳುತ್ತಿರುವನು.

ಸಪ್ತಭಿಃ ಪುತ್ರೈರದಿತಿರುಪ ಪ್ರೈತ್ಪೂರ್ವ್ಯಂ ಯುಗಂ ।

ಪ್ರಜಾಯೈ ಮೃತ್ಯವೇ ತ್ವತ್ಪುನರ್ಮಾರ್ತಾಂಡಮಾಭರತ್ ।। (ಋಗ್ವೇದ ೧೦-೭೨-೯ ಸಾ ಭಾ)

“**ಅದಿತಿಯು ಏಳು ಜನ ಪುತ್ರರೊಂದಿಗೆ ಹಿಂದಿನ ಯುಗಕ್ಕೆ ಹೋಗಿ ಸೇರಿದಳು.** ಉಳಿದ ಎಂಟನೆಯ ಆದಿತ್ಯನನ್ನು ಪ್ರಾಣಿಗಳ ಉತ್ಪನ್ನಕ್ಕಾಗಿಯೂ, ಅವುಗಳ ಕ್ಷಯಕ್ಕಾಗಿಯೂ ಸಹ ದ್ಯುಲೋಕದಲ್ಲಿ ಸ್ಥಾಪಿಸಿದಳು.”

ಅದಿತಿಯ ಎಂಟನೆಯ ಪುತ್ರನು ಮಾರ್ತಾಂಡನೆಂದು ಕರೆಯಲ್ಪಟ್ಟಿರುವ ಮಾರ್ತಾಂಡನು ದೇವತೆಗಳಂತೆ ರೂಪವನ್ನು ಹೊಂದಿಲ್ಲದೆ ಅಂಡ ಅಥವಾ ಮುದ್ದೆಯಂತೆ ಕಾಣುತ್ತಿದ್ದನು. ಆದ್ದರಿಂದ ದೇವಮಾತೆಯಾದ ಅದಿತಿಯ ಮಾರ್ತಾಂಡನನ್ನು ಮೇಲಕ್ಕೆ ಎಸೆದು ಇತರ ಮಕ್ಕಳೊಂದಿಗೆ ಆದಿ ಯುಗಕ್ಕೆ (ತನ್ನ ತ್ರಿಕೋನಕ್ಕೆ) ಹಿಂತಿರುಗಿದಳು.

ಮಾರ್ತಾಂಡ ಪದವನ್ನು ವಿಭಜಿಸಿದಾಗ ಅದು ಮರ್ತ್ಯ + ಅಂಡ ಎಂದಾಗುತ್ತದೆ ಅಂದರೆ ಮಾನವರ ಜನನಕ್ಕೆ ಕಾರಣವಾದ ಮೊಟ್ಟೆ ಎಂದಾಗುತ್ತದೆ. ಅದಿತಿಯ ಪುತ್ರನಾದ ಮಾರ್ತಾಂಡನೇ ಸಕಲ ಜೀವರಾಶಿಗಳ ಸೃಷ್ಟಿಯ ಬೀಜವಾಗಿದ್ದಾನೆ. ವಿಜ್ಞಾನಿಗಳೂ ಜೀವರಾಶಿಗಳ ರಚನೆಗೆ ಮೂಲವಾದ ಜೀವಕೋಶ ಎಲ್ಲಿಂದ ಬಂದಿತು ಎಂದು ತಿಳಿಯಲು ಪ್ರಯತ್ನಿಸುತ್ತಿದ್ದಾರೆ. ಡಿ.ಎನ್.ಎ; ಇತ್ಯಾದಿ ಜೀವಕೋಶಗಳ ಮೂಲ ಮಾರ್ತಾಂಡನೇ ಆಗಿದ್ದಾನೆ ಎಂದು ಭಾವಿಸುತ್ತೇನೆ. ಅದರ ಅರ್ಥ ನಮ್ಮ ಶರೀರ ಅಂದರೆ ನಾವೂ ಸಹ ಅದಿತಿಯ ಪುತ್ರರಾಗಿದ್ದೇವೆ.

ದೇವತೆಗಳು ಮಾರ್ತಾಂಡನಿಂದಲೇ ಮಾನವರನ್ನೂ ಸೇರಿ ಸಕಲ ಜೀವರಾಶಿಗಳನ್ನೂ ಸೃಷ್ಟಿಸಿದರು ಎಂದು ಋಗ್ವೇದವು ಹೇಳುತ್ತಿದೆ. ಆದ್ದರಿಂದ ನಮ್ಮ ಸ್ಥಿತ್ಯಂತರವೇನಿದ್ದರೂ ದೇವತೆಗಳು ಸೃಷ್ಟಿಸಿದ ದ್ಯುಲೋಕ ಮತ್ತು ಪೃಥ್ವಿ ಲೋಕಗಳಾಗಿದೆ. ಜೀವರಾಶಿಗಳು ಮರಣ ಹೊಂದಿದಾಗ ದ್ಯುಲೋಕಕ್ಕೂ ಮತ್ತೆ ಪುನರ್‌ಜನ್ಮ ಪಡೆದಾಗ ಪೃಥ್ವಿ ಲೋಕಕ್ಕೂ ಬರುತ್ತಾ ಹೋಗುತ್ತಲಿರುತ್ತವೆ. ಈ ನಿರಂತರ ಪ್ರಯಾಣದಿಂದ ತಪ್ಪಿಸಿಕೊಂಡು ಅಮರತ್ವ ಪಡೆಯುವುದೇ ನಮ್ಮ ಜೀವನದ ಉದ್ದೇಶ. ಈಗ ಆದಿತ್ಯರ ಮಹಿಮೆಯನ್ನು ಕುರಿತ ಕೆಲವು ಮಂತ್ರಗಳನ್ನು ನೋಡೋಣ.

ಪ್ರ ಮಿತ್ರಯೋರ್ವರುಣಯೋಃ ಸ್ತೋಮೋ ನ ಏತು ಶೂಷ್ಯಃ ।

ನಮಸ್ವಾನ್ತುವಿಜಾತಯೋಃ ।। (ಋಗ್ವೇದ ೭-೬೬-೧ ಸಾಭಾ)

“ಅನೇಕ ಜನ್ಮಗಳನ್ನು ಹೊಂದುವ ಮಿತ್ರಾವರುಣರನ್ನುದ್ದೇಶಿಸಿ ನಾವು ಅರ್ಪಿಸುವ ಸುಖಕರವಾದುದೂ. ಹವಿಸ್ಸಿನಿಂದ ಯುಕ್ತವಾದುದೂ ಆದ ಈ ಸ್ತೋತ್ರವು ಅವರ ಬಳಿಗೆ ಹೋಗಿ ಸೇರಲಿ.

ಆದಿತ್ಯರು ಸಕಲ ಗೆಲಾಕ್ಸಿಗಳಲ್ಲಿ, ಸೂರ್ಯರಲ್ಲಿ ಮತ್ತು ಸಕಲ ಜೀವರಾಶಿಗಳ ಹೃದಯದಲ್ಲಿ ನೆಲೆಸಿರುವರು, ಆದುದರಿಂದ ಅವರನ್ನು ಅನೇಕ ಜನ್ಮಗಳನ್ನು ಹೊಂದುವವರೆಂದು ಬಣ್ಣಿಸಿದೆ.

ಯಾ ಧಾರಯಂತ ದೇವಾಃ ಸುದಕ್ಷಾ ದಕ್ಷಪಿತರಾ।

ಅಸುರ್ಯಾಯ ಪ್ರಮಹಸಾ।। (೭-೬೬-೨)

ಎಲೈ ಮಿತ್ರಾವರುಣರೇ, ಉತ್ತಮವಾದ ಬಲವುಳ್ಳವರೂ ದಕ್ಷನನ್ನು ತಂದೆಯಾಗಿ ಪಡೆದವರೂ ಅತ್ಯಂತ ತೇಜಸ್ವಿಗಳೂ ಆದ ಯಾವ ನಿಮ್ಮನ್ನು ಹಿಂದಿನ ದೇವತೆಗಳು ಎಲ್ಲರಿಗೂ ಬಲವನ್ನುಂಟುಮಾಡಲು ಸ್ಥಾಪಿಸಿದರೋ ಅಂತಹ ನೀವು ನಮ್ಮ ಯಾಗಾದಿಕರ್ಮಗಳನ್ನು ಫಲಪ್ರದವಾಗುವಂತೆ ಮಾಡಿರಿ.

ತಾ ನಃ ಸ್ತಿಪಾ ತನೂಪಾ ವರುಣ ಜರಿತೃಣಾಂ।

ಮಿತ್ರ ಸಾಧಯತಂ ಧಿಯಃ।।(೭-೬೬-೩)

ಪೂರ್ವೋಕ್ತಗುಣವಿಶಿಷ್ಟರಾದವರೂ, ಗೃಹಗಳಿಗೂ ಶರೀರಾದಿಗಳಿಗೂ, ರಕ್ಷಕರಾದವರೂ ಆದ ಎಲೈ ಮಿತ್ರಾವರುಣರೇ, ನೀವು ನಿಮ್ಮನ್ನು ಸ್ತುತಿಸುತ್ತಿರುವ ನಮ್ಮ ಸ್ತುತಿರೂಪವಾದ ಈ ಯಜ್ಞಕರ್ಮವನ್ನು ಫಲಪ್ರದವಾಗುವಂತೆ ಮಾಡಿರಿ.

ಯದದ್ಯ ಸೂರ ಉದಿತೇಽನಾಗಾ ಮಿತ್ರೋ ಅರ್ಯಮಾ।

ಸುವಾತಿ ಸವಿತಾ ಭಗಃ।। (೭-೬೬-೪)

ನಾವು ಆಪೇಕ್ಷಿಸುವ ಧನವನ್ನು ಈ ದಿವಸ ಸೂರ್ಯನು ಉದಯಿಸಿತ್ತಿರುವಾಗ ಪ್ರಾತಃಸವನಕಾಲದಲ್ಲಿ ಪಾಪಪರಿಹಾರಕರಾದ, ಮಿತ್ರ, ಅರ್ಯಮಾ, ಸವಿತೃ, ಭಗ ಎಂಬ ದೇವತೆಗಳು ನಮಗೆ ಲಭಿಸುವಂತೆ ಪ್ರೇರಿಸಲಿ.

ಸುಪ್ರಾವೀರಸ್ತು ಸ ಕ್ಷಯಃ ಪ್ರ ನು ಯಾಮನ್ತುಸುದಾನವಃ।
ಯೇ ನೋ ಅಂಹೋಽತಿಪಿಪ್ರತಿ॥ (೭-೬೬-೫)
ಎಲೈ ಮಿತ್ರಾವರುಣಾರ್ಯಮರೇ, ನಮ್ಮ ಪಾಪಗಳನ್ನು ಪರಿಹರಿಸಿ ನಮ್ಮನ್ನು ದಾಟಿಸುವ ನೀವು ನಮ್ಮಲ್ಲಿಗೆ ಬಂದು ಹೋದನಂತರ ನಾವು ವಾಸಮಾಡುವ ಗೃಹವು ಯಾವ ಭಯವೂ ಇಲ್ಲದೆ ಸುರಕ್ಷಿತವಾಗುವುದು.

ಉತ ಸ್ವರಾಜೋ ಅದಿತಿರದಬ್ಧಸ್ಯ ವ್ರತಸ್ಯ ಯೇ।
ಮಹೋ ರಾಜಾನ ಈಶತೇ॥ (೭-೬೬-೬)
ಸರ್ವರಿಗೂ ಪ್ರಭುಗಳಾದ ಮಿತ್ರಾವರುಣಾರ್ಯಮರೂ, ಅವರ ಮಾತೆಯಾದ ಅದಿತಿದೇವಿಯೂ ಸಹ ನಿರ್ವಿಘ್ನವಾಗಿ ನೆರವೇರುವುದೂ ಮಹತ್ತಾದುದೂ ಆದ ಈ ನಮ್ಮ ಯಜ್ಞಕ್ಕೆ ಒಡೆಯರಾಗಿ ನಮ್ಮ ಇಷ್ಟಾರ್ಥಗಳನ್ನು ಕೊಡುತ್ತಾರೆ.

ಪ್ರತಿ ವಾಂ ಸೂರ ಉದಿತೇ ಮಿತ್ರಂ ಗೃಣೀಷೇ ವರುಣ।
ಅರ್ಯಮಣಂ ರಿಶಾದಸಂ॥ (೭-೬೬-೭)
ಎಲೈ ಮಿತ್ರಾವರುಣಾರ್ಯಮರೇ, ಸೂರ್ಯನು ಉದಯಿಸುತ್ತಿರುವಾಗ ಈ ದಿನ ಪ್ರಾತಃಕಾಲದಲ್ಲಿ ಮಿತ್ರ, ವರುಣ, ಶತ್ರುಹಿಂಸಕನಾದ ಅರ್ಯಮ ಎಂಬ ನಿಮ್ಮನ್ನು ಉದ್ದೇಶಿಸಿ ಪ್ರತ್ಯೇಕವಾಗಿ ಸ್ತೋತ್ರಮಾಡುತ್ತೇನೆ.

ರಾಯಾ ಹಿರಣ್ಯಯಾ ಮತಿರಿಯಮವೃಕಾಯ ಶವಸೇ।
ಇಯಂ ವಿಪ್ರಾ ಮೇಧಸಾತಯೇ॥ (೭-೬೬-೮)
ಎಲೈ ಮೇಧಾವಿಗಳಾದ ದೇವತೆಗಳೇ, ಈಗ ನಾವು ನಿಮ್ಮನ್ನುದ್ದೇಶಿಸಿ ಪಠಿಸುತ್ತಿರುವ ಸ್ತೋತ್ರವು ನಮಗೆ ಧನಪ್ರಾಪ್ತಿಗೂ, ಬಲಕ್ಕೂ, ಯಜ್ಞಲಾಭಾರ್ಥವಾಗಿಯೂ ಸಾಧನಭೂತವಾಗಿರಲಿ.

ಬಹವಃ ಸೂರಚಕ್ಷಸೋಽಗ್ನಿಜಿಹ್ವಾ ಋತಾವೃಧಃ ।
ತ್ರೀಣಿ ಯೇ ಯೇಮುರ್ವಿದಥಾನಿ ಧೀತಿಭಿರ್ವಿಶ್ವಾನಿ ಪರಿಭೂತಿಭಿಃ । (ಋ ೭-೬೬-೧೦ ಸಾಭಾ)
"ಮಹನೀಯರೂ ಸೂರ್ಯನಿಗೆ ಕಾಂತಿಯನ್ನುಂಟು ಮಾಡಿ ಬೆಳಗುವಂತೆ ಮಾಡುವವರೂ ಯಜ್ಞಾದಿಗಳಲ್ಲಿ ಅಗ್ನಿಯ ಜಿಹ್ವೆಯಿಂದ ಜ್ವಾಲೆಯ ಮೂಲಕವೇ ಹವಿರಾದಿಗಳನ್ನು ಸ್ವೀಕರಿಸುವವರೂ, ಯಜ್ಞವರ್ಧಕರೂ ತಮ್ಮ ಪ್ರಭಾವಯುತವಾದ ಕರ್ಮಗಳಿಂದ ಸಮಸ್ತವನ್ನೂ ವ್ಯಾಪಿಸಿರುವ ಕ್ಷಿತ್ಯಾದಿ (ಲೋಕ) ಮೂರು ಸ್ಥಾನಗಳನ್ನು ಕೊಡುವವರೂ ಆದ ಯಾವ ಮಿತ್ರಾವರುಣಾದಿ ದೇವತೆಗಳಿರುವರೋ ಅವರು ಈ ಯಜ್ಞಭೂಮಿಗೆ ದಯಮಾಡಲಿ."

(ಈ ಮಂತ್ರದಲ್ಲಿ ಬರುವ ಸೂರಚಕ್ಷಸಃ ಎಂಬ ಪದದ ಅರ್ಥ; ಸೂರ್ಯನನ್ನೇ ಕಣ್ಣಾಗಿ ಉಳ್ಳವರು ಎಂಬುದಾಗಿದೆ. ಪಿರಮಿಡ್ ಧರ್ಮವೂ ಸಹ ಇದನ್ನೇ ಹೇಳುತ್ತದೆ.)

# ಅಧ್ಯಾಯ-೧೪: ವಿಶ್ವಸಾಮ್ರಾಟ್ ಇಂದ್ರನ ಜನನ

ಅವಾಚಚಕ್ಷಂ ಪದಮಸ್ಯ ಸಸ್ವರುಗ್ರಂ ನಧಾತುರನ್ವಾಯಮಿಚ್ಛನ್ ।
ಅಪೃಚ್ಛಮನ್ಯಾ ಉತ ತೇ ಮ ಆಹುರಿಂದ್ರಂ ನರೋ ಬುಬುಧಾನಾ ಅಶೇಮ ।।
(ಋಗ್ವೇದ ೫-೩೦-೨ (ಆರ್ ಎಲ್ ಕ)
"ನಾನು ಇಂದ್ರನ ಗೂಡವಾದುದು, ಭಯಂಕರವಾದುದು, ಸೂರ್ಯನ ಬೆಳಕನ್ನು ಹಿಡಿದಿರುವ, ಸ್ವಯಂಸ್ಥಾಪಿತವಾದ ಸ್ಥಾನವನ್ನು ನೋಡಿದೆನು. ಇಂದ್ರನ ಸ್ಥಾನವನ್ನು ಸಮೀಪಿಸಿ ವೀಕ್ಷಿಸಬೇಕೆಂಬಾಸೆಯಿಂದ ಇತರ ಪ್ರಾಜ್ಞರನ್ನು ಕೇಳಿದೆನು. "ಯಾವಾಗ ನಮ್ಮ ಆತ್ಮನನ್ನು ದರ್ಶಿಸುತ್ತೇವೆಯೋ ಆಗ ಮಾತ್ರ ಇಂದ್ರನನ್ನು ಪಡೆಯಲು ಸಾಧ್ಯ." ಎಂದು ಅವರು ಹೇಳಿದರು."

ದೈವೀಮನಸ್ಸು ಮತ್ತು ಜ್ಯೋತಿರೂಪಳಾದ ಅದಿತಿಯು ಜ್ಯೇಷ್ಟಪುತ್ರನಾದ ಇಂದ್ರನಿಗೆ ಹೇಗೆ ಜನ್ಮವನ್ನು ಕೊಟ್ಟಳು ಎಂಬುದನ್ನು ತಿಳಿಯೋಣ. ಇಂದ್ರನು ಜ್ಯೋತಿರೂಪಳಾದ ಅದಿತಿಯ ಪಾರ್ಶ್ವದಿಂದ ಜನಿಸಿದನು ಎಂದು ಋಗ್ವೇದವು ಹೇಳುತ್ತದೆ. ಅದಿತಿಯು ಸೌಮ್ಯಸ್ವಭಾವದವಳಾದರೆ ಜ್ಯೇಷ್ಟಪುತ್ರನಾದ ಇಂದ್ರನು ಕ್ಷಾತ್ರ ಸ್ವಭಾವದವನಾಗಿದ್ದಾನೆ. ಜ್ಯೇಷ್ಟಪುತ್ರನಾಗಿ ವಿಶ್ವ ಸಿಂಹಾಸನವನ್ನು ಅಲಂಕರಿಸಿರುವನು. ಇದಕ್ಕೆ ಪೂರಕವಾದ ಋಗ್ವೇದ ಸೂಕ್ತವನ್ನು ನೋಡಿ.

ಅಯಂ ಪಂಥಾ ಅನುವಿತ್ತಃ ಪುರಾಣೋ ಯತೋ ದೇವಾ ಉದಜಾಯಂತ ವಿಶ್ವೇ ।
ಅತಶ್ಚಿದಾ ಜನಿಷೀಷ್ಟ ಪ್ರವೃದ್ಧೋ ಮಾ ಮಾತರಮುಯಾ ಪತ್ತವೇ ಕಃ ।।
"**ಅದಿತಿಯು ಇಂದ್ರನಿಗೆ:** ಯಾವ ಯೋನಿರೂಪವಾದ ಮಾರ್ಗದಿಂದ ಸಮಸ್ತ ದೇವತೆಗಳೂ ಉತ್ಪನ್ನರಾದರೋ ಅಂತಹ ಯೋನಿರೂಪವಾದ ಈ ಗರ್ಭನಿರ್ಗಮನದ ಮಾರ್ಗವು ದೇವಮಾನವಾದಿಗಳಿಗೆಲ್ಲಾ ಅನಾದಿಯಾದ ಉತ್ಪತ್ತಿಸ್ಥಾನವೆಂಬುದು ಸಕಲರಿಗೂ ತಿಳಿದ ವಿಷಯವಾಗಿದೆ. ಆದುದರಿಂದಲೇ, ಗರ್ಭದಲ್ಲಿಯೇ ಪೂರ್ಣವಾಗಿ ಬೆಳೆದ ನೀನು ಸಹ ಆ ಗರ್ಭನಿರ್ಗಮನದ ಮಾರ್ಗವಾಗಿಯೇ ಹೊರಕ್ಕೆ ಬಾ, ಮತ್ತು (ಬೇರೆ ಮಾರ್ಗದಿಂದ ಹೊರಕ್ಕೆ ಬಂದು) ತನ್ನ ತಾಯಿಯನ್ನು ಮರಣಕ್ಕೀಡಾಗುವಂತೆ ಮಾಡದಿರು." (೪-೧೮-೧ ಸಾಭಾ/ಆರ್ ಎಲ್ ಕ)

(ಇಲ್ಲಿ ಅದಿತಿಯು ಇಂದ್ರನಿಗೆ, ಮತ್ತು ಇಂದ್ರನು ಅದಿತಿಗೆ ಎನ್ನುವ ಪದಗಳು ಆರ್ ಎಲ್ ಕಶ್ಯಪ್‌ರದ್ದಾಗಿದೆ. ಸಾಯಣರು ಇಂದ್ರ ಪದದ ಬದಲು ವಾಮದೇವ ಋಷಿ ಎಂದು ಗ್ರಹಿಸಿದ್ದಾರೆ.)

ನಾಹಮತೋ ನಿರಯಾ ದುರ್ಗಹೈತತ್ತಿರಶ್ಚತಾ ಪಾರ್ಶ್ವಾನ್ನಿರ್ಗಮಾಣಿ ।
ಬಹೂನಿ ಮೇ ಅಕೃತಾ ಕರ್ತ್ವಾನಿ ಯುಧ್ಯೈ ತ್ವೇನ ಸಂ ತ್ವೇನ ಪೃಚ್ಛೈ ।।
"**ಇಂದ್ರನು ಅದಿತಿಗೆ:** ನಾನು ಯೋನಿರೂಪವಾದ ಈ ಮಾರ್ಗದಿಂದ ಹೊರಕ್ಕೆ ಬರುವುದಿಲ್ಲ. ಈ ಮಾರ್ಗವು ಅತ್ಯಂತ ದುಃಖಪ್ರದವಾಗಿದೆ. ಓರೆಯಾಗಿರುವ ಪಾರ್ಶ್ವಮಾರ್ಗದಿಂದ ಹೊರಕ್ಕೆ ಬರುತ್ತೇನೆ. ಇತರರಿಂದ ಮಾಡಲ್ಪಡದಿರುವ ಅನೇಕ ಕರ್ಮಗಳು ನನ್ನಿಂದ ಮಾಡಲ್ಪಡಬೇಕಾಗಿದೆ. ನಾನು ಒಬ್ಬನೇ ಶತ್ರುವಿನೊಂದಿಗೆ ಯುದ್ಧ ಮಾಡಬಲ್ಲೆ. ಒಬ್ಬನೇ ಪ್ರತಿಕಕ್ಷಿಯೊಂದಿಗೆ ವಾಗ್ವಾದ ಮಾಡಬಲ್ಲೆ." (೪-೧೮-೨) (ಸಾಭಾ/ಆರ್ ಎಲ್ ಕ)

(ಅವ್ಯಕ್ತ ಸ್ವರೂಪಳಾದ ಮಧ್ಯಕುಂಡಲಿನಿಯು ಜ್ಯೋತಿರೂಪಳಾದ ಅದಿತಿಯಾಗಿ ಹೊರಬಂದಳು. ಆದ್ದರಿಂದ ದೇವತೆಗಳ ಗರ್ಭ ಮತ್ತು ಜನನವು ಮಾನವರಂತೆ ಅಲ್ಲ. ಅದಿತಿಯು ತನ್ನ ಇಚ್ಛಾಶಕ್ತಿಯಿಂದ ದೇವತೆಗಳಿಗೆ ಜನ್ಮವನ್ನು ಕೊಟ್ಟಿರುವಳು. ಇದು ಕೇವಲ ನಮಗೆ ಅರ್ಥವಾಗಲು ಮಾತ್ರ ಹಾಗೆ ತಿಳಿಸಿದೆ.)

ಈ ರೀತಿಯಾಗಿ ಜ್ಯೇಷ್ಠಪುತ್ರನೂ, ಆಧಿಪುರುಷನೂ ಆದ ಇಂದ್ರನು ಮಾತೆಯ ಪಾರ್ಶ್ವದಿಂದ ಹೊರಬಂದನು. ಇಂದ್ರನು ಪಾರ್ಶ್ವದಿಂದ ಜನಿಸಿದ ಕಾರಣ ಒಂದು ಜ್ಯೋತಿಯು ಎರಡಾಯಿತು. ಪರಮಪಾವನವಾದ ಇಂದ್ರ ಜನನವು ಪರಮಾದ್ಭುತವಾಗಿದೆ. ಇಂದ್ರನು ದೈವೀಮನಸ್ಸಾಗಿದ್ದಾನೆ ಹಾಗು ಜ್ಯೋತಿರೂಪನಾಗಿದ್ದಾನೆ. ಜ್ಯೋತಿರೂಪನಾದ ಇಂದ್ರನು ಮಾನವರೂಪ ತೆಗೆದುಕೊಳ್ಳವರೆಗೂ ಇತರ ದೇವತೆಗಳ ಜನ್ಮ ಸಾಧ್ಯವಿಲ್ಲ. ಇಂದ್ರನು ಮಾನವರೂಪವನ್ನು ಪಡೆದ ಕೂಡಲೆ ವಾಗ್ದೇವತೆಗಳು ಸೇರಿ ಇತರ ದೇವತೆಗಳು ಪ್ರಕಟರಾದರು.

ಇಂದ್ರನು ಮಾತ್ರ ಜ್ಯೋತಿರೂಪನು ಮತ್ತು ಮಾನವರೂಪದಲ್ಲಿ ಹಿರಣ್ಯವರ್ಣನು. ಆದರೆ ಇತರ ಆದಿತ್ಯರು ಮಾನವ ರೂಪವನ್ನೂ ಶ್ವೇತವರ್ಣದ ತೇಜಸ್ಸನ್ನು ಪಡೆದಿರುವರು. ಅದಿತಿಯ ಪುತ್ರರಾದ ದೇವತೆಗಳ ತೇಜಸ್ಸೇ ಸೂರ್ಯನಾಗಿದ್ದಾನೆ. ಇಂದ್ರನು ಬ್ರಹ್ಮಾಂಡದಲ್ಲಿ ಕ್ರಿಯಾಶೀಲನಾಗಿದ್ದಾನೆ. ಇಂದ್ರನು ಪ್ರಥಮವಾಗಿ ಮನಸ್ಸನ್ನು ಪಡೆದ ದೇವತೆ ಎಂದು ಋಗ್ವೇದವು ಹೇಳುತ್ತದೆ. ಇಂದ್ರನು ಜನಿಸಿದ ಕೂಡಲೆ ತನ್ನ ದೈವೀ ಮನಸ್ಸಿನಿಂದ ಸಕಲವನ್ನು ವ್ಯಾಪಿಸಿದನು.

## ವಿಶ್ವ ಸಾಮ್ರಾಟ್ ಇಂದ್ರನ ಮಹಿಮೆ

ಓಜಸ್ತದಸ್ಯ ತಿತ್ವಿಷ ಉಭೇಯತ್ಸಮವರ್ತಯತ್ ।
ಇಂದ್ರಶ್ಚರ್ಮೇವ ರೋದಸೀ ।। (ಋಗ್ವೇದ ೮–೬–೫ ಸಾಭಾ)
"ಚರ್ಮವನ್ನು ಸುಲಭವಾಗಿ ಮಡಿಸಿಯೂ, ಬೇಕಾದ ಹಾಗೆ ಹರಡಿಯೂ ಇಟ್ಟುಕೊಳ್ಳುವಂತೆ ಇಂದ್ರನು ಯಾವ ಓಜಸ್ಸಿನಿಂದ ದ್ಯಾವಾಪೃಥ್ವಿಗಳೆರಡನ್ನೂ ತನ್ನ ಇಷ್ಟ ಬಂದಾಗ ವಿಸ್ತೃತವಾದುದನ್ನಾಗಿಯೂ ಅಥವಾ ಸಂಕುಚಿತವಾದುದನ್ನಾಗಿಯೂ ಮಾಡುವನೋ ಅಂತಹ ಈ ಇಂದ್ರನ ಪ್ರಸಿದ್ಧವಾದ ವೀರ್ಯವು (ತೇಜಸ್ಸು) ಪ್ರಕಾಶಿಸುತ್ತದೆ." (ದ್ಯಾವಾಪೃಥ್ವಿ: ಸ್ಥೂಲ ಪ್ರಪಂಚ ಮತ್ತು ಸೂರ್ಯ ಸೃಷ್ಟಿಸಿದ ಸಪ್ತಸ್ವರ್ಗಗಳು.)

ಈ ಮೇಲಿನ ಮಂತ್ರವು ಬ್ರಹ್ಮ, ವಿಷ್ಣು ಮತ್ತು ಮಹೇಶ್ವರರು ಸೃಷ್ಟಿ, ಸ್ಥಿತಿ ಮತ್ತು ಲಯಕರ್ತರು ಎಂಬ ಪುರಾಣದ ಸಿದ್ಧಾಂತವನ್ನು ತಿರಸ್ಕರಿಸುತ್ತದೆ.

ಯೋ ಜಾತ ಏವ ಪ್ರಥಮೋ ಮನಸ್ವಾನ್ದೇವೋ ದೇವಾನ್ಕ್ರತುನಾ ಪರ್ಯಭೂಷತ್।
ಯಸ್ಯ ಶುಷ್ಮಾದ್ರೋದಸೀ ಅಭ್ಯಸೇತಾಂ ನೃಮ್ಣಸ್ಯ ಮಹ್ನಾ ಸ ಜನಾಸ ಇಂದ್ರಃ ।।
(ಋಗ್ವೇದ ೨–೧೨–೧ ಆರ್ ಎಲ್ ಕಶ್ಯಪ್)
"ದೇವತೆಗಳಲ್ಲಿ ಪ್ರಥಮವಾಗಿ ಜನಿಸಿದ ಇಂದ್ರನು ದೈವೀ ಮನಸ್ಸನ್ನು ಹೊಂದಿರುವನು. ಇಂದ್ರನು ದೈವೀ ಮನಸ್ಸಿನ ಅಧಿ ದೇವತೆಯಾಗಿದ್ದಾನೆ. ತನ್ನ ಅಪ್ರತಿಮ ಮನಃಶ್ಶಕ್ತಿಯಿಂದ ದೇವತೆಗಳನ್ನು ಆವರಿಸಿದನು. ಇವನ ಬಲ ದಿಂದ ದ್ಯಾವಾಪೃಥಿವಿಗಳು ನಡುಗಿದವು. ಬಲದ ಮಹತ್ವದೊಡನೆ ಕೂಡಿದ ಅವನೇ ಇಂದ್ರನು."

> ಯಾವುದೇ ದೇವತೆಯಾಗಲಿ ಇಂದ್ರನಿಗಿಂತ ಶ್ರೇಷ್ಠ ಎಂದು ಹೇಳುವುದಾದರೆ ಅವರನ್ನು ಈ ಪ್ರಶ್ನೆಯನ್ನು ಕೇಳಬೇಕು. ಅದೇನೆಂದರೆ 'ಆ ದೇವತೆಗೆ ಮನಸ್ಸಿದೆಯಾ?' ಮನಸ್ಸಿರುವುದಾದರೆ ಆ ದೇವತೆಗಿಂತ ಮುಂಚೆಯೇ ಇಂದ್ರನು ಇದ್ದನು ಎಂದು ಮೇಲಿನ ಮಂತ್ರದಿಂದ ತಿಳಿದು ಬರುತ್ತದೆ.

ಯಸ್ಮಾದಿಂದ್ರಾದ್ಬೃಹತಃ ಕಿಂಚನೇಮೃತೇ ವಿಶ್ವಾನ್ಯಸ್ಮಿನ್ತ್ಸಂಭೃತಾಧಿ ವೀರ್ಯಾ । (ಋ ೨–೧೬–೨ ಸಾಭಾ)
ಜಠರೇ ಸೋಮಂ ತನ್ವೀ ಸಹೋ ಮಹೋ ಹಸ್ತೇ ವಜ್ರಂ ಭರತಿ ಶೀರ್ಷಣಿ ಕ್ರತುಂ ।।
**"ಮಹತ್ವರೂಪವುಳ್ಳ ಯಾವ ಇಂದ್ರನಿಲ್ಲದಿದ್ದರೆ ಈ ಜಗತ್ತು ಇರುತ್ತಲೇ ಇರಲಿಲ್ಲವೋ** ಆ ಇಂದ್ರನಲ್ಲಿ ಸಕಲ ಸಾಮರ್ಥ್ಯಗಳೂ ಶೇಖರಿತವಾಗಿವೆ. ಇಂದ್ರನು ಉದರದಲ್ಲಿ ಸೋಮರಸವನ್ನು ತುಂಬಿಕೊಂಡಿದ್ದಾನೆ. ತನ್ನ ಶರೀರದಲ್ಲಿ ಬಲವನ್ನೂ ತೇಜಸ್ಸನ್ನೂ ಧರಿಸಿದ್ದಾನೆ. ಕೈಯಲ್ಲಿ ವಜ್ರಾಯುಧವನ್ನು ಹಿಡಿದಿದ್ದಾನೆ, ಶಿರಸ್ಸಿನಲ್ಲಿ ವಿಜ್ಞಾನವನ್ನು ಪಡೆದಿದ್ದಾನೆ." (ವೃತ್ರಾಸುರನು ಇಂದ್ರನ ಮೇಲೆ ವಿಜಯವನ್ನು ಸಾಧಿಸಿದ್ದಿದ್ದರೇ ಸೃಷ್ಟಿಯೇ ಆಗುತ್ತಿರಲಿಲ್ಲ ಮತ್ತು ನಮ್ಮೆಲ್ಲರ ಜನನವೇ ಆಗುತ್ತಿರಲಿಲ್ಲ.)

ಯೋ ವಿಶ್ವಸ್ಯ ಜಗತಃ ಪ್ರಾಣತಸ್ಪತಿರ್ಯೋ ಬ್ರಹ್ಮಣೇ ಪ್ರಥಮೋ ಗಾ ಅವಿಂದತ್ ।
ಇಂದ್ರೋ ಯೋ ದಸ್ಯೂನ್ ಅಧರಾನ್ ಅವಾತಿರನ್ಮರುತ್ವಂತಂ ಸಖ್ಯಾಯ ಹವಾಮಹೇ।।(ಋಗ್ವೇದ ೧–೧೦೧–೫ ಸಾಭಾ)
"ಯಾವ ಇಂದ್ರನು ಜಂಗಮಾತ್ಮಕವಾದುದೂ, ಉಸಿರಾಡತಕ್ಕದ್ದೂ ಆದ ಸಮಸ್ತ ಭೂತಜಾತಗಳಿಗೂ ಪ್ರಭುವಾಗಿರುವನೋ, ಯಾವ ಇಂದ್ರನು ಇತೆ ದೇವತೆಗಳಗಿಂಲೂ ಪೂರ್ವಭಾವಿಯಾಗಿಯೇ ಪಣಿಗಳೊಡನೆ ಯುದ್ಧಮಾಡಿ ಅವರು ಅಪಹರಿಸಿದ ಗೋವುಗಳನ್ನು ಮೊದಲು ಅಂಗಿರಸ್ಸಗಳಿಗೆ ಒದಗಿಸಿಕೊಟ್ಟನೋ ಮತ್ತು ಯಾವ ಇಂದ್ರನು ದಸುರೂಪರಾದ ಅಸುರರ ಕೊಬ್ಬನ್ನಡಗಿಸಿ ಅವರನ್ನು ಕೊಂದನೋ ಅಂಥಹ ಮರುತ್ತುಗಳೊಡಗೂಡಿದ ಇಂದ್ರನನ್ನು ನಮ್ಮೊಡನೆಯೂ ಸ್ನೇಹವನ್ನು ಬೆಳಸುವುದಕ್ಕಗಿ ಕರೆಯುತ್ತೇವೆ." (ಚೈತನ್ಯಯುಕ್ತವಾದುದೂ ಆದ ಯಾವ ಸಕಲ ಜಗತ್ತು ಇರುವುದೋ ಆ ಜಗತ್ತಿಗೆಲ್ಲಾ ಇಂದ್ರನು ಯಜಮಾನನಾಗಿದ್ದಾನೆ.)

ಇಂದ್ರನ ಮಹಾತ್ಮ್ಯವು ಅಪರಿಮಿತವಾಗಿದ್ದರೂ ಕೆಲವನ್ನು ಮಾತ್ರ ನೋಡೋಣ. ಇಂದ್ರನು ಯಾವ ಆಕಾರದಿಂದ ತನ್ನ ಭಕ್ತರಿಗೆ ಕಾಣಿಸಿ ಕೊಳ್ಳುತ್ತಾನೆ? ಮೊದಲನೆಯದಾಗಿ ನಾವು ಆತನ ಆಕಾರವನ್ನು ವಿಗ್ರಹವನ್ನು ಅಥವಾ ಚಿತ್ರಪಟಗಳನ್ನು ನೋಡಿ ಊಹಿಸಬಾರದು. ಇಂದ್ರನನ್ನು ವೇದದ ಋಷಿಗಳು ನೋಡಿದ ರೂಪದಿಂದ ನಮ್ಮನ್ನು ಅನುಗ್ರಹಿಸೆಂದು ಪ್ರಾರ್ಥಿಸಬೇಕು. ಆದರೆ ನಮ್ಮ ಅಜ್ಞಾನದಿಂದ ನಾವು ಯಾವ ರೂಪದಲ್ಲಿ ಪೂಜಿಸಿದರೂ ಇಂದ್ರನು ಅದೇ ರೂಪದಲ್ಲಿ ನಮಗೆ ಅನುಗ್ರಹಿಸುವನು.

ರೂಪಂ ಊಪಂ ಪ್ರತಿರೂಪೋ ಬಭೂವ ತದಸ್ಯ ರೂಪಂ ಪ್ರತಿಚಕ್ಷಣಾಯ ।
ಇಂದ್ರೋ ಮಾಯಾಭಿಃ ಪುರುರೂಪ ಈಯೇ ಯುಕ್ತಾಹ್ಯಸ್ಯ ಹರಃ ಶತಾ ದಶ ।। (ಋಗ್ವೇದ ೬–೪೭–೧೮ ಸಾಭಾ)

"ಇಂದ್ರನು ಅನೇಕ ರೂಪಾಂತರಗಳನ್ನು ತನ್ನ ಇಷ್ಟಾನುಸಾರವಾಗಿ ಹೊಂದುತ್ತಾನೆ. ಈ ಇಂದ್ರನಿಗೆ ಆಯಾ ವೈಯುಕ್ತಿಕವಾದ ಸ್ವರೂಪವು ಅನೇಕ ರೂಪಗಳಲ್ಲಿ ಲೋಕಕ್ಕೆಲ್ಲಾ ಗೋಚರವಾಗಲು ಸಾಧನವಾಗಿದೆ. ಇಂದ್ರನು ತನ್ನ ಅನಂತ ಶಕ್ತಿಗಳಿಂದ ಅನೇಕ ರೂಪಗಳನ್ನು ಹೊಂದಿ ಯಜಮಾನನಲ್ಲಿಗೆ ಹೋಗುತ್ತಾನೆ."

ನ ಕ್ಷೋಣೀಭ್ಯಾಂ ಪರಿಭ್ವೇ ತ ಇಂದ್ರಿಯಂ ನ ಸಮುದ್ರೈಃ ಪರ್ವತೈರಿಂದ್ರ ತೇ ರಥಃ।
ನ ತೇ ವಜ್ರಮನ್ವಶ್ನೋತಿ ಕಶ್ಚನ ಯದಾಶುಭಿಃ ಪತಸಿ ಯೋಜನಾ ಪುರು।। (೧-೬-೩ ಆರ್ ಎಲ್ ಕ)
"ಎಲೈ ಇಂದ್ರನೇ, ನೀನು ಜ್ಞಾನವಿಲ್ಲದವನಿಗೆ ಜ್ಞಾನವನ್ನು ಪ್ರಕಟಮಾಡುತ್ತೀಯೆ, ಯಾವ ಆಕಾರ ರೂಪಗಳನ್ನು ನೋಡಲು ಅಸಮರ್ಥರಾದವರಿಗೆ ರೂಪಗಳನ್ನು ಪ್ರಕಟ ಮಾಡುತ್ತೀಯೆ. ಪ್ರಾತಃಕಾಲದಲ್ಲಿ ಚೇತನಾಯುಕ್ತವಾದ ಜ್ಞಾನದೊಂದಿಗೆ ಜಾಗೃತವಾಗುತ್ತೀಯೆ." (ಇಂದ್ರನು ನನಗೆ ಪ್ರಕಟಮಾಡಿದ ಜ್ಞಾನವೇ ಒಂದು ಉದಾಹರಣೆ.)

ಯಸ್ಯ ತೇ ನೂ ಚಿದಾದಿಶಂ ನ ಮಿನಂತಿ ಸ್ವರಾಜ್ಯಂ।
ನ ದೇವೋ ನಾಧ್ರಿಗುರ್ಜನಃ।। (ಋಗ್ವೇದ ೮-೯೩-೧೧ ಸಾಭಾ)
ಎಲೈ ಇಂದ್ರನೇ, ನಿನ್ನ ಆಜ್ಞೆಯನ್ನು ಯಾರೂ ಯಾವಾಗಲೂ ಎದುರಿಸಲು ಸಮರ್ಥರಲ್ಲ. ನಿನ್ನ ಸ್ವರ್ಗಾಧಿಪತ್ಯವನ್ನು ಯಾರೂ ಪ್ರಶ್ನಿಸುವಂತಿಲ್ಲ. ನೀನಲ್ಲದೆ ಇತರ ಯಾವ ದೇವನೂ, ವೀರನೂ, ಮಾನವನೂ ನಿನ್ನ ಆಜ್ಞೆಯನ್ನು ಮೀರಲಾರರು."

ಅವಿಪ್ರೋ ವಾ ಯದವಿಧದ್ವಿಪ್ರೋ ವೇಂದ್ರ ತೇ ವಚಃ।
ಸ ಪ್ರ ಮಮಂದತ್ತ್ವಾಯಾ ಶತಕ್ರತೋ ಪ್ರಾಚಾಮನ್ಯೋ ಅಹಂಸನ।।(ಋಗ್ವೇದ ೮-೬೧-೯ ಸಾಭಾ)
"ಅನೇಕಕರ್ಮಕರ್ತನೂ, ಶಾಶ್ವತವಾದ ಕ್ರೋಧವುಳ್ಳನೂ, ಸಂಗ್ರಾಮಗಳಲ್ಲಿ ತನ್ನ ಪರಾಕ್ರಮವನ್ನು ಶ್ಲಾಘಿಸಿ ಪ್ರಕಟಿಸುವವನೂ ಆದ ಎಲೈ ಇಂದ್ರನೇ, ನಿನ್ನನ್ನುದ್ದೇಶಿಸಿ ಸ್ತುತಿಯನ್ನು ಪಠಿಸುವ ಸ್ತುತಿಕರ್ತನು ಮಂದಬುದ್ಧಿಯುಳ್ಳವನಾಗಲಿ ಅಥವಾ ಮೇಧಾವಿಯಾಗಲಿ ನಿನ್ನ ಅನುಗ್ರಹದಿಂದ ಸ್ತುತಿಕರ್ತನು ಅವನು ಶುದ್ಧಮನಸ್ಕನಾಗಿದ್ದರೆ ಸಾಕು ಅವನ ಸ್ತುತಿಯಿಂದ ತೃಪ್ತನಾಗುತ್ತಾನೆ."

ನನ್ನಂತಹ ಅನಕ್ಷರಸ್ಥನನ್ನು ಅನುಗ್ರಹಿಸಿದ ಉದಾಹರಣೆಯೇ ಸಾಕು. ಇಂದ್ರನ ಮಹತ್ವವನ್ನೂ, ಅತೀಂದ್ರಿಯ ಶಕ್ತಿಯನ್ನೂ ಋಗ್ವೇದವು ಮುಕ್ತ ಕಂಠದಿಂದ ಹೊಗಳಿದೆ. ಇಂದ್ರನಂತಹ ದೇವನು ಈ ಹಿಂದೆ ಯಾರೂ ಜನಿಸಿಲ್ಲ ಮತ್ತು ಮುಂದೆಯೂ ಜನಿಸುವುದಿಲ್ಲ. ಅವನ ಸಮಾನರು ಸ್ವರ್ಗದಲ್ಲಿಯಾಗಲಿ, ಭೂಲೋಕದಲ್ಲಿಯಾಗಲಿ ಯಾರೂ ಇಲ್ಲ. ಅವನ ಶಕ್ತಿಯನ್ನು ಅಳೆಯಲು ದೇವದಾನವರಿಗೂ ಮನುಷ್ಯರಿಗೂ ಸಾಧ್ಯವಿಲ್ಲ. ಜನ್ಮ ತಾಳಿದವರು, ಹಿಂದೆಯೇ ಆಗಲಿ ಅಥವಾ ಈಗಲೇ ಆಗಲಿ ಅವನೊಡನೆ ಸ್ಪರ್ಧಿಸಲಾರರು.

ಎಲ್ಲಾ ದೇವತೆಗಳು ಒಟ್ಟಾಗಿ ಸೇರಿದರೂ ಅವನ ಇಚ್ಛೆಯನ್ನು ವಿಫಲಗೊಳಿಸಲಾರರು. ಇಂದ್ರನು ಸ್ವಯಂ ಏನನ್ನೂ ಮಾಡುವುದಿಲ್ಲ. ಅವನ ಆಲೋಚನೆಗಳನ್ನು ದೇವತೆಗಳು ಕಾರ್ಯರೂಪಕ್ಕೆ ತರುತ್ತಾರೆ. ವರುಣ, ಸೂರ್ಯರು ಮತ್ತು ಎಲ್ಲಾ ದೇವತೆಗಳು ಅವನ ಅಪ್ಪಣೆಗೆ ಒಳಪಟ್ಟಿರುವರು ಮತ್ತು ಇಂದ್ರನೇ ಪ್ರಪಂಚಕ್ಕೆಲ್ಲಾ ಒಡೆಯನಾಗಿದ್ದಾನೆ. ಇಂದ್ರನು ಸರ್ವತಂತ್ರ ಸ್ವತಂತ್ರನಾಗಿದ್ದಾನೆ. ಅವನೊಬ್ಬನೇ ತನ್ನ ಸಾಮರ್ಥ್ಯದಿಂದ ಪ್ರಪಂಚವನ್ನೆಲ್ಲಾ ಆಳುತ್ತಾನೆ. ಅವನು ಹುಟ್ಟಿದ ಕೂಡಲೆ ಅವನ ಭಯಕ್ಕೆ ಅಚಲವಾದ ಪರ್ವತಗಳು, ಸ್ವರ್ಗ ಭೂಮಿಗಳು ನಡುಗಿದವು.
ಇಂದ್ರನು ತನಗೆ ಶರಣಾದ ಭಕ್ತರಿಗೆ ಯಾವಾಗಲೂ ನಾಶವಾಗದ ರಕ್ಷಣೆಯನ್ನು ಕೊಡುವನು. ಆದ್ದರಿಂದ ಇಂದ್ರ ಸಖ್ಯವನ್ನು ಬಯಸುವವರು ಶತ್ರು ಸಂಹಾರಕನೂ, ಅಪಾರವಾದ ಐಶ್ವರ್ಯಕ್ಕೆ ಒಡೆಯನೂ, ಪರಮೈಶ್ವರ್ಯ ಕ್ತನೂ, ಮೂರು ಲೋಕದ ಒಡೆಯನೂ, ಸಮಸ್ತ ಪ್ರಾಣಿಗಳ ಮುಖ್ಯದೇವನೂ, ಪರಂಜ್ಯೋತಿ ಸ್ವರೂಪನೂ ಆದ ಇಂದ್ರನನ್ನು ಯಜ್ಞದ ಮೂಲಕ ಆರಾಧಿಸಬೇಕು ಮತ್ತು ಸೋಮರಸವನ್ನು ಅರ್ಪಿಸಬೇಕು.

ವೇದಗಳು ಇಂದ್ರನನ್ನು ಆಶ್ಚರ್ಯಕರವಾದ ಪ್ರಕಾಶದಿಂದ ಬೆಳಗುವವನು ಮತ್ತು ವೈವಿಧ್ಯಮಯ ಕಾಂತಿಯಿಂದ ಬೆಳಗುವವನು ಎಂದು ಹೇಳಿದೆ (೧-೩-೪). ಪುರಾಣದ ಕಥೆಯ ಪ್ರಕಾರ ಇಂದ್ರನು ಸಹಸ್ರಾಕ್ಷ ಅಥವಾ ಮೈಯೆಲ್ಲಾ ಕಣ್ಣಿನಿಂದ ಕೂಡಿರುವನು. ಈ ವಾಕ್ಯದ ಅರ್ಥ ಇಂದ್ರನು ಪರಂಜ್ಯೋತಿ ಸ್ವರೂಪನಾಗಿರುವುದರಿಂದ ಅವನು ಎಲ್ಲಾ ದಿಕ್ಕುಗಳನ್ನು ಏಕ ಕಾಲದಲ್ಲಿ ನೋಡುವನು. ಇಂದ್ರನು ಜ್ಯೋತಿಯ ಮಧ್ಯೆ ಸ್ಥಿತನಾಗಿರುವನು ಮತ್ತು ಇಂದ್ರನ ಕಾಂತಿಯು ತೇಜಸ್ಸು ಮೂರು ಲೋಕಗಳನ್ನೆಲ್ಲಾ ವ್ಯಾಪಿಸಿದೆ. ಆದ್ದರಿಂದ ಸಾಧಕನು ಇಂದ್ರನ ಆರಾಧನೆಯಿಂದ ಬೆಳಕಿನ ಅತ್ಯುಚ್ಚದರ್ಶನವನ್ನು ಪಡೆಯುವನು.

ಶತೃಸಂಹಾರ ಮಾಡುವ ಸಾಮರ್ಥ್ಯವುಳ್ಳ ಇಂದ್ರನ ಮಹಿಮೆಯು ಭೂಮ್ಯಾಂತರಿಕ್ಷಗಳು ಹಿಡಿಸಲಾರದಷ್ಟು ಅತಿಶಯವಾಗಿದೆ (೧-೧೦-೮). ಇಂದ್ರನ ಸಾಹಸ ಕೃತ್ಯಗಳು ಅಪಾರ. ಇಂದ್ರನು ಸಾಧಕನಲ್ಲಿರುವ ಪರ್ವತದಂತಿರುವ ಅಜ್ಞಾನದ ಶಕ್ತಿಯನ್ನು ತನ್ನ ಕಿರಣಗಳಿಂದ ನಾಶಪಡಿಸುವನು (೧-೭-೩). ಪ್ರಜ್ಞೆ ಅಥವಾ ಬುದ್ಧಿಯಿಲ್ಲದ ಸಾಧಕನಿಗೆ

ಬುದ್ಧಿಯನ್ನು ಕೊಟ್ಟು, ಸರಿಯಾದ ದಾರಿಯನ್ನು ತೋರಿಸಿ ಅನುಗ್ರಹಿಸುವನು. ಅತ್ಯುಚ್ಛ ಶಿಖರದಲ್ಲಿರುವ ಇಂದ್ರನಿಗೆ ನಮ್ಮ ಪ್ರಾರ್ಥನೆಯು ಬಹಳ ಸುಲಭವಾಗಿ ಕೇಳುವುದು.

ಆಶ್ರುತ್ಕರ್ಣ ಶ್ರುಧೀ ಹವಂ ನೂ ಚಿದ್ದಧಿಷ್ವ ಮೇ ಗಿರಃ।
ಇಂದ್ರ ಸ್ತೋಮಮಿಮಂ ಮಮ ಕೃಷ್ವಾ ಯುಜಶ್ಚಿದಂತರಂ।। (ಋಗ್ವೇದ ೧-೧೦-೯ ಸಾಭಾ)
"ಎಲೈ ಇಂದ್ರನೇ, ನಿನ್ನ ಕಿವಿಗಳು ಎಲ್ಲವನ್ನೂ, ಎಲ್ಲಾ ಕಡೆಯಲ್ಲಿಯೂ ಕೇಳಲು ಸಮರ್ಥವಾಗಿರುವುದು. ಆದುದರಿಂದ ನಾವು ಮಾಡುವ ಆಹ್ವಾನವನ್ನು ಬೇಗನೆ ಕೇಳು; ನನ್ನ ಮಾತನ್ನು ಮನಸ್ಸಿನಲ್ಲಿಡು; ಮತ್ತು ನಾನು ಮಾಡುವ ಈ ಸ್ತೋತ್ರವನ್ನು ನಿನ್ನ ಸ್ನೇಹಿತನ ಮಾತಿನಂತೆ ಅತಿ ಪ್ರಿಯವಾದವುಗಳೆಂದು ಭಾವಿಸು."

ಸಾಧಕನು ತನ್ನ ಸಾಧನೆಯಿಂದ ಒಂದೇ ಬಾರಿಗೆ ಇಂದ್ರನನ್ನು ತಲುಪಲು ಸಾಧ್ಯವಿಲ್ಲ.

ಯತ್ಸಾನೋಃ ಸಾನುಮಾರುಹದ್ಭೂರ್ಯಸ್ಪಷ್ಟ ಕರ್ತ್ವಂ।
ತದಿಂದ್ರೋ ಅರ್ಥಂ ಚೇತತಿ ಯೂಥೇನ ವೃಷ್ಣಿರೇಜತಿ।। (ಋಗೇದ ೧-೧೦-೨ ಆರ್ ಎಲ್ ಕ)
"ಋಷಿಗಳು ನಿನ್ನನ್ನು ಏಣಿಯನ್ನು ಹತ್ತಿ ಬರುವಂತೆ ಬರುವರು. ಯಾವಾಗ ಋಷಿಯು ಒಂದು ಗಿರಿ ಶಿಖರದಿಂದ ಮತ್ತೊಂದು ಗಿರಿ ಶಿಖರವನ್ನು ಹತ್ತುವನೋ ಆಗ ಇನ್ನೂ ಹತ್ತಬೇಕಾದ ಅರಿವು ಮೂಡುತ್ತದೆ. ಆಗ ಇಂದ್ರನು ಮರುದ್ಗಣ ಸಹಿತನಾಗಿ ಅವನ ಬಳ ಬರಲು ಉದ್ಯುಕ್ತನಾಗುವನು."

> ಇಂದ್ರನು ಏಳು ಪರ್ವತದ (ಧ್ಯೌಃನ ೭ ಚಕ್ರಗಳು) ಮೇಲಿರುವ ಗಿರಿಶಿಖರದ ತುತ್ತ ತುದಿಯಲ್ಲಿ ಇರುವ ಪ್ರಕಾಶಮಾನವಾದ ವಾಸಸ್ಥಾನದಲ್ಲಿರುವನು. ವಿರಾಟ್ ಪುರುಷನಲ್ಲಿರುವ ಸವಿತೃದೇವನು ಸೃಷ್ಟಿಸಿದ ಸಪ್ತಸ್ವರ್ಗಗಳ ಆಚೆ ಇರುವನು. ಅಂದರೆ ಯೋಗಿಯು ಒಂದೊಂದೇ ಸ್ವರ್ಗವನ್ನು ಏರಿ ಅತ್ಯುನ್ನತವಾದ ಇಂದ್ರನ ವಾಸಸ್ಥಾನಕ್ಕೆ ಹೋಗಬೇಕು.

ದ್ವಿತಾ ವಿ ವವ್ರೇ ಸನಜಾ ಸನೀಳೇ ಅಯಾಸ್ಯಃ ಸ್ತವಮಾನೇಭಿರರ್ಕೈಃ।
ಭಗೋ ನ ಮೇನೇ ಪರಮೇ ವ್ಯೋಮನ್ನಧಾರಯದ್ರೋದಸೀ ಸುದಂಸಾಃ।। (ಋಗ್ವೇದ ೧-೬೨-೭ ಸಾಭಾ)
"ಇಂದ್ರನನ್ನು ಯುದ್ಧಾದಿ ಪ್ರಯತ್ನಗಳಿಂದ ಒಲಿಸಿಕೊಳ್ಳಲು ಸಾಧ್ಯನಲ್ಲ (ಜಿಹಾದ್, ಕ್ರೂಸೇಡ್ ಇತ್ಯಾದಿಗಳಿಂದ ಸಾಧ್ಯವಿಲ್ಲ). ಸ್ತುತಿರೂಪವಾದ ಮಂತ್ರಗಳಿಂದ ಸ್ತೋತ್ರಮಾಡುವವರಿಗೆ ಸುಲಭಸಾಧ್ಯನು. ಈ ಇಂದ್ರನು ನಿತ್ಯವಾದ ಮತ್ತು ಒಂದಾಗಿದ್ದ ಭೂಮ್ಯಾಕಾಶಗಳನ್ನು ಪ್ರತ್ಯೇಕಿಸಿ, ಭವ್ಯವಾದ ಮತ್ತು ಉತ್ಕೃಷ್ಟವಾದ ಆಕಾಶದಲ್ಲಿರುವ ಸೂರ್ಯನಂತೆ ಸ್ತ್ರೀರೂಪಧಾರಿಗಳಾದ ಈ ಭೂಮ್ಯಾಕಾಶಗಳನ್ನು ಪೋಷಿಸಿದನು."

ಅಂದರೆ ಜಪತಪಧ್ಯಾನಾದಿಗಳಿಂದ ಸಾಧ್ಯವಿಲ್ಲ. ಪ್ರಾರ್ಥನೆ ಮತ್ತು ಯಜ್ಞದಿಂದಲೇ ಸಾಧ್ಯ. ಆದ ಕಾರಣದಿಂದಲೇ 'ಯಜ್ಞೋ ವೈ ಇಂದ್ರ' ಎಂದು ಹೇಳಿರುವುದು.

ಏಷ ಪ್ರ ಪೂರ್ವೀರವ ತಸ್ಯ ಚಮ್ರಿಷೋತ್ಯೋ ನ ಯೇಷಾಮುದಯಂಸ್ತ ಭುರ್ವಣೀಃ।
ದಕ್ಷಂ ಮಹೇ ಪಾಯಯತೇ ಹಿರಣ್ಯಯಂ ರಥಮಾವೃತ್ಯಾ ಹರಿಯೋಗಮೃಭ್ವಸಂ।।
(ಋಗ್ವೇದ ೧-೫೬-೧ ಆರ್ ಎಲ್ ಕ ಭಾವಾರ್ಥ)
"ಇಂದ್ರನು ತನ್ನ ಉನ್ನತ ಶಿಖರದಿಂದ ಸಾಧಕನ ಶರೀರದಲ್ಲಿ ಉತ್ಸಾಹದಿಂದ ಆವಿರ್ಭವಿಸುತ್ತಾನೆ. ಆಗ ಸಾಧಕನು ಉತ್ಸಾಹದಿಂದ ಇಂದ್ರನಿಂದ ಮಾರ್ಗದರ್ಶನ ಪಡೆದು ಸೋಮರಸವನ್ನು ಇಂದ್ರನ ಮಹಾ ಕಾರ್ಯಗಳಿಗಾಗಿ ಅರ್ಪಿಸುತ್ತಾನೆ."

ನಕೀಮಿಂದ್ರೋ ನಿಕರ್ತವೇ ನ ಶಕ್ರಃ ಪರಿಶಕ್ತವೇ।
ವಿಶ್ವಂ ಶೃಣೋತಿ ಪಶ್ಯತಿ।। (ಋಗ್ವೇದ ೮-೭೮-೫ ಸಾಭಾ)
"ಇಂದ್ರನನ್ನು ಸ್ವಸ್ಥಾನದಿಂದ ಕೆಳಕ್ಕಿಳಿಸಲು ಯಾರಿಂದಲೂ ಸಾಧ್ಯವಿಲ್ಲ. ಸರ್ವ ಶಕ್ತನಾದ ಇಂದ್ರನನ್ನು ಸೋಲಿಸಲು ಯಾರಿಂದಲೂ ಸಾಧ್ಯವಿಲ್ಲ. ಅದೇ ಇಂದ್ರನು ಸಕಲವನ್ನು ಕೇಳುತ್ತಾನೆ, ಸಕಲವೂ ಅವನ ಗೋಚರಕ್ಕೆ ಬೀಳುತ್ತದೆ. ಅವನು ಮಾತ್ರ ಅನಿರ್ಬಂಧಿತನು."

ಸ ಇದ್ವನೇ ನಮಸ್ಯುಭಿರ್ವಚಸ್ಯತೇ ಚಾರು ಜನೇಷು ಪ್ರಬ್ರುವಾಣ ಇಣದ್ರಿಯಂ।
ವೃಷಾ ಛಂದುರ್ಭವತಿ ಹರ್ಯತೋ ವೃಷಾ ಕ್ಷೇಮೇಣ ಧೇನಾಂ ಮಘವಾ ಯದಿನ್ವತಿ।।
(೧-೫೫-೪ ಆರ್ ಎಲ್ ಕ ಭಾವಾರ್ಥ)

"ಸಂತೋಷಗೊಂಡ ಇಂದ್ರನು ತನ್ನ ಆರಾಧಕರೊಡನೆ ಸಂಭಾಷಿಸುತ್ತಾನೆ ಮತ್ತು ಸಂತೋಷವಾಗಿ ತನ್ನ ರಹಸ್ಯವನ್ನು ಒಂದೊಂದಾಗಿ ತಿಳಿಯಪಡಿಸುತ್ತಾನೆ."

ಅಪ್ರಕ್ಷಿತಂ ವಸು ಬಿಭರ್ಷಿ ಹಸ್ತಯೋರಷಾಳ್ಹಂ ಸಹಸ್ತನ್ವಿ ಶ್ರುತೋ ದಧೇ।
ಆವೃತಾಸೋಽವತಾಸೋ ನ ಕರ್ತುಭಿಸ್ತನೂಷು ತೇ ಕ್ರತವ ಇಂದ್ರ ಭೂರಯಃ॥ (ಋಗೇದ ೧-೫೫-೮ ಸಾಭಾ)
"ಎಲೈ ಇಂದ್ರನೇ, ನೀನು ನಮಗೆ ಕೊಡುವುದಕ್ಕಾಗಿ ನಿನ್ನೆರಡು ಕೈಗಳಲ್ಲಿಯೂ ಅಕ್ಷಯವಾದ ಧನವನ್ನು ಹಿಡಿದಿದ್ದೀಯೆ. ಪ್ರಖ್ಯಾತನಾದ ನಿನ್ನ ಶರೀರದಲ್ಲಿ ಶತ್ರುಗಳಿಂದ ಪ್ರತಿಭಟಿಸಲಸಾಧ್ಯವಾದ ಬಲವಿದೆ..."

ತ್ವಂ ಮಹಾನ್ ಇಂದ್ರ ಯೋ ಹ ಶುಷ್ಮೈರ್ದ್ಯಾವಾ ಜಜ್ಞಾನಃ ಪೃಥಿವೀ ಅಮೇ ಧಾಃ।
ಯದ್ಧ ತೇ ವಿಶ್ವಾ ಗಿರಯಶ್ಚಿದಭ್ವಾ ಭಿಯಾ ದೃಳ್ಹಾಸಃ ಕಿರಣಾ ನೈಜನ್॥ (ಋಗೇದ ೧-೬೩-೧ ಸಾಭಾ)
"ಭೂಮ್ಯಾಕಾಶಗಳಿಗೆ ಅಸುರ ಸಂಬಂಧವಾದ ಭಯವುಂಟಾಗಲು ನೀನು ತಕ್ಷಣವೇ ಆವಿರ್ಭೂತನಾಗಿ ಅವೆರಡಕ್ಕೂ ಒದಗಿದ್ದ ಭಯವನ್ನು ಪರಿಹಾರಮಾಡಿದೆ. ನಿನ್ನ ಭಯದಿಂದಲೇ, ಎಲ್ಲೆಲ್ಲಿಯೂ ವ್ಯಾಪಿಸಿಕೊಂಡಿದ್ದ ಭೂತಗಳೂ, ದೃಢವಾಗಿದ್ದ ಪರ್ವತಗಳೂ ಮತ್ತು ಇತರ ದೊಡ್ಡ ದೊಡ್ಡ ವಸ್ತುಗಳೂ ಕೂಡ, ಸೂರ್ಯನ ಕಿರಣಗಳು ಕಂಪಿಸುವಂತೆ ಕಂಪಿಸಿದವು.

ಭೂರಿ ತ ಇಂದ್ರ ವೀರ್ಯಂ ತವ ಸ್ಮಸ್ಯಸ್ಯ ಸ್ತೋತುರ್ಮಘವನ್ಕಾಮಮಾ ಪೃಣ।
ಅನು ತೇ ದ್ಯೌರ್ಬೃಹತೀ ವೀರ್ಯಂ ಮಮ ಇಯಂ ಚ ತೇ ಪೃಥಿವೀ ನೇಮ ಓಜಸೇ॥ (ಋಗೇದ ೧-೫೭-೫ ಸಾಭಾ)
"ಎಲೈ ಇಂದ್ರನೇ ನಿನ್ನ ಪರಾಕ್ರಮವು ಅತ್ಯಧಿಕವಾದುದು. ನಾವು ನಿನ್ನವರಾಗಿದ್ದೇವೆ. ನಿನ್ನನ್ನು ಸ್ತುತಿಸತಕ್ಕ ನಮ್ಮ ಅಭಿಲಾಷೆಯನ್ನು ಪೂರೈಸು. ಮಹತ್ತಾದ ದ್ಯುಲೋಕವು ನಿನ್ನ ಪರಾಕ್ರಮವನ್ನು ಅಂಗೀಕರಿಸಿದೆ. ಈ ಪೃಥ್ವಿಯೂ ಸಹ ನಿನ್ನ ಶಕ್ತಿಯ ಮುಂದೆ ನಮ್ರವಾಗಿ ಬಗ್ಗಿದೆ."

ತ್ವಂ ಭುವಃ ಪ್ರತಿಮಾನಂ ಪೃಥಿವ್ಯಾ ಋಷ್ವವೀರಸ್ಯ ಬೃಹತಃ ಪತಿರ್ಭೂಃ।
ವಿಶ್ವಮಾಪ್ರಾ ಅಂತರಿಕ್ಷಂ ಮಹಿತ್ವಾ ಸತ್ಯಮದ್ಧಾ ನಕಿರನ್ಯಸ್ತ್ವವಾನ್॥
"ಎಲೈ ಇಂದ್ರನೇ, ನೀನು ವಿಸ್ತಾರವಾಗಿ ಹರಡಿರುವ ಭೂಮಿಗೆ ಆದರ್ಶನಾಗಿದ್ದೀಯೆ. ಶ್ರೇಷ್ಟವಾಗಿಯೂ ವೀರರಾಗಿಯು ಇರುವ ದೇವತೆಗಳಿಂದ ಕೂಡಿದ್ದು, ಮಹತ್ತಾದುದ್ದೂ ಆದ ಸ್ವರ್ಗಕ್ಕೆ ಪಾಲಕನಾಗಿದ್ದೀಯೆ. ದ್ಯಾವಪೃಥ್ವಿಗಳ ನಡುವೆ ಇರುವ ಸಮಸ್ತ ಆಕಾಶವನ್ನು ನಿನ್ನ ಪ್ರಭಾವದಿಂದ ಸುತ್ತಲೂ ತುಂಬಿಕೊಂಡಿದ್ದೀಯೆ. ನಿನಗೆ ಸದೃಶನಾದವನು ಬೇರೊಬ್ಬನಿಲ್ಲವೆಂಬುದು ಸತ್ಯವೇ ಆಗಿರುವುದು." ( ಋಗೇದ ೧-೫೨-೧೩ ಸಾಭಾ)

ನ ಯಸ್ಯ ದ್ಯಾವಾಪೃಥಿವೀ ಅನು ವ್ಯಚೋ ನ ಸಿಂಧವೋ ರಜಸೋ ಅನ್ತಮಾನಶುಃ।
ನೋತ ಸ್ವವೃಷ್ಟಿಂ ಮದೇ ಅಸ್ಯ ಯುಧ್ಯತ ಏಕೋ ಅನ್ಯಚ್ಚಕೃಷೇ ವಿಶ್ವಮಾನುಷಕ್॥ (ಋಗ್ವೇದ ೧-೫೨-೧೪ ಸಾಭಾ)
"ಇಂದ್ರನ ವ್ಯಾಪಕ ಶಕ್ತಿಯನ್ನು ಅತ್ಯಂತ ವಿಸ್ತಾರವಾಗಿರುವ ಪೃಥ್ವಿ ಅಂತರಿಕ್ಷಗಳೆರಡೂ ಹೊಂದಲಸಮರ್ಥ ವಾದವು. ಅಂತರಿಕ್ಷದ ಮೇಲೆ ಹರಿಯುವ ನೀರಿನ ಪ್ರವಾಹಗಳು ಇಂದ್ರನ ಪ್ರಭಾವದ ಸೀಮೆಯನ್ನು ಮುಟ್ಟಲಾಗಲಿಲ್ಲ..... ಆದ್ದರಿಂದ ಎಲೈ ಇಂದ್ರನೇ, ನಿನ್ನೊಬ್ಬನನ್ನು ಬಿಟ್ಟು ಉಳಿದ ಸಕಲ ಭೂತಗಳನ್ನೂ ಕೂಡ ನೀನು ನಿನ್ನ ಆಧೀನವಾಗಿರುವಂತೆ ಸೃಷ್ಟಿಸಿದ್ದೀಯೆ."

(ವಿರಾಟ್‌ಪುರುಷನ ಶರೀರವು ಜಲವು ತುಂಬಿಕೊಂಡಿದೆ, ಆದರೆ ಇಂದ್ರಲೋಕವು ಅದರ ಆಚೆಗಿದೆ.)

ಮಾನೋ ಅಸ್ಸನ್ಮಘವನ್ನೃತ್ಸ್ವಂಹಸಿ ನಹಿ ತೇ ಅನ್ತಃ ಶವಸಃ ಪರೀಣಶೇ।
ಅಕ್ರಂದಯೋ ನದ್ಯೋಽರೋರುವದ್ವನಾ ಕಥಾ ನ ಕ್ಷೋಣೀರ್ಭಿಯಸಾ ಸಮಾರತ॥ (ಋಗ್ವೇದ ೧-೫೪-೧ ಸಾಭಾ)
"......ಇಂದ್ರನ ಭಯದಿಂದಲೇ ಮೂರು ಲೋಕಗಳು ತಮ್ಮ ತಮ್ಮ ಕೆಲಸವನ್ನು ಮಾಡುತ್ತಿವೆ."

ಆ ಪಪ್ರೌ ಪಾರ್ಥಿವಂ ರಜೋ ಬದ್ಬಧೇ ರೋಚನಾ ದಿವಿ।
ನ ತ್ವಾವಾನ್ ಇಂದ್ರ ಕಶ್ಚನ ನ ಜಾತೋ ನ ಜನಿಷ್ಯತೇಽತಿ (ಅತಿ) ವಿಶ್ವಂ ವವಕ್ಷಿತ॥ (ಋಗ್ವೇದ ೧-೮೧-೫ ಸಾಭಾ)
"ಎಲೈ ಇಂದ್ರನೆ, ನೀನು ನಿನ್ನ ಮಹಿಮೆಯಿಂದ ಪೃಥ್ವಿ ಅಂತರಿಕ್ಷ ಲೋಕಗಳನ್ನೆಲ್ಲಾ ತುಂಬಿದ್ದೀಯೇ. ದ್ಯುಲೋಕದಲ್ಲಿ ಪ್ರಕಾಶಿಸುತ್ತಿರುವ ಸ್ವರ್ಗವನ್ನು ಭದ್ರವಾಗಿ ನೆಲೆಗೊಳಿಸಿದ್ದೀಯೆ. ಎಲೈ ಇಂದ್ರನೇ, ನಿನಗೆ ಸದೃಶನಾದವನು ಹಿಂದೆಯೂ ಹುಟ್ಟಿಲ್ಲ, ಮುಂದೆಯೂ ಹುಟ್ಟುವುದಿಲ್ಲ. ಅಂತಹ ಮಹಾ ಮಹಿಮನಾದ ನೀನು ಸಕಲ ಜಗತ್ತನ್ನೂ ಅತಿ ಸುರಕ್ಷಿತವಾಗಿ ಎತ್ತಿ ಹಿಡಿಯುತ್ತೀಯಾ.

ಯಸ್ಯ ದ್ಯಾವಾಪೃಥಿವೀ ಪೌಂಸ್ಯಂ ಮಹದ್ಯಸ್ಯ ವ್ರತೇ ವರುಣೋ ಯಸ್ಯ ಸೂರ್ಯಃ।
ಯಸೇಂದ್ರಸ್ಯ ಸಿಂಧವಃ ಸಶ್ಚತಿ ವ್ರತಂ ಮರುತ್ವಂತಂ ಸಖ್ಯಾಯ ಹವಾಮಹೇ॥ (ಋಗ್ವೇದ ೧-೧೦೧-೩ ಸಾಭಾ)

"ಯಾವ ಇಂದ್ರನ ಅತ್ಯಧಿಕ ಬಲವು ದ್ಯಾವಾಪೃಥ್ವಿಗಳೆರಡನ್ನೂ ವ್ಯಾಪಿಸಿದೆಯೋ, ಯಾವ ಇಂದ್ರನ ಆಜ್ಞಾನುವರ್ತಿಗಳಾಗಿ ವರುಣನು ಮತ್ತು ಸೂರ್ಯನು ದೃಢವಾದ ಕರ್ತವ್ಯಪರರಾಗಿರುವರೋ ಮತ್ತು ಯಾವ ನದಿಗಳು (ಸ್ವರ್ಗದ ಸಪ್ತನದಿಗಳು) ಪ್ರವಹಿಸುವವೋ ಅಂತಹ ಮರುತ್ತುಗಳೊಡಗೂಡಿದ ಇಂದ್ರನನ್ನು ನಾವೂ ಸಹ ನಮ್ಮೊಡನೆ ಸ್ನೇಹವನ್ನು ಬೆಳೆಸುವುದಕ್ಕಾಗಿ ಕರೆಯುತ್ತೇವೆ."

ಇಂದ್ರಾಯ ಹಿ ದ್ಯೌರಸುರೋ ಅನಮ್ನತೇಂದ್ರಾಯ
ಮಹೀ ಪೃಥಿವೀ ವರೀಮಭಿರ್ದ್ಯುಮ್ನ ಸಾತಾ ವರೀಮಭಿಃ।
ಇಂದ್ರಂ ವಿಶ್ವೇ ಸಜೋಷಸೋ ದೇವಾಸೋ ದಧಿರೇ ಪುರಃ ।
ಇಂದ್ರಾಯ ವಿಶ್ವಾ ಸವನಾನಿ ಮಾನುಷಾ ರಾತಾನಿ ಸಂತು ಮಾನುಷಾ ।। (ಋಗ್ವೇದ ೧-೧೩೧-೧ ಸಾಭಾ)
"ದ್ಯುಲೋಕವು ಇಂದ್ರನಿಗೆ ಮಾತ್ರವೇ ತಲೆಬಾಗುತ್ತದೆ. ಭೂಮಿಯು ತನ್ನ ಸಮರ್ಪಣೆಯಿಂದ ತಲೆಬಾಗುತ್ತದೆ. ಮಾನವರು ತಮ್ಮ ಸಾಧನೆಯ ಯಶಸ್ಸಿಗಾಗಿ ತಲೆಬಾಗುವರು. ದೇವತೆಗಳು ಇಂದ್ರನಿಗೆ ಅಗ್ರಸ್ಥಾನವನ್ನು ಕೊಟ್ಟಿದ್ದಾರೆ. ಮಾನವನ ಸೋಮರಸದ ಅರ್ಪಣೆಯೆಲ್ಲವೂ ಇಂದ್ರನಿಗಾಗಿ. ಮಾನವರ ಎಲ್ಲಾ ಆಹುತಿಗಳು ಇಂದ್ರನಿಗೇ ಇರಲಿ."

ಯಃ ಪೃಥಿವೀಂ ವ್ಯಥಮಾನಾಮದೃಂಹದ್ಯಃ ಪರ್ವತಾನ್ಪ್ರಕುಪಿತಾನ್ ಅರಮ್ಣಾತ್ ।
ಯೋ ಅಂತರಿಕ್ಷಂ ವಿಮಮೇ ವರೀಯೋ ಯೋ ದ್ಯಾಮಸ್ತಾಭ್ನಾತ್ಸ ಜನಾಸ ಇಂದ್ರಃ ।। (ಋಗ್ವೇದ ೨-೧೨-೨ ಸಾಭಾ)
"ಯಾವನು ಅಲುಗಾಡುತ್ತಿದ್ದ ಪೃಥ್ವಿಯನ್ನು ದೃಢವಾಗಿ ನಿಲ್ಲುವಂತೆ ಮಾಡಿದನೋ, ಯಾವನು ಕಳವಳವನ್ನು ಉಂಟುಮಾಡುವಂತೆ ಚಲಿಸುತ್ತಿದ್ದ ಪರ್ವತವನ್ನು ಸ್ಥಿರವಾಗಿರುವಂತೆ ಮಾಡಿದನೋ, ಯಾವನು ವಿಸ್ತೃತವಾದ ಅಂತರಿಕ್ಷ ವನ್ನು ಅಳೆದನೋ, ಯಾವನು ದ್ಯುಲೋಕವನ್ನು ತಡೆದು ನಿಲ್ಲಿಸಿದನೋ ಅವನೇ ಇಂದ್ರನು.

ಯೇನೇಮಾ ವಿಶ್ವಾ ಚ್ಯವನಾ ಕೃತಾನಿ ಯೋ ದಾಸಂ ವರ್ಣಮಧರಂ ಗುಹಾಕಃ।
ಶ್ವಘ್ನೀವ ಯೋ ಜಿಗೀವಾಂ ಲಕ್ಷಮಾದದರ್ಯಃ ಪುಷ್ಟಾನಿ ಸ ಜನಾಸ ಇಂದ್ರಃ।। (ಋಗ್ವೇದ ೨-೧೨-೪ ಸಾಭಾ)
"ಯಾವ ಇಂದ್ರನಿಂದ ನಶ್ವರವಾದ ಈ ಲೋಕವೆಲ್ಲವೂ ಸ್ಥಿರವಾಗಿರುವಂತೆ ನಿರ್ಮಿತವಾದವೋ, ಯಾವನು ಅಸುರರನ್ನು ಪಾತಾಳದ ಗುಹೆಯಲ್ಲಿರುವಂತೆ ಮಾಡಿದನೋ, ಯಾವನು ಬೇಡನು ತನ್ನ ಮೃಗವನ್ನು ಸ್ವಾಧೀನಪಡಿಸಿ ಕೊಳ್ಳುವಂತೆ, ಅಸುರರ ಸಮೃದ್ಧವಾದ ಸಂಪತ್ತುಗಳನ್ನು ತನ್ನಧೀನವಾದುದನ್ನಾಗಿ ಮಾಡಿಕೊಂಡನೋ ಅವನೇ ಇಂದ್ರನು."
ಅದ್ವೈತಿಗಳು ಮೇಲಿನ ಸೂಕ್ತವನ್ನು ಗಮನಿಸಬೇಕು.

ಇಂದ್ರನು ನಮ್ಮ ಆರಾಧ್ಯ ದೈವ ಮಾತ್ರವಲ್ಲ ನಮ್ಮ ಸ್ನೇಹಿತನೂ ಆಗಿರುವನು. ಆದರೆ ಆತನ ಸಖ್ಯ ಬೆಳೆಸಲು ವೇದ ಮಂತ್ರಗಳಿಂದ ಇಂದ್ರನನ್ನು ಸ್ತುತಿಸಬೇಕು. ಎಲ್ಲರೂ ಆಪೇಕ್ಷಿಸುವವನೂ, ಬಹು ಜನರಿಂದ ಕರೆಯಲ್ಪಡುವವನೂ, ಸ್ನೇಹಿತನಂತೆ ಪ್ರಿಯನಾದವನೂ, ಭೂಮಿ ಸ್ವರ್ಗಗಳ ರಕ್ಷಕನೂ ಆದ ಇಂದ್ರನನ್ನು ಬಹುವಾಗಿ ಸ್ತುತಿಸಿ ಸೋಮರಸವನ್ನು ಅರ್ಪಿಸಬೇಕು.

ತಥಾ ತದಸ್ತು ಸೋಮಾಪಾಃ ಸಖೇ ವಜ್ರಿನ್ತಥಾ ಕೃಣು ।
ಯಥಾ ತ ಉಶ್ಮಸೀಷ್ಟಯೇ ।। ( ಋಗ್ವೇದ ೧-೩೦-೧೨ ಸಾಭಾ)
"ಸೋಮರಸವನ್ನು ಪಾನಮಾಡತಕ್ಕವನೂ, ನಮ್ಮ ರಕ್ಷಣೆಗಾಗಿ ವಜ್ರಾಯುಧವನ್ನು ಹಿಡಿದಿರುವವನೂ ಆದ ಇಂದ್ರನೇ ನಿನ್ನ ಸ್ನೇಹಿತರಾದ ನಾವು ನಿನ್ನ ಅನುಗ್ರಹವನ್ನು ಯಾವ ರೀತಿ ಆಪೇಕ್ಷಿಸುತ್ತೇವೆಯೋ ಅದೇ ರೀತಿ ಅನುಗ್ರಹಿಸು ಮತ್ತು ನಮ್ಮ ಇಷ್ಟಾರ್ಥವೂ ಸಹ ಅದೇ ರೀತಿ ನೆರವೇರಲಿ."

ವಿಶ್ವೇಷು ಹಿ ತ್ವಾ ಸವನೇಷು ತುಂಜತೇ ಸಮಾನಮೇಕಂ ವೃಷಮಣ್ಯವಃ ಪೃಥಕ್ ಸ್ವಃ ಸನಿಷ್ಯವಃ ಪೃಥಕ್ ।
ತಂ ತ್ವಾ ನಾವಂ ನ ಪರ್ಷಣಿಂ ಶೂಷಸ್ಯ ಧುರಿ ಧೀಮಹಿ ।
ಇಂದ್ರಂ ನ ಯಜ್ಞೈಶ್ಚಿತಯಂತ ಆಯವಃ ಸ್ತೋಮೇಭಿರಿಂದ್ರಮಾಯವಃ ।। (ಋಗ್ವೇದ ೧-೧೩೧-೨ ಸಾಭಾ)
"ಎಲೈ ಇಂದ್ರನೇ, ಎಲ್ಲಾ ಸೋಮಯಾಗಗಳಲ್ಲಿಯೂ ನಿನ್ನನ್ನೇ ಕಾಮವರ್ಷಕನನ್ನಾಗಿ ತಿಳಿದವರಾಗಿ, ಸ್ವರ್ಗಲೋಕ ಪ್ರಾಪ್ತಿಗಾಗಿ ನಿನ್ನೊಬ್ಬನನ್ನೇ ಆರಾಧಿಸುತ್ತಾರೆ. ಪ್ರಯಾಣಿಕರು ದೋಣಿಯಲ್ಲಿ ಇನ್ನೊಂದು ತೀರಕ್ಕೆ ಹೋಗುವಂತೆ, ಪೃಥ್ವಿಯಿಂದ ನಿನ್ನ ಲೋಕಕ್ಕೆ ಬರಲು ಮಾನವನಿಗೆ ಯಜ್ಞದ ರಹಸ್ಯವನ್ನು ಅನುಗ್ರಹಿಸುವುದರಿಂದ ನಿನ್ನನ್ನು ಸ್ತೋತ್ರಗಳಿಂದ ತುಷ್ಟಿಪಡಿಸುತ್ತೇವೆ."

ಪ್ರ ವಃ ಸತಾಂ ಜ್ಯೇಷ್ಠತಮಾಯ ಸುಷ್ಟುತಿಮಗ್ನಾವಿವ ಸಮಿಧಾನೇ ಹವಿರ್ಭರೇ ।
ಇಂದ್ರಮಜುರ್ಯಂ ಜರಯಂತಮುಕ್ಷಿತಂ ಸನಾದ್ಯುವಾನಮವಸೇ ಹವಾಮಹೇ ।। (ಋಗ್ವೇದ ೨-೧೬-೧ ಸಾಭಾ)

"ನಾವು ದೇವತೆಗಳಲ್ಲಿ ಅತ್ಯಂತ ಶ್ರೇಷ್ಠನಾದ ಇಂದ್ರನನ್ನುದ್ದೇಶಿಸಿ ಪ್ರಜ್ವಲಿತವಾದ ಅಗ್ನಿಯಲ್ಲಿ ನಿನಗಾಗಿ ಹವಿಸ್ಸನ್ನರ್ಪಿಸುತ್ತೇವೆ. ಅದರಂತೆ ಸ್ತುತಿಯನ್ನು ಪಠಿಸುತ್ತೇವೆ. ಕ್ಷಯರಹಿತನೂ, ಇತರರನ್ನು ಕ್ಷಯಿಸುವಂತೆ ಮಾಡುವವನೂ ಸೋಮರಸದಿಂದ ಸಿಕ್ತನಾದವನೂ, ಪುರಾತನನೂ, ನಿತ್ಯ ತರುಣನೂ ಆದ ಇಂದ್ರನನ್ನು ರಕ್ಷಣಾರ್ಥವಾಗಿ ಕರೆಯುತ್ತೇವೆ."

ಅವಂಶೇ ದ್ಯಾಮಸ್ತಭಾಯದ್ಬೃಹಂತಮಾ ರೋದಸೀ ಅಪೃಣದಂತರಿಕ್ಷಂ ।
ಸ ಧಾರಯತ್ಪೃಥಿವೀಂ ಪಪ್ರಥಚ್ಚ ಸೋಮಸ್ಯ ತಾ ಮದ ಇಂದ್ರಶ್ಚಕಾರ ।। (ಋಗ್ವೇದ ೨-೧೫-೨ ಸಾಭಾ)
"ಇಂದ್ರನು ಆಧಾರರಹಿತವಾದ ಆಕಾಶದಲ್ಲಿ ದ್ಯುಲೋಕವನ್ನೂ, ಪ್ರಕಾಶಮಾನನಾದ ಸೂರ್ಯನನ್ನು ಸ್ಥಾಪಿಸಿದನು. ಮಹತ್ತಾದ ಅಂತರಿಕ್ಷವನ್ನು ದ್ಯಾವಾಪೃಥ್ವಿಗಳನ್ನು ತನ್ನ ತೇಜಸ್ಸಿನಿಂದ ತುಂಬಿದನು. ಆ ಇಂದ್ರನು ವಿಸ್ತೃತವಾದ ಪೃಥ್ವಿಯನ್ನು ಧರಿಸಿ ಅದು ಪ್ರಖ್ಯಾತವಾಗುವಂತೆ ಮಾಡಿದನು. ಸೋಮರಸದ ಪಾನದಿಂದ ಹರ್ಷವುಂಟಾದಾಗ ಇಂದ್ರನು ಈ ಮಹತ್ಕಾರ್ಯಗಳನ್ನು ಮಾಡಿದನು."

ಅಸಾವಿ ಸೋಮ ಇಂದ್ರ ತೇ ಶವಿಷ್ಠ ಧೃಷ್ಣವಾ ಗಹಿ ।
ಆ ತ್ವಾ ಪೃಣಕ್ತ್ವಿಂದ್ರಿಯಂ ರಜಃ ಸೂರ್ಯೋ ನ ರಶ್ಮಿಭಿಃ ।। (ಋಗ್ವೇದ ೧-೮೪-೧)
"ಎಲೈ ಇಂದ್ರನೇ, ನಿನಗಾಗಿ ಸೋಮರಸವು ಹಿಂಡಲ್ಪಟ್ಟಿದೆ. ಅತ್ಯಂತ ಬಲಶಾಲಿಯೂ, ಆದ್ದರಿಂದಲೇ ಶತ್ರುದಮನವನ್ನು ಮಾಡುವವನೂ ಆದ ಇಂದ್ರನೇ, ನೀನು ದೇವಯಜ್ಞಪ್ರದೇಶಕ್ಕೆ ದಯಮಾಡು ಸೂರ್ಯನು ತನ್ನ ಕಿರಣಗಳ ಮೂಲಕ ಅಂತರಿಕ್ಷವನ್ನು ತುಂಬುವಂತೆ, ಸೋಮರಸಪಾನದಿಂದ ಲಭಿಸಿದ ಪ್ರಬಲವಾದ ಶಕ್ತಿಯು ನಿನ್ನ ದೇಹವನ್ನೆಲ್ಲಾ ತುಂಬಿಕೊಳ್ಳಲಿ."

ವಿದುಷ್ಟೇ ಅಸ್ಯ ವೀರ್ಯಸ್ಯ ಪೂರವಃ ಪುರೋ ಯದಿಂದ್ರ ಶಾರದೀರವಾತಿರಃ
ಸಾಸಹಾನೋ ಅವಾತಿರಃ ಶಾಸಸ್ತಮಿಂದ್ರ ಮರ್ತ್ಯಮಯಜ್ಯುಂ ಶವಸಸ್ಪತೇ ।
ಮಹೀಮಮುಷ್ಣಾಃ ಪೃಥಿವೀಮಿಮಾ ಅಪೋ ಮಂದಸಾನ ಇಮಾ ಅಪಃ ।।
(ಋಗ್ವೇದ ೧-೧೩೧-೪ ಸಾಭಾ ಭಾವಾರ್ಥ)
"ಅವೈದಿಕರಾದ ಶತ್ರುಗಳ ನಗರಗಳನ್ನು ನಾಶಮಾಡಿದೆ. ಕರ್ಮಭ್ರಷ್ಟನೂ ಆದ ನಾಸ್ತಿಕನಿಗೆ ಇಂದ್ರನು ಶತ್ರುವಾಗಿದ್ದಾನೆ. ನಾಸ್ತಿಕನನ್ನು ಇಂದ್ರನು ಶಿಕ್ಷಿಸಿ ನಾಶಪಡಿಸುತ್ತಾನೆ. ಎಲೈ ಇಂದ್ರನೇ ನಿನ್ನನ್ನು ಪೂಜಿಸದೇ, ನಿನಗೆ ಹವಿಸ್ಸನ್ನರ್ಪಿಸದೇ ಇರುವ ಪುರುಷನನ್ನು ನೀನು ಕ್ರಮವಾಗಿ ಶಿಕ್ಷಿಸಿಯೇ ಇರುವೆ. ಇಂತಹ ನಿನ್ನ ಪರಾಕ್ರಮ ಕಾರ್ಯಗಳ ಮಹತ್ವವನ್ನು ಯಜ್ಞಕರ್ತರು ತಿಳಿದಿದ್ದಾರೆ"

ಈ ಕಾರಣಕ್ಕಾಗಿಯೇ ಭಾರತವು ತನ್ನ ಮಹಿಮೆಯನ್ನೂ ಸಾರ್ವಭೌಮತ್ವವನ್ನು ಕಳೆದುಕೊಂಡಿದೆ. ಇಂದ್ರನು ಭಾರತೀಯರನ್ನು ನಾಶಮಾಡದಿರುವ ಕಾರಣವೇನೆಂದರೆ ಇಲ್ಲಿ ಋಗ್ವೇದವು ಸಂರಕ್ಷಿಸಲ್ಪಟ್ಟಿದೆ. ಕೆಲವರು ಯಜ್ಞಾದಿಕಾರ್ಯಗಳಲ್ಲಿ ನಿರತರಾಗಿದ್ದಾರೆ ಮತ್ತು ಕೆಲವರು ಕುಂಡಲಿನಿ ರಹಸ್ಯವನ್ನು ಕಾಪಾಡಿಕೊಂಡಿದ್ದಾರೆ.

ಇಂದ್ರೋ ದೀರ್ಘಾಯ ಚಕ್ಷಸ ಆ ಸೂರ್ಯಂ ರೋಹಯದ್ದಿವಿ ।
ವಿ ಗೋಭಿರದ್ರಿಮೈರಯತ್ ।। (ಋಗ್ವೇದ ೧-೭-೩ ಸಾಭಾ)
"ಹಿಂದೆ ವೃತಾಸುರನು ಜಗತ್ತನ್ನು ಅಂಧಕಾರದಿಂದ ಆವರಿಸುವಂತೆ ಮಾಡಲು ಇಂದ್ರನು ವೃತನನ್ನು ಸಂಹಾರಮಾಡಿ ಜಗತ್ತನ್ನು ಪ್ರಳಾಲದವರೆಗೂಬೆಳಗುವುದಕ್ಕಾಗಿ ಸೂರ್ಯನನ್ನು ಅಂತರಿಕ್ಷದಲ್ಲಿ (ಸೃಷ್ಟಿಕಾರ್ಯಕ್ಕಾಗಿ) ಸ್ಥಾಪಿಸಿದ್ದಾನೆ."

ಯದಾ ಸೂರ್ಯಮಮುಂ ದಿವಿ ಶುಕ್ರಂ ಜ್ಯೋತಿರಧಾರಯಃ ।
ಆದಿತ್ತೇ ವಿಶ್ವಾ ಭುವನಾನಿ ಯೇಮಿರೇ ।। (ಋಗ್ವೇದ ೮-೧೨-೩೦ ಸಾಭಾ)
"ಎಲೈ ಇಂದ್ರನೇ, ಅಂತರಿಕ್ಷದಲ್ಲಿ ಪ್ರಭಾಯುತವಾದ ಸೂರ್ಯನನ್ನು ನೀನು ಸ್ಥಾಪಿಸಿದೊಡನೆಯೇ ಸಕಲ ಲೋಕಗಳೂ ಕೃತಜ್ಞತೆಯಿಂದ ನಿನಗೆ ತಲೆಭಾಗಿದವು."

ಸೂರ್ಯ ರಕ್ಷಕನಾದ ಇಂದ್ರನನ್ನು ಯಾಕೆ ಭಾರತೀಯರು ತಿರಸ್ಕರಿಸಿದರೋ ತಿಳಿದಿಲ್ಲ.

ಇಂದೇಣ ರೋಚನಾ ದಿವೋ ದೃಳ್ಹಾನಿ ದೃಂಹಿತಾನಿ ಚ ।
ಸ್ಥಿರಾಣಿ ನ ಪರಾಣುದೇ ।। (ಋಗ್ವೇದ ೮-೧೪-೯ ಸಾಭಾ)

"ದ್ಯುಲೋಕವೂ, ಅಂತರಿಕ್ಷಾದಿಗಳಲ್ಲಿ ಪ್ರಕಾಶಿಸುವ ತೇಜೋರಾಶಿಗಳೆಲ್ಲಾ (ನಕ್ಷತ್ರ ಪುಂಜಗಳು) ಇಂದ್ರನಿಂದಲೇ ಸ್ಥಾಪಿತವಾಗಿವೆ. ಒಂದು ಸಲ ನಿಯಮಿಸಿದರೆ ಆ ಇಂದ್ರನ ನಿಯಮಗಳು ಸಡಿಲವಾಗುವುದಿಲ್ಲ. ಆದುದರಿಂದ ತೇಜಸ್ಸುಗಳು ಕುಂಠಿತವಾಗದೇ ಸ್ಥಿರವಾಗಿ ಪ್ರಭೆಯನ್ನು ಬೀರುತ್ತಿರುವುವು."

ಆ ಪಪ್ರೌ ಪಾರ್ಥಿವಂ ರಜೋ ಬದ್ಧಧೇ ರೋಚನಾ ದಿವಿ ।
ನ ತ್ವಾವಾನ್ ಇಂದ್ರ ಕಶ್ಚನ ನ ಜಾತೋ ನ ಜನಿಷ್ಯತೇಽತಿ ವಿಶ್ವಂ ವವಕ್ಷಿಥ ।। (ಋಗ್ವೇದ ೧-೮೧-೫ ಸಾಭಾ)
"ಇಂದ್ರನು ಪೃಥ್ವಿಯನ್ನೆಲ್ಲಾ ವ್ಯಾಪಿಸಿದ್ದಾನೆ. ದ್ಯುಲೋಕವನ್ನು ಭದ್ರಗೊಳಿಸಿದ್ದಾನೆ. ಅಂತರಿಕ್ಷದಲ್ಲಿ ತೇಜೋಮಂಡಲಗಳನ್ನೆಲ್ಲಾ ಸ್ಥಾಪಿಸಿದ್ದಾನೆ. ಎಲೈ ಇಂದ್ರನೇ ನಿನ್ನಂತಹ ದಿವ್ಯಗುಣವುಳ್ಳವರು ಇಲ್ಲಿಯವರೆಗೆ ಉತ್ಪನ್ನರಾಗಿಲ್ಲ, ಮುಂದೆಯೂ ಉತ್ಪನ್ನರಾಗುವುದಿಲ್ಲ. ನೀನು ಸಕಲ ವಿಶ್ವವನ್ನು ಅತಿ ಸುರಕ್ಷಿತವಾಗಿ ಎತ್ತಿ ಹಿಡಿದಿದ್ದೀಯೆ."

ಇಂದ್ರನು ತನ್ನು ಮಾನಸಿಕ ಶಕ್ತಿಯಿಂದ ವಿಶ್ವವನ್ನೆಲ್ಲಾ ವ್ಯಾಪಿಸಿಕೊಂಡಿದ್ದಾನೆ.

ಅನುತ್ತಮಾ ತೇ ಮಘವನ್ನಕಿರ್ನು ನ ತ್ವಾವಾನ್ ಅಸ್ತಿ ದೇವತಾ ವಿಧಾನಃ ।
ನ ಜಾಯಮಾನೋ ನಶತೇ ನ ಜಾತೋ ಯಾನಿ ಕರಿಷ್ಯಾ ಕೃಣುಹಿ ಪ್ರವೃದ್ಧ ।। (ಋಗ್ವೇದ ೧-೧೬೫-೯ ಸಾಭಾ)
"ಎಲೈ ಇಂದ್ರನೇ, ನೀನು ಜಯಿಸದೇ ಇರತಕ್ಕದ್ದು ಯಾವುದೂ ಇಲ್ಲ. ದೇವತೆಗಳಲ್ಲೂ ಸಹ ನಿನ್ನ ಸಮಾನ ರಾದವರು ಯಾರೂ ಇಲ್ಲ. ನಿನ್ನೊಂದಿಗೆ ಸ್ಪರ್ಧಿಸತಕ್ಕವರು ಇಲ್ಲಿಯವರೆಗೆ ಹುಟ್ಟಿಲ್ಲ, ಮುಂದೆಯೂ ಅಂತಹವರು ಯಾರೂ ಹುಟ್ಟಲಾರರು. ಎಲೈ ದೇವನೆ, ನೀನು ಸಂಕಲ್ಪಿಸುವುದನ್ನೆಲ್ಲಾ ಖಂಡಿತ ಮಾಡುವೆ."

ಪ್ರ ಯದಿತ್ಥಾ ಮಹಿನಾ ನೃಭ್ಯೋ ಅಸ್ತ್ಯರಂ ರೋದಸೀ ಕಕ್ಷೇಽನಾಸ್ಮೈ ।
ಸಂ ವಿವ್ಯ ಇಂದ್ರೋ ವೃಜನಂ ನ ಭೂಮಾ ಭರ್ತಿ ಸ್ವಧಾವಾನ್ ಓಪಶಮಿವ ದ್ಯಾಂ ।। (ಋಗ್ವೇದ ೧-೧೭೩-೬ ಸಾಭಾ)
"ಕರ್ಮ ನಿರ್ವಾಹಕರಾದ ಯಜಮಾನರ ರಕ್ಷಕನೂ, ಮಹಾ ಮಹಿಮನೂ ಆದ ಇಂದ್ರನು ಭೂಮ್ಯಾಂತ ರಿಕ್ಷಗಳನ್ನು ಮೀರಿದ್ದಾನೆ; ಆಕಾಶವು ಭೂಮಿಯನ್ನು ಆವರಿಸುವಂತೆ, ಇವನು ತನ್ನ ತೇಜಸ್ಸಿನಿಂದ ಮೂರು ಲೋಕಗಳನ್ನು ಆವರಿಸಿದ್ದಾನೆ; ಇವನು ಭೂಮಿ ಮತ್ತು ಆಕಾಶಗಳಿಗೆ ಆಶ್ರಯವಾಗಿರುವಂತೆ ಸ್ವರ್ಗಲೋಕಕ್ಕೂ ಆಧಾರನಾಗಿದ್ದಾನೆ."
(ಇಂದ್ರನ ತೇಜಸ್ಸು ಮೂರುಲೋಕಗಳನ್ನೂ ವ್ಯಾಪಿಸಿದೆ. ವಿಶ್ವವನ್ನು ಲಯ ಮಾಡುವ ವೇಳೆ ತನ್ನ ತೇಜಸ್ಸನ್ನು ಹಿಂತೆಗೆದುಕೊಳ್ಳುತ್ತಾನೆ. ಆಗ ಇಂದ್ರಜೋತಿಯು ಕಿರಣಗಳನ್ನು ಒಳಕ್ಕೆ ಸೆಳೆದುಕೊಳ್ಳುತ್ತದೆ. ಆಗ ಅವನನ್ನು ನಾರಾಯಣ ಎಂದು ಕರೆಯುತ್ತಾರೆ. ವಿಶ್ವವು ಕ್ಷೀರ ಸಾಗರವಾಗಿ ಪರಿವರ್ತನೆ ಹೊಂದುತ್ತದೆ.)

ಪಪ್ರಾಥ ಕ್ಷಾಂ ಮಹಿ ದಂಸೋ ವ್ಯುಊರ್ವೀಮುಪ ದಾಮುಷ್ವೋ ಬೃಹದಿಂದ್ರ ಸ್ತಭಾಯಃ ।
ಅಧಾರಯೋ ರೋದಸೀ ದೇವಪುತ್ರೇ ಪ್ರತ್ನೇ ಮಾತರಾ ಯಹವೀ ಋತಸ್ಯ ।। (ಋಗ್ವೇದ ೬-೧೭-೭ ಸಾಭಾ)
"ಎಲೈ ಇಂದ್ರನೇ, ನೀನು ನಿನ್ನ ಮಹತ್ಕರ್ಮದಿಂದ ಅತಿ ವಿಸ್ತೃತವಾದ ಪೃಥ್ವಿಯನ್ನು ವ್ಯಾಪಿಸಿದ್ದಿಯೆ. ಮಹಾತ್ಮನಾದ ನೀನು ಅತಿ ಪ್ರಭೂತವಾದ ದ್ಯುಲೋಕವನ್ನು ಎತ್ತಿ ಹಿಡಿದಿದ್ದೀಯೆ. ದೇವತೆಗಳನ್ನೇ ಪುತ್ರರನ್ನಾಗಿ ಉಳ್ಳವರೂ, ಪುರಾತನರೂ, ಸಕಲಕ್ಕೂ ನಿರ್ವಾಹಕರೂ, ಯಜ್ಞಕ್ಕೆ ಮಹತ್ತಾದ ಜನಕರೂ ಆದ ದ್ಯಾವಾಪೃಥ್ವಿಗಳನ್ನು ಎತ್ತಿ ಹಿಡಿದಿದ್ದೀಯೆ."

(ದೇವತೆಗಳ ಕರ್ಮಸ್ಥಾನ ದ್ಯುಲೋಕ ಮತ್ತು ಪೃಥ್ವಿಯಾಗಿದೆ. ಜೀವರಾಶಿಗಳ ಸ್ಥೂಲಶರೀರವನ್ನೆಲ್ಲಾ ದೇವತೆಗಳು ರಚಿಸಿ ಅದರಲ್ಲೇ ಇರುವುದರಿಂದ ದ್ಯಾವಾಪೃಥಿವಿಯರ ಪುತ್ರರೆಂದು ಅರ್ಥ.)

ತ್ವಂ ಹಿ ನಃ ಪಿತಾ ವಸೋ ತ್ವಂ ಮಾತಾ ಶತಕ್ರತೋ ಬಭೂವಿಥ ।
ಅಧಾ ತೇ ಸುಮ್ನಮೀಮಹೇ ।। (ಋಗ್ವೇದ ೮-೯೮-೧೧ ಸಾಭಾ ಭಾವಾರ್ಥ)

"ಇಂದ್ರನು ಪಿತೃವಿಗಿಂತಲೂ ಅಧಿಕವಾದ ವಾತ್ಸಲ್ಯವನ್ನು ತೋರುತ್ತಾನೆ. ಹಾಗೆಯೇ ಮಾತೃವಾತ್ಸಲ್ಯವನ್ನೂ ಸಹ ತೋರಿಸುತ್ತಾನೆ." (ಇಂದ್ರನು ಬೆಳಕಿನ ಲೋಕದಿಂದ ಬಂದು ನಮ್ಮ ಶರೀರದಲ್ಲಿರುವುದು ಅಸುರರಿಂದ ನಮ್ಮನ್ನು ರಕ್ಷಿಸಲು ಮತ್ತು ನಮ್ಮ ಮೇಲಿನ ಪ್ರೀತಿಯಿಂದ ಮಾತ್ರ. ಅವನ ಜ್ಯೋತಿಯನ್ನು ಅವನೇ ರಕ್ಷಿಸಬೇಕು.)

ಹೇಗೆ ಪರ್ವತದಿಂದ ಹರಿದು ಬರುವ ನೀರಿನ ವೇಗವನ್ನು ತಡೆಯಲು ಅಸಾಧ್ಯವೋ ಹಾಗೆಯೇ ಇಂದ್ರನಿಂದ ಹರಿದು ಬರುವ ದೈವೀಕ ಬಳುವಳಿಯನ್ನು ತಡೆಯಲು ಅಸಾಧ್ಯವಾಗಿದೆ. ಯಾವಾಗ ಇಂದ್ರನು ನಮ್ಮ ಪ್ರಾರ್ಥನೆಗೆ ಒಲಿಯುವನೋ ಆಗ

ಆಪೋ ನ ದೇವೀರುಪ ಯಂತಿ ಹೋತ್ರಿಯಮವಃ ಪಶ್ಯಂತಿ ವಿತತಂ ಯಥಾ ರಜಃ । (ಋಗ್ವೇದ ೧-೮೩-೨ ಸಾಭಾ)
ಪ್ರಾಚೈರ್ದೇವಾಸಃ ಪ್ರ ಣಯಂತಿ ದೇವಯುಂ ಬ್ರಹ್ಮಪ್ರಿಯಂ ಜೋಷಯಂತೇ ವರಾ ಇವ ।।
"ನೀರುಗಳು ಕೆಳಗೆ ಹರಿದು ಬರುವಂತೆ ಪ್ರಕಾಶಮಾನರಾದ ದೇವತೆಗಳು ಸಾಧಕನಲ್ಲಿ ಬಂದು ಸೇರುವರು, ಯಾವ ರೀತಿ ವಿಸ್ತಾರವಾಗಿ ಹರಡತಕ್ಕ ಸೂರ್ಯಕಾಂತಿಯು ಅಧೋಮುಖವಾಗಿ ಪ್ರಸರಿಸುವಂತೆ ದೇವತೆಗಳು ಸಾಧಕನನ್ನು

ಆಶ್ರಯಿಸುತ್ತಾರೆ. ಮದುವೆಯಾಗುವ ಗಂಡುಗಳು ಹೊಸ ಪತ್ನಿಯನ್ನು ತಮ್ಮದೆಂಬ ಅಭಿಮಾನದಿಂದ ಆಧರಿಸಿ ಸೇವಿಸಲು ತವಕಪಡುವಂತೆ ದೇವತೆಗಳು ಸಾಧಕನನ್ನು ಉನ್ನತ ಸ್ಥಾನಕ್ಕೆ ಕರೆದುಕೊಂಡು ಹೋಗಲು ತವಕಿಸುತ್ತಾರೆ."

(ಸಾಧಕನಲ್ಲಿ ಸಪ್ತಮಸ್ವರ್ಗದಲ್ಲಿರುವ ಸೂರ್ಯನ ಕಾಂತಿಯು ಅಧೋಮುಖವಾಗಿರುತ್ತದೆ ಆದರೆ ಪೃಥ್ವಿಯ ಸೂರ್ಯನು ಅಥವಾ ನಮ್ಮ ಹೃದಯದಲ್ಲಿ ಪ್ರಕಟವಾದ ಸೂರ್ಯನು ತನ್ನ ತೇಜಸ್ಸನ್ನು ೩೬೦ ಡಿಗ್ರಿ ಪಸರಿಸುತ್ತಾನೆ.)

ದೂಣಾಶಂ ಸಖ್ಯಂ ತವ ಗೌರಸಿ ವೀರ ಗವ್ಯತೇ ।
ಅಶ್ವೋ ಅಶ್ವಾಯತೇ ಭವ ।। (ಋಗ್ವೇದ ೬-೪೫-೨೬ ಸಾಭಾ)
"ಇಂದ್ರನೇ ನಿನ್ನ ಸ್ನೇಹವು ಸುಲಭವಾಗಿ ನಾಶವಾಗತಕ್ಕದಲ್ಲ. ನೀನು ಜ್ಞಾನವನ್ನು (ಗೋವುಗಳನ್ನು) ಆಪೇಕ್ಷಿಸುವವರಿಗೆ ಜ್ಞಾನವನ್ನು, ಶಕ್ತಿಯನ್ನು (ಅಶ್ವವವನ್ನು) ಬಯಸುವವರಿಗೆ ಶಕ್ತಿಯನ್ನು ಅನುಗ್ರಹಿಸುವೆ.

ಇಂದ್ರನೇ ನೀನೊಬ್ಬನೇ ದೇವಮಾನವಾದಿಗಳಗೆಲ್ಲಾ ನೇತೃತ್ವನೂ ಮಾರ್ಗದರ್ಶಕನೂ ಆಗಿದ್ದೀಯೆ. ಇಂದ್ರನು ದ್ಯಾವಾಪೃಥ್ವಿಗಳಗೆಲ್ಲಾ ಸಾರ್ವಭೌಮನು. ಉಷಸ್‌ಅನ್ನು ಸೂರ್ಯನನ್ನು ಲೋಕನಿಯಮದ ಕಾರ್ಯಕ್ಕೆ ನಿಯಮಿಸಿದ ಈ ಇಂದ್ರನ ಪ್ರಭುತ್ವವು ಅತಿಕ್ರಮಿಸಲ್ಪಡತಕ್ಕದ್ದಲ್ಲ. ಈ ಇಂದ್ರನ ಮಹತ್ವವನ್ನು ದೇವತೆಗಳಾಗಲೀ, ಮಾನವರಾಗಲೀ, ಯಕ್ಷ ಗಂಧರ್ವರಾಗಲೀ ಪಡೆದಿಲ್ಲ. ಪಡೆಯಲಾಗುವುದೂ ಇಲ್ಲ.

ಇಂದ್ರನ ಮಹಿಮೆಯನ್ನು ಎಷ್ಟು ಬಣ್ಣಿಸಿದರೂ ಸಾಲದು. ಇಂದ್ರನು ಮಾಡಿದ ವೃತಾಸುರ ಸಂಹಾರವು ಮತ್ತು ಇಂದ್ರನ ಸಾಹಸ ಕೃತ್ಯಗಳು ಬಹಳ ಪ್ರಸಿದ್ಧವಾಗಿದೆ. ಭೂಲೋಕದಲ್ಲಿರುವ ಮಾನವರು ಇಂದ್ರನ ಸಾಹಸವನ್ನು ಸ್ತೋತ್ರ ರೂಪದಲ್ಲಿ ಹಾಡಿ ಹೊಗಳಿ ಅವನ ಕೃಪೆಗೆ ಪಾತ್ರರಾಗುತ್ತಾರೆ. ಯಜಮಾನನು ಮಾಡುವ ಈ ಸ್ತೋತ್ರಗಳಿಂದ ಅವನಲ್ಲಿ ಇಂದ್ರ ಚೈತನ್ಯವು ಜಾಗೃತವಾಗುತ್ತದೆ ಹಾಗು ಯಜಮಾನನ ಶರೀರದಲ್ಲಿ ಇಂದ್ರನ ಶಕ್ತಿ, ತೇಜಸ್ಸು ವೃದ್ಧಿಯಾಗುತ್ತದೆ (೧-೫-೮). ಇಂದ್ರನು ಸಾಧಕನ ಹೃದಯದಲ್ಲಿ ಆವರಿಸಿರುವ ಅಜ್ಞಾನರೂಪಿ ಕತ್ತಲನ್ನು ನಿವಾರಿಸುವನು (೫-೩೧-೯).

## ಇಂದ್ರನ ನಿರಾಕರಣೆ

ಇಂದ್ರನು ತನ್ನನ್ನು ಆರಾಧಿಸದವರನ್ನು ತ್ಯಜಿಸುವನು ಎಂಬುದಕ್ಕೆ ಋಗ್ವೇದ ಪ್ರಮಾಣ

ಪರಾ ಪೂರ್ವೇಷಾಂ ಸಖ್ಯಾ ವೃಣಕ್ತಿ ವತರ್ತುರಾಣೋ ಅಪರೇಭಿರೇತಿ ।
ಅನಾನುಭೂತೀರವಧೂನ್ವಾನಃ ಪೂರ್ವೀರಿಂದ್ರಃ ಶರದಸ್ತರ್ತರೀತಿ ।। (ಋಗ್ವೇದ ೬-೪೭-೧೭ ಸಾಭಾ)
"ಇಂದ್ರನು ಪ್ರಥಮತಃ ಉತ್ತಮವಾದ ಕರ್ಮಗಳನ್ನು ನೆರವೇರಿಸುತ್ತಿದ್ದ ಆನಂತರ ತ್ಯಜಿಸಿದ ಪುರುಷರ ಸ್ನೇಹವನ್ನು ತ್ಯಜಿಸುತ್ತಾನೆ. ಆನಂತರ ತನ್ನನ್ನು ಪೂಜಿಸದಿರುವ ಅವರನ್ನೂ ಸಹ ಹಿಂಸಿಸುತ್ತಾ ಅವರಿಗಿಂತಲೂ ನಿಕೃಷ್ಟರಾದವರೊಂದಿಗೆ ಸಖಿತ್ವವನ್ನು ಬೆಳೆಸುತ್ತಾನೆ. ಪುನಃ, ತನ್ನನ್ನು ಪೂಜಿಸದಿರುವವರನ್ನು ಪರಿತ್ಯಜಿಸಿ ಇಂದ್ರನು ಅನೇಕ ಸಂವತ್ಸರಗಳ ಕಾಲ ತನ್ನ ಸ್ತೋತೃಗಳೊಡನೆ ಕಾಲವನ್ನು ಕಳೆಯುತ್ತಾನೆ.

ಇಂದ್ರನೇ ಸಕಲ ವಿಶ್ವಕ್ಕೂ ಸ್ವಾಮಿಯೂ, ದೇವತೆಗಳಗೆಲ್ಲಾ ಪ್ರಭುವೂ ಮತ್ತು ವಿರಾಟ್‌ಪುರುಷನನ್ನು ವ್ಯಾಪಿಸಿ ಕೊಂಡಿರುವನು ಅವನೇ ಎಂದು ಋಗ್ವೇದವು ಸಾರುತ್ತಿದೆ. ಅಂತಹ ಮಹಾದೇವನಾದ ಇಂದ್ರನನ್ನು ದೈವವಾಣಿ ಯಾದ ಋಗ್ವೇದವು ಮುಕ್ತ ಕಂಠದಿಂದ ಹೊಗಳುತ್ತಿದ್ದರೂ ವೈದಿಕರು ಋಗ್ವೇದ ಸತ್ಯವನ್ನು ತಿರಸ್ಕರಿಸಲು ಕಾರಣವೇನು? ಭಾಗವತಾದಿಪುರಾಣಗಳು ಇಂದ್ರನನ್ನು ತೆಗಳಲು ಮತ್ತು ಅವಮಾನ ಮಾಡಲು ಕಾರಣವೇನು?

ಶಾಸ್ತ್ರಗ್ರಂಥಗಳು ಇಂದ್ರನ ಆಸ್ಥಾನದಲ್ಲಿ ರಂಬೆ ಊರ್ವಶಿಯರು ನರ್ತನ ಮಾಡುತ್ತಾ ಇಂದ್ರನ ಮನಃಸಂತೋಷವನ್ನುಂಟುಮಾಡುತ್ತಿರುವರು ಎಂದು ಪುರಾಣಗಳು ಹೇಳುತ್ತಿರುವುದು. ಇಂದ್ರನು ಸದಾಕಾಲ ಸುರಾಪಾನವನ್ನು ಮಾಡುತ್ತಾ ಮದೋನ್ಮತ್ತನಾಗಿರುವನು ಮತ್ತು ಇಂದ್ರನು ಸೋಮರಸದ ಮದದಿಂದ ನಾನಾ ತಪ್ಪುಗಳನ್ನು ಮಾಡಿ ಕಷ್ಟಕ್ಕೆ ಸಿಲುಕುವನೆಂದೂ ಆಗ ವಿಷ್ಣುವು ಅಸುರ ಸಂಹಾರ ಮಾಡಿ ಇಂದ್ರನಿಗೆ ಮತ್ತೆ ಇಂದ್ರ ಪದವಿಯನ್ನು ಅನುಗ್ರಹಿಸುವನೆಂದು ಪುರಾಣಗಳು ಹೇಳುತ್ತದೆ.

ಇಂದ್ರನು ಧಾರಾಕಾರವಾಗಿ ಮಳೆಯನ್ನು ಸುರಿಸಿದಾಗ ಶ್ರೀಕೃಷ್ಣನು ಗೋವರ್ಧನ ಬೆಟ್ಟವನ್ನು ಎತ್ತಿ ಅವನ ಗರ್ವಭಂಗಮಾಡಿದನೆಂದು ಶ್ರೀಮದ್ಭಾಗವತವು ಹೇಳುತ್ತದೆ. ಇಂದ್ರನಿಗೆ ಹೆಣ್ಣಿನ ವ್ಯಾಮೋಹವಿದೆಯೆಂದೂ, ಗೌತಮ ಋಷಿಯ ಪತ್ನಿಯಾದ ಅಹಲ್ಯೆಯನ್ನು ಕೂಡಿ ಋಷಿಯ ಶಾಪಕ್ಕೆ ಗುರಿಯಾದನೆಂದು ರಾಮಾಯಣವು ಹೇಳುತ್ತದೆ. ಮತ್ತು ಹಾಗೆಯೇ ಇಂದ್ರಪದವಿಯು ಶಾಶ್ವತವಲ್ಲ, ಆತನ ಪುಣ್ಯವು ಮುಗಿದಮೇಲೆ ಇಂದ್ರನು ಧರೆಯ ಮೇಲೆ ಮಾನವನಾಗಿ ಅಥವಾ ಇನ್ನೂ ಕೆಳಸ್ತರದ ಜೀವಿಯಾಗಿ ಹುಟ್ಟುವನೆಂದು ಪುರಾಣಗಳು ಹೇಳುತ್ತಿವೆ.

ಈ ಅಭಿಪ್ರಾಯಗಳು ಹೇಗೆ ಮತ್ತು ಏಕೆ ಬಂದಿತು ಎಂದು ಯೋಚಿಸಿದರೆ ನಮಗೆ ತಿಳಿಯುವುದು ಏನೆಂದರೆ ಋಗ್ವೇದ ರಹಸ್ಯವು ಅವರಿಗೆ ತಿಳಿದಿರಲಿಲ್ಲವೆಂದು ಭಾವಿಸಬೇಕಾಗುತ್ತದೆ. ಏಕೆಂದರೆ ಋಗ್ವೇದ ಮಂತ್ರಗಳು ಯಾರಿಗೂ ತಿಳಿಯದ ದೇವಭಾಷೆಯಲ್ಲಿ ಋಷಿಗಳಿಗೆ ಅನುಗ್ರಹಿತವಾಯಿತು. ಋಗ್ವೇದ ಕಾಲದ ಋಷಿಗಳಿಗೆ ಮಂತ್ರಗಳ ಆಂತರಿಕ ಅರ್ಥ ಗೊತ್ತಿಲ್ಲದಿದ್ದರೂ ಯಜ್ಞದ ಮೂಲಕ ಇಂದ್ರನನ್ನು ಮತ್ತು ಇತರ ದೇವತೆಗಳನ್ನು ಆರಾಧಿಸುತ್ತಿದ್ದರು.

(ಉದಾಹರಣೆಗೆ ಹೇಳುವುದಾದರೆ ಒಬ್ಬ ಸಂಸ್ಕೃತ ವಿದ್ವಾಂಸನಿಗೆ ಆಫ್ರಿಕಾ ದೇಶದ ಭಾಷೆಯ ಪುಸ್ತಕವನ್ನು ಟೇಪ್ ರಿರ್ಕಾಡರ್‌ನಲ್ಲಿ ರೆರ್ಕಾಡ್ ಮಾಡಿ ಕೊಟ್ಟಿದ್ದಾದ್ದರೆ ಅವನಿಗೆ ಹೇಗೆ ಅರ್ಥವಾಗುವುದಿಲ್ಲವೋ ಹಾಗೆ ಪ್ರಾಚೀನ ಋಷಿಗಳಿಗೆ ದೇವಭಾಷೆಯಲ್ಲಿ ಕೇಳಿಸಿದ ಋಗ್ವೇದವು ಅರ್ಥವಾಗಿರಲಿಲ್ಲ ಎಂದು ಭಾವಿಸಬೇಕಾಗುತ್ತದೆ. ಋಷಿಗಳು ತಮ್ಮ ಕಿವಿಯಾರೆ ಕೇಳಿಸಿಕೊಂಡಿದ್ದರಿಂದ ಋಗ್ವೇದವನ್ನು ಶೃತಿ ಎಂದು ಕರೆಯುತ್ತಾರೆ.)

ಋಗ್ವೇದವು ಋಷಿಗಳಿಗೆ ಅರ್ಥವಾಗದ್ದರಿಂದ ಋಗ್ವೇದದಲ್ಲಿ ಬರುವ ಎಲ್ಲಾ ದೇವತೆಗಳು ಒಬ್ಬನೇ ದೇವನ ವಿವಿಧ ರೂಪಗಳೆಂದು ಭಾವಿಸಿದ್ದರು. ಈಗಲೂ ಭಾವಿಸುತ್ತಿದ್ದಾರೆ. ಆದ್ದರಿಂದ ಪ್ರಾಚೀನ ಕಾಲದಿಂದಲೇ ಋಷಿಗಳಿಗೆ ತಪ್ಪು ತಿಳುವಳಿಕೆ ಉಂಟಾಗಿ ಉಪನಿಷದಾದಿ ಗ್ರಂಥಗಳನ್ನು ಬರೆದಿರುವರು. ಆದರೆ ವಶಿಷ್ಟರಿಂದ ಹಿಡಿದು ಅವರ ಮರಿಮಗನಾದ ವೇದವ್ಯಾಸರ ಮಹಾಭಾರತ ಮತ್ತು ಶ್ರೀಮದ್ಭಾಗವತದ ಕಾಲದಲ್ಲಿ ವಿಷ್ಣುವೇ ಸರ್ವಶ್ರೇಷ್ಟನೆಂದು ಭಾವಿಸಿ ವಿಷ್ಣುವನ್ನು ಆರಾಧಿಸತೊಡಗಿದರು. ಆ ಕಾಲಘಟ್ಟದಲ್ಲಿಯೇ ಯಜ್ಞದ ಮೂಲಕ ಮಾಡುವ ದೇವತಾರಾಧನೆಯನ್ನು ಕೇವಲ ಕರ್ಮಕಾಂಡವೆಂದು ಕಡೆಗಣಿಸಲಾಯಿತು.

ಈ ಕಾಲದಲ್ಲಿಯೇ ವೇದವ್ಯಾಸರು ಋಗ್ವೇದವನ್ನು ಭಾರತದ ಮೂಲೆ ಮೂಲೆಯಿಂದ ಸಂಗ್ರಹಿಸಿ ಒಂದು ವ್ಯವಸ್ಥಿತ ರೂಪದಲ್ಲಿ ತಂದು ಹತ್ತು ಮಂಡಲಗಳನ್ನಾಗಿ ವಿಭಜಿಸಿದರು. ನಾನಾಕಡೆಯಿಂದ ಸಂಗ್ರಹಿಸಿದ ವೇದಸೂಕ್ತಗಳನ್ನು ಅಧ್ಯಯನ ಮಾಡಿದ ಕಾಲಘಟ್ಟದಲ್ಲಿಯೇ ವೇದವ್ಯಾಸರಿಗೆ ವೇದದ ಮೇಲಿದ್ದ ಅಭಿಮಾನವು ದೂರವಾಗಿದ್ದಿರಬಹುದು. ಅವರು ತಮ್ಮ ಶಿಷ್ಯರಿಗೆ ಯಜ್ಞವು ಕೇವಲ ಕರ್ಮಕಾಂಡವೆಂದು ಬೋಧಿಸಿದರು.

ವೇದವ್ಯಾಸರ ಆ ಕಾಲಘಟ್ಟದಲ್ಲಿಯೇ ವೈದಿಕರು ಇಂದ್ರನನ್ನು ತಿರಸ್ಕರಿಸಿ ಇತರ ಉಪಾಸನಾ ಕ್ರಮಗಳನ್ನು ಜಾರಿಯಲ್ಲಿ ತಂದರು. ಯಜ್ಞವನ್ನು ಕೇವಲ ತಮ್ಮ ಆಸೆಯನ್ನು ಪೂರೈಸಿಕೊಳ್ಳಲು ಮತ್ತು ದೇವತೆಗಳನ್ನು ಒಲಿಸಿಕೊಳ್ಳಲು ಇರುವ ಕರ್ಮಕಾಂಡವೆಂದು ಭಾವಿಸಿದರು. ಯಜ್ಞದಿಂದ ಸ್ವರ್ಗ ಪ್ರಾಪ್ತವಾದರೂ ಅದು ಶಾಶ್ವತವಲ್ಲ, ತಮ್ಮ ಪುಣ್ಯವು ಮುಗಿದ ಮೇಲೆ ಮತ್ತೆ ಭೂಮಿಯ ಮೇಲೆ ಜನ್ಮ ತಾಳಬೇಕಾಗುತ್ತದೆ ಎಂದು ತಿಳಿದಿದ್ದರು.

ಉಪನಿಷತ್‌ವಾಕ್ಯ ಸ್ಮರಣೆ ಮತ್ತು ಬ್ರಹ್ಮೋಪಾಸನೆಯಿಂದ ಮಾತ್ರ ಮುಕ್ತಿ ಎಂಬ ಸಿದ್ಧಾಂತವನ್ನು ಸ್ಥಾಪಿಸಿದರು. ಇದರ ಜೊತೆಯಲ್ಲಿ ಭಕ್ತಿಮಾರ್ಗದಿಂದ ಭಗವಂತನನ್ನು ಒಲಿಸಿಕೊಂಡು ವಿಷ್ಣುವಿನ (ಅಥವಾ ಕೃಷ್ಣ, ರಾಮ ಇತ್ಯಾದಿ) ಲೋಕಕ್ಕೆ ಹೋಗಬಹುದು ಎಂಬ ಸಿದ್ಧಾಂತವನ್ನು ಸ್ಥಾಪಿಸಿದರು.

ಹೀಗಾಗಿ ವೈದಿಕರು ಯಜ್ಞದಿಂದ ಬೇರೆಯಾದ ಇತರ ಸಿದ್ಧಾಂತಗಳ ಕಡೆಗೆ ಗಮನಹರಿಸಿ ಇಂದ್ರನಿಂದ ದೂರವಾದರು. ಸೈತಾನನು ಮಾನವರ ಮೇಲೆ ತನ್ನ ಸಾಮ್ರಾಜ್ಯವನ್ನು ಸ್ಥಾಪಿಸಿ ಸಕಲರನ್ನೂ ಅಜ್ಞಾನದಲ್ಲಿ ಮುಳುಗಿಸಿರುವ ಕಾರಣದಿಂದ ಮತ್ತು ದೇವಭಾಷೆಯ ರಹಸ್ಯವು ತಿಳಿಯದ ಕಾರಣದಿಂದ ಅವರು ಋಗ್ವೇದವನ್ನು ಅರ್ಥಮಾಡಿಕೊಳ್ಳದಾದರು. ಏಕೆಂದರೆ ಭೂಮಿಯ ಮೇಲೆ ಯಜ್ಞದ ಮೂಲಕ ಇಂದ್ರನ ಆರಾಧನೆಯು ಮುಂದುವರೆದುಕೊಂಡು ಬಂದಿದ್ದರೆ ಭಾರತವು ವಿದೇಶಿಯರ ಆಕ್ರಮಣಕ್ಕೆ ತುತ್ತಾಗುತ್ತಿರಲಿಲ್ಲ.

ಹಿಂದಿನ ಕಾಲದಲ್ಲಿ ಭಾರತವು ಅಖಂಡವಾಗಿ ಪೃಥ್ವಿಯ ಬಹುಭಾಗದಲ್ಲಿ ನೆಲೆಸಿತ್ತು. ವೈದಿಕರು ಯಾವಾಗ ಇಂದ್ರನನ್ನು ತ್ಯಜಿಸಿದರೋ ಆಗಲೇ ಮಹಾಭಾರತ ಯುದ್ಧದ ಮೂಲಕ ಭಾರತದ ಧಾರ್ಮಿಕ ಸಾರ್ವಭೌಮತ್ವದ ಸರ್ವನಾಶವಾಯಿತು. ಒಂದು ಮಹಾನ್ ನಾಗರೀಕತೆಯು ವಿನಾಶದ ಅಂಚಿಗೆ ಬಂದಿತು. ಕ್ರಮೇಣ ಗುಲಾಮಗಿರಿಗೆ ತಳ್ಳಲ್ಪಟ್ಟರು. ಇವೆಲ್ಲವೂ ನಮ್ಮ ಪೂರ್ವಜರು ಇಂದ್ರನನ್ನು ತಿರಸ್ಕರಿಸಿದ ಫಲ.

ಇತರ ನಾಗರೀಕತೆಗಳಂತೆ ಭಾರತದ ನಾಗರೀಕತೆಯು ಸಂಪೂರ್ಣ ಅಳಿದಿಲ್ಲದ್ದರ ಕಾರಣ, ಇಲ್ಲಿ ಯಜ್ಞದ ಮಹಿಮೆ ಅರ್ಥವಾಗದಿದ್ದರೂ, ಕೆಲವರು ಯಜ್ಞಾರಾಧನೆಯನ್ನು ಮಾಡುತ್ತಿರುವರು, ಕೆಲವು ತಾಂತ್ರಿಕರು ಕುಂಡಲಿನಿ ಮಾತೆಯ ಯೋಗಸಾಧನೆಯನ್ನು ಮಾಡುತ್ತಿರುವರು. ಭಾರತದಲ್ಲಿ ಬಹಳಷ್ಟು ಆಧ್ಯಾತ್ಮಿಕ ಸಾಧಕರಿದ್ದಾರೆ ಮತ್ತು ಅವರು ಪ್ರಮುಖವಾಗಿ ಯಮ, ನಿಯಮಗಳನ್ನು ಪಾಲಿಸುತ್ತಾ ಇತರ ಜನರಿಗೂ ಸಹ ಅದರ ಮಹತ್ವವನ್ನು ತಿಳಿಸುತ್ತಾ

ಮಾರ್ಗದರ್ಶಕರಾಗಿರುವರು. ಎಲ್ಲಕ್ಕಿಂತಲೂ ಮುಖ್ಯವಾಗಿ ಋಗ್ವೇದವು ಈಗಲೂ ಕೂಡ ಭಾರತದಲ್ಲಿ ಸಂರಕ್ಷಿಸಲ್ಪಟ್ಟಿರುವುದರಿಂದ ಇಂದ್ರದೇವನು ನಮ್ಮ ನಾಗರೀಕತೆಯನ್ನು ಸಂಪೂರ್ಣವಾಗಿ ನಾಶಮಾಡಲಿಲ್ಲ.

ಯಾಕೆ ಬೇರೆಯ ಜನಾಂಗವು ನಿಕೃಷ್ಟ ಜನಾಂಗವೆಂದು ಋಗ್ವೇದವು ಹೇಳುತ್ತಿದೆ? ಏಕೆಂದರೆ ಯಜ್ಞದ ಮೂಲಕ ಭಗವಂತನನ್ನು ಮತ್ತು ದೇವತೆಗಳನ್ನು ಆರಾಧಿಸುವ ಕ್ರಮವೇ ಶ್ರೇಷ್ಠವಾಗಿದೆ.

ಸಮೀಂ ಪಣೇರಜತಿ ಭೋಜನಂ ಮುಷೇ ವಿ ದಾಶುಷೇ ಭಜತಿ ಸೂನರಂ ವಸು ।
ದುರ್ಗೇ ಚನ ಧ್ರಿಯತೇ ವಿಶ್ವ ಆ ಪುರು ಜನೋ ಯೋ ಅಸ್ಯ ತವಿಷೀಮಚುಕ್ರಧತ್ ।। (ಋ ೫-೩೪-೭ ಸಾ ಭಾ)
"....ಯಾವ ಪುರುಷನು ಇಂದ್ರನ ಬಲವನ್ನು ಅವಹೇಳನಮಾಡಿ ಕೆರಳಿಸುವನೋ ಅಂತಹ ಸಕಲಜನವೂ ಸಹ ಅತ್ಯಧಿಕವಾದ ದುಃಖಕ್ಕೆ ಭಾಗಿಯಾಗಬೇಕಾಗುತ್ತದೆ."

ಮತ್ತೆ ಭಾರತವು ತನ್ನ ಹಿಂದಿನ ಉತ್ತುಂಗವನ್ನು ಏರಬೇಕಾದರೆ ಮತ್ತು ಅಸುರಶಕ್ತಿಗಳಿಂದ ಬಿಡುಗಡೆ ಪಡೆಯಲು ಇಂದ್ರನ ಮೊರೆ ಹೋಗಲೇಬೇಕಾಗಿದೆ. ಏನೇ ಆದರೂ ಸಕಲವೂ ಇಂದ್ರನ ಇಚ್ಛೆಯೇ ಆಗಿದೆ. ನಾನಾ ಪ್ರವಾದಿಗಳು ಭೂಮಿಯ ಮೇಲೆ ಬಂದು ದಾರಿ ತೋರಿಸಿದರೂ ಮಾನವನ ಮೂರ್ಖತೆಯ ಕಾರಣದಿಂದ ಅವರ ಮಾತುಗಳನ್ನು ಸ್ವೀಕರಿಸದೇ ಅಜ್ಞಾನದಿಂದ ಕೂಡಿರುವನು. ರಾಮಾಯಣ ಮತ್ತು ಮಹಾಭಾರತ ಕಾಲದ ಹಿಂದೆ ಮಾಡುತ್ತಿದ್ದ ಯಜ್ಞವನ್ನು ತಿರಸ್ಕರಿಸಿದ ಫಲವೇ ನಮ್ಮ ಅಧೋಗತಿಗೆ ಕಾರಣವಾಗಿದೆ.

ಋಗ್ವೇದದ ಅರ್ಥವನ್ನು ನಮ್ಮ ಋಷಿಗಳು ಇಂದ್ರನ ಆರಾಧನೆಯ ಮೂಲಕ ಕಂಡುಕೊಳ್ಳಬೇಕಾಗಿದ್ದಿತು. ಆದರೆ ಅವರು ತಮ್ಮ ತಾರ್ಕಿಕಬುದ್ಧಿಯನ್ನು ಉಪಯೋಗಿಸಿಕೊಂಡು, ನಾನಾ ಪ್ರಶ್ನೆಗಳನ್ನು ತಮ್ಮ ತಮ್ಮಲ್ಲಿ ಚರ್ಚಿಸಿ ಉಪನಿಷದಾದಿ ಗ್ರಂಥಗಳನ್ನು ಬರೆದಿರುವರು. ಈಗಾಗಿ ಪೂರ್ವಕಾಲದಿಂದಲೇ ವೈದಿಕ ಜನಾಂಗವು ದಾರಿತಪ್ಪಿದ್ದಿತು.

ವೈದಿಕರಿಗೆ ಇಂದ್ರನ ಬಗ್ಗೆ ತಪ್ಪು ಅಭಿಪ್ರಾಯ ಬರಲು ಈ ಕೆಳಗಿನ ಮಂತ್ರವೂ ಸಹ ಕಾರಣವಾಗಿದೆ.

ಯಃ ಸತ್ರಾಹಾ ವಿಚರ್ಷಣಿರಿಂದ್ರಂ ತಂ ಹೂಮಹೇ ವಯಂ ।
ಸಹಸ್ರಮುಷ್ಕ ತುವಿನೃಮ್ಣ ಸತ್ಪತೇ ಭವಾ ಸಮತ್ಸು ನೋ ವೃಧೇ ।। (ಋ ೬-೪೬-೩ ಸಾ ಭಾ)
"..... ಸಾವಿರಾರು ಭೋಗೇಂದ್ರಿಯವುಳ್ಳವನೂ, ಅನೇಕ ವಿಧವಾದ ಧನಗಳುಳ್ಳವನೂ ಸಜ್ಜನರ ಪಾಲಕನೂ ಆದ ಎಲೈ ಇಂದ್ರನೇ, ಯುದ್ಧಗಳಲ್ಲಿ ನಮಗೆ ವೃದ್ಧಿಕಾರಕನಾಗಿರು."

ವೇದದಲ್ಲಿ ಸಾವಿರಾರು ಎಂದರೆ ಅನಂತವೆಂದು ಅರ್ಥ. ಸಹಸ್ರಾರು ಭೋಗೇಂದ್ರಿಯವುಳ್ಳ ಭೋಗಪುರುಷನು ಭಗವಂತನಾಗಲು ಹೇಗೆ ಸಾಧ್ಯವೆಂದು ವೈದಿಕರು ಇಂದ್ರನನ್ನು ತಿರಸ್ಕರಿಸಿರುವರು. ಈ ಕಾರಣದಿಂದಲೇ ನಮ್ಮ ಶಾಸ್ತ್ರಗಳು ಇಂದ್ರನನ್ನು ಒಬ್ಬ ಕುಡುಕ, ಭೋಗದಲ್ಲಿ ನಿರತನಾಗಿರುವವನು ಮತ್ತು ಅವನು ಅನೇಕ ತಪ್ಪುಗಳನ್ನು ಮಾಡಿ ತನ್ನ ಸಿಂಹಾಸನವನ್ನು ಕಳೆದುಕೊಂಡಾಗ ವಿಷ್ಣುವು ಇಂದ್ರನಿಗೆ ಸಹಾಯ ಮಾಡಿ ಮತ್ತೆ ಸಿಂಹಾಸನದ ಮೇಲೆ ಕುಳಿತುಕೊಳ್ಳಲು ಸಹಾಯ ಮಾಡುವನು ಎಂದು ನಮ್ಮ ಪುರಾಣಗಳು ತಿಳಿಸುತ್ತವೆ.

ಇಲ್ಲಿ ಒಂದು ಪ್ರಮುಖ ಅಂಶವನ್ನು ಓದುಗರು ಗಮನಿಸಬೇಕು. ಓಂಕಾರ ಸಾಧನೆ ಮತ್ತು ಕುಂಡಲಿನಿ ಯೋಗ ಸಾಧನೆಯು ಬಹಳಷ್ಟು ಸಾಧಕರಲ್ಲಿ ವೈರಾಗ್ಯವನ್ನು ವೃದ್ಧಿಮಾಡುತ್ತದೆ. ಆದ್ದರಿಂದಲೇ ಯೋಗೀಶ್ವರನಾದ ಶಿವನು ಸ್ಮಶಾನವಾಸಿಯಾಗಿದ್ದಾನೆ, ಹಿಮಾಲಯದ ತುತ್ತತುದಿಯಲ್ಲಿರುವ ಕೈಲಾಸವಾಸಿಯಾಗಿದ್ದಾನೆ. ಸಿದ್ಧಯೋಗಿಗಳು ವೈರಾಗ್ಯವನ್ನು ಹೊಂದಿ ಸಕಲ ಭೋಗಭಾಗ್ಯಗಳಿಂದ ವಿಮುಖರಾಗಿದ್ದಾರೆ.

ಆದರೆ ವಿಶ್ವಸಾಮ್ರಾಟ್ ಆದ ಇಂದ್ರನನ್ನು ಆರಾಧಿಸಿದರೆ ಅವನು ಅಮರತ್ವವನ್ನೂ (ಸಿದ್ಧಪುರುಷರು ಅಮರತ್ವವನ್ನು ಪಡೆದಂತೆ) ಅನುಗ್ರಹಿಸುವುದಲ್ಲದೇ ಉಪಾಸಕನ ಇಚ್ಛೆಯಂತೆ ಸಕಲ ಭೋಗಭಾಗ್ಯವನ್ನೂ ಅನುಗ್ರಹಿಸುವನು. ಹೇಗೆ ಭೂಲೋಕದ ರಾಜನು ಪ್ರಸನ್ನನಾದರೆ ಧನಧಾನ್ಯಾದಿ ಸಂಪತ್ತನ್ನು ಅನುಗ್ರಹಿಸುವನೋ ಹಾಗೆ ರಾಜನಾದ ಇಂದ್ರನು ನಮಗೆ ಬೇಕಾದ ಸಂಪತ್ತನ್ನು ಅನುಗ್ರಹಿಸುವನು. ಆದ್ದರಿಂದಲೇ ಇಂದ್ರನ ಅಮರಾವತಿಯು ಭೋಗಭಾಗ್ಯಗಳಿಂದ ಕೂಡಿದೆಯೆಂದು ಹೇಳುವುದು. ಭೋಗಭಾಗ್ಯದ ಅಧಿದೇವತೆಯಾದ ಲಕ್ಷ್ಮಿಯು ನಾರಾಯಣನ (ಇಂದ್ರ) ಪಾದಸೇವೆಯನ್ನು ಮಾಡುತ್ತಿರುವಳು ಎಂದು ಪುರಾಣಗಳು ಹೇಳುತ್ತವೆ.

ಇಂದ್ರನು ಅನಂತವಾದ ಕಾರಣಶರೀರವನ್ನು ಸೃಷ್ಟಿಸಿ ಅದರಲ್ಲಿ ತನ್ನ ಅಂಶವಾದ ಅನಾದಿಯಾದ ಆತ್ಮನನ್ನು ಸ್ಥಾಪಿಸಿದ್ದಾನೆ. ನಮ್ಮ ಆತ್ಮವು ಇಂದ್ರನ ಅಂಶವಾದರೂ ಸಕಲ ಆತ್ಮರೂ ಅನಾದಿ ಸ್ವರೂಪರಾಗಿದ್ದಾರೆ. ಎಲ್ಲರೂ

ಇಂದ್ರನ ಜ್ಯೋತಿಸ್ವರೂಪದಿಂದಲೇ ಹೊರಬಂದವರು. ಅನಾದಿಯಾದ ಆತ್ಮವು ಆಸೆಗಳಂದ ಕೂಡಿದ್ದ ಕಾರಣದಿಂದ ಸಕಲ ಜೀವರಾಶಿಗಳಿಗೆ ಕಾರಣಶರೀರವನ್ನು ಇಂದ್ರನು ಅನುಗ್ರಹಿಸಿ ಭೂಮಿಗೆ ಕಳುಹಿಸಿದ್ದಾನೆ ಮತ್ತು ಆತ್ಮನನ್ನು ರಕ್ಷಿಸಲು ತಾನೂ ಸಹ ಜೊತೆಯಲ್ಲಿ ಬಂದಿರುವನು.

ಜೀವರಾಶಿಗಳ ಕಾರಣಶರೀರವು ಇಂದ್ರನ ಕೊಡುಗೆಯಾಗಿದೆ ಮತ್ತು ಸೂಕ್ಷ್ಮಶರೀರವು ವಿರಾಟ್‌ಪುರುಷನ ತದ್ರೂರೂಪವಾಗಿದೆ. ಸ್ಥೂಲಶರೀರವು ಮತ್ತು ಅದು ಜೀವಂತವಾಗಿರಲು ಪ್ರಾಣಶರೀರವು ಸೂರ್ಯಸವಿತೃವಿನ ಕೊಡುಗೆಯಾಗಿದೆ. ಇಂದ್ರಿಯಗಳ ಮೂಲಕ ಪ್ರಾಣದಲ್ಲಿ ದಾಖಲಾದ ಸಂಗತಿಗಳೇ ಮನಸ್ಸಾಗಿದೆ. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಆತ್ಮನಲ್ಲಿರುವ ದೈವೀಮನಸ್ಸು ಪ್ರಾಣದಲ್ಲಿ ಮುದ್ರಿತವಾದ ಮನಸ್ಸಲ್ಲ, ವಿಶ್ವಮನಸ್ಸಿನ ದೈವೀಮನಸ್ಸಿನ ಭಾಗವಾಗಿದೆ. ಆದರೆ ಸಕಲ ಜೀವರಾಶಿಗಳ ಮನಸ್ಸುಗಳು ಇಂದ್ರನ ದೈವೀ ಮನಸ್ಸಿನ ಭಾಗವೇ ಆಗಿದೆ.

ಹೇಗೆ ನೀರು ಯಾವ ಪಾತ್ರೆಯಲ್ಲಿ ಹಾಕಿದರೂ ಅದರ ರೂಪವನ್ನು ಪಡೆಯುತ್ತದೋ ಹಾಗೆಯೆ ಯಾವ ಪ್ರಾಣಿಗಳ ಶರೀರವನ್ನು ಪ್ರವೇಶಿದರೂ ಅದರ ಆಕಾರವನ್ನೇ ಕಾರಣಶರೀರ ಮತ್ತು ಸೂಕ್ಷ್ಮಶರೀರವು ಪಡೆಯುತ್ತದೆ. ಇದಕ್ಕೆ ಋಗ್ವೇದ ಪ್ರಮಾಣ

ರೂಪಂ ರೂಪಂ ಮಘವಾ ಬೋಭವೀತಿ ಮಾಯಾಃ ಕೃಣ್ವಾನಸ್ತನ್ವಂ೩ಪರಿ ಸ್ವಾಂ ।
ತ್ರಿರ್ಯದ್ದಿವಃ ಪರಿ ಮುಹೋರ್ತಮಾಗಾತ್ಸ್ವೈರ್ಮಂತ್ರೈರನೃತುಪಾ ಋತವಾ ।। (ಋ ೩-೫೩-೮ ಸಾ ಭಾ)
"ಧನವಂತನಾದ ಇಂದ್ರನು ಅನೇಕ ವಿಧವಾದ ರೂಪಗಳನ್ನು ಧರಿಸಿಕೊಂಡು ಕಾಣಿಸಿಕೊಳ್ಳುತ್ತಾನೆ. ನಾನಾ ವಿಧವಾದ ಶಕ್ತಿಯುತಗಳನ್ನಾಗಿ ಮಾಡುತ್ತಾ ತನ್ನ ಶರೀರವನ್ನು ಅದರ ಮೂಲರೂಪಕ್ಕಿಂತಲೂ ಬೇರೆಯಾದ ಅನೇಕ ರೂಪವುಳ್ಳದ್ದನ್ನಾಗಿ ಮಾಡುತ್ತಾನೆ. ತನ್ನನ್ನು ಪ್ರಶಂಸಿಸಿದಾಗ ಋತು(ಸವನ)ಕಾಲವಲ್ಲದಿದ್ದರೂ ಸಹ ಸೋಮಪಾನ ಮಾಡುತಾನೆ. ಸತ್ಯವಂತನಾದ ಇಂದ್ರನು ಸ್ವರ್ಗಲೋಕದಿಂದ (ಬೆಳಕಿನ ಲೋಕ) ಒಂದೇ ಮುಹೂರ್ತದಲ್ಲಿ ನಾನಾ ದೇಶಗಳಲ್ಲಿ ನಡೆಯತಕ್ಕ ಯಜ್ಞಗಳಲ್ಲಿಯೂ ಸಹ ಸವನತ್ರಯಕಾಲದಲ್ಲೂ ಬರುತ್ತಾನೆ."

ರೂಪಂ ರೂಪಂ ಪ್ರತಿರೂಪೋ ಬಭೂವ ದಸ್ಯ ರೂಪಂ ಪ್ರತಿಚಕ್ಷಣಾಯ ।
ಇಂದೋ ಮಾಯಾಭಿಃ ಪುರುರೂಪ ಈಯತೇ ಯುಕ್ತಾಹ್ಯಸ್ಯ ಹರಯಃ ಶತಾ ದಶ ।। (ಋ ೬-೪೭-೧೮ ಸಾಭಾ)
"ಇಂದ್ರನು ಅನೇಕ ರೂಪಾಂತರಗಳನ್ನು ತನ್ನ ಇಷ್ಟಾನುಸಾರ ಹೊಂದುತ್ತಾನೆ. ಈ ಇಂದ್ರನಿಗೆ ಆಯಾ ವೈಯುಕ್ತಿಕವಾದ ಅನೇಕ ರೂಪಗಳಲ್ಲಿ (ಮಾನವ, ಪಶು, ಪಕ್ಷಿ, ಜಲಚರ) ಲೋಕಕ್ಕೆಲ್ಲಾ ಗೋಚರಿಸಲು ಸಾಧನವಾಗಿದೆ. ಈ ಇಂದ್ರನ ಅಶ್ವಗಳು ಸಾವಿರಸಂಖ್ಯೆಯುಳ್ಳವರಾಗಿ ರಥಕ್ಕೆ (ಶರೀರಗಳು) ಯೋಜಿತವಾಗಿವೆಯ್ಯಲ್ಲವೆ?."

ಎಲ್ಲರ ಸ್ಥೂಲಶರೀರವು ಇಂದ್ರನ ಪ್ರತಿರೂಪವಾಗಿದೆ ಏಕೆಂದರೆ ಸಕಲ ಜೀವರಾಶಿಗಳ ಮತ್ತು ವಿಶ್ವದ ಸ್ವಾಮಿಯು ಇಂದ್ರನೇ ಆಗಿದ್ದಾನೆ. ಸಕಲ ಜೀವರಾಶಿಗಳ ಕಾರಣಶರೀರವು ಇಂದ್ರನ ಕೊಡುಗೆಯಾಗಿದೆ. ಅಷ್ಟೇ ಅಲ್ಲ, ಇಂದ್ರನು ಆ ಪ್ರತಿರೂಪಗಳನ್ನು ಪ್ರವೇಶಿಸಿ ತನ್ನ ನಿವಾಸಗಳನ್ನಾಗಿ ಮಾಡಿಕೊಂಡಿದ್ದಾನೆ. ಆತ್ಮನು ಸ್ಥೂಲ ಶರೀರದ ಮೂಲಕ ತನ್ನ ಆಸೆಗಳನ್ನು ಪೂರೈಸಿಕೊಳ್ಳುತಿದ್ದಾನೆ. ಮಾನವನ ಶ್ರೇಷ್ಟತೆ ಏನೆಂದರೆ ಅವನು ಇಂದ್ರನ ಪ್ರತಿರೂಪನಾಗಿದ್ದಾನೆ. ಆದ್ದರಿಂದ ನಮ್ಮನ್ನು ನಾವು ಇಂದ್ರಪುತ್ರರೆಂದು ಕರೆದುಕೊಳ್ಳಬಹುದು.

ನಾನು ಕಾರಣಶರೀರವನ್ನು ನೋಡಿದಂತೆ, ಇದು ಕೇವಲ ಅರ್ದಶರೀರವನ್ನು ಹೊಂದಿದೆ. ಈ ಶರೀರವು ನಾಭಿಯಿಂದ ಮೇಲಕ್ಕೆ ಇರುವುದು. ಇದಕ್ಕೆ ಕಾರಣವೇನೆಂದರೆ ಈ ಶರೀರವು ಕೇವಲ ದೈವೀಶರೀರವಾಗಿದೆ. ಇದರಲ್ಲಿ ವಿರಾಟ್ ಪುರುಷನಲ್ಲಿರುವಂತೆ ಅಸುರೀ ಅಂಶವಿಲ್ಲ. ನಮ್ಮ ಆತ್ಮವು ಹೃದಯದಲ್ಲಿರುವ ಅಷ್ಟದಳ ಪದ್ಮದೊಳಗಿರುವುದು. ಅದಕ್ಕಿಂತ ಒಂದು ನೂಲು ಮೇಲೆ ಒಂದು ಸೂಕ್ಷ್ಮಾತಿಸೂಕ್ಷ್ಮ ಬಿಂದುವಿರುವುದು. ಇದನ್ನೇ ಉಪನಿಷತ್‌ಗಳು ಭಗವಂತನ ಸ್ವರೂಪವೆಂದು ಹೇಳುವುದು.

ಇದು ನಿಜವಾಗಿಯೂ ಹೃದಯಗುಹೆಯ ಮುಚ್ಚಿದ ಬಾಗಿಲಾಗಿದೆ. ಈ ಬಾಗಿಲು ತೆರೆದಾಗ ಈ ಗುಹೆಯ ಒಳಗಡೆ ಇಂದ್ರನು ಜ್ಯೋತಿಸ್ವರೂಪದಲ್ಲಿಯೂ ಅಥವಾ ಸಿಂಹಾಸನದಲ್ಲಿ ಕುಳಿತಿರುವ ಮಾನವಸ್ವರೂಪದಲ್ಲಿಯೂ ಯೋಗಿಯ ಇಚ್ಛೆಯಂತೆ ಕಾಣಿಸಿಕೊಳ್ಳುವನು. ಈ ಗುಟ್ಟನ್ನು ತಿಳಿಯದ ಯೋಗಿಗಳಲ್ಲಿ ಕೆಲವರು ಜ್ಯೋತಿಸ್ವರೂಪದಲ್ಲೂ ಕೆಲವರು ಸಿಂಹಾಸನದಲ್ಲಿ ಕುಳಿತಿರುವ ಭಗವಂತನಂತೆಯೂ ದರ್ಶನವನ್ನು ಪಡೆಯುವರು.

ನಾವು ವೃತ್ರಾಸುರನ ಮತ್ತು ಇತರ ಅಸುರರ ವಶಕ್ಕೆ ಒಳಗಾಗಿರುವೆವು. ಇಂದ್ರಪುತ್ರರಾದ ನಾವು ಪೃಥ್ವಿಯ ಸುಖ-ದುಃಖಗಳನ್ನು ಅನುಭವಿಸುತ್ತಿರುವೆವು ಆದರೆ ಇಂದ್ರನು ನಾವು ಮಾಡುವುದೆಲ್ಲವನ್ನು ನೋಡುತ್ತಾ ಯಾವುದರಲ್ಲಿಯೂ ಆಸಕ್ತಿಯನ್ನು ತೋರದೆ ಸಾಕ್ಷಿಭೂತನಾಗಿರುವನು. ಆದ್ದರಿಂದ ಸಕಲ ಭೋಗಗಳನ್ನು

ಇಂದ್ರಪುತ್ರರಾದ ನಾವು ತಾದಾತ್ಮ್ಯಭಾವದಿಂದ ಅನುಭವಿಸುತ್ತೇವೆಯೇ ಹೊರತು ಇಂದ್ರನಲ್ಲ. ಸ್ಥೂಲಶರೀರದೊಳಗಡೆ ಇರುವ ಪ್ರಾಣಶರೀರ ಮತ್ತು ಮನಸ್ಸನ್ನು ಹೊದಿರುವ ಮರಣ ಧರ್ಮವುಳ್ಳ ಜೀವನು ಯಮನಿಂದ ಶಿಕ್ಷೆಯನ್ನು ಅನುಭವಿಸುತ್ತಿರುವನು. ಮರಣಾನಂತರ ಜೀವನು ದ್ಯುಲೋಕಕ್ಕೆ ಹೋಗುತ್ತಾನೆ ಆದರೆ ಆತ್ಮವಿರುವ ದೈವೀಶರೀರವಾದ ಪುರುಷ ಮತ್ತು ಕಾರಣಶರೀರಗಳು ವಿರಾಟ್ ಪುರುಷನಲ್ಲಿ ಹೋಗಿ ಸೇರಿಕೊಳ್ಳುತ್ತವೆ.

ಇಂದ್ರಪುತ್ರರಾದ ನಾವು ನಮ್ಮ ಜೀವನದಲ್ಲಿ ನಾನಾ ತಪ್ಪುಗಳನ್ನು ಮಾಡಿ ತಾದಾತ್ಮ್ಯಭಾವದಿಂದ ದುಃಖವನ್ನು ಅನುಭವಿಸುತ್ತಿರುವೆವು. ಚಲನಚಿತ್ರವನ್ನು ನೋಡುತ್ತಿರುವ ಹಾಗೆ; ನೋಡುತ್ತಿರುವವನು ಆತ್ಮ, ಪರದೆಯ ಮೇಲೆ ಮೂಡುವ ಚಿತ್ರಗಳು ನಮ್ಮ ಜೀವನ. ಆದರೆ ಜೀವನು ಕ್ಷಮಿಸಲ್ಪಡಲಾಗದ ಕರ್ಮಗಳನ್ನು ಮಾಡಿ ಮರಣಾನಂತರ ಪ್ರಾಣಿಜನ್ಮಗಳನ್ನು ಹೊಂದುತ್ತಿರುವರು. ಆದ್ದರಿಂದ ಶಿಕ್ಷೆಯನ್ನು ಪರಮಾತ್ಮನಾದ ಇಂದ್ರನು ಅಥವಾ ಇಂದ್ರಪುತರ್ರು ಅನುಭವಿಸುತ್ತಿಲ್ಲ. ಜೀವರಾದ ಮಾನವರು ಅನುಭವಿಸುತ್ತಿರುವರು. ಋಗ್ವೇದ ೬-೪೬-೩ ಮಂತ್ರವನ್ನು ಮತ್ತೊಮ್ಮೆ ನೋಡೋಣ.

ಸಹಸ್ರಮುಷ್ಕ ತುವಿನೃಮ್ಣ ಸತ್ಪತೇ ಭವಾ ಸಮತ್ಸು ನೋ ವೃಧೇ ௦೧ (ಋ ೬-೪೬-೩ ಸಾ ಭಾ)
"..... ಸಾವಿರಾರು ಭೋಗೇಂದ್ರಿಯವುಳ್ಳವನೂ, ಅನೇಕ ವಿಧವಾದ ಧನಗಳುಳ್ಳವನೂ ಸಜ್ಜನರ ಪಾಲಕನೂ ಆದ ಎಲೈ ಇಂದ್ರನೇ, ಯುದ್ಧಗಳಲ್ಲಿ ನಮಗೆ ವೃದ್ಧಿಕಾರಕನಾಗಿರು."

ಸಕಲ ಜೀವರಾಶಿಗಳೂ ಇಂದ್ರನ ಸ್ವರೂಪವೇ ಆಗಿದ್ದಾರೆ. ಸಕಲ ಜೀವರಾಶಿಗಳ ಜ್ಯೋತಿಸ್ವರೂಪವಾದ ಆತ್ಮವು ಪರಮಾತ್ಮನ ಅಂಶವೇ ಆಗಿದೆ. ಹಾಗೆಯೇ ಸಕಲ ಜೀವರಾಶಿಗಳ ಮನಸ್ಸೂ ಪರಮಾತ್ಮನ ಮನಸ್ಸಿನ ಅಂಶವೇ ಆಗಿದೆ. ಪರೋಕ್ಷವಾಗಿ ಇಂದ್ರನೇ ಸಕಲ ಭೋಗಭಾಗ್ಯಗಳನ್ನು ಅನುಭವಿಸುತ್ತಿದ್ದಾನೆ. ಋಗ್ವೇದ ೧೦ನೇ ಮಂಡಲ ೮೬ನೆಯ ಸೂಕ್ತದಲ್ಲಿ ಇಂದ್ರ ಮತ್ತು ಇಂದ್ರಾಣಿಯರ ಬಗ್ಗೆ ಹೇಳಿದೆ.

**ಯಾರು ಈ ಇಂದ್ರ ಇಂದ್ರಾಣಿಯರು?**

ಮಾನವರಾದ ನಾವೇ ಇಂದ್ರ ಇಂದ್ರಾಣಿಯರಾಗಿದ್ದೇವೆ. ಗಂಡಸರು ಇಂದ್ರ ಸ್ವರೂಪರಾದರೆ ಹೆಂಗಸರು ಇಂದ್ರಾಣಿಯರಾಗಿದ್ದಾರೆ. ಇದರ ಅರ್ಥ ಪತಿಪತ್ನಿಯರು ಇಂದ್ರ ಇಂದ್ರಾಣಿಯರಾಗಿದ್ದಾರೆ. ಕಾರಣವೇನೆಂದರೆ ನಮ್ಮ ಆಕಾರ ಮತ್ತು ರೂಪವು ಇಂದ್ರನಂತೆಯೇ ಇರುವುದರಿಂದ ಹಾಗೆ ಕರೆಯಲ್ಪಟ್ಟಿದೆ.

ಈಗ ನಾವು ಯೋಚಿಸಬೇಕಾಗಿರುವುದು ಯಾರು ಬ್ರಾಹ್ಮಣರು? ಯಾರು ಶೂದ್ರರು? ಯಾರು ವೈಶ್ಯರು? ನಮ್ಮದು ಯಾವ ಜಾತಿ, ಯಾವ ಧರ್ಮ, ಯಾರು ಹೆಚ್ಚು ಮತ್ತು ಯಾರು ಕೀಳಾದವರು? ಎಲ್ಲರೂ ಇಂದ್ರ ಸ್ವರೂಪರೇ. ನಾವೆಲ್ಲರೂ ವೃತ್ರಾಸುರನಿಂದ ಆವರಿಲ್ಪಟ್ಟಿದೆದೇವೆ. ವರ್ಣಧರ್ಮವು ಸ್ಥೂಲಶರೀರಕ್ಕೆ ಸಂಬಂಧಿಸಿದ್ದಲ್ಲ, ಅದು ನಮ್ಮೊಳಗಿರುವ ಪುರುಷನಿಗೆ ಸಂಬಂಧಿಸಿದ್ದು

ಇಂದ್ರನ ಅಂಶವೇ ಆದ ನಾವು ಅಂದರೆ ಮಾನವರು ಭೋಗಗಳನ್ನು ಅನುಭವಿಸುತ್ತಿರುವೆವು. ನಮ್ಮ ಇಚ್ಛೆಗಳನ್ನು ಪೂರೈಸಿಕೊಳ್ಳುತ್ತಿರುವೆವು. ನಾವು ಸತ್ಯವನ್ನು ಅರಿಯದ ಕಾರಣದಿಂದಾಗಿ ಅನೇಕ ಕಷ್ಟಗಳನ್ನು ಅನುಭವಿಸುತ್ತಿರುವೆವು. ಯಾರು ಇಂದ್ರದೇವನಿಗೆ ಶರಣಾಗತರಾಗುತ್ತಾರೋ ಅವರಾಗಲಿ ಅವನ ಪುತ್ರಪೌತ್ರಾದಿಗಳಾಗಲಿ ಬಂಧುಮಿತ್ರರಾಗಲಿ ಸಂಕಷ್ಟಗಳಿಗೆ ಒಳಗಾಗದೆ ಇಂದ್ರನ ರಕ್ಷಣೆಯಲ್ಲಿರುತ್ತಾರೆ. ಈ ಋಗ್ವೇದ ಮಂತ್ರವನ್ನು ನೋಡಿ.

ಕ ಈಷತೇ ತುಜ್ಯತೇ ಕೋ ಬಿಭಾಯ ಕೋ ಮಂಸತೇ ಸಂತಮಿಂದ್ರಂ ಕೋ ಅಂತಿ ೧
ಕಸ್ತೋಕಾಯ ಕ ಇಭಾಯೋತ ರಾಯೇಽಧಿ ಬ್ರವತ್ತನ್ವೇಽಕೋ ಜನಾಯ (ತನ್ವೇ ಕಃ) ೧ (ಋ ೧-೮೪-೧೭ ಸಾಭಾ)
"ರಕ್ಷಕನಾದ ಇಂದ್ರನು ಸಮೀಪದಲ್ಲಿರುವಾಗ ಯಾವ ಯಜಮಾನನು ತಾನೇ ಶತ್ರುವಿನಿಂದ ಭೀತನಾಗಿ ದೂರ ಸರಿಯುತ್ತಾನೆ? ಯಾವನು ಶತ್ರುವಿನಿಂದ ಹಿಂಸಿತನಾಗುತ್ತಾನೆ? ನಮ್ಮ ಸಮೀಪದಲ್ಲಿ ರಕ್ಷಣೆಗಾಗಿ ನಿಂತಿರುವ ಇಂದ್ರನನ್ನು ನಾವಲ್ಲದೇ ಇತರ ಯಾವನು ತಿಳಿಯಬಲ್ಲನು? ಯಾವ ಯಜಮಾನನು ತಾನೇ, ಪುತ್ರ ಸಂತಾನಕ್ಕಾಗಲಿ, ಆನೆಗಾಗಲಿ, ಶತ್ರುಗಳಿಂದ ಅಪಹೃತವಾದ ಧನಕ್ಕಾಗಲೀ, ತನ್ನ ಆತ್ಮ ರಕ್ಷಣೆಗಾಗಲೀ ಇಂದ್ರನನ್ನು ಒತ್ತಾಯಪಡಿಸಿ ಪೀಡಿಸಬೇಕಾಗಿದೆ. ಈ ಒತ್ತಾಯವಿಲ್ಲದೇ ಇಂದ್ರನು ತಾನೇ ಎಲ್ಲವನ್ನೂ ಅನುಗ್ರಹಿಸುತ್ತಾನೆ."

ಈಗ ಇಂದ್ರ ಮತ್ತು ಇಂದ್ರಪುತ್ರರ ಬಗ್ಗೆ ಕೆಲವು ಋಗ್ವೇದ ಮಂತ್ರಗಳನ್ನು ನೋಡೋಣ. ಇಂದ್ರಪುತ್ರರು ಜನನಮರಣದ ಚಕ್ರಗಳಲ್ಲಿ ಸಿಲುಕಿ ಪದೇ ಪದೇ ಜನ್ಮವನ್ನು ತಾಳುತ್ತಾ ಹೇಗೆ ಸುಖ-ದುಃಖವೆಂಬ ಭೋಗಗಳನ್ನು ಅನುಭವಿಸುತ್ತಿದ್ದಾರೆಂದು ತಿಳಿಯೋಣ.

ದ್ವಾ ಸುಪರ್ಣಾ ಸಯುಜಾ ಸಖಾಯಾ ಸಮಾನಂ ವೃಕ್ಷಂ ಪರಿಷಸ್ವಜಾತೇ ೧

ತಯೋರನ್ಯಃ ಪಿಪ್ಪಲಂ ಸ್ವಾದ್ವತ್ತ್ಯನಶ್ನನ್ನ್ಯೋ ಅಭಿ ಚಾಕಶೀತಿ ।। (ಋಗ್ವೇದ ೧-೧೬೪-೨೦ ಸಾ ಭಾ)
"ಒಟ್ಟಿಗೆ ಇರುವುವೂ, ಒಂದೇ ಆಕಾರವಾಗಿ ತೋರುವುವೂ, ಶ್ರೇಷ್ಠವಾದ ಎರಡು ಹಕ್ಕಿಗಳು ಒಂದೇ ವೃಕ್ಷವನ್ನು ಆಶ್ರಯಿಸಿಕೊಂಡಿವೆ. ಅವೆರಡರಲ್ಲಿ ಒಂದು ಸಿಹಿಯಾದ ಫಲವನ್ನು ತಿನ್ನುತ್ತದೆ, ಇನ್ನೊಂದು ತಿನ್ನದೇ, ನೋಡುತ್ತಿದೆ."
(ಆತ್ಮ ಮತ್ತು ಪರಮಾತ್ಮರಿಬ್ಬರೂ ಜ್ಯೋತಿಸ್ವರೂಪರಾಗಿದ್ದಾರೆ ಮತ್ತು ಅವರನ್ನು ಹಕ್ಕಿಗಳಿಗೆ ಹೋಲಿಸಲಾಗಿದೆ ಏಕೆಂದರೆ ಅವರು ಹಕ್ಕಿಗಳಂತೆ ಕೆಳಗೆ ಬರುತ್ತಾರೆ ಹಾಗು ಮೇಲಕ್ಕೆ ಹೋಗುತ್ತಾರೆ (ವಿರಾಟ್ ಪುರುಷನ ಶರೀರದಿಂದ ನಮ್ಮ ಸ್ಥೂಲಸ್ಥೂಲಶರೀರಕ್ಕೆ ಬರುತ್ತಾರೆ.). ಪರಮಾತ್ಮನು ಯಾವುದರಲ್ಲಿಯೂ ಆಸಕ್ತಿ ತೋರದೆ ಕೇವಲ ಸಾಕ್ಷಿಯಾಗಿದ್ದಾನೆ ಆದರೆ ನಮ್ಮ ಆತ್ಮವು ಜೀವನು ಅನುಭವಿಸುವ ಸುಖದುಃಖಗಳನ್ನು ನೋಡುತ್ತಾ ತಾನೂ ಸಹ ಅನುಭವಿಸುತ್ತಿದ್ದೇನೆಂದು ಭಾವಿಸುತ್ತಾನೆ.)

ಯತ್ರಾ ಸುಪರ್ಣಾ ಅಮೃತಸ್ಯ ಭಾಗಮನಿಮೇಷಂ ವಿದಥಾಭಿಸ್ವರಂತಿ ।
ಇನೋ ವಿಶ್ವಸ್ಯ ಭುವನಸ್ಯ ಗೋಪಾಃ ಸ ಮಾ ಧೀರಃ ಪಾಕಮತ್ರಾ ವಿವೇಶ ।।
(ಋಗ್ವೇದ ೧-೧೬೪-೨೧ ಸಾ ಭಾ+ಆರ್ ಎಲ್ ಕ)
"ತಮ್ಮ ವೇದ (ಕರ್ತವ್ಯ) ಜ್ಞಾನವನ್ನು (ಅಗ್ನಿಹೋತ್ರದಿಂದ) ಸರ್ವದಾ ವೃದ್ಧಿಸಿಕೊಂಡ ಎರಡು ಹಕ್ಕಿಗಳು ಆನಂದಮಯವಾದ ಅಮರತ್ವವನ್ನು ಪಡೆಯುತ್ತವೆ. ಅವನು ಸಮಸ್ತವಾದ ವಿಶ್ವಕ್ಕೂ ಸ್ವಾಮಿಯಾಗಿಯೂ ರಕ್ಷಕನಾಗಿಯೂ ಆಗಿದ್ದಾನೆ. ಪರಮೇಶ್ವರನು ಅನುಗ್ರಹಾತ್ಮಕವಾದ ಬುದ್ಧಿಯುಳ್ಳವನಾಗಿ ನಾನು (ಆತ್ಮನಾದ ಹಕ್ಕಿ) ಅಪರಿಪಕ್ವವಾದ ಜ್ಞಾನದಿಂದ ಕೂಡಿದ್ದರೂ ಸಹ (ಶರಣಾಗತನಾದರೆ) ನನ್ನನ್ನೂ ಈ ತನ್ನ ಮಂಡಲದಲ್ಲಿ ಪ್ರವೇಶಿಸುವಂತೆ ಮಾಡುತ್ತಾನೆ."

ಯಸ್ಮಿನ್ವೃಕ್ಷೇ ಮಧ್ವದಃ ಸುಪರ್ಣಾ ನಿವಿಶಂತೇ ಸುವತೇ ಚಾಧಿ ವಿಶ್ವೇ ।
ತಸ್ಯೇದಾಹುಃ ಪಿಪ್ಪಲಂ ಸ್ವಾದ್ವಗ್ರೇ ತನ್ನೋನ್ನಶದ್ಯಃ ಪಿತರಂ ನ ವೇದ ।।
"ಎರಡು ಹಕ್ಕಿಗಳು ವೃಕ್ಷದ ಮೇಲೆ ಕುಳಿತುಕೊಂಡು ಮಧುರವಾದ ಸೋಮರೂಪದ ಫಲವನ್ನು ಸೇವಿಸುತ್ತಿವೆ. ರಸವತ್ತಾದುದೂ, ಉತ್ತಮವಾದುದೂ ಆದ ಫಲವನ್ನು ಸೇವಿಸುತ್ತಾ ಆನಂದವನ್ನು ಎಲ್ಲಾ ಕಡೆಗೆ ಹರಡುತ್ತಾರೆ. ಯಾವ ಮನುಷ್ಯನು ಪರಮೇಶ್ವರನನ್ನು (ಅಗ್ನಿಹೋತ್ರ) ಉಪಾಸನಾದಿಗಳಿಂದ ತಿಳಿಯುವುದಿಲ್ಲವೋ, ಅವನು ಆ ಆನಂದಮಯವಾದ ಫಲವನ್ನು ಪಡೆಯುವುದಿಲ್ಲ." (೧-೧೬೪-೨೨) (ಆರ್ ಎಲ್ ಕ)

ಯಾವುದು ಈ ಊರ್ಧ್ವಮೂಲವಾದ ವೃಕ್ಷ?

ಈ ವೃಕ್ಷದ ಬೇರುಗಳು ಊರ್ಧ್ವಲೋಕದಲ್ಲಿದೆ. ಹೇಗೆ ವೃಕ್ಷಕ್ಕೆ ಸಹಸ್ರಾರು ಬೇರುಗಳಿರುತ್ತವೆಯೋ ಹಾಗೆ ಬ್ರಹ್ಮಾಂಡವೆಂಬ ವೃಕ್ಷಕ್ಕೆ ಅದರ ಬೇರುಗಳು ವಿರಾಟ್‌ಪುರುಷನ ತಲೆಯ ಮೇಲಿದೆ. ಅದರ ಕಾಂಡವೇ ಕುಂಡಲಿನಿ ಮಾತೆಯರ ಸುಷುಮ್ನಾನಾಡಿ ಮತ್ತು ದೇವತೆಗಳ ಊರ್ಧ್ವನಾಡಿ ಇರುವ ವಿರಾಟ್‌ಪುರುಷನ ಮೇರುದಂಡವಾಗಿದೆ (ಬೆನ್ನುಮೂಳೆ). ಈ ವೃಕ್ಷದಲ್ಲಿ ಬಿಡುವ ಫಲವೇ ಕುಂಡಲಿನಿಮಾತೆಯು ಪರೋಕ್ಷವಾಗಿ ಸೃಷ್ಟಿಸಿದ ಪೃಥ್ವಿಲೋಕ. ದ್ಯುಲೋಕ ಮತ್ತು ಅಂತರಿಕ್ಷಲೋಕವೆಂಬ ಮೂರು ಲೋಕಗಳು. ಇವುಗಳ ಜೊತೆಯಲ್ಲಿ ದೇವತೆಗಳಿಂದ ರಚಿತವಾದ ಅಧಮ, ಮಧ್ಯಮ ಮತ್ತು ಊರ್ಧ್ವಲೋಕಗಳೂ ಎಂಬ ಸಪ್ತಸ್ವರ್ಗಗಳು. ಇದನ್ನು ದ್ಯುಲೋಕವೆಂದು ಋಗ್ವೇದವು ಕರೆಯುತ್ತದೆ ಮತ್ತು ಸೂರ್ಯ-ಸವಿತೃವಿನ ಸೃಷ್ಟಿಯಾದ ಪೃಥ್ವಿಲೋಕವೆಂದು ಕರೆಯಲ್ಪಡುವ ಫಲಗಳು ಇವೆ.

ಬ್ರಹ್ಮಾಂಡದ ತದ್ರೂಪವಾದ ಈ ಪಿಂಡಾಂಡವೆಂಬ ವೃಕ್ಷದಲ್ಲಿ ಜೀವ, ಆತ್ಮ ಮತ್ತು ಪರಮಾತ್ಮರು ವಾಸಿಸುತ್ತಿರುವರು. ಆತ್ಮ ಮತ್ತು ಪರಮಾತ್ಮರನ್ನು ಋಗ್ವೇದವು ಹಕ್ಕಿಗಳಿಗೆ ಹೋಲಿಸಿದೆ. ಜೀವನು ತಾನು ಮಾಡಿದ ತನ್ನ ಕರ್ಮಫಲದಂತೆ ಕೆಲವು ಸಾರಿ ಅಧಮಲೋಕದ ಫಲವನ್ನೂ ಕೆಲವು ಸಾರಿ ಮಧ್ಯಮಲೋಕದ ಫಲವನ್ನೂ (ಪಿತೃಲೋಕ) ಕೆಲವು ಸಾರಿ ಊರ್ಧ್ವಲೋಕದ ಫಲವನ್ನು ತಿನ್ನುತ್ತಿರುವನು. ಜೀವನು ಈ ಲೋಕಗಳಿಗೆ ಹೋಗಿ ತನ್ನ ಕರ್ಮಫಲವನ್ನು ಅನುಭವಿಸಿ ಮತ್ತೆ ಭೂಮಿಗೆ ಬಂದು ಇಲ್ಲಿನ ಫಲವನ್ನು ಅನುಭವಿಸುತ್ತಿರುವನು. ಆದರೆ ಮರಣಾನಂತರ ಆತ್ಮ ಮತ್ತು ಪರಮಾತ್ಮರು ಯಾವ ಕರ್ಮಫಲವನ್ನು ಅನುಭವಿಸದೇ ಸಾಕ್ಷೀರೂಪನಾಗಿ ಇರುವುದರಿಂದ ಅವರು ವಿರಾಟ್ ಪುರುಷನ ಬಳಿ ಹೋಗುವರು. ಸೂರ್ಯ-ಸವಿತೃವು ಮತ್ತೆ ಯಾವಾಗ ನಮಗೆ ಸ್ಥೂಲಶರೀರವನ್ನು ಅನುಗ್ರಹಿಸುವನೋ ಅಗ ಮತ್ತೆ ಆತ್ಮ ಮತ್ತು ಪರಮಾತ್ಮರು ಮಗುವಿನ ಜನನದ ವೇಳೆ ಬಂದು ಸ್ಥೂಲಶರೀರವನ್ನು ಪ್ರವೇಶಿಸುತ್ತಾರೆ. ಯಾವ ಯೋಗಿಯು ಈ ರಹಸ್ಯವನ್ನು ಅರಿಯುವನೋ ಅವನು ಮಾತ್ರ ಜನನ-ಮರಣವೆಂಬ ಚಕ್ರದಿಂದ ಮುಕ್ತನಾಗುವನು.

ನಾವು ಅಸುರ ಶಕ್ತಿಗಳಿಂದ ಆವೃತವಾಗಿರುವುದರಿಂದ ನಮಗೆ ಜನನ-ಮರಣ ಚಕ್ರದಿಂದ ಮುಕ್ತಿಯೇ ಇಲ್ಲ. ಈ ಅಸುರಶಕ್ತಿಗಳನ್ನು ನಿಗ್ರಹಿಸಲು ಇಂದ್ರನಲ್ಲದೇ ಮತ್ತಾವ ದೇವತೆಯಿಂದಲೂ ಸಾಧ್ಯವಿಲ್ಲ. ಏಕೆಂದರೆ ಇಂದ್ರನು ಕ್ಷತ್ರಿಯನಾಗಿದ್ದಾನೆ, ಅಸುರ ಶತ್ರುವಾಗಿದ್ದಾನೆ. ಶತ್ರುಗೃಹದಲ್ಲಿ ಏಕಾಂಗಿಯಾಗಿ ನಿಂತಿದ್ದಾನೆ. ನಾವು ಅವನ ಮೊರೆ

ಹೋಗುವುದನ್ನೇ ಕಾಯುತ್ತಿದ್ದಾನೆ. ಇಂದ್ರನು ಶತ್ರುಗೃಹದಲ್ಲಿ ಏಕಾಂಗಿಯಾಗಿ ನಿಂತಿದ್ದಾನೆ ಎಂಬುದರ ಅರ್ಥ, ವಿರಾಟ್‌ಪುರುಷನ ಶರೀರದಲ್ಲಿ ಇಂದ್ರನು ವೃತ್ರಾಸುರನ ಸಂಹಾರ ಮಾಡಿ ಅಸುರರನ್ನು ಪಾತಾಳಕ್ಕೆ ತಳ್ಳಿ, ಅದರ ಬಿಲವನ್ನು ಮುಚ್ಚಿ ತನ್ನ ಸಾಮ್ರಾಜ್ಯವನ್ನು ಸ್ಥಾಪಿಸಿದ್ದಾನೆ. ಆದರೆ ವಿಶ್ವದಲ್ಲಿ ಸೃಷ್ಟಿಯಾದ ಸಕಲ ಜೀವರಾಶಿಗಳ ಸೂಕ್ಷ್ಮಶರೀರಗಳು ವಿರಾಟ್‌ಪುರುಷನ ತದ್ರೂಪವಾಗಿದೆ ಮತ್ತು ಅಸುರಲೋಕಕ್ಕೆ ಹೋಗುವ ಬಿಲವು ತೆರೆದಿದೆ. ಸಾಮ್ರಾಜ್ಯರಹಿತರಾದ ಅಸುರರು ತಮ್ಮ ಬಿಲದಿಂದ ಹೊರಬಂದು ಜೀವರಾಶಿಗಳ ಶರೀರವನ್ನು ತಮ್ಮ ವಾಸಸ್ಥಾನವನ್ನಾಗಿ ಮಾಡಿಕೊಂಡು ಆತ್ಮನಾದ ಜೀವನನ್ನು ಮತ್ತು ಪಿಂಡಾಂಡವನ್ನು ಅಂಧಕಾರದ ಗುಹೆಯಲ್ಲಿ ಬಂಧಿಸಿರುವರು. ಸೂಕ್ಷ್ಮಶರೀರದಲ್ಲಿರುವ ಸೂರ್ಯನನ್ನು ಇತರ ದೇವತೆಗಳನ್ನೂ ಅಂಧಕಾರದಲ್ಲಿ ಮುಳುಗಿಸಿರುವರು.

ಅಜ್ಞಾನದಿಂದ ಆವೃತನಾದ ಜೀವನು ತಾನು ಅಸುರಶಕ್ತಿಗಳಿಂದ ಆವೃತನಾಗಿರುವೆನೆಂದು ತಿಳಿಯದೇ ಜನನಮರಣಚಕ್ರಕ್ಕೆ ಸಿಲುಕಿರುವನು. ಆಂದರೆ ಸಕಲ ಪಿಂಡಾಂಡವೂ ಅಸುರಶಕ್ತಿಗಳ ವಾಸಸ್ಥಾನವಾಗಿದೆ. ಇಂದ್ರನು ಈ ಪಿಂಡಾಂಡವೆಂಬ ಗೃಹದಲ್ಲಿ ಅಸುರರಿಂದ ಆವೃತನಾಗಿ ಏಕಾಂಗಿಯಾಗಿ ನೆಲೆಸಿದ್ದು ಎಲ್ಲವನ್ನು ನೋಡುತ್ತಿರುವನು. ನಾವು ಇಂದ್ರನ ಮೊರೆ ಹೋಗದೇ ಅಸುರಶಕ್ತಿಗಳ ನಾಶವಾಗುವುದಾದರೂ ಹೇಗೆ?

ಇಂತಹ ಪರಮಾತ್ಮನಾದ ಇಂದ್ರನು ಗಂಡು ಹೆಣ್ಣು ಎಂಬ ಯಾವ ವ್ಯತ್ಯಾಸವಿಲ್ಲದೇ ಸಕಲರ ಹೃದಯಗುಹೆಯಲ್ಲಿ ನೆಲೆಸಿ ಜೀವನು ಮಾಡುವುದನ್ನೆಲ್ಲಾ ನೋಡುತ್ತಿರುವನು. ಜೀವರಾಶಿಗಳ ಸಕಲ ಭೋಗವನ್ನು, ಸಕಲ ಕಷ್ಟವನ್ನೂ ಸಾಕ್ಷಿಯಾಗಿ ನೋಡುತ್ತಿರುವನು. ಸಕಲರಲ್ಲೂ ಅವನೇ ಇರುವುದರಿಂದ ಇಂದ್ರನು ಯಾವ ಹೆಣ್ಣನ್ನು ಭೋಗಿಸಬೇಕು? ಹೆಣ್ಣು ಮತ್ತು ಗಂಡೆಂಬ ಭೇದವಿಲ್ಲದೇ ಸಕಲ ಜೀವರಾಶಿಗಳಲ್ಲಿ ಇಂದ್ರನೇ ನೆಲೆಸಿರುವನು.

ಪುರಾಣಗಳು ಹೇಳುವಂತೆ ನಿಜವಾಗಿಯೂ ಇಂದ್ರನು ಸುರಾಪಾನ ಮಾಡುತ್ತಾ ರಂಬೆ ಊರ್ವಶಿಯರ ನೃತ್ಯದಲ್ಲಿ ತಲ್ಲೀನನಾಗಿರುವನೇ?

ವಿಶ್ವಪ್ರಳಯದ ನಂತರ ಸಕಲ ಜೀವರಾಶಿಗಳು ತಮ್ಮ ಮೂಲಸ್ವರೂಪವಾದ ಆತ್ಮಜ್ಯೋತಿಯ ರೂಪದಿಂದ ಇಂದ್ರನ ಬೆಳಕಿನ ಲೋಕವನ್ನು ಪ್ರವೇಶಿಸುವರು. ಜ್ಯೋತಿಸ್ವರೂಪನಾದ ಇಂದ್ರನು ಯಾವ ರೀತಿ ಮಾನವರೂಪವನ್ನು ತಾಳುತ್ತಾನೋ ಅದೇ ರೀತಿ ನಮ್ಮ ಆತ್ಮವೂ ಸಹ ತಮಗೆ ಬೇಕಾದ ಸ್ವರೂಪವನ್ನು ತಾಳುತ್ತಾರೆ. ಅಲ್ಲಿ ಸ್ತ್ರೀಪುರುಷರು ಮತ್ತು ಪ್ರಾಣಿಪಕ್ಷಿಗಳ ಭೇದವಿಲ್ಲ. ಎಲ್ಲರೂ ಆತ್ಮಸ್ವರೂಪದಿಂದ ನಂದನವನದಲ್ಲಿ ಆನಂದದಿಂದ ನೆಲೆಸುವರು.

ನಂದನವನದಲ್ಲಿ ಕಾಮವಾಸನೆಯಿಂದ ಕೂಡಿದ ಆತ್ಮರಿಗಾಗಿ ರಂಬೆ ಊರ್ವಶಿಯರಂತಹ ಅಪ್ಸರ ಸ್ತ್ರೀಯರು ಇರುವರು. ಸೋಮರಸ ಇತ್ಯಾದಿ ಪಾನೀಯಗಳು ಇರುವುದು. ಯಾರ ಆತ್ಮಜ್ಯೋತಿಯನ್ನು ಇಂದ್ರನು ಪರಿಪೂರ್ಣಗೊಳಿಸಿರುವನೋ ಅವರು ಪೃಥ್ವಿಯಲ್ಲಿರುವಾಗಲೇ ಮರಣಕಾಲದಲ್ಲಿ ನೇರವಾಗಿ ಇಂದ್ರನ ಅರಮನೆಯನ್ನು ಪ್ರವೇಶಿಸುವರು. ಇಂದ್ರನ ಅರಮನೆಗೆ ಕೇವಲ ಪರಿಪೂರ್ಣಾತ್ಮರಿಗೆ ಮಾತ್ರ ಪ್ರವೇಶ. ಋಗ್ವೇದವು ಹೇಳುವುದೇನೆಂದರೆ ಇಂದ್ರನ ಸುತ್ತ ಋಷಿಗಳು ಸದಾ ಆವೃತರಾಗಿ ಇಂದ್ರಸ್ತುತಿಯನ್ನು ಹಾಡುತ್ತಿರುತ್ತಾರೆ.

ಕುಹ ಶ್ರುತ ಂದ್ರಃ ಕಸ್ಮಿನ್ನದ್ಯ ಜನೇ ಮಿತ್ರೋ ನ ಶ್ರೂಯತೇ ।
ಋಷೀಣಾಂ ವಾ ಕ್ಷಯೇ ಗುಹಾ ವಾ ಚರ್ಕೃಷೇ ಗಿರಾ ।। (ಋ ೧೦–೨೨–೧ ಸಾ ಭಾ)
"ಇಂದ್ರನು ಋಷಿಗಳ ನಿವಾಸಸ್ಥಾನದಲ್ಲಿಯಾಗಲಿ, ಅಥವಾ ರಹಸ್ಯ ಪ್ರದೇಶದಲ್ಲಿಯಾಗಲಿ ಸ್ತುತಿರೂಪವಾದ ವಾಕ್ಕಿನಿಂದ ಆಕರ್ಷಿಸಲ್ಪಡುವನು...."

ಅಯಂ ಸಹಸ್ರಮೃಷಿಭಿಃ ಸಹಸ್ಕೃತಃ ಸಮುದ್ರ ಇವ ಪಪ್ರಥೇ ।
ಸತ್ಯಂ ಸೋ ಅಸ್ಯ ಮಹಿಮಾ ಗೃಣೇ ಶವೋ ಯಜ್ಞೇಷು ವಿಪ್ರರಾಜ್ಯೇ ।।(ಋ ೮–೩–೪ ಸಾ ಭಾ)
"ಈ ಇಂದ್ರನು ಸಹಸ್ರಸಂಖ್ಯಾಕವಾದ ಸ್ತುತಿಕರ್ತರಾದ ಋಷಿಗಳಿಂದ ಸ್ತುತನಾಗಿ ತನ್ನ ಶಕ್ತಿಯನ್ನು ಬೆಳೆಸಿಕೊಂಡು ಸಮುದ್ರದಂತೆ ವಿಸ್ತೃತನಾಗಿ ಬೆಳೆದಿದ್ದಾನೆ. ಈ ಇಂದ್ರನ ಸತ್ಯಾತ್ಮಕವಾದುದೂ, ಪ್ರಸಿದ್ಧವಾದುದೂ ಆದ ಮಹಾತ್ಮ್ಯವೂ ಮತ್ತು ಬಲವೂ ಸಹ ಯಜ್ಞಗಳಲ್ಲಿ ಸ್ತುತಿಕರ್ತರ ಸಂಘಗಳಲ್ಲಿ ಪ್ರಶಂಸಿತವಾಗುತ್ತದೆ."

ಇಂದ್ರೋ ಬ್ರಹ್ಮೇಂದ್ರ ಋಷಿರಿಂದ್ರಃ ಪುರೂ ಪುರುಹೂತಃ ।
ಮಹಾನ್ಮಹೀಭಿಃ ಶಚೀಭಿಃ ।। (ಋ ೮–೧೬–೭ ಸಾ ಭಾ)
"ಈ ಇಂದ್ರನೇ ಬ್ರಹ್ಮಾಖ್ಯನೂ, ಬೃಹದ್ರೂಪವುಳ್ಳವನೂ ಆದ ಮುಖ್ಯದೇವನಾಗಿದ್ದಾನೆ. ಈ ಇಂದ್ರನೇ ಅತೀಂದ್ರಿಯ ಜ್ಞಾನವುಳ್ಳ ದ್ರಷ್ಟೃವಾಗಿದ್ದಾನೆ. ಇವನೇ ಅಧಿಕವಾಗಿ ಅನೇಕರ ಆಹ್ವಾನಕ್ಕೆ ಪಾತ್ರನೂ, ಮಹತ್ತಾದ ವೃತ್ರವಧಾದಿಕರ್ಮಯುಕ್ತನಾಗಿಯೂ ಮಹಾತ್ಮ್ಯವುಳ್ಳವನಾಗಿಯೂ ಇದ್ದಾನೆ."

ಮಹತ್ತನ್ನಾಮ ಗುಹ್ಯಂ ಪುರುಸ್ಪೃಗ್ಯೇನ ಭೂತಂ ಜನಯೋ ಯೇನ ಭವ್ಯಂ !
ಪ್ರತ್ನಂ ಜಾತಂ ಜ್ಯೋತಿರ್ಯದಸ್ಯ ಪ್ರಿಯಂ ಪ್ರಿಯಾಃ ಸಮವಿಶಂತ ಪಂಚ ।। (ಋ ೧೦-೫೫-೨ ಸಾ ಭಾ)
"ಎಲೈ ಇಂದ್ರನೇ, ಯಾವ ನಿನ್ನ ದಿವ್ಯಜ್ಯೋತಿಯಿಂದ ಹಿಂದಿನ ತತ್ವಗಳನ್ನೂ ಮತ್ತು ಭವಿಷ್ಯತ್ಕಾಲದ ತತ್ವಗಳನ್ನೂ ನೀನು ಉತ್ಪನ್ನ ಮಾಡಿದೆಯೋ ಮತ್ತು ನಿನ್ನ ಪ್ರೀತಿಕರವಾದ ಪುರಾತನವಾದ ಯಾವ ದಿವ್ಯಜ್ಯೋತಿಯನ್ನು ನಿನಗೆ ಪ್ರಿಯರಾದ ದೇವಮಾನವಾದಿ ಪಂಚಜನರೂ ಸೇವಿಸುವರೋ ಆ ದಿವ್ಯ ಜ್ಯೋತಿಯು ರಹಸ್ಯಾತ್ಮಕವಾಗಿಯೂ ಅನೇಕರಿಂದ ಅಪೇಕ್ಷಿತವಾದುದಾಗಿಯೂ ಅತ್ಯಂತ ಪ್ರವೃದ್ಧಮಾನವಾದುದಾಗಿಯೂ ಇರುತ್ತದೆ."

ಇಂತಹ ಪರಮಾತ್ಮನಾದ ದಿವ್ಯಜ್ಯೋತಿಯಾದ ಇಂದ್ರನಿಗೆ ಪತ್ನಿಯುಂಟೇ? ಜ್ಯೋತಿಗಾಗಲೀ ಅಥವಾ ಮನಸ್ಸಿಗಾಗಲೀ ಪತ್ನಿಯರಿರುವುದನ್ನು ಯಾರಾದರೂ ಕೇಳಿರುವರೇ? ಆಕಾಶತತ್ವವನ್ನು ಪ್ರತಿನಿಧಿಸುವ ವಿಷ್ಣುವಿಗೆ ಪತ್ನಿಯಿರುವುದು ನಿಜವೇ?

ಪತಿ-ಪತ್ನಿಯ ಸಂಬಂದವು ಕೇವಲ ಜೀವಕುಲವನ್ನು ಮುಂದುವರೆಸುವ ಪ್ರಕ್ರಿಯೆಗಾಗಿ ಇರುವುದು. ದೇವತೆಗಳೆಲ್ಲಾ ಜ್ಯೋತಿಸ್ವರೂಪಳಾದ ಅದಿತಿಯಿಂದ ಹೊರಹೊಮ್ಮಿರುವ ಕಾರಣದಿಂದ ಅವರೆಲ್ಲರೂ ತೇಜಸ್ವಿಗಳಾಗಿದ್ದಾರೆ. ಮಿತ್ರ, ವರುಣ, ಆರ್ಯಮಾ ಮತ್ತು ಭಗ ದೇವತೆಗಳು ಸೂರ್ಯ ಮತ್ತು ನಕ್ಷತ್ರಪುಂಜದ ಕಣ್ಣುಗಳಾಗಿದ್ದಾರೆ. ನಮ್ಮ ಹೃದಯದಲ್ಲಿ ಸೂಕ್ಷ್ಮರೂಪದಲ್ಲಿರುವರು. ಅಂಥವರಿಗೆ ಪತ್ನಿಯರಿರುವರು ಎಂದು ಹೇಳುವ ಋಗ್ವೇದದ ಕೆಲವು ಸೂಕ್ತಗಳು ಋಷಿಗಳಿಂದ ಪ್ರೇರಿತವಾಗಿ ದೈವವಾಣಿಯ ಜೊತೆ ಪ್ರಕ್ಷೇಪವಾಗಿವೆ. ಸಕಲ ದೇವತೆಗಳಿಗೂ ಸಂಸಾರವನ್ನು ಹೆಣೆದಿರುವ ಪುರಾಣದ ಕಲ್ಪನೆಯು ಅದ್ಭುತವಾಗಿದೆ.

ಹೀಗೆ ಸಕಲ ಜೀವರಾಶಿಗಳ ಶರೀರವು ಬ್ರಹ್ಮಾಂಡದ ಪ್ರತಿರೂಪವಾಗಿರುವುದರಿಂದ ಇಂದ್ರನು ಜಾಗೃತಸ್ವರೂಪನಾಗಿ ನಮ್ಮ ಹೃದಯಗುಹೆಯಲ್ಲಿ ನೆಲೆಸಿರುವನು ಆದರೆ ಮಾನವರಿಗೆ ಅಜ್ಞಾನ ಮತ್ತು ಅಂಧಕಾರದ ನಿಮಿತ್ತ ದೇವತೆಗಳು ಮತ್ತು ದೇವಸಾಮ್ರಾಜ್ಯವು ಕಾಣದೇ ಇರುವುದು. ಜೀವರಾಶಿಗಳ ಹೃದಯಗುಹೆಯಲ್ಲಿ ಇಂದ್ರನಿದ್ದರೂ ಯಜ್ಞದ ಮುಖಾಂತರವೇ ಪ್ರಕಟವಾಗುವನು.

ಕಿಯತ್ಸ್ವಿ ದಿಂದ್ರೋ ಅಧ್ಯೇತಿ ಮಾತುಃ ಕಿಯತ್ಪಿತುರ್ಜನಿತುರ್ಯೋ ಜಜಾನ
ಯೋ ಅಸ್ಯ ಶುಷ್ಮಂ ಮುಹುಕೈರಿಯರ್ತಿ ವಾತೋ ನ ಜೂತಃ ಸ್ತನಯದ್ಭಿರಭ್ರೈಃ ।। (ಋ ೪-೧೭-೧೨ ಸಾ ಭಾ)
"<u>ಯಾವ ಇಂದ್ರನು ಜಗಜ್ಜನಕನಾದ ಪ್ರಜಾಪತಿಯ (ಸೂರ್ಯ-ಸವಿತೃ) ಸಹಾಯದಿಂದ ಈ ಜಗತ್ತನ್ನು ಸೃಷ್ಟಿಸಿದನೋ</u>, ಯಾವ ಇಂದ್ರನು ಗರ್ಜಿಸುತ್ತಿರುವ ಮೇಘಗಳಿಂದ ಪ್ರೇರಿತನಾದ ವಾಯುವಿನಂತೆ ಈ ಜಗತ್ತಿನ ಬಲವನ್ನು ಪದೇ ಪದೇ ಪ್ರೇರಿಸುವನೋ ಅದೇ ಇಂದ್ರನು ತನ್ನ ಜನನಿಯಿಂದ ಕೊಂಚ ಬಲವನ್ನು ಪಡೆಯುತ್ತಾನೆ. ಮತ್ತು ತಂದೆಯಿಂದಲೂ ಕೊಂಚ ಬಲವನ್ನು ಪಡೆಯುತ್ತಾನೆ."

ಗೃಷ್ಟಿಃ ಸಸೂವ ಸ್ಥವಿರಂ ತವಾಗಾಮನಾಧೃಷ್ಯಂ ವೃಷಭಂ ತುಮ್ರಮಿಂದ್ರಂ ।
ಅರೀಳ್ಹಂ ವತ್ಸಂ ಚರಥಾಯ ಮಾತಾ ಸ್ವಯಂ ಗಾತುಂ ತನ್ವ ಇಚ್ಛಮಾನಂ ।। (ಋ ೪-೧೮-೧೦ ಸಾಭಾ)
"ಪುಷ್ಟವಾದ ಹಸುವು ತನ್ನ ಕರುವನ್ನು ಪಡೆದಿರುವಂತೆ ಇಂದ್ರಮಾತೆಯಾದ ಅದಿತಿಯು ವಯಸ್ಸಿನಿಂದ ಪ್ರವೃದ್ಧನೂ ಅಧಿಕವಾದ ಬಲವುಳ್ಳವನೂ, ಶತ್ರುಗಳಿಂದ ಪರಾಜಿತನಾಗದವನೂ, ಕಾಮವರ್ಷಕನೂ, ಎಲ್ಲರಿಗೂ ಪ್ರೇರಕನೂ, ಅಪ್ರತಿಹತನೂ, ಸ್ವೇಚ್ಛೆಯಾಗಿ ಸಂಚರಿಸುವನೂ, ತನ್ನ ಶರೀರ ರಕ್ಷಣೆಯಲ್ಲಿ ನಿರತನೂ ಆದ ಇಂದ್ರನನ್ನು ಸ್ವೇಚ್ಛಾ ಸಂಚಾರಕ್ಕಾಗಿ ಪಡೆದಳು."
ಇಂದ್ರನಿಗೆ ಇತರ ದೇವತೆಗಳಿಗಿರುವಂತೆ ಸೃಷ್ಟಿ ಕೆಲಸದ ಬಂಧನವಿಲ್ಲ, ಇಂದ್ರನು ತನ್ನ ಇಷ್ಟಾನುಸಾರ ನಡೆದುಕೊಳ್ಳವನು, ಇಚ್ಛೆಬಂದ ಭಕ್ತನ ಬಳಿಗೆ ಹೋಗುತ್ತಾನೆ. ಯಾರೂ ಆತನನ್ನು ನಿರ್ಬಂದಿಸಲು ಸಾಧ್ಯವಿಲ್ಲ. ಇಂದ್ರನು ವಿಶ್ವಸಾಮ್ರಾಟ್ ಆಗಿರುವುದರಿಂದ ಇತರ ದೇವತೆಗಳು ಇಂದ್ರನ ಇಚ್ಛೆಯಂತೆ ನಡೆಯುತ್ತಾರೆ

ಋಗ್ವೇದವು ಇಂದ್ರನನ್ನು ಹಸುವಿನ ಮಧ್ಯೆ ಇರುವ ಗೂಳಿ ಎಂದು ಕಾವ್ಯಮಯವಾಗಿ ವರ್ಣಿಸಿದೆ. ಇದನ್ನು ಕೆಲ ಹಿಂಧಿನ ಜನಾಂಗವು ನಿಜವಾದ ಅರ್ಥದಲ್ಲಿ ತೆಗೆದುಕೊಂಡು ಗೂಳಿಯನ್ನು ದೇವತಾರೂಪದಲ್ಲಿ ಆರಾಧಿಸುತ್ತಿದ್ದರು. ಮೋಸಸ್‌ರ ಕಾಲದಲ್ಲಿಯೂ ಸಹ ಇದೇ ರೀತಿ ಆದಾಗ ಮೋಸಸ್‌ರು ಗೂಳಿ ಪೂಜೆಯನ್ನು ತಿರಸ್ಕರಿಸಿದರು.

ಯೋ ಜಾತ ಏವ ಪ್ರಥಮೋ ಮನಸ್ವಾನ್ದೇವೋ ದೇವಾನ್ಕ್ರತುನಾ ಪರ್ಯಭೂಷತ್ ।
ಯಸ್ಯ ಶುಷ್ಮಾದ್ರೋದಸೀ ಅಭ್ಯಸೇತಾಂ ನೃಮ್ಣಸ್ಯ ಮಹ್ನಾ ಸ ಜನಾಸ ಇಂದ್ರಃ ।। (ಋ ೨-೧೨-೧ ಆರ್ ಎಲ್ ಕ)

"ಹುಟ್ಟಿದ ಕೂಡಲೆ, ಮನಸ್ಸನ್ನು ಹೊಂದಿದ ಪ್ರಥಮನಾಗಿದ್ದಾನೆ. ಅವನು (ಇಂದ್ರನು) ತನ್ನ ಮಹತ್ತರವಾದ ಮಾನಸಿಕ ಶಕ್ತಿಯಿಂದ ಸಕಲ ದೇವತೆಗಳನ್ನು ಆವರಿಸಿಕೊಂಡನು. ಆತನ ಮಾನಸಿಕ ಆವೇಗದಿಂದ ದ್ಯಾವಾ-ಪೃಥ್ವಿಗಳು ಭಯದಿಂದ ನಡುಗಿದವು. ಆತನು ಸಕಲ ಮಾನಸಿಕ ಬಲವನ್ನು ಶಕ್ತಿಯನ್ನು ಹೊಂದಿದ್ದಾನೆ. ಓ ಮಾನವರೇ ಆತನೇ ಇಂದ್ರನಾಗಿದ್ದಾನೆ.

(ಸಕಲ ದೇವತೆಗಳು ಇಂದ್ರನ ಮನಸ್ಸಿನ ಇಚ್ಛೆಯಂತೆ ವರ್ತಿಸುವರು. ನಮ್ಮ ಶರೀರದ ಉದಾಹರಣೆ ಕೊಡುವುದಾದರೆ, ನಮ್ಮ ಮನಸ್ಸು ಏನನ್ನು ಬಯಸುತ್ತದೆಯೋ ಹಾಗೆ ದೇವತೆಗಳಿಂದ ರಚಿಸಲ್ಪಟ್ಟ ನಮ್ಮ ಶರೀರವು ಕೆಲಸ ಮಾಡುತ್ತದೆ. ಹಾಗೆಯೇ ಇಂದ್ರನು ಏನನ್ನು ಯೋಚಿಸುತ್ತಾನೋ ಹಾಗೆ ದೇವತೆಗಳು ಕಾರ್ಯನಿರ್ವಹಿಸುತ್ತಾರೆ.) .

ಅದಿತಿಯ ಜ್ಯೇಷ್ಠ ಪುತ್ರನಾದ ದೈವೀಮನಸ್ಸಿನ ಇಂದ್ರನು, ಅಂಧಕಾರ ಮತ್ತು ಅಜ್ಞಾನದಿಂದ ಕೂಡಿದ ದಿತಿಯ ಪುತ್ರರಾದ ಅಸುರರನ್ನು ಸೋಲಿಸಿ, ಅಸುರರ ಧನವನ್ನು ಅಂದರೆ ಅಸುರರಶಕ್ತಿಗಳನ್ನೂ ಮತ್ತು ಅವರ ಮಾಯಾ ಜ್ಞಾನವನ್ನು ವಶಪಡಿಸಿಕೊಂಡಿರುವನು. ಅಸುರರನ್ನು ಪಾತಾಳಕ್ಕೆ ತಳ್ಳಿ ಅದರ ಬಿಲವನ್ನು ಮುಚ್ಚಿರುವನು.

ಅಸುರರ ಮೇಲೆ ಜಯವನ್ನು ಸಾಧಿಸಿದ ಇಂದ್ರನು ಬ್ರಹ್ಮಾಂಡದಲ್ಲಿ ತನ್ನ ಸಾಮ್ರಾಜ್ಯವನ್ನು ಸ್ಥಾಪಿಸಿದ್ದಾನೆ. ಆದರೆ ಬ್ರಹ್ಮಾಂಡದ ತದ್ರೂಪವಾದ ಪಿಂಡಾಂಡವನ್ನು (ಅಂದರೆ ಮಾನವನನ್ನು ಸೇರಿಸಿ ಸಕಲ ಜೀವರಾಶಿಗಳನ್ನೂ) ಅಸುರರು ಆಕ್ರಮಿಸಿ ತಮ್ಮ ಸಾಮ್ರಾಜ್ಯವನ್ನು ಸ್ಥಾಪಿಸಿದ್ದಾರೆ. ಇಂದ್ರನ ಆರಾಧನೆಯಿಂದ ಮಾತ್ರ ನಮ್ಮ ಪಿಂಡಾಂಡದಲ್ಲಿರುವ ಅಸುರ ಸಾಮ್ರಾಜ್ಯವನ್ನು ಕೊನೆಗೊಳಿಸಿ ದೈವೀ ಸಾಮ್ರಾಜ್ಯವನ್ನು ಸ್ಥಾಪಿಸಬಹುದು. ಅಜ್ಞಾನವನ್ನು ನಾಶಪಡಿಸುವ ದೈವೀ ಮನಸ್ಸಿನ ಶಕ್ತಿ ಮತ್ತು ಅಗಾಧತೆಯನ್ನು ಋಗ್ವೇದವು ಬಹುವಾಗಿ ಕೊಂಡಾಡುತ್ತಿದೆ.

ಗೋಜಿತಾ ಬಾಹೂ ಅಮಿತಕ್ರತುಃ ಸಿಮಃ ಕರ್ಮನ್ಕರ್ಮಞ್ಛತಮೂತಿಃ ಖಜಂಕರಃ।(ಕರ್ಮನ್‌ಕರ್ಮನ್ ಶತಂಊತಿಃ)
ಅಕಲ್ಪ ಇಂದ್ರಃ ಪ್ರತಿಮಾನಮೋಜಸಾಥಾ ಜನಾ ವಿ ಹ್ವಯಂ ತೇ ಸಿಷಾಸವಃ ।। (ಋ ೧-೧೦೨-೬ ಸಾಭಾ)
"ಎಲೈ ಇಂದ್ರನೇ, ನಿನ್ನ ತೋಳುಗಳೆರಡೂ ಶತ್ರುಗಳನ್ನು (ಅಸುರರು) ಜಯಿಸಿ ಗೋವುಗಳನ್ನು ಪಡೆಯ ತಕ್ಕವು. ನಿನ್ನ ಜ್ಞಾನವು ಅಪರಿಮಿತವಾದದ್ದು. ನೀನು ಅತ್ಯಂತ ಶ್ರೇಷ್ಠನಾಗಿಯೂ, ಪ್ರತಿಯೊಂದು ಯಜ್ಞಕರ್ಮ ದಲ್ಲಿಯೂ ನೂರಾರು ವಿಧವಾದ ರಕ್ಷಣೆಯಿಂದ ಕೂಡಿದವನಾಗಿಯೂ, ಇತರರ ನಿಯಮಕ್ಕೆ ಒಳಪಡದ ಸ್ವತಂತ್ರ ನಾಗಿಯೂ ಇದ್ದೀಯೆ. ಇಂದ್ರನು ಸಕಲ ಪ್ರಾಣಿಗಳ ಬಲಕ್ಕೂ ಮಾದರಿಯಾದ ಪ್ರತಿನಿಧಿಯಾಗಿದ್ದಾನೆ. ಆ ಕಾರಣ ದಿಂದಲೇ ಧನಾಪೇಕ್ಷಿಗಳಾದ ಮಾನವರು ಇಂದ್ರನನ್ನು ನಾನಾವಿಧವಾಗಿ ಪ್ರಾರ್ಥಿಸಿ ಕರೆಯುತ್ತಾರೆ."
(ಇಂದ್ರನು ಯಾವ ದೇವತೆಗಳ ನಿಯಂತ್ರಣದಲ್ಲಿಲ್ಲ. ತಾನೆ ಸ್ವಯಂ ಸಕಲರಿಗೂ ಪ್ರಭುವಾಗಿದ್ದಾನೆ.)

ಯೋ ವಿಶ್ವಸ್ಯ ಜಗತಃ ಪ್ರಾಣತಸ್ಪತಿರ್ಯೋ ಬ್ರಹ್ಮಣೇ ಪ್ರಥಮೋ ಗಾ ಅವಿಂದತ್ ।
ಇಂದ್ರೋ ಯೋ ದಸ್ಯೂನ್‌ರಧರಾನ್ ಅವಾತಿರನ್ಮರುತ್ವಂತಂ ಸಖ್ಯಾಯ ಹವಾಮಹೇ ।। (ಋ ೧-೧೦೧-೫ ಸಾಭಾ)
"ಯಾವ ಇಂದ್ರನು ಜಂಗಮಾತ್ಮಕವಾದುದೂ ಮತ್ತು ಉಸಿರಾಡತಕ್ಕದ್ದೂ ಆದ ಸಮಸ್ತ ಭೂತಜಾತಗಳಿಗೂ ಪ್ರಭುವಾಗಿರುವನೋ, ಯಾವ ಇಂದ್ರನು ಇತರ ದೇವತೆಗಳಿಗಿಂತಲೂ ಪೂರ್ವಭಾವಿಯಾಗಿಯೇ ಪಣಿಗಳೊಡನೆ ಯುದ್ಧಮಾಡಿ ಅವರು ಅಪಹರಿಸಿದ ಗೋವುಗಳನ್ನು ಮೊದಲು ಅಂಗಿರಸ್ಸುಗಳಿಗೆ ಒದಗಿಸಿಕೊಟ್ಟನೋ ಮತ್ತು ಯಾವ ಇಂದ್ರನು ದಸ್ಯುರೂಪರಾದ ಅಸುರರ ಕೊಬ್ಬನ್ನಡಗಿಸಿ ಅವರನ್ನು ಕೊಂದನೋ ಅಂತಹ ಮರುತ್ತುಗಳೊಡಗೂಡಿದ ಇಂದ್ರನನ್ನು ನಮ್ಮೊಡನೆಯೂ ಸ್ನೇಹವನ್ನು ಬೆಳೆಸುವುದಕ್ಕಾಗಿ ಕರೆಯುತ್ತೇವೆ."

ಈ ಕೆಳಗಿನ ಋಗ್ವೇದ ಮಂತ್ರಗಳು ಇಂದ್ರನು ಜ್ಯೋತಿಸ್ವರೂಪನು, ಅಸುರಾಂತಕನೂ ಮತ್ತು ಅಂಧಕಾರವನ್ನು ನಾಶಮಡುವ ಇಂದ್ರಸ್ವರೂಪನು ಎಂದು ತಿಳಿಯಬಹುದು.

ಮಹತ್ತನ್ನಾಮ ಗುಹ್ಯಂ ಪುರುಸ್ಪೃಗ್ಯೇನ ಭೂತಂ ಜನಯೋ ಯೇನ ಭವ್ಯಂ ।
ಪ್ರತ್ನಂ ಜಾತಂ ಜ್ಯೋತಿರ್ಯದಸ್ಯ ಪ್ರಿಯಂ ಪ್ರಿಯಾಃ ಸಮವಿಶಂತ ಪಂಚ ।। (ಋ ೧೦-೫೫-೨ ಸಾ ಭಾ)
"ಎಲೈ ಇಂದ್ರನೇ, ಆಕಾಶರೂಪವಾದ ಯಾವ ನಿನ್ನ ದಿವ್ಯಜ್ಯೋತಿಯಿಂದ ಹಿಂದಿನ ತತ್ವಗಳನ್ನೂ ಮತ್ತು ಭವಿಷ್ಯತ್ಕಾಲದ ತತ್ವಗಳನ್ನೂ ನೀನು ಉತ್ಪನ್ನ ಮಾಡಿದೆಯೋ ಮತ್ತು ನಿನ್ನ ಪ್ರೀತಿಕರವಾದ ಪುರಾತನವಾದ ಯಾವ ದಿವ್ಯಜ್ಯೋತಿಯನ್ನು ನಿನಗೆ ಪ್ರಿಯರಾದ ದೇವಮಾನವಾದಿ ಪಂಚಜನರೂ ಸೇವಿಸುವರೋ ಆ ದಿವ್ಯ ಜ್ಯೋತಿಯು

ರಹಸ್ಯಾತ್ಮಕವಾಗಿಯೂ ಅನೇಕರಿಂದ ಅಪೇಕ್ಷಿತವಾದುದಾಗಿಯೂ ಅತ್ಯಂತ ಪ್ರವೃದ್ಧಮಾನವಾದುದಾಗಿಯೂ ಇರುತ್ತದೆ."

ಉರುಂ ನೋ ಲೋಕಮನು ನೇಷಿ ವಿದ್ವಾನ್ತ್ಸ್ವರ್ವಜ್ಜ್ಯೋತಿರಭಯಂ ಸ್ವಸ್ತಿ ।
ಋಷ್ವಾ ತ ಇಂದ್ರ ಸ್ಥವಿರಸ್ಯ ಬಾಹೂ ಉಪ ಸ್ಥೇಯಾಮ ಶರಣಾ ಬೃಹಂತಾ ।। (ಋ ೬-೪೭-೮ ಸಾಭಾ)
"ಎಲೈ ಇಂದ್ರನೇ, ಸರ್ವಜ್ಞನಾದ ನೀನು ನಮಗೆ ಕ್ಷೇಮವುಂಟಾಗುವಂತೆ ಸುಖಯುಕ್ತವಾದುದೂ, ಭಯರಹಿತವಾದುದೂ, ಜ್ಯೋತಿಯುತವಾದುದೂ, ವಿಸ್ತೃತವಾದುದೂ ಆದ ಉರುಲೋಕಕ್ಕೆ (ಇಂದ್ರ ಲೋಕ/ಬೆಳಕಿನ ಲೋಕ) ನಮ್ಮನ್ನು ಕರೆದುಕೊಂಡು ಹೋಗಿ ಸೇರಿಸು. ಎಲೈ ಇಂದ್ರನೇ ದೃಢಕಾಯನಾದ ನಿನ್ನ ಆಕರ್ಷಕವಾದುದೂ, ದೀರ್ಘವಾದುದೂ ಆದ ಬಾಹುಗಳನ್ನು ನಮಗೆ ರಕ್ಷಕಗಳಾಗಿರುವಂತೆ ಆಶ್ರಯಿಸಿ ಸುಖವಾಗಿರುವಂತಾಗಲಿ."

# ವೃತ್ರಾಸುರ ಸಂಹಾರ

*"ನಮ್ಮ ಅಜ್ಞಾನ ಮತ್ತು ಅವಿದ್ಯೆಯು ಅದ್ವೈತವು ಹೇಳುವ ಮಾಯೆಯಿಂದಾಗಿಲ್ಲ. ಮಾಯಾವಾದವೇ ಅಸತ್ಯ. ನಮ್ಮ ಅಜ್ಞಾನ ಮತ್ತು ಅಂಧಕಾರಕ್ಕೆ ಮುಖ್ಯ ಕಾರಣನು ಅಸುರ ರಾಜನಾದ ವೃತ್ರಾಸುರನೇ ಆಗಿದ್ದಾನೆ."*

ಪುರಾಣದಲ್ಲಿ ಅಸುರರು ಊರ್ಧ್ವಲೋಕದಲ್ಲಿರುವ ದೇವತೆಗಳ ಮೇಲೆ ದಂಡೆತ್ತಿ ಹೋಗಿ ಸ್ವರ್ಗವನ್ನು ವಶಪಡಿಸಿಕೊಂಡು ಇಂದ್ರನನ್ನು ಸ್ವರ್ಗದಿಂದ ಓಡಿಸಿ ಅವನ ಸಿಂಹಾಸನವನ್ನು ಆಕ್ರಮಿಸಿಕೊಳ್ಳುವರು ಎಂದೂ ಸಹ ತಿಳಿಸಿದೆ. ಇದು ಸತ್ಯವೇ? **ಅಸುರರು ಯಾವಾಗಲಾದರೂ ಇಂದ್ರನನ್ನು ಸೋಲಿಸಿರುವರೇ?**

ವಿರಾಟ್‌ಪುರುಷನ ಶರೀರದಲ್ಲಿ ಯಾವಾಗ ಆದಿತ್ಯರು ಪ್ರಥಮವಾಗಿ ಸೂರ್ಯನನ್ನು ಪ್ರಕಟಮಾಡಿದರೋ (ಮೊದಲು ಪುರುಷನ ಸೂಕ್ಷ್ಮಶರೀರದಲ್ಲಿ) ಆಗ ಕತ್ತಲಿನಲ್ಲಿ ತನ್ನ ಅನುಯಾಯಿಗಳೊಡನೆ ಹಾಯಾಗಿದ್ದ ಅಸುರ ಜ್ಯೇಷ್ಠನಾದ ವೃತ್ರಾಸುರನು ಕೋಪಗೊಂಡು ಕೂಡಲೆ ತನ್ನ ಲೋಕದಿಂದ ಹೊರಬಂದು ಧ್ಯೌಃನ **ಸಕಲ ಚಕ್ರದೇವತೆಗಳನ್ನೂ** ಅಂದರೆ ಮಹಾಸಮುದ್ರದ ಹೊರಗೆ ಇರುವ ಜಲವನ್ನು ಮತ್ತು ಅದರಿಂದ ಹರಿಯುತ್ತಿದ್ದ ಸಪ್ತನದಿಗಳನ್ನೂ, ಸೂರ್ಯನನ್ನೂ ಸೇರಿಸಿ ಕತ್ತಲಿನಲ್ಲಿ ಮುಳುಗಿಸಿದನು. ತನ್ನ ಮಾಯಾಜಾಲದಿಂದ ದೈವೀಜಲದ ಸುತ್ತಲೂ ಪರ್ವತವನ್ನು ಕಟ್ಟಿ ಅಹಿಯ (ಕೈಕಾಲುಗಳಿರುವ ಹೆಬ್ಬಾವಿನ) ರೂಪವನ್ನು ತಾಳಿ ಆ ಪರ್ವತವನ್ನು ಸುತ್ತು ಹಾಕಿಕೊಂಡು ನಿದ್ರಿಸತೊಡಗಿದನು. (ಚಿತ್ರ ನೋಡಿ)

ಊರ್ಧ್ವಮುಖವಾಗಿ ಹರಿಯುತ್ತಿದ್ದ ಉದಕಗಳು ತಟಸ್ಥವಾದವು. ಚಕ್ರದೇವತೆಗಳ ತೇಜಸ್ಸು ನದಿಗಳ ರೂಪದಲ್ಲಿ ಮಹಾಸಮುದ್ರಕ್ಕೆ ಹರಿಯುತ್ತಿದ್ದ ನದಿಗಳು ನಿಂತುಹೋಯಿತು. ವಿರಾಟ್‌ಪುರುಷನ ಶರೀರದಲ್ಲಿ ಅಂಧಕಾರವು ವ್ಯಾಪಿಸಿತು, ಸೂರ್ಯನು ಅಂಧಕಾರದಲ್ಲಿ ಮುಳುಗಿ ಕಾಣದಾದನು, ಸೃಷ್ಟಿಕ್ರಿಯೆಯು ಸ್ಥಗಿತವಾಯಿತು.

**ವಿರಾಟ್ ಪುರುಷನಲ್ಲಿರುವ** ಈ ಸೂರ್ಯನು ನಾವು ಪ್ರತಿನಿತ್ಯ ನೋಡುವ ಸ್ಥೂಲ ಸೂರ್ಯನಲ್ಲ; ಸೂಕ್ಷ್ಮ ಸೂರ್ಯನು.

(ವೃತ್ರಾಸುರನ ಅಂಧಕಾರದಿಂದ ನಮ್ಮೊಳಗಿರುವ ಪುರುಷ ಶರೀರವು ಸಹ ಆವೃತರಾಗಿದೆ. ಆದ್ದರಿಂದ ನಮ್ಮ ಶರೀರದಲ್ಲೂ ಸಹ ಚಕ್ರಗಳು ತಟಸ್ಥವಾಗಿವೆ, ಸೂರ್ಯನು ಕತ್ತಲಿನಲ್ಲಿ ಮುಳುಗಿರುವನು. ನಮ್ಮ ಶರೀರದಲ್ಲಿರುವ ದೇವರ ರಾಜ್ಯವು ಕಾಣದಾಗಿದೆ.)

ವಿ ಯದಹೇರಧ ತ್ವಿಷೋ ವಿಶ್ವೇ ದೇವಾಸೋ ಅಕ್ರಮುಃ ।
ವಿದನ್ಮೃಗಸ್ಯ ತಾನ್ ಅಮಃ ।। (ಋ ೮-೯೩-೧೪ ಸಾಭಾ)
"ಇದಲ್ಲದೇ ಯಾರಿಂದಲೂ ಕೊಲ್ಲಲು ಸಾಧ್ಯವಿಲ್ಲದ ಆ ವೃತ್ರಾಸುರ ತೇಜೋರೂಪವಾದ ಉಚ್ಛ್ವಾಸನಿಶ್ವಾಸಗಳನ್ನು ಕಂಡು ದೇವತೆಗಳು ಹೆದರಿ ನಾನಾದಿಕ್ಕುಗಳಿಗೆ ಓಡಿಹೋದರು. ಮೃಗ (ಕೈ ಕಾಲುಗಳುಳ್ಳ ಹೆಬ್ಬಾವು) ರೂಪಧಾರಿಯಾದ ಆ ವೃತ್ರನ ಸರ್ವತ್ರ ವ್ಯಾಪಿಸಿರುವ ಬಲವು ಅಥವಾ ಭಯವು ಆ ದೇವತೆಗಳನ್ನು ಆವರಿಸಿತು."

ಯಾವಾಗ ಸೃಷ್ಟಿಕ್ರಿಯೆಯು ನಿಂತುಹೋಯಿತೋ ಆಗ ಇಂದ್ರನು ವರುಣ, ಸೋಮ ಮತ್ತು ಅಗ್ನಿಯನ್ನು ದೇವತೆಗಳ ಕಡೆ ಬಂದು ಸೇರಿಕೊಳ್ಳಲು ಕೇಳಿಕೊಳ್ಳುತ್ತಾನೆ. ಯಾಕೆಂದರೆ ಇವರು ಯಾರ ಪಕ್ಷವನ್ನೂ ಸೇರದ ತಟಸ್ಥ ದೇವತೆಗಳಾಗಿದ್ದರು. ವರುಣನು ಜಲಾಭಿಮಾನಿದೇವತೆಯಾದುದರಿಂದ ಅವನು ದೈವೀಜಲಕ್ಕೂ ಮತ್ತು ಅಸುರರ ಜಲಕ್ಕೂ ಸ್ವಾಮಿಯಾಗಿದ್ದಾನೆ. ಈ ಕಾರಣಕ್ಕೆ ವರುಣನನ್ನು ಅಸುರನೆಂದು ಕರೆಯುತ್ತಾರೆ. ವರುಣನಿಗೆ ದಿತಿ ಮತ್ತು ಅದಿತಿ ಇಬ್ಬರು ತಾಯಿಯರೆಂದು ಋಗ್ವೇದವು ಹೇಳುತ್ತದೆ.

ಇದೇ ರೀತಿಯಾಗಿ ಅಗ್ನಿಯೂ ಎರಡೂ ಉದಕದಲ್ಲಿ ಪ್ರಕಟವಾಗುತ್ತಾನೆ ಈ ಕಾರಣಕ್ಕೆ ಅಗ್ನಿಯನ್ನೂ ಸಹ ಅಸುರನೆಂದು ಋಗ್ವೇದವು ಕರೆಯುತ್ತದೆ. ಮತ್ತು ಸೋಮದೇವನು ದೈವೀಜಲದಲ್ಲಿರುತ್ತಾನೆ. ವರುಣನಿಂದ ಸೃಷ್ಟಿಯಾದ ಸೂರ್ಯನನ್ನೂ ಸಹ ಅಸುರನೆಂದು ಕರೆಯುತ್ತಾರೆ. ಏಕೆಂದರೆ ಸೂರ್ಯನೊಳಗೆ ವರುಣನ ಜಲವೇ ಇರುವುದು.

ವರುಣ, ಅಗ್ನಿ ಮತ್ತು ಸೋಮನನ್ನು ಕುರಿತು ಇಂದ್ರನು; 'ನೀವು ಹೀಗೇ ತಮಸ್ಸಿನಲ್ಲಿಯೇ ಮುಳುಗಿದ್ದರೆ ಏನನ್ನೂ ಪಡೆಯಲು ಸಾಧ್ಯವಿಲ್ಲ; ಆದರೆ ದೇವತೆಗಳ ಕಡೆ ಸೇರಿಕೊಂಡು ಯಜ್ಞವನ್ನು ಮಾಡಿದಾಗ, ಇಂದ್ರನಾದ ನಾನು ವೃತಾಸುರ ಸಂಹಾರ ಮಾಡುವೆನು. ಆನಂತರ ಉಂಟಾಗುವ ಸೃಷ್ಟಿಕ್ರಿಯೆಯಿಂದಾಗಿ ವರುಣನು ಸಕಲ ಸೃಷ್ಟಿಯ ರಾಜನಾಗಿ ಆಳಬಹುದೆಂದೂ ಮತ್ತು ಅಗ್ನಿಯು ದೇವತೆಗಳ ದೂತನಾಗಿ ಯಜ್ಞದಲ್ಲಿ ಸಕಲ ದೇವತೆಗಳಿಗೂ ಸೋಮವನ್ನು ತಲುಪಿಸಿ, ತಾನೂ ಸೋಮಪಾನ ಮಾಡಬಹುದೆಂದೂ' ಅವರಿಗೆ ಮನವರಿಕೆ ಮಾಡಿಕೊಡುತ್ತಾನೆ.

ಆಗ ವರುಣ ಮತ್ತು ಅಗ್ನಿಯು ತಮಸ್ಸಿನಲ್ಲಿರುವುದಕ್ಕಿಂತ ದೇವತೆಗಳ ಜೊತೆ ಸೇರಿಕೊಂಡು ಸೃಷ್ಟಿಯನ್ನಾಳಬಹುದೆಂದು ಯೋಚಿಸಿ ಮೂರೂ ದೇವತೆಗಳು ಅಸುರರನ್ನು ತೊರೆದು ದೇವತೆಗಳ ಪಕ್ಷವನ್ನು ಸೇರುತ್ತಾರೆ. ಆನಂತರ ದೇವತೆಗಳು ಪ್ರಥಮವಾಗಿ ಮಾಡಿದ ಸೋಮಯಜ್ಞಕ್ಕೆ ಬೃಹಸ್ಪತಿ ಮತ್ತು ಬ್ರಹ್ಮಣಸ್ಪತಿಗಳು ಋತ್ವಿಜರಾಗುತ್ತಾರೆ. ದೇವತೆಗಳು ಯಜ್ಞವನ್ನು ಮಾಡಿ ತಮ್ಮ ಸಾಮರ್ಥ್ಯವನ್ನು ಇಂದ್ರನಲ್ಲಿ ಸ್ಥಾಪಿಸಿ ಇಂದ್ರನಿಗೆ ಸೋಮವನ್ನರ್ಪಿಸಿದರು.

ಆನಂತರ ಇಂದ್ರನು ಯುದ್ಧೋತ್ಸಾಹದಿಂದ, ಸೋಮರಸಪಾನದಿಂದ ಮದೋನ್ಮತ್ತನಾಗಿ, ಕೋಪದಿಂದ ವೃತಾಸುರನ ಮೇಲೆ ಯುದ್ಧಕ್ಕೆ ಹೋಗಿ ವೃತ್ರಾಸುರನನ್ನು ಸಂಹಾರಮಾಡಿದನು. ದೇವತೆಗಳು ಇಂದ್ರನ ಶೌರ್ಯವನ್ನೂ ಕೋಪವನ್ನೂ ಕಂಡು ನಡುಗಿಹೋದರು ಮತ್ತು ಇಂದ್ರನ ಶ್ರೇಷ್ಟತೆಯನ್ನು ಮನಗಂಡು ಅವನನ್ನು ತಮ್ಮ ಪ್ರಭುವೆಂದು ಸ್ವೀಕರಿಸಿದರು.

## ಇಂದ್ರನ ವೃತಾಸುರ ಸಂಹಾರ

ಸಾಯಣರು ಕೈಕಾಲುಗಳಿರುವ ಹೆಬ್ಬಾವಿನ ಸ್ವರೂಪವಾದ ಅಹಿಯನ್ನು ಮೇಘವೆಂದು ಅರ್ಥೈಸಿದ್ದಾರೆ. ಆದ್ದರಿಂದ ಈ ಸೂಕ್ತದಲ್ಲಿ ಅಹಿ ಎಂದು ಬರುವ ಶಬ್ದಕ್ಕೆ ಕೈಕಾಲುಗಳಿರುವ ಹೆಬ್ಬಾವೆಂದು ಬರೆದಿದ್ದೇನೆ. ಇಂದ್ರ ಮತ್ತು ಅಹಿ (ಲೆವಿಯಾಥನ್ ಭೀಸ್ಟ್) ಯುದ್ಧವನ್ನು ಯಹೂದಿಗಳ ಧರ್ಮಗ್ರಂಥಗಳಲ್ಲಿಯೂ ನೋಡಬಹುದು.

ಇಂದ್ರಸ್ಯ ನು ವೀರ್ಯಾಣಿ ಪ್ರ ವೋಚಂ ಯಾನಿ ಚಕಾರ ಪ್ರಥಮಾನಿ ವಜ್ರೀ। (ಋ ೧–೩೨–೧ ಸಾಭಾ)

ಅಹನ್ನಹಿಮನ್ವಪಸ್ತತರ್ದ ಪ್ರ ವಕ್ಷಣಾ ಅಭಿನತ್ ಪರ್ವತಾನಮ್॥ (ಅಹನ್ ಅಹಿಮ್ ಅನು ಅಪಃ ತತರ್ದ)

"ವಜ್ರಾಯುಧ ಯುಕ್ತನಾದ ಇಂದ್ರನು ಹಿಂದೆ ಯಾವ ಯಾವ ಪರಾಕ್ರಮದ ಕಾರ್ಯಗಳನ್ನು ಸಾಧಿಸಿದನೋ ಆ ಪರಾಕ್ರಮದ ಕಾರ್ಯಗಳನ್ನೆಲ್ಲಾ ಒಂದೊಂದಾಗಿ ವರ್ಣಿಸಿ ಒಡನೆಯೇ ಹೇಳುತ್ತೇನೆ. ಇಂದ್ರನು ಸರ್ಪರೂಪವಾದ 'ಅಹಿ' ಎಂಬ ಅಸುರನನ್ನು ಸೀಳಿದನು. ಆನಂತರ ನೀರುಗಳನ್ನು (ಉದಕ/ಸಲಿಲ) ಹಿಂಸಿಸಿದನು ಮತ್ತು ಪರ್ವತಗಳಲ್ಲಿ ಪ್ರವಹಿಸುವ **ನದಿಗಳಂತೆ ತೂತನ್ನು ಕೊರೆದು ಹರಿಯುವಂತೆ** ಮಾಡಿದನು."

ಅಹನ್ನಹಿಂ ಪರ್ವತೇ ಶಿಶ್ರಿಯಾಣಂ ತ್ವಷ್ಟಾಸ್ಮೈ ವಜ್ರಂ ಸ್ವರ್ಯಂ ತತಕ್ಷ। (ಅಹನ್ ಅಹಿಂ) (ತ್ವಷ್ಟ ಅಸ್ಮೈ)

ವಾಶ್ರಾ ಇವ ಧೇನವಃ ಸ್ಯಂದಮಾನಾ ಅಂಜಃ ಸಮುದ್ರಮವ ಜಗ್ಮುರಾಪಃ॥ (ಸಮುದ್ರಂ ಅವ)(ಜಗ್ಮು ಆಪಃ)

(ಋ ೧–೩೨–೨ ಸಾಭಾ)

ತ್ವಷ್ಟೃ ಪ್ರಜಾಪತಿಯು ವೇಗವಾದ ಗಮನವುಳ್ಳ ವಜ್ರಾಯುಧವನ್ನು ಇಂದ್ರನಿಗಾಗಿ ಮಾಡಿಕೊಟ್ಟನು. ಇಂದ್ರನು ಆ ವಜ್ರಾಯುಧದಿಂದ ಪರ್ವತದಲ್ಲಿ ಆಶ್ರಯವನ್ನು ಪಡೆದ ಸರ್ಪರೂಪವನ್ನು ಧರಿಸಿದ ಅಹಿ ಎಂಬ ಅಸುರನನ್ನು ಸೀಳಿದನು.

ಆನಂತರ ನೀರು (ಸಪ್ತನದಿಗಳು) ಪ್ರವಾಹರೂಪದಿಂದ ಹರಿಯುತ್ತಾ, ಹಸುಗಳು ಆದರದಿಂದ ತಮ್ಮ ಕರುಗಳನ್ನು ವೇಗವಾಗಿ ಹೋಗಿ ಅವನ್ನು ಸೇರುವಂತೆ, ಸಮುದ್ರವನ್ನು ಜಾಗ್ರತೆಯಾಗಿ ಹೋಗಿ ಸೇರಿಕೊಂಡವು.

(ಸಪ್ತಚಕ್ರಗಳಿಂದ ಹರಿಯುನ ಸಪ್ತನದಿಗಳು ಮಹಾಸಮುದ್ರವನ್ನು ಪ್ರವೇಶಿಸಿದವು.)

ವೃಷಾಯಮಾಣೋ ಅವೃಣೀತ ಸೋಮಂ ತ್ರಿಕದ್ರುಕೇಷ್ವಪಿಬತ್ ಸುತಸ್ಯ।(ತ್ರಿಕದ್ರುಕೇಷು ಅಪಿಬತ್)
ಆ ಸಾಯಕಂ ಮಘವಾದತ್ತ ವಜ್ರ–ಮಹನ್ನೇನಂ ಪ್ರಥಮಜಾಮಹೀನಾಮ್।।
(ಮಘವಾ ಆದತ್ತ ವಜ್ರಂ ಅಹನ್ ಏನಂ ಪ್ರಥ'ಮಜಾಮ್ ಅಹೀನಾಮ್) (ಋ ೧–೩೨–೨ ಸಾಭಾ)
ಇಂದ್ರನು ಗೂಳಿಯಂತೆ ಅವಸರದಿಂದ ಸೋಮರಸವನ್ನು ಗುಟುಕಿಸಿದನು (ಪಾನಮಾಡಿದನು). ಜ್ಯೋತಿ, ಗೌ ಮತ್ತು ಆಯು ಎಂಬ ಮೂರು ವಿಧವಾದ ಯಾಗಗಳಲ್ಲಿಯೂ ಹಿಂಡಿದ ಸೋಮರಸವನ್ನು ಕುಡಿದನು. ಧನವಂತನಾದ ಇಂದ್ರನು ವಜ್ರಾಯುಧವನ್ನು ಕೈಗೆ ಎತ್ತಿಕೊಂಡು ಅದರಿಂದ ಅಸುರರಲ್ಲಿ ಜ್ಯೇಷ್ಟನಾದ ಅಹಿಯನ್ನು ಸೀಳಿದನು."

ಯದಿಂದ್ರಾಹನ್ ಪ್ರಥಮಜಾಮಹೀನಾ–ಮಾನ್ಮಾಯಿನಾಮಮಿನಾಃ ಪ್ರೋತ ಮಾಯಾಃ।
ಅತ್ ಸೂರ್ಯಂ ಜನಯನ್ ದ್ಯಾಮುಷಾಸಂ ತಾದೀತ್ನಾ ಶತ್ರುಂ ನ ಕಿಲಾ ವಿವಿತ್ಸೇ।।
(ಯತ್ ಇಂದ್ರ ಅಹನ್ ಪ್ರಥಮಜಾಮ್ ಅಹೀನಾಮ್ ಮಾನ್ ಮಾಯಿನಾಮ್ ಅಮೀನಾಃ) (ಋ ೧–೩೨–೪ ಸಾಭಾ)
ಇಂದ್ರನೇ ಯಾವಾಗ ನೀನು ಅಸುರ ಜ್ಯೇಷ್ಟನಾದ ಅಹಿಯನ್ನು ಮೊದಲು ಕೊಂದೆಯೋ, ಆನಂತರ ವಂಚಕರಾದ ರಾಕ್ಷಸರ ಮಾಯೆಯಿಂದ ಕೂಡಿದ ಮೋಸಗಳನ್ನು ನಾಶಮಾಡಿದೆ. ಆನಂತರ ರಾಕ್ಷಸರ ಮಾಯೆಯಿಂದ ಮುಚ್ಚಿಹೋಗಿದ್ದ ಸೂರ್ಯನನ್ನು, ಉಷಸ್‌ನ್ನು, ದ್ಯುಲೋಕವನ್ನು ಪ್ರಕಾಶಿಸುವಂತೆ ಮಾಡಿದೆ. ಆಗ ನಿನ್ನನ್ನು ವಿರೋಧಿಸಿ ಲೋಕಕ್ಕೆ ಕತ್ತಲನ್ನುಂಟು ಮಾಡಿ ಹಿಂಸಿಸುವ ಶತ್ರುವೇ ನಿನಗೆ ಇರುವುದಿಲ್ಲ.

ಅಹನ್ ವೃತ್ರಂ ವೃತ್ರತರಂ ವ್ಯಂಸ–ಮಿಂದ್ರೋ ವಜ್ರೇಣ ಮಹತಾ ವಧೇನ। (ವ್ಯಂಸಮ್ ಇಂದ್ರೋ)
ಸ್ಕಂಧಾಸೀವ ಕುಲಿಶೇನಾ ವಿವೃಕ್ಣಾ–ಹಿಃ ಶಯತ ಉಪಪೃಕ್ ಪೃಥಿವ್ಯಾಃ।। (ವಿವೃಕ್ಣಾ ಅಹಿಃ) (ಋ ೧–೩೨–೫ ಸಾಭಾ)
ಕೊಡಲಿಯಿಂದ ಮರದ ಕೊಂಬೆಗಳನ್ನು ಕತ್ತರಿಸಿ ಕೆಳಕ್ಕೆ ಬೀಳಿಸುವಂತೆ, ಇಂದ್ರನು ತನ್ನ ವಜ್ರಾಯುಧದಿಂದ ಅತ್ಯಂತ ಅಂಧಕಾರರೂಪದಲ್ಲಿ ಲೋಕವನ್ನು ಆವರಿಸಿದ ವೃತಾಸುರನನ್ನು ಅವನ ತೋಳನ್ನು ಕತ್ತರಿಸಿ ಕೊಂದನು. ಆನಂತರ ವೃತನು ಕತ್ತರಿಸಿದ ಕೊಂಬೆಯಂತೆ ನಿರ್ಜೀವವಾಗಿ ಭೂಮಿಯ ಮೇಲೆ ಮಲಗಿದನು.

ಅಯೋದ್ಧೇವ ದುರ್ಮದ ಆ ಹಿ ಜುಹ್ವೇ ಮಹಾವೀರಂ ತುವಿಬಾಧಮೃಜೀಷಮ್।
ನಾತಾರೀದಸ್ಯ ಸಮೃತಿಂ ವಧಾನಾಂ ಸಂ ರುಜಾನಾಃ ಪಿಪಿಷ ಇಂದ್ರಶತ್ರುಃ।। (ಋ ೧–೩೨–೬ ಸಾಭಾ)
(ತುವಿಬಾಧಮ್ ಋಜೀಷಮ್) (ನ ಅತಾರಿತ್ ಅಸ್ಯ)
ದುರಭಿಮಾನದಿಂದ ಕೂಡಿದ ವೃತನು ತನಗೆ ಪ್ರತಿಕಕ್ಷಿಯಾದ ಯೋಧನೇ ಇಲ್ಲವೆಂಬ ಅಹಂಕಾರದಿಂದ ಶ್ರೇಷ್ಠನೂ ಶೌರ್ಯಯುಕ್ತನೂ ಅನೇಕ ಶತ್ರುಗಳನ್ನು ಹಿಂಸಿಸಿದವನೂ ಮತ್ತು ಶತ್ರುಗಳನ್ನು ದೂರಕ್ಕೆ ಓಡಿಸುವವನೂ ಆದ ಇಂದ್ರನನ್ನು ಯುದ್ಧಕ್ಕೆ ಕರೆದನಷ್ಟೆ. ಆಗ ಇಂದ್ರನ ಆ ವಧೆಯನ್ನು ವೃತನು ತಪ್ಪಿಸಿಕೊಳ್ಳಲಾಗಲಿಲ್ಲ. ಇಂದ್ರ ಶತ್ರುವಾದ ವೃತನು ನದಿಗಳನ್ನು ತಡೆದನು.

ಅಪಾದಹಸ್ತೋ ಅಪೃತನ್ಯದಿಂದ್ರ–ಮಾಸ್ಯ ವಜ್ರಮಧಿ ಸಾನೌ ಜಘಾನ। (ಅಪೃತನ್ಯತ್ ಇಂದ್ರಮ್ ಆಸ್ಯ)
ವೃಷ್ಣೋ ವಧ್ರಿಃ ಪ್ರತಿಮಾನಂ ಬುಭೂಷನ್ ಪುರುತ್ರಾ ವೃತ್ರೋ ಅಶಯದ್ ವ್ಯಸ್ತಃ।। (ಋ ೧–೩೨–೭ ಸಾಭಾ)
ವಜ್ರಾಯುಧದಿಂದ ಅವನ ಕೈಕಾಲುಗಳನ್ನು ಕತ್ತರಿಸಿದ ಮೇಲೂ ಸಹ ವೃತನು ಇಂದ್ರನನ್ನು ಎದುರಿಸಿ ಅವನ ಮೇಲೆ ಯುದ್ಧಮಾಡಲಿಚ್ಛಿಸಿದನು. ಕೈಕಾಲುಗಳಿಲ್ಲದ ಇಂತಹ ವೃತನ ಉನ್ನತವಾದ ಪರ್ವತ ಶಿಖರದಂತಿರುವ ಕತ್ತಿನ ಮೇಲೆ ಇಂದ್ರನು ವಜ್ರಾಯುಧವನ್ನು ಬೀಸಿ ಹೊಡೆದನು. ವೀರ್ಯವಿಲ್ಲದ ಪುರುಷನು, ವೀರ್ಯಸೇಚನ ಸಾಮರ್ಥ್ಯವಿರುವವನಂತೆ ವ್ಯವಹರಿಸಲು ಆಸೆಪಟ್ಟು, ಆ ಯೋಗ್ಯತೆ ಮಾತ್ರ ಇಲ್ಲದಿರುವಂತೆ, ವೃತನೂ ಕೂಡ ಬಿದ್ದು ಮಲಗಿದನು.

ನದಂ ನ ಭಿನ್ನಮಮುಯಾ ಶಯಾನಂ ಮನೋ ರುಹಾಣಾ ಅತಿ ಯಂತ್ಯಾಪಃ।
ಯಾಶ್ಚಿದ್ ವೃತ್ರೋ ಮಹಿನಾ ಪರ್ಯತಿಷ್ಠ'–ತ್ತಾಸಾಮಹಿಃ ಪತ್ಸುತಃಶೀರ್ಬಭೂವ।। (ಋ ೧–೩೨–೮ ಸಾಭಾ)

ಈ ಭೂಮಿಯ ಮೇಲೆ ಸತ್ತು ಮಲಗಿದ ವೃತನನ್ನು, ಮನಸ್ಸನ್ನು ಆಕರ್ಷಿಸುವ ಉದಕಗಳು ನಾನಾ ಕಡೆ ಒಡೆದು ಹೋದ ದಡವುಳ್ಳ ನದಿಯಂತೆ ಸ್ವೇಚ್ಛೆಯಾಗಿಯೂ, ಪ್ರಭೂತವಾಗಿಯೂ ಅವನ ಮೇಲೆ ಹರಿದು ಹೋದವು. ವೃತನು ಬದುಕಿರುವಾಗ ತನ್ನ ಶಕ್ತಿಯಿಂದ ಸರ್ಪರೂಪವನ್ನು ಧರಿಸಿ ನೀರನ್ನು ಸುತ್ತಲೂ ತಡೆದು ನಿಂತಿದ್ದನೋ, ಈಗ ಅದೇ ನೀರಿನಡಿಯಲ್ಲಿ ಮಲಗಿಕೊಂಡವನಾಗಿ ಇದ್ದನು.

ನೀಚವಯಾ ಅಭವದ್ ವೃತ್ರಪುತ್ರೇ-ಂದ್ರೋ ಅಸ್ಯಾ ಅವ ವಧರ್ಜಭಾರ॥
ಉತ್ತರಾ ಸೂರಧರಃ ಪುತ್ರ ಆಸೀದ್ ದಾನುಃ ಶಯೇ ಸಹವತ್ಸಾ ನ ಧೇನುಃ॥॥ (ಋ ೧-೩೨-೯ ಸಾಭಾ)
"ವೃತನನ್ನು ರಕ್ಷಿಸಲು ಅವನ ತಾಯಿಯು ವಜ್ರಾಯುಧದ ಏಟಿನಿಂದ ಮಗನನ್ನು ರಕ್ಷಿಸುವುದಕ್ಕೆ ಬಂದಳು. ಆಗ ಇಂದ್ರನು ಅವಳ ಶಕ್ತಿಯನ್ನು ಕುಗ್ಗಿಸಿ ಅವಳ ದೇಹದ ಕೆಳಭಾಗದಲ್ಲಿ ಬಲವಾಗಿ ಹೊಡೆದನು. ವಜ್ರಾಯುಧದಿಂದ ಅವಳನ್ನು ಹೊಡೆದ ಮೇಲೆ ತಾಯಿ ಮೇಲುಭಾಗಕ್ಕಾದಳು, ಮಗನು ಕೆಳಭಾಗಕ್ಕೆ ಸಿಕ್ಕಿ ಬಿದ್ದು ಮಲಗಿದನು. ಹಸುವು ಕರುವಿನೊಡನೆ ಸೇರಿ ಮಲಗುವ'ಂತೆ ತಾಯಿಯಾದ ದಾನು ಮಗನಾದ ವೃತನೊಡನೆ ಸೇರಿಕೊಂಡು ಮಲಗಿದಳು."
(ದಾನು, ದಿತಿಯ ಇನ್ನೊಂದು ಹೆಸರು. ಅಸುರರ ಇನ್ನೊಂದು ಹೆಸರಾದ ದಾನವರ ತಾಯಿ ದಾನು. ಇಂದ್ರನು ಅದಿತಿಯ ಜ್ಯೇಷ್ಠ ಪುತ್ರನಾಗಿರುವಂತೆಯೇ ವೃತಾಸುರನು ದಿತಿಯ ಜ್ಯೇಷ್ಠ ಪುತ್ರನಾಗಿರುವನು.)

ಅತಿಷ್ಠಂತೀನಾಮನಿವೇಶನಾನಾಂ ಕಾಷ್ಠಾನಾಂ ಮಧ್ಯೇ ನಿಹಿತಂ ಶರೀರಮ್॥
ವೃತ್ರಸ್ಯ ನಿಣ್ಯಂ ವಿ ಚರಂತ್ಯಾಪೋ ದೀರ್ಘಂ ತಮ ಆಶಯದಿಂದ್ರಶತ್ರುಃ॥॥ (ಋ ೧-೩೨-೧೦ ಸಾಭಾ)
"ವೃತಾಸುರನು ನೀರಿನಲ್ಲಿ ಮುಳುಗಿಹೋದುದರಿಂದ ಆತನ ಹೆಸರೇ ಗೊತ್ತಿಲ್ಲದಿರುವಂತೆ ಅವನ ಶರೀರದ ಮೇಲೆ ನೀರು ಹರಿದು ಹೋದವು. ಒಂದು ಕಡೆಯೂ ನಿಲ್ಲದೆ ಮತ್ತು ವಿಶ್ರಾಂತಿರಹಿತವಾಗಿ ಸರ್ವದಾ ಪ್ರವಹಿಸುತ್ತಿರುವ ಉದಕಗಳ ನಡುವೆ ಅವನ ದೇಹವು ಎಸೆಯಲ್ಪಟ್ಟಾಗ ಇಂದ್ರಶತ್ರುವಾದ ವೃತನು ಗಾಡಾಂಧ'ಕಾರವಾದ ಕತ್ತಲಿನಲ್ಲಿ ಮುಳುಗಿಹೋದನು."

ದಾಸಪತ್ನೀರಹಿಗೋಪಾ ಅತಿಷ್ಠನ್ ನಿರುದ್ಧಾ ಆಪಃ ಪಣಿನೇವ ಗಾವಃ॥
ಅಪಾಂ ಬಿಲಮಪಿಹಿತಂ ಯದಾಸೀದ್ ವೃತ್ರಂ ಜಘನ್ವಾ ಅಪ ತದ್ ವವಾರ॥॥ (ಋ ೧-೩೨-೧೧ ಸಾಭಾ)
"ಲೋಕಹಿಂಸಕನಾದ ವೃತನು ಪತ್ನಿಯರ ರೂಪದಲ್ಲಿದ್ದ ಮತ್ತು ವೃತನನ್ನು ರಕ್ಷಕನನ್ನಾಗಿ ಉಳ್ಳ ಉದಕಗಳು ಪಣಿಯೆಂಬ ರಾಕ್ಷಸನಿಂದ ಹಸುಗಳು ತಡೆಯಲ್ಪಟ್ಟಂತೆ ಬಂಧಿತವಾಗಿ ನಿಂತುಕೊಂಡವು. ನೀರುಗಳ ಪ್ರವಾಹದ್ವಾರವಾದ ಬಿಲವನ್ನು ವೃತನು ಮುಚ್ಚಿದಾಗ ಇಂದ್ರನು ಅವನನ್ನು ಕೊಂದು ಆ ದ್ವಾರವನ್ನು ಬಿಡಿಸಿ ಪ್ರವಾಹಕ್ಕೆ ತಡೆಯಿಲ್ಲದಂತೆ ಮಾಡಿದನು."

ಅಶ್ವ್ಯೋ ವಾರೋ ಅಭವಸ್ತದಿಂದ್ರ ಸೃಕೇ ಯತ್ ತ್ವಾ ಪ್ರತ್ಯಹನ್ ದೇವ ಏಕಃ॥
ಅಜಯೋ ಗಾ ಅಜಯಃ ಶೂರ ಸೋಮ-ಮವಾಸೃಜಃ ಸರ್ತವೇ ಸಪ್ತ ಸಿಂಧೂನ್॥॥ (ಋ ೧-೩೨-೧೨ ಸಾಭಾ)
"ಕುದುರೆಯು ಬಾಲದಿಂದ ಅನಾಯಾಸವಾಗಿ ನೊಣವನ್ನು ಓಡಿಸುವಂತೆ ನೀನು ವೃತನನ್ನು ಸುಲಭವಾಗಿ ನಾಶಮಾಡಿದೆ. ಅದ್ವಿತೀಯನಾದ ಇಂದ್ರನೇ, ನೀನು ಪ್ರಕಾಶವನ್ನು ಗೆದ್ದುಕೊಂಡೆ, ಸೋಮರಸವನ್ನು ಸಂಪಾದಿಸಿಕೊಂಡೆ, ಹಸುಗಳನ್ನು (ಜ್ಞಾನವನ್ನು) ಗೆದ್ದುಕೊಂಡೆ. ಸ'ಪ್ತನದಿಗಳನ್ನು ಹರಿಯಲು ಬಿಟ್ಟೆ."

ನಾಸ್ಮೈ ೃ ವಿದ್ಯುನ್ನ ತನ್ಯತುಃ ಸಿಷೇಧ ನ ಯಾಂ ಮಿಹಮಕಿರದ್'ಧ್ರಾದುನಿಂ ಚ॥
ಇಂದ್ರಸ್ಯ ಯದ್ ಯುಯುಧಾತೇ ಅಹಿಶ್ಚೋ-ತಾಪರೀಭ್ಯೋ ಮಘವಾ ವಿ ಜಿಗ್ಯೇ॥॥ (ಋ ೧-೩೨-೧೩ ಸಾಭಾ)
"ಇಂದ್ರನಿಗೂ ವೃತನಿಗೂ ಹೋರಾಟವಾದಾಗ ವೃತನು ಇಂದ್ರನನ್ನು ಕೊಲ್ಲಲು ತನ್ನ ಆಯುಧವಾದ ಮಿಂಚನ್ನು ಪ್ರಯೋಗಿಸಿದನು, ಮಳೆಯನ್ನು ಸುರಿಸಿದನು. ಮೇಘದಂತೆ ಘರ್ಜಿಸಿದನು ಮತ್ತು ಸಿಡಿಲನ್ನು ಪ್ರಯೋಗಿಸಿದನು. ಆದರೆ ಇವು ಯಾವುವೂ ಇಂದ್ರನನ್ನು ಸಮೀಪಿಸಲಾಗಲಿಲ್ಲ. ಯಾವುದರಿಂದಲೂ ಅವನಿಗೆ ತೊಂದರೆಯಾಗಲಿಲ್ಲ. ಅಷ್ಟೇ ಅಲ್ಲದೆ ವೃತನ ಇತರ ಆಯುಧಗಳೊಡನೆಯೂ ಇಂದ್ರನು ಹೋರಾಡಿ ಸಂಪೂರ್ಣವಾಗಿ ಜಯಶೀಲನಾದನು."
(ಇಂದ್ರನು ವೃತಾಸುರನು ನಿರ್ಮಿಸಿದ ಪರ್ವತದಲ್ಲಿ ತೂತನ್ನು ಕೊರೆದು ಸಪ್ತನದಿಗಳನ್ನು ಹರಿಯಲು ಬಿಟ್ಟನು. ಆಗ ಸಪ್ತನದಿಗಳು ಹರಿದು ಮಹಾಸಮುದ್ರವನ್ನು ಸೇರಿಕೊಂಡಿತು.)

ಅಹೇರ್ಯಾತಾರಂ ಕಮಪಶ್ಯ ಇಂದ್ರ ಹೃದಿ ಯತ್ ತೇ ಜಘ್ನುಷೋ ಭೀರಗಚ್ಛತ್॥

ನವ ಚ ಯನ್ನವತಿಂ ಚ ಸ್ರವತೀಃ ಶ್ಯೇನೋ ನ ಭೀತೋ ಅತರೋ ರಜಾಂಸಿ।। (ಋ ೧-೩೨-೧೪ ಸಾಭಾ)
"ಎಲೈ ಇಂದ್ರನೇ, ವೃತನನ್ನು ಕೊಲ್ಲಲು ಪ್ರಯತ್ನಿಸಿದ ನಿನ್ನ ಹೃದಯದಲ್ಲಿ ಭಯವುಂಟಾದಾಗ, ನೀನಲ್ಲದೇ ಇತರ ಯಾವನನ್ನು ತಾನೇ ವೃತಹಂತಕನೆಂದೆಣಿಸಿದೆ? ಯಾವ ಕಾರಣದಿಂದ ನೀನು ತೊಂಬತ್ತೊಂಬತ್ತು ಪ್ರವಾಹ ನದಿಗಳನ್ನು ಶ್ಯೇನ ಪಕ್ಷಿಯಂತೆ ವೇಗವಾಗಿ ಹೋಗಿ ಆ ನದಿಗಳನ್ನು ದಾಟಿದೆ."

ಇಂದ್ರೋ ಯಾತೋಽವಸಿತಸ್ಯ ರಾಜಾ ಶಮಸ್ಯ ಚ ಶೃಂಗಿಣೋ ವಜ್ರಬಾಹುಃ।
ಸೇದು ರಾಜಾ ಕ್ಷಯತಿ ಚರ್ಷಣೀನಾ-ಮರಾನ್ ನ ನೇಮಿಃ ಪರಿ ತಾ ಬಭೂವ।। (ಋ ೧-೩೨-೧೫ ಸಾಭಾ)
"ವಜ್ರಭಾಹುವಾದ ಇಂದ್ರನು ಶತ್ರುನಾಶವಾದ ನಂತರ ಜಂಗಮವಾದುದೂ, ಸ್ಥಾವರವಾದುದೂ, ಕೊಂಬುಗಳಿಲ್ಲದೆ ಸಾಧುವಾದುದೂ, ಕೊಂಬುಳ್ಳದ್ದೂ ಆದ ಪ್ರಾಣಿಗಳಿಂದ ಕೂಡಿದ ಸಕಲ ಲೋಕಕ್ಕೂ ಅಧಿಪತಿಯಾದನು. ಅದೇ ಇಂದ್ರನು ಮಾನವರಿಗೆ ದೊರೆಯಾಗಿದ್ದಾನೆ. ಚಕ್ರದ ಪರಿಧಿಯು ಚಕ್ರದ ಸಮಸ್ತ ಅರಗಳನ್ನೂ ಸುತ್ತುವರೆದಿರುವಂತೆ ಇಂದ್ರನೂ ಸಹ ಸಕಲ ಜಗತ್ತನ್ನೂ ಸುತ್ತುವರೆದು ನಿಂತಿದ್ದಾನೆ."

---

ಇಂತಹ ಪರಮ ಪಾವನ ಮೂರ್ತಿಯಾದ ಇಂದ್ರನು ವೃತಾಸುರ ಸಂಹಾರ ಮಾತ್ರವಲ್ಲದೇ ಅಸುರರು ಸೃಷ್ಟಿಸಿದ್ದ ಪಟ್ಟಣಗಳನ್ನು ನಾಶಮಾಡಿದನು. ಮಾನವರನ್ನು ಆವರಿಸಿರುವ ಅಸುರರೂ ಪೃಥ್ವಿಯಲ್ಲಿ ಸ್ಥಾಪ್ಟಿಸಿದ್ದ ಅವರ ಪಟ್ಟಣಗಳನ್ನು ಪದೇ ಪದೇ ನಾಶ ಮಾಡಿ ತನ್ನನ್ನು ಆರಾಧಿಸುವವರಿಗೆ ಮಾರ್ಗದರ್ಶನವನ್ನು ಮಾಡುವನು. ಈ ರೀತಿಯಾಗಿ ಇಂದ್ರನು ಅನೇಕ ಜನಾಂಗಗಳನ್ನು ನಾಶಮಾಡಿರುವನು. ತನ್ನನ್ನು ಆರಾಧಿಸದ ಭಾರತೀಯರನ್ನು ನಾಶಮಾಡದಿರುವ ಕಾರಣವೇನೆಂದರೆ ಇಲ್ಲಿ ಋಗ್ವೇದ ಮತ್ತು ಕುಂಡಲಿನಿಯೋಗವು ಕಾಪಾಡಲ್ಪಟ್ಟಿದೆ.

ದೇವತೆಗಳ ಜ್ಞಾನವನ್ನು ವಲನೆಂಬ ರಾಕ್ಷಸನು ಅಪಹರಿಸಿ ಗುಹೆಯಲ್ಲಿ ಬಚ್ಚಿಟ್ಟಿದ್ದನು, ಆಗ ಇಂದ್ರನು ಆತನ ಗುಹೆಯನ್ನು ಮುತ್ತಿ ವಲನನ್ನು ಓಡಿಸಿ ಬಿಡಿಸಿದನು. ಇದೇ ರೀತಿಯಲ್ಲಿ ಇಂದ್ರ ಸ್ವರೂಪರಾದ ನಮ್ಮ ಜ್ಞಾನವನ್ನು ವಲನು ಗುಹೆಯಲ್ಲಿ ಬಚ್ಚಿಟ್ಟಿರುವನು.

ತ್ವಂ ವಲಸ್ಯ ಗೋಮತಃ ಪಾವರದ್ರಿವೋ ಬಿಲಂ ।
ತ್ವಾಂ ದೇವಾ ಅಭಿಭ್ಯುಷಸ್ತುಜ್ಯಮಾನಾಸ ಆವಿಷಃ ।। (ಋ ೧-೧೧-೫ ಸಾಭಾ)
"ಎಲೈ ವಜ್ರಾಯುಧಯುಕ್ತನಾದ ಇಂದ್ರನೇ, ವಲನೆಂಬ ಅಸುರನು ದೇವತೆಗಳ ಗೋವುಗಳನ್ನು (ಜ್ಞಾನವೆಂಬ ಗೋವುಗಳು) ಅಪಹರಿಸಿ ಗುಹೆಯಲ್ಲಿ ಬಚ್ಚಿಟ್ಟಿರುವುದನ್ನು ಬಿಡಿಸುವುದಕ್ಕಾಗಿ ಅವನ ಗುಹೆಯನ್ನು ನಿನ್ನ ಸೈನ್ಯ (ಮರುತ್ತರು) ಸಹಾಯದಿಂದ ಮುತ್ತಿ ಬಾಗಿಲನ್ನು ತೆಗೆದು ಗೋವುಗಳನ್ನು ಬಿಡಿಸಿರುವೆ....."

ಅಹಿಯನ್ನು ಸಂಹಾರ ಮಾಡಿ ಕೋಟೆಯಲ್ಲಿ ತೂತುಗಳನ್ನು ಕೊರದು ಸಪ್ತನದಿಗಳು ಮತ್ತೆ ಹರಿಯುವಂತೆ ಮಾಡಿದನು. ಅಂದರೆ ಅಹಿ ಕಟ್ಟಿದ ಕೋಟೆಯನ್ನು ಹಾಗೆಯೇ ಇರುವಂತೆ ಮಾಡಿದನು. ಸಪ್ತನದಿಗಳು ಮತ್ತೆ ಹರಿಯತೊಡಗಿತು. ಅಂಧಕಾರದಲ್ಲಿ ಮುಳುಗಿದ್ದ ಸೂರ್ಯನನ್ನು ವಿರಾಟ್‌ಪುರುಷನ ಸಪ್ತಮಸ್ವರ್ಗದಲ್ಲಿ ಸ್ಥಾಪಿಸಿದನು. ಮತ್ತೆ ವಿಶ್ವಸೃಷ್ಟಿಗೆ ಚಾಲನೆಯನ್ನು ಕೊಟ್ಟನು. ಇಂದ್ರನು ಅಸುರರು ಮತ್ತೆ ಮೇಲಕ್ಕೆ ಬರದಂತೆ ಅಸುರೀಲೋಕದ ಬಿಲವನ್ನು ಮುಚ್ಚಿದನು. ಇಂದ್ರನು ವಿಶ್ವದಲ್ಲಿ ತನ್ನ ಸಾಮ್ರಾಜ್ಯವನ್ನು ಸ್ಥಾಪಿಸಿದನು. ಆದರೆ ವಿಶ್ವದ ಪ್ರತಿರೂಪವಾದ ಪಿಂಡಾಂಡವು ಅಸುರಶಕ್ತಿಗಳಿಂದ ಆವರಿಸಲ್ಪಟ್ಟಿದೆ, ಸಪ್ತನದಿಗಳೂ ಮತ್ತು ದೈವೀಜಲವೂ ಸ್ತಬ್ದವಾಗಿವೆ. ಆದ್ದರಿಂದ ನಮ್ಮಲ್ಲಿರುವ ಅಸುರೀಶಕ್ತಿಗಳನ್ನು ನಾಶಮಾಡಲು ನಾವು ಇಂದ್ರನ ಮೊರೆ ಹೋಗಬೇಕಾಗುತ್ತದೆ.

ಅಪಾಮತಿಷ್ಠದ್ಧರುಣಹ್ವರಂ ತಮೋಽಂತರ್ವೃತ್ರಸ್ಯ ಜಠರೇಷು ಪರ್ವತಃ ।
ಅಭೀಮಿಂದ್ರೋ ನದ್ಯೋ ವವ್ರಿಣ ಹಿತಾ ವಿಶ್ವಾ ಅನುಷ್ಠಾಃ ಪ್ರವಣೇಷು ಜಿಘ್ನತೇ ।।
"ವೃತನು (ಸೈತಾನನು) ಮೂರು ಲೋಕಗಳನ್ನು ಆವರಿಸಿದುದರಿಂದ ನೀರುಗಳ ಪ್ರವಾಹಗಳನ್ನು ತಡೆಯುವ ಅಂಧಕಾರವು ನೆಲೆಸಿತು. ವೃತನ ಉದರಪ್ರದೇಶದ ಮಧ್ಯಭಾಗದಲ್ಲಿ ಮೇಘವು (ಪರ್ವತವು) ಇದ್ದಿತು. ವೃತನು ಹೀಗೆ ನೀರುಗಳನ್ನೆಲ್ಲಾ ಮುಚ್ಚಿದಾಗ ಇಂದ್ರನು ಆ ಸಮಸ್ತ ನೀರನ್ನೂ ಅನುಕ್ರಮವಾಗಿ ಬಿಡಿಸಿ ಸುತ್ತಲೂ ಹರಿಯುವಂತೆ ಮಾಡಿದನು." (೧-೫೪-೧೦ ಸಾ ಭಾ)

ತಮಸ್ವಂತ ಶವಸ ಉತ್ಸವೇಷು ನರೋ ನರಮವಸೇ ತಂ ಧನಾಯ ।
ಸೋ ಅಂಧೇ ಚಿತ್ತಮಸಿ ಜ್ಯೋತಿರ್ವಿದನ್ಮರುತ್ವಾನೋ ಭವತ್ವೀಂದ್ರ ಊತೀ ।। (ಋ ೧-೧೦೦-೮ ಸಾಭಾ)
"ಇಂದ್ರನು ಕಗ್ಗತ್ತಲೆಯನ್ನುಂಟುಮಾಡುವುದೂ, ಚಿತ್ತಭ್ರಾಂತಿಯನ್ನುಂಟುಮಾಡುವುದೂ ಆದ ಘೋರವಾದ ಯುದ್ಧದಲ್ಲೂ ಸಹ ಜಯರೂಪವಾದ ಪ್ರಕಾಶವನ್ನುಂಟುಮಾಡುತ್ತಾನೆ. ಅತ್ಯಂತ ಬಲವನ್ನು ಉಪಯೋಗಿಸಬೇಕಾದ

ಯುದ್ಧದಲ್ಲೂ ಜಯವನ್ನು ತರತಕ್ಕ ಆ ಇಂದ್ರನನ್ನು ಮರೆಹೋಗುತ್ತಾರೆ ಮತ್ತು ರಕ್ಷಣೆಗಾಗಿಯೂ ಧನಕ್ಕಾಗಿಯೂ ಸಹ ಅವನನ್ನು ಮರೆಹೋಗುತ್ತಾರೆ. ಮರುತ್ತುಗಳೊಡನೆ ಕೂಡಿಕೊಂಡಿರುವ ಇಂದ್ರನು ನಮಗೆ ರಕ್ಷಕನಾಗಿರಲಿ."

ಆದ್ದರಿಂದ ಇಂದ್ರನು ಅಸುರ ಶತ್ರುವೂ, ಅಂಧಕಾರದ ನಾಶಕನೂ ಮತ್ತು ಸಕಲ ಜ್ಞಾನವನ್ನು ಅನುಗ್ರಹಿಸುವವನೂ ಆಗಿದ್ದಾನೆ.

ಅಸುರರು ವಿರಾಟ್‌ಪುರುಷನ ಶರೀರವನ್ನು ಆಕ್ರಮಿಸಿಕೊಂಡಿದ್ದರು ಆದರೆ ಇಂದ್ರನು ಅವರನ್ನು ಸೋಲಿಸಿ ಪಾತಾಳಕ್ಕೆ ತಳ್ಳಿ ಪಾತಾಳದ ಬಿಲವನ್ನು ಮುಚ್ಚಿರುವನು. ಇದೇ ರೀತಿ ಅಸುರರು ವಿರಾಟ್‌ಪುರುಷನ ತದ್ರೂಪವಾದ ಪಿಂಡಾಂಡವನ್ನು ಆಕ್ರಮಿಸಿಕೊಂಡಿರುವರು. ಆದರೆ ನಮ್ಮ ಆತ್ಮ ಅಷ್ಟದಳ ಕಮಲದ ಒಳಗೆ ಮತ್ತು ಇಂದ್ರನು ಹೃದಯಗುಹೆಯಲ್ಲಿರುವುದರಿಂದ ಅಸುರರಿಂದ ಆವರಿಸಲ್ಪಟ್ಟಿಲ್ಲ. ಕೇವಲ ಆತ್ಮನು ಭ್ರಾಂತಿಯಿಂದ ಆವರಿಸಲ್ಪಟ್ಟಿರುವನು.

ಈ ಮೊದಲು ಇಂದ್ರನನ್ನು ಯಾರಾದರೂ, ಯಾವಾಗಲಾದರೂ ಸೋಲಿಸಿರುವರೇ ನೋಡೋಣ.

ತ್ರಿವಿಷ್ಟಿಧಾತು ಪ್ರತಿಮಾನಮೋಜಸಸ್ತಿಸ್ರೋ ಭೂಮಿರ್ನೃಪತೇ ತ್ರೀಣಿ ರೋಚನಾ ।
ಅತೀದಂ ವಿಶ್ವಂ ಭುವನಂ ವವಕ್ಷಿತಾಶತ್ರುರಿಂದ್ರ ಜನುಷಾ ಸನಾದಸಿ ।।
ಮಾನವರ ಪಾಲಕನಾದ ಎಲೈ ಇಂದ್ರನೇ, ಮೂರು ಪಡಿಗಳಿಂದ ಹೊಸೆದ ಹಗ್ಗವು ಬಲವಾಗಿರುವಂತೆ ನೀನು ಕಲ ಮಾನವರ ಬಲಕ್ಕೂ ಮಾದರಿಯಾದ ಪ್ರತಿನಿಧಿಯಾಗಿದ್ದೀಯೆ. ಅಲ್ಲದೇ ನೀನು ಮೂರು ಲೋಕಗಳನ್ನು ಮೂರು ತೇಜಸ್ಸಗಳನ್ನೂ (ಅಗ್ನಿ, ವಾಯು, ಸೂರ್ಯ) ಅತಿಶಯವಾಗಿ ಧಾರಣೆಮಾಡಲಚ್ಛಿಸುತ್ತೀಯೆ. ಈ ಸಕಲ ಭೂತಜಾತಗಳನ್ನೂ ಸಹ ಧರಿಸಲು ಶಕ್ತನಾಗಿದ್ದೀಯೆ. ಎಲೈ ಇಂದ್ರನೇ, ನೀನು ಹುಟ್ಟಿದ ಮೊದಲುಗೊಂಡು ಅತಿ ಧೀರ್ಘಕಾಲದಿಂದಲೂ ನೀನು ನಿನ್ನನ್ನು ಸೋಲಿಸುವ ಶತ್ರುರಹಿತನಾಗಿದ್ದೀಯೆ." (೧–೧೦೨–೮ ಸಾ ಭಾ)

ಬಿಭಯಾ ಹಿ ತ್ವಾವತ ಉಗ್ರಾದಭಿಪ್ರಭಂಗಿಣಃ ।
ದಸ್ಮಾದಹಮೃತೀಷಹಃ ।। (ಋ ೮–೪೫–೩೫ ಸಾ ಭಾ)
"ಎಲೈ ಇಂದ್ರನೇ, ಅತ್ಯಧಿಕವಾದ ಬಲವುಳ್ಳವನೂ, ಶತ್ರುಗಳ ಸದೆಬಡಿಯುವವನೂ, ಪಾಪನಾಶಕನೂ ಶತ್ರುಗಳ ಹಿಂಸೆಯನ್ನು ತಡೆಯಬಲ್ಲವನೂ ಆದ ನಿನ್ನಂತಹ ಮಹಾತ್ಮನಿಗೆ ನಾನು ಖಂಡಿತ ಬೆದರುತ್ತೇನೆ."

ತ್ವಂ ಹಿ ಷ್ಮಾ ಚ್ಯಾವಯನ್ನಚ್ಯುತಾನ್ಯೇಕೋ ವೃತಾ ಚರಸಿ ಜಿಘ್ನ ಮಾನಃ ।
ತವ ದ್ಯಾವಾಪೃಥಿವೀ ಪರ್ವತಾಸೋಽನು ವ್ರತಾಯ ನಿಮಿತೇವ ತಸ್ಥುಃ ।। (ಋ ೩–೩೦–೪ ಸಾ ಭಾ)
"ಎಲೈ ಇಂದ್ರನೇ, ನೀನು ಯಾರ ಸಹಾಯವೂ ಇಲ್ಲದೇ ನೀನೊಬ್ಬನೇ ಸ್ಥಿರವಾಗಿ ನೆಲೆಸಿದ ಅಸುರರನ್ನು ಅವರವರ ಸ್ಥಾನಗಳಿಂದ ಉರುಳಿಸುತ್ತಲೂ, ಪಾಪಾತ್ಮಕರನ್ನು ಹಿಂಸಿಸುತ್ತಲೂ ಸಂಚರಿಸುತ್ತೀಯಲ್ಲವೇ? ನಿನ್ನ ಆಜ್ಞೆಯನ್ನು ಪಾಲಿಸಿ ದ್ಯಾವಾಪೃಥ್ವಿಗಳೂ, ಪರ್ವತಗಳೂ ನಿಶ್ಚಲವಾಗಿ ನೆಲೆಸಿವೆ."

ಇಂತಹ ಪರಾಕ್ರಮಿಯಾದ ಇಂದ್ರನನ್ನು ಸೋಲಿಸುವವರು ಯಾರೂ ಇಲ್ಲ. ಮಹಾಮಹಿಮನಾದ ಇಂದ್ರದೇವರ ದರ್ಶನವನ್ನು ಪಡೆಯಲು ನಾವು ಏನು ಮಾಡಬೇಕು? ಮಾನವರಲ್ಲಿ ದೇವತೆಗಳು ಪ್ರಕಟವಾಗಬೇಕಾದರೆ, ಸ್ವರ್ಗದ ಮೂರು ತೇಜಃಪುಂಜಗಳು ನಮ್ಮೊಳಗೆ ಜಾಗೃತವಾಗಬೇಕಾಗಿದೆ. ಈ ತೇಜಸ್ಸುಗಳ ಜೊತೆಯಲ್ಲಿ ಮರುತ್ತರು ಪ್ರಕಟವಾಗುವರು.

".....ಯಜ್ಞದಲ್ಲಿ ಮೂರು ತೇಜಸ್ಸುಗಳು ಸ್ಥಿತವಾಗಿವೆ...." (೫–೨೯–೧ ಸಾಭಾ)
ಯಾವುದು ಈ ತೇಜಃಪುಂಜಗಳು? ಅದುವೇ ಅಗ್ನಿ, ವಾಯು ಮತ್ತು ಸೂರ್ಯ.

ಯದ್ಗಾಯತ್ರೇ ಅಧಿ ಗಾಯತ್ರಮಾಹಿತಂ ತ್ರೈಷ್ಟುಭಾದ್ವಾ ತ್ರೈಷ್ಟುಭಂ ನಿರತಕ್ಷತ ।
ಯದ್ವಾ ಜಗಜ್ಜಗತ್ಯಾಹಿತಂ ಪದಂ ಯ ಇತ್ತದ್ವಿದುಸ್ತೇ ಅಮೃತತ್ವಮಾನುಶೂಃ ।। (ಋ ೧–೧೬೪–೨೩ ಸಾ ಭಾ)
"ಪೃಥ್ವಿಯ ಮೇಲೆ ಅಗ್ನಿಯು ಸ್ಥಾಪಿತವಾಗಿರುವ ಯಾವ ಸತ್ಯವುಂಟೊ, ಅಂತರಿಕ್ಷದಲ್ಲಿ ವಾಯುವಿನ ಸ್ಥಾನವನ್ನು ದೇವತೆಗಳು ನಿರ್ಮಿಸಿರುವ ಯಾವ ಸತ್ಯವುಂಟೋ, ಅಥವಾ ದ್ಯುಲೋಕದಲ್ಲಿ ಆದಿತ್ಯನ ಸ್ಥಾನವು ಸ್ಥಾಪಿತವಾಗಿರುವ ಯಾವ ಸತ್ಯವುಂಟೊ, ಇದೆಲ್ಲವನ್ನೂ ತನ್ನ ಜ್ಞಾನದಿಂದ ತಿಳಿಯುವ ಪುರುಷನು ಮರಣರಹಿತವಾದ ಸ್ಥಾನವನ್ನು ಪಡೆಯುತ್ತಾನೆ."

ಯಾವಾಗ ನಮ್ಮ ಪಿಂಡಾಂಡದಲ್ಲಿ ಅಗ್ನಿ, ಸೂರ್ಯ ಮತ್ತು ವಾಯು ದೇವತೆಗಳು ಪ್ರಕಟರಾಗುತ್ತಾರೋ ಆಗ ಮಾತ್ರ ಇಂದ್ರದೇವರ ಮತ್ತು ಇತರ ದೇವತೆಗಳು ದರ್ಶನವನ್ನು ಪಡೆಯಬಹುದು. ಯಜ್ಞದ ಮುಖಾಂತರ ಮಾನವರು

ಭಗವಂತನನ್ನು ಆರಾಧಿಸುವುದೇ ಶ್ರೇಷ್ಟವಾದ ಮಾರ್ಗವಾಗಿದೆ. ತದನಂತರ ಅಂತರ್ಯಜ್ಞದ ಮೂಲಕ ಇಂದ್ರನನ್ನು ಆರಾಧಿಸಿದಾಗ ಇಂದ್ರನೇ ನಮಗೆ ಅಮರತ್ವದ ದಾರಿಯನ್ನು ತೋರಿಸುವನು.

ಈ ಮೊದಲೇ ಓದಿದ ಹಾಗೆ ಮನಸ್ಸಿನ ಭಾಷೆ ಚಿತ್ರರೂಪದಲ್ಲಿರುತ್ತದೆ. ಉಪಾಸಕನು ಯಾವುದೇ ರೂಪವನ್ನು ತನ್ನ ಮನಸ್ಸಿನಲ್ಲಿ ಕಲ್ಪಿಸಿಕೊಂಡು ಯಜ್ಞವನ್ನು ಮಾಡಿದಾಗ, ಆ ರೂಪದಲ್ಲಿಯೇ ಇಂದ್ರನು ದರ್ಶನವನ್ನು ಕೊಡುತ್ತಾನೆ. ಆದರೆ ನಾವು ಪುರಾತನ ಋಷಿಗಳು ಯಾವ ರೂಪದಿಂದ ಇಂದ್ರನನ್ನು ದರ್ಶಸಿದರೋ ಆ ರೂಪದಲ್ಲಿಯೇ ದರ್ಶನವನ್ನು ಕೊಡುವಂತೆ ಪ್ರಾರ್ಥಿಸಬೇಕು. ಅದರಲ್ಲಿಯೂ ಬಹು ಮುಖ್ಯವಾಗಿ ಸಾಧಕರಿಗೆ ವೃತ್ರಾಸುರನ ವಧೆಯು ಬಹಳ ಪ್ರಮುಖವಾಗಿದೆ. ಆತನ ಸಂಹಾರವಾಗದೇ ನಮ್ಮಲ್ಲಿರುವ ಅಂಧಕಾರವು ನಶಿಸುವುದಿಲ್ಲ, ಪರಿಪೂರ್ಣಜ್ಞಾನವನ್ನು ಪಡೆಯಲಾಗುವುದಿಲ್ಲ.

ಮಾ ಚಿದನ್ಯದ್ವಿ ಶಂತಸ ಸಖಾಯೋ ಮಾ ರಿಷಣ್ಯತ ।
ಇಂದ್ರಮಿತ್ಸ್ತೋತಾ ವೃಷಣಂ ಸಚಾ ಸುತೇ ಮುಹುರುಕ್ಥಾ ಚ ಶಂಸತ । (ಋ ೮-೧-೧ ಸಾ ಭಾ)
"ಎಲೈ ಮಿತ್ರರೆ, ಇಂದ್ರಸ್ತುತಿಗಿಂತಲೂ ಬೇರೆಯಾದ ಯಾವ ಸ್ತುತಿಯನ್ನೂ ಖಂಡಿತವಾಗಿ ಪಠಿಸಲೇಬೇಡಿರಿ. ನಿಮಗೆ ನೀವೇ ತೊಂದರೆಯನ್ನುಂಟುಮಾಡಿಕೊಳ್ಳಬೇಡಿರಿ. ಸೋಮರಸವು ಹಿಂಡಲ್ಪಟ್ಟಾಗ ಕಾಮವರ್ಷಕನಾದ ಕೇವಲ ಇಂದ್ರನನ್ನೇ ಒಟ್ಟಿಗೆ ಕೂಡಿಕೊಂಡು ಸ್ತುತಿಸಿರಿ. ಇಂದ್ರೋದ್ದಿಷ್ಟವಾದ ಉಕ್ಥಗಳನ್ನು ಪುನಃ ಪುನಃ ಪಠಿಸಿರಿ."

ವಿರಾಟ್‌ಪುರುಷನ ಹೃದಯದಲ್ಲಿ ಸೂಕ್ಷ್ಮ ಸೂರ್ಯನನ್ನು ಆದಿತ್ಯರು ಮೊದಲಬಾರಿಗೆ ಸೃಷ್ಟಿಸಿದಾಗ ಕಹಿ ಮತ್ತು ಉಪ್ಪಿ ಸಮುದ್ರದಲ್ಲಿದ್ದ ಅಸುರರು ಸೂರ್ಯನ ತೇಜಸ್ಸನ್ನು ಸಹಿಸಲಾರದೆ ಕೋಪಗೊಂಡು ಅಸುರ ರಾಜನಾದ ವೃತ್ರಾಸುರನು ಸೂರ್ಯನನ್ನು ಅಂಧಕಾರ ಮತ್ತು ಅಜ್ಞಾನದಿಂದ ಆವರಿಸಿಕೊಂಡನು. ಕ್ಷೀರಸಮುದ್ರದಲ್ಲಿದ್ದ ಧೌಃ ಲೋಕವನ್ನು ಆವರಿಸಿಕೊಂಡನು. ಚಕ್ರಗಳಂದ ಹರಿಯುತ್ತಿದ್ದ ನದಿಗಳು ಸ್ತಬ್ಧವಾದವು, ಕ್ಷೀರಸಮುದ್ರವು ತಟಸ್ಥವಾಯಿತು ಮತ್ತು ಸೃಷ್ಟಿಕ್ರಿಯೆಯು ಸ್ಥಗಿತವಾಯಿತು ಹಾಗು ದೇವತೆಗಳು ದಿಕ್ಕಾಪಾಲಾಗಿ ಓಡಿದರು.

ಆಗ ಇಂದ್ರನು ದೇವತೆಗಳಿಗೆ ಅಭಯವನ್ನು ಕೊಟ್ಟು ಸೋಮಯಾಗವನ್ನು ಮಾಡಿ ಸೋಮರಸವನ್ನು ಅವನಿಗೆ ಅರ್ಪಿಸಲು ಹೇಳಿದನು. ದೇವತೆಗಳು ಸೋಮಯಾಗವನ್ನು ಮಾಡಿ ಇಂದ್ರನಿಗೆ ಅರ್ಪಿಸಿದಾಗ, ಅದನ್ನು ಕುಡಿದು ಮಧೋನ್ಮತ್ತನಾಗಿ ವೃತ್ರಾಸುರನ ಮೇಲೆ ಯುದ್ಧಕ್ಕೆ ಹೋಗಿ, ಅವನನ್ನು ಸಂಹರಿಸಿ ಪಾತಾಳಕ್ಕೆ ತಳ್ಳಿ ದ್ವಾರವನ್ನು ಬಿರುಡೆಯಿಂದ ಮುಚ್ಚಿದನು. ಅಂಧಕಾರದಲ್ಲಿದ್ದ ಸೂರ್ಯನನ್ನು ಅಂತರಿಕ್ಷದಲ್ಲಿ ಅಂದರೆ ಪುರುಷನ ಶಿರಸ್ಸಿನಲ್ಲಿ ಸ್ಥಾಪಿಸಿ ಸೃಷ್ಟಿ ಕಾರ್ಯಕ್ಕೆ ಚಾಲನೆಯನ್ನು ಕೊಟ್ಟನು. ಬ್ರಹ್ಮಾಂಡದಲ್ಲಿ ಅಸುರರ ಹಾವಳಿಯು ನಿಂತುಹೋಯಿತು.

ಹೀಗೆಯೇ ನಮ್ಮ ಪಿಂಡಾಂಡವೂ ಸಹ ವೃತ್ರಾಸುರನಿಂದ ಆವೃತವಾಗಿದೆ. ಅದಕ್ಕಾಗಿಯೇ ನಮ್ಮೊಳಗಡೆ ಇರುವ ಸೂರ್ಯಾದಿ ದೇವತೆಗಳನ್ನು ನೋಡಲು ಆಗುತ್ತಿಲ್ಲ. ನಾವೆಲ್ಲರೂ ಅಜ್ಞಾನ ಮತ್ತು ಅಂಧಕಾರದಿಂದ ಬಂದಿಸಲ್ಪಟ್ಟಿದ್ದೇವೆ. ಅಸುರರಿಂದ ತಪ್ಪಿಸಿಕೊಳ್ಳಲು ನಾವೂ ಸಹ ಅಗ್ನಿಹೋತ್ರವನ್ನು ಮಾಡಿ ಸೋಮರಸವನ್ನು ಇಂದ್ರನಿಗೆ ಅರ್ಪಿಸಬೇಕಿದೆ. ಆಗ ಇಂದ್ರನು ನಮಗೆ ಸಂಪೂರ್ಣ ಜ್ಞಾನವನ್ನು ಅನುಗ್ರಹಿಸಿ ತನ್ನ ಬೆಳಕಿನ ಲೋಕಕ್ಕೆ ಕರೆದುಕೊಂಡು ಹೋಗುವನು.

# ಅಧ್ಯಾಯ ೧೫– ವಾಗ್ದೇವತೆಗಳು

ಮಹಾಸಮುದ್ರವು ಊರ್ಧ್ವಮುಖವಾಗಿ ಮತ್ತು ಕೆಳಮುಖವಾಗಿ ಹರಿಯುತಿತ್ತು. ಅದಿತಿಯು ತನ್ನ ಮಕ್ಕಳೊಂದಿಗೆ ಸ್ವಸ್ಥಾನಕ್ಕೆ ಹೋದ ಮೇಲೆ ಏನಾಯಿತು? ಹಾಗಾದರೆ ಮುಂದೆ ಸೃಷ್ಟಿಕ್ರಿಯೆಯು ಯಾರಿಂದ ಶುರುವಾಯಿತು? ದೇವತೆಗಳು ಹೇಗೆ ಮತ್ತೆ ಪ್ರಕಟರಾದರು? ಋಗ್ವೇದವು ಈ ಬಗ್ಗೆ ಏನು ಹೇಳುತ್ತದೆ?

ಅಗ್ನಿಯು ದೇವತೆಗಳ ಮತ್ತು ಮಾನವರ ಮಧ್ಯೆ ದೇವದೂತನಾಗಿರುವಂತೆ; ನಮ್ಮ ವಾಕ್, ದೇವತೆಗಳ ಮತ್ತು ಮಾನವರ ಮಧ್ಯೆ ಸಂಭಾಷಣೆಯ ಸಾಧನವಾಗಿದೆ. ಇಂತಹ ಪ್ರಮ ಪವಿತ್ರವಾದ ವಾಕ್‌ನ ಅಧಿದೇವತೆಗಳೇ ವಾಗ್ದೇವತೆಗಳು.

ವಿಶ್ವಮನಸ್ಸಿನಲ್ಲಿ ಸಕಲ ದೇವತೆಗಳ ಅಂಶವಿದ್ದರೂ, ಅದಿತಿಗೆ ಜ್ಯೇಷ್ಟಪುತ್ರನಾದ ಆದಿಪುರುಷನಾದ ಇಂದ್ರನು ಜ್ಯೋತಿರೂಪನಾಗಿ ಜನ್ಮ ತಾಳದ ಮೇಲೆ ಅವನು ಪ್ರಥಮಬಾರಿಗೆ ಮಾನವರೂಪವನ್ನು ಪ್ರಕಟಮಾಡಿದನು. ಜ್ಯೋತಿಸ್ವರೂಪನಾದ ಇಂದ್ರನು ಮಾನವ ಆಕಾರ ಮತ್ತು ರೂಪವನ್ನು ತಾಳದ ಪ್ರಕ್ರಿಯೆಯ ದೇವತೆಯೇ ತ್ವಷ್ಟೃದೇವತೆ ಆಗಿದ್ದಾನೆ. ಈತನು ಸರ್ವರಿಗೂ ಆಕಾರ ಮತ್ತು ರೂಪವನ್ನು ಕೊಡುತ್ತಾನೆ. ತ್ವಷ್ಟಾದೇವತೆಯು ಪ್ರಕಟನಾಗಿ ಆನಂತರ ಮಹಾಸಮುದ್ರದಿಂದ ತುಂಬಿದ್ದ ಸಲಿಲಕ್ಕೆ ವಿರಾಟ್‌ಪುರುಷನ ರೂಪವನ್ನು ಕೊಟ್ಟನು. ಆನಂತರ ವಿರಾಟ್‌ಪುರುಷನು ಸ್ವತಂತ್ರ ವ್ಯಕ್ತಿತ್ವವನ್ನು ಹೊಂದಿದನು.

ಹಾಗೆಯೇ ಇಂದ್ರನು ಮಾನವರೂಪವನ್ನು ಧರಿಸಿದ ಮೇಲೆಯೇ ಇಂದ್ರನ ವಾಕ್‌ಶಕ್ತಿಯಾಗಿ ವಾಗ್ದೇವತೆಗಳು ಪ್ರಕಟರಾದರು. ಅವ್ಯಕ್ತಸ್ವರೂಪರಾದ ಇವರೆಲ್ಲರೂ ವಾಯುವನ್ನು ತಮ್ಮ ಶರೀರವನ್ನಾಗಿ ಧರಿಸಿ ಮಾನವರೂಪದಲ್ಲಿರುವರು. ಇಂದ್ರ ಜನನವಾದ ಮೇಲೆ ಅವನ ವಾಕ್‌ಶಕ್ತಿಯಾಗಿ ಬೃಹಸ್ಪತಿ, ಬ್ರಹ್ಮಣಸ್ಪತಿ, ಬ್ರಹ್ಮ, ಸರಸ್ವತಿ, ಮಹಿ, ಭಾರತಿ ಮತ್ತು ಇಳಾ ದೇವದೇವಿಯರು ಪ್ರಕಟರಾದರು. ಆದ್ದರಿಂದ ಇಂದ್ರನೇ ಆದಿಪುರುಷನಾಗಿದ್ದಾನೆ. ಈಗ ಅವರ ಮಹಿಮೆಯನ್ನು ತಿಳಿಯೋಣ.

- **ತ್ವಷ್ಟಾ:** ಪ್ರಥಮವಾಗಿ ಪ್ರಕಟವಾದ ದೇವತೆ. ಚಂದ್ರಮಂಡಲ ಮಧ್ಯದಲ್ಲಿರುವ ಈತನು ವಿಶ್ವದಲ್ಲಿರುವ ಸಕಲಕ್ಕೂ ಮತ್ತು ಸಕಲ ಜೀವರಾಶಿಗಳಿಗೂ ರೂಪವನ್ನು ಮತ್ತು ಆಕಾರವನ್ನು ಅನುಗ್ರಹಿಸುವನು.
- **ವಿರಾಟ್‌ಪುರುಷ:** ಮಹಾಸಮುದ್ರವೇ ಈತನ ಶರೀರವಾಗಿದೆ ಅಥವಾ ಮಹಾಸಮುದ್ರದಿಂದಾದ ವಿಶ್ವವೇ ವಿರಾಟ್ ಪುರುಷನಾಗಿದ್ದಾನೆ..

ಈ ಕೆಳಗಿನ ದೇವತೆಗಳು ವಾಕ್ಕನ್ನು ಪ್ರತಿನಿಧಿಸುವುದರಿಂದ ಅವರನ್ನು ವಾಗ್ದೇವತೆಗಳೆಂದು ಕರೆಯುತ್ತಾರೆ.

- **ಬ್ರಹ್ಮ:** ಈತನು ಕುಂಡಲಿನಿ ಮಾತೆಯ ಮಂತ್ರ ಸಂಪತ್ತಿನ ಅಧಿಪತಿಯಾಗಿದ್ದಾನೆ. ಬ್ರಹ್ಮನು ಕಮಲದ ಮಧ್ಯೆ ಕುಳಿತಿರುವನು. ಆದರೆ ತಾನಾಗಿ ಏನನ್ನೂ ಸೃಷ್ಟಿಸುವುದಿಲ್ಲ. ಪ್ರಪಂಚದ ವಿಷಯಗಳಲ್ಲಿ ಮುಳುಗಿರುವ ಮಾನವರಲ್ಲಿ ಅಧೋಮುಖನಾಗಿರುತ್ತಾನೆ.
- **ಬೃಹಸ್ಪತಿ:** ಮೊದಲು ಅಂತರಿಕ್ಷದಲ್ಲಿ ಉತ್ಪನ್ನನಾಗಿ, ಬ್ರಹ್ಮನನ್ನು ಜಾಗೃತಮಾಡಿ ಅವನಲ್ಲಿರುವ ಮಂತ್ರಭಂಡಾರದಿಂದ ಮಂತ್ರಗಳನ್ನು ತೆಗೆದುಕೊಂಡು ಪಠಿಸಿ ಆದಿತ್ಯರನ್ನು ಜಾಗೃತಮಾಡುವನು. ಆದ್ದರಿಂದ ಬೃಹಸ್ಪತಿಯನ್ನು ಋತ್ವಿಜನೆಂದು ಕರೆಯುತ್ತಾರೆ.
- **ಬ್ರಹ್ಮಣಸ್ಪತಿ:** ತ್ವಷ್ಟ್ರಾ ದೇವತೆಯಿಂದ ಜನನವನ್ನು ಪಡೆದಿರುವನು. ಬ್ರಹ್ಮಣಸ್ಪತಿಯು ಮಂತ್ರಗಳಿಗೆ ರೂಪ, ಆಕಾರ ಮತ್ತು ಚೈತನ್ಯವನ್ನು ಕೊಡುವನು. ಬ್ರಹ್ಮಣಸ್ಪತಿಯು ದೇವತೆಗಳಿಗೆ ಚೈತನ್ಯವನ್ನು ತುಂಬುವನು. ಬ್ರಹ್ಮಣಸ್ಪತಿಯು ವಾಗ್ದೇವತೆಗಳ ಅಧಿಪತಿಯಾದುದರಿಂದ ಅವನನ್ನು ಗಣಪತಿ ಎಂದು ಕರೆಯುತ್ತಾರೆ. ಈತನನ್ನೂ ಸಹ ಋತ್ವಿಜನೆಂದು ಕರೆಯುವರು.
- **ಸರಸ್ವತಿ:** ಬ್ರಹ್ಮನ ಮಂತ್ರಭಂಡಾರದಲ್ಲಿರುವ ಅನಂತವಾದ ಜ್ಞಾನಭಂಡಾರದ ಅಧಿದೇವಿಯಾಗಿದ್ದಾಳೆ.
- **ಮಹಿ, ಭಾರತಿ ಮತ್ತು ಇಳಾ:** ಈ ವಾಗ್ದೇವಿಯರು ಕಂಠ, ನಾಲಗೆಯ ಹಿಂದೆ ಮತ್ತು ಎರಡು ಹುಬ್ಬಿನ ಮಧ್ಯೆ ನೆಲೆಸಿರುವರು. ವೈಖರಿ ವಾಣಿಯ ಅಧಿದೇವತೆಗಳಾಗಿದ್ದಾರೆ.

ಅದಿತಿಯು ಆದಿತ್ಯರಿಗೆ ಜನನವನ್ನು ಕೊಟ್ಟನಂತರ ಮತ್ತು ಇತರ ದೇವತೆಗಳು ಪ್ರಕಟವಾದ ನಂತರ ಅದಿತಿಯು ತನ್ನ ಮೂಲ ಸ್ಥಾನಕ್ಕೆ ಆದಿತ್ಯರ ಜೊತೆ ಹಿಂತಿರುಗುವಳು.ಾನಂತರ ಮೊದಲು ಬೃಹಸ್ಪತಿಯು ಸೃಷ್ಟಿಕಾರ್ಯಕ್ಕಾಗಿ ದ್ಯೌಃನ ಬೆಳಕಿನ ಲೋಕದಲ್ಲಿ ಪ್ರಕಟನಾದನು. ಬೃಹಸ್ಪತಿಯನ್ನು ಋಗ್ವೇದವು ಋತ್ವಿಜನೆಂದು

ಕರೆಯುತ್ತದೆ. ಈತನು ವಿರಾಟ್‌ಪುರುಷನ ಶಿರಸ್ಸಿನಲ್ಲಿ ಪ್ರಕಟನಾಗಿ ಮಂತ್ರಗಳನ್ನು ಪಠಿಸಿ ಮೊದಲು ಬ್ರಹ್ಮ ಎಂದು ಕರೆಯಲ್ಪಡುವ ಶಬ್ದಬ್ರಹ್ಮನನ್ನು ಜಾಗೃತಮಾಡುತ್ತಾನೆ.

ಬೃಹಸ್ಪತಿ ಪ್ರಥಮಂ ಜಾಯಮಾನೋ ಮಹೋ ಜ್ಯೋತಿಷಂ ಪರಮೇ ವ್ಯೋಮನ್ ।
ಪ್ತಾಸ್ಯಸ್ತುವಿಜಾತೋ ರವೇಣ ವಿ ಸಪ್ತರಶ್ಮಿರಧಮತ್ತಮಾಂಸಿ ।। (ಋ ೪-೫೦-೪ ಸಾಭಾ)
ಬೃಹಸ್ಪತಿಯು, ಮಹತ್ತಾದುದೂ, ಪ್ರಕಾಶಾತ್ಮಕವಾದುದೂ ಆದ ಆದಿತ್ಯನ ಉತ್ಕೃಷ್ಟವಾದ ಅಂತರಿಕ್ಷದಲ್ಲಿ (ವಿರಾಟ್ ಪುರುಷನ ಶಿರಸ್ಸಿನಲ್ಲಿ) ಮೊದಲು ಉತ್ಪನ್ನನಾಗಿ, ಸಪ್ತಛಂದೋರೂಪವಾದ ಮುಖವುಳ್ಳವನಾಗಿಯೂ ಅನೇಕ ಪ್ರಕಾರದಲ್ಲಿ ಉತ್ಪನ್ನನಾಗಿಯೂ, ಶಬ್ದಮಿತ್ರನಾಗಿಯೂ, ಸಪ್ತರಶ್ಮಿಯುಕ್ತನಾಗಿಯೂ ಇದ್ದು ಕಗ್ಗತ್ತಲೆಗಳನ್ನು ನಾಶಪಡಿಸುತ್ತಾನೆ."

ಬೃಹಸ್ಪತಿಯು ಮೊದಲು ಪುರಾಣಗಳು ಯಾವನನ್ನು ಸೃಷ್ಟಿಕರ್ತನೆಂದು ಕರೆಯುತ್ತದೋ ಆ ಬ್ರಹ್ಮನನ್ನು ಪ್ರಕಟಮಾಡುತ್ತಾನೆ. ಬ್ರಹ್ಮನು ಮಧ್ಯಕುಂಡಲಿನಿ ಮಾತೆಯ ಸ್ಥಾನದಿಂದ ಹೊರಬರುತ್ತಾನೆ. ಪುರಾಣಗಳು ಹೇಳುವಂತೆ ಮತ್ತು ಚಿತ್ರಪಟಗಳಲ್ಲಿ ತೋರಿಸಿರುವಂತೆ ಬ್ರಹ್ಮನು ವಿರಾಟ್‌ಪುರುಷನ ನಾಭಿಯಿಂದ ಹೊರಬರುತ್ತಾನೆ. ಅಂದರೆ ವಿರಾಟ್‌ಪುರುಷನನ್ನು ಆವರಿಸಿರುವ ವಾಯುವಿನಲ್ಲಿ ಕಮಲದ ಮೇಲೆ ಕುಳಿತುಕೊಂಡಿರುವಂತೆ ಕಾಣುವನು.

ಬ್ರಹ್ಮನು ಚತುರ್ಮುಖನಲ್ಲ, ಅವನು ನಮ್ಮಂತೆಯೇ ಮಾನವ ರೂಪದಲ್ಲಿರುವನು.

ಸಕಲ ದೇವತೆಗಳು ಮಾನವರೂಪದಲ್ಲಿಯೇ ಇರುವರು. ಬ್ರಹ್ಮನು ಅದಿತಿಮಾತೆಯ ಶಬ್ದಭಂಡಾರವನ್ನು ಪ್ರತಿನಿಧಿಸುತ್ತಾನೆ. ಬ್ರಹ್ಮನೂ ವಿರಾಟ್‌ಪುರುಷನ ಹಾಗೆ ತಾನಾಗೆ ಏನನ್ನು ಸೃಷಿಸಲು ಸಾಧ್ಯವಿಲ್ಲ. ಅವನು ಕೇವಲ ಮಂತ್ರಭಂಡಾರದ ಅಧಿಪತಿಯಾಗಿದ್ದಾನೆ. ನಾನು ಮೊದಲು ನಾಭಿಯಲ್ಲಿ ಬ್ರಹ್ಮನ ದರ್ಶನ ಪಡೆದಾಗ ಕಮಲದಲ್ಲಿ ಕುಳಿತ ಬ್ರಹ್ಮನನ್ನು ಅಧೋಮುಖನಾಗಿ ಕಂಡೆನು. ಆನಂತರ ನನ್ನ ಪ್ರಯತ್ನದಿಂದಾಗಿ ಬ್ರಹ್ಮನು ಊರ್ಧ್ವಮುಖನಾದನು. ಬ್ರಹ್ಮನು ಯೋಗಿಯ ಇಚ್ಛೆಯಂತೆ ನಾಭಿಯಲ್ಲಿ ಅಥವಾ ಪುರಾಣದ ಚಿತ್ರಪಠದಂತೆ ಮೇಲೆ ಬಂದು ಕಾಣಿಸುವನು. ಬ್ರಹ್ಮನು ನಾಭಿಯಲ್ಲಿರುವ ನಾಭಿಕುಂಡಲಿನಿಯ ತ್ರಿಕೋನದಿಂದ ಮೇಲೆ ಬರುವನು.

ಬೃಹಸ್ಪತಿಯು ಬ್ರಹ್ಮನ ಮಂತ್ರಭಂಡಾರದಿಂದ ಮಂತ್ರಗಳನ್ನು ಹೆಕ್ಕಿ ತೆಗೆದು ದೇವತೆಗಳನ್ನು ಪ್ರಕಟವಾಗುವಂತೆ ಮಾಡುತ್ತಾನೆ. ಆನಂತರ ತ್ವಷ್ಟೃವಿನ ಪುತ್ರನಾದ ಬ್ರಹ್ಮಣಸ್ಪತಿಯು ಪ್ರಕಟನಾಗಿ ಬೃಹಸ್ಪತಿಯ ಜೊತೆಯಲ್ಲಿ ಸೇರಿ ತನ್ನ ಮಂತ್ರಪಠನದಿಂದ ದೇವತೆಗಳನ್ನು ಪ್ರಕಟಮಾಡಿ ಅವರಿಗೆ ಚೈತನ್ಯವನ್ನು ಶಕ್ತಿಯನ್ನು ತುಂಬುತ್ತಾನೆ. ಆದ್ದರಿಂದ ದೇವತೆಗಳನ್ನು ದ್ವಿಜನ್ಮವನ್ನು ಪಡೆದವರೆಂದು ಕರೆಯುತ್ತಾರೆ. ಯಾವ ಮಾನವರಲ್ಲಿ ದೇವತೆಗಳು ಮತ್ತೆ ಪ್ರಕಟರಾಗಿರುವರೋ ಅವರನ್ನೂ ಸಹ ದ್ವಿಜ ಎಂದು ಕರೆಯುತ್ತಾರೆ. ಅಂದರೆ ಅವರಲ್ಲಿ ದೇವತೆಗಳು ಮತ್ತೆ ಜನ್ಮವನ್ನು ಪಡೆದಿರುವರೆಂದು ಅರ್ಥ.

ಕೇವಲ ಉಪನಯನದಿಂದ ಯಾರೂ ದ್ವಿಜರಾಗುವುದಿಲ್ಲ. ಅವರು ಸಾಧನೆಯನ್ನು ಮಾಡಿ ತಮ್ಮ ಶರೀರದಲ್ಲಿ ದೇವತೆಗಳು ಪ್ರಕಟವಾಗುವಂತೆ ಮಾಡಿದಾಗ ಮಾತ್ರ ಅವರು ಬ್ರಾಹ್ಮಣರಾಗುತ್ತಾರೆ. ಆದ್ದರಿಂದ ಮಾನವರು ತಮ್ಮ ಶರೀರದಲ್ಲಿ ದೇವತೆಗಳನ್ನು ಪ್ರಕಟಮಾಡಿ ಯಾರು ಬೇಕಾದರೂ ಬ್ರಾಹ್ಮಣರಾಗಬಹುದು. ದೇವತೆಗಳು ದ್ವಿಜನ್ಮವನ್ನು ಪಡೆದರು ಎಂಬುದಕ್ಕೆ ಋಗ್ವೇದ ಪ್ರಮಾಣ,

"ಅದಿತಿಯು ಏಳು ಜನ ಪುತ್ರರೊಂದಿಗೆ ಹಿಂದಿನ ಯುಗಕ್ಕೆ ಹೋಗಿ ಸೇರಿದಳು……" (೧೦-೭೨-೯ ಸಾ ಭಾ)
ಆನಂತರ ಬೃಹಸ್ಪತಿಯು ಮಂತ್ರ ಪಠನದಿಂದ ಆದಿತ್ಯರನ್ನು ಮತ್ತೆ ಧ್ಯೌಃ ಲೋಕಕ್ಕೆ ಬರುವಂತೆ ಮಾಡಿದನು.

## ಬೃಹಸ್ಪತಿಯನ್ನು ಹೊಗಳುವ ಋಗ್ವೇದ ಮಂತ್ರಗಳು

ಬೃಹಸ್ಪತಿಃ ಪ್ರಥಮಂ ಜಾಯಮಾನೋ ಮಹೋ ಜೋತಿಷಃ ಪರಮೇ ವೋಮನ್ ।
ಸಪ್ತಾಸ್ಯಸ್ತುವಿಜಾತೋ ರವೇಣ ವಿ ಸಪ್ತರಶ್ಮಿರಧಮತ್ತಮಾಂಸಿ ।।
"ಆ ಬೃಹಸ್ಪತಿಯು ಮಹತ್ತಾದುದು, ಪ್ರಕಾಶವಾದುದು ಆದ ಉತ್ಕೃಷ್ಟವಾದ **ಅಂತರಿಕ್ಷದಲ್ಲಿ ಮೊದಲು ಉತ್ಪನ್ನನಾಗಿ,** ಸಪ್ತಛಂದೋರೂಪವಾದ ಮುಖವುಳ್ಳವನಾಗಿಯೂ, ಅನೇಕ ಪ್ರಕಾರದಲ್ಲಿ ಉತ್ಪನ್ನನಾಗಿಯೂ, ಶಬ್ದಮಿತ್ರನಾಗಿಯೂ, ಸಪ್ತರಶ್ಮಿಯುಕ್ತನಾಗಿಯೂ ಇದ್ದು ಕಗ್ಗತ್ತಲೆಯನ್ನು ನಾಶಪಡಿಸಿದನು." (೪-೫೦-೪ ಸಾ ಭಾ)

(ಆತನ ಮಂತ್ರ ಪಠಣವು ಸಪ್ತ ಛಂದಸ್ಸುಗಳಿಂದ ಕೂಡಿದೆ. ಈ ಮಂತ್ರವು ದೇವಭಾಷೆಯು ಎಲ್ಲಿ, ಹೇಗೆ ಪ್ರಕಟವಾಯಿತು ಎಂಬುದನ್ನು ಈ ಮಂತ್ರವು ತಿಳಿಸುತ್ತದೆ.)

ಆ ವಿಬಾಧ್ಯಾ ಪರಿರಾಪಸ್ತಮಾಂಸಿ ಚ ಜ್ಯೋತಿಷ್ಮಂತಂ ರಥಮೃತಸ್ಯ ತಿಷ್ಠಸಿ ।
ಬೃಹಸ್ಪತೇ ಭಿಮಮಮಿತ್ರದಮ್ಭನಂ ರಕ್ಷೋಹಣಂ ಗೋತ್ರಭಿದಂ ಸ್ವರ್ವಿದಂ ।। (ಋ ೨-೨೩-೩ ಸಾ ಭಾ)
"ಎಲೈ ಬೃಹಸ್ಪತಿಯೇ, ಪಾಪರೂಪವಾದ ರಾಕ್ಷಸರನ್ನೂ ಕಗ್ಗತ್ತಲೆಯನ್ನೂ ಸಹ ನಿನ್ನ ತೇಜಸ್ಸಿನಿಂದ ದೂರೀಕರಿಸಿ, ಕಾಂತಿಯುತವಾದುದೂ, ಯಜ್ಞವನ್ನು ಸೇರಿಸತಕ್ಕದ್ದೂ, ಶತ್ರುಗಳಿಗೆ ಭಯಂಕರವಾದುದೂ, ಶತ್ರುಹಿಂಸಕವಾದುದೂ, ರಾಕ್ಷಸರನ್ನು ನಾಶಮಾಡುವುದೂ, ಮೇಘವನ್ನು ಸೀಳಿ ಬಿಡಿಸುವುದೂ, ಸ್ವರ್ಗವನ್ನು ಸೇರಿಸತಕ್ಕದ್ದೂ ಆದ ರಥವನ್ನು ಹತ್ತಿ ಕುಳಿತುಕೊಳ್ಳುತ್ತೀಯೆ."

ಬೃಹಸ್ಪತಿಃ ಸಮಜಯದ್ವಸೂನಿ ಮಹೋ ವಜ್ರಾನ್ ಗೋಮತೋ ದೇವ ಏಷಃ ।
ಅಪಃ ಸಿಷಾಸನ್ತ್ಸ್ವ ೩ರಪ್ರತೀತೋ ಬೃಹಸ್ಪತಿರ್ಹಂತ್ಯಮಿತ್ರಮರ್ಕೈಃ ।। (ಋ ೬-೭೩-೩ ಸಾ ಭಾ)
"ಪ್ರಕಾಶಮಾನನೂ, ಪ್ರಸಿದ್ಧನೂ ಆದ ಬೃಹಸ್ಪತಿಯು ಶತ್ರುಗಳ ಧನಗಳನ್ನೂ ಮಹತ್ತಾದವೂ ಗೋಭರಿತವಾದವೂ ಆದ ಕೊಟ್ಟಿಗೆಗಳನ್ನೂ ಶತ್ರುಗಳಿಂದ ತನ್ನ ವಶಪಡಿಸಿಕೊಂಡನು. ಅಪ್ರತಿಹತನಾದ ಬೃಹಸ್ಪತಿಯು ಅಂತರಿಕ್ಷದ ಉದಕಗಳನ್ನೆಲ್ಲಾ ತನ್ನ ಆಧೀನಕ್ಕೆ ಪೂರ್ಣವಾಗಿ ಹೊಂದಬೇಕೆಂದಾಶಿಸಿ ಶತ್ರುಗಳನ್ನೆಲ್ಲಾ ಮಂತ್ರಗಳ ಸಹಾಯದಿಂದಲೇ ನಾಶಪಡಿಸುತ್ತಾನೆ."

(ಬ್ರಹ್ಮಾಂಡದಲ್ಲಿ ವೃತಾಸುರನನ್ನು ಇಂದ್ರನು ನಾಶಮಾಡಿದರೇ ಮಾನವರಲ್ಲಿ ಬೃಹಸ್ಪತಿ, ಬ್ರಹ್ಮಣಸ್ಪತಿ ಮತ್ತು ಸರಸ್ವತಿ ದೇವತೆಯರು ಮರುತ್ತರೊಡಗೂಡಿ ವೃತ್ರಾಸುರ ಮತ್ತು ಅವನ ಅನುಯಾಯಿಗಳನ್ನು ನಾಶಪಡಿಸುತ್ತಾರೆ. ಪಿಂಡಾಂಡದ ವಿವಿಧ ಆಯಾಮಗಳನ್ನು ಪ್ರಕಟಪಡಿಸುತ್ತಾರೆ.)

ಯೋ ಅದ್ರಿಭಿತ್ಪ್ರಥಮಾಜಾ ಋತಾವಾ ಬೃಹಸ್ಪತಿರಾಂಗಿರಸೋ ಹವಿಷ್ಮಾನ್ ।
ದ್ವಿಬರ್ಹಜ್ಮಾ ಪ್ರಾಘರ್ಮಸತ್ಪಿತಾ ನ ಆ ರೋದಸೀ ವೃಷಭೋ ರೋರವೀತಿ ।। (ಋ ೬-೭೩-೧ ಸಾ ಭಾ)
"ಸತ್ಯಪಾಲಕನಾದ ಬೃಹಸ್ಪತಿಯು ಪರ್ವತವನ್ನು ಸೀಳಿದನು (ವೃತನು ತನ್ನ ಮಾಯಾಜಾಲದಿಂದ ಸೃಜಿಸಿದ ಪರ್ವತ), ಸಕಲಭೂತಗಳಿಗಿಂತಲೂ ಮೊದಲೇ ಉತ್ಪನ್ನನಾಗಿಯೂ ಅಂಗಿರಸ್ಸಿನ ವಂಶೋತ್ಪನ್ನನಾಗಿಯೂ, ಹವಿಷ್ಮಂತನಾಗಿಯೂ, ದ್ಯಾವಾಪೃಥ್ವಿಗಳೆರಡಲ್ಲೂ ಸಂಚಾರಮಾರ್ಗವುಳ್ಳವನಾಗಿಯೂ, ಅತ್ಯಂತ ಪ್ರಭಾಯುತವಾದ ಸ್ಥಾನದಲ್ಲಿರುತ್ತಲೂ ನಮಗೆ ಪಾಲಕನಾಗಿರುವನೋ ಅದೇ ಬೃಹಸ್ಪತಿಯು ದ್ಯಾವಾಪೃಥ್ವಿಗಳೆರಡರ ನಡುವೆಯೂ ಗರ್ಜಿಸುತ್ತಾನೆ."
(ಆದಿತ್ಯರು ತಮ್ಮ ಮಾತೆಯ ಜೊತೆಯಲ್ಲಿ ಆದಿಯುಗಕ್ಕೆ ಹಿಂತಿರುಗಿದ ನಂತರ, ಬೃಹಸ್ಪತಿಯು ಪುರುಷನ ಶಿರಸ್ಸಿನಲ್ಲಿರುವ ಬೆಳಕಿನ ಲೋಕದಿಂದ ಮೊದಲು ಕೆಳಗೆ ಬಂದು, ಬ್ರಹ್ಮನನ್ನು ಜಾಗೃತಮಾಡಿ ದೇವತೆಗಳನ್ನು ಆದಿಯುಗದಿಂದ ಮತ್ತೆ ದ್ಯೌಗೆ ಬರುವಂತೆ ಮಂತ್ರಪಠನದಿಂದ ಕರೆಯುತ್ತಾನೆ.)

ಜನಾಯ ಚಿದ್ಯ ಈವತ ಉ ಲೋಕಂ ಬೃಹಸ್ಪತಿರ್ದೇವಹೂತೌ ಚಕಾರ ।
ಘ್ನನ್ವೃತ್ರಾಣಿ ವಿ ಪುರೋ ದರ್ದರೀತಿ ಜಯಚ್ಛತ್ರೂರಮಿತ್ರಾನ್ಪೃತ್ಸು ಸಾಹನ್ ।। (ಋ ೬-೭೩-೨ ಸಾ ಭಾ)
(ಜಯನ್ ಶತ್ರೂನ್ ಅಮಿತ್ರಾನ್ ಪೃತ್ಸಿಸು )
"ಯಜ್ಞದಲ್ಲಿ ನಿರತನೂ ಸ್ತುತಿಯ ಮೂಲಕ ದೇವತೆಗಳ ಸಾನ್ನಿಧ್ಯವನ್ನು ಪಡೆಯುವವನೂ ಆದ ಯಜಮಾನನಿಗೆ ಯಾವ ಬೃಹಸ್ಪತಿಯು ಉತ್ತಮಸ್ಥಾನವಾದ ಉಲೋಕವನ್ನು (ಇಂದ್ರಲೋಕ) ನಿರ್ಮಿಸುವನೋ ಅದೇ ಬೃಹಸ್ಪತಿಯು ಜಗತ್ತನ್ನು ಆವರಿಸುವ ಕಗ್ಗತ್ತಲೆಗಳನ್ನು (ವೃತ್ರನಿಂದ ಆವರಿಸಿದ ಕತ್ತಲು) ನಾಶಪಡಿಸುತ್ತಲೂ, ಯುದ್ಧಗಳಲ್ಲಿ ಶತ್ರುಗಳನ್ನು (ವೃತ್ರಶಕ್ತಿಗಳನ್ನು) ಜಯಿಸುತ್ತಲೂ, ವಿರೋದಿಗಳನ್ನು ಸೋಲಿಸುತ್ತಲೂ ಶತ್ರು ಪಟ್ಟಣಗಳನ್ನು ಪೂರ್ಣವಾಗಿ ನಾಶಮಾಡುತ್ತಾನೆ." (ನಮ್ಮ ಶರೀರದಲ್ಲಿ ಮೂರು ಲೋಕವನ್ನೂ, ಸಪ್ತಸ್ವರ್ಗಗಳನ್ನೂ ಮತ್ತು ದೇವತೆಗಳನ್ನೂ ಪ್ರಕಟಮಾಡುತ್ತಾನೆ)
(ಬೃಹಸ್ಪತಿಯು ಸಾಧಕನ ಪಿಂಡಾಂಡದ ಅಂತರಂಗದ ಶರೀರಗಳನ್ನೂ ಲೋಕಗಳನ್ನೂ ಪ್ರಕಟಮಾಡುತ್ತಾನೆ.)

ದೇವೀ ದೇವಸ್ಯ ರೋದಸೀ ಜನಿತ್ರೀ ಬೃಹಸ್ಪತಿಂ ವಾವೃಧತುರ್ಮಹಿತ್ವಾ ।
ದಕ್ಷಾಯ್ಯಾಯ ದಕ್ಷತಾ ಸಖಾಯಃ ಕರದ್ಬ್ರಹ್ಮಣೇ ಸುತರಾ ಸುಗಧಾ ।। (ಋ ೭-೯೭-೮ ಸಾ ಭಾ)
"ದೇವತಾತ್ಮರೂ ಬೃಹಸ್ಪತಿಗೆ ಉತ್ಪಾದಕಿಯರೂ ಆದ ದ್ಯಾವಾಪೃಥ್ವಿಗಳು ತಮ್ಮ ಮಾಹಾತ್ಮ್ಯದಿಂದ ಬೃಹಸ್ಪತಿಯನ್ನು ಬೆಳೆಸಿದರು. ಎಲೈ ಮಿತ್ರರೇ, ವೃದ್ಧಿಯನ್ನು ಹೊಂದುವ ಬೃಹಸ್ಪತಿಯನ್ನು ನೀವೂ ಬೆಳೆಸಿರಿ. ಸುಖವಾಗಿ ದಾಟಬಹುದಾದಂತಹ ಆದಿಅಂತ್ಯವಿಲ್ಲದ ಉದಕಗಳನ್ನು ಊರ್ಧ್ವಮುಖವಾಗಿ ಚಲಿಸುವಂತೆ ಮಾಡುತ್ತಾನೆ.

(ನಮ್ಮ ಶರೀರದಲ್ಲಿ ದ್ಯಾವಾಪೃಥ್ವಿಯ ಮಂತ್ರಗಳನ್ನು ಹೇಳಿದ ಕೂಡಲೆ ಅವು ವಿಸ್ತಾರವನ್ನು ಹೊಂದುತ್ತವೆ.)

ದೇವಾಶ್ಚಿತೇ ಅಸುರ್ಯ ಪ್ರಚೇತಸೋ ಬೃಹಸ್ಪತೇ ಯಜ್ಞಿಯಂ ಭಾಗಮಾನಶುಃ ।
ಉಸ್ರಾ ಇವ ಸೂರ್ಯೋ ಜ್ಯೋತಿಷಾ ಮಹೋ ವಿಶ್ವೇಷಾಮಿಜ್ಜನಿತಾ ಬ್ರಹ್ಮಣಾಮಸಿ ।। (ಋ೨-೨೩-೨ ಸಾ ಭಾ)
"ಅಸುರಹಂತಕನಾದ ಎಲೈ ಬೃಹಸ್ಪತಿಯೇ, ಪ್ರಕೃಷ್ಟವಾದ ಜ್ಞಾನವುಳ್ಳ ನಿನ್ನ ಸಂಬಂಧದಿಂದಲೇ ದೇವತೆಗಳೂ ಸಹ ಯಜ್ಞಾರ್ಹವಾದ ಭಾಗವನ್ನು ಪಡೆದರು. ತೇಜಸ್ಸಿನಿಂದ ಪೂಜ್ಯನಾದ ಸೂರ್ಯನು ಕಿರಣಗಳನ್ನು ಹೊರಗೆಡಹಿ ಪ್ರದರ್ಶಿಸಿ ಪ್ರಸರಿಸುವಂತೆ ಮಾಡುವ ಹಾಗೆ ನೀನೂ ಸಹ ಸಮಸ್ತವಾದ ಮಂತ್ರಗಳಿಗೂ ನಿರ್ಮಾತನಾಗಿ ಆಗಿದ್ದೀಯೆ."

ಸ ಸುಷ್ಟುಭಾ ಸ ಋಕ್ವತಾ ಗಣೇನ ವಲಂ ರುರೋಜ ಫಲಿಗಂ ರವೇಣ ।
ಬೃಹಸ್ಪತಿರುಸ್ರಿಯಾ ಹವ್ಯಸೂದಃ ಕನಿಕ್ರದದ್ವಾವಶತೀರುದಾಜತ್ ।। (ಋ ೪-೫೦-೫ ಸಾ ಭಾ)
"ಲೋಕಪ್ರಸಿದ್ಧನಾದ ಬೃಹಸ್ಪತಿಯು ಶ್ರೇಷ್ಠವಾದ ಸ್ತುತಿಗಳುಳ್ಳದ್ದೂ, ಪ್ರಕಾಶಮಾನವಾದುದೂ ಆದ ಅಂಗಿರಸ್ಸುಗಳ ಸಂಘದೊಡನೆ ಕೂಡಿ ಶಬ್ದಮಾಡುತ್ತಾ (ಮಂತ್ರಪಠನಮಾಡುತ್ತಾ) ದುಷ್ಟಬುದ್ಧಿಯುಳ್ಳ ವಲನೆಂಬ ಅಸುರನನ್ನು ಸೀಳಿದನು. (ವಲನ ಬಳಿಯಿದ್ದ) ಗೋವುಗಳನ್ನು ಅವುಗಳಂತೆಯೇ ಶಬ್ದಮಾಡುತ್ತಾ ಬಿಡಿಸಿ ಅವುಗಳನ್ನು ಸ್ವತಂತ್ರವಾಗಿ ಓಡಾಡುವಂತೆ ಮಾಡಿದನು."

(ಗೋವುಗಳು ಜ್ಞಾನವನ್ನು ಪ್ರತಿನಿಧಿಸುತ್ತದೆ. ಭೂಲೋಕದ ಗೋವುಗಳಿಗೂ ಇದಕ್ಕೂ ಸಂಬಂಧವಿಲ್ಲ.)

ತ್ವಂ ನೋ ಗೋಪಾಃ ಪಥಿಕೃದ್ವಿಚಕ್ಷಣಸ್ತವ ವ್ರತಾಯ ಮತಿಭಿರ್ಜರಾಮಹೇ । (ಋ೨-೨೩-೬ ಸಾ ಭಾ)
ಬೃಹಸ್ಪತೇ ಯೋ ನೋ ಅಭಿ ಹ್ವರೋ ದಧೇ ಸ್ವಾ ಂ ಮರ್ಮರ್ತು ದುಚ್ಛುನಾ ಹರಸ್ವತೀ।।
"ಎಲೈ ಬೃಹಸ್ಪತಿಯೇ, ನೀನು ನಮಗೆ ಪಾಲಕನೂ ಮಾರ್ಗದರ್ಶಕನೂ ಆಗಿದ್ದೀಯೆ. ನೀನು ಸರ್ವಜ್ಞನು. ನಿನ್ನನ್ನುದ್ದೇಶಿಸಿದ ಯಾಗಕ್ಕಾಗಿ ಸ್ತೋತ್ರಗಳಿಂದ ಪ್ರಾರ್ಥಿಸುತ್ತೇವೆ....."

ಅದೇವೇನ ಮನಸಾ ಯೋ ರಿಷಣ್ಯತಿ ಶಾಸಾಮುಗ್ರೋ ಮನ್ಯಮಾನೋ ಜಿಘಾಂಸತಿ ।
ಬೃಹಸ್ಪತೇ ಮಾ ಪ್ರಣಕ್ತಸ್ಯ ನೋ ವಧೋ ನಿ ಕರ್ಮ ಮನ್ಯುಂ ದುರೇವಸ್ಯ ಶರ್ಧತಃ ।। (ಋ೨-೨೩-೧೨ ಸಾ ಭಾ)
"ಎಲೈ ಬೃಹಸ್ಪತಿಯೇ, ಯಾವ ಶತ್ರುವು ದೈವಭಕ್ತಿಯಿಲ್ಲದ ಅಸುರೀ ಸ್ವಭಾವವುಳ್ಳ ಮನಸ್ಸಿನಿಂದ ನಮ್ಮನ್ನು ಹಿಂಸಿಸುತ್ತಾನೆಯೋ, ಯಾರು ಭಯಂಕರವಾದ ಪಾಪಬುದ್ಧಿಯುಳ್ಳವನಾಗಿಯೂ ಆತ್ಮಾಭಿಮಾನವುಳ್ಳವನಾಗಿಯೂ ಇದ್ದು ಸ್ತುತಿಕರ್ತರಾದ ನಮ್ಮನ್ನು ಕೊಲ್ಲಲಿಚ್ಛಿಸುತ್ತಾನೆಯೋ ಅಂತಹ ಶತ್ರುವಿನ ವಧಸಾಧನವಾದ ಆಯುಧವು ನಮ್ಮನ್ನು ಸಮೀಪಿಸದಿರಲಿ. ದುಷ್ಟವಾದ ಪ್ರವೃತ್ತಿಯುಳ್ಳವನೂ ಬಲಶಾಲಿಯೂ ಆದ ಅವನ ಕ್ರೋಧವನ್ನು ನಾವು ಎದುರಿಸಿ ನಾಶಮಾಡುವಂತೆ ಅನುಗ್ರಹಿಸು."

ಬೃಹಸ್ಪತೇ ಅತಿಯರ್ಯೋ ಅರ್ಹಾದ್ದ್ಯುಮದವಿಭಾತಿ ಕ್ರತುಮಜ್ಜನೇಷು ।
ಯದ್ದೀದಯಚ್ಛವಸ ಋತಪ್ರಜಾತ ತದಸ್ಮಾಸು ದ್ರವಿಣಂ ದೇಹಿ ಚಿತ್ರಂ ।। (ಋ ೨-೨೩-೧೫ ಸಾ ಭಾ)
"ಸತ್ಯೋತ್ಪನ್ನನಾದ ಎಲೈ ಬೃಹಸ್ಪತಿಯೇ, ಶ್ರೇಷ್ಠನಾದ ಯಜಮಾನನು ಉಳಿದೆಲ್ಲಾ ಸಂಪತ್ತಿಗಿಂತಲೂ ಅಧಿಕವಾಗಿ ಯಾವುದನ್ನು ಪೂಜಿಸುವನೋ ಮತ್ತು ಯಾವುದು ಯಜಮಾನರಲ್ಲಿ ಕಾಂತಿಯುತವಾಗಿಯೂ ಜ್ಞಾನದಿಂದ ಕೂಡಿಯೂ ವಿಶೇಷವಾಗಿ ಪ್ರಕಾಶಿಸುತ್ತದೆಯೋ ಯಾವುದು ತನ್ನನ್ನು ಆಶ್ರಯಿಸಿದವರನ್ನು ತನ್ನ ಶಕ್ತಿಯಿಂದ ಚೈತನ್ಯಯುಕ್ತರನ್ನಾಗಿ ಮಾಡುವುದೋ ಅಂತಹ ಬ್ರಹ್ಮವರ್ಚಸ್ವರೂಪವಾದುದೂ ಅಪೇಕ್ಷಿತವಾದುದೂ ಆದ ಧನವನ್ನು ನಮ್ಮಲ್ಲಿ ಸ್ಥಾಪಿಸು."

## ಬ್ರಹ್ಮಣಸ್ಪತಿಯನ್ನು ಹೊಗಳುವ ಋಗ್ವೇದ ಮಂತ್ರಗಳು.

ಬೃಹಸ್ಪತಿಯ ನಂತರ ಬ್ರಹ್ಮಣಸ್ಪತಿಯು ಪ್ರಕಟನಾಗುವನು. ಈತನು ತ್ವಷ್ಟ್ರಾದೇವತೆಯ ಮಗನಾಗಿದ್ದಾನೆ. ತ್ವಷ್ಟ್ರಾ ದೇವತೆಯು ವಿಶ್ವದ ಸಕಲ ಜೀವರಾಶಿಗಳಿಗೂ ರೂಪವನ್ನು ಆಕಾರವನ್ನು ಕೊಡುತ್ತಾನೆ. ಅದರಂತೆಯೇ ಬ್ರಹ್ಮಣಸ್ಪತಿಯು ಮಂತ್ರಗಳಿಗೆ ಆಕಾರವನ್ನೂ, ರೂಪವನ್ನೂ ಚೈತನ್ಯವನ್ನೂ ಕೊಡುತ್ತಾನೆ. ಈತನ ಮಹಿಮೆಯಿಂದ ದೇವತಾ ಮಂತ್ರಗಳು ಸ್ವರೂಪವನ್ನು ಪಡೆದುಕೊಳ್ಳುತ್ತವೆ.

ಬ್ರಹ್ಮಣಸ್ಪತಿಯನ್ನು ಕಮ್ಮಾರನಿಗೆ ಹೋಲಿಸಿದೆ. ಕಮ್ಮಾರನು ಯಾವ ರೀತಿಯಲ್ಲಿ ತಿದಿಯನ್ನು ಒತ್ತಿ ಅಗ್ನಿಯನ್ನು ವೃದ್ಧಿಮಾಡುತ್ತಾನೊ ಅದೇ ರೀತಿಯಲ್ಲಿ ದೇವತೆಗಳು ನಮ್ಮಲ್ಲಿ ಚೈತನ್ಯಸಂಪನ್ನರಾಗುತ್ತಾರೆ. ಆದ್ದರಿಂದಲೇ ಋಗ್ವೇದ ಮಂತ್ರಗಳನ್ನು ಹೇಳುತ್ತಿದ್ದರೆ ದೇವತೆಗಳು ವಿಶ್ವರೂಪವನ್ನು ಪಡೆಯುತ್ತಾರೆ. ಆದ್ದರಿಂದ ಬ್ರಹ್ಮಣಸ್ಪತಿಯನ್ನು ಗಣಪತಿ ಅಥವಾ ಮಂತ್ರರಾಜ ಎಂದು ಕರೆಯುತ್ತಾರೆ.

ಬ್ರಹ್ಮಣಸ್ಪಿತಿರೇತಾ ಸಂ ಕರ್ಮಾರ ಇವಾಧಮತ್ ।
ದೇವಾನಾಂ ಪೂರ್ವ್ಯೇ ಯುಗೇಽಸತಃ ಸದಜಾಯತ ।। (ಋ ೧೦-೭೨-೨ ಸಾ ಭಾ)

"ಕಮ್ಮಾರನು ತನ್ನ ತಿದಿಯನ್ನು ಒತ್ತಿ ಅಗ್ನಿಯನ್ನು ವೃದ್ಧಿಪಡಿಸುವಂತೆ, ಬ್ರಹ್ಮಣಸ್ಪತಿಯು ಈ ದೇವತೆಗಳನ್ನು ಚೈತನ್ಯದಿಂದ ತುಂಬಿ ವೃದ್ಧಿಪಡಿಸಿದನು. ದೇವತೆಗಳು ಉತ್ಪನ್ನವಾಗುವುದಕ್ಕೆ ಪೂರ್ವಭಾವಿಯಾದ ಕಾಲದಲ್ಲಿ ನಾಮರೂಪರಹಿತವಾದ ಅಮೂರ್ತತತ್ವದಿಂದ ನಾಮರೂಪಗಳಿಂದ ಕೂಡಿದ ದೇವಾದಿಗಳು ಉತ್ಪನ್ನರಾದರು."

ಸ ಸಂನಯಃ ಸ ವಿನಯಃ ಪುರೋಹಿತಃ ಸ ಸುಷ್ಟುತಃ ಸ ಯುಧಿ ಬ್ರಹ್ಮಣಸ್ಪತಿಃ ।
ಚಾಕ್ಷೋ ಯದ್ವಾಜಂ ಭರತೇ ಮತೀ ಧನಾದಿತ್ಸೂರ್ಯಸ್ತಪತಿ ತಪ್ಯತುರ್ವೃಥಾ ।। (ಋ ೨-೨೪-೯ ಸಾಭಾ)
"ದೇವತೆಗಳಿಗೆ ಪುರೋಹಿತನಾಗಿ ಸ್ಥಾಪಿತನಾದ ಅದೇ ಬ್ರಹ್ಮಣಪತಿಯು ಬೇರೆ ಬೇರೆಯಾಗಿರತಕ್ಕ ವಸ್ತುಗಳನ್ನು ತನ್ನ ಮಂತ್ರಶಕ್ತಿಯಿಂದ ಒಟ್ಟಿಗೆ ಸೇರಿಸತಕ್ಕವನೂ, ಒಟ್ಟಿಗೆ ಸೇರಿರುವುದನ್ನು ಬಿಡಿಸಿ ಪ್ರತ್ಯೇಕವಾಗಿ ಮಾಡುವವನೂ ಆಗಿದ್ದಾನೆ. (ವೃತ್ರಾಸುರ) ಸಂಗ್ರಾಮದಲ್ಲಿ ಅವನೇ ಸಹಾಯಕನು. ಯಾವಾಗ ಬ್ರಹ್ಮಣಸ್ಪತಿಯು ಅನ್ನವನ್ನೂ, ಪ್ರಶಸ್ತವಾದ ಧನವನ್ನೂ (ಯಜ್ಞದ ಆಹುತಿಯನ್ನು) ತನ್ನ ಸ್ತೋತೃಗಳಿಗಾಗಿ ಭರಿಸುತ್ತಾನೆಯೋ, ಆ ಒಡನೆಯೇ ದಾಹಾತ್ಮಕನಾದ ಸೂರ್ಯನು ಅನಾಶಯಾಸವಾಗಿ ಪ್ರಕಾಶಿಸುತ್ತಾನೆ."

ಆದ್ದರಿಂದ ಬೃಹಸ್ಪತಿ ಮತ್ತು ಬ್ರಹ್ಮಣಸ್ಪತಿಯನ್ನು ಋಗ್ವೇದವು ಋತ್ವಿಜರೆಂದು ಕರೆಯುತ್ತದೆ. ಬೃಹಸ್ಪತಿ ಮತ್ತು ಬ್ರಹ್ಮಣಸ್ಪತಿಯು ಜಾಗೃತವಾಗದೇ ಕೇವಲ ಋಗ್ವೇದ ಮಂತ್ರಗಳನ್ನು ಪಠಿಸಿದರೆ ಫಲ ಕೊಡುವುದಿಲ್ಲ. ಋಗ್ವೇದ ಮಂತ್ರಪಠನ ಮತ್ತು ಹವಿಸ್ಸುಗಳನ್ನು ಹೆಚ್ಚಾಗಿ ಅರ್ಪಿಸಿದಷ್ಟೂ ದೇವತೆಗಳು ಹೆಚ್ಚು ಚೈತನ್ಯಯುಕ್ತರಾಗುತ್ತಾರೆ ಮತ್ತು ವಿರಾಟ್‌ಸ್ವರೂಪವನ್ನು ಪಡೆಯುತ್ತಾರೆ.

ಬ್ರಹ್ಮಣಸ್ಪತಿಯು ಮಂತ್ರಗಳಿಗೆ ಆಕಾರ, ಬೆಳಕು ಮತ್ತು ಶಕ್ತಿಯನ್ನು ಅನುಗ್ರಹಿಸುತ್ತಾನೆ. ಪ್ರತೀ ಮಂತ್ರಗಳು ತಮ್ಮದೇ ಆದ ಸ್ವರೂಪ, ಬೆಳಕು ಮತ್ತು ಶಕ್ತಿಯನ್ನು ಪಡೆದಿದೆ. ಆದ್ದರಿಂದಲೇ ಬ್ರಹ್ಮಣಸ್ಪತಿಯನ್ನು ಮಂತ್ರಗಳ ರಾಜ, ಒಡೆಯ ಎಂದು ಕರೆಯಲಾಗಿದೆ. ಈ ರೀತಿಯಾಗಿ ಬೃಹಸ್ಪತಿ ಮತ್ತು ಬ್ರಹ್ಮಣಸ್ಪತಿಗಳು ಬ್ರಹ್ಮಾಂಡದಲ್ಲಿ ದೇವತೆಗಳನ್ನು ಮತ್ತೆ ಪ್ರಕಟಿಸುವರು.

ಆದ್ದರಿಂದಲೇ ಬ್ರಹ್ಮಣಸ್ಪತಿಯನ್ನು ದೇವಗಣಕ್ಕೆ ಸಂಬಂಧಿಸಿರುವನೆಂದೂ, ಗಣಪತಿ ಅಥವಾ ಮಂತ್ರರಾಜನೆಂದೂ, ಮಂತ್ರಗಳಿಗೆ ಒಡೆಯನೆಂದೂ, ಕ್ರಾಂತದರ್ಶಿಗಳಾದ ಕವಿಗಳಲ್ಲಿ ಅತ್ಯುತ್ತಮ ಕವಿಯೆಂದೂ, ದೇವತೆಗಳಿಗೆಲ್ಲ (ವಾಗ್ದೇವತೆಗಳಿಗೆಲ್ಲಾ) ಜ್ಯೇಷ್ಟನೆಂದೂ ವರ್ಣಿಸಲ್ಪಟ್ಟಿದ್ದಾನೆ. ಆನೆಯ ತಲೆ ಹೊಂದಿರುವ ಗಣಪತಿಯು ಪುರಾಣದ ಕಲ್ಪನೆಯಾಗಿದೆ. ಬ್ರಹ್ಮ, ಬೃಹಸ್ಪತಿ ಮತ್ತು ಬ್ರಹ್ಮಣಸ್ಪತಿಗಳು ಇತರ ದೇವತೆಗಳಂತೆಯೇ ಮಾನವರೂಪದಲ್ಲಿರುವರು. ಈ ದೇವತೆಗಳು ನಮಗೆ ಬ್ರಹ್ಮವರ್ಚಸನ್ನು, ತೇಜಸ್ಸನ್ನು ಮತ್ತು ಸಾಧನೆಯಲ್ಲಿ ಯಶಸ್ಸನ್ನು ಅನುಗ್ರಹಿಸುತ್ತಾರೆ.

ಅಂತರ್ ಸಾಧನೆಯಲ್ಲಿ ಬ್ರಹ್ಮನು ಕಮಲದ ಮೇಲೆ ಕುಳಿತಿರುವಂತೆ ನಾಭಿಯಲ್ಲಿ ಕಾಣಿಸುವನು, ಬೃಹಸ್ಪತಿ ಮತ್ತು ಬ್ರಹ್ಮಣಸ್ಪತಿಯರು ಸಿಂಹಾಸನದಲ್ಲಿ ಕುಳಿತಿರುವಂತೆ ಕಾಣಿಸುವರು. ಆದರೆ ಯಜ್ಞಕಾಲದಲ್ಲಿ ಬೃಹಸ್ಪತಿಯು ಕಂಠಕೂಪದಲ್ಲಿಯೂ ಬ್ರಹ್ಮಣಸ್ಪತಿಯು ಮುಖದಲ್ಲಿಯೂ ಕುಳಿತಿರುತ್ತಾರೆ. ಆಗ ನಾವು ಉಚ್ಚರಿಸುವ ಮಂತ್ರಗಳ ಶಕ್ತಿಯು ಪೂರ್ಣಪ್ರಮಾಣದಲ್ಲಿ ಪ್ರಕಟವಾಗುವುದು.

ಇಲ್ಲಿ ಗಣಪತಿ ಎಂದರೆ ವಾಗ್ದೇವತೆಗಳ ಸಮೂಹಕ್ಕೆ ಒಡೆಯ ಎಂದಾಗಿದೆ. ಬ್ರಹ್ಮಣಸ್ಪತಿಯು ಬ್ರಹ್ಮ, ಬೃಹಸ್ಪತಿ, ಸರಸ್ವತಿ, ಮಹಿ, ಭಾರತಿ ಮತ್ತು ಇಳಾ ದೇವತೆಗಳ ಸಮೂಹಕ್ಕೆ ರಾಜನಾಗಿದ್ದಾನೆ. ಸಕಲ ದೇವತೆಗಳನ್ನು ನಾನು ಉಪಾಸನೆ ಮಾಡದೇ ತಾವಾಗಿ ತಮ್ಮ ರೂಪದ ದರ್ಶನವನ್ನು ಕೊಟ್ಟಿರುವರು

ಇಂದ್ರಾದಿದೇವತೆಗಳು ಅದಿತಿಯೊಡನೆ ಹಿಂದಿನ ಯುಗಕ್ಕೆ ಅಂದರೆ ಮಧ್ಯಕುಂಡಲಿನಿ ಸ್ಥಾನಕ್ಕೆ ಹಿಂತಿರಿಗಿದಾಗ ಅವರನ್ನು ಮತ್ತೆ ಪ್ರಕಟವಾಗುವಂತೆ ಮಾಡಿ ಅವರಿಗೆ ಚೈತನ್ಯವನ್ನು ತುಂಬುತ್ತಾನೆ. ಆದ್ದರಿಂದ ಬ್ರಹ್ಮಣಸ್ಪತಿಯನ್ನು ಮಂತ್ರರಾಜ ಎಂದು ಹೇಳಿದೆ. ಮಂತ್ರಗಳಿಂದ ದೇವತೆಗಳನ್ನು ಹೊಗಳುತ್ತಿರುವಾಗ ಅವರು ವಿಶ್ವರೂಪವನ್ನು ತಾಳುತ್ತಾರೆ. ಮಾನವರ ಹೃದಯದಲ್ಲಿ ಸೂರ್ಯಮಂಡಲವನ್ನು ಪ್ರಕಾಶಿಸುವಂತೆ ಮಾಡುವನು.

**ಅಸುರರಿಂದ ಆವೃತವಾದ ಮಾನವರು ವೃತ್ರಾಸುರ ಸಂಹಾರಕ್ಕಾಗಿ ಮೊದಲು ಬೃಹಸ್ಪತಿ ಮತ್ತು ಬ್ರಹ್ಮಣಸ್ಪತಿಯನ್ನು ಆರಾಧಿಸಬೇಕು.**

ಗಣಾನಾಂ ತ್ವಾ ಗಣಪತಿಂ ಹವಾಮಹೇ ಕವಿಂ ಕವೀನಾಮುಪಮಶ್ರವಸ್ತಮಂ ।
ಜ್ಯೇಷ್ಠರಾಜಂ ಬ್ರಹ್ಮಣಾಂ ಬ್ರಹ್ಮಣಸ್ಪತ ಆ ನಃ ಶೃಣ್ವನ್ನೂತಿಭಿಃ ಸೀದಸಾದನಂ ।। (೨-೨೩-೧ ಸಾ ಭಾ+ಆರ್‌ಎಲ್‌ಕ)
"ಎಲೈ ಬ್ರಹ್ಮಣಸ್ಪತಿಯೇ, ಪ್ರವೃದ್ಧವಾದ ಕರ್ಮಗಳಿಗೆ ಪ್ರಭುವಾದವನೂ, ದೇವತೆಗಳಿಗೆ ಸಂಬಂಧಿಸಿದವನೂ, ಸ್ವಗಣಕ್ಕೆ

ಒಡೆಯನೂ, ಕ್ರಾಂತದರ್ಶಿಗಳಾದ ಕವಿಗಳಲ್ಲಿ ಅತ್ಯುತ್ತಮನಾದ ಕವಿಯಾದವನೂ, ಪರಮಶ್ರೇಷ್ಠವಾದ ದೈವೀ ಪ್ರೇರಣೆಯನ್ನು ನಮಗೆ ಕೇಳಿಸುವಂತೆ ಮಾಡುವವನೂ, ಮಂತ್ರಗಳಿಗೆ ಒಡೆಯನೂ, ಆದ ನಿನ್ನನ್ನೂ ಈ ಕರ್ಮನಿಮಿತ್ತವಾಗಿ ಕರೆಯುತ್ತೇವೆ. ನಮ್ಮ ಸ್ತುತಿಗಳನ್ನು ಕೇಳುತ್ತಾ ನಿನ್ನ ರಕ್ಷಣೆಗಳೊಡನೆ ಯಜ್ಞಗೃಹಕ್ಕೆ ಬಂದು ಕುಳಿತುಕೊ"

ಯೋ ನನ್ತ್ವಾನ್ಯನ್ನೋಜಸೋತಾದರ್ದರ್ಮನ್ಯುನಾ ಶಂಬರಾಣಿ ವಿ ।
ಪ್ರಾಚ್ಯಾವಯದಚ್ಯುತಾ ಬ್ರಹ್ಮಣಸ್ಪತಿರಾ ಚಾವಿಶದ್ವಸುಮಂತಂ ವಿ ಪರ್ವತಂ ।। (ಋ ೨-೨೪-೨ ಸಾ ಭಾ)
"ಪ್ರಸಿದ್ಧನಾದ ಬ್ರಹ್ಮಣಸ್ಪತಿಯು ಶಿಕ್ಷೆಗೆ ಅರ್ಹರಾದ ಅಸುರರನ್ನು ತನ್ನ ಬಲದಿಂದ ಶಿಕ್ಷಿಸಿ ಅವರನ್ನು ನಮ್ರರಾಗುವಂತೆ ಮಾಡಿದನು....ಚಲನವಿಲ್ಲದೇ ಸ್ಥಿತವಾದ ಉದಕಗಳನ್ನು ಪ್ರವಹಿಸುವಂತೆ ಮಾಡಿದನು. ಗೋರೂಪವಾದ ಧನವುಳ್ಳ ಪರ್ವತವನ್ನು ಸಮೀಪಿಸಿ ಅದನ್ನು ಪ್ರವೇಶಿಸಿದನು."

(ವೃತ್ರನಿಂದಾಗಿ ಹರಿಯುತ್ತಿದ್ದ ಉದಕಗಳು ತಟಸ್ಥವಾಗಿದ್ದವು. ಇದೇ ರೀತಿ ನಮ್ಮಲ್ಲಿಯೂ ಉದಕಗಳು ತಟಸ್ಥವಾಗಿವೆ.)

ಋತಜ್ಯೇನ ಕ್ಷಿಪ್ರೇಣ ಬ್ರಹ್ಮಣಸ್ಪತಿರ್ಯತ್ರ ವಷ್ಟಿ ಪ್ರ ತದಶ್ನೋತಿ ಧನ್ವನಾ ।
ತಸ್ಯ ಸಾಧ್ವೀರಿಷವೋ ಯಾಭಿರಸ್ಯತಿ ನೃಚಕ್ಷಸೋ ದೃಶಯೇ ಕರ್ಣಯೋನಯಃ ।। (ಋ ೨-೨೪-೮ ಸಾಭಾ)
"ಸತ್ಯಾತ್ಮಕವಾದ ಹೆದೆಯುಳ್ಳದ್ದೂ, ವೇಗವಾಗಿ ಬಾಣವನ್ನು ಬಿಡತಕ್ಕದ್ದೂ ಆದ ಧನುಸ್ಸಿನಿಂದ ಬ್ರಹ್ಮಣಸ್ಪತಿಯು ಯಾವ ಲಕ್ಷ್ಯದಲ್ಲಿ ಗುರಿಯಿಟ್ಟು ಆಪೇಕ್ಷಿಸುತ್ತಾನೆಯೋ, ಅದನ್ನು ಪೂರ್ಣವಾಗಿ ಹೊಂದುತ್ತಾನೆ. ಯಾವ ಬಾಣಗಳಿಂದ ಬ್ರಹ್ಮಣಸ್ಪತಿಯು ರಾಕ್ಷಸಾದಿಗಳನ್ನು ಉರುಳಿಸುತ್ತಾನೆಯೋ ಅಂತಹುದು, ಸರ್ವಜ್ಞನಾದ ಬ್ರಹ್ಮಣಸ್ಪತಿಯ ಜ್ಞಾನಾರ್ಥವಾಗಿ ಉತ್ಪನ್ನವಾದವೂ, ಶ್ರೋತ್ರೇಂದ್ರಿಯದಿಂದ ಗ್ರಾಹ್ಯವಾಗತಕ್ಕ ಮಂತ್ರಭೂತಾತ್ಮಕವೂ ಆದ ಆ ಧನುಸ್ಸಿನ ಬಾಣಗಳು ತಮ್ಮ ಕೆಲಸವನ್ನು ಸಾಧಿಸತಕ್ಕವಾಗಿವೆ."

ತದೇವಾನಾಂ ದೇವತಮಾಯ ಕರ್ತ್ವಮಶ್ರಥ್ನನ್ದೃಳ್ಹಾವ್ರದಂತ ವೀಳಿತಾ ।
ಉದ್ಗಾ ಅಜದಭಿನದ್ಬ್ರಹ್ಮಣಾ ವಲಮಗೂಹತ್ತಮೋ ವ್ಯಚಕ್ಷಯತ್ಸ್ವಃ ।। (ಋ ೨-೨೪-೩ ಸಾ ಭಾ)
"ಇಂದ್ರಾದಿದೇವತೆಗಳ ನಡುವೆ ಅತ್ಯುತ್ತಮ ದೇವತೆಯಾದ ಬ್ರಹ್ಮಣಸ್ಪತಿಯು.... ದೃಢವಾದ ಪರ್ವತಾದಿಗಳನ್ನು ಶಿಥಿಲವಾಗುವಂತೆ ಮಾಡಿದನು (ವೃತ್ರನ ಮಾಯಾಜಾಲದಿಂದ ನಿರ್ಮಿತವಾದ ಪರ್ವತ). ದೃಢವಾಗಿ ಬೇರೂರಿದ ವೃಕ್ಷಾದಿಗಳನ್ನು ಮೃದುವಾದ ಸ್ಥಿತಿಯುಳ್ಳವಂತೆ ಮಾಡಿದನು. ವಲನಿಂದ ಅಪಹೃತವಾದ ಗೋವುಗಳನ್ನು (ಜ್ಞಾನವೆಂಬ ಗೋವುಗಳು) ದೇವತೆಗಳ ಅಭಿಮುಖವಾಗಿ ಹೋಗುವಂತೆ ಮಾಡಿದನು. ತನ್ನ ಮಂತ್ರದಿಂದ ವಲನೆಂಬ ಅಸುರನನ್ನು ಬೆದರಿಸಿ ಓಡಿಸಿದನು. ಮತ್ತು ಅವನನ್ನು ನಾಶಮಾಡಿದನು. ಅಂಧಕಾರವನ್ನು ಚದುರಿಸಿ ಕಣ್ಮರೆಯಾಗುವಂತೆ ಮಾಡಿದನು. ಆದಿತ್ಯನನ್ನು ಪ್ರಕಾಶಿಸುವಂತೆ ಮಾಡಿದನು."

ವಿಶ್ವೇಭ್ಯೋ ಹಿ ತ್ವಾ ಭುವನೇಭ್ಯಸ್ಪರಿ ತ್ವಷ್ಟಾಜನತ್ಸಾಮ್ನಃಸಾಮ್ನಃ ಕವಿಃ ।
ಸ ಋಣಚಿದೃಣಯಾ ಬ್ರಹ್ಮಣಸ್ಪತಿರ್ದ್ರುಹೋ ಹನ್ತಾ ಮಹ ಋತಸ್ಯ ಧರ್ತರಿ ।। (ಋ ೨-೨೩-೧೭ ಸಾ ಭಾ)
"ಎಲೈ ಬ್ರಹ್ಮಣಸ್ಪತಿಯೇ, ತ್ವಷ್ಟೃ ಪ್ರಜಾಪತಿಯು ನಿನ್ನನ್ನು ಸಮಸ್ತವಾದ ಭುವನಗಳಿಗಿಂತಲೂ ಉತ್ಕೃಷ್ಟವಾಗಿ ಸೃಷ್ಟಿಸಿದ್ದಾನಲ್ಲವೇ. ಸಾಮರೂಪವಾದ ಪ್ರತಿಯೊಂದು ಸ್ತೋತ್ರಕ್ಕೂ ನೀನೇ ಕರ್ತೃವೂ ಕವಿಯೂ ಆಗಿದ್ದೀಯೆ. ಅದೇ ಬ್ರಹ್ಮಣಸ್ಪತಿಯು ಮಹತ್ತಾದ ಯಜ್ಞದ ಧಾರಕನಾದ ಯಜಮಾನನ ವಿಷಯದಲ್ಲಿ ಉಪಕಾರವನ್ನು ಮಾಡಬೇಕೆಂಬ ಕೃತಜ್ಞತಾ ಭಾವನೆಯನ್ನಿಟ್ಟಿದ್ದಾನೆ. ಅಲ್ಲದೇ ಪಾಪರೂಪವಾದ ಋಣವನ್ನು ನಾಶಮಾಡುವವನೂ, ದ್ರೋಹಿಯಾದ ಅಸುರನ ನಾಶಕನೂ ಆಗಿದ್ದಾನೆ."
(ಇಂದ್ರನು ಕಾರಣಶರೀರ ಮತ್ತು ಅವನ ಅಪ್ಪಣೆಯಂತೆ ವಿಶ್ವವನ್ನು ಸೃಷ್ಟಿಸಿರುವುದರಿಂದ ಅವನು ಆದಿ ಪ್ರಜಾಪತಿ. ತ್ವಷ್ಟಾ ದೇವತೆಯು ನಮ್ಮೆಲ್ಲರಿಗೂ ರೂಪ ಮತು ಆಕಾರ ಕೊಡುವುದರಿಂದ ಅವನನ್ನು ಪ್ರಜಾಪತಿ ಎಂದು ಕರೆಯುತ್ತಾರೆ. ಸೂರ್ಯ-ಸವಿತೃವು ನಮ್ಮೆಲ್ಲರಿಗೂ ಸ್ಥೂಲ ಶರೀರವನ್ನು ಅನುಗ್ರಹಿಸಿರುವುದರಿಂದ ಅವನೂ ಸಹ ಪ್ರಜಾಪತಿಯೆಂದು ಕರೆಯಲ್ಪಡುತ್ತಾನೆ.)

ಬ್ರಹ್ಮಣಸ್ಪತೇರಭವದ್ಯಥಾವಶಂ ಸತ್ಯೋ ಮನ್ಯುರ್ಮಹಿ ಕರ್ಮಾ ಕರಿಷ್ಯತಃ ।
ಯೋ ಗಾ ದಾಜತ್ಸ ದಿವೇ ವಿ ಚಾಭಜನ್ಮಹೀವರೀತಿಃ ಶವಸಾಸರತ್ಪೃಥಕ್ ।। (ಋ ೨-೨೪-೧೪ ಸಾ ಭಾ)
"ಮಹತ್ತಾದ ಕರ್ಮಗಳನ್ನು ನೆರವೇರಿಸತಕ್ಕ ಬ್ರಹ್ಮಣಸ್ಪತಿಯ ಮನನ ಸಾಧನದಿಂದ ಮಂತ್ರವು ಅವನ ಇಷ್ಟದಂತೆ ಸತ್ಯಫಲವುಳ್ಳದ್ದಾಗಿ ಆಯಿತು. ಯಾವ ಬ್ರಹ್ಮಣಸ್ಪತಿಯು ಪಣಿಗಳಿಂದ ಅಪಹೃತವಾದ ಗೋವುಗಳನ್ನು ಗುಹೆಯಿಂದ ಬಿಡಿಸಿ ಹೊರಡಿಸಿದನೋ ಅದೇ ಬ್ರಹ್ಮಣಸ್ಪತಿಯು ಆ ಗೋವುಗಳನ್ನು ದೇವಲೋಕದಲ್ಲಿ ದೇವತೆಗಳಿಗೆ ವಿಭಾಗ ಮಾಡಿ ಹಂಚಿದನು. ಆನಂತರ ಆ ಗೋಸಮೂಹವು ನದಿಗಳ ಪ್ರವಾಹಗಳು ಕವಲಾಗಿ ಒಡೆದು ಬೇರೆ ಬೇರೆಯಾಗಿ ಹರಿಯುವಂತೆ ಸ್ವಬಲದಿಂದ ದೇವತೆಗಳ ಗೃಹಕ್ಕೆ ಬೇರೆ ಬೇರೆಯಾಗಿ ಹೋದವು."

ಉತಿಷ್ಠ ಬ್ರಹಣಸ್ಪತೇ ದೇವಯಂತಸ್ತ್ವೇಮಹೆ ೧
ಉಪ ಪ್ರ ಯಂತು ಮರುತಃ ಸುದಾನವ ಇಂದ್ರಪ್ರಾಶೂರ್ಭವಾ ಸಚಾ ೧೧ (ಋ ೧–೪೦–೧ ಸಾ ಭಾ)
"ಎಲೈ ಬ್ರಹ್ಮಣಸ್ಪತಿಯೇ, ನಮಗೆ ಅನುಗ್ರಹ ಮಾಡುವುದಕ್ಕಾಗಿ ಸ್ವಸ್ಥಾನದಿಂದ ಎದ್ದೇಳು. ನಿನ್ನ ರಕ್ಷಣೆಯನ್ನು ಕೊಡು ಎಂದು ದೇವತೆಗಳ ಸಹಾಯವನ್ನು ಆಪೇಕ್ಷಿಸುವ ನಾವು ನಿನ್ನನ್ನು ಪ್ರಾರ್ಥಿಸುತ್ತೇವೆ. ಮಂಗಳಕರಗಳಾಗಿಯೂ ಉದಾರವಾಗಿಯೂ ನಮಗೆ ದಾನಗಳನ್ನು ಕೊಡತಕ್ಕ ಮರುತ್ತುಗಳು ನಮ್ಮ ಸಮೀಪಕ್ಕೆ ಬರಲಿ. ಎಲೈ ಇಂದ್ರನೇ ಬ್ರಹ್ಮಣಸ್ಪತಿಯೊಡನೆ ಸೋಮರಸವನ್ನು ಪಾನಮಾಡು ಅಥವಾ ವೃತ್ರಾಸುರನ ನಾಶಕನಾಗಿ ಆಗು."

ಪ್ರೈತು ಬ್ರಹ್ಮಣಸ್ಪತಿಃ ಪ್ರ ದೇವ್ಯೇತು ಸೂನೃತಾ೧
ಅಚ್ಛಾ ವೀರಂ ನರ್ಯಂ ಪಂಕ್ತಿರಾಧಸಂ ದೇವಾ ಯಜ್ಞಂ ನಯಂತು ನಃ. (ಋ ೧–೪೦–೩ ಸಾ ಭಾ)
"ದೇವನಾದ ಬ್ರಹ್ಮಣಸ್ಪತಿಯೂ ಸತ್ಯಪ್ರಿಯರೂಪಳಾಗಿರುವ ವಾಗ್ದೇವತೆಯೂ ಮತ್ತು ಇತರ ದೇವತೆಗಳೂ ಸಹ ನಮ್ಮ ಸಮೀಪಕ್ಕೆ ದಯಮಾಡಿ ಬರಲಿ. ಯಜ್ಞವಿಘ್ನಕಾರಿಯಾಗಿಯೂ ಬಲಶಾಲಿಯಾಗಿಯೂ ಇರುವ ಶತ್ರುವನ್ನು ದೂರಕ್ಕೆ ಓಡಿಸಲಿ. ನಮಗೆ ಒಳ್ಳೆಯದನ್ನು ಮಾಡುವ ಬ್ರಾಹ್ಮಣೋಕ್ತವಾದ ಹವಿಸ್ಸಿನ ಪಂಕ್ತಿಗಳಿಂದ ತುಂಬಿರುವ ಯಜ್ಞಕ್ಕೆ ಅಭಿಮುಖವಾಗಿ ನಮ್ಮನ್ನು ಸುರಕ್ಷಿತವಾಗಿ ಕರೆದುಕೊಂಡು ಹೋಗಲಿ."

ಪ್ರ ನೂನಂ ಬ್ರಹ್ಮಣಸ್ಪತಿರ್ಮಂತ್ರಂ ವದತ್ಯುಕ್ಥ್ಯಂ ೧
ಯಸ್ಮಿನ್ನಿಂದ್ರೋ ವರುಣೋ ಮಿತ್ರೋ ಆರ್ಯಮಾ ದೇವಾ ಓಕಾಂಸಿ ಚಕ್ರಿರೇ ೧೧ (ಋ ೧–೪೦–೫ ಸಾ ಭಾ)
"(ಬ್ರಹ್ಮಣಸ್ಪತಿಯು) ಯಜ್ಞಕಾಲದಲ್ಲಿ ಪಠಿಸುವ ಮಂತ್ರದಲ್ಲಿ ಇಂದ್ರನೂ, ವರುಣನೂ, ಮಿತ್ರನೂ ಆರ್ಯಮನೂ ಇನ್ನೂ ಸಕಲ ದೇವತೆಗಳೂ ತಮ್ಮ ವಾಸಸ್ಥಾನವನ್ನು ಮಾಡಿಕೊಂಡಿರುವರು. ಎಂದರೆ ಆ ಮಂತ್ರವು ಸಕಲದೇವತಾ ಪ್ರತಿಪಾದಕವಾಗಿರುವುದು. ಬ್ರಹ್ಮಣಸ್ಪತಿಯು ಹೋತೃವಿಗೆ ಅನುಗ್ರಹಮಾಡಿ ಅವನ ಮುಖದಲ್ಲಿದ್ದುಕೊಂಡು ಸ್ತೋತ್ರಯೋಗ್ಯವಾಗಿಯೂ, ಸಕಲ ದೇವತಾಪ್ರತಿಪಾದಕವಾಗಿಯೂ ಇರುವ ಮಂತ್ರವನ್ನು ಸ್ಪಷ್ಟವಾಗಿ ಪಠಿಸುತ್ತಾನೆ."

ಮೇಲಿನ ಮಂತ್ರಗಳು ಮಾನವಶರೀರದಲ್ಲಿ ಅಸುರ ಶಕ್ತಿಗಳನ್ನು ಓಡಿಸುವುದರ ಕುರಿತು ಹೇಳುತ್ತಿದೆ. ಪಿಂಡಾಂಡದಲ್ಲಿ ಬ್ರಹ್ಮಣಸ್ಪತಿ ಮತ್ತು ಬೃಹಸ್ಪತಿಯರು ತಮ್ಮ ಮಂತ್ರಪಠನದಿಂದ ಅಸುರಶಕ್ತಿಗಳನ್ನು ಓಡಿಸಿದರೂ, ಬ್ರಹ್ಮಾಂಡದಲ್ಲಿ ಅಸುರರನ್ನು ನಿಗ್ರಹಿಸುವನು ಇಂದ್ರನಾಗಿದ್ದಾನೆ.

ಏಕೆಂದರೆ ಆದಿತ್ಯರು ಪ್ರಕಟವಾಗಿ ವಿರಾಟ್ ಪುರುಷನಲ್ಲಿ ಸೂಕ್ಷ್ಮ ಸೂರ್ಯನನ್ನು ಸೃಷ್ಟಿಸಿದ ತರುವಾಯವೇ ಇಂದ್ರ ಮತ್ತು ವೃತ್ರಾಸುರರ ಯುದ್ಧವಾಯಿತು. ದೇವತೆಗಳ ಸೃಷ್ಟಿಕ್ರಿಯೆಯ ಪ್ರಾರಂಭದ ಮೊದಲು ಬೃಹಸ್ಪತಿ ಮತ್ತು ಬ್ರಹ್ಮಣಸ್ಪತಿಗಳು ಅಸುರರ ಮೇಲೆ ಯುದ್ಧ ಮಾಡುವ ಪ್ರಮೇಯವೇ ಇರಲಿಲ್ಲ. ವೃತಹನನಕ್ಕಾಗಿ ಮತ್ತು ಇಂದ್ರನಿಗೆ ಸೋಮರಸವನ್ನರ್ಪಿಸಲು ದೇವತೆಗಳು ಮಾಡಿದ ಪ್ರಥಮ ಯಜ್ಞಕ್ಕೆ ಬೃಹಸ್ಪತಿ ಮತ್ತು ಬ್ರಹ್ಮಣಸ್ಪತಿಗಳೇ ಋತ್ವಿಜರು ಆಗಿದ್ದರು.

ನಮ್ಮ ಪಿಂಡಾಂಡದ ಹೃದಯ ಗುಹೆಯಲ್ಲಿರುವ ಇಂದ್ರನನ್ನೂ ಸೇರಿಸಿ ಎಲ್ಲಾ ದೇವತೆಗಳು ವೃತ್ರಾಸುರನ ಅಂಧಕಾರದಲ್ಲಿ ಮುಳುಗಿ ನಮಗೆ ಕಾಣಿಸದಂತಾಗುತ್ತಾರೆ. ಆದ್ದರಿಂದ ನಾವು ಮೊದಲು ಬೃಹಸ್ಪತಿ ಮತ್ತು ಬ್ರಹ್ಮಣಸ್ಪತಿಯನ್ನು ಜಾಗೃತಮಾಡಬೇಕಿದೆ. ಯೋಗಿಯು ಯಾವಾಗ ಅವರನ್ನು ತನ್ನೊಳಗೆ ಜಾಗೃತಮಾಡುತ್ತಾನೋ, ಆಗ ಬೃಹಸ್ಪತಿ ಮತ್ತು ಬ್ರಹ್ಮಣಸ್ಪತಿ ದೇವತೆಗಳು ತಮ್ಮ ಮಂತ್ರಶಕ್ತಿಯಿಂದ ಅಸುರರನ್ನು ಓಡಿಸಿ ಅಂಧಕಾರದ ಸರಪಳಿಗಳನ್ನು ತುಂಡು ಮಾಡಿ, ದೇವತೆಗಳು ಪ್ರಕಟವಾಗುವುದಕ್ಕೆ ಯೋಗಿಯ ಶರೀರವನ್ನು ಸಿದ್ಧಪಡಿಸುತ್ತಾರೆ.

ಯೋಗಿಯು ತನ್ನ ಆಧ್ಯಾತ್ಮಿಕ ಮಾರ್ಗವನ್ನು ಶುರು ಮಾಡಿದಾಗ ಅನೇಕ ಅಡಚಣೆಗಳು ಬರುತ್ತದೆ. ಇದರಿಂದ ಆತನು ತನ್ನ ಮಾರ್ಗದಲ್ಲಿ ಅಸಫಲತೆಯನ್ನು ಪಡೆಯುತ್ತಾನೆ. ಕೆಲವರು ತಮ್ಮ ಸಾಧನೆಯನ್ನು ಮಧ್ಯದಲ್ಲಿಯೇ ಬಿಟ್ಟುಬಿಡುತ್ತಾರೆ. ಇವೆಲ್ಲದಕ್ಕೂ ಕಾರಣ ನಮ್ಮನ್ನು ಆವರಿಸಿರುವ ಅಸುರಶಕ್ತಿಗಳೇ ಆಗಿವೆ. ನಮ್ಮ ಸಾಧನೆಯು ಅಸುರರಿಂದಲೇ ಮಧ್ಯದಲ್ಲಿ ತುಂಡಾಯಿತು ಎಂಬ ಸಂಗತಿ ನಮಗೆ ತಿಳಿಯುವುದಿಲ್ಲ.

ಯೋಗಿಯು ಮತ್ತೆ ಮತ್ತೆ ಪ್ರಯತ್ನ ಮಾಡುತ್ತಾನೆ. ಬ್ರಹ್ಮಣಸ್ಪತಿಯು ಸಂತುಷ್ಟನಾಗಿ ನಮ್ಮ ಶರೀರದಲ್ಲಿ ಜಾಗೃತನಾದಾಗ ಅವನು ಎಲ್ಲಾ ಅಡೆತಡೆಗಳನ್ನು ನಿವಾರಿಸುತ್ತಾನೆ. ಆದ್ದರಿಂದ ಬ್ರಹ್ಮಣಸ್ಪತಿಯನ್ನು 'ವಿಘ್ನನಾಶಕ" 'ವಿಘ್ನಪರಿಹಾರಕ'ನೆಂದು ಕರೆಯುತ್ತಾರೆ. ಈ ಕಾರಣದಿಂದಲೇ ಯಜ್ಞಯಾಗಾದಿ ಕಾರ್ಯಗಳಲ್ಲಿ ಬೃಹಸ್ಪತಿ ಮತ್ತು ಬ್ರಹ್ಮಣಸ್ಪತಿಯನ್ನು ಮೊದಲು ಪೂಜಿಸುತ್ತಾರೆ.

## ಸರಸ್ವತಿ, ಮಹಿ, ಭಾರತಿ ಮತ್ತು ಇಳಾ

ವಿರಾಟ್‌ಪುರುಷನಲ್ಲಿ ಬ್ರಹ್ಮ, ಬೃಹಸ್ಪತಿ ಮತ್ತು ಬ್ರಹ್ಮಣಸ್ಪತಿ ದೇವತೆಗಳು ಪ್ರಕಟವಾದ ಮೇಲೆ ಸರಸ್ವತಿ, ಮಹಿ ಭಾರತಿ ಮತ್ತು ಇಳಾ ಎಂಬ ವಾಗ್ದೇವತೆಗಳು ಪ್ರಕಟರಾದರು. ನಮ್ಮ ಆಧ್ಯಾತ್ಮಿಕ ಪ್ರಯಾಣವು ಕೇವಲ ಇಂದ್ರ, ಸವಿತೃ ಇತ್ಯಾದಿ ದೇವತೆಗಳ ಅನುಗ್ರಹವನ್ನು ಪಡೆದರೆ ಸಂಪೂರ್ಣವಾಗುವುದಿಲ್ಲ. ಅದು ಕೇವಲ ಅರ್ಧ ಪ್ರಯಾಣ ಮಾತ್ರ. ನಮ್ಮ ಆಧ್ಯಾತ್ಮಿಕ ಪ್ರಯಾಣವು ಸಂಪೂರ್ಣವಾಗಲು ಹೆಣ್ಣು ದೇವತೆಗಳ ಅನುಗ್ರಹವು ಅತಿ ಮುಖ್ಯವಾಗಿದೆ ಎಂದು ವೇದವು ಹೇಳುತ್ತದೆ.

ಸರಸ್ವತಿ, ಭಾರತಿ, ಮಹಿ ಮತ್ತು ಇಳಾ ದೇವತೆಗಳಿರುವ ಸೂಕ್ತಗಳನ್ನು ಅಪ್ರಿ ಸೂಕ್ತಗಳೆಂದು ಕರೆಯುತ್ತಾರೆ. ಅಪ್ರಿ ಪದದ ಅರ್ಥ ತುಂಬುವುದು. ಈ ಸೂಕ್ತದಲ್ಲಿರುವ ದೇವಿದೇವತೆಯರು ತಮ್ಮ ತೇಜಸ್ಸು ಮತ್ತು ಮಹಿಮೆಯನ್ನು ಯಜಮಾನನಲ್ಲಿ ತುಂಬುವರು. ಅಪ್ರಿ ಸೂಕ್ತವು ನಮ್ಮಲ್ಲಿ ತೇಜಸ್ಸನ್ನೂ ಬ್ರಹ್ಮವರ್ಚಸ್ಸನ್ನೂ ತುಂಬುವುದು. ಅದರಲ್ಲೂ ಅದಿತಿ ಮತ್ತು ಸರಸ್ವತೀದೇವತೆಗಳ ಅನುಗ್ರಹ ಮತ್ತು ಆಶೀರ್ವಾದವು ಬಹಳ ಮುಖ್ಯವಾಗಿದೆ. ಅದಿತಿಯ ಮಹಿಮೆಯನ್ನು ನಾವು ನೋಡಿದೆವು. ಈಗ ಸರಸ್ವತಿ ದೇವತೆಯ ಬಗ್ಗೆ ತಿಳಿದುಕೊಳ್ಳೋಣ.

ಬ್ರಹ್ಮನು ಮಂತ್ರಭಂಡಾರದ ಅಧಿದೇವತೆಯಾಗಿದ್ದಾನೆ. ಆದರೆ ಸರಸ್ವತಿಯು ಮಂತ್ರಭಂಡಾರದಲ್ಲಿರುವ ಅನಂತವಾದ ವಿದ್ಯಾ ಸಮೂಹಕ್ಕೆ ಅಧಿಪತಿಯಾಗಿದ್ದಾಳೆ. ಆದ್ದರಿಂದ ಸರಸ್ವತಿಯನ್ನು ಜ್ಞಾನದ ಅಧಿದೇವತೆಯೆಂದು ಕರೆಯುತ್ತಾರೆ. ಆಕೆಯು ತನ್ನ ಜ್ಞಾನಶಕ್ತಿಗಳಿಂದ ಅಸುರರನ್ನು ಓಡಿಸುತ್ತಾಳೆ. ಏಕೆಂದರೆ ಎಲ್ಲಿ ದರ್ಶನ ಮತ್ತು ಅನುಭವ ಪೂರ್ವಕ ಜ್ಞಾನ ಮತ್ತು ವಿದ್ಯಾ ಸ್ವರೂಪಳಾದ ಸರಸ್ವತಿಯು ಇರುವಳೋ ಅಲ್ಲಿ ಅಜ್ಞಾನ ಮತ್ತು ಅವಿದ್ಯೆಯಿಂದ ನಮ್ಮನ್ನು ಆವರಿಸುವ ಅಸುರರು ಇರುವುದಿಲ್ಲ.

ನಾವು ಸರಸ್ವತಿಯ ಅನುಗ್ರಹ ಪಡೆದರೆ, ಮಾತೆಯು ಅನಂತವಾಗಿರುವ ವಿದ್ಯಾಸಮೂಹದಿಂದ ಒಂದೊಂದೇ ವಿದ್ಯೆಯನ್ನು ನಮ್ಮ ಅರಿವಿಗೆ ತರುವಳು.

- ಸರಸ್ವತಿ ದೇವಿಯು ನಮ್ಮ ಶರೀರ ಮತ್ತು ಆತ್ಮವನ್ನು ಪರಿಶುದ್ಧಗೊಳಿಸುವಳು.
- ನಮ್ಮ ಆತ್ಮದ ವಿಮೋಚನೆ/ಬಿಡುಗಡೆಗೆ ಸರಸ್ವತಿ ದೇವಿಯು ಪ್ರಮುಖ ಕಾರಣ.
- ಸರಸ್ವತಿ ದೇವಿಯು ಜ್ಞಾನವನ್ನು ಪಡೆಯಲು ನಮ್ಮನ್ನು ಪ್ರೋತ್ಸಾಹಿಸುವಳು.
- ಸತ್ಯವನ್ನು ನಮ್ಮಲ್ಲಿ ಜಾಗೃತಮಾಡುವಳು.
- ಅಪಾರವಾದ ಜಲರಾಶಿಯಂತಿರುವ ವಿದ್ಯಾ ಸಮೂಹವನ್ನು ನಮ್ಮ ಅರಿವಿಗೆ ತರುವಳು.
- ಸರಸ್ವತಿ ದೇವಿಯು ಸಿಡಿಲು ಮಿಂಚಿನ ದೇವತೆಯಾಗಿದ್ದಾಳೆ. ಸರಸ್ವತಿಯ ಜೊತೆಯಲ್ಲಿ ಮರುದ್ಗಣಗಳು ಬರುವಾಗ ಎದೆಯ ಮಧ್ಯಭಾಗದಲ್ಲಿ ಸಿಡಿಲು ಮಿಂಚು ಹೊಡೆಯುತ್ತದೆ.

ಈಗ ಋಗ್ವೇದದ ಕೆಲವು ಮಂತ್ರಗಳನ್ನು ನೋಡೋಣ.

ಸರಸ್ವತೀಂ ದೇವಯಂತೋ ಹವಂತೇ ಸರಸ್ವತೀಮಧ್ವರೇ ತಾಯಮಾನೇ ෆ
ಸರಸ್ವತೀಂ ಸುಕೃತೋ ಅಹ್ವಯಂತ ಸರಸ್ವತೀ ದಾಶೂಷೇ ವರ್ಯಂ ದಾತ್ ෆෆ (ಋ ೧೦-೧೭-೭ ಸಾಭಾ)
"ದೇವತೆಗಳನ್ನಪೇಕ್ಷಿಸುವರು ಸರಸ್ವತಿ ದೇವಿಯನ್ನು ಪ್ರಾರ್ಥಿಸಿ ಕರೆಯುತ್ತಾರೆ. ವಿಸ್ತೃತವಾಗಿ ನೆರವೇರುವ ಯಜ್ಞದಲ್ಲಿ ಸರಸ್ವತಿಯನ್ನು ಪೂಜಿಸುತ್ತಾರೆ. ಉತ್ತಮವಾದ ಕರ್ಮವಂತರು ಸರಸ್ವತಿಯನ್ನು ಫಲಪ್ರಾಪ್ತಿಗಾಗಿ ಕರೆಯು ತ್ತಾರೆ. ಸರಸ್ವತಿ ದೇವಿಯು ಹವಿಸ್ಸನ್ನು ಅರ್ಪಿಸಿದ ಯಜಮಾನನಿಗೆ ಅಪೇಕ್ಷಿತವಾದ ಫಲವನ್ನು ಕೊಡಲಿ."

ಆ ನೋ ದಿವೋ ಬೃಹತಃ ಪರ್ವತಾದಾ ಸರಸ್ವತೀ ಯಜತಾ ಗಂತು ಯಜ್ಞಂ ෆ
ಹವಂ ದೇವೀ ಜುಜುಷಾಣ ಘೃತಾಚೀ ಶಗ್ಮಾಂ ನೋ ವಾಚಮುಶತೀ ಶೃಣೋತು ෆෆ (ಋ ೫-೪೩-೧೧ ಸಾಭಾ)
"ಪೂಜ್ಯಳಾದ ಸರಸ್ವತಿ ದೇವಿಯು ನಮ್ಮ ಯಜ್ಞಕ್ಕೆ ದ್ಯುಲೋಕದಿಂದಾಗಲೀ ಅಥವಾ ಮಹತ್ತಾದ ಅಂತರಿಕ್ಷಲೋಕದಿಂದಾಗಲೀ ದಯಮಾಡಲಿ. ದೇವತಾತ್ಮಳಾದ ಸರಸ್ವತಿಯು ನಮ್ಮ ಪ್ರಾರ್ಥನಾರೂಪವಾದ ಸ್ತುತಿಯನ್ನು ಇಚ್ಛಿಸುತ್ತಾ ಸೇವಿಸಿ, ಉದಕ ಚೇತನವನ್ನು ಮಾಡುತ್ತಲೂ ನಮ್ಮ ಸುಖಕಾರಕವಾದ ಸ್ತುತಿಯನ್ನು ಇಚ್ಛಿಸುತ್ತಾ ಅದನ್ನು ಲಾಲಿಸಿ ಕೇಳಲಿ."

**ಸರಸ್ವತಿಯನ್ನು ಸಿಡಿಲು ಮಿಂಚಿನ ದೇವತೆ ಎಂದು ಕರೆಯುತ್ತಾರೆ.**

ಸರಸ್ವತೀ ತ್ವಮಸ್ಮಾನ್ ಅವಿಡ್ಢಿ ಮರುತ್ವತೀ ಧೃಷತೀ ಜೇಷಿ ಶತ್ರೂನ್ ।
ತ್ಯಂ ಚಿಚ್ಛರ್ಧಂತಂ ತವಿಷೀಯಮಾಣಮಿಂದ್ರೋ ಹಂತಿ ವೃಷಭಂ ಶಂಡಿಕಾನಾಂ ।। (ಋ ೨-೩೦-೮ ಸಾಭಾ)
"ಎಲೈ ಸರಸ್ವತಿ ದೇವಿಯೇ, ನೀನು ಸ್ತೋತೃಗಳಾದ ನಮ್ಮನ್ನು ರಕ್ಷಿಸು. ಮರುದ್ದೇವತೆಗಳೊಡನೆ ಕೂಡಿದವಳೂ, ಶತ್ರುಗಳನ್ನು ಮರ್ದನಮಾಡುವವಳೂ ಆಗಿ ನೀನು ಶತ್ರುಗಳನ್ನು ಜಯಿಸು....."

ವಿದ್ಯುದ್ರಥಾ ಮರುತ ಋಷ್ಟಿಮಂತೋ ದಿವೋ ಮರ್ಯಾ ಋತಜಾತಾ ಅಯಾಸಃ ।
ಸರಸ್ವತೀ ಶೃಣವನ್ಯಜ್ಞಿಯಾಸೋ ಧಾತಾ ರಯಿಂ ಸಹವೀರಂ ತುರಾಸಃ ।। (ಋ ೩-೫೪-೧೩ ಸಾಭಾ)
"ಮಿಂಚಿನಂತೆ ಪ್ರಕಾಶಿಸುವ ರಥವುಳ್ಳವರೂ, ಕಾಂತಿಯುತವಾದ ಆಯುಧವುಳ್ಳವರೂ, ಪ್ರಕಾಶಮಾನರೂ, ಶತ್ರುನಾಶಕರೂ, ಉದಕದಿಂದ ಉತ್ಪನ್ನರಾದವರೂ, ಸತತವಾದ ಗುಣವುಳ್ಳವರೂ, ಯಜ್ಞಾರ್ಹರೂ ಆದ ಮರುದ್ದೇವತೆಗಳೂ (ಇಂದ್ರನ ಸೈನಿಕರು) ಮತ್ತು ಸರಸ್ವತಿಯೂ ಸಹ ನಮ್ಮ ಸ್ತೋತ್ರಗಳನ್ನು ಕೇಳಲಿ."

ಸರಸ್ವತಿ ದೇವಿಯು ದರ್ಶನವನ್ನು ಕೊಡುವಾಗ ಮರುದ್ದೇವತೆಗಳು ಆರ್ಭಟಿಸುವರು. ಅವರು ಬರುವ ವೇಗವನ್ನು ಸಾಧಕನು ಸಹಿಸಿಕೊಳ್ಳುವುದು ಕಷ್ಟವಾಗುತ್ತದೆ. ಸಾಧಕನ ಶರೀರವು ತರಗೆಲೆಯಂತೆ ಕಂಪಿಸುವುದು. ಆದರೆ ಅದರಿಂದ ಅವನಿಗೆ ಸಾಧನೆಯಲ್ಲಿ ಮುಂದುವರೆಯಲು ಅನುಕೂಲವೇ ಆಗುವುದು. ಸರಸ್ವತಿದೇವಿಯು ಪ್ರಕಟವಾಗುವಾಗ ಸರಸ್ವತೀ ನಾಡಿಯು ಸಿಡಿಲು ಮಿಂಚಿನಂತೆ ಹೊಡೆಯುವುದು.

ಸರಸ್ವತೀ ಮಾತೆಯು ನಮಗೆ ಒಲಿದಾಗ ತನ್ನಲ್ಲಿರುವ ವಿದ್ಯಾ ಸಮೂಹವನ್ನು ಒಂದೊಂದಾಗಿ ನಮ್ಮ ಅರಿವಿಗೆ ತರುತ್ತಾಳೆ. ಈ ಪ್ರಕ್ರಿಯೆಯಲ್ಲಿ ಅವಳು ನಮ್ಮನ್ನು ಪರಿಶುದ್ಧಗೊಳಿಸುತ್ತಾಳೆ ಮತ್ತು ನಮ್ಮನ್ನು ಆವರಿಸಿರುವ ಅಂಧಕಾರ ಮತ್ತು ಅಜ್ಞಾನವನ್ನು ಪ್ರತಿನಿಧಿಸುವ ವೃತ್ರಾಸುರನನ್ನು ಓಡಿಸುತ್ತಾಳೆ. ಯಾರು ಯಜ್ಞದಿಂದ ಸರಸ್ವತಿಯನ್ನು ಆರಾಧಿಸುತ್ತಾರೋ ಅವರಿಗೆ ತನ್ನ ಸಮಸ್ತ ಜ್ಞಾನವನ್ನು ಒಂದೊಂದಾಗಿ ಅರಿವಿಗೆ ತರುತ್ತಾಳೆ. ಅದಿತಿಯ ಜ್ಞಾನಭಂಡಾರವೇ ಸರಸ್ವತಿಯಾಗಿರುವುದರಿಂದ ಅದಿತಿಯ ಪುತ್ರನಾದ ಜೀವನ ಅರಿವಿಗೆ ತರುವುದು ಸ್ವಾಭಾವಿಕವಾಗಿದೆ. ಸರಸ್ವತಿಯ ಕುರಿತು ಋಗ್ವೇದದ ಈ ಕೆಳಗಿನ ಮಂತ್ರಗಳನ್ನು ನೋಡಿ.

ಪಾವಕಾ ನಃ ಸರಸ್ವತೀ ವಾಜೇಭಿಃ ವಾಜನೀಒವತಿ ।
ಯಜ್ಞಂ ವಷ್ಟು ಧಿಯಾವಸುಃ ।। (೧-೩-೧೦ ಆರ್ ಎಲ್ ಕ)
"ಸರಸ್ವತೀದೇವಿಯು ನಮ್ಮನು ಪರಿಶುದ್ಧಿಗೊಳಿಸುವಳು.... ಯಜ್ಞಾದಿಗಳಿಂದ ಆರಾಧಿಸುವವರಿಗೆ ಸೂಕ್ತ ಫಲವನ್ನು ಕೊಡುವಳು;.... ಇಂತಹ ಸರಸ್ವತಿಯು ನಮ್ಮ ಯಜ್ಞವನ್ನು ಸಾಂಗವಾಗಿ ನೆರವೇರುವಂತೆ ಮಾಡಲಿ."

ಚೋದಯತ್ರೀ ಸೂನೃತಾನಾಂ ಚೇತಂತೀ ಸುಮತೀನಾಂ ।
ಯಜ್ಞಂ ದಧೇ ಸರಸ್ವತೀ ।। (ಋ ೧-೩-೧೧ ಆರ್ ಎಲ್ ಕ)
"ಸರಸ್ವತೀದೇವಿಯು ಪ್ರಿಯವೂ ಮತ್ತು ಸತ್ಯವೂ ಆದ ವಾಕ್ಕುಗಳನ್ನಾಡುವಂತೆ ನಮ್ಮನ್ನು ಪ್ರೇರಿಸುವಳು..... ಸತ್ಕಾರ್ಯ ಮಾಡುವುದರಲ್ಲಿ ನಮಗೆ ಜ್ಞಾಪಕಮಾಡಿ ಸಹಾಯಮಾಡುವಳು. ಅಂತಹ ಸರಸ್ವತಿಯು ನಾವು ಮಾಡುವ ಯಜ್ಞವನ್ನು ನಿರ್ವಿಘ್ನವಾಗಿ ನೆರವೇರುವಂತೆ ಮಾಡಲಿ."

ಮಹೋ ಅರ್ಣಃ ಸರಸ್ವತೀ ಪ್ರ ಚೇತಯತ ಕೇತುನಾ ।
ಧಿಯೋ ವಿಶ್ವಾ ವಿ ರಾಜತಿ ।। (ಋ ೧-೩-೧೨ ಆರ್ ಎಲ್ ಕ)
"ಸರಸ್ವತೀದೇವಿಯು ತನ್ನನ್ನು ಆರಾಧಿಸುವವರಿಗೆ, ಅಪಾರವಾದ ಜಲರಾಶಿಯಂತಿರುವ ವಿದ್ಯಾಸಮೂಹವನ್ನು ಅರಿವಿಗೆ ತರುವಳು (ನಮ್ಮ ಪ್ರಜ್ಞೆಯನ್ನು ಉದ್ದೀಪನಗೊಳಿಸುವಳು)."

ಉತ ಸ್ಯಾ ನಃ ಸರಸ್ವತೀ ಘೋರಾ ಹಿರಣ್ಯವರ್ತನಿಃ ।
ವೃತ್ರಘ್ನೀ ವಷ್ಟಿ ಸುಷ್ಟುತಿಂ ।। (ಋ ೬-೬೧-೭ ಸಾ ಭಾ)
"ಪ್ರಸಿದ್ಧಳೂ, ಶತ್ರುಗಳಿಗೆ ಭಯಂಕರಳೂ, ಸುವರ್ಣನಿರ್ಮಿತವಾದ ರಥವುಳ್ಳವಳೂ, ವೃತ್ರನಾಶಕಳೂ ಆದ ಸರಸ್ವತೀದೇವಿಯು ನಮ್ಮ ಉತ್ತಮವಾದ ಸ್ತುತಿಯನ್ನು ಆಪೇಕ್ಷಿಸಲಿ."

ಸಾ ನೋ ವಿಶ್ವಾ ಅತಿ ದ್ವಿಷಃ ಸ್ವಸ್ರೃರನ್ಯಾ ಋತಾವರೀ ।
ಅತನ್ನ ಹೇವ ಸೂರ್ಯಃ ।। (ಋ ೬-೬೧-೯ ಆರ್ ಎಲ್ ಕ)

“ಸರಸ್ವತಿಯು ನಮ್ಮನ್ನು ದ್ವೇಷಿಸುವ ಸಮಸ್ತವಾದ ಶತ್ರುಗಳಿಂದಲೂ ದಾಟಿಸಲಿ. ಸೂರ್ಯನು ಸಂಚರಿಸುತ್ತಾ ಹಗಲನ್ನು ವಿಸ್ತಾರಗೊಳಿಸುವಂತೆ, ಸತ್ಯವು ಅವಳ ಇತರ ಸಹೋದರಿಯರಲ್ಲೂ ವಿಸ್ತಾರವಾಗಿ ಹರಡಿದೆ.”

ಪ್ರ ಣೋ ದೇವೀ ಸರಸ್ವತೀ ವಾಜೇಭಿರ್ವಾಜನೀವತೀ ।
ಧೀನಾಮವಿತ್ರ್ಯವತು ।। (ಋ ೬-೬೧-೪ ಆರ್ ಎಲ್ ಕ)
“ಸರಸ್ವತಿಯು ನಮ್ಮನ್ನು ಎಲ್ಲಾ ರೀತಿಯಲ್ಲೂ ರಕ್ಷಿಸಲಿ, ಅಪಾರವಾದ (ವಿದ್ಯೆ ಎಂಬ) ಫಲದಿಂದ ನಮ್ಮನ್ನು ಸಮೃದ್ಧಗೊಳಿಸಲಿ, ನಮ್ಮ ಆಲೋಚನೆಗಳನ್ನು ಪೋಷಿಸಲಿ.”

ಮೇಲಿನ ಮಂತ್ರಗಳು ಸರಸ್ವತಿಯನ್ನು ಅಸುರ ನಾಶಕ್ಕಾಗಿ ಮತ್ತು ವಿದ್ಯಾಜ್ಞಾನಕ್ಕಾಗಿ ಪ್ರಾರ್ಥಿಸುವುದನ್ನು ಕಾಣುತ್ತೇವೆ. ಋಗ್ವೇದದ ಕೆಲವು ಮಂತ್ರಗಳು ಹಿಮಾಲಯದಲ್ಲಿದ್ದ ನದಿಯನ್ನು ಸರಸ್ವತೀ ಎಂದು ನಾಮಕರಣ ಮಾಡಿ ಆ ನದಿಯನ್ನು ಹೊಗಳುವುದನ್ನು ಕಾಣುತ್ತೇವೆ. ಆದರೆ ಮೇಲಿನ ಸೂಕ್ತಗಳಿಂದ ಸರಸ್ವತಿಯು ಪೃಥ್ವಿಯ ಮೇಲಿನ ನದಿಯಲ್ಲವೆಂಬುದು ತಿಳಿಯುತ್ತದೆ.

ನಮ್ಮ ನಾಭಿಯಲ್ಲಿ ಸುಮಾರು ೧/೨ ಇಂಚಿಗಿಂತಲೂ ಸ್ವಲ್ಪ ಹೆಚ್ಚಿರುವ ಸೂರ್ಯಮಂಡಲವಿದೆ. ಅದು ಜಾಗೃತವಾದಾಗ ಅದರ ಪ್ರಕಾಶವು ನಮ್ಮ ಸೂಕ್ಷ್ಮಶರೀರವನ್ನೆಲ್ಲಾ ವ್ಯಾಪಿಸಿಕೊಳ್ಳುವಷ್ಟು ಪ್ರಜ್ವಲಿಸುತ್ತದೆ. ಹೃದಯದಲ್ಲಿರುವ ಸೂರ್ಯನ ವ್ಯಾಸ ಸುಮಾರು ಒಂದುವರೆ ಇಂಚು ಅಗಲವಿರುವುದು. ಹೃದಯದ ಸೂರ್ಯಮಂಡಲದಲ್ಲಿ ಸವಿತೃ ದೇವತೆಯು ಪ್ರಕಟವಾದರೆ ನಾಭಿಯಲ್ಲಿರುವ ಸೂರ್ಯಮಂಡಲದಲ್ಲಿ ಯಮನು ಪ್ರಕಟನಾಗುತ್ತಾನೆ.

ಈ ಸಪ್ತಸ್ವರ್ಗಗಳನ್ನು ಮೂರು ವಿಭಾಗವಾಗಿ ಮಾಡಲಾಗಿದೆ. ಸಪ್ತಸ್ವರ್ಗದ ಮೂರು ವಿಭಾಗಗಳು ಯಾವುವೆಂದರೆ ಭೂಃ, ಭುವಃ ಮತ್ತು ಸ್ವಃ ಎಂಬ ಕೆಳಹಂತದ ಸ್ವರ್ಗ, ಅದರ ಮೇಲ್ಭಾಗದಿಂದ ಮಹಃ ಮತ್ತು ಜನಃ ಎಂದು ಕರೆಯುವ ಲೋಕಗಳನ್ನು ಮಧ್ಯಮಸ್ವರ್ಗವೆಂದೂ, ಅಲ್ಲಿಂದ ಸತ್ಯಲೋಕದವರೆಗಿನ ಸ್ಥಾನವನ್ನು ಅಂದರೆ ತಪಃ ಮತ್ತು ಸತ್ಯಂ ಎಂದು ಕರೆಯಲ್ಪಡುವ ಸ್ಥಾನವನ್ನು ಊರ್ಧ್ವಸ್ವರ್ಗ ಎಂದು ಕರೆಯುತ್ತಾರೆ.

# ಅಧ್ಯಾಯ–೧೬: ಪುರುಷ ಸೂಕ್ತ

ದೇವತೆಗಳ ಜನನದ ಬಗ್ಗೆ ವಿವರವಾಗಿ ತಿಳಿದೆವು. ತ್ವಷ್ಟ್ರಾ ದೇವತೆಯು ಮಹಾಸಮುದ್ರಕ್ಕೆ ವಿರಾಟ್‌ಪುರುಷನ ರೂಪ ಮತ್ತು ಆಕಾರವನ್ನು ಕೊಟ್ಟಿರುವನು. ವಿರಾಟ್‌ಪುರುಷನ ಸೂಕ್ಷ್ಮಶರೀರವು ಜೀವಂತ ವ್ಯಕ್ತಿತ್ವವನ್ನು ಹೊಂದಿದೆ. ವಿರಾಟ್‌ಪುರುಷನನ್ನು ಉದಕಗಳು ಆವರಿಸಿಕೊಂಡಿದ್ದರೂ ಅದರ ಸುತ್ತಲೂ ವಾಯುವೇ ಇದೆ. ವಿರಾಟ್‌ಪುರುಷನನ್ನು ಸೂಕ್ಷ್ಮ ನಾಡಿಗಳು ಸರ್ವತ್ರ ವ್ಯಾಪಿಸಿಕೊಂಡಿದೆ. ಈ ಪ್ರಾಣರೂಪಿ ವಿರಾಟ್‌ಪುರುಷನು ತನ್ನ ಸುತ್ತಲೂ ವ್ಯಾಪಿಸಿಕೊಂಡಿರುವ ವಾಯುವನ್ನು ಉಸಿರಾಡುತಿದ್ದಾನೆ.



(ವಿರಾಟ್ ಪುರುಷ ಎಂದರೆ ಈ ರೀತಿಯ ಸ್ವರೂಪ ಅಲ್ಲ. ವಿರಾಟ್ ಪುರುಷ ಎಂದರೆ ಅನಾದಿಯಾದ ಮಹಾಸಮುದ್ರವೇ (ಸಿಹಿ ಸಮುದ್ರ ಮತ್ತು ಕಹಿ ಹಾಗು ಉಪ್ಪಿನ ಸಮುದ್ರ) ಪುರುಷ ರೂಪ ತಾಳಿದೆ. ಕುಂಡಲಿನಿ ಮಾತೆಯರು, ದೇವತೆಗಳು ಮತ್ತು ಅಸುರರು ಅನಾದಿಯಾದ ಮಹಾಸಮುದ್ರದಲ್ಲಿ ಇರುವರು. ಸಕಲ ಸೃಷ್ಟಿಯ ಮೂಲವಸ್ತು ಸಮುದ್ರವೇ ಆಗಿದೆ.)

ನಮ್ಮ ಶರೀರದಲ್ಲಿಯೂ ಕಾರಣ ಶರೀರ, ವಿರಾಟ್‌ಪುರುಷನ ಪ್ರತಿರೂಪದ ಸೂಕ್ಷ್ಮಶರೀರ, ಜೀವನ ಮನೋಮಯಶರೀರ ಮತ್ತು ಪ್ರಾಣಮಯಶರೀರ ಹಾಗು ಮಹಾಸಮುದ್ರದಿಂದ ರಚಿತವಾದ ಸ್ಥೂಲಶರೀರವಿದೆ. ಯಾವಾಗ ಪುರುಷನ ಸೂಕಕ್ಷ್ಮಶರೀರವು ಹುಟ್ಟಿದ ಮಗುವನ್ನು ಪ್ರವೇಶಿಸುತ್ತದೆಯೋ ಆಗ ಮಗುವೂ ಸಹ ಉಸಿರಾಡುತ್ತದೆ. ವಿರಾಟ್ ಪುರುಷನು ಅನಂತವಾದ ಪ್ರತಿರೂಪಗಳನ್ನು ಹೊಂದಿದ್ದಾನೆ. ಆದ್ದರಿಂದ ವಿರಾಟ್ ಪುರುಷನ ಪ್ರತಿಕೃತಿ ಸಕಲ ಜೀವರಾಶಿಗಳಲ್ಲಿಯೂ ಇದೆ.

ವಿರಾಟ್ ಪುರುಷನಲ್ಲಿ ಸೂಕ್ಷ್ಮ ಸೂರ್ಯನು ಪ್ರಕಟವಾದಾಗ ವೃತ್ರಾಸುರನು ಸೂರ್ಯ ಮತ್ತು ಪುರುಷನನ್ನು ಅಂಧಕಾರ ಮತ್ತು ಅಜ್ಞಾನದಿಂದ ಆವರಿಸಿಕೊಂಡನು. ಆಗ ಅಸುರರ ಸಂಹಾರವನ್ನು ಇಂದ್ರನು ಮಾಡಿ ಸೂರ್ಯನನ್ನು ಪುರುಷನ ಶಿರಸ್ಸಿನಲ್ಲಿ ಸ್ಥಾಪಿಸಿರುವನು. ಆದರೆ ನಮ್ಮ ಶರೀರದಲ್ಲಿರುವ ಪುರುಷನು ಅಸುರರಿಂದ ಆವೃತವಾಗಿದ್ದಾನೆ. ಅಸುರರನ್ನು ನಾಶಮಾಡಲು ನಾವು ಇಂದ್ರನ ಮೊರೆಹೋಗಬೇಕಾಗಿದೆ

.

ನಮಗೆ ಗೋಚರವಾಗುತ್ತಿರುವ ಸ್ಥೂಲ ಪ್ರಪಂಚದ ಜಗತ್ತು ಆ ಪುರುಷನ ಶರೀರದಲ್ಲಿಯೇ ಉಂಟಾಗಿದೆ. ಅಂದರೆ ವಿರಾಟ್‌ಪುರುಷನಲ್ಲಿದ್ದ ಜಲವು ನಕ್ಷತ್ರಪುಂಜಗಳಾಗಿದೆ. ಕೋಟ್ಯಾಂತರ ನಕ್ಷತ್ರಪುಂಜಗಳಿರುವ ಇಡೀ ವಿಶ್ವವೇ ವಿರಾಟ್‌ಪುರುಷನ ಶರೀರವಾಗಿ ಇಡಾ ಪಿಂಗಳ ನಾಡಿಯ ಮುಖಾಂತರ ಉಸಿರಾಡುತ್ತಿದೆ, ಜೀವಂತವಾಗಿದೆ.

ವಿರಾಟ್ ಪುರುಷನ ಸೂಕ್ಷ್ಮಶರೀರದಲ್ಲಿ ಮೂವರು ಕುಂಡಲಿನಿ ಮಾತೆಯರಾದ ಅಧಃ ಕುಂಡಲಿನಿ, ನಾಭಿ

ಕುಂಡಲಿನಿ ಮತ್ತು ಊರ್ಧ್ವ ಕುಂಡಲಿನಿಯರು ಇರುವರು ಮತ್ತು ತಮ್ಮ ಮೂರು ನಾಡಿಕಾಂಡಗಳಿಂದ ೭೨,೦೦೦ ನಾಡಿಗಳಿಂದ ಉಸಿರಾಡುತ್ತಿರುವರು. ನಾಭಿ ಕುಂಡಲಿನಿಯು ದೇವತೆಗಳಿಗೆ ಜನ್ಮವನ್ನು ಕೊಟ್ಟ ನಂತರ ದೇವತೆಗಳು ಮೊದಲು ಸೂಕ್ಷ್ಮ ಸೂರ್ಯ–ಸವಿತೃ, ಸಪ್ತಸ್ವರ್ಗಗಳು ಮತ್ತು ಪೃಥಿವಿಯನ್ನು ದೇವತೆಗಳು ಸೃಷ್ಟಿಸಿದರು.

ವಿರಾಟ್ ಪುರುಷನ ಪ್ರತಿರೂಪವಾದ ನಮ್ಮ ಸ್ಥೂಲಶರೀರದೊಳಗಿರುವ ಪುರುಷನಲ್ಲಿಯೂ ಮೂವರು ಕುಂಡಲಿನಿ ಮಾತೆಯರು ಮತ್ತು ದೇವತೆಗಳು, ಸೂಕ್ಷ್ಮ ಸೂರ್ಯ–ಸವಿತೃ, ಸಪ್ತಸ್ವರ್ಗಗಳು ಮತ್ತು ಪೃಥಿವಿ ಇದೆ. ಆದರೆ ಈ ಪುರುಷನು ವೃತ್ರಾಸುರನಿಂದ ಅಂಧಕಾರ ಮತ್ತು ಅಜ್ಞಾನದಿಂದ ಆವೃತನಾಗಿದ್ದಾನೆ.

ಸ್ಥೂಲ ಪ್ರಪಂಚದ ಸೂರ್ಯನಲ್ಲಿಯೂ ದೇವತೆಗಳು ಇರುವರು. ಆದಿತ್ಯರು ಸವಿತೃವಿನ ಜೊತೆಗೂಡಿ ದ್ಯಾವಾಪೃಥಿವಿಯನ್ನು ಹಾಗು ಸ್ಥೂಲಶರೀರ ಮತ್ತು ಜೀವನನ್ನು ಸೃಷ್ಟಿಸಿರುವರು. ಈ ಜೀವರು ಸ್ಥೂಲ ಪ್ರಪಂಚ ಲಯವಾಗುವವರೆಗೂ ಅಮರರಾಗಿರುತ್ತಾರೆ ಮತ್ತು ತಮ್ಮ ಕರ್ಮಾನುಸಾರ ಸ್ವರ್ಗ–ನರಕಗಳಿಗೆ ಹೋಗಿ ಕೆಲ ಕಾಲಾನಂತರ ಪೃಥ್ವಿಯಲ್ಲಿ ಹೊಸ ಮನಸ್ಸಿನೊಂದಿಗೆ ಜನನವನ್ನು ತಾಳುತ್ತಾರೆ

ವಿರಾಟ್‌ಪುರುಷನ ಮಹಿಮೆಯನ್ನು ಅರ್ಥಮಾಡಿಕೊಳ್ಳಲು ಈಗ ಪೀಠಿಕೆಯು ಸಿದ್ಧವಾಗಿದೆ ಎಂದು ಭಾವಿಸುತ್ತೇನೆ. ವೈದಿಕರು ಭಗವಂತನನ್ನು ಆರಾಧಿಸುವಾಗ ಪುರುಷಸೂಕ್ತವೆಂದು ಕರೆಯಲ್ಪಡುವ ವಿರಾಟ್‌ಪುರುಷನ ಮಂತ್ರಗಳನ್ನು ಪಠಿಸುತ್ತಾರೆ. ಈ ಭಗವಂತನಲ್ಲಿಯೇ ಸಕಲ ದೇವತೆಗಳು ಇರುವರು ಆದ್ದರಿಂದ ದೇವತೆಗಳಿಗಿಂತ ವಿರಾಟ್‌ಪುರುಷನೇ ಶ್ರೇಷ್ಟನೆಂದು ಭಾವಿಸಿದ್ದಾರೆ. ಈಗ ಋಗ್ವೇದದಲ್ಲಿರುವ ಪುರುಷಸೂಕ್ತವನ್ನು ಓದಿದಾಗ ಆ ಮಂತ್ರಗಳ ಅರ್ಥ ನಮಗೆ ಸಂಪೂರ್ಣವಾಗಿ ತಿಳಿಯುತ್ತದೆ.

ಸಹಸ್ರಶೀರ್ಷಾ ಪುರುಷಃ ಸಹಸ್ರಾಕ್ಷಃ ಸಹಸ್ರಪಾತ್ ।
ಸ ಭೂಮಿಂ ವಿಶ್ವತೋ ವೃತ್ವಾತ್ಯತಿಷ್ಠದ್ದಶಾಂಗುಲಂ ।। (ಋ ೧೦–೯೦–೧ ಸಾ ಭಾ)
"ಪುರುಷನು ಅಸಂಖ್ಯಾತವಾದ ಶಿರಸ್ಸುಗಳುಳ್ಳವನೂ, ಅಸಂಖ್ಯಾತವಾದ ಚಕ್ಷುಸ್ಸುಗಳನ್ನೂ ಪಾದಗಳನ್ನೂ ಹೊಂದಿದವನು. ಈ ವಿರಾಟ್‌ಪುರುಷನು ಬ್ರಹ್ಮಾಂಡರೂಪವಾದ ವಿಶ್ವವನ್ನು ಸಕಲ ದಿಕ್ಕುಗಳಿಂದಲೂ ಸುತ್ತುವರಿದು ಅದಕ್ಕಿಂತಲೂ ಹತ್ತು ಅಂಗುಲದಷ್ಟು ಅತಿಕ್ರಮಿಸಿಯೂ ಸ್ಥಾಪಿತನಾಗಿದ್ದಾನೆ."

(ಸಾಯಣರು ತಮ್ಮ ಬಾಷ್ಯದಲ್ಲಿ ಆದಿಪುರುಷ ಎಂಬ ಪದವನ್ನು ಬಳಕೆ ಮಾಡಿದ್ದರೂ ಈ ಮಂತ್ರದಲ್ಲಿ ಪುರುಷ ಪದ ಬಳಕೆಯಾಗಿದೆ. ಇಂದ್ರನು ಆದಿಪುರುಷನಾದರೆ ವಿರಾಟ್‌ಪುರುಷನು ಬ್ರಹ್ಮಾಂಡಸ್ವರೂಪನಾಗಿ ಪುರುಷನೆಂದು ಕರೆಯಲ್ಪಟ್ಟಿದ್ದಾನೆ. ಆದ್ದರಿಂದ ಪುರುಷ ಪದ ಬಳಕೆಯನ್ನೇ ಈ ಸೂಕ್ತದಲ್ಲಿ ಬರೆದಿದ್ದೇನೆ.)

ಪುರುಷನು ಅಸಂಖ್ಯಾತವಾದ ಶಿರಸ್ಸುಗಳುಳ್ಳವನೂ, ಅಸಂಖ್ಯಾತವಾದ ಚಕ್ಷುಸ್ಸುಗಳನ್ನೂ ಪಾದಗಳನ್ನೂ ಹೊಂದಿದವನು ಎಂಬುದರ ಅರ್ಥ ವಿಶ್ವರೂಪದರ್ಶನದ ಚಿತ್ರಪಟದಲ್ಲಿ ತೋರಿಸಿರುವಂತೆ ಒಂದೇ ಶರೀರದಲ್ಲಿ ತೋರಿಸಿರುವ ಅನೇಕ ತಲೆ ಮತು ಕೈಗಳು ಇರುವಂತೆ ಅಲ್ಲ. ಆದ್ದರಿಂದ ಈ ಮಂತ್ರದ ಅರ್ಥ ಅಸಂಖ್ಯಾತವಾದ ಪ್ರತಿಕೃತಿ ಅಥವಾ ಪ್ರತಿರೂಪಗಳನ್ನು ಹೊಂದಿರುವನು ಎಂದು ಅರ್ಥ. ನಮ್ಮಲ್ಲಿ ಹಾಗು ಸಕಲ ಜೀವರಾಶಿಗಳಲ್ಲಿ ಪುರುಷನಿರುವನು. ನಮ್ಮ ಪಿಂಡಾಂಡದ ಸೂಕ್ಷ್ಮಶರೀರವು ವಿರಾಟ್‌ಪುರುಷನ ತದ್ರೂಪವಾಗಿರುವುದರಿಂದ ಅಸಂಖ್ಯಾತವಾದ ಶರೀರವುಳ್ಳವನಾಗಿದ್ದಾನೆ. ವಿರಾಟ್ ಪುರುಷನಂತೆಯೇ ಸಕಲ ದೇವತೆಗಳು ಅನಂತವಾದ ಪ್ರತಿರೂಪಗಳನ್ನು ಹೊಂದಿ ಸಕಲ ಸೂರ್ಯರಲ್ಲಿಯೂ ಮತ್ತು ಸಕಲ ಜೀವರಾಶಿಗಳಲ್ಲಿಯೂ ಇರುವರು.

ಪುರುಷ ಏವೇದಂ ಸರ್ವಂ ಯದ್ಭೂತಂ ಯಚ್ಚ ಭವ್ಯಂ ।
ಉತಾಮೃತತ್ವಸ್ಯೇಶಾನೋ ಯದನ್ನೇನಾತಿರೋಹತಿ ।। (೧೦–೯೦–೨ ಸಾ ಭಾ)
"ನಮಗೆ ಗೋಚರವಾಗುವ ಸಕಲ ಜಗತ್ತು ಎಂದರೆ ವರ್ತಮಾನಕಾಲದ ಸಕಲ ಜಗತ್ತು ಪುರುಷನ ಅಂಶವೇ ಆಗಿದೆ. ಹಿಂದೆ ಇದ್ದ ಜಗತ್ತು ಅವನೇ, ಮುಂದೆ ಸಂಭವಿಸುವುದೂ ಅವನೇ ಎಂದರೆ ಈಶ್ವರಾಂಶವಲ್ಲದೆ ಬೇರೆಯಲ್ಲ. ಅವನು ಅಮೃತತತ್ವಕ್ಕೆ ಒಡೆಯನು. ಪ್ರಾಣಿಗಳಿಗೆ ಭೋಗ ಸಾಧನವಾದ ಅನ್ನದಿಂದ ಅವನು ಬೆಳೆಯುವಂತೆ ಕಾಣುತ್ತಾನೆ. ಆದರೆ ಅವನ ಸ್ವರೂಪವು ಗೋಚರಾತೀತವಾದುದು."

(ಹುಟ್ಟಿದ ಮಗುವು ಯುವಕನಾದಾಗ ಪಿಂಡಾಂಡವೂ ಸಹ ಬೆಳೆಯುವಂತೆ ಕಾಣುತ್ತದೆ. ಆದರೆ ಬ್ರಹ್ಮಾಂಡ ಮತ್ತು ಪಿಂಡಾಡದ ಪುರುಷನ ಸ್ವರೂಪವನ್ನು ಕೇವಲ ಯೋಗಿಯು ಮಾತ್ರ ನೋಡುತ್ತಾನೆ.)

ಏತಾವಾನಸ್ಯ ಮಹಿಮಾತೋ ಜ್ಯಾಯಾಂಶ್ಚ ಪೂರುಷಃ ।
ಪಾದೋಽಸ್ಯ ವಿಶ್ವಾ ಭೂತಾನಿ ತ್ರಿಪಾದಸ್ಯಾಮೃತಂ ದಿವಿ ।। (ಋ ೧೦–೯೦–೩ ಸಾ ಭಾ)

"ಭೂತ, ವರ್ತಮಾನ ಮತ್ತು ಭವಿಷ್ಯದ್ರೂಪಗಳಾದ ಸಕಲ ಜಗತ್ತೂ ಈ ಪುರುಷನ ಸಾಮರ್ಥ್ಯ ವಿಶೇಷವೇ ಆಗಿದೆ. ಅಲ್ಲದೇ ಆದಿಪುರುಷನು ಸಕಲ ಜಗತ್ತಿಗಿಂತಲೂ ಅಧಿಕನು. ಸಕಲ ಭೂತಗಳೂ ಈ ಈಶ್ವರನ ಕಾಲು ಭಾಗ ಮಾತ್ರ. ಈ ಮಹಾಪುರುಷನ ಮುಕ್ಕಾಲು ಪಾಲು ಗೋಚರಾತೀತವಾದುದೂ, ಸ್ವಪ್ರಕಾಶವಾದುದೂ ಆದ ಲೋಕದಲ್ಲಿ ಯಾವ ಬದಲಾವಣೆಯನ್ನೂ ಹೊಂದದೆ ನಿಜಸ್ಥಿತಿಯಲ್ಲಿರುತ್ತದೆ."

(ಪುರುಷನಲ್ಲಿಯೇ ಸ್ಥೂಲವಾದ, ನಾವು ನೋಡುತ್ತಿರುವ ಸಕಲ ನಕ್ಷತ್ರಪುಂಜಗಳೂ, ಸೂರ್ಯಚಂದ್ರಗ್ರಹಾದಿಗಳೂ ಮತ್ತು ಸಕಲ ಜೀವರಾಶಿಗಳೂ ಇವೆ. ಈ ಬ್ರಹ್ಮಾಂಡವನ್ನೆಲ್ಲಾ ಒಟ್ಟುಗೂಡಿಸಿದರೆ ಅದು ಕೇವಲ ಕಾಲು ಭಾಗ ಮಾತ್ರ ಆಗುತ್ತದೆ, ಇನ್ನು ಮುಕ್ಕಾಲು ಭಾಗ ಖಾಲಿಯಾದ ಸ್ಥಳವಾಗಿದೆ ಅಂದರೆ ಆಕಾಶವಾಗಿದೆ. ಮಹಾಸಮುದ್ರದ ಒಂದುಭಾಗವು ೧/೪ ಭಾಗವಾಗಿ ಸಂಕುಚಿತಗೊಂಡು (ಗೆಲಾಕ್ಸಿಗಳ) ಸರೋವರವಾಗಿದೆ ಮತ್ತು ಇನ್ನೂ ೩/೪ ಭಾಗವು ಗೋಚರಾತೀತವಾದ ಆಕಾಶತತ್ವವಾಗಿದೆ.

ಏಕೆಂದರೆ ವರುಣನು ಆಕಾಶವನ್ನೂ ಮತ್ತು ವಿರಾಟ್‌ಪುರುಷನನ್ನೂ ವ್ಯಾಪಿಸಿಕೊಂಡಿದ್ದಾನೆ. ಉದಾಹರಣೆಗೆ ನಮ್ಮ ಶರೀರವನ್ನೇ ನೋಡಿ. ವರುಣ ಪದದ ಅರ್ಥವೇ "ಎಲ್ಲವನ್ನು ಆವರಿಸಿಕೊಂಡಿರುವವನು" "ಎಲ್ಲವನ್ನು ಸುತ್ತುವರೆದಿರುವವನು" ಮತ್ತು "ಎಲ್ಲವನ್ನು ಹೊದಿಕೆಯಂತೆ ಮುಚ್ಚಿಕೊಂಡಿರುವವನು" ಇದಕ್ಕೆ ಋಗ್ವೇದ ಪ್ರಮಾಣ:

"ಅದಿತಿ ಪುತ್ರನಾದ ನಾನು, ಮೂರು ವಿಭಾಗವುಳ್ಳದ್ದೂ (ಮೂರು ಲೋಕಗಳು), ವ್ಯಾಪಕವಾದುದೂ ಆದ ಆಕಾಶವನ್ನು ವಿಶೇಷವಾಗಿ ವ್ಯಾಪಿಸುವಂತೆ ಮಾಡುತ್ತಾ ಉದಕನಿಮಿತ್ತವಾಗಿಯೇ ಉದಕರಕ್ಷಕನಾಗಿದ್ದೇನೆ." (೪–೪೨–೪ ಸಾಭಾ)

ತ್ರಿಪಾದೂರ್ಧ್ವ ಉದೈತ್ಪುರುಷಃ ಪಾದೋಽಸ್ಯೇಹಾಭವತ್ಪುನಃ ।
ತತೋ ವಿಷ್ವಙ್ವ್ಯಕ್ರಾಮತ್ಸಾಶನಾನಶನೇ ಅಭಿ ।। (ಋ ೧೦–೯೦–೪ ಸಾ ಭಾ)
"ಇಂದ್ರಿಯ ಪ್ರತ್ಯಕ್ಷಕ್ಕೆ ಗೋಚರವಲ್ಲದ ತನ್ನ ಮುಕ್ಕಾಲು ಭಾಗವನ್ನು ಸ್ವಪ್ರಕಾಶವಾದ ಲೋಕದಲ್ಲಿ ಸ್ಥಾಪಿಸಿರುವ ಪುರುಷನು ಉತ್ಕೃಷ್ಟವಾದ ದಿವ್ಯಲೋಕದಲ್ಲಿ ಸಂಸಾರಾತೀತನಾಗಿ ಸ್ಥಾಪಿತನಾಗಿದ್ದಾನೆ. ಈ ಪುರುಷನ ನಾಲ್ಕನೆಯ ಒಂದು ಭಾಗವು ಮಾತ್ರ ಸಂಸಾರ ರೂಪದಲ್ಲಿ ಪದೇಪದೇ ಆವಿರ್ಭೂತವಾಗುತ್ತದೆ. ಈ ಪರಮ ಪುರುಷನು ವ್ಯಕ್ತಿರೂಪವನ್ನು ಹೊಂದಿದ ನಂತರ ಹಸಿವು ದಾಹಗಳುಳ್ಳ ಪ್ರಾಣಿರೂಪದಲ್ಲಿಯೂ ಇವಿಲ್ಲದ ಅಚೇತನ ರೂಪದಲ್ಲಿಯೂ ನಾನಾ ರೂಪಗಳಲ್ಲಿ ಜಗತ್ತನ್ನು ವ್ಯಾಪಿಸುತ್ತಾನೆ."

(ಪುರುಷನಲ್ಲಿರುವ ಜಲದಿಂದಲೇ ಗೆಲಾಕ್ಸಿಗಳು ಮತ್ತು ಸಕಲ ಪ್ರಾಣಿಗಳ ಸೃಷ್ಟಿಯಾಗಿದೆ. ಈ ಪುರುಷನು ಮಾನವ ಮತ್ತು ಪ್ರಾಣಿಗಳ ರೂಪವನ್ನು ಪಡೆಯುತ್ತಾನೆ ಮತ್ತು ಹಸಿವು ದಾಹಗಳುಳ್ಳವನು ಆಗುತ್ತಾನೆ. ಇದರ ಅರ್ಥ ಸಕಲ ಜೀವರಾಶಿಗಳ ಸ್ವರೂಪವೂ ಅವನೇ. ಜಡವಸ್ತುವೂ ಸಹ ಪುರುಷನಲ್ಲಿರುವ ಜಲದಿಂದಲೇ ಆಗಿದೆ.)

ತಸ್ಮಾದ್ವಿರಾಳಜಾಯತ ವಿರಾಜೋ ಅಧಿ ಪೂರುಷಃ ।
ಸ ಜಾತೋ ಅತ್ಯರಿಚ್ಯತ ಪಶ್ಚಾದ್ಭೂಮಿಮಥೋ ಪುರಃ ।। (ಋ ೧೦–೯೦–೫ ಸಾ ಭಾ)
"ಅನೇಕ ಪ್ರಕಾರಗಳಲ್ಲಿ ಮೆರೆಯುವ ಬ್ರಹ್ಮಾಂಡವು ಪುರುಷನಿಂದ ಉತ್ಪತ್ತಿಯಾಯಿತು. ಈ ವಿರಾಡ್ ದೇಹವನ್ನೇ ಆಶ್ರಯಿಸಿ ದೇಹಾಭಿಮಾನಿಯಾದ ಪುರುಷನು (ವಿರಾಜ್) ಕಾಣಿಸಿಕೊಂಡನು. ಚೇತನಾಚೇತನ ರೂಪದಲ್ಲಿ ಕಾಣಿಸಿಕೊಂಡ ಪುರುಷನು ತನಗಿಂತಲೂ ಬೇರೆಯಾದ ದೇವತಿರ್ಯಙ್ಮನುಷ್ಯಾದಿ ರೂಪಗಳನ್ನು ಧರಿಸಿದನು. ಆನಂತರ ಭೂಮಿಯನ್ನು ನಿರ್ಮಿಸಿದನು."

(ವಿರಾಟ್‌ಪುರುಷನಿಂದ ವಿರಾಜ್ ಅಂದರೆ ಮಾನವನು ಉತ್ಪತ್ತಿಯಾದನು ಮತ್ತು ವಿರಾಜ್‌ನ ಸಾಧನೆಯಿಂದ ವಿರಾಟ್‌ಪುರುಷನು ಪ್ರಕಟವಾಗುವನು. ವಿರಾಟ್‌ಪುರುಷನ ತದ್ರೂಪವೇ ಜೀವರಾಶಿಗಳ ಶರೀರ ಮತ್ತು ಸೂಕ್ಷ್ಮಶರೀರ. ಯೋಗಿಯು ತನ್ನ ಶರೀರದಲ್ಲಿ ಪುರುಷನನ್ನು ಪ್ರಕಟಮಾಡುವನು ಮತ್ತು ಆನಂತರ ಬ್ರಹ್ಮಾಂಡದಲ್ಲಿ ವಿರಾಟ್‌ಪುರುಷನನ್ನು ತನ್ನ ಸಾಧನೆಯಿಂದ ಪ್ರಕಟಮಾಡುವನು. ನಮ್ಮ ಶರೀರ ಪುರುಷನಾದರೆ ವಿಶ್ವವು ವಿರಾಟ್‌ಪುರುಷನಾಗಿದ್ದಾನೆ.

ದೇವತೆಗಳ ರೂಪವನ್ನು ಧರಿಸಿರುವವನು ಎಂಬುವುದು ತಾಳೆಯಾಗುವುದಿಲ್ಲ ಏಕೆಂದರೆ ಅದಿತಿಯು ದೇವತೆಗಳಿಗೆ ಜನ್ಮವನ್ನು ಕೊಟ್ಟಿರುವಳು. ಆದರೂ ದೇವತೆಗಳು ಸೃಷ್ಟಿಯ ಮೊದಲು ಜಲದಲ್ಲಿಯೇ ಇದ್ದರು. ಆದರೆ ಸಕಲ ಜೀವರಾಶಿಗಳನ್ನು ಧರಿಸುವವನು. ಮಾನವಾದಿ ಸಕಲ ಪ್ರಾಣಿಗಳು ವಿರಾಟ್ ಪುರುಷನಲ್ಲಿದ್ದ ಜಲದಿಂದಲೇ ಉತ್ಪತ್ತಿಯಾಗಿರುವರು ಅಂದರೆ ಪುರುಷನೇ ಸಕಲ ರೂಪಗಳನ್ನು ಪಡೆದಿರುವನು.)

ಯತ್ಪುರುಷೇಣ ಹವಿಷಾ ದೇವಾ ಯಜ್ಞಮತನ್ವತ ।
ವಸಂತೋ ಅಸ್ಯಾಸೀದಾಜ್ಯಂ ಗ್ರೀಷ್ಮ ಇಧ್ಮಃ ಶರದ್ಧವಿಃ ।। (ಋ ೧೦–೯೦–೬ ಆರ್ ಎಲ್ ಕ)

"ದೇವತೆಗಳು ಪುರುಷನನ್ನು ಆಹುತಿಯನ್ನಾಗಿ ಅರ್ಪಿಸಿ ಯಜ್ಞವನ್ನು ನೆರವೇರಿಸಿದರು. ಈ ಯಜ್ಞಕ್ಕೆ ವಸಂತ ಋತುವು ತುಪ್ಪವಾಯಿತು. ಗ್ರೀಷ್ಮವು ಸಮಿತ್ತುಗಳಾಗಿಯೂ ಶರದೃತುವು ಹವಿಸ್ಸು ಆದವು."
(ಸೃಷ್ಟಿಯಜ್ಞವನ್ನು ದೇವತೆಗಳು ಮಾಡಿದರು.)

ತಂ ಯಜ್ಞಂ ಬರ್ಹಿಷಿ ಪ್ರೌಕ್ಷನ್ಪುರುಷಂ ಜಾತಮಗ್ರತಃ ।
ತೇನ ದೇವಾ ಅಯಜಂತ ಸಾಧ್ಯಾ ಋಷಯಶ್ಚ ಯೇ ।। (ಋ ೧೦–೯೦–೭ ಆರ್ ಎಲ್ ಕ)
"ಜಗತ್ ಸೃಷ್ಟಿಗಿಂತಲೂ ಮೊದಲು ಉತ್ಪನ್ನನೂ, ಯಜ್ಞಕ್ಕೆ ಸಾಧನಭೂತವೂ ಆದ ವಿರಾಟ್‌ಪುರುಷನನ್ನು ದರ್ಭಾಸನದ ಮೇಲೆ ಸ್ಥಾಪಿಸಿ ಪ್ರೋಕ್ಷಣೆ ಮಾಡಿದರು. ಪುರುಷನನ್ನು ಆಹುತಿಯಾಗಿ ಅರ್ಪಿಸಿ ದೇವತೆಗಳೂ ಸಾಧ್ಯರೂ ಋಷಿಗಳೂ ಸೇರಿ ಎಲ್ಲರೂ ಯಾಗವನ್ನು ನಿರ್ವಹಿಸಿದರು."

ತಸ್ಮಾದ್ಯಜ್ಞಾತ್ಸರ್ವಹುತಃ ಸಂಭೃತಂ ಪೃಷದಾಜ್ಯಂ ।
ಪಶೂನ್ತಾಂಶ್ಚಕ್ರೇ ವಾಯುವ್ಯಾನಾರಣ್ಯಾನ್ಗ್ರಾಮಾಶ್ಚ ಯೇ ।। (ಋ ೧೦–೯೦–೮ ಸಾ ಭಾ)
"ಜಗದ್ರೂಪಿಯಾದ ವಿರಾಟ್‌ಪುರುಷನೇ ಆಹುತಿಯಾಗಿ ಉಳ್ಳ ಆ ಯಜ್ಞದಿಂದ ದಧಿಮಿಶ್ರಿತವಾದ ಅಜ್ಯವು ಉತ್ಪನ್ನವಾಯಿತು. ಪಕ್ಷ್ಯಾದಿಗಳನ್ನೂ ಅರಣ್ಯಕವಾದ ಮೃಗಗಳನ್ನೂ ಗ್ರಾಮವಾಸಿಗಳಾದ ಗವಾಶ್ವಾದಿಗಳನ್ನೂ ಪುರುಷನು ಉತ್ಪನ್ನಮಾಡಿದನು, **ಅವುಗಳಿಗೆ ವಾಯುವು ಅಧಿಪತಿಯಾದನು** (ಇಂಗ್ಲಿಷ್ ಭಾಷ್ಯವನ್ನು ನೋಡಿ)."

(ಮಂತ್ರ ೬ರಿಂದ ೮ರ ಪ್ರಕಾರ ವಿರಾಟ್‌ಪುರುಷನಲ್ಲಾದ ಸೃಷ್ಟಿಕ್ರಿಯೆಗಳಿಗೆ ದೇವತೆಗಳೇ ಮೂಲಕಾರಣ. ವಿರಾಟ್‌ಪುರುಷನ ಶರೀರದಲ್ಲಿರುವ ಜಲದಿಂದಲೇ ಸಕಲವೂ ಸೃಷ್ಟಿಯಾಯಿತು. ಆದರೆ ವಾಯು ಮತ್ತು ವಾಯುವಿನ ರೂಪಾಂತರವಾದ ಗಾಳಿ ಇಲ್ಲದೇ ಪ್ರಾಣಿಗಳು ಬದುಕಲಾರವು. ಆದ್ದರಿಂದ ಇಂದ್ರನಿಂದ ಮನಸ್ಸನ್ನು ಪಡೆದ ವಾಯುವು ಸಕಲ ಜೀವರಾಶಿಗಳ ಅಧಿಪತಿಯಾಗಿದ್ದಾನೆ.)

ತಸ್ಮಾದ್ಯಜ್ಞಾತ್ಸರ್ವಹುತ ಋಚಃ ಸಾಮಾನಿ ಜಜ್ಞಿರೇ ।
ಛಂದಾಸಿ ಜಜ್ಞಿರೇ ತಸ್ಮಾದ್ಯಜುಸ್ತಸ್ಮಾದಜಾಯತ ।। (ಋ ೧೦–೯೦–೯ ಸಾ ಭಾ)
"ಸರ್ವಾತ್ಮಕನಾದ ವಿರಾಟ್‌ಪುರುಷನೇ ಆಹುತಿಯಾಗಿ ಉಳ್ಳ ಆ ಯಜ್ಞದಿಂದಲೇ ಋಗ್ ಮಂತ್ರಗಳೂ ಸಾಮಗಳೂ ಉತ್ಪನ್ನವಾದವು. ಅದರಿಂದಲೇ ಗಾಯತ್ರ್ಯಾದಿ ಛಂದಸ್ಸುಗಳು ಉತ್ಪನ್ನವಾದವು. ಆ ಯಜ್ಞದಿಂದಲೇ ಯಜಸ್ಸೂ ಉತ್ಪನ್ನವಾಯಿತು."

ತಸ್ಮಾದಶ್ವಾ ಅಜಾಯಂತ ಯೇ ಕೇ ಚೋಭಯಾದತಃ ।
ಗಾವೋ ಹ ಜಜ್ಞಿರೇ ತಸ್ಮಾತ್ತಸ್ಮಾಜ್ಞಾತಾ ಅಜಾವಯಃ ।। (ಋ ೧೦–೯೦–೧೦ ಸಾ ಭಾ)
"ವಿರಾಟ್‌ಪುರುಷನನ್ನು ಆಹುತಿಯಾಗಿ ಅರ್ಪಿಸಿದ ನಂತರ ಆ ಯಜ್ಞದಿಂದ ಎರಡು ಸಾಲು ಹಲ್ಲುಗಳುಳ್ಳ ಅಶ್ವಗಳೂ, ಇತರ ಪ್ರಾಣಿಗಳೂ, ಅದರಿಂದಲೇ ಗೋವುಗಳೂ, ಆಡು, ಕುರಿ ಮತ್ತು ತಜ್ಜಾತೀಯವಾದ ಇತರ ಪ್ರಾಣಿಗಳು ಉತ್ಪನ್ನವಾದವು."

ಯತ್ಪುರುಷಂ ವ್ಯದಧುಃ ಕತಿಧಾ ವ್ಯಕಲ್ಪಯನ್ ।
ಮುಖಂ ಕಿಮಸ್ಯ ಕೌ ಬಾಹಾ ಕಾ ಊರೂ ಪಾದಾ ಉಚ್ಯೇತೇ ।। (ಋ ೧೦–೯೦–೧೧ ಸಾ ಭಾ)
"ಈ ವಿರಾಟ್‌ಪುರುಷನನ್ನು ಯಜ್ಞಾಹುತಿ ರೂಪದಲ್ಲಿ ಅರ್ಪಿಸಲು ಸಂಕಲ್ಪಿಸಿದಾಗ ಅವನನ್ನು ಎಷ್ಟು ಪ್ರಕಾರವಾಗಿ ವಿಭಾಗಿಸಿದರು? ಈ ಪುರುಷನ ಮುಖವಾವುದು? ಇವನ ಬಾಹುಗಳು ಯಾವುವು? ಇವನ ತೊಡೆಗಳು ಮತ್ತು ಪಾದಗಳು ಯಾವುವು?"
ಬ್ರಾಹ್ಮಣೋಸ್ಯ ಮುಖಮಾಸೀದ್ಬಾಹೂ ರಾಜನ್ಯಃ ಕೃತಃ ।
ಊರೂ ತದಸ್ಯ ಯದ್ವೈಶ್ಯಃ ಪದ್ಭ್ಯಾಂ ಶೂದ್ರೋ ಅಜಾಯತ ।। (ಋ ೧೦–೯೦–೧೨ ಸಾಭಾ)
"ಈ ಪುರುಷನ ಮುಖದಿಂದ ಬ್ರಾಹ್ಮಣನೂ, ಬಾಹುಗಳಿಂದ ಕ್ಷತ್ರಿಯರೂ ಉತ್ಪನ್ನರಾದರು. ಇವನ ತೊಡೆಗಳಿಂದ ವೈಶ್ಯರೂ, ಪಾದಗಳಿಂದ ಶೂದ್ರರೂ ಉತ್ಪನ್ನರಾದರು."

ಮಂತ್ರ ೧೧ ಮತ್ತು ೧೨ನ್ನು ಸೇರಿಸಿ ಓದಬೇಕು. <u>ಈ ಮಂತ್ರಗಳಲ್ಲಿ ಹೇಳಿದ ನಾಲ್ಕು ವರ್ಣಗಳು ಪುರುಷನ ವರ್ಣವಾಗಿದೆ. ಸ್ಥೂಲಶರೀರ ಅಥವಾ ಜೀವನಿಗೆ ಸಂಬಂದಿಸಿದ್ದಲ್ಲ.</u> ಆದ್ದರಿಂದ ಜಾತಿಗೆ ಸಂಬಂದಿಸಿಲ್ಲ. ಮಾನವರು ತಮ್ಮ ಸಾಧನೆಯಿಂದ ದೇವತೆಗಳ ದರ್ಶನವನ್ನು ಪಡೆದು ಬ್ರಾಹ್ಮಣನಾಗಬಹುದು.

ಚಂದ್ರಮಾ ಮನಸೋ ಜಾತಶ್ಚಕ್ಷೋಃ ಸೂರ್ಯೋ ಅಜಾಯತ।
ಮುಖಾದಿಂದ್ರಶ್ಚಾಗ್ನಿಶ್ಚ ಪ್ರಾಣಾದ್ವಾಯುವರಜಾಯತ ।। (ಋ ೧೦–೯೦–೧೩ ಸಾ ಭಾ)

"ಈ ವಿರಾಟ್‌ಪುರುಷನ ಮನಸ್ಸಿನಿಂದ ಚಂದ್ರನೂ, ಕಣ್ಣಿನಿಂದ ಸೂರ್ಯನೂ, ಮುಖದಿಂದ ಇಂದ್ರಾಗ್ನಿಗಳೂ ಪ್ರಾಣದಿಂದ ವಾಯುವೂ ಹುಟ್ಟಿದರು."

ನಾಭ್ಯಾ ಆಸೀದಂತರಿಕ್ಷಂ ಶೀರ್ಷ್ಣೋ ದ್ಯೌಃ ಸಮವರ್ತತ ೧
ಪದ್ಭ್ಯಾಂ ಭೂಮಿರ್ದಿಶಃ ಶ್ರೋತ್ರಾತ್ತಥಾ ಲೋಕಾನ್ ಅಕಲ್ಪಯನ್ ೧೧ (ಋ ೧೦-೯೦-೧೪ ಸಾ ಭಾ)
"ಪುರುಷನ ಹೊಕ್ಕಳಿನಿಂದ ಅಂತರಿಕ್ಷವು ಉತ್ಪನ್ನವಾಯಿತು. ಶಿರಸ್ಸಿನಿಂದ ದ್ಯುಲೋಕವು ಪ್ರಾದುರ್ಭೂತವಾಯಿತು. ಪಾದಗಳಿಂದ ಭೂಮಿಯೂ, ಕಿವಿಗಳಿಂದ ದಿಕ್ಕುಗಳು ಉತ್ಪನ್ನವಾದವು. ಇದೇ ರೀತಿ ಸಕಲ ಲೋಕಗಳನ್ನು ದೇವತೆಗಳು ಪುರುಷನ ದೇಹದಿಂದ ನಿರ್ಮಿಸಿದರು."

(ಸೂಕ್ತ ೧೩ ಮತ್ತು ೧೪ ದೇವತೆಗಳ ಸೃಷ್ಟಿಕ್ರಿಯೆಗಳಿಗೆ ಸರಿಹೊಂದುವುದಿಲ್ಲ. ಈ ಮಂತ್ರಗಳನ್ನು ಪ್ರಕ್ಷಿಪ್ತವೆಂದು ಭಾವಿಸುತ್ತೇನೆ.)

ಸಪ್ತಾಸ್ಯಾಸನ್ಪರಿಧಯಸ್ತ್ರಿಃ ಸಪ್ತ ಸಮಿಧಃ ಕೃತಾಃ ೧
ದೇವಾ ಯದ್ಯಜ್ಞಂ ತನ್ವಾನಾ ಅಬಧ್ನನ್ಪುರುಷಂ ಪಶುಂ ೧೧ (ಋ ೧೦-೯೦-೧೫ ಸಾಭಾ)
"ಈ ಯಜ್ಞಕ್ಕೆ ಏಳು ಛಂದಸ್ಸುಗಳೂ (ಆವರಣಗಳೂ) ಪರಿಧಿಗಳಾದವು. ಇಪ್ಪತ್ತೊಂದು ತತ್ವಗಳು ಸಮಿತ್ತುಗಳಾಗಿ ನಿರ್ದಿಷ್ಟವಾದವು. ಯಜ್ಞ ಸಾಧನವಾದ ಈ ಪುರುಷನನ್ನು ದೇವತೆಗಳು ಯೂಪ ಸ್ತಂಭಕ್ಕೆ ಕಟ್ಟಿದರು." (ಇಂಗಿಷ್‌ನಲ್ಲಿ 'ಆವರಣ' ಎಂಬ ಪದ ಬಳಸಿದ್ದಾರೆ)

ಸಾಯಣರು ತಮ್ಮ ಭಾಷ್ಯದಲ್ಲಿ ಏಳು ಆವರಣಗಳನ್ನು ಛಂದಸ್ಸೆಂದು ಪರಿಗ್ರಹಿಸಿದ್ದಾರೆ. ಅದೂ ಅಲ್ಲದೇ ಅವುಗಳನ್ನು ಸಮಿತ್ತುಗಳೆಂದು ಅರ್ಥೈಸಿ, ಯಜ್ಞಕುಂಡವನ್ನು ರಕ್ಷಿಸಲು ಅದರ ಸುತ್ತ ಏಳು ದಿಕ್ಕಿನಲ್ಲಿ ಇಡುವ ಸಮಿತ್ತುಗಳೆಂದು ಅರ್ಥೈಸಿದ್ದಾರೆ. ಆರ್ ಎಲ್ ಕಶ್ಯಪ್‌ರವರು ಏಳು ಆವರಣವನ್ನು ಏಳುಲೋಕದಲ್ಲಿರುವ ಮತ್ತು ನಮ್ಮನ್ನು ಆವರಿಸಿರುವ ಏಳು ಕೋಶಗಳೆಂದು ಅರ್ಥೈಸಿರುವರು. ಅವು ಯಾವುದೆಂದರೆ ಅನ್ನಮಯಕೋಶ, ಪ್ರಾಣಮಯಕೋಶ, ಮನೋಮಯಕೋಶ, ಆನಂದಮಯಕೋಶ, ಚೈತನ್ಯಮಯಶಕ್ತಿ (ತಪೋಲೋಕದ ಕೋಶ) ಮತ್ತು ಸತ್ಯಲೋಕದ ಕೋಶವೆಂದು ಅರ್ಥೈಸಿರುವರು. ಏಳನೆಯ ಆವರಣವನ್ನು ಮಹಸ್, ವಿಜ್ಞಾನ ಮತ್ತು ಅತ್ಯುಚ್ಛ ಮನಸ್ಸೆಂಬ ಮೂರು ಲೋಕದ ಕೊಂಡಿಯಾಗಿ ಭಾವಿಸಿರುವರು.

ಪಿಂಡಾಂಡವನ್ನು ಅಧ್ಯಯನ ಮಾಡಿ ಬ್ರಹ್ಮಾಂಡದ ರಹಸ್ಯವನ್ನು ತಿಳಿಯಬಹುದು ಎಂಬ ಸೂತ್ರವನ್ನು ಮೇಲಿನ ಮಂತ್ರವನ್ನು ಅರ್ಥಮಾಡಿಕೊಳ್ಳಲು ಪ್ರಯೋಗಿಸೋಣ. ನಮ್ಮ ಶರೀರದ ಸೃಷ್ಟಿಯೂ ಸಹ ಒಂದು ಸೃಷ್ಟಿಯಜ್ಞವಾಗಿದೆ. ನಮ್ಮ ಪಿಂಡಾಂಡದಲ್ಲಿರುವ ಜಲವು ಸ್ಥೂಲಶರೀರವಾಗಿ ಪರಿವರ್ತಿತವಾಗಿದೆ. ಆದ್ದರಿಂದ ಮೇಲಿನ ಮಂತ್ರದ ಅರ್ಥ ನಮ್ಮ ಆತ್ಮಕ್ಕೆ ಏಳು ಆವರಣಗಳಿವೆ. ಅವು ಯಾವುದೆಂದರೆ;

- ಮೊದಲನೆಯ ಆವರಣ, ನಮ್ಮ ಜ್ಯೋತಿರೂಪ ಆತ್ಮಕ್ಕಿರುವ ಅಷ್ಟದಳ ಕಮಲದ ಆವರಣ. ಈ ಕಮಲದೊಳಗೆ ನಮ್ಮ ಆತ್ಮವಿರುವುದು. ಇದೇ ನಮ್ಮ ನಿಜ ಸ್ವರೂಪ.
- ಎರಡನೆಯ ಆವರಣ, ಕಾರಣಶರೀರ; ಭಗವಂತನಿಂದ ಬೆಳಕಿನ ಲೋಕದಲ್ಲಿ ಸೃಷ್ಟಿಸಲ್ಪಟ್ಟ ಸ್ವರ್ಗದ ಮಾನವ. ಇದರೊಳಗೆ ಭಗವಂತನ ಜ್ಯೋತಿ ಮತ್ತು ನಮ್ಮ ಜ್ಯೋತಿರೂಪ ಆತ್ಮವಿರುವುದು.
- ಮೂರನೆಯ ಆವರಣ, ನಮ್ಮಲ್ಲಿರುವ ಪುರುಷನ ಸೂಕ್ಷ್ಮಶರೀರ. ವಿಶ್ವವನ್ನೇ ಶರೀರವಾಗಿ ಹೊಂದಿರುವ ವಿರಾಟ್ ಪುರುಷನ ಪ್ರತಿರೂಪವಾದ ನಮ್ಮ ಸೂಕ್ಷ್ಮಶರೀರ ಅಥವಾ ಪುರುಷನ ಪ್ರತಿರೂಪ; ಇದರಲ್ಲಿ ದೇವತೆಗಳು, ಅಸುರರು ಮತ್ತು ಮೂವರು ಕುಂಡಲಿನಿ ಮಾತೆಯರು ನೆಲೆಸಿರುವರು.
- ನಾಲ್ಕನೆಯ ಆವರಣ, ನಮ್ಮ ಪ್ರಾಣ ಶರೀರ. ಇದು ಕಾರಣ ಶರೀರ ಮತ್ತು ಪುರುಷನ ಸೂಕ್ಷ್ಮಶರೀರವನ್ನು ಆವರಿಸಿಕೊಂಡಿದೆ.
- ಐದನೆಯ ಆವರಣ, ನಮ್ಮ ಮಾನಸಿಕ ಶರೀರದ ಆವರಣ. ಪ್ರಾಣ ಶರೀರ ಮತ್ತು ಮಾನಸಿಕ ಶರೀರಗಳು, ಕಾರಣ ಮತ್ತು ಸೂಕ್ಷ್ಮ ಶರೀರಗಳನ್ನು ಆವರಿಸಿಕೊಂಡಿವೆ.
- ಆರನೆಯ ಆವರಣ, ನಮ್ಮ ಸ್ಥೂಲಶರೀರ. ಈ ಸ್ಥೂಲಶರೀರದ ಒಳಗೆ ಮೇಲಿನ ಎಲ್ಲಾ ಶರೀರಗಳು ಇರುವುವು.
- ಏಳನೆಯ ಆವರಣ ವಿಶ್ವವನ್ನೇ ಶರೀರವನ್ನಾಗಿ ಮಾಡಿಕೊಂಡಿರುನ ವಿರಾಟ್‌ಪುರುಷ. ಪಿಂಡಾಂಡದ ತದ್ರೂಪ ಬ್ರಹ್ಮಾಂಡವಾಗಿರುವುದರಿಂದ ವಿರಾಟ್‌ಪುರುಷನಲ್ಲಿಯೂ ಸಹ ಈ ಆವರಣಗಳೆಲ್ಲವೂ ಇರಬಹುದು ಎಂದು ಭಾವಿಸುತ್ತೇನೆ.
  (ಭಗವಂತನ ಬೆಳಕಿನ ಲೋಕ ಇವೆಲ್ಲ ಆವರಣದ ಆಚೆ ಅಂದರೆ ವಿರಾಟ್ ಪುರುಷನ ತಲೆಯ ಮೇಲಿದೆ.)

ಇನ್ನು ೨೧ ಕಟ್ಟಿಗೆಗಳೆಂದರೆ, ೨೧ ತತ್ವಗಳಾಗಿರುತ್ತದೆ. ಅವು ಯಾವುದೆಂದರೆ ಪಂಚಭೂತಗಳು, ಪಂಚಪ್ರಾಣಗಳೂ, ಪಂಚಜ್ಞಾನೇಂದ್ರಿಯಗಳು, ಪಂಚಕರ್ಮೇಂದ್ರಿಯಗಳು ಮತ್ತು ೨೧ನೆಯದಾದ ಮನಸ್ಸು ಎಂದು ಭಾವಿಸುತ್ತೇನೆ. ಈ ಎಲ್ಲಾ ಆವರಣದೊಳಗಿರುವ ಆತ್ಮನನ್ನು ನಮ್ಮೊಳಗಿರುವ ಯೂಪಸ್ತಂಭಕ್ಕೆ ದೇವತೆಗಳು ನಮ್ಮನ್ನು ಕಟ್ಟಿ ಹಾಕಿದ್ದಾರೆ. ಆದ್ದರಿಂದ ನಾವು ಅಮರತ್ವವನ್ನು ಪಡೆದು ಸದಾಕಾಲ ಭಗವಂತನ ಬಳಿ ಇರಬೇಕಾದರೆ, ಈ ಆವರಣಗಳನ್ನೆಲ್ಲಾ ತುಂಡರಿಸಿ ಬೆಳಕಿನ ಲೋಕಕ್ಕೆ ಹೋಗಬೇಕು. ಆತ್ಮನು ಮತ್ತು ಇತರ ಏಳು ಆವರಣಗಳು ಬೇರೆ ಬೇರೆಯಾಗದಂತೆ ಭದ್ರವಾಗಿರುವುದಕ್ಕೋಸ್ಕರ ಯೂಪಸ್ತಂಭಕ್ಕೆ ಕಟ್ಟಿಹಾಕಿರುವರು.

ಯಜ್ಞೇನ ಯಜ್ಞಮಯಜಂತ ದೇವಸ್ತಾನಿ ಧರ್ಮಾಣಿ ಪ್ರಥಮಾನ್ಯಾಸನ್ ೧
ತೇ ಹ ನಾಕಂ ಮಹಿಮಾನಃ ಸಚಂತ ಯತ್ರ ಪೂರ್ವೇ ಸಾಧ್ಯಾಃ ಸಂತಿ ದೇವಾಃ ೧೧ .(ಋ ೧೦-೯೦-೧೬ ಸಾಭಾ)
"ದೇವತೆಗಳು ಮಾನಸಿಕವಾದ ಸಂಕಲ್ಪರೂಪದ ಯಜ್ಞದಿಂದ ಯಜ್ಞ ರೂಪನಾದ ಪ್ರಜಾಪತಿಯನ್ನು ಪೂಜಿಸಿದರು. ಆ ಯಜ್ಞ ಪ್ರಕಾರಗಳೇ ಮುಖ್ಯ ಧರ್ಮಗಳಾಗಿ ಪ್ರಸಿದ್ಧವಾದವು. ಪುರಾತನರಾದ ದೇವತೆಗಳೂ, ಸಾಧ್ಯರೂ (ಸಿದ್ಧ ಪುರುಷರು) ವಾಸಮಾಡುವ ಸ್ವರ್ಗವನ್ನು ವಿರಾಟ್‌ಪುರುಷನನ್ನು ಉಪಾಸನೆ ಮಾಡುವ ಮಹಾತ್ಮರು ಪಡೆಯುತ್ತಾರೆ."

"ಪೃಥ್ವಿ ಲೋಕದ ಜ್ಞಾನವು ಭಗವಂತನ ದೃಷ್ಟಿಯಲ್ಲಿ ಮೂರ್ಖತನವಾಗಿದೆ. ಶಾಸ್ತ್ರದಲ್ಲಿ ಬರೆದಿರುವುದೇನೆಂದರೆ – ಭಗವಂತ"ನು ಈ ಮೂರ್ಖ ಜ್ಞಾನಿಗಳನ್ನು ಅವರ ಮೂರ್ಖತನದ ಮುಖಾಂತರವಾಗಿಯೇ ಶಿಕ್ಷಿಸುವನು"

ಸತ್ಯದ ಅಂತಿಮ ಮಜಲನ್ನು ಮುಟ್ಟಬೇಕಾದರೆ ಸಾಧನೆ ಮತ್ತು ವಿಚಾರವು ಬಹಳ ಪ್ರಾಮುಖ್ಯವಾಗಿದೆ. ಇದರ ಜೊತೆಗೆ ನಮ್ಮ ದೈನಂದಿನ ಕರ್ಮಗಳು ದೈವೀ ಶಾಸನಕ್ಕೆ ಅನುಗುಣವಾಗಿರಬೇಕು. ನಮ್ಮ ಮನಸ್ಸು ಯಾವಾಗಲೂ ಇದು ಏಕೆ? ಏನು? ಕಾರಣವೇನು? ಇತ್ಯಾದಿ ಪ್ರಶ್ನೆಗಳಿಂದ ವಿಚಾರಶೀಲವಾಗಿದ್ದಾಗ ಮಾತ್ರ ಸತ್ಯವನ್ನು ಕಂಡುಕೊಳ್ಳಬಹುದು. ಆದ್ದರಿಂದಲೇ "ವಿಚಾರಶೀಲತೆಯೇ ಆತ್ಮಜ್ಞಾನಕ್ಕೆ ಬೀಗದ ಕೀಲಿಯಾಗಿದೆ" ಎಂದು ಹೇಳುವುದು. ಹೆರ್ಮಸ್ ಟ್ರೈಮೆಗಿಸ್ಟಸ್ ಎಂಬ ಈಜಿಪ್ಟ್/ಗ್ರೀಕ್‌ನ ಸಂತನು ಹೇಳುವುದೇನೆಂದರೆ "ವಿಚಾರವು ನಮ್ಮ ಯೋಚನೆಗಳಿಂದ ಉದ್ಭವಿಸುವುದು ಮತ್ತು ವಿಚಾರವು ಸತ್ಯದ ಬೆಳಕನ್ನು ಕತ್ತಲಿನಿಂದ ಹೊರಹೊಮ್ಮಿಸುವುದು ಮತ್ತು ನೀರಿನ ಮಧ್ಯದೊಳಗಿನಿಂದ (ಪ್ರಕೃತಿ) ಸತ್ಯವು ಸಿದ್ಧವಾಗುವುದು".

ಮೇನ್ಲಿ ಪಿ ಹಾಲ್ ಎಂಬುವರು ತಮ್ಮ "ದಿ ಸಿಕ್ರೀಟ್ ಟೀಚಿಂಗ್ ಆಫ್ ಆಲ್ ಏಜಸ್" ಎಂಬ ಪುಸ್ತಕದಲ್ಲಿ ಬರೆದಿರುವುದೇನೆಂದರೆ 'ಪ್ರಗತಿಯನ್ನು ಹೊಂದಿರುವ ಆಧುನಿಕ ಮನುಕುಲವು ಲಕ್ಷಾಂತರ ರಹಸ್ಯಗಳನ್ನು ತಿಳಿದಿರಬಹುದು ಆದರೆ, ಪ್ರಾಚೀನ ಕಾಲದ ಜನರು ಒಂದೇ ಒಂದು ರಹಸ್ಯವನ್ನು ಮಾತ್ರ ತಿಳಿದುಕೊಂಡಿದ್ದರು. ಆ ಒಂದು ಜ್ಞಾನವು ಆಧುನಿಕ ಜನರ ಲಕ್ಷಾಂತರ ರಹಸ್ಯಗಳಿಗಿಂತಲೂ ದೊಡ್ಡದು. ಲಕ್ಷಾಂತರ ರಹಸ್ಯಗಳು ನಮ್ಮಲ್ಲಿ ಸಾವು, ಆಪಘಾತ, ದುಃಖ, ಸ್ವಾರ್ಥ ಮನೋಭಾವ, ಕಾಮ ಮತ್ತು ದುರಾಸೆಗಳನ್ನು ಬೆಳೆಸುತ್ತದೆ. ಆದರೆ ಪ್ರಾಚೀನರ ಆ ಒಂದು ರಹಸ್ಯವು ನಮಗೆ ಜೀವನ, ಬೆಳಕು ಮತ್ತು ಸತ್ಯವನ್ನು ತೋರಿಸುತ್ತದೆ.'

# ಭಾಗ–೪

## ಅಧ್ಯಾಯ–೧೭: ವಿಶ್ವ ಸೃಷ್ಟಿ

ಬ್ರಹ್ಮ, ವಿಷ್ಣು ಮತ್ತು ಮಹೇಶ್ವರರು ಸೃಷ್ಟಿ, ಸ್ಥಿತಿ ಮತ್ತು ಲಯಕರ್ತರೇ? ಪುರಾಣದ ಈ ಸಿದ್ಧಾಂತವು ಸರಿಯೇ? ಈ ಬಗ್ಗೆ ಋಗ್ವೇದವು ಏನು ಹೇಳುತ್ತದೆ ಎಂಬುದನ್ನು ನೋಡೋಣ.

ಬೃಹಸ್ಪತಿ ಮೊದಲು ಬ್ರಹ್ಮನನ್ನು ಜಾಗೃತಮಾಡಿ ಬ್ರಹ್ಮನ ಮಂತ್ರಭಂಡಾರದಿಂದ ಮಂತ್ರಗಳನ್ನು ಹೆಕ್ಕಿ ಹಿಂದಿನ ಯುಗಕ್ಕೆ ಅದಿತಿಯ ಜೊತೆಯಲ್ಲಿ ಹೋಗಿದ್ದ ಇಂದ್ರ, ಮಿತ್ರಾ, ವರುಣ, ಆರ್ಯಮಾ. ಭಗ ಮತ್ತು ಅಂಶ ದೇವತೆಗಳನ್ನು ಮಹಾಸಮುದ್ರದಲ್ಲಿ ಅಂದರೆ ದ್ಯುಲೋಕದಲ್ಲಿ ಮತ್ತೆ ಪ್ರಕಟವಾಗುವಂತೆ ಮಾಡುತ್ತಾನೆ. ಬ್ರಹ್ಮಣಸ್ಪತಿಯು ದೇವತೆಗಳಿಗೆ ಬಲವನ್ನೂ ಮತ್ತು ಶಕ್ತಿಯನ್ನು ತುಂಬುತ್ತಾನೆ. ಈ ದೇವತೆಗಳು ಆದಿತ್ಯರ ವಾಕ್ ಶಕ್ತಿಯನ್ನು ಪ್ರತಿನಿಧಿಸುವರು. ದೇವತೆಗಳಲ್ಲಿ ಜ್ಯೇಷ್ಟನಾದ ಮತ್ತು ಆದಿಪುರುಷನಾದ ಇಂದ್ರನು ಕ್ಷತ್ರಿಯ ಸ್ವಭಾವದವನಾಗಿ ಸಕಲರ ರಕ್ಷಕನಾಗಿದ್ದಾನೆ. ಅದಿತಿಯ ಪುತ್ರರಾದ ಆದಿತ್ಯರಿಂದ ಮಹಿಮೆಯಿಂದಾಗಿ ಸಕಲ ಸೃಷ್ಟಿಯೂ ಆಗಿದೆ ಎಂಬುದನ್ನು ಓದಿದೆವು.

ಸ್ಥೂಲಪ್ರಪಂಚದ ಸೃಷ್ಟಿಯ ಮೂಲವಸ್ತುವಾದ ಸಿಹಿಸಮುದ್ರವು ಊರ್ಧ್ವಮುಖವಾಗಿ ಮತ್ತು ಕಹಿಸಮುದ್ರವು ಕೆಳಮುಖವಾಗಿ ಹರಿಯುತ್ತಿದ್ದಿತು. ಆಗ ಇಂದ್ರನ ಅಪ್ಪಣೆಯಂತೆ ವರುಣ, ಮಿತ್ರಾ, ಆರ್ಯಮಾ, ಭಗ ಮತ್ತು ಅಂಶ ದೇವತೆಗಳು ಅನೇಕ ಪ್ರತಿಕೃತಿಗಳನ್ನು ಹೊಂದಿ ತಮ್ಮ ಬಾಹುಗಳಿಂದ ಪರಮಾಣುವಿನ ಮಹಾಸಮುದ್ರವನ್ನು ಸರೋವರದಂತೆ ಅಲ್ಲಲ್ಲಿ ಗುಂಪುಗೂಡುವಂತೆ ಮಾಡುತ್ತಾರೆ. ಈ ಸರೋವರವನ್ನು ಪಿರಮಿಡ್ ಧರ್ಮವು ಪವಿತ್ರ ಸರೋವರ (ಸೇಕ್ರೆಡ್ ಲೇಕ್) ಎಂದು ಕರೆಯುತ್ತದೆ.

ಇಂದ್ರನು ಪ್ರಥಮವಾಗಿ ಮನಸ್ಸನ್ನು ಹೊಂದಿ ಸಕಲ ದೇವತೆಗಳನ್ನು ತನ್ನ ಮಾನಸಿಕ ಶಕ್ತಿಯಿಂದ ಆವರಿಸಿಕೊಳ್ಳುತ್ತಾನೆ. ಆದ್ದರಿಂದ ಇಂದ್ರನು ತನ್ನ ಮನಸ್ಸಿನಲ್ಲಿ ಯಾವ ಆಲೋಚನೆಯನ್ನು ಮಾಡುತ್ತಾನೊ ಆದನ್ನು ಇತರ ದೇವತೆಗಳು ಕಾರ್ಯರೂಪಕ್ಕೆ ತರುತ್ತಾರೆ.

ಉದಾಹರಣೆಗೆ ನಮ್ಮ ಸ್ಥೂಲಶರೀರವನ್ನು ನಿಯಂತ್ರಿಸುತ್ತಿರುವುದು ನಮ್ಮ ಮನಸ್ಸೇ ಆಗಿದೆ. ನಮಗೆ ಬಾಯಾರಿಕೆಯಾಗಿದೆ ಎಂದು ಅನಿಸಿದರೆ ನಮ್ಮ ಶರೀರವು ನೀರನ್ನು ಕುಡಿಯುತ್ತದೆ. ಶರೀರಕ್ಕೆ ಆಜ್ಞೆಯನ್ನು ಕೊಡುವ ಅವಶ್ಯಕತೆಯಿಲ್ಲ. ಅದು ತಾನಾಗೆ ನಮ್ಮ ಮನಸ್ಸಿನ ಇಚ್ಛೆಯಂತೆ ಕುಡಿಯುತ್ತದೆ. ಇದೇ ರೀತಿಯಾಗಿ ಇಂದ್ರನ ಇಚ್ಛೆಯಂತೆ ಆದಿತ್ಯರು ಮತ್ತು ಇತರ ದೇವತೆಗಳು ನಡೆದುಕೊಳ್ಳುತ್ತಾರೆ.

ಆದಿತ್ಯರ ಮಹಾಶಕ್ತಿಯಿಂದಾಗಿ ಮಹಾಸಮುದ್ರದ ಅನೇಕ ಸರೋವರಗಳು ಅದರ ೧/೪ ಭಾಗದಷ್ಟು ಸಂಕುಚಿತಗೊಂಡು ಜಲಗೋಳವಾಗುತ್ತದೆ. ಈ ಸರಸ್ಸಿನ ಗುಂಪುಗಳು ನಕ್ಷತ್ರ ಪುಂಜಗಳ ಮೂಲವಾಗಿದೆ. ಮಿತ್ರಾವರುಣರ ಮಹಾಶಕ್ತಿಯಿಂದಾಗಿ ಈ ಗೋಳದಲ್ಲಿ ಘರ್ಷಣೆ ಉಂಟಾಗಿ ಅಗ್ನಿಯು ಪ್ರಕಟವಾಗುವುದು. ಈ ಅಗ್ನಿಗೋಳದ ಹೊರಮೇಲ್ಮೆಯಲ್ಲಿ ಆದಿತ್ಯರ ತೇಜಸ್ಸು ವ್ಯಾಪಿಸಿಕೊಂಡು ಸೂರ್ಯಮಂಡಲದ ತೇಜಸ್ಸು ಪ್ರಕಟವಾಗುವುದು. ಅಂದರೆ ಸೂರ್ಯನ ತೇಜಸ್ಸು ನಿಜವಾಗಿಯೂ ಆದಿತ್ಯರ ತೇಜಸ್ಸಾಗಿದೆ.

ದೇವತೆಗಳ ಸೃಷ್ಟಿಯಲ್ಲಿ ವಾಯುವಿನ ಪಾತ್ರವು ಪ್ರಮುಖವಾಗಿರುತ್ತದೆ. ದೇವತೆಗಳು ಮಹಾಸಮುದ್ರದ ಜಲದ ಜೊತೆಗೆ ವಾಯುವಿನ ಅಂಶವನ್ನು ಉಪಯೋಗಿಸಿಕೊಂಡು ಸೃಷ್ಟಿಯನ್ನು ಮಾಡುತ್ತಾರೆ. ನಕ್ಷತ್ರಪುಂಜದಿಂದ ಅಸಂಖ್ಯಾತ ಅಗ್ನಿಗೋಳಗಳು ಪ್ರಕಟವಾಗುವವು. ಅದಿತಿ ಪುತ್ರರ ತೇಜಸ್ಸು ಯಾವಾಗ ಈ ಅಗ್ನಿಮಂಡಲವನ್ನು ವ್ಯಾಪಿಸಿಕೊಳ್ಳುತ್ತದೋ ಆಗ ಸೂರ್ಯರು ಪ್ರಕಟರಾಗುವರು. ಆ ತೇಜಸ್ಸಿನ ಮಧ್ಯೆ ಸವಿತೃದೇವತೆಯು ಪ್ರಕಟನಾಗುವನು. ಅಂಧಕಾರವನ್ನು ನಾಶಮಾಡುವಂತಹ ಪ್ರಕಾಶವನ್ನು ಹೊಂದಿರುವ ಮತ್ತು ಸೃಷ್ಟಿ ಕಾರ್ಯದ ಪ್ರೇರಕನೂ ಆದ ಸೂರ್ಯ–ಸವಿತೃವನ್ನು ಆದಿತ್ಯರು ಉಪಾಸಿಸುವರು. ಈತನೇ ಸಕಲ ಜೀವರಾಶಿಗಳ ಸೃಷ್ಟಿಗೆ ಕಾರಣನಾದ ಪ್ರಜಾಪತಿಯಾಗಿದ್ದಾನೆ. ಸೂರ್ಯ ಸೃಷ್ಟಿಯ ಬಗ್ಗೆ ಋಗ್ವೇದ ಪ್ರಮಾಣ ನೋಡೋಣ.

ಯದ್ದೇವಾ ಅದಃ ಸಲಿಲೇ ಸುಸಂರಬ್ಧಾ ಅತಿಷ್ಠತ ।
ಅತ್ರಾ ವೋ ನೃತ್ಯತಾಮಿತ ತೀವ್ರೋ ರೇಣುರಪಾಯತ ।। (ಋ ೧೦–೭೨–೬ ಸಾ ಭಾ)

"ಎಲೈ ದೇವತೆಗಳೆ, (ಮಿತ್ರ, ವರುಣ, ಆರ್ಯಮಾ, ಭಗ ಮತ್ತು ಅಂಶ) ಯಾವಾಗ ನೀವು ಈ ಸರಸ್ಸಿನಲ್ಲಿ ಉತ್ತಮವಾದ ಚೇತಸ್ಸುಳ್ಳವರಾಗಿ ಸ್ಥಿತರಾದಿರೋ ಆಗ ಇದೇ ಸರಸ್ಸಿನಲ್ಲಿ ನೀವು ನರ್ತನ ಮಾಡುತ್ತಿರುವಿರೋ ಎಂಬಂತೆ, ನಿಮಗೆ ಸೇರಿದುದೂ, ತೀಕ್ಷ್ಣವಾದುದೂ ಆದ ತೇಜಸ್ಸಿನ ಅಂಶವು (ಅಗ್ನಿ) ಉದ್ಭೂತವಾಯಿತು."

(ಪರಮಾಣುಗಳ ಮಹಾಸಮುದ್ರವು ಸರಸ್ಸಿನಂತೆ ಅಲ್ಲಲ್ಲಿ ಗುಂಪುಗೂಡಿತು.)

ದೇವಾಸಸ್ತ್ವಾ ವರುಣೋ ಮಿತ್ರೋ ಅರ್ಯಮಾ ಸಂ ದೂತಂ ಪ್ರತ್ನಮಿಂಧತೇ ।
ವಿಶ್ವಂ ಸೋ ಅಗ್ನೇ ಜಯತಿ ತ್ವಯಾ ಧನಂ ಯಸ್ತೇ ದದಾಶ ಮರ್ತ್ಯಃ ।।
"ಎಲೈ ಅಗ್ನಿಯೇ, ನೀನು ಬಹಳ ಪುರಾತನನು. ಮೊದಲಿನಿಂದಲೂ ದೇವದೂತನು. ವರುಣ, ಮಿತ್ರ, ಮತ್ತು ಆರ್ಯಮಾ ಎಂಬ ಮೂರು ದೇವತೆಗಳೂ ಸಹ ನಿನ್ನನ್ನು ಪ್ರಜ್ವಲಿಸುವಂತೆ ಮಾಡುತ್ತಾರೆ..... (೧-೩೬-೪ ಸಾಭಾ)

(ಸಲಿಲದಿಂದ ಸಂಗ್ರಹಿಸಿದ ಜಲಗೋಳವನ್ನು ವರುಣ, ಮಿತ್ರ, ಅರ್ಯಮಾ ದೇವತೆಗಳು ಅಗ್ನಿಗೋಳವನ್ನಾಗಿ ಮಾಡುತ್ತಾರೆ.)

ಯದ್ದೇವಾ ಯತಯೋ ಯಥಾ ಭುವನಾನ್ಯಪಿನ್ವತ ।
ಅತ್ರಾ ಸಮುದ್ರ ಆ ಗೂಳ್ಹಮಾ ಸೂರ್ಯಮಜಭರ್ತನ ।। (ಋ ೧೦-೭೨-೭ ಸಾ ಭಾ)
"ಎಲೈ ದೇವತೆಗಳೇ, ಮೇಘಗಳು ವೃಷ್ಟಿಯಿಂದ ಲೋಕಗಳನ್ನು ತುಂಬುವಂತೆ, ಈ ಲೋಕಗಳನ್ನು ನಿಮ್ಮ ತೇಜಸ್ಸಿನಿಂದ ತುಂಬಿದಿರೋ, ಆಗ ಈ ಉದಕಸಂಘದಲ್ಲಿ ಅಡಗಿದ್ದ ಸೂರ್ಯನನ್ನು ಹೊರಕ್ಕೆ ಬರಮಾಡಿ ಪ್ರಕಾಶಪಡಿಸಿದಿರಿ."

(ದೇವತೆಗಳ ತೇಜಸ್ಸು ಅಗ್ನಿಗೋಳವನ್ನು ಆವರಿಸಿಕೊಂಡಾಗ ಸೂರ್ಯನು ಪ್ರಕಟವಾದನು. ಇದರ ಅರ್ಥ ಆದಿತ್ಯರು ಸೂರ್ಯನಂತೆ ತೇಜಸ್ವಿಗಳಾಗಿದ್ದಾರೆ.)

ಋತೇನ ಋತಮಪಿಹಿತಂ ಧ್ರುವಂ ವಾಂ ಸೂರ್ಯಸ್ಯ ಯತ್ರ ವಿಮುಚಂತ್ಯಶ್ವಾನ್ ।
ದಶ ಶತಾ ಸಹ ತಸ್ಥುಸ್ತದೇಕಂ ದೇವಾನಾಂ ಶ್ರೇಷ್ಠಂ ವಪುಷಾಮಪಶ್ಯಂ ।। (ಋ ೫-೬೨-೧ ಆರ್‌ಎಲ್‌ಕ+ಸಾಭಾ)
"ಎಲೈ ಮಿತ್ರಾವರುಣರೇ ಯಾವ ಆದಿತ್ಯಮಂಡಲದಲ್ಲಿ ನಿಮ್ಮ ವಾಸಸ್ಥಾನವಿರುವುದೋ, ಯಾವಾಗ ಅವರು ತಡೆಯಲ್ಪಟ್ಟ ಅಶ್ವಗಳನ್ನು (ಸೂರ್ಯನನ್ನು?) ಬಿಡುಗಡೆ ಮಾಡುವರೋ, ಇನ್ನೂ ಸಹಸ್ರಸಂಖ್ಯಾತವಾದ ಅಶ್ವಗಳು (ಸೂರ್ಯರು?) ಒಟ್ಟಿಗೆ ಆಶ್ರಯವನ್ನು ಪಡೆಯುವುವೋ ಅಂತಹುದೂ ಮತ್ತು ಯಾವುದು ಪ್ರಕಾಶಮಾನರಾದ ದೇವತೆಗಳ ತೇಜೋರೂಪವಾದ ದೇಹಗಳಗೆಲ್ಲಾ ಅತ್ಯುತ್ತಮವಾದುದೂ, ಒಂದೇ ಆಶ್ರಯವಾದುದೂ, ಶಾಶ್ವತ ಸ್ಥಿತಿಯುಳ್ಳದ್ದೂ ಸತ್ಯಾತ್ಮಕವಾದುದೂ, ಉದಕದಿಂದ ಮುಚ್ಚಲ್ಪಟ್ಟದ್ದೂ ಆದ ಆದಿತ್ಯಮಂಡಲವನ್ನು ನೋಡಿದ್ದೇನೆ."

(ಈ ಮಂತ್ರ ಸೂರ್ಯ ಮತು ನಕ್ಷತ್ರಪುಂಜದ ಬಗ್ಗೆ ಹೇಳುತ್ತಿದೆಯೆ?)

ಯದೇದೇನಮದಧುರ್ಯಜ್ಞಿಯಾಸೋ ದಿವಿ ದೇವಾಃ ಸೂರ್ಯಮಾದಿತೇಯಂ ।
ಯದಾ ಚರಿಷ್ಣೂ ಮಿಥುನಾವಭೂತಾಮಾದಿತ್ಪ್ರಾಪಶ್ಯನ್ಭುವನಾನಿ ವಿಶ್ವಾ ।। (ಋ ೧೦-೮೮-೧೧ ಸಾ ಭಾ )
"ಅದಿತಿಯ ಪುತ್ರರಾದ ಸೂರ್ಯನನ್ನೂ, ಅಗ್ನಿಯನ್ನೂ, ಯಜ್ಞಾರ್ಹರಾದ ದೇವತೆಗಳು ಯಾವಾಗ ದ್ಯುಲೋಕದಲ್ಲಿ ಸ್ಥಾಪಿಸಿದರೋ, ಯಾವಾಗ ಸಂಚಾರಶೀಲರಾದ ಈ ಸೂರ್ಯಾಗ್ನಿಗಳು ಒಂದಾಗಿ ಸೇರಿದರೋ ಆ ಒಡನೆಯೇ, ಸಕಲ ಲೋಕಗಳು ಇವರಿಬ್ಬರನ್ನೂ ನೋಡಿದವು."

ಧಾರಯನ್ತ ಆದಿತ್ಯಾಸೋ ಜಗತ್ಸ್ಥಾ ದೇವಾ ವಿಶ್ವಸ್ಯ ಭುವನಸ್ಯ ಗೋಪಾಃ ।
ದೀರ್ಘಾಧಿಯೋ ರಕ್ಷಮಾಣಾ ಅಸುರ್ಯಮೃತಾವಾನಶ್ಚಯಮಾನಾ ಋಣಾನಿ ।। (ಋ ೨-೨೭-೪ ಸಾ ಭಾ)
"(ಆದಿತ್ಯರು) ಜಂಗಮಾತ್ಮಕವಾದ ಪ್ರಾಣಿಗಳನ್ನು, (ಹೃದಯದಲ್ಲಿದ್ದುಕೊಂಡು) ಸ್ಥಿರವಾದ ವಸ್ತುಗಳನ್ನು ಸ್ಥಾಪಿಸಿ ಧರಿಸಿರುವರೂ, ದಾನಾದಿಗುಣಗಳಂದ ಕೂಡಿದವರೂ ಸಕಲ ಲೋಕಗಳ ರಕ್ಷಕರೂ, ಧೀರ್ಘವಾದ ಪ್ರಜ್ಞೆಯುಳ್ಳವರೂ, ಮೇಘಸ್ಥವಾದ ಉದಕವನ್ನು ಸಕಾಲದಲ್ಲಿ ಶೇಖರಿಸಿ ರಕ್ಷಿಸುವವರೂ, ಸತ್ಯವಂತರೂ, ಸ್ತೋತೃಗಳು ಇತರರಿಗೆ ಕೊಡಬೇಕಾದ ಋಣಗಳನ್ನು ತೀರಿಸುವವರೂ ಆದ ಆದಿತ್ಯರು ನಮ್ಮನ್ನನುಗ್ರಹಿಸಲಿ."

ಮಾಯಾ ವಾಂ ಮಿತ್ರಾವರುಣಾ ದಿವಿ ಶ್ರಿತಾ ಸೂರ್ಯೋ ಜ್ಯೋತಿಶ್ಚರತಿ ಚಿತ್ರಮಾಯುಧಂ ।
ತಮಭ್ರೇಣ ವೃಷ್ಟ್ಯಾ ಗೂಹಥೋ ದಿವಿ ಪರ್ಜನ್ಯ ದ್ರಪ್ಸಾ ಮಧುಮಂತ ಈರತೇ ।। (ಋ ೫-೬೩-೪ ಸಾ ಭಾ)
"ಎಲೈ ಮಿತ್ರವರುಣರೇ ನಿಮ್ಮ ಅಸಾಧಾರಣವಾದ ಶಕ್ತಿಯು (ಸೂರ್ಯ) ಅಂತರಿಕ್ಷದಲ್ಲಿ ಸ್ಥಿತವಾಗಿದೆ. ಸರ್ವಪ್ರೇರಕನಾದ ಸೂರ್ಯನು ಪ್ರಭಾರೂಪನಾಗಿಯೂ ಆಕರ್ಷಕನಾಗಿಯೂ, ನಿಮ್ಮ ಮಾಯಾರೂಪದ ಆಯುಧವಾಗಿಯೂ ಅಂತರಿಕ್ಷದಲ್ಲಿ ಸಂಚರಿಸುತ್ತಾನೆ...."

ದೇವತೆಗಳು ಮತ್ತು ಸೂರ್ಯನು ನಮ್ಮೆಲ್ಲರ ಹೃದಯದಲ್ಲಿರುವರು. ಆದರೆ ವೃತ್ರಾಸುರನ ಅಂಧಕಾರದಿಂದ ಯಾವುದು ನಮಗೆ ಕಾಣುತ್ತಿಲ್ಲ. ಯಾವಾಗ ನಾವು ವೃತ್ರಾಸುರನ ಕೋಟೆಯನ್ನು ಧ್ವಂಸಮಾಡಿ ಸೂರ್ಯೋಪಾಸನೆ ಮಾಡುತ್ತೇವೋ ಆಗ ಆದಿತ್ಯರು ಸೂರ್ಯನನ್ನು ನಮ್ಮ ಶರೀರದ ಹೃದಯದಲ್ಲಿ ಪ್ರಕಟಮಾಡುತ್ತಾರೆ.

## ವರುಣದೇವರ ಮಹಿಮೆ

ಉದಕಗಳು ವಿರಾಟ್‌ಪುರುಷನನ್ನು ಆವರಿಸಿಕೊಂಡಿದ್ದರೂ ಉದಕಗಳ ಅಧಿದೇವತೆ ವರುಣದೇವರಾಗಿದ್ದಾರೆ, ನಾವು ನೋಡುವ ಭೌತಪ್ರಪಂಚವು ದೈವೀಜಲದಿಂದಲೇ ಆಗಿದೆ. ನಮ್ಮ ಶರೀರವೂ ಸಹ ಜಲದಿಂದಾಗಿದೆ. ವರುಣ ಪದದ ಅರ್ಥ "ಎಲ್ಲವನ್ನು ಆವರಿಸಿಕೊಂಡಿರುವವನು" "ಎಲ್ಲವನ್ನು ಸುತ್ತುವರೆದಿರುವವನು" ಮತ್ತು "ಎಲ್ಲವನ್ನು ಹೊದಿಕೆಯಂತೆ ಮುಚ್ಚಿಕೊಂಡಿರುವವನು" ಎಂಬ ಅರ್ಥವಿದೆ. ನಮ್ಮ ಕಾರಣಶರೀರ, ಸೂಕ್ಷ್ಮಶರೀರ, ಪ್ರಾಣಮಯಶರೀರ ಮತ್ತು ಮನೋಮಯಶರೀರವನ್ನು ಸ್ಥೂಲಶರೀರದಿಂದ ಮುಚ್ಚಿರುವವನು.

ಇಂದ್ರನು ಸಾಮ್ರಾಟ್ ಅಂದರೆ ಚಕ್ರವರ್ತಿಯಾದರೆ, ವರುಣನು ಸ್ವರಾಟ್ ಅಥವಾ ಸ್ವತಂತ್ರನಾದ ಸಾಮಂತರಾಜನಾಗಿದ್ದಾನೆ. ವರುಣನು ಜಲದಿಂದಾದ ಶರೀರಗಳ ಮೇಲೆ ಸ್ವತಂತ್ರ ಅಧಿಪತ್ಯವನ್ನು ಹೊಂದಿರುವವನು. ಆದ್ದರಿಂದ ವರುಣನನ್ನು 'ಸ್ವರಾಟ್' ಎಂದು ಕರೆಯುತ್ತಾರೆ. ನಾವು ನಮ್ಮ ಆಸೆಗಳನ್ನು ಅನುಭವಿಸಲು ವರುಣದೇವರು ಭೌತ ಪ್ರಪಂಚವನ್ನು ಸೃಷ್ಟಿಸಿ, ಪೃಥ್ವಿಯ ಮೇಲೆ ನಮಗೆ ಶರೀರವನ್ನು ಅನುಗ್ರಹಿಸಿರುವವನು. ಆ ಕಾರಣದಿಂದ ಇಡೀ ವಿಶ್ವದ ಮೇಲೆ ಮತ್ತು ಮಾನವರ ಮೇಲೆ ತನ್ನ ಶಾಸನವನ್ನು ಸ್ಥಾಪಿಸಿರುವವನು. ದೇವತೆಗಳೂ ಸಹ ವರುಣನ ಶಾಸನವನ್ನು ಮೀರುವುದಿಲ್ಲ. ವಿರಾಟ್‌ಪುರುಷನನ್ನು ವ್ಯಾಪಿಸಿರುವ ಮಹಾಸಮುದ್ರಕ್ಕೆ ವರುಣನು ಅಧಿದೇವತೆಯಾಗಿರುವವನು. ಸಕಲ ಸೃಷ್ಟಿಯು ಮಹಾಸಮುದ್ರದಿಂದಲೇ ಆಗಿರುವುದರಿಂದ **ವರುಣನನ್ನು ಸೃಷ್ಟಿ ಸಾಮ್ರಾಟ್ ಎಂದು ಕರೆಯುತ್ತಾರೆ**. ಶ

ಅವ್ಯಕ್ತಸ್ವರೂಪವಾದ ಮನಸ್ಸು ತನ್ನ ಮನಸ್ಸಿನಲ್ಲಿ ಸೃಷ್ಟಿಯನ್ನು ಮಾಡಬಹುದು ಮತ್ತು ಪ್ರಾಣವೂ ಸಹ ಆಕಾರ, ಕಂಪನ ಮತ್ತು ಚೈತನ್ಯವನ್ನು ಪಡೆಯಬಹುದು. ಆದರೆ ಅತಿಸೂಕ್ಷ್ಮವಾದ ಈ ಸೃಷ್ಟಿಯನ್ನು ಯಾರೂ ನೋಡಲು ಸಾಧ್ಯವಿಲ್ಲ. ಏಕೆಂದರೆ ಮನಸ್ಸು ಅವ್ಯಕ್ತಸ್ವರೂಪವಾಗಿದೆ ಮತ್ತು ಪ್ರಾಣವು ಸೂಕ್ಷ್ಮತತ್ವವಾಗಿದೆ.

ಇತರರ ಜೊತೆ ನಮ್ಮ ವ್ಯವಹಾರ ಇತ್ಯಾದಿ ಕಾರ್ಯಗಳು ಭೌತಿಕ ಪ್ರಪಂಚದಲ್ಲಿ ಮಾತ್ರ ಸಾಧ್ಯ. ಮಾನಸಿಕವಾಗಿ ಮಾಡಿದ ಯಾವುದೇ ಕಾರ್ಯಗಳು ಯಾರಿಗೂ ಗೋಚರಿಸುವುದಿಲ್ಲ ಮತ್ತು ನೋಡಲೂ ಅಸಾಧ್ಯ.

ಆದ್ದರಿಂದ ವರುಣನ ಮಹಿಮೆಯು ವರ್ಣನಾತೀತ, ಅವನು ಭೌತಪ್ರಪಂಚದ ವಿಶ್ವಸಾಮ್ರಾಟ್ ಆಗಿರುವುದರಲ್ಲಿ ಸಂದೇಹವೇ ಇಲ್ಲ. ಈ ಕಾರಣಕ್ಕಾಗಿ ವರುಣನು ಮಿತ್ರಾ ದೇವತೆಯೊಡಗೂಡಿ ತನ್ನ ದೈವೀ ಶಾಸನವನ್ನು ಸ್ಥಾಪಿಸಿದ್ದಾನೆ. ಮಹಾಸಮುದ್ರದಿಂದಾದ ಮಾನವ ಶರೀರವನ್ನು ಪಡೆದುಕೊಂಡಿರುವ ನಾವುಗಳು ವರುಣನ ಶಾಸನವನ್ನು ಮೀರಿದರೆ ಶೀಘ್ರಕೋಪಿಯಾದ ಆತನು ನಮ್ಮನ್ನು ತನ್ನ ಪಾಶದಿಂದ ಬಂದಿಸಿ ಅಧಮ ಲೋಕದಲ್ಲಿ ಶಿಕ್ಷಿಸುವನು.

ವರುಣನು ಎಲ್ಲಾ ಸೂರ್ಯಮಂಡಲದಲ್ಲಿ ನೆಲೆಸಿರುವವನು, ಸಕಲ ಜೀವರಾಶಿಗಳ ಹೃದಯದಲ್ಲಿಯೂ ಮತ್ತು ಗ್ರಹಚಂದ್ರಾದಿಗಳಲ್ಲಿ ಜಲರೂಪದಲ್ಲಿಯೂ ಇರುವವನು. ವರುಣನು ಮಿತ್ರಾದೇವತೆಯ ಜೊತೆ ಒಡಗೂಡಿ ಮಾನವರು ಮಾಡುವ ಎಲ್ಲಾ ಕರ್ಮಗಳನ್ನು ದಾಖಲಿಸುತ್ತಾರೆ. (ಪುರಾಣದಲ್ಲಿ ಹೇಳಿರುವ ಚಿತ್ರಗುಪ್ತರು ಮಿತ್ರಾವರುಣರೇ ಆಗಿದ್ದಾರೆ.) ಆತನ ಅನುಚರರೂ ಸಹ ಎಲ್ಲಾ ಕಡೆಯೂ ಇರುವರು. ಯಾರೂ ಸಹ ಅವರ ಕಣ್ಣುತಪ್ಪಿಸಿ ನಡೆದುಕೊಳ್ಳಲಾಗುವುದಿಲ್ಲ. ವರುಣನ ಮಹಿಮೆಯನ್ನು ತಿಳಿಯಲು ಈ ಕೆಳಗಿನ ಮಂತ್ರವನ್ನು ನೋಡಿ.

ಅಹಮಪೋ ಅಪಿನ್ವಮುಕ್ಷಮಾಣಾ ಧಾರಯಂ ದಿವಂ ಸದನ ಋತಸ್ಯ ၊
ಋತೇನ ಪುತ್ರೋ ಅದಿತೇರ್ಋತಾವೋತ ತ್ರಿಧಾತು ಪ್ರಥಯದ್ವಿ ಭೂಮ ॥ (ಋ ೪–೪೨–೪ ಸಾಭಾ)
"ನಾನೇ ಸ್ರವಿಸುವ ಸ್ವಭಾವವುಳ್ಳ ಉದಕಗಳನ್ನು ಸರ್ವತ್ರ ಹರಡಿ ಹರಿಯುವಂತೆ ಮಾಡಿದ್ದೇನೆ. ಉದಕದ ನಿವಾಸಸ್ಥಾನಕ್ಕಾಗಿ ದ್ಯುಲೋಕವನ್ನು ಎತ್ತಿ ಹಿಡಿದಿದ್ದೇನೆ. ಅದಿತಿ ಪುತ್ರನಾದ ನಾನು, ಮೂರು ವಿಭಾಗವುಳ್ಳದ್ದೂ (ಮೂರು ಲೋಕಗಳು), ವ್ಯಾಪಕವಾದುದೂ ಆದ ಆಕಾಶವನ್ನು ವಿಶೇಷವಾಗಿ ವ್ಯಾಪಿಸುವಂತೆ ಮಾಡುತ್ತಾ ಉದಕನಿಮಿತ್ತ ವಾಗಿಯೇ ಉದಕರಕ್ಷಕನಾಗಿದ್ದೇನೆ."

(ಆಕಾಶವು ಶೂನ್ಯವಾಗಿರದೇ ಪರಮಾಣುವಿನ ಮೂಲಕಣಗಳು ತೇಲುವಾಗಿ ಹರಡಿಕೊಂಡಿದೆ ಎಂದು ವಿಜ್ಞಾನಿಗಳು ಹೇಳುತ್ತಾರೆ.)

ವರುಣನನ್ನು ಅಸುರ ಎಂದು ಕರೆಯುತ್ತಾರೆ ಮತ್ತು ಅವನಿಗೆ ಇಬ್ಬರು ತಾಯಂದಿರು ಎಂದು ವೇದವು ಹೇಳುತ್ತದೆ. ಇದಕ್ಕೆ ಕಾರಣ ವರಣನು ಉದಕದ ಅಧಿ ದೇವತೆಯಾಗಿದ್ದಾನೆ. ಆದರೆ ಉದಕದಲ್ಲಿ ಎರಡು ವಿಧವಾದ ಉದಕಗಳಿವೆ. ಒಂದು 'ಸಿಹಿಯಾದ ಉದಕಅಥವಾ ಕ್ಷೀರ ಸಮುದ್ರ' ಮತ್ತೊಂದು 'ಉಪ್ಪು ಮತ್ತು ಕಹಿಯಾದ ಉದಕ'. ವರುಣನು ಉದಕದ ಒಡೆಯನಾಗಿ ಸಿಹಿಯಾದ ಉದಕ ಹಾಗು ಉಪ್ಪು ಮತ್ತು ಕಹಿಯಾದ ಉದಕವನ್ನು ಪ್ರತಿನಿಧಿಸುವವನಾದುದರಿಂದ ಅವನನ್ನು ಅಸುರ ಎಂದು ಕರೆಯಲಾಗಿದೆ. ಆದ್ದರಿಂದ ವರುಣನು ಅದಿತಿ ಮತ್ತು ದಿತಿಯ ಪುತ್ರನಾಗಿ ಇಬ್ಬರು ತಾಯಂದಿರನ್ನು ಪಡೆದಿರುವನು.

ಅಹಂ ರಾಜಾ ವರುಣೋ ಮಹ್ಯೋ ತಾನ್ಯಸುರ್ಯಾಣಿ ಪ್ರಥಮಾ ಧಾರಯಂತ ।
ಕ್ರತುಂ ಸಚಂತೇ ವರುಣಸ್ಯ ದೇವಾ ರಾಜಾಮಿ ಕೃಷ್ಟೇರುಪಮಸ್ಯ ವವ್ರೇಃ ।। (ಋ ೪-೪೨-೨ ಸಾಭಾ)
"ನಾನೇ ಪ್ರಭುವಾದ ವರುಣನಾಗಿದ್ದೇನೆ. ದೇವತೆಗಳು ಮುಖ್ಯವಾದವೂ, ಪ್ರಸಿದ್ಧವಾದವೂ, ಅಸುರನಾಶಕ ವಾದವೂ ಆದ ಬಲವನ್ನೆಲ್ಲಾ ನನಗಾಗಿಯೇ ಪಡೆದಿದ್ದಾರೆ ಮತ್ತು ನನಗೆ ಒಪ್ಪಿಸುತ್ತಾರೆ. ವರುಣಾತ್ಮನೂ, ಮಾನವ ಸ್ವರೂಪನೂ, ಸಕಲರಿಗೂ ಸಮೀಪದಲ್ಲಿರುವವನೂ, ನನ್ನ ಕರ್ಮವನ್ನು ಸಕಲ ದೇವತೆಗಳು ಸೇವಿಸುತ್ತಾರೆ. ನಾನೇ ಸಕಲರ ಪ್ರಭುತ್ವವನ್ನು ಹೊಂದಿದ್ದೇನೆ." (ವಿಶ್ವದ ಸಕಲ ಸೃಷ್ಟಿಗೂ ವರುಣನ ಉದಕವೇ ಕಾರಣವಾಗಿದೆ.)

ಯಸಿನ್ವಿಶ್ವಾನಿ ಕಾವ್ಯಾ ಚಕ್ರೇ ನಾಭಿರಿವ ಶ್ರಿತಾ । (ಋ ೮-೪೧-೬ ಸಾಭಾ)
ತ್ರಿತಂ ಜೂತಿ ಸಪರ್ಯತ ವಜ್ರೇ ಗಾವೋ ನ ಸಂಯುಜೇ
ಯುಜೇ ಅಶ್ವಾನ್ ಅಯುಕ್ಷತ ನಭಂತಾಮನ್ಯಕೇ ಸಮೇ।।
"ಚಕ್ರದಲ್ಲಿ ಅರಗಳೆಲ್ಲವೂ ಮಧ್ಯಭಾಗದ ನಾಭಿಯನ್ನು ಆಶ್ರಯಿಸುವಂತೆ ಯಾವ ವರುಣನಲ್ಲಿ ಸಮಸ್ತವಾದ ಕರ್ಮಗಳು ಆಶ್ರಯಿಸಿವೆಯೋ, ಮೂರು ಸ್ಥಾನಗಳನ್ನೂ ಆಕ್ರಮಿಸಿರುವ ಅದೇ ವರುಣನನ್ನು ಕ್ಷಿಪ್ರವಾಗಿ ಪೂಜಿಸಿರಿ....."

(ಭೌತಿಕ ಪ್ರಪಂಚದಲ್ಲಿಯೇ ಕರ್ಮಗಳು ಘಟಿಸುವುದು. ಕರ್ಮಫಲದ ಶಿಕ್ಷೆಯನ್ನು ಉಣ್ಣುವುದು ಸ್ವರ್ಗ-ನರಕದಲ್ಲಿ. ನಮ್ಮ ಕರ್ಮಫಲಗಳ ಪ್ರಕಾರ ನಾವು ಮತ್ತೆ ಪೃಥ್ವಿಯಲ್ಲಿ ಜನಿಸಿ ಸ್ಥೂಲಶರೀರವನ್ನು ಪಡೆದು ಸುಖ-ದುಃಖಗಳನ್ನು ಅನುಭವಿಸುತ್ತೇವೆ.)

ವನೇಷು ವ್ಯಂತರಿಕ್ಷಂ ತತಾನ ವಾಜಮರ್ವತ್ಸು ಪಯ ಉಸ್ರಿಯಾಸು ।
ಹೃತ್ಸು ಕ್ರತಂ ವರುಣೋ ಅಪ್ಸ್ವ#ಗ್ನಿಂ ದಿವಿ ಸೂರ್ಯಮದಧಾತ್ಸೋಮಮದ್ರೌ ।। (ಋ ೫-೮೫-೨ ಸಾಭಾ)
".....ವರುಣನು ಉದಕಗಳಲ್ಲಿ ಅಗ್ನಿಯನ್ನೂ, ದ್ಯುಲೋಕದಲ್ಲಿ ಸೂರ್ಯನನ್ನೂ, ಪರ್ವತದಲ್ಲಿ ಸೋಮವನ್ನು ಸ್ಥಾಪಿಸಿದ್ದಾನೆ.

ಯಾಸಾಂ ರಾಜಾ ವರುಣೋ ಯಾತಿ ಮಧ್ಯೇ ಸತ್ಯಾನೃತೇ ಅವಪಶ್ಯಞ್ಜನಾನಾಂ ।
ಮಧುಶ್ಚುತಃ ಶುಚಯೋ ಯಾಃ ಪಾವಕಾಸ್ತಾ ಅಪೋ ದೇವೀರಿಹ ಮಾಮವಂತು ।।
"ಮಧ್ಯಮಲೋಕಸ್ಥನಾದ (ದ್ಯುಲೋಕ) ವರುಣದೇವನು ಪ್ರಜೆಗಳ ಸತ್ಯ ಮತ್ತು ಅಸತ್ಯಜೀವನಗಳನ್ನು ನೋಡುತ್ತಾ ಯಾವ ಉದಕಗಳಿಗೆ ಪ್ರಭುವಾಗಿ ಸಂಚರಿಸುವನೋ ಯಾವ ಉದಕಗಳು ಮಧುರವಾದ ರಸಗಳನ್ನು ಹಿಂಡುತ್ತಲೂ, ಪ್ರಕಾಶಮಾನವಾಗಿಯೂ ಶುದ್ಧಿಕಾರಕಗಳಾಗಿ ಇರುವುವೋ ದೇವತಾತ್ಮಗಳಾದ ಅದೇ ಉದಕಗಳು ಈ ಯಜ್ಞದಲ್ಲಿ ನಿರತನಾದ ನನ್ನನ್ನು ರಕ್ಷಿಸಲಿ." (೭-೪೯-೩ ಸಾ ಭಾ)

ಯಸ್ಯ ಶ್ವೇತಾ ವಿಚಕ್ಷಣಾ ತಿಸ್ರೋ ಭೂಮಿರಧಿಕ್ಷಿತಃ । (ಋ ೮-೪೧-೯ ಸಾಭಾ)
ತ್ರಿರುತ್ತರಾಣಿ ಪಪ್ರತುರ್ವರುಣಸ್ಯ ಧ್ರುವಂ ಸದಃ ಸ ಸಪ್ತಾನಾಮಿರಜ್ಯತಿ ನಭಂತಾಮನ್ಯಕೇ ಸಮೇ ।।
"ಅಂರಿಕ್ಷವಾಸಿಯಾದ ಯಾವ ವರುಣನು ಶ್ವೇತವರ್ಣವುಳ್ಳ ತೇಜಸ್ಸುಗಳು ಮೂರು ಅಧೋಲೋಕಗಳನ್ನೂ, ಮೂರು ಊರ್ಧ್ವಲೋಕಗಳ್ಳನ್ನೂ, ವ್ಯಾಪಿಸಿವೆಯೋ ಅದೇ ವರುಣನ ಸ್ಥಾನವು ಅಚಲವಾಗಿರುತ್ತದೆ. ಅದೇ ವರುಣನು ಸಪ್ತಸಿಂಧುಗಳಿಗೂ ಈಶ್ವರನಾಗಿದ್ದಾನೆ." (ಆದಿತ್ಯರ ಈ ಶ್ವೇತವರ್ಣದ ತೇಜಸ್ಸೇ ಸೂರ್ಯನಾಗಿದ್ದಾನೆ.)

ಅಸ್ತಭ್ನಾದ್ದ್ಯಾಮಸುರೋ ವಿಶ್ವವೇದಾ ಅಮಿಮಾತ ವರಿಮಾಣಂ ಪೃಥಿವ್ಯಾಃ ।
ಅಸೀದದ್ವಿಶ್ವಾ ಭುವನಾನಿ ಸಮ್ರಾಡ್ವಿಶ್ವೇತಾನಿ ವರುಣಸ್ಯ ವ್ರತಾನಿ ।। (ಋ ೮-೪೨-೧ ಸಾಭಾ)
"ಸಮಸ್ತ ಧನಕ್ಕೂ ಅಧಿಪತಿಯೂ, ಶಕ್ತಿಯುತನೂ ಆದ ವರುಣನು ಅಂತರಿಕ್ಷವನ್ನು ಸ್ಥಿರವಾಗಿ ನಿಲ್ಲಿಸಿದ್ದಾನೆ. ಪೃಥ್ವಿಯ ಪರಿಮಾಣವನ್ನು ವಿಸ್ತರಿಸಿದ್ದಾನೆ/ನಿರ್ಮಿಸಿದ್ದಾನೆ. ಸಾರ್ವಭೌಮನಾದ ವರುಣನು ಸಮಸ್ತವಾದ ಲೋಕಗಳನ್ನು ಆಕ್ರಮಿಸಿದ್ದಾನೆ. ಪ್ರಸಿದ್ಧವಾದ ಸಮಸ್ತ ಕರ್ಮಗಳು ವರುಣನ ಮಹಿಮೆಯೇ ಆಗಿದೆ."

ಯ ಅಸ್ವತ್ಕ ಆಶಯೇ ವಿಶ್ವಾ ಜಾತನ್ಯೇಷಾಂ । (ಋ ೮-೪೧-೭ ಸಾಭಾ)

ಪರಿ ಧಾಮಾನಿ ಮರ್ಮೃಶದುಣಸ್ಯ ಪುರೋಗಯೇ ವಿಶ್ವೇ ದೇವಾ ಅನು ವ್ರತಂ ನಭಂತಾಮನ್ಯಕೇ ಸಮೇ ।।
"ಯಾವ ವರುಣನು ಸಕಲ ದಿಕ್ಕುಗಳಲ್ಲಿಯೂ ಸಂಚರಿಸುತ್ತಾ ಈ ಲೋಕಗಳ ಸಕಲ ಭೂತಗಳನ್ನು ಸ್ಥಿತಿಯನ್ನು ಹೊಂದುವಂತೆ ಮಾಡಿದನೋ, ಮತ್ತು ಸಕಲ ಲೋಕಗಳನ್ನೂ ಸುತ್ತಲೂ ಸ್ಪರ್ಶಮಾಡುತ್ತಾ ಸುತ್ತುವನೋ ಅದೇ ವರುಣನ ರಥದ ಮುಂಭಾಗದಲ್ಲಿ ಸಕಲ ದೇವತೆಗಳೂ ಕರ್ಮವನ್ನು ನಿರ್ವಹಿಸುತ್ತಾರೆ....."

ಆತ್ಮಾ ತೇ ವಾತೋ ರಜ ಆ ನವೀನೋತ್ಪಶುರ್ನ ಭೂರ್ಣಿರ್ಯವಸೇ ಸಸವಾನ್ ।
ಅಂತರ್ಮಹೀ ಬೃಹತಿ ರೋಗಸೀಮೇ ವಿಶ್ವಾ ತೇ ಧಾಮ ವರುಣ ಪ್ರಿಯಾಣಿ ।। (ಋ ೭-೮೭-೨ ಸಾಭಾ)
"<u>ಎಲೈ ವರುಣನೇ, ನಿನ್ನಿಂದ **ಪ್ರೇರಿತವಾದ ವಾಯುವು ಸಕಲ ಜಗತ್ತಿಗೂ ಪ್ರಾಣರೂಪನಾಗಿದ್ದಾನೆ.**</u> ಅದೇ ವಾಯುವು ವೃಷ್ಟ್ಯುದಕವನ್ನು ಸುತ್ತಲೂ ಸುರಿಸುತ್ತಾನೆ. <u>ಹುಲ್ಲನ್ನು ಹಾಕಿದೊಡನೆಯೇ ಪಶುವು ಭಾರವನ್ನು ಧರಿಸಲು ಶಕ್ಯವಾಗುವಂತೆ ಹವಿಸ್ಸನ್ನು ಸ್ವೀಕರಿಸಿದ ವಾಯುವು ಜಗತ್ತನ್ನು ಧರಿಸಲು ಸರ್ವಶಕ್ತನಾಗುತ್ತಾನೆ.</u> ಎಲೈ ವರುಣದೇವನೇ, ಮಹತ್ತಾದುದು, ಅತಿ ಪ್ರವೃದ್ಧವಾದುದೂ ಆದ ಈ ದ್ಯಾವಾಪೃಥಿವಿಗಳ ಮಧ್ಯಭಾಗದಲ್ಲೆಲ್ಲಾ ನಿನ್ನ ಸಮಸ್ತವಾದ ತೇಜಸ್ಸುಗಳೂ ಸಹ ಸಕಲರಿಗೂ ಪ್ರೀತಿಕಾರಕಗಳಾಗಿವೆ."

ಸ ಸಮುದ್ರೋ ಅಪೀಚ್ಯಸ್ತುರೋದ್ಯಾಮಿವ ರೋಹತಿ ನಿ ಯದಾಸು ಯಜುರ್ದದೇ ।
ಸ ಮಾಯಾ ಅರ್ಚಿನಾ ಪದಾಸ್ತೃಣಾನ್ನಾಕಮಾರುಹನ್ಮ ಭಂತಾಮನ್ಯಕೇ ಸಮೇ ।। (ಋ ೮-೪೧-೮ ಸಾಭಾ)
"ಉದಕದ ನಾಯಕನಾಗಿರುವ "ಪ್ರಸಿದ್ಧನಾದ ಅದೇ ವರುಣನು ಸಮುದ್ರರೂಪನಾಗಿದ್ದಾನೆ. ಕ್ಷಿಪ್ರಗಾಮಿಯಾದ ಆದಿತ್ಯನು ಅಂತರಿಕ್ಷವನ್ನು ಹತ್ತುವಂತೆ ವರುಣನೂ ದ್ಯುಲೋಕವನ್ನು ಹತ್ತುತ್ತಾನೆ. ಯಾವ ವರುಣನು ಸಕಲ ದಿಕ್ಕುಗಳ ಲ್ಲಿಯೂ ಯಜ್ಞಕರ್ಮವನ್ನು ಸ್ಥಾಪಿಸಿದನೋ ಅದೇ ವರುಣನು ಅಸುರರ ವಂಚಕ ಕರ್ಮಗಳನ್ನು ತನ್ನ ಪ್ರಕಾಶಮಾನ ವಾದ ಸ್ಥಾನದಿಂದಲೇ ಪೂರ್ಣವಾಗಿ ನಾಶಮಾಡುತ್ತಾನೆ ಮತ್ತು ಸ್ವರ್ಗವನ್ನು ಹತ್ತುತ್ತಾನೆ....."

(ದ್ಯುಲೋಕವು ಸೂಕ್ಷ್ಮಲೋಕವಾಗಿದ್ದರೂ ವರುಣನು ದ್ಯುಲೋಕಸ್ಥತನಾಗಿ ಮಾನವರ ಕರ್ಮಫಲದ ಪ್ರಕಾರ ನಿಗ್ರಹಾನುಗ್ರಹ ಮಾಡುತ್ತಾನೆ. ಯಜ್ಞಕರ್ಮವನ್ನು ಸ್ಥಾಪಿತವಾದ ಸ್ಥಳವೇ ಭೂಮಿಯಾಗಿದೆ.)

ಪರಿ ಸ್ಪಶೋ ವರುಣಸ್ಯ ಸ್ಮದಿಷ್ಟಾ ಉಭೇ ಪಶ್ಯಂತಿ ರೋದಸೀ ಸುಮೇಕೇ ।
ಋತಾವಾನಃ ಕವಯೋ ಯಜ್ಞಧೀರಾಃ ಪ್ರಚೇತಸೋ ಯ ಇಷಯಂತ ಮನ್ಮ ।। (ಋ ೭-೮೭-೩ ಸಾ ಭಾ)
"ವರುಣದೇವನ ಚಾರರು ಉತ್ತಮವಾದ ಗತಿಗಳುಳ್ಳವರಾಗಿ ಶ್ರೇಷ್ಠವಾದ ರೂಪವುಳ್ಳ ದ್ಯಾವಾಪೃಥ್ವಿಗಳೆರಡೂ ಲೋಕಗಳ ಸುತ್ತಲೂ ಸೂಕ್ಷ್ಮವಾಗಿ ವೀಕ್ಷಿಸುತ್ತಾರೆ....."

(ಜೀವಿಗಳ ಪಾಪ ಪುಣ್ಯಗಳನ್ನು ನೋಡುತ್ತಿರುತ್ತಾರೆ.)

ಮಾನವರು ಅಜ್ಞಾನವಶರಾಗಿ ವರುಣನ ಶಾಸನವನ್ನು ಮೀರುತ್ತಾರೆ. ತನ್ನ ಶಾಸನವನ್ನು ಮೀರುವ ಮಾನವರನ್ನು ತನ್ನ ಪಾಶದಿಂದ ಬಂಧಿಸಿ ಆಧೋಲೋಕಕ್ಕೆ ತೆಗೆದುಕೊಂಡು ಹೋಗಿ ಶಿಕ್ಷಿಸುವನು. ಆದ್ದರಿಂದ ನಾವು ಯಾವುದೇ ದೇವತೆಯನ್ನು ಕಂಡು ಭಯಪಡಬೇಕಾದರೆ ಅದು ವರುಣದೇವನೇ ಆಗಿದ್ದಾನೆ.

ಅವ ತೇ ಹೇಳೋ ವರುಣ ನಮೋಭಿರವ ಯಜ್ಞೇಭಿರೀಮಹೇ ಹವಿರ್ಭಿಃ ।
ಕ್ಷಯನ್ನಸ್ಮಭ್ಯಮಸುರ ಪ್ರಚೇತ ರಾಜನ್ನೇನಾಂಸಿ ಶಿಶ್ರಥಃ ಕೃತಾನಿ ।।
"ಎಲೈ ವರುಣ, ನಿನ್ನ ಕ್ರೋಧವನ್ನು ನಮಸ್ಕಾರಗಳಿಂದಲೂ, ಯಜ್ಞಗಳಿಂದಲೂ ಹವಿಸ್ಸುಗಳಿಂದಲೂ ಕಡಿಮೆಯಾಗುವಂತೆ ಮಾಡುತ್ತೇವೆ. ಎಲೈ ಅನಿಷ್ಟಕಾರಕ, ಜ್ಞಾನಿ ಮತ್ತು ದೇದೀಪ್ಯನಾದ ವರುಣ, ನಮಗಾಗಿ ಈ ನಮ್ಮ ಕರ್ಮದಲ್ಲಿ ಇರುವವನಾಗಿ, ನಮ್ಮಿಂದ ಮಾಡಲ್ಪಟ್ಟ ಪಾಪಗಳನ್ನು ಪರಿಹರಿಸು. (೧-೨೪-೧೪ ಸಾಭಾ)

ಉದುತ್ತಮಂ ವರುಣ ಪಾಶಮ್ಮದವಾಧಮಂ ವಿ ಮಧ್ಯಮಂ ಶ್ರಥಾಯ ।
ಅಥಾ ವಯಮಾದಿತ್ಯ ವ್ರತೇ ತವಾನಾಗಸೋ ಆದಿತಯೇ ಸ್ಯಾಮ ।। (ಋ ೧-೨೪-೧೫ ಸಾಭಾ)
"ಎಲೈ ವರುಣ, ನನ್ನ ತಲೆಯ ಭಾಗದಲ್ಲಿರುವ ಹಗ್ಗವನ್ನು ಮೇಲಿನಿಂದಲೂ, ಪಾದಪ್ರದೇಶದಲ್ಲಿರುವುದನ್ನು ಕೆಳಗಡೆಯಿಂದಲೂ, ಮಧ್ಯಪ್ರದೇಶದಲ್ಲಿರುವುದನ್ನು ಕತ್ತರಿಸಿಯೂ ಬಿಡಿಸು. ಆನಂತರ ನಾವು ನಿನ್ನ ಕರ್ಮಗಳು ವಿಚ್ಛೇದನವಿಲ್ಲದೇ ಇರುವುದಕ್ಕಾಗಿ, ದೋಷರಹಿತ(ಶುದ್ಧ)ರಾಗೋಣ."

ವಿ ಮಚ್ಛ್ರಥಾಯ ರಶನಾಮಿವಾಗ ಋಧ್ಯಾಮ ತೇ ವರುಣ ಖಾಮೃತಸ್ಯ । (ಋ ೨-೨೮-೫ ಸಾಭಾ)
ಮಾ ತಂತುಶ್ಛೇದಿ ವಯತೋ ಧಿಯಂ ಮೇ ಮಾ ಮಾತ್ರಾ ಶಾರ್ಯಪಸಃ ಪುರ ಋತೋಃ ।।
"ಎಲೈ ವರುಣನೇ, ರಜ್ಜುವಿನಂತೆ ಬಂಧಕವಾಗಿರತಕ್ಕ ಅನುಷ್ಠಾನುಲೋಪರೂಪವಾದ ಪಾಪವನ್ನು ನನ್ನಿಂದ ನಾಶಮಾಡು. ನಿನ್ನಿಂದ ದತ್ತವಾಗುವುದೂ, ಉದಕದಿಂದ ಪೂರ್ಣವಾಗಿರುವುದೂ ಆದ ನದಿಯನ್ನು ನಾವು

ಹೊಂದುವಂತಾಗಲಿ. ಕರ್ಮರೂಪವಾದ ಪಟವನ್ನು ಹೆಣೆಯುತ್ತಿರುವ ನನ್ನ ಕರ್ಮರೂಪವಾದ ತಂತುವು ಕತ್ತರಿಸದಿರಲಿ. ಸಮಾಪ್ತಿ ಕಾಲಕ್ಕಿಂತಲೂ ಮೊದಲೇ, ನನ್ನ ಕರ್ಮದ ಶರೀರವನ್ನು ವಿಕಲವಾಗುವಂತೆ ಮಾಡಬೇಡ.

ಅವ ದ್ರುಗ್ಧಾನಿ ಪಿತ್ರ್ಯಾ ಸೃಜಾ ನೋಽವ ಯಾ ವಯಂ ಚಕೃಮಾ ತನೂಭಿಃ ।
ಅವ ರಾಜನ್ಪಶುತೃಪಂ ನ ತಾಯಂ ಸೃಜಾ ವತ್ಸಂ ನ ದಾಮ್ನೋ ವಶಿಷ್ಟಂ ।। (ಋ ೭–೮೬–೫ ಸಾಭಾ)
"ಎಲೈ ವರುಣನೇ, ಹಿಂದಿನಿಂದ ವಂಶಾನುಗತವಾಗಿ ಅಂಟಿಕೊಂಡಿರುವ ನಮ್ಮ ಪಾಪಗಳಿಂದ ಎಂದರೆ ಪಾಪಫಲವಾದ ಬಂಧನಗಳಿಂದ ಬಿಡಿಸು. ನಾವು ನಮ್ಮ ಶರೀರಗಳಿಂದಲೇ ಮಾಡಿರುವ ಪಾಪಗಳ ಫಲವಾದ ಬಂಧನದಿಂದಲೂ ಬಿಡಿಸು. ಪ್ರಕಾಶಮಾನನೂ ಪ್ರಭುವೂ ಆದ ಎಲೈ ವರುಣನೇ, ಚೋರತನಕ್ಕಾಗಿ ಪ್ರಾಯಶ್ಚಿತ್ತವನ್ನು ಮಾಡಿಕೊಂಡು ನಂತರ ಪಶುಗಳಿಗೆ ತೃಣಾದಿಗಳನ್ನು ಕೊಟ್ಟು ತೃಪ್ತಿಪಡಿಸುವ ಕಳ್ಳನನ್ನು ಬಂಧನದಿಂದ ಬಿಡಿಸುವಂತೆಯೂ, ತಾಯಿಯ ಹತ್ತಿರ ಹೋಗಲು ಆತುರವುಳ್ಳ ಕರುವನ್ನು ಹಗ್ಗದ ಬಂದನದಿಂದ ಬಿಡಿಸುವಂತೆಯೂ ವಸಿಷ್ಠನಾಮಕನಾದ ನನ್ನನ್ನು ಬಿಡಿಸು."

ನ ಸ ಸ್ವೋ ದಕ್ಷೋ ವರುಣ ಧ್ರುತಿಃ ಸಾ ಸುರಾ ಮನ್ಯುರ್ವಿಭೀದಕೋ ಅಚಿತ್ತಿಃ ।
ಅಸ್ತಿ ಜ್ಯಾಯಾನ್ಕನೀಯಸ ಉಪಾರೇ ಸ್ವಪ್ನಶ್ಚನೇದನೃತಸ್ಯ ಪ್ರಯೋತಾ ।। (ಋ ೭–೮೬–೬ ಸಾಭಾ)
"ಎಲೈ ವರುಣನೇ, ನಮ್ಮ ಸ್ವಶಕ್ತಿಯಾಗಲಿ ಅಥವಾ ಸ್ವಬುದ್ಧಿಯಾಗಲಿ ನಮ್ಮ ಪಾಪಕ್ಕೆ ನೇರವಾದ ಕಾರಣವಲ್ಲ. ಆದರೆ ನಮ್ಮ ಮೇಲೆ ಪ್ರಭುತ್ವವನ್ನು ತೋರುವ ವಿಧಿಯೇ ಕಾರಣವು. ಅದಾವುದೆಂದರೆ ಬುದ್ಧಿಮಾಂದ್ಯವನ್ನುಂಟುಮಾಡುವ ಸುರೆಯೂ, ಕ್ರೋಧವೂ, ಅನರ್ಥಕಾರಿಯಾದ ದ್ಯೂತಸಾಧನವೂ, ಅಜ್ಞಾನವೂ ಮತ್ತು ಅವಿವೇಕವು ಈ ಪಾಪಕಾರಣಗಳಾಗಿವೆ. ಅಲ್ಪಶಕ್ತಿಯುಳ್ಳ ನನ್ನ ಪ್ರವೃತ್ತಿಗೆ ಸಮೀಪದಲ್ಲಿಯೇ ಇರತಕ್ಕದ್ದೂ ಅಧಿಕವಾದ ಬಲವುಳ್ಳದ್ದೂ ಆದ ವಿಧಿಯು ಇರುತ್ತದೆ. ಸ್ವಪ್ನವೂ ಕೂಡ ಪಾಪಕ್ಕೆ ಪ್ರೇರಕವೂ ಕಾರಣವೂ ಆಗಿರುತ್ತದೆ."

ಪೃಚ್ಛೇ ತದೇನೋ ವರುಣ ದಿದೃಕ್ಷೂಪೋ ಏಮಿ ಚಿಕಿತುಷೋ ವಿಪೃಚ್ಛಂ ।
ಸಮಾನಮಿನ್ಮೇ ಕವಯಶ್ಚಿದಾಹುರಯಂ ಹ ತುಭ್ಯಂ ವರುಣೋ ಹೃಣೀತೇ ।। (ಋ ೭–೮೬–೩ ಸಾಭಾ)
"ಎಲೈ ವರುಣನೇ, ನಿನ್ನನ್ನು ಸಾಕ್ಷಾತ್ತಾಗಿ ನೋಡಲಿಚ್ಛೆಯುಳ್ಳ ನಾನು ನಿನ್ನ ವಿಷಯದಲ್ಲಿ ನಾನು ಯಾವ ಪಾಪವನ್ನು ಮಾಡಿರುವೆನು ಎಂಬುದಾಗಿ ನಿನ್ನನ್ನೇ ಕೇಳುತ್ತೇನೆ. ಇದೇ ವಿಷಯವನ್ನು ಕೂಲಂಕುಷವಾಗಿ ಕೇಳಿ ತಿಳಿಯಲು ಪ್ರಾಜ್ಞರಾದ ಋಷಿಗಳನ್ನು ಸಮೀಪಿಸಿ ಕೇಳಿದೆನು. ಕ್ರಾಂತದರ್ಶಿಗಳಾದ ಆ ಋಷಿಗಳೆಲ್ಲರೂ ಒಂದೇ ವಿಧವಾದ ಅಭಿಪ್ರಾಯವನ್ನು ತಿಳಿಸಿದರು. ಅದೇನೆಂದರೆ, "ಎಲೈ ಸ್ತೋತೃವೇ, ವರುಣದೇವನು ನಿನ್ನ ವಿಷಯದಲ್ಲಿ ಕ್ರುದ್ಧನಾಗಿದ್ದಾನೆ" ಎಂದು ತಿಳಿಸಿದರು.

## ಮಿತ್ರಾ ದೇವತೆ

ಈಗ ಸೃಷ್ಟಿಯಲ್ಲಿ ಮಿತ್ರಾ ದೇವತೆಯ ಪಾತ್ರವೇನು ಎಂಬುದನ್ನು ತಿಳಿಯೋಣ. ಮಿತ್ರಾ ದೇವತೆಯ ಪ್ರಮುಖ ಗುಣವೇನೆಂದರೆ ಉದಕದ ಮೂಲ ಕಣವನ್ನು ಒಂದಕ್ಕೊಂದು ಅಂಟಿಕೊಳ್ಳುವಂತೆ ಮಾಡುವ ಗುಣವಿದೆ. ಅಂದರೆ **ಮಿತ್ರಾದೇವತೆ ಮತ್ತು ವಾಯುವಿನ ಸಂಯೋಗದಿಂದ ವಿದ್ಯುತ್–ಆಯಸ್ಕಾಂತ ಶಕ್ತಿಯು ಪ್ರಕಟವಾಗಿರಬಹುದು.** ವರುಣಾತ್ಮಕವಾದ ಸೃಷ್ಟಿಯ ಮೂಲ ಕಣಗಳು ಮತ್ತು ಮಿತ್ರನ ವಿದ್ಯುತ್–ಆಯಸ್ಕಾಂತ ಶಕ್ತಿಯ ಗುಣದಿಂದ ಕಣಗಳು ಒಂದಕ್ಕೊಂದು ಕೂಡಿಕೊಳ್ಳುತ್ತದೆ. ಮಿತ್ರಾವರುಣರ ಮಂಥನದಿಂದ ಅಗ್ನಿಯು ಪ್ರಕಟಗೊಳ್ಳುವುದೆಂದು ವೇದವು ಹೇಳುತ್ತದೆ.

ಈ ಕಾರಣದಿಂದಲೇ ಮಿತ್ರಾವರುಣರನ್ನು ಜೊತೆಯಾಗಿ ಪ್ರಾರ್ಥಿಸುತ್ತಾರೆ. ಮಿತ್ರನ ಮೂರು ಕಾರ್ಯಗಳು ಪ್ರಸಿದ್ಧವಾಗಿವೆ. ಅವು ಯಾವುವೆಂದರೆ, ಪ್ರಜೆಗಳನ್ನು ಅವರವರ ಕರ್ಮಗಳಿಗೆ ಪ್ರೇರೇಪಿಸುತ್ತಾನೆ. ಎರಡನೆಯದು, ದ್ಯಾವಾ ಪೃಥ್ವಿಯನ್ನು ಧರಿಸುತ್ತಾನೆ ಮತ್ತು ಮೂರನೆಯದು, ಸಮಸ್ತವನ್ನು ತನ್ನ ಪ್ರಭಾರೂಪದಿಂದ ನೋಡುತ್ತಾನೆ. ಮಿತ್ರನು ಸಂಧ್ಯಾಕಾಲದಲ್ಲಿ ಉಷಸ್ ದೇವತೆಯ ಜೊತೆಯಲ್ಲಿ ಬರುತ್ತಾನೆ ಮತ್ತು ಸಮಸ್ತ ಪ್ರಜೆಗಳನ್ನು ತಮ್ಮ ದೈನಂದಿನ ಕಾರ್ಯಗಳಲ್ಲಿ ತೊಡಗುವಂತೆ ಪ್ರೇರೇಪಿಸುತ್ತಾನೆ.

ಮಿತ್ರಾವರುಣರ ಕೃಪೆಯಿಂದ ಸೃಷ್ಟಿಯಾದ ವಿಶ್ವವನ್ನು ಅವರೇ ಶಾಸನವನ್ನು ಮಾಡುತ್ತಾರೆ. ಇವರು ತಮ್ಮ ದೈವೀ ಶಾಸನವನ್ನು ಧರಿಸಿ, ನ್ಯಾಯೋಚಿತವಾದ ಫಲವನ್ನು ಮಾನವರಿಗೆ ಕೊಡುತ್ತಾರೆ. ಆದ್ದರಿಂದ ಮಾನವರು ಅವರ ದೈವೀ ನಿಯಮವನ್ನು ಪಾಲಿಸಬೇಕಾಗುತ್ತದೆ. ಯಾರು ಅವರ ದೈವೀ ಶಾಸನವನ್ನು ಮೀರುವರೋ ಅವರ ಕರ್ಮಗಳನ್ನು

ದಾಖಲಿಸಿಕೊಳ್ಳುತ್ತಾರೆ ಮರಣಾನಂತರ ಪಾಪ ಮಾಡಿದ ಮಾನವನನ್ನು ಬಂಧಿಸಿ ನರಕಕ್ಕೆ ಕೊಂಡೊಯ್ಯುತ್ತಾರೆ. ಆದರೆ ಪಾಪಿಗಳನ್ನು ಬಂಧಿಸಿ ಶಿಕ್ಷಿಸುವ ಅಥವಾ ವಿಮೋಚನೆ ಮಾಡುವ ಕಾರ್ಯವು ವರುಣನಿಗೆ ಮಾತ್ರ ಸಂಬಂಧಿಸಿದೆ.

ವಯಂ ಮಿತ್ರಸ್ಯಾವಸಿ ಸ್ಯಾಮ ಸಪ್ರಥಸ್ತಮೇ ।
ಅನೇಹಸಸ್ತ್ವೋತಯಃ ಸತ್ರಾ ವರುಣಶೇಷಸಃ ।। (ಋ ೫-೬೫-೫ ಸಾ ಭಾ)
"ಎಲೈ ಮಿತ್ರಾವರುಣರೇ ನಾವು ಪಾಪರಹಿತರಾಗಿಯೂ, ನಿನ್ನ ರಕ್ಷಣೆಗೊಳಪಟ್ಟವರಾಗಿಯೂ, ವರುಣನಿಗೆ ಸೇರಿದ ಸತ್ಪ್ರಜೆಗಳಾಗಿಯೂ, ಇದ್ದು ಮಿತ್ರನ ಅತಿಪ್ರಭೂತವಾದ ರಕ್ಷಣೆಯನ್ನು ಪಡೆಯವಂತಾಗಲಿ."

## ಆರ್ಯಮಾ, ಅಂಶ ಮತ್ತು ಭಗದೇವತೆ

ಆರ್ಯಮಾ ಮತ್ತು ಭಗ ದೇವತೆಗಳ ಬಗ್ಗೆ ಋಗ್ವೇದವು ಹೆಚ್ಚಾಗಿ ಏನನ್ನೂ ತಿಳಿಸಿಲ್ಲ. ಆರ್ಯಮಾ ದೇವತೆಯನ್ನು ಅತ್ಯುನ್ನತವಾದ ಶಕ್ತಿಯುಳ್ಳವನು, ಹೆಚ್ಚಾದ ಹೊಗಳಿಕೆಗೆ ಪಾತ್ರವಾದ ಶಕ್ತಿಯುಳ್ಳವನು ಎಂದು ಹೇಳಿದೆ. ಆದ್ದರಿಂದ ಆರ್ಯಮಾ ದೇವತೆಯು ಮಿತ್ರಾವರುಣರ ಮಂಥನದಿಂದ ಕೂಡುವ ಕಣಗಳನ್ನು ಮತ್ತೆ ಬಿಟ್ಟು ಹೋಗದಂತೆ ಬಂಧಿಸುವ ಗುಣವನ್ನು ಹೊಂದಿರುವನೆಂದು ಭಾವಿಸಬಹುದು. ಅಥವಾ ಆರ್ಯಮಾದೇವತೆಯು ವಿಜ್ಞಾನವು ಹೇಳುವ 'ಶಕ್ತಿಯುತವಾದ ಬಲ'ದ (ಸ್ಟ್ರಾಂಗ್ ಫೋರ್ಸ್) ಅಧಿದೇವತೆಯಾಗಿರಬಹುದು. ಏಕೆಂದರೆ ಅರ್ಯಮಾದೇವತೆಯನ್ನು ಮಿತ್ರಾವರುಣರ ಮಧ್ಯಸ್ಥಾನೀಯನು ಎಂದು ಋಗ್ವೇದವು ಹೇಳುತ್ತದೆ.

ಅಂಶದೇವತೆಯ ಬಗ್ಗೆ ಏನೂ ಹೇಳದಿದ್ದರೂ ಅಂಶ ದೇವತೆ ವಿಜ್ಞಾನಿಗಳು ಹೇಳುವ ಶಕ್ತಿಹೀನ ಬಲದ (ವೀಕ್ ಫೋರ್ಸ್) ಅಧಿದೇವತೆಯಾಗಿರಬಹುದು.

ವಿಶ್ವದಲ್ಲಿ ನಾಲ್ಕು ಆನಂದಮಯವಾದ ರಸಗಳಿವೆ. ಅದರಲ್ಲಿ ಒಂದಾದ ರಸಕ್ಕೆ ಭಗ ದೇವತೆಯು ನಾಯಕನಾಗಿದ್ದಾನೆ. ಸೂರ್ಯನಲ್ಲಿರುವ ಭಗದೇವತೆಯು ಯೋಗಿಯ ಪ್ರಾರ್ಥನೆಯಿಂದ ಹಾಲು, ಮೊಸರು ಮಿಶ್ರಿತವಾದ ರಸವನ್ನು ಬಿಡುಗಡೆ ಮಾಡುತ್ತಾನೆ.

## ಪಂಚಭೂತಗಳ ಸೃಷ್ಟಿಯು ಹೇಗಾಯಿತೆಂದು ತಿಳಿಯೋಣ.

ಶೈವತತ್ವ, ಅದ್ವೈತ ತತ್ವವು ಮತ್ತು ಇತರ ಭಾರತೀಯ ಸಿದ್ಧಾಂತಗಳು ಹೇಳುವುದೇನೆಂದರೆ ಶಕ್ತಿ ಅಥವಾ ಪ್ರಕೃತಿ ಅಥವಾ ಮಾಯೆಯು ಮೊದಲು ಆಕಾಶವನ್ನು ಸೃಷ್ಟಿಸಿತು. ಆಕಾಶತತ್ವದಿಂದ ವಾಯುವೂ, ವಾಯುತತ್ವದಿಂದ ಅಗ್ನಿಯೂ, ಅಗ್ನಿತತ್ವದಿಂದ ಜಲವೂ ಮತ್ತು ಜಲತತ್ವದಿಂದ ಪೃಥ್ವಿಯೂ ಉತ್ಪನ್ನವಾಯಿತೆಂದು ಹೇಳುತ್ತದೆ. ಪಂಚಭೂತಗಳ ಪಂಚೀಕರಣದಿಂದ ೨೫ ತತ್ವಗಳು ಲಭಿಸುವುದೆಂದು ಹೇಳುತ್ತಾರೆ. ಈ ಸಿದ್ಧಾಂತಗಳ ಪ್ರಕಾರ ಪಂಚೀಕರಣ ಹೇಗಾಗುತ್ತದೆ ಎಂಬುದನ್ನು ನೋಡೋಣ.

ಪಂಚಭೂತಗಳಲ್ಲಿ ಒಂದೊಂದನ್ನು ಎರಡೆರಡು ಭಾಗಗಳನ್ನಾಗಿ ಮಾಡಿದರೆ ಅವು ಹತ್ತು ಭಾಗಗಳಾಗುತ್ತದೆ. ಅವುಗಳಲ್ಲಿ ಪ್ರಥಮದ ಐದು ಭಾಗಗಳನ್ನು ಹಾಗೆಯೇ ಇಡಬೇಕು, ಮತ್ತು ದ್ವಿತೀಯ ಐದು ಭಾಗಗಳಲ್ಲಿ ಒಂದೊಂದು ಭಾಗಗಳನ್ನು ನಾಲ್ಕು ನಾಲ್ಕು ಭಾಗಗಳು ಮಾಡಬೇಕು. ಆ ನಾಲ್ಕು ನಾಲ್ಕು ಭಾಗಗಳನ್ನು ಆಕಾಶಾದಿ ಭೂತಗಳ ತಮ್ಮ ತಮ್ಮ ಯಾವ ಅರ್ಧ ಅರ್ಧ ಮುಖ್ಯ ಭಾಗಗಳು ಇಡಲ್ಪಟ್ಟಿದೆಯೋ ಅವುಗಳಲ್ಲಿ ಬೆರಸದೆ ಅವುಗಳಿಂದ ಭಿನ್ನವಾದ ನಾಲ್ಕು ಭೂತಗಳ ಅರ್ಧ ಅರ್ಧ ಭಾಗಗಳಲ್ಲಿ ಬೆರಸಬೇಕು.

ಉದಾಹರಣೆಗೆ ಆಕಾಶ ತತ್ವವನ್ನು ಎರಡು ಅರ್ಧವಾಗಿ ಮಾಡಿ ಒಂದು ಅರ್ಧವನ್ನು ಹಾಗೇ ಇಟ್ಟು ಇನ್ನರ್ಧವನ್ನು ನಾಲ್ಕು ಭಾಗಗಳನ್ನಾಗಿ ಮಾಡಬೇಕು. (ಇದೇ ರೀತಿಯಾಗಿ ವಾಯು, ಅಗ್ನಿ, ಜಲ ಮತ್ತು ಪೃಥ್ವಿಯನ್ನು ಸಹ ಮಾಡಬೇಕು.) ಆನಂತರ ಆಕಾಶ ತತ್ವದ ದೊಡ್ಡದಾದ ಅರ್ಧ ಭಾಗವನ್ನು ಹಾಗೆ ಇಟ್ಟು, ಇನ್ನುಳಿದ ಆಕಾಶ ತತ್ವದ ನಾಲ್ಕು ಭಾಗದಲ್ಲಿ, ಒಂದು ಭಾಗವನ್ನು ತೆಗೆದುಕೊಂಡು, ಅದಕ್ಕೆ ಸಣ್ಣದಾಗಿ ಮಾಡಿದ ಇತರ ತತ್ವಗಳ ನಾಲ್ಕು ಭಾಗದಲ್ಲಿ ಒಂದು ಭಾಗವಾದ ವಾಯು, ಅಗ್ನಿ, ಜಲ, ಪೃಥ್ವಿ ಭಾಗಗಳನ್ನು ಸೇರಿಸಬೇಕು. ಇದೇ ರೀತಿಯಾಗಿ ಎಲ್ಲ ಭಾಗಗಳನ್ನು ಸೇರಿಸಿದರೆ ೨೫ ತತ್ವಗಳು ಉಂಟಾಗುತ್ತದೆ ಮತ್ತು ಅದರಿಂದ ಸಕಲ ವಿಶ್ವ ಮತ್ತು ಜೀವಿಗಳ ಸೃಷ್ಟಿಯಾಗುತ್ತದೆಯೆಂದು ಶಾಸ್ತ್ರಗಳು ತಿಳಿಸುತ್ತವೆ. ಇದನ್ನು ಪಂಚಭೂತಗಳ ಪಂಚೀಕರಣವೆಂದು ಕರೆಯುತ್ತಾರೆ.

| ಋಗ್ವೇದವು ಈ ಪಂಚೀಕರಣವನ್ನು ತಿರಸ್ಕರಿಸುತ್ತದೆ. |
| --- |

ಋಗ್ವೇದದ ಪ್ರಕಾರ ಜಲವೇ ಪಂಚಭೂತಗಳ ಮೂಲವಸ್ತುವಾಗಿದೆ. ಈಗ ಋಗ್ವೇದವು ಪಂಚಭೂತಗಳ ಸೃಷ್ಟಿಯ ಬಗೆಗೆ ಏನು ಹೇಳುತ್ತದೆ ಎಂದು ನೋಡೋಣ.

**ಆಕಾಶತತ್ವ:** ಪರಮಾಣುಗಳ ಮೂಲಕಣಗಳ ಮಹಾಸಮುದ್ರವು ದೇವತೆಗಳ ಮಹಿಮೆಯಿಂದ ಅಲ್ಲಲ್ಲಿ ಸರಸ್ಸಿನಂತೆ ಗುಂಪುಗೂಡಿತು. ಹಾಗೆಯೇ ಮಿತ್ರಾವರುಣರ ಮಹಿಮೆಯಿಂದ ಅಗ್ನಿಗೋಳವಾಗಿ ಪರಿವರ್ತನೆಯಾಯಿತು ಮತ್ತು ದೇವತೆಗಳ ತೇಜಸ್ಸು ಅಗ್ನಿ ಗೋಳವನ್ನು ಆವರಿಸಿಕೊಂಡು ನಕ್ಷತ್ರಪುಂಜ ಮತ್ತು ಸೂರ್ಯನಂತೆ ಪರಿವರ್ತನೆಯಾಯಿತು. ನಕ್ಷತ್ರಪುಂಜ ಅಥವಾ ಸೂರ್ಯನಾಗಿ ಪರಿವರ್ತನೆಯಾದ ಮೇಲೆ ಉಂಟಾದ ಖಾಲಿ ಜಾಗವೇ ಆಕಾಶತತ್ವವಾಗಿದೆ.

**ವಾಯುತತ್ವ:** ಸಕಲ ಸೃಷ್ಟಿಯ ಹಿಂದಿರುವ ಶಕ್ತಿಯು ವಾಯುವೇ ಆಗಿದೆ. ವಾಯುವಿಗೆ ಸ್ವತಂತ್ರ ವ್ಯಕ್ತಿತ್ವವಿಲ್ಲ. ಬ್ರಹ್ಮಾಂಡವನ್ನು ವ್ಯಾಪಿಸಿರುವ ವಾಯುವು, ಮಹಾಸಮುದ್ರವನ್ನೂ ಸಹ ವ್ಯಾಪಿಸಿಕೊಂಡಿದೆ. ಇಂದ್ರನ ಮಹಿಮೆಯಿಂದಾಗಿ ವಾಯುವು ದೇವತೆಗಳಂತೆ ರೂಪವನ್ನೂ ಮಹಿಮೆಯನ್ನೂ ಪಡೆಯುತ್ತಾನೆ. ಆದರೆ ಪೃಥ್ವಿಯನ್ನು ವ್ಯಾಪಿಸಿರುವ ಗಾಳಿಯು ಸಕಲ ಜೀವರಾಶಿಗಳ ಉಳಿವಿಗೆ ಕಾರಣವಾಗಿದೆ. ಗಾಳಿಯಿಲ್ಲದೇ ಕ್ಷಣಕಾಲವೂ ನಾವು ಜೀವಿಸಲಾಗುವುದಿಲ್ಲ. ಈ ಗಾಳಿಯು ಆಮ್ಲಜನಕ, ಇಂಗಾಲದ ಡೈ ಆಕ್ಸೈಡ್ ಇತ್ಯಾದಿ ಪರಮಾಣುಗಳಿಂದಾಗಿದೆ. ಅಂದರೆ ಇನ್ನೊಂದು ಅರ್ಥದಲ್ಲಿ ಪರಮಾಣುವಿನ ಮೂಲಕಣಗಳ ಮಹಾಸಮುದ್ರದ ರೂಪಾಂತರವೇ ಆಗಿದೆ.

**ಅಗ್ನಿತತ್ವ:** ಮಿತ್ರಾ–ವರುಣ ದೇವತೆಗಳ ಮಹಿಮೆಯಿಂದ ಸರಸ್ಸಿನಂತೆ ಪರಿವರ್ತನೆಯಾದ ಪರಮಾಣುಗಳ ಮಹಾ ಸಮುದ್ರವು ಕ್ಷಿಪ್ರ ಮಂಥನಕ್ಕೊಳಪಟ್ಟು ಅಗ್ನಿಯು ಪ್ರಕಟವಾಗುತ್ತದೆ. ಆದರೆ ಭೂಮಿಯ ಮೇಲೆ ದಹನ ವಸ್ತುಗಳು ಮತ್ತು ಆಮ್ಲಜನಕವು ಘರ್ಷಣೆಗೆ ಒಳಗಾಗಿ ಅಗ್ನಿಯು ಪ್ರಕಟವಾಗುತ್ತದೆ. ದಹನ ವಸ್ತುಗಳು ಆಮ್ಲಜನಕವನ್ನು ಉಪಯೋಗಿಸಿಕೊಂಡು ಉರಿಯುತ್ತದೆ. ಆಮ್ಲಜನಕ ಮತ್ತು ದಹನ ವಸ್ತುಗಳು ಪರಮಾಣುವಿನಿಂದಲೇ ಆಗಿದೆ ಎಂದು ವಿಜ್ಞಾನವು ಹೇಳುತ್ತಿದೆ.

**ಜಲತತ್ವ:** ಪರಮಾಣುಗಳ ಮಹಾಸಮುದ್ರದ ಇನ್ನೊಂದು ರೂಪಾಂತರವೇ ಜೀವಜಲವಾಗಿ ಪರಿವರ್ತನೆಯಾಗಿದೆ. ಜಲಜನಕ ಮತ್ತು ಆಮ್ಲಜನಕದ ಪರಮಾಣುಗಳ ಸಂಯೋಗದಿಂದಾಗಿ ಜಲವು ಪ್ರಕಟವಾಗಿದೆ.

**ಭೂತತ್ವ:** ದೇವತೆಗಳು ಮತ್ತು ಸವಿತೃದೇವನ ಮಹಿಮೆಯಿಂದ ಉಂಟಾದ ಸಣ್ಣ ಸಣ್ಣ ಅಗ್ನಿಗೋಳಗಳೇ ತಣ್ಣಗಾಗಿ ಪೃಥ್ವಿಯಾಗಿ ರೂಪಾಂತರ ಹೊಂದಿವೆಯಾದರೂ ಭೂತತ್ವವೂ ಸಹ ಪರಮಾಣುಗಳಿಂದಾಗಿದೆ.

ಈ ರೀತಿಯಾಗಿ ಪಂಚಭೂತಗಳು ಸೃಷ್ಟಿಯಾಗಿ ದೇವತೆಗಳ ಅನುಗ್ರಹದಿಂದ ಮಹಾಸಮುದ್ರದ ಮೂಲವಸ್ತುವಿನಿಂದಲೇ ಸಕಲ ಜೀವ ಸೃಷ್ಟಿಯಾಗಿದೆ. ಮೇಲಿನ ಸೂಕ್ತವು ಉದಕಗಳು ಮಹಿಮೆಯಿಂದ ಕೂಡಿದೆ ಮತ್ತು ತನ್ನದೇ ಆದ ವ್ಯಕ್ತಿತ್ವವನ್ನು ಹೊಂದಿದೆ ಎಂದು ಹೇಳುತ್ತಿದೆ. ಇದೇ ರೀತಿಯಾಗಿ ಜಲದಿಂದ ಪ್ರಕಟವಾದ ಪಂಚಭೂತಗಳೂ ಸಹ ತಮ್ಮದೇ ಆದ ಮನಸ್ಸನ್ನು ಮತ್ತು ವ್ಯಕ್ತಿತ್ವವನ್ನು ಹೊಂದಿದೆ.

ಎರಡು ಧೃವಗಳಿಂದ ಕೂಡಿದ ವಿಶ್ವಮನಸ್ಸಿನಿಂದಾಗಿ ಸಕಲ ಸೃಷ್ಟಿಯು ಆಗಿದೆ. ಅಜ್ಞಾನದಿಂದ ಕೂಡಿದ ಕಪ್ಪು ಸರ್ಪದ ರಹಸ್ಯವನ್ನು ತಿಳಿದುಕೊಳ್ಳುವುದು ಅಪಾಯಕಾರಿಯಾಗಿದೆ. ಅಜ್ಞಾನದಿಂದ ಕೂಡಿದ ಕಪ್ಪು ಸರ್ಪದ ಲೋಕಗಳು ದೈವೀಶಕ್ತಿಗೆ ವಿರುದ್ಧವಾದ ಅಸುರೀಶಕ್ತಿಗಳ ವಾಸಸ್ಥಾನವಾಗಿದೆ. ಇವೆರಡೂ ಧೃವವು ಸರ್ಪರೂಪವನ್ನು ತಳೆದು ಬೇರೆ ಬೇರೆಯಾಗಿ ಕಂಡರೂ ಮತ್ತು ಬೇರೆ ಬೇರೆ ಸೃಷ್ಟಿಯನ್ನು ಮಾಡಿದ್ದರೂ ಇವೆರಡೂ ಒಂದೇ ವಿಶ್ವಮನಸ್ಸಿನ ಎರಡು ವಿರುದ್ಧ ಧೃವವಾಗಿದೆ. ಇವನ್ನು ಬೇರ್ಪಡಿಸಲು ಸಾಧ್ಯವಿಲ್ಲ. ಹಾಗಾಗಿ ವಿಶ್ವಮನಸ್ಸಿನ ಭಾಗವಾದ ನಮ್ಮ ಮನಸ್ಸೂ ಸಹ ಎರಡು ವಿರುದ್ಧ ಧೃವಗಳನ್ನು ಹೊಂದಿದೆ.

## ವಿಷ್ಣುದೇವತೆಯ ಜನನ:

ವಿರಾಟ್‌ಪುರುಷನ ಶರೀರವನ್ನು ಆವರಿಸಿಕೊಂಡಿದ್ದ ಉದಕಗಳು ಯಾವಾಗ ಅಲ್ಲಲ್ಲಿ ಸರಸ್ಸಿನಂತೆ ಗುಂಪುಗೂಡಿತೋ ಆಗ ಉಂಟಾದ ಶೂನ್ಯ ಪ್ರದೇಶವೇ ಆಕಾಶವಾಗಿದೆ. ಈ ಆಕಾಶತತ್ವವನ್ನು ವಿಷ್ಣು ಎಂದು ಕರೆಯುತ್ತಾರೆ. ಆದ್ದರಿಂದಲೇ ವಿಷ್ಣು ದೇವತೆಯನ್ನು ಸ್ವಯಂ ಜನ್ಮತಾಳದವನು ಎಂದು ವೇದವು ಹೇಳುತ್ತದೆ.

ವಿಷ್ಣವು ತನ್ನ ಮೂರು ಹೆಜ್ಜೆಗಳಿಂದ ಮೂರು ಲೋಕವನ್ನು ಅಳೆದ ವಿಷಯವು ಲೋಕ ಪ್ರಸಿದ್ಧವಾಗಿದೆ. ವಿಷ್ಣುವು ತನ್ನ ಪ್ರಥಮ ಹೆಜ್ಜೆಯಿಂದ ಪೃಥ್ವಿಲೋಕವನ್ನೂ ಅಂದರೆ ಸ್ಥೂಲ ಪ್ರಪಂಚ, ದ್ವಿತೀಯ ಹೆಜ್ಜೆಯಿಂದ

ದ್ಯುಲೋಕವನ್ನೂ ಮತ್ತು ತನ್ನ ಮೂರನೆಯ ಹೆಜ್ಜೆಯಿಂದ ಅಂತರಿಕ್ಷಲೋಕವನ್ನು ಅಳೆದನು ಎಂದು ಋಗ್ವೇದವು ಹೇಳುತ್ತದೆ.

೧. ವಿಷ್ಣುವು ತನ್ನ ಮೊದಲನೆ ಪಾದದಿಂದ ಪೃಥ್ವಿಲೋಕವನ್ನು ಅಳೆದಿರುವನು. ಪೃಥ್ವಿಯು ಅಂದರೆ ಭೌತಿಕ ಪ್ರಪಂಚವು ಸ್ಥೂಲ ಆಕಾಶದಲ್ಲಿ ಸ್ಥಿತವಾಗಿರುವುದು. ಸಕಲ ನಕ್ಷತ್ರಪುಂಜಗಳೂ, ಗ್ರಹಾದಿಗಳೂ ಮತ್ತು ಸಕಲ ಜೀವರಾಶಿಗಳ ನಿವಾಸ ಸ್ಥಾನವು ಸ್ಥೂಲ ಆಕಾಶದಲ್ಲಿ ನೆಲೆಸಿದೆ.
೨. ವಿಷ್ಣುವಿನ ಎರಡನೇ ಪಾದದಿಂದ ದ್ಯುಲೋಕವನ್ನು ಅಳೆದಿರುವನು. ಸೂರ್ಯನಿಂದ ಸೃಷ್ಟಿಸಲ್ಪಟ್ಟ ಸಪ್ತಸ್ವರ್ಗಗಳಿಂದಾದ ದ್ಯುಲೋಕದಲ್ಲಿರುವ ಆಕಾಶತತ್ವವನ್ನೂ ಸಹ ಆಕ್ರಮಿಸಿಕೊಂಡಿದಾನೆ. ಆದ್ದರಿಂದ ದ್ಯುಲೋಕದಲ್ಲಿರುವ ಸಪ್ತಲೋಕಗಳ (ಸಪ್ತಸ್ವರ್ಗ ಅಥವಾ ಸಪ್ತಗಗನಗಳ) ಈ ಆಕಾಶ ತತ್ವವು ವಿಷ್ಣುವಿನ ಎರಡನೇ ಪಾದವಾಗಿದೆ.
೩. ವಿಷ್ಣುವಿನ ಮೂರನೇ ಪಾದವು ಅಂತರಿಕ್ಷಲೋಕವನ್ನು ಆವರಿಸಿಕೊಂಡಿದೆ. ಈ ಪಾದವನ್ನು ತಿಳಿಯಲು ಯಾರಿಂದಲೂ ಸಾಧ್ಯವಿಲ್ಲ. ಏಕೆಂದರೆ ಈ ಪಾದದಲ್ಲಿಯೇ ವಿಷ್ಣುವಿನ ಮತ್ತು ಅಧಃಕುಂಡಲಿನಿ ಮಾತೆಯ ದರ್ಶನವಾಗುವುದು. ಕೇವಲ ಯೋಗಿಯು ಮಾತ್ರ ಅಂತರಿಕ್ಷಲೋಕವನ್ನೂ ಮತ್ತು ವಿಷ್ಣುವಿನ ದರ್ಶನವನ್ನು ಪಡೆಯಬಹುದು. ಯಾವ ಯೋಗಿಯು ತನ್ನೊಳಗಿರುವ ಅಂತರಿಕ್ಷಲೋಕವನ್ನು ದರ್ಶನ ಮಾಡುತ್ತಾನೋ ಅವನು ವಿಷ್ಣುವಿನ ದರ್ಶನವನ್ನೂ ಮತ್ತು ವಿಷ್ಣವಿನ ಮೂರನೇ ಪಾದವನ್ನು ನೋಡುತ್ತಾನೆ.

ವಿಷ್ಣುವಿನ ಮೂರು ಪಾದದ ಮಹಿಮೆಯನ್ನು ಹೊಗಳುವ ಈ ಕೆಳಗಿನ ಋಗ್ವೇದ ಮಂತ್ರವನ್ನು ನೋಡಿ.

ದ್ವೇ ಇದಸ್ಯ ಕ್ರಮಣೇ ಸ್ವರ್ದೃಶೋಽಭಿಖ್ಯಾಯ ಮರ್ತ್ಯೋ ಭುರಣ್ಯತಿ ।
ತೃತೀಯಮಸ್ಯ ನಕಿರಾ ದಧರ್ಷತಿ ವಯಶ್ಚನ ಪತಯಂತಃ ಪತತ್ರಿಣಃ ।। (ಋ ೧-೧೫೫-೫ ಸಾ ಭಾ)
"ಸ್ವರ್ಗಲೋಕವನ್ನು ವೀಕ್ಷಿಸುವ ವಿಷ್ಣುವಿನ ಎರಡು ಪಾದಗಳನ್ನಿಡುವ ಲೋಕಗಳನ್ನು ಮಾತ್ರ ಮಾನವನು ಸ್ತುತಿಮಾಡಿ ತಿಳಿದುಕೊಳ್ಳುತ್ತಾನೆ. ಈ ವಿಷ್ಣುವಿನ ಮೂರನೆಯ ಪಾದವನ್ನಿಡುವ ಲೋಕವನ್ನು ಯಾವ ಮಾನವನೂ ತಿಳಿದುಕೊಳ್ಳಲು ಸಾಧ್ಯವೇ ಇಲ್ಲ. ಸಕಲ ಪ್ರದೇಶಗಳಲ್ಲಿಯೂ ಸಂಚರಿಸಲು ಸಾಮರ್ಥ್ಯವುಳ್ಳ ಮರುತ್ತುಗಳೂ ಅದರಂತೆಯೇ ಪಕ್ಷಿಗಳೂ ಸಹ ಇದನ್ನು ತಿಳಿಯಲಾರವು."

ಪರೋ ಮಾತ್ರಾಯ ತನ್ವಾ ವೃಧಾನ ನ ತೇ ಮಹಿತ್ವಮನ್ವಶ್ನುವಂತಿ ।
ಉಭೇ ತೇ ವಿದ್ಮ ರಜಸೀ ಪೃಥಿವ್ಯಾ ವಿಷ್ಣೋ ದೇವ ತ್ವಂ ಪರಮಸ್ಯ ವಿತ್ಸೇ ।। (ಋ ೭-೯೯-೧ ಸಾಭಾ)
"ಅಳತೆ ಮಾಡಲು ಸಾಧ್ಯವಿಲ್ಲದ ಶರೀರದಿಂದ ವೃದ್ಧಿಯನ್ನು ಹೊಂದಿರುವ ವಿಷ್ಣುವೇ, ನಿನ್ನ ಮಹಾತ್ಮೆಯನ್ನು ಮಾನವರಲ್ಲಿ ಯಾರೂ ಅರಿಯಲಾರರು. ಪೃಥ್ವಿಯಿಂದ ಆರಂಭಿಸಿದ ಪೃಥ್ವಿ-ಆಕಾಶ ಎಂಬ ನಿನ್ನ ಎರಡೂ ಲೋಕಗಳನ್ನು ಮಾತ್ರ ನಾವು ಅರಿತಿರುವೆವು. ಎಲೈ ವಿಷ್ಣುವೇ, ನೀನೊಬ್ಬನೇ ಅತ್ಯುತ್ಕೃಷ್ಟವಾದ ಪರಲೋಕವನ್ನು ಅರಿತಿದ್ದೀಯೆ.

ಯಃ ಪೂರ್ವ್ಯಾಯ ವೇಧಸೇ ನವೀಯಸೇ ಸುಮಜ್ಜಾನಯೇ ವಿಷ್ಣವೇ ದದಾಶತಿ ।
ಯೋ ಜಾತಮಸ್ಯ ಮಹತೋ ಮಹಿ ಬ್ರವತ್ಸೇದು ಶ್ರವೋಭಿರ್ಯುಜ್ಯಂ ಚಿದಭ್ಯಸತ್ ।।
"ವಿಷ್ಣವು ಪ್ರಾಚೀನನಾಗಿಯೂ ಜಗತ್ತನ್ನು ಸೃಷ್ಟಿಸುವವನಾಗಿಯೂ ರಮಣೀಯನಾಗಿಯೂ, **ತಾನಾಗಿ ಉತ್ಪನ್ನನಾಗಿಯೂ** ಇರುವ ಸರ್ವವ್ಯಾಪಕನಾದ ವಿಷ್ಣುವಿಗೆ ಯಾರು ಹವಿರಾದಿಗಳನ್ನು ಅರ್ಪಿಸುವರೋ, ಯಾರು ಮಹಾತ್ಮನಾದ ಈ ವಿಷ್ಣುವಿನ ಜನ್ಮವನ್ನು ಹೊಗಳುತ್ತಾನೆಯೋ, ಹೀಗೆ ದಾತೃವೂ ಸ್ತೋತ್ರುವೂ ಆಗಿರುವ ಅವನೂ ಕೂಡ ಕೀರ್ತಿಗಳಿಂದ ಕೂಡಿಕೊಂಡು ಎಲ್ಲರೂ ಹೋಗಿ ಸೇರಬೇಕಾದ ಆ ವಿಷ್ಣುವಿನ ಸಾನ್ನಿಧ್ಯಕ್ಕೆ ಸೇರಿಕೊಳ್ಳುತ್ತಾರೆ." (೧-೧೫೬-೨ ಸಾ ಭಾ)

ವಿಷ್ಣೋರ್ನು ಕಂ ವೀರ್ಯಾಣಿ ಪ್ರ ವೋಚಂ ಯಃ ಪಾರ್ಥಿವಾನಿ ವಿಮಮೇ ರಜಾಂಸಿ ।
ಯೋ ಅಸ್ಕಭಾಯದುತ್ತರಂ ಸಧಸ್ಥಂ ವಿಚಕ್ರಮಾಣಸ್ತ್ರೇಧೋರುಗಾಯಃ ।। "ವಿಷ್ಣುವಿನ ಸಾಹಸಕೃತ್ಯಗಳನ್ನು ಅತಿ ಶೀಘ್ರವಾಗಿ ಪಠಿಸುತ್ತೇನೆ. ಪೃಥಿವ್ಯಾದಿ ಸಮಸ್ತಲೋಕಗಳನ್ನು ವಿಶೇಷ ರೀತಿಯಿಂದ ಅಳೆದನು. ಅವನು ತನ್ನ ಆಧಾರದಿಂದ ಸರ್ವಲೋಕಗಳನ್ನು ಎತ್ತಿ ಹಿಡಿದಿರುವನು. ಯಾವ ವಿಷ್ಣುವು ಮೂರುಸಲ ವಿಧವಿಧವಾಗಿ ಸಂಚರಿಸುತ್ತಲೂ ಮಹಾತ್ಮರಿಂದ ಸ್ತುತಿಸಲ್ಪಡುತ್ತಲೂ ತನ್ನ ಮೂರು ಹೆಜ್ಜೆಗಳಿಂದ ಅತಿವಿಸ್ತಾರವಾದ ಲೋಕಗಳನ್ನು ವ್ಯಾಪಿಸಿದನು." (೧-೧೫೪-೧ ಆರ್ ಎಲ್ ಕ)

ಯಸ್ಯ ತ್ರೀ ಪೂರ್ಣಾ ಮಧುನಾ ಪದಾನ್ಯಕ್ಷೀಯಮಾಣಾ ಸ್ವಧಯಾ ಮದಂತಿ ।
ಯಾ ಉ ತ್ರಿಧಾತು ಪೃಥಿವೀಮುತ ದ್ಯಾಮೇಕೋ ದಾಧಾರಾ ಭುವನಾನಿ ವಿಶ್ವಾ ।।

"ವಿಷ್ಣುವಿನ ಮೂರು ಪಾದ ಪ್ರಕ್ಷೇಪಣೆಗಳೂ ಮಧುರವಾದ ಅಮೃತದಿಂದ ತುಂಬಿರುವುವು ಮತ್ತು ನಾಶರಹಿತವಾಗಿರುವುವೂ. ಆನಂದಮಯವಾದ ಐಕಮತ್ಯದ ಸ್ವಭಾವದಿಂದ ಕೂಡಿರುವುವು. ವಿಷ್ಣವು ತನ್ನ ಮೂರು ನಿಯಮದಿಂದ ಪೃಥಿವ್ಯಾದಿ ಮೂರು ಲೋಕಗಳಾದ ಸಮಸ್ತ ವಿಶ್ವವನ್ನು ಒಬ್ಬನೇ ಎತ್ತಿಹಿಡಿದಿದ್ದಾನೆ" (೧–೧೫೪–೪ ಆರ್ ಎಲ್ಕ)

(ಅಕಾಶತತ್ವದಲ್ಲಿಯೇ ಯಾವ ಆಧಾರವೂ ಇಲ್ಲದೆ ಗ್ರಹನಕ್ಷತ್ರಾದಿ ಸಕಲವೂ ತೇಲುತ್ತಿದೆ ಎಂಬುದನ್ನು ಗಮನಿಸಿ)

ಅತೋ ದೇವಾ ಅವಂತು ನೋ ಯತೋ ವಿಷ್ಣುರ್ವಿಚಕ್ರಮೇ।

ಪೃಥಿವ್ಯಾಃ ಸಪ್ತ ಧಾಮಭಿಃ ।। (ಋ ೧–೨೨–೧೬ ಸಾಭಾ)

"ವಿಷ್ಣುವು ತ್ರಿವಿಕ್ರಮನಾಗಿ ಹೆಜ್ಜೆಗಳನ್ನಿಡುವಾಗ ಯಾವ ಭೂ ಪ್ರದೇಶದಿಂದ ಗಾಯತ್ರ್ಯಾಧಿಛಂದೋಪೇತನಾಗಿ ಹೊರಟನೋ ಆ ಭೂ ಪ್ರದೇಶದಲ್ಲಿರುವ ನಮ್ಮನ್ನು ದೇವತೆಗಳು ರಕ್ಷಿಸಲಿ."

ಇದಂ ವಿಷ್ಣುರ್ವಿ ಚಕ್ರಮೇ ತ್ರೇಧಾ ನಿ ದಧೇ ಪದಮ್ ।

ಸಮೂಳ್ಹಮಸ್ಯ ಪಾಂಸುರೇ ।। (ಋ ೧–೨೨–೧೭ ಸಾಭಾ)

"ವಿಷ್ಣುವು ಈ ಸಮಸ್ತ ಜಗತ್ತನ್ನೂ ಮೂರು ವಿಧವಾದ ಪಾದಪ್ರಕ್ಷೇಪಣದಿಂದ ಆಕ್ರಮಿಸಿದನು. ಆ ವಿಷ್ಣುವಿನ ಧೂಳಿಯುಕ್ತವಾದ ಪಾದಸ್ಥಾನದಲ್ಲಿ ಈ ಜಗತ್ತು ಮುಚ್ಚಿಹೋಗಿ ಕಾಣದಂತಾಯಿತು."

ತ್ರೀಣಿ ಪದಾ ವಿಚಕ್ರಮೇ ವಿಷ್ಣುರ್ಗೋಪಾ ಅದಾಭ್ಯಃ ।

ಅತೋ ಧರ್ಮಾಣಿ ಧಾರಯನ್ ।। (ಋ ೧–೨೨–೧೮ ಸಾಭಾ)

"ವಿಷ್ಣುವನ್ನು ಹಿಂಸಿಸಲು ಯಾರಿಂದಲೂ ಶಕ್ಯವಿಲ್ಲ. ಇವನು ಸಮಸ್ತ ಜಗತ್ತಿಗೂ ರಕ್ಷಕನು. ತನ್ನ ಮೂರು ಪಾದಗಳಿಂದ ಮೂರು ಲೋಕವನ್ನು ರಕ್ಷಿಸಿ, ತನ್ನ ಧರ್ಮವನ್ನು ಸ್ಥಾಪಿಸಿದನು."

ವಿಷ್ಣೋಃ ಕರ್ಮಾಣಿ ಪಶ್ಯತ ಯತೋ ವ್ರತಾನಿ ಪಸ್ಪಶೇ ।

ಇಂದ್ರಸ್ಯ ಯುಜ್ಯಃ ಸಖಾ ।। (೧–೨೨–೧೯ ಸಾಭಾ)

"ವಿಷ್ಣುವಿನ ಪಾಲನಾದಿ (ಅವರ್ಣನೀಯವಾದ) ಕರ್ಮಗಳನ್ನು ದಿಟ್ಟಿಸಿ ನೋಡು. ಆ ವಿಷ್ಣುವಿನ ಮಹಿಮೆಯಿಂದಲೇ ಯಜಮಾನನು ಅಗ್ನಿಹೋತ್ರಾದಿ ಕರ್ಮಗಳನ್ನು ಮಾಡಲು ಸಮರ್ಥನಾಗಿರುವನು. ಇಂತಹ ವಿಷ್ಣುವು ಇಂದ್ರನಿಗೆ ಪರಮ ಮಿತ್ರನಾಗಿರುವನು."

ತದ್ ವಿಷ್ಣೋಃ ಪರಮಂ ಪದಂ ಸದಾ ಪಶ್ಯಂತಿ ಸೂರಯಃ ।

ದಿವೀವ ಚಕ್ಷುರಾತತಮ್ ।। (ಋ ೧–೨೨–೨೦ ಸಾಭಾ)

"ಆಕಾಶವು ಬಹು ವಿಸ್ತಾರವಾಗಿರುವುದರಿಂದ ಅದರಲ್ಲಿ ನೆಟ್ಟ ದೃಷ್ಟಿಯು ಎಲ್ಲವನ್ನೂ ನೋಡುವಂತೆ ವಿದ್ವಾಂಸರಾದವರು ವಿಷ್ಣುವಿನ ಪರಮ ಸ್ಥಾನವನ್ನು ಜ್ಞಾನಿಗಳು ತಮ್ಮ ಒಳಗಣ್ಣಿನಿಂದ ಸದಾ ನೋಡುವರು."

ತದ್ ವಿಪ್ರಾಸೋ ವಿಪನ್ಯವೋ ಜಾಗೃವಾಂಸಃ ಸಮಿಂಧತೇ ।

ವಿಷ್ಣೋರ್ಯತ್ಪರಮಂ ಪದಮ್ ।। (ಋ ೧–೨೨–೨೧ ಸಾಭಾ)

ಬುದ್ಧಿವಂತರಾದ ವಿವೇಕಿಗಳು ಹಿಂದೆ ಹೇಳಿದ ವಿಷ್ಣುವಿನ ಪರಮ ಪದವೆಂಬ ಉತ್ಕೃಷ್ಟಸ್ಥಾನವನ್ನು ಸ್ತೋತ್ರಾದಿಗಳಿಂದ ಬಹಳವಾಗಿ ಪ್ರಶಂಸೆಮಾಡುವರು

ನ ತೇ ವಿಷ್ಣೋ ಜಾಯಮಾನೋ ನ ಜಾತೋ ದೇವ ಮಹಿಮ್ನಃ ಪರಮಂತಮಾಪ ।

ಉದಸ್ತಭ್ನಾ ನಾಕಮೃಷ್ವಂ ಬೃಹಂತಂ ದಾಧರ್ಥ ಪ್ರಾಚೀ ಕಕುಭಂ ಪೃಥಿವ್ಯಾಃ ।। (ಋ ೭–೯೯–೨ ಸಾಭಾ)

"ಎಲೈ ವಿಷ್ಣುವೇ, ನಿನ್ನ ಮಹಾತ್ಮ್ಯದ ಅತಿಶಯವಾದ ಅಂತವನ್ನು ಈಗ ಉತ್ಪನ್ನನಾಗಿರುವವನಾಗಲಿ ಅಥವಾ ಮುಂದೆ ಉತ್ಪನ್ನನಾಗುವವನಾಗಲಿ ಯಾವ ಮಾನವನೂ ಸಮೀಪಿಸಲಾರನು..... (ಇಂತಹ ಮಹಾಮಹಿಮನಾದ ವಿಷ್ಣುವಿನ ದರ್ಶನ ಪಡೆದ ನಾನೇ ಧನ್ಯ.

ವಿಷ್ಣುವಿನ ಅನುಗ್ರಹವಾದರೆ ಅಂತರ್‌ಆಕಾಶವು ನೀಲಕಾಂತಿಯಿಂದ ಪ್ರಕಾಶಿಸುವುದು.

ಅಂತರ್ಆಕಾಶವು ಕತ್ತಲಿನಂತೆ ಇರುವುದಾದರೂ ಸಾಧಕನ ಉಪಾಸನಾದಿಗಳಿಂದ ವಿಷ್ಣುವಿನ ಅನುಗ್ರಹವಾದರೆ ಅಂತರ್ಆಕಾಶವು ನೀಲಿಕಾಂತಿಯಿಂದ ಪ್ರಕಾಶಿಸುವುದು. ವಿಷ್ಣುವಿನ ಸ್ಥಾನವು ಆತನ ಮೂರನೆಯ ಪಾದದಲ್ಲಿದೆ. ವಿರಾಟ್‌ಪುರುಷನ ಮೇರುದಂಡದ ಹಿಂಭಾಗದಲ್ಲಿರುವ ಅಂತರಿಕ್ಷಲೋಕದ ಊರ್ಧ್ವಸ್ಥಾನದಲ್ಲಿ ಅಂದರೆ ವಿರಾಟ್‌ಪುರುಷನ ಶಿರಸ್ಸಿನ ಹಿಂಭಾಗವೇ ಮೂರನೆಯ ಪಾದವಾದ ವಿಷ್ಣುವಿನ ಸ್ಥಾನವಾಗಿದೆ. ಶಿರಸ್ಸಿನಲ್ಲಿ ಸೂರ್ಯನು ಇರುವನು. ಇದು ಸತ್ಯಲೋಕದ ಸ್ಥಾನವಾಗಿದೆ.

ವಿಷ್ಣುವಿನ ದರ್ಶನವನ್ನು ಮಾಡಲು ಇಚ್ಛಿಸುವ ಸಾಧಕರು ತಮ್ಮ ತಲೆಯ ಹಿಂಭಾಗದಲ್ಲಿ, ಶಿಖೆಯ ಸ್ವಲ್ಪ ಕೆಳಗಡೆ ಕೇಂದ್ರೀಕರಿಸಿ ವಿಷ್ಣುವಿನ ಉಪಾಸನೆಯನ್ನು ಮಾಡಿದರೆ ವಿಷ್ಣುವಿನ ದರ್ಶನ ಲಭ್ಯವಾಗುವುದು. ಆ ಸಮಯದಲ್ಲಿ ಪಿಂಡಾಂಡದ ಮೂರುಲೋಕಗಳೂ ವಿಷ್ಣುಕಾಂತಿಯಿಂದ ಕಂಗೊಳಿಸುವುದು ಅಂದರೆ ನೀಲಿಬಣ್ಣದಿಂದ ಕಂಗೊಳಿಸುವುದು.

ಬ್ರಹ್ಮಾಂಡದಲ್ಲಿ ಯಾವಾಗ ವೃತ್ರಾಸುರನು ಆವರಿಸಿಕೊಂಡನೋ ಆಗ ವಿರಾಟ್‌ಪುರುಷನ ಶರೀರವು ಅಂಧಕಾರದಿಂದ ವ್ಯಾಪಿಸಲ್ಪಟ್ಟಿತ್ತು. ಆಗ ಇಂದ್ರನು ವಿಷ್ಣುವಿಗೆ ತನ್ನ ಕಾಂತಿಯಿಂದ ಬೆಳಗುವಂತೆ ಹೇಳಿದನು. ಆಗ ವಿಷ್ಣುವು ಬ್ರಹ್ಮಾಂಡವನ್ನೆಲ್ಲಾ ವಿಷ್ಣುಕಾಂತಿಯಿಂದ ಪ್ರಜ್ವಲಿಸುವಂತೆ ಮಾಡಿದನು. ಆ ಕಾಂತಿಯಲ್ಲಿ ಇಂದ್ರನು ವೃತ್ರಾಸುರ ಸಂಹಾರವನ್ನು ಮಾಡಿ ಅಂಧಕಾರದಲ್ಲಿದ್ದ ಸೂರ್ಯನನ್ನು ಪ್ರಕಟಮಾಡಿ ಅಂತರಿಕ್ಷದಲ್ಲಿ ಅಂದರೆ ವಿರಾಟ್‌ಪುರುಷನ ಶಿರಸ್ಸಿನಲ್ಲಿ ಸ್ಥಾಪಿಸಿದನು. ಈ ರೀತಿಯಾಗಿ ವಿಷ್ಣುವು ವೃತ್ರಾಸುರನ ಸಂಹಾರಕ್ಕಾಗಿ ಇಂದ್ರನಿಗೆ ಸಹಾಯಮಾಡಿದನು. ಆದ್ದರಿಂದ ವಿಷ್ಣು ಮತ್ತು ಇಂದ್ರನ ಸ್ನೇಹವು ಪುರಾತನವಾದುದು.

ವೇದದಲ್ಲಿ ವಿಷ್ಣುವನ್ನು 'ಶಿಪಿವಿಷ್ಟ' ಎಂದು ಕರೆಯಲಾಗಿದೆ. ಶಿಪಿವಿಷ್ಟವೆಂದರೆ 'ತನ್ನ ತೇಜಸ್ಸನ್ನು ಕಳೆದುಕೊಳ್ಳುವುದು' ಎಂಬುದಾಗಿದೆ. ಸವಿತೃದೇವನ ಸೂರ್ಯಮಂಡಲದ ತೇಜಸ್ಸು ಜಾಗೃತವಾದಾಗ, ಸೂರ್ಯನ ಪ್ರಭೆಯು ವಿಷ್ಣುವಿನ ತೇಜಸ್ಸನ್ನು ಆವರಿಸಿ, ನೀಲಿ ಬಣ್ಣವು ಕಾಣದಂತಾಗುತ್ತದೆ.

ಇಂತಹ ಪರಮಪಾವನನಾದ ವಿಷ್ಣುವು ನಮ್ಮನ್ನೆಲ್ಲಾ ಅನುಗ್ರಹಿಸಲಿ.

## ಸೂರ್ಯ– ಸವಿತೃ ದೇವತೆ

ಸ್ಥೂಲಪ್ರಪಂಚದ ಸೂರ್ಯದೇವನ ಮಹಿಮೆಯನ್ನು ಅರಿಯದವರಾರಿದ್ದಾರೆ. ನಮ್ಮ ಭೂಮಿಯ ಮೇಲೆ ಇರುವ ಸಕಲ ಜೀವರಾಶಿಗಳ ಸೃಷ್ಟಿಗೆ ಸೂರ್ಯನೇ ಮೂಲ ಕಾರಣ ಎಂದು ವಿಜ್ಞಾನವು ಹೇಳುತ್ತಿದೆ. ಸೂರ್ಯನ ಶಾಖ ಕೇವಲ ಕೆಲವು ಡಿಗ್ರಿಯಷ್ಟು ವ್ಯತ್ಯಾಸವಾದರೂ ಜೀವಿಗಳು ಸರ್ವನಾಶವಾಗಿ ಭೂಮಿಯು ಬರಡಾಗುತ್ತದೆ. ಇಂತಹ ಸೂರ್ಯದೇವನ ಸೃಷ್ಟಿ ಹೇಗಾಯಿತು ಎಂದು ತಿಳಿದೆವು. ವೇದವು ಸೂರ್ಯದೇವನ ಮಹಿಮೆ ಬಗ್ಗೆ ಏನು ಹೇಳುತ್ತದೆ ಎಂಬುದನ್ನು ನೋಡೋಣ.

ಉತ್ಸೂರ್ಯೋ ಬೃಹದರ್ಚೀಂಷಶ್ರೇತ್ಪುರು ವಿಶ್ವಾ ಜನಿಮ ಮಾನುಷಾಣಾಂ ।
ಸಮೋ ದಿವಾ ದದೃಶೇ ರೋಚಮಾನಃ ಕ್ರತ್ವಾ ಕೃತಃ ಸುಕೃತಃ ಕರ್ತೃಬಿರ್ಭೂತ್ ।।। (ಋ ೭–೬೨–೧ ಸಾಭಾ)
ಸರ್ವ[ಪ್ರೇರಕನಾದ ಪ್ರಭೂತವಾದುದೂ, ಅನೇಕಿಧವಾದುದೂ ಆದ ತನ್ನ ತೇಜಸ್ಸುಗಳನ್ನು ಹರಡುತ್ತಾನೆ. ಅಹಸ್ಸುಗಳಲ್ಲಿ ಪ್ರಕಾಶಿಸುತ್ತಾ ಎಲ್ಲರಿಂದಲೂ ಒಂದೇ ವಿಧವಾಗಿ ಕಾಣಲ್ಪಡುತ್ತಾನೆ. ಸಕಲವನ್ನೂನಿರ್ಮಿಸುವವನೂ ತಾನೇ ಪ್ರಜಾಪತಿಯಿಂದ (ಇಂದ್ರನಿಂದ) ನಿರ್ಮಿತನಾದ ಸೂರ್ಯನು ಸ್ತುತಿಕರ್ತರಿಂದ ಉತ್ತಮವಾಗಿ ಸಂಸ್ಕರಿಸಲ್ಪಟ್ಟವನಾಗಿ ಆಗುತ್ತಾನೆ.

"ಮಿತ್ರಾ, ವರುಣ, ಅಗ್ನಿಯೇ ಆದಿಯಾದ ಸಮಸ್ತ ಪ್ರಪಂಚಕ್ಕೂ, ಕಣ್ಣಿನಂತಿರುವುದೂ ಪ್ರಕಾಶಮಾನವಾದ ಕಿರಣಗಳ ಸಮೂಹವೆಂಬ ಸೂರ್ಯಮಂಡಲವು ಉದಿಸಿ, ಸ್ವರ್ಗಭೂಮ್ಯಾಕಾಶಗಳನ್ನು ವ್ಯಾಪಿಸಿದೆ. **ಸೂರ್ಯನು ಚರಚರಾತ್ಮಕವಾದ ಈ ಪ್ರಪಂಚದ ಆತ್ಮನಾಗಿದ್ದಾನೆ.** (೧–೧೧೫–೧ ಸಾಭಾ)
(ಭೌತಿಕ ಪ್ರಪಂಚದ ಆತ್ಮನಾಗಿದ್ದಾನೆ. ನಮ್ಮ ಹೃದಯದಲ್ಲಿಯೂ ಸಾಧನೆಯಿಂದ ಪ್ರಕಟನಾಗುವನು.)

ಸ ಸೂರ್ಯ ಪ್ರತಿ ಪುರೋ ನ ಉದ್ಗಾ ಏಭಿಃ ಸ್ತೋಮೇಭಿರೇತಶೇಭಿರೇವೈಃ ।
ಪ್ರ ನೋ ಮಿತ್ರಾಯ ವರುಣಾಯ ವೋಚೋಽನಾಗಸೋ ಅರ್ಯಮ್ಣೇ ಅಗ್ನಯೇ ಚ ।। "ಎಲೈ ಸೂರ್ಯದೇವನೆ, ಪ್ರಸಿದ್ಧನಾದ ನೀನು ಪ್ರಶಸ್ತ್ಯವಾದವೂ, ಪ್ರಭಾಯುತವಾದವೂ ಆದ ನಿನ್ನ ಅಶ್ವಗಳೊಡಗೂಡಿ ನಮಗಭಿಮುಖವಾಗಿ ನಮ್ಮ ಮುಂಭಾಗದಲ್ಲಿ ಉದಯಿಸಿ ಬಾ. ಮಿತ್ರನಲ್ಲಿಯೂ, ವರುಣನಲ್ಲಿಯೂ, ಆರ್ಯಮ ಮತ್ತು ಅಗ್ನಿಯ ಮುಂದೆಯೂ ನಮ್ಮನ್ನು ಪಾಪರಹಿತರೆಂದು ಪ್ರಕಟಿಸಿ ತಿಳಿಸು." (೭–೬೨–೨ ಸಾಭಾ)

ಪ್ರತ್ಯಙ್ ದೇವಾನಾಂ ವಿಶಃ ಪ್ರತ್ಯಙ್ಙದೇಷಿ ಮಾನುಷನ್ ।
ಪ್ರತ್ಯಙ್ವಿಶ್ವಂ ಸ್ವದೃಶೇ ।। (೧-೫೦-೫ ಸಾಭಾ)
ಎಲೈ ಸೂರ್ಯದೇವನೇ, ನೀನು ದೇವಲೋಕದ ಪ್ರಜೆಗಳಾದ ಮರುದ್ದೇವತೆಗಳಗೂ, ಸಕಲ ಮಾನವರಿಗೂ, ಸರ್ವವ್ಯಾಪಕವಾದ ಸ್ವರ್ಲೋಕಕ್ಕೂ ಅಅಭಿಮುಖನಾಗಿ ಸಕಲರಿಗೂಗೋಚರನಾಗುವಂತೆ ಉದಯಿಸುತ್ತೀಯೇ.

ಯೇನಾ ಪಾವಕ ಚಕ್ಷಸಾ ಭುರಣ್ಯನ್ತಂ ಜನಾ ಅನು ।
ತ್ವಂ ವರುಣ ಪಶ್ಯಸಿ ।। (ಋ ೧-೫೦-೬ ಸಾಆಭಾ)
"ಎಲೈ ಸೂರ್ಯದೇವನೇ, ನೀನು ಸಕಲವನ್ನೂ ಶುದ್ಧಿಮಾಡತಕ್ಕವನು. ಅನಿಷ್ಟದಿಂದ ತಪ್ಪಿಸಿ ಎಲ್ಲರಿಗೂ ಒಳ್ಳೆದನ್ನು ಮಾಡುವವನು. ಸಕಲ ಪ್ರಾಣಿಗಳನ್ನೂ ಹೊತ್ತುಕೊಂಡಿರುವ ಅಥವಾ ಪೋಷಿಸುವ ಈ ಲೋಕವನ್ನು ಯಾವ ಪ್ರಕಾಶದಿಂದ ಬೆಳಗುವಂತೆ ಮಾಡುತ್ತೀಯೋ ಆ ಪ್ರಕಾಶವನ್ನು ನಾವು ಸ್ತೋತ್ರ ಮಾಡುತ್ತೇವೆ." (೧-೫೦-೬ ಸಾಭಾ)

ಯದೇದೇನಮದಧುರ್ಯಜ್ಞಿಯಾಸೋ ದಿವಿ
"ಅದಿತಿಯ ಪುತ್ರರಾದ ಸೂರ್ಯನನ್ನೂ, ಅಗ್ನಿಯನ್ನೂ, ಯಜ್ಞಾರ್ಹರಾದ ದೇವತೆಗಳು ಯಾವಾಗ ದ್ಯುಲೋಕದಲ್ಲಿ ಸ್ಥಾಪಿಸಿದರೋ, ಯಾವಾಗ ಸಂಚಾರಶೀಲರಾದ ಈ ಸೂರ್ಯಾಗ್ನಿಗಳು ಒಂದಾಗಿ ಸೇರಿದರೋ ಆ ಒಡನೆಯೇ, ಸಕಲ ಲೋಕಗಳು ಇವರಿಬ್ಬರನ್ನೂ ನೋಡಿದವು. (೧೦-೮೮-೧೧ ಸಾಭಾ)

(ಆದಿತ್ಯರಿಂದ ಪ್ರಕಟವಾದ ಸೂರ್ಯ ಮತ್ತು ಅಗ್ನಿಯನ್ನೂ ಸಹ ಅದಿತಿಯ ಪುತ್ರರೆಂದು ಕರೆಯಲ್ಪಡುತ್ತಾರೆ.)

ಉದ್ವಾಂ ಚಕ್ಷುರ್ವರುಣ ಸುಪ್ರತೀಕಂ ದೇವಯೋರೇತಿ ಸೂರ್ಯಸ್ತತನ್ವಾನ್ ।
ಅಭಿ ಯೋ ವಿಶ್ವಾ ಭುವನಾನಿ ಚಷ್ಟೇ ಸ ಮನ್ಯುಂ ಮರ್ತ್ಯೇಷ್ವಾ ಚಿಕೇತ ।। (ಋ ೭-೬೧-೧ ಸಾಭಾ)
"ಎಲೈ ಮಿತ್ರಾವರುಣರೇ, ದೇವತಾತ್ಮಕರಾದ ನಿಮ್ಮ ತೇಜೋರೂಪನೂ ಆಕರ್ಷಕವಾದ ಸ್ವರೂಪವುಳ್ಳವನೂ ಆದ ಸೂರ್ಯನು ತನ್ನ ತೇಜಸ್ಸನ್ನು ವಿಸ್ತರಿಸುತ್ತಾ ಉದಯಿಸುತ್ತಾನೆ. ಯಾವ ಸೂರ್ಯದೇವನು ಸಮಸ್ತವಾದ ಭೂತಜಾತಗಳನ್ನು ಸಾಕ್ಷಾತ್ತಾಗಿ ನೋಡುವನೋ ಅದೇ ದೇವನು ಮಾನವರಲ್ಲಿ ಪಠಿತವಾದ ಸ್ತುತಿಯನ್ನು ಅರಿಯುತ್ತಾನೆ."

ಏಷ ಸ್ಯ ಮಿತ್ರಾವರುಣಾ ನೃಚಕ್ಷಾ ಉಭೇ ಉದೇತಿ ಸೂರ್ಯೋ ಅಭಿಜ್ಮನ್ ।
ವಿಶ್ವಸ್ಯ ಸ್ಥಾತುರ್ಜಗತಶ್ಚ ಗೋಪಾ ಋಜು ಮರ್ತೇಷು ವೃಜಿನಾ ಚ ಪಸ್ಯನ್।। (ಋ ೭-೬೦-೨ ಸಾಭಾ)
"ಎಲೈ ಮಿತ್ರಾವರುಣರೇ, ಸ್ಥಾವರಾತ್ಮಕವೂ, ಜಂಗಮಾತ್ಮಕವೂ ಆದ ಸಕಲ ಜಗತ್ತಿಗೂ ರಕ್ಷಕನೂ, ಜಗತ್ತಿಗೆಲ್ಲಾ ಗೋಚರಿಸುವವನೂ, ಮಾನವರ ವ್ಯವಹಾರಗಳನ್ನೆಲ್ಲಾ ನೋಡತಕ್ಕವನೂ ಆದ ಸೂರ್ಯನು ಮಾನವರಲ್ಲಿರುವ ಸತ್ಯಜೀವನವನ್ನು ಅಸತ್ಯ ಜೀವನವನ್ನು ನೋಡುತ್ತಲೂ ಅಂತರಿಕ್ಷದಲ್ಲಿ ಸಂಚರಿಸುತ್ತಲೂ **ದ್ಯಾವಾಪೃಥ್ವಿಗಳಗೆ ಅಭಿಮುಖನಾಗಿ ಉದಯಿಸುತ್ತಾನೆ."**

ಉದ್ವಾಂ ಪೃಕ್ಷಾಸೋ ಮಧುಮಂತೋ ಅಸ್ಥುರಾ ಸೂರ್ಯೋ ಅರುಹಚ್ಛುಕ್ರಮರ್ಣಃ ।
ಯಸ್ಮಾ ಆದಿತ್ಯಾ ಅಧ್ವನೋ ರದಂತಿ ಮಿತ್ರೋ ಅರ್ಯಮಾ ವರುಣಃ ಸಜೋಷಾಃ ।। (ಋ ೭-೬೦-೪ ಸಾಭಾ)
".....ಯಾವ ಸೂರ್ಯನಿಗಾಗಿ ಅದಿತಿಪುತ್ರರೂ ಸಮಾನ ಪ್ರೀತಿಯುಳ್ಳವರೂ ಆದ ಮಿತ್ರಾ, ಆರ್ಯಮಾ ಮತ್ತು ವರುಣರು ಮಾರ್ಗಗಳನ್ನು ಬಿಡಿಸಿ ಸಿದ್ಧಪಡಿಸುವರೋ ಆ ಸೂರ್ಯನು ಪ್ರಕಾಶಮಾನವಾದ ಅಂತರಿಕ್ಷವನ್ನು ಹತ್ತಿದ್ದಾನೆ."

ಆಕಾಶಕಾಯಗಳು ಸೂರ್ಯನಿಗೆ ಡಿಕ್ಕಿ ಹೊಡೆಯಲು ಅಥವಾ ನಮ್ಮ ಭೂಮಿಯ ಮೇಲೆ ಉಲ್ಕೆಗಳು ಬೀಳುವಂತೆ ಯಾವುದೇ ಆಕಾಶಕಾಯಗಳು ಬೀಳಲು ಸಾಧ್ಯವಿಲ್ಲ. ಏಕೆಂದರೆ ದೇವತೆಗಳಂದಾಗಿ ಸೂರ್ಯನು ವಿಕರ್ಷಣ ಶಕ್ತಿಯನ್ನು ಹೊಂದಿದ್ದಾನೆ.

## ಸವಿತೃ ದೇವತೆ

ಸೂರ್ಯಮಂಡಲಾಂತರ್ಗತನಾದ ಪ್ರಭುವು, ಸೃಷ್ಟಿಯ ಕಾರಣನೂ ಆದ ದೇವನೆ ಸವಿತೃವಾಗಿದ್ದಾನೆ. ಸೂರ್ಯನು ಬೇರೆಯಲ್ಲ, ಸವಿತೃದೇವನು ಬೇರೆಯಲ್ಲ. ಯಾವಾಗ ದೇವತೆಗಳ ತೇಜಸ್ಸು ಅಗ್ನಿಗೋಳವನ್ನು ಆವರಿಸುವುದೋ ಆಗ ಸೂರ್ಯನು ಪ್ರಕಟನಾಗುವನು. ಆಗ ಆ ತೇಜಸ್ಸಿನ ನಡುವೆ ಸವಿತೃದೇವನು ಪ್ರಕಟನಾಗುವನು. ಆದರೆ ಮಾನವನ ರೂಪದಲ್ಲಿ ಕಾಣುವ ಸವಿತೃದೇವನು ಹಿರಣ್ಮಯ ಶರೀರವನ್ನು ಹೊಂದಿರುವನು. ಅಮಿತವಾದ ಸುವರ್ಣ ಕಾಂತಿಯನ್ನೂ ಅಪಾರವಾದ ತೇಜಸ್ಸನ್ನು ಹೊಂದಿರುವ ಸವಿತೃವು ತನ್ನ ಕಾಂತಿಯನ್ನು ಹೊರಚೆಲ್ಲುತ್ತಾನೆ. ಸವಿತೃದೇವನು ಸಕಲ ದೇವತೆಗಳನ್ನು ಸೃಷ್ಟಿಕಾರ್ಯಕ್ಕಾಗಿ ಪ್ರಚೋದಿಸಿ ಸ್ಥಾವರಜಂಗಮಾತ್ಮಕಗಳಾದ ಸೃಷ್ಟಿಗೆ ಕಾರಣನಾದುದರಿಂದ ಸವಿತೃವನ್ನು ಪ್ರಜಾಪತಿಯೆಂದು ಕರೆಯುತ್ತಾರೆ.

ಸವಿತೃದೇವನು ಸ್ಥಾವರ ಜಂಗಮಾತ್ಮಕವಾದ ಸೃಷ್ಟಿಗೆ ಒಡೆಯನಾಗಿದ್ದಾನೆ. ಸವಿತೃವು ಚಲಿಸುವ ಸಕಲ ವಸ್ತುಗಳನ್ನು ವ್ಯಾಪಿಸಿ, ಸಕಲಕ್ಕೂ ಆಧಾರಭೂತನಾಗಿದ್ದಾನೆ. ಆದ್ದರಿಂದ ಸೂಕ್ಷ್ಮವಾಗಲಿ, ಸ್ಥೂಲವಾದದ್ದಾಗಲಿ ಇವನ ನಿಯಮದಿಂದಲೇ ಚಲಿಸುತ್ತದೆ. ಸವಿತೃವು ಚಲಿಸುವ ಸಕಲ ವಸ್ತುಗಳನ್ನು ಕಾರ್ಯತತ್ಪರರನ್ನಾಗಿ ಮಾಡುತ್ತಾನೆ ಮತ್ತು ಸಕಲ ಜೀವಿಗಳಿಗೆ ಚೈತನ್ಯವನ್ನು ಕೊಡುತ್ತಾನೆ. ತನ್ನ ಉಪಾಸಕರಿಗೆ ಸಕಲ ಶ್ರೇಯಸ್ಸುಗಳನ್ನು ಕೊಡುವುದರ ಜೊತೆಗೆ ಅವರ ಪಾಪಗಳನ್ನು ನಾಶಮಾಡುತ್ತಾನೆ.

ವರುಣನು ಮಾನವರ ಕರ್ಮಗಳಿಗೆ ಅನುಸಾರವಾಗಿ ಅವರನ್ನು ತನ್ನ ಪಾಶದಿಂದ ಬಂಧಿಸುತ್ತಾನೆ. ಆದರೆ ಹಾಗೆ ಬಂಧಿತನಾದ ಮಾನವರನ್ನು ಪಾಪದಿಂದ ವಿಮೋಚನೆ ಮಾಡುವುದು ಸವಿತೃವಿನ ಅನುಗ್ರಹದಿಂದಲೇ ಆಗುತ್ತದೆ. ದೇವತೆಗಳನ್ನು ಆರಾಧಿಸದ ಪಾಪಿಗಳನ್ನು ವರುಣನೇ ಶಿಕ್ಷಿಸುತ್ತಾನೆ. ಆದರೆ ಸವಿತೃವಿನ ಕೃಪೆಗೆ ಪಾತ್ರರಾದ ಭಕ್ತರನ್ನು ಸವಿತೃವು ಪಾಪಗಳಿಂದ ವಿಮೋಚನೆ ಮಾಡುತ್ತಾನೆ. ಆದ್ದರಿಂದಲೇ ಸವಿತಾ ದೇವತೆಯನ್ನುದ್ದೇಶಿಸುವ ಗಾಯತ್ರೀ ಮಹಾಮಂತ್ರವು ನಮ್ಮ ದೇಶದಲ್ಲಿ ಗುರುಮಂತ್ರವಾಗಿ ಗೌರವಿಸಲ್ಪಟ್ಟಿದೆ. ಹಾಗೆಯೇ ಪಿರಮಿಡ್ ಕಾಲದ ಜನರೂ ಸಹ ಸೂರ್ಯಾರಾಧನೆಯನ್ನು ಮಾಡುತ್ತಿದ್ದರು. ಈಗ ಸವಿತೃದೇವನ ಮಹಿಮೆಯನ್ನು ನೋಡೋಣ.

ದಿವೋ ಧರ್ತಾ ಭುವನಸ್ಯ ಪ್ರಜಾಪತಿಃ ಪಿಶಂಗಂ ದ್ರಾಪಿಂ ಪ್ರತಿ ಮುಂಚತೇ ೧
ವಿಚಕ್ಷಣಃ ಪ್ರಥಯನ್ನಾ ಪೃಣನ್ನುರ್ವಜೀಜನತ್ಸವಿತಾ ಸುಮ್ನ ಮುಕ್ಥ್ಯಂ ೧೧ (ಋ ೪-೫೩-೨ ಸಾಭಾ)
"ದ್ಯುಲೋಕಕ್ಕೂ ಸಕಲ ಭೂತಜಾತಗಳಿಗೂ ಧಾರಕನೂ, ಪ್ರಾಜ್ಞನೂ ಆದ ಪ್ರಜಾಪತಿಯು (ಸವಿತೃವು) ಹೊಂಬಣ್ಣದ ಕವಚವನ್ನು ಹೊದ್ದುಕೊಂಡಿದ್ದಾನೆ. ಅನೇಕ ದೃಷ್ಟಿಯಿಂದ ನೋಡತಕ್ಕ ಆ ಸವಿತೃವು ತನ್ನ ತೇಜಸ್ಸನ್ನು ಪ್ರಕಾಶಪಡಿಸುತ್ತಲೂ, ಅದನ್ನು ಸರ್ವತ್ರ ವ್ಯಾಪಿಸುವಂತೆ ಮಾಡುತ್ತಲೂ ಸಹ ಪ್ರಭೂತವಾದುದೂ, ಪ್ರಶಸ್ತ್ಯವಾದುದೂ ಆದ ಸುಖವನ್ನುಂಟು ಮಾಡುತ್ತಾನೆ."

ಅಪ್ರಾ ರಜಾಂಸಿ ದಿವ್ಯಾನಿ ಪಾರ್ಥಿವಾ ಶ್ಲೋಕಂ ದೇವಃ ಕೃಣುತೇ ಸ್ವಾಯ ಧರ್ಮಣೇ ೧
ಪ್ರ ಬಾಹೂ ಅಸ್ರಾಕ್ಸವಿತಾ ಸವೀಮನಿ ನಿವೇಶಯನ್ಪ್ರಸುವನ್ನ ಕ್ತುಭಿರ್ಜಗತ್ ೧೧ (ಋ ೪-೫೩-೩ ಸಾಭಾ)
"...... ಸವಿತೃದೇವನು ತನ್ನ ಕಾಂತಿಗಳಿಂದ ಲೋಕವನ್ನು ಆಯಾ ಕಾರ್ಯಗಳಲ್ಲಿ ಸ್ಥಾಪಿಸುತ್ತಲೂ, ಚೈತನ್ಯದಾನದಿಂದ ಪ್ರೇರೇಪಿಸುತ್ತಲೂ, ಸೃಷ್ಟಿಕಾರ್ಯದ ನಿಮಿತ್ತವಾಗಿ ತನ್ನ ಬಾಹುಗಳನ್ನು ಹರಡುತ್ತಾನೆ."

ಅದಾಭ್ಯೋ ಭುವನಾನಿ ಪ್ರಜಾಕಶದ್ವ್ರತಾನಿ ದೇವಃ ಸವಿತಾಭಿ ರಕ್ಷತೇ ೧
ಪ್ರಾಸ್ರಾಗ್ಬಾಹೂ ಭುವನಸ್ಯ ಪ್ರಜಾಭ್ಯೋ ಧೃತವ್ರತೋ ಮಹೋ ಅಜ್ಮಸ್ಯ ರಾಜತಿ ೧೧ (ಋ ೪-೫೩-೪ ಸಾಭಾ)
"ಸವಿತೃದೇವನು ಶತ್ರುಗಳ ಹಿಂಸೆಗೆ ಸಿಲುಕದೇ, ಲೋಕಗಳನ್ನೆಲ್ಲಾ ಪ್ರಕಾಶಿಸುವಂತೆ ಮಾಡುತ್ತಾ ಯಜ್ಞಯಾಗಾದಿ ಕರ್ಮಗಳನ್ನು ರಕ್ಷಿಸುತ್ತಾನೆ. ಲೋಕದ ಪ್ರಜೆಗಳ ಪಾಲನೆಗೋಸ್ಕರ ತನ್ನ ಬಾಹುಗಳನ್ನು ಪ್ರಸರಿಸುತ್ತಾನೆ. ಜಗತ್ಪಾಲನಾದಿ ವ್ರತಗಳನ್ನು ಧರಿಸಿದವನಾಗಿ ಮಹತ್ತಾದ ಜಗತ್ತಿಗೆ ಪ್ರಭುವಾಗಿದ್ದಾನೆ."

ತ್ರಿರಂತರಿಕ್ಷಂ ಸವಿತಾ ಮಹಿತ್ವನಾ ತ್ರೀ ರಜಾಂಸಿ ಪರಿಭೂಸ್ತ್ರೀಣಿ ರೋಚನಾ ೧
ತಿಸ್ರೋ ದಿವಃ ಪೃಥಿವೀಸ್ತಿಸ್ರ ಇನ್ವತಿ ತ್ರಿಭಿರ್ವ್ರತೈರಭಿ ನೋ ರಕ್ಷತಿ ತ್ಮನಾ ೧೧ (ಋ ೪-೫೩-೫ ಸಾಭಾ)
ಸವಿತೃದೇವನು ಮೂರುಪ್ರಕಾರವಾದ ಅಂತರಿಕ್ಷವನ್ನು, ತನ್ನಧೀನದಲ್ಲಿಟ್ಟುಕೊಂಡು ತನ್ನ ಮಹಾತ್ಮ್ಯದಿಂದ ವ್ಯಾಪಿಸುತ್ತಾನೆ. ಮೂರು ಲೋಕಗಳನ್ನು, ಅಗ್ನಿ, ವಾಯು, ಆದಿತ್ಯ ಎಂಬ ಮೂರು ಪ್ರಭಾಯುತವಾದ ತತ್ವಗಳನ್ನೂ, ಇಂದ್ರ, ಪ್ರಜಾಪತಿ, ಸತ್ಯ ಎಂಬ ಮೂರು ದಿವ್ಯಲೋಕಗಳನ್ನೂ, ತ್ರಿಪ್ರಕಾರವಾದ ಪೃಥಿವಿಯನ್ನೂ ವ್ಯಾಪಿಸಿದ್ದಾನೆ. ಇಂತಹ ಸರ್ವ ವ್ಯಾಪಕನಾದ ದೇವನು ತನ್ನ ಮೂರು ವಿಧವಾದ ಅಸಾಧಾರಣಕರ್ಮಗಳಿಂದ ನಮ್ಮನ್ನು ಸ್ವಪ್ರೇರಣೆಯಿಂದಲೂ, ಸ್ವಸಂತೋಷದಿಂದಲೂ ರಕ್ಷಿಸಲಿ."

ಯಸ್ಯ ಪ್ರಯಾಣಮನ್ವನ್ಯ ಇದ್ಯಯುರ್ದೇವಾ ದೇವಸ್ಯ ಮಹಿಮಾನಮೋಜಸಾ ೧
ಯಃ ಪಾರ್ಥಿವಾನಿ ವಿಮಮೇ ಸ ಏಯಶೋ ರಜಾಂಸಿ ದೇವಃ ಸವಿತಾ ಮಹಿತ್ವನಾ ೧೧ (ಋ ೫-೮೧-೩ ಸಾಭಾ)
"ದೇವತಾತ್ಮನಾದ ಸವಿತೃವಿನ ಸಂಚಾರಮಾರ್ಗವನ್ನೇ ಅನುಸರಿಸಿ ಇತರ ದೇವತೆಗಳೆಲ್ಲರೂ ಸಹ ಶಕ್ತಿಯೊಡಗೂಡಿದ ಮಹತ್ವವನ್ನು ಪಡೆಯುತ್ತಾರೆ. ದೇವಾತ್ಮನಾದ ಯಾವ ಸವಿತೃವು ತನ್ನ ಮಹಾತ್ಮದಿಂದ ಪೃಥ್ವಿಯೇ ಮುಂತಾದ ಮೂರು ಲೋಕಗಳನ್ನೂ ನಿರ್ಮಿಸಿ ವಿಭಾಗಮಾಡಿದನೋ ಅದೇ ಸವಿತೃವು ಶುಭ್ರವರ್ಣವುಳ್ಳವನಾಗಿ ಪ್ರಕಾಶಿಸುತ್ತಿದ್ದಾನೆ."

ಮೇಲಿನ ಮಂತ್ರವು ಸವಿತೃವಿನ ಸಂಚಾರಮಾರ್ಗವನ್ನೇ ದೇವತೆಗಳು ಅನುಸರಿಸುತ್ತಾರೆಂದು ಹೇಳುತ್ತಿದೆ. ಆದ್ದರಿಂದಲೇ ಪೃಥ್ವಿಯ ಮೇಲೂ ಸಹ ಸೂರ್ಯದೇವನನ್ನು ಅನುಸರಿಸಿ ದೇವತೆಗಳು ಸಂಚರಿಸುತ್ತಾರೆ. ಮೊದಲು

ಅಶ್ವಿನೀ ದೇವತೆಗಳೂ, ನಂತರ ಉಷಸ್ ದೇವಿಯು ಬರುವರು. ಆದಿತ್ಯರು ಮತ್ತು ವಾಗ್ದೇವತೆಗಳೂ ಸಹ ಸೂರ್ಯನಲ್ಲಿಯೇ ಇರುವರು. ಆದ್ದರಿಂದ ಸೂರ್ಯದೇವನ ಉದಯವಾದ ನಂತರವಷ್ಟೇ ಅಗ್ನಿಹೋತ್ರವನ್ನು ಮಾಡಬೇಕು. ಆದರೆ ಸೂರ್ಯನ ಉದಯಕಾಲದಲ್ಲಷ್ಟೇ ಮಾಡಬೇಕು ಎಂಬ ನಿಯಮವಿಲ್ಲ. ಒಂದೆರಡು ಘಂಟೆಗಳಷ್ಟು ವ್ಯತ್ಯಾಸವಾದರೆ ತೊಂದರೆ ಇಲ್ಲ. ಅಗ್ನಿಹೋತ್ರ ಮಾಡುವುದಷ್ಟೇ ಬಹಳ ಮುಖ್ಯ.

ವಿಶ್ವಾ ರೂಪಾಣಿ ಪ್ರತಿ ಮುಂಚತೇ ಕವಿಃ ಪ್ರಾಸಾವೀದ್ಭದ್ರಂ ದ್ವಿಪದೇ ಚತುಷ್ಪದೇ ।
ವಿ ನಾಕಮುಖ್ಯತ್ಸವಿತಾ ವರೇಂಣ್ಯೋಽನು ಪ್ರಯಾಣಮುಷಸೋ ವಿ ರಾಜತಿ ।। (ಋ ೫–೮೧–೨ ಸಾಭಾ)

"ಮೇಧಾವಿಯಾದ ಸವಿತೃವು ಸಮಸ್ತ ರೂಪಗಳನ್ನು, ತನ್ನಲ್ಲೇ ಧರಿಸಿಕೊಳ್ಳುತ್ತಾನೆ. ಎರಡು ಕಾಲುಳ್ಳ ಮಾನವಾದಿಗಳಿಗೂ ನಾಲ್ಕು ಕಾಲುಳ್ಳ ಗವಾದಿಗಳಿಗೂ (ನಾಲ್ಕು ಕಾಲುಳ್ಳ ಗೋವು ಮತ್ತು ಇತರ ಪ್ರಾಣಿಗಳಿಗೂ) ಕಲ್ಯಾಣವನ್ನುಂಟುಮಾಡಿದ್ದಾನೆ......ಅತ್ಯಂತ ಪೂಜ್ಯನಾದ ಸವಿತೃವು ಸ್ವರ್ಗವನ್ನು ಪ್ರಕಾಶಿಸುವಂತೆ ಮಾಡಿದ್ದಾನೆ....."

(ಸವಿತೃದೇವನೇ ಸಪ್ತಸ್ವರ್ಗಗಳನ್ನು ಸೃಷ್ಟಿಸಿರುವನು. ನಾವೆಲ್ಲರೂ ಸೂರ್ಯ–ಪೃಥ್ವಿ ಮಧ್ಯದಲ್ಲಿ ಬಂದಿತವಾಗಿರುವೆವು.)

ಉತೇಶಿಷೇ ಪ್ರಸವಸ್ಯ ತ್ವಮೇಕ ಇದುತ ಪೂಷಾ ಭವಸಿ ದೇವ ಯಾಮಭಿಃ ।
ಉತೇದಂ ವಿಶ್ವಂ ಭುವನಂ ವಿ ರಾಜಸಿ ಶ್ಯಾವಾಶ್ವಸ್ತೇ ಸವಿತಃ ಸ್ತೋಮಮಾನಶೇ ।। (ಋ ೫–೮೧–೫ ಸಾಭಾ)

"ಎಲೈ ಸವಿತೃವೇ, ಉತ್ಪನ್ನವಾದ ಸಕಲ ಪ್ರಾಣಿಗಳಿಗೂ ನೀನೊಬ್ಬನೇ ಪ್ರಭುವಾಗಿದ್ದೀಯೆ, ನಿನ್ನ ಸಂಚಾರಕಾರ್ಯಗಳಿಂದ ನೀನೇ ಪೂಷದೇವನೆನಿಸಿಕೊಳ್ಳುತ್ತೀಯೆ. ಸಕಲ ಜಗತ್ತಿಗೂ ನೀನೇ ಸಾರ್ವಭೌಮನಾಗಿ ಎಲ್ಲವನ್ನೂ ಆಳುತ್ತೀಯೆ. ಎಲೈ ಶ್ಯಾವಾಸ್ವಋಷಿಯು ನಿನ್ನನ್ನುದ್ದೇಶಿಸಿ ಈ ಸ್ತುತಿಯನ್ನರ್ಪಿಸುತ್ತಾನೆ.."

(ದ್ಯಾವಾಪೃಥ್ವಿಗೂ ಭೌತಿಕ ಶರೀರಗಳಿಗೂ ಪ್ರಭುವಾಗಿದ್ದಾನೆ.)

ಈ ಕೆಳಗಿನ ಸೂರ್ಯ–ಸವಿತೃವಿನ ಮಂತ್ರವಾದ ವಿಶ್ವಾಮಿತ್ರ ಗಾಯತ್ರೀ ಮಂತ್ರವು ಗುರು ಮಂತ್ರವೆಂದು ಖ್ಯಾತಿಯನ್ನು ಗಳಿಸಿದೆ. ಭಾರತದ ಬಹು ಪಾಲು ಜನರು ಗಾಯತ್ರೀ ಸಾಧನೆಯಲ್ಲಿ ತೊಡಗಿದ್ದಾರೆ. ಆ ಮಂತ್ರವು ಹೀಗಿದೆ.

"ಓಂ ಭೂಃರ್ಭುವಃ ಸ್ವಃ
ತತ್ಸವಿತುರ್ವರೇಣ್ಯಂ,
ಭರ್ಗೋ ದೇವಸ್ಯ ಧೀಮಹಿ,
ಧಿಯೋ ಯೋನಃ ಪ್ರಚೋದಯಾತ್."

"ಓಂ, ದ್ಯಾವಾಪೃಥ್ವೀಅಂತರಿಕ್ಷಲೋಕಗಳನ್ನು ವ್ಯಾಪಿಸಿರುವ, ಸೂರ್ಯಮಂಡಲಾಂತರ್ಗತವಾಗಿರುವ, ಸವಿತೃ ದೇವನ ಶ್ರೇಷ್ಟವಾದ ಭರ್ಗವೆಂಬ ಪಾಪದಾಹಕ ತೇಜಸ್ಸನ್ನು ಧರಿಸುತ್ತೇವೆ, ಧ್ಯಾನಿಸುತ್ತೇವೆ, ನಮ್ಮ ಧಿ (ಬುದ್ಧಿ) ಶಕ್ತಿಯನ್ನು (ಶುಭಕರ್ಮಗಳತ್ತ/ಅಮರತ್ವದತ್ತ) ಪ್ರೇರಣೆಗೊಳಿಸಲಿ."

ಈ ಪರಮಪವಿತ್ರವಾದ ಮಂತ್ರದ ಮೂಲಕ ಸವಿತೃ ದೇವನ ಅನುಗ್ರಹವನ್ನು ಸಾಧಕನು ಪಡೆಯುತ್ತಾನೆ. ನಾವು ಅಜ್ಞಾನದಿಂದ ಅಥವಾ ಸಂಕಲ್ಪದ ಕೊರತೆಯಿಂದ ಮತ್ತು ನಮ್ಮ ಪಾಪಗಳಿಂದ ವರುಣ ದೇವರ ಅವಕೃಪೆಗೆ ಪಾತ್ರರಾಗಿದ್ದರೂ ಸವಿತೃ ದೇವರ ಕೃಪೆಯಿಂದ ಪಾಪಗಳಿಂದ ಮುಕ್ತಿಯನ್ನು ಪಡೆಯುತ್ತೇವೆ. ಏಕೆಂದರೆ ದೇವತೆಗಳು ನಮ್ಮನ್ನು ಸೃಷ್ಟಿಸಿದ ಉದ್ದೇಶ ನಮ್ಮನ್ನು ಶಿಕ್ಷಿಸುವುದಕ್ಕಲ್ಲ, ನಮ್ಮ ಆತ್ಮದ ಆಸೆಯನ್ನು ಪೂರೈಸಿಕೊಳ್ಳಲು ನಮಗೆ ಸ್ಥೂಲಶರೀರವನ್ನು ಅನುಗ್ರಹಿಸಿದ್ದಾರೆ. ಆದ್ದರಿಂದ ಅವರ ಮಹಿಮೆಯನ್ನರಿತು, ಅವರ ಕೃಪೆಗೆ ಪಾತ್ರರಾಗಿ ಅಮರತ್ವವನ್ನು ಪಡೆಯಲು. ಯಾವಾಗ ನಾವು ಸವಿತೃ ದೇವರ ಕೃಪೆಗೆ ಪಾತ್ರರಾಗುತ್ತೇವೋ ಆಗ ಸವಿತೃ ದೇವರು ನಮ್ಮ ಪಾಪಗಳನ್ನು ನಾಶಮಾಡಿ, ಆದಿತ್ಯರಿಗೆ ನಾವು ಪಾಪರಹಿತರೆಂದು ಘೋಷಿಸಿ ನಮಗೆ ಉನ್ನತ ಸ್ವರ್ಗವನ್ನು ಅನುಗ್ರಹಿಸುತ್ತಾನೆ.

ಆದ್ದರಿಂದ ನಾವು ಪವಿತ್ರರಾಗಿರಲಿ ಅಥವಾ ಅಪವಿತ್ರರಾಗಿರಲಿ ದ್ವಿಸಂದ್ಯಾಕಾಲದಲ್ಲಿ ಸವಿತೃವಿನ ಜಪವನ್ನೂ ಮನನವನ್ನೂ ಮಾಡಿ ಸವಿತೃವಿನ ಕೃಪೆಗೆ ಪಾತ್ರರಾಗಬೇಕು. ಈ ಮಂತ್ರವು ನಮ್ಮ ಪ್ರಾಣಗಳನ್ನು ರಕ್ಷಣೆ ಮಾಡುತ್ತದೆ ಯಾದುದರಿಂದ, ಬೇರೆ ಯಾವುದಾದರು ಸಾಧನೆ ಮಾಡಿ ಪ್ರಾಣೋತ್ಕ್ರಮಣ ಅಥವಾ ಪ್ರಾಣದಿಂದ ಇನ್ನಿತರ ತೊಂದರೆಗೆ ಒಳಗಾಗಿದ್ದರೆ, ಗಾಯತ್ರೀ ಮಂತ್ರ ಸಾಧನೆಯಿಂದ ತಮ್ಮ ತೊಂದರೆಗಳಿಂದ ಮುಕ್ತಿಯನ್ನು ಪಡೆಯಬಹುದು. ಏಕೆಂದರೆ ಸೂರ್ಯಮಂಡಲ ಮಧ್ಯದಲ್ಲಿ ವಾಯುವಿರುವನು, ಆದ್ದರಿಂದ ಸೂರ್ಯನಿಂದ ಸತತವಾಗಿ ಪ್ರಾಣವು ಹೊರಹೊಮ್ಮುತ್ತಿರುತ್ತದೆ. ಆ ಪ್ರಾಣದ ಮಹಿಮೆಯು ನಮ್ಮ ಪಿಂಡಾಂಡದ ಪ್ರಾಣದಿಂದುಂಟಾದ ತೊಂದರೆಗಳನ್ನು ನಿವಾರಿಸುತ್ತದೆ.

ಅಚಿತ್ತೀ ಯಚ್ಛಕೃಮಾ ದೈವ್ಯೇ ಜನೇ ದೀನೈರ್ದಕ್ಷೈಃ ಪ್ರಭೂತೀ ಪೂರುಷತ್ವತಾ ।
ದೇವೇಷು ಚ ಸವಿತರ್ಮಾನುಷೇಷು ಚ ತ್ವಂ ನೋ ಅತ್ರ ಸುವತಾದನಾಗಸಃ ।।
"ಎಲೈ ಸವಿತೃವೇ, ಅಜ್ಞಾನದಿಂದಾಗಲಿ, ಅಭಿಮಾನದಿಂದಾಗಲಿ, ಅಶಕ್ತಿಯಿಂದಾಗಲಿ ಮನುಷ್ಯ ಸಹಜವಾದ ದೌರ್ಬಲ್ಯದಿಂದಾಗಲಿ ನಾವು ಪಾಪಮಾಡಿದರೆ ಅದನ್ನು ಕ್ಷಮಿಸು. ದೈವೀಪುರುಷನನ್ನಾಗಲಿ, ದೇವತೆಗಳನ್ನಾಗಲಿ, ನಾವು ನಿಂದಿಸಿದರೆ ಅದನ್ನು ಕ್ಷಮಿಸು. ನಮಗೆ ಕೆಡುಕಾಗದಿರಲಿ." (೪-೫೪-೩ ಸಾಭಾ)

ಅಸ್ಯ ಹಿ ಸ್ವಯಶಸ್ತರಂ ಸವಿತುಃ ಕಚ್ಚನ ಪ್ರಿಯಂ ।
ನ ಮಿನಂತಿ ಸ್ವರಾಜ್ಯಂ ।। (ಋ ೫-೮೨-೨ ಸಾಭಾ)
"ತನ್ನ ಮಹಿಮೆಯಿಂದಲೇ ಅಸಾಧಾರಣವಾದ ಯಶಸ್ಸಿಗೆ ಕಾರಣವಾಗಿರುವುದೂ, ಲೋಕಕ್ಕೆಲ್ಲಾ ಪ್ರಿಯಕರ ವಾದುದೂ ಆದ ಸವಿತೃವಿನ ಸಾರ್ವಭೌಮತ್ವವನ್ನೂ ಐಶ್ವರ್ಯವನ್ನೂ ಯಾವ ವಿರೋಧಿಯೂ ಹಿಂಸಿಸಲಾರನು."

ಗಾಯತ್ರೀ ಮಂತ್ರವು ನಮಗೆ ಸಪ್ತಮಸ್ವರ್ಗವಾದ ಸತ್ಯಲೋಕವನ್ನೂ ಅನುಗ್ರಹಿಸಿದರೂ, ಅಮರತ್ವವನ್ನು ಅನುಗ್ರಹಿಸುವುದಿಲ್ಲ ಎಂಬುದನ್ನು ಮನಗಾಣಬೇಕು. ಅಮರತ್ವವೆಂದರೆ ಜನನಮರಣದಿಂದ ಮುಕ್ತಿಯನ್ನು ಪಡೆದು ನೇರವಾಗಿ ಇಂದ್ರನ ಲೋಕವನ್ನು ಪ್ರವೇಶಿಸುವುದು. ಅಮರತ್ವವನ್ನು ಪಡೆಯಬೇಕಾದರೆ ಅಂತರ್‌ಯಜ್ಞವನ್ನು ಮಾಡಿ ಸೂಕ್ಷ್ಮದ್ವಾರವನ್ನು ತಿಳದುಕೊಂಡು ಆನಂತರ ನಮ್ಮ ಆತ್ಮವನ್ನು ಅದರೊಳಗೆ ತೆಗೆದುಕೊಂಡು ಹೋಗಿ ವಿರಾಟ್‌ಪುರುಷನ ಶಿರಸ್ಸಿನ ಮೇಲಿರುವ ಚಂದ್ರಮಂಡಲದ ಮೂಲಕ ಬೆಳಕಿನ ಲೋಕವಾದ ಇಂದ್ರಲೋಕಕ್ಕೆ ಹೋಗಬೇಕು.

ಭೌತಿಕ ಪ್ರಪಂಚದ ಪ್ರಜಾಪತಿಯಾಗಿ ಸವಿತೃದೇವನನ್ನು ಪುರಾತನ ಕಾಲದಿಂದಲೂ ಅನೇಕ ಮಹನೀಯರು ಹೊಗಳಿರುವರು. ಆದರೆ ಈ ಮಹನೀಯರೆಲ್ಲರೂ ಸೂರ್ಯರಕ್ಷಕನಾದ ಇಂದ್ರನ ಮಹಿಮೆಯನ್ನು ತಿಳಿಯದವರಾಗಿದ್ದಾರೆ. ಸಕಲ ಸೃಷ್ಟಿ, ಸ್ಥಿತಿ ಮತ್ತು ಲಯಕ್ಕೆ ಕಾರಣಕರ್ತನಾದ ಇಂದ್ರನ ಮಹಿಮೆಯನ್ನು ತಿಳಿಯದಾಗಿದ್ದಾರೆ. ಎಂಥಹ ವಿಪರ್ಯಾಸ.

### ಭಗದೇವತೆ

ಸೂರ್ಯ-ಸವಿತೃವಿನಲ್ಲಿರುವ ಆನಂದರಸವನ್ನು ಭಗದೇವತೆಯು ಅನುಗ್ರಹಿಸುತ್ತಾನೆ. ಈ ಆನಂದರಸವು ಮೊಸರು ಮಿಶ್ರಿತ ಹಾಲಿನ ಸ್ವರೂಪದಲ್ಲಿದೆ. ಭಗನ ಆನಂದ ರಸವನ್ನು ಈ ಕೆಳಗಿನ ಮಂತ್ರವು ಅನುಗ್ರಹಿಸುತ್ತದೆ. ಈ ಮಂತ್ರವನ್ನು ವಶಿಷ್ಠ ಗಾಯತ್ರೀ ಮಂತ್ರವೆಂದು ಕರೆಯಲಾಗುತ್ತದೆ.

"ಓಂ ತತ್ಸವಿತುರ್ವೃಣೀಮಹೇ ವಯಂ ದೇವಸ್ಯ ಭೋಜನಂ ।
ಶ್ರೇಷ್ಠಂ ಸರ್ವಧಾತಮಂ ತುರಂ ಭಗಸ್ಯ ಧೀಮಹಿ ।। (ಋ ೫-೮೨-೧ ಸಾಭಾ)
"ದೇವಾತ್ಮನಾದ ಸವಿತೃವಿನ ಪ್ರಸಿದ್ಧವಾದುದೂ, ಭೋಗಕ್ಕೆ ಯೋಗ್ಯವಾದುದು ಆದ ಐಶ್ವರ್ಯವನ್ನು ಪಡೆಯುವುದಕ್ಕಾಗಿ ನಾವು ಆಪೇಕ್ಷಿಸಿ ಪ್ರಾರ್ಥಿಸುತ್ತೇವೆ. ಪೂಜ್ಯನಾದ ಭಗನ ಅತ್ಯುತ್ತಮವಾದುದೂ, ಅತಿಶಯವಾಗಿ ಭೋಗಕ್ಕೆ ಯೋಗ್ಯವಾದುದು, ಶತ್ರುಹಿಂಸಕವಾದುದೂ ಆದ ಧನವನ್ನು ನಾವು ಹೊಂದುವಂತಾಗಲಿ."

ಸೂರ್ಯನು ನಮ್ಮ ಹೃದಯದಲ್ಲಿ ಪರಿಪೂರ್ಣವಾಗಿ ಪ್ರಕಟವಾಗಿದ್ದರೆ, ಸೂರ್ಯಮಂಡಲವನ್ನು ಸಪ್ತಮಸ್ವರ್ಗದಲ್ಲಿ ಸ್ಥಾಪಿಸಬೇಕು. ಆಗ ಈ ಮಂತ್ರ ಪಠಣದಿಂದ ಹಾಲು-ಮೊಸರು ಮಿಶ್ರಿತ ಆನಂದ ರಸವು ಸೂರ್ಯಮಂಡಲದಿಂದ ಹರಿಯುತ್ತದೆ.

### ಪೂಷಣ್ (ಸೂರ್ಯಕಿರಣದ ದೇವತೆ)

ಸೂರ್ಯಕಿರಣದ ಅಧಿದೇವತೆಯಾದ ಪೂಷಣ್ ದೇವತೆಯು ಪ್ರವಾಹರೂಪದಲ್ಲಿ ಸೂರ್ಯಮಂಡಲದಿಂದ ಹರಿಯುತ್ತಿರುವನು. ವಾಯುದೇವರ ಪ್ರಾಣಶಕ್ತಿ ಮತ್ತು ಅಗ್ನಿಗೋಳದ ಶಾಖವೇ ಕಿರಣಗಳ ಮೂಲಕ ಹರಿಯುತ್ತಾ ಪೃಥ್ವಿಯನ್ನೂ ಮತ್ತು ಸಕಲ ಜೀವರಾಶಿಗಳನ್ನು ಪೋಷಿಸುತ್ತಿರುವನು. ಪೂಷಣ್ ದೇವತೆಯ ಮಹಿಮೆಯನ್ನು ಈ ಕೆಳಗಿನ ಮಂತ್ರಗಳಿಂದ ತಿಳಿಯೋಣ.

ಏಹಿ ವಾಂ ವಿಮುಚೋ ನಪಾದಾಘೃಣೇ ಸಂ ಸಚಾವಹೈ ।
ರಥೀರ್ಋತಸ್ಯ ನೋ ಭವ ।। (ಋ ೬-೫೫-೧ ಸಾಭಾ)

"ಸೃಷ್ಟಿಕಾಲದಲ್ಲಿ ಸಕಲ ಭೂತಗಳನ್ನೂ ಸೃಷ್ಟಿಸತಕ್ಕ ಪ್ರಜಾಪತಿಗೆ (ಸೂರ್ಯ/ಸವಿತೃ) ಪುತ್ರರೂಪನೂ, ಅದ್ಭುತವಾದ ಪ್ರಕಾಶವುಳ್ಳವನೂ ಆದ ಎಲೈ ಪೂಷದೇವನೇ, ನಿನ್ನ ಸ್ತುತಿಕರ್ತನಾದ ನನ್ನ ಸಮೀಪಕ್ಕೆ ದಯಮಾಡು. ನಾವಿಬ್ಬರೂ ಸೇರಿಕೊಂಡು ಒಟ್ಟಿಗಿರೋಣ. ನೀನು ನಮ್ಮ ಯಜ್ಞಕ್ಕೆ ನೇತೃವಾಗಿರು."

ರಾಯೋ ಅರಾಸಾಖುಣೇ ವಸೋ ರಾಸಿರಜಾಶ್ವ।
ಧೀವತೋಧಿವತಃ ಸಖಾ ।।(ಋ ೬-೫೫-೩ ಸಾಭಾ)
"ಪ್ರಭಾಯುತನಾದ ಎಲೈ ಪೂಷದೇವನೇ, ಧನಕ್ಕೆಲ್ಲಾ (ರಶ್ಮಿಗಳಗೆಲ್ಲಾ) ನೀನೆ ಪ್ರವಾಹರೂಪನಾಗಿದ್ದೀಯೇ. ಅಜರೂಪನಾದ ಅಶ್ವನಾಗಿದ್ದೀಯೆ (ಹುಟ್ಟದೇ ಇರುವ ಅಂದರೆ ಅನಾದಿಯಾದ ವಾಯು). ಎಲೈ ಪೂಷನ್ ಧನಕ್ಕೆಲ್ಲಾ ರಶ್ಮಿಗಳಗೆಲ್ಲಾ) ನೀನೇ ರಾಶಿರೂಪನಾಗಿದ್ದೀಯೆ. ಸಕಲ ವಿಧವಾದ ಸ್ತೋತೃಗಳಗೂ ನೀನೇ ಮಿತ್ರನಾಗಿದ್ದೀಯೆ."

ಪೂಷಣಂ ನ್ವ ಅಜಾಶ್ವಮುಪ ಸ್ತೋಷಾಮ ವಾಜಿನಂ ।
ಸ್ವಸೂರ್ಯೋ ಜಾರ ಉಚ್ಯತೇ ।। (ಋ ೬-೫೫-೪ ಸಾಭಾ)
"ಯಾವ ಪೂಷದೇವನು ತನ್ನ ಸಹೋದರಿಯಾದ ಉಷಸ್ಸಿಗೆ ಪ್ರೀತಿಯುಳ್ಳವನೆಂದು ಪ್ರಸಿದ್ಧನಾಗಿದ್ದಾನೆಯೋ ಅಂತಹ ಅಜರೂಪನಾದ ವಾಹನವುಳ್ಳವನೂ, ಶಕ್ತಿಯುತನೂ, ಪೋಷಕನೂ ಆದ ಪೂಷದೇವನನ್ನು ಈಗ ಸ್ತುತಿಸಿ ಪೂಜಿಸೋಣ."

ಮಾತುರ್ದಿಧಿಷುಮಬ್ರವಂ ಸ್ವಸುರ್ಜಾರಃ ಶೃಣೋತು ನಃ ।
ಭ್ರಾತೇಂದ್ರಸ್ಯ ಸಖಾ ಮಮ ।। (ಋ ೬-೫೫-೫ ಸಾಭಾ)
"ಮಾತೆಯಾದ ರಾತ್ರಿಯನ್ನು ಅರ್ಥಮಾಡಿಕೊಳ್ಳುವ (ಪತಿಯಾದ) ಪೂಷನನ್ನು ನಾನು ಸ್ತುತಿಸುತ್ತೇನೆ. ಸಹೋದರಿಯಾದ ಉಷಸ್ಸಿಗೆ ಪ್ರೀತಿಪಾತ್ರನಾದ ಪೂಷನು ನಮ್ಮ ಸ್ತೋತ್ರಗಳನ್ನು ಕೇಳಲಿ. ಇಂದ್ರನಿಗೆ ಸಹೋದರನಾದ ಪೂಷನು ಸ್ತೋತೃವಾದ ನನಗೆ ಮಿತ್ರನಾಗಿರಲಿ."

ಯಾವ ಕಾರಣಕ್ಕೆ ಪೂಷನ್ ದೇವತೆಯನ್ನು ಇಂದ್ರ ಸಹೋದರನೆಂದು ಕರೆಯುತ್ತಾರೆಂದು ಮತ್ತು ಇಂದ್ರನ ಮತ್ತು ಇತರ ದೇವತೆಗಳ ಜೊತೆ ಇರುವ ಸೂಕ್ತಗಳು ಯಾವ ಕಾರಣಕ್ಕೆ ಋಗ್ವೇದದಲ್ಲಿದೆ ಎಂದು ತಿಳಯೋಣ.

- ಇಂದ್ರನೂ ಸಹ ಜ್ಯೋತಿರೂಪದವನಾದುದರಿಂದ ಇಂದ್ರಜ್ಯೋತಿಯ ಕಿರಣವು ಪೂಷಣ್ ಆಗಿದ್ದಾನೆ.
- ಇದೇ ರೀತಿ ಇಂದ್ರಜ್ಯೋತಿಯು ಅಗ್ನಿಜ್ವಾಲೆಯೇ ಆಗಿರುವುದರಿಂದ ಇಂದ್ರ-ಅಗ್ನಿಯ ಸೂಕ್ತವನ್ನು ಋಗ್ವೇದದಲ್ಲಿ ನೋಡುತ್ತೇವೆ.
- ಅವ್ಯಕ್ತಸ್ವರೂಪನಾದ ಇಂದ್ರನು ವಾಯುವಿನ ಶರೀರವನ್ನು ಧರಿಸಿರುವುದರಿಂದ ಇಂದ್ರ-ವಾಯುವನ್ನು ಜೊತೆಯಾಗಿ ಉಪಾಸನೆಯನ್ನು ಮಾಡುತ್ತಾರೆ. ಇಂದ್ರನ ನಂತರ ವಾಯುವೇ ಶ್ರೇಷ್ಟನಾದುದರಿಂದ ಇಂದ್ರನ ತರುವಾಯ ವಾಯುವಿಗೆ ಸೋಮರಸವನ್ನು ಅರ್ಪಿಸುತ್ತಾರೆ.
- ಇಂದ್ರನು ಬ್ರಹ್ಮಾಂಡದ ಚಕ್ರವರ್ತಿಯಾಗಿರುವನು ವರುಣನು ಸಾಮಂತ ರಾಜನಾಗಿ, ಸರ್ವತಂತ್ರ ಸ್ವತಂತ್ರನಾಗಿ, ಉದಕಗಳ ಅಧಿಪತಿಯಾಗಿ, ಭೌತಿಕ ಪ್ರಪಂಚದ ಮೇಲೆ ತನ್ನ ಪ್ರಭುತ್ವವನ್ನು ಸ್ಥಾಪಿಸಿ ಆಳುತ್ತಿರುವನು. ಆ ಕಾರಣದಿಂದ ಮಾನವರ ಪಾಪ-ಪುಣ್ಯಗಳ ಫಲವನ್ನು ಕೊಡುತ್ತಿರುವನು. ಆದ್ದರಿಂದ ಇಂದ್ರ-ವರುಣರನ್ನು ಜೊತೆಗೂಡಿ ಆಹುತಿಗಳನ್ನು ಅರ್ಪಿಸುವ ಋಗ್ವೇದ ಸೂಕ್ತಗಳನ್ನು ನೋಡುತ್ತೇವೆ.
- ಇದೇ ರೀತಿ ಇಂದ್ರ-ಸೋಮ ಇತ್ಯಾದಿ ಇತರ ದೇವತೆಗಳ ಜೊತೆಯಲ್ಲಿ ಹೊಗಳರುವ ಸೂಕ್ತವಿದೆ. ಏಕೆಂದರೆ ಇಂದ್ರನು ಆದಿಪುರುಷನಾದುದರಿಂದ ಆತನ ಸಖ್ಯವು ಎಲ್ಲಾ ದೇವತೆಗಳ ಜೊತೆಯಲ್ಲಿಯೂ ಇದೆ. ಅದೂ ಅಲ್ಲದೇ ಇಂದ್ರನು ತನ್ನ ಮಾನಸಿಕ ಶಕ್ತಿಯಿಂದ ಸಕಲ ದೇವತೆಗಳನ್ನೂ ಮತ್ತು ಇಡೀ ವಿಶ್ವನ್ನೇ ವ್ಯಾಪಿಸಿಕೊಂಡಿದ್ದಾನೆ.

## ಉಷಸ್ ದೇವತೆ

ಅರುಣೋದಯದ ದೇವತೆಯೇ ಉಷಸ್ ದೇವತೆಯಾಗಿದ್ದಾಳೆ. ತೇಜಸ್ಸಿನಿಂದ ಯುಕ್ತಳಾಗಿ, ಪೂರ್ವದಿಕ್ಕಿನಲ್ಲಿ ಕಾಣಿಸಿಕೊಂಡು ಸಕಲ ಜೀವರಾಶಿಗಳಗೂ ಆನಂದವನ್ನುಂಟು ಮಾಡುತ್ತಾಳೆ. ಬೆಳಗಿನ ಜಾವದಲ್ಲಿ ಅಶ್ವಿನೀ ದೇವತೆಗಳು ಮೊದಲು ಆಗಮಿಸಿ ಭೂಮಿಯನ್ನು ಮಧುವಿನಿಂದ ತುಂಬುತ್ತಾರೆ, ತರುವಾಯ ಉಷಸ್ ದೇವತೆಯು ಉದಯಿಸುವಳು. ತೇಜಸ್ವಿಯೂ, ವಿಶಿಷ್ಟ ಪ್ರಕಾಶಮಾನಳು, ಕೆಂಪು ವರ್ಣದವಳು ಆದ ಉಷಸ್ ದೇವತೆಯು ಪೃಥ್ವಿಯನ್ನು ತೇಜೋವಂತಳನ್ನಾಗಿ ಮಾಡುತ್ತಾಳೆ. ಉಷಸ್ಸಿನ ಆಗಮನದ ನಂತರವೇ ಸೂರ್ಯನ ಆಗಮನವಾಗುತ್ತದೆ. ಬೆಳಗಿನ ಅರುಣೋದಯ ಸಮಯದಲ್ಲಿ ಸೂರ್ಯ ಮಂಡಲವು ಅರುಣವರ್ಣದಿಂದ ಕಂಗೊಳಸುತ್ತದೆ.

ಉಷಸ್ ದೇವತೆಯ ಪ್ರಮುಖ ಕಾರ್ಯ, ಕತ್ತಲೆಯನ್ನು ದೂರಮಾಡುವುದು. ಮುಂಜಾನೆಯ ಸಂಧ್ಯಾಕಾಲದಲ್ಲಿ ಅಶ್ವಿನೀದೇವತೆಗಳನ್ನು ಉಷಾದೇವಿಯು ಹಿಂಬಾಲಿಸುವಳು. ಉಷೆಯ ಆಗಮನದಿಂದ ಯಜಮಾನನಲ್ಲಿ ಮುಚ್ಚಿರುವ ಸಕಲ ದೈವೀ ದ್ವಾರಗಳು ತೆರೆಯಲ್ಪಡುವುವು. ಉಷಾದೇವಿಯ ಜೊತೆ ಜೊತೆಯಲ್ಲಿ ಮಿತ್ರಾದೇವನು ಬರುವನು. ಉಷೆಯ ನಂತರ ಸವಿತೃ ದೇವನು ಬರುವರು. ಉಷೋದೇವಿಯ ಕರ್ತವ್ಯ ಬೆಳಕನ್ನು ಪ್ರಸರಿಸುವುದು ಮತ್ತು ತಮಸ್‌ನ್ನು ಚದುರಿಸಿ ಸೂರ್ಯನ ಮುಂಭಾಗದಲ್ಲಿ ಹೋಗುವುದು ಆಗಿದೆ.

ಉದು ಶ್ರಿಯ ಉಷಸೋ ರೋಚಮಾನಾ ಅಸ್ಥುರಪಾಂ ನೋರ್ಮಯೋ ರುಶಂತಃ ׀
ಕೃಣೋತಿ ವಿಶ್ವಾ ಸುಪಥಾ ಸುಗಾನ್ಯಭೂದು ವಸ್ವೀ ದಕ್ಷಿಣಾ ಮಘೋನೀ ׀׀ (ಋ ೬-೬೪-೧ ಸಾಭಾ)
"ಆಕರ್ಷಕವಾದ ರೂಪವುಳ್ಳವಳೂ, ಶುಭ್ರವರ್ಣಳೂ ಆದ ಉಷೆಯು ಜಗತ್ತಿಗೆ ಕಾಂತಿಯನ್ನುಂಟು ಮಾಡಲು ಉದಕಗಳ ಅಲೆಗಳಂತೆ ಉದ್ಭವಿಸುತ್ತಾಳೆ. ಉಷಸ್ಸು ಸಕಲ ಸ್ಥಾನಗಳನ್ನೂ ಉತ್ತಮವಾದ ಮಾರ್ಗಗಳುಳ್ಳ ವನ್ನಾಗಿಯೂ, ಸುಲಭವಾಗಿ ಸಂಚರಿಸಲು ಯೋಗ್ಯವಾದವನ್ನಾಗಿಯೂ ಮಾಡುತ್ತಾಳೆ. ಧನಯುಕ್ತಳಾದ ಉಷಸ್ಸು ಪ್ರಶಸ್ತಳಾಗಿಯೂ ಸಂಪತ್ಸಮೃದ್ಧಿಯನ್ನುಂಟು ಮಾಡುವಳೂ ಆಗುತ್ತಾಳೆ."

ಭದ್ರಾ ದದೃಕ್ಷ ಉರ್ವಿಯಾವಿ ಭಾಸ್ಯುತೇ ಶೋಚಿರ್ಭಾನವೋ ದ್ಯಾಮಪಪ್ತನ್ ׀
ಅವಿರ್ವಕ್ಷಃ ಕೃಣುಷೇ ಶುಂಭಮಾನೋಷೋದೇವಿ ರೋಚಮಾನಾ ಮಹೋಭಿಃ ׀׀ (ಋ ೬-೬೪-೨ ಸಾಭಾ)
"ಎಲೈ ಉಷೋದೇವಿಯೇ, ನೀನು ಜಗತ್ತಿಗೆಲ್ಲಾ ಕಲ್ಯಾಣರೂಪದಲ್ಲಿ ಗೋಚರಳಾಗಿದ್ದೀಯೆ. ಅತ್ಯಂತ ವಿಸ್ತೃತವಾದ ಸ್ವರೂಪವುಳ್ಳವಳಾಗಿ ಕಾಂತಿಯಿಂದ ಬೆಳಗುತ್ತೀಯೆ. ಪ್ರಕಾಶಮಾನವಾದ ನಿನ್ನ ರಶ್ಮಿಗಳು ಅಂತರಿಕ್ಷವನ್ನೆಲ್ಲಾ ವ್ಯಾಪಿಸಿ ಹರಡಿದೆ. ಎಲೈ ಉಷೋದೇವಿಯೇ, ನಿನ್ನ ತೇಜಸ್ಸುಗಳಿಂದ ಕಂಗೊಳಿಸುತ್ತಾ ಆಕರ್ಷಕವಾದ ರೂಪವುಳ್ಳವಳಾಗಿ ನಿನ್ನ ಸ್ವರೂಪವನ್ನು ಪ್ರಕಟಿಸುತ್ತೀಯೆ."

ಉತ್ತೇ ವಯಶ್ಚಿದ್ವಸತೇರಪಪ್ತನ್ನರಶ್ಚ ಯೇ ಪಿತುಭಾಜೋ ವ್ಯುಷ್ಟೌ ׀
ಅಮಾ ಸತೇ ವಹಸಿ ಭೂರಿ ವಾಮಮುಷೋ ದೇವಿ ದಾಶುಷೇ ಮರ್ತ್ಯಾಯ ׀׀ (ಋ ೬-೬೪-೬ ಸಾಭಾ)
"ಎಲೈ ಉಷೋದೇವಿಯೇ, ನಿನ್ನ ಆವಿರ್ಭಾವ ಕಾಲದಲ್ಲಿ ಪಕ್ಷಿಗಳೂ ಕೂಡ ತಮ್ಮ ನಿವಾಸ ಸ್ಥಾನಗಳಿಂದ ಹಾರಿ ಹೋಗುತ್ತವೆ. ಅನ್ನ ಸಂಪಾದನೆಯಲ್ಲಿ ನಿರತರಾದ ಮಾನವರೂ ಪ್ರಬುದ್ಧರಾಗಿ ಎದ್ದು ಓಡಾಡುತ್ತಾರೆ. ಎಲೈ ಉಷಸ್ಸೇ, ನಿನ್ನ ಸಮೀಪದಲ್ಲಿದ್ದು ನಿನಗೆ ಹವಿಸ್ಸನ್ನರ್ಪಿಸುವ ಯಜಮಾನನಿಗೆ ಅಧಿಕವಾಗಿ ಆಪೇಕ್ಷಿತವಾದ ಧನವನ್ನು ತೆಗೆದುಕೊಂಡು ಬಾ."

ಉಷೋ ಯದದ್ಯ ಭಾನುನಾ ವಿ ದ್ವಾರಾವೃಣವೋ ದಿವಃ ׀
ಪ್ರನೋ ಯಚ್ಛತಾದವೃಕಂ ಪೃಥು ಚ್ಛರ್ದಿಃ ಪ್ರ ದೇವಿ ಗೋಮತೀರಿಷಃ ׀׀ (ಋ ೧-೪೮-೧೫ ಸಾಭಾ)
"ಎಲೈ ಉಷೋದೇವಿಯೇ, ಈ ಪ್ರಭಾತಕಾಲದಲ್ಲಿ ನೀನು ತಮಸ್ಸನ್ನು ನಾಶಮಾಡುವ ನಿನ್ನ ಪ್ರಭೆಯಿಂದ ಕೂಡಿಕೊಂಡು, ಕತ್ತಲಿನಿಂದ ಆವರಿಸಲ್ಪಟ್ಟ ಪೂರ್ವಾಪರಗಳೆಂಬ ಅಂತರಿಕ್ಷದ ಎರಡು ಬಾಗಿಲುಗಳನ್ನು ತೆರೆದುಕೊಂಡು ನಮ್ಮ ಉಪಕಾರಕ್ಕಾಗಿ ಬಂದಿದ್ದೀಯೆ. ಆದ್ದರಿಂದ ನಮಗೆ ನೆಮ್ಮದಿಯುಳ್ಳದ್ದೂ ವಿಸ್ತಾರವುಳ್ಳದ್ದೂ, ಬೆಳಕಿನಿಂದ ಕೂಡಿದ್ದೂ ಆದ ವಾಸಸ್ಥಾನವನ್ನು ಕೊಡು. ಎಲೈ ದೇವಿಯೇ ಬಹಳ ಗೋವುಗಳನ್ನೂ (ಜ್ಞಾನ) ಅನ್ನಗಳನ್ನೂ ಅನಿಗ್ರಹಿಸು."

ಮೇಲಿನ ಮಂತ್ರಗಳು ಪೃಥ್ವಿಯ ಮೇಲೆ ಆಗುವ ಅರುಣೋದಯವನ್ನು ಹೊಗಳಿವೆ. ಇದೇ ರೀತಿ ಅಂತರ್ ಯಜ್ಞ ಮಾಡುವಾಗ ನಮ್ಮ ಶರೀರದ ಒಳಗಡೆಯೂ ಸಹ ದ್ಯಾವಾಪೃಥ್ವಿಯು ಅರುಣ ವರ್ಣದಿಂದ ಕಂಗೊಳಿಸುತ್ತದೆ. ಆಕೆಯು ಮಾತೆಯ ರೂಪದಲ್ಲಿ ಪ್ರಕಟವಾಗಿ ಅಂತರ್‌ಯಜ್ಞಕ್ಕೆ ಬರುತ್ತಾಳೆ.

## ಅಶ್ವಿನೀದೇವತೆಗಳು

ಸೂರ್ಯನು ಉದಯಿಸುವ ಸುಮಾರು ೬೦ ನಿಮಿಷಗಳ ಮೊದಲೇ ಅಶ್ವಿನೀ ದೇವತೆಗಳ ಆಗಮನವಾಗುತ್ತದೆ. ಅಶ್ವಿನೀದೇವತೆಗಳು ಅವಳಿ ದೇವತೆಗಳಾಗಿದ್ದಾರೆ. ಅಶ್ವಿನೀದೇವತೆಗಳು ಸೂರ್ಯೋದಯ ಕಾಲದ ಮೊದಲೇ ಇನ್ನೂ ಕತ್ತಲಿರುವಾಗಲೇ ಬರುವರು. ಪ್ರಾತಃಕಾಲದ ದೇವತೆಗಳಾಗಿ ಅವರು ಕತ್ತಲನ್ನು ಹೋಗಲಾಡಿಸುವರು ಮತ್ತು ಯಜ್ಞಶಾಲೆಗೆ ಬರುವರು. ಸಂಧ್ಯಾಕಾಲದ ಪ್ರಥಮ ಭಾಗದಲ್ಲೇ ಬಂದು ಪೃಥ್ವಿಯನ್ನು ಮಧುವಿನಿಂದ ತುಂಬುವರು.

ಅಶ್ವಿನೀದೇವತೆಗಳಿಗೂ ಮಧುವಿಗೂ ಸಂಬಂಧವಿದೆ. ಮಧುವಿನಿಂದ ತುಂಬಿದ ತೊಗಲಿನ ಚೀಲವು ಅವರ ಬಳಿ ಇದೆ. ಅಲ್ಲಲ್ಲಿ ರಂಧ್ರವಿರುವ ಆ ಚೀಲವನ್ನು ಹೆಗಲ ಮೇಲೆ ಹೊತ್ತು ಸೂರ್ಯೋದಯಕ್ಕೆ ಮೊದಲೇ ಆಗಮಿಸಿ ಪೃಥ್ವಿಯನ್ನು ಮಧುವಿನಿಂದ ತುಂಬುತ್ತಾರೆ. ಇದೇ ರೀತಿ ಅವರು ಯಜಮಾನನ ಶರೀರದಲ್ಲಿ ಸಂಚರಿಸುತ್ತಾ, ಸೂಕ್ಷ್ಮಶರೀರವನ್ನೂ,

ಅಂತರ್‌ಯಜ್ಞದ ಕುಂಡವನ್ನು ಮಧುವಿನಿಂದ ತುಂಬುವರು. ಇವರು ತಮ್ಮ ಮೂರುಕಾಲಿನ ಚಕ್ರದ ರಥದಲ್ಲಿ ಮನೋವೇಗದಿಂದ ಸಂಚರಿಸುವರು. ಅವರ ರಥವು ಮಧುವಿನ ಬಣ್ಣದಂತಿರುವುದರಿಂದ ಅದನ್ನು ಮಧುವಾಹನ ಎಂದು ಕರೆಯುತ್ತಾರೆ.

ಸವಿತೃ ದೇವನು ಅರುಣೋದಯಕ್ಕೆ ಮುಂಚೆ ಅಶ್ವಿನೀದೇವತೆಗಳ ರಥವನ್ನು ಚಲಿಸುವಂತೆ ಮಾಡುತ್ತಾನೆ. ಈ ಕಾರಣದಿಂದಲೇ ಬೆಳಗಿನ ಸಂಧ್ಯಾಕಾಲವು ಆಧ್ಯಾತ್ಮಸಾಧನೆಗೂ ಮತ್ತು ಯಜ್ಞಕ್ಕೂ ಅತಿ ಶ್ರೇಷ್ಠವಾಗಿದೆ. ಅಶ್ವಿನೀ ದೇವತೆಗಳು ಯಜ್ಞಶಾಲೆಗೆ ಬರುವಂತೆ ಪ್ರಾರ್ಥಿಸುವುದು ಅವರಿಗೆ ಸಹಜವಾದ ಉಷಃಕಾಲದಲ್ಲಿ ಮಾತ್ರವಲ್ಲ ಬೆಳಗ್ಗೆ, ಮಧ್ಯಾಹ್ನ ಮತ್ತು ಸೂರ್ಯಾಸ್ತಮಾನ ಕಾಲಗಳಲ್ಲಿಯೂ ಬರಬೇಕೆಂದು ವೇದದಲ್ಲಿ ಪ್ರಾರ್ಥಿಸಿದೆ. ಈಗ ಕೆಲವೊಂದು ಮಂತ್ರಗಳನ್ನು ನೋಡೋಣ.

ತ್ರಿರ್ವರ್ತಿರ್ಯಾತಂ ತ್ರಿರನುವ್ರತೇ ಜನೇ ತ್ರಿಃ ಸುಪ್ರಾವ್ಯೇ ತ್ರೇಧೇವ ಶಿಕ್ಷತಂ ।
ತ್ರಿರ್ನಾನ್ದ್ಯಂ ವಹತಮಶ್ವಿನಾ ಯುವಂ ತ್ರಿಃ ಪೃಕ್ಷೋ ಅಸ್ಮೇ ಅಕ್ಷರೇವ ಪಿವತಂ ।। (ಋ ೧-೩೪-೧ ಸಾಭಾ)
"ಅಶ್ವಿನೀದೇವತೆಗಳೇ, ಪ್ರತಿದಿನವೂ ಮೂರು ಸಲ ನಮ್ಮ ಮತ್ತು ನಮಗೆ ಒಳ್ಳೆಯದನ್ನು ಮಾಡುವವರ ಮನೆಗೆ ದಯಮಾಡಿ ಅನುಗ್ರಹಿಸಿ. ನಾವು ರಕ್ಷಣೆ ಯೋಗ್ಯರು. ಅಂತಹ ನಮಗೆ ಮೂರು ಪ್ರಕಾರಗಳಿಂದ ಜ್ಞಾನವನ್ನು ಉಪದೇಶ ಮಾಡಿ. ನಮಗೆ ಅನ್ನವನ್ನು (ದೈವದತ್ತವಾದ ಕೊಡುಗೆ) ಸಹ ದಿನಕ್ಕೆ ಮೂರುಸಲ ಕೊಡಿ."

ಅ ನಾಸತ್ಯಾ ಗಚ್ಛತಂ ಹೂಯತೇ ಹವಿರ್ಮಧ್ವಃ ಪಿಬತಂ ಮಧುಪೇಭಿರಾಸಭಿಃ ।
ಯುವೋರ್ಹಿ ಪೂರ್ವಂ ಸವಿತೋಷಸೋ ರಥಮೃತಾಯ ಚಿತ್ರಂ ಘೃತವಂತಮಿಷ್ಯತಿ।। (ಋ ೧–೩೪–೧೦ ಸಾಭಾ)
"ಎಲೈ ಅಶ್ವಿನೀದೇವತೆಗಳೇ, ನಮ್ಮ ಯಜ್ಞಕ್ಕೆ ದಯಮಾಡಿ, ನಾವು ನಿಮಗೆ ಮಧುರವಾದ ಹವಿಸ್ಸುಗಳನ್ನು ಅರ್ಪಿಸುತ್ತೇವೆ. ಯಾವಾಗಲು ಮಧುರರಸ ಪಾನಮಾಡುವ ನಿಮ್ಮ ಬಾಯಿಂದ ಈ ಹವಿಸ್ಸನ್ನು ಕುಡಿಯಿರಿ. ಇದಕ್ಕೋಸ್ಕರವೇ ಸೂರ್ಯನು ಉಷಃಕಾಲಕ್ಕೆ ಮೊದಲೇನೇ ನಿಮ್ಮ ರಥವನ್ನು ನಿಮಗೆ ಕಳುಹಿಸುತ್ತಾನೆ. ಆ ರಥದ ಮೂರು ಚಕ್ರದ ಗಾಲಿಯು ಸುಖವಾಗಿ ತಿರುಗುವಂತೆ ಮಾಡುವ ಎರೆ ಎಣ್ಣೆಯಿಂದಲೂ ಕೂಡಿರುತ್ತದೆ."

(ಉಷಃಕಾಲಕ್ಕೆ ಮೊದಲೇ ಆಗಮಿಸುವರು.)

ಆ ನಾಸತ್ಯಾ ತ್ರಿಭಿರೇಕಾದಶೈರಿಹ ದೇವೇಭಿರ್ಯಾತಂ ಮಧುಪೇಯಮಶ್ವಿನಾ ।
ಪ್ರಾಯುಸ್ತಾರಿಷ್ಟಂ ನೀ ರಪಾಂಸಿ ಮೃಕ್ಷತಂ ಸೇಧತಂ ದ್ವೇಷೋ ಭವತಂ ಸಚಾಭುವ ।। (ಋ ೧–೩೪–೧೧ ಸಾಭಾ)
"ಎಲೈ ಅಶ್ವಿನೀದೇವತೆಗಳೇ, ನೀವು ಯಾವಾಗಲು ಅಸತ್ಯವನ್ನು ನುಡಿಯುವವರಲ್ಲ. ನೀವು ೩೩ ದೇವತೆಗಳೊಂದಿಗೆ ಮಧುರವಾದ ಸೋಮರಸವನ್ನು ಕುಡಿಯಲು ನಮ್ಮ ಈ ಯಜ್ಞಭೂಮಿಗೆ ದಯಮಾಡಿ. ನಮ್ಮ ಆಯಸ್ಸನ್ನು ವೃದ್ಧಿಮಾಡಿ ನಮ್ಮ ಪಾಪಗಳನ್ನು ತೊಳೆದು ನಮ್ಮನ್ನು ಶುದ್ಧರನ್ನಾಗಿ ಮಾಡಿ ನಮ್ಮ ಶತ್ರುಗಳನ್ನು ತಡೆಯಿರಿ. ನಮ್ಮ ಜೊತೆಯಲ್ಲಿಯೇ ಇರಿ."

ಯಜ್ಞದ ಮೊದಲಿಗೆ ಬರುವ ದೇವತೆಗಳು ಇವರು. ಈ ದೇವತೆಗಳ ಹೆಸರು ದಸ್ರಾ (ಆಶ್ಚರ್ಯಕರವಾದ) ಮತ್ತು ನಾಸತ್ಯಾ (ಅನೃತ ಭಾಷಣ ಮಾಡದಿರುವವರು) ಎಂದಾಗಿದೆ. ಅಶ್ವಿನೀದೇವತೆಗಳು ಯಜ್ಞವನ್ನು ಮುನ್ನಡೆಸುವವರು ಮತ್ತು ಆನಂದದ ಅಧಿದೇವತೆಗಳಾಗಿದ್ದಾರೆ. ಈ ದೇವತೆಗಳ ವಿಶೇಷಣಗಳು

ಶುಭಸ್ಪತೀ: ಅಂದರೆ ಯಜ್ಞಪಾಲಕರು
ನಾಸತ್ಯಾ: ಅನೃಥ ಭಾಷಣಮಾಡದಿರುವವರು
ಪುರುಭುಜಾ: ಅನೇಕರನ್ನು ರಕ್ಷಿಸುವವರು ಮತ್ತು
ನರಾ: ಮಾನವರ ಮಿತ್ರರು ಮತ್ತು ಮಾರ್ಗದರ್ಶಕರು ಎಂದು ಋಗ್ವೇದವು ಸಂಬೋಧಿಸುತ್ತದೆ.

ಇವರು ವಿಶೇಷವಾಗಿ ದೇವ ವೈದ್ಯರೆಂದು ಕರೆಯಲ್ಪಟ್ಟಿದ್ದಾರೆ. ದೇವ ವೈದ್ಯರಾದ ಅವರು ಮಾನವರ ಮಿತ್ರರು ಮತ್ತು ತಮ್ಮ ಶಕ್ತಿಯಿಂದ ರೋಗಗಳನ್ನು ನಿವಾರಿಸುವರು ಆಗಿದ್ದಾರೆ. ತಮ್ಮ ಔಷಧಿಗಳಿಂದ ಭಕ್ತರ ರೋಗಗಳನ್ನು ಗುಣಪಡಿಸುತ್ತಾರೆ. ಇವರು ಕುರುಡರು, ಖಾಯಿಲೆಯುಳ್ಳವರು ಮತ್ತು ಊನವಾದ ಅಂಗವುಳ್ಳವರನ್ನೆಲ್ಲಾ ಸರಿಪಡಿಸುತ್ತಾರೆ. ಇವರು ತಮ್ಮ ಅನೇಕ ಸಾಹಸ ಕಾರ್ಯಗಳನ್ನು ಮಾಡುವವರು (ಪುರುದಂಸಸಾ), ಮಹಾ ಬುದ್ಧಿವಂತರೂ, ಮಾರ್ಗದರ್ಶಕರೂ ಮತ್ತು ಧೈರ್ಯಶಾಲಿಗಳೂ ಆಗಿದ್ದಾರೆ.

ಆರ್ತರಿಗೆ ಸಹಾಯ ಮಾಡುವುದರಲ್ಲಿ ಅಗ್ರಗಣ್ಯರು. ದುಃಖದಿಂದ ಬಿಡುಗಡೆ ಮಾಡುವುದರಲ್ಲಿಯೂ, ಸಹಾಯ ನೀಡುವುದರಲ್ಲಿಯೂ, ಇವರಷ್ಟು ಚುರುಕಾದವರು ಯಾರೂ ಇಲ್ಲ. ಇಂತಹ ಕಾರ್ಯಗಳಿಗಾಗಿ ಸದಾಸ್ತುತರು. ಇವರು ಒಳ್ಳೆಯ ಜ್ಞಾನಿಗಳು ಮತ್ತು ಮಾಯಾಶಕ್ತಿಯುಳ್ಳವರು. ಯಜಮಾನನು ಯಾವುದಾದರೂ ಸಂದಿಗ್ಧ ಪರಿಸ್ಥಿತಿಯಲ್ಲಿ

ಸಿಕ್ಕಿಹಾಕಿಕೊಂಡಾಗ ಬುದ್ಧಿಮತ್ತೆಯಿಂದ ಮತ್ತು ಶೌರ್ಯದಿಂದ ಮುನ್ನುಗ್ಗಿ ಕಾಪಾಡುವರು. ಈ ಕಾರಣದಿಂದಲೇ ಇವರನ್ನು ಮಾನವರ ಮಿತ್ರರೆಂದು ಕರೆದಿರುವುದು.

ಅವರ ಮಹಿಮೆಗಳು ಅನೇಕವಾಗಿವೆ. ಸಂಕ್ಷಿಪ್ತವಾಗಿ ಹೇಳಬೇಕೆಂದರೆ ಅವರ ಅನುಗ್ರಹವನ್ನು ಪಡೆದ ಯಜಮಾನನು ಯಾವುದಾದರೂ ತೊಂದರೆಗೆ ಒಳಗಾಗಿದ್ದರೆ, ರೋಗಪೀಡಿತನಾಗಿದ್ದರೆ, ಯುದ್ಧದಲ್ಲಿ ಅಂಗವಿಹೀನವಾಗಿದ್ದರೆ ಅಥವಾ ಇನ್ನಾವುದೇ ಕಾರಣಕ್ಕೆ ಸಂಕಷ್ಟದಲ್ಲಿದ್ದರೆ ಅಶ್ವಿನೀದೇವತೆಗಳು ಅವರನ್ನು ಪಾರುಮಾಡುತ್ತಾರೆ. ಅವರ ಕೆಲವು ಮಹತ್ಕಾರ್ಯಗಳನ್ನು ನೋಡೋಣ;

- ಶ್ಯಾವ ಎಂಬುವನ ಊನವಾದ ಶರೀರವನ್ನು ಅಶ್ವಿನೀದೇವತೆಗಳು ಸರಿಪಡಿಸಿದರು.
- ಬಂಜೆತನದಿಂದ ಕೂಡಿದ ಹಸುವನ್ನು ಹಾಲು ಕೊಡುವಂತೆ ಮಾಡಿ ಋಷಿ ಶಂಯುವನ್ನು ಅನುಗ್ರಹಿಸಿದರು.
- ವಿಮದ ಎಂಬುವಳಿಗೆ ವರನನ್ನು ಅಶ್ವಿನೀದೇವತೆಗಳು ಹುಡುಕಿ ತಂದರು.
- ಋಷಿ ಋಜ್ರಶವ ಎಂಬುವರ ಕಣ್ಣನ್ನು ಅಶ್ವಿನೀದೇವತೆಗಳು ಗುಣಪಡಿಸಿದರು.
- ಭುಜ್ಯು ಎಂಬುವನು ಸಮುದ್ರದಲ್ಲಿ ಮುಳುಗುತ್ತಿದ್ದಾಗ ಅವನನ್ನು ಅಶ್ವಿನೀದೇವತೆಗಳು ರಕ್ಷಿಸಿದರು.
- ರಾಜ ಅಂತಕನನ್ನು ಶತ್ರುಗಳು ಹಿಂಸಿಸುತ್ತಿದ್ದಾಗ ಅಶ್ವಿನೀದೇವತೆಗಳು ಅವನನ್ನು ರಕ್ಷಿಸಿದರು.
- ಮುದುಕರಾಗಿದ್ದ ಚ್ಯವನ ಋಷಿಗಳಿಗೆ ಮತ್ತೆ ನವತಾರುಣ್ಯವನ್ನು ಅನುಗ್ರಹಿಸಿದರು.
- ರೇಭ ಎಂಬುವನ ಕೈಕಾಲುಗಳನ್ನು ಕಟ್ಟಿಹಾಕಿ ನೀರಿನಲ್ಲಿ ಬಿಸಾಕಿದಾಗ ಅವನನ್ನು ರಕ್ಷಿಸಿದರು.
- ಋಷಿ ಕಣ್ವರನ್ನು ಅಂಧಕಾರದಿಂದ ಕೂಡಿದ ಆಳವಾದ ಬಾವಿಗೆ ಎಸೆದಿದ್ದಾಗ ಅವರನ್ನು ರಕ್ಷಿಸಿದರು.
- ವಂದನ ಎಂಬುವನನ್ನೂ ಸಹ ರೇಭನಂತೆ ಕಷ್ಠದಲ್ಲಿ ಸಿಕ್ಕಿಹಾಕಿಕೊಂಡಿದ್ದಾಗ ಅಶ್ವಿನೀದೇವತೆಗಳು ರಕ್ಷಿಸಿದರು.
- ಗೋತಮ ಎಂಬ ಋಷಿಯು ಬಾಯಾರಿಕೆಯಿಂದ ಬಳಲುತ್ತಿದ್ದಾಗ ಅವನಿಗೆ ಬಾವಿಯಿಂದ ನೀರನ್ನು ತೆಗೆದು ಕೊಟ್ಟರು.
- ಅತ್ರಿಋಷಿಯು ತಮ್ಮ ಶರೀರದಲ್ಲಿ ಉಂಟಾದ ಅತ್ಯುಷ್ಣತೆಯಿಂದ ಬಳಲುತ್ತಿದ್ದಾಗ ಅವರ ಶರೀರವನ್ನು ತಂಪಾಗಿಸಿದರು.
- ಅಶ್ವಿನೀದೇವತೆಗಳು ಕಾಲಿಲ್ಲದವರಿಗೆ ಕಾಲನ್ನೂ, ಕಣ್ಣಿಲ್ಲದವರಿಗೆ ಕಣ್ಣನ್ನೂ, ಅಂಗವಿಕಲರಾದವರಿಗೆ ಅದರಿಂದ ಮುಕ್ತಿಯನ್ನು ಕೊಡುತ್ತಾರೆ.

ಒಟ್ಟಿನಲ್ಲಿ ಅಶ್ವಿನೀದೇವತೆಗಳು ತಮ್ಮನ್ನು ಆರಾಧಿಸುವವರ ರೋಗ ನಿವಾರಣೆ ಮಾಡುವರು, ಅಂಗವಿಹೀನ ವಾದರೆ ಹೊಸ ಅಂಗವನ್ನು ಜೋಡಿಸುವರು, ಅಶ್ವಿನೀದೇವತೆಗಳು ಬಂಧೀಖಾನೆಯಲ್ಲಿರುವ ತನ್ನ ಭಕ್ತರನ್ನು ಬಂಧೀಖಾನೆಯಿಂದ ತಕ್ಷಣ ಮಾಯವಾಗುವಂತೆ ಮಾಡಿ ಸುರಕ್ಷಿತ ಸ್ಥಳದಲ್ಲಿ ಸೇರಿಸುವರು. ಕಷ್ಟದಲ್ಲಿ ಸಿಕ್ಕಿಹಾಕಿಕೊಂಡಿರುವಾಗ ಅವರನ್ನು ಕಷ್ಟದಿಂದ ಬಿಡಿಸುವರು. ಪುರಾತನ ಋಷಿಗಳ ಪ್ರಕಾರ ಅಶ್ವಿನೀದೇವತೆಗಳು ದುಃಖತಪ್ತರ ಅಭಿಮುಖವಾಗಿ ಹೋಗಿ ಕಾಪಾಡುತ್ತಾರೆ.

ಆದ್ದರಿಂದ ಋಷಿಗಳು ಈ ಮುಂದಿನ ಪ್ರಶ್ನೆಯನ್ನೂ ಕೇಳುತ್ತಾರೆ: ಅಶ್ವಿನೀದೇವತೆಗಳಲ್ಲದೆ ಉಳಿದ ಯಾವ ದೇವನು ತಾನೆ ನಮ್ಮನ್ನು ಸುಖಪಡಿಸುತ್ತಾನೆ?

## ಮರುತ್ ದೇವತೆಗಳು

ಮರುತ್ ದೇವತೆಗಳು ಇಂದ್ರನ ಸೈನಿಕರಾಗಿದ್ದಾರೆ. ಇವರು ರುದ್ರಪುತ್ರರೂ ದ್ಯಾವಾಪೃಥ್ವಿಗಳಿಂದ ಜನಿಸಿದವರು ಆಗಿದ್ದಾರೆ. ಬೃಹಸ್ಪತಿ, ಬ್ರಹ್ಮಣಸ್ಪತಿ ಮತ್ತು ಸರಸ್ವತಿಯು ನಮ್ಮ ಶರೀರದಲ್ಲಿ ಆವಿರ್ಭವಿಸಿದಾಗ ಅವರು ತಮ್ಮ ಮಂತ್ರಶಕ್ತಿ ಮತ್ತು ಜ್ಞಾನದಿಂದ ನಮ್ಮ ಸುತ್ತಲಿರುವ ಅಂಧಕಾರದ ಕೋಟೆಯನ್ನು ನಾಶಪಡಿಸುತ್ತಾರೆ. ಈ ದೇವತೆಗಳೆಲ್ಲರೂ ತಮ್ಮ ಜ್ಞಾನ ಮತ್ತು ಮಂತ್ರಶಕ್ತಿಯಿಂದ ಅಂಧಕಾರದ ಕೋಟೆಯನ್ನು ನಾಶಮಾಡಲು ಕಾರಣ ಮರುತ್ ದೇವತೆಗಳಾಗಿದ್ದಾರೆ.

ಬ್ರಹ್ಮಣಸ್ಪತಿ ಮತ್ತು ಸರಸ್ವತಿ ದೇವತೆಗಳ ಆವಿರ್ಭಾವಾದಾಗ ಅವರ ಜೊತೆಯಲ್ಲಿ ಮರುದ್ಗಣಗಳೂ ಸಹ ಬರುವರು. ಇವರ ಆಗಮನದಿಂದ ದ್ಯಾವಾಪೃಥಿವಿಗಳೂ, ಪರ್ವತಗಳೂ ತರಗೆಲೆಯಂತೆ ಕಂಪಿಸುತ್ತವೆ. ಇವರು ಬರುವ ರಭಸವನ್ನು ತಡೆದುಕೊಳ್ಳುವುದಕ್ಕೆ ದ್ಯಾವಾಪೃಥ್ವಿಗಳಿಗೇ ಅಸಾಧ್ಯವಾಗಿರುವಾಗ ಯಜಮಾನನು ಹೇಗೆ ತಾನೆ ಇವರ ಆಗಮನವನ್ನು ತಡೆದುಕೊಳ್ಳಬಲ್ಲನು. ಮರುದ್ಗಣಗಳು ನಮ್ಮ ಶರೀರದಲ್ಲಿ ಅಗ್ನಿ ವಾಯುಗಳನ್ನು ತೀವ್ರತರದಲ್ಲಿ ಜಾಗೃತಿಯಾಗುವಂತೆ ಮಾಡುವರು.

ಯೇ ಅಗ್ನಯೋ ನ ಶೋಶುಚನ್ನಿಧಾನಾ ದ್ವಿರ್ಯತ್ತ್ರಿರ್ಮರುತೋ ವಾವೃಧಂತ ।
ಅರೇಣವೋ ಹಿರಣ್ಯಾಸ ಏಷಾಂ ಸಾಕಂ ನೃಮ್ಣೈಃ ಪೌಂಸೇಭಿಶ್ಚ ಭೂವನ್ ।। (ಋ ೬-೬೬-೨ ಸಾಭಾ)

"ಅಗ್ನಿಗಳಂತೆ ಪ್ರಜ್ವಲಿಸುತ್ತಾ ಪ್ರಕಾಶಿಸುವವರೂ, ದ್ವಿಗುಣಿತವಾಗಿಯೂ, ತ್ರಿಗುಣಿತವಾಗಿಯೂ ವೃದ್ಧಿಯನ್ನು ಹೊಂದತಕ್ಕವರೂ ಆದ ಮರುತ್ತುಗಳ ರಥಗಳು ರೇಣುರಹಿತವಾಗಿಯೂ, ಸುವರ್ಣನಿರ್ಮಿತವಾಗಿಯೂ ಇರುತ್ತವೆ. ಆದೇ ಮರುತ್ತುಗಳು ಧನಗಳೊಡನೆಯೂ, ಶಕ್ತಿಗಳೊಡನೆಯೂ ಕೂಡಿಕೊಂಡು ಪ್ರಾದುರ್ಭವಿಸುತ್ತಾರೆ."

ನ ಯ ಈಷಂತೇ ಜನುಷೋಅಯಾ ನ್ವಅಂತಃ ಸಂತೋಅವದ್ಯಾನಿ ಪುನಾನಾ ।
ನಿರ್ಯದ್ದುಹ್ರೇ ಶುಚಯೋಅನು ಜೋಷಮನು ಶ್ರಿಯಾ ತನ್ವಮುಕ್ಷಮಾಣಾಃ ।।
"ಯಾವ ಮರುತ್ತುಗಳು ಸಕಲ ಜನರ ಹೃದಯದೊಳಗೂ ಅಂತರ್ಗತರಾಗಿದ್ದು ಅವರವರ ಪಾಪಗಳನ್ನೆಲ್ಲಾ ಶೋಧಿಸುತ್ತಿರುವರೋ (ಪ್ರಭುವು ಹೃದಯದೊಳಗಿರುವನು ಎಂಬುದನ್ನು ಗಮನಿಸಿ) ಅಂತಹ ಶುದ್ಧಿಕಾರಕರಾದ ಮರುತ್ತುಗಳು ಸ್ತೋತೃಜನಕ್ಕಭಿಮುಖವಾಗಿ ಗಮನಸಾಧನವಾದ ರಥಗಳಲ್ಲಿ ಹೋಗಬೇಕಾದ ಶ್ರಮವೇ ಇರುವುದಿಲ್ಲ. ಯಾವಾಗ ಪ್ರಕಾಶಮಾನರಾದ ಮರುತ್ತುಗಳು ಸ್ತುತಿಕರ್ತರ ಇಷ್ಟಾನುಸಾರವಾಗಿ ಅತಿಶಯವಾದ ವೃಷ್ಟಿಯನ್ನು ಕರೆಯುವರೋ ಆಗ ಕಾಂತಿಯಿಂದ ಕೂಡಿದವರಾಗಿ ತಮ್ಮ ಶರೀರವನ್ನು ಪ್ರಕಾಶಪಡಿಸುತ್ತಾ ವೃಷ್ಟಿಯನ್ನು ಸುರಿಸುವವರಾಗಿದ್ದಾರೆ." (೬-೬೬-೪ ಸಾಭಾ)

ಯಜಮಾನನ ಶರೀರದಲ್ಲಿ ಮರುದ್ಗಣಗಳು ಪ್ರಕಟವಾದರೆ, ಅವನಿಗೆ ಮುಪ್ಪಾಗಿದ್ದರೂ, ಶರೀರದಲ್ಲಿ ಜೀವರಸವಿಲ್ಲದಿದ್ದರೂ ಮರುದ್ದೇವತೆಗಳು ಅವನ ಶರೀರದಲ್ಲಿ ಅಮೃತರೂಪವಾದ ಮಳೆಯನ್ನು ಸುರಿಸುವರು. ಮರುದ್ದೇವತೆಗಳು ತಿಳಿಯಾದ, ಶುಭ್ರವಾದ, ಸ್ವರ್ಗದಲ್ಲಿ ಹರಿಯುತ್ತಿರುವ ನಾಲ್ಕು ನದಿಗಳಲ್ಲಿ ಒಂದಾದ ತಿಳಿನೀರಿನ ಆನಂದರಸವನ್ನು ಯಜಮಾನನ ಶರೀರದಲ್ಲಿ ಸುರಿಸುವರು.

ಸತ್ಯಂ ತ್ವೇಷಾ ಅಮವಂತೋ ಧನ್ವಞ್ಚಿದಾ ರುದ್ರಿಯಾಸಃ ।
ಮಿಹಂಕೃಣ್ವನ್ತ್ಯವಾತಾಂ ।। (ಋ ೧-೩೮-೭ ಸಾಭಾ)
"ಪ್ರಕಾಶಮಾನರೂ, ಶಕ್ತಿಯುತರೂ ಆದ ರುದ್ರಪುತ್ರರು ಮರುಭೂಮಿಯಲ್ಲಿಯೂ ಸಹ ಗಾಳಿಯಿಲ್ಲದೆ ಮಳೆಯನ್ನು ಸುರಿಸುತ್ತಾರೆ. ಇದು ಸತ್ಯವು."

ನನ್ನ ಉದಾಹರಣೆಯನ್ನೇ ಕೊಡುವುದಾದರೆ ೧೯೯೦ರಲ್ಲಿ ಕುಂಡಲಿನಿಯೋಗ ಸಾಧನೆಯಲ್ಲಿ ವಿಫಲ ಪ್ರಯತ್ನವನ್ನು ಮಾಡಿದಾಗ ಉಂಟಾದ ಜಾಗೃತಿಯ ವೇಳೆ ನನ್ನ ಶರೀರದಲ್ಲಿ ಅಗ್ನಿ ವಾಯುಗಳು ಎಷ್ಟು ತೀವ್ರವಾಗಿ ಜಾಗೃತವಾಯಿತೆಂದರೆ ಅದನ್ನು ಊಹಿಸಲೂ ಸಾಧ್ಯವಿಲ್ಲ. ನಾನು ನೌಕಾದಳದಲ್ಲಿದ್ದಾಗ ಹಡಗಿನಲ್ಲಿರುವ ಅಶುದ್ಧ ಗಾಳಿಯನ್ನು ಹೊರಹಾಕುವ ಯಂತ್ರದ (ಎಕ್ಸಹಾಸ್ಟ್ ಫ್ಯಾನ್) ಮುಂದೆ ನಿಂತಾಗ ಉಂಟಾದ ಅನುಭವದ ತೀವ್ರತೆಯಂತೆ, ಅಗ್ನಿ ಮತ್ತು ವಾಯುಗಳು ರಭಸದಿಂದ ಜಾಗೃತವಾದವು. ಮರುತ್ತುಗಳ ಈ ಜಾಗೃತಿಯಿಂದಲೇ ನಾನು ಮಂತ್ರಚೈತನ್ಯವನ್ನು ಪಡೆದಿರಬಹುದು ಎಂದು ಭಾವಿಸುತ್ತೇನೆ.

ನಮ್ಮನ್ನು ಆವರಿಸಿಕೊಂಡಿರುವ ಅಂಧಕಾರದ ಕೋಟೆಯು ಶಿಥಿಲವಾಗುತ್ತದೆ ಮತ್ತು ನಮ್ಮ ಸೂಕ್ಷ್ಮಶರೀರದ ಇನ್ನೊಂದು ಆಯಾಮ ತೆರೆದುಕೊಳ್ಳುತ್ತದೆ. ಮರುತ್ತರ ಜಾಗೃತಿಯಾಗದೇ ಯಾರೂ ತಮ್ಮ ಸಾಧನೆಯಲ್ಲಿ ಮುಂದುವರೆಯುವುದು ಸಾಧ್ಯವಿಲ್ಲ. ಏಕೆಂದರೆ ದೇವತೆಗಳು ನಮ್ಮಲ್ಲಿ ಪ್ರಕಟವಾಗಬೇಕಾದರೆ ನಮ್ಮಲ್ಲಿ ಅಗ್ನಿ, ವಾಯು ಮತ್ತು ಸೂರ್ಯರು ಜಾಗೃತರಾಗಬೇಕು. ಅದಕ್ಕೆ ಮರುತ್ತರು ನಮ್ಮಲ್ಲಿ ಮೊದಲು ಜಾಗೃತರಾಗಬೇಕು.

ತ್ರ್ಯರ್ಯಮಾ ಮನುಷೋ ದೇವತಾತಾ ತ್ರೀ ರೋಚನಾ ದಿವ್ಯಾ ಧಾರಯಂತ ।
ಅರ್ಚಂತಿ ತ್ವಾ ಮರುತಃ ಪೂತದಕ್ಷಾಸ್ತ್ವಮೇಷಾಮೃಷಿರಿಂದ್ರಾಸಿ ಧೀಃ ।। (ಋಗ್ವೇದ ೫-೨೯-೧ ಸಾಭಾ)
"ಮನುವಿಗೆ (ಮಾನವನಿಗೆ) ಸಂಬಂಧಿಸಿದುದೂ, ದೇವತೆಗಳನ್ನು ಪೂಜಿಸತಕ್ಕದ್ದೂ ಆದ ಯಜ್ಞದಲ್ಲಿ ಮೂರು ತೇಜಸ್ಸುಗಳು ಸ್ಥಿತವಾಗಿವೆ. **ಮರುತ್ತುಗಳು ಅಂತರಿಕ್ಷಸ್ಥವಾದುದೂ ಅಗ್ನಿವಾಯ್ವಾದಿತ್ಯರೂಪವಾದುದೂ ಆದ ಮೂರು ತೇಜಃಪುಂಜಗಳನ್ನು ಧರಿಸಿದ್ದಾರೆ**. ಎಲೈ ಇಂದ್ರನೇ, ಪರಿಶುದ್ಧವಾದ ಬಲವುಳ್ಳ ಮರುತ್ತುಗಳು ನಿನ್ನನ್ನು ಪೂಜಿಸುತ್ತಾರೆ. ಆ ಮರುತ್ತುಗಳಿಗೆ ನೀನೇ ಪ್ರಜ್ಞಾವಂತನಾದ ಋಷಿಯಾಗಿದ್ದೀಯೆ."

ಇಂತಹ ಮಹಿಮೆಯಿಂದ ಕೂಡಿರುವ ಮರುತ್ ದೇವತೆಗಳು ಶೌರ್ಯವಂತರು, ಸಾಹಸಿಗಳು ಮತ್ತು ಅನೇಕ ವಿಧವಾದ ಶಸ್ತ್ರಾಸ್ತ್ರವನ್ನು ಧರಿಸಿರುವರು. ಇವರ ಸಂಖ್ಯೆಯು ಒಂದು ಕಡೆ ೬೩ ಎಂದೂ ಕೆಲವು ಕಡೆ ೨೧ ಎಂದೂ ವೇದದಲ್ಲಿ ಹೇಳಿದೆ. ಅಸುರರ ಜೊತೆಯಲ್ಲಿ ಯುದ್ಧಮಾಡುವಾಗ ತಮ್ಮ ಸಂಖ್ಯೆಯನ್ನು ವೃದ್ಧಿಸಿಕೊಳ್ಳುತ್ತಾರೆ ಎಂದು

ಭಾವಿಸುತ್ತೇನೆ. ಇವರಲ್ಲಿ ಜ್ಯೇಷ್ಠ ಅಥವಾ ಕನಿಷ್ಠವೆಂಬ ವ್ಯತ್ಯಾಸವಿಲ್ಲ. ಎಲ್ಲರೂ ಸಮಾನ ಭ್ರಾತೃಗಳೂ, ಸಮಾನ ವಯಸ್ಕರೂ ಮತ್ತು ಏಕ ಮನಸ್ಕರೂ ಆಗಿದ್ದಾರೆ. ಮರುತ್ ದೇವತೆಗಳ ತೇಜಸ್ಸು ಅಪರಿಮಿತವಾಗಿದೆ. ಇವರು ಸೂರ್ಯನಂತೆ ಕಾಂತಿಯುಳ್ಳವರೂ, ಹಿರಣ್ಯವರ್ಣದವರೂ ಆಗಿದ್ದಾರೆ.

ಇವರ ಭುಜದ ಮೇಲೆ ಭಲ್ಲೆಗಳು, ಕಾಲಿನಲ್ಲಿ ಕಾಲಂದಿಗೆಗಳೂ, ಎದೆಯ ಮೇಲೆ ಚಿನ್ನದ ಆಭರಣಗಳೂ, ಕೈಯಲ್ಲಿ ಕೆಂಡಕಾರುತ್ತಿರುವ ಸಿಡಿಲುಗಳೂ ಕೊಡಲಿ, ಧನುರ್ಬಾಣ ಇತ್ಯಾದಿ ಆಯುಧಗಳೂ, ತಲೆಯ ಮೇಲೆ ಶಿರಸ್ತ್ರಾಣಗಳೂ ಇವೆ (೫-೫೪-೧೧). ಒಟ್ಟಿನಲ್ಲಿ ಇವರು ಸದಾ ಯುದ್ಧಸನ್ನದ್ಧರಾಗಿರುವ ಯೋಧರಂತೆ ಉತ್ಸಾಹಶಾಲಿಗಳು ಆಗಿದ್ದಾರೆ.

ಪ್ರ ಶಂಸಾ ಗೋಷ್ವಘ್ನ್ಯಂ ಕ್ರೀಳಂ ಯಚ್ಛರ್ಧೋ ಮಾರುತಂ ।
ಜಮ್ಭೇ ರಸಸ್ಯ ವಾವೃಧೇ ।।
"ಮರುದ್ದೇವತೆಗಳ ಮುಖದಲ್ಲಿ ಒಂದು ಅಸಾಧಾರಣವಾದ ತೇಜಸ್ಸಿದೆ. ಆ ತೇಜಸ್ಸು ಮರುದ್ದೇವತೆಗಳ ಮಾತೃಗಳಾದ ಪೃಶ್ನಿಯೇ ಮೊದಲಾದ ದಿವ್ಯಧೇನುಗಳ ಕ್ಷೀರದಿಂದ ಪೋಷಿತವಾದುದು. ಆದುದರಿಂದಲೇ ಅದಕ್ಕೆ ದಿವ್ಯಕಾಂತಿಯಿದೆ. ಅದನ್ನು ಶತ್ರುಗಳು ನಾಶಪಡಿಸಲು ಸಾಧ್ಯವಿಲ್ಲ. ಅದು ಅವಿನಾಶ, ಶತ್ರುನಿರೋಧಕ ಸಾಮರ್ಥ್ಯವುಳ್ಳದ್ದು. ಅದು ಯಾವಾಗಲೂ ಕ್ರೀಡೆಯಲ್ಲಿ ಆಸಕ್ತವಾಗಿ ವಿಲಾಸಯುಕ್ತವಾದುದರಿಂದ ಮರುದ್ದೇವತೆಗಳು ಆ ಆನಂದವನ್ನನುಭವಿಸಿ ತಮ್ಮ ಭಕ್ತರಿಗೂ ಆ ತೇಜಸ್ಸಿನ ಸಹಾಯದಿಂದ ಆನಂದವನ್ನು ಕೊಡುತ್ತಾರೆ. ಆ ದಿವ್ಯ ತೇಜಸ್ಸನ್ನು ಕುರಿತು ಪ್ರಶಂಶಿಸಿ ಸ್ತೋತ್ರಮಾಡಿರಿ." (೧-೩೭-೫ ಸಾಭಾ)

ಮರುತ್ತರ ಆಗಮನದಿಂದ ಅಸಾಧಾರಣವಾದ ತೇಜಸ್ಸು ಯೋಗಿಯಲ್ಲಿಯೂ ಕಾಣಿಸಿಕೊಳ್ಳುತ್ತದೆ.

ಕೋ ವೋ ವರ್ಷಿಷ್ಠ ಆ ನರೋ ದಿವಶ್ಚ ಗ್ಮಶ್ಚ ಧೂತಯಃ ।
ಯತ್ಸೀಮನ್ತಂ ನ ಧೂನುಥ ।। (ಋ ೧-೩೭-೬ ಸಾಭಾ)
"ಎಲೈ ಮರುದ್ದೇವತೆಗಳೇ, ನಿಮ್ಮ ಪರಾಕ್ರಮವು ಅತಿಮಾನುಷವಾದದ್ದು. ವೃಕ್ಷದ ತುದಿಯನ್ನು ಎಷ್ಟು ಸುಲಭವಾಗಿ ಅಲ್ಲಾಡಿಸಬಹುದೋ ಅಷ್ಟೇ ಸುಲಭವಾಗಿಯೂ ಶ್ರಮವಿಲ್ಲದೆಯೂ ನೀವು ದ್ಯುಲೋಕ ಮತ್ತು ಪೃಥ್ವಿ ಲೋಕಗಳೆರಡನ್ನೂ ಕಂಪಿಸುವಂತೆ ಮಾಡುತ್ತೀರಿ. ನೀವೆಲ್ಲರೂ ಅಸಾಧಾರಣವಾದ ಶಕ್ತಿಯಿಂದ ಕೂಡಿದ್ದರೂ ನಿಮ್ಮ ನಾಯಕನ ಬಲವು ಎಲ್ಲರ ಬಲಕ್ಕಿಂತಲೂ ಇನ್ನೂ ಅಧಿಕವಾಗಿರಬೇಕು. ನಿಮ್ಮ ಮಧ್ಯೆ ನಿಮಗೆ ಉತ್ಸಾಹ ಕೊಡತಕ್ಕ ಅಧಿಕ ಪರಾಕ್ರಮವುಳ್ಳ ಆ ನಾಯಕನು ಯಾರು?"

ಉಪೋ ರಥೇಷು ಪೃಷತೀರಯುಗ್ಧ್ವಂ ಪ್ರಷ್ಟಿರ್ವಹತಿ ರೋಹಿತಃ ।
ಆ ವೋ ಯಾಮಾಯ ಪೃಥಿವೀ ಚಿದಶ್ರೋದಬೀಭಯನ್ತ ಮಾನುಷಾಃ ।।
"ಎಲೈ ಮರುತ್ತುಗಳೇ.... ನಿಮ್ಮ ಗಮನಕ್ಕೆ ಅಂತರಿಕ್ಷವೂ ಅವಕಾಶವನ್ನು ಈವುದು. ವೇಗವಾಗಿ ಬರುವ ನಿಮ್ಮ ಗಮನವನ್ನು ಕಂಡು ಮನುಷ್ಯರು ಭಯಪಡುವುದಲ್ಲದೆ ತಮ್ಮ ಜೊತೆಯಲ್ಲಿರುವ ಇತರರಿಗೂ ಭಯವನ್ನುಂಟುಮಾಡುತ್ತಾರೆ." (೧-೩೯-೬)

ನಿ ವೋ ಯಾಮಾಯ ಮಾನುಷೋ ದಧ್ರ ಉಗ್ರಾಯ ಮನ್ಯವೇ ।
ಜಿಹೀತ ಪರ್ವತೋ ಗಿರಿಃ ।। (ಋ ೧-೩೭-೭ ಸಾಭಾ)
"ಎಲೈ ಮರುತ್ತುಗಳೇ, ಸ್ವಭಾವ ಸಿದ್ಧವಾದ ನಿಮ್ಮ ಪರಾಕ್ರಮವು ಒಟ್ಟು ಪೃಥ್ವಿವ್ಯಂತರಿಕ್ಷಗಳನ್ನೇ ಕಂಪಿಸುವಂತೆ ಮಾಡುವಾಗ, ಭೂಭೃತವಾದ ಪರ್ವತವೂ ಜರ್ಝರಿತವಾಗಿ ನಿಮ್ಮ ಶಕ್ತಿಯ ಮುಂದೆ ನಡುಗುವಾಗ, ನಿಮ್ಮ ಸಂಚಾರಕಾಲದಲ್ಲಿ ಅಶಕ್ತರಾದ ಮಾನವನು ಭಯಪಡುವುದು ಸಹಜವಾಗಿದೆ. ಆದರೂ ಸಹ ನಿಮ್ಮ ಸಂಚಾರದಿಂದ ಅವನಿಗೆ ಉಪಕಾರವಾಗುವುದರಿಂದ ಅದಕ್ಕೆ ಅಡ್ಡಿಮಾಡದೇ ನಿಮ್ಮ ಪ್ರಚಂಡವಾಗಿಯೂ, ನಿಯತವಾಗಿ ಅಲ್ಲಾಡಿಸುವ ಪ್ರವೃತ್ತಿಯುಳ್ಳದ್ದಾಗಿಯೂ ಇರುವ ಸಂಚಾರ ಕಾಲದಲ್ಲಿ ಕಂಪನದಿಂದ ಕೆಳಗೆ ಬೀಳದಿರಲೆಂದು ಅವನು ತನ್ನ ಊರೆಕಂಬವನ್ನು ಕೊಟ್ಟು ನಿಲ್ಲಿಸಿದ್ದಾನೆ."

ಈ ಕಾರಣದಿಂದಲೇ ಸಾಧನೆಯನ್ನು ಮಾಡುವಾಗ ಕೆಲವು ವೇಳೆ ಮರುತ್ತರ ಸಂಚಾರದಿಂದ ಶರೀರದಲ್ಲಿ ಕಂಪನವುಂಟಾಗುವ ಅಥವಾ ಶಕ್ತಿಯ ತೀವ್ರತೆಯು ಅತಿಯಾಗಿ ಕೆಳಗೆ ಉರುಳುವ ಸಾಧ್ಯತೆಯಿದೆ. ಆದ್ದರಿಂದಲೇ ಶರೀರವು ಕೆಳಗೆ ಬೀಳದಿರಲೆಂದು ಪದ್ಮಾಸನ ಅಥವಾ ಸಿದ್ಧಾಸನದಲ್ಲಿ ಯೋಗಿಗಳು ಕುಳಿತುಕೊಳ್ಳುವರು.

ಮರುದ್ದೇವತೆಗಳು ಯಾರಿಗೂ ಸುಲಭವಾಗಿ ಒಲಿಯುವುದಿಲ್ಲ. ಅಗ್ನಿವಾಯುಗಳ ತೀವ್ರತೆಯನ್ನು ಯೋಗಿಯು ಅನುಭವಿಸಬಹುದು ಆದರೆ ಅವರ ದರ್ಶನವಾಗುವುದಿಲ್ಲ. ಇಂದ್ರದರ್ಶನವಾದ ಮೇಲೆಯೇ ಮರುತ್ತರು ದರ್ಶನ

ಕೊಡುತ್ತಾರೆ. ಇಂದ್ರನು ವಿಶ್ವ ಸಿಂಹಾಸನದಲ್ಲಿ ಕುಳಿತಿರುವಾಗ, ಮರುದ್ದೇವತೆಗಳು ರಾಜನ ಹಿಂದೆ ನಿಲ್ಲುವ ರಾಜಭಟರಂತೆ ನಿಂತಿರುವರು. ಸೈನ್ಯದ ತುಕಡಿಯು ಮೂರು ಪಂಕ್ತಿಯಲ್ಲಿ ನಿಂತಿರುವಂತೆ ಇವರು ನಿಂತಿರುವರು.

ಸರಸ್ವತೀಮಾತೆಯ ಆವಿರ್ಭಾವವಾಗುವಾಗ ಮರುತ್ತರು ಸಹ ಜೊತೆಯಲ್ಲಿ ಬರುವರು. ಮರುತ್ತರು ಸರಸ್ವತೀಮಾತೆಯ ಹಿಂದೆ ಕಾವಲು ಭಟರಂತೆ ನಿಂತಿರುವರು. ಸರಸ್ವತೀಮಾತೆಯ ಮತ್ತು ಮರುತ್ತರ ಆರ್ಭಟದ ಕಾರಣ ಸರಸ್ವತಿಯನ್ನು ಸಿಡಿಲುಮಿಂಚಿನ ದೇವತೆ ಎಂದು ಕರೆಯುವರು. ನಿಜವಾಗಿಯೂ ಎದೆಯ ಮಧ್ಯ ಭಾಗದಲ್ಲಿ ಎಂದರೆ ನಮ್ಮ ಎಡಭಾಗದ ವಕ್ಷಸ್ಥಳದ ತೊಟ್ಟಿನಿಂದ ಓರೆಯಾಗಿ ಬಲ ವಕ್ಷಸ್ಥಳದ ಕೆಳಭಾಗದ ಕಡೆಗೆ ಸಿಡಿಲುಮಿಂಚು ಹೊಡೆಯುವುದು. ಈ ಸಿಡಿಲುಮಿಂಚಿನಂತೆ ಕಾಣುವ ನಾಡಿಯು ಅಂತರ್‌ಯಜ್ಞವನ್ನು ಮಾಡುವ ವೇಳೆಯಲ್ಲಿ ನಮ್ಮ ಆತ್ಮ ಮತ್ತು ದೇವತೆಗಳು ಊರ್ಧ್ವಲೋಕಕ್ಕೆ ಹೋಗುವ ಮತ್ತು ಬರುವ ಮಾರ್ಗವಾಗಿದೆ.

ಇಂದ್ರನು ಅಸುರರ ಮೇಲೆ ಯುದ್ಧಕ್ಕೆ ಹೋದಾಗ ಮರುದ್ದೇವತೆಗಳು ಹಿಂಬಾಲಿಸಿ ಹೋಗಿ ವೇದಘೋಷ ಗಳಿಂದ ಇಂದ್ರನನ್ನು ಯುದ್ಧಕ್ಕೆ ಪ್ರೋತ್ಸಾಹಿಸುತ್ತಾರೆ. ಇವರೂ ಸಹ ಅಸುರ ಸೈನ್ಯದ ಜೊತೆಯಲ್ಲಿ ಹೋರಾಡುವರು. ಇಂದ್ರನಿಗೆ ರಾಜಭಟರಂತೆ ಹೇಗೆ ಮರುದ್ದೇವತೆಗಳು ಇರುವರೋ ಅದೇ ರೀತಿಯಾಗಿ ವೃತಾಸುರನಿಗೂ ದಸ್ಯುಗಳೆಂಬ ಸೈನಿಕರು ವೃತಾಸುರನನ್ನು ಹಿಂಬಾಲಿಸುವರು. ಈ ಮಂತ್ರಗಳನ್ನು ನೋಡಿ.

ವೀಳು ಚಿದಾರುಜತ್ನುಭಿರ್ಗುಹಾ ಚಿದಿಂದ್ರ ವಹ್ನಿಭಿಃ।
ಅವಿಂದ ಉಸ್ರಿಯಾ ಅನು॥ (ಋ ೧-೬-೫ ಸಾಭಾ)
"ಮರುದ್ದೇವತೆಗಳು ಮಹಾಸಾಮರ್ಥ್ಯಶಾಲಿಗಳು. ಎಂಥಹ ಬಲವಾದ ಪರ್ವತಾದಿ ದುರ್ಗಮ ಸ್ಥಾನಗಳನ್ನೂ ಒಡೆದು ನಾಶಪಡಿಸಲು ಸಮರ್ಥರು, ಮತ್ತು ಸಮಸ್ತವನ್ನೂ ವಹಿಸುವ ಸಾಮರ್ಥ್ಯವುಳ್ಳವರು. ಎಲೈ ಇಂದ್ರನೇ, ನೀನು ಇಂತಹ ಮರುದ್ದೇವತೆಗಳ ಸಹಾಯದಿಂದ (ಪಣಿ ಎಂಬ ದೈತ್ಯರು ಅಪಹರಿಸಿ) ಗುಹೆಯಲ್ಲಿ ಬಚ್ಚಿಟ್ಟಿದ್ದ ಹಸುಗಳನ್ನು ಹುಡುಕಿ ತಂದಿರುವೆ."

ಇಂದ್ರೇಣ ಸಂ ಹಿ ದೃಕ್ಷಸೇ ಸಂಜಗ್ಮಾನೋ ಅಬಿಭ್ಯುಷಾ।
ಮಂದೂ ಸಮಾನವರ್ಚಸಾ॥ (ಋ ೧-೬-೭ ಸಾಭಾ)
"ಓ ಮರುದ್ಗಣದೇವತೆಗಳೇ, ನೀವು ಭಯರಹಿತರಾಗಿ ಇಂದ್ರನೊಡನೆ ಸಂಚರಿಸುತ್ತಿರುವುದು ಎಲ್ಲರಿಗೂ ಗೋಚರಿಸುತ್ತಿರುವುದು. ನೀವಿಬ್ಬರೂ ಯಾವಾಗಲೂ ಸಂತೋಷಭರಿತರಾಗಿರುವುದಲ್ಲದೆ ನಿಮ್ಮಿಬ್ಬರ ವರ್ಚಸ್ಸು ಶಕ್ತಿಸಾಮರ್ಥ್ಯಗಳು ಸಮನಾಗಿರುವುವು. ಎಂದರೆ ಇಂದ್ರನೂ ಮರುದ್ದೇವತೆಗಳಾದ ನೀವೂ ಇಬ್ಬರೂ ವರ್ಚಸ್ವಿಗಳು, ಶಕ್ತಿಸಾಮರ್ಥ್ಯಗಳಲ್ಲಿ ಸಮಾನರೂ ಆಗಿದ್ದೀರಿ."

ಯದ್ಯೂಯಂ ಪೃಶ್ನಿಮಾತರೋ ಮರ್ತಾಸಃ ಸ್ಯಾತನ।
ಸ್ತೋತಾ ವೋ ಅಮೃತಃ ಯಾತ್॥ (ಋ ೧-೩೮-೪ ಸಾಭಾ)
"ಪೃಶ್ನಿಯೆಂಬ ಧೇನುವಿನ ಮಕ್ಕಳಾದ ಎಲೈ ಮರುತ್ತಗಳೇ, ನೀವುಗಳು ಒಂದು ವೇಳೆ ಮನುಷ್ಯ ಗುಂಪಿಗೆ ಸೇರಿದ್ದರೂ ಸಹ ನಿಮ್ಮ ಗುಣಗಾನ ಮಾಡತಕ್ಕ ಮರ್ತ್ಯರು ಅಮರ್ತ್ಯರೇ ಆಗುವರು."

(ರುದ್ರನು ದ್ಯಾವಾಪೃಥ್ವಿಯಿಂದ ಹುಟ್ಟಿದವನು, ಮರುತ್ತುಗಳು ರುದ್ರ ಪುತ್ರರು ಎಂಬುದನ್ನು ಗಮನಿಸಿ)

ಪ್ರ ವಃ ಶರ್ಧ್ಯಾಯ ಘೃಷ್ವಯೇ ತ್ವೇಷದ್ಯುಮ್ನಾಯ ಶುಷ್ಮಿಣೇ।
ದೇವತ್ತಂ ಬ್ರಹ್ಮ ಗಾಯತ॥ (ಋ ೧-೩೭-೪ ಸಾಭಾ)
"ಎಲೈ ಋತ್ವಿಕ್ಕುಗಳೇ, ಮರುದ್ಗಣವು ನಿಮಗೆ ಯಾವಾಗಲು ಆಪ್ತವಾಗಿರತಕ್ಕದ್ದು. ಅವರ ಶಕ್ತಿಯು ಅಪಾರವಾದದ್ದು. ಶತ್ರುಗಳನ್ನು ತಡೆಗಟ್ಟಿ ನಿರೋಧಿಸಿ ಶತ್ರುಮರ್ಧನ ಮಾಡತಕ್ಕದ್ದು. ಅವರ ಕೀರ್ತಿಯು ಪ್ರಕಾಶಮಾನವಾದದ್ದು. ಮರುದ್ಗಣಗಳನ್ನುದ್ದೇಶಿಸಿ ದೇವತೆಗಳು ನಿಮಗೆ ಅನುಗ್ರಹಿಸಿ ಬೋಧಿಸಿದ ಪ್ರಾರ್ಥನಾ ಸ್ತೋತ್ರವನ್ನು ಚೆನ್ನಾಗಿ ಹಾಡಿರಿ."

ಅಸ್ತಿ ಹಿ ಷ್ಮಾ ಮದಾಯ ವಃ ಸ್ಮಸಿ ಷ್ಮಾ ವಯಮೇಷಾಂ।
ವಿಶ್ವಂ ಚಿದಾಯುರ್ಜೀವಸೇ॥ (ಋ ೧-೩೭-೧೫ ಸಾಭಾ)
"ಎಲೈ ಮರುತ್ತುಗಳೇ, ನಿಮ್ಮ ತೃಪ್ತಿಗಾಗಿ ನಾವು ಹವಿಸ್ಸನ್ನು ಸಂಪಾದಿಸಿ ಸಿದ್ಧವಾಗಿಯೇ ಇಟ್ಟಿದ್ದೇವೆ. ನಿಮ್ಮ ಭಕ್ತರಾಗಿ ನಿಮ್ಮ ಸೇವೆಗಾಗಿ ನಾವು ಯಾವಾಗಲು ಸಿದ್ಧರಾಗಿದ್ದೇವೆ. ನಿಮಗೆ ಶಾಶ್ವತವಾದ ತೃಪ್ತಿಕೊಡಲು ಸಹಾಯ ವಾಗುವಂತೆಯೂ, ನಾವು ದೀರ್ಘಕಾಲ ಜೀವಿಸುವಂತೆಯೂ ನಮಗೆ ಸಂಪೂರ್ಣವಾದ ಆಯಸ್ಸನ್ನು ದಯಪಾಲಿಸಿ."

ಇಂತಹ ಮಹಿಮೆಯಿಂದ ಕೂಡಿರುವ ಮರುದ್ಗಣಗಳು ನಮ್ಮನ್ನು ಅನುಗ್ರಹಿಸಲಿ.

## ಅಗ್ನಿ ದೇವತೆ ಮತ್ತು ಅಗ್ನಿಯ ಮೂರು ಜನ್ಮ

ಮನ್ದ್ರೋ ಹೋತಾ ಗೃಹಪತಿರಗ್ನೇ ದೂತೋ ವಿಶಾಮಸಿ ।
ತ್ವೇ ವಿಶ್ವಾ ಸಂಗತಾನಿ ವ್ರತಾ ಧ್ರುವಾ ಯಾನಿ ದೇವಾ ಅಕೃಣ್ವತ ।। (ಋ ೧-೩೬-೫ ಸಾಭಾ)
"ಎಲೈ ಅಗ್ನಿಯೇ, ನೀನು ಮನುಷ್ಯರಿಗೂ ದೇವತೆಗಳಿಗೂ ಸಮಾನವಾದ ಬಂಧುವಾಗಿದ್ದೀಯೆ. ನೀನು ಎಲ್ಲರಿಗೂ ಹರ್ಷದಾಯಕನು. ಮಾನವನಿಗೋಸ್ಕರ ಅವರ ಯಜ್ಞಕರ್ಮಕ್ಕೆ ದೇವತೆಗಳನ್ನು ಕರೆಯುತ್ತೀಯೆ. ಯಜ್ಞಕರ್ತರ ಗೃಹರಕ್ಷಕನಾಗಿದ್ದೇಯೆ. ದೇವತೆಗಳ ಪರ ಅವರ ದೂತನಾಗಿದ್ದೀಯೆ. ಮತ್ತು ಅವರ ಕಾರ್ಯಗಳಿಗೆಲ್ಲಾ ಆಧಾರಭೂತನಾಗಿದ್ದೀಯೆ. ಪೃಥ್ವಿಯ ಯಾವ ಧಾರಣ ಕರ್ಮವುಂಟೋ, ಪರ್ಜನ್ಯನ ವೃಷ್ಟಿರೂಪವಾದ ಯಾವ ಕರ್ಮವುಂಟೋ ಮತ್ತು ಸೂರ್ಯನ ಪ್ರಕಾಶನಸ್ವರೂಪವಾದ ಯಾವ ಕರ್ಮವುಂಟೋ ಹೀಗೆಯೇ ಇತರ ದೇವತೆಗಳ ಲೋಕದಲ್ಲಿ ಸ್ಥಿರವಾಗಿರತಕ್ಕ ಯಾವ ಯಾವ ಕರ್ಮಗಳುಂಟೋ, ಲೋಕಕ್ಷೇಮಕರಗಳಾದ ಆ ಸಕಲ ಕರ್ಮಗಳೂ ನಿನ್ನಲ್ಲಿ ಸೇರಿ ಒಂದುಗೂಡಿ ಸಮನ್ವಯವನ್ನು ಹೊಂದುತ್ತವೆ. ಎಂದರೆ ನಿನ್ನಿಂದಲೇ ನಡೆಯುತ್ತವೆ."

ದಿವಸ್ಪರಿ ಪ್ರಥಮಂ ಜಜ್ಞೇ ಅಗ್ನಿರಸ್ಮದ್ದ್ವಿತೀಯಂ ಪರಿ ಜಾತವೇದಾಃ ।
ತೃತೀಯಮಪ್ಸು ನೃಮಣಾ ಅಜಸ್ರಮಿಂಧಾನ ಏನಂ ಜರತೇ ಸ್ವಾಧೀಃ ।। (೧೦-೪೫-೧ ಸಾಭಾ)
ಅಗ್ನಿಯು ಮೊದಲ ಸಲ ದ್ಯುಲೋಕದ ಮೇಲೆ ಉತ್ಪನ್ನನಾದನು. ಎರಡನೆಯ ಸಲ ಜಾತವೇದೋರೂಪನಾಗಿ ಪೃಥಿವಿಯ ಮೇಲೆ ಉತ್ಪನ್ನಾದನು. ಮಾನವರಿಗೆ ಹಿತಕಾರಿಯಾದ ಅದೇ ಅಗ್ನಿಯು ಮೂರನೆಯ ಸಲ ವಿದ್ಯುದಾದಿ ರೂಪಗಳಲ್ಲಿ ಅಂತರಿಕ್ಷದಲ್ಲಿ ಜನಿಸಿದನು. ಉತ್ತಮವಾದ ಪ್ರಜ್ಞೆಯುಳ್ಳ ಋಷಿಯು ಯಾವಾಗಲೂ ಅಗ್ನಿಯನ್ನು ಪ್ರಜ್ವಲಿಸಿವಂತೆ ಮಾಡುತ್ತ ಸ್ತುತಿಸುತ್ತಾನೆ."

(ಪ್ರಥಮಬಾರಿ ದ್ಯುಲೋಕದಲ್ಲಿ ಸೂರ್ಯನಾಗಿ ಅಗ್ನಿಯು ಪ್ರಕಟನಾದನು ಏಕೆಂದರೆ ಸೂರ್ಯನ ಒಳಗೆ ಅಗ್ನಿ ಗೋಳವಿದೆ. ದ್ವಿತೀಯಬಾರಿ ಪೃಥಿವಿಯ ಮೇಲೇ ಯಜ್ಞಕಾರ್ಯಕ್ಕಾಗಿ ಪ್ರಕಟನಾದನು. ಯಜ್ಞಕುಂಡವೇ ಪೃಥವಿಯ ಸ್ಥಾನ. ತೃತೀಯಬಾರಿ ಮೂರು ಕುಂಡಲಿನಿ ಮಾತೆಯರ ಅಂತರಿಕ್ಷದಲ್ಲಿ ವಿದ್ಯುತ್ರೂಪದಲ್ಲಿ ಕಾಣಿಸುತ್ತಾರೆ. ಅವ್ಯಕ್ತ ಸ್ವರೂಪರಾದ ಮಾತೆಯರು ವಿದ್ಯತ್ ಬಣ್ಣದಿಂದ ಕಾಣಿಸುವರು. ಹಾಗು ಸುಷುಮ್ನಾ ನಾಡಿಯಲ್ಲಿ ಅಗ್ನಿಯಾಗಿ ಪ್ರಕಟನಾದನು.)

ಭಗವಂತನನ್ನು ಮತ್ತು ದೇವತೆಗಳನ್ನು ಉಪಾಸನೆ ಮಾಡಲು ಇರುವ ಅನೇಕ ಮಾರ್ಗಗಳಲ್ಲಿ ಅಗ್ನಿಯ ಮುಖಾಂತರ ಮಾಡುವ ಉಪಾಸನೆಯು ಶ್ರೇಷ್ಟವಾದ ಮಾರ್ಗವಾಗಿದೆ. ಅಗ್ನಿಯು ನಮ್ಮ ಮತ್ತು ದೇವತೆಗಳ ನಡುವಿನ ಸಂಪರ್ಕದ ಕೊಂಡಿಯಾಗಿದ್ದಾನೆ ಅಂದರೆ ದೇವದೂತನಾಗಿದ್ದಾನೆ. ನಾವು ಅಗ್ನಿಯ ಮುಖಾಂತರ ದೇವತೆಗಳನ್ನು ಋಗ್ವೇದ ಮಂತ್ರಗಳಿಂದ ಪ್ರಾರ್ಥಿಸಿ ಹವಿಸ್ಸನ್ನು ಅರ್ಪಿಸಿದಾಗ ದೇವತೆಗಳು ಸಂತೋಷಗೊಂಡು ನಮ್ಮನ್ನು ಅನುಗ್ರಹಿಸುವರು. ಏಕೆಂದರೆ ನಾವು ಅರ್ಪಿಸುವ ಹವಿಸ್ಸೇ ದೇವತೆಗಳ ಆಹಾರವಾಗಿದೆ. ಇಂತಹ ಮಹಿಮಾನ್ವಿತನಾದ ಅಗ್ನಿಯು ಮೂರು ಜನ್ಮವನ್ನು ಪಡೆದಿರುವನು. ಅಗ್ನಿಯ ಮೂರು ಜನ್ಮದ ಕಾರ್ಯಗಳು ಬೇರೆ ಬೇರೆ ರೀತಿಯದ್ದಾಗಿದೆ. ಆತನ ಮೂರು ಜನ್ಮದ ಮಹಿಮೆಯನ್ನು ತಿಳಿಯೋಣ.

## ಅಗ್ನಿಯ ಪ್ರಥಮ ಜನ್ಮ

ಅಗ್ನಿಯ ಪ್ರಥಮ ಜನ್ಮವನ್ನು ತಿಳಿಯಲು ಈ ಋಗ್ವೇದ ಮಂತ್ರಗಳನ್ನು ನೋಡಿ.

ವವ್ರಜಾ ಸೀಮನದತೀರದಬ್ಧಾ ದಿವೋ ಯಹ್ವೀರವಸಾನಾ ಅನಗ್ನಾಃ ।
ಸನಾ ಅತ್ರ ಯುವತಯಃ ಸಯೋನೀರೇಕಂ ಗರ್ಭಂ ದಧಿರೇ ಸಪ್ತ ವಾಣೀಃ ।। (ಋ ೩-೧-೬ ಸಾಭಾ)
"…..ಪುರಾತನವಾದುವೂ, ನಿತ್ಯವಾಗಿ ತಾರುಣ್ಯ ಹೊಂದಿರುವುವೂ, ಅಂತರಿಕ್ಷರೂಪದ ಒಂದೇ ಮೂಲಸ್ಥಾನವನ್ನು ಹೊಂದಿರುವುವೂ, ಸಪ್ತಸಂಖ್ಯಾತವೂ ಆದ ನದಿಗಳು ಒಬ್ಬನೇ ಆದ ಅಗ್ನಿಯನ್ನು ತಮ್ಮ ಗರ್ಭವಾಗಿ (ಗರ್ಭದಲ್ಲಿ) ಧರಿಸಿದರು.

ಅವರ್ಧಯನ್ತ್ಸುಭಗಂ ಸಪ್ತ ಯಹ್ವೀಃ ಶ್ವೇತಂ ಜಜ್ಞಾನಮರುಷಂ ಮಹಿತ್ವಾ ।
ಶಿಶುಂ ನ ಜಾತಮಭ್ಯಾರುರಶ್ವಾ ದೇವಾಸೋ ಅಗ್ನಿಂ ಜನಿಮನ್ವಪುಷ್ಯನ್ ।। (ಋ ೩-೧-೪ ಸಾಭಾ)
"ಹೆಣ್ಣುಕುದುರೆಗಳು ತಮ್ಮ ಹೊಟ್ಟೆಯಲ್ಲಿ ಹುಟ್ಟಿದ ಮರಿಯನ್ನು ಸಮೀಪಿಸಿ ಲಾಲಿಸುವಂತೆ, ಸಪ್ತಸಂಖ್ಯಾತ ವಾದವೂ, ಮಹತ್ವರೂಪವುಳ್ಳವೂ ಆದ ನದಿಗಳು ಶ್ರೇಷ್ಠವಾದ ಧನವುಳ್ಳವನೂ, ಶುಭ್ರನಾದವನೂ, ಉತ್ಪನ್ನನಾದವನೂ ತನ್ನ

ಮಹತ್ವದಿಂದ ಆಕರ್ಷಕವಾದ ರೂಪವುಳ್ಳವನೂ ಆದ ಅಗ್ನಿಯನ್ನು ಲಾಲಿಸಿ ಪ್ರವೃದ್ಧನಾಗುವಂತೆ ಮಾಡಿದರು. ಈ ಅಗ್ನಿಯು ಉತ್ಪನ್ನನಾದೊಡನೆಯೇ ದೇವತೆಗಳು ಅವನ ಶರೀರವನ್ನು ಬೆಳಗುವಂತೆ ಮಾಡಿದರು.

ಮಯೋ ದಧೇ ಮೇಧಿರಃ ಪೂತದಕ್ಷೋ ದಿವಃ ಸುಬಂಧುರ್ಜನುಷಾ ಪೃಥಿವ್ಯಾಃ ।
ಅವಿಂದನ್ನು ದರ್ಶತಮಪ್ಸ್ವಅನ್ತರ್ದೇವಾಸೋ ಅಗ್ನಿಮಪಸಿ ಸ್ವಸೃಣಾಂ ।।
"ಪ್ರಜ್ಞಾವಂತನೂ, ಶುದ್ಧವಾದ ಬಲವುಳ್ಳವನೂ, ಜನ್ಮಾರಭ್ಯ ಸಹಜವಾದ ಬಂಧುತ್ವವುಳ್ಳವನೂ, ದ್ಯುಲೋಕಕ್ಕೂ ಪೃಥ್ವಿಗೂ ಸುಖವನ್ನು ಉಂಟುಮಾಡುವವನೂ, ದರ್ಶನೀಯನೂ ಆದ ಅಗ್ನಿಯನ್ನು ದೇವತೆಗಳು ನದಿಗಳ ಉದಕ ಮಧ್ಯದಲ್ಲಿ ಹುಡುಕಿ ಯಜ್ಞರೂಪವಾದ ಕರ್ಮದ ನಿಮಿತ್ತವಾಗಿ ಪಡೆದರು." (೩–೧–೩ ಸಾಭಾ)

ಇದರ ಅರ್ಥ ಯಜ್ಞವನ್ನು ಮಾಡಲು ಉಪಯೋಗಿಸುವ ಅಗ್ನಿಯು ನದಿಗಳ ಮೂಲವಾದುದು, ಮಿತ್ರಾ–ವರುಣರ ಸಂಘರ್ಷದಿಂದ ಪ್ರಕಟವಾದುದಲ್ಲ. ನಮ್ಮ ಶರೀರದಲ್ಲಿ ಹರಿಯುತ್ತಿರುವ ಸಪ್ತನದಿಗಳಲ್ಲಿ ಪ್ರಕಟವಾಗುವ ಅಗ್ನಿಯೇ ಅಂತರ್‌ಯಜ್ಞದಲ್ಲಿ ಸ್ಥಾಪಿಸಲ್ಪಡುವುದು. ಈ ಮಂತ್ರದಲ್ಲಿ ಹೇಳಿರುವ ಮೂರುಜನ ಸ್ತ್ರೀಯರು ಯಾರು? ಯಾವುದು ಏಳು ನದಿಗಳು ಎಂಬುದನ್ನು ಈ ಹಿಂದೆಯೇ ತಿಳಿದಿದ್ದೇವೆ.

ಸಾಯಣರು ಮತ್ತು ಅರಬಿಂದೊರವರು ಮೂವರು ಸ್ತ್ರೀಯರನ್ನು ಮಹಿ, ಭಾರತಿ ಮತ್ತು ಇಳಾ ಎಂದು ತಿಳಿಸಿರುವರು. ಆದರೆ ಋಗ್ವೇದದಲ್ಲಿ ಈ ದೇವಿಯರು ಅಗ್ನಿಯನ್ನು ಪೋಷಣೆಮಾಡುವರೆಂದು ಎಲ್ಲಿಯೂ ತಿಳಿಸಿಲ್ಲ. ಆದ್ದರಿಂದ ನನ್ನ ಪ್ರಕಾರ ಅವರು ಮೂವರು ಕುಂಡಲಿನಿ ಮಾತೆಯರು ಆಗಿರುವರು. ಅವರು ಅಗ್ನಿಯ ಪೋಷಣೆಗಾಗಿ ಮಹಾಸಮುದ್ರಕ್ಕೆ ಅಮೃತವನ್ನು, ಹಾಲನ್ನು, ಘೃತವನ್ನು ಬೆರೆಸುವರು. ಆಗ ದೈವೀಜಲವು ಹಾಲಿನ ಅಥವಾ ಘೃತದ ಸಮುದ್ರವಾಗುವುದು.

ವಿಶ್ವಮನಸ್ಸಿನ ಧೃವವಾದ ಕುಂಡಲಿನಿ ಮಾತೆಯರಲ್ಲಿ ಶಾಖವು ಬೀಜಭೂತವಾಗಿ ಇದ್ದಿತೆಂದು ಈ ಹಿಂದೆ ಓದಿದೆವು. ಈ ಶಾಖವು ಮಾತೆಯು ಸೃಷ್ಟಿಸಿದ ಎಲ್ಲಾ ಚಕ್ರಗಳಲ್ಲಿಯೂ ಇರುತ್ತದೆ. ಈ ಶಾಖವನ್ನು ಮೂವರು ಕುಂಡಲಿನಿ ಮಾತೆಯರು ಉದಕಗಳ ಜೊತೆ ಅಮೃತವನ್ನು, ಹಾಲನ್ನು, ಘೃತವನ್ನು ಬೆರೆಸಿ ಪೋಷಿಸುವರು. ಸಪ್ತಚಕ್ರಗಳಿಂದ ಸಪ್ತ.ನದಿಗಳು ಹರಿಯುತ್ತಿರುವವು ಎಂಬುದನ್ನು ಈಗಾಗಲೆ ತಿಳಿದಿರುವೆವು. ಸಪ್ತಚಕ್ರಗಳಲ್ಲಿರುವ ಸಪ್ತಮಾತೃಕೆಯರು ಚಕ್ರಗಳಲ್ಲಿರುವ ಶಾಖವನ್ನು ತಮ್ಮ ಗರ್ಭದೊಳಗೆ ಪೋಷಿಸುವರು ಆಗ ಶಾಖವು ವೃದ್ಧಿಯಾಗಿ ಅಗ್ನಿಯಾಗಿ ಮಾರ್ಪಾಡಾಗುವುದು.

ಶಾಖವು ನಿಧಾನವಾಗಿ ಅಗ್ನಿಯಾಗಿ ಪರಿವರ್ತನೆಯಾದ ನಂತರ ಸಪ್ತನದಿಗಳಲ್ಲಿರುವ ಅಗ್ನಿಯನ್ನು ಕಂಡು ದೇವತೆಗಳು ಯಜ್ಞನಿಮಿತ್ತವಾಗಿ ಪಡೆದು ಅಗ್ನಿಗೆ ರೂಪವನ್ನು ಕೊಟ್ಟು ವಿರಾಟ್‌ಪುರುಷನ ನಾಭಿಯಲ್ಲಿರುವ ಯಜ್ಞಕುಂಡದಲ್ಲಿ ಸ್ಥಾಪಿಸಿದರು. ಈ ಏಳು ಅಗ್ನಿಯನ್ನೇ ಸಪ್ತಜ್ವಾಲೆಯಿಂದ ಪ್ರಜ್ವಲಿಸುವ ಅಗ್ನಿ ಎಂದು ಕರೆಯುತ್ತಾರೆ. ಯೋಗಿಯ ಸಾಧನೆಯಿಂದಲೂ ಸಪ್ತನದಿಗಳಲ್ಲಿ ಅಗ್ನಿಯು ಪ್ರಕಟನಾಗುವನು. ಅದನ್ನು ಯೋಗಿಯು ನಾಭಿಯಲ್ಲಿ ಸ್ಥಾಪಿಸಿ ಅಂತರ್‌ಯಜ್ಞವನ್ನು ಮಾಡುವನು.

## ಅಗ್ನಿಯ ದ್ವಿತೀಯ ಜನ್ಮ

ಅಗ್ನಿಯ ದ್ವಿತೀಯ ಜನನವು ಅಧಃಕುಂಡಲಿನೀ ಸ್ಥಾನವಾದ ಅಂತರಿಕ್ಷಲೋಕದಲ್ಲಿ ಆಗುತ್ತದೆ. ಮುಂದಿನ ಏಳುಚಕ್ರಗಳಲ್ಲಿ ಅಗ್ನಿಯು ಪ್ರಕಟವಾದ ಹಾಗೆ ಮೇರುದಂಡದ ಹಿಂಭಾಗದಲ್ಲಿರುವ ಅಧಃಕುಂಡಲಿನಿಯ ಏಳುಚಕ್ರಗಳಲ್ಲಿಯೂ ಸಹ ಅಗ್ನಿಯು ಪ್ರಕಟವಾಗುತ್ತಾನೆ. ಈ ಏಳು ಚಕ್ರಗಳಲ್ಲಿಯೂ ಸಹ ಸಪ್ತನದಿಗಳು ಹರಿಯುತ್ತವೆ. ಈ ಸಪ್ತನದಿಗಳಲ್ಲಿರುವ ಸಪ್ತಮಾತೃಕೆಯರು ಶಾಖರೂಪದಲ್ಲಿರುವ ಅಗ್ನಿಯನ್ನು ಪೋಷಿಸಿ ಅಗ್ನಿಯನ್ನು ಪ್ರಕಟವಾಗುವಂತೆ ಮಾಡುವರು. ಈ ಏಳು ಚಕ್ರಗಳು ಮೇರುದಂಡದ ಮಧ್ಯದಲ್ಲಿದೆ. ಸುಷುಮ್ನನಾಡಿಯ ಒಳಗಡೆ ಅಗ್ನಿಯು ಪ್ರಕಟವಾದಾಗ ಅದು ಅಗ್ನಿನಾಳದಂತೆ ಕಾಣುವುದು. ಆದ್ದರಿಂದ ಇದು ಅಗ್ನಿಯ ದ್ವಿತೀಯ ಜನ್ಮವಾಗಿದೆ.

## ಅಗ್ನಿಯ ಮೂರನೆಯ ಜನ್ಮ (ಅಪಾಂನಪಾತ್)

ಅಗ್ನಿಯ ಮೂರನೆಯ ಜನ್ಮವು ಉದಕದಲ್ಲಿ ಅಂದರೆ ಮಹಾಸಮುದ್ರದಲ್ಲಿ ಆಯಿತು. ಋಗ್ವೇದದ ಪ್ರಕಾರ ಅಗ್ನಿಯು ಮಿತ್ರಾವರುಣರ ಮಂಥನದಿಂದ ಸೃಷ್ಟಿ ಕಣಗಳ ಮಹಾಸಮುದ್ರದಲ್ಲಿ ಪ್ರಕಟನಾಗುತ್ತಾನೆ.

ಪ್ರಭೂತವಾದ ಉದಕಗಳು ಅಗ್ನಿಯನ್ನು ಪ್ರವೃದ್ಧನಾಗುವಂತೆ (ಪ್ರಜ್ವಲಿಸುವಂತೆ) ಮಾಡುತ್ತದೆ.

ಅಗ್ನಿಯನ್ನು 'ಅಪಾಂನಪಾತ್' ಎಂದು ಸಂಭೋದಿಸಲಾಗಿದೆ. ಈ ಪದದ ಅರ್ಥ 'ನೀರಿನಲ್ಲಿ ಜನಿಸಿದವನು" ಎಂದಾಗಿದೆ. ಸೃಷ್ಟಿಯ ಮಹಾಸಮುದ್ರದಲ್ಲಿ ಅಗ್ನಿಯ ಮೂರನೆಯ ಜನ್ಮವಾಯಿತು. ಮಹಾಸಮುದ್ರದಲ್ಲಿ ಅಲ್ಲಲ್ಲಿ ಉದಕಗಳು ಸರಸ್ಸಿನಂತೆ ಗುಂಪಗೂಡಿತು. ಆಗ ಮಿತ್ರವರುಣರ ಕ್ಷಿಪ್ರ ಮಂಥನದಿಂದ ಸರಸ್ಸು ಅಗ್ನಿಗೋಳವಾಗಿ ಪರಿವರ್ತನೆಯಾಯಿತು. ಈ ಕೆಳಗಿನ ಮಂತ್ರಗಳನ್ನು ನೋಡಿ;

ಯೋ ಅನಿಧ್ಮೋ ದೀದಯದಪ್ಸ್ವಅಂತರ್ಯಂ ವಿಪ್ರಾಸ ಈಳತೇ ಅಧ್ವರೇಷು ೧
ಅಪಾಂ ನಪಾನ್ಮಧುಮತೀರಪೋ ದಾ ಯಾಭಿರಿಂದ್ರೋ ವಾವೃಧೇ ವಿರ್ಯಾಯ ೧೧ (ಋ ೧೦-೩೦-೪ ಸಾಭಾ)
"ಎಲೈ ಅಪಾಂನಪಾತ್ ಸಂಜ್ಞಕನಾದ ದೇವನೇ, ಯಾವ ನೀನು ಉದಕಗಳ ನಡುವೆ ಕಟ್ಟಿಗೆಗಳಾವುವೂ ಇಲ್ಲದೆ ಪ್ರಕಾಶಿಸುವೆ....."

ದೇವಾಸಸ್ತ್ವಾ ವರುಣೋ ಮಿತ್ರೋ ಅರ್ಯಮಾ ಸಂ ದೂತಂ ಪತ್ನಮಿಂಧತೆ ೧
ವಿಶ್ವಂ ಸೋ ಅಗ್ನೇ ಜಯತಿ ತ್ವಯಾ ಧನಂ ಯಸ್ತೇ ದದಾಶ ಮರ್ತ್ಯಃ ೧೧ (ಋ ೧-೩೬-೪ ಸಾಭಾ)
"ಎಲೈ ಅಗ್ನಿಯೇ, ನೀನು ಬಹಳ ಪುರಾತನನು. ಮೊದಲಿನಿಂದಲೂ ದೇವದೂತನು. ವರುಣ, ಮಿತ್ರ, ಮತ್ತು ಆರ್ಯಮಾ ಎಂಬ ಮೂರು ದೇವತೆಗಳೂ ಸಹ ನಿನ್ನನ್ನು ಪ್ರಜ್ವಲಿಸುವಂತೆ ಮಾಡುತ್ತಾರೆ. ಮಾನವರಲ್ಲಿ ಯಾರು ಯಾರು ನಿನ್ನನ್ನು ಉದ್ದೇಶಿಸಿ ಯಜ್ಞಮಾಡಿ ನಿನಗೆ ಹವಿಸ್ಸನ್ನು ಅರ್ಪಿಸುವರೋ ಅವರೆಲ್ಲಾ ನಿನ್ನ ಸಹಾಯದಿಂದ ಅವರವರಿಗೆ ಬೇಕಾದ ಸಕಲ ಧನವನ್ನೂ ಪಡೆಯುತ್ತಾರೆ."

(ಜಲದಲ್ಲಿ ಸ್ಥಿತರಾಗಿರುವ ದೇವತೆಗಳು ಮೊದಲು ಜಲವನ್ನು ಸರೋವರದಂತೆ ಸಂಗ್ರಹಿಸಿ ಅಗ್ನಿಯನ್ನು ಪ್ರಕಟಮಾಡುವರು.)

ನೂ ಚಿತ್ರಹೋಜಾ ಅಮೃತೋ ನಿ ತುಂದತೇ ಹೋತಾ ಯದ್ದೂತೋ ಅಭವದ್ವಿವಸ್ವತಃ ೧
ವಿ ಸ್ವಾಧಿಷ್ಠಭಿಃ ಪಥಿಭಿ ರಜೋ ಮಮ ಆ ದೇವತಾತಾ ಹವಿಷಾ ವಿವಾಸತಿ ೧೧ (ಋ ೧-೫೮-೧ ಸಾಭಾ)
"(ಮಿತ್ರಾವರುಣರ) ಘರ್ಷಣದಿಂದ ಉತ್ಪನ್ನನಾದವನೂ, ಅಮೃತಸ್ವರೂಪನೂ ಆದ ಅಗ್ನಿಯು ಜಾಗ್ರತೆಯಾಗಿ ಆವಿರ್ಭವಿಸುತ್ತಾನೆ. **ದೇವತೆಗಳನ್ನು ಯಜ್ಞಕ್ಕೆ ಕರೆಯುವ ಅಗ್ನಿಯು ಯಾವಾಗ ಯಜಮಾನನ ದೂತನಾದನೋ** ಆಗ ಅನುಕೂಲಗಳಾದ ದಾರಿಯಿಂದ ಸಂಚರಿಸುತ್ತಾ ಅಂತರಿಕ್ಷವನ್ನು ಬೆಳಗಿದ್ದಾನೆ. ಮತ್ತು ಯಜ್ಞದಲ್ಲಿ ಹವಿಸ್ಸಿನಿಂದ ದೇವತೆಗಳನ್ನು ಪೂಜಿಸುತ್ತಾನೆ"

ಅಗ್ನಿಯ ಜನನವು ಸಮುದ್ರದಲ್ಲಿ ಆದ ರೀತಿಯನ್ನು ಈ ಮೊದಲೇ ವಿವರವಾಗಿ ತಿಳಿದಿರುವೆವು.

## ಮಾನವರಲ್ಲಿ ಅಗ್ನಿಯ ಜನನ

"ಯದ್ ಬ್ರಹ್ಮಾಂಡ್ಯ ತದ್ ಪಿಂಡಾಂಡೆ" ಎನ್ನುವ ಹಾಗೆ ನಮ್ಮ ಶರೀರವು ವಿಶ್ವದ ಪ್ರತಿರೂಪ ವಾಗಿರುವುದರಿಂದ ನಮ್ಮಲ್ಲಿಯೂ ಅಗ್ನಿಯ ಮೂರು ಸ್ಥಾನಗಳಿವೆ.

ಸಮುದ್ರೇ ತ್ವಾ ನೃಮಣಾ ಅಪ್ಸ್ವಂತರ್ನೃಚಕ್ಷಾ ಈಧೇ ದಿವೋ ಅಗ್ನ ಊಧನ್ ೧
ತೃತೀಯೇ ತ್ವಾ ರಜಸಿ ತಸ್ಥಿವಾಂಸಮಪಾಮುಪಸ್ಥೇ ಮಹಿಷಾ ಅವರ್ಧನ್ ೧೧
"ಎಲೈ ಅಗ್ನಿಯೇ, ಸಮುದ್ರ ಮಧ್ಯದಲ್ಲಿ ಉತ್ಪನ್ನನೂ, ಉದಕಗಳ ನಡುವೆ ವಡವಾಗ್ನಿ ರೂಪದಲ್ಲಿರುವನೂ ಆದ ನಿನ್ನನ್ನು ಮಾನವರಿಗೆ ಹಿತಕಾರಿಯಾದ **ವರುಣನು ಪ್ರಜ್ವಲಿಸುವಂತೆ ಮಾಡಿದನು**. ಮಾನವರನ್ನು ನೋಡಬಲ್ಲ ಆದಿತ್ಯನು ದ್ಯುಲೋಕದಲ್ಲಿ ನಿನ್ನನ್ನು ಆದಿತ್ಯಮಂಡಲದಲ್ಲಿ ಪ್ರಕಾಶಿಸುವಂತೆ ಮಾಡಿದನು. ಮೂರನೆಯದಾದ ಅಂತರಿಕ್ಷದಲ್ಲಿ ವಿದ್ಯುದ್ರೂಪದಲ್ಲಿರುವ ನಿನ್ನನ್ನು ಮಹಾತ್ಮರಾದ ದೇವತೆಗಳು ಪುಷ್ಟಿಗೊಳಿಸಿದರು.(೧೦-೪೫-೪)

ದೇವತೆಗಳು ಮಾನವರನ್ನು ತಮ್ಮ ರೂಪದಲ್ಲಿ ಸೃಷ್ಟಿಸಿರುವರು ಮತ್ತು ನಾವು ಅಮರತ್ವವನ್ನು ಪಡೆಯಲು ನಮ್ಮ ಒಳಗೆ ಅಗ್ನ್ನಿಯನ್ನು ಸ್ಥಾಪಿಸಿರುವರು. ಆದ್ದರಿಂದ ನಾವು ಅಂತರ್‌ಯಜ್ಞವನ್ನು ಮಾಡಿ ದೇವತೆಗಳ ಅನುಗ್ರಹ ವನ್ನು ಮತ್ತು ಅಮರತ್ವವನ್ನು ಪಡೆಯಬಹುದು. ಅಂತರ್‌ಯಜ್ಞದಲ್ಲಿ ಅಗ್ನಿಯ ಮಾನವರೂಪ ದರ್ಶನವನ್ನು ಪಡೆಯಬಹುದು ಆದರೆ ಕುಂಡಲಿನಿ ಯೋಗದ ಸಾಧಕರು ಅಗ್ನಿಯನ್ನು ಕೇವಲ ಅಗ್ನಿಯಾಗಿ ನೋಡುವರು.

ಯೋಗಿಯು ತನ್ನ ಸಾಧನೆಯ ಮಾರ್ಗದಲ್ಲಿ ಅಗ್ನಿಯನ್ನು ತನ್ನ ನಾಭಿಯಲ್ಲಿ ಸ್ಥಾಪಿಸುತ್ತಾನೆ ಮತ್ತು ಅಗ್ನಿಯನ್ನು ಪುರೋಹಿತನಾಗುವಂತೆ ಪ್ರಾರ್ಥಿಸುವನು. ಆಗ ಯಜ್ಞಕುಂಡದ ಸುತ್ತಲೂ ನಾಲ್ಕು ಪುರೋಹಿತರು

ಪ್ರಕಟರಾಗುವರು. ಇದಕ್ಕೆ ಮೊದಲೇ ಅಂತರ್‌ಯಜ್ಞಕ್ಕಾಗಿ ನಾಭಿಯಲ್ಲಿ ಬ್ರಹ್ಮನನ್ನು ಯೋಗಿಯು ಪ್ರಕಟಮಾಡುವನು. ಆಗ ಯೋಗಿಯು ಮಂತ್ರೋಚ್ಚಾರಣೆ ಮಾಡುತ್ತಿದ್ದರೂ, ನಾಲ್ಕು ಪುರೋಹಿತರು ಉಚ್ಚರಿಸುತ್ತಿರುವಂತೆ ಕಾಣುವುದು. ಋತ್ವಿಜರು ಅರ್ಪಿಸುವ ಯಜ್ಞದ ಹವಿಸ್ಸುಗಳನ್ನು ಸ್ವೀಕರಿಸಿ ದೇವತೆಗಳು ಸಂತೋಷವನ್ನು ಹೊಂದಿ ಯೋಗಿಯನ್ನು ಅನುಗ್ರಹಿಸುವರು. ಕೆಳಗಿನ ಋಗ್ವೇದ ಮಂತ್ರಗಳನ್ನು ನೋಡಿ.

ಅಧಾಯಗ್ನಿರ್ಮಾನುಷೀಷು ವಿಕ್ಷ್ವಪಾಂ ಗರ್ಭೋ ಮಿತ್ರ ಋತೇನ ಸಾಧನ್ ।
ಆ ಹರ್ಯತೋ ಯಜತಃ ಸಾನ್ವಸ್ಥಾದಭೂದು ವಿಪ್ರೋ ಹವ್ಯೋ ಮತೀನಾಂ ।। (ಋ ೩-೫-೩ ಸಾಭಾ)
"ಯಜ್ಞಕರ್ತರಿಗೆ ಮಿತ್ರಭೂತನೂ, ಸತ್ಯದಿಂದ ಆಪೇಕ್ಷಿತಾರ್ಥಗಳನ್ನು ಸಾಧಿಸುವವನೂ, ಉದಕಗಳಿಗೆ ಗರ್ಭರೂಪನೂ ಆದ ಅಗ್ನಿಯು ಮನುವಿನ ಸಂತತಿಯವರಾದ ಪ್ರಜೆಗಳಲ್ಲಿ ದೇವತೆಗಳಿಂದ ಸ್ಥಾಪಿತನಾಗಿದ್ದಾನೆ....."

ಪ್ರೇದ್ವಗ್ನಿರ್ವಾವೃಧೇ ಸ್ತೋಮೇಭಿರ್ಗೀರ್ಭಿಃ ಸ್ತೋತ್ರಾಂಣಾಂ ನಮಸ್ಯ ಉಕ್ಥೈಃ ।
ಪೂರ್ವೀರ್ಋತಸ್ಯ ಸಂದೃಶಶ್ಚಕಾನಃ ಸಂ ದೂತೋ ಅದ್ಯೌದುಷಸೋ ವಿರೋಕೇ ।। (ಋ ೩-೫-೨ ಸಾಭಾ)
"ಪೂಜ್ಯನಾದ ಅಗ್ನಿಯು ಸ್ತುತಿಕರ್ತರ ಸ್ತೋತ್ರಗಳಿಂದಲೂ, ಸ್ತುತಿವಾಕ್ಯಗಳಿಂದಲೂ, ಶಸ್ತ್ರಗಳಿಂದಲೂ ವೃದ್ಧಿಯನ್ನು ಹೊಂದುತ್ತಾನೆ. ದೇವದೂತನಾದ ಅಗ್ನಿಯು ಬಹುಸಂಖ್ಯಾಕವಾದ ಆದಿತ್ಯನ ಪ್ರಭಾವಯುತವಾದ ರಶ್ಮಿಗಳನ್ನು ಅನುಕರಿಸುತ್ತಾ ಉಷಸ್ಸಿನ ಆವಿರ್ಭಾವವನ್ನು ಸೂಚಿಸುವ ಪ್ರಾತಃಕಾಲದಲ್ಲಿ ಪ್ರಕಾಶಿಸುತ್ತಾನೆ.

ನಾಕಸ್ಯ ಪೃಷ್ಠೇ ಅಧಿ ತಿಷ್ಠತಿ ಶ್ರಿತೋ ಯಃ ಪೃಣಾತಿ ಸ ಹ ದೇವೇಷು ಗಚ್ಛತಿ ।
ತಸ್ಮಾ ಆಪೋ ಘೃತಮರ್ಷಂತಿ ಸಿಂಧವಸ್ತಸ್ಮಾ ಇಯಂ ದಕ್ಷಿಣಾ ಪಿನ್ವತೇ ಸದಾ ।। (ಋ ೧-೧೨೫-೫ ಸಾಭಾ)
"ದೇವತೆಗಳನ್ನು ಹವಿರಾದಿಗಳಿಂದ ತೃಪ್ತಿಪಡಿಸಿದರೆ ಮನುಷ್ಯನು ಸ್ವರ್ಗಲೋಕದಲ್ಲಿ ಪೂಜಿತನಾಗುತ್ತಾನೆ. ಅಲ್ಲದೇ ದೇವತೆಗಳಲ್ಲಿ ಒಬ್ಬನಾಗುತ್ತಾನೆ; ಅಂಥವನಿಗೆ ಪ್ರವಾಹ ಸ್ವಭಾವದ ನೀರೂ ತೇಜೋವಿಷ್ಟವಾಗುತ್ತದೆ (ರಸವತ್ತಾಗುತ್ತದೆ); ಭೂಮಿಯೂ ಸಸ್ಯಾದಿಫಲಗಳನ್ನು ಕೊಟ್ಟು ಸರ್ವಕಾಲದಲ್ಲಿಯೂ ಸಂತೋಷವನ್ನು ಕೊಡುತ್ತಾಳೆ. (೧-೧೨೫-೫ ಸಾಭಾ)
(ಸತ್ಯಲೋಕಕ್ಕೆ ಹೋಗುವ ಯಜಮಾನನು ದೇವತೆಗಳ ರೂಪವನ್ನು ಪಡೆದು ಆನಂದದಿಂದ ಇರುತ್ತಾನೆ.)

ಮೇಲಿನ ಮಂತ್ರದ ಕೊನೆಯ ವಾಕ್ಯವು ಬಹಿರ್‌ಯಜ್ಞವನ್ನು ಮಾಡಿದಾಗ ಉಂಟಾಗುವ ಫಲವನ್ನು ಕುರಿತು ಹೇಳುತ್ತಿದೆ. ಯಜಮಾನನು ಮಾಡಿದ ಯಜ್ಞದ ನಿಮಿತ್ತ ಪೃಥ್ವಿಯೂ ಸಹ ಸಂತೋಷವನ್ನುಪಟ್ಟು ಮಾನವರಿಗೆ ಸರ್ವಕಾಲದಲ್ಲಿಯೂ ಸಂತೋಷವನ್ನು ಕೊಡುತ್ತಾಳೆ ಏಕೆಂದರೆ ದೇವತೆಗಳ ಅನುಗ್ರಹವು ಪೃಥ್ವಿಯ ಮೇಲೂ ಸಹ ಬೀಳುತ್ತದೆ. ದೇವತೆಗಳ ಆಶೀರ್ವಾದವು ಯಜ್ಞಕುಂಡದ ಸುತ್ತಲಿನ ಪ್ರದೇಶದ ಮತ್ತು ಅಲ್ಲಿರುವ ಜನಸಮೂಹದ ಮೇಲೂ ಅನುಗ್ರಹವಾಗುತ್ತದೆ.

## ಅಧ್ಯಾಯ-೧೮: ಸೋಮರಸ

ಸೋಮಂ ಮನ್ಯತೇ ಪಪಿವಾನ್ಯತ್ಸಂಪಿಂಷಂತ್ಯೋಷಧಿಂ ।
ಸೋಮಂ ಯಂ ಬ್ರಹ್ಮಾಣೋ ವಿದುರ್ನ ತಸ್ಯಾಶ್ನಾತಿ ಕಶ್ಚನ ।। (ಋ ೧೦-೮೫-೩ ಸಾಭಾ)
"ಬಳ್ಳಿಯರೂಪದ ಯಾವ ಸೋಮವನ್ನು ಹಿಂಡುವರೋ ಆ ಲೌಕಿಕವಾದ ರಸವನ್ನೇ ನಿಜವಾದ ಸೋಮವೆಂದು ರಸಪಾನಮಾಡುವ ಸಾಧಾರಣ ಪುರುಷನು ಅರಿಯುತ್ತಾನೆ. ಆದರೆ ಋತ್ವಿಗ್ಯಜಮಾನರು ಯಾಗ ಯೋಗ್ಯವಾದ ಯಾವ ಸೋಮವನ್ನು ಅರಿಯುವರೋ, ಅದರ ಸ್ವರೂಪವನ್ನು ಕರ್ಮರಹಿತರು ಅರಿಯಲಾರರು."

ದೇವತೆಗಳಿಂದ ಮೊಟ್ಟಮೊದಲಿಗೆ ಪ್ರಾರಂಭವಾದ ಯಜ್ಞವು ವೃತ್ರಾಸುರನ ವಧೆಗೆ ಕಾರಣವಾಯಿತು. ಇದರಿಂದ ಬ್ರಹ್ಮಾಂಡದ ಸೃಷ್ಟಿಕ್ರಿಯೆಯು ಸರಾಗವಾಗಿ ನಡೆದು ಸಕಲ ಜೀವರಾಶಿಗಳ ಸೃಷ್ಟಿಗೆ ಕಾರಣವಾಯಿತು. ಬ್ರಹ್ಮಾಂಡದ ಹಾಗೆಯೆ ನಮ್ಮ ಪಿಂಡಾಂಡದಲ್ಲಿರುವ ಜೀವನೂ ಸಹ ವೃತ್ರಾಸುರನಿಂದಾಗಿ ಅಂಧಕಾರದಲ್ಲಿ ಸಿಲುಕಿ ನಲುಗುತ್ತಿದ್ದಾನೆ. ನಮ್ಮ ಮನಸ್ಸೇ ಅಜ್ಞಾನಕ್ಕೆ ಗುರಿಯಾಗಿ ಜನನಮರಣಕ್ಕೆ ಸಿಲುಕಿ ನರಳುತ್ತಿದೆ. ಆದ್ದರಿಂದ ಬ್ರಹ್ಮಾಂಡದಲ್ಲಿ ದೇವತೆಗಳು ಯಜ್ಞವನ್ನು ಮಾಡಿ ಸೋಮರಸವನ್ನು ಅರ್ಪಿಸಿದಂತೆ ಪಿಂಡಾಂಡದಲ್ಲಿಯೂ ಯಜ್ಞವನ್ನು ಮಾಡಿ ಸೋಮರಸವನ್ನು ಅರ್ಪಿಸಿದಾಗ ಇಂದ್ರನು ವೃತ್ರಾಸುರನನ್ನು ಸಂಹರಿಸಿ ತನ್ನ ಸಾಮ್ರಾಜ್ಯವನ್ನು

ಪಿಂಡಾಂಡದಲ್ಲಿ ಸ್ಥಾಪಿಸುತ್ತಾನೆ. ಮತ್ತು ಮರಣಾನಂತರ ಜೀವನು ಇಂದ್ರನ ಲೋಕಕ್ಕೆ ಹೋಗಿ ಅಮರತ್ವವನ್ನು ಪಡೆಯುತ್ತಾನೆ.

ಸೋಮರಸವೆಂದರೇನೆಂದು ತಿಳಿಯುವ ಮೊದಲು ಪ್ರಕೃತಿಯಲ್ಲಿ ಎಷ್ಟು ಆನಂದರಸವಿದೆ ಎಂಬುದನ್ನು ತಿಳಿಯೋಣ. ಋಗ್ವೇದದ ಪ್ರಕಾರ ನಾಲ್ಕು ಆನಂದರಸವಿದೆ.

೧. **ಜೇನುತುಪ್ಪದ ಆನಂದರಸ:** ಈ ಆನಂದರಸವನ್ನು ದೇವವೈದ್ಯರಾದ ಅಶ್ವಿನೀದೇವತೆಗಳು ಸೂರ್ಯೋದಯದ ಕಾಲದಲ್ಲಿ ಭುವಿಗೆ ತರುತ್ತಾರೆ. ತಮ್ಮ ರಥದಲ್ಲಿ ಆನಂದರಸವನ್ನು ತಗೆದುಕೊಂಡು ಬಂದು ದ್ಯಾವಾ-ಪೃಥ್ವಿ-ಅಂತರಿಕ್ಷಗಳಲ್ಲಿ ಸಂಚರಿಸುತ್ತಾ ಈ ಆನಂದ ರಸವನ್ನು ಚೆಲ್ಲುತ್ತಾರೆ. ಆ ಕಾಲದಲ್ಲಿ ನಿದ್ರೆಯಿಂದ ಎಚ್ಚೆತ್ತು ಯಾರು ತಮ್ಮ ಕಾರ್ಯಗಳಲ್ಲಿ ನಿರತವಾಗುವವರೋ ಅವರು ಈ ರಸವನ್ನು ಪಾನಮಾಡಿ ಆರೋಗ್ಯವನ್ನು ಮತ್ತು ಧೀರ್ಘಾಯಸ್ಸನ್ನು ಪಡೆಯುತ್ತಾರೆ. ಯೋಗಿಯೂ ಸಹ ಈ ಕಾಲದಲ್ಲಿ ತನ್ನ ಸಾಧನೆಯಲ್ಲಿ ತೊಡಗಿದರೆ ಆರೋಗ್ಯವನ್ನು ಪಡೆಯುವುದರ ಜೊತೆಗೆ ಸಾಧನೆಯಲ್ಲಿಯೂ ಮುಂದುವರೆಯುತ್ತಾನೆ.

೨. **ಹಾಲು-ಮೊಸರು ಮಿಶ್ರಿತ ಆನಂದರಸ:** ಇದು ಸೋಮರಸದ ನಂತರದಲ್ಲಿ ಬಹು ಪ್ರಮುಖವಾದ ಆನಂದರಸವಾಗಿದೆ. ಇದು ನೋಡಲು ಹಾಲು-ಮೊಸರು ಮಿಶ್ರಿತವಾದಂತೆ ಕಾಣುತ್ತದೆ. ಯೋಗಿಯು ಪಿಂಡಾಂಡದಲ್ಲಿರುವ ಸೂರ್ಯನನ್ನು ಜಾಗೃತಮಾಡಿ, ಸಪ್ತಮಸ್ವರ್ಗದ ಅಭಿಮುಖವಾಗಿ ಸ್ಥಾಪಿಸಿ, ಭಗ ಮಂತ್ರವನ್ನು ಪಠಿಸಿದಾಗ, ಹಾಲು-ಮೊಸರು ಮಿಶ್ರಿತ ರಸವು ಸೂರ್ಯನಿಂದ ಹರಿಯುತ್ತದೆ. ಆ ಮಂತ್ರ ಹೀಗಿದೆ.

"ಓಂ ತತ್ಸವಿತುರ್ವೃಣೀಮಹೇ ವಯಂ ದೇವಸ್ಯ ಭೋಜನಂ ।
ಶ್ರೇಷ್ಠಂ ಸರ್ವಧಾತಮಂ ತುರಂ ಭಗಸ್ಯ ಧೀಮಹಿ. ।।

೩. **ಶುದ್ಧ ನೀರಿನ ರಸ:** ಮರುದ್ಗಣ ದೇವತೆಗಳು ತರುವ ಪರಿಶುದ್ಧವಾದ ಮತ್ತು ಅಮೃತಸ್ವರೂಪವಾದ ನೀರಾಗಿದೆ. ಇದನ್ನು ಮರುಭೂಮಿಯಲ್ಲಿ ಬಿದ್ದ ಮಳೆಯ ನೀರು ಹೇಗೆ ಅಲ್ಲಿರುವ ಜೀವರಾಶಿಗಳಿಗೆ ಅಮೃತದಂತಿರುವುದೋ, ಅದಕ್ಕೆ ಹೋಲಿಸಿದ್ದಾರೆ. ಹೊಸ ಸಾಧಕನ ಶರೀರವನ್ನು ಚೈತನ್ಯಯುಕ್ತವನ್ನಾಗಿ ಮಾಡಿ ಅವನಿಗೆ ದೈವೀಕಳೆಯನ್ನು ಅನುಗ್ರಹಿಸುತ್ತಾರೆ. ಆಗ ನಮ್ಮ ಪಿಂಡಾಂಡದಲ್ಲಿರುವ ದ್ಯಾವಾ-ಪೃಥ್ವಿಯು ವಿಸ್ತಾರವಾಗುತ್ತದೆ. ಯೋಗಿಯ ಶರೀರದಲ್ಲಿರುವ ಪ್ರಾಣದ ಸಂಚಾರವು ಸುಲಭವಾಗುತ್ತದೆ.

೪. **ಸೋಮರಸ:** ಯಜಮಾನನು ತನ್ನ ಶರೀರದಲ್ಲಿ ಅಂತರ್‌ಯಜ್ಞದ ಮೂಲಕ ಸೋಮಯಾಗವನ್ನು ಮಾಡುವಾಗ ಸೋಮರಸಕ್ಕೆ ಮೇಲೆ ಹೇಳಿದ ಇತರ ಮೂರೂ ರಸವನ್ನು ಸೋಮರಸದಲ್ಲಿ ಮಿಶ್ರಮಾಡಿ, ಶುದ್ಧಿಮಾಡಿ, ಶೋಧಿಸಿ ದೇವತೆಗಳಿಗೆ ಅರ್ಪಿಸುತ್ತಾನೆ. ಇದನ್ನು ಸೇವಿಸಿದ ದೇವತೆಗಳು ಪುಷ್ಟರೂ ಚೈತನ್ಯಯುಕ್ತರೂ ಆಗಿ ಯೋಗಿಯ ಶರೀರದಲ್ಲಿ ಇನ್ನೂ ಹೆಚ್ಚು ಪ್ರಕಾಶವನ್ನು ಹೊಂದಿ ಪ್ರಕಟವಾಗುತ್ತಾರೆ. ಯಾರು ಸೋಮರಸವನ್ನು ದೇವತೆಗಳಿಗೆ ಅರ್ಪಿಸುವವರೋ ಅಂತವರ ಜೊತೆ ದೇವತೆಗಳು ಸಖ್ಯವನ್ನು ಬಯಸುತ್ತಾರೆ. ಏಕೆಂದರೆ ಸೋಮರಸವು ದೇವತೆಗಳಿಗೆ ಅನ್ನರೂಪವಾಗಿದೆ. ಈ ಸೋಮರಸವು ಇಂದ್ರನಿಗೆ ಬಹು ಪ್ರಿಯವಾದ ರಸವಾಗಿದೆ. ಇದನ್ನು ಕುಡಿದ ಮೇಲೆ ಇಂದ್ರನು ನಾನಾ ಅದ್ಭುತಕಾರ್ಯಗಳನ್ನು ಮಾಡಿದ್ದಾನೆ.
**ಇಂದ್ರನ ಸಂಪೂರ್ಣ ಅನುಗ್ರಹ ಪಡೆಯಬೇಕಾದರೆ ಸೋಮರಸವನ್ನು ಅವನಿಗೆ ಅರ್ಪಿಸಬೇಕು.**

ಈ ನಾಲ್ಕು ರಸಗಳ ಮೂಲವೆಲ್ಲಿದೆ ಎಂದು ವಿಚಾರಿಸಿದಾಗ, ಮೊದಲು ಕುಂಡಲಿನಿ ಮಾತೆಯರಿಂದ ಮಹಾಸಮುದ್ರದಲ್ಲಿ ಈ ನಾಲ್ಕೂ ರಸವೂ ಬೆರೆಸಲ್ಪಟ್ಟಿತು. ದೇವತೆಗಳಿಂದ ಪ್ರಕಟವಾಗುವ ರಸದ ಮೂಲವು ಉದಕಗಳೇ ಆಗಿದೆ. ಇಂದ್ರನ ಸ್ವರ್ಗದಲ್ಲಿಯೂ ಸಹ ಈ ನಾಲ್ಕು ನದಿಗಳು ಹರಿಯುತ್ತಿವೆ. ಈ ಸೋಮರಸದ ಬಗ್ಗೆ ಋಗ್ವೇದವು ಈ ರೀತಿ ಹೇಳುತ್ತದೆ.

ಅಧ್ವರ್ಯವಃ ಪಯಸೋಧರ್ಯಥಾ ಗೋಃ ಸೋಮೇಭಿರೀಂ ಪೃಣತಾ ಭೋಜಮಿಂದ್ರಂ ।
ವೇದಾಹಮಸ್ಯ ನಿಭೃತಂ ಮ ಏತದ್ದಿತ್ಸಂತಂ ಭೂಯೋ ಯಜತಶ್ಚಿಕೇತ ।। (ಋ ೨-೧೪-೧೦ ಸಾಭಾ)
"..... ನನಗೆ (ಇಂದ್ರ) ಪ್ರಿಯವಾದ ಈ ಸೋಮದ ಗೂಢವಾದ ಸುಖದ ಸ್ವರೂಪವನ್ನು (ರಹಸ್ಯವನ್ನು) ನಾನು ಮಾತ್ರ ತಿಳಿಯಬಲ್ಲೆನು" ಎಂದು ಹೇಳುತ್ತಾ ಯಜ್ಞಾರ್ಹನಾದ ಇಂದ್ರನು ಸೋಮವನ್ನು ಅರ್ಪಿಸತಕ್ಕ ಯಜಮಾನನನ್ನು ಅತಿಶಯವಾಗಿ ಮೆಚ್ಚುತ್ತಾನೆ."

ತದು ಪ್ರಯಕ್ಷತಮಮಸ್ಯ ಕರ್ಮ ದಸ್ಮಸ್ಯ ಚಾರುತಮಮಸ್ತಿ ದಂಸಃ ।

ಉಪಹ್ವರೇ ಯದುಪರಾ ಅಪಿನ್ವನ್ಮಧ್ವರ್ಣಸೋ ನದ್ಯಃಶ್ಚತಸ್ರಃ ೧೧ (ಋ ೧–೬೨–೬ ಆರ್ ಎಲ್ ಕ)
"ತೇಜಸ್ವಿಯೂ, ಬಲಯುತನೂ ಆದ ಇಂದ್ರನು ತನ್ನ ಮಹಿಮೆಯಿಂದ ತನ್ನ (ಗಿರಿಶಿಖರದಲ್ಲಿರುವ) ಸ್ಥಾನದಿಂದ, ಮಧುವಿನಿಂದ ಕೂಡಿದ ವಕ್ರವಾಗಿ ಹರಿಯುವ ನಾಲ್ಕು ನದಿಗಳನ್ನು ಸ್ಥಾಪಿಸಿದನು. ಅತ್ಯಂತ ಮಂಗಳಕರವಾದ ಅವನ ಈ ಕಾರ್ಯವು ಅತ್ಯಂತ ಪೂಜ್ಯವಾದದೂ."

ಈ ನಾಲ್ಕು ನದಿಗಳು ಊರ್ಧ್ವಲೋಕದ ತುತ್ತತುದಿಯಿಂದ ಕೆಳಗಿನ ಲೋಕಕ್ಕೆ ಹರಿದು ಅದನ್ನು ಪೋಷಿಸುತ್ತದೆ. ಋಗ್ವೇದದ ನವಮ ಮಂಡಲವು ಪೂರ್ಣವಾಗಿ ಸೋಮರಸದ ಕುರಿತಾಗಿಯೇ ಮೀಸಲಾಗಿದೆ. ಇದು ಸೋಮರಸದ ಮಹಿಮೆಯನ್ನೂ ಪ್ರಾಮುಖ್ಯತೆಯನ್ನೂ ಎತ್ತಿ ತೋರಿಸುತ್ತದೆ. ಸೋಮನ ಕುರಿತ ಸೂಕ್ತಗಳು ವೇದಗಳಿಗೆ ಮುಕುಟಪ್ರಾಯವಾಗಿದೆ. ಏಕೆಂದರೆ ಸೋಮರಸವು ದ್ಯುಲೋಕದಲ್ಲೂ ಮತ್ತು ಪೃಥ್ವಿಯಲ್ಲೂ ಅತ್ಯಂತ ಶ್ರೇಷ್ಠವಾದ ರಸವಾಗಿದೆ ಮತ್ತು ದಿವ್ಯವಾದ ತೇಜೋರೂಪವನ್ನು ಹೊಂದಿದೆ.

ಪೃಥ್ವಿಯಲ್ಲಿ ಸೋಮರಸವು ಚಂದ್ರನ ಬೆಳದಿಂಗಳ ಬೆಳಕಿನ ಮೂಲಕ ಜಲದಲ್ಲಿಯೂ ಔಷಧಿಗಳಲ್ಲಿಯೂ, ಅನ್ನಾದಿಗಳಲ್ಲಿಯೂ, ರಸರೂಪನೂ ಮತ್ತು ಮಾನವ ಶರೀರದ ಜೀವರಸನೂ ಆಗಿದ್ದಾನೆ. ಹಾಗೆಯೇ ಸೋಮರಸವು ದೇವತೆಗಳಿಗೆ ರಸರೂಪದಲ್ಲಿ ಅನ್ನ ಸ್ವರೂಪವಾಗಿದೆ. ಇಂತಹ ಸೋಮರಸದ ರಹಸ್ಯವನ್ನು ಕೇವಲ ಇಂದ್ರನು ಮಾತ್ರ ಬಲ್ಲ.

ಸೋಮರಸದ ವರ್ಣವು ಜೇನಿನ ಸ್ವರೂಪವಾದ ಕಂದು ಅಥವಾ ಕೆಂಪು ಮಿಶ್ರಿತ ಕಂದು ಬಣ್ಣದ್ದಾಗಿರುತ್ತದೆ. ಕೆಲವು ಕಡೆ ಹಿರಣ್ಯವರ್ಣವೆಂದೂ, ಪಚ್ಚೆವರ್ಣವೆಂದೂ ಹೇಳಿದೆ. ಆದರೆ ನನ್ನ ಅನುಭವದ ಪ್ರಕಾರ ಜೇನಿನ ವರ್ಣವೇ ಸರಿಯಾದುದಾಗಿದೆ. ಅದನ್ನು ಉಜ್ಜಿ ಶೋಧಿಸಿದ ಸೋಮರಸವು ಫಳಫಳನೇ ಹೊಳೆಯುತ್ತದೆ. ಸೋಮರಸವು ತನ್ನ ಸ್ವರೂಪವನ್ನೂ, ತೇಜಸ್ಸನ್ನೂ ಮತ್ತು ಚೈತನ್ಯವನ್ನೂ ಪಡೆದುಕೊಳ್ಳುತ್ತದೆ. ಇಂತಹ ಪವಿತ್ರವಾದ, ಮದವನ್ನುಂಟುಮಾಡುವ ರಸವು ದೇವತೆಗಳಿಗೆ ಮಾತ್ರ ಮೀಸಲಾಗಿದೆ.

ಚಂದ್ರನಿಗೂ ಸೋಮನಿಗೂ ಇರುವ ಸಂಬಂಧವನ್ನು ಅರ್ಥಮಾಡಿಕೊಳ್ಳೋಣ. ಸಪ್ತಮಸ್ವರ್ಗದಲ್ಲಿ ಸ್ಥಾಪಿಸಿರುವ ಸೂರ್ಯಮಂಡಲದ ಮೇಲೆ ಚಂದ್ರಮಂಡಲವಿದೆ. ಅಂದರೆ ವಿರಾಟ್‌ಪುರುಷನ ನೆತ್ತಿಯಲ್ಲಿ ಚಂದ್ರಮಂಡಲವಿರುವುದು. ಸೋಮರಸವನ್ನು ಚಂದ್ರಮಂಡಲದಿಂದಲೇ ತೆಗೆಯಬೇಕಾಗಿದೆ. ಹೇಗೆ ಸವಿತೃವು ಸೂರ್ಯಮಂಡಲ ಮಧ್ಯದಲ್ಲಿರುವನೋ ಅದೇ ರೀತಿಯಾಗಿ ಸೋಮನು ಚಂದ್ರಮಂಡಲ ಮಧ್ಯವರ್ತಿಯಾಗಿದ್ದಾನೆ. ಆದರೆ ಚಂದ್ರಮಂಡಲದಿಂದ ಹರಿದು ಬರುವ ಸೋಮರಸವನ್ನು ಯೋಗಿಕ ಕ್ರಿಯೆಯಿಂದ ಹಿಂಡಬೇಕಾಗಿದೆ. ಈಗ ಕೆಲವು ಸೂಕ್ತಗಳನ್ನು ನೋಡೋಣ.

ಆ ತ ಇಂದೋ ಮದಾಯ ಕಂ ಪಯೋ ದುಹಂತ್ಯಾಯವಃ ೧
ದೇವಾ ಏವೇಭ್ಯೋ ಮಧು ೧೧ (ಋ ೯–೬೨–೨೦ ಸಾಭಾ)
"ಎಲೈ ಸೋಮದೇವನೇ, ಮಧುವಿನಂತೆ ರುಚಿಕರವಾದ ನಿನ್ನ ರಸವನ್ನು ಸ್ತುತಿಕರ್ತರಾದ ಮಾನವರು ದೇವತೆಗಳಿಗೆ ಹರ್ಷಾತವಾಗಿ ಕರೆಯುತ್ತಾರೆ (ಹಸುವಿನ ಹಾಲು ಕರೆಯುವಂತೆ)."

ಏತೇ ಸೋಮಾ ಅಸೃಕ್ಷತ ಗೃಣಾನಾಃ ಶ್ರವಸೇ ಮಹೇ ೧
ಮದಿಂತಮಸ್ಯ ಧಾರಯಾ ೧೧ (ಋ ೯–೬೨–೨೨ ಸಾಭಾ)
"ಎಲ್ಲರ ಸ್ತುತಿಗೂ ಪಾತ್ರವಾದ ಈ ಸೋಮರಸವು ಮಹತ್ತಾದ ಅನ್ನಾರ್ಥವಾಗಿ ಅತ್ಯಂತ ರುಚಿಕರವಾದ ರಸದ ಧಾರಾರೂಪದಲ್ಲಿ ಋತ್ವಿಕ್ಕುಗಳಿಂದ ಪ್ರವಹಿಸಲ್ಪಡುತ್ತವೆ."

ಹರಿಃ ಸೃಜಾನಃ ಪಥ್ಯಾಮೃತಸ್ಯೇಯರ್ತಿ ವಾಚಮರಿತೇವ ನಾವಂ ೧
ದೇವೋ ದೇವಾನಂ ಗುಹ್ಯಾನಿ ನಾಮಾವಿಷ್ಕೃಣೋತಿ ಬರ್ಹಿಷಿ ಪ್ರವಾಚೇ ೧೧ (ಋ ೯–೯೫–೨ ಸಾಭಾ)
".... ಪ್ರಕಾಶಮಾನನಾದ ಸೋಮನು ಯಜ್ಞದಲ್ಲಿ ಇಂದ್ರಾದಿ ದೇವತೆಗಳ ಗೂಢವಾದ ಶರೀರಗಳನ್ನು ಸ್ತುತಿಕರ್ತನಿಗೆ ಪ್ರಕಾಶಿತನಾಗುವಂತೆ ಮಾಡುತ್ತಾನೆ."

## ೧. ದೇವತೆಗಳು ಸೋಮರಸವನ್ನು ಈ ವಿಧಾನದಿಂದ ತೆಗೆದರು.

ನಮ್ಮ ಹೃದಯದೊಳಗೆ ಸೂರ್ಯನು ಪ್ರಜ್ವಲಿಸುತ್ತಿದ್ದರೂ ಈ ದೇವತೆಗಳ ವಿಧಾನದಿಂದ ಸೋಮರಸವನ್ನು

| |
|---|
| ತೆಗೆದಾಗ ಸೂರ್ಯನನ್ನು ಅಂಧಕಾರವು ಆವರಿಸಿಕೊಳ್ಳುತ್ತದೆ. |

ಸೋಮರಸವನ್ನು ತೆಗೆಯುವ ಮೊದಲು ಸಂಕಲ್ಪವನ್ನು ಮಾಡುವುದು ಮುಖ್ಯವಾಗಿದೆ. ಏಕೆಂದರೆ ಸಂಕಲ್ಪವನ್ನು ಮಾಡಿದ ಕೂಡಲೆ ದೇವತೆಗಳು ಯೋಗಿಯ ಮಾನಸಿಕ ಕಾರ್ಯಕ್ಕೆ ಸಹಕರಿಸುವರು. ಸೋಮರಸವನ್ನು ತೆಗೆಯುವ ಎರಡು ವಿಧಾನಗಳಿವೆ. ಈಗ ದೇವತೆಗಳು ವೃತಾಸುರ ಸಂಹಾರಕ್ಕೆ ಸೋಮರಸವನ್ನು ಹೇಗೆ ತೆಗೆದರು ಎಂಬುದನ್ನು ನೋಡೋಣ. ನನ್ನ ಅನುಭವದ ಪ್ರಕಾರ, ನಮ್ಮ ಹೃದಯದಲ್ಲಿ ಸೂರ್ಯ-ಸವಿತೃವು ಪ್ರಕಾಶಿಸುತ್ತಿದ್ದರೂ, ದೇವತೆಗಳ ವಿಧಾನದಿಂದ ಸೋಮರಸವನ್ನು ತೆಗೆಯುವ ಸಂಕಲ್ಪ ಮಾಡಿದ ಕೂಡಲೆ ಅಂಧಕಾರವು ಸೂರ್ಯನನ್ನು ಕವಿಯುವುದು.

ವೃತ್ರಾಸುರನು ವಿರಾಟ್ ಪುರುಷನ ಸುತ್ತಲೂ ಅಜ್ಞಾನ ಮತ್ತು ಅಂಧಕಾರದ ಕೋಟೆಯನ್ನು ಕಟ್ಟಿ ಅಹಿಯ (ಕೈ ಮತ್ತು ಕಾಲುಗಳುಳ್ಳ ಹೆಬ್ಬಾವಿನ) ರೂಪವನ್ನು ತಾಳ ನಿದ್ರಿಸತೊಡಗಿದನು. ವಿರಾಟ್‌ಪುರುಷನ ಹೃದಯದಲ್ಲಿದ್ದ ಸೂರ್ಯನು ವೃತ್ರಾಸುರನಿಂದಾಗಿ ಕತ್ತಲಿನಲ್ಲಿ ಮುಳುಗಿದನು. ಆಗ ಸೋಮರಸವನ್ನು ದೇವತೆಗಳು ಯಾವ ರೀತಿಯಲ್ಲಿ ದೈವೀ ಜಲದಿಂದ ಬೇರ್ಪಡಿಸಿದರು ನೋಡೋಣ. ದೇವತೆಗಳು ಸೋಮಯಾಗವನ್ನು ಮಾಡುವ ಸಲುವಾಗಿ ಪುರುಷನ ನಾಭಿಯಲ್ಲಿ ಯಜ್ಞಕುಂಡವನ್ನು ಮತ್ತು ಸಪ್ತನದಿಗಳಲ್ಲಿ ಪ್ರಜ್ವಲಿಸುತ್ತಿದ್ದ ಅಗ್ನಿಯನ್ನು ಸ್ಥಾಪಿಸಿದರು. ವೃತ್ರಾಸುರನ ಕಾರಣದಿಂದ ದೈವೀಜಲವು ತಟಸ್ಥವಾಗಿದ್ದಿತು. ಸೋಮರಸವನ್ನು ತೆಗೆಯುವ ಸಂಕಲ್ಪವನ್ನು ದೇವತೆಗಳು ಮಾಡಿದ ಕೂಡಲೆ ಕತ್ತಲಿನಲ್ಲಿರುವ ಸೂರ್ಯನ ಸುತ್ತಲಿನಿಂದ ಕೆಳಮುಖವಾಗಿ ಘೃತವು ಧಾರಾಕಾರವಾಗಿ ಪ್ರವಹಿಸಿ ನಾಭಿಯಲ್ಲಿರುವ ಅಗ್ನಿಯನ್ನು ಪ್ರಜ್ವಲಿಸುವಂತೆ ಮಾಡುವುದು.

ಸೂರ್ಯನ ಸುತ್ತಲಿನಿಂದ ಘೃತದ ಧಾರೆಯು ಅಗ್ನಿಕುಂಡದ ಕಡೆಗೆ ಹರಿಯುತ್ತದೆ. ಅಗ್ನಿಗೆ ಅರ್ಪಿಸಿದ ಘೃತವು ಅಗ್ನಿಯನ್ನು ಜ್ವಾಜಲ್ಯಮಾನವಾಗಿ ಪ್ರಕಾಶಿಸುವಂತೆ ಮಾಡುತ್ತದೆ. ಹಾಗೆ ಅರ್ಪಿಸಿದ ಘೃತವು ಅಗ್ನಿಯಲ್ಲಿ ದಹಿಸಲ್ಪಟ್ಟು ಸಣ್ಣ ಸಣ್ಣ ಕಣಗಳಾಗಿ ಮಾರ್ಪಟ್ಟು ಮೇಲಕ್ಕೆ ಪ್ರವಹಿಸುತ್ತವೆ. ಈ ಘೃತದ ಕಣಗಳು ಹೃದಯದಲ್ಲಿ ಕತ್ತಲಿನಲ್ಲಿರುವ ಸೂರ್ಯನ ಮುಖಾಂತರ ಮೇಲಕ್ಕೆ ಹೋದಾಗ ಅವು ಮಾಧುರ್ಯವನ್ನು ಹೊಂದಿ ಸೋಮರಸದ ಕಣಗಳಾಗಿ ಮಾರ್ಪಟ್ಟು, ಮೇಲಕ್ಕೆ ಚಲಿಸುತ್ತವೆ. ಇಂದ್ರನ ಬಟ್ಟಲಿನಲ್ಲಿ ಒಟ್ಟಾಗಿ ಬಂದು ಸಂಗ್ರಹವಾಗುತ್ತದೆ. ಬಟ್ಟಲು ತುಂಬಿಕೊಂಡ ನಂತರ ದೇವತೆಗಳು ಸ್ವಾಹಾ ಮಂತ್ರಗಳಿಂದ ಇಂದ್ರನಿಗೆ ಅರ್ಪಿಸುತ್ತಾರೆ.

ಈ ಎಲ್ಲಾ ವಿಧಿವಿಧಾನಗಳನ್ನು ಮಾಡುತ್ತಿರುವಾಗ ಆ ಕಾರ್ಯಗಳು ವೃತ್ರಾಸುರನ ಗಮನಕ್ಕೆ ಬರುವುದಿಲ್ಲ. ಏಕೆಂದರೆ ಅವನು ಸರ್ಪರೂಪದಲ್ಲಿ ಪರ್ವತವನ್ನು ಸುತ್ತಿಕೊಂಡು ನಿದ್ರಿಸುತ್ತಿರುತ್ತಾನೆ. ಇದು ಸೋಮರಸವನ್ನು ತೆಗೆಯುವ ಮೊದಲನೆಯ ವಿಧಾನ.

ಅಭ್ಯರ್ಷತ ಸುಷ್ಟುತಿಂ ಗವ್ಯಮಾಜಿಮಸ್ಮಾಸು ಭದ್ರಾ ದ್ರವಿಣಾನಿ ಧತ್ತ ||
ಇಮಂ ಯಜ್ಞಂ ನಯತ ದೇವತಾ ನೋ ಘೃತಸ್ಯ ಧಾರಾ ಮಧೂಮತ್ತವಂತೇ || (ಋ ೪-೫೮-೧೦ ಸಾಭಾ)
"ಎಲೈ ಋತ್ವಿಕ್ಕುಗಳೇ, ಗೋ ಸಮೂಹಕ್ಕೆ ಕಾರಣವಾದ ಸ್ತುತಿಯನ್ನು ಪಠಿಸಿರಿ.... ನಮ್ಮ ಈ ಯಜ್ಞವನ್ನು ಪೂಜ್ಯರಾದ ದೇವತೆಗಳಿಗೆ ಸೇರಿಸಿರಿ. ಘೃತದ ಪ್ರವಾಹಗಳು ಮಾಧುರ್ಯೋಪೇತವಾಗಿ ಅಗ್ನಿಯನ್ನು ಪ್ರವೇಶಿಸಲಿ."

ಸಮ್ಯಕ್ಸ್ರವಂತಿ ಸರಿತೋ ನ ಧೇನಾ ಅಂತರ್ಹೃದಾ ಮನಸಾ ಪೂಯಮಾನಾಃ |
ಏತೇ ಅರ್ಷಂತ್ಯೋರ್ಮಯೋ ಘೃತಸ್ಯ ಮೃಗಾಇವ ಕ್ಷಪಣೋರೀಷಮಾಣಾಃ || (ಋ ೪-೫೮-೬ ಸಾಭಾ)
"ಅಲೆಗಳಂತಿರುವ ಈ ಘೃತದ ಧಾರೆಗಳು ಹೃದಯಾಂತರ್ಗತವಾದ ಮನಸ್ಸಿನಿಂದ ಪವಿತ್ರವಾಗಿ ಮಾಡಲ್ಪಟ್ಟು ತೃಪ್ತಿಕಾರಕಗಳಾದ ಪ್ರವಾಹದಂತೆ ಪೂರ್ಣವಾಗಿ ಪ್ರವಹಿಸುತ್ತವೆ. ಬೇಟೆಗಾರನಿಂದ ತಪ್ಪಿಸಿಕೊಂಡು ಓಡುತ್ತಿರುವ ಮೃಗಗಳು ವೇಗದಿಂದ ಪೊದೆಯಲ್ಲಿ ಪ್ರವೇಶಿಸುವಂತೆ ಇವು ಅಗ್ನಿಯನ್ನು ಪ್ರವೇಶಿಸುತ್ತವೆ."

ಅಭಿ ಪ್ರವಂತ ಸಮನೇವ ಯೋಷಾಃ ಕಲ್ಯಾಣ್ಯಃ ಸ್ಮಯಮಾನಾಸೋ ಅಗ್ನಿಂ |
ಘೃತಸ್ಯ ಧಾರಾಃ ಸಮಿಧೋ ನಸಂತ ತಾ ಜುಷಾಣೋ ಹರ್ಯತಿ ಜಾತವೇದಾಃ || (ಋ ೪-೫೮-೮ ಸಾಭಾ)
"ಮಂಗಳಸ್ವರೂಪರೂ ಹಸನ್ಮುಖಿಗಳು, ಅನುರೂಪವಾದ ಮನಸ್ಸುಳ್ಳವರೂ ಆದ ಪತ್ನಿಯರು ತಮ್ಮ ಪತಿಗಳನ್ನು ಆಲಂಗಿಸುವಂತೆ ಘೃತದ ಧಾರೆಗಳು ಅಗ್ನಿಯನ್ನು ಆಲಂಗಿಸುವಂತೆ ಸೇರಿಕೊಳ್ಳುತ್ತವೆ. ಅಗ್ನಿಯನ್ನು ಪ್ರಜ್ವಲಿಸುವಂತೆ ಮಾಡುತ್ತಾ ವ್ಯಾಪಿಸುತ್ತವೆ. ಜಾತವೇದೋರೂಪನಾದ ಅಗ್ನಿಯು ಆ ಧಾರೆಗಳನ್ನು ಸೇವಿಸುತ್ತಾ ಅವನ್ನು ಸ್ವೀಕರಿಸುತ್ತಾನೆ."

ಅಭ್ಯರ್ಷತ ಸುಷ್ಟುತಿಂ ಗವ್ಯಮಾಜಿಮಸ್ಮಾಸು ಭದ್ರಾ ದ್ರವಿಣಾನಿ ಧತ್ತ |
ಇಮಂ ಯಜ್ಞಂ ನಯತ ದೇವತಾ ನೋ ಘೃತಸ್ಯ ಧಾರಾ ಮಧುಮತ್ತವಂತೇ || (ಋ ೪-೫೮-೧೦ ಸಾಭಾ)
"ಎಲೈ ಋತ್ವಿಕ್ಕುಗಳೇ, ನಮಗೆ ಗೋಸಂಘಾತಕ್ಕೆ ಕಾರಣವಾದ ಸ್ತುತಿಯನ್ನು ಪಠಿಸಿರಿ. ನಮಗೆ ಪ್ರಶಸ್ಯವಾದ ಧನಗಳನ್ನು ತಂದೊದಗಿಸಿರಿ. ನಮ್ಮ ಈ ಯಜ್ಞವನ್ನು ಪೂಜ್ಯರಾದ ದೇವತೆಗಳಿಗೆ ಸೇರಿಸಿರಿ. ಘೃತದ ಪ್ರವಾಹಗಳು ಆನಂದವನ್ನುಂಟುಮಾಡುವ ಮಧುವಾಗಿ ಹರಿಯತ್ತದೆ."

## ೨. ಋಷಿಗಳು ಸೋಮರಸವನ್ನು ತೆಗೆಯುವ ಎರಡನೆಯ ವಿಧಾನ

ಅಂತರ್‌ಯಜ್ಞದಲ್ಲಿ ಮುಂದುವರೆದಿರುವ ಮತ್ತು ದೇವತೆಗಳೆಲ್ಲರ ದರ್ಶನವನ್ನು ಪಡೆದಿರುವ ಯೋಗಿಯು ಈ ಮಾರ್ಗದಿಂದ ಸೋಮರಸವನ್ನು ಹಿಂಡಬಹುದು. ವೃತ್ರಾಸುರ ಸಂಹಾರದ ನಂತರ ಇಂದ್ರನು ಸೂರ್ಯನನ್ನು ಸಪ್ತಮಸ್ವರ್ಗದಲ್ಲಿ ಸ್ಥಾಪಿಸಿದನು. ಇದೇ ರೀತಿ ನಾವೂ ಸಹ ಹೃದಯದಲ್ಲಿರುವ ಸೂರ್ಯನನ್ನು ಸಪ್ತಮಸ್ವರ್ಗದ ಅಭಿಮುಖವಾಗಿ ಸ್ಥಾಪಿಸಬೇಕು. ವಿರಾಟ್‌ಪುರಷನ ಶಿರಸ್ಸಿನಲ್ಲಿ ಚಂದ್ರಮಂಡಲವಿರುವುದು. ಸಪ್ತಮಸ್ವರ್ಗದಲ್ಲಿ ಸ್ಥಾಪಿಸಿರುವ ಸೂರ್ಯನ ಮೇಲೆ ಈ ಚಂದ್ರಮಂಡಲವಿರುವುದು. ಈ ಚಂದ್ರಮಂಡಲದಲ್ಲಿ ಸೋಮರಸವಿರುವುದು. ಈ ಕೆಳಗಿನ ವಿಧಾನವನ್ನು ನಾನು ಅನುಸರಿಸಿರುವೆನು. ಈ ವಿಧಾನವು ಮಾನಸಿಕ ಕ್ರಿಯೆಯಾಗಿದೆ.

ಗೋವಿನ ಕೆಚ್ಚಲನ್ನು ಹಿಂಡುವ ರೀತಿಯಲ್ಲಿ ಯೋಗಿಯು ಚಂದ್ರಮಂಡಲವನ್ನು ಹಿಂಡುತ್ತಾನೆ. ಆಗ ಗೋವಿನ ಕೆಚ್ಚಲಿನಿಂದ ಹಾಲು ಬರುವಂತೆ ಸೋಮರಸವು ಚಂದ್ರಮಂಡಲದ ಮಧ್ಯ ಬಿಂದುವಿನಿಂದ ಸ್ರವಿಸುವುದು. ಸೂರ್ಯನ ಮೇಲ್ಮೆಯಲ್ಲಿ ಕಪ್ಪು ಅಂಚಿರುವುದು ಮತ್ತು ಶ್ರದ್ಧಾದೇವಿಯು ಸಣ್ಣ ಸಣ್ಣ ಕೂದಲುಗಳು ಹಾರಾಡುತ್ತಿರುವುವು. ಸೋಮರಸವು ಈ ಕೂದಲಿನಿಂದ ಶೋಧಿಸಲ್ಪಟ್ಟು ಸೂರ್ಯಮಂಡಲವನ್ನು ಪ್ರವೇಶಿಸುವುದು. ಚಂದ್ರನಿಂದ ರಸವು ಧಾರೆಯಂತೆ ಹರಿಯುತ್ತಿರುವಾಗ ಸೂರ್ಯಮಂಡಲದಲ್ಲಿರುವ ದಶ ಕನ್ಯೆಯರು ತಮ್ಮ ಹಸ್ತಗಳಿಂದ ಉಜ್ಜಿ ರಸವು ಪ್ರಕಾಶಮಾನವಾಗಿ ಹೊಳೆಯುವಂತೆ ಮಾಡುವರು (ಅವರ ಬೆರಳುಗಳು ಮಾತ್ರ ಕಾಣುತ್ತವೆ). ಆಗ ಸೋಮರಸವು ಪಳಪಳನೆ ಹೊಳೆಯುವುದು.

ಇದನ್ನು ಬಟ್ಟಲಿನಲ್ಲಿ ಸಂಗ್ರಹಿಸಿ ಅದಕ್ಕೆ ಭಗದೇವತೆಯಿಂದ ಅನುಗ್ರಹಿತವಾದ ಮೊಸರು ಮಿಶ್ರಿತ ಹಾಲನ್ನೂ, ಅಶ್ವಿನೀದೇವತೆಗಳ ಜೇನನ್ನೂ ಮತ್ತು ಮರುತ್ತರ ಶುದ್ಧ ಜಲವನ್ನೂ ಸೇರಿಸಿ ಆ ಮಿಶ್ರಣವನ್ನು ಯೋಗಿಯು ರುಬ್ಬುಗುಂಡಿನಿಂದ ರುಬ್ಬುವನು. (ಇವೆರಡು ರಸವನ್ನು ಸೇರಿಸುವ ಋಗ್ವೇದ ಮಂತ್ರಗಳಲ್ಲದಿದ್ದರೂ, ನಾನು ಈ ವಿಧಾನವನ್ನು ಅನುಸರಿಸಿರುವೆನು.) ಆನಂತರ ಅದನ್ನು ತುಪ್ಪಳದಿಂದ ಶೋಧಿಸಿ ಚಿನ್ನದ ಅಮೃತ ಕಳಸದಲ್ಲಿ ಸಂಗ್ರಹಿಸುವನು. ಆಗ ಸೋಮದೇವತೆಯು ಕಳಸದಲ್ಲಿ ಇಳಿಯುವನು. ಈ ಕಾರ್ಯವೆಲ್ಲವೂ ಸೂರ್ಯನ ಒಳಗಡೆಯೇ ನೆರವೇರುವುದು. ಸೋಮದೇವತೆಯು ಸೋಮರಸದೊಂದಿಗೆ ಒಂದಾಗುವನು. ಆನಂತರ ನಮ್ಮ ಆತ್ಮವನ್ನು ಮೇಲಕ್ಕೆ ತೆಗೆದುಕೊಂಡು ಹೋಗಿ ಅಮೃತಕಲಶವನ್ನು ಹಿಡಿದುಕೊಳ್ಳಬೇಕು.

ಈ ಸೋಮರಸವನ್ನು ಮೊದಲಿಗೆ ಇಂದ್ರನಿಗೆ ಸಮರ್ಪಿಸಬೇಕು. ಇಂದ್ರನು ಪಿಂಡಾಂಡದ ಎರಡು ಜಾಗದಲ್ಲಿರುವನು. ಒಂದು ಹೃದಯಗುಹೆಯಲ್ಲಿರುವ ಇಂದ್ರನನ್ನು ಹೃದಯದಲ್ಲಿ ಸ್ಥಾಪಿಸಬೇಕು. ಇನ್ನೊಂದು ಯೋಗಿಯ ಶಿರಸ್ಸಿನ ಮೇಲೆ ಇರುವನು. ಆದ್ದರಿಂದ ಎರಡೂ ಕಡೆಯು ಸೋಮರಸವನನ್ನು ಅಮೃತ ಕಲಶದಿಂದ ಬಗ್ಗಿಸಿದಾಗ ರಸವು ಧಾರೆಯಂತೆ ಎರಡೂ ಕಡೆ ಇರುವ ಇಂದ್ರನ ಬಟ್ಟಲನ್ನು ಸೇರುವುದು. ಬಟ್ಟಲು ತುಂಬಿದ ನಂತರ ಸ್ವಾಹ ಮಂತ್ರದಿಂದ ಇಂದ್ರನಿಗೆ ಸಮರ್ಪಿಸಬೇಕು.

ಆನಂತರ ವಾಯುವಿಗೆ ಸೋಮರಸವನ್ನು ಸಮರ್ಪಿಸಬೇಕು. ತದನಂತರ ಇತರ ದೇವತೆಗಳಿಗೆ ಸಮರ್ಪಿಸಬೇಕು. ಈ ಸೋಮಯಾಗವನ್ನು ನಿರ್ವಹಿಸಲು ಕನಿಷ್ಠ ಮೂರು ಘಂಟೆಗಳ ಕಾಲ ಬೇಕಾಗುತ್ತದೆ ಆದರೆ ಈ ವಿಧಾನದಿಂದ ತಯಾರಾದ ಸೋಮರಸವು ಮೊದಲಿನ ವಿಧಾನಕ್ಕಿಂತ ಶುಭ್ರವಾಗಿರುವುದು ಮತ್ತು ಮಾಧುರ್ಯೋಪೇತವಾಗಿರುವುದು. ಯೋಗಿಯು ಮಾಡುವ ಈ ಕ್ರಿಯೆಗಳು ದೇವತೆಗಳ ನೆಚ್ಚಿನ ವಿಧಾನವಾಗಿದೆ. ಇದಕ್ಕೆ ಪೂರಕವಾದ ಕೆಲವು ಋಗ್ವೇದ ಸೂಕ್ತಗಳನ್ನು ನೋಡೋಣ.

ತ್ವಾಂ ಯಜ್ಞೈರವೀವೃಧನ್ಪವಮಾನ ವಿಧರ್ಮಣಿ ।
ಅಥಾ ನೋ ವಸ್ಯ ಸಸ್ಕೃಧಿ ।। (ಋ ೯-೪-೯ ಸಾಭಾ)
“ಶುದ್ಧವಾದ ಪ್ರವಾಹದಿಂದ ಸ್ರವಿಸುವ ಎಲೈ ಸೋಮನೇ, ನಿನ್ನನ್ನು ಯಜ್ಞಗಳಿಂದ ತಮ್ಮ ತಮ್ಮ ವೈಯಕ್ತಿಕವೂ ವಿಶಿಷ್ಟವೂ ಆದ ಧಾರಣೆಗಾಗಿ ಯಜಮಾನರು ನಿನ್ನ ಬೆಳವಣಿಗೆಯನ್ನುಂಟು ಮಾಡುತ್ತಾರೆ. ಆನಂತರ ನಮ್ಮನ್ನು ಶ್ರೇಯಸ್ಸಿನಿಂದಲೂ ಸುಖದಿಂದಲೂ ಕೂಡಿದವರನ್ನಾಗಿ ಮಾಡು.

ಸ ಸಪ್ತ ಧೀತಿಬಿರ್ಹಿತೋ ನದ್ಯೋ ಅಜಿನ್ವದದ್ರುಹಃ ।
ಯಾ ಏಕಮಕ್ಷಿ ವಾವೃಧುಃ ।। (ಋ ೯-೯-೪ ಸಾಭಾ)
“ಯಾವ ಸಪ್ತನದಿಗಳೂ, ಯಾವ ಮುಖ್ಯವಾದ ಸೋಮನನ್ನು ಕ್ಷಯಿಸದಂತೆ ಬೆಳೆಸುತ್ತಾರೆಯೋ ಅದೇ ಸೋಮನು ಬೆರಳುಗಳ ನಡುವೆ ಇಡಲ್ಪಟ್ಟು ದ್ರೋಹರಹಿತನಾಗಿ ಅದೇ ಸಪ್ತನದಿಗಳನ್ನೂ ಪ್ರೀತಿಗೊಳಿಸುತ್ತಾನೆ.”

ಪುನಾತಿ ತೇ ಪರಿಸ್ರುತಂ ಸೋಮಂ ಸೂರ್ಯಸ್ಯ ದುಹಿತಾ ।
ವಾರೇಣ ಶಶ್ವತಾ ತನಾ ।। (ಋ ೯-೧-೬ ಸಾಭಾ)
"ಎಲೈ ಸೋಮನೇ, ಪ್ರವಾಹರೂಪದಲ್ಲಿ ಹರಿಯತಕ್ಕ ನಿನ್ನ ರಸವನ್ನು ಸೂರ್ಯನ ಮಗಳಾದ ಶ್ರದ್ಧಾದೇವಿಯು ನಿತ್ಯವಾದುದೂ ವಿಸ್ತೃತವಾಗಿ ಹರಡಿದುದೂ ಆದ ಕೂದಲಿನಿಂದ ಶುದ್ಧಿಗೊಳಿಸುತ್ತಾಳೆ."

ಸೂರ್ಯಮಂಡಲದ ಮೇಲೆ ಚಂದ್ರಮಂಡಲವಿರುವುದು. ಎರಡೂ ಮಂಡಲಗಳು ಸೇರುವ ಜಾಗದಲ್ಲಿ ಸೂರ್ಯನನ್ನು ಆವರಿಸಿರುವ ಕತ್ತಲಿನ ಅಂಚು ಇರುವುದು. ಈ ಅಂಚಿನಲ್ಲಿ, ನಮ್ಮ ಮೈಮೇಲಿನ ರೋಮದ ರೀತಿ, ಕೂದಲುಗಳು ಗಾಳಿಯಲ್ಲಿ ಸಿಲುಕಿದ ಹಾಗೆ ಹಾರಾಡುತ್ತಿರುವುದು. ಚಂದ್ರಮಂಡಲದಿಂದ ಹರಿಯುವ ರಸವನ್ನು ಈ ಕೂದಲುಗಳು ಶೋಧಿಸುತ್ತವೆ. ಸೂರ್ಯನು ಹೃದಯದಲ್ಲಿ ಪ್ರಕಟವಾದಾಗ ಕೂದಲು ಕಾಣಿಸುವುದಿಲ್ಲ ಆದರೆ ಸಪ್ತಮಸ್ವರ್ಗದಲ್ಲಿ ಸೂರ್ಯನನ್ನು ಸ್ಥಾಪಿಸಿದಾಗ ಮತ್ತು ಸೋಮರಸವನ್ನು ಹಿಂಡುವ ಸಂಕಲ್ಪಮಾಡಿದಾಗ ಮಾತ್ರ ಶ್ರದ್ಧಾದೇವಿಯ ಕೂದಲು ಕಾಣಿಸುತ್ತದೆ.

ತಮೀಮಣ್ವೀಃ ಸಮರ್ಯ ಆ ಗೃಭ್ಣಂತಿ ಯೋಷಣೋ ದಶ ।
ಸ್ವಸಾರಃ ಪಾರ್ಯೇದಿವಿ ।।
"ಯಜ್ಞದ ಕೊನೆ ದಿನ ಸ್ತ್ರೀ ರೂಪವಾಗಿರುವುವೂ ಸಹೋದರಿಯರಂತಿರುವುವೂ ಆದ ಹತ್ತು ಬೆರಳುಗಳೂ ಸಹ ಆ ಸೋಮವನ್ನೇ ಹಿಡಿದಿರುತ್ತದೆ." (೯-೧-೭ ಸಾಭಾ)

ತಮೀಂ ಹಿನ್ವಂತ್ಯಗ್ರುವೋ ಧಮಂತಿ ಬಾಕುರಂ ದೃತಿಂ ।

ತ್ರಿಧಾತು ವಾರಣಂ ಮಧು ।। (ಋ ೯-೧-೮ ಸಾಭಾ)

"ಇದೇ ಹತ್ತು ಬೆರಳುಗಳು ಸೋಮವನ್ನು ಹಿಂಡುತ್ತವೆ, ಪ್ರಕಾಶಮಾನವಾದುದೂ, ನೀರಿನ ಚೀಲದಂತೆ ಹೊಳೆಯುವುದೂ ಆದ ಸೋಮವನ್ನು ಕುಟ್ಟಿ ಹಿಂಡುತ್ತವೆ. ಆನಂತರ ಅದರ ರಸವು ದೋಣಕಲಶ, ಆಧವನೀಯ ಮತ್ತು ಪೂತಭೃತ್ತೆಂಬ ಪಾತ್ರೆಗಳಲ್ಲಿ ಸ್ಥಾಪಿತವೂ ಶತ್ರುಗಳನ್ನು ತಡೆಗಟ್ಟುವುದೂ ಆಗುತ್ತದೆ."

ಹಸ್ತ ಚ್ಯುತೇಭಿರದ್ರಿಭಿಃ ಸುತಂ ಸೋಮಂ ಪುನೀತನ ।

ಮಧಾವಾ ಧಾವತಾ ಮಧು ।। (ಋ ೯-೧೧-೫ ಸಾಭಾ)

"ಎಲೈ ಋತ್ವಿಕ್ಕುಗಳೇ, ಕೈಗಳಿಂದ ಪ್ರಯೋಗಿಸಲ್ಪಟ್ಟ ಹಿಂಡುವ ಕಲ್ಲುಗಳಿಂದ ಹಿಂಡಲ್ಪಟ್ಟ ಸೋಮವನ್ನು ದಶಾಪವಿತ್ರದಲ್ಲಿ ಶುದ್ಧಿಗೊಳಿಸಿರಿ. ಮಧುಕರವಾದ ಈ ಸೋಮದೊಡನೆ ರುಚಿಯುಳ್ಳ ಕ್ಷೀರವನ್ನು ಸೇರಿಸಿ ಮಿಶ್ರಮಾಡಿರಿ."

ಅದಸ್ಯ ಶುಷ್ಮಿಣೋ ರಸೇ ವಿಶ್ವೇ ದೇವಾ ಅಮತ್ಸತ ।
ಯದೀ ಗೋಭಿರ್ವಸಾಯತೇ ।। (ಋ ೯-೧೪-೩ ಸಾಭಾ)
"ಸೋಮಪರಿಷ್ಕರಣಾನಂತರ ಆ ಸೋಮರಸಕ್ಕೆ ಹಾಲು ಅಥವಾ ಮೊಸರನ್ನು ಮಿಶ್ರಮಾಡಿ ಪಾನಯೋಗ್ಯವಾಗುವಂತೆ ಮಾಡಿದಾಗ ಶಕ್ತಿಯುತವಾದ ಆ ಸೋಮರಸಪಾನದಲ್ಲಿ ಸಮಸ್ತ ದೇವತೆಗಳೂ ಹರ್ಷವನ್ನು ಪಡೆಯುತ್ತಾರೆ.

ಆ ಕಲಶೇಷು ಧಾವತಿ ಪವಿತ್ರೇ ಪರಿ ಷಿಚ್ಯತೇ ।
ಉಕ್ಥೈರ್ಯಜ್ಞೇಷು ವರ್ಧತೇ ।। (ಋ ೯-೧೭-೪ ಸಾಭಾ)
"ಈ ಸೋಮವು ಕಲಶಾಭಿಮುಖವಾಗಿ ಬೇಗನೆ ಹರಿದುಹೋಗಿ ದಶಾಪವಿತ್ರದಲ್ಲಿ ಶೋಧಿಸಲ್ಪಟ್ಟು ಯಜ್ಞಾರ್ಥವಾಗಿ ಸ್ತೋತ್ರಗಳಿಂದ ಪ್ರಶಂಸಿಸಲ್ಪಟ್ಟು ವೃದ್ಧಿಯನ್ನು ಹೊಂದುತ್ತವೆ."

ತವ ವಿಶ್ವೇ ಸಜೋಷಸೋ ದೇವಾಸಃ ಪೀತಿಮಾಶತ ।
ಮದೇಷು ಸರ್ವಧಾ ಅಸಿ ।। (ಋ ೯-೧೮-೩ ಸಾಭಾ)
"ಎಲೈ ಸೋಮವೇ, ನಿನ್ನನ್ನು ಪಾನಮಾಡಿ ಸಮಸ್ತ ದೇವತೆಗಳೂ ಒಂದೇ ವಿಧವಾದ ಹರ್ಷವನ್ನು ಪಡೆಯುತ್ತಾರೆ. ನಿನ್ನನ್ನು ಸ್ತುತಿಸುವವರಿಗೆ ನೀನು ಸಕಲಾಭೀಷ್ಟಗಳನ್ನು ಒದಗಿಸಿಕೊಡುವೆ."

ಈಗ ಸೋಮರಸವನ್ನು ಹಿಂಡಿ ತೆಗೆಯುವ ವಿಧಾನವನ್ನು ಮತ್ತೊಮ್ಮೆ ತಿಳಿಯೋಣ.

೧. ಚಂದ್ರಮಂಡಲವನ್ನು ಗೋವಿನ ಕೆಚ್ಚಲಿನಂತೆ ಹಿಂಡಬೇಕು.
೨. ಸೂರ್ಯನ ಮಗಳಾದ ಶ್ರದ್ಧಾದೇವಿಯ ಕೂದಲಿನಿಂದ ಶೋಧಿಸಲ್ಪಡಬೇಕು.
೩. ದಶ ಕನ್ಯೆಯರು ತಮ್ಮ ಕೈಗಳ ಬೆರಳಿಂದ ಚಂದ್ರಮಂಡಲವನ್ನು ಹಿಂಡುವರು ಮತ್ತು/ಅಥವಾ ಋತ್ವಿಜರು ತಮ್ಮ ಕೈಗಳಿಂದ ಹರಿಯುತ್ತಿರುವ ಸೋಮರಸವನ್ನು ಉಜ್ಜುವರು. ಋಗ್ವೇದ ಪ್ರಮಾಣ;

೪. ರಸಕ್ಕೆ ಹಾಲು ಮಿಶ್ರಿತ ಮೊಸರುನ್ನು ಮಿಶ್ರ ಮಾಡಬೇಕು. ರುಬ್ಬುಗುಂಡಿನಲ್ಲಿ ಈ ಮಿಶ್ರಣವು ಇರುವಂತೆ ಭಾವಿಸಿ ರಸವನ್ನು ರುಬ್ಬಬೇಕು.
೫. ಆನಂತರ ರಸವನ್ನು ಶೋಧಿಸಿ ಕಳಸದಲ್ಲಿ ಸಂಗ್ರಹಿಸಬೇಕು.
೬. ಹೃದಯದಲ್ಲಿರುವ ನಮ್ಮ ಆತ್ಮನನ್ನು ಮೇಲಿರುವ ಸೂರ್ಯಮಂಡಲಕ್ಕೆ ತೆಗೆದುಕೊಂಡು ಹೋಗಿ ಕಳಸವನ್ನು ಹಿಡಿದುಕೊಳ್ಳಬೇಕು.
೭. ಈ ಕಾರ್ಯಗಳೆಲ್ಲವನ್ನು ಮಾಡುವಾಗ ಸೋಮದೇವನನ್ನು ಮಂತ್ರಗಳಿಂದ ಹೊಗಳುತ್ತಿರಬೇಕು ಮತ್ತು ಕಳಸದಲ್ಲಿ ಇಳಿಯುವಂತೆ ಆಹ್ವಾನಿಸಬೇಕು. ಸೋಮದೇವನು ಕಳಸದಲ್ಲಿ ಇಳಿದ ಮೇಲೆ ಸೋಮರಸವನ್ನು ಮೊದಲು ಇಂದ್ರನಿಗೆ, ವಾಯುವಿಗೆ ತದನಂತರ ಇತರ ದೇವತೆಗಳಿಗೆ ಅಗ್ನಿಯ ಮುಖಾಂತರ ಸ್ವಾಹಾ ಮಂತ್ರದಿಂದ ಅರ್ಪಿಸಬೇಕು.
(ನಾನು ನೇರವಾಗಿ ದೇವತೆಗಳನ್ನು ಆಹ್ವಾನಿಸಿ ಅವರ ಬಟ್ಟಲಿಗೆ ಸೋಮರಸವನ್ನು ಕಳಸದಿಂದ ಸುರಿದು ಸ್ವಾಹ ಪೂರ್ವಕವಾಗಿ ಅರ್ಪಿಸುತ್ತಿದ್ದೆನು. ಆ ವಿಧಾನವನ್ನು ದೇವತೆಗಳು ಅಗ್ನಿಯ ಮುಖಾಂತರ ಕೊಡುವುದಕ್ಕಿಂತಲೂ ನೇರವಾಗಿ ಕೊಡುವ ವಿಧಾನವನ್ನು ಇಷ್ಟಪಡುತ್ತಿದ್ದರು.)

೮. ಕೊನೆಯಲ್ಲಿ ಕಳಸದೊಂದಿಗೆ ಆತ್ಮನನ್ನು ಸ್ವಸ್ಥಾನಕ್ಕೆ ತಂದು ಸೋಮರಸವನ್ನು ಅಗ್ನಿಗೆ ಅರ್ಪಿಸಿ ತದನಂತರ ಉಳಿದ ಸೋಮರಸದಿಂದ ಕೂಡಿದ ಕಳಸವನ್ನು ಯಜ್ಞಕುಂಡದಲ್ಲಿ ಹಾಕುತ್ತಿದ್ದೆನು. ಕಳಸದಲ್ಲಿ ಉಳಿದ ಸೋಮರಸವು ರುದ್ರನಿಗೆ ಅರ್ಪಿತವಾಗುವುದು.

## ಸೋಮರಸದ ಮೂರನೆಯ ಸ್ಥಾನ

ಸೋಮರಸವು ನದಿಯಂತೆ ಹರಿಯವ ಒಂದು ಸ್ಥಾನವಿದೆ, ಅದುವೇ ಇಂದ್ರನ ಬೆಳಕಿನ ಲೋಕ ಅಥವಾ ಉರುಲೋಕ ಎಂದು ಕರೆಯಲ್ಪಡುವ ಮೋಕ್ಷ. ಇಲ್ಲಿಂದಲೇ ಎಲ್ಲರ ಆತ್ಮಜ್ಯೋತಿಗಳು ಬಂದಿರುವುದು. ಇಂದ್ರನ ನಂದನವನದಲ್ಲಿ ಸೋಮರಸದ ಪ್ರವಾಹವು ನದಿಯ ರೂಪದಲ್ಲಿ ಹರಿಯುತ್ತದೆ ಎಂದು ಈ ಮೊದಲೇ ತಿಳಿದೆವು. ಅಮರತ್ವವನ್ನು ಪಡೆದ ನಂದನವನದ ನಿವಾಸಿಗಳು ಸೋಮರಸ ಪಾನದ ಇಚ್ಛೆ ಉಂಟಾದ ಕೂಡಲೆ ಸೋಮರಸದ ನದಿಯಿಂದ ಒಂದು ಕಾಲುವೆಯು ಅವರ ಕಡೆಗೇ ಹರಿದುಬರುತ್ತದೆ. ತಾವಾಗಿ ಕಾಲುವೆ ಬಳಿ ಹೋಗುವ ಅವಶ್ಯಕತೆ ಇಲ್ಲ. ವಿಶ್ವವಿನಾಶದ ನಂತರ ಸಕಲರೂ ನಂದನವನದಲ್ಲಿ ಸೋಮರಸವನ್ನು ಪಾನವನ್ನು ಮಾಡಬಹುದು. ಅಲ್ಲಿ ಅವರ ಇಚ್ಛೆಗಳೆಲ್ಲವೂ ಪೂರೈಸಲ್ಪಡುವುದು.

ಆದ್ದರಿಂದ ಇಂದ್ರನ ಲೋಕದಲ್ಲಿಯೇ ಸೋಮರಸವು ಇರುವುದರಿಂದ ಇಂದ್ರನು ಅದನ್ನು ಇಚ್ಛೆ ಪಡುವುದಿಲ್ಲ. ಯಾವಾಗ ಋಷಿಗಳು ಋಗ್ವೇದ ಮಂತ್ರ ಪೂರ್ವಕವಾಗಿ ಸೋಮರಸವನ್ನು ಅರ್ಪಿಸುವರೋ ಆಗ ಮಂತ್ರಗಳಿಂದ ಉತ್ತೇಜಿತನಾದ ಇಂದ್ರನು ಸೋಮರಸವನ್ನು ಸೇವಿಸಿ ಋಷಿಗಳ ಇಷ್ಟಾರ್ಥವನ್ನು ಪೂರೈಸುವನು. ಆದ್ದರಿಂದಲೇ ಹೇಳುವುದು ಯಜ್ಞವಿರುವುದು ಇಂದ್ರನಿಗಾಗಿ.

ಸಾಮಾನ್ಯವಾಗಿ ಇಂದ್ರನು ಜ್ಯೋತಿರೂಪವಾಗಿಯೇ ಎಲ್ಲರಿಗೂ ಕಾಣಿಸಿಕೊಳ್ಳುವನು. ಆದರೆ ಯಜ್ಞಮಾಡುವ ಯೋಗಿಗಳಿಗೆ ಮಾತ್ರ ಮಾನವ ಸ್ವರೂಪವಾದ ಇಂದ್ರಸ್ವರೂಪದಲ್ಲಿ ಕಾಣಿಸಿಕೊಂಡು ಸೋಮರಸವನ್ನು ಸ್ವೀಕರಿಸುವನು. ಇಂದ್ರನು ಅನಂತರೂಪಗಳನ್ನು ಧರಿಸುವುದರಿಂದ ಪ್ರಪಂಚದ ಎಲ್ಲರೂ ಏಕಕಾಲದಲ್ಲಿ ಇಂದ್ರನನ್ನು ಆಹ್ವಾನಿಸಿ ಸೋಮರಸವನ್ನು ಅರ್ಪಿಸಿದರೂ ಸಹ ಸಕಲರ ಬಳಿ ಬಂದು ಸೋಮರಸವನ್ನು ಸ್ವೀಕರಿಸುವನು. ಆದ್ದರಿಂದ ನಾವು ಅವನ ಸ್ವರೂಪವನ್ನು ಕಲ್ಪಿಸಿಕೊಳ್ಳಬಾರದು. ಋಷಿಗಳು ಬೆಳಕಿನ ಲೋಕದ ಜ್ಞಾನವನ್ನು ಹೊಂದಿ ಇಂದ್ರಸ್ವರೂಪವನ್ನು ದರ್ಶಿಸಿರುವರು. ಋಷಿಗಳು ಯಾವ ರೂಪದಿಂದ ದರ್ಶಿಸಿರುವರೋ ಆ ರೂಪದಲ್ಲಿಯೇ ದರ್ಶನವನ್ನು ಕೊಡೆಂದು ಇಂದ್ರನನ್ನು ಆಗ್ರಹಿಸಬೇಕು.

ಋಷಿಗಳು ಇಂದ್ರರೂಪವನ್ನು ಹದಿನಾರು ವರ್ಷದ ಪ್ರಾಯದಿಂದ ಕೂಡಿದ ಬಂಗಾರವರ್ಣವುಳ್ಳ ತೆಳು ಕಾಯವನ್ನು ಹೊಂದಿರುವಂತೆ ದರ್ಶನವನ್ನು ಪಡೆದಿರುವರು. ಇಂದ್ರನ ಶರೀರದಿಂದ ಹಿರಣ್ಯವರ್ಣದ ಕಾಂತಿಯ ಕಿರಣಗಳು ಹೊರಹೊಮ್ಮುತ್ತಿವೆ. (ಇತರ ದೇವತೆಗಳ ಶರೀರದಿಂದ ಈ ರೀತಿಯ ಕಿರಣಗಳು ಹರಿಯುವುದಿಲ್ಲ.) ಈ ಕಾರಣದಿಂದ ಇಂದ್ರನ ಸುತ್ತಲೂ ಇರುವ ವಾಯುವು ಹೊಂಬಣ್ಣದಿಂದ ಕೂಡಿರುವನು. ಆದ್ದರಿಂದಲೇ ಇಂದ್ರನನ್ನು ಹಿರಣ್ಯಗರ್ಭ ಎಂದು ಕರೆಯುತ್ತಾರೆ. ಯಾವ ಯೋಗಿಯು ಇಂದ್ರನಿಗೆ ಸೋಮರಸವನ್ನು ಅರ್ಪಿಸುತ್ತಾನೋ ಅವನು ಇಂದ್ರನಿಗೆ ಮಿತ್ರನಾಗುತ್ತಾನೆ.

## ಸೋಮರಸ ಮತ್ತು ಅಗ್ನಿಹೋತ್ರ

ಸಾಮಾನ್ಯ ಮಾನವರು ಯಾವ ರೀತಿಯಲ್ಲಿ ಸೋಮರಸವನ್ನು ಅಗ್ನಿಹೋತ್ರದಲ್ಲಿಯೂ ಕೂಡ ಅರ್ಪಿಸಬಹುದೆಂದು ನೋಡೋಣ. ಸಾಮಾನ್ಯವಾಗಿ ಬ್ರಾಹ್ಮಣರು ಸೋಮಯಾಗವನ್ನು ಹಲವು ದಿನಗಳ ಕಾಲಮಾಡುತ್ತಾರೆ. ಅನೇಕ ಔಷಧೀಯ ಲತೆಗಳನ್ನು ತಂದು ಅಥವಾ ಸೋಮಲತೆಯು ಸಿಕ್ಕರೆ ತಂದು, ಅದಕ್ಕೆ ಮದ ಬರುವ ಇತರ ಲತೆಗಳನ್ನು ಬಳಸಿ, ಜಜ್ಜಿ ಅರೆದು, ಅದರ ರಸವನ್ನು ಹಿಂಡಿ ತೆಗೆಯುತ್ತಾರೆ. ಇದಕ್ಕೆ ಅನೇಕ ವಿಧಿವಿಧಾನವನ್ನು ಅನುಸರಿಸುತ್ತಾರೆ.

ಆನಂತರ ಯೂಪಸಂಭವನ್ನು (ಕಂಭ) ಯಜ್ಞ ಸ್ಥಳದಲ್ಲಿ ಸ್ಥಾಪಿಸಿ ಅದಕ್ಕೆ ಮೇಕೆಯನ್ನು ಕಟ್ಟಿ ಅನೇಕ ದಿನಗಳ ಕಾಲ ಸೋಮಯಾಗವನ್ನು ಮಾಡುತ್ತಾರೆ ಕೊನೆಯ ದಿನ ಮೇಕೆಯನ್ನು ಬಲಿಕೊಟ್ಟು, ವಪೆಯನ್ನು ಅಗ್ನಿಗೆ ಅರ್ಪಿಸುತ್ತಾರೆ. ಲತೆಯಿಂದ ತೆಗೆದ ಸೋಮರಸವನ್ನು ಮಂತ್ರೋಕ್ತವಾಗಿ ದೇವತೆಗಳಿಗೆ ಅರ್ಪಿಸಿ, ಆನಂತರ ಉಳಿದ ಸೋಮರಸವನ್ನು ಭಕ್ತಾದಿಗಳಿಗೂ ಕೊಟ್ಟು ತಾವೂ ಸಹ ಪ್ರಸಾದರೂಪದಲ್ಲಿ ಸೇವಿಸುತ್ತಾರೆ.

ಬಹಿರ್‌ಯಜ್ಞದಲ್ಲಿಯೂ ಸಹ ಬಹಳ ಸುಲಭ ರೀತಿಯಲ್ಲಿ ಸೋಮರಸವನ್ನು ದೇವತೆಗಳಿಗೆ ಅರ್ಪಿಸಬಹುದು. ಎಲ್ಲವೂ ಮನಸ್ಸಿನ ಸಂಕಲ್ಪದಿಂದಲೇ ಆಗುವುದರಿಂದ ಈ ಸೋಮರಸವನ್ನೂ ಸಹ ಸಂಕಲ್ಪ ಮುಖೇನ ಅರ್ಪಿಸಬಹುದೆಂದು ನನ್ನ ಭಾವನೆ. ಬ್ರಾಹ್ಮೀಮುಹೂರ್ತದಲ್ಲಿ ಎದ್ದು ಪರಿಶುದ್ಧನಾಗಿ, ಸಕಾಲದಲ್ಲಿ ಸೂರ್ಯ-ಸವಿತೃದೇವರಿಗೆ ಅರ್ಘ್ಯವನ್ನು ಕೊಟ್ಟು ಸೂರ್ಯೋದಯದ ನಂತರ ಸೋಮಯಾಗವನ್ನು ಮಾಡಬೇಕು. ಏಕೆಂದರೆ ಅಗ್ನಿಯಲ್ಲಿ ದಹಿಸಲ್ಪಟ್ಟ ಘೃತವು ಸೂರ್ಯನ ಕಿರಣಗಳಿಂದ ಸಂಸ್ಕರಿಸಲ್ಪಟ್ಟು ಸೋಮರಸವಾಗಿ ಪರಿವರ್ತನೆ ಹೊಂದುತ್ತದೆ.

ಯಜಮಾನನು ಘೃತದಲ್ಲಿಯೇ ಸೋಮರಸವಿರುವುದಾಗಿ ಸಂಕಲ್ಪಮಾಡಬೇಕು. ಪ್ರಜ್ವಲಿಸುತ್ತಿರುವ ಅಗ್ನಿಯಲ್ಲಿ ಘೃತವನ್ನು ಹಾಕಿದಾಗ ಅಗ್ನಿಯ ಜ್ವಾಲೆಯಲ್ಲಿ ಘೃತವು ದಹಿಸಿ, ಸಣ್ಣ ಸಣ್ಣ ಕಣಗಳಾಗಿ ಮಾರ್ಪಟ್ಟು ಸೂರ್ಯೋದಯದ ರಶ್ಮಿಗಳಿಂದ ಸಂಸ್ಕರಿತಗೊಂಡು ಸೋಮದ ಕಣಗಳಾಗಿ ಪರಿವರ್ತನೆ ಹೊಂದುವುದು ಎಂದು ಭಾವಿಸಬೇಕು. ಸೂರ್ಯನಿಂದ ಬರುವ ದೇವತೆಗಳಿಗೆ ಅರ್ಪಿಸಬೇಕು. ಆಗ ಸೋಮರಸದ ಕಣಗಳು ಒಂದುಗೂಡಿ ಇಂದ್ರನ ಮತ್ತು ಇತರ ದೇವತೆಗಳ ಬಟ್ಟಲಿನಲ್ಲಿ ಸಂಗ್ರಹವಾಗುವುದು.

ಈ ಸೋಮರಸದ ಸೂಕ್ಷ್ಮ ಕಣಗಳು ತನ್ನಷ್ಟಕ್ಕೆ ತಾನೆ ಒಂದುಗೂಡಿ ದೇವತೆಗಳ ಬಟ್ಟಲಿಗೆ ಹೋಗಿ ತಲುಪುತ್ತದೆ. ಬಟ್ಟಲು ತುಂಬುತ್ತಿರುವಾಗ ಸೋಮಮಂತ್ರವನ್ನು ಜಪಿಸಬೇಕು. ಬಟ್ಟಲು ತುಂಬಿದ ನಂತರ ಮಂತ್ರೋಚ್ಚಾರಪೂರ್ವಕವಾಗಿ ಮೊದಲು ಇಂದ್ರ ಮತ್ತು ವಾಯುದೇವರಿಗೆ ಅರ್ಪಿಸಿ, ತದನಂತರ ಇತರ ದೇವತೆಗಳಿಗೆ ಸ್ವಾಹಾ ಪೂರ್ವಕವಾಗಿ ಅರ್ಪಿಸಬೇಕು. ಚರುಪುರೋಡಾಷಾದಿಗಳನ್ನು ಅಗ್ನಿಯಲ್ಲಿ ಅರ್ಪಿಸುವುದು ಕೇವಲ ಯಜಮಾನನ ಮಾನಸಿಕ ಸಂತೋಷಕ್ಕೆ ಮಾತ್ರ ಎಂದು ಭಾವಿಸುತ್ತೇನೆ. ಏಕೆಂದರೆ ದೇವತೆಗಳು ಕೇವಲ ಸೋಮರಸವನ್ನು ಮಾತ್ರ ಇಚ್ಛಿಸುತ್ತಾರೆ.

ಇಂದ್ರನು ಸೋಮರಸ ಪಾನವನ್ನು ಮಾಡಿ ಮಹತ್ಕಾರ್ಯಗಳನ್ನು ಮಾಡಿದ ಮಹಿಮೆಯನ್ನು ನೋಡಿ.

ಏಷ ಪ್ರ ಪೂರ್ವೀರವ ತಸ್ಯ ಚಮ್ರಿಷೋಅತ್ಯೋ ನ ಯೋಷಾಮುದಯಂಸ್ತ ಭುರ್ವಣಿಃ ೧
ದಕ್ಷಂ ಮಹೇ ಪಾಯಯತೇ ಹಿರಣ್ಯಯಂ ರಥಮಾವೃತ್ಯಾ ಹರಿಯೋಗಮೃಭ್ವಸಂ ೧೧
(ಋ ೧-೫೬-೧ ಸಾಭಾ ಭಾವಾರ್ಥ)
"ಇಂದ್ರನು ಯಜಮಾನನು ಅರ್ಪಿಸುವ ಸೋಮರಸವನ್ನು ಪಾನಮಾಡಲು ತನ್ನ ಉನ್ನತ ಶಿಖರದಿಂದ ಸಾಧಕನ ಶರೀರದಲ್ಲಿ ಉತ್ಸಾಹದಿಂದ ಆವಿರ್ಭವಿಸುತ್ತಾನೆ. ಆಗ ಸಾಧಕನು ಉತ್ಸಾಹದಿಂದ ಇಂದ್ರನಿಂದ ಮಾರ್ಗದರ್ಶನ ಪಡೆದು ಸೋಮರಸವನ್ನು ಇಂದ್ರನ ಮಹಾ ಕಾರ್ಯಗಳಿಗಾಗಿ ಅರ್ಪಿಸುತ್ತಾನೆ.

ಅಸಾವಿ ಸೋಮ ಇಂದ್ರ ತೇ ಶವಿಷ್ಠ ಧೃಷ್ಣವಾ ಗಹಿ ೧
ಆ ತ್ವಾ ಪೃಣಕ್ತ್ವಿಂದ್ರಿಯಂ ರಜಃ ಸೂರ್ಯೋ ನ ರಶ್ಮಿಭಿಃ ೧೧ (ಋ ೧-೮೪-೧ ಸಾಭಾ)
"ಎಲೈ ಇಂದ್ರನೇ, ನಿನಗಾಗಿ ಸೋಮರಸವು ಹಿಂಡಲ್ಪಟ್ಟಿದೆ. ಆದ್ದರಿಂದಲೇ ಶತ್ರುದಮನವನ್ನು ಮಾಡುವವನೂ ಆದ ಇಂದ್ರನೇ, ನೀನು ದೇವಯಜ್ಞಪ್ರದೇಶಕ್ಕೆ ದಯಮಾಡಿ ಸ್ವೀಕರಿಸು. ಸೂರ್ಯನು ತನ್ನ ಕಿರಣಗಳ ಮೂಲಕ ಅಂತರಿಕ್ಷವನ್ನು ತುಂಬುವಂತೆ, ಸೋಮರಸಪಾನದಿಂದ ಲೌಇಸಿದ ಪ್ರಬಲವಾದ ಶಕ್ತಿಯು ನಿನ್ನ ದೇಹವನ್ನೆಲ್ಲಾ ತುಂಬಿಕೊಳ್ಳಲಿ."

ಯಸ್ಮಾದಿಂದ್ರಾದ್ಬೃಹತಂ ಕಿಂ ಚನೇಮೃತೇ ವಿಶ್ವಾನ್ಯಸ್ಮಿನ್ತ್ಸಂಭೃತಾಧಿ ವೀರ್ಯಾ ೧
ಜಠರೇ ಸೋಮಂ ತನ್ವೀ ಸಹೋ ಮಹೋ ಹಸ್ತೇ ವಜ್ರಂ ಭರತಿ ಶೀರ್ಷಣಿ ಕ್ರತುಂ ೧೧ (ಋ ೨-೧೬-೨ ಸಾಭಾ)
"ಮಹತ್ಸ್ವರೂಪವುಳ್ಳ ಯಾವ ಇಂದ್ರನಿಲ್ಲದಿದ್ದರೆ ಈ ಜಗತ್ತು ಇರುತ್ತಲೇ ಇರಲಿಲ್ಲವೋ ಆ ಇಂದ್ರನಲ್ಲಿ ಸಕಲ ಸಾಮರ್ಥ್ಯಗಳೂ ಶೇಖರಿತವಾಗಿವೆ. ಇಂದ್ರನು ಉದರದಲ್ಲಿ ಸೋಮರಸವನ್ನು ತುಂಬಿಕೊಂಡಿದ್ದಾನೆ. ತನ್ನ ಶರೀರದಲ್ಲಿ ಬಲವನ್ನೂ ತೇಜಸ್ಸನ್ನೂ ಧರಿಸಿದ್ದಾನೆ. ಕೈಯಲ್ಲಿ ವಜ್ರಾಯುಧವನ್ನು ಹಿಡಿದಿದ್ದಾನೆ, ಶಿರಸ್ಸಿನಲ್ಲಿ ವಿಜ್ಞಾನವನ್ನು ಪಡೆದಿದ್ದಾನೆ."

(ಇಂದ್ರನಿಲ್ಲದಿದ್ದರೇ ಇಡೀ ವಿಶ್ವವು ಅಂಧಕಾರದಿಂದ ತುಂಬಿಹೋಗುತ್ತಿತ್ತು. ದೇವತೆಗಳ ಸೃಷ್ಟಿಯು ಆಗುತ್ತಿರಲಿಲ್ಲ. ವೃತ್ರಾಸುರನು ಇಂದ್ರನನ್ನು ಸೋಲಿಸಿದ್ದರೆ ಆಗ ಏನೇನು ಆಗುತ್ತಿತ್ತೋ ಊಹಿಸಿಕೊಳ್ಳಿ. ಅಥವಾ ಆತ್ಮಸ್ವರೂಪರಾದ ನಾವು ಜನ್ಮವನ್ನು ತಾಳುತ್ತಿರಲೇ ಇಲ್ಲವೋ ಯಾರಿಗೆ ಗೊತ್ತು.)

ಪ್ರ ವಃ ಸತಾಂ ಜ್ಯೇಷ್ಠತಮಾಯ ಸುಷ್ಟುತಿಮಗ್ನಾವಿವ ಸಮಿಧಾನೇ ಹವಿರ್ಭರೇ ।
ಇಂದ್ರಮಜುರ್ಯಂ ಜರಯಂತಮುಕ್ಷಿತಂ ಸನಾದ್ಯುವಾನಮನಸೇ ಹವಾಮಹೇ ।। (ಋ ೨–೧೬–೧ ಸಾಭಾ)
"ನಾವು ದೇವತೆಗಳಲ್ಲಿ ಅತ್ಯಂತ ಶ್ರೇಷ್ಠನಾದ ಇಂದ್ರನನ್ನುದ್ದೇಶಿಸಿ ಪ್ರಜ್ವಲಿತವಾದ ಅಗ್ನಿಯಲ್ಲಿ ನಿನಗಾಗಿ ಹವಿಸ್ಸನ್ನರ್ಪಿಸುತ್ತೇವೆ. ಅದರಂತೆ ಸ್ತುತಿಯನ್ನು ಪಠಿಸುತ್ತೇವೆ. ಕ್ಷಯರಹಿತನೂ, ಇತರರನ್ನು ಕ್ಷಯಿಸುವಂತೆ ಮಾಡುವವನೂ ಸೋಮರಸದಿಂದ ಸಿಕ್ತನಾದವನೂ, ಪುರಾತನನೂ, ನಿತ್ಯ ತರುಣನೂ ಆದ ಇಂದ್ರನನ್ನು ರಕ್ಷಣಾರ್ಥವಾಗಿ ಕರೆಯುತ್ತೇವೆ."

ತಥಾ ತದಸ್ತು ಸೋಮಾಪಾಃ ಸಖೇ ವಜ್ರಿನ್ತಥಾ ಕೃಣು ।
ಯಥಾ ತ ಉಶ್ಮಸೀಷ್ಟಯೇ ।। (ಋ ೧–೩೦–೧೨ ಸಾಭಾ)
"ಸೋಮರಸವನ್ನು ಪಾನಮಾಡುವವನೂ, ನಮ್ಮ ರಕ್ಷಣೆಗಾಗಿ ವಜ್ರಾಯುಧವನ್ನು ಹಿಡಿದಿರುವವನೂ ಮತ್ತು ಸ್ನೇಹಿತನೂ ಆದ ಎಲೈ ಇಂದ್ರನೇ, ನಮ್ಮ ಇಷ್ಟಾರ್ಥವು ನೆರವೇರುವುದಕ್ಕಾಗಿ ನಾವು ನಿನ್ನ ಅನುಗ್ರಹವನ್ನು ಯಾವ ರೀತಿ ಆಪೇಕ್ಷಿಸುತ್ತೇವೆಯೋ ಅದೇ ರೀತಿ ಅನುಗ್ರಹಿಸು ಮತ್ತು ನಮ್ಮ ಇಷ್ಟಾರ್ಥವೂ ಸಹ ಅದೇ ರೀತಿ ನೆರವೇರಲಿ."

ವಿಶ್ವೇಷು ಹಿ ತ್ವಾ ಸವನೇಷು ತುಂಜತೇ ಸಮಾನಮೇಕಂ ವೃಷಮಣ್ಯವಃ ಪೃಥಕ್ ಸ್ವಃ ಸನಿಷ್ಯವಃ ಪೃಥಕ್ ।
ತಂ ತ್ವಾ ನಾವಂ ನ ಪರ್ಷಣಿಂ ಶೂಷಸ್ಯ ಧುರಿ ಧೀಮಹಿ ।
ಇಂದ್ರಂ ನ ಯಜ್ಞೈಶ್ಚಿತಯಂತ ಆಯವಃ ಸ್ತೋಮೇಭಿರಿಂದ್ರಮಾಯವಃ ।। (ಋ ೧–೧೩೧–೨ ಸಾಭಾ)
"ಎಲೈ ಇಂದ್ರನೇ, ಎಲ್ಲಾ ಸೋಮಯಾಗಗಳಲ್ಲಿಯೂ ನಿನ್ನನ್ನೇ ಕಾಮವರ್ಷಕನನ್ನಾಗಿ ತಿಳಿದವರಾಗಿ, ಸಮಸ್ತ ಯಾಗಗಳಲ್ಲಿ ಒಬ್ಬರೂ ಪ್ರತ್ಯೇಕವಾಗಿ ನಿನ್ನ ಸಮೀಪಕ್ಕೆ ಧಾವಿಸುತ್ತಾರೆ. ಪ್ರತಿಯೊಬ್ಬರೂ ಸ್ವರ್ಗಲೋಕ ಪ್ರಾಪ್ತಿಗಾಗಿ ನಿನ್ನೊಬ್ಬನನ್ನೆ ಆರಾಧಿಸುತ್ತಾರೆ. ನಮ್ಮ ಬಲಕ್ಕೆ ಆಧಾರ ಭೂತನಾದ ನಿನ್ನನ್ನು ಪ್ರಯಾಣಿಕರು ದೋಣಿಯಲ್ಲಿ ಇನ್ನೊಂದು ತೀರಕ್ಕೆ ಹೋಗುವಂತೆ, ಪೃಥ್ವಿಯಿಂದ ನಿನ್ನ ಲೋಕಕ್ಕೆ ಬರಲು ಮಾನವನಿಗೆ ಯಜ್ಞದ ರಹಸ್ಯವನ್ನು ಅನುಗ್ರಹಿಸುವುದರಿಂದ ನಿನ್ನನ್ನು ಸ್ತೋತ್ರಗಳಿಂದ ತುಷ್ಟಿಪಡಿಸುತ್ತೇವೆ."

ಇಂದ್ರ ಜ್ಯೋತಿಯಿಂದ ಹೊರಹೊಮ್ಮುವ ತೇಜಸ್ಸು ಇಡೀ ಬ್ರಹ್ಮಾಂಡವನ್ನು ವ್ಯಾಪಿಸಿಕೊಂಡಿದೆ.

**ಪ್ರಾಚೀನ ಈಜಿಪ್ಟ್‌ನ ಪ್ರಕಾರ ಸೃಷ್ಟಿ ಕ್ರಿಯೆ:**

ಇವರ ಪ್ರಕಾರ ಮೊದಲು ಗಾಡಾಂಧಕಾರವಾದ ಕತ್ತಲು ಎಲ್ಲೆಡೆಯೂ ವ್ಯಾಪಿಸಿತ್ತು. ಈ ಗಾಡಾಂಧಕಾರವು ಆದಿ–ಅಂತ್ಯವಿಲ್ಲದ ಮಹಾ ಸಮುದ್ರವನ್ನು ವ್ಯಾಪಿಸಿತ್ತು. ಸಕಲ ವಿಶ್ವವು ಪ್ರಾಣವಿಲ್ಲದ ಆದಿ–ಅಂತ್ಯವಿಲ್ಲದ ಉದಕದ ಮಹಾ ಸಮುದ್ರದಿಂದ ಉಂಟಾಯಿತು. ಉದಕದ ಮಹಾಸಮುದ್ರವನ್ನು "ನು" ಎಂದು ಕರೆಯುತ್ತಾರೆ. ಈ ಮಹಾ ಸಮುದ್ರದಲ್ಲಿ ಎಂಟು ಮಂದಿ ದೇವತೆಗಳು ಸ್ಥಿತರಿದ್ದರು. ಅವರಲ್ಲಿ ಪುರುಷ ಮತ್ತು ಸ್ತ್ರೀ ದೇವತೆಗಳು ಇದ್ದರು. ಇವರು ಸಮುದ್ರದಲ್ಲಿದ್ದ ಪ್ರಾಣಿಗಳಾಗಿ; ಪುರುಷ ದೇವತೆಗಳು ಕಪ್ಪೆಯ ರೂಪದಲ್ಲಿ ಮತ್ತು ಸ್ತ್ರೀ ದೇವತೆಗಳು ಸರ್ಪದ ರೂಪದಲ್ಲಿದ್ದರೆಂದು ಹೇಳಲಾಗಿದೆ. ಈ ಎರಡೂ ಗುಂಪಿನ ದೇವತೆಗಳು ಸೇರಿ ಸಮುದ್ರದಲ್ಲಿ ದೊಡ್ಡಮಟ್ಟದ ತಳಮಳವನ್ನುಂಟು ಮಾಡಿದರು. ಆಗ ಮೊದಲು ಪಿರಮಿಡ್ ಆಕೃತಿಯ ದಿಣ್ಣೆಯು ಸಮುದ್ರದಿಂದ ಹೊರಬಂದಿತು. ನಂತರ ಸೂರ್ಯನನ್ನು ಹೊರ ತಂದರು. ಈ ರೀತಿಯಾಗಿ ಸೃಷ್ಟಿಯ ಮೂಲಕಾರಣನಾದ ಸೂರ್ಯನಿಂದಾಗಿ ಆಕಾಶ, ಬೆಳಕು ಮತ್ತು ಬ್ರಹ್ಮಾಂಡ ಸೃಷ್ಟಿಯಾಯಿತು. ಈ ಸೃಷ್ಟಿ ರಹಸ್ಯವು ಬಹಳ ಪ್ರಮುಖವಾಗಿದೆ.

ಪ್ರಾಚೀನ ಈಜಿಪ್ಟಿನ ರಾಜರು ಪಿರಮಿಡ್ ಕಟ್ಟಲು ಕಾರಣವೇನು ಎಂಬುದನ್ನು ಈಗ ನೋಡೋಣ. ಪಿರಮಿಡ್ ಪದದ ಅರ್ಥ 'ಅಗ್ನಿ ಕೇಂದ್ರ" ಅಥವಾ ಅಗ್ನಿಯು ಮಧ್ಯದಲ್ಲಿದೆ ಎಂದಾಗಿದೆ ಮತ್ತು ಪಿರಮಿಡ್‌ನ ಒಳಗೆ ಸೂರ್ಯನು ಇರುವನು ಎಂಬುದು ನಿಜವಾಗಿದೆ. 'ಪಿರಮಿಡ್ ಓಸಿರಿಸ್‌ನ ಸಮಾಧಿಯಾಗಿದೆ' ಎಂಬುದೂ ಸಹ ಸತ್ಯವಾಗಿದೆ. ಆದ್ದರಿಂದ ಪಿರಮಿಡ್‌ನಲ್ಲಿ ವಿಶ್ವಸಿಂಹಾಸನದಲ್ಲಿ ಕುಳಿತು ಮೂರು ಲೋಕಗಳನ್ನು ಆಳುತ್ತಿರುವ ಪ್ರಭು ಓಸಿರಿಸ್ ನೆಲೆಸಿರುವನು.

**ಓಸಿರಿಸ್:** ಪ್ರಾಚೀನ ಈಜಿಪ್ಟನ ದೇವತೆಗಳಲ್ಲಿ ಓಸಿರಿಸ್ ಬಹಳ ಪ್ರಮುಖ ದೇವತೆಯಾಗಿದ್ದನು ಮತ್ತು ಎಲ್ಲರೂ ಈ ದೇವತೆಯ ಆರಾದನೆ ಮಾಡುತ್ತಿದ್ದರು. ಓಸಿರಿಸ್ ದೇವನು ಭೂ ದೇವತೆ (ಗೆಬ್) ಮತ್ತು ಆಕಾಶದ ಸ್ತ್ರೀ ದೇವತೆಯ (ನಟ್) ಜ್ಯೇಷ್ಠ ಪುತ್ರನಾಗಿದ್ದಾನೆ. ಆತನ ವಿಶೇಷಣವು "ಪಶ್ಚಿಮದವರಲ್ಲಿ ಅಗ್ರೇಸರ". ಇದರ ಅರ್ಥ "ಸಾವಿನ ರಾಜ್ಯದ

ರಾಜ" "ಮರಣ ಹೊಂದಿದವರನ್ನು ಶಾಸನ ಮಾಡುವವನು" ಎಂಬುದಾಗಿದೆ. ಕೆಲವು ಬಾರಿ "ಜೀವಿಸುತ್ತಿರುವವರ ರಾಜ" ಎಂದೂ ಸಹ ಕರೆಯಲಾಗುತ್ತದೆ. ಆತನ ಇನ್ನಿತರ ವಿಶೇಷಣಗಳು "ಪ್ರೀತಿಯ ದೇವತೆ" "ನಿರಂತರ ಯೌವನವನ್ನು ಹೊಂದಿರುವ ದಯಾಳು". "ಮೌನ ಅಥವಾ ನಿಶ್ಯಬ್ದದ ದೇವತೆ" ಆಗಿರುವುದು. ಕೆಲವು ಬಾರಿ ಆತನನ್ನು "ಚಂದ್ರನ ದೇವತೆ ಎಂದೂ ಸಹ ಕರೆಯಲಾಗಿದೆ.

# ಅಧ್ಯಾಯ-೧೯: ಋತ ಅಥವಾ ದೈವೀಶಾಸನ

ಸೃಷ್ಟಿಯ ಮೂಲವಸ್ತುವಾದ ಆದಿಅಂತ್ಯವಿಲ್ಲದ ಮಹಾಸಮುದ್ರದ ಅಧಿದೇವತೆಯಾದ, ಸರ್ವತಂತ್ರ ಸ್ವತಂತ್ರ ರಾಜನಾದ ವರುಣನು, ಮಿತ್ರಾ ದೇವತೆಯ ಜೊತೆಗೂಡಿ ಸೃಷ್ಟಿಕ್ರಿಯೆಯಲ್ಲಿ ಪ್ರಮುಖ ಪಾತ್ರವಹಿಸುತ್ತಾರೆ. ವರುಣನ ಸ್ಥಾನವು ಸೂರ್ಯಮಂಡಲದಲ್ಲಿ ಇರುವುದಾದರೂ ಅವನು ಸರ್ವತ್ರ ಸ್ಥಿತನಿರುವನು. ಹೇಗೆಂದರೆ, ಅವನ ಜಲವು ಸರ್ವವನ್ನು ವ್ಯಾಪಿಸಿಕೊಂಡಿದೆ. ವಿರಾಟ್‌ಪುರುಷನನ್ನೂ ಮತ್ತು ಆಕಾಶವನ್ನೂ ಸಹ ತೆಳುವಾಗಿ ವ್ಯಾಪಿಸಿಕೊಂಡಿರುವನು. ಏಕೆಂದರೆ ಅವನು ವ್ಯಾಪಕ ತತ್ವವುಳ್ಳವನು.

ವರುಣನು ಮೂರು ಲೋಕದಲ್ಲಿ ತನ್ನ ಶಾಸನವನ್ನು ಸ್ಥಾಪಿಸಿ ಆಳುತ್ತಿರುವನು. ಯಾರು ತನ್ನ ಶಾಸನವನ್ನು ಮೀರಿ ಕ್ರೂರವಾಗಿ ವರ್ತಿಸುವರೋ ಅಂಥವರನ್ನು ತನ್ನ ಪಾಶದಿಂದ ಬಂಧಿಸಿ ಅವರನ್ನು ಅಧಮ ಲೋಕದಲ್ಲಿರುವ ನರಕದಲ್ಲಿ ಶಿಕ್ಷಿಸುವನು. (ನರಕವು ಪೃಥ್ವಿಯ ಕೆಳಭಾಗದಲ್ಲಿದೆ.) ಏಕೆಂದರೆ ನಮ್ಮ ಶರೀರವು ವರುಣನ ಕೃಪೆಯಿಂದ ದೊರೆತಿದೆ. ವರುಣ ಮತ್ತು ಮಿತ್ರರು ನಮ್ಮ ಶರೀರದ ಒಳಗೂ ಇರುವವರು ಮತ್ತು ಎಲ್ಲರ ಕರ್ಮಗಳನ್ನು ದಾಖಲಿಸಿಕೊಂಡು ಅವರವರ ಕರ್ಮಕ್ಕೆ ತಕ್ಕಂತೆ ನ್ಯಾಯಯುತವಾಗಿ ಫಲವನ್ನು ಕೊಡುವರು.

ವರುಣನಿಗೆ ಪಾಪಿಗಳನ್ನು ಕಂಡರೆ ಬಲು ಕೋಪ. ಪುರಾತನ ಕಾಲದಿಂದಲೂ ಎಲ್ಲರೂ ವರುಣನ ಶಿಕ್ಷೆಗೆ ಹೆದರುವರು ಮತ್ತು ಅವನ ಶಾಸನವನ್ನು ಮೀರದಂತೆ ನಡೆಯಲು ಪ್ರಯತ್ನಿಸುವರು. ಮಿತ್ರಾವರುಣರು ತಮ್ಮ ದೈವೀ ಶಾಸನವನ್ನು ಧರಿಸಿ, ನ್ಯಾಯವನ್ನು ಪಾಲಿಸುತ್ತಾರೆ. ಮರಣಾನಂತರ ಪಾಪ ಮಾಡಿದ ಮಾನವರನ್ನು ಬಂಧಿಸಿ ನರಕಕ್ಕೆ ಅಥವಾ ಯಮನ ಲೋಕಕ್ಕೆ ಕೊಂಡೊಯ್ಯುವರು. ಆದರೆ ಪಾಪಿಗಳನ್ನು ಬಂಧಿಸಿ ಶಿಕ್ಷೆ ಅಥವಾ ವಿಮೋಚನೆ ಮಾಡುವ ಕಾರ್ಯವು ವರುಣನಿಗೆ ಮಾತ್ರ ಸಂಬಂಧಿಸಿದೆ. ಯಮನು ಕೇವಲ ನ್ಯಾಯಾಧೀಶನಾಗಿದ್ದಾನೆ.

ಅದು ನಮ್ಮ ನ್ಯಾಯಾಲಯದಂತೆ ಇರುವುದು. ಇಲ್ಲಿ ಯಾರಾದರೂ ತಪ್ಪು ಮಾಡಿದರೆ ನ್ಯಾಯಮೂರ್ತಿಗಳು ಶಿಕ್ಷೆಯನ್ನು ವಿಧಿಸುತ್ತಾರೆ. ಶಿಕ್ಷೆಯನ್ನು ಪಡೆದುಕೊಂಡ ವ್ಯಕ್ತಿಯು ನನಗೆ ಕಾನೂನಿನ ಬಗ್ಗೆ ತಿಳಿದಿರಲಿಲ್ಲ ಆದ್ದರಿಂದ ಈ ಬಾರಿ ನನ್ನನ್ನು ಕ್ಷಮಿಸಿ ಎಂದು ಕೇಳಿಕೊಂಡರೆ ನ್ಯಾಯಮೂರ್ತಿಗಳು ಕ್ಷಮಿಸುವುದಿಲ್ಲ. ನಮ್ಮ ಭೂಲೋಕದ ನ್ಯಾಯಾಲಯದಿಂದ ತಪ್ಪಿಸಿಕೊಳ್ಳಬಹುದು ಆದರೆ ವರುಣ ಮತ್ತು ಮಿತ್ರಾದೇವತೆಗಳಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಏಕೆಂದರೆ ಅವರು ನಮ್ಮ ಹೃದಯದಲ್ಲಿಯೇ ಕುಳಿತು ನಮ್ಮ ಕರ್ಮಗಳನ್ನೆಲ್ಲಾ ದಾಖಲಿಸುತ್ತಾರೆ.

ಅಸ್ತಭ್ನಾ ದ್ಯಾಮಸುರೋ ವಿಶ್ವವೇದಾ ಅಮಿಮೀತ ವರಿಮಾಣಂ ಪೃಥಿವ್ಯಾಃ ।

ಆಸೀದದ್ವಿಶ್ವಾ ಭುವನಾನಿ ಸಮ್ರಾಡ್ವಿಶ್ವೇತ್ತಾಶನಿ ವರುಣಸ್ಯ ವ್ರತಾನಿ ।। (ಋ ೮-೪೨-೧ ಸಾಭಾ)

"ಸಮಸ್ತ ಧನಕ್ಕೂ ಅಧಿಪತಿಯೂ, ಶಕ್ತಿಯುತನೂ ಆದ ವರುಣನು ಅಂತರಿಕ್ಷವನ್ನು ಸ್ಥಿರವಾಗಿ ನಿಲ್ಲಿಸಿದ್ದಾನೆ. ಪೃಥ್ವಿಯ ಪರಿಮಾಣವನ್ನು ನಿರ್ಮಿಸಿದ್ದಾನೆ. ಸಾರ್ವಭೌಮನಾದ ವರುಣನು ಸಮಸ್ತವಾದ ಲೋಕಗಳನ್ನೂ ಆಕ್ರಮಿಸಿ ನಿಂತಿದ್ದಾನೆ. ಪ್ರಸಿದ್ಧವಾದ ಸಮಸ್ತ ಕರ್ಮಗಳೂ ವರುಣನ ಮಹಿಮೆಯೇ ಆಗಿವೆ.."

ತ ಆದಿತ್ಯಾಸ ಉರವೋ ಗಭೀರಾ ಅದಬ್ಧಾಸ್ತೋ ದಿಪ್ಸನ್ತೋ ಭೂರ್ಯಕ್ಷಾಃ ।

ಅನ್ತಃ ಪಶ್ಯನ್ತಿ ವೃಜಿನೋತ ಸಾಧು ಸರ್ವಂ ರಾಜಭ್ಯಃ ಪರಮಾ ಚಿದನ್ತಿ ।। (ಋ ೨-೨೭-೩ ಸಾಭಾ)

"ಅದಿತಿಯ ಪುತ್ರರೂ, ಮಹತಾದ ಸ್ವರೂಪವುಳ್ಳವರೂ ಗಾಂಭೀರ್ಯದಿಂದ ಕೂಡಿದವರೂ, ಶತ್ರುಗಳಿಂದ ಹಿಂಸಿತವಾಗದವರೂ, ಪ್ರಭೂತವಾದ ತೇಜಸ್ಸುಳ್ಳವರೂ ಆದ ಆದಿತ್ಯರು (ವರುಣ, ಮಿತ್ರಾ, ಆರ್ಯಮಾ ಮತ್ತು ಭಗ) <u>ಪ್ರಾಣಿಗಳ ಹೃದಯದಲ್ಲಿದ್ದುಕೊಂಡು ಮಾನವರ ಪಾಪಗಳನ್ನೂ ಮತ್ತು ಪುಣ್ಯ ಕಾರ್ಯಗಳನ್ನೂ ತಿಳಿಯುತ್ತಾರೆ</u>. ಅತ್ಯಂತ ದೂರದಲ್ಲಿದ್ದರೂ ಸಹ ಸಕಲ ವಸ್ತುಗಳು ಪ್ರಭುಗಳಾದ ಆದಿತ್ಯರಿಗೆ ಅತ್ಯಂತ ಸಮೀಪದಲ್ಲಿರುವಂತೆಯೇ ಇರುತ್ತದೆ."

(ಇದೇ ರೀತಿಯಲ್ಲಿ ಸೂರ್ಯನು ಪ್ರಕಟವಾದ ಮೇಲೆ ಅಸುರಲೋಕದಲ್ಲಿ ಕತ್ತಲಿನಲ್ಲಿದ್ದ ವೃತ್ರಾಸುರ ಮತ್ತು ಅಸುರರಿಗೆ ಸೂರ್ಯನ ತೇಜಸ್ಸನ್ನು ಸಹಿಲಾಗದೇ ಸೂರ್ಯನನ್ನು ಅಂಧಕಾರದಿಂದ ಆವರಿಸಿಕೊಂಡನು.)

ಹಾಗಾದರೆ ಋತ ಅಥವಾ ದೈವೀ ಶಾಸನವಾದರೂ ಏನು? ಋಗ್ವೇದದಲ್ಲಿ ಇದರ ಬಗ್ಗೆ ಏನೂ ಮಾಹಿತಿ ಇಲ್ಲದಿದ್ದರೂ ಋಷಿಗಳು ತಮ್ಮ ದಿವ್ಯಜ್ಞಾನದಿಂದ ಮಾನವರು ಯಾವ ಯಾವ ಕರ್ಮಗಳನ್ನು ಮಾಡಿದರೆ ನರಕಕ್ಕೆ ಹೋಗುವರು ಎಂಬುದನ್ನು ತಿಳಿದುಕೊಂಡಿರುವರು. ಋಷಿಗಳ ಪ್ರಕಾರ ಮಿತ್ರಾವರುಣರ ಶಾಸನವೇನು ಎಂಬುದನ್ನು ತಿಳಿಯೋಣ.

೧. ಯಾರು ತಂದೆ, ತಾಯಿ, ಗುರು, ಹಿರಿಯರು ಮತ್ತು ಪೂಜ್ಯರಾದವರನ್ನು ಅವಮಾನಿಸುತ್ತಾರೋ ಅವರು ಶಿಕ್ಷಿಸಲ್ಪಡುತ್ತಾರೆ.
೨. ಅತ್ತೆ ಮಾವನವರನ್ನು ನಿಂದಿಸುವ, ನಿತ್ಯಕಲಹ ಮಾಡುವ ನಾರಿಯು, ದುರ್ಬುದ್ಧಿಯನ್ನು ಹೇಳಿಕೊಟ್ಟು ಕುಟುಂಬವನ್ನು ಒಡೆಯುವವರು. ಅತ್ತೆ ಮಾವನವರ ಕಡೆಯವರನ್ನು ದ್ವೇಷಿಸುವವರು ಶಿಕ್ಷಿಸಲ್ಪಡುವರು .
೩. ತಂದೆ ತಾಯಿಗಳ ಶ್ರಾದ್ಧವನ್ನು ಮಾಡದೆ ಇರುವವನು ಅನ್ನ ನೀರುಗಳಿಲ್ಲದೆ ಶಿಕ್ಷಿಸಲ್ಪಡುವನು.

೪. ಹೆಂಡತಿ, ಮಕ್ಕಳು, ವೃದ್ಯಾಪದಲ್ಲಿರುವ ತಂದೆತಾಯಿಗಳನ್ನು ಸರಿಯಾಗಿ ನೋಡಿಕೊಳ್ಳದೇ ಇರುವವರು.
೫. ತನ್ನ ಪತಿಯನ್ನು ಅಥವಾ ಪತ್ನಿಯನ್ನು ತ್ಯಜಿಸಿ ಪರಪುರುಷನನ್ನು/ಪರಸ್ತ್ರೀಯನ್ನು ಅನುಸರಿಸುವವರು ಅಥವಾ ಮೋಹಿಸುವವರು ಶಿಕ್ಷಿಸಲ್ಪಡುತ್ತಾರೆ.
೬. ತನ್ನ ಸೋದರ ಸೋದರಿಯರಲ್ಲಿ ವೈರತ್ವವನ್ನು ತೋರುವವರು.
೭. ಮರ್ಯಾದೆಯ ನಿಯಮಗಳನ್ನು ಮುರಿಯುವವರು, ಜಿಪುಣರು, ಇಂದ್ರಿಯ ಭೋಗದಲ್ಲಿ ನಿರತರಾಗಿ ರುವವರು, ಗರ್ವಿಷ್ಟರು, ಕೃತಘ್ನರು ಶಿಕ್ಷಿಸಲ್ಪಡುತ್ತಾರೆ.
೮. ಯಾರು ಪತಿವ್ರತೆಯೂ, ಸಾಧುಶೀಲಳೂ, ವಿನಯಶೀಲಳು ಆದ ಸ್ತ್ರೀಯನ್ನು ದ್ವೇಷಿಸುವರೋ ಅವರು.
೯. ಯಾವಾಗಲೂ ಅಶುಭಕರ್ಮಗಳಲ್ಲೇ ನಿರತರಾಗಿರುವವರು, ಶುಭಕರ್ಮಗಳಿಂದ ವಿಮುಖರಾಗಿರುವರು.
೧೦. ಪರಸ್ತ್ರೀಯನ್ನು ಇಚ್ಚಿಸುವನು, ಅಪಹರಿಸುವವನು, ಕನ್ಯೆಯರನ್ನು ಕಾಮಿಸುವವನು, ಸ್ತ್ರೀಹತ್ಯೇ, ಗರ್ಭಪಾತ ಮಾಡಿಸಿದವನು, ಗುರುಪತ್ನಿಯಲ್ಲಿ ಮತ್ತು ಅಗಮ್ಯರಾದ ಸ್ತ್ರೀಯರಲ್ಲಿ ಗಮನ ಮಾಡುವವನು, ವಿಧವೆಯ ಶೀಲವನ್ನು ನಾಶಮಾಡುವವನು ಶಿಕ್ಷಿಸಲ್ಪಡುತ್ತಾರೆ.
೧೧. ಯಾವ ಪುರುಷನು ಕಾಮಾಂಧನಾಗಿ ಸ್ತ್ರೀಯೊಡನೆ ರಜಸ್ವಲೆಯಾಗಿದ್ದಾಗ, ಪರ್ವದಿನಗಳಲ್ಲಿ, ನೀರಿನಲ್ಲಿ, ಹಗಲಿನಲ್ಲಿ, ಶ್ರಾದ್ಧದ ದಿನಗಳಲ್ಲಿ ಸೇರುತ್ತಾನೋ ಅವನು.
೧೨. ವೈಶ್ಯಾವಾಟಿಕೆ ನಡೆಸುವವರು ಮತ್ತು ಅದರ ಮೂಲಕ ಹಣವನ್ನು ಸಂಪಾದಿಸುವವರು ಶಿಕ್ಷಿಸಲ್ಪಡುತ್ತಾರೆ.
೧೩. ಯಾರು ಅನಾಥರಲ್ಲಿ ದಯೆ ತೋರುವುದಿಲ್ಲವೋ, ಸಜ್ಜನರನ್ನು ದ್ವೇಷಿಸುವರೋ, ಹಸಿದು ಮನೆಗೆ ಬಂದವರಿಗೆ ಊಟಹಾಕುವುದಿಲ್ಲವೋ ಅವರು.
೧೪. ಹಣವೇ ಮುಖ್ಯವಾಗಿ ವೈದ್ಯ ವೃತ್ತಿಮಾಡುವವರು, ವಿದ್ಯಾಶಾಲೆಗಳನ್ನು ನಡೆಸುವವರು ಮತ್ತು ಅನ್ನವನ್ನು ವಿಕ್ರಯ ಮಾಡುವವರು. ಗೊತ್ತಿದ್ದೂ ಅನ್ಯಾಯವನ್ನು ನ್ಯಾಯವೆಂದು ಸಾಬೀತು ಪಡಿಸುವ ನ್ಯಾಯವಾದಿಗಳು ಮತ್ತು ನಂಬಿಕೆ ದ್ರೋಹ ಮಾಡುವವರು ತೀವ್ರವಾಗಿ ಶಿಕ್ಷಿಸಲ್ಪಡುತ್ತಾರೆ.
೧೫. ಸರಕಾರದ ಅಥವಾ ಸಾರ್ವಜನಿಕರ ಹಣವನ್ನು, ಭೂಮಿಯನ್ನು ಅಪಹರಿಸುವವರು, ತಮ್ಮ ಅಧಿಕಾರ ಬಲದಿಂದ ಪಾಳೇಗಾರಿಕೆ ನಡೆಸಿ ಕೊಳ್ಳೆ ಹೊಡೆಯುವವರು.
೧೬. ತಮ್ಮ ಅಧಿಕಾರ ದರ್ಪದಿಂದ ಅನ್ಯಾಯವಾಗಿ ನಡೆದುಕೊಳ್ಳುವುದು, ನಿರಪರಾಧಿಗಳೆಂದು ಗೊತ್ತಿದ್ದೂ ದಂಡಿಸುವುದು, ಲಂಚ, ಸುಲಿಗೆಯಲ್ಲಿ ಭಾಗಿಯಾಗುವುದು, ಅಪರಾಧಿಗಳೆಂದು ಗೊತ್ತಿದ್ದು ಅವರನ್ನು ಬಿಡಿಸುವವರು ತೀವ್ರವಾಗಿ ಶಿಕ್ಷಿಸಲ್ಪಡುತ್ತಾರೆ.
೧೭. ವ್ಯಾಪಾರದಲ್ಲಿ ಕೇವಲ ಹಣ ಸಂಪಾದನೆಯೇ ಮುಖ್ಯ ಗುರಿಯಾಗಿ ಇತರರನ್ನು ನಿರ್ದಾಕ್ಷಿಣ್ಯವಾಗಿ ನಡೆಸಿಕೊಳ್ಳುವವರು, ಮೋಸದಿಂದ ಹಣ ಸಂಪಾದನೆ ಮಾಡುವುದು, ಕಳ್ಳ ಲೆಕ್ಕ ಬರೆದು ಸರಕಾರಕ್ಕೆ ವಂಚಿಸುವುದು, ಕಾರ್ಮಿಕರಿಗೆ ಮತ್ತು ವಸ್ತುಗಳ ತಯಾರಕರಿಗೆ ಸರಿಯಾದ ಹಣವನ್ನು ಕೊಡದೇ ಇರುವುದು, ಪ್ರಾಮಾಣಿಕವಾಗಿ ಕೆಲಸ ಮಾಡದ ಮತ್ತು ಯಜಮಾನನ ಹಿತವನ್ನು ಬಯಸದ ಕೆಲಸಗಾರರು ಶಿಕ್ಷಿಸಲ್ಪಡುತ್ತಾರೆ .
೧೮. ಕಲಬೆರಕೆ ಮಾಡುವವರು, ನಕಲಿ ಔಷಧಿಗಳನ್ನು, .ನಕಲಿ ವಸ್ತುಗಳನ್ನು ತಯಾರು ಮಾಡುವವರು ಮತ್ತು ಗೊತ್ತಿದ್ದು ಮಾರುವರು ತೀವ್ರವಾಗಿ ಶಿಕ್ಷಿಸಲ್ಪಡುತ್ತಾರೆ.
೧೯. ರೈತರ, ದೇವಸ್ಥಾನದ, ಬಡವರ ಜಮೀನನ್ನು ಸೊತ್ತನ್ನು, ದೇವರ ಹಣವನ್ನು, ಒತ್ತೆ ಇಟ್ಟಿದ್ದನ್ನು ಅಪಹರಿಸುವವರು. ಹೊಲದ ಮೇರೆಯನ್ನು ಅಪಹರಿಸುವವರು, ಹೊಲ ಗದ್ದೆಗಳಿಗೆ ವಿಷವಿಕ್ಕುವವರು, ಹಸು ಮೇಯುವ ಗೋಮಾಳ ಭೂಮಿಯನ್ನು ಅಪಹರಿಸುವವರು ತೀವ್ರವಾಗಿ ಶಿಕ್ಷಿಸಲ್ಪಡುತ್ತಾರೆ.
೨೦. ವಿವಾಹ, ದೇವರ ಮೆರವಣಿಗೆ ಮತ್ತು ಯಾತ್ರಿಕರ ಗುಂಪುಗಳಿಗೆ ಅಡ್ಡಿಪಡಿಸುವವರು.
೨೧. ದುಃಖಿತರನ್ನು ನೋಡಿ ಸಂತೋಷಪಡುವವರು, ಕೆಟ್ಟ ಮಾತುಗಳನ್ನಾಡುವವರು, ಯಾವಾಗಲೂ ಕೆಟ್ಟ ಮನಸ್ಸುಳ್ಳವರು.
೨೨. ಹಿತವಚನಗಳನ್ನು ಕೇಳದೆ ತಾವೇ ದೊಡ್ಡವರೆಂದು ತಿಳಿದುಕೊಳ್ಳುವವರು, ಕಠಿಣ ಹೃದಯರು, ಮೂಢರು, ತಮ್ಮನ್ನೇ ಪಂಡಿತರೆಂದು ತಿಳಿದುಕೊಳ್ಳವವರು ಶಿಕ್ಷಿಸಲ್ಪಡುತ್ತಾರೆ.
೨೩. ಪರರ ದೋಷಗಳನ್ನು ಗ್ರಹಿಸುವವರು, ನೀಚರನ್ನು ಪ್ರೀತಿಸುವವರು, ಸತ್ಸಂಗದಿಂದ ವಿಮುಖರಾದವರು, ಗುಣವಂತರಲ್ಲಿ ಮತ್ಸರ ಪಡುವವರು.
೨೪. ಯಾರು ಮಾತು ಕೊಟ್ಟು ಪ್ರತಿಜ್ಞೆ ಮಾಡಿ ಅದರಂತೆ ನಡೆದುಕೊಳ್ಳುವುದಿಲ್ಲವೋ ಅವರು.
೨೫. ಯಾರು ಮಿತ್ರದ್ರೋಹ ಮಾಡುತ್ತಾರೋ, ಯಾರು ಪ್ರೀತಿಯನ್ನು ಕಡಿದು ಹಾಕುತ್ತಾರೋ, ಯಾರು ಆಶಾಭಂಗ ಮಾಡುತ್ತಾರೋ ಅವರು.
೨೬. ಯಾರು ವ್ರತನಿಯಮಾದಿಗಳನ್ನು ಸಂಕಲ್ಪಮಾಡಿ ಆನಂತರ ಇಂದ್ರಿಯಗಳನ್ನು ಗೆಲ್ಲಲಾರದೇ ಅವುಗಳನ್ನು ಬಿಟ್ಟಿರುತ್ತಾರೋ ಅಥವಾ ಮರೆತುಹೋಗಿರುತ್ತಾರೋ ಅವರು.
೨೭. ತಾನೇ ದಾನ ಕೊಟ್ಟು ಅದನ್ನು ಕಿತ್ತು ಕೊಳ್ಳುವವನು, ದಾನವನ್ನು ಕೊಟ್ಟು ಪಶ್ಚಾತ್ತಾಪ ಪಡುವವನು, ಪರರ ಜೀವಿಕೆಯನ್ನು ಅಪಹರಿಸುವವನು.

೨೮. ಯಾರು ಗುರುಗಳ, ಬ್ರಹ್ಮಜ್ಞಾನಿಗಳ, ದೇವರ, ಸ್ತ್ರೀಯರ ಮತ್ತು ಜನರ ಹಣವನ್ನು ಅಪಹರಿಸುವರೋ ಅವರು. ಯಾರು ಹಣವಿದ್ದೂ ಸಾಲವನ್ನು ತೀರಿಸುವುದಿಲ್ಲವೋ, ಯಾರು ಇನ್ನೊಬ್ಬರು ಒತ್ತೆ ಇಟ್ಟಿದ್ದನ್ನು ಅಪಹರಿಸುವರೋ ಮತ್ತು ಯಾರು ಮಕ್ಕಳ ಹಣವನ್ನು ಅಪಹರಿಸುವರೋ ಅವರು ಶಿಕ್ಷಿಸಲ್ಪಡುತ್ತಾರೆ.

೨೯. ದೇವನಿಂದನೆ ಮಾಡುವವರು, ವೇದವನ್ನು ತಿರಸ್ಕರಿಸುವವರು, ದೇವವಾಣಿಯನ್ನು ಅಪಹಾಸ್ಯ ಮಾಡುವವರು.

೩೦. ಯಾವ ದ್ವಿಜನು ಕೇವಲ ಹಣಸಂಪಾದನೆಗೋಸ್ಕರ ದೇವತಾಪೂಜೆಯನ್ನು ಮಾಡುತ್ತಾನೋ ಅವನು, ದೇವತಾಪೂಜೆ ಅಥವಾ ಯಜ್ಞವನ್ನು ಮಾಡುವಾಗ ಸರಿಯಾದ ಉಚ್ಚಾರಣೆ ಮಾಡದಿರುವವರು ಮತ್ತು ಬೇಗ ಬೇಗ ಮಾಡಲು ಪ್ರಯತ್ನಪಡುವವರು ಶಿಕ್ಷಿಸಲ್ಪಡುತ್ತಾರೆ.

೩೧. ಬ್ರಹ್ಮಹತ್ಯೆ ಮಾಡುವವರು, ಯಜ್ಞಾದಿಕರ್ಮಗಳನ್ನು ಮಾಡದೇ ಇರುವವರು, ಮದ್ಯಪಾನ, ಸ್ವೇಚ್ಛಾಚಾರಿ, ಶಾಸ್ತ್ರಾಧ್ಯಯನ ಮಾಡದೇ ಇರುವವನು.

೩೨. ಬಾವಿ, ಕೆರೆ, ಕೊಳ, ದೇವಾಲಯ ಮತ್ತು ಪ್ರಜೆಗಳ ಮನೆಯನ್ನು ನಾಶಮಾಡುವವನು. ಯಾರು ಶರೀರದ ಮಲವನ್ನು ಅಗ್ನಿಯಲ್ಲಿ, ಕುಡಿಯುವ ನೀರಿನಲ್ಲಿ, ಉದ್ಯಾನವನದಲ್ಲಿ, ರಸ್ತೆಯಲ್ಲಿ, ದನದ ಕೊಟ್ಟಿಗೆಯಲ್ಲಿ ಎಸೆಯುತ್ತಾರೋ ಅವರು ತೀವ್ರವಾಗಿ ಶಿಕ್ಷಿಸಲ್ಪಡುತ್ತಾರೆ.

೩೩. ಹಣದಾಸೆಗಾಗಿ ಮರಗಳನ್ನು ಕತ್ತರಿಸುವವರು, ಕಾಡುಗಳನ್ನು, ಇತರರ ತೋಟಗಳನ್ನು ನಾಶಮಾಡುವವರು.

೩೪. ಮೊಳೆಗಳಿಂದ, ಮಣ್ಣಿನ ಗುಡ್ಡೆಗಳಿಂದ, ಮರದ ದಿಮ್ಮಿಗಳಿಂದ, ಕಲ್ಲುಗಳಿಂದ ಮುಳ್ಳುಗಳಿಂದ ರಸ್ತೆಗಳಲ್ಲಿ ತಡೆಯನ್ನುಂಟು ಮಾಡುವವರು.

೩೫. ಯಾರು ಹಿಂಸಾತ್ಮಕವಾದ ಜೀವನ ನಡೆಸುವರೋ, ಯಾವನು ಮಾರ್ಗದಲ್ಲಿ ಯಾತ್ರಿಕರ ಹಣವನ್ನು ಕೊಳ್ಳೆ ಹೊಡೆಯುವರೋ, ಕಳ್ಳತನ ಮಾಡುವವರು, ಗೂಂಡಾವರ್ತನೆಯಿಂದ ಸಮಾಜದಲ್ಲಿ ಭಯವನ್ನುಂಟುಮಾಡುವವರು, ಸಮಾಜದ ಶಾಂತಿಯನ್ನು ಕೆಡಿಸುವವರು ತೀವ್ರವಾಗಿ ಶಿಕ್ಷಿಸಲ್ಪಡುತ್ತಾರೆ.

೩೬. ಪ್ರಾಣಿಹಿಂಸೆ ಮಾಡುವವರು, ಎಲ್ಲಾ ಜೀವಿಗಳಲ್ಲೂ ವಿಶ್ವಾಸರಹಿತರಾಗಿರುವವರು, ಅವರಲ್ಲಿ ನಿರ್ದಯವಾಗಿ ವರ್ತಿಸುವವರು.

೩೭. ತಮ್ಮ ನಂಬಿಕೆಗಳನ್ನು ಅಭಿಪ್ರಾಯವನ್ನು ಮತ್ತು ಆಚಾರವಿಚಾರವನ್ನು ಇತರರ ಮೇಲೆ ಬಲವಂತವಾಗಿ ಹೇರುವವರು, ಮತಮತಗಳಲ್ಲಿ, ಜಾತಿ ಜಾತಿಗಳಲ್ಲಿ ದ್ವೇಷ ಭಾವನೆಯನ್ನು ಬಿತ್ತುವವರು, ಸಮಾಜದ ಸ್ವಾಸ್ಥ್ಯವನ್ನು ಕೆಡಿಸುವವರು, ಕಲಹ ಪ್ರಿಯರಾದವರು ಮತ್ತು ಕಲಹಕ್ಕೆ ಪ್ರೋತ್ಸಾಹಕೊಡುವವರು.

೩೮. ಮಾನವ ಮಾನವರಲ್ಲಿ ಭೇದಭಾವ ಮಾಡುವವರು, ತಮ್ಮ ಚರ್ಮದ ಬಣ್ಣದಿಂದ ತಾವು ಶ್ರೇಷ್ಟರೆಂದು ಭಾವಿಸುವುದು, ಇತರರನ್ನು ಗುಲಾಮರನ್ನಾಗಿ ಮಾಡಿಕೊಳ್ಳುವುದು ಅಥವಾ ದಾಸ್ಯದಲ್ಲಿ ದೂಡುವುದು, ಮೇಲು ಕೀಳೆಂಬ ಭಾವನೆಯನ್ನು ಹೊಂದಿ ಅನ್ಯರನ್ನು ತಿರಸ್ಕಾರದಿಂದ ನೋಡುವವರನ್ನು ತೀವ್ರವಾಗಿ ಶಿಕ್ಷಿಸಲ್ಪಡುತ್ತಾರೆ.

೩೯. ಯಾರು ಅಮಾಯಕ ಜನರ ಹತ್ಯೆ ಮಾಡುವರೋ, ದೇವರ ಹೆಸರಿನಲ್ಲಿ ಭಯೋತ್ಪಾದನೆ ಮಾಡುವವರು, ವಿಧ್ವಂಸಕ ಕೃತ್ಯಗಳನ್ನು ಮಾಡುವವರು, ಯುದ್ಧದಲ್ಲಿ ಬಂಧಿತ ವ್ಯಕ್ತಿಗಳನ್ನು ಹಿಂಸಿಸಿ ಕೊಲೆಮಾಡುವವರು, ಯುದ್ಧದಲ್ಲಿ ಬೆನ್ನು ತೋರಿಸಿ ಓಡಿಹೋಗುತ್ತಿರುವವರನ್ನು ಕೊಲ್ಲುವರು, ಯಾರು ತಮ್ಮನ್ನು ಕಾಪಾಡಿಕೊಳ್ಳಲು ಅಸಮರ್ಥರೋ ಅವರನ್ನು ಕೊಲ್ಲುವವರು ಅವರು ನರಕಕ್ಕೆ ಹೋಗುವರು.

೪೦. ಅಮೂಲ್ಯವಾದ ಚಿನ್ನ, ಬೆಳ್ಳಿ, ತಾಮ್ರ, ರತ್ನಗಳು ಮತ್ತು ರೇಶ್ಮೆಯನ್ನು ಅಪಹರಿಸುವವರು.

೪೧. ಯಾರು ಹಣವನ್ನು ಸಂಪಾಧಿಸಲು ಶಸ್ತ್ರಾಸ್ತ್ರಗಳನ್ನು ತಯಾರಿಸುತ್ತಾರೋ, ಮಾರುತ್ತಾರೋ, ಯಾರು ಇಬ್ಬರ ಕಲಹದಲ್ಲಿ ಶಸ್ತ್ರಾಸ್ತ್ರಗಳನ್ನು ಹಣದ ಲಾಭಕ್ಕಾಗಿ ಅವರಿಗೆ ಪೂರೈಸುವರೋ ಅವರು ನರಕಕ್ಕೆ ಹೋಗುತ್ತಾರೆ.

೪೨. ಆಧ್ಯಾತ್ಮವಿದ್ಯೆಯನ್ನು ಹೇಳಿಕೊಡುವವರನ್ನು ಗುರುವೆಂದು ಒಪ್ಪಿಕೊಳ್ಳುವುದಿಲ್ಲವೋ ಅವರು.

೪೩. ಯಜ್ಞವನ್ನು ಧ್ವಂಸಮಾಡುವವನು, ಪ್ರವಚನಗಳಿಗೆ ವಿಘ್ನವನ್ನುಂಟು ಮಾಡುವವನು. ದೈವವಾಣಿಯನ್ನು ನಿಂದಿಸುವವನು ಮತ್ತು ದೇವರೇ ಇಲ್ಲವೆಂದು ಹೇಳುವ ನಾಸ್ತಿಕನು.

೪೪. ಮನೆಗೆ, ಗ್ರಾಮಕ್ಕೆ, ತೋಟಗಳಿಗೆ, ಉದ್ಯಾನವನಕ್ಕೆ, ಕಾಡಿಗೆ ಬೆಂಕಿ ಇಟ್ಟ ಮಹಾ ಪಾಪಿಗಳು ನರಕಕ್ಕೆ ಹೋಗುತ್ತಾರೆ.

೪೫. ಮಾಟಮಂತ್ರಗಳನ್ನು ಮಾಡುವವರು, ಅಸುರೀ ಶಕ್ತಿಗಳನ್ನು ಜಾಗೃತಮಾಡುವವರು ಅತೀ ಕೆಳಮಟ್ಟದ ನರಕಕ್ಕೆ ಹೋಗುವುದಲ್ಲದೇ ಅವರು ಸರ್ವನಾಶವಾಗುವರು.

೪೬. ದೇಶಗಳೂ ಕೂಡ ವರುಣನ ಅವಕೃಪೆಗೆ ಒಳಗಾಗಬೇಕಾಗುತ್ತದೆ. ಒಂದು ದೇಶವು ಇನ್ನೊಂದು ದೇಶವನ್ನು ತನ್ನ ಸ್ವಾರ್ಥಕ್ಕಾಗಿ ಆಕ್ರಮಿಸಿಕೊಳ್ಳುವುದು, ವಶಕ್ಕೆ ತೆಗೆದುಕೊಂಡು ಜನರನ್ನು ಗುಲಾಮರನ್ನಾಗಿ ಮಾಡಿಕೊಳ್ಳುವುದು, ದೇಶಗಳು ತಮ್ಮ ಉನ್ನತ ಸ್ಥಾನವನ್ನು ಕಾಪಾಡಿಕೊಳ್ಳಲು ಇತರ ದೇಶಗಳನ್ನು ಹಾಳು ಮಾಡುವುದು, ಒಂದು ದೇಶವು ಬೇರೆ ದೇಶಗಳ ಮೇಲೆ ದೌರ್ಜನ್ಯ ತೋರುವುದು, ಒಂದು ದೇಶದ ಅಥವಾ ರಾಜ್ಯದ ಭಾಷೆಯನ್ನು ನಾಶಮಾಡಲು ಪ್ರಯತ್ನಿಸುವ ಭಾಷಾಂಧರು, ಗೂಂಡಾ ವರ್ತನೆಯಿಂದ ನಡೆದುಕೊಳ್ಳುವವರು ಅಥವಾ ಪ್ರಾಮಾಣಿಕ ವ್ಯಕ್ತಿಗಳನ್ನು ಬಗ್ಗು ಬಡಿಯುವವರು. ರಾಜಕೀಯ ವ್ಯಕ್ತಿಗಳು ಮಾಡುವ ಈ ಪಾಪ ಕೃತ್ಯಕ್ಕೆ ಅವರು ನರಕಕ್ಕೆ ಹೋಗುವುದಲ್ಲದೇ, ಆ ದೇಶದ ಜನರು ಮತ್ತು ಅವರ ಮುಂದಿನ ಪೀಳಿಗೆ ಬೆಲೆ ತೆತ್ತಬೇಕಾಗುತ್ತದೆ.

೪೭. ಕೆಲವೊಂದು ವೃತ್ತಿಗಳು ನಮ್ಮನ್ನು ನೇರವಾಗಿ ನರಕಕ್ಕೆ ಕರೆದುಕೊಂಡು ಹೋಗುವುದು. ಅವು ಯಾವುದೆಂದರೆ ರಾಜಕಾರಣ, ಪೋಲಿಸ್ ಮತ್ತು ಕಾರಾಗೃಹ ಪೋಲಿಸರು, ಅಧಿಕಾರ ಮತ್ತು ನೌಕರಶಾಹಿ, ಬ್ಯಾಂಕ್ ಅಧಿಕಾರಿಗಳು, ಖರೀದಿಸುವ ಇಲಾಖೆ, ವಕೀಲರು ಮತ್ತು ನ್ಯಾಯಾಧೀಶರು. ಪ್ರಿಂಟ್ ಮತ್ತು ವಿದ್ಯುನ್ಮಾನ ವಾಹಿನಿಗಳು, ವ್ಯಾಪಾರಸ್ಥರು ಮತ್ತು ಲೇವಾದೇವಿಯನ್ನು ಮಾಡುವವರು ಇತ್ಯಾದಿ ಸಾರ್ವಜನಿಕ ಕೆಲಸಗಳನ್ನು ಮಾಡುವವರು ಹೆಚ್ಚು ಜಾಗರೂಕರಾಗಿರಬೇಕು ಇಲ್ಲವಾದರೆ ಅವರು ನರಕಕ್ಕೆ ಹೋಗಬೇಕಾಗುತ್ತದೆ.

೪೮. ನಾವು ಸಂಪಾದಿಸಿದ ಹಣದಲ್ಲಿ ಪ್ರತಿ ತಿಂಗಳು ೧೦% ಹಣವನ್ನು ಭಗವಂತನ ಪ್ರೀತ್ಯರ್ಥವಾಗಿ ಅನಾಥರಿಗೂ, ಬಡವರಿಗೂ ಕೊಡಬೇಕಾಗುತ್ತದೆ. ಬಡವರಾದವರೂ ಸಹ ೨.೫% ಹಣವನ್ನು ಭಗವಂತನಿಗೆ ಅರ್ಪಿಸಬೇಕು. ಇದು ದೈವಾಜ್ಞೆಯಾಗಿದೆ. ಈ ಹಣವನ್ನು ಕೇವಲ ಬಡವರು ಮತ್ತು ಅನಾಥರಿಗಾಗಿ ಮಾತ್ರ ಕೊಡಬೇಕೆ ಹೊರತು, ತಮ್ಮ ಸಾಮ್ರಾಜ್ಯಸ್ಥಾಪನೆ ಮಾಡಿಕೊಳ್ಳುತ್ತಿರುವ ಸಾದುಸಂತರು, ಪೂಜಾರಿ, ಪಾದ್ರಿ ಅಥವಾ ಮೌಲ್ವಿಗಳಿಗೆ ಅಲ್ಲ.

**"ಮಾನವರು ತಮ್ಮ ಮತ್ತು ಇತರ ಜೀವರಾಶಿಗಳ ಶರೀರದಲ್ಲಿ ದೇವರ ರಾಜ್ಯವಿದೆ. ಎಲ್ಲರ ಹೃದಯದಲ್ಲೂ ಭಗವಂತನು ಇರುವನು ಎಂದು ಅರ್ಥಮಾಡಿಕೊಂಡಾಗ ಅವರು ಪಾಪ ಮಾಡುವ ಯೋಚನೆಯಿಂದ ವಿಮುಕ್ತಿಯನ್ನು ಹೊಂದುವರು."**

ಗರುಡ ಪುರಾಣವನ್ನು ಆಧರಿಸಿ ಮತ್ತು ಅಧುನಿಕ ಸಮಾಜದಿಂದ ಪ್ರೇರಿತನಾಗಿ ಈ ಶಾಸನವನ್ನು ಜೋಡಿಸಿದೆ. ಆದರೆ ವರುಣನ ಶಾಸನವನ್ನು ಪೂರ್ಣವಾಗಿ ತಿಳಿದುಕೊಳ್ಳಲು ಯಾರಿಗೂ ಸಾಧ್ಯವಿಲ್ಲ. ಅವನ ನಿಯಮವು ಅಷ್ಟು ಅಗಾಧವಾಗಿದೆ ಮತ್ತು ಆ ಶಾಸನಗಳು ಕೇವಲ ವರುಣನಿಗೇ ಗೊತ್ತು. ಮಾನವರು ಅಂಧಕಾರ ಮತ್ತು ಅಜ್ಞಾನಕ್ಕೆ ವಶರಾಗಿ ಮತ್ತು ಸಂಕಲ್ಪದ ಕೊರತೆಯಿಂದಾಗಿ ಅನೇಕ ಪಾಪಕಾರ್ಯಗಳನ್ನು ಮಾಡುತ್ತಾರೆ. ನಮ್ಮ ಹಿರಿಯರೂ, ಸ್ನೇಹಿತರು ಮತ್ತು ಬಂಧುಗಳು ಸಹ ನಮಗೆ ಮಾರ್ಗದರ್ಶನ ಮಾಡದೇ ನಮ್ಮನ್ನು ಪಾಪಕೂಪಕ್ಕೆ ತಳ್ಳುತ್ತಾರೆ. ಇವೆಲ್ಲದುದರಿಂದ ಹೊರಬರಲು ಇರುವುದು ಒಂದೇ ಮಾರ್ಗ. ಅದುವೇ ಅಗಿಹೋತ್ರವಾಗಿದೆ.

ಮಾನವರಾದ ನಾವು ಯಾರೂ ಸಹ ಸರಿಯಾಗಿ ಈ ಶಾಸನವನ್ನು ಪಾಲಿಸಲಾಗುವುದಿಲ್ಲ. ಸಂಕಲ್ಪದ ಕೊರತೆಯಿಂದಾಗಿ ಅಥವಾ ಇತರರಿಂದ ಪ್ರಚೋಧನೆಗೆ ಒಳಗಾಗಿ ಅನೇಕ ಪಾಪಕರ್ಮಗಳನ್ನು ಮಾಡುತ್ತೇವೆ. ಆದ್ದರಿಂದಲೇ ಋಗ್ವೇದವು ಅಗ್ನಿಹೋತ್ರವನ್ನು ಮತ್ತು ಸೂರ್ಯ-ಸವಿತೃವಿನ ಉಪಾಸನೆಯನ್ನು ಮಾಡಲು ಹೇಳುತ್ತದೆ. ಏಕೆಂದರೆ ನಮಗೆ ಸ್ಥೂಲಶರೀರವನ್ನು ಅನುಗ್ರಹಿಸಿದವರು ಸೂರ್ಯ–ಸವಿತೃ ಮತ್ತು ಆದಿತ್ಯರು.

ಆದ್ದರಿಂದ ಸೂರ್ಯಮಂಡಲದಲ್ಲಿರುವ ಸವಿತೃವಿನ ಉಪಾಸನೆಯಿಂದ ನಾವು ನಮ್ಮ ಪಾಪ ಕರ್ಮಗಳಿಂದ ಮುಕ್ತಿಯನ್ನು ಪಡೆಯಬಹುದು. ನಮ್ಮ ಉಪಾಸನೆಯಿಂದ ಸಂತೋಷವನ್ನು ಪಡೆದ ಸವಿತೃದೇವನು, ನಾವು ಪಾಪಗಳಿಂದ ಮುಕ್ತಿಯನ್ನು ಪಡೆದಿರುವೆವೆಂದು ಆದಿತ್ಯರಿಗೆ ಘೋಷಿಸುವನು. ಆಗ ನಮ್ಮ ಉಪಾಸನೆಯ ಕಾರಣದಿಂದ ನಾವು ಉತ್ತಮ ಸ್ವರ್ಗವನ್ನು ಪಡೆದುಕೊಳ್ಳಬಹುದು. ಆದರೆ ಅಮರತ್ವವನ್ನು ಪಡೆಯಲಾಗುವುದಿಲ್ಲ, ಭಗವಂತನ ಲೋಕಕ್ಕೆ ಹೋಗಲಾಗುವುದಿಲ್ಲ. ಅದಕ್ಕೆ ನಾವು ಯಜ್ಞದ ಮೂಲಕ ಇಂದ್ರನ ಉಪಾಸನೆಯನ್ನು ಮಾಡಬೇಕಾಗುತ್ತದೆ.

ದೈವೀ ಶಾಸನವು ಕೇವಲ ಮಾನವರಿಗೆ ಮಾತ್ರವಲ್ಲ. ಸಕಲ ಸೃಷ್ಟಿ ನಿಯಮಗಳು ಋತದಲ್ಲಿಯೇ ಸ್ಥಾಪಿತವಾಗಿವೆ. **ಸಕಲ ದೇವತೆಗಳು ಋತದಲ್ಲಿಯೇ ಸ್ಥಾಪಿತರಾಗಿದ್ದಾರೆ ಮತ್ತು ಅವರು ದೈವೀ ಶಾಸನವನ್ನು ಮೀರುವುದಿಲ್ಲ.** ಸೂರ್ಯಚಂದ್ರಾದಿಗ್ರಹನಕ್ಷತ್ರಗಳಲ್ಲಿರುವ ದೇವತೆಗಳು ದೈವೀ ಶಾಸನವನ್ನು ಪಾಲಿಸದಿದ್ದರೇ ಏನಾಗುವುದೆಂದು ಊಹಿಸುವುದೂ ಕಷ್ಟ. ಈ ಕೆಳಗಿನ ಸೂಕ್ತವನ್ನು ನೋಡಿ

ಸತ್ಯಮಿದ್ವಾ ಉ ತಂ ವಯಮಿಂದ್ರಂ ಸ್ತವಾಮ ನಾನ್ಯತಂ ೧ (ಋ ೮–೬೨–೧೨ ಸಾಭಾ)
ಮಹಾನ್ ಅಸುನ್ವತೋ ವಧೋ ಭೂರಿ ಜ್ಯೋತೀಂಷಿ ಸುನ್ವತೋ ಭದ್ರಾ ಇಂದ್ರಸ್ಯ ರಾತಯಯಃ ೧೧
"ಪ್ರಸಿದ್ಧನಾದ ಇಂದ್ರನನ್ನು ನಾವು ಸತ್ಯವಾಗಿಯೇ ಸ್ತುತಿಸೋಣ. ಅಪ್ರಾಮಾಣಿಕವಾಗಿ ಸ್ತುತಿಸಲಾಗದು. ಯಜ್ಞಕರ್ತನಲ್ಲದ ಮನುಜನಿಗೆ ಅಧಿಕವಾದ ನಾಶವು ಸಿದ್ಧವು. ಅತ್ಯಧಿಕವಾಗಿ ಸೋಮರಸವನ್ನು ಹಿಂಡಿ ಅರ್ಪಿಸುವ ಯಜಮಾನನಿಗೆ ಲಭಿಸುವ ಇಂದ್ರನ ದಾನಗಳು ಮಂಗಳಕರಗಳಾಗಿವೆ."

## ಋಗ್ವೇದದಲ್ಲಿ ಪುನರ್ಜನ್ಮ

ಪುನರ್ಜನ್ಮದ ಬಗ್ಗೆ ಋಗ್ವೇದದ ವಿವರಣೆಯನ್ನು ನೋಡೋಣ. ನಾವು ಪಂಚಕೋಶಗಳನ್ನು ಹೊಂದಿದ್ದೇವೆ ಎಂದು ತಿಳಿದುಕೊಂಡೆವು. ಅವು ಯಾವುದೆಂದರೆ ಕಾರಣಶರೀರ, ಸೂಕ್ಷ್ಮಶರೀರ, ಪ್ರಾಣಮಯಶರೀರ ಮನೋಮಯಶರೀರ ಮತ್ತು ಸ್ಥೂಲಶರೀರಗಳು. ಕಾರಣಶರೀರವು ಇಂದ್ರ ಸೃಷ್ಟಿಯಾಗಿದೆ, ಪುರುಷ ಅಥವಾ ಸೂಕ್ಷ್ಮಶರೀರವು ವಿರಾಟ್‌ಪುರುಷನ ಪ್ರತಿರೂಪವಾಗಿದೆ, ಸ್ಥೂಲಶರೀರವು ಸೂರ್ಯ–ಸವಿತೃ ಮತ್ತು ಆದಿತ್ಯರ ಸೃಷ್ಟಿಯಾಗಿದೆ. ಪ್ರಾಣಮಯಶರೀರ ಮತ್ತು ಮನೋಮಯಶರೀರವು ಸ್ಥೂಲಶರೀರದಲ್ಲಿ ಅಂತರ್ಗತವಾಗಿದೆ. ಇಂದ್ರಿಯಗಳ ಮೂಲಕ ನಮ್ಮ ಪ್ರಾಣದಲ್ಲಿ ಮುದ್ರಿತವಾದ ಸಂಗತಿಗಳೇ ಮನಸ್ಸಾಗಿದೆ. ಪ್ರಾಣ+ಮನೋಮಯ ಶರೀರವನ್ನು ಜೀವ ಎಂದು ಕರೆಯುತ್ತಾರೆ.

ಈ ಶರೀರಗಳಲ್ಲಿ ಯಾರು ಶಿಕ್ಷೆಗೆ ಒಳಪಡುವರು?

ನಮ್ಮ ಆತ್ಮ ಮತ್ತು ಪರಮಾತ್ಮನಿಂದೊಡಗೂಡಿರುವ ಕಾರಣಶರೀರ ಮತ್ತು ವಿರಾಟ್‌ಪುರುಷನ ಸೂಕ್ಷ್ಮಶರೀರಗಳು ದೈವೀಶರೀರಗಳಾಗಿದೆ. ಅವುಗಳು ಕೇವಲ ಸಾಕ್ಷೀರೂಪಗಳಾಗಿರುತ್ತವೆ. ಜೀವಿಯ ಮರಣಾನಂತರ ದೈವೀಶರೀರಗಳು ವಿರಾಟ್ ಪುರುಷನ ಬಳಿ ಹೋಗುತ್ತದೆ. ಆದ್ದರಿಂದ ಸ್ಥೂಲಶರೀರವು ಮರಣಿಸಿದ ನಂತರ ಕೇವಲ ಪ್ರಾಣ ಮತ್ತು ಮಾನಸಿಕ ಶರೀರಗಳು (ಜೀವ) ನಮ್ಮ ವ್ಯಕ್ತಿತ್ವವನ್ನು ಪ್ರತಿಪಾದಿಸುವುದರಿಂದ ಮತ್ತು ನಾವು ಮನಸ್ಸಿನ ಮೂಲಕ ಮಾತ್ರ ಪುಣ್ಯ–ಪಾಪ ಕರ್ಮಗಳನ್ನು ಮಾಡುವುದರಿಂದ ಈ ಶರೀರಗಳು ಶಿಕ್ಷೆಗೆ ಒಳಪಡುತ್ತವೆ. ಪ್ರಾಣ ಮತ್ತು ಮಾನಸಿಕ ಶರೀರವನ್ನು ಪ್ರೇತ ಅಥವಾ ಜೀವ ಎಂದು ಕರೆಯುತ್ತಾರೆ.

ನಮ್ಮ ಮನಸ್ಸು ಸ್ಥೂಲಶರೀರದ ಮತ್ತು ಜೀವನ ಮೇಲೆ ಪೂರ್ಣ ಪ್ರಭುತ್ವವನ್ನು ಹೊಂದಿದೆ. ನಮ್ಮ ಜ್ಞಾನೇಂದ್ರಿಯ ಮತ್ತು ಕರ್ಮೇಂದ್ರಿಯಗಳನ್ನು ನಮ್ಮ ಮನಸ್ಸು ನಿಯಂತ್ರಿಸುತ್ತಿದೆ. ಆದ್ದರಿಂದ ಮನಸಿನಿಂದೊಡಗೂಡಿದ ಜೀವನೇ (ಪ್ರೇತ/ಸ್ಪಿರಿಟ್ ಬಾಡಿ/ಎನರ್ಜಿ ಬಾಡಿ) ಫಲವನ್ನು ಅನುಭವಿಸುತ್ತದೆ.

ನಮ್ಮ ಜ್ಯೋತಿರೂಪ ಆತ್ಮವು ಭೂಮಿಯ ಮೇಲೆ ಜನ್ಮ ತಾಳಿದ ಕೂಡಲೆ ವೃತ್ರಾಸುರನ ವಶಕ್ಕೆ ಸಿಲುಕಿ ಅಜ್ಞಾನ–ಅಂಧಕಾರಕ್ಕೆ ಸಿಲುಕಿ ತನ್ನನ್ನೇ ಮರೆತುಬಿಡುತ್ತಾನೆ. ತಾನು ಯಾರು, ಎಲ್ಲಿಂದ ಬಂದಿರುವೆನು ಮತ್ತು ತಾನು ಭಗವಂತನ ಅಂಶ ಎಂಬ ವಿಚಾರವನ್ನೂ ಸಹ ಮರೆತುಬಿಡುತ್ತಾನೆ. ಜ್ಯೋತಿರೂಪ ಆತ್ಮವು ಜೀವನೊಂದಿಗೆ ಗುರುತಿಸಿಕೊಂಡು ಪದೇ ಪದೇ ಜನ್ಮವನ್ನು ತಾಳುತ್ತಾನೆ ಮತ್ತು ಜೀವನು ಮಾಡುವ ಕರ್ಮಗಳನ್ನೆಲ್ಲಾ ತಾನು ಮಾಡುತ್ತಿರುವನೆಂದು ಭಾವಿಸುತ್ತಾನೆ. ಹೀಗೆ ಸುಖ–ದುಃಖಗಳನ್ನು ಅನುಭವಿಸುತ್ತಾ ಆತನ ಜನ್ಮಾಂತರ ಪ್ರಯಾಣ ಪ್ರಳಯದರೆಗೂ ಸಾಗುತ್ತದೆ.

ತಂದೆತಾಯಿಯರ ಶುಕ್ಲ–ಶೋಣಿತದಿಂದಾಗಿ ಮಗವು ಜನನವನ್ನು ತಾಳುತ್ತದೆ ಮತ್ತು ಅದರಲ್ಲಿ ತಾಯಿಯ ಪ್ರಾಣವು ಅಂತರ್ಗತವಾಗಿರುತ್ತದೆ ಮತ್ತು ಗರ್ಭದಿಂದ ಜನಿಸಿದ ಮಗುವು ಹೊಸ ಮನಸ್ಸನ್ನು ಪಡೆಯುತ್ತದೆ. ಈ ಶರೀರವನ್ನು ಸೂರ್ಯ–ಸವಿತೃ ದೇವತೆಯು ಅನುಗ್ರಹಿಸುತ್ತಾನೆ. ಜನನವಾಗುವ ಕೆಲವು ನಿಮಿಷದೊಳಗೆ ನಮ್ಮ ರಹಸ್ಯವಾದ ಹೆಸರನ್ನು ಸೂರ್ಯ–ಸವಿತೃ ದೇವನು ಕರೆಯುತ್ತಾನೆ ಸಪ್ತಲೋಕದಲ್ಲಿರುವ ಜೀವನು (ಪ್ರಾಣ–ಮನಸ್ಸು) ಬಂದು ಮಗುವಿನ ಶರೀರದಲ್ಲಿ ಇಳಿಯುವನು ಮತ್ತು ಜೀವನ ಮನಸ್ಸು ಮಗುವಿನ ಸುಪ್ತಮನಸ್ಸಾಗಿರುತ್ತದೆ. ಇದರ ಜೊತೆಗೆ ದೈವೀಶರೀರಗಳಾದ ಕಾರಣ ಮತ್ತು ಪುರುಷ ಶರೀರಗಳಿಂದ ಕೂಡಿದ ಆತ್ಮನೂ ಸಹ ಬಂದು ಸೇರಿಕೊಳ್ಳುತ್ತಾನೆ. ಅಥವಾ ಮಗುವು ತೆಗೆದುಕೊಳ್ಳುವ ಪ್ರಥಮ ಉಸಿರಿನ ಜೊತೆ ದೈವೀಶರೀರಗಳು ಮತ್ತು ಸಪ್ತಸ್ವರ್ಗದಲ್ಲಿರುವ ಜೀವನು ಬಂದು ಸೇರುವರು. ಆದ್ದರಿಂದ ಪ್ರಥಮ ಉಸಿರು ಬಹಳ ಮಹತ್ವಪೂರ್ಣವಾಗಿದೆ.

# ಅಧ್ಯಾಯ–೨೦: ಯಮ, ಪೃಥಿವಿ ಮತ್ತು ಸಪ್ತಸ್ವರ್ಗಗಳು

ಪ್ರತ್ಯಙ್ ದೇವಾನಾಂ ವಿಶಃ ಪ್ರತ್ಯಙ್ಙುದೇಷಿ ಮಾನುಷಾನ್ ।
ಪ್ರತ್ಯಙ್ವಿಶ್ವಂ ಸ್ವರ್ದೃಶೇ ।। (ಋಗ್ವೇದ ೧–೫೦–೫ ಸಾಭಾ)
"ಎಲೈ ಸೂರ್ಯದೇವನೇ, ನೀನು ದೇವಲೋಕದ ಪ್ರಜೆಗಳಾದ ಮರುದ್ದೇವತೆಗಳಿಗೂ, ಸಕಲ ಮಾನವರಿಗೂ ಸ್ವರ್ಲೋಕಕ್ಕೂ (ಸಪ್ತಮಸ್ವರ್ಗ) ಅಭಿಮುಖನಾಗಿ ಸಕಲರಿಗೂ ಗೋಚರನಾಗುವಂತೆ ಉದಯಿಸುತ್ತೀಯೆ."

ತೇ ಮಾಯಿನೋ ಮಮಿರೇ ಸುಪ್ರಚೇತಸೋ ಜಾಮೀ ಸಯೋನೀ ಮಿಥುನಾ ಸಮೋಕಸಾ ।
ನವ್ಯಂನವ್ಯಂ ತಂತುಮಾ ತನ್ವತೇ ದಿವಿ ಸಮುದ್ರೇ ಅಂತಃ ಕವಯಃ ಸುದೀತಯಃ ।। (ಋ ೧–೧೫೯–೪ ಸಾಭಾ)
"ಸಹೋದರಿಯರೂ, ಒಂದೇ (ಗರ್ಭೋ) ಉತ್ಪತ್ತಿಸ್ಥಾನವುಳ್ಳವರೂ ಆಕಾಶರೂಪವಾದ ಒಂದೇ ವಾಸಸ್ಥಾನವುಳ್ಳವರೂ ದ್ಯಾವಾಪೃಥ್ವಿಗಳು ತಮ್ಮ ವಿಷಯದಲ್ಲಿ ಪೂರ್ಣವಾದ ಪ್ರಜ್ಞೆಯುಳ್ಳವೂ ಚೈತನ್ಯ ಪ್ರದಾನವಾದ ಶಕ್ತಿಯುಳ್ಳವೂ ಆದ ರಶ್ಮಿಗಳನ್ನು ಪ್ರಮಾಣರೂಪದಲ್ಲಿ ನಿಯಮಿಸುತ್ತವೆ. ಮೇಧಾವಿಗಳೂ ಎಂದರೆ ತಮ್ಮ ಕರ್ತವ್ಯವನ್ನು ಚೆನ್ನಾಗಿ ತಿಳಿದವೂ, ಶ್ರೇಷ್ಠವಾಗಿ ಪ್ರಕಾಶಿಸುವುವೂ ಆದ ರಶ್ಮಿಗಳು ಪ್ರಕಾಶಮಾನವಾದ ಅಂತರಿಕ್ಷದ ಮಧ್ಯಭಾಗದಲ್ಲಿ ಅತ್ಯಂತ ನೂತನವಾದುದೂ ವಿಸ್ತೃತವಾಗತಕ್ಕದ್ದೂ ಆದ ತಮ್ಮ ಪ್ರಭೆಗಳನ್ನು ಸುತ್ತಲೂ ಪರಸರಿಸುವಂತೆ ಮಾಡುತ್ತವೆ."

ಪ್ರ ದ್ಯಾವಾ ಯಜ್ಞೈಃ ಪೃಥಿವೀ ಋತಾವೃಧಾ ಮಹೀ ಸ್ತುಷೇ ವಿದಥೇಷು ಪ್ರಚೇತಸಾ ।
ದೇವೇಭಿರ್ಯೇ ದೇವಪುತ್ರೇ ಸುದಂಸಸೇತ್ಥಾ ಧಿಯಾ ವಾರ್ಯಾಣಿ ಪ್ರಭೂಷತಃ (ಋಗೇದ ೧–೧೫೯–೧)
"ಯಜ್ಞವನ್ನು ವೃದ್ಧಿಯಾಗುವಂತೆ ಮಾಡುವವರೂ, ಮಹತ್ತಾದ ರೂಪವುಳ್ಳರೂ, ಯಜ್ಞಗಳಲ್ಲಿ ಸ್ತುತಿಸಲ್ಪಡುವವರೂ ಆದ ದ್ಯಾವಾಪೃಥ್ವಿಗಳನ್ನು ಹವಿರಾದ್ಯರ್ಪಣೆಗಾಗಿ ಸ್ತುತಿಸಿ ಪ್ರಾರ್ಥಿಸುತ್ತೇನೆ. (ಪಿತೃ) ದೇವತೆಗಳೇ ಪುತ್ರರಾಗಿ ಉಳ್ಳ ದ್ಯಾವಾಪೃಥ್ವಿಗಳು ಯಜಮಾನರಿಂದ ನೆರವೇರಿಸಲ್ಪಟ್ಟ ಶ್ರೇಷ್ಠವಾದ ಕರ್ಮಗಳಿಂದ ಕೂಡಿದವರಾಗಿ ತಮ್ಮ ಅನುಗ್ರಹಾತ್ಮಕವಾದ ಬುದ್ಧಿಯಿಂದ ಯಜಮಾನರ ಇಷ್ಟಾರ್ಥಗಳನ್ನು ನೆರವೇರಿಸುತ್ತಾರೆ."

ಅಯಂ ದೇವಾನಾಮಪಸಾಮಸ್ತಮೋಯೋ ಜಜಾನ ರೋದಸೀವಿಶ್ವಶಂಭುವಾ ।
ವಿ ಯೋ ಮಮೇ ರಜಸೀ ಸುಕ್ರತೂಯಯಾಜರೇಭಿಃ ಸ್ಕಂಭನೇಭಿಃ ಸಮಾನೃಚೇ ।। (ಋ ೧–೧೬೦–೪ ಸಾ ಭಾ)
"ಯಾವ ಆದಿತ್ಯನು (ಸೂರ್ಯ–ಸವಿತೃ) ಲೋಕಕ್ಕೆಲ್ಲಾ ಸೌಖ್ಯವನ್ನು ಕೊಡತಕ್ಕ ದ್ಯಾವಾಪೃಥ್ವಿಗಳನ್ನು ಸೃಷ್ಟಿಸಿದನೋ, ಯಾವನು ದ್ಯಾವಾಪೃಥ್ವಿಗಳನ್ನು ಅಳೆದನೋ ಮತ್ತು ಶ್ರೇಷ್ಠವಾದ ಕರ್ಮಾಚರಣೆಗೆ ಸಹಾಯವನ್ನು ಮಾಡಬೇಕೆಂಬ ಇಚ್ಛೆಯಿಂದ ಕ್ಷಯಿಸದಿರುವ ಆಧಾರಸ್ತಂಭಗಳಿಂದ ಊರೆಯನ್ನು ಕೊಟ್ಟು ದ್ಯಾವಾಪೃಥ್ವಿಗಳನ್ನು ಸ್ಥಾಪಿಸಿದನೋ ಅಂತಹ ಆದಿತ್ಯನು ದೇವತೆಗಳ ನಡುವೆ ದೇವೋತ್ತಮನು ಮತ್ತು ಕರ್ಮಯುಕ್ತರ ನಡುವೆ ಶ್ರೇಷ್ಠವಾದ ಕರ್ಮಗಳನ್ನು ಮಾಡುವವನಾಗಿದ್ದಾನೆ."

ದ್ಯೌರ್ಮೇ ಪಿತಾ ಜನಿತಾ ನಾಭಿರತ್ರ ಬಂಧುರ್ಮೇ ಮಾತಾ ಪೃಥಿವೀ ಮಹೀಯಂ ।
ಉತ್ತಾನಯೋಶ್ಚಮ್ವೋ ರ್ಯೋನಿರಂತರತ್ರಾ ಪಿತಾ ದುಹಿತುರ್ಗರ್ಭಮಾಧಾತ್ ।। (ಋ ೧–೧೬೪–೩೩)
"ದ್ಯುಲೋಕವು ನನಗೆ ಪಾಲಕವೂ ನನ್ನ ಉತ್ಪತ್ತಿಹೇತುವೂ ಆಗಿದೆ. ನಾಭಿಯು ದ್ಯುಲೋಕ ಮತ್ತು ಪೃಥ್ವಿಯ ಬಂಧನಸ್ಥಾನ ಆಗಿರುವುವೂ, ವಿಸ್ತೃತವಾದುದೂ ಆದ ಈ ಪೃಥ್ವಿಯು ನನಗೆ ಮಾತೃರೂಪಳಾಗಿದ್ದಾಳೆ. ಊರ್ಧ್ವಮುಖವಾಗಿ ವಿಸ್ತೃತವಾದವೂ, ಚಮೂಪಾತ್ರೆಯಂತೆ ಭೋಗಸಾಧನಗಳಾದು ವಿಸ್ತೃತವಾದವೂ ಆದ ಈ ದ್ಯಾವಾಪೃಥ್ವಿಗಳ ಮಧ್ಯಭಾಗದಲ್ಲಿ ಸಕಲಭೂತಗಳಿಗೂ ನಿರ್ಮಾತೃಸ್ಥಾನವಾದ ಅಂತರಿಕ್ಷದಲ್ಲಿ ಆದಿತ್ಯನು ತನ್ನ ದುಹಿತೃವಾದ ಪೃಥ್ವಿಯ ಗರ್ಭರೂಪವಾದ ಉದಕವನ್ನು ಧರಿಸಿದ್ದಾನೆ."

ಯ ಈಂ ಚಕಾರ ನ ಸೋ ಅಸ್ಯ ವೇದ ಯ ಈಂ ದದರ್ಶ ಹಿರುಗಿನ್ನು ತಸ್ಮಾತ್ ।
ಸ ಮಾತುರ್ಯೋನಾ ಪರಿವೀತೋ ಅಂತರ್ಬಹುಪ್ರಜಾ ನಿರ್ಋತಿಮಾ ವಿವೇಶ ।। (ಋ ೧–೧೬೪–೩೨)
"ಯಾವ ಪುರುಷನು ಸಂತಾನರೂಪವಾದ ಈ ಗರ್ಭವನ್ನು ಸೃಷ್ಟಿಸಿದನೋ ಅವನು ಈ ಗರ್ಭದ ಮರ್ಮವನ್ನರಿಯಲಾರನು. ಉದರವೃದ್ಧಿಯೇ ಮೊದಲಾದ ಸಂಜ್ಞೆಗಳಿಂದ ಇದನ್ನು ನೋಡಿದರೂ ಸಹ ಇದರ ತತ್ವವು ಅಂತರ್ಹಿತವಾಗಿಯೇ ಇದೆ. ಇದರ ಮರ್ಮವನ್ನರಿಯದ ಅಜ್ಞಾನಿಯು ತನ್ನ ಜನ್ಮಕ್ಕೆ ಕಾರಣಳಾದ ತಾಯಿಯ ಗರ್ಭದಲ್ಲಿ ಸುತ್ತುವರಿಯಲ್ಪಟ್ಟು ಪುನಃ ಪುನಃ ಜನ್ಮವುಳ್ಳವನಾಗಿ ದುಃಖಕ್ಕೆ ಭಾಗಿಯಾಗುತ್ತಾನೆ."

ಸೂರ್ಯನು ದ್ಯಾವಾ–ಪೃಥ್ವಿಗಳ ಸೃಷಿಕರ್ತನಾಗಿದ್ದಾನೆ. ಈ ಭೂಮಿ ಮತ್ತು ಸ್ವರ್ಗಗಳನ್ನು, ಪೃಥ್ವಿಯಲ್ಲಿ ಜನಿಸಿರುವ ಸಕಲ ಜೀವರಾಶಿಗಳನ್ನೂ ಸೂರ್ಯ–ಸವಿತೃ ದೇವತೆಯು ಇತರ ದೇವತೆಗಳ ಜೊತೆಗೂಡಿ ಸೃಷ್ಟಿಸಿರುವನು.

ಸಕಲ ಜೀವರಾಶಿಗಳು ಸೂರ್ಯ–ಸವಿತೃವಿನ ಆಧೀನದಲ್ಲಿಯೇ ಇರುವರು. ಆದ್ದರಿಂದ ಸೂರ್ಯ–ಸವಿತೃವನ್ನು ಪ್ರಜಾಪತಿ ಎಂದು ಕರೆಯುತ್ತಾರೆ. ಇಂದ್ರನ ಅಪ್ಪಣೆಯಂತೆ ಸೂರ್ಯ–ಸವಿತೃ ದೇವನು ನಮ್ಮನ್ನು ಆಳುತ್ತಿರುವನು. ನಮ್ಮೆಲ್ಲರ ಜೀವನಚಕ್ರವು ಸೂರ್ಯನು ಸೃಷ್ಟಿಸಿರುವ ಪೃಥ್ವಿ ಮತ್ತು ಸಪ್ತಸ್ವರ್ಗಗಳ ಮಧ್ಯೆ ನಿರಂತರವಾಗಿ ನಡೆಯುತ್ತಿರುತ್ತದೆ. ಸೂರ್ಯ–ಪೃಥ್ವಿಯ ಬಂಧನದಿಂದ ಯೋಗಿಯ ಹೊರತು ಇತರ ಯಾರೂ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ.

ಯಹೂದಿಗಳ ಗ್ರಂಥವಾದ ಹೀಬ್ರೂ ೧೧–೩ ಹೇಳುವುದೇನೆಂದರೆ "ಭಗವಂತನ ಪದಗಳಿಂದ" ವಿಶ್ವವು ಸೃಷ್ಟಿಸಲ್ಪಟ್ಟಿತು.

ಕುಂಡಲಿನಿ ಮಾತೆಯರ ಚಕ್ರಗಳು ಸಂಸ್ಕೃತ ಬೀಜಾಕ್ಷರಗಳಿಂದ ಸೃಷ್ಟಿಸಲ್ಪಟ್ಟವು.
ಹಾಗಾದರೆ ಸಪ್ತಸ್ವರ್ಗಗಳು ಯಾವ ಪದಗಳಿಂದ ಸೃಷ್ಟಿಸಲ್ಪಟ್ಟಿತು?

ಸಪ್ತಸ್ವರ್ಗಗಳು ಭೂಃ, ಭುವಃ, ಸ್ವಃ, ಮಹಃ, ಜನಃ, ತಪಃ ಮತ್ತು ಸತ್ಯಂ ಎಂಬ ಪದಗಳಿಂದ ಸೃಷ್ಟಿಸಲ್ಪಟ್ಟಿತು. ಹಾಗೆಯೆ ಗಾಯತ್ರೀ ಮಂತ್ರದಲ್ಲಿ ಭೂರ್ಭುವಸ್ವಃ ಮಂತ್ರದಲ್ಲಿ ಭೂ ಅಂದರೆ ಪೃಥ್ವಿ, ಭುವಃ ಎಂದರೆ ದ್ಯುಲೋಕ ಮತ್ತು ಸ್ವಃ ಎಂದರೆ ಅಂತರಿಕ್ಷಲೋಕ

ಅಪರ್ಾಹ್ಣ ಕಾಲದಲ್ಲಿ ಪೃಥ್ವಿಯಿಂದ ಸೂರ್ಯನವರೆಗೂ ಈ ಏಳು ಸ್ವರ್ಗಗಳಿವೆ. (ಹಾಗೆಯೇ ಪೃಥ್ವಿಯ ಕೆಳಗಡೆ ಅಂದರೆ ಒಳಗಡೆ ನರಕಲೋಕವಿದೆ.) ಈ ಸಪ್ತಲೋಕಗಳನ್ನು ದ್ಯುಲೋಕವೆಂದು ಅಥವಾ ಪಿತೃಲೋಕವೆಂದು ಋಗ್ವೇದವು ಕರೆಯುತ್ತದೆ. ಈ ಲೋಕಗಳು ಅಪರ್ಾಹ್ಣ ಕಾಲದಲ್ಲಿ ಪೃಥ್ವಿಯಿಂದ ಅಂದರೆ ಸೂರ್ಯನಷ್ಟು ದೂರದಲ್ಲಿ ಮೇಲಕ್ಕೆ ಊರ್ಧ್ವಮುಖವಾಗಿ ನೇರವಾಗಿ ಲಂಬವಾಗಿ ಇರುವುದು. ಸೂರ್ಯನ ಅಭಿಮುಖವಾಗಿ ಸಪ್ತಮಸ್ವರ್ಗವಿರುವುದು. ಸೂರ್ಯ–ಸವಿತೃವಿನ ಅನುಗ್ರಹವನ್ನು ಪಡೆದಿದ್ದರೇ ಮರಣಾನಂತರ ನಾವು ಸೂರ್ಯಮಂಡಲವನ್ನು ದೇವತೆಗಳನ್ನು ನೋಡಬಹುದು. ಅಲ್ಲಿ ಕೆಲವು ಕಾಲ ಆನಂದದಿಂದ ಇದ್ದು ಮತ್ತೆ ಭೂಮಿಯ ಮೇಲೆ ಜನ್ಮ ತಾಳುವೆವು.

ಪೃಥ್ವಿ ಮತ್ತು ಅಲ್ಲಿಂದ ಮೇಲಿರುವ ಸಪ್ತಸ್ವರ್ಗಗಳನ್ನು ದ್ಯಾವಾ–ಪೃಥ್ವಿ ಎಂದು ಕರೆಯುತ್ತಾರೆ. ಈ ದ್ಯುಲೋಕಕ್ಕೆ ಅಂದರೆ ಪಿತೃಲೋಕಗಳಿಗೆ ಸಾಮಾನ್ಯ ಮಾನವರು ಹೋಗುತ್ತಾರೆ. ಕೇವಲ ಯೋಗಿಯು ಮಾತ್ರ ಈ ಲೋಕಗಳಿಗೆ ಹೋಗದೆ, ಸೂಕ್ಷ್ಮಮಾರ್ಗದ ಮುಖಾಂತರ ಭಗವಂತನ ಲೋಕಕ ್ಕೆ ನೇರವಾಗಿ ಹೋಗುತ್ತಾನೆ. ಆದ್ದರಿಂದ ಸೂರ್ಯ–ಸವಿತೃವು ಪೃಥ್ವಿ ಮತ್ತು ಸಪ್ತಸ್ವರ್ಗಗಳನ್ನು ಆಳುತ್ತಾನೆ. ಯಾರು ಯಜ್ಞದ ಮುಖಾಂತರ ದೇವತೆಗಳನ್ನು ಆರಾಧಿಸುವರೋ ಅವರು ಸಪ್ತಮಸ್ವರ್ಗಕ್ಕೆ ಮರಣಾನಂತರ ಹೋಗುವರು. ಆದರೆ ಅವರು ಇಂದ್ರನ ಲೋಕಕ್ಕೆ ಹೋಗಲು ಸಾಧ್ಯವಿಲ್ಲ. ಕೆಲವು ಕಾಲ ಸಪ್ತಮಸ್ವರ್ಗದಲ್ಲಿದ್ದು ಮತ್ತೆ ಪೃಥ್ವಿಯ ಮೇಲೆ ಜನ್ಮ ತಾಳಬೇಕಾಗುತ್ತದೆ.

ಈ ಸಪ್ತಸ್ವರ್ಗಗಳನ್ನು ಮೂರು ವಿಭಾಗವಾಗಿ ಮಾಡಲಾಗಿದೆ. ಈ ಮೂರು ವಿಭಾಗಗಳು ಯಾವುದೆಂದರೆ ಕೆಳಹಂತದ ಸ್ವರ್ಗ, ಮಧ್ಯಮ ಹಂತದ ಸ್ವರ್ಗ ಮತ್ತು ಮೇಲಿನ ಹಂತದ ಸ್ವರ್ಗಗಳೂ. ಈ ಮೂರು ವಿಭಾಗವನ್ನು ಪಿತೃಲೋಕವೆಂದೂ, ಪೂರ್ವಜರ ಲೋಕವೆಂದೂ ಸಹ ಕರೆಯುತ್ತಾರೆ. ಸಪ್ತಸ್ವರ್ಗದ ಮೂರು ವಿಭಾಗಗಳು ಯಾವುವೆಂದರೆ ಭೂಃ, ಭುವಃ ಮತ್ತು ಸ್ವಃ ಎಂಬ ಕೆಳಹಂತದ ಸ್ವರ್ಗ, ಅದರ ಮೇಲ್ಭಾಗದಿಂದ ಮಹಃ ಮತ್ತು ಜನಃ ಎಂದು ಕರೆಯುವ ಲೋಕಗಳನ್ನು ಮಧ್ಯಮಸ್ವರ್ಗವೆಂದೂ, ಅಲ್ಲಿಂದ ಸತ್ಯಲೋಕದವರೆಗಿನ ಸ್ಥಾನವನ್ನು ಅಂದರೆ ತಪಃ ಮತ್ತು ಸತ್ಯಂ ಎಂದು ಕರೆಯಲ್ಪಡುವ ಸ್ಥಾನವನ್ನು ಊರ್ಧ್ವಲೋಕ ಎಂದು ಕರೆಯುತ್ತಾರೆ.

ತಿಸ್ರೋದ್ಯಾವಃ ಸವಿತುರ್ದ್ವಾ ಉಪಸ್ಥಾ ಏಕಾ ಯಮಸ್ಯ ಭುವನೇ ವಿರಾಷಾಟ್ ।
ಆಣಿಂ ನ ರಥ್ಯಮಮೃತಾದಿ ತಸ್ಥುರಿಹ ಬ್ರವೀತು ಯ ಉ ತಚ್ಚಿಕೇತತ್ ।। (ಋ ೧–೩೫–೬ ಸಾಭಾ)
"ಸಪ್ತಸ್ವರ್ಗಗಳಲ್ಲಿ (ಒಟ್ಟು ಮೂರು ಹಂತದ ಸ್ವರ್ಗ ವಿಭಾಗಗಳಿವೆ,) ದ್ಯುಲೋಕದ ಎರಡು ಮತ್ತು ಭೂಮಿಯು ಸೂರ್ಯ–ಸವಿತೃವಿನ ಸಾನಿಧ್ಯದಲ್ಲಿದೆ. ಉಳಿದ ಒಂದು, ಕೆಳಗಿನ ಹಂತದ ಸ್ವರ್ಗ ಮರಣಹೊಂದಿದ ಮಾನವರಿಗೆ (ಪ್ರೇತಗಳಿಗೆ) ಯಮನ ಲೋಕದ ಮಾರ್ಗವಾಗಿದೆ. ರಥವು ತನ್ನ ಆಧಾರಭೂತವಾದ ಇರಚಿಯನ್ನು ಅವಲಂಬಿಸಿರುವಂತೆ ನಾಶರಹಿತಗಳಾದ (ದ್ಯಾವಾಪೃಥಿವಿಗಳು) ಈ ಸವಿತೃವನ್ನೇ ಅವಲಂಬಿಸಿವೆ. ಈ ಸವಿತೃವಿನ ಸ್ವರೂಪವನ್ನು ತಿಳಿಯಲು ಮಾನವನಿಂದ ಸಾಧ್ಯವಾಗಲಾರದು. ಯಾವನಿಗದರೂ ತಿಳಿದಿದ್ದಲ್ಲಿ ಅವನಿ ಸವಿತೃದೇವತೆಯ ಅತಿಮಾನುಷವಾದ ಸ್ವರೂಪವನ್ನು ವರ್ಣಿಸಲಿ."

ಉದೀರತಾಮವರ ಉತ್ಪರಾಸ ಉನ್ಮಧ್ಯಮಾಃ ಪಿತರಃ ಸೋಮಾಸ್ಯಃ ।
ಅಸುಂ ಯ ಈಯುರವೃಕಾ ಋತಜ್ಞಾಸ್ತೇ ನೋಽವಂತ ಪಿತರೋ ಹವೇಷು ।। (ಋ ೧೦–೧೫–೧ ಸಾಭಾ)

"ಕೆಳಗಿನ ಲೋಕದಲ್ಲಿರುವ ಪಿತೃಗಳೂ, ಉತ್ತಮಲೋಕದಲ್ಲಿರುವವರೂ, ಮಧ್ಯಮಲೋಕದಲ್ಲಿರುವವರೂ ನಮ್ಮ ಹವಿಸ್ಸುಗಳನ್ನು ಸ್ವೀಕರಿಸಲಿ. ಅವರೆಲ್ಲರೂ ನಮ್ಮಲ್ಲಿ ಅನುಗ್ರಹಬುದ್ಧಿಯುಳ್ಳವರಾಗಿರಲಿ. ತೋಳಗಳಂತೆ ಕ್ರೂರಿಗಳಲ್ಲದವರೂ, ನಮ್ಮ ಯಜ್ಞಕರ್ಮಗಳನ್ನರಿತವರೂ, ನಮ್ಮ ಪ್ರಾಣವನ್ನು ರಕ್ಷಿಸಲು ಬಂದಿರುವವರೂ ಆದ ಆ ಪಿತೃಗಳು ನಮ್ಮ ಆಹ್ವಾನಕಾಲದಲ್ಲಿ ನಮ್ಮನ್ನು ರಕ್ಷಿಸಲಿ."

ನಮ್ಮ ಪಿಂಡಾಂಡವು ಬ್ರಹಾಂಡದ ಪ್ರತಿರೂಪವಾದುದರಿಂದ ನಮ್ಮೊಳಗೆಯೂ ಸೂರ್ಯ–ಸವಿತೃ ಮತ್ತು ಸಪ್ತಲೋಕಗಳಿವೆ. ಸೂರ್ಯ ಕುಟುಂಬದಲ್ಲಿ ಈ ಲೋಕಗಳಿರುವಂತೆ ಪಿಂಡಾಂಡವಾದ ನಮ್ಮ ಶರೀರದಲ್ಲಿಯೂ ಇದೆ. (ಇದೇ ರೀತಿ ವಿರಾಟ್‌ಪುರುಷನ ಶರೀರದಲ್ಲಿಯೂ ಇದೆ.) ನಮ್ಮ ನಾಭಿಸ್ಥಾನವು ಪೃಥ್ವಿಲೋಕವನ್ನು ಪ್ರತಿನಿಧಿಸುತ್ತದೆ. ನಾಭಿಯಿಂದ ಹೊಟ್ಟೆಯ ಸ್ಥಾನದವರೆಗೂ ಭೂಃ, ಭುವಃ ಸುವಃ ಎಂಬ ಕೆಳಹಂತದ ಸ್ವರ್ಗಗಳಿವೆ. ಹೃದಯ ಮತ್ತು ಕಂಠದ ಸ್ಥಾನದಲ್ಲಿ ಮಹಃ ಮತ್ತು ಜನಃ ಎಂಬ ಮಧ್ಯಮ ಹಂತದ ಸ್ವರ್ಗಗಳಿವೆ. ಇದೇ ರೀತಿ ಹಣೆ ಹಾಗು ನೆತ್ತಿಯ ಕೆಳಗೆ ತಪಃ ಮತ್ತು ಸತ್ಯಂ (ಮೆದುಳಿನ ಮಧ್ಯಭಾಗದ ಸ್ವಲ್ಪ ಮೇಲೆ) ಎಂಬ ಊರ್ಧ್ವಲೋಕದ ಸ್ವರ್ಗಗಳಿವೆ.

ಪೃಥ್ವಿಯ ಒಳಗಡೆ ನರಕವಿದೆ. ನಮ್ಮ ಪಿಂಡಾಂಡವನ್ನು ಅಭ್ಯಸಿಸಿದಾಗ ನಮ್ಮ ನಾಬಿಸ್ಥಾನವು ಪೃಥ್ವಿಯನ್ನು ಪ್ರತಿನಿಧಿಸುತ್ತದೆ ಮತ್ತು ಅದರ ಕೆಳಗಿರುವ ಸ್ಥಾನದಲ್ಲಿ ನರಕವಿದೆ. ಪೃಥ್ವಿಯ ಒಳಗೆ ಹೋದ ಹಾಗೆ ಅಲ್ಲಿ ಅಗ್ನಿಯ ತೀವ್ರತೆಯು ಹೆಚ್ಚಾಗುತ್ತದೆ. ಈ ಅಗ್ನಿಯೇ ನರಕ ಸ್ಥಾನವಾಗಿದೆ. ನಮ್ಮ ಸ್ಥೂಲಶರೀರವನ್ನು ಗಮನಿಸಿದಾಗ ಈ ಸ್ಥಾನದಲ್ಲಿ ಮಲಮೂತ್ರಗಳಿರುವುದನ್ನೂ ಮತ್ತು ಕರುಳುಗಳಲ್ಲಿ ಆಹಾರದ ಜೀರ್ಣಕ್ರಿಯೆಗಳು ನಡೆಯುತ್ತಿರುವುದರಿಂದ, ಇದು ಅಶುದ್ಧ ಸ್ಥಾನವಾಗಿ ನರಕವನ್ನು ಪ್ರತಿನಿಧಿಸುತ್ತದೆ. ಇಲ್ಲಿಗೆ ಅತ್ಯಂತ ಕ್ರೂರಿಗಳು ಪಾಪಾತ್ಮರು ಪ್ರವೇಶಿಸುತ್ತಾರೆ.

(ಇಲ್ಲಿ ಗಮನಿಸಬೇಕಾದ ಅಂಶವೆಂದರೆ ದ್ಯುಲೋಕವು ನಾಭಿಯಿಂದ ಮೇಲಕ್ಕೆ ಆರಂಭವಾಗುತ್ತದೆ. ಇದೇ ರೀತಿ ಇಂದ್ರನಿಂದ ಸೃಷ್ಟಿಯಾದ ಕಾರಣಶರೀರವೂ ಸಹ ನಾಭಿಯಿಂದ ಮೇಲಕ್ಕೆ ಶಿರಸ್ಸಿನವರೆಗೂ ಇರುತ್ತದೆ. ಕಾರಣಶರೀರವು ನರಕವನ್ನು ಪ್ರತಿನಿಧಿಸುವ ಕ್ಷೇತ್ರದಲ್ಲಿ ಕಾಣಿಸುವುದಿಲ್ಲ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ನರಕವೇ ಬೇರೆ, ಸಪ್ತಸ್ವರ್ಗಗಳೇ ಬೇರೆ ಮತ್ತು ಅಸುರಲೋಕವೇ ಬೇರೆ.)

## ಯಮಧರ್ಮ

(ಮರಣಾನಂತರ ಮಾನವರಿಗೆ ತೀರ್ಪನ್ನು ಕೊಡುವ ಅಧಿದೇವತೆ)

ಪರೇಯಿವಾಂಸಂ ಪ್ರವತೋ ಮಹೀರನು ಪಂಥಾಮನುಪಸ್ಪಶಾನಂ ೧
ವೈವಸ್ವತಂ ಸಂಗಮನಂ ಜನಾನಂ ಯಮಣ ರಾಜಾನಂ ಹವಿಷಾ ದುವಸ್ಯ ೧೧ (ಋ ೧೦–೧೪–೧ ಸಾಭಾ)
ಎಲೈ ಯಜಮಾನನೇ, ಉತ್ಕೃಷ್ಟವಾದ ಕರ್ಮಗಳನ್ನಾಚರಿಸಿದ ಪುರುಷರನ್ನು ಆಯಾ ಉತ್ತಮ ಪ್ರದೇಶಗಳಿಗೆ ಮರಣಾನಂತರ ಕರೆದೊಯ್ಯುವವನೂ, ಅನೇಕ ಪುಣ್ಯಕರ್ಮಿಗಳಿಗೆ ಸ್ವರ್ಗಾದಿಮಾರ್ಗಗಳನ್ನು ಹಿಂಸೆಯಿಲ್ಲದೇ ಉಂಟುಮಾಡತಕ್ಕವನೂ, ವಿವಸ್ವಂತನ ಪುತ್ರನೂ, ಪಾಪಿಗಳಿಗೆ ಅವನಿಗೆ ಯೋಗ್ಯವಾದ ಸ್ಥಾನಕ್ಕೆ ಸೇರಿಸುವವನೂ, ಪಿತೃಗಳಿಗೆ ಪ್ರಭುವೂ ಆದ ಯಮನನ್ನು ಹವಿಸ್ಸುಗಳಿಂದ ಉಪಚರಿಸು."

(ಇಲ್ಲಿ ಜೀವ/ಜೀವಾತ್ಮ/ಪ್ರೇತದ ಬಗ್ಗೆ ಹೇಳುತ್ತಿದೆ.)

ಯಮೋ ನೋ ಗಾತುಂ ಪ್ರಥಮೋ ವಿವೇದ ನೈಷಾ ತಿರಪಭರ್ತನ ಉ ೧
ಯತ್ರಾ ನಃ ಪೂರ್ವೇಪಿತರಂ ಪರೇಯುರೇನ ಜಜ್ಞಾನಾಃ ಪಥ್ಯಃ ಅನು ಸ್ವಾಃ ೧೧ (ಋ ೧೦–೧೪–೨ ಸಾಭಾ)
"ಸಕಲರಿಗೂ ಮುಖ್ಯನಾದ ಯಮನು ನಮ್ಮ ಸಂಚಾರಮಾರ್ಗಗಳನ್ನು ಅರಿತಿದ್ದಾನೆ. ಈ ಪಲವತ್ತಾದ ಮಾರ್ಗವು ಇತರರಿಂದ ಅಪಹರಿಸಲ್ಪಡತಕ್ಕದಲ್ಲ. ಯಾ ಕರ್ಮಕ್ಕನುಗುಣವಾದ ಮಾರ್ಗಗಳಲ್ಲಿ ನಮ್ಮ ಹಿಂದಿನ ಪಿತೃಗಳೆಲ್ಲರೂ ಮರಣಾನಂತರ ಹೋದರೋ, ಅಂತಹ ಮಾರ್ಗಗಳಲ್ಲಿಯೇ, ಉತ್ಪನ್ನರಾದ ಸಕಲರೂ ತಮ್ಮ ತಮ್ಮ ವೈಯಕ್ತಿಕವಾದ ಕರ್ಮಫಲವನ್ನು ಅನುಸರಿಸಿ ಹೋಗುತ್ತಾರೆ."

ನಮ್ಮ ನಾಭಿಯಲ್ಲಿ ಸುಮಾರು ೧/೨ ಇಂಚಿಗಿಂತಲೂ ಸ್ವಲ್ಪ ಹೆಚ್ಚಿರುವ ಸೂರ್ಯಮಂಡಲವಿದೆ. ಅದು ಜಾಗೃತವಾದಾಗ ಅದರ ಪ್ರಕಾಶವು ನಮ್ಮ ಸೂಕ್ಷ್ಮಶರೀರವನ್ನೆಲ್ಲಾ ವ್ಯಾಪಿಸಿಕೊಳ್ಳುವಷ್ಟು ಪ್ರಜ್ವಲಿಸುತ್ತದೆ. ಹೃದಯದಲ್ಲಿರುವ ಸೂರ್ಯನ ವ್ಯಾಸ ಸುಮಾರು ಒಂದುವರೆ ಇಂಚು ಅಗಲವಿರುವುದು. ಹೃದಯದ ಸೂರ್ಯಮಂಡಲದಲ್ಲಿ ಸವಿತೃ ದೇವತೆಯು ಪ್ರಕಟವಾದರೆ ನಾಭಿಯಲ್ಲಿರುವ ಸೂರ್ಯಮಂಡಲದಲ್ಲಿ ಯಮನು ಪ್ರಕಟನಾಗುತ್ತಾನೆ.

ಈ ಕಾರಣದಿಂದ ಯಮನನ್ನು ವಿವಸ್ವಾನ್ ಅಥವಾ ಸೂರ್ಯ ಪುತ್ರನೆಂದು ಋಗ್ವೇದವು ಹೇಳುತ್ತದೆ. ಯಮನು ಸವಿತೃದೇವನಂತೆ ಪ್ರಕಾಶಮಯನಾಗಿದ್ದಾನೆ ಮತ್ತು ಆತನ ಅರಮನೆಯೂ ಸಹ ಪ್ರಕಾಶಮಯವಾಗಿರುವುದರ ಕಾರಣ ಇಲ್ಲಿರುವ ಸಣ್ಣದಾದ ಸೂರ್ಯಮಂಡಲದ ಪ್ರಕಾಶವೇ ಕಾರಣ. ಯಮನ ಸನ್ನಿಧಿಗೆ ಹೋಗುವ ಜೀವನೂ ಸಹ ಪ್ರಕಾಶಮಯ ಶರೀರವನ್ನು ಪಡೆಯುತ್ತಾನೆ. ಅಂದರೆ ಎರಡು ಸೂರ್ಯರು ನಮ್ಮ ಪೃಥ್ವಿಯನ್ನು ಆಳುತ್ತಿರುವರು. ಹಾಗಾದರೆ ಯಮನು ಇರುವ ಎರಡನೆಯ ಸೂರ್ಯನು ಯಾಕೆ ನಮಗೆ ಕಾಣುತ್ತಿಲ್ಲ?

ಋಗ್ವೇದವು ಹೇಳುವುದೇನೆಂದರೆ ಯಮನಿರುವ ಸೂರ್ಯಮಂಡಲವು ಜೀವರಾಶಿಗಳಿಗೆ ಕಾಣುವುದಿಲ್ಲದಿರುವ ಕಾರಣ .ಸೂರ್ಯನ ಪತ್ನಿಯಾದ ಸರಣ್ಯುವು ಮದುವೆಯಾಗುವಾಗ ಅದೃಶ್ಯಳಾದಳು ಎಂದು ಹೇಳುತ್ತದೆ. ಸರಣ್ಯುವು ಅದೃಶ್ಯಳಾದ ನಂತರ ಜನಿಸಿದ ಯಮನೂ ಸಹ ಮರ್ತ್ಯರಿಗೆ ಕಾಣುವುದಿಲ್ಲ ಆದರೆ ದೇವತೆಗಳಿಗೆ ಕಾಣುತ್ತಾರೆ. ಋಗ್ವೇದದ ಈ ಮಂತ್ರವನ್ನು ನೋಡಿ.

ತ್ವಷ್ಟಾ ದುಹಿತ್ರೇ ವಹತುಂ ಕೃಣೋತೀತೀದಂ ವಿಶ್ವಂ ಭುವನಂ ಸಮೇತಿ ।
ಯಮಸ್ಯ ಮಾತಾ ಪರ್ಯುಹ್ಯಮಾನಾ ಮಹೋ ಜಾಯಾ ವಿವಸ್ವತೋ ನನಾಶ ॥ (ಋ ೧೦-೧೭-೧ ಸಾಭಾ)
"ತ್ವಷ್ಟೃನಾಮಕನಾದ ದೇವನು ತನ್ನ ಮಗಳಾದ ಸರಣ್ಯೂವಿಗೆ ವಿವಾಹವನ್ನು ನೆರವೇರಿಸುತ್ತಾನೆ ಎಂಬ ಸಮಾಚಾರವನ್ನು ಕೇಳಿ ಸಕಲ ಭೂತಜಾತವೂ ಒಂದುಗೂಡಿದವು. ಆದರೆ, ವಿವಾಹಕ್ಕೆ ಸಿದ್ಧಳಾಗಬೇಕಾದವಳೂ, ಯಮನಿಗೆ ಮಾತೆಯೂ, ಮಹಾತ್ಮನಾದ ವಿವಸ್ವಂತನ ಭಾರ್ಯೆಯೂ ಆದ ಸರಣ್ಯುವು ಅದೃಶ್ಯಳಾದಳು"

ಅಪಾಗೂಹನ್ನಮೃತಾಂ ಮರ್ತ್ಯೇಭ್ಯಃ ಕೃತ್ವೀ ಸವರ್ಣಾಮದದುರ್ವಿವಸ್ವತೇ ।
ಉತಾಶ್ವಿನಾವಭರದ್ಯತ್ತದಾಸೀದಜಹಾದು ದ್ವಾ ಮಿಥುನಾ ಸರಣ್ಯೂಃ ॥
"ಮರಣರಹಿತಳಾದ ಸರಣ್ಯುವನ್ನು ಮಾನವರಿಂದ ಮರೆಸಿ ಅದೇ ರೂಪದ ಬೇರೊಂದು ಸ್ತ್ರೀಯನ್ನು ಮಾಡಿ ವಿವಸ್ವಂತನಿಗೆ ದೇವತೆಗಳು ಕೊಟ್ಟರು. ಮತ್ತು ಯಾವಾಗ ಅಶ್ವರೂಪದ ರೇತಃ ಪತನವಾಯಿತೋ ಆಗ ಅಶ್ವಿನೀ ದೇವತೆಗಳನ್ನು ಆ ಸ್ತ್ರೀಯು ಪಡೆದಳು. ಸರಣ್ಯುವು ಯಮ ಮತ್ತು ಯಮಿಯನ್ನು ಪಡೆದಳು." (೧೦-೧೭-೨ ಸಾಭಾ)

ಸೂರ್ಯನಿಗೆ ಪತ್ನಿ ಇರುವುದು ಪತ್ನಿಯು ಜನನ ಕೊಡುವುದು ಪೃಥ್ವಿಯಲ್ಲಿರುವ ಪತಿಪತ್ನಿಯರಿರುವಂತೆ ಅಲ್ಲ. ಅವರು ಕೇವಲ ತಮ್ಮ ಮಾನಸಿಕ ಇಚ್ಛಾಶಕ್ತಿಯಿಂದ ಜನನವನ್ನು ಕೊಡುವರು. ನಮಗೆ ಅರ್ಥವಾಗಲು ಈ ರೀತಿ ಹೇಳಲಾಗಿದೆ. ಅದೃಶ್ಯಳಾದ ಸರಣ್ಯುವು ಯಮನನ್ನು ಪಡೆದ ಕಾರಣ ಯಮನೂ ಸಹ ಅದೃಶ್ಯನಾಗಿರುವನು. ಕೇವಲ ಯೋಗಿಯು ಮಾತ್ರ ಯಮನ ಸೂರ್ಯಮಂಡಲವನ್ನು ನೋಡಬಹುದು.

(ಕೆಲವರು ಆಕಸ್ಮಿಕವಾಗಿ ಮರಣವನ್ನು ಹೊಂದಿ ಕೆಲ ನಿಮಿಷಗಳ ನಂತರ ಜಾಗೃತರಾದವರ ಹೇಳಿಕೆಯ ಪ್ರಕಾರ; ಅವರು ತಮ್ಮ ಶರೀರದಿಂದ ಹೊರಬಂದು ಮೇಲಿನಿಂದ ತಮ್ಮ ಶರೀರವನ್ನು ಮತ್ತು ಸುತ್ತಲಿನ ಕೋಣೆಯನ್ನು ನೋಡುವರು ಮತ್ತು ಅಲ್ಲಿರುವ ವೈದ್ಯರು ಮತ್ತು ನರ್ಸಗಳು ಮಾತನಾಡಿಕೊಳ್ಳುವುದನ್ನು ಕೇಳುವರು.

ಆಗ ಕೂಡಲೆ ಪ್ರಕಾಶಮಯವಾದ ಬೆಳಕು ಮೇಲಿರುವುದನ್ನು ನೋಡುವರು. ಬೆಳಕಿನ ಸ್ತಂಭವು (ಪೋರ್ಟಲ್, ಟನಲ್, ವರ್ಮ್‌ಹೋಲ್) ಕಾಣಿಸಿಕೊಳ್ಳುವುದನ್ನು ನೋಡುವರು. ಆನಂತರ ಅವರ ಸೂಕ್ಷ್ಮಶರೀರವು ಬೆಳಕಿನಿಂದ ಆಕರ್ಷಿತವಾಗಿ ಅದರ ಮೂಲಕ್ಕೆ ತೆರಳುವರು. ಅಲ್ಲಿ ಯಾರೋ ಅವರ ಹತ್ತಿರ ಮಾತನಾಡಿ, ಅವರ ಕಾಲವು ಇನ್ನೂ ಸಮೀಪಿಸಿಲ್ಲವೆಂದು ಅವರನ್ನು ಕೆಳಗೆ ಅವರ ಶರೀರದ ಬಳಿ ಕಳುಹಿಸುವರು ಎಂದು ತಿಳಿಸಿರುತ್ತಾರೆ.

ಈ ಬೆಳಕು ಯಮನ ಸೂರ್ಯಮಂಡಲದ ಬೆಳಕು. ಇಲ್ಲಿ ನೆಲಸಿರುವ ಯಮನು ಮರಣ ಹೊಂದಿದ ವ್ಯಕ್ತಿಗಳ ವಿಚಾರಣೆಯನ್ನು ಮಾಡಿ ವಿವಿಧ ಹಂತದ ಸ್ವರ್ಗಗಳಿಗೂ ಕಳುಹಿಸುವನು. ಸೂರ್ಯಸವಿತೃವಿನ ಆರಾಧನೆಯನ್ನು ಮಾಡಿದ ವ್ಯಕ್ತಿಗಳು ಸೂರ್ಯಮಂಡಲದಲ್ಲಿರುವ ಮಹರ್‌ಲೋಕ, ಜನೋಲೋಕ, ತಪೋಲೋಕ ಅಥವಾ ಸತ್ಯಲೋಕಕ್ಕೆ ಹೋಗುವರು.

ಇದೇ ರೀತಿ ಕೆಲವರ ಹೇಳಿಕೆಯ ಪ್ರಕಾರ ಜೀವವು ಶರೀರವನ್ನು ತ್ಯಜಿಸಿದ ಕೂಡಲೆ ನರಕದ ಬೆಂಕಿಯ ಸ್ತಂಭವು (ಪೋರ್ಟಲ್, ಟನಲ್, ವರ್ಮ್‌ಹೋಲ್) ಪೃಥ್ವಿಯ ಕೆಳಗಿನಿಂದ ಪ್ರಕಟವಾಗುತ್ತದೆ. ಈ ನರಕದಲ್ಲಿ ಅನೇಕರ ಆರ್ತನಾದವನ್ನು ಕೇಳುವರು. ಅವರನ್ನು ಈ ಸ್ತಂಭವು ಆಕರ್ಷಿಸಿ ಅದರೊಳಗೆ ಹೋಗುವಾಗ ಪಶ್ಚಾತಾಪದಿಂದ ಭಗವಂತನ ಕ್ಷಮೆಯನ್ನು ಕೇಳಿ ಕಾಪಾಡುವಂತೆ ಕೂಗಿದಾಗ ಮತ್ತೆ ಅವರು ತಮ್ಮ ಶರೀರದ ಕಡೆಗೆ ಬರುವದನ್ನು ಕೆಲವರು ತಿಳಿಸಿರುವರು. ಇದೇ ರೀತಿ ಯೋಗಿಯ ಇಚ್ಛೆಯಂತೆ ಪ್ರಕಟವಾಗುವ ಸೂರ್ಯನಿಂದ ಯೋಗಿಯ

ಹೃದಯ ಭಾಗಕ್ಕೆ ಪ್ರಕಟವಾಗುವ ಬೆಳಕಿನ ಸ್ತಂಭದ ಮುಖಾಂತರ ನಮ್ಮ ಪ್ರಾಣ–ಮನಸ್ಸಿನ ಶರೀರವು ಸೂರ್ಯಮಂಡಲವನ್ನು ಪ್ರವೇಶಿಸಿ ಸವಿತೃವಿನ ದರ್ಶನವನ್ನು ಪಡೆಯಬಹುದು.

ಇದು ಏನನ್ನು ತೋರಿಸುತ್ತದೆಯೆಂದರೆ ಬೇರೆ ಬೇರೆ ಲೋಕಗಳಿಗೆ ಹೋಗಬೇಕೆಂದರೆ, ದೇವತೆಗಳು ನಮ್ಮ ಬಳಿಗೆ ಬರಬೇಕೆಂದರೆ ಮತ್ತು ಸೂರ್ಯಮಂಡಲದ ತೇಜಸ್ಸು ನಮ್ಮ ಹೃದಯದ ಜೊತೆ ಸಂಪರ್ಕವೇರ್ಪಡಬೇಕಾದರೆ ಈ ರೀತಿಯ ಬೆಳಕಿನ ಸ್ತಂಭವು (ಪೋರ್ಟಲ್, ಟನಲ್, ವರ್ಮ್‌ಹೋಲ್) ಪ್ರಕಟಗೊಳ್ಳುತ್ತದೆ. ಯಜ್ಞಕುಂಡದ ಮೇಲೆಯೂ ಸೂರ್ಯನ ಬೆಳಕಿನ ಸ್ತಂಭವು ಪ್ರಕಟವಾಗುವುದು. ಇಲ್ಲಿ ಗಮನಿಸಬೇಕಾದ ಪ್ರಮುಖ ವಿಚಾರವೇನೆಂದರೆ ಯಮನ ಸೂರ್ಯಮಂಡಲ ಮತ್ತು ಸಪ್ತಸ್ವರ್ಗಗಳು ದ್ಯುಲೋಕದಲ್ಲಿದೆ ಆದರೆ ನರಕವು ಪೃಥ್ವಿಯ ಒಳಗಡೆ ಇದೆ.)

ಯೋಗಿಯು ತನ್ನ ಮನಸ್ಸನ್ನು ಕೇಂದ್ರೀಕರಿಸಿ ಸಪ್ತಸ್ವರ್ಗಗಳ ಅಕ್ಷರಗಳನ್ನು ಉಚ್ಚರಿಸಿದ ತಕ್ಷಣ ಆಯಾ ಲೋಕಗಳು ಪ್ರಕಟವಾಗುತ್ತವೆ. ಸವಿತೃದೇವನನ್ನು ಆಹ್ವಾನಿಸಿದಾಗ ಸೂರ್ಯಮಂಡಲದಿಂದ ಬೆಳಕಿನ ಸ್ತಂಭವು (ಪೋರ್ಟಲ್, ಟನಲ್, ವರ್ಮ್‌ಹೋಲ್) ಪ್ರಕಟವಾಗಿ ನಮ್ಮ ಹೃದಯ ಭಾಗಕ್ಕೆ ಸಂಪರ್ಕವೇರ್ಪಡುತ್ತದೆ ಮತ್ತು ನಮ್ಮ ಹೃದಯದಲ್ಲಿರುವ ಸೂರ್ಯಮಂಡಲವು ಜಾಗೃತವಾಗುತ್ತದೆ. ಸೂರ್ಯೋದಯವಾದ ಮೇಲೆ ಪ್ರಕಟವಾಗುವ ಬೆಳಕಿನ ಸ್ತಂಭವು ಯಾವುದೇ ಕಟ್ಟಡ ಇತ್ಯಾದಿ ಅಡತಡೆಗಳಿಲ್ಲದೇ ನೇರವಾಗಿ ನಮ್ಮ ಹೃದಯದ ಸಂಪರ್ಕಕ್ಕೆ ಬರುತ್ತದೆ.

ನಮ್ಮ ಶರೀರದ ನಾಭಿಕೇಂದ್ರದಲ್ಲಿ ಅಗ್ನಿಯನ್ನು ಯೋಗಿಗಳು ಸ್ಥಾಪನೆ ಮಾಡುವರು. ಇದು ಪೃಥ್ವಿಸ್ಥಾನವಾಗಿದೆ. ಈ ನಾಭಿಸ್ಥಾನದಲ್ಲಿಯೇ ನಮ್ಮ ಕಾರಣಶರೀರ, ಸೂಕ್ಷ್ಮಶರೀರ, ಪ್ರಾಣಶರೀರ ಮತ್ತು ಮನೋಮಯಶರೀರಗಳು ಬಂಧಿತವಾಗಿವೆ. ನಮ್ಮ ಸ್ಥೂಲ+ಜೀವ, ಪುರುಷನ ಸೂಕ್ಷ್ಮ ಮತ್ತು ಕಾರಣಶರೀರಗಳು ನಾಭಿಯಲ್ಲಿ ಬಂದಿತವಾಗಿರುವುದರಿಂದ ನಾಬಿಯನ್ನು ತ್ರಿನಾಭಿ ಹೊಂದಿರುವುದು ಎಂದು ಋಗ್ವೇದವು ಹೇಳುತ್ತದೆ.

ಉದೀರತಾಮವರ ಉತ್ಪರಾಸ ಉನ್ಮಧ್ಯಮಾಃ ಪಿತರಃ ಸೋಮಾಸ್ಯಃ ೧
ಅಸುಂ ಯ ಈಯುರವೃಕಾ ಋತಜ್ಞಾಸ್ತೇ ನೋಽವಂತ ಪಿತರೋ ಹವೇಷು ೧೧ (ಋ ೧೦–೧೫–೧ ಸಾಭಾ)
"ಕೆಳಗಿನ ಲೋಕದಲ್ಲಿರುವ ಪಿತೃಗಳೂ, ಉತ್ತಮಲೋಕದಲ್ಲಿರುವವರೂ, ಮಧ್ಯಮಲೋಕದಲ್ಲಿರುವವರೂ ನಮ್ಮ ಹವಿಸ್ಸುಗಳನ್ನು ಸ್ವೀಕರಿಸಲಿ. ಅವರೆಲ್ಲರೂ ನಮ್ಮಲ್ಲಿ ಅನುಗ್ರಹಬುದ್ಧಿಯುಳ್ಳವರಾಗಿರಲಿ. ತೋಳಗಳಂತೆ ಕ್ರೂರಿಗಳಲ್ಲದವರೂ, ನಮ್ಮ ಯಜ್ಞಕರ್ಮಗಳನ್ನರಿತವರೂ, ನಮ್ಮ ಪ್ರಾಣವನ್ನು ರಕ್ಷಿಸಲು ಬಂದಿರುವವರೂ ಆದ ಆ ಪಿತೃಗಳು ನಮ್ಮ ಆಹ್ವಾನಕಾಲದಲ್ಲಿ ನಮ್ಮನ್ನು ರಕ್ಷಿಸಲಿ."

ಆದ್ದರಿಂದ ಯಮನು ಕೆಳಹಂತದ ಸ್ವರ್ಗವನ್ನು(ಭೂ, ಭುವಃ, ಸ್ವಃ) ಆಳುತ್ತಾನೆ. ಸೂರ್ಯ–ಸವಿತೃದೇವನು ಪೃಥ್ವಿ, ಮಧ್ಯಮಸ್ವರ್ಗ (ಮಹಃ, ಜನಃ) ಮತ್ತು ಊರ್ಧ್ವಲೋಕವನ್ನು (ತಪಃ, ಸತ್ಯಂ) ಆಳುತ್ತಾನೆ. ಯಮನ ಕರ್ತವ್ಯವು ತನ್ನ ಭವನದಲ್ಲಿ ಕುಳಿತು ತೀರ್ಪನ್ನು ಕೊಡುವುದು ಮತ್ತು ಮಾನವರನ್ನು ಅವರವರ ಕರ್ಮಾನುಸಾರ ಇತರ ಲೋಕಕ್ಕೆ ಕಳುಹಿಸುವುದಾಗಿದೆ ಮತ್ತು ಅವನ ಆಳ್ವಿಕೆಯು ಕೇವಲ ಕೆಳಹಂತದ ಸ್ವರ್ಗಕ್ಕೆ ಸೀಮಿತವಾಗಿದೆ, ಯಮನಿಗೂ ಪೃಥ್ವಿಗೂ ಯಾವುದೇ ಸಂಬಂಧವಿಲ್ಲ. ಆದರೆ ಯಮನ ದೂತರು ಪಾಪಿಗಳನ್ನು ನರಕಕ್ಕೆ ನೇರವಾಗಿ ಎಳೆದುಕೊಂಡು ಹೋಗುವರು.

ಆದಿತ್ಯರು ಮೇಲಿನ ಸತ್ಯಲೋಕದಲ್ಲಿರುವ ಸೂರ್ಯಮಂಡಲದಲ್ಲಿ ನೆಲೆಸಿರುವಂತೆ ಯಮನ ಆಸ್ಥಾನದಲ್ಲಿಯೂ ಸಹ ಅವರು ಸ್ಥಿತರಿರುವರು. ಏಕೆಂದರೆ ಆದಿತ್ಯರ ತೇಜಸ್ಸೇ ಸೂರ್ಯನಂತೆ ಪ್ರಜ್ವಲಿಸುವುದು. ಯಮನ ಆಸ್ಥಾನದಲ್ಲಿರವ ಮಿತ್ರಾ ವರುಣದೇವತೆಗಳು ಮಾನವರ ಕರ್ಮಗಳ ದಾಖಲೆಯನ್ನು ತೀರ್ಪಿಗಾಗಿ ಯಮನ ಮುಂದಿಡುವರು. (ಇವರನ್ನು ಪುರಾಣಗಳು ಚಿತ್ರಗುಪ್ತರೆಂದು ಕರೆದಿದೆ.)

ಪೃಥ್ವಿಯ ಮೇಲಿರುವ ಜೀವನು/ಪ್ರೇತ (ಪ್ರಾಣಶರೀರ/ಎನರ್ಜಿ ಬಾಡಿ) ಮನಸ್ಸನ್ನು ಹೊಂದಿರುತ್ತಾನೆ. ಅವನ ಶರೀರವನ್ನು ಪ್ರೇತ ಅನ್ವೇಶಕರು ತಮ್ಮ ಉಪಕರಣಗಳಿಂದ ತಿಳಿಯುತ್ತಾರೆ. ಪಾಪಿಷ್ಠವಾದ ಪ್ರೇತವು ದುರ್ಗಂಧಮಯವಾದ ವಾಸನೆಯನ್ನು ಹೊಂದಿರುತ್ತದೆ. ಆದರೆ ಯಮನ ಆಸ್ಥಾನಕ್ಕೆ ಹೋದ ಪ್ರೇತವು ದಿವ್ಯಶರೀರವನ್ನು ಪಡೆಯುತ್ತದೆ. ಯಮನ ಸೂರ್ಯಮಂಡಲದ ತೇಜಸ್ಸೇ ಇದಕ್ಕೆ ಕಾರಣವಾಗಿದೆ.

ಮರಣ ಹೊಂದಿದ ಮಾನವರ ಪ್ರಾಣ–ಮನಸ್ಸಿನ ಶರೀರವನ್ನು ಜೀವ ಅಥವಾ ಪ್ರೇತ ಎಂದು ಕರೆಯುತ್ತಾರೆ. ಯಾಕೆಂದರೆ ಮಾನವರು ಸಕಲ ಕರ್ಮಗಳನ್ನು ತಮ್ಮ ಮನಸ್ಸಿನ ಮೂಲಕವೇ ಮಾಡುವುದರಿಂದ ಜೀವ

ಶಿಕ್ಷಿಸಲ್ಪಡುತ್ತಾನೆ. ಕೆಲವು ಜೀವರು ಪೃಥ್ವಿಯ ಮೇಲೇ ಇರುತ್ತಾರೆ. ಅವರ ಶರೀರವು ದುರ್ಗಂಧದಿಂದ ಕೂಡಿರುತ್ತದೆ. ಪ್ರೇತ ಅನ್ವೇಶಕರು ಪ್ರೇತ ಇರುವ ಸ್ಥಾನವನ್ನು ಅದರ ಪ್ರಾಣ ಶರೀರ ಮತ್ತು/ಅಥವಾ ದುರ್ಗಂಧದಿಂದ ಕಂಡುಹಿಡಿಯುತ್ತಾರೆ. ಆದರೆ ಯಮನ ಆಸ್ಥಾನಕ್ಕೆ ಹೋದ ಪಿತೃಗಳು ಶ್ವೇತವರ್ಣದ ದಿವ್ಯ ಶರೀರವನ್ನು ಹೊಂದುತ್ತಾರೆ. ಇದಕ್ಕೆ ಕಾರಣ ಯಮನ ಸೂರ್ಯಮಂಡಲ ಮತ್ತು ಸೂರ್ಯಸವಿತೃವಿನ ಮಂಡಲಗಳಿಂದಾಗಿ ಜೀವನು ದಿವ್ಯಶರೀರವನ್ನು ಹೊಂದುತ್ತಾನೆ. ನಮ್ಮ ಶರೀರವು ಮತ್ತು ಜೀವನು ಮರಣಧರ್ಮವನ್ನು ಹೊಂದಿದ್ದರೂ ಜೀವನು ಮೋಕ್ಷವನ್ನು ಪಡೆಯುವವರೆಗೂ ಶಾಶ್ವತನಾಗಿ ಇರುತ್ತಾನೆ. ಆದರೆ ಪ್ರತಿಯೊಂದು ಜನ್ಮದಲ್ಲಿಯೂ ಹೊಸ ಮನಸ್ಸನ್ನು ಪಡೆಯುತ್ತಾನೆ ಮತ್ತು ಹಿಂದಿನ ಜೀವದ ಮನಸ್ಸು ಸೂಕ್ಷ್ಮ ಮನಸ್ಸಾಗಿ ನಮ್ಮೊಳಗಿರುತ್ತದೆ.

ಅನಚ್ಛಯೇ ತುರಗಾತು ಜೀವಮೇಜದ್ಧ್ರುವಂ ಮಧ್ಯ ಆ ಪಸ್ತ್ಯಾನಾಂ ।
ಜೀವೋ ಮೃತಸ್ಯ ಚರತಿ ಸ್ವಧಾಭಿರಮರ್ತ್ಯೋ ಮರ್ತ್ಯೇನಾ ಸಯೋನಿಃ ।। (ಋ ೧–೧೬೪–೩೦)
"ದೇಹದೊಂದಿಗಿರುವ ಜೀವನು ಪ್ರಾಣಯುಕ್ತನಾಗಿಯೂ, ಉಸಿರಾಡುತ್ತಲೂ, ತನ್ನ ಐಹಿಕವಾದ ಕರ್ತವ್ಯಗಳಿಗಾಗಿ ತ್ವರಿತವಾದ ಚಲನವಲನಗಳಿಂದಲೂ ಸಂಚರಿಸುತ್ತಿದ್ದರೂ ಸಹ ದೇಹರೂಪವಾದ ಗೃಹಗಳ ನಡುವೆ ಅಚಲನಾಗಿ ನೆಲೆಸಿರುತ್ತಾನೆ. ಜೀವನು ಮರಣಧರ್ಮವುಳ್ಳ ದೇಹಸಂಬಂಧಿಯಾಗಿಯೂ ಮತ್ತು ಉತ್ಪತ್ತಿಕಾಲದಲ್ಲಿ ಮರಣಾತ್ಮಕವಾದ ದೇಹದೊಡನೆ ಒಂದೇ ಉತ್ಪತ್ತಿಸ್ಥಾನವುಳ್ಳವನೂ ಆದರೂ ಸಹ ತಾನು ಮಾತ್ರ ಮರಣಧರ್ಮವಿಲ್ಲದೇ ಪುತ್ರಾದಿಗಳಿಂದ ದತ್ತವಾದ ಸ್ವಧೆಗಳಿಂದ ತೃಪ್ತನಾಗಿ ಸಂಚರಿಸುತ್ತಾನೆ."

ನ ವಿ ಜಾನಾಮಿ ಯದಿವೇದಮಸ್ಮಿ ನಿಣ್ಯಃ ಸಂನದ್ಧೋ ಮನಸಾ ಚರಾಮಿ ।
ಯದಾ ಮಾಗನ್ಪ್ರಥಮಜಾ ಋತಸ್ಯಾದಿದ್ವಾಚೋ ಅಶ್ನುವೇ ಭಾಗಮಸ್ಯಾಃ ।। (ಋ ೧–೧೬೪–೩೭ ಸಾಭಾ)
"ನಾನು ಯಾರು ಎಂಬುದನ್ನು ನಾನು ವಿಚಾರಮಾಡಿ ಆರಿತಿಲ್ಲ. ಆದ್ದರಿಂದಲೇ ಅವಿದ್ಯೆಯಿಂದ ಆವರಿಸಲ್ಪಟ್ಟವನಾಗಿಯೂ, ವಿಷಯಾದಿಗಳಿಂದ ಬಂದಿತನಾಗಿಯೂ, ಬಹಿರ್ಮುಖವಾದ ಮನಸ್ಸುಳ್ಳವನಾಗಿಯೂ ವ್ಯವಹರಿಸುತ್ತಿದ್ದೇನೆ. ಸತ್ಯಾತ್ಮಕವಾದ ಯಥಾರ್ಥ ಜ್ಞಾನವು ಯಾವಾಗ ಲಭಿಸುತ್ತದೆಯೋ ಆಗ ಋಕ್‌ಗಳ ಅರ್ಥವನ್ನು ಸಾಕ್ಷಾತ್ಕಾರಮಾಡಿಕೊಳ್ಳುತ್ತೇನೆ."

ಅಪಾಙ್ ಪ್ರಾಙ್‌ೇತಿ ಸ್ವಧಯಾ ಗೃಭೀತೋಽಮರ್ತ್ಯೋ ಮರ್ತ್ಯೇನಾ ಸಯೋನಿಃ ।
ತಾ ಶಶ್ವಂತಾ ವಿಷೂಚೀನಾ ವಿಯಂತಾ ನ್ಯಅನ್ಯಂ ಚಿಕ್ಯುರ್ನ ನಿ ಚಿಕ್ಯುರನ್ಯಂ ।। (ಋ ೧–೧೬೪–೩೮ ಸಾಭಾ+ಕಶ್ಯಪ್)
"ಮರಣರಹಿತನಾದ (ಜ್ಯೋತಿರೂಪ) ಆತ್ಮನು ಪ್ರಕೃತಿಯ ಧರ್ಮಕ್ಕೆ ವಶನಾಗಿ ಅಧೋಮುಖನಾಗಿಯೂ, ಊರ್ಧ್ವಮುಖವಾಗಿಯೂ ಹೋಗುತ್ತಾನೆ. ಮರಣಧರ್ಮವುಳ್ಳವನು ಮತ್ತು ಮರಣರಹಿತನಾದ ಆತ್ಮನು (ಆತ್ಮ ಮತ್ತು ಜೀವಾತ್ಮನು) ಯಾವಾಗಲೂ ಈ ಲೋಕದಲ್ಲಿ ಒಟ್ಟಿಗೆ ಓಡಾಡುವರಾಗಿಯೂ ಅವರವರ ಕರ್ಮಾನುಭವಗಳಿಗಾಗಿ ಬೇರೆ ಬೇರೆ ದಾರಿಗಳಲ್ಲಿ ಹೋಗುವವರಾಗಿಯೂ ಇದ್ದಾರೆ. ದೇಹಸಂಬಂದಿಯಾದವನನ್ನು ಜನರು ಅರಿಯಬಲ್ಲರು. ದೇಹಾತಿರಿಕ್ತನಾದವನನ್ನು (ಜೀವನನ್ನು ಶರೀರ ಬಿಟ್ಟು ಹೋದನು ಎಂದು ಅರಿಯುತ್ತಾರೆ ಆದರೆ (ಜ್ಯೋತಿರೂಪ) ಆತ್ಮನನ್ನು) ಅರಿಯಲಾರರು."

ಜೀವನಲ್ಲಿ ನಮ್ಮ ಆತ್ಮ ಮತ್ತು ದೈವೀಶರೀರಗಳಾದ ಕಾರಣಶರೀರ ಹಾಗು ಪುರುಷ ಶರೀರಗಳಿರುವುದಿಲ್ಲ. ಆದ್ದರಿಂದ ನಮ್ಮ ಆತ್ಮ ಮತ್ತು ದೈವೀಶರೀರಗಳು ವಿರಾಟ್ ಪುರುಷನ ಬಳಿಗೆ ಹೋಗುತ್ತದೆ. ಕಾರಣವೇನೆಂದರೆ ಆತ್ಮನು ಕರ್ಮಫಲವನ್ನು ಸಾಕ್ಷೀಭೂತವಾಗಿ ಅನುಭವಿಸುತ್ತಾನೆ ಆದರೆ ಜೀವನು ತನ್ನ ಶರೀರ ಮತ್ತು ಮನಸ್ಸಿನಿಂದ ಅನುಭವಿಸುತ್ತಾನೆ. ಆತ್ಮನು ಪರಮಾತ್ಮನ ಸ್ವರೂಪವಾಗಿರುವುದರಿಂದ, ಪರಮಾತ್ಮನು ಶಿಕ್ಷೆಯನ್ನು ತನ್ನ ಸ್ವರೂಪನಾದ ಆತ್ಮನಿಗೆ ಕೊಟ್ಟರೆ ತಾನೆ ಅನುಭವಿಸುವಂತಾಗುತ್ತದೆ.

ಸತ್ತ ಪ್ರೇತವನ್ನು ಯಮದೂತರು ಯಮಪುರಿಗೆ ಎಳೆದೊಯ್ಯುವರು. ಮಾನವರನ್ನು ಶಿಕ್ಷಿಸುವ ಯಮಧರ್ಮನು ತನ್ನ ಅರಮನೆಯಲ್ಲಿ ಕುಳಿತು ಎಲ್ಲರಿಗೂ ನ್ಯಾಯಯುತವಾದ ತೀರ್ಪನ್ನು ಕೊಟ್ಟು ಜೀವರನ್ನು ಸಪ್ತಸ್ವರ್ಗಗಳ ಯಾವುದಾದರೂ ಒಂದುಲೋಕಕ್ಕೆ ಕಳುಹಿಸುತ್ತಾನೆ. ಎಲ್ಲ ಸಪ್ತಲೋಕಗಳನ್ನು ಪಿತೃಲೋಕ ಅಥವಾ ಪೂರ್ವಜರ ಲೋಕವೆಂದು ಕರೆಯುತ್ತಾರೆ.

ಪಿರಮಿಡ್ ಧರ್ಮದ ಹೇಳಿಕೆಯ ಪ್ರಕಾರ ರಾ ದೇವತೆಯು (ಸೂರ್ಯ–ಸವಿತೃ) ಗರ್ಭದಲ್ಲಿರುವ ಮಗುವು ಜನ್ಮವನ್ನು ತಾಳುವ ವೇಳೆಯಲ್ಲಿ ಪ್ರತಿಯೊಬ್ಬರ ರಹಸ್ಯ ಹೆಸರುಗಳನ್ನು ಉಚ್ಚರಿಸಿ, ಮಗುವಿನ ಶರೀರವನ್ನೂ ಸೇರುವಂತೆ ಮಾಡುವನು ಎಂದು ಹೇಳುತ್ತದೆ.

**ಅತ್ಯಂತ ಕ್ರೂರವ್ಯಕ್ತಿಗಳನ್ನು ನರಕದಲ್ಲಿ ತೀವ್ರವಾಗಿ ಶಿಕ್ಷಿಸಿ ಅವರ ಪ್ರೇತಶರೀರವನ್ನು ವರುಣದೇವರು**

**ನಾಶಮಾಡುವನೆಂದು ಹೇಳುತ್ತದೆ.**


ಪ್ರೇತದಲ್ಲಿ ದೈವೀಶರೀರಗಳಿರುವುದಿಲ್ಲ. ಅಂದರೆ ನಮ್ಮ (ಜೀವ ಅಥವಾ ಪ್ರಾಣ–ಮನಸ್ಸಿನ) ಪ್ರೇತವು ಸ್ವರ್ಗ ಅಥವಾ ನರಕಕ್ಕೆ ಹೋಗುತ್ತದೆ. ಅಲ್ಲಿ ಶಿಕ್ಷೆಯನ್ನು ಅನುಭವಿಸಿ ಮತ್ತೆ ಜನ್ಮವನ್ನು ತಾಳುವ ಸಂದರ್ಭ ಬಂದಾಗ ಸೂರ್ಯ–ಸವಿತೃದೇವರು ತಾಯಿಯ ಗರ್ಭದಲ್ಲಿ ಶಿಶುವನ್ನು ಸೃಷ್ಟಿಸಿ, ಆ ಮಗುವು ಜನ್ಮತಾಳುವ ಕಾಲದಲ್ಲಿ ಪ್ರತಿಯೊಬ್ಬರ ರಹಸ್ಯ ಹೆಸರುಗಳನ್ನು ಉಚ್ಚರಿಸಿ ಅವರ ದೈವೀಶರೀರಗಳು ಮತ್ತು ಜೀವನು ಮಗುವಿನ ಶರೀರದೊಳಗೆ ಸೇರಿಕೊಳ್ಳುವಂತೆ ಮಾಡುತ್ತಾನೆ. ಮಗುವು ಪ್ರಥಮ ಉಸಿರನ್ನು ತೆಗೆದುಕೊಳ್ಳುವಾಗ ದೈವೀಶರೀರಗಳು ಮಗುವನ್ನು ಪ್ರವೇಶಿಸಬಹುದು.

ಸ ಮಜ್ಮನಾ ಜನಿಮ ಮಾನುಷಾಣಾಮಮರ್ತ್ಯೇನ ನಾಮ್ನಾತಿ ಪ್ರ ಸರ್ಸ್ರೇ ।
ಸ ದ್ಯುಮ್ನೇನ ಸ ಶವಸೋತ ರಾಯಾ ಸ ವೀರ್ಯೇಣ ನೃತಮಃ ಸಮೋಕಾ ।। (ಋ ೬–೧೮–೭ ಆರ್ ಎಲ್ ಕ)
"ಇಂದ್ರನು, ಮರಣರಹಿತವಾದ (ಜ್ಯೋತಿರೂಪ ಆತ್ಮಗಳ) ರಹಸ್ಯ ಹೆಸರುಗಳಿಂದ ಮಾನವರ ಸಂತತಿಯನ್ನು ಅತಿಯಾಗಿ ವೃದ್ಧಿಪಡಿಸಿದನು. ತನ್ನ ಬೆಳಕು, ಶಕ್ತಿ, ಬಲ, ವೀರ್ಯ, ಸಾಮರ್ಥ್ಯದೊಂದಿಗೆ ಅವರ ಜೊತೆಯಲ್ಲಿಯೇ ವಾಸಮಾಡುತ್ತಾನೆ."

ಪ್ರತ್ಯಙ್ ದೇವಾನಾಂ ವಿಶಃ ಪ್ರತ್ಯಙ್ಙುದೇಷಿ ಮಾನುಷಾನ್ ।
ಪ್ರತ್ಯಙ್ವಿಶ್ವಂ ಸ್ವರ್ದೃಶೇ ।। (ಋಗ್ವೇದ ೧–೫೦–೫ ಸಾಭಾ)
"ಎಲೈ ಸೂರ್ಯದೇವನೇ, ನೀನು ದೇವಲೋಕದ ಪ್ರಜೆಗಳಾದ ಮರುದ್ದೇವತೆಗಳಿಗೂ, ಸಕಲ ಮಾನವರಿಗೂ ಸ್ವರ್ಲೋಕಕ್ಕೂ (ಸಪ್ತಮಸ್ವರ್ಗ) ಅಭಿಮುಖನಾಗಿ ಸಕಲರಿಗೂ ಗೋಚರನಾಗುವಂತೆ ಉದಯಿಸುತ್ತೀಯೆ."

# ಅಧ್ಯಾಯ ೨೧-ಪೂರ್ವಜರ ಶ್ರಾದ್ಧ ಕರ್ಮ

ಪಿತೃಗಳು ಎಲ್ಲಿಯೇ ಇರಲಿ ಅವರಿಗೆ ವರ್ಷದ ಒಂದು ದಿನ ಆಹಾರವನ್ನು ಕೊಡುವುದು ಎಲ್ಲ ಮಾನವರ ಕರ್ತವ್ಯವಾಗಿದೆ. ಭಾರತದೇಶದಲ್ಲಿ ಭಾದ್ರಪದಮಾಸ ಕೃಷ್ಣಪಕ್ಷದಲ್ಲಿ ಅದರಲ್ಲೂ ಮುಖ್ಯವಾಗಿ ಅಮಾವಾಸ್ಯೆಯ ದಿನ ಶ್ರದ್ಧೆಯಿಂದ ಪಿತೃಗಳನ್ನು ಆಹ್ವಾನಿಸಿ ಆರಾಧಿಸುವುದು ಎಲ್ಲರೂ ಮಾಡಬೇಕಾದ ವಿಧಿಯಾಗಿದೆ. ಆದ್ದರಿಂದ ನಮ್ಮ ಪೂರ್ವಜರಿಗೆ ಪಿತೃಮಾಸದ ಅಪರ್ಣಾಹ ಅಂದರೆ ೧-೩೦ ಯಿಂದ ೩-೩೦ ಘಂಟೆಯವರೆಗಿನ ಅವದಿಯಲ್ಲಿ ಶ್ರಾದ್ಧ ಪೂಜೆಯನ್ನು ಮಾಡುತ್ತಾರೆ. ಈ ವೇಳೆಯಲ್ಲಿ ಭೂಮಿಗೆ ಅಭಿಮುಖವಾಗಿ ಪ್ರಥಮಸ್ವರ್ಗವಿರುತ್ತದೆ ಮತ್ತು ಸಪ್ತಮಸ್ವರ್ಗವು ಸೂರ್ಯನ ಕೆಳಗಡೆ ಇರುತ್ತದೆ.




ಈ ವೇಳೆಯಲ್ಲಿ ಸಪ್ತ ಪಿತೃಲೋಕಗಳು ಪೃಥ್ವಿಗೆ ನೇರವಾಗಿ ದಿಗಂತದಿಂದ ಮೇಲಕ್ಕೆ ಅಂದರೆ ದ್ಯುಲೋಕದಲ್ಲಿ ಲಂಬವಾಗಿ ವಿಸ್ತರಿಸಿಕೊಂಡು ಊರ್ಧ್ವಲೋಕದಲ್ಲಿರುವ ಸೂರ್ಯನವರೆಗೂ ಯಮನ ಸೂರ್ಯಮಂಡಲ ಮತ್ತು ಸಪ್ತಸ್ವರ್ಗಗಳು ನೆಲೆಸಿರುತ್ತದೆ. ಆದ್ದರಿಂದಲೇ ಈ ವೇಳೆಯು ಪಿತೃಕಾರ್ಯಕ್ಕೆ ಬಹಳ ಪ್ರಶಸ್ತವಾಗಿದೆ. ಈ ಆಚರಣೆಯು ನಮ್ಮ ಭಾರತದೇಶದಲ್ಲಿ ಪೂರ್ವಕಾಲದಿಂದಲೂ ನಡೆದುಕೊಂಡು ಬಂದಿರುವ ಪದ್ದತಿಯಾಗಿದೆ.

ಯಮನು ಮಧ್ಯಾಹ್ನದ ಪ್ರಭೆಯಂತೆ ಆದಿತ್ಯರೂಪನಾಗಿದ್ದಾನೆ, ಪಿತೃಗಳ ಅಧಿದೇವನು ಮತ್ತು ಕೆಳಹಂತದ ದ್ಯುಲೋಕಸ್ಥನು. ಪಿತೃಗಳಿಗಿಂತಲೂ ಉತ್ಕೃಷ್ಟನು ಆಗಿದ್ದಾನೆ. ಯಮನ ಪ್ರಭೆಯಿಂದಲೇ ಪಿತೃಗಳೂ ಸಹ ತೇಜೋರೂಪವನ್ನು ಹೊಂದಿರುತ್ತಾರೆ ಆದರೆ ಭೂಮಿಯ ಮೇಲಿರುವ ಪಿತೃಗಳು ತೇಜೋಹೀನರಾಗಿ, ತಣ್ಣನೆಯ ಶರೀರನ್ನು ಹೊಂದಿದವರಾಗಿ, ದುರ್ಗಂದದಿಂದ ಕೂಡಿರುವವರಾಗಿರುತ್ತಾರೆ. ಪಿತೃಲೋಕದ ಬಗ್ಗೆ ಕೆಲವೊಂದು ಋಗ್ವೇದ ಮಂತ್ರಗಳನ್ನು ನೋಡೋಣ.

ಪರೇಯಿವಾಂಸಂ ಪ್ರವತೋ ಮಹೀರನು ಬಹುಭ್ಯಃ ಪಂಥಾಮನುಪಸ್ಪಶಾನಂ ।
ವೈವಸ್ವತಂ ಸಂಗಮನಂ ಜನಾನಾಂ ಯಮಂ ರಾಜಾನಂ ಹವಿಷಾ ದುವಸ್ಯ ।। (ಋ ೧೦-೧೪-೧ ಸಾಭಾ)
"ಎಲೈ ಯಜಮಾನನೇ, ಉತ್ಕೃಷ್ಟವಾದ ಕರ್ಮಗಳನ್ನಾಚರಿಸಿದ ಪುರುಷರನ್ನು ಆಯಾ ಉತ್ತಮಪ್ರದೇಶಗಳಿಗೆ ಮರಣಾನಂತರ ಕರೆದೊಯ್ಯುವವನೂ, ಅನೇಕ ಪುಣ್ಯಕರ್ಮಿಗಳಿಗೆ ಸ್ವರ್ಗಾದಿಮಾರ್ಗಗಳನ್ನು ಹಿಂಸೆಯಿಲ್ಲದೇ ಉಂಟುಮಾಡತಕ್ಕವನೂ, ವಿವಸ್ವಂತನ (ಸೂರ್ಯ) ಪುತ್ರನೂ, ಪಾಪಿಗಳನ್ನು ಅವರಿಗೆ ಯೋಗ್ಯವಾದ ಸ್ಥಾನಕ್ಕೆ ಸೇರಿಸುವವನು, ಪಿತೃಗಳಿಗೆ ಪ್ರಭುವೂ ಆದ ಯಮನನ್ನು ಹವಿಸ್ಸುಗಳಿಂದ ಉಪಚರಿಸು."

ಯಮೋ ನೋ ಗಾತುಂ ಪ್ರಥಮೋ ವಿವೇದ ನೈಷಾ ಗವ್ಯೂತಿರಪಭರ್ತವಾ ಉ ।
ಯತ್ರಾ ನಃ ಪೂರ್ವೇ ಪಿತರಃ ಪರೇಯುರೇನಾ ಜಜ್ಞಾನಾಃ ಪಥ್ಯಾಃ ಅನು ಸ್ವಾಃ ।। (ಋ ೧೦-೧೪-೨ ಸಾಭಾ)

"ಸಕಲರಿಗೂ ಮುಖ್ಯನಾದ ಯಮನು ನಮ್ಮ ಸಂಚಾರಮಾರ್ಗವನ್ನು ಅರಿತಿದ್ದಾನೆ. ಈ ಫಲವತ್ತಾದ ಮಾರ್ಗವು ಇತರರಿಂದ ಅಪಹರಿಸಲ್ಪಡತಕ್ಕದಲ್ಲ. ಯಾವ ಕರ್ಮಕ್ಕನುಗುಣವಾದ ಮಾರ್ಗಗಳಲ್ಲಿ ನಮ್ಮ ಹಿಂದಿನ ಪಿತೃಗಳೆಲ್ಲರೂ ಮರಣಾನಂತರ ಹೋದರೋ, ಅಂತಹ ಮಾರ್ಗಗಳಲ್ಲಿಯೇ, ಉತ್ಪನ್ನರಾದ ಸಕಲರೂ ತಮ್ಮ ತಮ್ಮ ವೈಯಕ್ತಿಕವಾದ ಕರ್ಮಫಲಗಳನ್ನು ಅನುಸರಿಸಿ ಹೋಗುತ್ತಾರೆ."

ನಮ್ಮ ನಮ್ಮ ಕರ್ಮಗಳಂತೆಯೇ ನಾವು ಇತರ ಲೋಕಕ್ಕೆ ಹೋಗುತ್ತೇವೆ ಮತ್ತು ನಾವು ಸ್ವರ್ಗ ಅಥವಾ ನರಕಕ್ಕೆ ಹೋಗುತ್ತೇವೆಯೋ ಅದನ್ನು ನಾವು ಮಾಡಿದ ಕರ್ಮಗಳಂದ ನಾವೇ ತಿಳಿಯಬಹುದು.

ಪ್ರೇಹಿ ಪ್ರೇಹಿ ಪಥಿಭಿಃ ಪೂರ್ವ್ಯೇಭಿರ್ಯತ್ರಾ ನಃ ಪೂರ್ವೇ ಪಿತರಃ ಪರೇಯುಃ ।
ಉಭಾ ರಾಜಾನಾ ಸ್ವಧಯಾ ಮದಂತಾ ಯಮಂ ಪಶ್ಯಾಸಿ ವರುಣಂ ಚ ದೇವಂ ।। (ಋ ೧೦-೧೪-೭ ಸಾಭಾ)
"ಎಲೈ ಪಿತೃವೇ (ಪ್ರೇತ), ಯಾವ ಮಾರ್ಗದಲ್ಲಿ ನಮ್ಮ ಪುರಾತನರಾದ ಪಿತಾಮಹಾದಿಗಳು ಮರಣಾನಂತರ ಹೋದರೋ, ಅನಾದಿಯಾದ ಅದೇ ಮಾರ್ಗಗಳಂದ ಪ್ರಯಾಣಮಾಡು. ಅಮೃತಾನ್ನದಿಂದ ತೃಪ್ತಿಯನ್ನು ಹೊಂದಿರುವವರೂ, ಪ್ರಭುಗಳೂ ಆದ ಯಮನನ್ನೂ, ಪ್ರಕಾಶಮಾನನಾದ ವರುಣನನ್ನೂ ಅಲ್ಲಿ ನೋಡುವೆ."

ವರುಣದೇವನೂ ಸಹ ಸ್ವರಾಟ್ ಆಗಿ ಸೂರ್ಯ-ಸವಿತೃ ಮತ್ತು ಯಮನಂತೆ ಆರಾಧಿಸಲ್ಪಡು ವವನಾಗಿದ್ದಾನೆ. ವರುಣ ಮತ್ತು ಇತರ ದೇವತೆಗಳ ತೇಜಸ್ಸೇ ಸೂರ್ಯನಂತೆ ಪ್ರಜ್ವಲಿಸುತ್ತಿರುವುದು. ಈ ಇಬ್ಬರನ್ನು ತಮ್ಮ ಲೋಕವನ್ನು ಆಳುವ ಪ್ರಭುಗಳೆಂದು ಕರೆಯಲ್ಪಡುತ್ತಾರೆ. ಏಕೆಂದರೆ ವರುಣನು ಜಲದ ಅಧಿಪತಿಯಾಗಿದ್ದಾನೆ. ವರುಣನ ಜಲದಿಂದಲೇ ನಮ್ಮ ಸ್ಥೂಲಶರೀರವು ಪ್ರಕಟವಾಗಿದೆ. ಯಮನು ಪುಣ್ಯವಂತರಿಗೆ ಸೌಮ್ಯರೂಪವುಳ್ಳವನಾಗಿಯೂ ಮತ್ತು ಪಾಪಿಷ್ಟರಿಗೆ ಕಠೋರವಾದ ರೂಪವುಳ್ಳವನಂತೆಯೂ ಕಾಣಿಸುತ್ತಾನೆ. ಯಮನ ಸಹಚರರು ಕಠೋರ ರೂಪದಿಂದ ಬಂದು ಪಾಪಿಗಳನ್ನು ಎಳೆದುಕೊಂಡು ಹೋಗುತ್ತಾರೆ. ಈ ಮಂತ್ರವನ್ನು ನೋಡಿ.

ಉರೂಣಸಾವಸುತೃಪಾ ಉದುಂಬಲೌ ಯಮಸ್ಯ ದೂತೌ ಚರತೋ ಜನಾನ್ ಅನು ।
ತಾವಸ್ಮಭ್ಯಂ ದೃಶಯೇ ಸೂರ್ಯಾಯ ಪುನರ್ದಾತಾಮಸುಮದ್ಯೇಹ ಭದ್ರಂ ।। (ಋ ೧೦-೧೪-೧೨ ಸಾಭಾ)
"ಉದ್ದವಾದ ನಾಸಿಕವುಳ್ಳವರೂ, ಇತರರ ಪ್ರಾಣಗಳನ್ನು ಹೀರಿ ತೃಪ್ತಿಯನ್ನು ಪಡೆಯತಕ್ಕವರೂ, ಅತ್ಯಧಿಕವಾದ ಶಕ್ತಿಯುಳ್ಳವರೂ, ಯಮನಿಗೆ ದೂತರೂ, ಪ್ರಾಣಿಗಳನ್ನು (ಪಾಪಿಗಳನ್ನು) ಅರಸುತ್ತಾ ಸಂಚರಿಸುತ್ತಾರೆ. ಇವರು ಸೂರ್ಯನ ದರ್ಶನಾರ್ಥವಾಗಿ ಇಂದು ಈ ಯಾಗ ಕರ್ಮದಲ್ಲಿ ಮಂಗಳಕರವಾದ ಪ್ರಾಣವನ್ನು ಪುನಃ ನಮಗೆ ಕೊಡಲಿ." (ಪಾಪಿಗಳನ್ನು ಮಾತ್ರ ಯಮನ ದೂತರು ಎಳೆದೊಯ್ಯುವರು.)

ಸಂ ಗಚ್ಛಸ್ವ ಪಿತೃಭಿಃ ಸಂ ಯಮೇನೇಷ್ಟಾಪೂರ್ತೇನ ಪರಮೇ ವ್ಯೋಮನ್ ।
ಹಿತ್ವಾಯಾವದ್ಯಂ ಪುನರಸ್ತಮೇಹಿ ಸಂಗಚ್ಛಸ್ವ ತನ್ವಾ ಸುವರ್ಚಾಃ ।। (ಋ ೧೦-೧೪-೮ ಸಾಭಾ)
"ಎಲೈ ಪಿತೃವೇ, ಅತ್ಯುತ್ಕೃಷ್ಟವಾದ ಸ್ವರ್ಗಸ್ಥಾನದಲ್ಲಿ ಪಿತೃಗಳೊಡನೆ ಸೇರಿಕೊ. ನಿನ್ನ ಕಾಮವನ್ನು ತೃಪ್ತಿಗೊಳಿಸುವ ಯಮನೊಡನೆ ಸೇರು. ಪಾಪಕ್ಕೆ ಮೂಲವಾದ ದೇಹವನ್ನು ತ್ಯಜಿಸಿ ಉತ್ತಮವಾದ ಗೃಹಕ್ಕೆ ಪುನಃ ಬಂದು ಸೇರು. ಉತ್ತಮವಾದ ಕಾಂತಿಯುಳ್ಳ ದೇಹದೊಡನೆ ಸೇರಿಕೊ."

ಸಕಲರೂ ಮರಣಾನಂತರ ತೇಜೋಮಯವಾದ ದೇಹವನ್ನು ಪಡೆಯುವರು. ಮಾನವರ ಬಣ್ಣ ಮತ್ತು ಕುಲವನ್ನು ಆಧರಿಸಿ ಮಾಡುವ ವಿಭಜನೆಯು ಕೇವಲ ಭೂಲೋಕದಲ್ಲಿ ಮಾತ್ರ. ಒಂದು ಸಾರಿ ಮರಣ ಹೊಂದಿದ ಮೇಲೆ ಯಮಧರ್ಮರಾಜನು ಎಲ್ಲರನ್ನೂ ಒಂದೇ ರೀತಿ ಪರಿಗಣಿಸುವನು.

ಉದೀರತಾಮವರ ಉತ್ಪರಾಸ ಉನ್ಮಧ್ಯಮಾಃ ಪಿತರಃ ಸೋಮಾಸ್ಯಃ ।
ಅಸುಂ ಯ ಈಯುರವೃಕಾ ಋತಜ್ಞಾಸ್ತೇ ನೋಽವಂತ ಪಿತರೋ ಹವೇಷು ।। (ಋ ೧೦-೧೫-೧ ಸಾಭಾ)
"ಕೆಳಗಿನ ಲೋಕದಲ್ಲಿರುವ ಪಿತೃಗಳೂ, ಉತ್ತಮಲೋಕದಲ್ಲಿರುವವರೂ, ಮಧ್ಯಮಲೋಕದಲ್ಲಿರುವವರೂ ನಮ್ಮ ಹವಿಸ್ಸುಗಳನ್ನು ಸ್ವೀಕರಿಸಲಿ. ಅವರೆಲ್ಲರೂ ನಮ್ಮಲ್ಲಿ ಅನುಗ್ರಹಬುದ್ಧಿಯುಳ್ಳವರಾಗಿರಲಿ. ತೋಳಗಳಂತೆ ಕ್ರೂರಿಗಳಲ್ಲದವರೂ, ನಮ್ಮ ಯಜ್ಞಕರ್ಮಗಳನ್ನರಿತವರೂ, ನಮ್ಮ ಪ್ರಾಣವನ್ನು ರಕ್ಷಿಸಲು ಬಂದಿರುವವರೂ ಆದ ಆ ಪಿತೃಗಳು ನಮ್ಮ ಆಹ್ವಾನಕಾಲದಲ್ಲಿ ನಮ್ಮನ್ನು ರಕ್ಷಿಸಲಿ."

(ನರಕಲೋಕದಲ್ಲಿರುವ ಪಿತೃಗಳ ಬಗ್ಗೆ ಏನನ್ನೂ ಹೇಳಿಲ್ಲವೆಂಬುದನ್ನು ಗಮನಿಸಿ. ಏಕೆಂದರೆ ಸಪ್ತಸ್ವರ್ಗಗಳು ದ್ಯುಲೋಕದ ಆಕಾಶದಲ್ಲಿದೆ ಆದರೆ ನರಕವು ಪೃಥ್ವಿಯ ಒಳಗಡೆ ಇದೆ.)

ಯಾರು ಉತ್ತಮ ಕರ್ಮಗಳನ್ನು ಮಾಡಿರುವರೋ ಅವರು ಉತ್ತಮಲೋಕಕ್ಕೆ ಹೋಗಿ ಆನಂದದಿಂದ ಇರುವರು. ಕೆಲವರು ಮಧ್ಯಮಲೋಕಕ್ಕೆ ಹೋಗುವರು. ಸಾಮಾನ್ಯ ಮಾನವರು ಕೆಳಹಂತದ ಸ್ವರ್ಗಕ್ಕೆ ಹೋಗುವರು.

ನರ ಹಂತಕರು ಮತ್ತು ಮನುಕುಲದ ದ್ವೇಷಿಗಳು ಎಲ್ಲಿಗೆ ಹೋಗಿರುವರೆಂದು ನೀವೇ ಊಹಿಸಿ. ಅವರು ಭಗವಂತನ ಲೋಕಕ್ಕಂತೂ ಹೋಗುವುದಿಲ್ಲ. ಇಹಲೋಕವನ್ನು ತ್ಯಜಿಸಿದ ನಮ್ಮ ತಂದೆತಾಯಿಗಳೂ, ಪಿತಾಮಹರೂ ಮತ್ತು ಪ್ರಪಿತಾಮಹರು ಎಲ್ಲಿಯೇ ಇರಲಿ ಅವರೆಲ್ಲರೂ ನಮ್ಮ ಪಿತೃಗಳೇ. ಆದ್ದರಿಂದ ಪಿತೃಮಾಸದಲ್ಲಿ ಒಂದು ದಿನ ಶ್ರದ್ಧೆಯಿಂದ ಅವರನ್ನು ಪೂಜಿಸಿ ಆಹಾರವನ್ನು ಅರ್ಪಿಸುವುದು ಎಲ್ಲರ ಕರ್ತವ್ಯವಾಗಿದೆ.

ಪಿತೃಗಳನ್ನು ಆರಾಧಿಸುವ ಕ್ರಮವು ಎಲ್ಲಾ ಜನಾಂಗಗಳಲ್ಲಿವೆ. ದಿನಗಳು ಬೇರೆಯಾಗಿರಬಹುದು, ರೀತಿಗಳು ಬೇರೆಯಾಗಿರಬಹುದು ಆದರೆ ಎಲ್ಲ ಮಾನವರೂ ಪಿತೃಪೂಜೆಯನ್ನು ಕಡ್ಡಾಯವಾಗಿ ಮಾಡಲೇಬೇಕಾಗಿದೆ. ಆ ದಿನದಂದು ಪಿತೃಗಳು ಕೆಳಗೆ ಬಂದು ನಾವು ಅರ್ಪಿಸಿದ ಆಹಾರವನ್ನು ಸ್ವೀಕರಿಸಿ ನಮ್ಮನ್ನೂ ನಮ್ಮ ಸಂತತಿಯನ್ನು ಆಶೀರ್ವದಿಸುವರು, ಪಿತೃಗಳು ಬಿಸಿಯಾದ ಆಹಾರದಲ್ಲಿರುವ ಪ್ರಾಣವನ್ನು ಗ್ರಹಿಸಿ ತೃಪ್ತರಾಗುವರು. ಯಾರು ವರ್ಷದಲ್ಲಿ ಒಂದು ದಿನ ಪಿತೃಪೂಜೆಯನ್ನು ಮಾಡುವುದಿಲ್ಲವೋ ಅವರನ್ನು ದೇವತೆಗಳಾಗಲಿ, ಪಿತೃಗಳಾಗಲಿ ಅನುಗ್ರಹಿಸುವುದಿಲ್ಲ. ಮದುವೆ, ಗೃಹಾರಂಭ ಇತ್ಯಾದಿ ಕಾರ್ಯಗಳ ಮೊದಲು ಪಿತೃಗಳ ಆಶೀರ್ವಾದವನ್ನು ತೆಗೆದುಕೊಳ್ಳುವುದು ಬಹಳ ಮುಖ್ಯವಾಗಿರುತ್ತದೆ. ಈ ಪಿತೃಪೂಜೆಯನ್ನು ಶ್ರದ್ಧೆಯಿಂದ ಮಾಡಬೇಕಾಗಿರುವುದರಿಂದ ಇದನ್ನು ಶ್ರಾದ್ಧ ಎಂದು ಕರೆಯುತ್ತಾರೆ. ಈ ವೇಳೆಯಲ್ಲಿ ಹರಟೆ ಹೊಡೆಯುವುದು, ಕೇಕೆ ಹಾಕಿ ನಗುವುದು ಇತ್ಯಾದಿಗಳನ್ನು ಮಾಡಬಾರದು.

ಉಪಹೂತಾಃ ಪಿತರಃ ಸೋಮ್ಯಾಸೋ ಬರ್ಹಿಷ್ಯೇಷು ನಿಧಿಷು ಪ್ರಿಯೇಷು ।
ತ ಆ ಗಮಂತು ತ ಇಹ ಶ್ರುವಂತ್ವಧಿ ಬ್ರುವಂತು ತೇಽವಂತ್ವಸ್ಮಾನ್ ।। (ಋ ೧೦–೧೫–೫ ಸಾಭಾ)
"ಯಾಗಾರ್ಹವೂ, ಪ್ರೀತಿಕಾರಕವೂ ಆದ ಹವಿಸ್ಸುಗಳನ್ನು ಸ್ವೀಕರಿಸಲು ನಾವು ಯಾವ ಪಿತೃಗಳನ್ನು ಕರೆಯುತ್ತೇವೆಯೋ ಅಂತಹ ಪಿತೃಗಳು ನಮ್ಮಲ್ಲಿ ಅನುಗ್ರಹ ಬುದ್ಧಿಯನ್ನು ತೋರಿಸುತ್ತಾ ಬರಲಿ, ಈ ಕರ್ಮಕಾಲಗಳಲ್ಲಿ ಪಠಿತವಾಗುವ ನಮ್ಮ ಸ್ತುತಿಗಳನ್ನು ಕೇಳಲಿ. ನಮ್ಮ ವಿಷಯದಲ್ಲಿ ಪ್ರಶಂಸಾವಾಕ್ಕುಗಳನ್ನು ಹೇಳಲಿ. ಅವರು ನಮ್ಮನ್ನು ರಕ್ಷಿಸಲಿ.

ಇದಂ ಪಿತೃಭ್ಯೋ ನಮೋ ಅಸ್ತ್ವದ್ಯ ಯೇ ಪೂರ್ವಾಸೋ ಯ ಉಪರಾಸ ಈಯುಃ ।
ಯೇ ಪಾರ್ಥಿವೇ ರಜಸ್ಯಾ ನಿಷತ್ತಾ ಯೇ ವಾ ನೂನಂ ಸುವೃಜನಾಸು ವಿಕ್ಷು ।। (ಋ ೧೦–೧೫–೨ ಸಾಭಾ)
"ನಮಗಿಂತಲೂ ಹಿರಿಯರಾದ ಪಿತೃಪಿತಾಮಹಾದಿಗಳಲ್ಲಿ ಯಾರು ಪಿತೃಲೋಕವನ್ನು ಸೇರಿರುವರೋ, ನಮಗಿಂತ ಕಿರಿಯರಲ್ಲಿ ಯಾರು ಮೃತಿಯನ್ನು ಹೊಂದಿರುವರೋ, ಯಾರು ಪಾರ್ಥಿವಲೋಕದಲ್ಲಿ ಹವಿಸ್ಸಿಗಾಗಿ ಬಂದು ಕುಳಿತಿರುವರೋ, ಉಳಿದ ಯಾವ ಪಿತೃಗಳು ಉತ್ತಮರಾದ ಧನವಂತರ ನಡುವೆ ಕುಳಿತಿರುವರೋ ಅಂತಹ ಸಕಲ ಪಿತೃಗಳನ್ನೂ ಈ ಯಾಗಕಾಲದಲ್ಲಿ ನಮಸ್ಕರಿಸುತ್ತೇನೆ.

ಯಾವುದೋ ಕಾರಣಕ್ಕೆ ಕೆಲವರು ಸಾವಿನ ನಂತರವೂ ಪೃಥ್ವಿಯ ಮೇಲೆಯೇ ಇರುವರು. ಅವರ ಪ್ರಾಣ–ಮನಸ್ಸಿನ ಶರೀರವು ದೈವೀಶರೀರದಿಂದ ಬೇರೆಯಾಗಿ ಇಲ್ಲಿಯೇ ಸಿಲುಕಿ ಹಾಕಿಕೊಂಡಿರುತ್ತದೆ. ಪಾಶ್ಚಾತ್ಯ ಜನಾಂಗಗಳು ಪಿತೃಲೋಕದ ಅರಿವಿಲ್ಲದ ಕಾರಣ ಅವರಲ್ಲಿ ಅನೇಕರು ಪೃಥ್ವಿಲೋಕದಲ್ಲಿಯೇ ಬಂದಿತರಾಗಿರುತ್ತಾರೆ. ದೈವೀಶರೀರವಿಲ್ಲದ ಕಾರಣದಿಂದ ಪ್ರೇತಗಳು ಇರುವ ಕಡೆ ತಣ್ಣನೆಯ ಅನುಭವ ಮತ್ತು ಒಂದು ರೀತಿಯ ವಾಸನೆಯಿರುವುದನ್ನು ಪ್ರೇತಗಳ ಅನ್ವೇಷಕರು ಅನುಭವಿಸುತ್ತಾರೆ. ಅಂತಹವರಿಗೂ ಸಹ ಹವಿಸ್ಸನ್ನು ಅರ್ಪಿಸಬೇಕು. ಆದರೆ ಸೂರ್ಯ ಮತ್ತು ಯಮನ ಮಂಡಲದ ಬೆಳಕಿನ ಕಾರಣ ಪಿತೃಗಳು ದಿವ್ಯವಾದ ಶರೀರವನ್ನು ಹೊಂದುತ್ತಾರೆ.

ಯಾರು ತಮ್ಮ ಪೂರ್ವಜರನ್ನು ವರ್ಷಕ್ಕೊಮ್ಮೆಯಾದರೂ ಪೂಜಿಸುವುದಿಲ್ಲವೂ ಅಂತಹವರ ಮೇಲೆ ಪಿತೃಗಳ ಆಶೀರ್ವಾದವಿರುವುದಿಲ್ಲ. ನಾವು ಮಾಡುವ ಯಾವುದೇ ಕೆಲಸಗಳಲ್ಲಿ ಅಡೆತಡೆಗಳುಂಟಾಗುತ್ತದೆ ಮತ್ತು ಮರಣಾನಂತರ ನರಕಕ್ಕೆ ಹೋಗಬೇಕಾಗುತ್ತದೆ. ನಾವು ಮಾಡಿದ ಪಾಪಗಳಿಂದ ತಪ್ಪಿಸಿಕೊಳ್ಳಲು ಸೂರ್ಯ–ಸವಿತೃವಿನ ಪ್ರಾರ್ಥನೆಯನ್ನು ಪ್ರತಿನಿತ್ಯ ಮಾಡಿದರೂ ಸಹ ಪಿತೃಗಳ ಶ್ರಾದ್ಧಕಾರ್ಯಗಳನ್ನು ಮಾಡದ ವ್ಯಕ್ತಿಗಳ ಪುಣ್ಯವು ವ್ಯರ್ಥವಾಗಿ ಕೆಲಕಾಲ ಕೆಳಹಂತದ ಪಿತೃಲೋಕ ಅಥವಾ ನರಕದಲ್ಲೇ ಇರಬೇಕಾಗುವುದು.

ಓದುಗರು ಗಮನಿಸಬೇಕಾಗಿರುವುದು ಏನೆಂದರೆ ಪೃಥ್ವಿ ಮತ್ತು ಸಪ್ತಸ್ವರ್ಗಗಳೂ ಸೇರಿದಂತೆ ಇಡೀ ವಿಶ್ವವೇ ಪ್ರಾಣ–ಮನಸ್ಸಿನಿಂದ ಬಂಧಿತವಾಗಿವೆ. ಮೊದಲಿಗೆ ಇಂದ್ರನು ತನ್ನ ಮಾನಸಿಕ ಶಕ್ತಿಯಿಂದ ಬ್ರಹ್ಮಾಂಡವನ್ನೇ ಆವರಿಸಿಕೊಂಡಿರುವನು. ಇದೇ ರೀತಿ ಎಲ್ಲಾ ದೇವತೆಗಳು ವಿಶ್ವದಲ್ಲಿ ನಡೆಯುತ್ತಿರುವ ಸಕಲ ಸಂಗತಿಗಳನ್ನು ನೋಡುತ್ತಾರೆ ಕೇಳುತ್ತಾರೆ. ಆದ್ದರಿಂದ ಒಬ್ಬರು ಅವರ ಪಿತೃಗಳನ್ನು ಕುರಿತು ಸಂತೋಷಿಸಿದರೆ, ಅದು ಅವರ ಪಿತೃಗಳು ಮತ್ತೆ ಜನನವನ್ನು ಹೊಂದಿದ್ದರೂ ಅವರ ಮನಸ್ಸಿಗೆ ತಲುಪುತ್ತದೆ.

ಆಚ್ಯಾ ಜಾನು ದಕ್ಷಿಣತೋ ನಿಷದ್ಯೇಮಂ ಯಜ್ಞಮಭಿ ಗೃಣೀತ ವಿಶ್ವೇ ।
ಮಾ ಹಿಂಸಿಷ್ಟ ಪಿತರಂ ಏನ ಚಿನ್ನೋ ಯದ್ವ ಆಗಃ ಪುರುಷತಾ ಕರಾಮ ।। (ಋ ೧೦–೧೫–೬ ಸಾಭಾ)

"ಎಲೈ ಪಿತೃಗಳೇ, ನೀವೆಲ್ಲರೂ ಮೊಳಕಾಲನ್ನೂರಿ ದಕ್ಷಿಣ ಪಾರ್ಶ್ವದಲ್ಲಿ ಕುಳಿತು ನಮ್ಮ ಈ ಯಾಗವನ್ನು ಪ್ರಶಂಸಿಸಿರಿ. ನಿಮ್ಮ ವಿಷಯದಲ್ಲಿ ಯಾವುದೇ ಆದ ಪಾಪವನ್ನಾಗಲಿ, ಮಾನವನಿಗೆ ಸಹಜವಾದ ಅಜ್ಞಾನದಿಂದ ನಾವು ಮಾಡಿದ್ದೇ ಆದರೆ, ಆ ಯಾವ ವಿಧವಾದ ಪಾಪಕ್ಕಾಗಿಯೂ ನಮ್ಮನ್ನು ಹಿಂಸಿಸಬೇಡಿರಿ.

ಇಲ್ಲಿ ಗಮನಿಸಬೇಕಾದ ಸಂಗತಿ ಏನೆಂದರೆ ಸಾಮಾನ್ಯ ಮರಣವು ನಮ್ಮನ್ನು ಪಿತೃಲೋಕಕ್ಕೆ ತೆಗೆದುಕೊಂಡು ಹೋಗುತ್ತದೆ. ಅಲ್ಲಿ ನಮಗೆ ಸ್ಥೂಲಶರೀರವಿಲ್ಲದ್ದರಿಂದ ನಾವು ಯಾವ ಆನಂದವನ್ನು ಭೂಮಿಯ ಮೇಲೆ ಅನುಭವಿಸುತ್ತೇವೋ ಅಂತಹ ಆನಂದವನ್ನು ಪಿತೃಲೋಕದಲ್ಲಿ ಅನುಭವಿಸಲು ಆಗುವುದಿಲ್ಲ. ಯಾರು ಸಪ್ತಮಸ್ವರ್ಗಕ್ಕೆ ಹೋಗುತ್ತಾರೋ ಅವರು ಮಾತ್ರ ದೇವತೆಗಳಂತೆ ಶರೀರವನ್ನು ಧರಿಸಿ ಆನಂದದಿಂದಿರುತ್ತಾರೆ. ನರಕದಲ್ಲಿರುವವರು ಚರ್ಮೇಂದ್ರಿಯಗಳನ್ನು ಪಡೆದು ಶಿಕ್ಷೆಗೆ ಒಳಗಾಗುತ್ತಾರೆ. ಹೀಗೆ ಪ್ರತಿಯೊಂದು ಸ್ವರ್ಗಕ್ಕೂ ವಿವಿಧ ರೀತಿಯ ವ್ಯವಸ್ಥೆ ಇದೆ. ಯಾರು ತಮ್ಮ ಸಾಧನೆಯಿಂದ ಭಗವಂತನ ಅನುಗ್ರಹವನ್ನು ಪಡೆಯುವರೋ ಅವರು ಇಂದ್ರಲೋಕಕ್ಕೆ ಸೂಕ್ಷ್ಮಮಾರ್ಗದ ಮುಖಾಂತರ ನೇರವಾಗಿ ಹೋಗಬಹುದು. ಅಂಥಹವರು ಪ್ರಳಯದ ದಿನದವರೆಗೂ ಕಾಯುವ ಅಗತ್ಯವಿಲ್ಲ. ಇದರ ಅರ್ಥ ವಿಶ್ವಪ್ರಳಯದವರೆಗೂ ಸೂರ್ಯ ಮತ್ತು ಪೃಥ್ವಿಯ ಮಧ್ಯೆ ಬಂಧಿತರಾಗಿ ಪದೇ ಪದೇ ಪುನರ್ಜನ್ಮವನ್ನು ಪಡೆಯಬೇಕಾಗುವುದು.

ಜೀವನು ಕೇವಲ ಪ್ರಾಣಶರೀರ ಮತ್ತು ಮನಸ್ಸನ್ನು ಹೊಂದಿರುವುದರಿಂದ, ಅವನು ಕೇವಲ ನೋಡಬಲ್ಲನು. ಮಾನಸಿಕವಾಗಿ ತಿಳಿಯಬಲ್ಲನು ಆದರೆ ಸ್ಪರ್ಶ ಇತ್ಯಾದಿಗಳು ಮತ್ತು ವಿವೇಚನಾ ಬುದ್ಧಿಯು ಇರುವುದಿಲ್ಲ. ನಾವು ಕೊಡುವ ಪಿಂಡವನ್ನು ಸೂಕ್ಷ್ಮರೂಪದಲ್ಲಿ ಸ್ವೀಕರಿಸುತ್ತಾರೆ.

ಆದ್ದರಿಂದ ಯಾರು ಸೂರ್ಯ-ಸವಿತೃವು ಸೃಷ್ಟಿಸಿದ ಸಪ್ತಸ್ವರ್ಗ-ಭೂಮಿಯಲ್ಲಿ (ದ್ಯಾವಾಪೃಥ್ವಿಗಳಲ್ಲಿ) ಜನನ ತಾಳುವರೋ ಅಂದರೆ ಪೃಥ್ವಿಯ ಮೇಲೆ ಜನನ ತಾಳುವರೋ ಅವರಿಗೆ ಪುನರ್ಜನ್ಮವಿರುವುದು. ಆದರೆ ಇಂದ್ರಲೋಕದಲ್ಲಿ (ನಂದನ ವನ) ಸೃಷ್ಟಿಸಲ್ಪಟ್ಟ ಆತ್ಮನ ಕಾರಣಶರೀರವು ಒಂದೇ ಸಾರಿ ಸೃಷ್ಟಿಮಾಡಲ್ಪಟ್ಟನು. ಮತ್ತು ತನ್ನ ಆಸೆಗಳನ್ನು ಪೂರೈಸಿಕೊಳ್ಳಲು ಭೂಮಿಗೆ ಕಳುಹಿಸಲ್ಪಟ್ಟನು. ಆತ್ಮನು ಮತ್ತೆ ಇಂದ್ರನ ಬಳಿ ಹೋಗಲು ಸೃಷ್ಟಿಯ ವಿನಾಶದವರೆಗೂ ಕಾಯಬೇಕಾಗುತ್ತದೆ. ಆನಂತರ ಎಲ್ಲರ ಆತ್ಮವು ಇಂದ್ರನ ಬಳಿ ಹಿಂತಿರುಗುವರು. ಅಲ್ಲಿ ಕೆಲಕಾಲ ಆನಂದದಿಂದ ಇದ್ದು ಮತ್ತೆ ಸೃಷ್ಟಿಕಾರ್ಯ ಶುರುವಾದಾಗ ಎಲ್ಲರೂ ಮತ್ತೆ ತಮ್ಮ ವಾಸನೆಯಿಂದ ಪೃಥ್ವಿಯ ಮೇಲೆ ಜನನ ತಾಳುವರು. ಸೃಷ್ಟಿಚಕ್ರವು ನಿರಂತರವಾಗಿರುವುದರಿಂದ ಆಸೆಗಳಿಂದ ಕೂಡಿದ ಆತ್ಮನು ಪದೇ ಪದೇ ಕಾರಣಶರೀರವನ್ನು ಪಡೆದು ಪೃಥ್ವಿಯಲ್ಲಿ ಜನಿಸುವನು.

## ಮನುಕುಲಕ್ಕೆ ಋಗ್ವೇದದ ಸಂದೇಶ

ಸಂ ಗಚ್ಛಧ್ವಂ ಸಂ ವದಧ್ವಂ ಸಂ ವೋ ಮನಾಂಸಿ ಜಾನತಾಂ ।
ದೇವಾ ಭಾಗಂ ಯಥಾ ಪೂರ್ವೇ ಸಂಜಾನಾನಾ ಉಪಾಸತೇ ।। (ಋ ೧೦-೧೯೧-೨ ಸಾಭಾ)
"ಎಲೈ ಮಾನವರೇ, ನೀವು ಯಾವಾಗಲೂ ಐಕ್ಯಮತ್ಯದಿಂದಿರುತ್ತಾ ಎಲ್ಲಿ ಹೋಗಬೇಕಾದರೂ ಜತೆಯಲ್ಲಿಯೇ ಹೋಗಿರಿ. ಮಾತನಾಡುವಾಗಲೂ ಪರಸ್ಪರ ವಿರೋಧವನ್ನು ಬಿಟ್ಟು ಒಂದೇ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ ಮಾತನಾಡಿರಿ. ಭಿನ್ನಾಭಿಪ್ರಾಯಗಳಿಗೆ ಎಡೆಗೊಡದೆ ನಿಮ್ಮ ಮನಸ್ಸುಗಳು ಒಂದಾಗಿರಲಿ. ಪುರಾತನರಾದ ದೇವತೆಗಳು ಯಾವ ರೀತಿ ಹವಿರ್ಭಾಗವನ್ನು ಐಕ್ಯಮತ್ಯದಿಂದ ಕೂಡಿ ಸ್ವೀಕರಿಸುವರೋ ನೀವು ಅದರಂತೆ ದೇವತಾನುಗ್ರಹದಿಂದ ಪ್ರಾಪ್ತವಾದ ಧನಾದಿಗಳನ್ನು ಸ್ವೀಕರಿಸಿ."

ಸಮಾನೋ ಮಂತ್ರಃ ಸಮಿತಿಃ ಸಮಾನೀ ಸಮಾನಂ ಮನಃ ಸಹ ಚಿತ್ತಮೇಷಾಂ ।
ಸಮಾನಂ ಮಂತ್ರಮಭಿ ಮಂತ್ರಯೇ ವಃ ಸಮಾನೇನ ವೋ ಹವಿಷಾ ಜುಹೋಮಿ ।।(ಋ ೧೦-೧೯೧-೩ ಸಾಭಾ)
"ಯಾವ ರೀತಿಯಾಗಿ ನಿಮ್ಮಲ್ಲಿ ಪರಸ್ಪರ ಏಕಮತ್ಯವಿರುವುದಕ್ಕಾಗಿ ನಿಮ್ಮ ಉದ್ದೇಶವೂ, ನಿಮ್ಮ ಆಪೇಕ್ಷೆಗಳೂ ನಿಮ್ಮ ಅಂತರಂಗದ ಆಲೋಚನೆ ಅಥವಾ ಅಭಿಪ್ರಾಯವೂ ಸಹ ಪರಸ್ಪರ ವಿರೋಧಕ್ಕವಕಾಶವಿಲ್ಲದಂತೆ ಒಂದೇ ವಿಧವಾಗಿರಲಿ ಎಂದರೆ ನಿಮ್ಮ ಮನಃಪ್ರವೃತ್ತಿಯೂ ಒಂದೇ ವಿಧವಾಗಿರಲಿ."

ಸಮಾನೀ ವ ಆಕೂತಿಃ ಸಮಾನಾಹೃದಯಾನಿ ವಃ ।
ಸಮಾನಮಸ್ತು ವೋ ಮನೋ ಯಥಾ ವಃ ಸುಸಹಾಸತಿ ।। (ಋ ೧೦-೧೯೧-೪ ಸಾಭಾ ಭಾವಾರ್ಥ)
"ಎಲೈ ಮಾನವರೇ, ನಿಮ್ಮಲ್ಲಿ ಪರಸ್ಪರ ಐಕ್ಯಮತವಿರುವುದಕ್ಕಾಗಿ ನಿಮ್ಮ ಉದ್ದೇಶವೂ, ನಿಮ್ಮ ಆಪೇಕ್ಷೆಗಳೂ ನಿಮ್ಮ ಅಂತರಂಗದ ಆಲೋಚನೆ ಅಥವಾ ಅಭಿಪ್ರಾಯವೂ ಸಹ ಪರಸ್ಪರ ವಿರೋಧಕ್ಕೆ ಅವಕಾಶವಿಲ್ಲದಂತೆ ಒಂದೇ ವಿಧವಾಗಿರಲಿ ಎಂದರೆ ನಿಮ್ಮ ಮನಃಪ್ರವೃತ್ತಿಯೂ ಒಂದೇ ವಿಧವಾಗಿರಲಿ....."

ಪಂಚ ಜನಾ ಮಮ ಹೋತ್ರಂ ಜುಷತಾಂ ಗೋಜಾತಾ ಉತ ಯೇ ಪಜ್ಞಿಯಾಃ ।
ಪೃಥಿವೀ ನಃ ಪಾರ್ಥಿವಾತ್ಪಾತ್ವಂಹಸೋಅಂತರಿಕ್ಷಂ ದಿವ್ಯಾತ್ಪಾತ್ವಸ್ಮಾನ್ ।।
"ಯಜ್ಞಾರ್ಹನೂ ಅಜ್ಯಾದಿಗಳನ್ನು ಭಕ್ಷಿಸಲು ಉತ್ಪನ್ನರಾಗಿರುವವರೂ ಆದ ಐದು ವಿಧವಾದ ಜನರೂ ನನ್ನ ಹೋತೃಕರ್ಮವನ್ನು ಸೇವಿಸಲಿ. ಪೃಥ್ವಿಯು ನಮ್ಮನ್ನು ಪೃಥ್ವೀಸಂಬಂಧವಾದ ಪಾಪದಿಂದಲೂ, ಅಂತರಿಕ್ಷವು ಅಂತರಿಕ್ಷ ಸಂಬಂಧವಾದ ಪಾಪದಿಂದಲೂ ರಕ್ಷಿಸಲಿ." (೧೦–೫೩–೫ ಸಾಭಾ)
ಮಾನವನು ತನ್ನ ಜಾತಿ ಮತ, ಕುಲ, ಸಂಪ್ರದಾಯ ಮತ್ತು ಧರ್ಮಗಳನ್ನು ಮರೆತು "ನಾನು ಜ್ಯೋತಿಸ್ವರೂಪನು ನನಗೆ ಯಾವ ನಿರ್ಬಂಧನಗಳೂ ಇಲ್ಲ. ನಾನು ಭಗವಂತನ ಅಮೃತ ಪುತ್ರನು" ಎಂದು ಅರಿತುಕೊಳ್ಳಬೇಕಾಗಿದೆ.

ಅಪಾಙ್ ಪ್ರಾಙೇತಿ ಸ್ವಧಯಾ ಗೃಭೀತೋಽಮರ್ತ್ಯೋ ಮರ್ತ್ಯೇನಾ ಸಯೋನಿಃ ।
ತಾ ಶಶ್ವಂತಾ ವಿಷೂಚೀನಾ ವಿಯಂತಾ ನ್ಯ ೩ ನ್ಯಂ (ನಿ ಅನ್ಯಂ) ಚಿಕ್ಯುರ್ನ ನಿ ಚಿಕ್ಯುರನ್ಯಂ।।
(ಋಗ್ವೇದ ೧–೧೬೪–೩೮ ಸಾಭಾ+ಕಶ್ಯಪ್)
"ಮರಣರಹಿತನಾದ (ಹಂಸ ನಾಮಕ) ಆತ್ಮನು ಪ್ರಕೃತಿಯ ಧರ್ಮಕ್ಕೆ ವಶನಾಗಿ ಅಧೋಮುಖನಾಗಿಯೂ, ಊರ್ಧ್ವಮುಖವಾಗಿಯೂ ಹೋಗುತ್ತಾನೆ. ಮರಣದರ್ಮವುಳ್ಳವನು (ಜೀವ) ಮತ್ತು ಮರಣರಹಿತನಾದ (ಹಂಸ ನಾಮಕ) ಆತ್ಮನು ಯಾವಾಗಲೂ ಈ ಲೋಕದಲ್ಲಿ ಒಟ್ಟಿಗೆ ಓಡಾಡುವರಾಗಿಯೂ ಅವರವರ ಕರ್ಮಾನುಭವಗಳಗಾಗಿ ಬೇರೆ ಬೇರೆ ದಾರಿಗಳಲ್ಲಿ ಹೋಗುವವರಾಗಿಯೂ ಇದ್ದಾರೆ. ದೇಹಸಂಬಂದಿಯಾದವನನ್ನು ಜನರು ಅರಿಯಬಲ್ಲರು. ದೇಹಾತಿರಿಕ್ತನಾದವನನ್ನು (ಆತ್ಮನನ್ನು) ಅರಿಯಲಾರರು."

ದ್ಯೌರ್ಮೇ ಪಿತಾ ಜನಿತಾ ನಾಭಿರತ್ರ ಬಂಧುರ್ಮೇ ಮಾತಾ ಪೃಥಿವೀ ಮಹೀಯಂ ।
ಉತ್ತಾನಯೋಶ್ಚಮ್ವೋ ರ್ಯೋನಿರಂತರತ್ರಾ ಪಿತಾ ದುಹಿತುರ್ಗರ್ಭಮಾಧಾತ್ ।। (ಋ ೧–೧೬೪–೩೩)
"ದ್ಯುಲೋಕವು ನನಗೆ ಪಾಲಕವೂ ನನ್ನ ಉತ್ಪತ್ತಿಹೇತುವೂ ಆಗಿದೆ. ನಾಭಿಯು ದ್ಯುಲೋಕ ಮತ್ತು ಪೃಥ್ವಿಯ ಬಂಧನಸ್ಥಾನ ಆಗಿರುವುವೂ, ವಿಸ್ತೃತವಾದುದೂ ಆದ ಈ ಪೃಥ್ವಿಯು ನನಗೆ ಮಾತೃರೂಪಳಾಗಿದ್ದಾಳೆ. ಊರ್ಧ್ವಮುಖವಾಗಿ ವಿಸ್ತೃತವಾದವೂ, ಚಮೂಪಾತ್ರೆಯಂತೆ ಬೊಗಸಾಧನಗಳಾದು ವಿಸ್ತೃತವಾದವೂ ಆದ ಈ ದ್ಯಾವಾಪೃಥ್ವಿಗಳ ಮಧ್ಯಭಾಗದಲ್ಲಿ ಸಕಲಭೂತಗಳಿಗೂ ನಿರ್ಮಾತೃಸ್ಥಾನವಾದ ಅಂತರಿಕ್ಷದಲ್ಲಿ ಆದಿತ್ಯನು ತನ್ನ ದುಹಿತೃವಾದ ಪೃಥ್ವಿಯ ಗರ್ಭರೂಪವಾದ ಉದಕವನ್ನು ಧರಿಸಿದ್ದಾನೆ."

**ಓಂ ಶಾಂತಿಃ ಶಾಂತಿಃ ಶಾಂತಿ**

# ಓಂ
# ಅಗ್ನಿಹೋತ್ರ

## ಪ್ರಸ್ತಾವನೆ

ಸುಪ್ರಾವೀರಸ್ತು ಸ ಕ್ಷಯಃ ಪ್ರ ನು ಯಾಮನ್ತ್ಸುದಾನವಃ ೧

ಯೇ ನೋ ಅಂಹೋಅತಿಪಿಪ್ರತಿ ೧೧ (ಋಗ್ವೇದ ೭-೬೬-೫ ಸಾಭಾ)

"ಎಲೈ ಮಿತ್ರಾವರುಣಾರ್ಯಮರೇ, ನಮ್ಮ ಪಾಪಗಳನ್ನು ಪರಿಹರಿಸಿ ನಮ್ಮನ್ನು ದಾಟಿಸುವ ನೀವು ನಮ್ಮಲ್ಲಿಗೆ ಬಂದು ಹೋದನಂತರ ನಾವು ವಾಸಮಾಡುವ ಗೃಹವು ಯಾವ ಭಯವೂ ಇಲ್ಲದೆ ಸುರಕ್ಷಿತವಾಗುವುದು."

ಅಗ್ನಿಹೋತ್ರವನ್ನು ಮಾಡಿ ಭಗವಂತನ ಅನುಗ್ರಹವನ್ನು ಮೊದಲು ಪಡೆಯಬೇಕು. ಯಜ್ಞದಲ್ಲಿ ಪದಗಳ ಸ್ಪಷ್ಟ ಮಂತ್ರೋಚ್ಚಾರಣೆಯು ಬಹಳ ಪ್ರಮುಖವಾಗಿರುವುದರಿಂದ ಬಲ್ಲವರಿಂದ ಮಂತ್ರಗಳನ್ನು ಕಲಿಯಬೇಕು. ನಾನು ಉದಾತ್ತ ಅನುದಾತ್ತ ಸ್ವರಗಳ ಅನುಕರಣೆ ಮಾಡದೆ ಸ್ಪಷ್ಟ ಪದಗಳ ಉಚ್ಚಾರಣೆ ಮಾಡುತ್ತೇನೆ ಮತ್ತು ದೇವತೆಗಳ ದರ್ಶನ ಹಾಗು ಅನುಗ್ರಹವನ್ನು ಪಡೆದಿದ್ದೇನೆ. ಸೂರ್ಯೋದಯಕ್ಕೆ ೪೦ ರಿಂದ ೪೫ ನಿಮಿಷಕ್ಕೆ ಮೊದಲೇ ನಿತ್ಯಕರ್ಮಗಳನ್ನು ಮುಗಿಸಿ, ಸೂರ್ಯನಿಗೆ ಅರ್ಘ್ಯವನ್ನು ಕೊಟ್ಟು ಗಾಯತ್ರೀ ಉಪಾಸನೆಯನ್ನು ಮಾಡಿ, ಸೂರ್ಯೋದಯದ ನಂತರ ಅಗ್ನಿಹೋತ್ರವನ್ನು ಮಾಡಬೇಕು. ಈ ಕಾಲವು ಬಹಳ ಪ್ರಾಶಸ್ತ್ಯವನ್ನು ಪಡೆದಿದೆ ಮತ್ತು ಅದರ ಫಲವು ಅಗಣಿತವಾಗಿದೆ. ದೇವತೆಗಳೇ ಸ್ವಯಂ ನಮ್ಮ ಮನೆಗಳಿಗೆ ಬಂದು ಸೋಮರಸವನ್ನು ಸ್ವೀಕರಿಸುತ್ತಾರೆ.

ಪವಿತ್ರಾಗ್ನಿಯ ಮುಖಾಂತರ ಭಗವಂತನನ್ನೂ ಮತ್ತು ದೇವತೆಗಳನ್ನೂ ಆಹ್ವಾನಿಸಿ, ದೇವಬಾಷೆಯ ಮಂತ್ರಗಳಿಂದ ಅಗ್ನಿಗೆ ಆಹುತಿಗಳನ್ನು ಅರ್ಪಿಸುವ ಪದ್ಧತಿಯೇ ಅತಿ ಶ್ರೇಷ್ಟವಾದುದು. ಏಕೆಂದರೆ

೧. ದೇವತೆಗಳು ಅಗ್ನಿಯನ್ನು ತಮ್ಮ ಮತ್ತು ಮಾನವರ ಮಧ್ಯೆ ದೇವದೂತನನ್ನಾಗಿ ಮಾಡಿಕೊಂಡಿರುವರು.
೨. ಯಜಮಾನನು ಅಗ್ನಿಯ ಮುಖಾಂತರ ದೇವತೆಗಳನ್ನು ಆಹ್ವಾನಿಸುವನು ಮತ್ತು ಅಗ್ನಿಯು ದೇವತೆಗಳನ್ನು ಯಜಮಾನನ ಬಳಿ ಕರೆತರುವನು. ಮಾನವರು ಅರ್ಪಿಸಿದ ಆಹುತಿಗಳನ್ನು ಅಗ್ನಿಯು ದೇವತೆಗಳಿಗೆ ತಲುಪಿಸುವನು.
೩. ಅವನು ದೈವೀ ಸಂಕಲ್ಪ ಶಕ್ತಿಯಾಗಿರುವುದರಿಂದ ನಮ್ಮನ್ನು ಉನ್ನತಿಯ ಕಡೆ ಕರೆದುಕೊಂಡು ಹೋಗುವನು.
೪. ನಮ್ಮ ಆಧ್ಯಾತ್ಮ ಪ್ರಯಾಣದಲ್ಲಿ ಅಗ್ನಿಯದೇ ಪ್ರಮುಖ ಪಾತ್ರ. ಆದ್ದರಿಂದ ಪೂರ್ವಕಾಲದಿಂದಲೂ ಋಷಿಗಳು ಅಗ್ನಿಯನ್ನು ಉಪಾಸಿಸುತ್ತಿದ್ದರು.
೫. ಅಗ್ನಿಯು ಅಂತರ್‌ಯಜ್ಞದಲ್ಲಿ ಪುರೋಹಿತನ ಪಾತ್ರವನ್ನು ವಹಿಸುವನು.
೬. ಅಗ್ನಿಯು ಸಕಲ ಆಧ್ಯಾತ್ಮಿಕ ರಹಸ್ಯಗಳನ್ನು ಧಾರಣೆಮಾಡಿದ್ದಾನೆ. ಅಗ್ನಿದೇವನು ತನ್ನ ಕೃಪೆಗೆ ಒಳಗಾದ ಮಾನವನನ್ನು ಋಷಿಯನ್ನಾಗಿ ಪರಿವರ್ತಿಸುತ್ತಾನೆ.
೭. ಅಗ್ನಿಯಿಂದ ಪ್ರಾಪ್ತವಾದ ಆಧ್ಯಾತ್ಮಿಕ ಐಶ್ವರ್ಯವು ದಿನೇ ದಿನೇ ವೃದ್ಧಿಸುವಂತಹದು, ಶಾಶ್ವತವಾದುದು ಆಗಿದೆ.

ಸೂರ್ಯೋದಯದ ೪೫ ನಿಮಿಷದ ಮೊದಲು ಸ್ನಾನಾದಿಗಳನ್ನು ಮಾಡಿ ಸಿದ್ಧರಾಗಿ. ಆನಂತರ ಸೂರ್ಯ-ಸವಿತೃದೇವರಿಗೆ ಗಾಯತ್ರೀಮಂತ್ರದಿಂದ ಅರ್ಘ್ಯವನ್ನು ಅರ್ಪಿಸಿ. ಧ್ಯಾನವನ್ನು ಮಾಡಿ. ಸೂರ್ಯೋದಯದ ನಂತರ ಪೂರ್ವಾಭಿಮುಖವಾಗಿ ಅಗ್ನಿಕುಂಡದ ಮುಂದೆ ಕುಳಿತುಕೊಂಡು ಅಗ್ನಿಹೋತ್ರವನ್ನು ಪ್ರಾರಂಭಿಸಬೇಕು.

# ಅಧ್ಯಾಯ ೧:ಅಗ್ನಿಹೋತ್ರದ ಮಹಿಮೆ

ನಾಕಸ್ಯ ಪೃಷ್ಠೇ ಅಧಿ ತಿಷ್ಠತಿ ಶ್ರಿತೋ ಯಃ ಪೃಣಾತಿ ಸ ಹ ದೇವೇಷು ಗಚ್ಛತಿ ।
ತಸ್ಮಾ ಆಪೋ ಘೃತಮರ್ಷಂತಿ ಸಿಂಧವಸ್ತಾಸ್ಮಾ ಇಯಂ ದಕ್ಷಿಣಾ ಪಿನ್ವತೇ ಸದಾ ।। (ಋ ೧-೧೨೫-೫ ಸಾಭಾ)
"ದೇವತೆಗಳನ್ನು ಹವಿರಾದಿಗಳಿಂದ ತೃಪ್ತಿಪಡಿಸಿದರೆ ಮನುಷ್ಯನು ಸ್ವರ್ಗಲೋಕದಲ್ಲಿ ಪೂಜಿತನಾಗುತ್ತಾನೆ. ಅಲ್ಲದೇ ದೇವತೆಗಳಲ್ಲಿ ಒಬ್ಬನಾಗುತ್ತಾನೆ; ಅಂಥವನಿಗೆ ಪ್ರವಾಹ ಸ್ವಭಾವದ ನೀರೂ (ನಮ್ಮ ಶರೀರದಲ್ಲಿ ಹರಿಯುವ ಉದಕಗಳು) ತೇಜೋವಿಷ್ಟವಾಗುತ್ತದೆ; ಭೂಮಿಯೂ ಸಸ್ಯಾದಿಫಲಗಳನ್ನು ಕೊಟ್ಟು ಸರ್ವಕಾಲದಲ್ಲಿಯೂ ಸಂತೋಷವನ್ನು ಕೊಡುತ್ತಾಳೆ.

(ಮೇಲಿನ ಮಂತ್ರವು ಅಗ್ನಿಹೋತ್ರವನ್ನು ಮಾಡಿದಾಗ ಉಂಟಾಗುವ ಫಲವನ್ನು ಕುರಿತು ಹೇಳುತ್ತಿದೆ. ದೇವತೆಗಳ ಆರ್ಶೀವಾದವು ಯಜ್ಞಕುಂಡದ ಸುತ್ತಲಿನ ಪ್ರದೇಶದ ಮೇಲೆ, ಅಲ್ಲಿರುವ ಜನಸಮೂಹ ಮತ್ತು ಯಜಮಾನನ ಮೇಲೆ ಉಂಟುಮಾಡುವ ಪರಿಣಾಮವನ್ನು ಕುರಿತು ಹೇಳುತ್ತಿದೆ.)

ಯಾವ ರೀತಿಯಲ್ಲಿ ಸತ್ಯಯುಗ ಅಥವಾ ದೇವರ ರಾಜ್ಯವನ್ನು ಪೃಥ್ವಿಯ ಮೇಲೆ ಸ್ಥಾಪಿಸಬಹುದು?
ಯಜ್ಞದ ಮುಖಾಂತರ ಸತ್ಯಯುಗ ಅಥವಾ ದೇವರ ರಾಜ್ಯವನ್ನು ಪೃಥ್ವಿಯ ಮೇಲೆ ಸ್ಥಾಪಿಸಬಹುದು.

ಹಿಂದಿನ ಸತ್ಯಯುಗದಲ್ಲಿ ಎಲ್ಲರ ಮನೆಯಲ್ಲೂ ಯಜ್ಞದ ಮುಖಾಂತರ ದೇವತೆಗಳನ್ನು ಆರಾಧಿಸುತ್ತಿದ್ದರು. ಋಷಿಮುನಿಗಳು ತಮ್ಮ ಆಶ್ರಮ ಮಧ್ಯದಲ್ಲಿ ಅಥವಾ ವನದ ಬಯಲು ಪ್ರದೇಶದಲ್ಲಿ ಯಜ್ಞವನ್ನು ಮಾಡುತ್ತಿದ್ದರು. ಆಗ ಪೃಥ್ವಿಯು ಶಾಂತವಾತಾವರಣವನ್ನು ಹೊಂದಿತ್ತು. ಸಕಲ ಜನರು ರೋಗರುಜಿನಾದಿಗಳಿಲ್ಲದೆ ಧೀರ್ಘಕಾಲ ಜೀವಿಸುತ್ತಿದ್ದರು. ಯುದ್ಧಾದಿಗಳು ಇರಲೇ ಇಲ್ಲ. ಕ್ರೂರಪ್ರಾಣಿಗಳೂ ಸಹ ಇತರ ಪ್ರಾಣಿಗಳ ಜೊತೆ ಸಹಬಾಳ್ವೆ ಮಾಡುತ್ತಿದ್ದವು. ದೇವಭಾಷೆಯು ಪೃಥ್ವಿಯ ಮೇಲೆಲ್ಲಾ ಹರಡಿತ್ತು. (ದಿ ಟವರ್ ಆಫ್ ಬೇಬಲ್ ಕಥೆಯನ್ನು ಓದಿರಿ.) ಆಗ ಧರ್ಮವು ಪರಿಪೂರ್ಣಸ್ಥಿತಿಯಲ್ಲಿತ್ತು ಎಂದು ಪುರಾಣಗಳು ದಾಖಲಿಸಿವೆ.

## ಅಗ್ನಿಹೋತ್ರ ಅಥವಾ ಯಜ್ಞದ ಅಧಿದೇವತೆ ಅಗ್ನಿ

ಅಗ್ನಿಹೋತ್ರವು ಪ್ರತಿದಿನವೂ ಸಂಧ್ಯಾಕಾಲದಲ್ಲಿ ಅಂದರೆ ಸೂರ್ಯ ಉದಯಿಸುವ ಮತ್ತು ಪಶ್ಚಿಮದಲ್ಲಿ ಮುಳುಗುವ ವೇಳೆಯಲ್ಲಿ ದೇವತೆಗಳನ್ನು ಆಹ್ವಾನಿಸಿ ಹವಿಸ್ಸನ್ನು ಅರ್ಪಿಸಿ ಅವರ ಅನುಗ್ರಹಕ್ಕೆ ಪಾತ್ರವಾಗುವುದಾಗಿದೆ. ಆದರೆ ಯಜ್ಞವು ಯಜಮಾನನು ತನ್ನ ಆಸೆಯನ್ನು ಈಡೇರಿಸಿಕೊಳ್ಳಲು ಸಂಕಲ್ಪಮಾಡಿ ಅದನ್ನು ಪಡೆಯಲು ನಿರ್ದಿಷ್ಟ ದೇವತೆಯನ್ನು ಅಥವಾ ಸಕಲ ದೇವತೆಗಳನ್ನು ಆಹ್ವಾನ ಮಾಡಿ ಹವಿಸ್ಸನ್ನು ಅರ್ಪಿಸಬೇಕು. ಅಗ್ನಿಹೋತ್ರವನ್ನು ತ್ರಿಕಾಲದಲ್ಲಿ ಬೆಳಗ್ಗೆ, ಮಧ್ಯಾನ್ಹ ಮತ್ತು ಸಂಧ್ಯಾಕಾಲದಲ್ಲಿ ಮಾಡಲಾಗುತ್ತದೆ.

ಅಗ್ನಿಹೋತ್ರದ ಮೂಲಕ ದೇವತೆಗಳನ್ನು ಮತ್ತು ಇಂದ್ರದೇವರನ್ನು ಆಹ್ವಾನಿಸಿ ಘೃತವನ್ನು ಹವಿಸ್ಸಿನ ರೂಪದಲ್ಲಿ ಅರ್ಪಿಸಿದಾಗ, ಘೃತವು ಅಗ್ನಿಯಲ್ಲಿ ದಹಿಸಿ, ಸೂರ್ಯನ ಕಿರಣಗಳಿಂದ ಸಂಸ್ಕರಿಸಲ್ಪಟ್ಟು ಸೋಮರಸವು ಹಿರಣ್ಯ ಪಾತ್ರೆಯಲ್ಲಿ ದೇವತೆಗಳಿಗೆ ತಲುಪುತ್ತದೆ. ದೇವತೆಗಳು ಹವಿಸ್ಸನ್ನು ಸ್ವೀಕರಿಸಿ ಯಜಮಾನನನ್ನು ಅನುಗ್ರಹಿಸುತ್ತಾರೆ. ಅಗ್ನಿದೇವತೆಯ ಮಹಿಮೆಯನ್ನು ಅರಿಯಲು ಈ ಕೆಳಗಿನ ಮಂತ್ರಗಳನ್ನು ನೋಡಿ.

ತ್ವಾಮಗ್ನೇ ಪ್ರಥಮಮಾಯುಮಾಯವೇ ದೇವಾ ಅಕೃಣನ್ನಹುಷಸ್ಯ ವಿಶ್ಪತಿಂ ।
ಇಳಾಮಕೃಣ್ವನ್ಮನುಷಸ್ಯ ಶಾಸನೀಂ ಪಿತುರ್ಯತ್ಪುತ್ರೋ ಮಮಕಸ್ಯ ಜಾಯತೇ ।। (ಋ ೧-೩೧-೧೧ ಆರ್ ಎಲ್ ಕ)
"ಎಲೈ ಅಗ್ನಿಯೇ, ದೇವತೆಗಳು ಮನುಷ್ಯನಿಗಾಗಿ, ನಿನ್ನನ್ನು ಮೊದಲ ಮನುಷ್ಯನನ್ನಾಗಿ ಮಾಡಿ, ಮನುಷ್ಯನ ರಾಜನನ್ನಾಗಿ ಮಾಡಿದರು. ನನ್ನ ಪಾಲಕನ ಅಂಶಸಂಭೂತನಾಗಿ ಅಗ್ನಿಯು ಜನಿಸಿದಾಗ, ಅವನನ್ನು ದೇವತೆಗಳು ಮನುಷ್ಯರಿಗೆ ಉಪದೇಶ ಕೊಡುವ ವಾಣಿಯಾದ ಪಶ್ಯಂತೀ ವಾಣಿಯಾಗಿಸಿದರು."

ದೇವಾಸಸ್ತ್ವಾ ವರುಣೋ ಮಿತ್ರೋ ಅರ್ಯಮಾ ಸಂ ದೂತಂ ಪ್ರತ್ನಮಿಂದತೇ।
ವಿಶ್ವಂ ಸೋ ಅಗ್ನೇ ಜಯತಿ ತ್ವಯಾ ಧನಂ ಯಸ್ತೇ ದದಾಶ ಮರ್ತ್ಯಃ ।। (ಋ ೧-೩೬-೪ ಸಾಭಾ)
"ಎಲೈ ಅಗ್ನಿಯೇ, ನೀನು ಬಹಳ ಪುರಾತನನು. ಮೊದಲಿನಿಂದಲೂ ದೇವದೂತನು. ವರುಣ, ಮಿತ್ರ, ಮತ್ತು ಆರ್ಯಮಾ ಎಂಬ ಮೂರು ದೇವತೆಗಳೂ ಸಹ ನಿನ್ನನ್ನು ಪ್ರಜ್ವಲಿಸುವಂತೆ ಮಾಡುತ್ತಾರೆ. ಯಾರು ನಿನ್ನನ್ನು ಉದ್ದೇಶಿಸಿ ಯಜ್ಞ ಮಾಡಿ ಹವಿಸ್ಸನ್ನು ಅರ್ಪಿಸುವರೋ ಅವರು ನಿನ್ನ ಸಹಾಯದಿಂದ ಸಿದ್ಧಿಯನ್ನು ಪಡೆದು ಸರ್ವಸಂಪತ್ತನ್ನೂ ಪಡೆಯುತ್ತಾರೆ."

ಸುಪ್ರಾವೀರಸ್ತು ಸ ಕ್ಷಯಃ ಪ್ರ ನು ಯಾಮನ್ತ್ಸುದಾನವಃ ।

ಯೇ ನೋ ಅಂಹೋಅತಿಪಿಪ್ರತಿ ೧೧ (ಋಗ್ವೇದ ೭-೬೬-೫ ಸಾಭಾ)
"ಎಲೈ ಮಿತ್ರಾವರುಣಆರ್ಯಮರೇ, ನಮ್ಮ ಪಾಪಗಳನ್ನು ಪರಿಹರಿಸಿ ನಮ್ಮನ್ನು ದಾಟಿಸುವ ನೀವು ನಮ್ಮಲ್ಲಿಗೆ ಬಂದು ಹೋದ ನಂತರ ನಾವು ವಾಸಮಾಡುವ ಗೃಹವು ಯಾವ ಭಯವೂ ಇಲ್ಲದೇ ಸುರಕ್ಷಿತವಾಗುವುದು.

ಮೂರ್ಧಾದಿವೋ ನಾಭಿರಗ್ನಿಃ ಪೃಥಿವ್ಯಾ ಅಥಾಭವದರತೀ ರೋದಸ್ಯೋಃ ೧
ತಂ ತ್ವಾ ದೇವಾಸೋಽಜನಯಂತ ದೇವಂ ವೈಶ್ವಾನರ ಜ್ಯೋತಿರಿದಾರ್ಯಾಯ ೧೧ (ಋ ೧-೫೯-೨ ಸಾಭಾ)
ಅಗ್ನಿದೇವನು ದ್ಯುಲೋಕಕ್ಕೆ ಶಿರಸ್ಸಿನಂತೆ ಪ್ರಧಾನನಾಗಿಯೂ ಭೂಲೋಕಕ್ಕೆ ಹೊಕ್ಕಳಿನಂತೆ ಸಂರಕ್ಷಕನಾಗಿಯೂ ಮತ್ತು ದ್ಯಾವಾಪೃಥಿವಿಗಳೆರಡಕ್ಕೂ ಅಧಿಪತಿಯಾಗಿಯೂ ಆಗಿದ್ದಾನೆ. ಎಲೈ ಅಗ್ನಿಯೇ, ನೀನು ದಾನಾದಿಗುಣಗಳಿಂದ ಕೂಡಿದವನು. ನಿನ್ನನ್ನು ಸಕಲ ದೇವತೆಗಳೂ ಸಹ ಪ್ರಾಜ್ಞನಾದ ಯಜಮಾನನಿಗಾಗಿ ಜ್ಯೋತಿರೂಪದಲ್ಲಿ ಸೃಷ್ಟಿಸಿದರು."

**ಭಗವಂತನನ್ನು ಮತ್ತು ದೇವತೆಗಳನ್ನು ಆರಾಧಿಸುವ ಶ್ರೇಷ್ಟವಾದ ಮಾರ್ಗವು ಯಾವುದು?**

ಪವಿತ್ರಾಗ್ನಿಯ ಮುಖಾಂತರ ಭಗವಂತನನ್ನೂ ಮತ್ತು ದೇವತೆಗಳನ್ನೂ ಆಹ್ವಾನಿಸಿ, ದೇವಭಾಷೆಯ ಮಂತ್ರಗಳಿಂದ ಅಗ್ನಿಗೆ ಆಹುತಿಗಳನ್ನು ಅರ್ಪಿಸುವ ಪದ್ಧತಿಯೇ ಅತಿ ಶ್ರೇಷ್ಟವಾದುದು. ಏಕೆಂದರೆ

೧. ದೇವತೆಗಳು ಅಗ್ನಿಯನ್ನು ತಮ್ಮ ಮತ್ತು ಮಾನವರ ಮಧ್ಯೆ ದೇವದೂತನನ್ನಾಗಿ ಮಾಡಿಕೊಂಡಿರುವರು.
೨. ಅಗ್ನಿಯು ಯಜ್ಞದಲ್ಲಿ ಪುರೋಹಿತನ ಪಾತ್ರವನ್ನು ವಹಿಸುವನು.
೩. ಯಜಮಾನನು ಅಗ್ನಿಯ ಮುಖಾಂತರ ದೇವತೆಗಳನ್ನು ಆಹ್ವಾನಿಸುವನು ಮತ್ತು ಅಗ್ನಿಯು ದೇವತೆಗಳನ್ನು ಯಜಮಾನನ ಬಳಿ ಕರೆತರುವನು. ಮಾನವರು ಅರ್ಪಿಸಿದ ಆಹುತಿಗಳನ್ನು ಅಗ್ನಿಯು ದೇವತೆಗಳಿಗೆ ತಲುಪಿಸುವನು.
೪. ಅವನು ದೈವೀ ಸಂಕಲ್ಪ ಶಕ್ತಿಯಾಗಿರುವುದರಿಂದ ನಮ್ಮನ್ನು ಉನ್ನತಿಯ ಕಡೆ ಕರೆದುಕೊಂಡು ಹೋಗುವನು.
೫. ನಮ್ಮ ಆಧ್ಯಾತ್ಮ ಪ್ರಯಾಣದಲ್ಲಿ ಅಗ್ನಿಯದೇ ಪ್ರಮುಖ ಪಾತ್ರ. ಆದ್ದರಿಂದ ಪೂರ್ವಕಾಲದಿಂದಲೂ ಋಷಿಗಳು ಅಗ್ನಿಯನ್ನು ಉಪಾಸಿಸುತ್ತಿದ್ದರು.
೬. ಅಗ್ನಿಯು ಸಕಲ ಆಧ್ಯಾತ್ಮಿಕ ರಹಸ್ಯಗಳನ್ನು ಧಾರಣೆಮಾಡಿದ್ದಾನೆ. ಅಗ್ನಿದೇವನು ತನ್ನ ಕೃಪೆಗೆ ಒಳಗಾದ ಮಾನವನನ್ನು ಋಷಿಯನ್ನಾಗಿ ಪರಿವರ್ತಿಸುತ್ತಾನೆ.
೭. ಅಗ್ನಿಯಿಂದ ಪ್ರಾಪ್ತವಾದ ಆಧ್ಯಾತ್ಮಿಕ ಐಶ್ವರ್ಯವು ದಿನೇ ದಿನೇ ವೃದ್ಧಿಸುವಂತಹದು, ಶಾಶ್ವತವಾದುದು ಆಗಿದೆ.

ಪ್ರಥಮ ದೇವವಾಣಿಯಾದ ಋಗ್ವೇದದ ಪ್ರಮುಖ ಧ್ಯೇಯವಾದ ಅಗ್ನಿಹೋತ್ರಾದಿಗಳಲ್ಲಿ ಅಗ್ನಿಯದೇ ಪ್ರಮುಖ ಪಾತ್ರವಾಗಿದೆ. ವೇದಗಳಲ್ಲಿ ಇಂದ್ರನ ತರುವಾಯ ಬಹಳಷ್ಟು ಸೂಕ್ತಗಳು ಅಗ್ನಿಯ ಕುರಿತದ್ದಾಗಿದೆ. ಅಗ್ನಿದೇವನ ಅನುಗ್ರಹವನ್ನು ಪಡೆದವನು ನಿಜವಾಗಿಯೂ ಧನ್ಯನು. ಏಕೆಂದರೆ ಅಗ್ನಿಯು ನಮ್ಮಲ್ಲಿರುವ ಅಸುರೀ ಶಕ್ತಿಗಳನ್ನು ನಿಗ್ರಹಿಸುವುದಲ್ಲದೆ ನಮ್ಮನ್ನು ಸರಿಯಾದ ದಾರಿಯಲ್ಲಿ ಕರೆದೊಯ್ಯುತ್ತಾನೆ. ನಮ್ಮ ಸಂಕಲ್ಪ ಶಕ್ತಿಯನ್ನು ವೃದ್ಧಿಮಾಡುತ್ತಾನೆ. ನಮ್ಮ ಆಧ್ಯಾತ್ಮ ಪ್ರಯಾಣದಲ್ಲಿ ಅಗ್ನಿಯದೇ ಪ್ರಮುಖ ಪಾತ್ರ. ಆದ್ದರಿಂದ ಪೂರ್ವಕಾಲದಿಂದಲೂ ಋಷಿಗಳು ಅಗ್ನಿಯನ್ನು ಉಪಾಸಿಸುತ್ತಿದ್ದರು.

ಅಗ್ನಿಯು ಅನಾದಿಕಾಲದಲ್ಲಿಯೇ ಜನ್ಮ ತಾಳಿರುವುದರಿಂದ ಅವನು ನಮ್ಮೆಲ್ಲರ ಪೂರ್ವಾಪರಗಳನ್ನು ತಿಳಿದಿರುವನು. ಆದುದರಿಂದ ಅಗ್ನಿಯನ್ನು ಜಾತವೇದ ಎಂದು ಕರೆಯುತ್ತಾರೆ. ಅವನು ದೈವೀ ಸಂಕಲ್ಪ ಶಕ್ತಿಯಾಗಿರುವುದರಿಂದ ನಮ್ಮನ್ನು ಉನ್ನತಿಯ ಕಡೆ ಕರೆದುಕೊಂಡು ಹೋಗುವನು. ಅಗ್ನಿಯು ಯಜ್ಞಕುಂಡದಲ್ಲಿ ಶುಭ್ರವಾದ ಕಾಂತಿಯಿಂದ ಜಾಜ್ವಲ್ಯಮಾನವಾದ ಜ್ವಾಲೆಗಳಿಂದ ಕಂಗೊಳಿಸುತ್ತಾನೆ. ನಿಜವಾದ ಅರ್ಥದಲ್ಲಿ ಅಗ್ನಿಯೇ ಯಜ್ಞದ ಪುರೋಹಿತನು, ಋತ್ವಿಜನು ಆಗಿರುವನು. ಅಗ್ನಿಯನ್ನು ಋತ್ವಿಜನಾಗೆಂದು ಪ್ರಾರ್ಥಿಸಿದ ಕೂಡಲೆ ನಾಲ್ವರು ಪುರೋಹಿತರು ನಾಭಿಯಲ್ಲಿ ಅಥವಾ ಬರ್ಹಿ ಅಗ್ನಿಕುಂಡದ ಸುತ್ತಲೂ ಪ್ರಕಟರಾಗುತ್ತಾರೆ. ನಾವು ಮಂತ್ರವನ್ನು ಉಚ್ಚರಿಸುತ್ತಿದ್ದರೂ ಪುರೋಹಿತರು ಉಚ್ಚರಿಸುವಂತೆ ನಮಗೆ ಕಾಣುವುದು. ಊರ್ಧ್ವಮುಖವಾಗಿ ಉರಿಯುವ ಅಗ್ನಿಜ್ವಾಲೆಯು ಯಜಮಾನನು ಅರ್ಪಿಸಿದ ಆಹುತಿಗಳನ್ನು ದೇವತೆಗಳಿಗೆ ತಲುಪಿಸುತ್ತಾನೆ.

ನಿ ತ್ವಾ ಹೋತಾರಮೃತ್ವಿಜಂ ದಧಿರೇ ವಸುವಿತ್ತಮಂ ೧
ಶ್ರುತ್ಕರ್ಣಂ ಸಪ್ರಥಸ್ತಮಂ ವಿಪ್ರಾ ಅಗ್ನೇ ದಿವಿಷ್ಟಿಷು ೧೧ (ಋ ೧-೪೫-೭ ಸಾಭಾ)
"ಓ ಅಗ್ನಿಯೇ, ಹೋತಾರನೂ (ದೇವತೆಗಳನ್ನು ಕರೆಯುವವನು) ಋತ್ವಿಜನೂ (ಮಂತ್ರ ಪಠಣ ಮಾಡುವವನು) ನೀನು. ಉತ್ಕೃಷ್ಟವಾದ ಸಂಪತ್ತಿನ ಜ್ಞಾನವುಳ್ಳವನೂ, ಸೂಕ್ಷ್ಮವಾಗಿ ಕೇಳುವ ಕಿವಿಯುಳ್ಳವನೂ, ಅತ್ಯಂತ ಪ್ರಸಿದ್ಧನೂ ಆದ ನಿನ್ನನ್ನು ಮೇಧಾವಿಗಳು ಯಾಗಗಳಲ್ಲಿ ಸ್ಥಾಪಿಸಿದ್ದಾರೆ."

ವಯಾ ಇದಗ್ನೇ ಅಗ್ನಯಸ್ತೇಅನ್ಯೇ ತ್ವೇ ವಿಶ್ವೇ ಅಮೃತಾ ಮಾದಯಂತೇ।
ವೈಶ್ವಾನರ ನಾಭಿರಸಿ ಕ್ಷಿತಿನಾಂ ಸ್ಥೂಣೇವ ಜನಾ ಉಪಮಿದ್ಯಯಂಥ ।। (ಋ ೧-೫೯-೧ ಸಾಭಾ)
"ಓ ಅಗ್ನಿ ದೇವನೇ, ವಿಶ್ವದಲ್ಲಿ ಯಾವ ಯಾವ ಅಗ್ನಿಗಳಿರುವರೋ ಅವರೆಲ್ಲರೂ ನಿನ್ನ ಶಾಖೆಗಳೇ ಆಗಿರುವರು. ನೀನಿರಲು ಅಮರರಾದ ಸಮಸ್ತ ದೇವತೆಗಳೂ ಸಂತೋಷಪಡುತ್ತಾರೆ. ನೀನು ಸಕಲ ಮಾನವರಲ್ಲೂ ನಾಭಿಯಲ್ಲಿ ಕೇಂದ್ರಿತನಾಗಿದ್ದೀಯೇ. ಆದ್ದರಿಂದಲೇ ಆಳವಾಗಿ ನೆಟ್ಟ ಸ್ತಂಭವು ಮನೆಯ ಮೇಲ್ಚಾವಣಿಯನ್ನು ಭದ್ರವಾಗಿ ಹಿಡಿದಿರುವಂತೆ ನೀನು ಮನುಷ್ಯರಿಗೆಲ್ಲಾ ಅವಲಂಬನವನ್ನು ಕೊಟ್ಟು ಹಿಡಿದು ನಿಲ್ಲಿಸಿದ್ದೀಯೆ."

ನೂ ಚಿತ್ರಹೋಜಾ ಅಮೃತೋ ನಿ ತುಂದತೇ ಹೋತಾ ಯದ್ದೂತೋ ಅಭವದ್ವಿವಸ್ವತಃ ।
ವಿ ಸಾಧಿಷ್ಠೇಭಿಃ ಪಥಿಭೀ ರಜೋ ಮಮ ಆ ದೇವತಾತಾ ಹವಿಷಾ ವಿವಾಸತಿ ।। (ಋ ೧-೫೮-೧ ಸಾಭಾ)
"(ಮಿತ್ರಾವರುಣರ) ಘರ್ಷಣದಿಂದ ಉತ್ಪನ್ನನಾದವನೂ, ಅಮೃತಸ್ವರೂಪನೂ ಆದ ಅಗ್ನಿಯು ಜಾಗ್ರತೆಯಾಗಿ ಆವಿರ್ಭವಿಸುತ್ತಾನೆ. ದೇವತೆಗಳನ್ನು ಯಜ್ಞಕ್ಕೆ ಕರೆಯುವ ಅಗ್ನಿಯು ಯಾವಾಗ ಯಜಮಾನನ ದೂತನಾದನೋ ಆಗ ಅನುಕೂಲಗಳಾದ ದಾರಿಯಿಂದ ಸಂಚರಿಸುತ್ತಾ ಅಂತರಿಕ್ಷವನ್ನು ಬೆಳಗಿದ್ದಾನೆ ಮತ್ತು ಯಜ್ಞದಲ್ಲಿ ಹವಿಸ್ಸನಿಂದ ದೇವತೆಗಳನ್ನು ಪೂಜಿಸುತ್ತಾನೆ. "

ಅಗ್ನಿಯು ದೇವತೆಗಳ ಪ್ರಥಮ ಸೃಷ್ಟಿಯಾಗಿರುವ ಕಾರಣದಿಂದ ಅವನು ಯಜಮಾನನ ದೇವದೂತನಾಗಿದ್ದಾನೆ ಮತ್ತು ದೇವತೆಗಳನ್ನು ಯಜ್ಞವೇದಿಕೆಯ ಬಳ ಬರುವಂತೆ ಕರೆತರುತ್ತಾನೆ. ಅಗ್ನಿಯ ಆಹ್ವಾನವನ್ನು ಸ್ವೀಕರಿಸಿ ದೇವತೆಗಳು ಸಂತೋಷದಿಂದ ಯಜ್ಞದ ಬಳ ಬರುತ್ತಾರೆ, ಯಜಮಾನನನ್ನು ಆಶೀರ್ವದಿಸುತ್ತಾರೆ, ಅನುಗ್ರಹಿಸುತ್ತಾರೆ. ಅಗ್ನಿಯು ಸಕಲ ಆಧ್ಯಾತ್ಮಿಕ ರಹಸ್ಯಗಳನ್ನು ಧಾರಣೆಮಾಡಿದ್ದಾನೆ. ಅಗ್ನಿದೇವನು ತನ್ನ ಕೃಪೆಗೆ ಒಳಗಾದ ಮಾನವನನ್ನು ಋಷಿಯನ್ನಾಗಿ ಪರಿವರ್ತಿಸುತ್ತಾನೆ ಮತ್ತು ಅಮರತ್ತ್ವವನ್ನು ಅನುಗ್ರಹಿಸುತ್ತಾನೆ.

ಈ ಕಾರಣಕ್ಕಾಗಿ ವೈದಿಕರು ಪ್ರಾಚೀನ ಕಾಲದಿಂದಲೂ ಅಗ್ನಿಯ ಮುಖಾಂತರ ದೇವತೆಗಳನ್ನು ಆರಾಧಿಸುತ್ತಿದ್ದರು. ಅಗ್ನಿಯಿಂದ ಪ್ರಾಪ್ತವಾದ ಆಧ್ಯಾತ್ಮಿಕ ಐಶ್ವರ್ಯವು ದಿನೇ ದಿನೇ ವೃದ್ಧಿಸುವಂತಹದು, ಶಾಶ್ವತವಾದುದು ಆಗಿದೆ. ಅಗ್ನಿಯು ಯಜ್ಞವನ್ನು ಮತ್ತು ಋಷಿಯನ್ನು ಕೇವಲ ರಕ್ಷಿಸುವುದಷ್ಟೇ ಅಲ್ಲ, ಸಂಪೂರ್ಣ ಜವಾಬ್ದಾರಿಯನ್ನು ತಾನೇ ವಹಿಸಿಕೊಳ್ಳುತ್ತಾನೆ. ಅಗ್ನಿಯು ಋಷಿಗಳಿಗೆ ಅತೀಂದ್ರಿಯ ಶಕ್ತಿಗಳನ್ನು ಅನುಗ್ರಹಿಸುತ್ತಾನೆ. ಅವನು ಸರ್ವಜ್ಞನು, ಗುರಿಯನ್ನು ಸಾಧಿಸಲು ಬೇಕಾದ ಸಂಕಲ್ಪ ಶಕ್ತಿಯನ್ನು ಅನುಗ್ರಹಿಸುವನು. ಆದ್ದರಿಂದ ಯಜಮಾನನ ಬುದ್ಧಿಪೂರ್ವಕವಾದ ಶರಣಾಗತಿಯಿಂದ ಅಮರತ್ವವನ್ನು ಅನುಗ್ರಹಿಸುವನು.

ಅಗ್ನಿಯ ಉಪಾಸನೆಯನ್ನು ಒಂದು ಪ್ರಯಾಣಕ್ಕೆ ಹೋಲಿಸುತ್ತಾರೆ. ವ್ಯಾಪಾರಸ್ಥರು ಹಡಗಿನಲ್ಲಿ ಪ್ರಯಾಣ ಮಾಡಿ ದೂರದ ದೇಶಗಳಿಗೆ ಹೋಗಿ ಅಲ್ಲಿಂದ ಅಮೂಲ್ಯವಾದ ವಸ್ತುವನ್ನು ತರುವಂತೆ, ಅಗ್ನಿಯ ಉಪಾಸನೆಯಿಂದ ದೈವೀಲೋಕದಿಂದ ಅಮೂಲ್ಯವಾದ ಆಧ್ಯಾತ್ಮಿಕ ರತ್ನಗಳನ್ನು ತರುವನು. ಹಾಗೆಯೇ ಅಗ್ನಿಯನ್ನು ದೋಣಿಯ ನಾವಿಕನಿಗೆ ಹೋಲಿಸಿದ್ದಾರೆ. ಹೇಗೆ ನಾವಿಕನು ಪ್ರಯಾಣಿಕರನ್ನು ನದಿಯ ಒಂದು ದಡದಿಂದ ಇನ್ನೊಂದು ದಡಕ್ಕೆ ಸುರಕ್ಷಿತವಾಗಿ ಸೇರಿಸುವನೋ, ಆ ರೀತಿಯಾಗಿ ಅಗ್ನಿಯು ಉಪಾಸಕನನ್ನು ಸುರಕ್ಷಿತವಾಗಿ ಉನ್ನತ ಗಿರಿಶಿಖರದಲ್ಲಿರುವ ಸ್ವರ್ಗಕ್ಕೆ ಕರೆದುಕೊಂಡು ಹೋಗಿ ಅಮರತ್ವವನ್ನು ಅನುಗ್ರಹಿಸುತ್ತಾನೆ.

ಹೇಗೆ ಅಗ್ನಿಯ ಜ್ವಾಲೆಗಳು ಊರ್ಧ್ವಗಮನ ಉಳ್ಳದ್ದಾಗಿದೆಯೋ ಅದೇ ರೀತಿ ನಮ್ಮ ಪ್ರಯಾಣವು ಊರ್ಧ್ವಗಮನವಾಗಿರುತ್ತದೆ. ಏಕೆಂದರೆ ಸತ್ಯವೇ ಅಗ್ನಿಯ ನಿಜಧಾಮವಾಗಿದೆ. ಇಂದ್ರನ ಉರುಲೋಕವು ದಿವ್ಯಜ್ಯೋತಿಯಾಗಿರುವುದರಿಂದ, ಅದು ಅಗ್ನಿಯೇ ಆಗಿದೆ. ಈಗ ಅಗ್ನಿಯ ಕೆಲವೊಂದು ಮಂತ್ರಗಳನ್ನು ನೋಡೋಣ.

ವಿ ಶ್ರಯಂತಾಮೃತಾವೃಧೋ ದ್ವಾರೋ ದೇವೀರಸಶ್ಚತಃ ।
ಅದ್ಯಾ ನೂನಂ ಚ ಯಷ್ಟವೇ ।। (ಋ ೧-೧೩-೬ ಸಾಭಾ)
"ಯಾಗಶಾಲೆಯ ದ್ವಾರಗಳು ಚೆನ್ನಾಗಿ ಬೆಳಕನ್ನುಂಟುಮಾಡಿ ಯಜ್ಞವು ನಡೆಯುವುದಕ್ಕೆ ಸಹಾಯ ಭೂತವಾಗಿರುವವು. ಇದುವರೆಗೂ ಯಾರೂ ಯಜ್ಞಶಾಲೆಯನ್ನು ಪ್ರವೇಶಿಸಿಲ್ಲ. ಇಂತಹ ಯಜ್ಞಶಾಲೆಯ ಬಾಗಿಲುಗಳು ನಾವು ಮಾಡುವ ಯಜ್ಞಕ್ಕಾಗಿ ಈಗಲೇ ತಡವಿಲ್ಲದೇ ತೆರೆಯಲ್ಪಡಲಿ."

ಏನೀ ಮಂತ್ರದ ಅರ್ಥ? ಇದುವರೆಗೂ ಯಾರೂ ಸಹ ಅಂತರ್‌ಯಜ್ಞವನ್ನು ಮಾಡಿಲ್ಲವೇ? ಇದಕ್ಕೆ ಕಾರಣ ಮೊದಲೇ ಹೇಳಿದ ಹಾಗೆ ವೇದದ ಮೇಲೆ ಭಗವಂತನ ಪರದೆಯಿರುವುದು. ಪೃಥ್ವಿಯ ಯಜ್ಞಶಾಲೆಯನ್ನು ಅನೇಕರು ಪ್ರವೇಶಿಸಿರುವರು ಆದರೆ ವೈದಿಕರಿಗೆ ಅಂತರ್‌ಯಜ್ಞ ಮಾಡುವ ವಿದಾನವು ತಿಳಿದಿಲ್ಲವೆಂದು ಭಾವಿಸುತ್ತೇನೆ.

"ಸ್ತುತಿಯಿಂದ ತಿಳಿಯಲ್ಪಡತಕ್ಕ ಅಗ್ನಿಯೇ, ಯಜಮಾನನ ಯಜ್ಞ ಕರ್ಮಸಿದ್ಧಿಗಾಗಿ ನೀನು ದೇವಯಜ್ಞ ಪ್ರದೇಶವನ್ನು ಪ್ರವೇಶಿಸು. ದರ್ಶನೀಯನಾದ ರುದ್ರನಿಗಾಗಿ ಯಜಮಾನನು ಸಂತೋಷದಾಯಕವಾದ ಸ್ತೋತ್ರವನ್ನು ಅರ್ಪಿಸುತ್ತಾನೆ." (೧–೨೭–೯ ಸಾಭಾ)

(ದೇವತೆಗಳು ಕೇವಲ ಸ್ತುತಿಯಿಂದ ಮಾತ್ರ ಸಂತೋಷಗೊಂಡು ಸಾಧಕನಿಗೆ ಪ್ರಕಟವಾಗುವರು, ಧ್ಯಾನಜಪತಪಾದಿಗಳಿಂದಾಗಲಿ ಅಲ್ಲ)

ಸುಸಮಿದ್ಧೋ ನ ಆ ವಹ ದೇವಾನ್ ಅಗ್ನೇ ಹವಿಷ್ಮತೇ ।
ಹೋತಃ ಪಾಕ ಯಕ್ಷಿ ಚ ॥ (ಋ ೧–೧೩–೧ ಸಾಭಾ)

"ಎಲೈ ಅಗ್ನಿಯೇ, ಚೆನ್ನಾಗಿ ಉದ್ದೀಪನಗೊಳಿಸಲ್ಪಟ್ಟ ನೀನು ಹವಿಸ್ಸನ್ನು ಸಿದ್ಧಪಡಿಸಿಕೊಂಡು ಇರುವ ಯಜಮಾನನಿಗೆ ಅನುಗ್ರಹ ಮಾಡುವುದಕ್ಕಾಗಿ ದೇವತೆಗಳನ್ನು ಇಲ್ಲಿಗೆ ಕರೆದುಕೊಂಡು ಬಾ ಮತ್ತು ಯಜ್ಞವನ್ನು ನೆರವೇರಿಸು,"

ಅಗ್ನೇ ಸುಖತಮೇ ರಥೇ ದೇವಾನ್ ಈಳಿತ ಆ ವಹ ।
ಅಸಿ ಹೋತಾ ಮನುರ್ಹಿತಃ ॥ (ಋ ೧–೧೩–೪ ಸಾಭಾ)

"ಎಲೈ ಅಗ್ನಿಯೇ ನೀನು ನಮ್ಮಿಂದ ಸ್ತುತಿಸಲ್ಪಡುವವನು. ಇಂತಹ ನೀನು ನಿನ್ನ ಪರಮ ಸುಖವಾದ ರಥದಲ್ಲಿ ದೇವತೆಗಳನ್ನು ಕುಳ್ಳಿರಿಸಿಕೊಂಡು ಇಲ್ಲಿಗೆ ಕರೆದುಕೊಂಡು ಬಾ. ಏತಕ್ಕೆಂದರೆ ನಿನ್ನನ್ನು ಯಜಮಾನನು ದೇವತೆಗಳನ್ನು ಆಹ್ವಾನ ಮಾಡಲು ಹೋತೃವಾಗಿ ಸ್ಥಾಪಿಸಿರುವನು."

ಅಗ್ನಿಮಗ್ನಿಂ ಹವೀಮಭಿಃ ಸದಾ ಹವಂತ ವಿಶ್ಪತಿಂ ।
ಹವ್ಯವಾಹಂ ಪುರುಪ್ರಿಯಂ ॥ (ಋ ೧–೧೨–೨ ಸಾಭಾ)

"ಯಜಮಾನರಾದಿಯಾದ ಸಮಸ್ತ ಪ್ರಜೆಗಳಿಗೂ ಪಾಲಕನು; ಯಜ್ಞದಲ್ಲಿ ಅರ್ಪಿಸುವ ಹವಿಸ್ಸನ್ನು ದೇವತೆಗಳಿಗೆ ಒಯ್ಯುವನು. ಸಕಲರಿಗೂ ಪ್ರಿಯನಾದವನೂ. ಆಂತಹ ಅಗ್ನಿಯನ್ನೇ ಯಜ್ಞಮಾಡುವ ಜನರು ಯಾವಾಗಲೂ ಆಹ್ವಾನಮಂತ್ರಗಳಿಂದ ಪ್ರಾಥಿಸಿ ಕರೆಯುವರು."

ಅಶ್ವಂ ನ ತ್ವಾ ವಾರವನ್ತಂ ವನ್ದಧ್ಯಾ ಅಗ್ನಿಂ ನಮೋಭಿಃ ।
ಸಮ್ರಾಜನ್ತ ಮಧ್ವರಾಣಾಂ ॥ (ಋ ೧–೨೭–೧ ಸಾಭಾ)

"ಯಜ್ಞಗಳಿಗೆ ಸಾರ್ವಭೌಮನಾಗಿಯೂ, ಕುದುರೆಗಿರುವಂತಹ ಬಾಲವನ್ನು ಹೊಂದಿದ ಅಗ್ನಿದೇವನಾದ ನಿನಗೆ ನಾವು ಸ್ತೋತ್ರಪೂರ್ವಕವಾಗಿ ವಂದಿಸುತ್ತೇವೆ."

(ಅಗ್ನಿಯ ಜ್ವಾಲೆಗಳನ್ನು ಕುದುರೆಯ ಬಾಲಕ್ಕೆ ಹೋಲಿಸುತ್ತಾರೆ. ಕುದುರೆಯು ತನ್ನ ಬಾಲದಿಂದ ಕ್ರಿಮಿಕೀಟ ಗಳನ್ನು ಓಡಿಸುವಂತೆ ಅಗ್ನಿಯು ತನ್ನ ಜ್ವಾಲೆಯಿಂದ ಯಜ್ಞ ವಿರೋಧಿಗಳನ್ನು ಓಡಿಸುತ್ತಾನೆ.)

ತ್ವಮಗ್ನೇ ಪ್ರಥಮೋ ಮಾತರಿಶ್ವನ ಆವಿರ್ಭವ ಸುಕ್ರತೂಯಾ ವಿವಸ್ವತೇ । (ಋ ೧–೩೧–೩ ಸಾಭಾ)
ಅರೇಜೇತಾಂ ರೋದಸೀ ಹೋತೃವೂರ್ಯೇಽಸಘ್ನೋರ್ಭಾರಮಯಜೋ ಮಹೋ ವಸೋ ॥

"ಎಲೈ ಅಗ್ನಿಯೇ, ನೀನು ವಾಯುವಿಗೆ ಪ್ರಧಾನನಾಗಿರುವನು. ನಿನ್ನನ್ನು ಪೂಜಿಸತಕ್ಕ ಯಜಮಾನನ ಮುಂದೆ ವ್ಯಕ್ತನಾಗಿ ಕಾಣಿಸಿಕೋ. ನಿನ್ನ ಮಹಿಮೆಯನ್ನು ಕಂಡು ದ್ಯಾವಾ ಪೃಥ್ವಿಗಳೂ ಸಹ ಕಂಪಿಸುತ್ತವೆ. ನೀನು ಯಜ್ಞ ಕರ್ಮದ ನಿರ್ವಹಣಾ ಭಾರವನ್ನು ವಹಿಸಿದ್ದೀಯೆ. ವಸುರೂಪದಲ್ಲಿರುವ ಅಗ್ನಿಯೇ ನೀನು ಸರ್ವ ದೇವತೆಗಳನ್ನು ಪೂಜಿಸಿದ್ದೀಯೆ."

ತ್ವಮಗ್ನೇ ಮನವೇ ದ್ಯಾಮವಾಶಯಃ ಪರೂರವಸೇ ಸುಕೃತೇ ಸುಕೃತ್ತರಃ । (ಋ ೧–೩೧–೪ ಸಾಭಾ)
ಶ್ವಾತ್ರೇಣ ಯತ್ಪಿತ್ರೋರ್ಮಚ್ಯಸೇ ಪರ್ಯಾ ತ್ವಾ ಪೂರ್ವಮನಯನ್ನಾ ಪರಂ ಪುನಃ ॥

"ನೀನು ಮನುವಿಗಾಗಿ (ಯಜ್ಞಮಾಡುವನಿಗೆ) ದ್ಯುಲೋಕವನ್ನು (ಸ್ವರ್ಗ ಪ್ರಾಪ್ತಿಯನ್ನು) ಘೋಷಿಸಿದ್ದೀಯ. ನಿನ್ನನ್ನು ಪೂಜಿಸುವ ಪುರೂರವನಿಗೆ (ಯಜ್ಞಕಾರ್ಯ ಮಾಡುವವನು) ಅತ್ಯಂತ ಶ್ರೇಷ್ಠವಾದ ಫಲಗಳನ್ನು ಕೊಟ್ಟಿರುವೆ. ಮಿತ್ರಾವರುಣರ ಕ್ಷಿಪ್ರ ಮಂಥನದ್ದಿಂದ ಉದ್ಭವಿಸುತ್ತಿಯೆ. ಆಗ ನಿನ್ನನ್ನು ಮೊದಲು ಪೂರ್ವಭಾಗದಲ್ಲಿ ಆಹವನೀಯ ರೂಪದಲ್ಲೂ, ಆನಂತರ ಪಶ್ಚಿಮ ಭಾಗದಲ್ಲಿ ಗಾರ್ಹಪತ್ಯರೂಪದಿಂದಲೂ ಸ್ಥಾಪಿಸುತ್ತಾರೆ."

ತ್ವಮಗ್ನೇ ವೃಜಿನವರ್ತನಿಂ ನರಂ ಸಕ್ಮನ್ಪಿಪರ್ಷಿ ವಿದಥೇ ವಿಚರ್ಷಣೇ । (ಋ ೧–೩೧–೬ ಸಾಭಾ)
ಯಃ ಶೂರಸಾತಾ ಪರಿತಕ್ಮ್ಯೇ ಧನೇ ದಭ್ರೇಬಿಶ್ಚಿತ್ಸಮೃತಾ ಹಂಸಿ ಭೂಯಸಃ ॥

"ಶ್ರೇಷ್ಠವಾದ ಜ್ಞಾನದಿಂದ ಕೂಡಿದ ಅಗ್ನಿಯೇ, ನೀನು ಅಸನ್ಮಾರ್ಗದಲ್ಲಿ ಹೋಗತಕ್ಕ ಪುರುಷನನ್ನು ಸತ್ಕರ್ಮದಲ್ಲಿ ಸೇರಿಸಿ ಅವನನ್ನು ರಕ್ಷಿಸುತ್ತೀಯೆ........"

ತ್ವಮಗ್ನೇ ವೃಷಭಃ ಪುಷ್ಟಿವರ್ದನ ಉದ್ಯತಸ್ರುಚೇ ಭವಸಿ ಶ್ರವಾಯ್ಯಃ ।

ಯ ಆಹುತಿಂ ಪರಿ ವೇದಾ ವಷಟ್ಕೃತಿಮೇಕಾಯರಗ್ರೇ ವಿಸ ಆವಿವಾಸಸಿ ।।
"ಓ ಅಗ್ನಿಯೇ, ನೀನು ಇಷ್ಟಾರ್ಥಗಳನ್ನು ವರ್ಷಿಸುವವನೂ, ಪುಷ್ಟಿಯನ್ನು ವರ್ಧಿಸುವವನೂ ಆಗಿದ್ದೀಯೆ, ನೀನು ಜ್ಞಾನವನ್ನು ವೇದ್ಧಿಪಡಿಸುವವನೂ ಆಗಿರುವೆ, ಯಾವ ಯಜಮಾನನು ವಷ್ಟಕಾರ ಸ್ತೋತ್ರ ಸಹಿತವಾದ ಆಹುತಿಯನ್ನು ಚೆನ್ನಾಗಿ ತಿಳಿದುಕೊಂಡು ಅದನ್ನು ಸಮರ್ಪಿಸುತ್ತಾನೆಯೋ ಅವನನ್ನು ಮೊದಲು ಪ್ರಕಾಶಿಸುವಂತೆ ಮಾಡುತ್ತೀಯ ಹಾಗು ನಂತರ ಇತರರನ್ನು ಪ್ರಕಾಶಗೊಳಿಸುತ್ತೀಯೆ." (೧–೩೧–೫ ಸಾಭಾ)

ಆದ್ದರಿಂದಲೆ ಬೆಳಗಿನ ಜಾವದ ಅಗ್ನಿಹೋತ್ರವು ಬಹಳ ಮಹತ್ವಹೊಂದಿದೆ ಎಂದು ಋಷಿಗಳು ತಿಳಿಸುತ್ತಾರೆ. ಹಾಗೆಯೇ ಸಂಜೆಯ ಸಂಧ್ಯಾಕಾಲದಲ್ಲಿಯೂ ಅಗ್ನಿಹೋತ್ರವನ್ನು ಮಾಡಬೇಕಾಗಿದೆ. ಅಗ್ನಿಹೋತ್ರವನ್ನು ಪ್ರತಿಮುಂಜಾನೆ ಮತ್ತು ಸಂಜೆ ಮಾಡಿದಾಗ ಸತ್ಯದ ಮತ್ತು ದೇವತೆಗಳ ಅರಿವು ಮೂಡುತ್ತದೆ. ಋಷಿಯು ಪ್ರತಿದಿನವೂ ದೇವತೆಗಳನ್ನು ಆರಾಧಿಸುವುದರಿಂದ, ಋಷಿಯೂ ಸಹ ದೇವತೆಗಳಂತೆ ಸಮಾನ ಗೌರವವನ್ನು ಪಡೆಯುತ್ತಾನೆ. ಆದ್ದರಿಂದ ಸಾಮಾನ್ಯ ಮನುಷ್ಯರಾದ ನಾವುಗಳು ದೇವತೆಗಳಿಗೆ ಗೌರವವನ್ನು ಅರ್ಪಿಸುವಂತೆ ಋಷಿಗಳಿಗೂ ಅರ್ಪಿಸಬೇಕು.

ಬಹಿರ್‌ಯಜ್ಞವನ್ನು ಮಾಡುವಾಗ ನಮ್ಮ ಪ್ರತ್ಯಕ್ಷ ಪ್ರಜಾಪತಿಯಾದ ಸೂರ್ಯ–ಸವಿತೃವನ್ನು ಮತ್ತು ಆದಿತ್ಯರನ್ನು ಆಹ್ವಾನಿಸಿ ಯಜ್ಞವನ್ನು ಮಾಡಿ ಅವರ ಅನುಗ್ರಹವನ್ನು ಪಡೆಯಬಹುದು. ಉದಯಿಸುತ್ತಿರುವ ಸೂರ್ಯನಿಂದ ಬೆಳಕಿನ ಸ್ತಂಭವು ಪ್ರಕಟವಾಗಿ ಯಜ್ಞಕುಂಡದ ಮೇಲೆ ಇಳಿಯುತ್ತದೆ. ಬೆಳಕಿನ ಈ ಸ್ತಂಭವು ದೇವತೆಗಳ ಅಗಮನ ದ್ವಾರವಾಗಿದೆ. ಈ ಮೂಲಕ ಇಂದ್ರನು ಮತ್ತು ದೇವತೆಗಳು ಕೆಳಗಿಳಿದು ಬಂದು ಹವಿಸ್ಸನ್ನು ಸ್ವೀಕರಿಸಿ ನಮ್ಮನ್ನು, ನಮ್ಮ ಸುತ್ತಲಿನಲ್ಲಿರುವ ಜನರನ್ನು ಮತ್ತು ನಮ್ಮ ಸುತ್ತಲಿನ ಭೂಮಿಯ ವಾತಾವರಣವನ್ನು ಶುದ್ಧಿಗೊಳಿಸುವರು. ಆ ಪ್ರದೇಶದ ಜನರೆಲ್ಲರು ದೇವತೆಗಳಿಂದ ಆಶೀರ್ವದಿಸಲ್ಪಡುವರು.

(ನನ್ನ ಅನುಭವದ ಪ್ರಕಾರ ಅಂತರ್‌ಯಜ್ಞವನ್ನು ಮಾಡುವಾಗ ಉದಯಿಸುತ್ತಿರುವ ಸೂರ್ಯನಿಂದ ಬೆಳಕಿನ ಸ್ತಂಭವು ನೇರವಾಗಿ ನಮ್ಮ ಹೃದಯದೊಂದಿಗೆ ಸಂಪರ್ಕವನ್ನು ಹೊಂದುತ್ತದೆ ಮತ್ತು ಕೊಳವೆಯಂತಹ (ಪೋರ್ಟಲ್/ಟನಲ್/ವರ್ಮಹೋಲ್) ಮಾರ್ಗವು ಪ್ರಕಟವಾಗುತ್ತದೆ. ಕೂಡಲೆ ನಮ್ಮ ಹೃದಯದಲ್ಲೂ ಸೂರ್ಯ ಮತ್ತು ಸವಿತೃವು ಪ್ರಕಟವಾಗುವರು. ಆದರೆ ಇದು ಯೋಗಿಯ ಇಚ್ಛೆಗೆ ಒಳಪಟ್ಟಿದೆ.)

ಅಂದರೆ ಮತ್ತೆ ಸತ್ಯಯುಗ ಬರಬೇಕಾದರೆ ಎಲ್ಲರೂ ತಮ್ಮ ತಮ್ಮ ಮನೆಗಳಲ್ಲಿ ಅಗ್ನಿಹೋತ್ರದ ಮುಖಾಂತರ ದೇವತೆಗಳನ್ನು ಆರಾಧಿಸಬೇಕು. ಪೃಥ್ವಿಯ ಪ್ರತಿಯೊಂದು ನಗರಪ್ರದೇಶಗಳಲ್ಲಿ, ಹಳ್ಳಿಗಳಲ್ಲಿ, ಊರಿನ ಮಧ್ಯೆ ಅಗ್ನಿಹೋತ್ರವನ್ನು ಮಾಡಬೇಕು. ಸೂರ್ಯನಿಂದ ಕೆಳಗೆ ಬರುವ ಬೆಳಕಿನ ಸ್ತಂಭವು ಯಜ್ಞಕುಂಡದ ಸುತ್ತಲಿನ ಪ್ರದೇಶವನ್ನೆಲ್ಲಾ ವ್ಯಾಪಿಸಿಕೊಂಡು ಆ ಪ್ರದೇಶದಲ್ಲಿರುವ ಮನೆಗಳು ಮತ್ತು ಅಲ್ಲಿ ವಾಸಿಸುವ ಜನರ ಮೇಲೆ ದೈವೀ ಪ್ರಭಾವವು ಇಳಿಯುತ್ತದೆ. ಅವರೆಲ್ಲರೂ ದೈವೀ ಆಶೀರ್ವಾದವನ್ನು ಪಡೆಯುತ್ತಾರೆ.

ನಮ್ಮ ಗೃಹದ ಹೊರ ಆವರಣ ಮತ್ತು ಗೃಹವು ಯಜ್ಞಕುಂಡದಂತೆ ಚೌಕಾಕಾರವಾಗಿದ್ದರೆ ಆ ಮನೆಯ ಮಧ್ಯದಲ್ಲಿ ದೇವತೆಗಳ ಸ್ಥಾನವಿರುತ್ತದೆ. ಈ ಕಾರಣದಿಂದಲೇ ಗೃಹದ ಮಧ್ಯಸ್ಥಾನವನ್ನು ಬ್ರಹ್ಮಸ್ಥಾನವೆಂದು ಹೇಳುತ್ತಾರೆ. ಯಾವ ಮನೆಯ ಬ್ರಹ್ಮಸ್ಥಾನದಲ್ಲಿ ನಿತ್ಯವೂ ಯಜ್ಞಗಳನ್ನು ಮಾಡುತ್ತಾರೋ ಆ ಮನೆಯಲ್ಲಿರುವವರಿಗೆ ದೇವತೆಗಳ ರಕ್ಷಣೆಯು ಸಿಗುತ್ತದೆ. ಈ ವ್ಯವಸ್ಥೆಯು ಒಂದು ಕುಟುಂಬಕ್ಕೆ ಸಂಬಂಧಪಟ್ಟಿದ್ದು ಆಗಿದೆ.

ಒಂದು ಹಳ್ಳಿ ಅಥವಾ ಒಂದು ಸಣ್ಣ ಊರಿನ ಹಿತಕ್ಕಾಗಿ ಯಜ್ಞವನ್ನು ಹಳ್ಳಿಯ ಮಧ್ಯಭಾಗದ ಬಯಲು ಪ್ರದೇಶದಲ್ಲಿ ಮಾಡಬೇಕು. ಹಿಂದಿನ ಕಾಲದಲ್ಲಿ ಋಷಿಗಳು ತಮ್ಮ ಕುಟೀರದ ಹೊರಗಡೆ ಬಯಲು ಪ್ರದೇಶದಲ್ಲಿ ಯಜ್ಞವನ್ನು ಮಾಡುತ್ತಿದ್ದರು. ಅದೇ ಸರಿಯಾದ ಕ್ರಮವಾಗಿದೆ.

ಈ ಕಲಿಯುಗದಲ್ಲಿ ಅಸುರಶಕ್ತಿಗಳು ಮಾನವರ ಮೇಲೆ ತಮ್ಮ ಸಾಮ್ರಾಜ್ಯವನ್ನು ಸ್ಥಾಪಿಸಿದ್ದಾರೆ. ಮನುಕುಲವೂ ಸೇರಿದಂತೆ ಸಕಲ ಜೀವರಾಶಿಗಳು ಅಸುರಶಕ್ತಿಗಳ ಆಳ್ವಿಕೆಗೆ ಒಳಪಟ್ಟಿವೆ. ಅಸುರಶಕ್ತಿಗಳು ವಿಜೃಂಭಿಸುತ್ತಿವೆ. ಅಸುರರ ಆಳ್ವಿಕೆಯಿಂದ ಹೊರಬರಲು ಹಾಗು ಪೃಥ್ವಿಯಲ್ಲಿ ಸತ್ಯಯುಗವನ್ನು ಸ್ಥಾಪಿಸಬೇಕಾದರೆ ಅಗ್ನಿಹೋತ್ರದ ಮೂಲಕ ಇಂದ್ರನನ್ನು ಮತ್ತು ಇತರ ದೇವತೆಗಳನ್ನು ಆರಾಧಿಸಬೇಕಾಗಿದೆ. ಪ್ರತಿಯೊಂದು ಹಳ್ಳಿ, ಪಟ್ಟಣದ ಬಯಲು ಪ್ರದೇಶದಲ್ಲಿ ಅಗ್ನಿಹೋತ್ರಗಳು ಪ್ರತಿನಿತ್ಯವು ದೇವತೆಗಳ ಆಗಮನ ಮತ್ತು ನಿರ್ಗಮದ ವೇಳೆಯಾದ ದ್ವಿಸಂಧ್ಯಾ ಕಾಲದಲ್ಲಿ ನಡೆಯಬೇಕಾಗಿದೆ.

ಅಗ್ನಿಹೋತ್ರದಿಂದ ಮಾನವರಲ್ಲಿರುವ ಅಸುರಗುಣಗಳಾದ ರಾಗದ್ವೇಶಗಳು ನಿಧಾನವಾಗಿ ನಾಶವಾಗುವುದು ಮತ್ತು ಸತ್ವಗುಣವು ಪೃಥ್ವಿಯನ್ನು ಆವರಿಸುವುದು, ಸಕಲ ರೋಗಗಳು ನಿವಾರಣೆಯಾಗುವುದು ಮತ್ತು ಧೀಶಕ್ತಿಯು ಬೆಳೆಯುವುದು. ಸಕಲ ಜೀವರಾಶಿಗಳೂ ಸಹ ಸತ್ವಗುಣವನ್ನು ಹೊಂದುವವು. ಸಕಲ ದೇಶದ ಜನರಿಗೆ ಇಂದ್ರನ

ಅನುಗ್ರಹವಾಗುವುದು ಮತ್ತು ಪೃಥ್ವಿಯಲ್ಲಿ ಸತ್ಯಯುಗವು ಸ್ಥಾಪಿತವಾಗುವುದು. ಶಾಂತಿ ಸಮೃದ್ಧಿಯು ಸರ್ವ ದೇಶಗಳಲ್ಲಿಯೂ ನೆಲೆಸುವುದು. ಅಗ್ನಿಹೋತ್ರದ ಮಹಿಮೆಯು ಅಪಾರವಾಗಿದೆ.

ಆದ್ದರಿಂದ ಎಲ್ಲರೂ ಪ್ರಯತ್ನ ಪೂರ್ವಕವಾಗಿ ಕೆಲವು ಋಗ್ವೇದ ಮಂತ್ರಗಳನ್ನು ಕಲಿತು ದೇವತೆಗಳನ್ನು ಅಗ್ನಿಹೋತ್ರದ ಮೂಲಕ ಆರಾಧಿಸಿ ಅವರ ಅನುಗ್ರಹವನ್ನು ಹೊಂದಬಹುದು. ಇದಕ್ಕೆ ಯಾವ ಪುರೋಹಿತರ ಮಧ್ಯಸ್ಥಿಕೆಯು ಬೇಕಾಗಿಲ್ಲ. ಪೂರ್ಣವಾಗಿ ಋಗ್ವೇದವನ್ನು ಕಲಿಯುವ ಅವಶ್ಯಕತೆಯೂ ಇಲ್ಲ. ನಾವು ತಪ್ಪಾಗಿ ಉಚ್ಚಾರಣೆಯನ್ನು ಮಾಡಿದರೆ ಭಗವಂತನು ಶಿಕ್ಷಿಸುವನು ಎಂಬ ಭಯವೂ ಬೇಕಾಗಿಲ್ಲ. ದೇವತೆಗಳು ಕೋಲನ್ನು ಹಿಡಿದುಕೊಂಡು ನಮ್ಮನ್ನು ಶಿಕ್ಷಿಸಲು ಕಾಯುತ್ತಿಲ್ಲ. ನಾವೇನು ಇನ್ನೊಬ್ಬರಿಗೆ ತೊಂದರೆಯನ್ನು ಉಂಟುಮಾಡಲು ಮಂತ್ರವನ್ನು ಉಪಯೋಗಿಸುತ್ತಿಲ್ಲ. ಚಿಕ್ಕ ಮಕ್ಕಳು ತಪ್ಪಾಗಿ ಉಚ್ಚಾರಣೆ ಮಾಡಿದಾಗಲೂ ತಂದೆತಾಯಿಯರು ಸಂತೋಷವನ್ನುಪಡುವಂತೆ ದೇವತೆಗಳೂ ಸಂತೋಷವನ್ನುಪಡುತ್ತಾರೆ. ಅಗ್ನಿಹೋತ್ರವನ್ನು ಮಾಡಿ ಆಹುತಿಗಳನ್ನು ಅರ್ಪಿಸುವುದಷ್ಟೇ ಮುಖ್ಯವಾಗಿರುತ್ತದೆ.

ನಮ್ಮ ಪಿಂಡಾಂಡವು ಬ್ರಹ್ಮಾಂಡದ ಪ್ರತಿರೂಪವಾದುದರಿಂದ ನಾವೇ ಪ್ರಯತ್ನಪೂರ್ವಕವಾಗಿ ಅಗ್ನಿಹೋತ್ರವನ್ನು ಮಾಡುವುದನ್ನು ಕಲಿಯಬೇಕು. ಬಹಿರ್‌ಯಜ್ಞವನ್ನು ಪುರೋಹಿತರ ಕೈಯಲ್ಲಿ ಮಾಡಿಸಬಹುದು ಆದರೆ ಅಂತರ್‌ಯಜ್ಞವನ್ನು ಹೇಗೆ ಮಾಡಿಸುತ್ತೀರಿ? ಪುರೋಹಿತರ ಕೈಯಲ್ಲಿ ಯಜ್ಞವನ್ನು ಮಾಡಿಸಿ ಇದುವರೆಗೂ ಯಾರೂ ಸ್ವರ್ಗಕ್ಕೆ ಹೋಗಿಲ್ಲ. ಅಂತರ್ ಯಜ್ಞದಲ್ಲಿ ಅಗ್ನಿಯೇ ಪುರೋಹಿತನು.

ಈಗ ಸ್ವರ್ಗಕ್ಕೆ ಹೋಗುವ ಮಾರ್ಗ ಯಾವುದೆಂದು ತಿಳಿಯೋಣ. ಋಗ್ವೇದವು ಹೇಳುವುದೇನೆಂದರೆ ಪೃಥ್ವಿಯು ಕೊನೆಗೊಳ್ಳುವುದು ಯಜ್ಞಕುಂಡದಲ್ಲಿ. ಪೃಥ್ವಿಮಾತೆಯ ನಾಭಿಸ್ಥಾನ ಯಜ್ಞಕುಂಡವಾಗಿದೆ. ಹೇಗೆ ನಮ್ಮ ಸ್ಥೂಲ ಸೂಕ್ಷ್ಮಶರೀರಗಳು ನಾಭಿಯಲ್ಲಿ ಬಂಧಿತವಾಗಿದೆಯೋ ಹಾಗೆ ಪೃಥ್ವಿ, ದ್ಯುಲೋಕ ಮತ್ತು ಅಂತರಿಕ್ಷ ಲೋಕಗಳು ಪೃಥ್ವಿಯ ಮೇಲೆ ಸ್ಥಾಪಿಸಿದ ಯಜ್ಞಕುಂಡದಲ್ಲಿ ಬಂಧಿತವಾಗಿದೆ. ಯಜ್ಞಕುಂಡದಲ್ಲಿ ಪೃಥ್ವಿಯ ಅಂತ್ಯವಾಗಿ ಅಲ್ಲಿಂದ ಊರ್ಧ್ವಕ್ಕೆ ಸ್ವರ್ಗದ ದಾರಿಯು ಶುರುವಾಗುವುದು.

ವಿಷ್ಣುವಿನ ನಾಭಿಯಿಂದ ಬ್ರಹ್ಮನು ವಿಷ್ಣುವಿನ ಚಿತ್ರಪಟದಲ್ಲಿ ತೋರಿಸಿರುವಂತೆ ಮೇಲಕ್ಕೆ ಬರುವನೆಂದು ತಿಳಿದಿರುವೆವು. ಆದರೆ ನಿಜವಾಗಿಯೂ ವಿಷ್ಣುವಿನ ನಾಭಿಯಿಂದಲ್ಲ, ವಿರಾಟ್ ಪುರುಷನ ನಾಭಿಯಿಂದ ಬ್ರಹ್ಮನು ಹೊರಬರುವನು.

ಅದೇ ರೀತಿ ಯಜ್ಞಕುಂಡವು ಪೃಥ್ವಿಯ ನಾಭಿಸ್ಥಾನವಾಗಿದೆ. ಪೃಥ್ವಿಮಾತೆಯಲ್ಲೂ ಪುರುಷನು ಇರುವುದರಿಂದ ಯಜ್ಞಕುಂಡದ ಹೊರಬಾಗದಿಂದಲೂ ಬ್ರಹ್ಮನು ಮೇಲೆ ಬರುತ್ತಾನೆ. ಅಂತರ್‌ಯಜ್ಞದಲ್ಲಿ ಅಗ್ನಿಯೇ ಋತ್ವಿಜನಾಗಿದ್ದಾನೆ. ನಾವು ಅಗ್ನಿಯನ್ನು ಯಜ್ಞಕಾರ್ಯವನ್ನು ನೆರವೇರಿಸುವಂತೆ ಕೇಳಿಕೊಂಡರೆ, ಕೂಡಲೆ ಯಜ್ಞಕುಂಡದ ಸುತ್ತ ಋತ್ವಿಜರು ಪ್ರಕಟವಾಗುವರು. ನಾವು ಮಾಡುವ ಯಜ್ಞದಲ್ಲಿ ಏನಾದರೂ ಲೋಪದೋಷವಿದ್ದರೂ ಮಾಡುತ್ತಾ ಮಾಡುತ್ತಾ ತಪ್ಪುಗಳು ತಾನಾಗೆ ಸರಿಹೋಗುವುದು. ಹಾಗೆ ನಿಜವಾಗಿಯೂ ಏನಾದರೂ ದೋಷವಿದ್ದರೂ ದೇವತೆಗಳೇ ಮಾರ್ಗದರ್ಶನ ಮಾಡುತ್ತಾರೆ.

ಕೆಲವು ಸಾರಿ ಧ್ಯಾನಮಗ್ನರಾಗಿದ್ದಾಗ ನಾವು ಜಪಿಸುತ್ತಿರುವ ಮಂತ್ರವು ಮಧ್ಯದಲ್ಲಿಯೇ ನಿಂತುಹೋಗುವುದು ಮತ್ತು ದೇವತೆಗಳ ಸ್ವರೂಪದಲ್ಲಿಯೇ ತಲ್ಲೀನವಾಗುವೆವು. ಅದಕ್ಕೆ ದೇವತೆಗಳು ನಮ್ಮನ್ನು ಶಿಕ್ಷಿಸುವರೇ? ಇಲ್ಲ. ಆದರೆ ನಾವು ಪ್ರಯತ್ನಪೂರ್ವಕವಾಗಿ ಸರಿಯಾದ ಉಚ್ಚಾರಣೆಯನ್ನು ಮಾಡುವುದನ್ನು ಕಲಿಯುವುದು ನಮ್ಮ ಕರ್ತವ್ಯವಾಗಿದೆ.

ಪ್ರತಿದಿನ ಅಗ್ನಿಹೋತ್ರದಿಂದ ಇಂದ್ರನ ಆರಾಧನೆಯನ್ನು ಮಾಡಿ ಅವನ ಅನುಗ್ರಹವನ್ನು ಸಂಪಾದಿಸಿಕೊಂಡರೆ ಇಂದ್ರನೇ ನಮಗೆ ದಾರಿಯನ್ನು ತೋರುತ್ತಾನೆ. ಅಗ್ನಿಹೋತ್ರದಿಂದ ದೇವತೆಗಳ ಅನುಗ್ರಹವನ್ನು ಪಡೆದುಕೊಂಡರೂ ವೃತ್ರಾಸುರನ ಕೋಟೆಯನ್ನು ಧ್ವಂಸಮಾಡಬೇಕಿದೆ. ಯಾಕೆಂದರೆ ದೇವತೆಗಳು ಅಂಧಕಾರದಿಂದ ವ್ಯಾಪಿಸಿರುವುದರಿಂದ ನಮ್ಮಲ್ಲಿರುವ ಜ್ಞಾನಕ್ಕಿಂತ ಹೆಚ್ಚಿನದನ್ನು ನಮಗೆ ಗೋಚರಿಸುವುದಿಲ್ಲ. ಈ ಕಾರಣಕ್ಕಾಗಿಯೇ ಅನೇಕ ಸಿದ್ಧಿಪುರುಷರು ಮತ್ತು ಮಹಾತ್ಮರು ಋಗ್ವೇದ ರಹಸ್ಯವನ್ನು ತಿಳಿದುಕೊಳ್ಳಲಾಗಲಿಲ್ಲ.

ಮಾನವರಲ್ಲಿ ಬೃಹಸ್ಪತಿ, ಬ್ರಹ್ಮಣಸ್ಪತಿ ಮತ್ತು ಸರಸ್ವತಿಯರು ಮರುತ್ತರ ಸಹಾಯದಿಂದ ವೃತ್ರಾಸುರನ

| |
|---|
| ಕೋಟೆಯನ್ನು ಧ್ವಂಸಮಾಡುವರು. ಏಕೆಂದರೆ ಅವರು ವಾಗ್ದೇವತೆಗಳಾದುದರಿಂದ ಮತ್ತು ನಾವು ಮಾತನಾಡುವ ವಾಕ್ಕನ್ನು ಪ್ರತಿನಿಧಿಸುವುದರಿಂದ ಋಗ್ವೇದ ಮಂತ್ರ ಪಠನೆಯಿಂದ ಈ ದೇವತೆಗಳನ್ನು ಜಾಗೃತಮಾಡಿದಾಗ ಅವರು ಮರುತ್ತರ ಜೊತೆಯಲ್ಲಿ ಆವಿರ್ಭವಿಸುವುದರಿಂದ ವೃತ್ರಾಸುರನ ಕೋಟೆಯು ಧ್ವಂಸವಾಗುವುದು. |

ಇಂದ್ರನ ಬೆಳಕಿನ ಲೋಕಕ್ಕೆ ಹೋಗಿ ಅಮರತ್ವವನ್ನು ಪಡೆಯಬೇಕಾದರೆ ಅಂತರ್‌ಯಜ್ಞದಿಂದ ಮಾತ್ರ ಸಾಧ್ಯ. ಈಗ ಯಜ್ಞಕುಂಡವನ್ನು ಪ್ರತಿನಿಧಿಸುವ ದೇವತೆ ಯಾರು ಎಂಬುದನ್ನು ತಿಳಿಯೋಣ.

## ರುದ್ರದೇವತೆ

ಯಜ್ಞಕುಂಡವನ್ನು ಪ್ರತಿನಿಧಿಸುವ ದೇವತೆಯೇ ರುದ್ರದೇವರು. ರುದ್ರದೇವತೆಯ ಮಹಿಮೆಯನ್ನು ಭಾರತೀಯರು ಅರ್ಥಮಾಡಿಕೊಳ್ಳಲು ವಿಫಲರಾಗಿದ್ದಾರೆ. ರುದ್ರ ದೇವರನ್ನು ಶಿವ ಎಂದು ಭಾವಿಸಿದ್ದಾರೆ. ಆದರೆ ರುದ್ರನಿಗೂ ಶಿವನಿಗೂ ಯಾವುದೇ ಸಂಬಂದವಿಲ್ಲ. ರುದ್ರ ಪದದ ಅರ್ಥ ಅಳಸುವವನು. (ಬಿರುಗಾಳಿಯಂತೆ) ಅರಚುವವನು, ಎಲ್ಲರನ್ನೂ ರೋಧಿಸುವಂತೆ ಮಾಡುವವನು ಎಂದಾಗಿದೆ. ನಿರುಕ್ತಕಾರರು ರುದ್ರ ಶಬ್ದಕ್ಕೆ ಕಿರುಚು, ಕೂಗು ಅಥವಾ ಕಿರುಚುತ್ತಾ ಓಡು ಎಂದು ಅರ್ಥಮಾಡಿದ್ದಾರೆ ಯಜ್ಞಕುಂಡದಲ್ಲಿ ಅಗ್ನಿಯನ್ನು ಸ್ಥಾಪಿಸಿದಾಗ ಅಗ್ನಿಜ್ವಾಲೆಯು ಮತ್ತು ಅಗ್ನಿಕುಂಡದಿಂದ ಹೊರಡುವ ಧೂಮವು ನಮ್ಮ ಕಣ್ಣುಗಳಿಂದ ನೀರನ್ನು ತರಿಸಿ ಅಲ್ಲಿಂದ ದೂರಹೋಗುವಂತೆ ಮಾಡುವುದು. ಯಜ್ಞವೇದಿಯ ಬಳಿ ಕುಳಿತುಕೊಳ್ಳಲು ಸಾಧ್ಯವಾಗದಷ್ಟು ಶಾಖ ಮತ್ತು ಧೂಮದಿಂದಾಗಿ ಸರ್ವರೂ ದೂರ ಸರಿಯುತ್ತಾರೆ.

ರುದ್ರನ ಸ್ವರೂಪವು ಕಣ್ಣು ಕೋರೈಸುವಷ್ಟು ಪ್ರಕಾಶವುಳ್ಳದ್ದಾಗಿದೆ. ರುದ್ರನಿಗೆ 'ರೋಡಸಿ' ಜೊತೆ ಸಂಬಂಧವಿದೆ. ರೋಡಸಿ ಪದದ ಅರ್ಥ ದ್ಯುಲೋಕ ಮತ್ತು ಪೃಥ್ವಿ ಆಗಿದೆ. ಅಂದರೆ ರುದ್ರನಿಗೆ ದ್ಯುಲೋಕ–ಪೃಥ್ವಿಯ ಜೊತೆ ಪರಸ್ಪರ ಸಂಬಂಧವಿದೆ. ಅಥವಾ ದ್ಯಾವಾಪೃಥ್ವಿಯಿಂದ ಹುಟ್ಟಿದವನು ಎಂದು ಹೇಳಬಹುದು. ರುದ್ರನ ವಿದ್ಯುತ್‌ರೂಪವಾದ ಬೆಳಕು ಮತ್ತು ತೇಜಸ್ಸಿನ ಆಯುಧವು ಅಂತರಿಕ್ಷದಿಂದ ಪೃಥ್ವಿಯವರೆಗೆ ಕಂಬದಂತೆ ವ್ಯಾಪಿಸುವುದೆಂದು ವೇದವು ಹೇಳುತ್ತದೆ. ರುದ್ರನಿಗೆ ಅಗ್ನಿ ಎಂಬ ವಿಶೇಷಣವಿದೆ ಆದ್ದರಿಂದ ಆತನನ್ನು ರುದ್ರಾಗ್ನಿ ಎಂದು ಕರೆಯುತ್ತಾರೆ.

ಆತನು ಅನೇಕ ವಿಧವಾದ ಆಯುಧಗಳನ್ನು ಧರಿಸಿರುವನು. ರುದ್ರನು ಧನುಸ್ಸು, ಬಾಣ, ವಜ್ರಾಯುಧ ಗದೆ, ಇತ್ಯಾದಿಗಳನ್ನು ಧರಿಸಿದ್ದಾನೆ. ರುದ್ರನ ಧನುಸ್ಸು ದೃಢವಾಗಿರುವುದು. ಇವನ ಧನುಸ್ಸಿನಿಂದ ಹೊರಡುವ ಬಾಣಗಳು ಬಹಳ ವೇಗ ಗಮನವುಳ್ಳವು. ರುದ್ರನು ಭಯಂಕರ ಸ್ವರೂಪವನ್ನು ಹೊಂದಿದ್ದಾನೆಂದು ವೇದವು ಹೇಳುತ್ತದೆ. ರುದ್ರನು ಪಾಪಿಗಳಿಗೆ ಭಯಂಕರ ಸ್ವರೂಪನಾಗಿಯೂ, ಪುಣ್ಯವಂತರಿಗೆ ಸೌಮ್ಯರೂಪದಿಂದ, ಹಿರಣ್ಯವರ್ಣದಿಂದ ಕಾಣಿಸಿಕೊಳ್ಳು ವನು.

ರುದ್ರನನ್ನು ಕೋಪಿಷ್ಟನೂ, ಉಗ್ರನೂ, ಎಲ್ಲರನ್ನು ಹಿಂಸಿಸುವನೂ ಎಂದು ತಿಳಿದಿದ್ದಾರೆ. ರುದ್ರನ ಕೋಪದಿಂದ ಅನಿಷ್ಟ ಪರಿಣಾಮಗಳು ಉಂಟಾಗುತ್ತವೆ. ಯಜ್ಞಕುಂಡದಲ್ಲಿ ಅಗ್ನಿಯನ್ನು ಹೆಚ್ಚಾದ ಆಹುತಿಗಳಿಂದ ಪ್ರಜ್ವಲಿಸಲ್ಪಟ್ಟರೆ, ಆಗ ಸುತ್ತ ಮುತ್ತಲಿನ ಮೇಲೆ ಅನಿಷ್ಟ ಪರಿಣಾಮಗಳು ಉಂಟಾಗುತ್ತವೆ. ಆದ್ದರಿಂದ ಅಗ್ನಿಜ್ವಾಲೆಯು ವಿಪರೀತವಾಗಿ ಹೆಚ್ಚಾಗಿರಬಾರದು. ಯಜ್ಞಕುಂಡವು ಸರಿಯಾದ ಆಳತೆ ಮತ್ತು ಗಾತ್ರವುಳ್ಳದ್ದಾಗಿರಬೇಕು.

ಆದ್ದರಿಂದ ಮಾತಾಪಿತೃಗಳನ್ನೂ, ಪುತ್ರ ಪೌತ್ರಾದಿಗಳನ್ನೂ, ದನಕರುಗಳು ಅಶ್ವಗಳು ಇತ್ಯಾದಿ ಸಾಕು ಪ್ರಾಣಿಗಳನ್ನು ಕೊಲ್ಲದೆ ರಕ್ಷಣೆ ಮಾಡಬೇಕೆಂದು ರುದ್ರನನ್ನು ಹಲವು ಬಗೆಯಾಗಿ ಸ್ತುತಿಸುತ್ತಾರೆ. ಗೋವಿನ ರೂಪದಲ್ಲಿರುವ ಪೃಶ್ನಿಯು ರುದ್ರನ ಪತ್ನಿಯಾಗಿದ್ದಾಳೆ. ಪೃಶ್ನಿಯ ಹೊಳೆಯುತ್ತಿರುವ ಕೆಚ್ಚಲಿನಿಂದ ರುದ್ರನು ಮರುತ್‌ಗಳನ್ನು ಸೃಜಿಸಿದನು. ಆದ್ದರಿಂದ ಮರುದ್ಗಣಗಳನ್ನು ರುದ್ರ ಮತ್ತು ಪೃಶ್ನಿಯ ಪುತ್ರರೆಂದು ಕರೆಯುವರು.

ಈ ಪರಿಯಾಗಿ ಹೊಗಳಿರುವ ರುದ್ರನು ಯಾರು? ಎಂಬುದನ್ನು ಋಗ್ವೇದ ಮಂತ್ರಗಳ ಮೂಲಕ ನೋಡೋಣ.

ಸ ಇದ್ದಾನಾಯ ದಭ್ಯಾಯ ವನ್ವಞ್ಚ್ಯಾವಾನಃ ಸೂದೈರಮಿಮೀತ ವೇದಿಂ ।
ತೂರ್ವಯಾಣೋ ಗೂರ್ತವಚಸ್ತಮಃ ಕ್ಷೋದೋ ನ ರೇತ ಇತಊತಿ ಸಿಂಚತ್ ।।(ಋ ೧೦–೬೧–೨ ಸಾ ಭಾ)
"ಅದೇ ರುದ್ರನು ಸ್ತೋತೃಗಳಿಗೆ ಧನದಾನವನ್ನು ಮಾಡಿ ಅವರಿಗೆ ತೃಪ್ತಿಯನ್ನುಂಟುಮಾಡುವ ಉದ್ದಿಶ್ಯದಿಂದ, ತನ್ನ ಶತ್ರುಹಿಂಸಕವಾದ ಶಸ್ತ್ರಗಳಿಂದ ಶತ್ರುಗಳನ್ನು ಹೊಡೆದೋಡಿಸುತ್ತ <u>ಯಜ್ಞವೇದಿಯನ್ನು ನಿರ್ಮಿಸಿದ್ದಾನೆ</u>. ಶೀಘ್ರಗಾಮಿಯೂ, ಅತ್ಯಂತ ಉಚ್ಚತರವಾದ ಶಬ್ದವುಳ್ಳವನೂ ಆದ ರುದ್ರನು ಮೇಘವು ಉದಕವನ್ನು ಸುರಿಸುವಂತೆ ತನ್ನ ಸೃಷ್ಟಿ ಸಾಧಕಾವಾದ ಸಾಮರ್ಥ್ಯವನ್ನು ಹರಡುವಂತೆ ಪ್ರೇರಿಸಿದ್ದಾನೆ."

ಯಾ ತೇ ದಿದ್ಯುದವಸೃಷ್ಟಾ ದಿವಸ್ಪರಿ ಕ್ಷ್ಮಯಾ ಚರತಿ ಪರಿ ಸಾ ವೃಣಕ್ತು ನಃ ।
ಸಹಸ್ರಂ ತೇ ಸ್ವಪಿವಾತ ಭೇಷಜಾ ಮಾ ನಸ್ತೋಕೇಷು ತನಯೇಷು ರೀರಿಷಃ ।।

"ಎಲೈ ರುದ್ರನೇ, ನಿನಗೆ ಸೇರಿದುದೂ, ಅಂತರಿಕ್ಷದಿಂದ ಬಿಡಲ್ಪಟ್ಟುದೂ ಆದ ಯಾವ ವಿದ್ಯುದ್ರೂಪವಾದ ಆಯುಧವು ಪೃಥ್ವಿಯ ಮೇಲೆ ಸಂಚರಿಸುವುದೋ ಅದೇ ಶಕ್ತಿರೂಪವಾದ ಆಯುಧವು ನಮ್ಮನ್ನು ಬಿಟ್ಟುಬಿಡಲಿ. ನಿನ್ನಲ್ಲಿ ಅನೇಕ ವಿಧವಾದ ಔಷಧಿಗಳು ಇರುತ್ತವೆ. ನಮ್ಮ ಪುತ್ರರಿಗೂ, ತತ್ಪುತ್ರರಿಗೂ ಹಿಂಸೆಯನ್ನುಂಟುಮಾಡಬೇಡ." (೭-೪೬-೩ ಸಾ ಭಾ)

ರುದ್ರನ ವಿದ್ಯುತ್‌ರೂಪವಾದ ಬೆಳಕು ಮತ್ತು ತೇಜಸ್ಸಿನ ಅಂಶವು ಅಂತರಿಕ್ಷದಿಂದ ಯಜ್ಞಕುಂಡದವರೆಗೆ ಕಂಬದಂತೆ ವ್ಯಾಪಿಸಿದೆ. ಈ ಕಂಬವೇ ದೇವತೆಗಳ ಆಗಮನದ ದ್ವಾರವಾಗಿದೆ.

ಈ ಮೇಲಿನ ಸೂಕ್ತದಿಂದಲೇ ರುದ್ರನು ಏನನ್ನು ಪ್ರತಿನಿಧಿಸುವನು ಎಂದು ತಿಳಿದುಬರುತ್ತದೆ. ರುದ್ರನು ದೇವತೆಗಳ ಮತ್ತು ಯಜಮಾನನ ಯಜ್ಞಕ್ಕಾಗಿ ಯಜ್ಞಕುಂಡವನ್ನು ನಿರ್ಮಿಸುತ್ತಾನೆ. ಬಹಿರ್‌ಯಜ್ಞದಲ್ಲಿ ಯಜ್ಞಕುಂಡದಲ್ಲಿ ನೆಲೆಸುತ್ತಾನೆ. ಆದ್ದರಿಂದಲೇ ರುದ್ರ ಸ್ವರೂಪವಾದ ಯಜ್ಞಕುಂಡದ ಬಳಿ ಮತ್ತು ಯಾಗಶಾಲೆಯಲ್ಲಿ ಕುಳಿತಿರುವ ಎಲ್ಲರನ್ನೂ ತನ್ನ ಜ್ವಾಲೆ ಮತ್ತು ಧೂಮದಿಂದ ರೋಧಿಸುವಂತೆ ಮಾಡುತ್ತಾನೆ. ಆದ್ದರಿಂದಲೇ ರುದ್ರನನ್ನು ಬಭ್ರುವರ್ಣ ಅಥವಾ ಕೆಂಪು-ಕಂದು ಬಣ್ಣದಿಂದ ಕೂಡಿರುವನೆಂದು ಹೇಳಿದೆ. ರುದ್ರಾಗ್ನಿಯ ಸ್ವರೂಪವಾದ ಆತನ ರೂಪವು ಕಣ್ಣುಕೋರೈಸುವಷ್ಟು ಪ್ರಕಾಶವುಳ್ಳದ್ದಾಗಿದೆ ಎಂದೂ ಹೇಳಿದೆ.

ಯಜ್ಞಕುಂಡದಲ್ಲಿರುವ ಭಸ್ಮವು ಔಷದಿಯ ಗುಣಗಳಿಂದ ಕೂಡಿದೆ. ಈ ಕಾರಣದಿಂದ ರುದ್ರನು ವೈದ್ಯನಾಥೇಶ್ವರನಾಗಿದ್ದಾನೆ. ಆತನ ಬಳಿ ಸಹಸ್ರಾರು ಔಷಧಿಗಳು ಇವೆ. ಅವನ ಹಸ್ತವೇ ಗುಣಪಡಿಸುವ ಶಕ್ತಿಯುಳ್ಳದ್ದು. ಯಜ್ಞ ವೇದಿಕೆಯ ಬಳಿ ಕುಳಿತರೇನೆ ಆರೋಗ್ಯ ವೃದ್ಧಿಯಾಗುತ್ತದೆ. ಆತನಿಗೆ ಜಲಾಷಭೇಷಜ ಎಂಬ ವಿಶೇಷಣವಿದೆ. ಅಂದರೆ ಆತನ ಅನುಗ್ರಹದಿಂದ ಅಮೃತಮಯ ಔಷಧವು ಸಿದ್ಧವಾಗುತ್ತದೆ. ಯಜ್ಞ ಭಸ್ಮವನ್ನು ಜಲದಲ್ಲಿ ಹಾಕಿ ಕರಗಿಸಿದರೆ ಆ ಜಲವೇ ಔಷಧಿಯಾಗುತ್ತದೆ. ರುದ್ರನು ಯಜ್ಞಕುಂಡವನ್ನು ಪ್ರತಿನಿಧಿಸುವುದರಿಂದ, ಆತನಿಗೆ ಪ್ರತ್ಯೇಕವಾಗಿ ಆಹುತಿಗಳನ್ನು ಕೊಡುವುದಿಲ್ಲ. ಆದರೆ ದೇವತೆಗಳಿಗೆಲ್ಲಾ ಆಹುತಿಯನ್ನು ಕೊಟ್ಟಮೇಲೆ, ಉಳಿದ ಘೃತವು ರುದ್ರನಿಗೆ ಅರ್ಪಿತವಾಗುತ್ತದೆ.

ರುದ್ರದೇವನೇ ಯಜ್ಞಕುಂಡವನ್ನು ಪ್ರತಿನಿಧಿಸುವ ದೇವನು. ಯಜ್ಞಕುಂಡವೇ ಪೃಥ್ವಿಯ ಅಂತ್ಯವೂ ಮತ್ತು ನಾಭಿಸ್ಥಾನವಾಗಿದೆ. ಅಂದರೆ ಪೃಥ್ವಿಯ ಮಧ್ಯಬಿಂದುವಾಗಿದೆ. ಯಜ್ಞಕುಂಡವು ರಚಿತವಾಗಿ ಅದರಲ್ಲಿ ರುದ್ರದೇವರು ಮೇಲಿನಿಂದ ಇಳಿದು ಬಂದು ಯಜ್ಞಕುಂಡದಲ್ಲಿ ನೆಲೆಸಿದ ಕೂಡಲೇ ದೇವತೆಗಳು ವಾಸಿಸುವ ಅಂತರಿಕ್ಷದಿಂದ ಯಜ್ಞಕುಂಡದವರೆಗೂ ಒಂದು ಬೆಳಕಿನ ಸ್ತಂಭವು ಏರ್ಪಡುತ್ತದೆ. ಸಪ್ತಸ್ವರ್ಗಗಳು ಯಜ್ಞಕುಂಡದ ಮೇಲೆ ಪ್ರಕಟವಾಗುತ್ತದೆ. ಋತ್ವಿಜರು ಮಂತ್ರಚೈತನ್ಯವನ್ನು ಪಡೆದಿದ್ದರೆ ಈ ಬೆಳಕಿನ ಸ್ತಂಭವನ್ನು ತಮ್ಮ ಅಂತರ್ ದೃಷ್ಟಿಯಿಂದ ನೋಡಬಹುದು.

ಸಪ್ತಸ್ವರ್ಗಗಳ ವ್ಯವಸ್ಥೆಯು ಮೂರು ರೀತಿಯಲ್ಲಿ ಪ್ರಕಟವಾಗುತ್ತದೆ.

೧. ಸೂರ್ಯನು ಉದಯಿಸುವಾಗ ಪೃಥ್ವಿಯ ಅಭಿಮುಖವಾಗಿ ಸಪ್ತಮಸ್ವರ್ಗ ಇರುತ್ತದೆ ಹಾಗೆಯೆ ಮಧ್ಯಾಹ್ನ ೧-೩೦ಕ್ಕೆ ಪ್ರಥಮ ಸ್ವರ್ಗವು ಪೃಥ್ವಿಯ ಅಭಿಮುಖವಾಗಿರುತ್ತದೆ. ಆಗ ಸಪ್ತಸ್ವರ್ಗಗಳು ಒಂದರ ಮೇಲೆ ಒಂದಿರುತ್ತದೆ. ಈ ವೇಳೆಯಲ್ಲಿ ಪೃಥ್ವಿಗೆ ಅಭಿಮುಖವಾಗಿರುವ ಯಮನ ಸೂರ್ಯಮಂಡಲವು ನಮಗೆ ಕಾಣಿಸುವುದಿಲ್ಲ.

೨. ಪೃಥ್ವಿಯ ಮೇಲೆ ಯಜ್ಞಕುಂಡವು ಸ್ಥಾಪಿಸಿದಾಗ ಯಜ್ಞಕುಂಡದ ಮೇಲ್ಭಾಗಕ್ಕೆ ಸಪ್ತಮಸ್ವರ್ಗಗಳು ಒಂದರ ಮೇಲೊಂದು ಪ್ರಕಟವಾಗುತ್ತದೆ. ಯಜ್ಞಕುಂಡವು ಪೃಥ್ವಿಯ ನಾಭಿಸ್ಥಾನವಾಗಿದೆ. ಆದ್ದರಿಂದ ಯಜ್ಞಕುಂಡದ ತಳಭಾಗದಿಂದ ಬ್ರಹ್ಮನು ಹೊರಬರುವನು.

೩. ನಮ್ಮ ಪಿಂಡಾಂಡದಲ್ಲಿ ನಾಭಿಯು ಪೃಥ್ವಿಯನ್ನು ಪ್ರತಿನಿಧಿಸುತ್ತದೆ. ನಾಭಿಯಿಂದ ಸ್ವಪ್ಥಸ್ವರ್ಗಗಳು ಶಿರಸ್ಸಿನ ಮಧ್ಯಭಾಗದವರೆಗೂ ಪ್ರಕಟವಾಗುತ್ತದೆ. ಪ್ರಥಮ ಸ್ವರ್ಗವಾದ ಭೂಃ ಎದರು ಯಮನ ಸೂರ್ಯಮಂಡಲವಿರುವುದು. ಈ ಸೂರ್ಯಮಂಡಲವನ್ನು ಯೋಗಿಯು ಪ್ರಕಟಮಾಡಬಹುದು. ಹಾಗೆಯೇ ಬ್ರಹ್ಮನು ನಾಭಿಯಿಂದ ಊರ್ಧ್ವಮುಖವಾಗಿ ಹೊರಬರುವನು. ಇದೇ ರೀತಿಯಲ್ಲಿ ವಿರಾಟ್ ಪುರುಷನಲ್ಲಿಯೂ ಇದೆ.

ಪೃಥ್ವಿಯಲ್ಲಿ ವಾಸಿಸುತ್ತಿರುವ ಮಾನವರನ್ನು ಆವರಿಸಿರುವ ಅಸುರಶಕ್ತಿಗಳನ್ನು ಓಡಿಸಬೇಕಾದರೆ ಎಲ್ಲೆಡೆ ಬಹಿರ್‌ಯಜ್ಞವನ್ನು ಮತ್ತೆ ಮಾಡಬೇಕಾಗಿದೆ. ಆಗ ಮಾತ್ರ ಸತ್ಯಯುಗವು ಸ್ಥಾಪಿತವಾಗುತ್ತದೆ. ಸೂರ್ಯೋದಯಕಾಲವು ದೇವತೆಗಳ ಆಗಮನದ ಕಾಲವಾಗಿದೆ. ಆದ್ದರಿಂದ ಸೂರ್ಯೋದಯಕ್ಕಿಂತ ಮೊದಲೇ ಎದ್ದು ಸೂರ್ಯನಿಗೆ ಅರ್ಘ್ಯವನ್ನು ಅರ್ಪಿಸಿ ಆನಂತರ ಬಹಿರ್‌ಯಜ್ಞವನ್ನು ಮಾಡಬೇಕಾಗಿದೆ. ಮಧ್ಯಾಹ್ನ ಮತ್ತು ಸಾಯಂಕಾಲ ಅಂತರ್ ಯಜ್ಞದ ಮೂಲಕ ದೇವತೆಗಳನ್ನು ಆರಾಧಿಸಬಹುದು.

ವಿ ಶ್ರಯಂತಾಮೃತಾವೃಧೋ ದ್ವಾರೋ ದೇವೇರಸಶ್ಚತಃ ।
ಅದ್ಯಾ ನೂನಂ ಚ ಯಷ್ಟವೇ ।। (ಋ ೧-೧೩-೬ ಸಾ ಭಾ)
"ಯಜ್ಞ ಮಾಡುವುದಕ್ಕಾಗಿ, ಯಜ್ಞವೃದ್ಧಿಗಾಗಿ ಬೆಳಕನ್ನುಂಟು ಮಾಡುವ ಯಜ್ಞಶಾಲೆಯನ್ನು ಇದುವರೆಗೂ ಯಾರೂ ಪ್ರವೇಶಿಸಿಲ್ಲ. ಇಂತಹ ಯಜ್ಞಶಾಲೆಯ ಬಾಗಿಲುಗಳು ನಾವು ಮಾಡುವ ಯಜ್ಞಕ್ಕಾಗಿ ಈಗಲೇ ತಡವಿಲ್ಲದೇ ತೆರೆಯಲ್ಪಡಲಿ."

ಈ ಮಂತ್ರವು ಅಂತರ್ಯಜ್ಞದ ಬಗ್ಗೆಯೆ ಹೇಳುತ್ತಿದೆ ಎಂದು ಭಾವಿಸುತ್ತೇನೆ. ಬಹಿರ್ಯಜ್ಞದ ಯಜ್ಞಶಾಲೆಯನ್ನು ಇದುವರೆಗೂ ಸಹಸ್ರಾರು ಋತ್ವಿಜರು ಪ್ರವೇಶಿಸಿದ್ದಾರೆ. ವೇದಕಾಲದಿಂದಲೂ ಸಹಸ್ರಾರು ಋಷಿಗಳೂ, ಋತ್ವಿಜರೂ ಮತ್ತು ಯಜಮಾನರೂ ಬಹಿರ್ಯಜ್ಞವನ್ನು ಮಾಡಿದ್ದಾರೆ. ಆದ್ದರಿಂದ ಮೇಲಿನ ಮಂತ್ರವು ಅಂತರ್ಯಜ್ಞದ ಮಹಿಮೆಯನ್ನು ಹೇಳುತ್ತಿದೆಯೆಂದು ಭಾವಿಸುತ್ತೇನೆ.

ರುದ್ರನೇ ನಮ್ಮ ಗೃಹಗಳಲ್ಲಿ ವಾಸಿಸುವ ವಾಸ್ತುಪುರುಷನು ಮತ್ತು ವಸುಗಳಲೆಲ್ಲಾ ಶ್ರೇಷ್ಠನಾದ ದೇವತೆಯು ರುದ್ರನೇ ಆಗಿದ್ದಾನೆ. ಗೃಹಗಳು ನಮಗೆ ರಕ್ಷಣೆಯನ್ನು ಕೊಡುತ್ತದೆ ಮತ್ತು ಗೃಹನಿರ್ಮಾಣದ ಗುರಿಯೂ ಅದೇ ಆಗಿದೆ. ಯಾರ ಮನೆಯಲ್ಲಿ ಪ್ರತಿನಿತ್ಯವೂ ಯಜ್ಞದ ಮೂಲಕ ರುದ್ರಾದಿದೇವತೆಗಳ ಆರಾಧನೆಯನ್ನು ಮಾಡುತ್ತಾರೋ ಅಂತವರ ಪತ್ನಿಪುತ್ರಪೌತ್ರಾದಿಗಳು ನೆಮ್ಮದಿಯ ಜೀವನವನ್ನು ಮಾಡುತ್ತಾರೆ. ರುದ್ರದೇವರ ಮುಖಾಂತರ ಇಂದ್ರಾದಿ ಎಲ್ಲ ದೇವತೆಗಳ ಅನುಗ್ರಹವೂ ಉಂಟಾಗುತ್ತದೆ.

ರುದ್ರನು ಪ್ರಸನ್ನನಾದರೆ ನಮ್ಮೆಲ್ಲರನ್ನು ಕಾಪಾಡುತ್ತಾನೆ. ಈಗ ರುದ್ರನ ಮಹಿಮೆಯನ್ನು ಋಗ್ವೇದ ಮಂತ್ರಗಳಿಂದ ತಿಳಿದುಕೊಳ್ಳೋಣ.

ಗಾಥಪತಿಂ ಮೇಧಪತಿಂ ರುದ್ರಂ ಜಲಾಷಭೇಷಜಂ ।
ತಚ್ಛಂಯೋಃ ಸುಮ್ನಮೀಮಹೇ ।। (ಋ ೧-೪೩-೪ ಸಾಭಾ)
"ಸ್ತೋತ್ರಪಾಲಕನೂ, ಯಜ್ಞಪಾಲಕನು ಮತ್ತು ಸುಖದಾಯಕವಾದ ಔಷಧಿಗಳುಳ್ಳವನೂ ಆದ ರುದ್ರನನ್ನು ನಾವು, ಬೃಹಸ್ಪತಿಯ ಪುತ್ರನಾದ ಶಂಯುವು ಅನುಭವಿಸುವ ಪ್ರಸಿದ್ಧವಾದ ಸುಖವನ್ನು ಕೊಡುವುದಕ್ಕಾಗಿ ಪ್ರಾರ್ಥಿಸುತ್ತೇವೆ."

ಯಃ ಶುಕ್ರ ಇವ ಸೂರ್ಯೋ ಹಿರಣ್ಯಮಿವ ರೋಚತೇ ।
ಶ್ರೇಷ್ಠೋ ಧೇವಾನಾಂ ವಸುಃ ।। (ಋ ೧-೪೩-೫ ಸಾಭಾ)
"ರುದ್ರನು ಸೂರ್ಯನಂತೆ ಪ್ರಕಾಶಮಾನನಾಗಿಯೂ, ಚಿನ್ನದಂತೆ ಪ್ರಕಾಶಮಾನನಾಗಿಯೂ (ಹಿರಣ್ಮಯ ವರ್ಣನು) ಇದ್ದಾನೆ. ಅವನು ಸಕಲ ದೇವತೆಗಳ ನಡುವೆ ಅತ್ಯಂತ ಶ್ರೇಷ್ಠವಾದ ಸ್ಥಾನವುಳ್ಳವನು."

ಶಂ ನಃ ಕರತ್ಯರ್ವತೇ ಸುಗಂ ಮೇಷಾಯ ಮೇಷ್ಯೇ ।
ನೃಭ್ಯೋ ನಾರಿಭ್ಯೋ ಗವೇ ।। (ಋ ೧-೪೩-೬ ಸಾಭಾ)
"ರುದ್ರನು ನಮ್ಮ ಕುಟುಂಬದ ಎಲ್ಲಾ ಸದಸ್ಯರಿಗೂ, ಸಾಕುಪ್ರಾಣಿಗಳಿಗೂ ಸುಖವನ್ನುಂಟುಮಾಡುತ್ತಾನೆ"

ತ್ವಾದತ್ತೇಭೀ ರುದ್ರ ಶಂತಮೇಭಿಃ ಶತಂ ಹಿಮಾ ಅಶೀಯ ಭೇಷಜೇಭಿಃ ।
ವ್ಯಅಸ್ಮದ್ದ್ವೇಷೋ ವಿತರಂ ವ್ಯಂಹೋ ವ್ಯಮೀವಾಶ್ಚಾತಯಸಾ ವಿಷೂಚೀಃ ।। (ಋ ೨-೩೩-೨ ಸಾಭಾ)
"ಎಲೈ ರುದ್ರನೆ, ನಿನ್ನಿಂದ ದತ್ತವಾದವೂ, ಸುಖಕರವಾದವೂ ಆದ ವನಸ್ಪತಿಗಳ ಸೇವನೆಯಿಂದ ಪುಷ್ಟನಾಗಿ ನಾನು ಶತಸಂಖ್ಯಾತವಾದ ಸಂವತ್ಸರಗಳನ್ನು ಪೂರ್ಣವಾಗಿ ಜೀವಿಸುವಂತಾಗಲಿ. ನಮ್ಮ ಶತೃಗಳನ್ನು, ಪಾಪವನ್ನೂ ನಾನಾ ವಿಧವಾಗಿ ಶರೀರದಲ್ಲಿ ವ್ಯಾಪಿಸುವ ರೋಗವನ್ನೂ ಸಹ ಪೂರ್ಣವಾಗಿ ನಾಶಮಾಡು."

ಶ್ರೇಷ್ಠೋ ಜಾತಸ್ಯ ರುದ್ರ ಶ್ರಿಯಾಸಿ ತವಸ್ತಮಸ್ತವಸಾಂ ವಜ್ರಬಾಹೋ ।
ಷರ್ಷಿ ಣಃ ಪಾರಮಂಹಸಃ ಸ್ವಸ್ತಿ ವಿಶ್ವಾ ಅಭೀತೀ ರಪಸೋ ಯುಯೋಧಿ ।। (ಋ ೨-೩೩-೩ ಸಾಭಾ)
"ಎಲೈ ರುದ್ರನೇ, ಉತ್ಪನ್ನವಾದ ಸಕಲ ಜಗತ್ತಿನಲ್ಲಿಯೂ ನೀನು ನಿನ್ನ ಐಶ್ವರ್ಯದಿಂದ ಅತ್ಯುತ್ಕೃಷ್ಟನಾಗಿದ್ದೀಯೆ. ವಜ್ರವನ್ನು ಆಯುಧವಾಗಿ ಹಿಡಿದಿರಯವ ರುದ್ರನೇ, ಬಲಶಾಲಿಗಳ ನಡುವೆ ನೀನು ಅತ್ಯಂತ ಬಲಶಾಲಿಯಾಗಿದ್ದೀಯೆ. ರುದ್ರನೇ, ನಮ್ಮ ಪಾಪದ ಕೊನೆಯನ್ನು ಮುಟ್ಟಿಸಿ ಸುರಕ್ಷಿತವಾಗಿ ಅದರಿಂದ ದಾಟಿಸು. ಪಾಪದ ಸಕಲ ವಿಧವಾದ ಹೊಡೆತಗಳನ್ನು ತಪ್ಪಿಸು."

ಕ್ವ ಸ್ಯ ತೇ ರುದ್ರ ಮೃಳಾಯಕುರ್ಹಸ್ತೋ ಯೋ ಅಸ್ತಿ ಭೇಷಜೋ ಜಲಾಷಃ ।

ಅಪಭರ್ತಾ ರಪಸೋ ದೈವ್ಯಸಾಭೀ ನು ಮಾ ವೃಷಭ ಚಕ್ಷಮೀಥಾಃ ॥ (ಋ ೨-೩೩-೭ ಸಾಭಾ)
"ಎಲೈ ರುದ್ರನೇ, ಯಾವ ಹಸ್ತವು ರೋಗವನ್ನು ನಾಶಮಾಡತಕ್ಕದ್ದು, ಸಂತೋಷದಾಯಕವಾದುದೂ ಆಗಿರುತ್ತದೆಯೋ ಅಂತಹ ನಿನ್ನ ಸುಖಕಾರಿಯಾದುದೂ, ಪ್ರಸಿದ್ಧವಾದುದೂ ಆದ ಹಸ್ತವು ಎಲ್ಲಿ? ಎಲೈ ರುದ್ರನೇ, ದೇವತಾಪರಾಧವನ್ನು ಕ್ಷಮಿಸುವ ಶಕ್ತಿಯುಳ್ಳ ನೀನು, ಅಪರಾಧಿಯಾದ ನನ್ನನ್ನು ಕ್ಷಿಪ್ರವಾಗಿಯೂ, ಪೂರ್ಣವಾಗಿಯೂ ಕ್ಷಮಿಸು."

ಮಾ ತ್ವಾ ರುದ್ರ ಚುಕ್ರುಧಾಮಾ ನಮೋಭಿರ್ಮಾ ದುಷ್ಟುತೀ ವೃಷಭ ಮಾ ಸಹೂತೀ ।
ಉನ್ನೋ ವೀರಾನ್ ಅರ್ಪಯ ಭೇಷಜೇಭಿರ್ಭಿಷಕ್ತಮಂ ತ್ವಾ ಬಿಷಜಾಂ ಶೃಣೋಮಿ ॥ (ಋ ೨-೩೩-೪ ಸಾಭಾ)
"ಇಷ್ಟಾರ್ಥಪ್ರದನಾದ ಎಲೈ ರುದ್ರನೇ, ನ್ಯೂನ್ಯತೆಗಳಿಂದ ಕೂಡಿದ ಪೂಜೆಗಳಿಂದಾಗಲಿ, ಅಮಂಗಳಕರವಾದ ಸ್ತುತಿಗಳಿಂದಾಗಲಿ, ಇತರ ದೇವತೆಗಳನ್ನು ನಿನ್ನೊಂದಿಗೆ ಕರೆದು ಪೂಜಿಸುವುದರಿಂದಾಗಲಿ ನಾವು ನಿನಗೆ ಕ್ರೋಧವನ್ನುಂಟು ಮಾಡುವಂತೆ ಆಗದಿರಲಿ. ನಾವು ಹಾಗೆ ಮಾಡಲಾರೆವು. ನಮ್ಮ ವೀರಪುತ್ರರನ್ನು ನಿನ್ನ ಓಷಧಿಗಳಿಂಥ ಸಂಯುಕ್ತರಾಗುವಂತೆ ಮಾಡು. ನಿನ್ನನ್ನು ವೈದ್ಯರಲ್ಲೆಲ್ಲಾ ಅತ್ಯಂತ ಶ್ರೇಷ್ಠನಾದ ವೈದ್ಯನೆಂದು ಕೇಳಿ ತಿಳಿದಿದ್ದೇವೆ."

ಸ ಹಿ ಕ್ಷಯೇಣ ಕ್ಷಮ್ಯಸ್ಯ ಜನ್ಮನಃ ಸಾಮ್ರಾಜ್ಯೇನ ದಿವ್ಯಸ್ಯ ಚೇತತಿ ।
ಅವನ್ನವಂತೀರುಪ ನೋ ದುರಶ್ಚರಾನಮೀವೋ ರುದ್ರ ಜಾಸು ನೋ ಭವ ॥ (ಋ ೭-೪೬-೨ ಸಾ ಭಾ)
"ರುದ್ರನು ಪೃಥ್ವಿಯಲ್ಲಿ ಉತ್ಪನ್ನರಾದ ಜನರಿಂದ ತನ್ನ ಸಂಪತ್ತಿನ ರೂಪದಿಂದಲೂ, ದ್ಯುಲೋಕೋತ್ಪನ್ನರಾದ ಜನರಿಗೆ ತನ್ನ ಪ್ರಭುತ್ವದಿಂದಲೂ ಅರಿಯಲ್ಪಡುತ್ತಾನೆ. ಎಲೈ ರುದ್ರನೇ, ನಿನ್ನನ್ನು ತೃಪ್ತಿಪಡಿಸುವ ನಮ್ಮನ್ನು ರಕ್ಷಿಸುತ್ತ ನಮ್ಮ ಗೃಹಗಳಿಗೆ ಬಂದು ಸೇರು. ನಮಗೆ ಸೇರಿದ ಪ್ರಜೆಗಳಲ್ಲಿ ರೋಗಪ್ರತಿಬಂಧಕನಾಗಿ ಆಗಿರು."
ಬ್ರಹ್ಮಾಂಡದಲ್ಲಿ ದೇವತೆಗಳು ಮಾಡಿದ ಯಜ್ಞಕ್ಕೆ ಏನನ್ನು ಆಹುತಿಯನ್ನಾಗಿ ಕೊಟ್ಟರು? ಸೋಮರಸವನ್ನು ಯಾವ ಲತೆಯಿಂದ ಅಥವಾ ಯಾವುದರಿಂದ ಹಿಂಡಿ ತೆಗೆದು ಅರ್ಪಿಸಿದರು? ಎಂಬುದನ್ನು ನೋಡೋಣ.

ದೇವತೆಗಳು ಉದಕವನ್ನೇ ಆಹುತಿಯನ್ನಾಗಿ ಕೊಟ್ಟರು ಏಕೆಂದರೆ ಉದಕಗಳಲ್ಲಿಯೇ ಘೃತವಿರುವುದು. ಪರಮಾಣುವಿನ ಮಹಾಸಮುದ್ರದಲ್ಲಿದ್ದ ದೈವೀ ಉದಕಗಳನ್ನೇ ಆಹುತಿಯನ್ನಾಗಿ ಕೊಟ್ಟರು. ದೈವೀ ಉದಕಗಳಲ್ಲಿದ್ದ ಘೃತವನ್ನು ಅಗ್ನಿ ಮತ್ತು ಸೂರ್ಯನಿಂದ ಸಂಸ್ಕರಿಸಿ ಇಂದ್ರನಿಗೆ ಅರ್ಪಿಸಿದರು. ಇದರ ಬಗ್ಗೆ ಋಗ್ವೇದ ಮಂತ್ರಗಳನ್ನು ನೋಡೋಣ.

ಅಂಬಯೋ ಯನ್ತ್ಯಧ್ವಭಿರ್ಜಾಮಯೋ ಅಧ್ವರೀಯತಾಮ್।
ಪೃಂಚತೀರ್ಮಧುನಾ ಪಯಃ॥ (೧-೨೩-೧೬)
"ಮಾತೃಸ್ವರೂಪರಾದ ಉದಕಗಳು ತಮ್ಮ ಗೊತ್ತುಪಡಿಸಿದ ಮಾರ್ಗಗಳಲ್ಲಿ ಹರಿಯುತ್ತಿರುವುದು. ಯಜ್ಞಾನುಷ್ಠಾನವನ್ನು ಅಪೇಕ್ಷಿಸುವವರಿಗೆ ದೈವೀ ಸಹೋದರಿಯರು (ಕುಂಡಲಿನಿ ಮಾತೆಯರು) ಉದಕಗಳಿಗೆ ಮಧುವನ್ನು ಮತ್ತು ಹಾಲನ್ನು ಉದಕಗಳ ಜೊತೆ ಬೆರೆಸುವರು." (೧-೨೩-೧೬ ಆರ್ ಎಲ್ ಕ)

ಅಪೋ ದೇವೀರುಪ ಹ್ವಯೇ ಯತ್ರ ಗಾವಃ ಪಿಬಂತಿ ನಃ।
ಸಿಂಧುಭ್ಯಃ ಕರ್ತ್ವಂ ಹವಿಃ॥ (೧-೨೩-೧೮ ಆರ್ ಎಲ್ ಕ)
"ನಾವು ಉದಕಗಳನ್ನೂ ಮತ್ತು ದೈವೀ ಮಾತೆಯರನ್ನೂ ಆಹ್ವಾನಿಸುತ್ತೇವೆ. ನಮ್ಮ ಹಸುಗಳು (ಜ್ಞಾನವೆಂಬ ಹಸುಗಳು) ಯಾವ ಉದಕಗಳನ್ನು ಕುಡಿದು ಪೋಷಣೆಯಾಗುತ್ತವೋ, ಆ ಉದಕಗಳಿಂದ ಹವಿಸ್ಸನ್ನು ಪ್ರದಾನ ಮಾಡಬೇಕು." (ಭೂಲೋಕದ ಹಸುಗಳು ಈ ದೈವೀ ಉದಕವನ್ನು ಕುಡಿಯಲಾರವು.)

ಅಪ್ಸ್ವ-ನ್ತರಮೃತಮಪ್ಸು ಭೇಷಜಮಪಾಮುತ ಪ್ರಶಸ್ತಯೇ।
ದೇವಾ ಭವತ ವಾಜಿನಃ॥ (೧-೨೩-೧೯ ಸಾಭಾ)
"ಉದಕಗಳ ಮಧ್ಯದಲ್ಲಿ ಅಮೃತವಿರುವುದು. ಉದಕದಲ್ಲಿ ವ್ಯಾದಿಯನ್ನು ಗುಣಪಡಿಸುವ ಔಷಧವಿರುವುದು.."

## ಗೋವಿನ ಘೃತ ಮತ್ತು ಬೆರಣಿ

ದೇವತೆಗಳು ಉದಕದಲ್ಲಿದ್ದ ಘೃತವನ್ನು ಹವಿಸ್ಸನ್ನಾಗಿ ಅರ್ಪಿಸಿದರು. ಹಸುವಿನ ಘೃತವು ಎಮ್ಮೆ, ಮೇಕೆ ಇತ್ಯಾದಿ ಘೃತಗಳಿಗಿಂತಲೂ ಸರ್ವಶ್ರೇಷ್ಠವೆಂದು ವೇದವು ಪರಿಗಣಿಸಿದೆ. ಆದ್ದರಿಂದ ಗೋವಿನ ಘೃತದಿಂದ ಅಗ್ನಿಹೋತ್ರವನ್ನು ಮಾಡಬೇಕು. ಮನೆಯೊಳಗೆ ಅಗ್ನಿಹೋತ್ರವನ್ನು ಗೋವಿನ ಸಗಣಿಯಿಂದ ಮಾಡಿದ ಬೆರಣಿಗಳಿಂದ ಮಾಡುವುದು ಶ್ರೇಷ್ಟವಾಗಿದೆ. ಇದಕ್ಕೆ ಕಾರಣವೇನೆಂದರೆ ಗೋವಿನ ಬೆರಣಿಯು ಪೂರ್ಣವಾಗಿ ಉರಿಯುವುದರಿಂದ ಧೂಮವು ಬಹಳ ಕಡಿಮೆ ಪ್ರಮಾಣದಲ್ಲಿ ಬಿಡುಗಡೆಯಾಗುತ್ತದೆ ಮತ್ತು ಘೃತವೂ ಸಹ ಪೂರ್ಣ ಪ್ರಮಾಣದಲ್ಲಿ ದಹನಗೊಂಡು ಹವಿಸ್ಸಾಗಿ ಪರಿವರ್ತನೆ ಹೊಂದುತ್ತದೆ.

ಮನೆಯಿಂದ ಹೊರಗೆ ಅಗ್ನಿಹೋತ್ರವನ್ನು ಮಾಡುವುದಾಗಿದ್ದರೆ ಕೆಲವು ಮರಗಳಿಂದ ಅಂದರೆ ಮಾವು, ಅರಳಿ, ಬಿಲ್ವ, ಪಲಾಶ. ದೇವದಾರು, ಶಮಿ, ಶ್ರೀಗಂದ ಇತ್ಯಾದಿ ಮರಗಳಿಂದ ತಾನಾಗೆ ಬಿದ್ದ ಕಡ್ಡಿಗಳಿಂದ ಅಗ್ನಿಹೋತ್ರವನ್ನು ಮಾಡಬೇಕು. ಏಕೆಂದರೆ ಗಾಳಿಯು ಹೊರಗಡೆ ವಿಪರೀತವಾಗಿ ಬೀಸುವುದರಿಂದ ತಾನಾಗೇ ಬಿದ್ದ ಈ ಒಣಕಡ್ಡಿಗಳಿಂದ ಮಾಡಬೇಕು. ಈ ರೀತಿಯಾಗಿ ಯಜ್ಞವನ್ನು ದೇಶವನ್ನಾಳುವ ವ್ಯಕ್ತಿಗಳು ಭಾರತದಲೆಲ್ಲಾ ಯಜ್ಞವನ್ನು ಮಾಡುವ ವ್ಯವಸ್ಥೆಯನ್ನು ಮಾಡಿದರೆ ನಾವು ಭಗವಂತನಾದ ಇಂದ್ರದೇವರ ಕೋಪವನ್ನು ಶಾಂತಗೊಳಿಸಿ ನಮ್ಮ ದೇಶವನ್ನು ಅನುಗ್ರಹಿಸುವಂತೆ ಪ್ರಾರ್ಥಿಸಿದಾಗ ಇಂದ್ರದೇವರು ನಮ್ಮ ಈವರೆಗಿನ ತಪ್ಪುಗಳನ್ನು ಮನ್ನಿಸಿ ಮತ್ತೆ ನಮ್ಮ ಭಾರತ ದೇಶವನ್ನು ಉತ್ತುಂಗಕ್ಕೆ ಕರೆದೊಯ್ಯುವನು.

ಯಜ್ಞದ ಮಹಿಮೆಯನ್ನು ಪೃಥ್ವಿಯ ಸಕಲ ದೇಶಗಳಿಗೂ ತಿಳಿಸಿದಾಗ ಸಕಲ ದೇಶಗಳೂ ಯಜ್ಞದ ಮುಖಾಂತರ ಇಂದ್ರನ ಕೃಪೆಗೆ ಪಾತ್ರರಾಗಿ ಸಕಲ ಮಾನವರಲ್ಲಿರುವ ಅಸುರೀಗುಣಗಳು ನಿವಾರಣೆಯಾಗಿ ದೈವೀಗುಣಗಳು ಎಲ್ಲರಲ್ಲಿಯೂ ಪ್ರಕಟವಾಗುವುದು. ಆಗ ದೇವತೆಗಳು ಸಂತೋಷವನ್ನು ಹೊಂದಿ ಸಕಲ ಜೀವರಾಶಿಗಳನ್ನೂ ಮತ್ತು ಪೃಥ್ವಿಯನ್ನು ಆಶೀರ್ವದಿಸುವರು. ಆಗ ಸತ್ಯಯುಗವು ಮತ್ತೆ ಭೂಮಿಯ ಮೇಲೆ ಸ್ಥಾಪಿತವಾಗುವುದು.

ಅನಚ್ಚಯೇ ತುರಗಾತು ಜೀವಮೇಜದ್ಧ್ರುವಂ ಮಧ್ಯ ಆ ಪಸ್ತ್ಯಾನಾಂ ।
ಜೀವೋ ಮೃತಸ್ಯ ಚರತಿ ಸ್ವಧಾಭಿಃರಮರ್ತ್ಯೋ ಮರ್ತ್ಯೇನಾ ಸಯೋನಿಃ ।। (ಋಗ್ವೇದ ೧-೧೬೪-೩೦ ಸಾಭಾ)
"ದೇಹದೊಂದಿಗಿರುವ ಜೀವನು ಪ್ರಾಣಯುಕ್ತನಾಗಿಯೂ, ಉಸಿರಾಡುತ್ತಲೂ, ತನ್ನ ಐಹಿಕವಾದ ಕರ್ತವ್ಯಗಳಿಗಾಗಿ ತ್ವರಿತವಾದ ಚಲನವಲನಗಳಿಂದಲೂ ಸಂಚರಿಸುತ್ತಿದ್ದರೂ ಸಹ ದೇಹರೂಪವಾದ ಗೃಹಗಳ ನಡುವೆ ಅಚಲನಾಗಿ ನೆಲೆಸಿರುತ್ತಾನೆ. ಜೀವನು ಮರಣಧರ್ಮವುಳ್ಳ ದೇಹಸಂಬಂಧಿಯಾಗಿಯೂ ಮತ್ತು ಉತ್ಪತ್ತಿಕಾಲದಲ್ಲಿ ಮರಣಾತ್ಮಕವಾದ ದೇಹದೊಡನೆ ಒಂದೇ ಉತ್ಪತ್ತಿಸ್ಥಾನವುಳ್ಳವನೂ ಆದರೂ ಸಹ ತಾನು ಮಾತ್ರ ಮರಣಧರ್ಮವಿಲ್ಲದೇ ಪುತ್ರಾದಿಗಳಿಂದ ದತ್ತವಾದ ಸ್ವಧೆಗಳಿಂದ ತೃಪ್ತನಾಗಿ ಸಂಚರಿಸುತ್ತಾನೆ."

# ಅಧ್ಯಾಯ–೨: ಕೇವಲ ೧೫ ನಿಮಿಷಗಳಲ್ಲಿ ಮಾಡಬಹುದಾದ ಅಗ್ನಿಹೋತ್ರವನ್ನು ಮಾಡುವ ಅತಿ ಸರಳ ವಿಧಾನ

ಭಗವಂತನನ್ನು ಮತ್ತು ದೇವತೆಗಳನ್ನು ಆರಾಧಿಸುವ ಶ್ರೇಷ್ಟವಾದ ಮಾರ್ಗವು ಯಾವುದು?

ಪವಿತ್ರಾಗ್ನಿಯ ಮುಖಾಂತರ ಭಗವಂತನನ್ನೂ ಮತ್ತು ದೇವತೆಗಳನ್ನೂ ಆಹ್ವಾನಿಸಿ, ದೇವಬಾಷೆಯ ಮಂತ್ರಗಳಿಂದ ಅಗ್ನಿಗೆ ಆಹುತಿಗಳನ್ನು ಅರ್ಪಿಸುವ ಪದ್ಧತಿಯೇ ಅತಿ ಶ್ರೇಷ್ಟವಾದುದು. ಏಕೆಂದರೆ

೮. ದೇವತೆಗಳು ಅಗ್ನಿಯನ್ನು ತಮ್ಮ ಮತ್ತು ಮಾನವರ ಮಧ್ಯೆ ದೇವದೂತನನ್ನಾಗಿ ಮಾಡಿಕೊಂಡಿರುವರು.
೯. ಅಗ್ನಿಯು ಯಜ್ಞದಲ್ಲಿ ಪುರೋಹಿತನ ಪಾತ್ರವನ್ನು ವಹಿಸುವನು.
೧೦. ಯಜಮಾನನು ಅಗ್ನಿಯ ಮುಖಾಂತರ ದೇವತೆಗಳನ್ನು ಆಹ್ವಾನಿಸುವನು ಮತ್ತು ಅಗ್ನಿಯು ದೇವತೆಗಳನ್ನು ಯಜಮಾನನ ಬಳಿ ಕರೆತರುವನು. ಮಾನವರು ಅರ್ಪಿಸಿದ ಆಹುತಿಗಳನ್ನು ಅಗ್ನಿಯು ದೇವತೆಗಳಿಗೆ ತಲುಪಿಸುವನು.
೧೧. ಅಗ್ನಿಯು ಸಕಲ ಆಧ್ಯಾತ್ಮಿಕ ರಹಸ್ಯಗಳನ್ನು ಧಾರಣೆಮಾಡಿದ್ದಾನೆ. ಅಗ್ನಿದೇವನು ತನ್ನ ಕೃಪೆಗೆ ಒಳಗಾದ ಮಾನವನನ್ನು ಋಷಿಯನ್ನಾಗಿ ಪರಿವರ್ತಿಸುತ್ತಾನೆ.

ಋಗ್ವೇದ ಮಂತ್ರಗಳನ್ನು ಕಲಿಯುವವರೆಗೂ ಬಹಳ ಸರಳವಾದ ವಿಧಾನದಿಂದ ದೇವತೆಗಳನ್ನು ಆರಾಧಿಸಬಹುದು. ಅಗ್ನಿಹೋತ್ರವನ್ನು ತ್ರಿಸಂಧ್ಯಾ ಕಾಲದಲ್ಲಿ ಬೆಳಗ್ಗೆ, ಮಧ್ಯಾನ್ಹ ಮತ್ತು ಸಾಯಂಸಂಧ್ಯಾಕಾಲದಲ್ಲಿ ಮಾಡಲಾಗುತ್ತದೆ.

ಈಗಿನ ಆಧುನಿಕ ಸಮಾಜದಲ್ಲಿ ವೇಳೆಯ ಅಭಾವವಿರುವುದರಿಂದ ಕೇವಲ ಒಂದು ಸಾರಿ ಬೆಳಗ್ಗೆ ಅಗ್ನಿಹೋತ್ರವನ್ನು ಮಾಡಿ ದೇವತೆಗಳ ಅನುಗ್ರಹವನ್ನು ಪಡೆಯಬಹುದು. ಅವರವರ ಅನುಕೂಲಕ್ಕೆ ತಕ್ಕಂತೆ ಬೆಳಗ್ಗೆ ವೇಳೆಯನ್ನು ನಿಗದಿಪಡಿಸಿಕೊಂಡು ದೇವತೆಗಳನ್ನು ಮತ್ತು ಇಂದ್ರದೇವರನ್ನು ಆಹ್ವಾನಿಸಿ ಘೃತವನ್ನು ಹವಿಸ್ಸಿನ ರೂಪದಲ್ಲಿ ಅರ್ಪಿಸಿದಾಗ, ಘೃತವು ಅಗ್ನಿಯಲ್ಲಿ ದಹಿಸಿ, ಸೂರ್ಯನ ಕಿರಣಗಳಿಂದ ಸಂಸ್ಕರಿಸಲ್ಪಟ್ಟು ಸೋಮರಸವು ಹಿರಣ್ಯ ಪಾತ್ರೆಯಲ್ಲಿ ದೇವತೆಗಳಿಗೆ ತಲುಪುತ್ತದೆ. ದೇವತೆಗಳು ಹವಿಸ್ಸನ್ನು ಸ್ವೀಕರಿಸಿ ಯಜಮಾನನನ್ನು ಅನುಗ್ರಹಿಸುತ್ತಾರೆ.
ಸುಪ್ರಾವೀರಸ್ತು ಸ ಕ್ಷಯಃ ಪ್ರ ನು ಯಾಮನ್ತುಸುದಾನವಃ।
ಯೇ ನೋ ಅಂಹೋಅತಿಪಿಪ್ರತಿ॥ (ಋ ೭–೬೬–೫)
ಎಲೈ ಮಿತ್ರಾವರುಣಾರ್ಯಮರೇ, ನಮ್ಮ ಪಾಪಗಳನ್ನು ಪರಿಹರಿಸಿ ನಮ್ಮನ್ನು ದಾಟಿಸುವ ನೀವು ನಮ್ಮಲ್ಲಿಗೆ ಬಂದು ಹೋದನಂತರ ನಾವು ವಾಸಮಾಡುವ ಗೃಹವು ಯಾವ ಭಯವೂ ಇಲ್ಲದೆ ಸುರಕ್ಷಿತವಾಗುವುದು.

ಈಗ ಸಂಕ್ಷಿಪ್ತವಾಗಿ ಮಾಡುವ ಅಗ್ನಿಹೋತ್ರ ವಿಧಾನವನ್ನು ಮಾಡೋಣ.

ಸಂಧ್ಯೋಪಾಸನೆ ಅಥವಾ ಸೂರ್ಯೋಪಾಸನೆ ಮತ್ತು ಅಗ್ನಿಹೋತ್ರ ಇವೆರಡರ ವ್ಯತ್ಯಾಸವೇನು ಹಾಗು ಯಾವುದು ಶ್ರೇಷ್ಟ?

**ಸಂಧ್ಯೋಪಾಸನೆ** ನಮ್ಮ ಸ್ಥೂಲ ಸೂರ್ಯ, ಪೃಥ್ವಿ ಹಾಗು ಸೂರ್ಯ–ಸವಿತೃ ಸೃಷ್ಟಿಸಿದ ಸಪ್ತಸ್ವರ್ಗಕ್ಕೆ ಸಂಬಂದಿಸಿದೆ. ನಮ್ಮ ಶರೀರದ ಮರಣಾನಂತರ ಜೀವ ಅಥವಾ ಜೀವಾತ್ಮ ಯಾವುದಾದರೂ ಒಂದು ಸ್ವರ್ಗಕ್ಕೆ ಹೋಗುತ್ತಾನೆ. ಅಲ್ಲಿ ಕೆಲವು ಕಾಲ ಇದ್ದು ಮತ್ತೆ ಪೃಥ್ವಿಯ ಮೇಲೆ ಜನ್ಮವನ್ನು ತಾಳುತ್ತಾನೆ. ಸೂರ್ಯ ಪೃಥ್ವಿಯರ ಮಧ್ಯೆ ಸಪ್ತಸ್ವರ್ಗಗಳಿರುತ್ತದೆ. ನಾವು ಸೂರ್ಯ–ಸವಿತೃ, ಪೃಥ್ವಿ ಹಾಗು ಸಪ್ತಸ್ವರ್ಗಗಳ ವರ್ತುಲದಲ್ಲಿಯೇ ಇರುತೇವೆ.

**ಅಗ್ನಿಹೋತ್ರ** ನಮ್ಮ ಪೃಥ್ವಿಯಲ್ಲಿ ಸ್ಥಾಪಿಸಿದ ಯಜ್ಞಕುಂಡ, ವಿರಾಟ್‌ಪುರುಷನಲ್ಲಿರುವ ಸಪ್ತಸ್ವರ್ಗ ಹಾಗು ವಿರಾಟ್ ಪುರುಷನ ಶಿರಸ್ಸಿನಲ್ಲಿರುವ ಸೂರ್ಯ–ಸವಿತೃವಿಗೆ ಸಂಬಂಧಿಸಿದೆ. ಯಜ್ಞಕುಂಡದಿಂದ ಮೇಲ್ಮುಖವಾಗಿ ಸಪ್ತಸ್ವರ್ಗಗಳಿರುತ್ತವೆ. ವಿರಾಟ್ ಪುರುಷನ ದ್ಯಾವಾಪೃಥ್ವಿಗಳ ದರ್ಶನವಾಗುತ್ತದೆ ಹಾಗು ಸೂರ್ಯನ ಕಿರಣಗಳು ಮೇಲಿಂದ ಯಜ್ಞಕುಂಡದ ಮೇಲೆ ಇಳಿಯುತ್ತದೆ. ನಾವು ಅಗ್ನಿಹೋತ್ರದಲ್ಲಿ ಮುಂದುವರೆದರೆ ನಮಗೆ ಇತರ ಗಿರಿಶಿಖರಗಳು ಅಂದರೆ ಚಂದ್ರಮಂಡಲ ಇತ್ಯಾದಿಗಳನ್ನು ದೇವತೆಗಳು ನಮಗೆ ತೋರಿಸುತ್ತಾರೆ. ಸರ್ವೋತ್ತಮ ದೇವನಾದ ಇಂದ್ರನ ಅನುಗ್ರಹವಾದರೆ ಇಂದ್ರ ಲೋಕ್ಕೆ ಹೋಗಿ ಅಲ್ಲಿ ನಿರಂತರ ನೆಲೆಸುವ ಭಾಗ್ಯ ಪ್ರಾಪ್ತಿಯಾಗುತ್ತದೆ.

(ಸೃಷ್ಟಿಯಲ್ಲಿ ಇಂದ್ರನಾಮಕನಾಗಿಯೂ ಹಾಗು ಲಯದಲ್ಲಿ ನಾರಾಯಣ ನಾಮಕನಾಗಿಯೂ ಕರೆಯಲ್ಪಡುತ್ತಾನೆ. ಸೃಷ್ಟಿಯಲ್ಲಿ ದಿವ್ಯಜ್ಯೋತಿಯ ತೇಜಸ್ಸು ಸರ್ವತ್ರ ಹರಡುತ್ತದೆ. ಲಯದಲ್ಲಿ ದಿವ್ಯಜ್ಯೋತಿಯ ತೇಜಸ್ಸು ತನ್ನ ಕಿರಣಗಳನ್ನು ಒಳಗೆ ಎಳೆದುಕೊಳ್ಳುತ್ತಾನೆ. )

ನಾನು ನನ್ನ ಪಿಂಡಾಂಡದ ದರ್ಶನದ ಬಗ್ಗೆ ಹೇಳುವುದಾದರೆ ಬೃಹಸ್ಪತಿ, ಬ್ರಹ್ಮ ಮತ್ತು ಬ್ರಹ್ಮಣಸ್ಪತಿಯರನ್ನು ಜಾಗೃತಮಾಡಿದ ನಂತರ ಆದಿತ್ಯರ ಅನುಗ್ರಹದಿಂದ ಸೂರ್ಯ–ಸವಿತೃವನ್ನು ಜಾಗೃತಮಾಡುತ್ತೇನೆ. ತದನಂತರ ಅಂಗನ್ಯಾಸ–ಕರನ್ಯಾಸದಿಂದ ಸೂರ್ಯ–ಸವಿತೃವನ್ನು ಶಿರಸ್ಸಿನಲ್ಲಿ ಸ್ಥಾಪಿಸುತ್ತೇನೆ. ಆಗ ಮೇಲಿಂದ ಅಂದರೆ ಸೂರ್ಯ–ಸವಿತೃವಿನಿಂದ ಪಕ್ಷಿನೋಟವನ್ನು ಕೆಳಗೆ ಹಾಯಿಸಿದರೆ ಸಪ್ತಸ್ವರ್ಗಗಳು ನೇರವಾಗಿ ಲಂಬವಾಗಿ ಯಜ್ಞಕುಂಡದ ಮೇಲೆ ಇರುತ್ತದೆ. ಯಜ್ಞಕುಂಡವು ಪ್ರಜ್ವಲಿಸುತ್ತಿರುತ್ತದೆ.

ಮೊದಲ ಬಾರಿ ಅಗ್ನಿಹೋತ್ರವನ್ನು ಮಾಡುವವರಿಗಾಗಿ ಬಹಿರಂಗವಾಗಿ ಪ್ರಾಣಾಯಾಮವನ್ನು ಮಾಡುವುದು ಹೇಗೆ? ದೇವತೆಗಳನ್ನು ಆಹ್ವಾನವನ್ನು ಮಾಡುವ ಪರಿಯನ್ನು ಕೈಗಳಿಂದ ತೋರಿಸಲ್ಪಟ್ಟಿದೆ. ಇದನ್ನು ಅರ್ಥಮಾಡಿಕೊಂಡ ಮೇಲೆ ಮಾನಸಿಕವಾಗಿಯೇ ಮಾಡಬಹುದು. (ಯೂಟ್ಯೂಬ್ ವಿಡಿಯೋ ಶೀಘ್ರವಾಗಿ ಬರಲಿದೆ)

(**ಪ್ರಮುಖ ಸೂಚನೆ:** ಶಿವ–ಶಕ್ತಿಯರನ್ನು ಪೂಜೆ ಮಾಡುವ ಧರ್ಮಗಳು; ಉದಾಹರಣೆಗೆ ಶೈವರು, ಲಿಂಗಾಯಿತರು, ಶಾಕ್ತರು ದೇವತೆಗಳ ಇರುವನ್ನೇ ನಂಬುವುದಿಲ್ಲ. ಈ ಪಂಥದವರೆಲ್ಲಾ ವೇದವನ್ನು ತಿರಸ್ಕರಿಸುತ್ತಾರೆ. ಯಾಕೆ ದೇವತೆಗಳು ಇವರನ್ನು ಅನುಗ್ರಹಿಸಿಲ್ಲ? ಎಂಬ ಪ್ರಶ್ನೆ ಏಳುತ್ತದೆ. ಇದಕ್ಕೆ ಕಾರಣ ಅಸುರರಾಜನಾದ ವೃತ್ರಾಸುರನು ನಮ್ಮ ಸೂಕ್ಷ್ಮಶರೀರದ ಸುತ್ತಲೂ ಅಂಧಕಾರ ಮತ್ತು ಅಜ್ಞಾನದ ಕೋಟೆಯನ್ನು ಕಟ್ಟಿ, ಅಹಿ ಎಂಬ ಹೆಬ್ಬಾವಿನ ಸ್ವರೂಪದಿಂದ ಕೋಟೆಯ ಸುತ್ತಲೂ ಮಲಗಿಕೊಂಡಿದ್ದಾನೆ. ಆದ್ದರಿಂದ ಮಾನವರೆಲ್ಲರೂ ಅಸುರಶಕ್ತಿಗಳಿಗೆ ಒಳಗಾಗಿದ್ದಾರೆ. ಈ ಕೋಟೆಯನ್ನು ಧ್ವಂಸ ಮಾಡದೆ ದೇವತೆಗಳ ದರ್ಶನ ಸಾಧ್ಯವಿಲ್ಲ. **ಇದರ ಮೊದಲ ಹೆಜ್ಜೆಯೇ ಅಗ್ನಿಹೋತ್ರ.)**

**ಓಂ (ಓಂಕಾರವನ್ನು ೩ ಬಾರಿ ಹೇಳಿ)**

ಓಂ ಶ್ರೀ ಗುರುಭ್ಯೋ ನಮಃ

ಓಂ ಇಂದ್ರಾಯ ನಮಃ

ಓಂ ಸೂರ್ಯ–ಸವಿತಾಯೈ ನಮಃ

ಹೇ ಸೂರ್ಯ ದೇವರೆ ತಮ್ಮ ದೈವೀದ್ವಾರವನ್ನು ತೆರೆಯುವಂತವರಾಗಿ.
(ಏಕೆಂದರೆ ಸೂರ್ಯನಲ್ಲಿಯೇ ಸಕಲ ದೇವತೆಗಳಿದ್ದಾರೆ.)

ನಂತರ ಘಂಟೆಯನ್ನು ಭಾರಿಸುತ್ತಾ ಕೆಳಗಿನ ಮಂತ್ರವನ್ನು ಹೇಳಿ.

ಓಂ ಆಗಮಾರ್ಥಂ ತು ದೇವಾನಾಂ

ಗಮನಾರ್ಥಂ ತು ರಕ್ಷಸಾಂ।

ಕುರ್ವೇ ಘಂಟಾರವಂ ತತ್ರ ದೇವತಾಹ್ವಾನ ಲಾಂಛನಂ॥

(ದೇವತೆಗಳು ನಮ್ಮ ಬಳಿ ಆಗಮಿಸಲಿ, ರಾಕ್ಷಸರು ದೂರ ಹೋಗಲಿ, ಘಂಟಾನಾದದಿಂದ ದೇವತೆಗಳನ್ನು ಆಹ್ವಾನಿಸುತ್ತೇನೆ.)

## ಆಚಮನ (ಉದ್ಧರಣೆಯಲ್ಲಿ ನೀರನ್ನು ತೆಗೆದುಕೊಳ್ಳಿ)

ಓಂ ಅಮೃತೋಪಸ್ತರಣಮಸಿ ಸ್ವಾಹಾ। (ಹೇ ಉದಕಗಳೇ ಅಮೃತ ಅವಿನಾಶಿಯಾದ ನೀನು (ಉಪಸ್ತರಣಮಸಿ) ಆಸನದಂತೆ ನಮಗೆ ಆಶ್ರಯವನ್ನು ಕೊಡುತ್ತಿರುವೆ, (ಸ್ವಾಹಾ) ಇದು ಸತ್ಯವು.)
ಓಂ ಅಮೃತಾಪಿಧಾನಮಸಿ ಸ್ವಾಹಾ। (ಹೇ ರಕ್ಷಕ! ಅಮೃತಸ್ವರೂಪ ಉದಕಗಳೇ ನೀನು ಅಪಿಧಾನದಂತೆ (ಮೇಲೆ ಹೊದ್ದುಕೊಳ್ಳುವ ವಸ್ತ್ರದಂತೆ) ನಮ್ಮ ಸುತ್ತಲೂ ವ್ಯಾಪಿಸಿರುವೆ, ಇದು ಸತ್ಯವು.
ಓಂ ಸತ್ಯಂ ಯಶಃ ಶ್ರೀರ್ಮಯಿ ಶ್ರೀಃ ಶ್ರಯತಾಂ ಸ್ವಾಹಾ। (ಹೇ ರಕ್ಷಕ ಉದಕಗಳೇ ಅಂತಹ ನೀನು ಸತ್ಯಜ್ಞಾನವನ್ನು, ಯಶಸ್ಸನ್ನು, ಐಶ್ವರ್ಯವನ್ನು, ಆನಂದವನ್ನು ನನ್ನಲ್ಲಿ ಪ್ರವಹಿಸುವಂತೆ ಮಾಡಿ ಸ್ಥಿರವಾಗಿಡು. ನನ್ನ ಈ ಪ್ರಾರ್ಥನೆಯು ಫಲಿಸುವಂತೆ ಮಾಡು.)

**ಮೂರು ಪ್ರಾಣಾಯಾಮ**

(ಎರಡು ಕೈಗಳನ್ನು ಮೇಲೆತ್ತಿ "ಓಂ ವಾಯುವೇ ನಮಃ, ಧ್ಯಾಯಾಮಿ ಧ್ಯಾನಂ ಸಮರ್ಪಯಾಮಿ, ಆವಾಹಯಾಮಿ, ಆಸನಂ ಸಮರ್ಪಯಾಮಿ." ನಮ್ಮ ಶಿರಸ್ಸಿನ ಒಂದು ಅಡಿಯ (ದ್ವಾದಶಾಂಗ) ಮೇಲೆ ಅಂತರಿಕ್ಷದಿಂದ ವಾಯುದೇವರು ಇಳಿದು ಬರುತ್ತಾರೆ.)

**ಗಾಯತ್ರೀ ಮಂತ್ರದಿಂದ ಮೂರು ಪ್ರಾಣಾಯಾಮವನ್ನು ಮಾಡಿ**

ಒಂದು ಪ್ರಾಣಾಯಾಮವನ್ನು ಬಹಿರಂಗವಾಗಿ ಹೇಳುತ್ತೇನೆ. ನೀವು ಅದನ್ನು ಅರ್ಥಮಾಡಿಕೊಂಡು ಮನಸ್ಸಿನಲ್ಲಿ ಉಚ್ಚರಿಸುತ್ತಾ ಪ್ರಾಣಾಯಾಮವನ್ನು ಮಾಡಿ.

(ಮಂತ್ರ ಗೊತ್ತಿಲ್ಲದಿದ್ದರೆ ಕೇವಲ ಪ್ರಾಣಯಾಮ ಮಾಡಿ) ನಾಸಿಕದ ಬಲಹೊಳ್ಳೆಯನ್ನು ಮುಚ್ಚಿಕೊಂಡು ಎಡಹೊಳ್ಳೆಯ ಮೂಲಕ ಉಸಿರನ್ನು ಧೀರ್ಘವಾಗಿ ತೆಗೆದುಕೊಂಡು, ಎರಡು ಸೆಕೆಂಡು ನಿಲ್ಲಿಸಿ ನಂತರ ಬಲಹೊಳ್ಳೆಯ ಮೂಲಕ ಬಿಡಬೇಕು. ಈ ರೀತಿ ೩ ಬಾರಿ ಮಾಡಿ.

**ಸಂಕಲ್ಪ** (ಅಕ್ಷತೆಯನ್ನು ಬಲಗೈನಲ್ಲಿ ತೆಗೆದುಕೊಂಡು ಬಲತೊಡೆಯ ಮೇಲಿಟ್ಟು ಎಡಗೈಯನ್ನು ಬಲಗೈ ಮೇಲಿಡಿ.)

ಓಂ ಶುಭೇ ಶೋಭನೇ ಮುಹೂರ್ತೇ ..... ನಾಮ ಸಂವತ್ಸರೇ .... ಆಯನೇ..... ಋತೌ .... ಮಾಸೇ .....ಪಕ್ಷೇ .....ಶುಭತಿಥೌ .....ವಾಸರಯುಕ್ತಾಯಾಂ .....ಶುಭನಕ್ಷತ್ರ ಶುಭಯೋಗ ಶುಭಕರಣ ಏವಂ ಗುಣ ವಿಶೇಷಣ ವಿಶಿಷ್ಟಾಯಾಂ ಮಮೋಪಾತ್ತ ಸಮಸ್ತ ದುರಿತಕ್ಷಯದ್ವಾರಾ ಸಕಲ ದೇವತಾ ಪ್ರೀತ್ಯರ್ಥಂ, ಇಂದ್ರಲೋಕ ಪ್ರಾಪ್ತ್ಯರ್ತಂ ಪ್ರಾತಸ್ಸವನಂ ಕರಿಷ್ಯೇ.

**ಓಂ ದ್ಯಾವಾ ಪೃಥಿವಿಯೇನಮಃ.**

(ಪೃಥ್ವಿ ಮತ್ತು ಸಪ್ತಸ್ವರ್ಗಗಳಿಗೆ ನಮಸ್ಕಾರಗಳು)

**ದೇವತೆಗಳ ಆವಾಹನ ಮಂತ್ರಗಳು**

**(ಉದಾಹರಣೆಗೆ:** ಎರಡು ಕೈಗಳನ್ನು ಮೇಲೆತ್ತಿ **"ಓಂ ಪ್ರಜಾಪತಿಯೇ ನಮಃ,** ಧ್ಯಾಯಾಮಿ ಧ್ಯಾನಂ ಸಮರ್ಪಯಾಮಿ; ಆವಾಹಯಾಮಿ ಆಸನಂ ಸಮರ್ಪಯಾಮಿ. (ಪ್ರಜಾಪತಿ ದೇವತೆಯು ಕೆಳಗೆ ಬರುವರು)**,** ಪಾದಯೋ ಪಾದ್ಯಂ ಸಮರ್ಪಯಾಮಿ; ಹಸ್ತಯೋ ಅರ್ಘ್ಯಂ ಸಮರ್ಪಯಾಮಿ; ಆಚಮನೀಯಂ ಸಮರ್ಪಯಾಮಿ; ಪುಷ್ಪಂ ಸಮರ್ಪಯಾಮಿ.

ಪಾದವನ್ನು ಜಲದಿಂದ ತೊಳೆಯಬೇಕು ಅರ್ಘ್ಯ ಪಾತ್ರಯಲ್ಲಿ ಉದಕವನ್ನು ಉದ್ಧರಣೆಯಿಂದ ಬಿಡಬೇಕು, ಹಸ್ತಕ್ಕೆ ಜಲವನ್ನು ಅರ್ಪಿಸಬೇಕು ಆನಂತರ ಜಲವನ್ನು ಮೂರು ಬಾರಿ ಉದ್ಧರಣೆಯಿಂದ ತೆಗೆದುಕೊಳ್ಳಲು ಕೊಡಬೇಕು. **ಇದೇ ರೀತಿ ಸಕಲ ದೇವತೆಗಳಿಗೂ ಮಾಡಬೇಕು.)**

**ಬೃಹಸ್ಪತಿ ಮತ್ತು ಬ್ರಹ್ಮಣಸ್ಪತಿ**

ಮೊದಲು ಬೃಹಸ್ಪತಿ ಮತ್ತು ಬ್ರಹ್ಮಣಸ್ಪತಿಗಳನ್ನು ಆರಾಧಿಸಬೇಕು. ಏಕೆಂದರೆ ಅವರು ವಾಕ್‌ಅನ್ನು ಪ್ರತಿಪಾಧಿಸುವುದರಿಂದ ಅವರು ತಮ್ಮ ಮಂತ್ರಶಕ್ತಿಯಿಂದ ಅಸುರರು ಕಟ್ಟಿರುವ ಅಂಧಕಾರದ ಕೋಟೆಯನ್ನು ಶಿಥಿಲಗೊಳಿಸುವರು ಮತ್ತು ಅಸುರರನ್ನು ಓಡಿಸುತ್ತಾರೆ. ಆದ್ದರಿಂದ ಬ್ರಹ್ಮಣಸ್ಪತಿಯನ್ನು ಮಂತ್ರಗಣಗಳ ಒಡೆಯನೆಂಊ ಗಣಪತಿಯೆಂದೂ ಕರೆಯುತ್ತಾರೆ.

<u>ಇಲ್ಲಿಂದ ಅಗ್ನಿಹೋತ್ರ ಪ್ರಾರಂಭ</u>

**ಓಂ ಬೃಹಸ್ಪತಿಯೇ ನಮಃ (ಆವಾಹನ ಮಂತ್ರಗಳಿಂದ ಆಹ್ವಾನಿಸಿ.)**

ಧ್ಯಾಯಾಮಿ ಧ್ಯಾನಂ ಸಮರ್ಪಯಾಮಿ; ಆವಾಹಯಾಮಿ ಆಸನಂ ಸಮರ್ಪಯಾಮಿ. (ಬೃಹಸ್ಪತಿ ದೇವತೆಯು ಕೆಳಗೆ ಬರುವರು)**,** ಪಾದಯೋ ಪಾದ್ಯಂ ಸಮರ್ಪಯಾಮಿ; ಹಸ್ತಯೋ ಅರ್ಘ್ಯಂ ಸಮರ್ಪಯಾಮಿ; ಆಚಮನೀಯಂ ಸಮರ್ಪಯಾಮಿ; ಪುಷ್ಪಂ ಸಮರ್ಪಯಾಮಿ.

ಪಾದವನ್ನು ಜಲದಿಂದ ತೊಳೆಯಬೇಕು ಅರ್ಘ್ಯ ಪಾತ್ರಯಲ್ಲಿ ಉದಕವನ್ನು ಉದ್ಧರಣೆಯಿಂದ ಬಿಡಬೇಕು, ಹಸ್ತಕ್ಕೆ ಜಲವನ್ನು ಅರ್ಪಿಸಬೇಕು ಆನಂತರ ಜಲವನ್ನು ಮೂರು ಬಾರಿ ಉದ್ಧರಣೆಯಿಂದ ತೆಗೆದುಕೊಳ್ಳಲು ಕೊಡಬೇಕು. (ಇದೇ ರೀತಿ ಪ್ರತಿಯೊಬ್ಬ ದೇವತೆಗಳಿಗೂ ಮಾಡಬೇಕು.)

ಹೇ ಬೃಹಸ್ಪತಿ ದೇವರೇ ತಮ್ಮ ರಕ್ಷಣೆ, ಅನುಗ್ರಹ ಮತ್ತು ಆರ್ಶೀವಾದವನ್ನು ಕರುಣಿಸಿ.
ಓಂ ಬೃಹಸ್ಪತಯೇ ನಮಃ; ಆವಾಹಯಾಮಿ; (ಕಂಠವನ್ನು ಸ್ಪರ್ಶಿಸಿ) ಸ್ಥಾಪಯಾಮಿ; ಪೂಜಯಾಮಿ (ಕಂಠದಲ್ಲಿ ಸ್ಥಾಪನೆ ಮಾಡಿ)

ನಂತರ ನಾಭಿಯನ್ನು ತಟ್ಟಿ ಬ್ರಹ್ಮದೇವನನ್ನು ಜಾಗೃತಮಾಡುವಂತೆ ಪ್ರಾರ್ಥಿಸಬೇಕು.

**ಓಂ ಬ್ರಹ್ಮದೇವಾಯ ನಮಃ**

(ಬ್ರಹ್ಮನಿಗೆ ಯಾವುದೇ ಮಂತ್ರಗಳಲ್ಲದಿರುವುದರಿಂದ ಆವಾಹನೆ ಮಾಡಿ ಪಾದಪೂಜೆಯನ್ನು ಮಾಡಿ.)

**ಓಂ ಬ್ರಹ್ಮಣಸ್ಪತಿಯೇ ನಮಃ (ಆವಾಹನ ಮಂತ್ರಗಳಿಂದ ಆಹ್ವಾನಿಸಿ.)**

ಓಂ ಬ್ರಹ್ಮಣಸ್ಪತಿಯೇ ನಮಃ; ಆವಾಹಯಾಮಿ; (ಮುಖವನ್ನು ಸ್ಪರ್ಶಿಸಿ) ಸ್ಥಾಪಯಾಮಿ; ಪೂಜಯಾಮಿ (ಮುಖದಲ್ಲಿ ಸ್ಥಾಪನೆ ಮಾಡಿ)

**ಯಜ್ಞಕುಂಡ ಸ್ಥಾಪನೆ (ಮೊದಲೇ ಸಿದ್ದತೆ ಮಾಡಿಕೊಳ್ಳಿ)**

(ಯಜ್ಞಕುಂಡವನ್ನು ಪೂರ್ವ–ಪಶ್ಚಿಮವಾಗಿ ಸ್ಥಾಪಿಸಿ ಯಜಮಾನನು ಪೂರ್ವಾಭಿಮುಖವಾಗಿ ಕುಳಿತುಕೊಳ್ಳಬೇಕು ಅಥವಾ ಪತಿಪತ್ನಿಯರು ಜೊತೆಯಾಗಿ ಕುಳಿತುಕೊಳ್ಳಬೇಕು. ಚರುಪುರೋಡಾಷಗಳನ್ನು  ಮತ್ತು ಅಕ್ಷತೆ ಅರ್ಪಿಸುವ ಅಗತ್ಯವಿಲ್ಲ.)
ಮೊದಲೇ ಬೆರಣಿಯನ್ನು ಅಗ್ನಿಕುಂಡದಲ್ಲಿಟ್ಟು, ತುಪ್ಪವನ್ನು ಹಾಕಿ ಹರಶಿನ ಕುಂಕುಮವನ್ನು ಹಚ್ಚಿ ಅಗ್ನಿಕುಂಡವನ್ನು ಸಿದ್ಧಮಾಡಿಕೊಳ್ಳಿ.

(ಯಜ್ಞಕುಂಡದ ಅಧಿದೇವತೆ)

**ಓಂ ರುದ್ರಾಯ ನಮಃ** (ಆವಾಹನ ಮಂತ್ರಗಳಿಂದ ಆಹ್ವಾನಿಸಿ.)

"ಓಂ ಹೇ ಪ್ರಭೋ ರುದ್ರದೇವ ತಾವು ದಯವಿಟ್ಟು ಯಜ್ಞಕುಂಡದಲ್ಲಿ ನೆಲಸುವಂತವರಾಗಿ" ಎಂದು ವಿನಂತಿಸಿ
(ಯಜ್ಞಕುಂಡವೇ ಪೃಥ್ವಿಯ ನಾಭಿಸ್ಥಾನ. ಅಗ್ನಿಕುಂಡದ ಮೇಲೆ ನೇರವಾಗಿ ಸಪ್ತಸ್ವರ್ಗಗಳು ಪ್ರಕಟವಾಗುತ್ತದೆ.)

**ಒಂದು ಸಾರಿ ಗಾಯತ್ರಿ ಮಂತ್ರವನ್ನು ಹೇಳಿ**.  ಓಂ ಭೂಃ (ಯಜ್ಞಕುಂಡ), ಭುವಃ (ಸಪ್ತಸ್ವರ್ಗ), ಸುವಃ (ಅಂತರಿಕ್ಷ ಲೋಕ/ವಿರಾಟ್ ಪುರುಷನ ಶಿರಸ್ಸು)

ಓಂ

ಭೂರ್ಭುವಸ್ವಃ

ತತ್ ಸವಿತುರ್ವರೇಣ್ಯಂ (ವರೇಣಿಯಂ)

ಭರ್ಗೊ ದೇವಸ್ಯ ಧೀಮಹೀ೧

ಧಿಯೋ ಯೋನಃ ಪ್ರಚೋದಯಾತ್೧೧

ಓಂ ಪೂಷಣ್ ದೇವಾಯ ನಮಃ

ಆಗ ಯಜ್ಞಕುಂಡ, ಸಪ್ತಸ್ವರ್ಗಗಳು ಮತ್ತು ವಿರಾಟ್‌ಪುರುಷನ ಶಿರಸ್ಸಿನಲ್ಲಿರುವ ಸೂರ್ಯ–ಸವಿತೃದೇವನ ಜಾಗೃತವಾಗುತ್ತದೆ. ನಂತರ 'ಓಂ ಪೂಷಣ್ ದೇವಾಯ ನಮಃ' ಎಂದು ಹೇಳಿದ ತಕ್ಷಣ ಸೂರ್ಯನ ಕಿರಣಗಳು ಯಜ್ಞಕುಂಡದ ಮೇಲೆ ಇಳಿಯುತ್ತದೆ.

**೧. ಅಗ್ನಿದೇವ (ಆವಾಹನ ಮಂತ್ರಗಳಿಂದ ಆಹ್ವಾನಿಸಿ.)**

ಓಂ ಅಗ್ನಯೇ ಸ್ವಾಃಹಾ; ಅಗ್ನಯೇ ಇದಮ್ ನಮ್ಮ" ಎಂದು ಹೇಳುತ್ತಾ **ಅಗ್ನಿಯು ಚೆನ್ನಾಗಿ ಪ್ರಜ್ವಲಿಸುವಂತೆ ಮಾಡಬೇಕು. ಆನಂತರ**

**ಓಂ ಅಗ್ನಯೇ ನಮಃ**, (ಆವಾಹನ ಮಂತ್ರ)

ಹೇ ಅಗ್ನಿದೇವ, ನೀವೆ ಋತ್ವಿಜರಾಗಿ ಈ ಯಜ್ಞಕಾರ್ಯವನ್ನು ಸಂಪನ್ನಗೊಳಿಸಿ ಎಂದು ಕೇಳಿಕೊಂಡಾಗ ನಾಲ್ವರು ಋತ್ವಿಜರು ಪ್ರಕಟರಾಗುವರು.
ನಾವು ಮಂತ್ರವನ್ನು ಪಠಿಸುತ್ತಿದ್ದರೂ ಋತ್ವಿಜರು ಪಠಿಸುತ್ತಿರುವಂತೆ ಭಾವಿಸಿ.

ನಂತರ ಅಗ್ನಿಯಲ್ಲಿ ಸ್ವಾಹಾ ಮಂತ್ರಗಳಿಂದ ಘೃತವನ್ನು ೩ ಬಾರಿ ಅರ್ಪಿಸಬೇಕು.
ಓಂ ಅಗ್ನಯೇ ಸ್ವಾಹ; ಅಗ್ನಯೇ ಇದಮ್ ನ ಮಮ.
ಅಗ್ನಯೇ ಸ್ವಾಹ; ಅಗ್ನಯೇ ಇದಮ್ ನ ಮಮ.
ಅಗ್ನಯೇ ಸ್ವಾಹ; ಅಗ್ನಯೇ ಇದಮ್ ನ ಮಮ.
ಅಗ್ನಿದೇವ ನನಗೆ ಮತ್ತು ನನ್ನ ಕುಟುಂಬದವರಿಗೆ ರಕ್ಷಣೆ, ಅನುಗ್ರಹ ಮತ್ತು ಆಶೀರ್ವಾದವನ್ನು ಕರುಣಿಸಿ. (ಯಾರು ಯಾರಿಗೆ ರಕ್ಷಣೆ ಬೇಕೋ ಅವರೆಲ್ಲರನ್ನು ನಿಮ್ಮ ಮನಸ್ಸನಲ್ಲಿ ನೆನೆಸಿಕೊಳ್ಳಿ.) ಮುಂದಿನ ಪೂಜೆಗೆ ಅಪ್ಪಣೆಯನ್ನು ಕೊಡಿ.

(ಇದಮ್ ನ ಮಮ ಎಂದು ಹೇಳಿದ ಕೂಡಲೆ ಅಗ್ನಿಯಲ್ಲಿ ಅರ್ಪಿಸಿದ ಘೃತವು ದಹಿಸಿ ಮೇಲಕ್ಕೆ ಹೋಗಿ, ಸೂರ್ಯನ ಕಿರಣದಿಂದ ಸೋಮರಸವಾಗಿ ಮಾರ್ಪಟ್ಟು, ಅಗ್ನಿದೇವನ ಕೈಯಲ್ಲಿರುವ ಚಿನ್ನದ ಪಾತ್ರೆಯಲ್ಲಿ ಸಂಗ್ರಹಗೊಳ್ಳುತ್ತದೆ. ಆನಂತರ ಮತ್ತೆ ಎರಡನೆಯ ಬಾರಿ 'ಅಗ್ನಯೇ ಸ್ವಾಹ' ಎಂದು ಹೇಳಿದಾಗ ಅಗ್ನಿದೇವನು ಸೋಮರಸವನ್ನು ಸ್ವೀಕರಿಸುತ್ತಾನೆ. ೧೦ ರಿಂದ ೨೦ ಸೆಕೆಂಡ್‌ಗಳ ಕಾಲವನ್ನು ಸೋಮರಸವನ್ನು ಕುಡಿಯಲು ವೇಳೆಯನ್ನು ಕೂಡಿ. ಸೋಮರಸವನ್ನು ಪಾನಮಾಡಿದ ನಂತರ ಮತ್ತೆ ಎರಡನೆಯ ಬಾರಿ 'ಅಗ್ನಯೇ ಇದಂ ನ ಮಮ' ಎಂದು ಹೇಳಬೇಕು. ಪ್ರತೀ ದೇವತೆಗಳಿಗೂ ಇದೇ ರೀತಿ ಹೇಳಬೇಕು.)

**೨. ಓಂ ಸೂರ್ಯಾಯ ನಮಃ ಓಂ ಪೂಷಣ್ ದೇವಾಯ ನಮಃ** (ಆವಾಹನ ಮಂತ್ರಗಳಿಂದ ಆಹ್ವಾನಿಸಿ. ವಿರಾಟ್ ಪುರುಷನ ಶಿರಸ್ಸಿನಲ್ಲಿರುವ ಸೂರ್ಯನ ತೇಜಸ್ಸು ಯಜ್ಞಕುಂಡದ ಮೇಲೆ ಇಳಿಯುತ್ತದೆ.)
(ಉದಯಿಸುತ್ತಿರುವ ಸೂರ್ಯನಿಗೆ ಸ್ವಾಹಾ ಮಂತ್ರ,)
ಓಂ ಸೂರ್ಯಾಯ ಸ್ವಾಹಾ; ಸೂರ್ಯಾಯ ಇದಮ್ ನ ಮಮ
ಸೂರ್ಯಾಯ ಸ್ವಾಹಾ; ಸೂರ್ಯಾಯ ಇದಮ್ ನ ಮಮ
ಸೂರ್ಯಾಯ ಸ್ವಾಹಾ; ಸೂರ್ಯಾಯ ಇದಮ್ ನ ಮಮ
ಸೂರ್ಯದೇವ ನನಗೆ ಮತ್ತು ನನ್ನ ಕುಟುಂಬದವರಿಗೆ ರಕ್ಷಣೆ, ಅನುಗ್ರಹ ಮತ್ತು ಆಶೀರ್ವಾದವನ್ನು ಕರುಣಿಸಿ. ಮುಂದಿನ ಪೂಜೆಗೆ ಅಪ್ಪಣೆಯನ್ನು ಕೊಡಿ.

**೩. ಸವಿತಾ ದೇವತಾ** (ಸೂರ್ಯಮಂಡಲ ಮಧ್ಯದಲ್ಲಿರುವ ದೇವತೆ)
ಓಂ ಪ್ರಜಾಪತಯೇ ನಮಃ, (ಆವಾಹನ ಮಂತ್ರಗಳಿಂದ ಆಹ್ವಾನಿಸಿ.)
ಓಂ ಪ್ರಜಾಪತಯೇ ಸ್ವಾಹ; ಪ್ರಜಾಪತಯೇ ಇದಂ ನ ಮಮ.
ಪ್ರಜಾಪತಯೇ ಸ್ವಾಹ; ಪ್ರಜಾಪತಯೇ ಇದಂ ನ ಮಮ.
ಪ್ರಜಾಪತಯೇ ಸ್ವಾಹ; ಪ್ರಜಾಪತಯೇ ಇದಂ ನ ಮಮ.
ಸವಿತೃ ದೇವತೆಯೇ ನನಗೆ ಮತ್ತು ನನ್ನ ಕುಟುಂಬದವರಿಗೆ ರಕ್ಷಣೆ, ಅನುಗ್ರಹ ಮತ್ತು ಆಶೀರ್ವಾದವನ್ನು ಕರುಣಿಸಿ. ಮುಂದಿನ ಪೂಜೆಗೆ ಅಪ್ಪಣೆಯನ್ನು ಕೊಡಿ.

## ೪. ಇಂದ್ರ ದೇವತೆ

ಓಂ ಇಂದ್ರಾಯ ನಮಃ, (ಆವಾಹನ ಮಂತ್ರಗಳಿಂದ ಆಹ್ವಾನಿಸಿ.)
ಇಂದ್ರನು ವಿರಾಟ್‌ಪುರುಷನ ಶಿರಸ್ಸಿನ ಮೇಲಿಂದ ಇಳಿದು ಬರುವರು.
ಓಂ ಇಂದ್ರಾಯ ಸ್ವಾಹಾ, ಇಂದ್ರಾಯ ಇದಮ್ ನ ಮಮ.
ಇಂದ್ರಾಯ ಸ್ವಾಹಾ, ಇಂದ್ರಾಯ ಇದಮ್ ನ ಮಮ.
ಇಂದ್ರಾಯ ಸ್ವಾಹಾ, ಇಂದ್ರಾಯ ಇದಮ್ ನ ಮಮ.
ಇಂದ್ರದೇವ ನನಗೆ ಮತ್ತು ನನ್ನ ಕುಟುಂಬದವರಿಗೆ ರಕ್ಷಣೆ, ಅನುಗ್ರಹ ಮತ್ತು ಆಶೀರ್ವಾದವನ್ನು ಕರುಣಿಸಿ. ಮುಂದಿನ ಪೂಜೆಗೆ ಅಪ್ಪಣೆಯನ್ನು ಕೊಡಿ.

ಈಗ ಸಕಲದೇವತೆಗಳನ್ನು ಆಹ್ವಾನಿಸಿ ಹವಿಸ್ಸನ್ನು ಕೊಡಬೇಕು. ನಮಗೆ ತಿಳಿಯದಿರುವ ದೇವತೆಗಳೂ ಸಹ ಬರುವರು. ಆನಂತರ ಎಲ್ಲರಿಗೂ ಏಕಕಾಲದಲ್ಲಿ ಹವಿಸ್ಸನ್ನು ಅರ್ಪಿಸಿ.

**ವಿಶ್ವೇದೇವಾಃ ದೇವತೆಗಳು** (ಸಕಲ ದೇವತೆಗಳನ್ನು ಆಹ್ವಾನಿಸಿ)

(ದೇವತೆಗಳು ಸಿಂಹಾಸನದ ಮೇಲೆ ಕುಳಿತುಕೊಳ್ಳುವ ವಿಧಾನ ಕೆಳಗಿನ ರೀತಿ ಇದೆ.)

## ದೇವತೆಗಳ ಅನುಕ್ರಮಣಿಕೆ ವಿಧಾನ

೧. ಯಜ್ಞಕುಂಡದ ಮೇಲೆ ಮಧ್ಯದಲ್ಲಿ ವಿಶ್ವಸಿಂಹಾಸನದ ಮೇಲೆ ಕುಳಿತ ಇಂದ್ರ.
೨. ಇಂದ್ರನನ್ನು ನಾವು ನೋಡುತ್ತಿರುವಾಗ ನ**ಮ್ಮ ಎಡಭಾಗದಲ್ಲಿ** ಇಂದ್ರನಿಂದ ಕೆಳಗೆ ಅಂದರೆ ಇಂದ್ರನ ಭುಜಕ್ಕೆ ಸಮಾನಾಂತರವಾಗಿ ಸಿಂಹಾಸನದಲ್ಲಿ–ಸವಿತೃ, ಮಿತ್ರಾ, ವರುಣ, ಅರ್ಯಮಾ, ಭಗ, ಅಂಶ, ಅಶ್ವಿನೀ ದೇವತೆಗಳು ಮತ್ತು ಉಷಸ್ ದೇವಿ.
**೩. ಬಲಭಾಗದಲ್ಲಿ** ಇಂದ್ರನ ಭುಜಕ್ಕೆ ಸಮಾನಾಂತರವಾಗಿ ಸಿಂಹಾಸನದಲ್ಲಿ–ವಾಯು, ತ್ವಷ್ಟ್ರಾ, ವಿಷ್ಣು, ಬ್ರಹ್ಮಣಸ್ಪತಿ, ಬೃಹಸ್ಪತಿ, ಸರಸ್ವತಿ, ಮಹಿ, ಭಾರತಿ ಮತ್ತು ಇಳಾ ದೇವಿಯರು. (ದೇವಿಯರು ಕಮಲದ ಮೇಲೆ ಕುಳಿತಿರುವರು)
**೪. ಇಂದ್ರನ ಹಿಂಭಾಗದಲ್ಲಿ** ಮರುತ್ ದೇವತೆಗಳು ಸಿಪಾಯಿಗಳಂತೆ ನಿಂತಿರುವರು,
೫. ಮಾನವರಾಗಿ ದೇವತೆಗಳ ಸ್ಥಾನ ಪಡೆದಿರುವ ಋಭು ದೇವತೆಗಳು ಸವಿತೃವಿನ ಕೆಳಭಾಗದಲ್ಲಿ ಕುಳಿತಿರುವರು.

**ಓಂ ವಿಶ್ವೇದೇವಾಹ ದೇವತಾಭ್ಯೋ ನಮಃ,** (ಆವಾಹನ ಮಂತ್ರಗಳಿಂದ ಆಹ್ವಾನಿಸಿ.)
ಓಂ ವಿಶ್ವೇದೇವಾಹ ದೇವತಾಭ್ಯೋ ಸ್ವಾಹಾ, ವಿಶ್ವೇದೇವಾಹ ಇದಮ್ ನ ಮಮ.
ವಿಶ್ವೇದೇವಾಹ ದೇವತಾಭ್ಯೋ ಸ್ವಾಹಾ, ವಿಶ್ವೇದೇವಾಹ ಇದಮ್ ನ ಮಮ.
ವಿಶ್ವೇದೇವಾಹ ದೇವತಾಭ್ಯೋ ಸ್ವಾಹಾ, ವಿಶ್ವೇದೇವಾಹ ಇದಮ್ ನ ಮಮ.
ಆನಂತರ ಸಕಲ ದೇವತೆಗಳಿಂದ ರಕ್ಷಣೆ, ಅನುಗ್ರಹ, ಆಶೀರ್ವಾದವನ್ನೂ ಮತ್ತು ಅಪ್ಪಣೆಯನ್ನು ಪಡೆಯಿರಿ

ಅಗ್ನಿಹೋತ್ರವನ್ನು ಪರಿಸಮಾಪ್ತಿ ಮಾಡಲು ಅಪ್ಪಣೆಯನ್ನು ಕೇಳಿ.
ಸಕಲ ದೇವತೆಗಳೇ ನನಗೆ ಮತ್ತು ನನ್ನ ಕುಟುಂಬದವರಿಗೆ ರಕ್ಷಣೆ, ಅನುಗ್ರಹ ಮತ್ತು ಆಶೀರ್ವಾದವನ್ನು ಕರುಣಿಸಿ. ನಮ್ಮ ಧನ ಕನಕ ವಸ್ತು ವಾಹನಾದಿಗಳನ್ನು ರಕ್ಷಿಸಿ.
ಪೂಜೆಯನ್ನು ಪರಿಸಮಾಪ್ತಿಯನ್ನು ಮಾಡಲು ಅಪ್ಪಣೆಯನ್ನು ಕೊಡಿ.

ತದನಂತರ ಉಳಿದ ಘೃತವನ್ನು ಯಜ್ಞಕುಂಡಲ್ಲಿ ನೆಲೆಸಿರುವ ರುದ್ರದೇವರಿಗೆ ಅರ್ಪಿಸಿ.
ಓಂ ರುದ್ರಾಯ ಸ್ವಾಹ; ರುದ್ರಾಯ ಇದಮ್ ನ ಮಮ
ರುದ್ರಾಯ ಸ್ವಾಹ; ರುದ್ರಾಯ ಇದಮ್ ನ ಮಮ
ರುದ್ರಾಯ ಸ್ವಾಹ; ರುದ್ರಾಯ ಇದಮ್ ನ ಮಮ
ಸಕಲ ದೇವತೆಗಳೆ ತಾವೆಲ್ಲರೂ ಸ್ವಸ್ಥಾನಕ್ಕೆ ತೆರಳುವಂತವರಾಗಿ. ಓಂ

**ಮೂರು ಪ್ರಾಣಾಯಾಮ ಮಾಡಿ**

**ಶಾಂತಿ ಮಂತ್ರಗಳು**

ಓಂ ಸಹ ನಾವವತು। ಸಹ ನೌ ಭುನಕ್ತು। ಸಹ ವೀರ್ಯಂ ಕರವಾವಹೈ।
ತೇಜಸ್ವಿ ನಾವಧೀತಮಸ್ತು ಮಾ ವಿದ್ವಿಷಾವಹೈ॥
ಓಂ ಶಾಂತಿಃ ಶಾಂತಿಃ ಶಾಂತಿಃ॥
ಭಗವಂತನು ನಮ್ಮನ್ನು ರಕ್ಷಿಸಲಿ. ಆತನು ನಮ್ಮನ್ನು ಪೋಷಿಸಲಿ. ಆತನ ಕೃಪೆಯಿಂದ ನಮ್ಮ ಕೆಲಸವು ವೀರ್ಯವತ್ತಾಗಿ ನಡೆಯಲಿ. ನಮ್ಮ ಅಧ್ಯಯನವು ತೇಜಸ್ವಿಯಾಗಿರಲಿ. ನಮ್ಮಲ್ಲಿ ಶಾಂತಿಯೂ, ಸೌಹಾರ್ದವೂ ನೆಲಸಿರಲಿ.
ಓಂ ಶಂ ನೋ ಮಿತ್ರಃ ಶಂ ವರುಣಃ। ಶಂ ನೋ ಭವತ್ವರ್ಯಮಾ।
ಶಂ ನ ಇಂದ್ರೋ ಬೃಹಸ್ಪತಿಃ। ಶಂ ನೋ ವಿಷ್ಣುರುರುಕ್ರಮಃ।
ಓಂ ಶಾಂತಿಃ ಶಾಂತಿಃ ಶಾಂತಿಃ॥
ಮಿತ್ರ, ವರುಣ, ಆರ್ಯಮಾ, ಇಂದ್ರ, ಬೃಹಸ್ಪತಿ ಮತು ವಿಷ್ಣು– ಎಲ್ಲ ದೇವತೆಗಳೂ ನಮಗೆ ಶುಭದಾಯಕರಾಗಲಿ.
ಓಂ ಶಾಂತಿಃ ಶಾಂತಿಃ ಶಾಂತಿಃ॥
ಓಂ ಭದ್ರಂ ಕರ್ಣೇಭಿಶ್ಶೃಣುಯಾಮ ದೇವಾಃ। ಭದ್ರಂ ಪಶ್ಯೇಮಾಕ್ಷಭಿರ್ಯಜತ್ರಾಃ।
ಸ್ಥಿರೈರಂಗೈಸ್ತುಷ್ಟುವಾಗ್ಂಸಸ್ತನೂಭಿಃ। ವ್ಯಶೇಮ ದೇವಹಿತಂ ಯದಾಯುಃ॥

ಎಲೈ ದೇವತೆಗಳೇ, ನಮ್ಮ ಕಿವಿಗಳಿಂದ ಶುಭವಾದುದನ್ನು ಆಲಿಸುವಂತಾಗಲಿ. ಪೂಜಾರ್ಹರೇ, ನಮ್ಮ ಕಣ್ಣುಗಳಿಂದ ಶುಭವಾದುದನ್ನು ನೋಡುವಂತಾಗಲಿ. ನಾವು ನಿಮ್ಮನ್ನು ಸ್ತುತಿಸಿ, ನಿಮ್ಮಿಂದ ಅನುಗ್ರಹೀತವಾದ ಆಯುಸ್ಸನ್ನು ದೃಢಾಂಗರಾಗಿ ಅನುಭವಿಸುವಂತಾಗಲಿ. ಓಂ ಶಾಂತಿಃ ಶಾಂತಿಃ ಶಾಂತಿಃ೧೧

ಓಂ೧ ದೌಃ ಶಾಂತಿರಂತರಿಕ್ಷಂ ಶಾಂತಿಃ ಪೃಥಿವೀ ಶಾಂತಿರಾಪಃ ಶಾಂತಿರೋಷದಯಃ ಶಾಂತಿಃ೧ ವನಸ್ಪತಯ ಶಾಂತಿರ್ವಿಶ್ವೇದೇವಾಃ ಶಾಂತಿಬ್ರಹ್ಮ ಶಾಂತಿಃ೧ ಸರ್ವಂ ಶಾಂತಿಃ ಶಾಂತಿರೇವ ಶಾಂತಿಃ೧೧

ದ್ಯುಲೋಕದಲ್ಲಿ, ಅಂತರಿಕ್ಷದಲ್ಲಿ, ಭೂಮಿಯಲ್ಲಿ, ಗಿಡ ಮರ ಬಳ್ಳಿಗಳಲ್ಲಿ, ದೇವತೆಗಳಲ್ಲಿ ಮತ್ತು ಬ್ರಹ್ಮದಲ್ಲಿ ಶಾಂತಿಯಿರಲಿ, ಎಲ್ಲೆಲ್ಲಿಯೂ ಶಾಂತಿಯಿರಲಿ; ಮತ್ತು ಅಂತಹ ನಿಜ ಶಾಂತಿಯು ನಮ್ಮದಾಗಲಿ.

ಓಂ ಶಾಂತಿಃ ಶಾಂತಿಃ ಶಾಂತಿಃ

ಲೋಕಾ ಸಮಸ್ತಾ ಸುಖಿನೋ ಭವಂತು

ಸಕಲ ಸನ್ಮಂಗಳಾನಿ ಭವಂತು

**<u>ವಯಸ್ಸಾದವರು, ಅವಿದ್ಯಾವಂತರು ಮಾಡಬಹುದಾದ ಅಗ್ನಿಹೋತ್ರ ವಿಧಾನ.</u>**

(ಇಡೀ ಬ್ರಹ್ಮಾಂಡವೇ ದೇವತೆಗಳ ಮನಸ್ಸಿನಿಂದ ಆವರಿಸಲ್ಪಟ್ಟಿದೆ. ಆದ್ದರಿಂದ ದೇವತೆಗಳು ಇವರ ಮನಸ್ಸಿನ ಭಾವನೆಯನ್ನು ಆಧರಿಸಿ ಸೋಮರಸವನ್ನು ಸ್ವೀಕರಿಸುತ್ತಾರೆ.)

**ಓಂ ರುದ್ರಾಯ ನಮಃ** ಆವಾಹಯಾಮಿ

"ಓಂ ಹೇ ಪ್ರಭೋ ರುದ್ರದೇವ ತಾವು ದಯವಿಟ್ಟು ಯಜ್ಞಕುಂಡದಲ್ಲಿ ನೆಲಸುವಂತವರಾಗಿ" ಎಂದು ವಿನಂತಿಸಿ
(ಯಜ್ಞಕುಂಡವೇ ಪೃಥ್ವಿಯ ನಾಭಿಸ್ಥಾನ. ಅಗ್ನಿಕುಂಡದ ಮೇಲೆ ನೇರವಾಗಿ ಸಪ್ತಸ್ವರ್ಗಗಳು ಪ್ರಕಟವಾಗುತ್ತದೆ.)

೧. **ಓಂ ಅಗ್ನಯೇ ನಮಃ** ಆವಾಹಯಾಮಿ

ಓಂ ಅಗ್ನಯೇ ಸ್ವಾಹ; ಅಗ್ನಯೇ ಇದಮ್ ನ ಮಮ.
ಅಗ್ನಯೇ ಸ್ವಾಹ; ಅಗ್ನಯೇ ಇದಮ್ ನ ಮಮ.
ಅಗ್ನಯೇ ಸ್ವಾಹ; ಅಗ್ನಯೇ ಇದಮ್ ನ ಮಮ.

೨. **ಓಂ ಸೂರ್ಯಾಯ ನಮಃ** ಆವಾಹಯಾಮಿ

ಓಂ ಸೂರ್ಯಾಯ ಸ್ವಾಹಾ; ಸೂರ್ಯಾಯ ಇದಮ್ ನ ಮಮ
ಸೂರ್ಯಾಯ ಸ್ವಾಹಾ; ಸೂರ್ಯಾಯ ಇದಮ್ ನ ಮಮ
ಸೂರ್ಯಾಯ ಸ್ವಾಹಾ; ಸೂರ್ಯಾಯ ಇದಮ್ ನ ಮಮ

**೩. ಸವಿತಾ ದೇವತಾ** (ಸೂರ್ಯಮಂಡಲ ಮಧ್ಯದಲ್ಲಿರುವ ದೇವತೆ)

ಓಂ ಪ್ರಜಾಪತಯೇ ನಮಃ, ಆವಾಹಯಾಮಿ

ಓಂ ಪ್ರಜಾಪತಯೇ ಸ್ವಾಹ; ಪ್ರಜಾಪತಯೇ ಇದಂ ನ ಮಮ.

ಪ್ರಜಾಪತಯೇ ಸ್ವಾಹ; ಪ್ರಜಾಪತಯೇ ಇದಂ ನ ಮಮ.

ಪ್ರಜಾಪತಯೇ ಸ್ವಾಹ; ಪ್ರಜಾಪತಯೇ ಇದಂ ನ ಮಮ.

## ೪. ಇಂದ್ರ ದೇವತೆ

**ಓಂ ಇಂದ್ರಾಯ ನಮಃ** ಆವಾಹಯಾಮಿ

ಇಂದ್ರನು ವಿರಾಟ್‌ಪುರುಷನ ಶಿರಸ್ಸಿನ ಮೇಲಿಂದ ಇಳಿದು ಬರುವರು.

ಓಂ ಇಂದ್ರಾಯ ಸ್ವಾಹಾ, ಇಂದ್ರಾಯ ಇದಮ್ ನ ಮಮ.

ಇಂದ್ರಾಯ ಸ್ವಾಹಾ, ಇಂದ್ರಾಯ ಇದಮ್ ನ ಮಮ.
ಇಂದ್ರಾಯ ಸ್ವಾಹಾ, ಇಂದ್ರಾಯ ಇದಮ್ ನ ಮಮ.

**೫. ಓಂ ವಿಶ್ವೇದೇವಾಹ ದೇವತಾಭ್ಯೋ ನಮಃ,** (ಸಕಲ ದೇವತೆಗಳಿಗೆ)

ಓಂ ವಿಶ್ವೇದೇವಾಹ ದೇವತಾಭ್ಯೋ ಸ್ವಾಹಾ, ವಿಶ್ವೇದೇವಾಹ ಇದಮ್ ನ ಮಮ.
ವಿಶ್ವೇದೇವಾಹ ದೇವತಾಭ್ಯೋ ಸ್ವಾಹಾ, ವಿಶ್ವೇದೇವಾಹ ಇದಮ್ ನ ಮಮ.
ವಿಶ್ವೇದೇವಾಹ ದೇವತಾಭ್ಯೋ ಸ್ವಾಹಾ, ವಿಶ್ವೇದೇವಾಹ ಇದಮ್ ನ ಮಮ.
ಸಕಲ ದೇವತೆಗಳ ರಕ್ಷಣೆ ಮತ್ತು ಅನುಗ್ರಹವನ್ನು ಕೇಳಿ. ಅಗ್ನಿಹೋತ್ರವನ್ನು ಪರಿಸಮಾಪ್ತಿ ಮಾಡಲು ಅಪ್ಪಣೆಯನ್ನು ಕೇಳಿ.
ನಂತರ ಉಳಿದ ಘೃತವನ್ನು ಯಜ್ಞಕುಂಡಲ್ಲಿರುವ ರುದ್ರನಿಗೆ ಅರ್ಪಿಸಿ.

**ಓಂ ಶಾಂತಿಃ ಶಾಂತಿಃ ಶಾಂತಿಃ;**
**ಲೋಕಾಃ ಸಮಸ್ತಾ ಸುಖಿನೋ ಭವಂತು; ಸಕಲ ಸನ್ಮಂಗಳಾನಿ ಭವಂತು**

# ಅಧ್ಯಾಯ-೩: ಮಂತ್ರ ಸಹಿತ ಅಗ್ನಿಹೋತ್ರ

ಓಂ ಶ್ರೀ ಗುರುಭ್ಯೋ ನಮಃ
ಓಂ ಇಂದ್ರಾಯ ನಮಃ

ಆಗಮಾರ್ಥಂ ತು ದೇವಾನಾಂ ಗಮನಾರ್ಥಂ ತು ರಕ್ಷಸಾಂ।
ಕುರ್ವೇ ಘಂಟಾರವಂ ತತ್ರ ದೇವತಾಹ್ವಾನ ಲಾಂಚನಂ।।

## ಸೋಮದೇವತೆ (೧-೯೧-೯ – ೧-೯೧-೧೧)

**(ಸೋಮರಸವನ್ನು ತಯಾರು ಮ್ಮಾಡುವಾಗ ಪದೇ ಪದೇ ಈ ಸ್ತೋತ್ರವನ್ನು ಹೇಳಿ)**

ಓಂ ಸೋಮ ಯಾಸ್ತೇ ಮಯೋಭುವ ಊತಯಃ ಸಂತಿ ದಾಶುಷೇ। ತಾಭಿರ್ನೋಽವಿತಾ ಭವ।।
(ಸೋಮ ಯಾ ತೇ) (ತಾಭಿಃ ನೋ ಅವಿತಾ) (೧-೯೧-೯)
ಎಲೈ ಸೋಮದೇವನೆ, ನಿನಗೆ ಸೇರಿದ ಹವಿಸ್ಸನ್ನು ಅರ್ಪಿಸುವ ನಿನ್ನ ಭಕ್ತನಾದ ಯಜಮಾನನು ತನ್ನ ರಕ್ಷಣೆಗೆ ನಿನ್ನನ್ನೇ ನಂಬಿದ್ದಾನೆ. ಅವನಿಗೆ ಸುಖ ಹೇತುಗಳಾದ ಯಾವ ಯಾವ ರಕ್ಷಣಾ ಸಾಧನಗಳವೆಯೋ ಅವುಗಳೊಂದಿಗೆಲ್ಲಾ ನಮ್ಮ ರಕ್ಷಕನಾಗಿರು.

ಇಮಂ ಯಜ್ಞಮಿದಂ ವಚೋ ಜುಜುಷಾಣ ಉಪಾಗಹಿ। ಸೋಮ ತ್ವಂ ನೋ ವೃಧೇ ಭವ।।
ಎಲೈ ಸೋಮದೇವನೇ, ನಾವು ನೆರವೇರಿಸತಕ್ಕ ಈ ಯಜ್ಞವನ್ನೂ ಮತ್ತು ಈ ಸ್ತೋತ್ರರೂಪವಾದ ವಾಕ್ಕನ್ನೂ ಸ್ವೀಕರಿಸಿ ಸೇವಿಸುತ್ತಾ ನಮ್ಮ ಈ ಯಜ್ಞಗೃಹಕ್ಕೆ ದಯಮಾಡು ಮತ್ತು ನಮ್ಮ ಯಜ್ಞದ ಬೆಳೆವಣಿಗೆಗೆ ಸಹಾಯಕನಾಗಿರು.

ಸೋಮ ಗೀರ್ಭಿಷ್ಟ್ವಾವಯಂ ವರ್ಧಯಾಮೋ ವಚೋವಿದಃ। ಸುಮೃಳೀಕೋ ನ ಆ ವಿಶ।।
ಎಲೈ ಸೋಮದೇವನೇ, ನಿನ್ನನ್ನು ಸ್ತೋತ್ರಮಾಡುವ ಕ್ರಮವು ನಮಗೆ ಚೆನ್ನಾಗಿ ಗೊತ್ತಿದೆ. ನಾವು ಪವಿತ್ರವಾದ ಸ್ತೋತ್ರ ವಾಕ್ಕುಗಳಿಂದ ನಿನ್ನನ್ನು ಸ್ತುತಿಸಿ ನೀನು ವೃದ್ಧಿಯಾಗುವಂತೆ ಮಾಡುತ್ತೇವೆ. ನಮಗೆ ಅತ್ಯುತ್ತಮವಾದ ಸುಖವನ್ನು ಉಂಟುಮಾಡುವವನಾಗಿ ಇಲ್ಲಿಗೆ ದಯಮಾಡು.

## ಆಚಮನ

ಓಂ ಅಮೃತೋಪಸ್ತರಣಮಸಿ ಸ್ವಾಹಾ।
(ಹೇ ಪರಮೇಶ್ವರ (ಅಥವಾ ಉದಕಗಳು) ಅಮೃತ ಅವಿನಾಶಿಯಾದ ನೀನು (ಉಪಸ್ತರಣಮಸಿ) ಆಸನದಂತೆ ನಮಗೆ ಆಶ್ರಯವನ್ನು ಕೊಡುತ್ತಿರುವೆ, (ಸ್ವಾಹಾ) ಇದು ಸತ್ಯವು.)
ಓಂ ಅಮೃತಾಪಿಧಾನಮಸಿ ಸ್ವಾಹಾ।
(ಹೇ ರಕ್ಷಕ! ಅಮೃತಸ್ವರೂಪ (ಅಥವಾ ಉದಕಗಳು) ನೀನು ಅಪಿಧಾನದಂತೆ (ಮೇಲೆ ಹೊದ್ದುಕೊಳ್ಳುವ ವಸ್ತ್ರದಂತೆ) ನಮ್ಮ ಸುತ್ತಲೂ ವ್ಯಾಪಿಸಿರುವೆ, ಇದು ಸತ್ಯವು.)
ಓಂ ಸತ್ಯಂ ಯಶಃ ಶ್ರೀರ್ಮಯಿ ಶ್ರೀಃ ಶ್ರಯತಾಂ ಸ್ವಾಹಾ।
(ಹೇ ರಕ್ಷಕ (ಅಥವಾ ಉದಕಗಳು) ಅಂತಹ ನೀನು ಸತ್ಯಜ್ಞಾನವನ್ನು, ಯಶಸ್ಸನ್ನು, ಐಶ್ವರ್ಯವನ್ನು, ಆನಂದವನ್ನು ನನ್ನಲ್ಲಿ ಪ್ರವಹಿಸುವಂತೆ ಮಾಡಿ ಸ್ಥಿರವಾಗಿಡು. ನನ್ನ ಈ ಪ್ರಾರ್ಥನೆಯು ಫಲಿಸುವಂತೆ ಮಾಡು.)

(ಓಂ ವಾಯುವೇ ನಮಃ, ಧ್ಯಾಯಾಮಿ ಧ್ಯಾನಂ ಸಮರ್ಪಯಾಮಿ, ಆವಾಹಯಾಮಿ, ಆಸನಂ ಸಮರ್ಪಯಾಮಿ. ನಮ್ಮ ಶಿರಸ್ಸಿನ ಮೇಲೆ ಅಂತರಿಕ್ಷದಿಂದ ವಾಯುದೇವರು ಇಳಿದು ಬರುತ್ತಾರೆ.)

**ಮೂರು ನಾಡಿಶೋಧನ ಪ್ರಾಣಾಯಾಮ**

(ಎಡಹೊಳ್ಳೆಯಿಂದ ಉಸಿರನ್ನು ತಗೆದುಕೊಂಡು ಬಲಹೊಳ್ಳೆಯಿಂದ ಬಿಡಿ. ಮತ್ತೆ ಬಲಹೊಳ್ಳೆಯಿಂದ ಉಸಿರನ್ನು ತೆಗೆದುಕೊಂಡು ಎಡಹೊಳ್ಳೆಯಿಂದ ಬಿಡಿ. ಇದು ಒಂದು ಪ್ರಾಣಾಯಾಮ. ಈರೀತಿ ಮೂರು ಬಾರಿ ಮಾಡಿ.)

## ಸಂಕಲ್ಪ

ಓಂ ಶುಭೇ ಶೋಭನೇ ಮುಹೂರ್ತೇ ಆದ್ಯ ಬ್ರಹ್ಮಣಃ ದ್ವಿತೀಯ ಪರಾರ್ದೆ ಶ್ವೇತವರಾಹಕಲ್ಪೆ ವೈವಸ್ವತ ಮನ್ವಂತರೆ ಕಲಿಯುಗೆ ಪ್ರಥಮ ಪಾದೆ ಜಂಬುದ್ವೀಪೆ ಭರತವರ್ಷೇ ಭರತಖಂಡೇ ದಂಡಕಾರಣ್ಯೆ ಗೋದಾವರ್ಯಾಃ ದಕ್ಷಿಣೇತೀರೇ ಕರ್ನಾಟಕೇ ಬೆಂಗಳೂರು ಪ್ರಾಂತೇ ಶಾಲಿವಾಹನ ಶಕೇ ಅಸ್ಮಿನ್ ವರ್ತಮಾನೇನ ಪ್ರಭವಾದಿ ಷಷ್ಠಿ ಸಂವತ್ಸರಾಣಾಂ ಮಧ್ಯೇ ..... ನಾಮ ಸಂವತ್ಸರೇ .... ಆಯನೇ.....ಋತೌ .... ಮಾಸೇ ..... ಪಕ್ಷೇ ..... ಶುಭತಿಥೌ ..... ವಾಸರಯುಕ್ತಾಯಾಂ ..... ಶುಭನಕ್ಷತ್ರ ಶುಭಯೋಗ ಶುಭಕರಣ ಏವಂ ಗುಣ ವಿಶೇಣ ವಿಶಿಷ್ಟಾಯಾಂ ಮಮೋಪಾತ್ತ ಸಮಸ್ತ ದುರಿತಕ್ಷಯದ್ವಾರಾ ಸಕಲ ದೇವತಾ ಪ್ರೀತ್ಯರ್ಥಂ ಇಂದ್ರಲೋಕ ಪ್ರಾಪ್ತ್ಯರ್ಥಂ ಪ್ರಾತಃಸ್ಸವನಂ ಕರಿಷ್ಯೇ.

### ಉದಕಗಳು

ಓಂ ಅಂಬಯೋ ಯನ್ತ್ಯಧ್ವಭಿರ್ಜಾಮಯೋ ಅಧ್ವರೀಯತಾಮ್।
ಪೃಂಚತೀರ್ಮಧುನಾ ಪಯಃ।। (೧–೨೩–೧೬)
(ಅಂಬಯೋ ಯಂತಿ ಅಧ್ವಭಿಃ ಜಾಮಯೋ ಅಧ್ವರೀಯತಾಮ್। ಪೃಂಚತೀಃ ಮಧುನಾ ಪಯಃ।।)
ಮಾತೃಸ್ವರೂಪರಾದ ಉದಕಗಳು ತಮ್ಮ ಗೊತ್ತುಪಡಿಸಿದ ಮಾರ್ಗಗಳಲ್ಲಿ ಹರಿಯುತ್ತಿರುವುದು. ಯಜ್ಞಾನುಷ್ಠಾನ ವನ್ನಪೇಕ್ಷಿಸುವವರಿಗೆ ದೈವೀ ಸಹೋದರಿಯರು (ಕುಂಡಲಿನಿ ಮಾತೆಯರು) ಉದಕಗಳಿಗೆ ಮಧುವನ್ನು ಮತ್ತು ಹಾಲನ್ನು ಉದಕಗಳ ಜೊತೆ ಬೆರೆಸುವರು.

ಅಮೂರ್ಯಾ ಉಪ ಸೂರ್ಯೇ ಯಾಭಿರ್ವಾ ಸೂರ್ಯಃ ಸಹ।
ತಾ ನೋ ಹಿನ್ವಂತ್ವಧ್ವರಮ್।। (೧–೨೩–೧೭)
(ಅಮೂಃ ಯಾ ಉಪ ಸೂರ್ಯೇ ಯಾಭಿಃ ವಾ ಸೂರ್ಯಃ ಸಹ। ತಾ ನೋ ಹಿನ್ವನ್ತಿ ಅಧ್ವರಂ।।)
ಯಾವ ಉದಕಗಳು ಸೂರ್ಯನ ಸಮೀಪದಲ್ಲಿರುವವೋ ಅಥವಾ ಸೂರ್ಯನ ಒಟ್ಟಿಗೇ ಇರುವವೋ ಅಂಥಹ ಉದಕಗಳು ನಮ್ಮ ಯಜ್ಞವನ್ನು ಸಂತೋಷದಿಂದ ನೆರವೇರುವಂತೆ ಮಾಡಲಿ.

ಅಪೋ ದೇವೀರುಪ ಹ್ವಯೇ ಯತ್ರ ಗಾವಃ ಪಿಬಂತಿ ನಃ। ಸಿಂಧುಭ್ಯಃ ಕರ್ತ್ವಂ ಹವಿಃ।।
ನಾವು ಉದಕಗಳನ್ನೂ ಮತ್ತು ದೈವೀ ಮಾತೆಯರನ್ನೂ ಆಹ್ವಾನಿಸುತ್ತೇವೆ. ನಮ್ಮ ಹಸುಗಳು (ಜ್ಞಾನವೆಂಬ ಹಸುಗಳು) ಯಾವ ಉದಕಗಳನ್ನು ಕುಡಿದು ಪೋಷಣೆಯಾಗುತ್ತವೋ, ಆ ಉದಕಗಳಿಂದ ಹವಿಸ್ಸನ್ನು ಪ್ರದಾನ ಮಾಡಬೇಕು.

ಅಪ್ಸ್ವ–ನ್ತರಮೃತಮಪ್ಸು ಭೇಷಜಮಪಾಮುತ ಪ್ರಶಸ್ತಯೇ।
ದೇವಾ ಭವತ ವಾಜಿನಃ।। (೧–೨೩–೧೯)
(ಅಪ್ಸು ಅಂತಃ ಅಮೃತಮ್ ಅಪ್ಸು ಭೇಷಜಮ್ ಅಪಾಮುತ ಪ್ರಶಸ್ತಯೆ।)
ಉದಕಗಳ ಮಧ್ಯದಲ್ಲಿ ಅಮೃತವಿರುವುದು. ಉದಕದಲ್ಲಿ ವ್ಯಾದಿಯನ್ನು ಗುಣಪಡಿಸುವ ಔಷಧ'ವಿರುವುದು. ಆದ್ದರಿಂದ ಎಲೈ ದೇವತೆಗಳೆ ನೀವು ಬೇಗನೆ ಆ ಉದಕಗಳನ್ನು ಸ್ತೋತ್ರಮಾಡಲು ಸಿದ್ಧರಾಗಿ.

ಅಪ್ಸು ಮೇ ಸೋಮೋ ಅಬ್ರವೀದನ್ತರ್ವಿಶ್ವಾನಿ ಭೇಷಜಾ। (ಅಬ್ರವೀತ್ ಅನ್ತರ್ವಿಶ್ವಾನಿ)
ಅಗ್ನಿಂ ಚ ವಿಶ್ವಶಂಭುವಮಾಪಶ್ಚ ವಿಶ್ವ ಭೇಷಜೀಃ।। (೧–೨೩–೨೦)
(ಅಪ್ಸು ಮೇ ಸೋಮೋ ಅಬ್ರವಿತ್ ಅನ್ತರ್ವಿಶ್ವಾನಿ ಭೇಷಜಾ।)
ಜಲಮಧ್ಯದಲ್ಲಿ ವ್ಯಾದಿಗಳನ್ನು ಪರಿಹರಿಸುವ ಸಮಸ್ತ ಔಷಧಿಗಳು ಇರುವುವು. ಅಗ್ನಿಯು ಸಮಸ್ತ ಜಗತ್ತಿಗೂ ಸುಖಃವನ್ನುಂಟುಮಾಡುವವನು. ಉದಕಗಳು ಸಮಸ್ತ ಔಷಧಿಗಳಿಂದ ಕೂಡಿರುವುವು. ಹೀಗೆಂದು ನನಗೆ ಸೋಮ ದೇವತೆಯು ಹೇಳಿದನು."

ಅಪಃ ಪೃಣೀತ ಭೇಷಜಂ ವರೂಥಂ ತನ್ವೇ ೩ ಮಮ।

ಜ್ಯೋಕ್ ಚ ಸೂರ್ಯಂ ದೃಶೇ।। (೧-೨೩-೨೧)
ಎಲೈ ಉದಕಗಳೇ, ನನ್ನ ಶರೀರವು ರೋಗವಿಲ್ಲದಂತೆ ಇರುವುದಕ್ಕಾಗಿ ಉತ್ತಮವಾದ ಔಷಧವನ್ನು ಪೂರ್ಣಮಾಡಿ (ಸಿದ್ಧಪಡಿಸಿ), ಅದರಿಂದ ನಾನು ರೋಗರಹಿತನಾಗಿ ಬಹುಕಾಲ ಸೂರ್ಯನನ್ನು ನೋಡುವಂತಾಗಲಿ ಎಂದರೆ ಬಹುಕಾಲ ಜೀವಿಸುವಂತಾಗಲಿ.

ಇದಮಾಪಃ ಪ್ರ ವಹತ ಯತ್ ಕಿಂ ಚ ದುರಿತಂ ಮಯಿ।
ಯದ್ವಾಹಮಭಿದುದ್ರೋಹ ಯದ್ವಾ ಶೇಪ ಉತಾನೃತಂ।। (೧-೨೩-೨೨)
(ಯದ್ವಾ ಅಹಮ್ ಅಭಿದುದ್ರೋಹ ಯದ್ವಾ ಶೇಪ ಉತಾನೃತಂ।।)
ನನ್ನಲ್ಲಿರಬಹುದಾದ ಅಜ್ಞಾನವಶದಿಂದ ಮಾಡಿದ ಪಾಪಗಳು, ಅಥವಾ ನಾನು ಯಾರಿಗಾದರೂ ದ್ರೋಹವೆಣಿಸಿದ್ದರೂ, ಅಥವಾ ಕೆಟ್ಟಮಾತನ್ನಾಡಿದ್ದರೂ ಮತ್ತು ಸುಳ್ಳನ್ನು ಹೇಳಿದ್ದರೂ ಅಂತಹ ಪಾಪಗಳೆಲ್ಲವನ್ನು ಉದಕಗಳು ಪ್ರವಾಹರೂಪದಲ್ಲಿ ಕೊಚ್ಚಿಕೊಂಡು ಹೋಗಲಿ.

ಉದ್ಧರಣೆಯಿಂದ ನೀರನ್ನು ತೆಗೆದುಕೊಂಡು ಹೆಬ್ಬೆರಳು, ಮಧ್ಯಮ, ಅನಾಮಿಕಾ ಬೆರಳುಗಳಿಂದ ಪೂಜಾದ್ರವ್ಯಗಳಿಗೂ ಮತ್ತು ತನ್ನ ಮೇಲೆ ಪ್ರೋಕ್ಷಿಸಿಕೊಳ್ಳಬೇಕು.

ಆನಂತರ ಎಡಗೈಯಲ್ಲಿ ಉದ್ಧರಣೆಯಿಂದ ನೀರನ್ನು ತೆಗೆದುಕೊಂಡು ಹೆಬ್ಬೆರಳು, ಮಧ್ಯಮ, ಅನಾಮಿಕಾ ಬೆರಳುಗಳಿಂದ
ಓಂ ವಾಙ್ ಮ ಅಸ್ಯೇಽಸ್ತು (ತುಟಿಗಳನ್ನು ಸ್ಪರ್ಶಿಸಬೇಕು)
(ಹೇ ಪರಮೇಶ್ವರ (ಅಥವಾ ಉದಕಗಳು) ನನ್ನ ಬಾಯಿಯಲ್ಲಿ ವಾಕ್ ಶಕ್ತಿಯು ಸ್ಥಿರವಾಗಿರಲಿ)
ಓಂ ನಸೋರ್ಮೇ ಪ್ರಾಣೋಽಸ್ತು! (ನಾಸಿಕಾ ಛಿದ್ರಗಳನ್ನು ಸ್ಪರ್ಶಿಸಬೇಕು)
(ನನ್ನ ನಾಸಿಕಾ ರಂಧ್ರಗಳಲ್ಲಿ ಪ್ರಾಣಶಕ್ತಿಯು ಸ್ಥಿರವಾಗಿರಲಿ)
ಓಂ ಅಕ್ಷೋರ್ಮೇ ಚಕ್ಷುರಸ್ತು (ಕಣ್ಣುಗಳನ್ನು)
(ನನ್ನ ನೇತ್ರಗಳಲ್ಲಿ ಚಕ್ಷು ಶಕ್ತಿ ಸ್ಥಿರವಾಗಿರಲಿ)
ಓಂ ಕರ್ಣಯೋರ್ಮೇ ಶ್ರೋತ್ರಮಸ್ತು (ಕಿವಿಗಳನ್ನು)
(ನನ್ನ ಕಿವಿಗಳಲ್ಲಿ ಶ್ರವಣ ಶಕ್ತಿಯು ಸ್ಥಿರವಾಗಿರಲಿ)
ಓಂ ಬಾಹ್ವೋರ್ಮೇ ಬಲಮಸ್ತು (ಭುಜಗಳನ್ನು)
(ನನ್ನ ಬಾಹುಗಳಲ್ಲಿ ಬಲವು ಸ್ಥಿರವಾಗಿರಲಿ)
ಓಂ ಊರ್ವೋರ್ಮೆ ಓಜೋಽಸ್ತು (ತೊಡೆಗಳನ್ನು)
(ನನ್ನ ತೊಡೆಗಳಲ್ಲಿ ಪರಾಕ್ರಮವು ಸ್ಥಿರವಾಗಿರಲಿ)
ಓಂ ಅರಿಷ್ಟಾನಿ ಮೇಽಂಗಾನಿ ತನೂಸ್ತನ್ವಾ ಮೇ ಸಹ ಸನ್ತು!
(ಶರೀರದ ಮೇಲೆ ಜಲವನ್ನು ಸಿಂಪಡಿಸಿಕೊಳ್ಳಬೇಕು)
(ಹೇ ರಕ್ಷಕ (ಅಥವಾ ಉದಕಗಳು) ವಿವಿಧ ಅಂಗಗಳಿಂದ ಕೂಡಿದ ಈ ಶರೀರವನ್ನು ಅವಯವಗಳನ್ನು ರೋಗರಹಿತವಾಗಿ ಇರುವಂತೆ ಅನುಗ್ರಹಿಸು.)

(ಓಂ ವಾಯುವೇ ನಮಃ, ಧ್ಯಾಯಾಮಿ ಧ್ಯಾನಂ ಸಮರ್ಪಯಾಮಿ, ಆವಾಹಯಾಮಿ, ಆಸನಂ ಸಮರ್ಪಯಾಮಿ.
ನಮ್ಮ ಶಿರಸ್ಸಿನ ಮೇಲೆ ಅಂತರಿಕ್ಷದಿಂದ ವಾಯುದೇವರು ಇಳಿದು ಬರುತ್ತಾರೆ.)

## ಮೂರು ಗಾಯತ್ರಿ ಪ್ರಾಣಾಯಾಮ

(ಬಲ ಹೊಳ್ಳೆಯನ್ನು ಮುಚ್ಚಿ ಎಡ ಹೊಳ್ಳೆಯಿಂದ ಉಸಿರನ್ನು ಒಳಗೆ ತೆಗದುಕೊಳ್ಳುತ್ತಾ ಕೆಳಗಿನ ಮಂತ್ರವನ್ನು ಹೇಳಿ.)

ಓಂ ಭೂಃ, ಓಂ ಭುವಃ, ಓಂ ಸುವಃ, ಓಂ ಮಹಃ, ಓಂ ಜನಃ, ಓಂ ತಪಃ, ಓಂ ಸತ್ಯಂ
ಓಂ ತತ್ ಸವಿತುರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹೀ।
ಧಿಯೋ ಯೋನಃ ಪ್ರಚೋದಯಾತ್।।
ಓಂ ಆಪೋಜ್ಯೋತಿರಸೋಮೃತಂ ಬ್ರಹ್ಮಭೂರ್ಭುವಸ್ಸುವರೋಂ।।
(ನಾಭಿಯಲ್ಲಿರುವ ಯಜ್ಞಕುಂಡದಿಂದ ಊರ್ಧ್ವಮುಖವಾಗಿ ಸಪ್ತಸ್ವರ್ಗಗಳು ಪ್ರಕಟವಾಗುವುವು.)

| **ಅಥ ಅಂಗನ್ಯಾಸಃ ಕರನ್ಯಾಸಃ** | **(ಅಂಗನ್ಯಾಸಃ)** |
|---|---|
| ಹ್ರಾಂ ಅಂಗುಷ್ಟಾಭ್ಯಾಂ ನಮಃ | ಹ್ರಾಂ ಹೃದಯಾಯ ನಮಃ |
| ಕ್ರೀಂ ತರ್ಜನೀಭ್ಯಾಂ ನಮಃ | ಕ್ರೀಂ ಶಿರಸ್ಸೇ ಸ್ವಾಹ |
| ಹ್ರೂಂ ಮಧ್ಯಮಾಭ್ಯಾಂ ನಮಃ | ಹ್ರೂಂ ಶಿಖಾಯ್ಯೆ ವಷಟ್ |
| ಕ್ರೈಂ ಅನಾಮಿಕಾಭ್ಯಾಂ ನಮಃ | ಕ್ರೈಂ ಕವಚಾಯ ಹುಂ |
| ಹ್ರೌಂ ಕನಿಷ್ಟಿಕಾಭ್ಯಾಂ ನಮಃ | ಹ್ರೌಂ ನೇತ್ರತ್ರಯಾಯ ವೌಷಟ್ |
| ಕ್ರಃ ಕರತಲಕರಪೃಷ್ಟಾಭ್ಯಾಂ ನಮಃ | ಕ್ರಃ ಅಸ್ತ್ರಾಯ ಪಟ್ ಭೂರ್ಭುವಃಸುವರೋಂ ಇತಿ ದಿಗ್ಬಂಧಃ |

- 'ಹೃದಯಾಯ ನಮಃ' ದಿಂದ ನಮ್ಮ ಹೃದಯದಲ್ಲಿರುವ ಸೂರ್ಯ–ಸವಿತೃವನ್ನು ನಮ್ಮ ಶಿರಸ್ಸಿನಲ್ಲಿ ಸ್ಥಾಪಿಸುತ್ತೇವೆ. 'ಶಿಖಾಯ್ಯೆ ವಷಟ್' ನಿಂದ ನಮ್ಮಲ್ಲಿರುವ ೭೨,೦೦೦ ನಾಡಿಗಳ ಅಂತ್ಯಸ್ಥಾನವಾದ ಶಿಖೆಯಲ್ಲಿ ಗಂಟನ್ನು ಹಾಕಿ ನಾಡಿಗಳನ್ನು ಬಿಗಿಗೊಳಿಸಲಾಗುತ್ತದೆ.
- 'ಕವಚಾಯ ಹುಂ' ದಿಂದ ಇಂದ್ರ ಕವಚವನ್ನು ಧರಿಸಿಕೊಳ್ಳುತ್ತೇವೆ. ಸಂಪೂರ್ಣ ಶರೀರವನ್ನು ಕವಚ, ಶಿರಸ್ತ್ರಾಣ, ಕಾಲು, ತೊಡೆ ಮತ್ತು ಪಾದುಕೆಗಳನ್ನು ರಕ್ಷಣೆಗಾಗಿ ಯುದ್ಧ ಸಮಯದಲ್ಲಿ ಮರುತ್‌ಗಳು ಮತ್ತು ಇಂದ್ರನು ದೇವರು ಧರಿಸುತ್ತಾರೆ.
- 'ನೇತ್ರತ್ರಾಯ ವೌಷಟ್' ನಿಂದ, ಎರಡು ಕಣ್ಣ ಮತ್ತು ಹಣೆಯ ಮಧ್ಯದಲ್ಲಿರುವ ಮೂರನೆಯ ಕಣ್ಣನ್ನು ಮುಚ್ಚಿಕೊಂಡು ಕಣ್ಣಿನ ರಕ್ಷಣೆಯನ್ನು ಪಡೆಯುತ್ತೇವೆ.
- 'ಅಸ್ತ್ರಾಯ ಫಟ್' ನಿಂದ, ಕವಚದಿಂದ ನೂರಾರು ಬಾಣಗಳು ದಶದಿಕ್ಕುಗಳಿಗೂ ಏಕಕಾಲದಲ್ಲಿ ಪ್ರಯೋಗವಾಗುತ್ತದೆ.
- "ಭೂರ್ಭವಃಸುವರೋಮ್ ಇತಿ ದಿಗ್ಬಂಧಃ' ಮೂರು ಲೋಕಗಳಲ್ಲಿರುವ ಅಸುರಶಕ್ತಿಗಳೂ ಮತ್ತು ಇತರ ದುಷ್ಟ ಪ್ರಾಣಶಕ್ತಿಗಳು ನಮ್ಮ ಯಜ್ಞಪ್ರದೇಶಕ್ಕೆ ಬರಲು ಸಾಧ್ಯವಿಲ್ಲದಂತೆ ಧಿಗ್ಬಂನವಾಗುತ್ತದೆ.

## ದ್ಯಾವಾಪೃಥಿವಿಯ್ಯೆ ನಮಃ (೧–೨೨–೧೩ ರಿಂದ)

ಓಂ ಮಹೀ ದ್ಯೌಃ ಪೃಥಿವೀ ಚ ನ ಇಮಂ ಯಜ್ಞಂ ಮಿಮಿಕ್ಷತಾಂ । ಪಿಪ್ಲತಾಂ ನೋ ಭರೀಮಭಿಃ ।।
ನಮ್ಮ ಯಜ್ಞವನ್ನು ದೇವಲೋಕ ಮತ್ತು ಭೂಲೋಕ ದೇವತೆಗಳು ರಸಯುಕ್ತವನ್ನಾಗಿ ಮಾಡಲಿ ಮತ್ತು ನಮ್ಮನ್ನು ಪೋಷಕದ್ರವ್ಯಗಳಿಂದ ಪೋಷಿಸಲಿ.

ತಯೋರಿದ್ಘೃತವತ್‌ಪಯೋ ವಿಪ್ರಾ ರಿಹಂತಿ ಧೀತಿಭಿಃ । ಗಂಧರ್ವಸ್ಯ ಧ್ರುವೇ ಪದೇ ।।
ಆಕಾಶಸ್ಥವಾದ ದ್ಯುಲೋಕ ಮತ್ತು ಭೂಲೋಕ ಸಂಬಂಧವಾದ ಜಲವನ್ನೇ ಜ್ಞಾನಿಗಳು ಸತ್ಕರ್ಮಗಳ ಫಲವಾಗಿ ಘೃತದಂತೆ ರುಚಿನೋಡುತ್ತಾರೆ.

ಸ್ಯೋನಾ ಪೃಥಿವಿ ಭವಾನೃಕ್ಷರಾ ನಿವೇಶನೀ । ಯಚ್ಛಾ ನಃ ಶರ್ಮ ಸಪ್ರಥಃ ।।
ಎಲೈ ಪೃಥಿವೀ ದೇವತೆಯೇ, ನೀನು ಸರ್ವದಾ ವಿಸ್ತಾರವಾಗಿಯೂ, ಕಂಟಕರಹಿತವಾಗಿಯೂ ಇರುವ ವಾಸಸ್ಥಾನಳಾಗಿದ್ದು, ನಮಗೆ ವಿಸ್ತಾರವಾದ ಆಶ್ರಯವನ್ನು ಕೊಡು.

**ಬೃಹಸ್ಪತಿ** (ಆವಾಹನ ಮಂತ್ರಗಳನ್ನು ಹೇಳಿ)

ಓಂ ಬೃಹಸ್ಪತಯೇ ನಮಃ, ಧ್ಯಾಯಾಮಿ ಧ್ಯಾನಂ ಸಮರ್ಪಯಾಮಿ, ಆವಾಹಯಾಮಿ, ಆಸನಂ ಸರ್ಮಪಯಾಮಿ. ಪಾದಯೋಪಾದ್ಯಂ ಸಮರ್ಪಯಾಮಿ, ಅರ್ಘ್ಯಂ ಸಮರ್ಪಯಾಮಿ, ಆಚಮನೀಯಂ ಸಮರ್ಪಯಾಮಿ, ಪುಷ್ಪಂ ಸಮರ್ಪಯಾಮಿ. ಇದೇ ರೀತಿ ಸಕಲ ದೇವತೆಗಳನ್ನು ಆಹ್ವಾಣಿಸಬೇಕು.
(ಬೃಹಸ್ಪತಿ ದೇವರ ಆವಾಹನೆ ಮತ್ತು ಪಾದಪೂಜೆ ಮಾಡಿ. ನಂತರ ಕೆಳಗಿನ ಸ್ತೋತ್ರ ಹೇಳಿ)

ಓಂ ಬೃಹಸ್ಪತೇ ಜುಷಸ್ವ ನೋ ಹವ್ಯಾನಿ ವಿಶ್ವದೇವ್ಯ। ರಾಸ್ವ ರತ್ನಾನಿ ದಾಶುಷೇ।। (೩-೬೨-೪)
ಸಕಲ ದೇವಮಾನವರಿಗೂ ಮಂಗಳಕಾರಿಯಾದ ಎಲೈ ಬೃಹಸ್ಪತಿಯೇ, ನಮ್ಮಿಂದ ದತ್ತವಾದ ಹವಿಸ್ಸುಗಳನ್ನು ಸೇವಿಸು. ಹವಿಸ್ಸನ್ನು ಅರ್ಪಿಸತಕ್ಕ ಯಜಮಾನನಿಗೆ (ಆಧ್ಯಾತ್ಮಿಕ) ರತ್ನಗಳನ್ನು ಒದಗಿಸಿಕೊಡು.

ಶುಚಿಮರ್ಕೈರ್ಬೃಹಸ್ಪತಿಮಧ್ವರೇಷು ನಮಸ್ಯತ। ಅನಾಮ್ಯೋಜ ಆ ಚಕೇ।। (೩-೬೨-೫)
(ಶುಚಿಂ ಅರ್ಕೈಃ ಬೃಹಸ್ಪತಿಂ ಅಧ್ವರೇಷು ನಮಸ್ಯತ। ಅನಾಮಿ ಓಜ ಆ ಚಕೇ।।
ಯಜ್ಞಗಳಲ್ಲಿ ಶುದ್ಧನಾದ ಬೃಹಸ್ಪತಿಯನ್ನು ಪೂಜ್ಯವಾದ ಸ್ತುತಿಗಳಿಂದ ಪೂಜಿಸಿರಿ. ಶತ್ರುಗಳಿಂದ ಕುಗ್ಗಿಸಲು ಸಾಧ್ಯವಿಲ್ಲದ ಶಕ್ತಿಯನ್ನು ನಾನು ಅವನಿಂದ ಯಾಚಿಸುತ್ತೇನೆ.

ವೃಷಭಂ ಚರ್ಷಣೀನಾಂ ವಿಶ್ವರೂಪಮದಾಭ್ಯಂ। ಬೃಹಸ್ಪತಿಂ ವರೇಣ್ಯಂ।। (೩-೬೨-೬)
ಮಾನವರಿಗೆ ಇಷ್ಟಾರ್ಥಗಳನ್ನು ಕೊಡುವವನೂ, ವಿಶ್ವರೂಪವುಳ್ಳವನೂ, ಯಾರಿಂದಲೂ ತಿರಸ್ಕರಿಸಲ್ಪಡದಿರುವವನೂ, ಎಲ್ಲರಿಗೂ ಪೂಜ್ಯನೂ ಆದ ಬೃಹಸ್ಪತಿಯನ್ನು ಯಾಚಿಸುತ್ತೇನೆ.

(ಬೃಹಸ್ಪತಿಯನ್ನು ಕಂಠದಲ್ಲಿ ಸ್ಥಾಪಿಸಬೇಕು.)

ನಾಭಿಯನ್ನು ತಟ್ಟಿ **ಓಂ ಬ್ರಹ್ಮದೇವಾಯ ನಮಃ** (ಆವಾಹನ ಮಂತ್ರಗಳನ್ನು ಹೇಳಿ)
(ಬ್ರಹ್ಮನು ನಾಭಿಯಲ್ಲಿ ಪ್ರಕಟವಾಗುವನು. ಯಾವ ಮಂತ್ರಗಳು ಇಲ್ಲದಿರುವುದರಿಂದ, ಪಾದ ಪೂಜೆಯನ್ನು ಮಾಡಿ ಆಶೀರ್ವಾದವನ್ನು ಪಡೆದುಕೊಳ್ಳಿ.)

**ಬ್ರಹ್ಮಣಸ್ಪತಿ (೧-೪೦-೧ ರಿಂದ ೧-೪೦-೫)** (ಆವಾಹನ ಮಂತ್ರಗಳನ್ನು ಹೇಳಿ)'
ಓಂ ಬ್ರಹ್ಮಣಸ್ಪತಯ್ಯೆ ನಮಃ (ದೇವರ ಆವಾಹನೆ ಮತ್ತು ಪಾದಪೂಜೆ ಮಾಡಿ. ನಂತರ ಕೆಳಗಿನ ಸ್ತೋತ್ರ ಹೇಳಿ)

ಓಂ ಉತ್ತಿಷ್ಠ ಬ್ರಹ್ಮಣಸ್ಪತೇ ದೇವಯಂತಸ್ತ್ವೇಮಹೇ।
ಉಪ ಪ್ರ ಯಂತು ಮರುತಃ ಸುದಾನವ ಇಂದ್ರ ಪ್ರಾಶೂರ್ಭವಾ ಸಚಾ।। (೧-೪೦-೧)
ಎಲೈ ಬ್ರಹ್ಮಣಸ್ಪತಿಯೇ, ನಮಗೆ ಅನುಗ್ರಹ ಮಾಡುವುದಕ್ಕಾಗಿ ಸ್ವಸ್ಥಾನದಿಂದ ಎದ್ದೇಳು. ದೇವತೆಗಳ ಸಹಾಯವನ್ನು ಅಪೇಕ್ಷಿಸುವ ನಾವು ನಿನ್ನನ್ನು ಪ್ರಾರ್ಥಿಸುತ್ತೇವೆ. ಶುಭಕರವಾದ ದಾನಗಳನ್ನು ಕೊಡತಕ್ಕ ಮರುತ್ತುಗಳು ನಮ್ಮ ಸಮೀಪಕ್ಕೆ ಬರಲಿ. ಎಲೈ ಇಂದ್ರನೇ ಬ್ರಹ್ಮಣಸ್ಪತಿಯೊಡನೆ ಶೀಘ್ರವಾಗಿ ಬರುವಂತವನಾಗು.

ತ್ವಾಮಿದ್ಧಿ ಸಹಸಸ್ಪುತ್ರ ಮರ್ತ್ಯ ಉಪಬ್ರೂತೇ ಧನೇ ಹಿತೇ। (ತ್ವಾಂ ಇತ್ ಹಿ।)
ಸುವೀರ್ಯಂ ಮರುತ ಆ ಸ್ವಶ್ವ್ಯಂ ದಧೀತ ಯೋ ವ ಆಚಕೆ।। (೧-೪೦-೨)
ಎಲೈ ಬ್ರಹ್ಮಣಸ್ಪತಿಯೇ ನೀನು ಅತ್ಯಂತ ಬಲಶಾಲಿಯು ಮಾನವನು ಪರಮಸುಖಕರವಾದ ದೈವೀಕ ಧನದ ಉದ್ದಿಶ್ಯವಾಗಿ ನಿನ್ನನ್ನು ಸಮೀಪಿಸಿ ಸ್ತೋತ್ರವನ್ನು ಮಾಡುತ್ತಾನೆ. ಎಲೈ ಮರುತ್ತುಗಳೇ, ಶಕ್ತಿರಕ್ಷಕನಾದ ಬ್ರಹ್ಮಣಸ್ಪತಿಯೊಡನೆ ನೀವು ಇರುವುದರಿಂದ ಧನಾಪೇಕ್ಷಿಯಾದ ಯಾವ ಮಾನವನು ಸ್ತೋತ್ರಮಾಡುತ್ತಾನೋ ಅವನು ಶ್ರೇಷ್ಠವಾದ ದೈವೀಕ ಧನವನ್ನು ಹೊಂದುವನು.

ಪ್ರೈತು ಬ್ರಹ್ಮಣಸ್ಪತಿಃ ಪ್ರ ದೇವ್ಯೇತು ಸೂನೃತಾ।
ಅಚ್ಛಾ ವೀರಂ ನರ್ಯಂ ಪಂಕ್ತಿರಾಧಸಂ ದೇವಾ ಯಜ್ಞಂ ನಯಂತು ನಃ. (೩)
ದೇವನಾದ ಬ್ರಹ್ಮಣಸ್ಪತಿಯೂ ಸತ್ಯಪ್ರಿಯರೂಪಳಾಗಿರುವ ವಾಗ್ದೇವತೆಯೂ ನಮ್ಮ ಸಮೀಪಕ್ಕೆ ಬರಲಿ.  ಬಲಶಾಲಿಗಳಾದ ದೇವತೆಗಳೂ ಸಹ ನಮಗೆ ಒಳ್ಳೆಯದನ್ನು ಮಾಡುವ ಸಲುವಾಗಿ ಸಮೀಪಕ್ಕೆ ದಯಮಾಡಿ ಬರಲಿ. ನಮಗೆ ಒಳ್ಳೆಯದನ್ನು ಮಾಡುವ ವೇದೋಕ್ತವಾದ ಹವಿಸ್ಸಿನ ಪಂಕ್ತಿಗಳಿಂದ ತುಂಬಿರುವ ಯಜ್ಞಕ್ಕೆ ಅಭಿಮುಖವಾಗಿ ನಮ್ಮನ್ನು ಸುರಕ್ಷಿತವಾಗಿ ಕರೆದುಕೊಂಡು ಹೋಗಲಿ.

ಯೋ ವಾಘತೇ ದದಾತಿ ಸೂನರಂ ವಸು ಸ ಧತ್ತೇ ಅಕ್ಷಿತಿ ಶ್ರವಃ। (೪)
ತಸ್ಮಾ ಇಳಾಂ ಸುವೀರಾಮಾ ಯಜಾಮಹೇ ಸುಪ್ರತೂರ್ತಿಮನೇಹಸಂ॥
ಯಾವ ಯಜಮಾನನು ಬ್ರಹ್ಮಣಸ್ಪತಿಗೆ (ಋತ್ವಿಜ) ಸಂತೋಷದಿಂದ ಸ್ವೀಕರಿಸಲ್ಪಡುವ ಹವಿಸ್ಸೆಂಬ ಧನವನ್ನು (ದೇವತೆಗಳಿಗೆ) ಕೊಡುತ್ತಾನೋ ಅಂತಹ ಯಜಮಾನನು ನಾಶರಹಿತವಾದ ದೈವೀಕ ಧನವನ್ನು ಹೊಂದುತ್ತಾನೆ. ಶತ್ರುಗಳ ಕಾಟವನ್ನು ನಾಶಮಾಡುವ ಇಳಾದೇವಿಯನ್ನು ಶತ್ರುಗಳು ಹಿಂಸಿಸಲಾಗುವುದಿಲ್ಲ. ಅವಳು ಸಂಪೂರ್ಣವಾಗಿ ಶತ್ರುಗಳ ನಾಶವನ್ನು ಮಾಡಬಲ್ಲಳು, ಹೀಗೆ ನಿರ್ವಿಘ್ನವಾಗಿ ಯಜ್ಞವನ್ನು ನೆರವೇರಿಸಲು ಸಹಾಯ ಮಾಡುವ ಇಳಾದೇವಿಯನ್ನು ಉದ್ದೇಶಿಸಿ ನಾವು ಯಜ್ಞದಲ್ಲಿ ಆಹ್ವಾನಿಸುತ್ತೇವೆ.

ಪ್ರ ನೂನಂ ಬ್ರಹ್ಮಣಸ್ಪತಿರ್ಮಂತ್ರಂ ವದತ್ಯುಕ್ಥ್ಯಂ।
ಯಸ್ಮಿನ್ನಿಂದ್ರೋ ವರುಣೋ ಮಿತ್ರೋ ಆರ್ಯಮಾ ದೇವಾ ಓಕಾಂಸಿ ಚಕ್ರಿರೇ॥ (೫)
ಬ್ರಹ್ಮಣಸ್ಪತಿಯು ಯಜ್ಞಕಾಲದಲ್ಲಿ ಪಠಿಸುವ ಮಂತ್ರದಲ್ಲಿ ಇಂದ್ರನೂ, ವರುಣನೂ, ಮಿತ್ರನೂ ಆರ್ಯಮನೂ ಇನ್ನೂ ಸಕಲ ದೇವತೆಗಳೂ ತಮ್ಮ ವಾಸಸ್ಥಾನವನ್ನು ಮಾಡಿಕೊಂಡಿರುವರೋ ಅಂತಹ ಸ್ತೋತ್ರಯೋಗ್ಯವಾದ ದೇವತಾತ್ಮಕವಾದ ಮಂತ್ರವನ್ನು ಬ್ರಹ್ಮಣಸ್ಪತಿಯು ನಿಶ್ಚಯವಾಗಿ ಸ್ಪಷ್ಟವಾಗಿ ಪಠಿಸುತ್ತಾನೆ.

ಓಂ ಗಣಾನಾಂ ತ್ವಾ ಗಣಪತಿಂ ಹವಾಮಹೇ ಕವಿಂ ಕವೀನಾಮುಪಮಶ್ರವಸ್ತಮಂ ।
ಜ್ಯೇಷ್ಠರಾಜಂ ಬ್ರಹ್ಮಣಾಂ ಬ್ರಹಣಸ್ಪತ ಆ ನಃ ಶೃಣ್ವನ್ನೂತಿಭಿಃ ಸೀದ ಸಾದನಂ ॥ (ಋ ೨-೨೩-೧)
ಎಲೈ ಬ್ರಹ್ಮಣಸ್ಪತಿಯೇ, ದೇವಗಣಗಳಿಗೆ ಸಂಬಂಧಿಸಿದವನು. ಸ್ವಗಣಕ್ಕೆ (ಮಂತ್ರಗಳಿಗೆ) ಒಡೆಯನೂ, ಕ್ರಾಂತದರ್ಶಿಗಳಾದ ಕವಿಗಳಲ್ಲಿ ಅತ್ಯುತ್ತಮವಾದ ಕವಿಯಾದವನೂ, ದೈವೀಪ್ರೇರಣೆಯನ್ನು ಕೇಳಿಸಿಕೊಳ್ಳುವಂತೆ ಮಾಡುವವನೂ, ಮಂತ್ರಗಳ ಜ್ಯೇಷ್ಠರಾಜನೂ ಮತ್ತು ಒಡೆಯನೂ ಆದ ನಿನ್ನನ್ನು ಈ ಕರ್ಮನಿಮಿತ್ತವಾಗಿ ಕರೆಯುತ್ತೇವೆ. ನಮ್ಮ ಸ್ತುತಿಗಳನ್ನು ಕೇಳುತ್ತಾ ನಿನ್ನ ರಕ್ಷಣೆಗಳೊಡನೆ ಯಜ್ಞಗೃಹಕ್ಕೆ ಬಂದು ಕುಳಿತುಕೊ. (ಬ್ರಹ್ಮಣಸ್ಪತಿಯನ್ನು ಮುಖದಲ್ಲಿ ಸ್ಥಾಪಿಸಿ.)

## ರುದ್ರ ದೇವತೆ **(೧-೪೩-೧ ರಿಂದ ೧-೪೩-೬)** (ಆವಾಹನ ಮಂತ್ರಗಳನ್ನು ಹೇಳಿ)

(ರುದ್ರ ದೇವರು ಅಗ್ನಿಕುಂಡವನ್ನು ಪ್ರತಿನಿಧಿಸುವ ದೇವತೆ. ಅವರನ್ನು ಆಹ್ವಾನ ಮಾಡಿದಾಗ ಯಜ್ಞಕುಂಡದ ಜೊತೆಯಲ್ಲಿ ಪ್ರಕಟವಾಗುವರು.)
(ಯಜ್ಞಕುಂಡವೇ ಪೃಥ್ವಿಯ ನಾಭಿಸ್ಥಾನ. ಅಗ್ನಿಕುಂಡದ ಮೇಲೆ ನೇರವಾಗಿ ಸಪ್ತಸ್ವರ್ಗಗಳು ಪ್ರಕಟವಾಗುತ್ತದೆ.)

<u>ಒಂದು ಸಾರಿ ಗಾಯತ್ರಿ ಮಂತ್ರವನ್ನು ಹೇಳಿ ಯಜ್ಞಕುಂಡವನ್ನು ಜಾಗೃತಮಾಡಿ</u>

ಓಂ ಭೂಃ (ಯಜ್ಞಕುಂಡ), ಭುವಃ (ಸಪ್ತಸ್ವರ್ಗ), ಸುವಃ (ಅಂತರಿಕ್ಷ ಲೋಕ/ವಿರಾಟ್ ಪುರುಷನ ಶಿರಸ್ಸು)

ಓಂ
ಭೂರ್ಭುವಸ್ವಃ
ತತ್ ಸವಿತುರ್ವರೇಣ್ಯಂ (ವರೇಣಿಯಂ)
ಭರ್ಗೋ ದೇವಸ್ಯ ಧೀಮಹೀ।
ಧಿಯೋ ಯೋನಃ ಪ್ರಚೋದಯಾತ್॥
ಓಂ ಪೂಷಣ್ ದೇವಾಯ ನಮಃ

ಆಗ ಯಜ್ಞಕುಂಡ, ಸಪ್ತಸ್ವರ್ಗಗಳು ಮತ್ತು ವಿರಾಟ್‌ಪುರುಷನ ಶಿರಸ್ಸಿನಲ್ಲಿರುವ ಸೂರ್ಯ-ಸವಿತೃದೇವನ ಜಾಗೃತವಾಗುತ್ತದೆ. ನಂತರ 'ಓಂ ಪೂಷಣ್ ದೇವಾಯ ನಮಃ' ಎಂದು ಹೇಳಿದ ತಕ್ಷಣ ಸೂರ್ಯನ ಕಿರಣಗಳು ಯಜ್ಞಕುಂಡದ ಮೇಲೆ ಇಳಿಯುತ್ತದೆ.

**ಓಂ ರುದ್ರಾಯ ನಮಃ** (ದೇವರ ಆವಾಹನೆ ಮತ್ತು ಪಾದಪೂಜೆ ಮಾಡಿ. ನಂತರ ಕೆಳಗಿನ ಸ್ತೋತ್ರ ಹೇಳಿ)

ಓಂ ಕದ್ರುದ್ರಾಯ ಪ್ರಚೇತಸೇ ಮೀಳ್ಹುಷ್ಟಮಾಯ ತವ್ಯಸೇ। ವೋಚೇಮ ಶಂತಮಂ ಹೃದೇ।।
ಶ್ರೇಷ್ಠವಾದ ಜ್ಞಾನದಿಂದ ಯುಕ್ತನಾಗಿಯೂ, ಅತ್ಯಂತ ಬಲಶಾಲಿಯಾಗಿಯೂ, ಅತ್ಯಂತ ಸಮೃದ್ಧವಾಗಿ ನಮ್ಮ ಇಷ್ಟಾರ್ಥಗಳನ್ನು ದಯಪಾಲಿಸುವವನೂ, ರುದ್ರದೇವನ ಹೃದಯಕ್ಕೆ ಅತ್ಯಂತ ಸಂತೋಷಕರವಾದ ಸ್ತೋತ್ರವನ್ನು ಯಾವಾಗ ಪಠಿಸೋಣ?

ಯಥಾ ನೋ ಅದಿತಿಃ ಕರತ್ಪಶ್ವೇ ನೃಭ್ಯೋ ಯಥಾ ಗವೇ। ಯಥಾ ತೋಕಾಯ ರುದ್ರಿಯಂ।।
ನಮ್ಮ ಕುದುರೆ, ಗೋವುಗಳು ಮೊದಲಾದ ಪಶುಗಳಿಗೂ, ಮನುಷ್ಯರಿಗೂ, ನಮ್ಮ ಪುತ್ರಪೌತ್ರಾದಿಸಂತತಿಗೂ ರುದ್ರನ ಅನುಗ್ರಹವಾಗಲಿ. ಅದಿತಿಯು ಆ ರೀತಿಯಾಗಿ ಹರಸಲಿ.

ಯಥಾ ನೋ ಮಿತ್ರೋ ವರುಣೋ ಯಥಾ ರುದ್ರಶ್ಚಿಕೇತತಿ। ಯಥಾ ವಿಶ್ವೇ ಸಜೋಷಸಃ।। (ರುದ್ರಃ ಚಿಕೇತತಿ)
ಯಾವ ಸ್ತೋತ್ರಮಂತ್ರಪಠನದಿಂದ ಮಿತ್ರನೂ, ವರುಣನೂ ಮತ್ತು ರುದ್ರನೂ ನಮ್ಮಲ್ಲಿ ಜ್ಞಾನವುಂಟಾಗುವಂತೆ ಮಾಡುವರೋ, ಅದೇ ರೀತಿಯಾಗಿ ಸಕಲ ದೇವತೆಗಳು ನಮ್ಮನ್ನು ಅನುಗ್ರಹಿಸಲಿ.

ಗಾಥಪತಿಂ ಮೇಧಪತಿಂ ರುದ್ರಂ ಜಲಾಷಭೇಷಜಂ। ತಚ್ಛಂಯೋಃ ಸುಮ್ನಮೀಮಹೇ।।
ಸ್ತೋತ್ರಪಾಲಕನೂ, ಯಜ್ಞಪಾಲಕನೂ ಮತ್ತು ಉದಕರೂಪವಾದ ಔಷಧಿಗಳುಳ್ಳವನೂ ಆದ ರುದ್ರನನ್ನು ನಾವು, ಬೃಹಸ್ಪತಿಪುತ್ರನಾದ ಶಂಯುವು ಅನುಭವಿಸುವ ಪ್ರಸಿದ್ಧವಾದ ಸುಖವನ್ನು ಕೊಡುವುದಕ್ಕಾಗಿ ಪ್ರಾರ್ಥಿಸುತ್ತೇವೆ.

ಯಃ ಶುಕ್ರ ಇವ ಸೂರ್ಯೋ ಹಿರಣ್ಯಮಿವ ರೋಚತೇ। ಶ್ರೇಷ್ಠೋ ದೇವಾನಾಂ ವಸುಃ।।
ಯಾವ ರುದ್ರನು ಸೂರ್ಯನಂತೆ ಪ್ರಕಾಶಮಾನನಾಗಿಯೂ, ಬಂಗಾರದಂತೆ ಪ್ರಕಾಶಿಸುತ್ತಾನೆಯೋ, ಅಂಥಹ ರುದ್ರನು ಸಕಲ ದೇವತೆಗಳ ನಡುವೆ ಅತ್ಯಂತ ಶ್ರೇಷ್ಠವಾದ ವಾಸಸ್ಥಾನದಾಯಕನಾಗಿದ್ದಾನೆ.

ಶಂ ನಃ ಕರತ್ಯರ್ವತೇ ಸುಗಂ ಮೇಷಾಯ ಮೇಷ್ಯೇ।
ನೃಭ್ಯೋ ನಾರೀಭ್ಯೋ ಗವೇ।।
ರುದ್ರದೇವನು ನಮ್ಮ ಮೇಕೆಗೂ ಹೆಣ್ಣು ಮೇಕೆಗೂ ಗಂಡಸರಿಗೂ, ಹೆಂಗಸರಿಗೂ ಮತ್ತು ಗೋವುಗಳಿಗೂ ಸುಲಭವಾಗಿ ಹೊಂದಬಹುದಾದ ಸುಖವನ್ನು ಉಂಟುಮಾಡುತ್ತಾನೆ.
(ರುದ್ರದೇವರನ್ನು ಯಜ್ಞಕುಂಡದಲ್ಲಿ ನೆಲೆಸುವಂತೆ ಪ್ರಾಥಿಸಿ.)

**ಅಗ್ನಿ ದೇವತೆ** (೧-೧-೧ – ೧-೧-೯) (ಯಜ್ಞಕುಂಡದಲ್ಲಿ ಅಗ್ನಿಯನ್ನು ಸ್ವಾಹಾ ಮಂತ್ರದಿಂದ ಚೆನ್ನಾಗಿ ಪ್ರಜ್ವಲಿಸಿ.)
**ಓಂ ಅಗ್ನಯ್ಯೆ ನಮಃ** (ಸಪ್ತನದಿಗಳಲ್ಲಿರುವ ಅಗ್ನಿಯನ್ನು ಆವಾಹನೆ ಮಾಡಿ ಅಗ್ನಿಕುಂಡದಲ್ಲಿ ಸ್ಥಾಪಿಸಿ. ನಂತರ ಅಗ್ನಿ ದೇವರ ಪಾದಪೂಜೆ ಮಾಡಿ ಅಗ್ನಿಯನ್ನೇ ಋತ್ವಿಜರಾಗಿ ಪ್ರಕಟವಾಗುವಂತೆ ಪ್ರಾಥಿಸಿ. ಕೂಡಲೆ ನಾಲ್ಕು ಋತ್ವಿಜರು ಅಗ್ನಿಕುಂಡದ ಸುತ್ತ ಪ್ರಕಟವಾಗುವರು. ನಂತರ ಕೆಳಗಿನ ಸ್ತೋತ್ರ ಹೇಳ)

ಓಂ ಅಗ್ನಿಮೀಳೆ ಪುರೋಹಿತಂ ಯಜ್ಞಸ್ಯ ದೇವಮೃತ್ವಿಜಮಂ ।
ಹೋತಾರಂ ರತ್ನಧಾತಮಮ್ ಸ್ವಾಹಾ; ಅಗ್ನಯ್ಯೆ ಇದಮ್ ನ ಮಮ
ಯಜ್ಞದ ಪುರೋಹಿತನಾದ ಅಗ್ನಿಯನ್ನು, ಅಂತರ್ಯಜ್ಞದ ದೇವಾತ್ಮಕ ಋತ್ವಿಜನಾದ, ಆನಂದೈಶ್ವರ್ಯಗಳೆಂಬ ರತ್ನವನ್ನು ಅತಿಶಯವವಾಗಿ ಧರಿಸಿದವನನ್ನು ಆರಾಧಿಸುವೆನು.
(ಸೋಮರಸವನ್ನು ಪಾನಮಾಡುವಾಗ ಕೆಳಗಿನ ಎರಡು ಮಂತ್ರವನ್ನು ಹೇಳಿ. ದೇವತೆಗಳು ಸೋಮರಸವನ್ನು ಪಾನಮಾಡುವಾಗ ಅವರು ಹೊಗಳಿಕೆಯನ್ನು ಇಷ್ಟಪಡುತ್ತಾರೆ.)
೧. ಅಗ್ನಿಃ ಪೂರ್ವೇಭಿರ್ಋಷಿಭಿರೀಡ್ಯೋ ನೂತನೈರುತ। ಸ ದೇವಾನ್ ಏಹ ವಕ್ಷತಿ ।।
ಅಗ್ನಿಯು ದೇವತೆಗಳನ್ನು ಈ ಮರ್ತ್ಯಲೋಕಕ್ಕೆ ಕರೆತರಬಲ್ಲವನಾದ್ದರಿಂದ, ಸನಾತನ ಋಷಿಗಳಿಂದಲೂ, ಅಧುನಿಕ ಋಷಿಗಳಿದಲೂ ಆರಾಧಿಸಲ್ಪಡುತ್ತಾನೆ.

೨. ಅಗ್ನಿನಾ ರಯಿಮಶ್ನವತ್ ಪೋಷಮೇವ ದಿವೇದಿವೇ। ಯಶಸಂ ವೀರವತ್ತಮಮ್ ।।
ಸಂಕಲ್ಪಾಗ್ನಿಯಿಂದ ಆಂತರಿಕ ಐಶ್ವರ್ಯವನ್ನು ಅನುಭವಿಸುತ್ತಾನೆ, ಪ್ರತಿದಿನವೂ ವೃದ್ಧಿಯಾಗುತ್ತಲೇ ಇರುವ ಅತಿಶಯವಾದ ಶೌರ್ಯ, ಸಂಪತ್ತನ್ನುಳ್ಳ ಐಶ್ವರ್ಯವದು.

ಅಗ್ನೆ ಯಂ ಯಜ್ಞಮಧ್ವರಂ ವಿಶ್ವತಃ ಪರಿಭೂರಸಿ।
ಸ ಇದ್ದೇವೇಷು ಗಚ್ಛತಿ ಸ್ವಾಹಾ; ಅಗ್ನಯ್ಯೆ ಇದಮ್ ನ ಮಮ ।।
ಅಗ್ನಿಯೇ, ಯಜ್ಞವು ಒಂದು ಯಾತ್ರೆಯಂತಿದೆ, ನೀನು ವ್ಯಾಪಕವಾದ ನಿನ್ನ ಸತ್ತೆಯಿಂದ ಆವರಿಸಿಕೊಳ್ಳುವಂಥದ್ದು ಮಾತ್ರ ದೇವತೆಗಳಿಗೆ ತಲುಪುತ್ತದೆ.

**೧. ಅಗ್ನಿರ್ಹೋತಾ ಕವಿಕ್ರತುಃ ಸತ್ಯಶ್ಚಿತ್ರಶ್ರವಸ್ತಮಃ। ದೇವೋ ದೇವೇಭಿರಾಗಮತ್।।**
ದೇವತೆಗಳನ್ನು ಆಹ್ವಾನಿಸುವವನೂ ಋಷಿಗಳ ಸಂಕಲ್ಪಶಕ್ತಿಯೂ ಸಾಧಕರಿಗೆ ಅತೀಂದ್ರಿಯ ಅದ್ಭುತ ಶ್ರವಣ ಶಕ್ತಿಯನ್ನು ಕೊಡಬಲ್ಲವನೂ ಸತ್ಯನೂ ಆದ ಅಗ್ನಿದೇವನು, ಇತರ ದೇವತೆಗಳೊಂದಿಗೆ (ಇಲ್ಲಿಗೆ) ಆಗಮಿಸಲಿ.
೨. ಯದಂಗ ದಾಶುಷೇ ತ್ವಮಗ್ನೇ ಭದ್ರಂ ಕರಿಷ್ಯಸಿ। ತವೇತ್ತತ್ ಸತ್ಯಮಂಗಿರಃ।।
ಆ ಪ್ರಕಾಶಯುಕ್ತ, ದಾತೃವಿಗೆ, ಅಗ್ನಿಯೇ, ಶುಭಕರ ಆನಂದವನ್ನು ಉಂಟುಮಾಡುತ್ತೀಯೆ. ನೀನೆ ಆ ಸತ್ಯ ಅಂಗೀರಸನೆ.

ಉಪ ತ್ವಾಗ್ನೇ ದಿವೇದಿವೇ ದೋಷಾವಸ್ತರ್ಧಿಯಾ ವಯಮ್ ।
ನಮೋ ಭರಂತ ಏಮಸಿಸ್ವಾಹಾ; ಅಗ್ನಯ್ಯೆ ಇದಮ್ ನ ಮಮ ।।
ಓ ಅಗ್ನಿಯೇ, ಪ್ರತಿದಿನವೂ, ದಿನರಾತ್ರಿಗಳಲ್ಲಿಯೂ, ನಮ್ಮ ಬುದ್ಧಿಪೂರ್ವಕ ಶರಣಾಗತಿಯೊಡನೆ ನಿನ್ನ ಬಳಿಗೆ ಬರುವೆವು.
೧. ರಾಜಂತಮಧ್ವರಾಣಾಂ ಗೋಪಾಮೃತಸ್ಯ ದೀದಿವಿಮ್। ವರ್ಧಮಾನಂ ಸ್ವೇ ದಮೇ।।
ಅಗ್ನಿಯು ಯಜ್ಞಗಳ ಒಡೆಯನಾಗಿದ್ದಾನೆ. ಸತ್ಯದ ಉಜ್ವಲ ರಕ್ಷಕನಾದ ಅಗ್ನಿಯು, ತನ್ನ ಸ್ವಗೃಹದಲ್ಲಿ ವೃದ್ಧಿಹೊಂದುತ್ತಿರುವನು.
೨. ಸ ನಃ ಪಿತೇವ ಸೂನವೇಅಗ್ನೇ ಸೂಪಾಯನೋ ಭವ। ಸಚಸ್ವಾ ನಃ ಸ್ವಸ್ತಯೇ।।
ತಂದೆಯು ಮಗನೊಂದಿಗಿರುವಂತೆ, ನೀನು ನಮಗೆ ಸುಲಭ ಸಾಧ್ಯವಾಗಿರು. ನಮ್ಮ ಶುಭಕ್ಕಾಗಿ ನಮ್ಮನ್ನು ಬಿಡದೇ ಅಂಟಿಕೊಂಡಿರು.
(ಪ್ರತಿಬಾರಿಯು ೧೦ ರಿಂದ ೨೦ ಸೆಕೆಂಡ್ ಸೋಮರಸವನ್ನು ಕುಡಿಯಲು ವೇಳೆಯನ್ನು ಕೊಡಿ. ಸೋಮಪಾನ ಮಾಡುತ್ತಿರುವಾಗ ಕೆಳಗಿನ ಎರಡು ಮಂತ್ರ ಪಠಿಸಿ. ಸೋಮರಸ ಪಾನಮಾಡಿದ ನಂತರ ಮತ್ತೆ ಎರಡನೆಯ ಬಾರಿ 'ಅಗ್ನಯೇ ಇದಂ ನ ಮಮ' ಎಂದು ಹೇಳಬೇಕು.)

## **ಸೂರ್ಯದೇವತೆ** (೧–೫೦–೧ ರಿಂದ ೭)

**ಓಂ ಸೂರ್ಯಾಯ ನಮಃ ಓಂ ಪೂಷಣ್ ದೇವಾಯ ನಮಃ** (ಆವಾಹನ ಮಂತ್ರಗಳನ್ನು ಹೇಳಿ. ಸೂರ್ಯನ ತೇಜಸ್ಸು ಮತ್ತು ಕಿರಣಗಳು ಯಜ್ಞಕುಂಡದ ಮೇಲೆ ಇಳಿದು ಬರುತ್ತದೆ.)

ಉದು ತ್ಯಂ ಜಾತವೇದಸಂ ದೇವಂ ವಹನ್ತಿ ಕೇತವಃ।
ದೃಶೇ ವಿಶ್ವಾಯ ಸೂರ್ಯಂ ಸ್ವಾಹಾ; ಸೂರ್ಯಾಯೈ ಇದಮ್ ನ ಮಮ ।।
ಸರ್ವರನ್ನೂ ತಮ್ಮ ತಮ್ಮ ವ್ಯವಹಾರದಲ್ಲಿ ಪ್ರೇರಿಸತಕ್ಕ ಸೂರ್ಯದೇವನು ಲೋಕಪ್ರಸಿದ್ಧನು. ಉತ್ಪನ್ನವಾದ ಸಕಲವನ್ನೂ ತಿಳಿದವನು ಮತ್ತು ಪ್ರಕಾಶಮಾನನು. ಅವನ ಕಿರಣಗಳು ಸಮಸ್ತ ಲೋಕದ ದರ್ಶನಕ್ಕಾಗಿ ಮೇಲೆತ್ತಿ ಹಿಡಿಯುತ್ತವೆ.
(ಸೋಮರಸವನ್ನು ಪಾನಮಾಡುವಾಗ ಕೆಳಗಿನ ಎರಡು ಮಂತ್ರವನ್ನು ಹೇಳಿ. ದೇವತೆಗಳು ಸೋಮರಸವನ್ನು ಪಾನಮಾಡುವಾಗ ಅವರು ಹೊಗಳಿಕೆಯನ್ನು ಇಷ್ಟಪಡುತ್ತಾರೆ.)
೧. ಅಪ ತ್ಯೇ ತಾಯವೋ ಯಥಾ ನಕ್ಷತ್ರಾ ಯನ್ತ್ಯಕುಭಿಃ। ಸೂರಾಯ ವಿಶ್ವಚಕ್ಷಸೇ ।।
ಸೂರ್ಯೋದಯದ ಕಾಲದಲ್ಲಿ ನಕ್ಷತ್ರಗಳ ತೇಜಸ್ಸುಗಳು ರಾತ್ರಿಗಳೊಡನೆ ಸಮಸ್ತಕ್ಕೂ ಪ್ರಕಾಶಕನಾದ ಸೂರ್ಯನ ಆಗಮನವನ್ನು ನೋಡಿದೊಡನೆ ಮರೆಯಾಗಿ ಹೊರಟುಹೋಗುತ್ತದೆ.
೨. ಅದೃಶ್ರಮಸ್ಯ ಕೇತವೋ ವಿ ರಶ್ಮಯೋ ಜನಾ ಅನು। ಭ್ರಾಜನ್ತೋ ಅಗ್ನಯೋ ಯಥಾ ।।
ಸೂರ್ಯನಿಗಿಂತಲೂ ಪೂರ್ವಭಾವಿಯಾಗಿ ಪ್ರಸರಿಸಿ ಸೂರ್ಯನ ಆಗಮನವನ್ನು ಲೋಕಕ್ಕೆ ಸೂಚಿಸುವ ಅವನ ಕಿರಣಗಳು ಪ್ರಜ್ವಲಿಸುವ ಅಗ್ನಿಗಳಂತೆ ಉತ್ಪನ್ನವಾದ ಸಮಸ್ತವನ್ನೂ ಅನುಕ್ರಮವಾಗಿ ಪ್ರಕಾಶಿಸುವಂತೆ ಮಾಡುತ್ತವೆ.

ತರಣಿರ್ವಿಶ್ವದರ್ಶತೋ ಜ್ಯೋತಿಷ್ಕೃದಸಿ ಸೂರ್ಯ।
ವಿಶ್ವಮಾ ಭಾಸಿ ರೋಚನಂ ಸ್ವಾಹಾ; ಸೂರ್ಯಾಯೈ ಇದಮ್ ನ ಮಮ ।।
ಎಲ್ಲರಲ್ಲಿಯೂ ಅಂತರ್ಯಾಮಿಯಾಗಿದ್ದುಕೊಂಡು ಸಕಲವನ್ನೂ ಪ್ರೇರಿಸತಕ್ಕ ಎಲೈ ಸೂರ್ಯನೇ ನೀನು ಸಕಲವನ್ನೂ ಸಂಸಾರಸಾಗರದಿಂದ ದಾಟಿಸುವವನಾಗಿದ್ದೀಯೆ. ಆದ್ದರಿಂದಲೇ ಮೋಕ್ಷದಲ್ಲಿ ಆಪೇಕ್ಷೆಯುಳ್ಳವರೆಲ್ಲರೂ ನಿನ್ನನ್ನು ಸಾಕ್ಷಾತ್ಕಾರಮಾಡಲಿಚ್ಛಿಸುವರು. ಸೂರ್ಯನೇ ನೀನು ಬೆಳಕನ್ನು ಪ್ರಕಟಿಸುತ್ತೀಯೆ. ನೀನು ಸಕಲ ಲೋಕವನ್ನು ಬೆಳಗಿಸುವಂತೆ ಸುತ್ತಲೂ ಪ್ರಕಾಶಿಸುತ್ತೀಯೆ.
೧. ಪ್ರತ್ಯಙ್ ದೇವಾನಾಂ ವಿಶಃ ಪ್ರತ್ಯಙ್ಙುದೇಷಿ ಮಾನುಷಾನ್। ಪ್ರತ್ಯಙ್ವಿಶ್ವಂ ಸ್ವರ್ದೃಶೇ।।
ಎಲೈ ಸೂರ್ಯದೇವನೇ, ನೀನು ದೇವಲೋಕದ ಪ್ರಜೆಗಳಾದ ಮರುದ್ದೇವತೆಗಳಿಗೂ, ಸಕಲ ಮಾನವರಿಗೂ ಸ್ವರ್ಲೋಕಕ್ಕೂ **ಅಭಿಮುಖನಾಗಿ** ಸಕಲರಿಗೂ ಗೋಚರನಾಗುವಂತೆ ಉದಯಿಸುತ್ತೀಯೆ.
೨. ಯೇನಾ ಪಾವಕ ಚಕ್ಷಸಾ ಭುರಣ್ಯನ್ತಂ ಜನಾ ಅನು। ತ್ವಂ ವರುಣ ಪಶ್ಯಸಿ।।
ಎಲೈ ಸೂರ್ಯದೇವನೇ, ನೀನು ಸಕಲವನ್ನೂ ಶುದ್ಧಮಾಡತಕ್ಕವನು. ಅನಿಷ್ಟದಿಂದ ತಪ್ಪಿಸಿ ಎಲ್ಲರಿಗೂ ಒಳ್ಳೆಯದನ್ನು ಮಾಡುವವನು. ಸಕಲ ಪ್ರಾಣಿಗಳನ್ನೂ ಪೋಷಿಸುವ ಈ ಲೋಕವನ್ನು ಯಾವ ಪ್ರಕಾಶದಿಂದ ಬೆಳಗುವಂತೆ ಮಾಡುತ್ತೀಯೋ ಆ ಪ್ರಕಾಶವನ್ನು ನಾವು ಸ್ತೋತ್ರ ಮಾಡುತ್ತೇವೆ.

ವಿ ದ್ಯಾಮೇಷಿ ರಜಸ್ಪೃಥ್ವಹಾ ಮಿಮಾನೋ ಅಕ್ತುಭಿಃ।
ಪಸ್ಯಞ್ಜನ್ಮಾನಿ ಸೂರ್ಯ ಸ್ವಾಹಾ; ಸೂರ್ಯಾಯೈ ಇದಮ್ ನ ಮಮ ।।
ಎಲೈ ಸೂರ್ಯದೇವನೇ, ಹಗಲು ರಾತ್ರಿಗಳೆಲ್ಲವೂ ನಿನ್ನ ಆಧೀನಗಳು. ನಿನ್ನ ಸಂಚಾರಗಳಿಂದ ಅವುಗಳನ್ನು ಅನುಕ್ರಮವಾಗಿ ಉಂಟುಮಾಡುತ್ತಾ ಹಾಗೆಯೇ ಉತ್ಪನ್ನಗಳಾದ ಸಕಲ ಭೂತಗಳನ್ನೂ ನೋಡುತ್ತಾ ನೀನು ವಿಸ್ತಾರವಾದ ಅಂತರಿಕ್ಷಲೋಕದಲ್ಲಿ ಸರ್ವದಾ ಸಂಚರಿಸುತ್ತಿದ್ದೀಯೆ.
(ಪ್ರತಿಬಾರಿಯು ೧೦ ರಿಂದ ೨೦ ಸೆಕೆಂಡ್ ಸೋಮರಸವನ್ನು ಕುಡಿಯಲು ವೇಳೆಯನ್ನು ಕೊಡಿ. ಸೋಮರಸ ಪಾನಮಾಡಿದ ನಂತರ ಮತ್ತೆ ಎರಡನೆಯ ಬಾರಿ 'ಸೂರ್ಯಾಯ ಇದಂ ನ ಮಮ' ಎಂದು ಹೇಳಬೇಕು.)

**ಸವಿತಾ ದೇವತಾ** ೧-೨೨-೫ ೫೦೮ (ಆವಾಹನ ಮಂತ್ರಗಳನ್ನು ಹೇಳಿ)
**ಓಂ ಪ್ರಜಾಪತಯೈ ನಮಃ** (ಸವಿತೃದೇವರನ್ನು ಆವಾಹನೆ ಮಾಡಿ. ಯಜ್ಞಕುಂಡದ ಮೇಲೆ ಇಳಿಯುತ್ತಾರೆ. ಪಾದಪೂಜೆ ಮಾಡಿ ನಂತರ ಕೆಳಗಿನ ಮಂತ್ರವನ್ನು ೩ ಸಾರಿ ಹೇಳಿ ಸೋಮರಸವನ್ನು ಅರ್ಪಿಸಿ.)

ಓಂ ಹಿರಣ್ಯಪಾಣಿಮೂತಯೇ ಸವಿತಾರಮುಪ ಹ್ವಯೇ।
ಸ ಚೇತ್ತಾ ದೇವತಾಪದಂ ಸ್ವಾಹಾ; ಸವಿತಾಯೈ ಇದಮ್ ನ ಮಮ ।।
ಹಿರಣ್ಯಪಾಣಿಯಾದ ಸವಿತೃದೇವತೆಯು ನಮ್ಮನ್ನು ರಕ್ಷಿಸಲಿ. ನಮ್ಮಿಂದ ಆಹೂತನಾಗಿ ಬಂದು ಯಜಮಾನನಿಗೆ ಪ್ರಾಪ್ಯವಾದ ಸ್ಥಾನವನ್ನು ತಿಳಿಸಲಿ. (ಮರಣಾನಂತರ ಲಭಿಸುವ ಏಳು ಸ್ವರ್ಗದ ಒಂದು ಸ್ಥಾನ)
(ಸೋಮರಸವನ್ನು ಪಾನಮಾಡುವಾಗ ಮತ್ತೆ ಅದೇ ಮಂತ್ರವನ್ನು ಹೇಳಿ. ದೇವತೆಗಳು ಸೋಮರಸವನ್ನು ಪಾನಮಾಡುವಾಗ ಅವರು ಹೊಗಳಿಕೆಯನ್ನು ಇಷ್ಟಪಡುತ್ತಾರೆ.)

ಅಪಾಂ ನಾಪಾತಮವಸೇ ಸವಿತಾರಮುಪ ಸ್ತುಹಿ।
ತಸ್ಯ ವ್ರತಾನ್ಯುಶ್ಮಸಿ ಸ್ವಾಹಾ; ಸವಿತಾಯೈ ಇದಮ್ ನ ಮಮ ।।
ಅಪಾಂನಪಾತ್ ಸಂಜ್ಞಕನಾದ (ಜಲದಿಂದ ಪ್ರಕಟನಾದ) ಸವಿತೃವನ್ನು ನಮ್ಮ ರಕ್ಷಣೆಗಾಗಿ ಸ್ತುತಿಸಲು ಅವನ ಸಂಬಂಧವಾದ ಅಗ್ನಿಹೋತ್ರಾದಿ ಕರ್ಮಗಳನ್ನು ಮಾಡಲು ನಾವು ಆಪೇಕ್ಷೆಪಡುತ್ತೇವೆ.

ವಿಭಕ್ತಾರಂ ಹವಾಮಹೇ ವಸೋಶ್ಚಿತ್ರಸ್ಯ ರಾಧಸಃ।
ಸವಿತಾರಂ ನೃಚಕ್ಷಸಂ ಸ್ವಾಹಾ; ಸವಿತಾಯೈ ಇದಮ್ ನ ಮಮ ।।

ಗೃಹಾದಿಗಳಿಗೆ ಸಂಬಂಧಿಸಿದ (ಗೃಹಾದಿಗಳಿಂದ ಸಹಿತವಾದ) ಸುವರ್ಣರಜತಾದಿಧನವನ್ನು ಅವರವರ ಯೋಗ್ಯತಾನುಸಾರ ಹಂಚಿಕೊಡುವವನೂ, ಪ್ರಕಾಶವನ್ನು ಕೊಡುವವನೂ, ಸಕಲರೊಳಗೂ ನೋಡುವವನೂ ಆದ ಸವಿತೃವನ್ನು ಆಹ್ವಾನಿಸುತ್ತೇವೆ.

(ಪ್ರತಿಬಾರಿಯು ೧೦ ರಿಂದ ೨೦ ಸೆಕೆಂಡ್ ಸೋಮರಸವನ್ನು ಕುಡಿಯಲು ವೇಳೆಯನ್ನು ಕೊಡಿ. ಸೋಮರಸ ಪಾನಮಾಡಿದ ನಂತರ ಮತ್ತೆ ಎರಡನೆಯ ಬಾರಿ '**ಸವಿತಾಯೈ** ಇದಂ ನ ಮಮ' ಎಂದು ಹೇಳಬೇಕು.)

(ಸೂರ್ಯೋಪಾಸನೆ ಮಾಡುವವರು ಈ ಕೆಳಗಿನ ಮಂತ್ರವನ್ನು ೧೦ ಬಾರಿ ಹವನಮಾಡಿ)

ಓಂ

ಭೂರ್ಭುವಸ್ವಃ

ತತ್ ಸವಿತುರ್ವರೇಣ್ಯಂ (ವರೇಣಿಯಂ)

ಭರ್ಗೋ ದೇವಸ್ಯ ಧೀಮಹೀ।

ಧಿಯೋ ಯೋನಃ ಪ್ರಚೋದಯಾತ್।। ಓಂ

ಓಂ ಪೃಥ್ವಿ ದ್ಯಾವಾ ಅಂತರಿಕ್ಷಲೋಕಗಳನ್ನು ವ್ಯಾಪಿಸಿರುವ, ಸೂರ್ಯಮಂಡಲಾಂತರ್ಗತವಾಗಿರುವ ಸವಿತೃದೇವನ ಶ್ರೇಷ್ಟವಾದ ಭರ್ಗವೆಂಬ ಪಾಪದಾಹಕ ತೇಜಸ್ಸನ್ನು ಧರಿಸುತ್ತೇವೆ, ಧ್ಯಾನಿಸುತ್ತೇವೆ, ನಮ್ಮ ಧೀಶಕ್ತಿಯನ್ನು ಪ್ರೇರಣೆಗೊಳಿಸಲಿ

**ಪೂಷಣ್** (ಸೂರ್ಯರಶ್ಮಿ ದೇವತೆ) (೬–೫೫–೧ – ೬–೫೫–೬) (ಆವಾಹನ ಮಂತ್ರಗಳನ್ನು ಹೇಳಿ)

**ಓಂ ಪೂಷಣ್ ದೇವಾಯ ನಮಃ** (ಪೂಷಣ್‌ದೇವರನ್ನು ಆವಾಹನೆ ಮಾಡಿ. ಯಜ್ಞಕುಂಡದ ಮೇಲೆ ಇಳಿಯುತ್ತಾರೆ. ಪಾದಪೂಜೆ ಮಾಡಿ ನಂತರ ಕೆಳಗಿನ ಮಂತ್ರವನ್ನು ಹೇಳಿ ಸೋಮರಸವನ್ನು ಅರ್ಪಿಸಿ.)

ಓಂ ಏಹಿ ವಾಂ ವಿಮುಚೋ ನಪಾದಾಘೃಣೇ ಸಂ ಸಚಾವಹೈ।

ರಥೀರ್ಋತಸ್ಯ ನೋ ಭವ ಸ್ವಾಹಾ; ಪೂಷಣ್ ದೇವಾಯ ಇದಮ್ ನ ಮಮ ।

ಸೃಷ್ಟಿಕಾಲದಲ್ಲಿ ಸಕಲ ಭೂತಗಳನ್ನೂ ಸೃಷ್ಟಿಸತಕ್ಕ ಪ್ರಜಾಪತಿಗೆ (ಸೂರ್ಯ/ಸವಿತೃ) ಪುತ್ರರೂಪನೂ, ಅದ್ಭುತವಾದ ಪ್ರಕಾಶವುಳ್ಳವನೂ ಆದ ಎಲೈ ಪೂಷದೇವನೇ, ನಿನ್ನ ಸ್ತುತಿಕರ್ತನಾದ ನನ್ನ ಸಮೀಪಕ್ಕೆ ದಯಮಾಡು. ನಾವಿಬ್ಬರೂ ಸೇರಿಕೊಂಡು ಒಟ್ಟಿಗಿರೋಣ. ನೀನು ನಮ್ಮ ಯಜ್ಞಕ್ಕೆ ನೇತೃವಾಗಿರು.

(ಸೋಮರಸವನ್ನು ಪಾನಮಾಡುವಾಗ ಕೆಳಗಿನ ಒಂದು ಮಂತ್ರವನ್ನು ಹೇಳಿ. ದೇವತೆಗಳು ಸೋಮರಸವನ್ನು ಪಾನಮಾಡುವಾಗ ಅವರು ಹೊಗಳಿಕೆಯನ್ನು ಇಷ್ಟಪಡುತ್ತಾರೆ.)

೧. ರಥೀತಮಂ ಕಪರ್ದಿನಮೀಶಾನಂ ರಾಧಸೋ ಮಹಃ।

ರಾಯಃ ಸಖಾಯಮೀಮಹೇ।।

ಅತ್ಯತಿಶಯವಾದ ನೇತೃವಾದವನೂ, ಆಕರ್ಷಕವಾದ ಶಿಖೆಯುಳ್ಳವನೂ, ಮಹತ್ತಾದ ಧನಕ್ಕೆ ಒಡೆಯನೂ ನಮಗೆ ಮಿತ್ರಭೂತನೂ ಆದ ಪೂಷದೇವನನ್ನು ನಾವು ಧನಾರ್ಥವಾಗಿ ಯಾಚಿಸುತ್ತೇವೆ.

ರಾಯೋ ಧಾರಾಸ್ಯಾಘೃಣೇ ವಸೋ ರಾಶಿರಜಾಶ್ವ।

ಧೀವತೋಧೀವತಃ ಸಖಾ ಸ್ವಾಹಾ; ಪೂಷಣ್ ದೇವಾಯ ಇದಮ್ ನ ಮಮ ।।

ಪ್ರಭಾಯುತನಾದ ಎಲೈ ಪೂಷದೇವನೇ, ಧನಕ್ಕೆಲ್ಲಾ (ರಶ್ಮಿಗಳಿಗೆಲ್ಲಾ) ನೀನೇ ಪ್ರವಾಹರೂಪನಾಗಿದ್ದೀಯೇ. ಅಜನಾದ ಅಶ್ವನಾಗಿದ್ದೀಯೆ (ಹುಟ್ಟದೇ ಇರುವ ಅಂದರೆ ಅನಾದಿಯಾದ ವಾಯು). ಎಲೈ ಪೂಷನ್ ಧನಕ್ಕೆಲ್ಲಾ ನೀನೇ ರಾಶಿರೂಪನಾಗಿದ್ದೀಯೆ. ಸಕಲ ವಿಧವಾದ ಸ್ತೋತೃಗಳಿಗೂ ನೀನೇ ಮಿತ್ರನಾಗಿದ್ದೀಯೆ.

೧. ಪೂಷಣಂ ನು ಅಜಾಶ್ವಮುಪ ಸ್ತೋಷಾಮ ವಾಜಿನಂ।

ಸ್ವಸುರ್ಯೋ ಜಾರ ಉಚ್ಯತೇ।।

ಯಾವ ಪೂಷದೇವನು ತನ್ನ ಸಹೋದರಿಯಾದ ಉಷಸ್ಸಿಗೆ ಪ್ರೀತಿಯುಳ್ಳವನೆಂದು ಪ್ರಸಿದ್ಧನಾಗಿದ್ದಾನೆಯೋ ಅಂತಹ ಅಜರೂಪನಾದ ವಾಯುವುಳ್ಳವನೂ, ಶಕ್ತಿಯುತನೂ, ಪೋಷಕನೂ ಆದ ಪೂಷದೇವನನ್ನು ಈಗ ಸ್ತುತಿಸಿ ಪೂಜಿಸೋಣ.

ಮಾತುರ್ದಿಧಿಷುಮಬ್ರವಂ ಸ್ವಸುರ್ಜಾರಃ ಶೃಣೋತುನಃ ।

ಭ್ರಾತೇಂದ್ರಸ್ಯ ಸಖಾ ಮಮ ಸ್ವಾಹಾ; ಪೂಷಣ್ ದೇವಾಯ ಇದಮ್ ನ ಮಮ ।।

ಮಾತೆಯಾದ ರಾತ್ರಿಯನ್ನು ಅರ್ಥಮಾಡಿಕೊಳ್ಳುವ (ಪತಿಯಾದ) ಪೂಷನನ್ನು ನಾನು ಸ್ತುತಿಸುತ್ತೇನೆ. ಸಹೋದರಿಯಾದ ಉಷಸ್ಸಿಗೆ ಪ್ರೀತಿಪಾತ್ರನಾದ ಪೂಷನು ನಮ್ಮ ಸ್ತೋತ್ರಗಳನ್ನು ಕೇಳಲಿ. ಇಂದ್ರನಿಗೆ ಸಹೋದರನಾದ ಪೂಷನು ಸ್ತೋತೃವಾದ ನನಗೆ ಮಿತ್ರನಾಗಿರಲಿ.

೧. ಆಜಾಸಃ ಪೂಷಣಂ ರಥೇ ನಿಶ್ರೃಂಭಾಸ್ತೇ ಜನಶ್ರಿಯಂ೧ ದೇವಂ ವಹಂತು ಬಿಭ್ರತಃ೧೧

ಅಜರೂಪವಾದವೂ, ಒಟ್ಟಿಗೆ ರಥವನ್ನು ಎಳೆಯುವುವೂ ಆದ ಪೂಷನ ವಾಹನಗಳು ಸ್ತೋತೃವಿನ ಸಮೀಪಕ್ಕೆ ಬರತಕ್ಕ ಪೂಷದೇವನನ್ನು ರಥದಲ್ಲಿ ಕುಳ್ಳರಿಸಿ ವಹಿಸಿಕೊಂಡು ಬರಲಿ.

(ಪ್ರತಿಬಾರಿಯು ೧೦ ರಿಂದ ೨೦ ಸೆಕೆಂಡ್ ಸೋಮರಸವನ್ನು ಕುಡಿಯಲು ವೇಳೆಯನ್ನು ಕೊಡಿ. ಸೋಮರಸ ಪಾನಮಾಡಿದ ನಂತರ ಮತ್ತೆ ಎರಡನೆಯ ಬಾರಿ '**ಪೂಷಣ್ ದೇವಾಯ** ಇದಂ ನ ಮಮ' ಎಂದು ಹೇಳಬೇಕು.)

## ಇಂದ್ರ ದೇವತೆ (೧-೩-೪ – ೧-೩-೬) (ಆವಾಹನ ಮಂತ್ರಗಳನ್ನು ಹೇಳಿ)

ಓಂ ಇಂದ್ರಾಯ ನಮಃ (ಇಂದ್ರದೇವರ ಆವಾಹನೆ ಮಾಡಿ. ಬ್ರಹ್ಮಾಂಡದ ಮೇಲಿಂದ ಯಜ್ಞಕುಂಡದ ಮೇಲೆ ಇಳಿಯುತ್ತಾರೆ. ಪಾದಪ್ರಜೆ. ನಂತರ ಕೆಳಗಿನ ಸ್ತೋತ್ರ ಹೇಳಿ)

### ಸ್ತುತಿ ಪುಷ್ಪಾರ್ಚನೆಗಾಗಿ

ಓಂ ಇಂದ್ರಾ ಯಾಹಿ ಚಿತ್ರಭಾನೋ ಸುತಾ ಇಮೇ ತ್ವಾಯವಃ೧

ಅಣ್ವೀಭಿಸ್ತನಾ ಪೂತಾಸಃ೧೧

ಎಲೈ ಇಂದ್ರನೇ, ನೀನು ಆಶ್ಚರ್ಯಕರವಾದ ಕಾಂತಿಯಿಂದ ಬೆಳಗುವವನು; ನಿನಗೆ ಇಷ್ಟವಾದ ಸೋಮರಸವನ್ನು ಋತ್ವಿಕ್ಕುಗಳ ಬೆರಳಿನಿಂದ ಚೆನ್ನಾಗಿ ಹಿಂಡಿ ಸಿದ್ಧಪಡಿಸಿರುವೆನು. ಈ ಸೋಮರಸವನ್ನು ಪಾನಮಾಡುವುದಕ್ಕಾಗಿ ಈ ನಮ್ಮ ಯಜ್ಞವೇದಿಕೆಗೆ ಬರುವವನಾಗು.

ಇಂದ್ರಾ ಯಾಹಿ ಧಿಯೇಷಿತೋ ವಿಪ್ರಜೂತಃ ಸುತಾವತಃ೧

ಉಪ ಬ್ರಹ್ಮಾಣಿ ವಾಘತಃ೧೧

ಎಲೈ ಇಂದ್ರನೇ, ನೀನು ಬುದ್ಧಿವಂತರು ಮತ್ತು ಮೇದಾಶಕ್ತಿ ಸಂಪನ್ನರಾದ ತತ್ವದರ್ಶಿಗಳಿಂದ ತಿಳಿಯಲ್ಪಡುವವನು. ಸೋಮರಸವು ಸಿದ್ಧವಾಗಿದೆ, ನಾವು ಮಾಡುವ ವೇದರೂಪವಾದ ಸ್ತೋತ್ರಗಳಿಂದ ಸೋಮವನ್ನು ಸ್ವೀಕರಿಸಲು ಈ ನಮ್ಮ ಯಜ್ಞಕರ್ಮಕ್ಕೆ ಬರುವವನಾಗು.

ಇಂದ್ರಾ ಯಾಹಿ ತೂತುಜಾನ ಉಪ ಬ್ರಹ್ಮಾಣಿ ಹರಿವಃ ೧

ಸುತೇ ದಧಿಷ್ವ ನಶ್ಚನಃ ೧೧

ಎಲೈ ಇಂದ್ರನೇ, ನೀನು ಅಶ್ವಗಳನ್ನು ಕಟ್ಟಿದ ರಥದಲ್ಲಿ ಕುಳಿತು ವೇಗವಾಗಿ ಇಲ್ಲಿಗೆ ಬರುವವನಾಗು. ನಾವು ಮಾಡುವ ಸ್ತೋತ್ರಗಳನ್ನು ಮತ್ತು ಸೋಮರಸವನ್ನು ಸ್ವೀಕರಿಸುವುದಕ್ಕಾಗಿ ಜಾಗ್ರತೆಯಾಗಿ ಬರುವವನಾಗು.

## ಇಂದ್ರ ಸ್ತುತಿ ಸೋಮಪಾನಕ್ಕಾಗಿ (೧-೪-೧ – ೧-೪-೧೦)

(ಪ್ರತೀ ಮಂತ್ರವನ್ನು ಹೇಳಿ ಸೋಮರಸವನ್ನು ಅರ್ಪಿಸಿ.)

ಓಂ ಸುರೂಪಕೃತ್ನುಮೂತಯೇ ಸುದುಘಾಮಿವ ಗೋದುಹೇ ೧

ಜುಹೂಮಸಿ ದ್ಯವಿದ್ಯವಿ ಸ್ವಾಹಾ; ಇಂದ್ರಾಯ ಇದಮ್ ನ ಮಮ ೧೧

ಸುಂದರ ಆಕಾರಗಳನ್ನು ನಿರ್ಮಿಸಬಲ್ಲ ಇಂದ್ರನನ್ನು ಹಾಲನ್ನು ಕೊಡುವ ಹಸುವನ್ನು ಪ್ರೀತಿಯಿಂದ ನಮ್ಮ ಸಮೀಪಕ್ಕೆ ಕರೆಯುವಂತೆ, ನಮ್ಮ ರಕ್ಷಣೆಗಾಗಿ ನಾವು ಪ್ರತಿದಿನವೂ ಕರೆಯುತ್ತೇವೆ.

(ಸೋಮರಸವನ್ನು ಪಾನಮಾಡುವಾಗ ಕೆಳಗಿನ ಎರಡು ಮಂತ್ರವನ್ನು ಹೇಳಿ. ದೇವತೆಗಳು ಸೋಮರಸವನ್ನು ಪಾನಮಾಡುವಾಗ ಅವರು ಹೊಗಳಿಕೆಯನ್ನು ಇಷ್ಟಪಡುತ್ತಾರೆ.)

೧. ಉಪ ನಃ ಸವನಾ ಗಹಿ ಸೋಮಸ್ಯ ಸೋಮಾಪಾಃ ಪಿಬ ೧

ಗೋದಾ ಇದ್ರೇವತೋ ಮದಃ ಸ್ವಾಹಾ; ೧೧

ಸೋಮಪಾನವನ್ನು ಮಾಡುವ ಎಲೈ ಇಂದ್ರನೇ, ನಮ್ಮ ಯಜ್ಞಗಳ ಬಳಿಗೆ ಆಗಮಿಸು. ಸೋಮರಸದ ಮಂಥನದಿಂದ ಹೊರಟ ಸಾರ ಭಾಗವನ್ನು ಸೇವಿಸು. ಹಾಗೆ ಪಾನಮಾಡುವುದರಿಂದ ನಿನಗೆ ಸಂತೋಷವುಂಟಾಗಿ ಐಶ್ವರ್ಯಯುಕ್ತನಾದ ನೀನು ನಮಗೆ ಗೋಸಂಪತ್ ಎಂಬ ಜ್ಞಾನಗಳನ್ನು ಕೊಡುವವನಾಗು.

೨. ಅಥಾ ತೇ ಅಂತಮಾನಾಂ ವಿದ್ಯಾಮ ಸುಮತೀನಾಮ್ ।
ಮಾ ನೋ ಅತಿಖ್ಯ ಆ ಗಹಿ ।।
ಎಲೈ ಇಂದ್ರನೇ, ಸೋಮಪಾನಾನಂತರ ನಾವು ನಿನ್ನ ಸಮೀಪದಲ್ಲಿದ್ದುಕೊಂಡು ಸತ್ಕರ್ಮಾನುಷ್ಠಾನ ವಿಷಯದಲ್ಲಿ ಒಳ್ಳೆಯ ಬುದ್ಧಿಗಾಗಿ, ಉತ್ತಮವಾದ ಪ್ರಜ್ಞಾ ಲಾಭಕ್ಕಾಗಿ ನಿನ್ನನ್ನು ಸ್ಮರಣೆ ಮಾಡುತ್ತಿರುವೆವು. ಅಂಥಹ ನೀನು ನಮ್ಮ ಸಮೀಪಕ್ಕೆ ಬರಬೇಕು. ಇತರರಿಗೆ ನಿನ್ನ ಸ್ವರೂಪವನ್ನು ತಿಳಿಸಬೇಡ.

ಪರೇಹಿ ವಿಗ್ರಮಸ್ತೃತ-ಮಿಂದ್ರಂ ಪೃಚ್ಛಾ ವಿಪಶ್ಚಿತಮ್ ।
ಯಸ್ತೇ ಸಖಿಭ್ಯ ಆ ವರಮ್ ಸ್ವಾಹಾ; ಇಂದ್ರಾಯ ಇದಮ್ ನ ಮಮ ।।
ಹೋತೃ: ಎಲೈ ಯಜಮಾನನೇ, ನೀನು ಬುದ್ಧಿಶಾಲಿಯಾದ ಇಂದ್ರನ ಸಮೀಪಕ್ಕೆ ಹೋಗಿ – ಈ ಸ್ತೋತೃವು ನಿನ್ನನ್ನು ಚೆನ್ನಾಗಿ ಸ್ತೋತ್ರಮಾಡಿದನೇ ಇಲ್ಲವೇ ಎಂಬುದನ್ನು ಕೇಳು. ಇಂದ್ರನು ಹೋತೃ ಮಾಡಿದ ಸ್ತೋತ್ರಗಳಿಂದ ಸಂತೋಷಪಟ್ಟಿರುವನಾದ್ದರಿಂದ ನಿನ್ನ ಸ್ನೇಹಿತರುಗಳಿಂದ ಋತ್ವಿಜರಿಗೂ ನಿನಗೂ ಧನ, ಪುತ್ರಸಂಪತ್ತು ಜ್ಞಾನಾದಿಗಳು ಮೊದಲಾದ ಶ್ರೇಷ್ಠವಾದ ವರಗಳನ್ನು ಅನುಗ್ರಹಿಸುವನು.
೧. ಉತ ಬ್ರುವಂತು ನೋ ನಿದೋ ನಿರನ್ಯತಶ್ಚಿದಾರತ ।
ದಧಾನಾ ಇಂದ್ರ ಇದ್ದುವಃ ।।
ಇಂದ್ರನನ್ನು ಸೇವೆಮಾಡುವುದರಲ್ಲಿಯೇ ಆಸಕ್ತರಾದ ನಮ್ಮ ಋತ್ವಿಜರು ಇಂದ್ರನನ್ನು ಸ್ತೋತ್ರಮಾಡಲಿ ಮತ್ತು ಇಂದ್ರನನ್ನು ನಿಂದೆಮಾಡುವ ಪುರುಷರು ಇಲ್ಲಿಂದಲೂ ಬೇರೆ ಪ್ರದೇಶದಿಂದಲೂ ಹೊರಟುಹೋಗಲಿ.
೨. ಉತ ನಃ ಸುಭಗಾ ಅರಿ-ರ್ವೋಚೇಯುರ್ದಸ್ಮ ಕೃಷ್ಟಯಃ ।
ಸ್ಯಾಮೇ ದಿಂದ್ರಸ್ಯ ಶರ್ಮಣಿ ।। (ಅರಿಃ ವೋಚೇಯುಃ ದಸ್ಮ)
ಎಲೈ ಶತ್ರುನಾಶಕನಾದ ಇಂದ್ರನೇ, ನಿನ್ನ ಅನುಗ್ರಹದಿಂದ ನಮ್ಮ ಶತ್ರುಗಳೂ ಕೂಡ ನಮ್ಮನ್ನು ಐಶ್ವರ್ಯವಂತರೆಂದು ಹೊಗಳುವರು. ಹೀಗಿರುವಲ್ಲಿ ನಮ್ಮ ಮಿತ್ರರಾದ ಇತರ ಮನುಷ್ಯರು ಆ ರೀತಿ ಹೇಳುವುದು ಒಂದು ಆಶ್ಚರ್ಯವೇ? ಇದಲ್ಲದೆ ನಿನ್ನ ಅನುಗ್ರಹದಿಂದ ನಾವು ಸುಖವಾಗಿಯೇ ಇರುವೆವು.

ಏಮಾಶುಮಾಶವೇ ಭರ ಯಜ್ಞಶ್ರಿಯಂ ನೃಮಾದನಮ್ ।
ಪತಯನ್ ಮಂದಯತ್ಸಖಮ್ ಸ್ವಾಹಾ; ಇಂದ್ರಾಯ ಇದಮ್ ನ ಮಮ।।
ಹೋತ್ರು: ಎಲೈ ಯಜಮಾನನೇ ಈಗ ಈ ಯಜ್ಞದಲ್ಲಿ ಸಿದ್ಧಪಡಿಸಿರುವ ಸೋಮರಸವು ಯಜ್ಞಕ್ಕೆ ಮುಖ್ಯವಾಗಿ ಸಂಪತ್ತೆನಿಸುವುದು (ಯಜ್ಞಕ್ಕೆ ಕಳೆಕಟ್ಟಿರುವುದು). ಇಂತಹ ಸೋಮರಸವು ಋತ್ವಿಗ್ಯಜಮಾನರಾದಿಯಾಗಿ ಸಮಸ್ತ ಜನರಿಗೂ ಹರ್ಷವನ್ನುಂಟು ಮಾಡುವುದು; ಕರ್ಮಲೋಪವಾಗಿದ್ದಲ್ಲಿ ಅದನ್ನು ಸರಿಪಡಿಸುವ ಶಕ್ತಿಯುಳ್ಳದ್ದು. ಇದಲ್ಲದೇ ಈ ಸೋಮರಸವು ಇಂದ್ರನಿಗೆ ಸ್ನೇಹಿತನಂತೆ ಪ್ರೀತಿಪಾತ್ರವಾದುದು. ಇಂತಹ ಸೋಮರಸವನ್ನು, ಎಲೈ ಯಜಮಾನನೇ ಇಂದ್ರನಿಗಾಗಿ ಬೇಗನೆ ತೆಗೆದುಕೊಂಡುಬಾ.
೧. ಅಸ್ಯ ಪೀತ್ವಾ ಶತಕ್ರತೋ ಘನೋ ವೃತಾಣಾಂಅಭವಃ ।
ಪ್ರಾವೋ ವಾಜೇಷು ವಾಜಿನಮ್ ।।
ಎಲೈ ಇಂದ್ರನೇ, ನೀನು ಅನೇಕ ಸಾಹಸಕಾರ್ಯಗಳನ್ನೆಸುಗುವವನು. ನಾವು ಸಿದ್ಧಪಡಿಸಿ ನಿನಗಾಗಿ ಇಲ್ಲಿ ಇಟ್ಟಿರುವ ಸೋಮರಸವನ್ನು ಪಾನಮಾಡಿ ವೃತ್ರರೆಂದು ಹೆಸರಾದ ನಮ್ಮ ಶತ್ರುಗಳನ್ನು ಸಂಹಾರಮಾಡು ಮತ್ತು ಶತ್ರುಗಳೊಡನೆ ನಾವು ಹೋರಾಡುವ ಯುದ್ಧಗಳಲ್ಲಿ ನಿನ್ನವನಾದ ನಮ್ಮ ಯೋಧನನ್ನು ಶತ್ರುಭಾದೆಯಿಂದ ರಕ್ಷಿಸು.
೨. ತಂ ತ್ವಾ ವಾಜೇಷು ವಾಜಿನಂ ವಾಜಯಾಮಃ ಶತಕ್ರತೋ ।
ಧನಾನಾಮಿಂದ್ರ ಸಾತಯೇ ।।
ನೂರಾರು ಕೆಲಸಗಳನ್ನು ಏಕಕಾಲದಲ್ಲಿ ಮಾಡುವ ಎಲೈ ಇಂದ್ರನೇ, ಪ'ಶುಪುತ್ರಧನಾದಿಸಂಪತ್ತನ್ನು ಪಡೆಯುವುದಕ್ಕಾಗಿ, ಯುದ್ಧಗಳಲ್ಲಿ ಬಲಶಾಲಿಯಾದ ಎಂದರೆ ಪರಾಕ್ರಮಶಾಲಿಯಾದ ನಿನಗೆ ಹವಿಸ್ಸನ್ನು ಅರ್ಪಿಸುವೆವು.
೩. ಯೋ ರಾಯೋಽವನಿರ್ಮಹಾನ್ತ್ಸುಪಾರಃ ಸುನ್ವತಃ ಸಖಾ ।
ತಸ್ಮಾ ಇಂದ್ರಾಯ ಗಾಯತ।।
ಇಂದ್ರನು ಧನಾದ್ಯೈಶ್ವರ್ಯಗಳ ರಕ್ಷಕನು/ಸ್ವಾಮಿಯು; ಮಹಾಗುಣಶಾಲಿಯು, ಯಜ್ಞಾದಿ ಕರ್ಮಗಳನ್ನು ನ್ಯೂನಾತಿರಿಕ್ತಗಳಿಲ್ಲದಂತೆ ಪೂರ್ಣಗೊಳಿಸುವನು; ಇಂದ್ರನ ಪ್ರೀತಿಗಾಗಿ ಸೋಮರಸವನ್ನು ಹಿಂಡಿ

ಪಾನಯೋಗ್ಯವಾಗುವಂತೆ ಸಿದ್ಧಪಡಿಸಿರುವ ಯಜಮಾನನಿಗೆ ಸ್ನೇಹಿತನಂತೆ ಅತ್ಯಂತ ಪ್ರೀತಿಪಾತ್ರನು. ಇಂತಹ ಇಂದ್ರನನ್ನು, ಎಲೈ ಋತ್ವಿಕ್ಕುಗಳೇ, ಸ್ತೋತ್ರಗಳಿಂದಲೂ ಸಾಮಗಳಿಂದಲೂ ಗಾನಮಾಡಿರಿ.
(ಪ್ರತಿಬಾರಿಯು ೧೦ ರಿಂದ ೨೦ ಸೆಕೆಂಡ್ ಸೋಮರಸವನ್ನು ಕುಡಿಯಲು ವೇಳೆಯನ್ನು ಕೊಡಿ. ಸೋಮರಸ ಪಾನಮಾಡಿದ ನಂತರ ಮತ್ತೆ ಎರಡನೆಯ ಬಾರಿ '**ಇಂದ್ರಾಯ** ಇದಂ ನ ಮಮ' ಎಂದು ಹೇಳಬೇಕು.)

## ವಾಯು ದೇವತೆ (೧–೨–೧ ೞ೦೧–೨–೩) (ಆವಾಹನ ಮಂತ್ರಗಳನ್ನು ಹೇಳಿ)

**ಓಂ ವಾಯವೇ ನಮಃ** (ವಾಯು ದೇವರನ್ನು ಆವಾಹನೆ ಮಾಡಿ. ಯಜ್ಞಕುಂಡದ ಮೇಲೆ ಇಳಿಯುತ್ತಾರೆ. ಪಾದಪೂಜೆ ಮಾಡಿ ನಂತರ ಕೆಳಗಿನ  ಮಂತ್ರವನ್ನು ಹೇಳಿ ಸೋಮರಸವನ್ನು ಅರ್ಪಿಸಿ.)

ಓಂ ವಾಯವಾ ಯಾಹಿ ದರ್ಶತೇ ಮೇ ಸೋಮಾ ಅರಂಕೃತಾಃ।
ತೇಷಾಂ ಪಾಹಿ ಶ್ರುಧೀ ಹವಮ್ ಸ್ವಾಹಾ; ವಾಯುವೇ ಇದಮ್ ನ ಮಮ ।।
ಎಲೈ ದರ್ಶನೀಯನಾದ ವಾಯುವೇ ನಮ್ಮ ಬಳಿ ಸಾರು. ಸೋಮರಸದಿಂದ ಜೀವರು ಅಲಂಕೃತರಾಗಿದ್ದಾರೆ. ನಮ್ಮನ್ನು ರಕ್ಷಿಸು, ನಮ್ಮ ಕರೆಯನ್ನು ಲಾಲಿಸು.
(ಸೋಮರಸವನ್ನು ಪಾನಮಾಡುವಾಗ ಮತ್ತೆ ಅದೇ ಮಂತ್ರವನ್ನು ಹೇಳಿ. ದೇವತೆಗಳು ಸೋಮರಸವನ್ನು ಪಾನಮಾಡುವಾಗ ಅವರು ಹೊಗಳಿಕೆಯನ್ನು ಇಷ್ಟಪಡುತ್ತಾರೆ.)

ವಾಯ ಉಕ್ಥೇಭಿರ್ಜರಂತೇ ತ್ವಾಮಚ್ಛಾ ಜರಿತಾರಃ।
ಸುತಸೋಮಾ ಅಹರ್ವಿದಃ ಸ್ವಾಹಾ; ವಾಯುವೇ ಇದಮ್ ನ ಮಮ ।।
ಎಲೈ ವಾಯುವೇ ಹಿಂಡಲ್ಪಟ್ಟ ಸೋಮವನ್ನುಳ್ಳವರಾದ ಮತ್ತು ಯಾವ ಕಾಲದಲ್ಲಿ ಏನನ್ನು ಮಾಡಬೇಕೆಂಬುದನ್ನು ಬಲ್ಲ ಸ್ತುತಿಕರ್ತರು, ನಿನ್ನನ್ನು ಉತ್ತಮ ಸ್ತೋತ್ರಗಳಿಂದ ಸ್ತುತಿಸುತ್ತಾರೆ.

ವಾಯೋ ತವ ಪ್ರಪೃಂಚತೀ ಧೇನಾ ಜಿಗಾತಿ ದಾಶುಷೇ।
ಉರೂಚೀ ಸೋಮಪೀತಯೇ ಸ್ವಾಹಾ; ವಾಯುವೇ ಇದಮ್ ನ ಮಮ।।
ಎಲೈ ಪ್ರಾಣಸ್ವರೂಪನಾದ ವಾಯುವೇ, ನಿನ್ನ ಉತ್ಕೃಷ್ಟವಾದುದೆಲ್ಲವನ್ನೂ, ಸಮಸ್ತ ಸದ್ವಿದ್ಯೆಗಳನ್ನು ಸಂಪರ್ಕಕ್ಕೆ ತರುವ ವೇದವಾಣಿಯು, ಆತ್ಮ ಸಮರ್ಪಣೆ ಮಾಡಿಕೊಳ್ಳುವ ಮಾನವನಿಗೆ ನಿನ್ನ ಸೋಮರಸಪಾನಮಾಡಲು ನೆರವಾಗುತ್ತದೆ.

(ಪ್ರತಿಬಾರಿಯು ೧೦ ರಿಂದ ೨೦ ಸೆಕೆಂಡ್ ಸೋಮರಸವನ್ನು ಕುಡಿಯಲು ವೇಳೆಯನ್ನು ಕೊಡಿ. ಸೋಮರಸ ಪಾನಮಾಡಿದ ನಂತರ ಮತ್ತೆ ಎರಡನೆಯ ಬಾರಿ '**ವಾಯುವೇ** ಇದಂ ನ ಮಮ' ಎಂದು ಹೇಳಬೇಕು.)

## ಇಂದ್ರ–ವಾಯು (೧–೨–೪ - ೧–೨–೬)

**ಓಂ ಇಂದ್ರ–ವಾಯವೇ ನಮಃ** (ಇಂದ್ರ–ವಾಯು ದೇವರಿಗೆ ಕೆಳಗಿನ  ಮಂತ್ರವನ್ನು ಹೇಳಿ ಸೋಮರಸವನ್ನು ಅರ್ಪಿಸಿ.)

ಓಂ ಇಂದ್ರವಾಯು ಇಮೇ ಸುತಾ ಉಪ ಪ್ರಯೋಭಿರಾ ಗತಮ್।
ಇಂದವೋ ವಾಮುಶಂತಿ ಹಿ ಸ್ವಾಹಾ; ಇಂದ್ರ–ವಾಯುವೇ ಇದಮ್ ನ ಮಮ ।।
ಎಲೈ ಇಂದ್ರ–ವಾಯುದೇವತೆಗಳೇ, ತಮ್ಮ ಪ್ರಿಯವಸ್ತುಗಳೊಂದಿಗೆ ಹತ್ತಿರ ಬನ್ನಿ, ಹಿಂಡಲ್ಪಟ್ಟ ಸೋಮರಸವು ಸಿದ್ಧವಾಗಿದೆ. ಆನಂದಮಯವಾದ ಸೋಮರಸವು ನಿಮ್ಮಿಬ್ಬರನ್ನು ಇಚ್ಛಿಸುತ್ತದೆ.
(ಸೋಮರಸವನ್ನು ಪಾನಮಾಡುವಾಗ ಮತ್ತೆ ಅದೇ ಮಂತ್ರವನ್ನು ಹೇಳಿ. ದೇವತೆಗಳು ಸೋಮರಸವನ್ನು ಪಾನಮಾಡುವಾಗ ಅವರು ಹೊಗಳಿಕೆಯನ್ನು ಇಷ್ಟಪಡುತ್ತಾರೆ.)

ವಾಯುವಿಂದ್ರಶ್ಚ ಚೇತಥಃ ಸುತಾನಾಂ ವಾಜನೀವಸೂ।
ತಾವಾಯಾತಮುಪ ದ್ರವತ್ ಸ್ವಾಹಾ; ಇಂದ್ರ–ವಾಯುವೇ ಇದಮ್ ನ ಮಮ ।।

ಎಲೈ ವಾಯು–ಇಂದ್ರರೇ, ಬಲ ಜ್ಞಾನಾದಿಗಳಿಂದ ಸಂಪನ್ನರಾದ ನೀವು ಜೀವರುಗಳ (ಸೋಮ ರಸದ) ಬಗೆಗೆ ಎಲ್ಲವನ್ನೂ ತಿಳಿದಿರುವಿರಿ. ಅಂತಹ ಗುಣವಿಶಿಷ್ಟರಾದ ನೀವಿಬ್ಬರೂ ಕ್ಷಿಪ್ರವಾಗಿ ಪ್ರಾಪ್ತರಾಗಿರಿ (ಹತ್ತಿರ ಬನ್ನಿ).

ವಾಯುವಿಂದ್ರಶ್ಚ ಸುನ್ವತ ಆ ಯಾತಮುಪ ನಿಷ್ಕೃತಮ್।
ಮಕ್ಷ್ವಿತ್ಥಾ ಧಿಯಾ ನರಾ ಸ್ವಾಹಾ; ಇಂದ್ರ–ವಾಯುವೇ ಇದಮ್ ನ ಮಮ ।।
ಎಲೈ ವಾಯು–ಇಂದ್ರರೇ, ಸೋಮವನ್ನು ಹಿಂಡುವ ಜೀವರಿಗೆ ಬುದ್ಧಿಪೂರ್ವಕವಾಗಿ ಕರ್ಮಗಳ ಫಲವನ್ನು ನಿರ್ಧರಿಸಿ ಕೊಡುತ್ತೀರಿ. ನಮಗೆ ಉತ್ತಮ ಫಲವನ್ನು ಕೊಡುವ ನಿಶ್ಚಯದೊಂದಿಗೆ ಶೀಘ್ರವಾಗಿ ನಮ್ಮ ಬಳಿ ಬನ್ನಿರಿ.
(ಪ್ರತಿಬಾರಿಯು ೧೦ ರಿಂದ ೨೦ ಸೆಕೆಂಡ್ ಸೋಮರಸವನ್ನು ಕುಡಿಯಲು ವೇಳೆಯನ್ನು ಕೊಡಿ. ಸೋಮರಸ ಪಾನಮಾಡಿದ ನಂತರ ಮತ್ತೆ ಎರಡನೆಯ ಬಾರಿ '**ಇಂದ್ರ–ವಾಯುವೇ** ಇದಂ ನ ಮಮ' ಎಂದು ಹೇಳಬೇಕು.)

**ಮರುತ್ತು ದೇವತೆಗಳು** (೧–೧೭೨–೧ – ೧–೧೭೨–೩) (ಆವಾಹನ ಮಂತ್ರಗಳನ್ನು ಹೇಳಿ)

**ಓಂ ಮರುದ್ಗಣಾಯ ನಮಃ** (ಮರುತ್ತು ಗಣಗಳನ್ನು ಆವಾಹನೆ ಮಾಡಿ. ಯಜ್ಞಕುಂಡದ ಮೇಲೆ ಇಳಿಯುತ್ತಾರೆ. ಪಾದಪೂಜೆ ಮಾಡಿ ನಂತರ ಕೆಳಗಿನ ಮಂತ್ರವನ್ನು ಹೇಳಿ ಸೋಮರಸವನ್ನು ಅರ್ಪಿಸಿ.)

ಓಂ ಚಿತ್ರೋ ವೋಸ್ತು ಯಾಮಶ್ಚಿತ್ರ ಊತೀ ಸುದಾನವಃ।
ಮರುತೋ ಅಹಿಭಾನವಃ ಸ್ವಾಹಾ; ಮರುದ್ಗಣಾಯೈ ಇದಮ್ ನ ಮಮ ।।
ಶುಭವಾದ ದಾನಗಳನ್ನು ಮಾಡುವವರೂ, ಕುಂದದೇ ಇರುವ ಪ್ರಕಾಶವುಳ್ಳವರೂ ಆದ ಎಲೈ ಮರುದ್ದೇವತೆಗಳೇ, ನಿಮ್ಮ ಆಗಮನವೇ ಮಹಾದಾಶ್ಚರ್ಯಭೂತವಾದುದು ಮತ್ತು ನಿಮ್ಮ ಆಗಮನದಿಂದ ನಮ್ಮ ರಕ್ಷಣೆಯು ಅಥವಾ ಇಷ್ಟಾರ್ಥಪೂರ್ತಿಯು ಉಂಟಾಗುತ್ತದೆ.
(ಸೋಮರಸವನ್ನು ಪಾನಮಾಡುವಾಗ ಮತ್ತೆ ಅದೇ ಮಂತ್ರವನ್ನು ಹೇಳಿ. ದೇವತೆಗಳು ಸೋಮರಸವನ್ನು ಪಾನಮಾಡುವಾಗ ಅವರು ಹೊಗಳಿಕೆಯನ್ನು ಇಷ್ಟಪಡುತ್ತಾರೆ.)

ಆರೇ ಸಾ ವಃ ಸುದಾನವೋ ಮರುತ ಋಂಜತೀ ಶರುಃ।
ಆರೇ ಅಶ್ಮಾ ಯಮಸ್ಯಥ ಸ್ವಾಹಾ; ಮರುದ್ಗಣಾಯೈ ಇದಮ್ ನ ಮಮ ।।
ಶೋಭನದಾನರಾದ ಎಲೈ ಮರುದ್ದೇವತೆಗಳೇ, ತೇಜಃಪುಂಜವೂ, ಹಿಂಸಕವೂ ಆದ ನಿಮ್ಮ ಆಯುಧವು (ನಮ್ಮಿಂದ) ಬಹಳ ದೂರದಲ್ಲಿ ಇರಲಿ; ನಿಮ್ಮಿಂದ ಕ್ಷಿಪ್ತವಾದ ಆ ಆಯುಧವು ಬಹಳ ದೂರ ಇರಲಿ

ತೃಣಸ್ಕಂದಸ್ಯ ನು ವಿಶಃ ಪರಿ ವೃಂಕ್ತ ಸುದಾನವಃ।
ಊರ್ಧ್ವಾನ್ನಃ ಕರ್ತ ಜೀವಸೇ ಸ್ವಾಹಾ; ಮರುದ್ಗಣಾಯೈ ಇದಮ್ ನ ಮಮ ।।
ಎಲೈ ಉದಾರಿಗಳಾದ ಮರುದ್ದೇವತೆಗಳೇ, ತೃಣಪ್ರಾಯವಾದ ನನ್ನ ಪುತ್ರಭೃತ್ಯಾದಿ ಪ್ರಜೆಗಳನ್ನೂ ಬಾಧೆಗಳನ್ನು ಪರಿಹಾರಮಾಡಿ ರಕ್ಷಿಸಿ ಚಿರಕಾಲ ಜೀವಿಸುವಂತೆ, ನಮ್ಮನ್ನು ಉತ್ಕೃಷ್ಟ ಜೀವಿಗಳನ್ನಾಗಿ ಮಾಡಿ.
(ಪ್ರತಿಬಾರಿಯು ೧೦ ರಿಂದ ೨೦ ಸೆಕೆಂಡ್ ಸೋಮರಸವನ್ನು ಕುಡಿಯಲು ವೇಳೆಯನ್ನು ಕೊಡಿ. ಸೋಮರಸ ಪಾನಮಾಡಿದ ನಂತರ ಮತ್ತೆ ಎರಡನೆಯ ಬಾರಿ '**ಮರುದ್ಗಣಾಯೈ** ಇದಂ ನ ಮಮ' ಎಂದು ಹೇಳಬೇಕು.)

**ತ್ವಷ್ಟಾ ದೇವತೆ (೩ ಸಾರಿ)** (೧–೧೮೮–೯)

**ಓಂ ತ್ವಷ್ಟಾದೇಯೈ ನಮಃ** (ತ್ವಷ್ಟಾ ದೇವತೆಯನ್ನು ಆವಾಹನೆ ಮಾಡಿ. ಯಜ್ಞಕುಂಡದ ಮೇಲೆ ಇಳಿಯುತ್ತಾರೆ. ಪಾದಪೂಜೆ ಮಾಡಿ ನಂತರ ಕೆಳಗಿನ ಮಂತ್ರವನ್ನು ೩ ಸಾರಿ ಹೇಳಿ ೩ ಬಾರಿ ಸೋಮರಸವನ್ನು ಅರ್ಪಿಸಿ.)

ಓಂ ತ್ವಷ್ಟಾ ರೂಪಾಣಿ ಹಿ ಪ್ರಭುಃ ಪಶೂನ್ ವಿಶ್ವಾನ್ ಸಮಾನಜೇ।
ತೇಷಾಂ ನಃ ಸ್ಫಾತಿಮಾ ಯಜ ಸ್ವಾಹಾ; ತ್ವಷ್ಟಾಯೈ ಇದಮ್ ನ ಮಮ ।।
ತ್ವಷ್ಟೃವು (ಸಕಲ ಜೀವಿಗಳಿಗೆ) ಸ್ಪಷ್ಟವಾದ ರೂಪಗಳನ್ನು ಕೊಟ್ಟು ಪರಿಷ್ಕರಿಸಲು ಸಮರ್ಥನಾಗಿದ್ದಾನೆ. ಅವನು ನಮಗೆ ಸಂಬಂಧಿಸಿದ ಸಮಸ್ತ ಪಶ್ವಾದಿಗಳಿಗೂ ವೈಯಕ್ತಿಕವಾದ ಸ್ವರೂಪವನ್ನು ಕೊಟ್ಟು ಪರಿಷ್ಕರಿಸಿದನು. ಎಲೈ ತ್ವಷ್ಟೃವೇ, ನಮಗಾಗಿ ಆ ಪಶ್ವಾದಿಗಳನ್ನು ಸೃಷ್ಟಿಸಿ ಅವುಗಳ ಸಂಖ್ಯೆಯನ್ನು ವೃದ್ಧಿಮಾಡು.

(ಪ್ರತಿಬಾರಿಯು ೧೦ ರಿಂದ ೨೦ ಸೆಕೆಂಡ್ ಸೋಮರಸವನ್ನು ಕುಡಿಯಲು ವೇಳೆಯನ್ನು ಕೊಡಿ. ಸೋಮರಸ ಪಾನಮಾಡಿದ ನಂತರ ಮತ್ತೆ ಎರಡನೆಯ ಬಾರಿ 'ತ್ವಷ್ಟಾಯೈ ಇದಂ ನ ಮಮ' ಎಂದು ಹೇಳಬೇಕು.)
(ಸೋಮರಸವನ್ನು ಪಾನಮಾಡುವಾಗ ಅದೇ ಮಂತ್ರವನ್ನು ಹೇಳಿ. ದೇವತೆಗಳು ಸೋಮರಸವನ್ನು ಪಾನಮಾಡುವಾಗ ಅವರು ಹೊಗಳಿಕೆಯನ್ನು ಇಷ್ಟಪಡುತ್ತಾರೆ.)

**ಆದಿತ್ಯರು** (೭-೬೬-೧ ರಿಂದ ೭-೬೬-೮) (ಆವಾಹನ ಮಂತ್ರಗಳನ್ನು ಹೇಳಿ)

**ಓಂ ಆದಿತ್ಯಾಯ ನಮಃ** (ಆದಿತ್ಯರನ್ನು ಆವಾಹನೆ ಮಾಡಿ ಪಾದಪೂಜೆ ಮಾಡಿ ನಂತರ ಕೆಳಗಿನ ಮಂತ್ರವನ್ನು ಹೇಳಿ ಸೋಮರಸವನ್ನು ಅರ್ಪಿಸಿ.)

ಓಂ ಪ್ರ ಮಿತ್ರಯೋರ್ವರುಣಯೋಃ ಸ್ತೋಮೋ ನ ಏತು ಶೂಷ್ಯಃ।
ನಮಸ್ವಾನ್ತುವಿಜಾತಯೋಃ ಸ್ವಾಹಾ; ಆದಿತ್ಯಾಯೈ ಇದಮ್ ನ ಮಮ ।।
ಅನೇಕ ಜನ್ಮಗಳನ್ನು ಹೊಂದುವ ಮಿತ್ರಾವರುಣರನ್ನುದ್ಧೇಶಿಸಿ ನಾವು ಅರ್ಪಿಸುವ ಸುಖಕರವಾದುದೂ ಹವಿಸ್ಸಿನಿಂದ ಯುಕ್ತವಾದುದೂ ಆದ ಈ ಸ್ತೋತ್ರವು ಅವರ ಬಳಿಗೆ ಹೋಗಿ ಸೇರಲಿ.
(ಸೋಮರಸವನ್ನು ಪಾನಮಾಡುವಾಗ ಕೆಳಗಿನ ಮಂತ್ರವನ್ನು ಹೇಳಿ. ದೇವತೆಗಳು ಸೋಮರಸವನ್ನು ಪಾನಮಾಡುವಾಗ ಅವರು ಹೊಗಳಿಕೆಯನ್ನು ಇಷ್ಟಪಡುತ್ತಾರೆ.)
೧. ಯಾ ಧಾರಯಂತ ದೇವಾಃ ಸುದಕ್ಷಾ ದಕ್ಷಪಿತರಾ। ಅಸುರ್ಯಾಯ ಪ್ರಮಹಸಾ।।
ಎಲೈ ಮಿತ್ರಾವರುಣರೇ, ಉತ್ತಮವಾದ ಬಲವುಳ್ಳವರೂ ದಕ್ಷನನ್ನು ತಂದೆಯಾಗಿ ಪಡೆದವರೂ ಅತ್ಯಂತ ತೇಜಸ್ವಿಗಳೂ ಆದ ಯಾವ ನಿಮ್ಮನ್ನು ಹಿಂದಿನ ದೇವತೆಗಳು ಎಲ್ಲರಿಗೂ ಬಲವನ್ನುಂಟುಮಾಡಲು ಸ್ಥಾಪಿಸಿದರೋ ಅಂತಹ ನೀವು ನಮ್ಮ ಯಾಗಾದಿಕರ್ಮಗಳನ್ನು ಫಲಪ್ರದವಾಗುವಂತೆ ಮಾಡಿರಿ.
೨. ತಾ ನಃ ಸ್ತಿಪಾ ತನೂಪಾ ವರುಣ ಜರಿತೃಣಾಂ। ಮಿತ್ರ ಸಾಧಯತಂ ಧಿಯಃ।।
ಪೂರ್ವೋಕ್ತಗುಣವಿಶಿಷ್ಟರಾದವರೂ, ಗೃಹಗಳಗೂ ಶರೀರಾದಿಗಳಗೂ, ರಕ್ಷಕರಾದವರೂ ಆದ ಎಲೈ ಮಿತ್ರಾವರುಣರೇ, ನೀವು ನಿಮ್ಮನ್ನು ಸ್ತುತಿಸುತ್ತಿರುವ ನಮ್ಮ ಸ್ತುತಿರೂಪವಾದ ಈ ಯಜ್ಞಕರ್ಮವನ್ನು ಫಲಪ್ರದವಾಗುವಂತೆ ಮಾಡಿರಿ.

ಯದದ್ಯ ಸೂರ ಉದಿತೇಽನಾಗಾ ಮಿತ್ರೋ ಅರ್ಯಮಾ।
ಸುವಾತಿ ಸವಿತಾ ಭಗಃ ಸ್ವಾಹಾ; ಆದಿತ್ಯಾಯೈ ಇದಮ್ ನ ಮಮ ।।
ನಾವು ಆಪೇಕ್ಷಿಸುವ ಧನವನ್ನು ಈ ದಿವಸ ಸೂರ್ಯನು ಉದಯಿಸಿತ್ತಿರುವಾಗ ಪ್ರಾತಃಸವನಕಾಲದಲ್ಲಿ ಪಾಪಪರಿಹಾರಕರಾದ, ಮಿತ್ರ, ಅರ್ಯಮಾ, ಸವಿತೃ, ಭಗ ಎಂಬ ದೇವತೆಗಳು ನಮಗೆ ಲಭಿಸುವಂತೆ ಪ್ರೇರಿಸಲಿ.
೧. ಸುಪ್ರಾವೀರಸ್ತು ಸ ಕ್ಷಯಃ ಪ್ರ ನು ಯಾಮನ್ತ್ಸುದಾನವಃ। ಯೇ ನೋ ಅಂಹೋಽತಿಪಿಪ್ರತಿ ।।
ಎಲೈ ಮಿತ್ರಾವರುಣಾರ್ಯಮರೇ, ನಮ್ಮ ಪಾಪಗಳನ್ನು ಪರಿಹರಿಸಿ ನಮ್ಮನ್ನು ದಾಟಿಸುವ ನೀವು ನಮ್ಮಲ್ಲಿಗೆ ಬಂದು ಹೋದನಂತರ ನಾವು ವಾಸಮಾಡುವ ಗೃಹವು ಯಾವ ಭಯವೂ ಇಲ್ಲದೆ ಸುರಕ್ಷಿತವಾಗುವುದು.
೨. ಉತ ಸ್ವರಾಜೋ ಅದಿತಿರದಬ್ಧಸ್ಯ ವ್ರತಸ್ಯ ಯೇ। ಮಹೋ ರಾಜಾನ ಈಶತೇ।।
ಸರ್ವರಿಗೂ ಪ್ರಭುಗಳಾದ ಮಿತ್ರಾವರುಣಾರ್ಯಮರೂ, ಅವರ ಮಾತೆಯಾದ ಅದಿತಿದೇವಿಯೂ ಸಹ ನಿರ್ವಿಘ್ನವಾಗಿ ನೆರವೇರುವುದೂ ಮಹತ್ತಾದುದೂ ಆದ ಈ ನಮ್ಮ ಯಜ್ಞಕ್ಕೆ ಒಡೆಯರಾಗಿ ನಮ್ಮ ಇಷ್ಟಾರ್ಥಗಳನ್ನು ಕೊಡುತ್ತಾರೆ.

ಪ್ರತಿ ವಾಂ ಸೂರ ಉದಿತೇ ಮಿತ್ರಂ ಗೃಣೀಷೇ ವರುಣ।
ಅರ್ಯಮಣಂ ರಿಶಾದಸಂ ಸ್ವಾಹಾ; ಆದಿತ್ಯಾಯೈ ಇದಮ್ ನ ಮಮ ।।
ಎಲೈ ಮಿತ್ರಾವರುಣಾರ್ಯಮರೇ, ಸೂರ್ಯನು ಉದಯಿಸುತ್ತಿರುವಾಗ ಈ ದಿನ ಪ್ರಾತಃಕಾಲದಲ್ಲಿ ಮಿತ್ರ, ವರುಣ, ಶತ್ರುಹಿಂಸಕನಾದ ಅರ್ಯಮ ಎಂಬ ನಿಮ್ಮನ್ನು ಉದ್ದೇಶಿಸಿ ಪ್ರತ್ಯೇಕವಾಗಿ ಸ್ತೋತ್ರಮಾಡುತ್ತೇನೆ.
೧. ರಾಯಾ ಹಿರಣ್ಯಯಾ ಮತಿರಿಯಮವೃಕಾಯ ಶವಸೇ। ಇಯಂ ವಿಪ್ರಾ ಮೇಧಸಾತಯೇ।।
ಎಲೈ ಮೇಧಾವಿಗಳಾದ ದೇವತೆಗಳೇ, ಈಗ ನಾವು ನಿಮ್ಮನ್ನುದ್ದೇಶಿಸಿ ಪಠಿಸುತ್ತಿರುವ ಸ್ತೋತ್ರವು ನಮಗೆ ಧನಪ್ರಾಪ್ತಿಗೂ, ಬಲಕ್ಕೂ, ಯಜ್ಞಲಾಭಾರ್ಥವಾಗಿಯೂ ಸಾಧನಭೂತವಾಗಿರಲಿ.

(ಪ್ರತಿಬಾರಿಯು ೧೦ ರಿಂದ ೨೦ ಸೆಕೆಂಡ್ ಸೋಮರಸವನ್ನು ಕುಡಿಯಲು ವೇಳೆಯನ್ನು ಕೊಡಿ. ಸೋಮರಸ ಪಾನಮಾಡಿದ ನಂತರ ಮತ್ತೆ ಎರಡನೆಯ ಬಾರಿ 'ಆದಿತ್ಯಾಯೈ ಇದಂ ನ ಮಮ' ಎಂದು ಹೇಳಬೇಕು.)

**ವಿಷ್ಣುರ್ದೇವತಾ** (೧-೨೨-೧೬ – ೧-೨೨-೨೧)

**ಓಂ ವಿಷ್ಣುದೇವಾಯ ನಮಃ** (ವಿಷ್ಣುದೇವರನ್ನು ಆವಾಹನೆ ಮಾಡಿ ಪಾದಪೂಜೆ ಮಾಡಿ ನಂತರ ಕೆಳಗಿನ ಮಂತ್ರವನ್ನು ಹೇಳಿ ಸೋಮರಸವನ್ನು ಅರ್ಪಿಸಿ.)

ಓಂ ಅತೋ ದೇವಾ ಅವಂತು ನೋ ಯತೋ ವಿಷ್ಣುರ್ವಿಚಕ್ರಮೇ।
ಪೃಥಿವ್ಯಾಃ ಸಪ್ತ ಧಾಮಭಿಃ ಸ್ವಾಹಾ; ವಿಷ್ಣವೇ ಇದಮ್ ನ ಮಮ ।।
ವಿಷ್ಣು ತ್ರಿವಿಕ್ರಮನಾಗಿ ಹೆಜ್ಜೆಗಳನ್ನಿಡುವಾಗ ಯಾವ ಭೂಪ್ರದೇಶ ಮತ್ತು ಸಪ್ತಧಾಮದಿಂದ ಗಾಯತ್ರ್ಯಾದಿ ಛಂದೋಪೇತನಾಗಿ ಹೊರಟನೋ ಆ ಭೂಪ್ರದೇಶದಲ್ಲಿರುವ ನಮ್ಮನ್ನು ದೇವತೆಗಳು ರಕ್ಷಿಸಲಿ
(ಸೋಮರಸವನ್ನು ಪಾನಮಾಡುವಾಗ ಕೆಳಗಿನ ಒಂದು ಮಂತ್ರವನ್ನು ಹೇಳಿ. ದೇವತೆಗಳು ಸೋಮರಸವನ್ನು ಪಾನಮಾಡುವಾಗ ಅವರು ಹೊಗಳಿಕೆಯನ್ನು ಇಷ್ಟಪಡುತ್ತಾರೆ.)
೧. ಇದಂ ವಿಷ್ಣುರ್ವಿ ಚಕ್ರಮೇ ತ್ರೇಧಾ ನಿ ದಧೇ ಪದಮ್ । ಸಮೂಳ್ಹಮಸ್ಯ ಪಾಂಸುರೇ ।।
ವಿಷ್ಣುವು ಈ ಸಮಸ್ತ ಜಗತ್ತನ್ನೂ ಮೂರು ವಿಧವಾದ ಪಾದಪ್ರಕ್ಷೇಪಣದಿಂದ ಆಕ್ರಮಿಸಿದನು. ಆ ವಿಷ್ಣುವಿನ ಧೂಳಿಯುಕ್ತವಾದ ಪಾದಸ್ಥಾನದಲ್ಲಿ ಈ ಜಗತ್ತು ಮುಚ್ಚಿಹೋಗಿ ಕಾಣದಂತಾಯಿತು.

ತ್ರೀಣಿ ಪದಾ ವಿಚಕ್ರಮೇ ವಿಷ್ಣುರ್ಗೋಪಾ ಅದಾಭ್ಯಃ ।
ಅತೋ ಧರ್ಮಾಣಿ ಧಾರಯನ್ ಸ್ವಾಹಾ; ವಿಷ್ಣವೇ ಇದಮ್ ನ ಮಮ ।।
ವಿಷ್ಣುವನ್ನು ಹಿಂಸಿಸಲು ಯಾರಿಂದಲೂ ಶಕ್ಯವಿಲ್ಲ. ಇವನು ಸಮಸ್ತ ಜಗತ್ತಿಗೂ ರಕ್ಷಕನು; ಆದುದರಿಂದ ಅಗ್ನಿಹೋತ್ರಾದಿಧರ್ಮಗಳ ಪಾಲನೆಗಾಗಿ ವಿಷ್ಣುವು ಮೂರು ಪಾದವಿಕ್ಷೇಪವನ್ನು ಮಾಡಿದನು.
೧. ವಿಷ್ಣೋಃ ಕರ್ಮಾಣಿ ಪಶ್ಯತ ಯತೋ ವ್ರತಾನಿ ಪಸ್ಪಶೇ । ಇಂದ್ರಸ್ಯ ಯುಜ್ಯಃ ಸಖಾ ।।
ಎಲೈ ಋತ್ವಿಗ್ಯಜಮಾನರಾದಿಯಾದ ಜನರೇ, ವಿಷ್ಣುವಿನ ಪಾಲನಾದಿ (ಅದ್ಭುತ) ಕರ್ಮಗಳನ್ನು ನೋಡಿರಿ. ಆ ವಿಷ್ಣುವಿನ ಮಹಿಮೆಯಿಂದಲೇ ಯಜಮಾನನು ಅಗ್ನಿ ಹೋತ್ರಾದಿ ಕರ್ಮಗಳನ್ನು ಮಾಡಲು ಸಮರ್ಥನಾಗಿರುವನು. ಇಂತಹ ವಿಷ್ಣುವು ಇಂದ್ರನಿಗೆ ಜತೆಯಲ್ಲಿರುವ ಪರಮಮಿತ್ರನಾಗಿರುವನು.

ತದ್ ವಿಷ್ಣೋಃ ಪರಮಂ ಪದಂ ಸದಾ ಪಶ್ಯಂತಿ ಸೂರಯಃ ।
ದಿವೀವ ಚಕ್ಷುರಾತತಮ್ ಸ್ವಾಹಾ; ವಿಷ್ಣವೇ ಇದಮ್ ನ ಮಮ ।।
ವಿದ್ವಾಂಸರು ಆ ವಿಷ್ಣುವಿನ ಪರಮ ಪದವನ್ನು, ಆಕಾಶದಲ್ಲಿ ಪ್ರಸರಿಸಿರುವ ವಿಷ್ಣು ಕಾಂತಿಯನ್ನು ಸರ್ವಕಾಲದಲ್ಲಿಯೂ ನೋಡುತ್ತಾರೆ.
೧. **ತದ್ ವಿಪ್ರಾಸೋ ವಿಪನ್ಯವೋ ಜಾಗೃವಾಂಸಃ ಸಮಿಂಧತೇ । ವಿಷ್ಣೋರ್ಯತ್ಪರಮಂ ಪದಮ್ ।।**
ಬುದ್ಧಿವಂತರಾದ ವಿವೇಕಿಗಳು ಹಿಂದೆ ಹೇಳಿದ ವಿಷ್ಣುವಿನ ಪರಮ ಪದವೆಂಬ ಉತ್ಕೃಷ್ಟಸ್ಥಾನವನ್ನು ಸ್ತೋತ್ರಾದಿಗಳಿಂದ ಬಹಳವಾಗಿ ಪ್ರಶಂಸೆಮಾಡುವರು.
(ಪ್ರತಿಬಾರಿಯು ೧೦ ರಿಂದ ೨೦ ಸೆಕೆಂಡ್ ಸೋಮರಸವನ್ನು ಕುಡಿಯಲು ವೇಳೆಯನ್ನು ಕೊಡಿ. ಸೋಮರಸ ಪಾನಮಾಡಿದ ನಂತರ ಮತ್ತೆ ಎರಡನೆಯ ಬಾರಿ '**ವಿಷ್ಣವೇ** ಇದಂ ನ ಮಮ' ಎಂದು ಹೇಳಬೇಕು.)

## ಬೃಹಸ್ಪತಿ

**ಓಂ ಬೃಹಸ್ಪತಯೈ ನಮಃ** (ಬೃಹಸ್ಪತಿ ದೇವರರನ್ನು ಆಗಲೇ ಆಹ್ವಾನಿಸಿದ್ದೇವೆ. ಈಗ ಸೋಮರಸವನ್ನು ಅರ್ಪಿಸಲು.)

.

ಓಂ ಬೃಹಸ್ಪತೇ ಜುಷಸ್ವ ನೋ ಹವ್ಯಾನಿ ವಿಶ್ವದೇವ್ಯ।
ರಾಸ್ವ ರತ್ನಾನಿ ದಾಶುಷೇ ಸ್ವಾಹಾ; ಬೃಹಸ್ಪತೇ ಇದಮ್ ನ ಮಮ ।।

ಸಕಲ ದೇವಮಾನವರಿಗೂ ಮಂಗಳಕಾರಿಯಾದ ಎಲೈ ಬೃಹಸ್ಪತಿಯೇ, ನಮ್ಮಿಂದ ದತ್ತವಾದ ಹವಿಸ್ಸುಗಳನ್ನು ಸೇವಿಸು. ಹವಿಸ್ಸನ್ನು ಅರ್ಪಿಸತಕ್ಕ ಯಜಮಾನನಿಗೆ (ಆಧ್ಯಾತ್ಮಿಕ) ರತ್ನಗಳನ್ನು ಒದಗಿಸಿಕೊಡು.
(ಸೋಮರಸವನ್ನು ಪಾನಮಾಡುವಾಗ ಮತ್ತೆ ಅದೇ ಮಂತ್ರವನ್ನು ಹೇಳಿ. ದೇವತೆಗಳು ಸೋಮರಸವನ್ನು ಪಾನಮಾಡುವಾಗ ಅವರು ಹೊಗಳಿಕೆಯನ್ನು ಇಷ್ಟಪಡುತ್ತಾರೆ.)

ಶುಚಿಮರ್ಕೈರ್ಬೃಹಸ್ಪತಿಮಧ್ವರೇಷು ನಮಸ್ಯತ।
ಅನಾಮ್ಯೋಜ ಆ ಚಕೇ ಸ್ವಾಹಾ; ಬೃಹಸ್ಪತೇ ಇದಮ್ ನ ಮಮ ।।
(ಶುಚಿಂ ಅರ್ಕೈಃ ಬೃಹಸ್ಪತಿಂ ಅಧ್ವರೇಷು ನಮಸ್ಯತ।
ಯಜ್ಞಗಳಲ್ಲಿ ಶುದ್ಧನಾದ ಬೃಹಸ್ಪತಿಯನ್ನು ಪೂಜ್ಯವಾದ ಸ್ತುತಿಗಳಿಂದ ಪೂಜಿಸಿರಿ. ಶತ್ರುಗಳಿಂದ ಕುಗ್ಗಿಸಲು ಸಾಧ್ಯವಿಲ್ಲದ ಶಕ್ತಿಯನ್ನು ನಾನು ಅವನಿಂದ ಯಾಚಿಸುತ್ತೇನೆ.

ವೃಷಭಂ ಚರ್ಷಣೀನಾಂ ವಿಶ್ವರೂಪಮದಾಭ್ಯಂ।
ಬೃಹಸ್ಪತಿಂ ವರೇಣ್ಯಂ ಸ್ವಾಹಾ; ಬೃಹಸ್ಪತೇ ಇದಮ್ ನ ಮಮ ।।
ಮಾನವರಿಗೆ ಇಷ್ಟಾರ್ಥಗಳನ್ನು ಕೊಡುವವನೂ, ವಿಶ್ವರೂಪವುಳ್ಳವನೂ, ಯಾರಿಂದಲೂ ತಿರಸ್ಕರಿಸಲ್ಪಡದಿರುವವನೂ, ಎಲ್ಲರಿಗೂ ಪೂಜ್ಯನೂ ಆದ ಬೃಹಸ್ಪತಿಯನ್ನು ಯಾಚಿಸುತ್ತೇನೆ.
(ಪ್ರತಿಬಾರಿಯು ೧೦ ರಿಂದ ೨೦ ಸೆಕೆಂಡ್ ಸೋಮರಸವನ್ನು ಕುಡಿಯಲು ವೇಳೆಯನ್ನು ಕೊಡಿ. ಸೋಮರಸ ಪಾನಮಾಡಿದ ನಂತರ ಮತ್ತೆ ಎರಡನೆಯ ಬಾರಿ 'ಬೃಹಸ್ಪತೇ ಇದಂ ನ ಮಮ' ಎಂದು ಹೇಳಬೇಕು.)

## ಬ್ರಹ್ಮಣಸ್ಪತಿ (೧-೪೦-೧ ರಿಂದ ೧-೪೦-೫)

**ಓಂ ಬ್ರಹ್ಮಣಸ್ಪತಯ್ಯೆ ನಮಃ** (ಬ್ರಹ್ಮಣಸ್ಪತಿಯನ್ನು ಈಗಾಗಲೇ ಆಹ್ವಾನಿಸಿದ್ದೇವೆ. ಈಗ ಸೋಮರಸವನ್ನು ಅರ್ಪಿಸಲು.)

ಓಂ ಉತ್ತಿಷ್ಠ ಬ್ರಹ್ಮಣಸ್ಪತೇ ದೇವಯಂತಸ್ತ್ವೇಮಹೇ।
ಉಪ ಪ್ರ ಯಂತು ಮರುತಃ ಸುದಾನವ ಇಂದ್ರ ಪ್ರಾಶೂರ್ಭವಾ ಸಚಾ ಸ್ವಾಹಾ; ಬ್ರಹ್ಮಣಸ್ಪತೇ ಇದಮ್ ನ ಮಮ ।।
ಎಲೈ ಬ್ರಹ್ಮಣಸ್ಪತಿಯೇ, ನಮಗೆ ಅನುಗ್ರಹ ಮಾಡುವುದಕ್ಕಾಗಿ ಸ್ವಸ್ಥಾನದಿಂದ ಎದ್ದೇಳು. ದೇವತೆಗಳ ಸಹಾಯವನ್ನು ಆಪೇಕ್ಷಿಸುವ ನಾವು ನಿನ್ನನ್ನು ಪ್ರಾರ್ಥಿಸುತ್ತೇವೆ. ಶುಭಕರವಾದ ದಾನಗಳನ್ನು ಕೊಡತಕ್ಕ ಮರುತ್ತುಗಳು ನಮ್ಮ ಸಮೀಪಕ್ಕೆ ಬರಲಿ. ಎಲೈ ಇಂದ್ರನೇ ಬ್ರಹ್ಮಣಸ್ಪತಿಯೊಡನೆ ಶೀಘ್ರವಾಗಿ ಬರುವಂತವನಾಗು.
(ಸೋಮರಸವನ್ನು ಪಾನಮಾಡುವಾಗ ಕೆಳಗಿನ ಒಂದು ಮಂತ್ರವನ್ನು ಹೇಳಿ. ದೇವತೆಗಳು ಸೋಮರಸವನ್ನು ಪಾನಮಾಡುವಾಗ ಅವರು ಹೊಗಳಿಕೆಯನ್ನು ಇಷ್ಟಪಡುತ್ತಾರೆ.)
೧. ತ್ವಾಮಿದ್ಧಿ ಸಹಸಸ್ಪುತ್ರ ಮರ್ತ್ಯ ಉಪಬ್ರೂತೇ ಧನೇ ಹಿತೇ।
ಸುವೀರ್ಯಂ ಮರುತ ಆ ಸ್ವಶ್ವ್ಯಂ ದಧೀತ ಯೋ ವ ಆಚಕೇ।। (೧-೪೦-೨)
ಎಲೈ ಬ್ರಹ್ಮಣಸ್ಪತಿಯೇ ನೀನು ಅತ್ಯಂತ ಬಲಶಾಲಿಯು ಮಾನವನು ಪರಮಸುಖಕರವಾದ ದೈವೀಕ ಧನದ ಉದ್ದಿಶ್ಯವಾಗಿ ನಿನ್ನನ್ನು ಸಮೀಪಿಸಿ ಸ್ತೋತ್ರವನ್ನು ಮಾಡುತ್ತಾನೆ. ಎಲೈ ಮರುತ್ತುಗಳೇ, ಶಕ್ತಿರಕ್ಷಕನಾದ ಬ್ರಹ್ಮಣಸ್ಪತಿಯೊಡನೆ ನೀವು ಇರುವುದರಿಂದ ಧನಾಪೇಕ್ಷಿಯಾದ ಯಾವ ಮಾನವನು ಸ್ತೋತ್ರಮಾಡುತ್ತಾನೋ ಅವನು ಶ್ರೇಷ್ಠವಾದ ದೈವೀಕ ಧನವನ್ನು ಹೊಂದುವನು.

ಪ್ರೈತು ಬ್ರಹ್ಮಣಸ್ಪತಿಃ ಪ್ರ ದೇವ್ಯೇತು ಸೂನೃತಾ।
ಅಚ್ಛಾ ವೀರಂ ನರ್ಯಂ ಪಂಕ್ತಿರಾಧಸಂ ದೇವಾ ಯಜ್ಞಂ ನಯಂತು ನಃ. ಸ್ವಾಹಾ; ಬ್ರಹ್ಮಣಸ್ಪತೇ ಇದಮ್ ನ ಮಮ
ದೇವನಾದ ಬ್ರಹ್ಮಣಸ್ಪತಿಯೂ ಸತ್ಯಪ್ರಿಯರೂಪಳಾಗಿರುವ ವಾಗ್ದೇವತೆಯೂ ನಮ್ಮ ಸಮೀಪಕ್ಕೆ ಬರಲಿ. ಬಲಶಾಲಿಗಳಾದ ದೇವತೆಗಳೂ ಸಹ ನಮಗೆ ಒಳ್ಳೆಯದನ್ನು ಮಾಡುವ ಸಲುವಾಗಿ ಸಮೀಪಕ್ಕೆ ದಯಮಾಡಿ ಬರಲಿ. ನಮಗೆ ಒಳ್ಳೆಯದನ್ನು ಮಾಡುವ ವೇದೋಕ್ತವಾದ ಹವಿಸ್ಸಿನ ಪಂಕ್ತಿಗಳಿಂದ ತುಂಬಿರುವ ಯಜ್ಞಕ್ಕೆ ಅಭಿಮುಖವಾಗಿ ನಮ್ಮನ್ನು ಸುರಕ್ಷಿತವಾಗಿ ಕರೆದುಕೊಂಡು ಹೋಗಲಿ.
೧. ಯೋ ವಾಘತೇ ದದಾತಿ ಸೂನರಂ ವಸು ಸ ಧತ್ತೇ ಅಕ್ಷಿತಿ ಶ್ರವಃ।

ತಸ್ಮಾ ಇಳಾಂ ಸುವೀರಾಮಾ ಯಜಾಮಹೇ ಸುಪ್ರತೂರ್ತಿಮನೇಹಸಂ॥
ಯಾವ ಯಜಮಾನನು ಬ್ರಹ್ಮಣಸ್ಪತಿಗೆ (ಋತ್ವಿಜ) ಸಂತೋಷದಿಂದ ಸ್ವೀಕರಿಸಲ್ಪಡುವ ಹವಿಸ್ಸೆಂಬ ಧನವನ್ನು (ದೇವತೆಗಳಿಗೆ) ಕೊಡುತ್ತಾನೋ ಅಂತಹ ಯಜಮಾನನು ನಾಶರಹಿತವಾದ ದೈವೀಕ ಧನವನ್ನು ಹೊಂದುತ್ತಾನೆ. ಶತ್ರುಗಳ ಕಾಟವನ್ನು ನಾಶಮಾಡುವ ಇಳಾದೇವಿಯನ್ನು ಶತ್ರುಗಳು ಹಿಂಸಿಸಲಾಗುವುದಿಲ್ಲ. ಅವಳು ಸಂಪೂರ್ಣವಾಗಿ ಶತ್ರುಗಳ ನಾಶವನ್ನು ಮಾಡಬಲ್ಲಳು, ಹೀಗೆ ನಿರ್ವಿಘ್ನವಾಗಿ ಯಜ್ಞವನ್ನು ನೆರವೇರಿಸಲು ಸಹಾಯ ಮಾಡುವ ಇಳಾದೇವಿಯನ್ನು ಉದ್ದೇಶಿಸಿ ನಾವು ಯಜ್ಞದಲ್ಲಿ ಆಹ್ವಾನಿಸುತ್ತೇವೆ.

ಪ್ರ ನೂನಂ ಬ್ರಹ್ಮಣಸ್ಪತಿರ್ಮಂತ್ರಂ ವದತ್ಯುಕ್ಥ್ಯಂ।
ಯಸ್ಮಿನ್ನಿಂದ್ರೋ ವರುಣೋ ಮಿತ್ರೋ ಆರ್ಯಮಾ ದೇವಾ ಓಕಾಂಸಿ ಚಕ್ರಿರೇ ಸ್ವಾಹಾ; ಬ್ರಹ್ಮಣಸ್ಪತೇ ಇದಮ್ ನ ಮಮ॥
ಬ್ರಹ್ಮಣಸ್ಪತಿಯು ಯಜ್ಞಕಾಲದಲ್ಲಿ ಪಠಿಸುವ ಮಂತ್ರದಲ್ಲಿ ಇಂದ್ರನೂ, ವರುಣನೂ, ಮಿತ್ರನೂ ಆರ್ಯಮನೂ ಇನ್ನೂ ಸಕಲ ದೇವತೆಗಳೂ ತಮ್ಮ ವಾಸಸ್ಥಾನವನ್ನು ಮಾಡಿಕೊಂಡಿರುವರೋ ಅಂತಹ ಸ್ತೋತ್ರಯೋಗ್ಯವಾದ ದೇವತಾತ್ಮಕವಾದ ಮಂತ್ರವನ್ನು ಬ್ರಹ್ಮಣಸ್ಪತಿಯು ನಿಶ್ಚಯವಾಗಿ ಸ್ಪಷ್ಟವಾಗಿ ಪಠಿಸುತ್ತಾನೆ.

ಓಂ ಗಣಾನಾಂ ತ್ವಾ ಗಣಪತಿಂ ಹವಾಮಹೇ ಕವಿಂ ಕವೀನಾಮುಪಮಶ್ರವಸ್ತಮಂ ।
ಜ್ಯೇಷ್ಠರಾಜಂ ಬ್ರಹ್ಮಣಾಂ ಬ್ರಹಣಸ್ಪತ ಆ ನಃ ಶೃಣ್ವನ್ನೂತಿಭಿಃ ಸೀದ ಸಾದನಂ ಸ್ವಾಹಾ;ಬ್ರಹ್ಮಣಸ್ಪತೇ ಇದಮ್ ನ ಮಮ।
ಎಲೈ ಬ್ರಹ್ಮಣಸ್ಪತಿಯೇ, ದೇವಗಣಗಳಿಗೆ ಸಂಬಂಧಿಸಿದವನು. ಸ್ವಗಣಕ್ಕೆ (ಮಂತ್ರಗಳಿಗೆ) ಒಡೆಯನೂ, ಕ್ರಾಂತದರ್ಶಿಗಳಾದ ಕವಿಗಳಲ್ಲಿ ಅತ್ಯುತ್ತಮವಾದ ಕವಿಯಾದವನೂ, ದೈವೀಪ್ರೇರಣೆಯನ್ನು ಕೇಳಿಸಿಕೊಳ್ಳುವಂತೆ ಮಾಡುವವನೂ, ಮಂತ್ರಗಳ ಜ್ಯೇಷ್ಠರಾಜನೂ ಮತ್ತು ಒಡೆಯನೂ ಆದ ನಿನ್ನನ್ನು ಈ ಕರ್ಮನಿಮಿತ್ತವಾಗಿ ಕರೆಯುತ್ತೇವೆ. ನಮ್ಮ ಸ್ತುತಿಗಳನ್ನು ಕೇಳುತ್ತಾ ನಿನ್ನ ರಕ್ಷಣೆಗಳೊಡನೆ ಯಜ್ಞಗೃಹಕ್ಕೆ ಬಂದು ಕುಳಿತುಕೊ.
(ಪ್ರತಿಬಾರಿಯು ೧೦ ರಿಂದ ೨೦ ಸೆಕೆಂಡ್ ಸೋಮರಸವನ್ನು ಕುಡಿಯಲು ವೇಳೆಯನ್ನು ಕೊಡಿ. ಸೋಮರಸ ಪಾನಮಾಡಿದ ನಂತರ ಮತ್ತೆ ಎರಡನೆಯ ಬಾರಿ 'ಬ್ರಹ್ಮಣಸ್ಪತೇ ಇದಂ ನ ಮಮ' ಎಂದು ಹೇಳಬೇಕು.)

## ಸರಸ್ವತಿ ದೇವತೆ (೧-೩-೧೦ – ೧-೩-೧೨)

**ಓಂ ಸರಸ್ವತಿದೇವ್ಯೈ ನಮಃ** (ಸರಸ್ವತಿಮಾತೆಯನ್ನು ಆವಾಹನೆ ಮಾಡಿ ಪಾದಪೂಜೆ ಮಾಡಿ ನಂತರ ಕೆಳಗಿನ ಮಂತ್ರವನ್ನು ಹೇಳಿ ಸೋಮರಸವನ್ನು ಅರ್ಪಿಸಿ.)
ಓಂ ಪಾವಕಾ ನಃ ಸರಸ್ವತೀ ವಾಜೇಭಿರ್ವಾಜಿನೀವತೀ।
ಯಜ್ಞಂ ವಷ್ಟು ಧಿಯಾವಸುಃ ಸ್ವಾಹಾ; ಸರಸ್ವತ್ಯೈ ಇದಮ್ ನ ಮಮ ॥
ಸರಸ್ವತೀದೇವಿಯು ನಮ್ಮನ್ನು ಪವಿತ್ರಗೊಳಿಸುವಳು; ಯಜ್ಞಾದಿಗಳಿಂದ ಆರಾಧನೆ ಮಾಡುವ ಜನರಿಗೆ ಆತ್ಮೋತ್ಕರ್ಷಕ್ಕೆ ಸಾಧಕವಾದ ಪ್ರಜ್ಞಾಕರ್ಮಗಳನ್ನು ನೆಲೆಗೊಳಿಸುವಳು. ಆಕೆಯು ನಮ್ಮ ಯಜ್ಞಕರ್ಮಗಳನ್ನು ಆಪೇಕ್ಷಿಸಲಿ/ಎತ್ತಿ ಹಿಡಿಯಲಿ.
(ಸೋಮರಸವನ್ನು ಪಾನಮಾಡುವಾಗ ಮತ್ತೆ ಅದೇ ಮಂತ್ರವನ್ನು ಹೇಳಿ. ದೇವತೆಗಳು ಸೋಮರಸವನ್ನು ಪಾನಮಾಡುವಾಗ ಅವರು ಹೊಗಳಿಕೆಯನ್ನು ಇಷ್ಟಪಡುತ್ತಾರೆ.)

ಚೋದಯಿತ್ರೀ ಸೂನೃತಾನಾಂ ಚೇತಂತೀ ಸುಮತೀನಾಮ್ ।
ಯಜ್ಞಂ ದಧೇ ಸರಸ್ವತೀ ಸ್ವಾಹಾ; ಸರಸ್ವತ್ಯೈ ಇದಮ್ ನ ಮಮ ॥
ನಾವು ಸ್ತೋತ್ರಮಾಡುವ ಸರಸ್ವತೀದೇವಿಯು ಮನಷ್ಯರನ್ನು ಪ್ರಿಯವಾದ ಮತ್ತು ಸತ್ಯವಾದ ಮಾತುಗಳನ್ನಾಡುವಂತೆ ಪ್ರೇರಿಸುವಳು ಮತ್ತು ಸದ್ಬುದ್ಧಿಯುಳ್ಳ ಜನರನ್ನು ಸತ್ಕಾರ್ಯ ಮಾಡುವುದರಲ್ಲಿ ಜ್ಞಾಪಕಮಾಡಿ ಸಹಾಯ ಮಾಡುವಳು. ಇಂತಹ ಸರಸ್ವತಿಯು ನಾವು ಮಾಡುವ ಯಜ್ಞವನ್ನು ನಿರ್ವಿಘ್ನವಾಗಿ ನೆರವೇರುವಂತೆ ಮಾಡಲಿ.

ಮಹೋ ಅರ್ಣಃ ಸರಸ್ವತೀ ಪ್ರ ಚೇತಯತಿ ಕೇತುನಾ ।
ಧಿಯೋ ವಿಶ್ವಾ ವಿ ರಾಜತಿ ಸ್ವಾಹಾ; ಸರಸ್ವತ್ಯೈ ಇದಮ್ ನ ಮಮ ।
ಜ್ಞಾನಮಯಿಯಾದ ಸರಸ್ವತಿಯು ಅಪಾರವಾದ ಜಲರಾಶಿಯಂತಿರುವ ವಿದ್ಯಾಸಮೂಹವನ್ನು ಉತ್ಕೃಷ್ಟ ರೀತಿಯಲ್ಲಿ ನಮ್ಮ ಅರಿವಿಗೆ ತರುತ್ತಾಳೆ/ಜ್ಞಾಪಿಸುತ್ತಾಳೆ. ಸಮಸ್ತ ಪ್ರಜ್ಞಾಕರ್ಮಗಳನ್ನು ವಿಶೇಷವಾಗಿ ಪ್ರಕಾಶಪಡಿಸುತ್ತಾಳೆ.

(ಪ್ರತಿಬಾರಿಯು ೧೦ ರಿಂದ ೨೦ ಸೆಕೆಂಡ್ ಸೋಮರಸವನ್ನು ಕುಡಿಯಲು ವೇಳೆಯನ್ನು ಕೊಡಿ. ಸೋಮರಸ ಪಾನಮಾಡಿದ ನಂತರ ಮತ್ತೆ ಎರಡನೆಯ ಬಾರಿ 'ಸರಸ್ವತ್ಯೈ ಇದಂ ನ ಮಮ' ಎಂದು ಹೇಳಬೇಕು.)

## ಸರಸ್ವತೀ, ಮಹಿ, ಭಾರತೀ ಮತ್ತು ಇಳಾದೇವಿಯರು (೩ ಸಾರಿ) (೧-೧೪೨-೯)

**ಓಂ ವಾಗ್ದೇವತಾಯ್ಯೆ ನಮಃ** (ವಾಗ್ದೇವತೆಯರು ಕಮಲದ ಮೇಲೆ ಕುಳಿತಿರುವರು. ಅವರನ್ನು ಆವಾಹನೆ ಮಾಡಿ ಪಾದಪೂಜೆ ಮಾಡಿ ನಂತರ ಕೆಳಗಿನ  ಮಂತ್ರವನ್ನು ೩ ಬಾರಿ ಮಂತ್ರವನ್ನು ಹೇಳಿ ಸೋಮರಸವನ್ನು ಅರ್ಪಿಸಿ.)

ಓಂ ಶುಚಿರ್ದೇವೇಷ್ವರ್ಪಿತಾ ಹೋತ್ರಾ ಮರುತ್ಸು ಭಾರತೀ।
ಇಳಾ ಸರಸ್ವತೀ ಮಹಿ ಬರ್ಹಿಃ ಸೀದಂತು ಯಜ್ಞಿಯಾಂ ಸ್ವಾಹಾ; ವಾಗ್ದೇವತಾಯ್ಯೆ ಇದಮ್ ನ ಮಮ ।।
ಪರಿಶುದ್ಧರೂ, ಪ್ರಕಾಶಮಾನರೂ ಮತ್ತು ಹೋತೃಗಳಿಂದ ನಿವೇದಿಸಲ್ಪಟ್ಟವರೂ ಆದ ಸರಸ್ವತೀ, ಮಹಿ, ಭಾರ'ತೀ ಮತ್ತು ಇಳಾದೇವಿಯರು ಮರುತ್ತರಲ್ಲಿ ಸ್ಥಾಪಿತವಾಗಿರುವವರು. ಈ ನಾಲ್ಕೂ ಸ್ಥಾನಗಳ ವಾಗಭಿಮಾನದೇವತೆಗಳೂ ಸಹ ಯಜ್ಞಕ್ಕೆ ಯೋಗ್ಯರಾಗಿ ಬಂದು ನಮ್ಮ ಯಜ್ಞಗೃಹದ ದರ್ಭಾಸನದ ಮೇಲೆ ಕುಳಿತುಕೊಳ್ಳಲಿ.
(ಸೋಮರಸವನ್ನು ಪಾನಮಾಡುವಾಗ ಮತ್ತೆ ಅದೇ ಮಂತ್ರವನ್ನು ಹೇಳಿ. ದೇವತೆಗಳು ಸೋಮರಸವನ್ನು ಪಾನಮಾಡುವಾಗ ಅವರು ಹೊಗಳಿಕೆಯನ್ನು ಇಷ್ಟಪಡುತ್ತಾರೆ.)
(ಪ್ರತಿಬಾರಿಯು ೧೦ ರಿಂದ ೨೦ ಸೆಕೆಂಡ್ ಸೋಮರಸವನ್ನು ಕುಡಿಯಲು ವೇಳೆಯನ್ನು ಕೊಡಿ. ಸೋಮರಸ ಪಾನಮಾಡಿದ ನಂತರ ಮತ್ತೆ ಎರಡನೆಯ ಬಾರಿ 'ವಾಗ್ದೇವತಾಯ್ಯೆ ಇದಂ ನ ಮಮ' ಎಂದು ಹೇಳಬೇಕು.)

## ಅಶ್ವಿನೀ ದೇವತಾ (೧-೩-೧ - ೧-೩-೩) (ಆವಾಹನ ಮಂತ್ರಗಳನ್ನು ಹೇಳಿ)

**ಓಂ ಅಶ್ವಿನಿದೇವತಾಯ್ಯೆ ನಮಃ** (ಅಶ್ವಿನೀದೇವತೆಯರನ್ನು ಆವಾಹನೆ ಮಾಡಿ ಪಾದಪೂಜೆ ಮಾಡಿ ನಂತರ ಕೆಳಗಿನ ಮಂತ್ರವನ್ನು ಹೇಳಿ ಸೋಮರಸವನ್ನು ಅರ್ಪಿಸಿ.)
ಓಂ ಅಶ್ವಿನಾ ಯಜ್ವರೀರಿಷೋ ದ್ರವತ್ಪಾಣೀ ಶುಭಸ್ಪತೀ।
ಪುರುಭುಜಾ ಚನಸ್ಯತಮ್ ಸ್ವಾಹಾ; ಅಶ್ವಿನ್ಯೆ ಇದಮ್ ನ ಮಮ ।।
ಎಲೈ ಅಶ್ವಿನೀದೇವತೆಗಳೇ, ನೀವು ಯಜ್ಞಕಾರ್ಯಗಳನ್ನು ನಿರ್ವಿಘ್ನವಾಗಿ ಮುನ್ನೆಡೆಸುವವರು. ಕ್ಷಿಪ್ರವಾಗಿ ಕಾರ್ಯಸಾಧಿಸುವ ಕೈಗಳುಳ್ಳವರು, ಶುಭವಾದುದನ್ನು ರಕ್ಷಿಸುವವರು, ನೀವು ಆಜಾನುಬಾಹುಗಳುಳ್ಳವರು. ಈಗ ನಾವು ಸಿದ್ಧಪಡಿಸಿರುವ ಹವಿಸ್ಸನ್ನು ಸೇವಿಸಿರಿ.
(ಸೋಮರಸವನ್ನು ಪಾನಮಾಡುವಾಗ ಮತ್ತೆ ಅದೇ ಮಂತ್ರವನ್ನು ಹೇಳಿ. ದೇವತೆಗಳು ಸೋಮರಸವನ್ನು ಪಾನಮಾಡುವಾಗ ಅವರು ಹೊಗಳಿಕೆಯನ್ನು ಇಷ್ಟಪಡುತ್ತಾರೆ.)

ಅಶ್ವಿನಾ ಪುರುದಂಸಸಾ ನರಾ ಶವೀರಯಾ ಧಿಯಾ।
ಧಿಷ್ಣ್ಯಾ ವನತಂ ಗಿರಃ ಸ್ವಾಹಾ; ಅಶ್ವಿನ್ಯೆ ಇದಮ್ ನ ಮಮ ।।
ಎಲೈ ಅಶ್ವಿನೀದೇವತೆಗಳೇ, ನೀವು ಅನೇಕ ಸಾಹಸಕಾರ್ಯಗಳನ್ನು ಮಾಡುವುವರು; ಜನರಿಗೆ ಮಾರ್ಗದರ್ಶಕರು, ಆಲಸ್ಯರಹಿತರಾಗಿ ಪ್ರಜ್ಞಾಕರ್ಮಗಳನ್ನು ಮಾಡುವವರು. ಬುದ್ಧಿಪೂರ್ವಕವಾಗಿ ನಾವು ಮಾಡುವ ಸ್ತೋತ್ರರೂಪವಾದ ವಾಕ್ಯಗಳನ್ನು ಆದರ ಪೂರ್ವಕವಾಗಿ ಸ್ವೀಕರಿಸಿ.

ದಸ್ರಾ ಯುವಾಕವಃ ಸುತಾ ನಾಸತ್ಯಾ ವೃಕ್ತಬರ್ಹಿಷಃ।
ಆ ಯಾತಂ ರುದ್ರವರ್ತನೀ ಸ್ವಾಹಾ; ಅಶ್ವಿನ್ಯೆ ಇದಮ್ ನ ಮಮ ।।
ಎಲೈ ಅಶ್ವಿನೀದೇವತೆಗಳೇ, ನೀವು ಶತ್ರುಗಳನ್ನು/ರೋಗವನ್ನು ನಾಶಮಾಡುವವರು. ಅಸತ್ಯವನ್ನಾಡುವವರಲ್ಲ; ಯಾವಾಗಲೂ ವೀರರ ಮಾರ್ಗಾನುಸರಣೆಯನ್ನೇ ಮಾಡುವವರು. ಅಂತಹ ನೀವು ನಿಮಗಾಗಿ ನಾವು ಸಿದ್ಧಪಡಿಸಿರುವ ಬರ್ಹಿಸ್ಸಿನ (ದರ್ಭೆ) ಮೇಲೆ ಇಟ್ಟಿರುವ ಸೋಮರಸವನ್ನು ಪಾನಮಾಡುವುದಕ್ಕಾಗಿ ಈ ನಮ್ಮ ಯಜ್ಞಕ್ಕೆ ಬನ್ನಿ.
(ಪ್ರತಿಬಾರಿಯು ೧೦ ರಿಂದ ೨೦ ಸೆಕೆಂಡ್ ಸೋಮರಸವನ್ನು ಕುಡಿಯಲು ವೇಳೆಯನ್ನು ಕೊಡಿ. ಸೋಮರಸ ಪಾನಮಾಡಿದ ನಂತರ ಮತ್ತೆ ಎರಡನೆಯ ಬಾರಿ 'ಅಶ್ವಿನ್ಯೆ ಇದಂ ನ ಮಮ' ಎಂದು ಹೇಳಬೇಕು.)

**ಉಷಸ್ ದೇವತೆ** (೧-೩೦-೨೦ ರಿಂದ ೧-೩೦-೨೨) **(ಆವಾಹನ ಮಂತ್ರಗಳನ್ನು ಹೇಳಿ)**

**ಓಂ ಉಷಸ್ ದೇವ್ಯೈ ನಮಃ** (ಉಷಸ್ ದೇವತೆಯನ್ನು ಆವಾಹನೆ ಮಾಡಿ ಪಾದಪೂಜೆ ಮಾಡಿ ನಂತರ ಕೆಳಗಿನ ಮಂತ್ರವನ್ನು ಹೇಳಿ ಸೋಮರಸವನ್ನು ಅರ್ಪಿಸಿ.)

ಓಂ ಕಸ್ತ ಉಷಃ ಕಧಪ್ರಿಯೇ ಭುಜೇ ಮರ್ತೋ ಅಮರ್ತ್ಯೇ।
ಕಂ ನಕ್ಷಸೇ ವಿಭಾವರಿ ಸ್ವಾಹಾ; ಉಷಸ್‌ದೇವ್ಯೈ ಇದಮ್ ನ ಮಮ ।।
ಸ್ತುತಿಪ್ರಿಯಳೂ ಮತ್ತು ಮರಣರಹಿತಳೂ ಆದ ಎಲೈ ಉಷೋದೇವಿಯೇ, ನಿನ್ನ ಭೋಗಕ್ಕಾಗಿ ಮಾನವನಾದವನು ಯಾವನು ತಾನೇ ಇದ್ದಾನೆ? ವಿಶೇಷಪ್ರಭಾವದಿಂದ ಕೂಡಿದ ಉಷೋದೇವಿಯೇ, ನೀನು ಯಾವ ಪುರುಷನನ್ನು ತಾನೇ ಸೇರುತ್ತೀಯೆ? (ಯಾಕೆಂದರೆ ನಿನ್ನ ಆಗಮನದಿಂದ ಈವರೆಗೂ ಮುಚ್ಚಿರುವ ಸಕಲ ದೈವೀ ದ್ವಾರಗಳು ತೆರೆಯಲ್ಪಡುತ್ತದೆ)
(ಸೋಮರಸವನ್ನು ಪಾನಮಾಡುವಾಗ ಮತ್ತೆ ಅದೇ ಮಂತ್ರವನ್ನು ಹೇಳಿ. ದೇವತೆಗಳು ಸೋಮರಸವನ್ನು ಪಾನಮಾಡುವಾಗ ಅವರು ಹೊಗಳಿಕೆಯನ್ನು ಇಷ್ಟಪಡುತ್ತಾರೆ.)

ವಯಂ ಹಿ ತೇ ಅಮನ್ಮಹ್ಯಾನ್ತಾದಾ ಪರಾಕಾತ್।
ಅಶ್ವೇ ನ ಚಿತ್ರೇ ಅರುಷಿ ಸ್ವಾಹಾ; ಉಷಸ್‌ದೇವ್ಯೈ ಇದಮ್ ನ ಮಮ ।।
ವಿಸ್ತಾರವಾದ ವ್ಯಾಪ್ತಿಯುಳ್ಳವಳು ನಾನಾವಿಧವಾದ ಛಾಯೆಯುಳ್ಳವಳೂ ಮತ್ತು ಪ್ರಕಾಶಮಾನಳೂ ಆದ ಎಲೈ ಉಷೋದೇವಿಯೇ, ನಿನ್ನ ಮಹಿಮೆಯು ಅಪಾರವಾದುದು. ನಮ್ಮ ಹತ್ತಿರದಲ್ಲಿರುವ ನಿನ್ನ ಸ್ವರೂಪದಿಂದಾಗಲಿ, ದೂರದಲ್ಲಿರುವದಿಂದಾಗಲಿ ನಿನ್ನ ಮಹಿಮೆಯನ್ನು ಸರಿಯಾಗಿ ತಿಳಿಯಲು ಮಾನವರಾದ ನಾವು ಅಶಕ್ತರಾಗಿದ್ದೇವೆ.

ತ್ವಂ ತ್ಯೇಭಿರಾ ಗಹಿ ವಾಜೇಭಿರ್ದುಹಿತರ್ದಿವಃ।
ಅಸ್ಮೇ ರಯಿಂ ನಿ ಧಾರಯ ಸ್ವಾಹಾ; ಉಷಸ್‌ದೇವ್ಯೈ ಇದಮ್ ನ ಮಮ ।।
ದ್ಯುಲೋಕಾಧಿದೇವತೆಯ ಪುತ್ರಿಯಾದ ಎಲೈ ಉಷೋದೇವಿಯೇ, ನೀನು ಆ ಅನಂತವಾದ ಅನುಗ್ರಹದೊಂದಿಗೆ ಇಲ್ಲಿಗೆ ದಯಮಾಡು ಮತ್ತು ನಮ್ಮಲ್ಲಿ ದೈವೀಕ ಧನವನ್ನು ಶಾಶ್ವತವಾಗಿ ವೃದ್ಧಿಯಾಗುವಂತೆ ಮಾಡು.
(ಪ್ರತಿಬಾರಿಯು ೧೦ ರಿಂದ ೨೦ ಸೆಕೆಂಡ್ ಸೋಮರಸವನ್ನು ಕುಡಿಯಲು ವೇಳೆಯನ್ನು ಕೊಡಿ. ಸೋಮರಸ ಪಾನಮಾಡಿದ ನಂತರ ಮತ್ತೆ ಎರಡನೆಯ ಬಾರಿ 'ಉಷಸ್‌ದೇವ್ಯೈ ಇದಂ ನ ಮಮ' ಎಂದು ಹೇಳಬೇಕು.)

**ಋಭು ದೇವತೆಗಳು** (೧-೨೦-೧ – ೧-೨೦-೭)

**ಓಂ ಋಭು ದೇವತಾಯ್ಯೈನಮಃ** (ಋಭು, ವಾಜ, ವಿಭು ನಾಮಕ ಋಭು ದೇವತೆಗಳನ್ನು ಆವಾಹನೆ ಮಾಡಿ ಪಾದಪೂಜೆ ಮಾಡಿ ನಂತರ ಕೆಳಗಿನ ಮಂತ್ರವನ್ನು ಹೇಳಿ ಸೋಮರಸವನ್ನು ಅರ್ಪಿಸಿ.)

ಓಂ ಅಯಂ ದೇವಾಯ ಜನ್ಮನೇ ಸ್ತೋಮೋ ವಿಪ್ರೇಭಿರಾಸಯಾ।
ಅಕಾರಿ ರತ್ನಧಾತಮಃ ಸ್ವಾಹಾ; ಋಭುದೇವತಾಯ್ಯೈ ಇದಮ್ ನ ಮಮ ।।
ಋಷಿಗಳ ಶರೀರದಲ್ಲಿ ಜನ್ಮತಾಳುವ ಈ ಋಭುದೇವತೆಗಳನ್ನುದ್ದೇಶಿಸಿ ಬುದ್ಧಿವಂತರಾದ ಋತ್ವಿಜರಾದಿ ಜನರು ಈ ಸ್ತೋತ್ರವನ್ನು ತಮ್ಮ ಮುಖದಿಂದ (ಬಾಯಿನಿಂದ) ಮಾಡಿರುವರು. ಈ ಸ್ತೋತ್ರವು ಋಭುದೇವತೆಗಳ ಅನುಗ್ರಹದಿಂದ (ಮಾನವರಲ್ಲಿ) ಉತ್ತಮವಾದ ಅತ್ಯಾನಂದವನ್ನು ಉಂಟುಮಾಡುವುದಾಗಿದೆ.
(ಸೋಮರಸವನ್ನು ಪಾನಮಾಡುವಾಗ ಕೆಳಗಿನ ಮಂತ್ರವನ್ನು ಹೇಳಿ. ದೇವತೆಗಳು ಸೋಮರಸವನ್ನು ಪಾನಮಾಡುವಾಗ ಅವರು ಹೊಗಳಿಕೆಯನ್ನು ಇಷ್ಟಪಡುತ್ತಾರೆ.)
೧. ಯ ಇಂದ್ರಾಯ ವಚೋಯುಜಾ ತತಕ್ಷುರ್ಮನಸಾಹರೀ। ಶಮೀಭಿರ್ಯಜ್ಞಮಾಶತ ।।
ಈ ಋಭುಗಳು ಇಂದ್ರನ ರಥದ ಹರೀ ಎಂಬ ಸುಶಿಕ್ಷಿತವಾದ ಎರಡು ಅಶ್ವಗಳನ್ನು ಅವನ ಪ್ರಿತ್ಯರ್ಥವಾಗಿ ಮನಸ್ಸಂಕಲ್ಪ ಮಾತ್ರದಿಂದಲೇ ಸಂಪಾದಿಸಿಕೊಟ್ಟರು. ಅಂತಹ ಋಭುಗಳು ನಮ್ಮ ಯಜ್ಞಕ್ಕೂ (ಗ್ರಹ ಚಮಸಾದಿ) ಯಜ್ಞಸಾಧನಗಳನ್ನು ಒದಗಿಸಲಿ.
೨. ತಕ್ಷನ್ ನಾಸತ್ಯಾಭ್ಯಾಂ ಪರಿಜ್ಮಾನಂ ಸುಖಂ ರಥಂ। ತಕ್ಷನ್ಧೇನುಂ ಸಬರ್ದುಘಾಂ ।।

ಈ ಋಭುದೇವತೆಗಳು ತಮ್ಮ ಸಾಮರ್ಥ್ಯದಿಂದ ಅಶ್ವಿನೀದೇವತೆಗಳಿಗೆ ಎಲ್ಲೆಡೆಗಳಲ್ಲಿ ಸಂಚಾರಮಾಡಬಲ್ಲ ಸುಖಕರವಾದ ರಥವೊಂದನ್ನೂ, ಒಳ್ಳೆಯ ಹಾಲುಕೊಡುವ ಹಸು ಒಂದನ್ನೂ ಸಂಪಾದಿಸಿಕೊಟ್ಟರು.

ಯುವಾನಾ ಪಿತರಾ ಪುನಃ ಸತ್ಯಮಂತ್ರಾ ಋಜೂಯವಃ।
ಋಭವೋ ವಿಷ್ಟ್ಯಕೃತ ಸ್ವಾಹಾ; ಋಭುದೇವತಾಯ್ಯೈ ಇದಮ್ ನ ಮಮ ।।
ಋಭುಗಳು ಸನ್ಮಾರ್ಗದಲ್ಲಿಯೇ ಹೋಗುವವರು. ಆದ್ದರಿಂದಲೇ ಅವರ ಮಂತ್ರಗಳು ಯಾವಾಗಲು ವ್ಯರ್ಥವಾಗತಕ್ಕುವಲ್ಲ ಮತ್ತು ಸಫಲವೇ ಆಗುತ್ತದೆ. ಇಂತಹ ತಮ್ಮ ಮಂತ್ರಸಾಮರ್ಥ್ಯದಿಂದ ವೃದ್ಧಮಾತಾಪಿತೃಗಳನ್ನು ಯೌವನವಂತರನ್ನಾಗಿ ಮಾಡಿದರು.
೧. ಸಂ ವೋ ಮದಾಸೋ ಅಗ್ಮತೇಂದ್ರೇಣ ಚ ಮರುತ್ವತಾ। ಆದಿತ್ಯೇಭಿಶ್ಚ ರಾಜಭಿಃ ।।
ಎಲೈ ಋಭುದೇವತೆಗಳೇ, ಇಂದ್ರ, ಮರುತ್ತುಗಳು, ಜಾಜ್ವಲ್ಯಮಾನನಾದ ಆದಿತ್ಯರು, ಇವರುಗಳಿಂದ ಯುಕ್ತರಾದ ನಿಮಗಾಗಿ, ಮಧವನ್ನುಂಟುಮಾಡುವ ಸೋಮರಸವು ಸಿದ್ಧಪಡಿಸಲ್ಪಟ್ಟಿದೆ.

ಉತ ತ್ಯಂ ಚಮಸಂ ನವಂ ತ್ವಷ್ಟುರ್ದೇವಸ್ಯ ನಿಷ್ಕೃತಂ।
ಅಕರ್ತ ಚತುರಃ ಪುನಃ ಸ್ವಾಹಾ; ಋಭುದೇವತಾಯ್ಯೈ ಇದಮ್ ನ ಮಮ ।।
ತ್ವಷ್ಟೃದೇವತೆಯು ಚಮಸವೆಂಬ ಒಂದು ಕಾಷ್ಠಪಾತ್ರೆಯನ್ನು ಮಾತ್ರ ನಿರ್ಮಿಸಿದನು. ಅದನ್ನು ಋಭುಗಳು ತಮ್ಮ ಸಾಮರ್ಥ್ಯದಿಂದ ನಾಲ್ಕಾಗಿ ಮಾಡಿ ಅನುಕೂಲಮಾಡಿಕೊಟ್ಟರು.
೧. ತೇ ನೋ ರತ್ನಾನಿ ಧತ್ತನ ತ್ರಿರಾ ಸಾಪ್ತಾನಿ ಸುನ್ವತೇ। ಏಕಂಮೇಕಂ ಸುಶಸ್ತಿಭಿಃ।।
ನಮ್ಮ ಸ್ತೋತ್ರಗಳಿಂದ ತೃಪ್ತರಾದ ಋಭುಗಳು ಸೋಮರಸವನ್ನು ಸಿದ್ಧಪಡಿಸಿ ಕೊಡುವ ಯಜಮಾನನಿಗೆ ಉತ್ತಮ, ಮಧ್ಯಮ ಮತ್ತು ಅಧಮಗಳೆಂಬ ಮೂರು ವಿಧವಾದ ರತ್ನಗಳನ್ನೂ (ಶರೀರಗಳನ್ನು), ಒಂದೊಂದರಲ್ಲಿಯೂ ಏಳೇಳು ಕರ್ಮಗಳುಳ್ಳ ತ್ರಿವರ್ಗಗಳನ್ನೂ ಒಂದೊಂದನ್ನಾಗಿ ಅನುಗ್ರಹಿಸಲಿ. (ಕಾರಣಶರೀರ, ಸೂಕ್ಷ್ಮ ಶರೀರ ಮತ್ತು ಸ್ಥೂಲ ಶರೀರ)
(ಪ್ರತಿಬಾರಿಯು ೧೦ ರಿಂದ ೨೦ ಸೆಕೆಂಡ್ ಸೋಮರಸವನ್ನು ಕುಡಿಯಲು ವೇಳೆಯನ್ನು ಕೊಡಿ. ಸೋಮರಸ ಪಾನಮಾಡಿದ ನಂತರ ಮತ್ತೆ ಎರಡನೆಯ ಬಾರಿ 'ಋಭುದೇವತಾಯ್ಯೈ ಇದಂ ನ ಮಮ' ಎಂದು ಹೇಳಬೇಕು.)

## ವಿಶ್ವೇದೇವಾಃ ದೇವತೆಗಳು (೧-೩-೭ – ೧-೩-೯)

**ಓಂ ವಿಶ್ವೇದೇವತಾಭ್ಯೋ ನಮಃ** (ವಿಶ್ವೇದೇವರ (ನಮಗೆ ಗೊತ್ತಿರುವ ಹಾಗೂ ಗೊತ್ತಿಲ್ಲದಿರುವ ಎಲ್ಲಾ ದೇವತೆಗಳನ್ನು ಆವಾಹನೆ ಮತ್ತು ಪಾದಪೂಜೆ ಮಾಡಿ. ನಂತರ ಕೆಳಗಿನ ಸ್ತೋತ್ರ ಹೇಳಿ ಸೋಮರಸವನ್ನು ಅರ್ಪಿಸಿ.)

ಓಂ ಓಮಾಸಶ್ಚರ್ಷಣೀಧೃತೋ ವಿಶ್ವೇ ದೇವಾಸ ಆಗತ ।
ದಾಶ್ವಾಂಸೋ ದಾಶುಷಃ ಸುತಮ್ ಸ್ವಾಹಾ; ವಿಶ್ವೇದೇವಾಹದೇವತಾಭ್ಯೋ ಇದಮ್ ನ ಮಮ ।।
ಎಲೈ ವಿಶ್ವೇದೇವತೆಗಳೇ, ನೀವು ಯಜ್ಞಮಾಡತಕ್ಕವರನ್ನು ಸಂರಕ್ಷಿಸುವವರು ಮತ್ತು ಯಜ್ಞಕರ್ಮಗಳಿಗೆ ಫಲವನ್ನು ಕೊಟ್ಟು ಮನುಷ್ಯರನ್ನು ಪೋಷಿಸತಕ್ಕವರು. ಇಂತಹ ನೀವು ಯಜಮಾನನು ನಿಮಗಾಗಿ ಸಿದ್ಧಪಡಿಸಿರುವ ಸೋಮವನ್ನು ಪಾನಮಾಡುವುದಕ್ಕಾಗಿ ಇಲ್ಲಿಗೆ ಬನ್ನಿರಿ.
(ಸೋಮರಸವನ್ನು ಪಾನಮಾಡುವಾಗ ಮತ್ತೆ ಅದೇ ಮಂತ್ರವನ್ನು ಹೇಳಿ. ದೇವತೆಗಳು ಸೋಮರಸವನ್ನು ಪಾನಮಾಡುವಾಗ ಅವರು ಹೊಗಳಿಕೆಯನ್ನು ಇಷ್ಟಪಡುತ್ತಾರೆ.)

ವಿಶ್ವೇ ದೇವಾಸೋ ಅಪ್ತುರಃ ಸುತಮಾ ಗಂತ ತೂರ್ಣಯಃ ।
ಉಸ್ರಾ ಇವ ಸ್ವಸರಾಣಿ ಸ್ವಾಹಾ; ವಿಶ್ವೇದೇವಾಹದೇವತಾಭ್ಯೋ ಇದಮ್ ನ ಮಮ ।।
ಎಲೈ ವಿಶ್ವೇದೇವತೆಗಳೇ, ನೀವು ವೃಷ್ಟಿಪ್ರದರು, ನಿಮಗಾಗಿ ಸೋಮರಸವು ಸಿದ್ಧವಾಗಿರುವುದು ಅದನ್ನು ಪಾನಮಾಡು ವುದಕ್ಕಾಗಿ, ಸೂರ್ಯೋದಯವಾದ ಕೂಡಲೇ ಸೂರ್ಯರಶ್ಮಿಗಳು ನಮ್ಮನ್ನು ಬಂದು ಸೇರುವಂತೆ, ಬೇಗನೆ ಬನ್ನಿರಿ.

ವಿಶ್ವೇ ದೇವಾಸೋ ಅಸ್ರಿಧ ಏಹಿಮಾಯಾಸೋ ಅದ್ರುಹಃ ।
ಮೇಧಂ ಜುಷಂತ ವಹ್ನಯಃ ಸ್ವಾಹಾ; ವಿಶ್ವೇದೇವಾಹದೇವತಾಭ್ಯೋ ಇದಮ್ ನ ಮಮ ।।

ಎಲೈ ವಿಶ್ವೇದೇವತೆಗಳೇ, ನೀವು ಕ್ಷಯರಹಿತರು, ಎಲ್ಲಾ ವಿಷಯಗಳಲ್ಲಿಯೂ ಪೂರ್ಣವಾದ ಪ್ರಜ್ಞೆಯುಳ್ಳವರು. ನೀವು ಮತ್ತೊಬ್ಬರಿಗೆ ದ್ರೋಹವೆಣಿಸುವವರಲ್ಲ. ನಿಮ್ಮನ್ನು ಸ್ತೋತ್ರ ಮಾಡುವವರಿಗೆ ಜ್ಞಾನವೆಂಬ ಧನವನ್ನು ತಂದುಕೊಡುವರು. ಇಂತಹ ನೀವು ನಾವು ಕೊಡುವ ಯಜ್ಞಸಂಬಂಧವಾದ ಹವಿಸ್ಸನ್ನು ಸೇವಿಸಿರಿ.
(ಪ್ರತಿಬಾರಿಯು ೧೦ ರಿಂದ ೨೦ ಸೆಕೆಂಡ್ ಸೋಮರಸವನ್ನು ಕುಡಿಯಲು ವೇಳೆಯನ್ನು ಕೊಡಿ. ಸೋಮರಸ ಪಾನಮಾಡಿದ ನಂತರ ಮತ್ತೆ ಎರಡನೆಯ ಬಾರಿ 'ವಿಶ್ವೇದೇವಾಹದೇವತಾಭ್ಯೋ ಇದಂ ನ ಮಮ' ಎಂದು ಹೇಳಬೇಕು.)

# ವಿಶ್ವ ಸಾಮ್ರಾಟ್ ಇಂದ್ರ ಸ್ತೋತ್ರ

## ವೃತಾಸುರ ಸಂಹಾರ (೧-೩೨-೧ ರಿಂದ ೧೫)

**(ಇಂದ್ರನ ಜೊತೆಯಲ್ಲಿ ಸಕಲ ದೇವತೆಗಳೆಲ್ಲರೂ ಸೋಮಪಾನದಿಂದ ಆನಂದ ಮತ್ತು ಉತ್ಸಾಹದಿಂದಿರುವಾಗ ಇಂದ್ರನನ್ನು ಕುರಿತು ವೃತ್ರಾಸುರ ಸಂಹಾರದ ಮಹಿಮೆಯನ್ನು ಪಠಿಸಿರಿ.)**

ಓಂ ಇಂದ್ರಸ್ಯ ನು ವೀರ್ಯಾಣಿ ಪ್ರ ವೋಚಂ ಯಾನಿ ಚಕಾರ ಪ್ರಥಮಾನಿ ವಜ್ರೀ।
ಅಹನ್ನಹಿಮನ್ವಪಸ್ತತರ್ದ ಪ್ರ ವಕ್ಷಣಾ ಅಭಿನತ್ ಪರ್ವತಾನಮ್॥
ವಜ್ರಾಯುಧ ಯುಕ್ತನಾದ ಇಂದ್ರನು ಹಿಂದೆ ಯಾವ ಯಾವ ಪರಾಕ್ರಮದ ಕಾರ್ಯಗಳನ್ನು ಸಾಧಿಸಿದನೋ ಆ ಪರಾಕ್ರಮದ ಕಾರ್ಯಗಳನ್ನೆಲ್ಲಾ ಒಂದೊಂದಾಗಿ ವರ್ಣಿಸಿ ಒಡನೆಯೇ ಹೇಳುತ್ತೇನೆ. ಇಂದ್ರನು ಸರ್ಪರೂಪವಾದ 'ಅಹಿ' ಎಂಬ ಅಸುರನನ್ನು ಸೀಳಿದನು. ಆನಂತರ ನೀರುಗಳನ್ನು (ಉದಕ/ಸಲಿಲ) ಹಿಂಸಿಸಿದನು ಮತ್ತು ಪರ್ವತಗಳಲ್ಲಿ ಪ್ರವಹಿಸುವ ನದಿಗಳಂತೆ ತೂತನ್ನು ಕೊರೆದು ನೀರನ್ನು ಹರಿಯುವಂತೆ ಮಾಡಿದನು.

ಅಹನ್ನಹಿಂ ಪರ್ವತೇ ಶಿಶ್ರಿಯಾಣಂ ತ್ವಷ್ಟಾಸ್ಮೈ ವಜ್ರಂ ಸ್ವರ್ಯಂ ತತಕ್ಷ।
ವಾಶ್ರಾ ಇವ ಧೇನವಃ ಸ್ಯಂದಮಾನಾ ಅಂಜಃ ಸಮುದ್ರಮವ ಜಗ್ಮುರಾಪಃ॥
ತ್ವಷ್ಟೃ ಪ್ರಜಾಪತಿಯು ವೇಗವಾದ ಗಮನವುಳ್ಳ ವಜ್ರಾಯುಧವನ್ನು ಇಂದ್ರನಿಗಾಗಿ ಮಾಡಿಕೊಟ್ಟನು. ಇಂದ್ರನು ಆ ವಜ್ರಾಯುಧದಿಂದ ಪರ್ವತದಲ್ಲಿ ಆಶ್ರಯವನ್ನು ಪಡೆದ ಸರ್ಪರೂಪವನ್ನು ಧರಿಸಿದ ಅಹಿ ಎಂಬ ಅಸುರನನ್ನು ಸೀಳಿದನು. ಆನಂತರ ನೀರು (ಸಪ್ತನದಿಗಳು) ಪ್ರವಾಹರೂಪದಿಂದ ಹರಿಯುತ್ತಾ, ಹಸುಗಳು ಆದರದಿಂದ ತಮ್ಮ ಕರುಗಳನ್ನು ವೇಗವಾಗಿ ಹೋಗಿ ಅವನ್ನು ಸೇರುವಂತೆ, ಸಮುದ್ರವನ್ನು ಜಾಗ್ರತೆಯಾಗಿ ಹೋಗಿ ಸೇರಿಕೊಂಡವು.

ವೃಷಾಯಮಾಣೋ ಅವೃಣೀತ ಸೋಮಂ ತ್ರಿಕದ್ರುಕೇಷ್ವಪಿಬತ್ ಸುತಸ್ಯ।
ಆ ಸಾಯಕಂ ಮಘವಾದತ್ತ ವಜ್ರ-ಮಹನ್ನೇನಂ ಪ್ರಥಮಜಾಮಹೀನಾಮ್॥
ಇಂದ್ರನು ಗೂಳಿಯಂತೆ ಅವಸರದಿಂದ ಸೋಮರಸವನ್ನು ಗುಟುಕಿಸಿದನು (ಪಾನಮಾಡಿದನು). ಜ್ಯೋತಿ, ಗೌ ಮತ್ತು ಆಯು ಎಂಬ ಮೂರು ವಿಧವಾದ ಯಾಗಗಳಲ್ಲಿಯೂ ಹಿಂಡಿದ ಸೋಮರಸವನ್ನು ಕುಡಿದನು. ಧನವಂತನಾದ ಇಂದ್ರನು ವಜ್ರಾಯುಧವನ್ನು ಕೈಗೆ ಎತ್ತಿಕೊಂಡು ಅದರಿಂದ ಅಸುರರಲ್ಲಿ ಜ್ಯೇಷ್ಟನಾದ ಅಹಿಯನ್ನು ಸೀಳಿದನು."

ಯದಿಂದ್ರಾಹನ್ ಪ್ರಥಮಜಾಮಹೀನಾ-ಮಾನ್ಮಾಯಿನಾಮಮಿನಾಃ ಪ್ರೋತ ಮಾಯಾಃ।
ಅತ್ ಸೂರ್ಯಂ ಜನಯನ್ ದ್ಯಾಮುಷಾಸಂ ತಾದೀತ್ನಾ ಶತ್ರುಂ ನ ಕಿಲಾ ವಿವಿತ್ಸೇ॥
ಇಂದ್ರನೇ ಯಾವಾಗ ನೀನು ಅಸುರ ಜ್ಯೇಷ್ಟನಾದ ಅಹಿಯನ್ನು ಮೊದಲು ಕೊಂದೆಯೋ, ಆನಂತರ ವಂಚಕರಾದ ರಾಕ್ಷಸರ ಮಾಯೆಯಿಂದ ಕೂಡಿದ ಮೋಸಗಳನ್ನು ನಾಶಮಾಡಿದೆ. ಆನಂತರ ರಾಕ್ಷಸರ ಮಾಯೆಯಿಂದ ಮುಚ್ಚಿಹೋಗಿದ್ದ ಸೂರ್ಯನನ್ನು, ಉಷಸ್‌ನ್ನು, ದ್ಯುಲೋಕವನ್ನು ಪ್ರಕಾಶಿಸುವಂತೆ ಮಾಡಿದೆ. ಆಗ ನಿನ್ನನ್ನು ವಿರೋಧಿಸಿ ಲೋಕಕ್ಕೆ ಕತ್ತಲನ್ನುಂಟು ಮಾಡಿ ಹಿಂಸಿಸುವ ಶತ್ರುವೇ ನಿನಗೆ ಇರುವುದಿಲ್ಲ.

ಅಹನ್ ವೃತ್ರಂ ವೃತ್ರತರಂ ವ್ಯಂಸ-ಮಿಂದ್ರೋ ವಜ್ರೇಣ ಮಹತಾ ವಧೇನ।

ಸ್ಕಂಧಾಸೀವ ಕುಲಿಶೇನಾ ವಿವೃಕ್ಣಾ–ಹಿಃ ಶಯತ ಉಪಪೃಕ್ ಪೃಥಿವ್ಯಾಃ।।
ಕೊಡಲಿಯಿಂದ ಮರದ ಕೊಂಬೆಗಳನ್ನು ಕತ್ತರಿಸಿ ಕೆಳಕ್ಕೆ ಬೀಳಿಸುವಂತೆ, ಇಂದ್ರನು ತನ್ನ ವಜ್ರಾಯುಧದಿಂದ ಅತ್ಯಂತ ಅಂಧಕಾರರೂಪದಲ್ಲಿ ಲೋಕವನ್ನು ಆವರಿಸಿದ ವೃತಾಸುರನನ್ನು ಅವನ ತೋಳನ್ನು ಕತ್ತರಿಸಿ ಕೊಂದನು. ಆನಂತರ ವೃತನು ಕತ್ತರಿಸಿದ ಕೊಂಬೆಯಂತೆ ನಿರ್ಜೀವವಾಗಿ ಭೂಮಿಯ ಮೇಲೆ ಮಲಗಿದನು.

ಅಯೋದ್ಧೇವ ದುರ್ಮದ ಆ ಹಿ ಜುಹ್ವೇ ಮಹಾವೀರಂ ತುವಿಬಾಧಮೃಜೀಷಮ್।
ನಾತಾರೀದಸ್ಯ ಸಮೃತಿಂ ವಧಾನಾಂ ಸಂ ರುಜಾನಾಃ ಪಿಪಿಷ ಇಂದ್ರಶತ್ರುಃ।।
ದುರಭಿಮಾನದಿಂದ ಕೂಡಿದ ವೃತನು ತನಗೆ ಪ್ರತಿಕಕ್ಷಿಯಾದ ಯೋಧನೇ ಇಲ್ಲವೆಂಬ ಅಹಂಕಾರದಿಂದ ಶ್ರೇಷ್ಠನೂ ಶೌರ್ಯಯುಕ್ತನೂ ಅನೇಕ ಶತ್ರುಗಳನ್ನು ಹಿಂಸಿಸಿದವನೂ ಮತ್ತು ಶತ್ರುಗಳನ್ನು ದೂರಕ್ಕೆ ಓಡಿಸುವವನೂ ಆದ ಇಂದ್ರನನ್ನು ಯುದ್ಧಕ್ಕೆ ಕರೆದನಷ್ಟೆ. ಆಗ ಇಂದ್ರನ ಆ ವಧೆಯನ್ನು ವೃತನು ತಪ್ಪಿಸಿಕೊಳ್ಳಲಾಗಲಿಲ್ಲ. ಇಂದ್ರ ಶತ್ರುವಾದ ವೃತನು ನದಿಗಳನ್ನು ತಡೆದನು.

ಅಪಾದಹಸ್ತೋ ಅಪೃತನ್ಯದಿಂದ್ರ–ಮಾಸ್ಯ ವಜ್ರಮಧಿ ಸಾನೌ ಜಘಾನ।
ವೃಷ್ಣೋ ವಧ್ರಿಃ ಪ್ರತಿಮಾನಂ ಬುಭೂಷನ್ ಪುರುತ್ರಾ ವೃತ್ರೋ ಅಶಯದ್ ವ್ಯಸ್ತಃ।।
ವಜ್ರಾಯುಧದಿಂದ ಅವನ ಕೈಕಾಲುಗಳನ್ನು ಕತ್ತರಿಸಿದ ಮೇಲೂ ಸಹ ವೃತನು ಇಂದ್ರನನ್ನು ಎದುರಿಸಿ ಅವನ ಮೇಲೆ ಯುದ್ಧಮಾಡಲಿಚ್ಚಿಸಿದನು. ಕೈಕಾಲುಗಳಿಲ್ಲದ ಇಂತಹ ವೃತನ ಉನ್ನತವಾದ ಪರ್ವತ ಶಿಖರದಂತಿರುವ ಕತ್ತಿನ ಮೇಲೆ ಇಂದ್ರನು ವಜ್ರಾಯುಧವನ್ನು ಬೀಸಿ ಹೊಡೆದನು. ವೀರ್ಯವಿಲ್ಲದ ಪುರುಷನು, ವೀರ್ಯಸೇಚನ ಸಾಮರ್ಥ್ಯವಿರುವವನಂತೆ ವ್ಯವಹರಿಸಲು ಆಸೆಪಟ್ಟು, ಆ ಯೋಗ್ಯತೆ ಮಾತ್ರ ಇಲ್ಲದಿರುವಂತೆ, ವೃತನೂ ಕೂಡ ಬಿದ್ದು ಮಲಗಿದನು.

ನದಂ ನ ಭಿನ್ನಮಮುಯಾ ಶಯಾನಂ ಮನೋ ರುಹಾಣಾ ಅತಿ ಯಂತ್ಯಾಪಃ।
ಯಾಶ್ಚಿದ್ ವೃತ್ರೋ ಮಹಿನಾ ಪರ್ಯತಿಷ್ಠ–ತ್ತಾಸಾಮಹಿಃ ಪತ್ಸುತಃಶೀರ್ಬಭೂವ।।
ಈ ಭೂಮಿಯ ಮೇಲೆ ಸತ್ತು ಮಲಗಿದ ವೃತನನ್ನು, ಮನಸ್ಸನ್ನು ಆಕರ್ಷಿಸುವ ಉದಕಗಳು ನಾನಾ ಕಡೆ ಒಡೆದು ಹೋದ ದಡವುಳ್ಳ ನದಿಯಂತೆ ಸ್ವೇಚ್ಛೆಯಾಗಿಯೂ, ಪ್ರಭೂತವಾಗಿಯೂ ಅವನ ಮೇಲೆ ಹರಿದು ಹೋದವು. ವೃತನು ಬದುಕಿರುವಾಗ ತನ್ನ ಶಕ್ತಿಯಿಂದ ಸರ್ಪರೂಪವನ್ನು ಧರಿಸಿ ನೀರನ್ನು ಸುತ್ತಲೂ ತಡೆದು ನಿಂತಿದ್ದನೋ, ಈಗ ಅದೇ ನೀರಿನಡಿಯಲ್ಲಿ ಮಲಗಿಕೊಂಡವನಾಗಿ ಇದ್ದನು.

ನೀಚವಯಾ ಅಭವದ್ ವೃತ್ರಪುತ್ರೇ–ಂದ್ರೋ ಅಸ್ಯಾ ಅವ ವಧರ್ಜಭಾರ।
ಉತ್ತರಾ ಸೂರಧರಃ ಪುತ್ರ ಆಸೀದ್ ದಾನುಃ ಶಯೇ ಸಹವತ್ಸಾ ನ ಧೇನುಃ।।
ವೃತನನ್ನು ರಕ್ಷಿಸಲು ಅವನ ತಾಯಿಯು ವಜ್ರಾಯುಧದ ಏಟಿನಿಂದ ಮಗನನ್ನು ರಕ್ಷಿಸುವುದಕ್ಕೆ ಬಂದಳು. ಆಗ ಇಂದ್ರನು ಅವಳ ಶಕ್ತಿಯನ್ನು ಕುಗ್ಗಿಸಿ ಅವಳ ದೇಹದ ಕೆಳಭಾಗದಲ್ಲಿ ಬಲವಾಗಿ ಹೊಡೆದನು. ವಜ್ರಾಯುಧದಿಂದ ಅವಳನ್ನು ಹೊಡೆದ ಮೇಲೆ ತಾಯಿ ಮೇಲುಭಾಗಕ್ಕಾದಳು, ಮಗನು ಕೆಳಭಾಗಕ್ಕೆ ಸಿಕ್ಕಿ ಬಿದ್ದು ಮಲಗಿದನು. ಹಸುವು ಕರುವಿನೊಡನೆ ಸೇರಿ ಮಲಗುವ್ಂತೆ ತಾಯಿಯಾದ ದಾನು ಮಗನಾದ ವೃತನೊಡನೆ ಸೇರಿಕೊಂಡು ಮಲಗಿದಳು.

ಅತಿಷ್ಠಂತೀನಾಮನಿವೇಶನಾನಾಂ ಕಾಷ್ಠಾನಾಂ ಮಧ್ಯೇ ನಿಹಿತಂ ಶರೀರಮ್।
ವೃತ್ರಸ್ಯ ನಿಣ್ಯಂ ವಿ ಚರಂತ್ಯಾಪೋ ದೀರ್ಘಂ ತಮ ಆಶಯದಿಂದ್ರಶತ್ರುಃ।।
ವೃತಾಸುರನು ನೀರಿನಲ್ಲಿ ಮುಳುಗಿಹೋದುದರಿಂದ ಆತನ ಹೆಸರೇ ಗೊತ್ತಿಲ್ಲದಿರುವಂತೆ ಅವನ ಶರೀರದ ಮೇಲೆ ನೀರು ಹರಿದು ಹೋದವು. ಒಂದು ಕಡೆಯೂ ನಿಲ್ಲದೆ ಮತ್ತು ವಿಶ್ರಾಂತಿರಹಿತವಾಗಿ ಸರ್ವದಾ ಪ್ರವಹಿಸುತ್ತಿರುವ ಉದಕಗಳ ನಡುವೆ ಅವನ ದೇಹವು ಎಸೆಯಲ್ಪಟ್ಟಾಗ ಇಂದ್ರಶತ್ರುವಾದ ವೃತನು ಗಾಡಾಂಧ್ಕಾರವಾದ ಕತ್ತಲಿನಲ್ಲಿ ಮುಳುಗಿಹೋದನು.

ದಾಸಪತ್ನೀರಹಿಗೋಪಾ ಅತಿಷ್ಠನ್ ನಿರುದ್ಧಾ ಆಪಃ ಪಣಿನೇವ ಗಾವಃ।
ಅಪಾಂ ಬಿಲಮಪಿಹಿತಂ ಯದಾಸೀದ್ ವೃತ್ರಂ ಜಘನ್ವಾ ಅಪ ತದ್ ವವಾರ।।

ಲೋಕಹಿಂಸಕನಾದ ವೃತನು ಪತ್ನಿಯರ ರೂಪದಲ್ಲಿದ್ದ ಮತ್ತು ವೃತನನ್ನು ರಕ್ಷಕನನ್ನಾಗಿ ಉಳ್ಳ ಉದಕಗಳು ಪಣಿಯೆಂಬ ರಾಕ್ಷಸನಿಂದ ಹಸುಗಳು ತಡೆಯಲ್ಪಟ್ಟಂತೆ ಬಂಧಿತವಾಗಿ ನಿಂತುಕೊಂಡವು. ನೀರುಗಳ ಪ್ರವಾಹದ್ವಾರವಾದ ಬಿಲವನ್ನು ವೃತನು ಮುಚ್ಚಿದಾಗ ಇಂದ್ರನು ಅವನನ್ನು ಕೊಂದು ಆ ದ್ವಾರವನ್ನು ಬಿಡಿಸಿ ಪ್ರವಾಹಕ್ಕೆ ತಡೆಯಿಲ್ಲದಂತೆ ಮಾಡಿದನು.

ಅಶ್ವ್ಯೋ ವಾರೋ ಅಭವಸ್ತದಿಂದ್ರ ಸೃಕೇ ಯತ್ ತ್ವಾ ಪ್ರತ್ಯಹನ್ ದೇವ ಏಕಃ।
ಅಜಯೋ ಗಾ ಅಜಯಃ ಶೂರ ಸೋಮ–ಮವಾಸೃಜಃ ಸರ್ತವೇ ಸಪ್ತ ಸಿಂಧೂನ್।।
ಕುದುರೆಯು ಬಾಲದಿಂದ ಅನಾಯಾಸವಾಗಿ ನೊಣವನ್ನು ಓಡಿಸುವಂತೆ ನೀನು ವೃತನನ್ನು ಸುಲಭವಾಗಿ ನಾಶಮಾಡಿದೆ. ಅದ್ವಿತೀಯನಾದ ಇಂದ್ರನೇ, ನೀನು ಪ್ರಕಾಶವನ್ನು ಗೆದ್ದುಕೊಂಡೆ, ಸೋಮರಸವನ್ನು ಸಂಪಾದಿಸಿಕೊಂಡೆ, ಹಸುಗಳನ್ನು (ಜ್ಞಾನವನ್ನು) ಗೆದ್ದುಕೊಂಡೆ. ಸ‌ಪ್ತನದಿಗಳನ್ನು ಹರಿಯಲು ಬಿಟ್ಟೆ.

ನಾಸ್ಮೈ ವಿದ್ಯುನ್ನ ತನ್ಯತುಃ ಸಿಷೇಧ ನ ಯಾಂ ಮಿಹಮಕಿರದ್‌ಧ್ರಾದುನಿಂ ಚ।
ಇಂದ್ರಸ್ಯ ಯದ್ ಯುಯುಧಾತೇ ಅಹಿಶ್ಚೋ–ತಾಪರೀಭ್ಯೋ ಮಘವಾ ವಿ ಜಿಗ್ಯೇ।।
ಇಂದ್ರನಿಗೂ ವೃತನಿಗೂ ಹೋರಾಟವಾದಾಗ ವೃತನು ಇಂದ್ರನನ್ನು ಕೊಲ್ಲಲು ತನ್ನ ಆಯುಧವಾದ ಮಿಂಚನ್ನು ಪ್ರಯೋಗಿಸಿದನು, ಮಳೆಯನ್ನು ಸುರಿಸಿದನು. ಮೇಘದಂತೆ ಘರ್ಜಿಸಿದನು ಮತ್ತು ಸಿಡಿಲನ್ನು ಪ್ರಯೋಗಿಸಿದನು. ಆದರೆ ಇವು ಯಾವುವೂ ಇಂದ್ರನನ್ನು ಸಮೀಪಿಸಲಾಗಲಿಲ್ಲ. ಯಾವುದರಿಂದಲೂ ಅವನಿಗೆ ತೊಂದರೆಯಾಗಲಿಲ್ಲ. ಅಷ್ಟೇ ಅಲ್ಲದೆ ವೃತನ ಇತರ ಆಯುಧಗಳೊಡನೆಯೂ ಇಂದ್ರನು ಹೋರಾಡಿ ಸಂಪೂರ್ಣವಾಗಿ ಜಯಶೀಲನಾದನು.

ಅಹೇರ್ಯಾತಾರಂ ಕಮಪಶ್ಯ ಇಂದ್ರ ಹೃದಿ ಯತ್ ತೇ ಜಘ್ನುಷೋ ಭೀರಗಚ್ಛತ್।
ನವ ಚ ಯನ್ನವತಿಂ ಚ ಸ್ರವತೀಃ ಶ್ಯೇನೋ ನ ಭೀತೋ ಅತರೋ ರಜಾಂಸಿ।।
ಎಲೈ ಇಂದ್ರನೇ, ವೃತನನ್ನು ಕೊಲ್ಲಲು ಪ್ರಯತ್ನಿಸಿದ ನಿನ್ನ ಹೃದಯದಲ್ಲಿ ಭಯವುಂಟಾದಾಗ, ನೀನಲ್ಲದೇ ಇತರ ಯಾವನನ್ನು ತಾನೇ ವೃತಹಂತಕನೆಂದೆಣಿಸಿದೆ? ಯಾವ ಕಾರಣದಿಂದ ನೀನು ತೊಂಬತ್ತೊಂಬತ್ತು ಪ್ರವಾಹ ನದಿಗಳನ್ನು ಶ್ಯೇನ ಪಕ್ಷಿಯಂತೆ ವೇಗವಾಗಿ ಹೋಗಿ ಆ ನದಿಗಳನ್ನು ದಾಟಿದೆ.

ಇಂದ್ರೋ ಯಾತೋಽವಸಿತಸ್ಯ ರಾಜಾ ಶಮಸ್ಯ ಚ ಶೃಂಗಿಣೋ ವಜ್ರಬಾಹುಃ।
ಸೇದು ರಾಜಾ ಕ್ಷಯತಿ ಚರ್ಷಣೀನಾ–ಮರಾನ್ ನ ನೇಮಿಃ ಪರಿ ತಾ ಬಭೂವ।।
ವಜ್ರಭಾಹುವಾದ ಇಂದ್ರನು ಶತ್ರುನಾಶವಾದ ನಂತರ ಜಂಗಮವಾದುದೂ, ಸ್ಥಾವರವಾದುದೂ, ಕೊಂಬುಗಳಿಲ್ಲದೆ ಸಾಧುವಾದುದೂ, ಕೊಂಬುಳ್ಳದ್ದೂ ಆದ ಪ್ರಾಣಿಗಳಿಂದ ಕೂಡಿದ ಸಕಲ ಲೋಕಕ್ಕೂ ಅಧಿಪತಿಯಾದನು. ಅದೇ ಇಂದ್ರನು ಮಾನವರಿಗೆ ದೊರೆಯಾಗಿದ್ದಾನೆ. ಚಕ್ರದ ಪರಿಧಿಯು ಚಕ್ರದ ಸಮಸ್ತ ಅರಗಳನ್ನೂ ಸುತ್ತುವರೆದಿರುವಂತೆ ಇಂದ್ರನೂ ಸಹ ಸಕಲ ಜಗತ್ತನ್ನೂ. ಸುತ್ತುವರೆದು ನಿಂತಿದ್ದಾನೆ.

ಪ್ರಾಥನೆಯ ನಂತ್ರ ಸಕಲ ದೇವತೆಗಳಿಂದ ರಕ್ಷಣೆ ಅನುಗ್ರಹ ಆಶೀವಾದವನ್ನು ಮತ್ತು ಮರಣಾನಂತರ ಇಂದ್ರಲೋಕವನ್ನು ಅನುಗ್ರಹಿಸೆಂದು ಕೇಳಿಕೊಳ್ಳಬೇಕು. ಪೂಜೆಯನ್ನು ಪರಿಸಮಾಪ್ತಿಯನ್ನು ಮಾಡಲು ಅಪ್ಪಣೆಯನ್ನು ಕೇಳಿ. ನ

ಓಂಕಾರವನ್ನು ಹೇಳುತ್ತಾ ಸಕಲ ದೇವತೆಗಳನ್ನು ಸ್ವಸ್ಥಾನಕ್ಕೆ ಹಿಂತಿರುಗುವಂತೆ ಪ್ರಾಥಿಸಿ.
(ಸಕಲ ದೇವತೆಗಳು ತಮ್ಮ ತಮ್ಮ ಸ್ಥಾನಕ್ಕೆ ಹಿಂತಿರುಗುವರು.)

**ಶಾಂತಿ ಮಂತ್ರಗಳು**

ಓಂ ಸಹ ನಾವವತು। ಸಹ ನೌ ಭುನಕ್ತು। ಸಹ ವೀರ್ಯಂ ಕರವಾವಹೈ।
ತೇಜಸ್ವಿ ನಾವಧೀತಮಸ್ತು ಮಾ ವಿದ್ವಿಷಾವಹೈ।।
ಓಂ ಶಾಂತಿಃ ಶಾಂತಿಃ ಶಾಂತಿಃ।।
ಭಗವಂತನು ನಮ್ಮನ್ನು ರಕ್ಷಿಸಲಿ. ಆತನು ನಮ್ಮನ್ನು ಪೋಷಿಸಲಿ. ಆತನ ಕೃಪೆಯಿಂದ ನಮ್ಮ ಕೆಲಸವು ವೀರ್ಯವತ್ತಾಗಿ ನಡೆಯಲಿ. ನಮ್ಮ ಅಧ್ಯಯನವು ತೇಜಸ್ವಿಯಾಗಿರಲಿ. ನಮ್ಮಲ್ಲಿ ಶಾಂತಿಯೂ, ಸೌಹಾರ್ದವೂ ನೆಲಸಿರಲಿ.

ಓಂ ಶಂ ನೋ ಮಿತ್ರಃ ಶಂ ವರುಣಃ। ಶಂ ನೋ ಭವತ್ವರ್ಯಮಾ।

ಶಂ ನ ಇಂದ್ರೋ ಬೃಹಸ್ಪತಿಃ। ಶಂ ನೋ ವಿಷ್ಣುರುರುಕ್ರಮಃ।
ಓಂ ಶಾಂತಿಃ ಶಾಂತಿಃ ಶಾಂತಿಃ।।
ಮಿತ್ರ, ವರುಣ, ಆರ್ಯಮಾ, ಇಂದ್ರ, ಬೃಹಸ್ಪತಿ ಮತು ವಿಷ್ಣು– ಎಲ್ಲ ದೇವತೆಗಳೂ ನಮಗೆ ಶುಭದಾಯಕರಾಗಲಿ.
ಓಂ ಶಾಂತಿಃ ಶಾಂತಿಃ ಶಾಂತಿಃ।।

ಓಂ ಭದ್ರಂ ಕರ್ಣೇಭಿಶೃಣುಯಾಮ ದೇವಾಃ। ಭದ್ರಂ ಪಶ್ಯೇಮಾಕ್ಷಭಿರ್ಯಜತ್ರಾಃ।
ಸ್ಥಿರೈರಂಗೈಸ್ತುಷ್ಟುವಾಗ್ಂಸಸ್ತನೂಭಿಃ। ವ್ಯಶೇಮದೇವಹಿತಂ ಯದಾಯುಃ।।
ಎಲೈ ದೇವತೆಗಳೇ, ನಮ್ಮ ಕಿವಿಗಳಿಂದ ಶುಭವಾದುದನ್ನು ಆಲಿಸುವಂತಾಗಲಿ. ಪೂಜಾರ್ಹರೇ, ನಮ್ಮ ಕಣ್ಣುಗಳಿಂದ ಶುಭವಾದುದನ್ನು ನೋಡುವಂತಾಗಲಿ. ನಾವು ನಿಮ್ಮನ್ನು ಸ್ತುತಿಸಿ, ನಿಮ್ಮಿಂದ ಅನುಗೃಹೀತವಾದ ಆಯುಸ್ಸನ್ನು ದೃಢಾಂಗರಾಗಿ ಅನುಭವಿಸುವಂತಾಗಲಿ. ಓಂ ಶಾಂತಿಃ ಶಾಂತಿಃ ಶಾಂತಿಃ।।

ಓಂ। ದೌಃ ಶಾಂತಿರಂತರಿಕ್ಷಂ ಶಾಂತಿಃ ಪೃಥಿವೀ ಶಾಂತಿರಾಪಃ ಶಾಂತಿರೋಷದಯಃ ಶಾಂತಿಃ।
ವನಸ್ಪತಯ ಶಾಂತಿರ್ವಿಶ್ವೇದೇವಾಃ ಶಾಂತಿಬ್ರಹ್ಮ ಶಾಂತಿಃ। ಸರ್ವಂ ಶಾಂತಿಃ ಶಾಂತಿರೇವ ಶಾಂತಿಃ।।
ದ್ಯುಲೋಕದಲ್ಲಿ, ಅಂತರಿಕ್ಷದಲ್ಲಿ, ಭೂಮಿಯಲ್ಲಿ, ಗಿಡ ಮರ ಬಳ್ಳಿಗಳಲ್ಲಿ, ದೇವತೆಗಳಲ್ಲಿ ಮತ್ತು ಬ್ರಹ್ಮದಲ್ಲಿ ಶಾಂತಿಯಿರಲಿ, ಎಲ್ಲೆಲ್ಲಿಯೂ ಶಾಂತಿಯಿರಲಿ; ಮತ್ತು ಅಂತಹ ನಿಜ ಶಾಂತಿಯು ನಮ್ಮದಾಗಲಿ.

ಲೋಕಾ ಸಮಸ್ತಾ ಸುಖಿನೋ ಭವಂತು (ಮೂರು ಬಾರಿ)
ಸಮಸ್ತಾ ಸನ್ಮಂಗಳಾನಿ ಭವಂತು
(ಈ ಕೆಳಗಿನ ಇಂದ್ರಸ್ತುತಿಯನ್ನು ಬಾಯಿಪಾಠ ಮಾಡಿ ಇಂದ್ರದೇವರನ್ನು ಪ್ರಾರ್ಥಿಸಿ)

**ಹಿರಣ್ಯಗರ್ಭ** (ಇಂದ್ರ) ಸೂಕ್ತ (೧೦–೧೨೧–೧ ರಿಂದ ೧೦)

ಓಂ ಹಿರಣ್ಯಗರ್ಭಃ ಸಮವರ್ತತಾಗ್ರೇ ಭೂತಸ್ಯ ಜಾತಃ ಪತಿರೇಕ ಆಸೀತ್।
ಸ ದಾಧಾರ ಪೃಥಿವೀಂ ದ್ಯಾಮುತೇಮಾಂ ಕಸ್ಮೈ ದೇವಾಯ ಹವಿಷಾ ವಿಧೇಮ।। ೧
ವಿಶ್ವ ಸೃಷ್ಟಿಗೆ ಮೊದಲು ಹಿರಣ್ಯಗರ್ಭ ಪ್ರಜಾಪತಿಯು ಉದ್ಭವಿಸಿದನು. ಹುಟ್ಟಿದ ಕೂಡಲೆ ಅವನು ಸಕಲ ಜೀವಿಗಳಿಗೂ ಪಾಲಕನಾದನು. ಅವನು ಸ್ವರ್ಗಲೋಕವನ್ನೂ ಈ ಭೂಮಿಯನ್ನೂ ಧರಿಸಿದ್ದಾನೆ. ಸಕಲ ಜೀವಿಗಳನ್ನೂ ಪ್ರೀತಿಸುವ ಈ ಹಿರಣ್ಯಗರ್ಭನನ್ನು ನಾವು ಹವಿಸ್ಸಿನಿಂದ ಪೂಜಿಸೋಣ.

(ಇಂದ್ರನು ಮಾತೆಯ ಜ್ಯೇಷ್ಟ ಪುತ್ರನಾದುದರಿಂದ ವಿಶ್ವಸೃಷ್ಟಿಗೆ ಮೊದಲೇ ಉದ್ಭವಿಸಿದನು)

ಯ ಆತ್ಮದಾ ಬಲದಾ ಯಸ್ಯ ವಿಶ್ವ ಉಪಾಸತೇ ಪ್ರಶಿಷಂ ಯಸ್ಯ ದೇವಾಃ।
ಯಸ್ಯ ಛಾಯಾಮೃತಂ ಯಸ್ಯ ಮೃತ್ಯುಃ ಕಸ್ಮೈ ದೇವಾಯ ಹವಿಷಾ ವಿದೇಮಾ।। ೨
ಯಾವ ಹಿರಣ್ಯಗರ್ಭರೂಪಿ ಪರಮಾತ್ಮನು ಸಮಸ್ತ ಜೀವಿಗಳಲ್ಲೂ ತನ್ನ ಅಂಶವಾದ ಆತ್ಮನನ್ನು ಸ್ಥಾಪಿಸಿರುವನೋ, ಮತ್ತು ಶಕ್ತಿದಾಯಕನಾಗಿರುವನೋ; ಯಾರ ಉತ್ಕೃಷ್ಟವಾದ ಆಜ್ಞೆಯನ್ನು ಸಕಲ ಜೀವಿಗಳು ಮಾತ್ರವಲ್ಲದೆ ದೇವತೆಗಳೂ ಕೂಡ ಆದರದಿಂದ ಪಾಲಿಸಲು ಕಾತರರಾಗಿರುವರೋ; ಯಾವ ದೇವನ ಅಧೀನದಲ್ಲಿ ಮೃತ್ಯು ಮತ್ತು ಅಮೃತತ್ವ ಎಂಬುವು ನೆರಳಿನಂತಿವೆಯೋ ಅಂತಹ ಪರಮಾತ್ಮನನ್ನು – ಸಕಲರನ್ನೂ ಪ್ರೀತಿಸುವ, ಪ್ರಕಾಶಮಾನನಾದ ಪರಮಾತ್ಮನನ್ನು – ಹವಿಸ್ಸಿನ ಮೂಲಕ ಉಪಚರಿಸಿ ಪೂಜಿಸೂಣ.

(ಇಂದ್ರನು ಜ್ಯೋತಿ ಮತ್ತು ದೈವೀಮನಸ್ಸಿನವನಾಗಿ ತನ್ನ ಅಂಶವಾದ ಆತ್ಮಜ್ಯೋತಿಯನ್ನು ಸಮಸ್ತಜೀವಿಗಳಲ್ಲಿ ಸ್ಥಾಪಿಸಿರುವನು.)

ಯಃ ಪ್ರಾಣತೋ ನಿಮಿಷತೋ ಮಹಿತ್ವೈಕ ಇದ್ರಾಜಾ ಜಗತೋ ಬಭೂವ।
ಯ ಈಶೇ ಅಸ್ಯ ದ್ವಿಪದಶ್ಚತುಷ್ಪದಃ ಕಸ್ಮೈ ದೇವಾಯ ಹವಿಷಾ ವಿಧೇಮಾ।। ೩
ಯಾವ ಹಿರಣ್ಯಗರ್ಭರೂಪೀ ಪರಮಾತ್ಮನು ಉಸಿರಾಡುವ ಜೀವಿಗಳಿಗೆ, ಕಣ್ಣುಮಿಟಕಿಸುವ ಜೀವಿಗಳಿಗೆ ಹಾಗು ಇಡೀ ಜಗತ್ತಿಗೆ – ಅಂದರೆ ಸಮಸ್ತ ಚರ–ಅಚರ ಜಗತ್ತಿಗೆ – ತನ್ನ ಸ್ವಂತ ಮಹಿಮೆಯಿಂದ ಅದ್ವಿತೀಯ ಪ್ರಭುವಾಗಿರುವನೋ; ಯಾರು, ಈ ಜಗತ್ತಿನಲ್ಲಿ ನಮಗೆ ಕಾಣಬರುವ ಎರಡು ಪಾದಗಳುಳ್ಳ ಮನುಷ್ಯಾದಿ ಜೀವಿಗಳಿಗೂ, ನಾಲ್ಕು ಕಾಲುಗಳುಳ್ಳ

ಗೋವು ಮುಂತಾದ ಪಶುಗಳಿಗೂ ಸ್ವಾಮಿಯಾಗಿರುವನೋ ಅಂತಹ, ಸಕಲ ಜೀವಿಗಳನ್ನೂ ಪ್ರೀತಿಸುವ, ಪ್ರಕಾಶಮಾನನಾದ ಪ್ರಜಾಪತಿಯನ್ನು ಹವಿಸ್ಸಿನ ಮೂಲಕ ಪೂಜಿಸೋಣ.

ಯಸ್ಯೇಮೇ ಹಿಮವಂತೋ ಮಹಿತ್ವಾ ಯಸ್ಯ ಸಮುದ್ರಂ ರಸಯಾ ಸಹಾಹುಃ।
ಯಸ್ಯೇಮಾಃ ಪ್ರದಿಶೋ ಯಸ್ಯ ಕಸ್ಮೈ ದೇವಾಯ ಹವಿಷಾ ವಿಧೇಮಾ ।। ೪

ಹಿಮಚ್ಛಾದಿತವಾದ ಹಿಮಾಲಯವೇ ಮೊದಲಾದ ಎಲ್ಲ ಪರ್ವತರಾದಿಗಳು ಯಾವ ದೇವನ ಮಹಿಮೆಯೆಂದು ಹೇಳುವರೋ; ಎಲ್ಲ ನದಿಗಳನ್ನೂ ಸಮುದ್ರಗಳನ್ನೂ ಯಾವ ದೇವನ ವಿಭೂತಿವಿಶೇಷಗಳೆಂದು ಹೇಳುವರೋ; ಈ ಮೂಡಣವೇ ಮೊದಲಾದ ನಾಲ್ಕು ಪ್ರಧಾನ ದಿಕ್ಕುಗಳು ಹಾಗು ಆಗ್ನೇಯಾದಿ ವಿದಿಕ್ಕುಗಳು ಯಾವ ದೇವನ ಬಾಹುಗಳಂತಿವೆಯೋ ಅಂತಹ, ಸಕಲ ಜೀವಿಗಳನ್ನು ಪ್ರೀತಿಸುವ, ಪ್ರಕಾಶಮಾನನಾದ ಹಿರಣ್ಯಗರ್ಭರೂಪೀ ಪ್ರಜಾಪತಿಯನ್ನು ಹವಿಸ್ಸಿನಿಂದ ಪೂಜಿಸೋಣ.

ಯೇನ ದ್ಯೌರುಗ್ರಾ ಪೃಥಿವೀ ಚ ದೃಳ್ಹಾ ಯೇನ ಸ್ವಃ ಸ್ತಭಿತಂ ಯೇನ ನಾಕಃ।
ಯೋ ಅಂತರಿಕ್ಷೇ ರಜಸೋ ವಿಮಾನಃ ಕಸ್ಮೈ ದೇವಾಯ ಹವಿಷಾ ವಿಧೇಮಾ।। ೫

ಯಾವ ಪರಮಾತ್ಮನಿಂದ, ಉಗ್ರವಾದ ದ್ಯುಲೋಕ ಹಾಗು ಭೂಲೋಕ ದೃಡವಾಗಿ ಸ್ಥಾಪಿಸಲ್ಪಟ್ಟವೋ; ಯಾವ ಪರಮಾತ್ಮನಿಂದ ಸ್ವರ್ಗಲೋಕ ಹಾಗು ಆದಿತ್ಯಲೋಕಗಳು ಕೆಳಗೆ ಬೀಳದಂತೆ ಸ್ಥಿರಗೊಳಿಸಲ್ಪಟ್ಟವೋ; ಯಾವ ಪರಮಾತ್ಮನು ಅಂತರಿಕ್ಷದಲ್ಲಿ ಮಳೆಯ ರೂಪದ ನೀರನ್ನು ನಿರ್ಮಿಸುವನೋ; ಅಂತಹ ಸಕಲರನ್ನೂ ಪ್ರೀತಿಸುವ, ಪ್ರಕಾಶಮಾನನಾದ ಹಿರಣ್ಯಗರ್ಭರೂಪಿ ಪ್ರಜಾಪತಿಯನ್ನು ಹವಿಸ್ಸಿನಿಂದ ಪೂಜಿಸೋಣ.

(ಇಂದ್ರನ ಇಚ್ಛೆಯಂತೆ ದೇವತೆಗಳು, ಸಕಲ ಲೋಕಗಳು ಮತ್ತು ಸೃಷ್ಟಿಯು ನಡೆದುಕೊಳ್ಳುವುದು.)

ಯಂ ಕ್ರಂದಸೀ ಅವಸಾ ತಸ್ತಭಾನೇ ಅಭ್ಯೈಕ್ಷೇತಾಂ ಮನಸಾ ರೇಜಮಾನೇ।
ಯತ್ರಾಧಿ ಸೂರ ಉದಿತೋ ವಿಭಾತಿ ಕಸ್ಮೈ ದೇವಾಯ ಹವಿಷಾ ವಿಧೇಮಾ।। ೬

ಲೋಕರಕ್ಷಣೆಗಾಗಿ (ಪರಮಾತ್ಮನಿಂದ) ಸ್ಥಾಪಿತವಾದ, ಪ್ರಕಾಶಮಾನವಾದ ಸ್ವರ್ಗಲೋಕ– ಭೂಲೋಕಗಳು ಯಾವ ಪರಮಾತ್ಮನನ್ನು ಕೃತಜ್ಞತಾಪೂರ್ಣ ಮನಸ್ಸಿನಿಂದ ನೋಡಿದವೋ (ಅಂದರೆ, 'ನಮ್ಮ ಇರುವು ಉಳಿವು ಸಾಧ್ಯವಾಗಿರುವುದು ನಿನ್ನಿಂದಲೇ, ಹೇ ಭಗವಾನ್!' ಎಂಬ ಕೃತಜ್ಞತೆಯಿಂದ, ಧನ್ಯತಾಭಾವದಿಂದ ನೋಡಿದವೋ); ಯಾರಲ್ಲಿ ಆಶ್ರಯ ಪಡೆದಿರುವುದರಿಂದ ಸೂರ್ಯನು (ದಿನವೂ) ಉದಯಿಸಿ ಬೆಳಗುವನೋ ಅಂತಹ, ಸಕಲರನ್ನೂ ಪ್ರೀತಿಸುವ, ಸ್ವಯಂ ಪ್ರಕಾಶಮಾನನಾದ ಹಿರಣ್ಯಗರ್ಭರೂಪಿ ಪ್ರಜಾಪತಿಯನ್ನು ಹವಿಸ್ಸಿನಿಂದ ಪೂಜಿಸೋಣ.

ಅಪೋ ಹ ಯದ್ಬೃಹತೀರ್ವಿಶ್ವಮಾಯನ್ಗರ್ಭಂ ದಧಾನಾ ಜನಯಂತೀರಗ್ನಿಂ
ತತೋ ದೇವಾನಂ ಸಮವರ್ತತಾಸುರೇಕಃ ಕಸ್ಮೈ ದೇವಾಯ ಹವಿಷಾ ವಿಧೇಮಾ।। ೭

ಬಹಳವಾಗಿ ಎಲ್ಲೆಲ್ಲೂ ವ್ಯಾಪಿಸಿರುವವೂ ಅಗ್ನಿಯೇ ಮೊದಲಾದ ಪಂಚಮಹಾಭೂತಗಳನ್ನು ಉತ್ಪತ್ತಿ ಮಾಡುವುದಕ್ಕಾಗಿಯೇ ಹಿರಣ್ಮಯವಾದ ಗರ್ಭವನ್ನು ಧರಿಸಿರುವವೂ ಆದ ಯಾವ ಉದಕಗಳು ಸಮಸ್ತ ವಿಶ್ವವನ್ನೆಲ್ಲಾ ಆವರಿಸಿದ್ದವೋ ಅಂತಹ ಉದಕಗಳಿಂದ ಸಮಸ್ತ ದೇವತೆಗಳಿಗೂ ಪ್ರಾಣಭೂತನಾದ (ಸವಿತೃ) ಪ್ರಜಾಪತಿಯು ಉತ್ಪನ್ನನಾದನು; ಅಂತಹ ಸುಖಸ್ವರೂಪನಾದ ಪ್ರಜಾಪತಿಯನ್ನುದ್ದೇಶಿಸಿ ಹವಿರಾದಿ ದ್ರವ್ಯಗಳನ್ನು ಅರ್ಪಿಸೋಣ. (ಸಾ ಭಾ)

ಯಶ್ಚಿದಾಪೋ ಮಹಿನಾ ಪರ್ಯಪಶ್ಯದ್ದಕ್ಷಂ ದಧಾನಾ ಜನಯಂತೀರ್ಯಜ್ಞಂ।
ಯೋ ದೇವೇಷ್ವಧೀ ದೇವ ಏಕ ಅಸೀತ್ಕಸ್ಮೈ ದೇವಾಯ ಹವಿಷಾ ವಿಧೇಮಾ।। ೮

ಸಕಲ ಜೀವಿಗಳನ್ನು ಸೃಷ್ಟಿಸುವ ಸಾಮರ್ಥ್ಯದಿಂದ ಕೂಡಿದ **ಉದಕಗಳನ್ನು** ಪರಮಾತ್ಮನು ತನ್ನ ಮಹಿಮೆಯಿಂದ ನೋಡಿದನು ಮತ್ತು ಅದಕ್ಕಾಗಿ ಅಗ್ನಿಯು ಹುಟ್ಟಿಕೊಂಡಿತು; ಯಾವ ಪರಮಾತ್ಮನು ದೇವತೆಗಳಲ್ಲಿ ಅದ್ವಿತೀಯ ದೇವನಾಗಿರುವನೋ ಅಂತಹ, ಸಕಲರನ್ನೂ ಪ್ರೀತಿಸು, ಪ್ರಕಾಶಮಾನನಾದ (ಹಿರಣ್ಯಗರ್ಭರೂಪಿ) ಪ್ರಜಾಪತಿಯನ್ನು ಹವಿಸ್ಸಿನಿಂದ ಪೂಜಿಸೋಣ.

ಮಾ ನೋ ಹಿಂಸೀಜ್ಜನಿತಾ ಯಃ ಪೃಥಿವ್ಯಾ ಯೋ ವಾ ದಿವಂ ಸತ್ಯಧರ್ಮಾ ಜಜಾನ।
ಯಶ್ಚಾಪಶ್ಚಂದ್ರಾ ಬೃಹತೀರ್ಜಜಾನ ಕಸ್ಮೈ ದೇವಾಯ ಹವಿಷಾ ವಿಧೇಮಾ।। ೯

(ಈವರೆಗೆ ಸ್ತುತಿಸಿದ ಗುಣಮಾಹಾತ್ಮ್ಯಗಳಿಂದ ಕೂಡಿದ) ಆ ಹಿರಣ್ಯಗರ್ಭರೂಪಿ ಪರಮಾತ್ಮನು ನಮ್ಮನ್ನು ಹಿಂಸಿಸದಿರಲಿ. ಯಾವ ಹಿರಣ್ಯಗರ್ಭನು, ಭೂಮಿಯ ಸೃಷ್ಟಿಕರ್ತನೋ, ಜಗದ್ಧಾರಣಾದಿ ಸತ್ಯಕರ್ಮಗಳನ್ನು ನಿರ್ವಹಿಸುತ್ತಿರುವನೋ;

ಯಾರು, ಅಂತರಿಕ್ಷವೇ ಮೊದಲಾದ ಸಮಸ್ತ ಲೋಕಗಳನ್ನು ಸೃಷ್ಟಿಸಿದನೋ; ಹಾಗೂ ಯಾರು ಮಹತ್ತಾದ, ಆಹ್ಲಾದಕರವಾದ ಉದಕಗಳನ್ನು ಉತ್ಪನ್ನ ಮಾಡಿದನೋ (ಉದಕಗಳನ್ನು ತನ್ನ ಮಹಿಮೆಯಿಂದ ತುಂಬಿದ) – ಅಂತಹ, ಸಕಲ ಜೀವಿಗಳನ್ನೂ ಪ್ರೀತಿಸುವ, ಪ್ರಕಾಶಮಾನನಾದ ಹಿರಣ್ಯಗರ್ಭರೂಪಿ ಪ್ರಜಾಪತಿಯನ್ನು ನಾವು ಹವಿಸ್ಸಿನಿಂದ ಪೂಜಿಸೋಣ.

ಪ್ರಜಾಪತೇ ನತ್ವದೇತಾನ್ಯನ್ಯೋ ವಿಶ್ವಾ ಜಾತಾನಿ ಪರಿ ತಾ ಬಭೂವ।
ಯತ್ಕಾಮಾಸ್ತೇ ಜುಹುಮಸ್ತನ್ನೋ ಅಸ್ತು ವಯಂ ಸ್ಯಾಮ ಪತಯೋ ರಯೀಣಾಂ।। ೧೦
ಹಿರಣ್ಯಗರ್ಭ ಪ್ರಜಾಪತಿಯ ರೂಪದಲ್ಲಿ ವ್ಯಕ್ತಗೊಂಡಿರುವ ಹೇ ಪರಮಾತ್ಮನೇ! ಈ ಸಮಸ್ತ ಸೃಷ್ಟಿಯು ನಿನ್ನಿಂದ ಬೇರೆಯಲ್ಲ. ಸೃಷ್ಟಿಸಲ್ಪಟ್ಟ ಜೀವಿಗಳು ನಿನ್ನನ್ನು ಮೀರಿಸಲಾರವು (ಅಂದರೆ ಯಾವ ಜೀವಿಯೂ ನಿನಗಿಂತ ಮಿಗಿಲಲ್ಲ). ನಾವು ಯಾವ ಅಭೀಷ್ಟಗಳನ್ನು ಬಯಸುತ್ತಾ ನಿನಗೆ ಹವಿಸ್ಸನ್ನು ಅರ್ಪಿಸಿ ಹೋಮಮಾಡುತ್ತಿರುವೆವೋ ಆ ಅಭೀಷ್ಟ ಫಲವು, ನಿನ್ನ ಅನುಗ್ರಹದಿಂದ ನಮಗೆ ಲಭಿಸಲಿ. ನಾವು ಸಂಪತ್ತಿಗೆ ಅಧಿಪತಿಗಳಾಗುವಂತಾಗಲಿ.

---

"ಯಾವನು ಅಲುಗಾಡುತ್ತಿದ್ದ ಪೃಥ್ವಿಯನ್ನು ದೃಡವಾಗಿ ನಿಲ್ಲುವಂತೆ ಮಾಡಿದನೋ, ಯಾವನು ಕಳವಳವನ್ನು ಉಂಟುಮಾಡುವಂತೆ ಚಲಿಸುತ್ತಿದ್ದ ಪರ್ವತವನ್ನು ಸ್ಥಿರವಾಗಿರುವಂತೆ ಮಾಡಿದನೋ, ಯಾವನು ವಿಸ್ತೃತವಾದ ಅಂತರಿಕ್ಷವನ್ನು ಅಳೆದನೋ, ಯಾವನು ದ್ಯುಲೋಕವನ್ನು ತಡೆದು ನಿಲ್ಲಿಸಿದನೋ ಅವನೇ ಇಂದ್ರನು. (೨–೧೨–೨ ಸಾಭಾ)

"ಯಾವ ಇಂದ್ರನಿಂದ ನಶ್ವರವಾದ ಈ ಲೋಕವೆಲ್ಲವೂ ಸ್ಥಿರವಾಗಿರುವಂತೆ ನಿರ್ಮಿತವಾದವೋ, ಯಾವನು ಅಸುರರನ್ನು ಪಾತಾಳದ ಗುಹೆಯಲ್ಲಿರುವಂತೆ ಮಾಡಿದನೋ, ಯಾವನು ಬೇಡನು ತನ್ನ ಮೃಗವನ್ನು ಸ್ವಾಧೀನಪಡಿಸಿಕೊಳ್ಳುವಂತೆ, ಅಸುರರ ಸಮೃದ್ಧವಾದ ಸಂಪತ್ತುಗಳನ್ನು ತನ್ನಧೀನವಾದುದನ್ನಾಗಿ ಮಾಡಿಕೊಂಡನೋ ಅವನೇ ಇಂದ್ರನು." (೨–೧೨–೪ ಸಾಭಾ)
(ಅದ್ವೈತಿಗಳು ಮೇಲಿನ ಸೂಕ್ತವನ್ನು ಗಮನಿಸಬೇಕು.)

"ಸೋಮರಸವನ್ನು ಪಾನಮಾಡತಕ್ಕವನೂ, ನಮ್ಮ ರಕ್ಷಣೆಗಾಗಿ ವಜ್ರಾಯುಧವನ್ನು ಹಿಡಿದಿರುವವನೂ ಆದ ಇಂದ್ರನೇ ನಿನ್ನ ಸ್ನೇಹಿತರಾದ ನಾವು ನಿನ್ನ ಅನುಗ್ರಹವನ್ನು ಯಾವ ರೀತಿ ಆಪೇಕ್ಷಿಸುತ್ತೇವೆಯೋ ಅದೇ ರೀತಿ ಅನುಗ್ರಹಿಸು ಮತ್ತು ನಮ್ಮ ಇಷ್ಟಾರ್ಥವೂ ಸಹ ಅದೇ ರೀತಿ ನೆರವೇರಲಿ." (೧–೩೦–೧೨ ಸಾಭಾ)

"ಎಲೈ ಮಿತ್ರಾವರುಣಾರ್ಯಮರೇ, ನಮ್ಮ ಪಾಪಗಳನ್ನು ಪರಿಹರಿಸಿ ನಮ್ಮನ್ನು ದಾಟಿಸುವ ನೀವು ನಮ್ಮಲ್ಲಿಗೆ ಬಂದು ಹೋದನಂತರ ನಾವು ವಾಸಮಾಡುವ ಗೃಹವು ಯಾವ ಭಯವೂ ಇಲ್ಲದೆ ಸುರಕ್ಷಿತವಾಗುವುದು."
(ಋಗ್ವೇದ ೭–೬೬–೫)

# ಅಧ್ಯಾಯ-೮: ಶ್ರಾದ್ಧ ವಿಧಾನ

ಅಪರಾಹ್ಣ ಕಾಲದಲ್ಲಿ ಶ್ರಾದ್ಧ ಕಾರ್ಯಗಳನ್ನು ಮಾಡಬೇಕಾಗಿರುವುದರಿಂದ ಮತ್ತು ಬ್ರಾಹ್ಮಣರೂ ಸಹ ಈ ವೇಳೆಯಲ್ಲಿಯೇ ಅವರು ತಮ್ಮ ಮನೆಯಲ್ಲಿ ಮಾಡಬೇಕಾಗಿರುವುದರಿಂದ ಎಲ್ಲರೂ ತಾವೇ ಶ್ರಾದ್ಧ ಕಾರ್ಯಗಳನ್ನು ಮಾಡಲು ಪ್ರಯತ್ನಿಸಬೇಕು. ಶ್ರಾದ್ಧಾ ಮಂತ್ರಗನ್ನು ತಿಳಿಯದಿದ್ದರೂ ಸಹ ಕನ್ನಡದಲ್ಲಿಯೇ ಎಲ್ಲರೂ ಮಾಡಬಹುದಾದ ವಿಧಾನವನ್ನು ಈ ಕೆಳಗೆ ಕೊಡಲಾಗಿದೆ.

(ನಾವು ಯಾವ ಭಾಷೆಯಲ್ಲಿ ಮಾತನಾಡಿದರೂ, ಮಾನಸಿಕ ಭಾಷೆಯಲ್ಲೇ ಪಿತೃಗಳು ಮತ್ತು ದೇವತೆಗಳು ಗ್ರಹಿಸುತ್ತಾರೆ. ಅವರಿಗೆ ಪೃಥ್ವಿಯ ಎಲ್ಲಾ ಭಾಷೆಗಳು ಗೊತ್ತಿವೆ.)

**ಓಂ**

ಶ್ರೀ ಗುರುಭ್ಯೋ ನಮಃ
ಓಂ ಇಂದ್ರಾಯ ನಮಃ

**ಆಚಮನ**

ಓಂ ಅಮೃತೋಪಸ್ತರಣಮಸಿ ಸ್ವಾಹಾ।
(ಹೇ ಪರಮೇಶ್ವರ (ಅಥವಾ ಉದಕಗಳೇ) ಅಮೃತ ಅವಿನಾಶಿಯಾದ ನೀನು (ಉಪಸ್ತರಣಮಸಿ) ಆಸನದಂತೆ ನಮಗೆ ಆಶ್ರಯವನ್ನು ಕೊಡುತ್ತಿರುವೆ, (ಸ್ವಾಹಾ) ಇದು ಸತ್ಯವು.)
ಓಂ ಅಮೃತಾಪಿಧಾನಮಸಿ ಸ್ವಾಹಾ।
(ಹೇ ರಕ್ಷಕ! ಅಮೃತಸ್ವರೂಪ (ಅಥವಾ ಉದಕಗಳೇ) ನೀನು ಅಪಿಧಾನದಂತೆ (ಮೇಲೆ ಹೊದ್ದುಕೊಳ್ಳುವ ವಸ್ತ್ರದಂತೆ) ನಮ್ಮ ಸುತ್ತಲೂ ವ್ಯಾಪಿಸಿರುವೆ, ಇದು ಸತ್ಯವು.)
ಓಂ ಸತ್ಯಂ ಯಶಃ ಶ್ರೀರ್ಮಯಿ ಶ್ರೀಃ ಶ್ರಯತಾಂ ಸ್ವಾಹಾ।
(ಹೇ ರಕ್ಷಕ (ಉದಕಗಳೇ) ಅಂತಹ ನೀನು ಸತ್ಯಜ್ಞಾನವನ್ನು, ಯಶಸ್ಸನ್ನು, ಐಶ್ವರ್ಯವನ್ನು, ಆನಂದವನ್ನು ನನ್ನಲ್ಲಿ ಪ್ರವಹಿಸುವಂತೆ ಮಾಡಿ ಸ್ಥಿರವಾಗಿಡು. ನನ್ನ ಈ ಪ್ರಾರ್ಥನೆಯು ಫಲಿಸುವಂತೆ ಮಾಡು.)

**ಮೂರು ನಾಡಿಶೋಧನ ಪ್ರಾಣಾಯಾಮ**

ಪಂಚಪಾತ್ರೆಯಲ್ಲಿ ನೀರನ್ನು ತೆಗೆದುಕೊಂಡು ಅದರಲ್ಲಿ ಸ್ವಲ್ಪ ಎಳ್ಳನ್ನು ಹಾಕಿ, ಪಂಚಪಾತ್ರೆಯ ಮೇಲೆ ಹಸ್ತವನ್ನಿಟ್ಟು ಉದಕಗಳನ್ನು ಪ್ರಾರ್ಥಿಸಿ.

ಓಂ ಮಾತೃಸ್ವರೂಪರಾದ ಉದಕಗಳು ತಮ್ಮ ಗೊತ್ತುಪಡಿಸಿದ ಮಾರ್ಗಗಳಲ್ಲಿ ಹರಿಯುತ್ತಿರುವುದು. ದೈವೀ ಸಹೋದರಿಯರು (ಕುಂಡಲಿನಿ ಮಾತೆಯರು) ಉದಕಗಳಿಗೆ ಮಧುವನ್ನು ಮತ್ತು ಹಾಲನ್ನು ಉದಕಗಳ ಜೊತೆ ಬೆರೆಸುವರು.

ಯಾವ ಉದಕಗಳು ಸೂರ್ಯನ ಸಮೀಪದಲ್ಲಿರುವವೋ ಅಥವಾ ಸೂರ್ಯನ ಒಟ್ಟಿಗೇ ಇರುವವೋ ಅಂಥಹ ಉದಕಗಳು ನಮ್ಮ ಯಜ್ಞವನ್ನು ಸಂತೋಷದಿಂದ ನೆರವೇರುವಂತೆ ಮಾಡಲಿ.

ನಾವು ಉದಕಗಳನ್ನೂ ಮತ್ತು ದೈವೀ ಮಾತೆಯರನ್ನೂ ಆಹ್ವಾನಿಸುತ್ತೇವೆ.

(ಯಜ್ಞೋಪವೀತವನ್ನು ಬಲಗಡೆಗೆ ಬದಲಾಯಿಸಿ ಸಂಕಲ್ಪವನ್ನು ಮಾಡಿ.)

## ಸಂಕಲ್ಪ

ಓಂ ಶುಭೇ ಶೋಭನೇ ಮುಹೂರ್ತೇ ಆದ್ಯ ಬ್ರಹ್ಮಣಃ ದ್ವಿತೀಯ ಪರಾರ್ದೇ ಶ್ವೇತವರಾಹಕಲ್ಪೆ ವೈವಸ್ವತ ಮನ್ವಂತರೆ ಕಲಿಯುಗೆ ಪ್ರಥಮ ಪಾದೆ ಜಂಬುದ್ವೀಪೆ ಭರತವರ್ಷೇ ಭರತಖಂಡೇ ದಂಡಕಾರಣ್ಯೆ ಗೋದಾವರ್ಯಾಃ ದಕ್ಷಿಣೇತೀರೇ ಕರ್ನಾಟಕೇ ಬೆಂಗಳೂರು ಪ್ರಾಂತೇ (ಸ್ಥಳಕ್ಕೆ ತಕ್ಕಂತೆ ಪ್ರಾಂತವನ್ನು ಸೇರಿಸಿ) ಶಾಲಿವಾಹನ ಶಕೇ ಅಸ್ಮಿನ್ ವರ್ತಮಾನೇನ ಪ್ರಭವಾದಿ ಷಷ್ಠಿ ಸಂವತ್ಸರಾಣಾಂ ಮಧ್ಯೇ ..... ನಾಮ ಸಂವತ್ಸರೇ ದಕ್ಷಿಣಾಯನೇ ವರ್ಷೌಋತೌ

ಬಾದ್ರಪದ ಮಾಸೆ ಕೃಷಪಕ್ಷೆ ಮಹಾಲಯ ಅಮಾವಾಸ್ಯೇ .... ವಾಸರಯುಕ್ತಾಯಾಂ ಶುಭನಕ್ಷತ್ರ ಶುಭಯೋಗ ಶುಭಕರಣ ಏವಂ ಗುಣ ವಿಶೇಣ ವಿಶಿಷ್ಟಾಯಾಂ ಪಿಂಡ ಪ್ರದಾನಂ ತಿಲತರ್ಪಣಂ ಕರಿಷ್ಯೇ.

(ಅನ್ನ, ಕಲಶೋದಕ, ಹಾಲು, ಮೊಸರು, ತುಪ್ಪ, ಜೇನು, ಸಕ್ಕರೆಯನ್ನು ಅನ್ನದೊಂದಿಗೆ ಮಿಶ್ರಮಾಡಿ ಬೇಲದಕಾಯಿ ಗಾತ್ರದ ಪಿಂಡವನ್ನು ಮಾಡಿ.)

ಕಲಶೋದಕದ ನೀರನ್ನು ಮನೆಯ ಎಲ್ಲ ಮೂಲೆಗಳಿಗೆ ಚಿಮುಕಿಸಿ. ಎಳ್ಳನ್ನು ಮನೆಯ ೮ ಮೂಲೆಯಲ್ಲೂ ಚೆಲ್ಲಿ. ಆಹಾವನೆ ಮಾಡುವ ಜಾಗದಲ್ಲಿ ನೀರನ್ನು ಚಿಮುಕಿಸಿ ಶುದ್ಧ ಮಾಡಿ ಅದರ ಮೇಲೆ ಊಟದ ಎಲೆಯನ್ನು ಹರಡಿ ಅದರ ಮೇಲೆ ದರ್ಭೆಯನ್ನು ಹರಡಿ.ಎಳ್ಳಿನಿಂದ ದರ್ಭೆಯ ಸುತ್ತಲೂ ಬಂಧನ ಮಾಡಿ.

ಓಂ ಪ್ರಜಾಪತಯೇ ನಮಃ "ದರ್ಭೆಯ ಮಧ್ಯೆ ಎಳ್ಳನ್ನು ತೋರು ಬೆರಳು ಮತ್ತು ಹೆಬ್ಬೆರಳಿನ ಮಧ್ಯೆ ಬಿಡಿ."
ಓಂ ಪ್ರಜಾಪತಯೇ ನಮಃ "ಎಳ್ಳಿನ ಮೇಲೆ ನೀರನ್ನು ಚಿಮುಕಿಸಿ, ಗಂಧ, ಹೂವು ಮತ್ತು ತುಳಸಿಯನ್ನುಹಾಕಿ."

## ನಂತರ

(ಸೂರ್ಯಮಂಡಲ ಮಧ್ಯಸ್ಥನಾದ ಸವಿತೃವಿನ ಮೇಲೆ ಮನಸ್ಸನ್ನು ಕೇಂದ್ರೀಕರಿಸಿ ಮೇಲಿನ ಮಂತ್ರವನ್ನು ಹೇಳಿ.)
**ಓಂ ಸೂರ್ಯ–ಪ್ರಜಾಪತಯೇ ನಮಃ** ಧ್ಯಾಯಾಮಿ ಧ್ಯಾನಂ ಸಮರ್ಪಯಾಮಿ, (ಸೂರ್ಯಮಂಡಲ ಮಧ್ಯದಲ್ಲಿರುವ ಸವಿತೃವಿಗೆ ಪಾದಪೂಜೆಯನ್ನು ಮಾಡಿ.) ಪಾದಯೋ ಪಾದ್ಯಂ ಸಮರ್ಪಯಾಮಿ; ಹಸ್ತಯೋ ಅರ್ಘ್ಯಂ ಸಮರ್ಪಯಾಮಿ; ಆಚಮನೀಯಂ ಸಮರ್ಪಯಾಮಿ; ಪುಷ್ಪಂ ಸಮರ್ಪಯಾಮಿ.

(ಸೂರ್ಯನಿಂದ ಪೃಥ್ವಿಗೆ ಸಮಾನಾಂತರವಾಗಿರುವ ಅದೃಶ್ಯವಾಗಿರುವ ಚಿಕ್ಕ ಸೂರ್ಯಮಂಡಲದ ಹಾಗು ನಾಭಿಯಲ್ಲಿರುವ ಕಣ್ಣಿಗೆ ಕಾಣದ ಸೂರ್ಯ–ಯಮಮಂಡಲವನ್ನು ಜಾಗ್ರೃತಮಾಡಿ ಪಾದಪೂಜೆ ಮಾಡಿ.)
**ಓಂ ಯಮಾಯ ನಮಃ** ಧ್ಯಾಯಾಮಿ ಧ್ಯಾನಂ ಸಮರ್ಪಯಾಮಿ, (ಸೂರ್ಯಮಂಡಲ ಮಧ್ಯದಲ್ಲಿರುವ ಯಮದೇವರ ಪಾದಪೂಜೆಯನ್ನು ಮಾಡಿ.) ಪಾದಯೋ ಪಾದ್ಯಂ ಸಮರ್ಪಯಾಮಿ; ಹಸ್ತಯೋ ಅರ್ಘ್ಯಂ ಸಮರ್ಪಯಾಮಿ; ಆಚಮನೀಯಂ ಸಮರ್ಪಯಾಮಿ; ಪುಷ್ಪಂ ಸಮರ್ಪಯಾಮಿ.

(ಸಪ್ತಸ್ವರ್ಗಗಳನ್ನು ಜಾಗ್ರೃತಮಾಡಲು ಮನಸ್ಸಿನಲ್ಲಿ ಸಂಕಲ್ಪಿಸಿ ಈ ಲೋಕಗಳ ಮಂತ್ರಗಳನ್ನು ಪಠಿಸಿ ಜಾಗ್ರೃತಮಾಡಿ.)
ಓಂ ಭೂಃ, ಓಂ ಭುವಃ, ಓಂ ಸ್ವಃ, ಓಂ ಮಹಃ, ಓಂ ಜನಃ, ಓಂ ತಪಃ, ಓಂ ಸತ್ಯಂ ಓಂ ಪ್ರಜಾಪತಯೇ ನಮಃ, ಓಂ ಯಮಾಯ ನಮಃ.

ಈಗ ಸವಿತೃ ಪ್ರಜಾಪತಿ ಮತ್ತು ಯಮರನ್ನು ಸಪ್ತಸ್ವರ್ಗದ ಬಾಗಿಲುಗಳನ್ನು ತೆರೆಯುವಂತೆ ಪ್ರಾರ್ಥಿಸಿ. ಆಗ ಸ್ವರ್ಗಗಳ ಬಾಗಿಲು ತೆರೆದುಕೊಳ್ಳುತ್ತದೆ. ನಂತರ
ಓಂ ಪಿತೃಲೋಕದಲ್ಲಿರುವ ನಮ್ಮ ದ್ವಾದಶ ಪಿತೃಗಳನ್ನು ಆಹ್ವಾನಿಸುತ್ತೇವೆ. ಧ್ಯಾಯಾಮಿ ಧ್ಯಾನಮ್ ಸಮರ್ಪಯಾಮಿ, ಆವಾಹಯಾಮಿ, ಸ್ಥಾಪಯಾಮಿ.

ದ್ವಾದಶ ಪಿತೃಗಳನ್ನು ದಕ್ಷಿಣ ಪಾರ್ಶ್ವದಲ್ಲಿ ಅಂದರೆ ನಾವು ಪೂರ್ವಾಭಿಮುಖವಾಗಿ, ಸಪ್ತಸ್ವರ್ಗಕ್ಕೆ ಅಭಿಮುಖವಾಗಿ ಮತ್ತು ನಮ್ಮ ದಕ್ಷಿಣ ದಿಕ್ಕಿಗೆ ಪಿತೃಗಳನ್ನು ಕಲಶದಲ್ಲಿ ಸ್ಥಾಪನೆ ಮಾಡಿ.

(ಆನಂತರ ಈ ಕೆಳಗಿನ ಋಗ್ವೇದದ ವಾಕ್ಯಗಳನ್ನು ಓದಿರಿ)

ಓಂ ಉದೀರತಾಮವರ ಉತ್ವರಾಸ ಉನ್ಮಧ್ಯಮಾಃ ಪಿತರಃ ಸೋಮ್ಯಾಸಃ ೧
ಅಸುಂ ಯ ಈಯುರವೃಕಾ ಋತಜ್ಞಾಸ್ತೇ ನೋಽವಂತು ಪಿತರೋ ಹವೇಷು ೧೧
(ಅಥವಾ ಕೇವಲ ಮಂತ್ರಾರ್ಥವನ್ನು ಓದಿ.)
"ಕೆಳಗಿನ ಲೋಕದಲ್ಲಿರುವ ಪಿತೃಗಳೂ, ಉತ್ತಮಲೋಕದಲ್ಲಿರುವವರೂ, ಮಧ್ಯಮಲೋಕದಲ್ಲಿರುವವರೂ ನಮ್ಮ ಹವಿಸ್ಸುಗಳನ್ನು ಸ್ವೀಕರಿಸಲಿ. ಅವರೆಲ್ಲರೂ ನಮ್ಮಲ್ಲಿ ಅನುಗ್ರಹಬುದ್ಧಿಯುಳ್ಳವರಾಗಿರಲಿ. ತೋಳಗಳಂತೆ ಕ್ರೂರಿಗಳಲ್ಲದವರೂ, ನಮ್ಮ ಯಜ್ಞಕರ್ಮಗಳನ್ನರಿತವರೂ, ನಮ್ಮ ಪ್ರಾಣವನ್ನು ರಕ್ಷಿಸಲು ಬಂದಿರುವವರೂ ಆದ ಆ ಪಿತೃಗಳು ನಮ್ಮ ಆಹ್ವಾನಕಾಲದಲ್ಲಿ ನಮ್ಮನ್ನು ರಕ್ಷಿಸಲಿ." (೧೦–೧೫–೧ ಸಾಭಾ)

ಇದಂ ಪಿತೃಭ್ಯೋ ನಮೋ ಅಸ್ತ್ವದ್ಯ ಯೇ ಪೂರ್ವಾಸೋ ಯ ಉಪರಾಸ ಈಯುಃ ।
ಯೇ ಪಾರ್ಥಿವೇ ರಜಸ್ಯಾ ನಿಷತ್ತಾ ಯೇ ವಾ ನೂನಂ ಸುವೃಜನಾಸು ವಿಕ್ಷು ।। (ಋ ೧೦-೧೫-೨ಸಾಭಾ)
"ನಮಗಿಂತಲೂ ಹಿರಿಯರಾದ ಪಿತೃಪಿತಾಮಹಾದಿಗಳಲ್ಲಿ ಯಾರು ಪಿತೃಲೋಕವನ್ನು ಸೇರಿರುವರೋ, ನಮಗಿಂತ ಕಿರಿಯರಲ್ಲಿ ಯಾರು ಮೃತಿಯನ್ನು ಹೊಂದಿರುವರೋ, ಯಾರು ಪಾರ್ಥಿವಲೋಕದಲ್ಲಿ ಹವಿಸ್ಸಿಗಾಗಿ ಬಂದು ಕುಳಿತಿರುವರೋ, ಉಳಿದ ಯಾವ ಪಿತೃಗಳು ಉತ್ತಮರಾದ ಧನವಂತರ ನಡುವೆ ಕುಳಿತಿರುವರೋ ಅಂತಹ ಸಕಲ ಪಿತೃಗಳನ್ನೂ ಈ ಯಾಗಕಾಲದಲ್ಲಿ ನಮಸ್ಕರಿಸುತ್ತೇನೆ.

ಉಪಹೂತಾಃ ಪಿತರಃ ಸೋಮ್ಯಾಸೋ ಬರ್ಹಿಷ್ಯೇಷು ನಿಧಿಷು ಪ್ರಿಯೇಷು ।
ತ ಆ ಗಮಂತು ತ ಇಹ ಶ್ರುವಂತ್ವಧಿ ಬ್ರುವಂತು ತೇಽವಂತ್ವಸ್ಮಾನ್ ।। (ಋ ೧೦-೧೫-೫ ಸಾಭಾ)
"ಯಾಗಾರ್ಹವೂ, ಪ್ರೀತಿಕಾರಕವೂ ಆದ ಹವಿಸ್ಸುಗಳನ್ನು ಸ್ವೀಕರಿಸಲು ನಾವು ಯಾವ ಪಿತೃಗಳನ್ನು ಕರೆಯುತ್ತೇವೆಯೋ ಅಂತಹ ಪಿತೃಗಳು ನಮ್ಮಲ್ಲಿ ಅನುಗ್ರಹ ಬುದ್ಧಿಯನ್ನು ತೋರಿಸುತ್ತಾ ಬರಲಿ, ಈ ಕರ್ಮಕಾಲಗಳಲ್ಲಿ ಪಠಿತವಾಗುವ ನಮ್ಮ ಸ್ತುತಿಗಳನ್ನು ಕೇಳಲಿ. ನಮ್ಮ ವಿಷಯದಲ್ಲಿ ಪ್ರಶಂಸಾವಾಕ್ಕುಗಳನ್ನು ಹೇಳಲಿ. ಅವರು ನಮ್ಮನ್ನು ರಕ್ಷಿಸಲಿ.

ಆಚ್ಯಾ ಜಾನು ದಕ್ಷಿಣತೋ ನಿಷದ್ಯೇಮಂ ಉಜ್ಞಮಭಿ ಗೃಣೀತ ವಿಶ್ವೇ ।
ಮಾ ಹಿಂಸಿಷ್ಟ ಪಿತರಃ ಕೇನ ಚಿನ್ನೋ ಯದ್ವ ಆಗಃ ಪುರುಷತಾ ಕರಾಮ ।। (ಋ ೧೦-೧೫-೬ ಸಾಭಾ)
"ಎಲೈ ಪಿತೃಗಳೇ, ನೀವೆಲ್ಲರೂ ಮೊಳಕಾಲನ್ನೂರಿ ದಕ್ಷಿಣ ಪಾರ್ಶ್ವದಲ್ಲಿ ಕುಳಿತು ನಮ್ಮ ಈ ಯಾಗವನ್ನು ಪ್ರಶಂಸಿಸಿರಿ. ನಿಮ್ಮ ವಿಷಯದಲ್ಲಿ ಯಾವುದೇ ಆದ ಪಾಪವನ್ನಾಗಲಿ, ಮಾನವನಿಗೆ ಸಹಜವಾದ ಅಜ್ಞಾನದಿಂದ ನಾವು ಮಾಡಿದ್ದೇ ಆದರೆ, ಆ ಯಾವ ವಿಧವಾದ ಪಾಪಕ್ಕಾಗಿಯೂ ನಮ್ಮನ್ನು ಹಿಂಸಿಸಬೇಡಿರಿ.

ಆಹ್ವಾನಿಸಲ್ಪಟ್ಟ ಪಿತೃಗಳನ್ನು ಊಟದ ಎಲೆಯ ದರ್ಬೆಯ ದಕ್ಷಿಣದಲ್ಲಿ ಸ್ಥಾಪಿಸಿ, ಯಜಮಾನನು ಎಲೆಯ ಉತ್ತರದಲ್ಲಿ ಪಿತೃಗಳ ಅಭಿಮುಖವಾಗಿ ಬಲ ಮೊಳಕಾಲನ್ನೂರಿ ಕುಳಿತುಕೊಳ್ಳಬೇಕು.

ತಂದೆ, ತಾತ ಮತ್ತು ಮುತ್ತಾತನವರಿಗೆ ಪಿಂಡವನ್ನು ಅರ್ಪಿಸುವಾಗ ಅವರ ಸ್ವರೂಪವನ್ನು ಮನಸ್ಸಿನಲ್ಲಿ ಸ್ಮರಿಸಿಕೊಳ್ಳಿ.
೧. ಓಂ ತಂದೆಯಾದ ..... ಈ ಪಿಂಡವನ್ನು ಸ್ವೀಕರಿಸಿ, ನಮ್ಮನ್ನು ಆಶೀರ್ವದಿಸಿ. (ಆನಂತರ ಬಲ ಹಸ್ತದಲ್ಲಿ ಒಂದು ಕಾಸು, ದರ್ಬೆ, ಎಳ್ಳು ನೀರನ್ನು ಹಾಕಿಕೊಂಡು ಹೆಬ್ಬೆರಳು ಮತ್ತು ತೋರುಬೆರಳಿನ ಮಧ್ಯೆ ಉದಕವನ್ನು ಹಾಕುತ್ತಾ ಬಟ್ಟಲಿಗೆ ಹಾಕಿ.) ವಸುರೂಪರಾದ ತಂದೆಯೇ ಸ್ವಧಾನಮಸ್ತರ್ಪಯಾಮಿ, ತರ್ಪಯಾಮಿ, ತರ್ಪಯಾಮಿ.

೨. ತಾತನವರಾದ ...... ಈ ಪಿಂಡವನ್ನು ಸ್ವೀಕರಿಸಿ. ನಮ್ಮನ್ನು ಆಶೀರ್ವದಿಸಿ. (ಆನಂತರ ಬಲ ಹಸ್ತದಲ್ಲಿ ಒಂದು ಕಾಸು, ದರ್ಬೆ, ಎಳ್ಳು ನೀರನ್ನು ಹಾಕಿಕೊಂಡು ಹೆಬ್ಬೆರಳು ಮತ್ತು ತೋರುಬೆರಳಿನ ಮಧ್ಯೆ ಉದಕವನ್ನು ಹಾಕುತ್ತಾ ಬಟ್ಟಲಿಗೆ ಹಾಕಿ.) ರುದ್ರರೂಪರಾದ ತಾತನವರೇ ಸ್ವಧಾನಮಸ್ತರ್ಪಯಾಮಿ, ತರ್ಪಯಾಮಿ, ತರ್ಪಯಾಮಿ.

೩. ಮುತ್ತಾತನವರಾದ .....ಈ ಪಿಂಡವನ್ನು ಸ್ವೀಕರಿಸಿ. ನಮ್ಮನ್ನು ಆಶೀರ್ವದಿಸಿ. (ಆನಂತರ ಬಲ ಹಸ್ತದಲ್ಲಿ ಒಂದು ಕಾಸು, ದರ್ಬೆ, ಎಳ್ಳು ನೀರನ್ನು ಹಾಕಿಕೊಂಡು ಹೆಬ್ಬೆರಳು ಮತ್ತು ತೋರುಬೆರಳಿನ ಮಧ್ಯೆ ಉದಕವನ್ನು ಹಾಕುತ್ತಾ ಬಟ್ಟಲಿಗೆ ಹಾಕಿ.) ಆದಿತ್ಯರೂಪರಾದ ಮುತ್ತಾತನವರೇ ಸ್ವಧಾನಮಸ್ತರ್ಪಯಾಮಿ, ತರ್ಪಯಾಮಿ, ತರ್ಪಯಾಮಿ.

**ತಾಯಿ ಮತ್ತು ತಂದೆಯ ತಾಯಿ, ಅಜ್ಜಿಯವರಿಗೆ** ಅವರ ಸ್ವರೂಪವನ್ನು ಮನಸ್ಸಿನಲ್ಲಿ ಸ್ಮರಿಸಿಕೊಳ್ಳಿ.
೧. ಓಂ ನಮ್ಮ ತಾಯಿಯಾದ ..... ಅಮ್ಮ ಈ ಪಿಂಡವನ್ನು ಸ್ವೀಕರಿಸಿ, ನಮ್ಮನ್ನು ಆಶೀರ್ವದಿಸಿ. (ಆನಂತರ ಬಲ ಹಸ್ತದಲ್ಲಿ ಒಂದು ಕಾಸು, ದರ್ಬೆ, ಎಳ್ಳು ನೀರನ್ನು ಹಾಕಿಕೊಂಡು ಹೆಬ್ಬೆರಳು ಮತ್ತು ತೋರುಬೆರಳಿನ ಮಧ್ಯೆ ಉದಕವನ್ನು ಹಾಕುತ್ತಾ ಬಟ್ಟಲಿಗೆ ಹಾಕಿ.) ವಸುರೂಪರಾದ ಮಾತೆಯೇ ಸ್ವಧಾನಮಸ್ತರ್ಪಯಾಮಿ, ತರ್ಪಯಾಮಿ, ತರ್ಪಯಾಮಿ.

೨. ತಂದೆಯ ತಾಯಿ ..... ಅಮ್ಮ ಈ ಪಿಂಡವನ್ನು ಸ್ವೀಕರಿಸಿ, ನಮ್ಮನ್ನು ಆಶೀರ್ವದಿಸಿ. (ಆನಂತರ ಬಲ ಹಸ್ತದಲ್ಲಿ ಒಂದು ಕಾಸು, ದರ್ಬೆ, ಎಳ್ಳು ನೀರನ್ನು ಹಾಕಿಕೊಂಡು ಹೆಬ್ಬೆರಳು ಮತ್ತು ತೋರುಬೆರಳಿನ ಮಧ್ಯೆ ಉದಕವನ್ನು ಹಾಕುತ್ತಾ ಬಟ್ಟಲಿಗೆ ಹಾಕಿ.) ವಸುರೂಪರಾದ ಮಾತೆಯೇ ಸ್ವಧಾನಮಸ್ತರ್ಪಯಾಮಿ, ತರ್ಪಯಾಮಿ, ತರ್ಪಯಾಮಿ.

೩. ತಂದೆಯ ಅಜ್ಜಿಯವರಾದ .... ಈ ಪಿಂಡವನ್ನು ಸ್ವೀಕರಿಸಿ. ನಮ್ಮನ್ನು ಆಶೀರ್ವದಿಸಿ. (ಆನಂತರ ಬಲ ಹಸ್ತದಲ್ಲಿ ಒಂದು ಕಾಸು, ದರ್ಬೆ, ಎಳ್ಳು ನೀರನ್ನು ಹಾಕಿಕೊಂಡ ಹೆಬ್ಬೆರಳು ಮತ್ತು ತೋರುಬೆರಳಿನ ಮಧ್ಯೆ ಉದಕವನ್ನು ಹಾಕುತ್ತಾ ಬಟ್ಟಲಿಗೆ ಹಾಕಿ.) ರುದ್ರರೂಪರಾದ ಅಜ್ಜಿಯವರೇ ಸ್ವಧಾನಮಸ್ತರ್ಪಯಾಮಿ, ತರ್ಪಯಾಮಿ, ತರ್ಪಯಾಮಿ.

೩. ತಂದೆಯ ಮುತ್ತಜ್ಜಿಯವರಾದ.... ಈ ಪಿಂಡವನ್ನು ಸ್ವೀಕರಿಸಿ. ನಮ್ಮನ್ನು ಆಶೀರ್ವದಿಸಿ. (ಆನಂತರ ಬಲ ಹಸ್ತದಲ್ಲಿ ಒಂದು ಕಾಸು, ದರ್ಬೆ, ಎಳ್ಳು ನೀರನ್ನು ಹಾಕಿಕೊಂಡು ಹೆಬ್ಬೆರಳು ಮತ್ತು ತೋರುಬೆರಳಿನ ಮಧ್ಯೆ ಉದಕವನ್ನು ಹಾಕುತ್ತಾ ಬಟ್ಟಲಿಗೆ ಹಾಕಿ.) ಆದಿತ್ಯರೂಪರಾದ ಮುತ್ತಜ್ಜಿಯವರೇ ಸ್ವಧಾನಮಸ್ತರ್ಪಯಾಮಿ, ತರ್ಪಯಾಮಿ, ತರ್ಪಯಾಮಿ.

**ತಾಯಿಯ ತಂದೆ, ತಾತ, ಮುತ್ತಾತ** ಅವರ ಸ್ವರೂಪವನ್ನು ಮನಸ್ಸಿನಲ್ಲಿ ಸ್ಮರಿಸಿಕೊಳ್ಳಿ.
೧. ಓಂ ತಾಯಿಯ ತಂದೆಯಾದ.... ಈ ಪಿಂಡವನ್ನು ಸ್ವೀಕರಿಸಿ, ನಮ್ಮನ್ನು ಆಶೀರ್ವದಿಸಿ. (ಬಲ ಹಸ್ತದಲ್ಲಿ ಒಂದು ಕಾಸು, ದರ್ಬೆ, ಎಳ್ಳು ನೀರನ್ನು ಹಾಕಿಕೊಂಡು) ವಸುರೂಪರಾದ ತಂದೆಯೇ ಸ್ವಧಾನಮಸ್ತರ್ಪಯಾಮಿ, ತರ್ಪಯಾಮಿ, ತರ್ಪಯಾಮಿ.

೨. ತಾಯಿಯ ತಾತರಾದ .... ಈ ಪಿಂಡವನ್ನು ಸ್ವೀಕರಿಸಿ. ನಮ್ಮನ್ನು ಆಶೀರ್ವದಿಸಿ. (ಬಲ ಹಸ್ತದಲ್ಲಿ ಒಂದು ಕಾಸು, ದರ್ಬೆ, ಎಳ್ಳು ನೀರನ್ನು ಹಾಕಿಕೊಂಡು ಹೆಬ್ಬೆರಳು ಮತ್ತು ತೋರುಬೆರಳಿನ ಮಧ್ಯೆ ಉದಕವನ್ನು ಹಾಕುತ್ತಾ ಬಟ್ಟಲಿಗೆ ಹಾಕಿ.) ರುದ್ರರೂಪರಾದ ತಾತನವರೇ ಸ್ವಧಾನಮಸ್ತರ್ಪಯಾಮಿ, ತರ್ಪಯಾಮಿ, ತರ್ಪಯಾಮಿ.

೩. ತಾಯಿಯ ಮುತ್ತಾತರಾದ ..... ಈ ಪಿಂಡವನ್ನು ಸ್ವೀಕರಿಸಿ. ನಮ್ಮನ್ನು ಆಶೀರ್ವದಿಸಿ. (ಆನಂತರ ಬಲ ಹಸ್ತದಲ್ಲಿ ಒಂದು ಕಾಸು, ದರ್ಬೆ, ಎಳ್ಳು ನೀರನ್ನು ಹಾಕಿಕೊಂಡು ಹೆಬ್ಬೆರಳು ಮತ್ತು ತೋರುಬೆರಳಿನ ಮಧ್ಯೆ ಉದಕವನ್ನು ಹಾಕುತ್ತಾ ಬಟ್ಟಲಿಗೆ ಹಾಕಿ.) ಆದಿತ್ಯರೂಪರಾದ ಮುತ್ತಾತನವರೇ ಸ್ವಧಾನಮಸ್ತರ್ಪಯಾಮಿ, ತರ್ಪಯಾಮಿ, ತರ್ಪಯಾಮಿ.

**ತಾಯಿಯ ತಾಯಿ, ಅಜ್ಜಿ, ಮುತ್ತಜ್ಜಿ** ಅವರ ಸ್ವರೂಪವನ್ನು ಮನಸ್ಸಿನಲ್ಲಿ ಸ್ಮರಿಸಿಕೊಳ್ಳಿ.
೧.ತಾಯಿಯ ತಾಯಿಯಾದ..... ಈ ಪಿಂಡವನ್ನು ಸ್ವೀಕರಿಸಿ, ನಮ್ಮನ್ನು ಆಶೀರ್ವದಿಸಿ. (ಆನಂತರ ಬಲ ಹಸ್ತದಲ್ಲಿ ಒಂದು ಕಾಸು, ದರ್ಬೆ, ಎಳ್ಳು ನೀರನ್ನು ಹಾಕಿಕೊಂಡು ಹೆಬ್ಬೆರಳು ಮತ್ತು ತೋರುಬೆರಳಿನ ಮಧ್ಯೆ ಉದಕವನ್ನು ಹಾಕುತ್ತಾ ಬಟ್ಟಲಿಗೆ ಹಾಕಿ.) ವಸುರೂಪರಾದ ಮಾತೆಯೇ ಸ್ವಧಾನಮಸ್ತರ್ಪಯಾಮಿ, ತರ್ಪಯಾಮಿ, ತರ್ಪಯಾಮಿ.

೨. ತಾಯಿಯ ಅಜ್ಜಿಯಾದ..... ಈ ಪಿಂಡವನ್ನು ಸ್ವೀಕರಿಸಿ. ನಮ್ಮನ್ನು ಆಶೀರ್ವದಿಸಿ. (ಆನಂತರ ಬಲ ಹಸ್ತದಲ್ಲಿ ಒಂದು ಕಾಸು, ದರ್ಬೆ, ಎಳ್ಳು ನೀರನ್ನು ಹಾಕಿಕೊಂಡು ಹೆಬ್ಬೆರಳು ಮತ್ತು ತೋರುಬೆರಳಿನ ಮಧ್ಯೆ ಉದಕವನ್ನು ಹಾಕುತ್ತಾ ಬಟ್ಟಲಿಗೆ ಹಾಕಿ.) ರುದ್ರರೂಪರಾದ ಅಜ್ಜಿಯವರೇ ಸ್ವಧಾನಮಸ್ತರ್ಪಯಾಮಿ, ತರ್ಪಯಾಮಿ, ತರ್ಪಯಾಮಿ.

೩. ಓಂ ತಾಯಿಯ ಮುತ್ತಜ್ಜಿಯವರಾದ...... ಈ ಪಿಂಡವನ್ನು ಸ್ವೀಕರಿಸಿ. ನಮ್ಮನ್ನು ಆಶೀರ್ವದಿಸಿ. (ಆನಂತರ ಬಲ ಹಸ್ತದಲ್ಲಿ ಒಂದು ಕಾಸು, ದರ್ಬೆ, ಎಳ್ಳು ನೀರನ್ನು ಹಾಕಿಕೊಂಡು ಹೆಬ್ಬೆರಳು ಮತ್ತು ತೋರುಬೆರಳಿನ ಮಧ್ಯೆ ಉದಕವನ್ನು ಹಾಕುತ್ತಾ ಬಟ್ಟಲಿಗೆ ಹಾಕಿ.) ಆದಿತ್ಯರೂಪರಾದ ಮುತ್ತಜ್ಜಿಯವರೇ ಸ್ವಧಾನಮಸ್ತರ್ಪಯಾಮಿ, ತರ್ಪಯಾಮಿ, ತರ್ಪಯಾಮಿ.

ತಾವೆಲ್ಲರೂ ಈ ಅನ್ನದಿಂದ ಸಂತೃಪ್ತರಾಗಿ ನಮ್ಮನ್ನು ಆರ್ಶೀವದಿಸಿ ನಮ್ಮ ಕೆಲಸಕಾರ್ಯಗಳು ಸರಾಗವಾಗಿ ಸಾಗಲಿ ಮತ್ತು ನಮ್ಮನ್ನು, ನಮ್ಮ ಮಕ್ಕಳನ್ನು ಹಾಗು ಮೊಮ್ಮಕ್ಕಳನ್ನು ಆರ್ಶೀವದಿಸಿ. ತಾವೆಲ್ಲರು ಸದ್ಯಕ್ಕೆ ಕಳಸದಲ್ಲಿ ನೆಲೆಸುವವರಾಗಿ.

ಓಂ ಪ್ರಜಾಪತಯೇ ನಮಃ, ಓಂ ಯಮಾಯ ನಮಃ
**ದೇವತೆಗಳೇ ಸರ್ವ ಬಂದುಬಾಂದವರಿಗೆ ತರ್ಪಣವನ್ನು ಕೊಡಲು ಅಪ್ಪಣೆಯನ್ನು ಕೊಡಿ.**

**ಓಂ ಪಿತೃಲೋಕದಲ್ಲಿರುವ ನಮ್ಮ ಸರ್ವ ಬಂದುಬಾಂದವರನ್ನು ಆಹ್ವಾನಿಸುತ್ತೇವೆ. ಒಬ್ಬೊರಾಗಿ ಬಂದು ತರ್ಪಣವನ್ನು ಸ್ವೀಕರಿಸಲಿ.**
೧. ಬಂದುಬಾಂದವರನ್ನು ಒಬ್ಬೊರಾಗಿ ಆಹ್ವಾನಿಸಿ ಬಲಹಸ್ತದಲ್ಲಿ ಒಂದು ರುಪಾಯಿ ಕಾಸು, ಸಣ್ಣ ದರ್ಬೆ, ಎಳ್ಳು ನೀರನ್ನು ತೆಗೆದುಕೊಂಡು ಅವರ ಹೆಸರನ್ನು ಹೇಳುತ್ತಾ ಸ್ವಧಾನಮಸ್ತರ್ಪಯಾಮಿ ತರ್ಪಯಾಮಿ ತರ್ಪಯಾಮಿ ಎಂದು ಹೆಬ್ಬೆರಳು ಮತ್ತು ತೋರುಬೆರಳಿನ ಮಧ್ಯೆ ಉದಕವನ್ನು ಹಾಕುತ್ತಾ ಬಟ್ಟಲಿಗೆ ಹಾಕಿ.
೨.ಗುರುಗಳನ್ನು ಒಬ್ಬೊಬ್ಬರನ್ನಾಗಿ ಆಹ್ವಾನಿಸಿ ತರ್ಪಣವನ್ನು ಕೊಡಿ.
೩. ಅನಾತರಾಗಿ, ನಿರ್ಗತಿಕರಾಗಿ ಸತ್ತಿರುವ ಸಕಲರನ್ನೂ ಆಹ್ವಾನಿಸಿ ತರ್ಪಣವನ್ನು ಕೊಡಿ.
೩. ಪರಲೋಕವನ್ನೈದಿದ ಸಕಲ ಪಶು, ಪಕ್ಷಿ ಪ್ರಾಣಿಗಳನ್ನು ಆಹ್ವಾನಿಸಿ ತರ್ಪಣವನ್ನು ಕೊಟ್ಟು ಪ್ರಾರ್ಥಿಸಿ.

"ತಾವೆಲ್ಲರೂ ನಿಮ್ಮ ಕರ್ಮಗಳಿಂದ ಮುಕ್ತಿಯನ್ನು ಹೊಂದಿರಿ, ಶಾಂತಿಯನ್ನು ಪಡೆಯಿರಿ. ತಾವೆಲ್ಲರೂ ಈಗಿರುವ ಸ್ಥಾನದಿಂದ ಸತ್ಯಲೋಕಕ್ಕೆ ಪ್ರಯಾಣ ಬೆಳೆಸಿರಿ ಮತ್ತು ನಮ್ಮ ಕುಟುಂಬದ ಎಲ್ಲಾ ಸದಸ್ಯರನ್ನು ಆರ್ಶೀವದಿಸಿ."

ಓಂ ಪ್ರಜಾಪತಯೇ ನಮಃ, ಓಂ ಯಮಾಯ ನಮಃ; ಪ್ರಜಾಪತಿಯಾದ ಸವಿತೃದೇವನೆ ತಾವು ನಮ್ಮ ಬಂದು ಬಾಂದವರು ಮತ್ತು ಇತರರು ಮಾಡಿದ ಪಾಪಕರ್ಮಗಳನ್ನು ಕ್ಷಮಿಸಿ, ಎಲ್ಲರನ್ನೂ ಸತ್ಯಲೋಕಕ್ಕೆ ಕಳುಹಿಸಿಕೊಡಿ."


**ಆನಂತರ ಮೇಲಿನ ಪ್ರಾಥನೆಯನ್ನು ಮಾಡಿ ಕಲಶವನ್ನು ಜರುಗಿಸಿ.**

ಓಂ ಶ್ರೀ ಗುರುಭ್ಯೋ ನಮಃ
ಓಂ ಇಂದ್ರಾಯನಮಃ

ಈ ಮಹಾಲಯ ಅಮಾವಾಸ್ಯೆಯ ದಿನ ತಿಲತರ್ಪಣವನ್ನು ಪರಮೇಶ್ವರನ ಪ್ರೀತ್ಯರ್ಥವಾಗಿ ಸಮಪಿಸುತ್ತೇನೆ. ಮಧ್ಯದಲ್ಲಿ ಯಾವುದಾದರೂ ಲೋಪ ದೋಷವು ಸಂಭವಿಸಿದ್ದರೆ ಪ್ರಾಯಶ್ಚಿತ್ತಾರ್ಥವಾಗಿ ನಾಮತ್ರಯವನ್ನು ಜಪಿಸುತ್ತೇನೆ ಇಂದ್ರಾಯ ನಮಃ, ಇಂದ್ರಾಯ ನಮಃ, ಇಂದ್ರಾಯ ನಮಃ (ಎಂದು ಹೇಳಿ ನೀರನ್ನು ಬಿಡುವುದು.)

**ಓಂ ಶಾಂತಿಃ ಶಾಂತಿಃ ಶಾಂತಿಃ**

# ಮಧ್ಯಪ್ರಾಚ್ಯ ಧರ್ಮಗಳು
(ಲೇಖಕರು: ಮೋಹನ್)




ನಮ್ಮ  ಸ್ಥೂಲಶರೀರದೊಳಗಿರುವ ಜೀವ/ಸೋಲ್/ಪ್ರೇತ ನಮ್ಮ ಶರೀರದ ಹಾಗೇ ಸೂಕ್ಷ್ಮವಾಗಿರುತ್ತದೆ. ಜೀವ ಪೃಥ್ವಿಯ ಮೇಲಿದ್ದಾಗ ಪ್ರೇತವೆಂದು ಕರೆಯುತ್ತಾರೆ. ಸ್ವರ್ಗದಲ್ಲಿದ್ದಾಗ ಅವರು ತೇಜೋಮಯ ಶರೀರವನ್ನು ಹೊಂದಿ ಪಿತೃಗಳೆಂದು ಕರೆಸಿಕೊಳ್ಳುತ್ತಾರೆ. ಸರ್ವೋತ್ತಮ ದೇವನು ಬೆಳಕಾಗಿದ್ದಾನೆ. ಅವನ ಮಕ್ಕಳಾದ ನಾವೂ ಸಹ ಬೆಳಕಾಗಿದ್ದೇವೆ.

ಮಧ್ಯಪ್ರಾಚ್ಯ ಧರ್ಮಗಳು
(ಲೇಖಕರು: ಮೋಹನ್)
ಕಾಪಿರೈಟ್: ಮೋಹನ್
ಪುಟಗಳು:
ತಿತಿತಿ.ಣuಜುಜುಡಿಜಾಣಜಿಡಿಯಣಜುಜಚಿ.ಬಿ

## ಗ್ರಂಥ ಋಣ

ಪಿರಮಿಡ್ ಟೆಕ್ಸ್ಟ
ತ್ಹೊರಾ, ಜೆನೆಸಿಸ್
ಬೈಬಲ್
ಪವಿತ್ರ ಕುರ್‌ಆನ್
ಋಗ್ವೇದ ಸಾಯಣ ಭಾಷ್ಯ
ವಿಕಿಪಿಡಿಯಾ ಮತ್ತು ಇತರ ವೆಬ್‌ಸೈಟುಗಳು

# ಪರಿವಿಡಿ

ಪ್ರಸ್ತಾವನೆ

ಗ್ರಂಥಕರ್ತರ ಪರಿಚಯ

ಅಧ್ಯಾಯ ೧ ದೇವವಾಣಿಯ ಮಹತ್ವ
ಅಧ್ಯಾಯ ೨ ಜಲ ಮತ್ತು ವಾಯುವಿನಿಂದಲೇ ಸೃಷ್ಟಿ
ಅಧ್ಯಾಯ ೩ ದೈವೀಮನಸ್ಸಿನ ಅಲ್ಲಾಹ್
ಅಧ್ಯಾಯ ೪ ಪಿರಮಿಡ್ ಧರ್ಮ
ಅಧ್ಯಾಯ ೫ ಇಲೋಹಿಂ ಮತ್ತು ದೇವಚರರ ಮಹಿಮೆ
ಅಧ್ಯಾಯ ೬. ಪವಿತ್ರ ಕುರ್‌ಆನ್‌ನ ಪ್ರಮುಖ ಸೂಕ್ತಗಳು

## ಪ್ರಸ್ತಾವನೆ

ಭೂಮಿಯ ಮೇಲೆ ಮಾನವರು ಜನ್ಮತಾಳಿದ ಮೇಲೆ ಅವರೂ ಸಹ ಪ್ರಾಣಿಗಳಂತೆಯೇ ವರ್ತಿಸುತ್ತಿದ್ದರು. ಅವರಿಗೆ ಮಾತನಾಡಲು ಬರುತ್ತಿರಲಿಲ್ಲ. ಆದ್ದರಿಂದ ಅವರ ಹೆಸರುಗಳು, ಸಂಬಂಧಗಳು, ಪಶು, ಪಕ್ಷಿ, ನದಿ, ಬೆಟ್ಟಗಳ ಹೆಸರೂ ಗೊತ್ತಿರಲಿಲ್ಲ. ಆಗ ಮಾನವರು ಕೇವಲ ಹೊಟ್ಟೆಯನ್ನು ತುಂಬಿಸಿಕೊಳ್ಳಲು ಪರದಾಡುತ್ತಿದ್ದರು. ಈ ರೀತಿಯಾಗಿ ಸಹಸ್ರಾರು ವರ್ಷಗಳು ಕಳೆದ ತರುವಾಯ ಭಗವಂತನು ಪೃಥ್ವಿಯ ಮೇಲೆ ಯಾವುದೇ ಭಾಷೆ ಇಲ್ಲದುದರಿಂದ ಮಾನವರಿಗೆ ದೇವಭಾಷೆಯಲ್ಲಿ ದೇವವಾಣಿಯನ್ನು ಸರಸ್ವತೀ ನದಿತೀರದಲ್ಲಿದ್ದ ಜನಾಂಗಗಳ ಮೇಲೆ ಇಳಿಸಿದನು. ಅದರಲ್ಲಿ ಎರಡು ರೀತಿಯ ಸಂದೇಶವಿತ್ತು. ಒಂದು ಸಮಾಜ, ಸಂಬಂದಗಳು,  ರಾಜ, ಮಂತ್ರಿ, ಸೇನಾಪತಿಯ ಕರ್ತವ್ಯಗಳು, ಯುದ್ಧಕ್ಕೆ ಸಂಬಂದಿಸಿದ ಆಯುಧಗಳು, ಕುದುರೆ ರಥ ಇತ್ಯಾದಿ ವಾಹನಗಳು, ನದಿಗಳ ಮತ್ತು ಬೆಟ್ಟಗುಡ್ಡಗಳ ಹೆಸರುಗಳು ಇತ್ಯಾದಿ ಸಾಮಾಜಿಕ ವ್ಯವಸ್ಥೆಯ ವಿವರಣೆ ಇತ್ತು. ಈ ವಿವರಣೆಯನ್ನು ಆರ್ಯ ಸಮಾಜದ ಸಂಸ್ಥಾಪಕರಾದ ಸ್ವಾಮಿ ದಯಾನಂದ ಸುಸ್ವತಿಯವರು ತಮ್ಮ ಭಾಷ್ಯದಲ್ಲಿ ವಿವರಿಸಿರುವರು.

ಎರಡನೆಯದು; ದೇವತೆಗಳು, ಅವರ ಪೂಜೆಗಳನ್ನು ಮಾಡುವ ವಿಧಾನ, ಅವರ ಕರ್ತವ್ಯಗಳು ಮತ್ತು ಸರ್ವೋತ್ತಮನಾದ ದೇವನ ವಿವರಗಳು ಇತ್ಯಾದಿಗಳನ್ನು ಗೂಡವಾಗಿ ಆ ದೇವಭಾಷೆಯಲ್ಲಿ ಅಡಗಿಸಿದ್ದಿತು. ಈ ದೇವವಾಣಿಯನ್ನು ಋಗ್ವೇದ ಎಂದು ಕರೆಯುತ್ತಾರೆ. ಸರಸ್ವತೀ ನದಿತೀರದಲ್ಲಿದ್ದ ಜನಾಂಗಕ್ಕೆ ಸಾಮಾಜಿಕ ವಿವರಣೆಗಳು ಅರ್ಥವಾಗಿ ಉತ್ತಮ ಸಮಾಜವನ್ನು ಕಟ್ಟಿಕೊಂಡರು ಹಾಗು ಇತರ ಜನಾಂಗಗಳಿಗೆ ತಾವು ತಿಳಿದುಕೊಂಡ ಋಗ್ವೇದ ರಹಸ್ಯವನ್ನು ತಿಳಿಸಿಹೇಳಿದರು. ಒಂದು ಕಾಲದಲ್ಲಿ ಈ ದೇವಭಾಷೆಯು ಪೃಥ್ವಿಯ ಮೇಲೆಲ್ಲಾ ಹರಡಿಕೊಂಡಿದ್ದಿತು ಎಂದು "ದಿ ಟವರ್  ಬೇಬಲ್" ಕಥೆಯು ತಿಳಿಸುತ್ತದೆ. ಆದರೆ ಕಾಲಕ್ರಮೇಣ ದೇವಭಾಷೆಯು ಮಾನವರಿಂದ ಮರೆಮಾಚಲ್ಪಟ್ಟಿತು. ಋಗ್ವೇದವನ್ನು ಅಡೆದ ವೈದಿಕ ಜನಾಂಗವು ದೇವತೆಗಳ ರಹಸ್ಯವನ್ನು ಅರಿಯಲಾರದೇ ಋಗ್ವೇದ ಪೂಜಾವಿಧಾನವನ್ನೇ ಮರೆತರು. ಅದರ ಜಾಗದಲ್ಲಿ ಉಪನಿಷದಾದಿ ಸಿದ್ಧಾಂತವನ್ನೂ, ವಿಗ್ರಹಾರಾಧನೆಯನ್ನು ಜಾರಿಗೆ ತಂದರು.

ಪೃಥ್ವಿಯ ಮೇಲೆ ಇತರ ಭಾಷೆಗಳು ಬೆಳೆದ ಮೇಲೆ ಸರ್ವೋತ್ತಮ ದೇವನು ಆ ಜನಾಂಗಕ್ಕೆ ದೇವವಾಣಿಯನ್ನು ಕಳುಹಿಸಿದನು ಮತ್ತ ಅದರ ಜೊತೆಯಲ್ಲಿ ಋಗ್ವೇದ ರಹಸ್ಯವನ್ನು ತಿಳಿಸಿರುವನು. ಮನುಕುಲದ ಮಾರ್ಗದರ್ಶನಕ್ಕಾಗಿ ಅನೇಕ ದೈವವಾಣಿಗಳು ಬಂದಿದ್ದರೂ ಅದನ್ನು ಅರ್ಥಮಾಡಿಕೊಳ್ಳಲು ಸಕಲ ಜನಾಂಗವು ವಿಫಲವಾಗಿದೆ. ಯಾರಿಗೂ ಭಗವಂತನ ಮಹಿಮೆಯನ್ನಾಗಲಿ ಸೃಷ್ಟಿರಹಸ್ಯವನ್ನಾಗಲಿ ತಿಳಿದುಕೊಳ್ಳಲು ಸಾಧ್ಯವಾಗಿಲ್ಲ. ಅಂತಿಮವಾಗಿ ಬಂದ ಪವಿತ್ರಕುರ್‌ಆನ್‌ನ

ರಹಸ್ಯವನ್ನು ತಿಳಿಯಲು ಅರಬ್ಬರು ಮತ್ತು ಮುಸ್ಲೀಮ್‌ರೂ ಸಹ ವಿಫಲರಾಗಿದ್ದಾರೆ. ಎಲ್ಲಾ ಧರ್ಮಗಳು ಅರ್ದ ಸತ್ಯವನ್ನು ಮಾತ್ರ ತಿಳಿದಿದ್ದಾರೆ. ಆದ್ದರಿಂದ ಋಗ್ವೇದದಲ್ಲಿ ಹೇಳಿರುವ ಇಂದ್ರನೇ ಓಸಿರಿಸ್, ಯ್ಹವಾ, ಜೆಹೋವಾ ಮತ್ತು ಅಲ್ಲಾಹ್ ಎಂದು ಕರೆಯಲ್ಪಟ್ಟಿದ್ದಾನೆ.

ಮಧ್ಯಪ್ರಾಚ್ಯದ ಜನರು ವಿಗ್ರಹಾರಾಧನೆಯನ್ನು ಮಾಡುತ್ತಿದ್ದರು ಮತ್ತು ಬಹಳಷ್ಟು ಮೂಢನಂಬಿಕೆಗಳಿಂದ ಕೂಡಿದ್ದರು. ಅವರಿಗೆ ನಿಜವಾದ ಸತ್ಯದ ಅರಿವಿರಲಿಲ್ಲ. ಅವರು ಭಾವಿಸಿದ್ದೇನೆಂದರೆ ಹುಟ್ಟಿನಿಂದ ಸಾಯುವವರಿಗೆ ಮಾತ್ರ ತಾವಿರುವೆವೆಂದು ಮತ್ತು ಒಂದು ಸಾರಿ ಮರಣ ಬಂದರೆ ಅಲ್ಲಿಗೆ ಅವರ ಜೀವನವು ಮುಗಿಯಿತೆಂದು ಭಾವಿಸಿದ್ದರೂ. ಮರಣಾನಂತರವೂ ಜೀವನ ಮುಂದುವರೆಯುವುದೆಂದು ಮತ್ತು ನಾವು ಮಾಡುವ ಕರ್ಮಗಳಿಗೆ ಉತ್ತರದಾಯಿಯಾಗಿರುವೆವೆಂದು ತಿಳಿದಿರಲಿಲ್ಲ. ಈಗಿರುವ ನಾಸ್ತಿಕರಂತೆ ಮರಣವೇ ತಮ್ಮ ಕೊನೆಯೆಂದು ಭಾವಿಸಿದ್ದರು.

"ಜೀವನವೇನಿದ್ದರೂ ಕೇವಲ ನಮ್ಮ ಈ ಇಹಲೋಕದ ಜೀವನ ಮಾತ್ರ. ನಾವು ಮರಣಾನಂತರ ಎಷ್ಟು ಮಾತ್ರಕ್ಕೂ ಪುನಃ ಎಬ್ಬಿಸಲ್ಪಡಲಾರೆವೆಂದು ಇಂದು ಇವರು ಹೇಳುತ್ತಾರೆ." (ಪವಿತ್ರ ಕುರ್‌ಆನ್ ೬-೨೯)

ಇಂತಹ ಕಾಲಘಟ್ಟದಲ್ಲಿ ಪ್ರವಾದಿ ಪೈಗಂಬರರು ಜನಿಸಿ ಅಲ್ಲಾಹನ ಅನುಗ್ರಹವನ್ನು ಪಡೆದು ಪವಿತ್ರ ಕುರ್‌ಆನ್‌ನನ್ನು ಪಡೆದರು. ಮೂಢರಾದ ಅರಬ್ಬರಿಗೆ ಮರಣವೇ ಕೊನೆಯಲ್ಲ ಮರಣಾನಂತರವೂ ಸಹ ನಾವು ಜೀವಿಸುವವೆಂದು ತಿಳಿಸಿದರು. ಅಲ್ಲಾಹನೇ ಏಕೈಕ ದೇವರು, ಅವನನ್ನೇ ಪ್ರಾರ್ಥಿಸಬೇಕೇ ವಿನಹ ವಿಗ್ರಹಗಳನ್ನಾಗಲಿ ಅಥವಾ ದೇವಚರರನ್ನಾಗಲಿ ಅಲ್ಲ ಎಂದು ತಿಳಿ ಹೇಳಿದರು. ಯಾವುದೇ ಒಂದು ಸಿದ್ಧಾಂತವನ್ನು ಒಪ್ಪಿರುವ ಜನಾಂಗ ಹೊಸದೊಂದು ವಿಷಯವನ್ನು ತಿಳಿಸಿದಾಗ ಯಾರೇ ಆಗಲಿ ಅದನ್ನು ಸ್ವೀಕರಿಸುವುದಿಲ್ಲ ಮತ್ತು ಅದನ್ನು ತಿರಸ್ಕರಿಸುವರು. ಆದ್ದರಿಂದಲೇ ಅನೇಕ ದೇವವಾಣಿಗಳು ಬಂದಿದ್ದರೂ ಅವನ್ನು ಸ್ವೀಕರಿಸಲು ಭೂಮಿಯಲ್ಲಿ ಯಾರೂ ತಯಾರಿಲ್ಲ. ಈ ಕಾರಣಕ್ಕಾಗಿಯೇ ಅನೇಕ ಯುದ್ಧಗಳು ನಡೆದಿವೆ.

ಯ್ಹವಾ ಅಥವಾ ಅಲ್ಲಾಹನ ಮತ್ತು ದೇವಚರರ ಮಹಿಮೆಯನ್ನು ಯಾರೂ ತಿಳಿಯಲು ಸಾಧ್ಯವಿಲ್ಲ. ಅಲ್ಲಾಹನು ತಾನಾಗೇ ತಿಳಿಸಿದರೆ ಮಾತ್ರ ಅವರ ರಹಸ್ಯವು ನಮಗೆ ತಿಳಿಯುವುದು. ಅಂತಿಮ ದೇವವಾಣಿಯಾದ ಪವಿತ್ರ ಕುರ್‌ಆನ್ ೧೪೦೦ ವರ್ಷಗಳ ಹಿಂದೆ ಭುವಿಗೆ ಇಳಿಯಿತು. ಅರಬ್ಬರ ಭಾಷೆಯಲ್ಲಿಯೇ ದೇವವಾಣಿಯು ಇಳಿದಿದ್ದರೂ ಸಹ ಅದನ್ನು ಪರಿಪೂರ್ಣವಾಗಿ ಅರ್ಥಮಾಡಿಕೊಳ್ಳಲು ಅರಬ್ಬರಾಗಲಿ ಮತ್ತು ಇತರ ದೇಶದ ಮುಸ್ಲೀಮರಾಗಲಿ ವಿಫಲರಾಗಿದ್ದಾರೆ. ಮಧ್ಯಪ್ರಾಚ್ಯ ಧರ್ಮಗಳಿಗೆ ಕೇವಲ ಭೌತಿಕ ಪ್ರಪಂಚದ ತಿಳುವಳಿಕೆ ಮಾತ್ರ ಇದೆ. ಅವರ ಪ್ರಕಾರ ಮಾನವನ ಮರಣಾನಂತರ ಎಲ್ಲರೂ ಸ್ಮಶಾನದಲ್ಲಿಯೇ ಕಿಯಾಮತ್ ದಿನದವರೆಗೂ ಇರುವೆವೆಂದು ತಿಳಿದಿದ್ದಾರೆ. ಇದು ಅವರ ತಪ್ಪು ಅಭಿಪ್ರಾಯವೆಂದು ಈ ಪುಸ್ತಕವನ್ನು ಓದಿದಾಗ ತಿಳಿಯುತ್ತದೆ. ಒಂದೊಂದು ದೈವವಾಣಿಗಳಲ್ಲಿ ಒಂದೊಂದು ರಹಸ್ಯವು ಅಡಗಿದೆ. ಅವೆಲ್ಲವುಗಳನ್ನು ಸಮೀಕರಿಸಿದಾಗ ಪೂರ್ಣಸತ್ಯವು ನಮಗೆ ಗೋಚರವಾಗುತ್ತದೆ. ಆದ್ದರಿಂದ ನಾವು ಎಲ್ಲಾ ದೈವವಾಣಿಗಳಲ್ಲಿ ಅಡಗಿರುವ ಸತ್ಯವನ್ನು ತಿಳಿಯುವ ಪ್ರಯತ್ನ ಮಾಡಬೇಕು. ಈ ಪುಸ್ತಕವು ಆ ಪ್ರಯತ್ನವನ್ನು ಮಾಡಿದೆ.

ಪೈಗಂಬರರು ದೇವಲೋಕಕ್ಕೆ ಹೋಗಿ ಅಲ್ಲಾಹನ ಬಳಿ ಮಾತನಾಡಿದರು ಎಂದು ಅವರ ಜೀವನ ಚರಿತ್ರೆ ತಿಳಿಸುತ್ತದೆ. ಆದರೆ ಈ ವಿಷಯವನ್ನು ಅರ್ಥಮಾಡಿಕೊಳ್ಳಲು ಮುಸ್ಲೀಮರಿಗೆ ಸಾಧ್ಯವಾಗಿಲ್ಲ. ಕೆಲವರು ಅಲ್ಲಾಹನ ಬಳಿ ಹೋದದ್ದನ್ನು ವಿವರಿಸಿದರೂ ಅದು ಅವರ ಕಲ್ಪನೆ ಮತ್ತು ಊಹಾಪೋಹವಾಗಿದೆ. ಪೈಗಂಬರರು ಹೇಗೆ ಅಲ್ಲಾಹನ ಲೋಕಕ್ಕೆ ಹೋದರು? ನಾವೂ ಸಹ ಆ ರೀತಿ ಹೋಗಲು ಸಾಧ್ಯವೇ? ಎಂಬ ಪ್ರಶ್ನೆಗಳಿಗೆ ಮುಸ್ಲಿಮರ ಬಳಿ ಉತ್ತರವಿಲ್ಲ.

ಹೌದು ನಾವು ಸಹ ಅಲ್ಲಾಹನ ಲೋಕಕ್ಕೆ ಹೋಗಬಹುದು. ಈ ಜನ್ಮದಲ್ಲಿಯೇ ಹೋಗಬಹುದು. ಅಲ್ಲಾಹನು ಅನುಗ್ರಹಿಸಿದರೇ ಮಾತ್ರ ನಾವು ಅದರ ರಹಸ್ಯವನ್ನು ತಿಳಿದುಕೊಳ್ಳಬಹುದು. ಋಗ್ವೇದದಲ್ಲಿ ಹೇಳಿರುವ ಪವಿತ್ರ ಅಗ್ನಿಯ ಮುಖಾಂತರ ಯ್ಹವಾ ಅಥವಾ ಅಲ್ಲಾಹ್‌ನನ್ನು ಆರಾಧಿಸಿದಾಗ ನಾವು ಸರ್ವೋತ್ತಮ ದೇವನ ಲೋಕಕ್ಕೆ ಹೋಗಬಹುದು. ಜಿಹಾದ್‌ನಿಂದ, ಇನ್ನೊಬ್ಬರನ್ನು ದ್ವೇಷಿಸುವುದರಿಂದ ಅಲ್ಲ.

ಹಾಗೆಯೇ ಪವಿತ್ರಕುರ್‌ಆನ್‌ನಲ್ಲಿ ಹೇಳಿರುವ ಅನೇಕ ಸೂಕ್ತಗಳ ಅರ್ಥವನ್ನು ತಿಳಿಯಲು ಮುಸ್ಲಿಮರು ವಿಫಲರಾಗಿದ್ದಾರೆ. ಅರಬ್ಬರು ಪವಿತ್ರ ಕುರ್‌ಆನ್‌ನ ವಿಶ್ಲೇಷಣೆಯನ್ನು ಪ್ರೋತ್ಸಾಹ ಮಾಡದಿರುವುದರಿಂದ ಮತ್ತು ಅವರು ಪವಿತ್ರ ಕುರ್‌ಆನ್‌ಅನ್ನು ಬಿಟ್ಟು ಇತರ ದೇವವಾಣಿಗಳ ಕಡೆ ಗಮನ ಕೊಡದಿರುವುದರಿಂದ ಅವರಿಗೆ ಅಲ್ಲಾಹನ ಮಹಿಮೆಯ ಅರಿವಾಗಿಲ್ಲ ಮತ್ತು ಪವಿತ್ರಕುರ್‌ಆನ್ ಅರ್ಥವಾಗಿಲ್ಲ. ಅನೇಕ ಸೂಫಿ ಗುರುಗಳು, ಸಂತರು ಮತ್ತು ಇಮಾಮ್‌ಗಳು ಬಂದಿದ್ದರೂ ಅಲ್ಲಾಹನು ಅವರಿಗೆ ಪೂರ್ಣವಾದ ಮಾರ್ಗದರ್ಶನವನ್ನು ಮಾಡಿಲ್ಲ.

ಪ್ರವಾದಿಗಳು ಅರಬ್ಬರಿಗೆ ಚಿಂತನಶೀಲತೆ ಇಲ್ಲದಿರುವುದನ್ನು ಮೊದಲೇ ತಿಳಿದಿದ್ದರಿಂದ ಅವರು ಹೇಳಿರುವುದೇನೆಂದರೆ ನನ್ನ ಕುಲದಲ್ಲಿ ಅಲ್ಲಾಹನಿಂದ ನೇರವಾಗಿ ಮಾರ್ಗದರ್ಶನ ಪಡೆದ ಒಬ್ಬನು ಹುಟ್ಟುವನು. ಅವನು ನಿಮಗೆ ಅಲ್ಲಾಹನ ರಹಸ್ಯವನ್ನು ತಿಳಿಸುವನು. ನೀವು ಅವನು ಹೇಳಿದಂತೆಯೇ ನಡೆಯಬೇಕು ಎಂದು ಅಪ್ಪಣೆಯನ್ನು ಕೊಟ್ಟಿರುವರು. ಆಲ್ಲಾಹನಿಂದ ಮಾರ್ಗದರ್ಶನವನ್ನು ಪಡೆದ ವ್ಯಕ್ತಿಯನ್ನು ಮುಸಲ್ಮಾನರು 'ಇಮಾಮ್ ಮಹದಿ' ಎಂದು ಕರೆಯುತ್ತಾರೆ. ಮಹದಿ ಪದದ ಅರ್ಥ ಅಲ್ಲಾಹನಿಂದ ನೇರವಾಗಿ ಮಾರ್ಗದರ್ಶನವನ್ನು ಪಡೆದಿರುವವನು ಎಂದು. ಆದ್ದರಿಂದ ಅಲ್ಲಾಹನಿಂದ ಮಾರ್ಗದರ್ಶನ ಪಡೆದ ವ್ಯಕ್ತಿಗಾಗಿ ಮುಸ್ಲಿಮರು ಕಾಯುತ್ತಿರುವರು.

ಮುಸಲ್ಮಾನರು ಇಮಾಮ್ ಮಹದಿಯನ್ನು ಎದುರು ನೋಡುತ್ತಿರುವರು.
ಕ್ರಿಶ್ಚಿಯನ್‌ರು ಜೀಸಸ್ ಹೇಳಿದ ಕಂಫರ್ಟರ್‌ಗಾಗಿ ಎದುರುನೋಡುತ್ತಿರುವರು.
ಯಹೂದಿಗಳು ಮಸೀಹಾನನ್ನು ಎದುರು ನೋಡುತ್ತಿರುವರು.
ಬುದ್ಧರು ಮೈತ್ರೇಯ ಬುದ್ಧನನ್ನು ಎದುರುನೋಡುತ್ತಿದ್ದಾರೆ.

*******

# ಓಂ

# ಅಧ್ಯಾಯ – ೧
# ದೇವವಾಣಿಯ ಮಹತ್ವ
## ಮತ್ತು ಜೀಸಸ್‌ರ ಹೇಳಿಕೆಗಳು

*“ಸತ್ಯಾರ್ಥವನ್ನು ತಿಳಿಸುವ ಮಾರ್ಗವನ್ನು ಯಾವನು ತಾನೆ ಅರಿತಿದ್ದಾನೆ? ಈ ವಿಷಯದಲ್ಲಿ ಯಾವನು ತಾನೆ ನಿಶ್ಚಿತಾರ್ಥವನ್ನು ತಿಳಿಸಬಲ್ಲನು? ದೇವತೆಗಳ ಅಭಿಮುಖವಾಗಿ ಕರೆದುಕೊಂಡು ಹೋಗುವ ಮಾರ್ಗವನ್ನು ಯಾರೂ ಅರಿಯಲಾರರು. ದೇವತೆಗಳ ಅಧೋಮುಖವಾದ ಸ್ಥಾನಗಳು (ಭೌತಿಕ ಪ್ರಪಂಚ) ಮಾತ್ರ ಕಾಣಿಸಿಕೊಳ್ಳುತ್ತವೆ. ಉತ್ತಮವಾದವೂ, ಗೂಢವಾದವೂ ಆದ ಕರ್ಮಗಳಲ್ಲಿ ನಿರತರಾದ ದೇವತೆಗಳ ಗುಪ್ತವಾದ ಸ್ಥಾನಗಳನ್ನು ಯಾರೂ ತಿಳಿಯಲಾರರು.”* (೩–೫೪–೫ ಋಗ್ವೇದ, ಸಾಯಣ ಭಾಷ್ಯ)

“ಈ ಸೃಷ್ಟಿಯು ಸತ್ಯಪೂರ್ಣವಾಗಿ ಸೃಷ್ಟಿಸಿದ್ದೇವೆ. ಆದರೆ ಇವರಲ್ಲಿ ಹೆಚ್ಚಿನವರು ಅರಿಯುವುದಿಲ್ಲ.”
(ಪವಿತ್ರ ಕುರ್‌ಆನ್೪೪–೩೯)

ಮಾನವನು ಅಲ್ಲಾಹನ ಮತ್ತು ದೇವತೆಗಳ ರಹಸ್ಯವನ್ನು ತಿಳಿಯಲು ಸಾಧ್ಯವಿಲ್ಲವೆಂದು ಪ್ರಥಮ ದೇವವಾಣಿಯಾದ ಋಗ್ವೇದವು ಹೇಳುತ್ತಿದೆ. ನಮಗೆ ಕಾಣಿಸುತ್ತಿರುವ ವಿಶ್ವವು ಸ್ಥೂಲ ಸ್ವರೂಪದ್ದಾಗಿದೆ. ಆದರೆ ಅಲ್ಲಾಹ್ ಮತ್ತು ದೇವಚರರ ಲೋಕಗಳು ಸೂಕ್ಷ್ಮ ಪ್ರಪಂಚವಾಗಿದೆ. ಈ ದೇವಲೋಕಗಳು ಮಾನವನಿಂದ ಮರೆಮಾಚಲ್ಪಟ್ಟಿದೆ. ಮಾನವನು ತಾನು ಕಾಣುತ್ತಿರುವ ಪ್ರಪಂಚವೇ ನಿಜವಾಗಿದೆ ಮತ್ತು ಇದನ್ನು ಬಿಟ್ಟು ಬೇರೆ ಏನೂ ಇಲ್ಲ ಎಂದು ಭಾವಿಸಿದ್ದಾನೆ.

ಮಧ್ಯಪ್ರಾಚ್ಯದ ಜನರೂ ಸಹ ಇದೇ ರೀತಿಯಾಗಿ ಭಾವಿಸಿ, ನಾವು ಇರುವವರೆಗಷ್ಟೇ ಜೀವನ ಎಂದು ತಿಳಿದಿದ್ದರು. ಯಹೂದಿಗಳು ದೇವರನ್ನು ನಂಬುತ್ತಿದ್ದರೂ ಅವರಿಗೆ ದೇವರ ಗುಪ್ತವಾದ ಸ್ಥಾನಗಳ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಆದ್ದರಿಂದ ಪ್ರಪಂಚದ ಬಹುಸಂಖ್ಯಾತರು ನಾಸ್ತಿಕರಾಗಿದ್ದಾರೆ. ಭಾರತದಲ್ಲಿ ಕೆಲವರು ದೇವರ ಗುಪ್ತವಾದ ಸ್ಥಾನಗಳನ್ನು ತಿಳಿದಿದ್ದಾರೆ. ಆದರೆ ಅವರೂ ಸಹ ಅರ್ಧಸತ್ಯವನ್ನು ಮಾತ್ರ ತಿಳಿದಿದ್ದಾರೆ.

ಮನುಷ್ಯನು ತನ್ನ ಜೀವನದಲ್ಲಿ ತನಗೆ ಬೇಕಾದುದನ್ನು ಸಾಧಿಸಬಲ್ಲ. ಅವನು ತನ್ನ ಮನಸ್ಸಿನಲ್ಲಿಯೇ ತನ್ನ ವಿಶ್ವವನ್ನು ನಿರ್ಮಾಣ ಮಾಡಿಕೊಳ್ಳುತ್ತಾನೆ. ಆತನ ಮನಸ್ಸಿನಲ್ಲಿ ಅವನ ಪತ್ನಿ,ಮಕ್ಕಳು, ತಾಯಿತಂದೆಯರು, ಬಂಧುಬಾಂಧವರು ಮತ್ತು ಆತನ ವ್ಯವಹಾರದ ವ್ಯಕ್ತಿಗಳು ನೆಲೆಸಿರುತ್ತಾರೆ. ಆತನ ಧರ್ಮ, ನಂಬಿಕೆಗಳು ಅವನ ವಿಶ್ವವಾಗಿದೆ. ಆತನಿಗೆ ಆತನ ವಿಶ್ವವೇ ನಿಜವಾಗಿದೆ. ಅವನು ತನ್ನ ಸಿದ್ಧಾಂತವನ್ನು ನಂಬುತ್ತಾನೆ, ತನ್ನ ನಂಬಿಕೆ, ತಾನು ನಂಬಿದ ದೇವರು ಆತನಿಗೆ ಸತ್ಯವಾಗಿರುವಂತೆ ಗೋಚರಿಸುತ್ತದೆ. ತಾನು ಸತ್ಯವನ್ನು ತಿಳಿದಿದ್ದೇನೆ, ಇತರರು ಸತ್ಯದಿಂದ ದೂರವಿದ್ದಾರೆಂದು ಭಾವಿಸುತ್ತಾನೆ.

ಮನಸ್ಸು ನಮ್ಮ ನಮ್ಮ ಭಾವನೆಗಳಿಗೆ ತಕ್ಕಂತೆ ಪುರಾವೆಗಳನ್ನು ನೀಡುವುದು. ಪ್ರತಿಯೊಬ್ಬ ವ್ಯಕ್ತಿಯ ಮನಸ್ಸು ತನ್ನಲ್ಲಿಯೇ ತನ್ನ ವಿಶ್ವವನ್ನು ಸೃಷ್ಟಿಸಿಕೊಳ್ಳುತ್ತದೆ. ಒಬ್ಬ ವ್ಯಕ್ತಿಯ ನಂಬಿಕೆ, ಸಿದ್ಧಾಂತ, ಅವನ ಸುತ್ತಲಿನ ಸಂಬಂಧಿಕರು ಮತ್ತು ತಾನು ಬೆಳೆದ ವಾತಾವರಣದ ಮೇಲೆ ತನ್ನ ವಿಶ್ವವನ್ನು ಸೃಷ್ಟಿಸಿಕೊಳ್ಳುತ್ತಾನೆ. ನಮ್ಮ ಸಿದ್ಧಾಂತವೇ ಸರಿ ಎಂಬ ಭಾವನೆಯು ನಮ್ಮಲ್ಲಿ ಮೂಡುತ್ತದೆ. ಮನಸ್ಸಿನ ಈ ಗುಣದಿಂದಲೇ ವಿಶ್ವದಲ್ಲಿ ಸಹಸ್ರಾರು ವಿಚಾರಧಾರೆಗಳು ಪ್ರಚಾರಕ್ಕೆ ಬಂದಿದೆ ಮತ್ತು ವೈಜ್ಞಾನಿಕ ಅನ್ವೇಷಣೆಗಳಿಗೂ ಕಾರಣವಾಗಿದೆ. ಯಾರು ತಮ್ಮ ಸಿದ್ಧಾಂತವನ್ನು ಬಿಟ್ಟು ಕೊಡಲು ತಯಾರಿಲ್ಲ.

ವಿಶ್ವದಲ್ಲಿ ಸಹಸ್ರಾರು ಮತಪಂಥಗಳಿವೆ. ಕೋಟ್ಯಾಂತರ ಜನ ಅನುಯಾಯಿಗಳಾಗಿದ್ದಾರೆ. ಪ್ರತಿಯೊಂದು ಮತಪಂಥವೂ ತಾವು ಸತ್ಯವನ್ನು ಪ್ರತಿಪಾದಿಸುತ್ತಿದ್ದೇವೆಂದು ಭಾವಿಸುತ್ತಾರೆ. ಇತರರನ್ನು ತಮ್ಮ ಮತಕ್ಕೆ ಪರಿವರ್ತಿಸಲು ಪ್ರಯತ್ನಿಸುತ್ತಾರೆ. ಅವರು ತಮ್ಮ ನಂಬಿಕೆಗಳಿಗಾಗಿ ಇತರರ ಪ್ರಾಣವನ್ನೇ ತೆಗೆಯುತ್ತಾರೆ. ಅವರನ್ನು ಅವರ ಗುರುಗಳೇ

ಪ್ರಚೋಧಿಸುತ್ತಾರೆ. ಇಷ್ಟೊಂದು ಮತಪಂಥಗಳಲ್ಲಿ ಯಾವುದು ಸತ್ಯ ಯಾವುದು ಮಿಥ್ಯ. ಭಗವಂತನ ದರ್ಶನದಿಂದ ಅಮರತ್ವವನ್ನು ಪಡೆಯುವುದು ಹೇಗೆಂಬ ಪ್ರಶ್ನೆಯು ಏಳುತ್ತದೆ.

ಇಂತಹ ಕಲಸುಮೇಲೋಗರದ ಜ್ಞಾನವಿರುವಾಗ ನಿಜ ಜ್ಞಾನವನ್ನು ತಿಳಿಯಲು ಋಗ್ವೇದ, ಕುರ್‌ಆನ್ ಮತ್ತು ಇತರ ದೇವವಾಣಿಗಳು ಪ್ರಮುಖ ಪಾತ್ರವಹಿಸುತ್ತದೆ. ಋಗ್ವೇದದ ರಹಸ್ಯವನ್ನು ಅರಿತುಕೊಂಡಾಗ ಮಾತ್ರ ಅದರಿಂದ ನಾವು ಅಮರತ್ವವನ್ನು ಪಡೆದುಕೊಳ್ಳಬಹುದು. ಇಲ್ಲದಿದ್ದರೇ ಅಜ್ಞಾನದಲ್ಲಿ ಸಿಲುಕಿ ಮತ್ತೆ ಮತ್ತೆ ತಪ್ಪುಗಳನ್ನು ಮಾಡುತ್ತಿರುತ್ತೇವೆ ಮತ್ತು ಶಿಕ್ಷೆಗೆ ಒಳಪಡುತ್ತೇವೆ.

ಋಗ್ವೇದವು ಪೃಥ್ವಿಯ ಪ್ರಥಮ ದೇವವಾಣಿಯಾಗಿ ದೇವಭಾಷೆಯಲ್ಲಿದೆ. ಯಹೂದಿಗಳ ದೇವವಾಣಿಯು ಹೀಬ್ರೂ ಭಾಷೆಯಲ್ಲಿದೆ, ಪವಿತ್ರ ಕುರ್‌ಆನ್ ಅಂತಿಮ ದೇವವಾಣಿಯಾಗಿದೆ. ಇದುವರೆಗೂ ಅನೇಕ ದೇವವಾಣಿಗಳು ಇತರ ಜನಾಂಗಗಳ ಮೇಲೆ ಇಳಿದಿದೆ. ಇದು ಸತ್ಯವಾದರೆ ಇವೆಲ್ಲದರಲ್ಲಿ ಪ್ರತಿಪಾದಿತನಾದ ದೇವರು ಒಬ್ಬನೇ ಆಗಿರಬೇಕಲ್ಲವೇ. ಯಾರೂ ಇದನ್ನು ಪೂರ್ಣಪ್ರಮಾಣದಲ್ಲಿ ಅರ್ಥೈಸಿಕೊಳ್ಳಲಾಗಲಿಲ್ಲ. ಅದೂ ಅಲ್ಲದೆ ಭಗವಂತನು ದೇವವಾಣಿಯ ರಹಸ್ಯವು ಸಕಾಲ ಬರುವವರೆಗೂ ಯಾರಿಗೂ ಅರ್ಥವಾಗಬಾರದೆಂದು ಅದರ ಮೇಲೆ ಪರದೆಯನ್ನು ಹಾಕಿದ್ದಾನೆ. ಆದ್ದರಿಂದ ಭಗವಂತನೇ ಅಮೃತಘಳಿಗೆ ಬಂದಾಗ ದಾರಿಯನ್ನು ತೋರಿಸುತ್ತಾನೆ. ಈಗ ಕಾಲವು ಪರಿಪಕ್ವವಾಗಿದೆಯೆಂದು ಭಾವಿಸುತ್ತೇನೆ.

ಮಾನವನು ದೈವವಾಣಿಯನ್ನು ಅರ್ಥಮಾಡಿಕೊಳ್ಳಲು ವಿಫಲನಾಗಿರುವ ಕಾರಣ ಏನು? ಓದುಗರಿಗೆ ಆಶ್ಚರ್ಯವಾಗಬಹುದು; ಅನೇಕ ದೇವವಾಣಿಯನ್ನು ಮಾನವನು ಪಡೆದಿದ್ದರೂ ಯಾಕೆ ಮನುಕುಲವು ದಾರಿ ತಪ್ಪಿದೆ? ಇದಕ್ಕೆ ಕಾರಣವೇನು?

ಇದಕ್ಕೆ ಮೂಲಕಾರಣ ಶೈತಾನನೇ ಆಗಿದ್ದಾನೆ. ಮಾನವನ ಮನಸ್ಸು ಶೈತಾನನಿಂದಾಗಿ ತಮಸ್ಸು ಮತ್ತು ಅಜ್ಞಾನದ ಆವರಣಕ್ಕೆ ಸಿಲುಕಿರುವುದರಿಂದ ಜಗತ್ತಿನಲ್ಲಿ ಯುದ್ಧಗಳು, ಕೊಲೆಗಳು, ದ್ವೇಷಾಸೂಯೆ ಇತ್ಯಾದಿಗಳಿಂದ ಮನುಕುಲವು ನರಳುತ್ತಿದೆ. ನಾವೆಲ್ಲರೂ ಸೈತಾನನ ವಶದಲ್ಲಿದ್ದೇವೆ. ಪೃಥ್ವಿಯ ಮೇಲಿರುವ ಎಲ್ಲರೂ ಶೈತಾನನ ವಶದಲ್ಲಿರುವ ಕಾರಣಕ್ಕಾಗಿ ನಮ್ಮಲ್ಲಿರುವ ದೇವರ ರಾಜ್ಯವನ್ನು ನೋಡಲು ಆಗುತ್ತಿಲ್ಲ.

> ಮನುಕುಲವನ್ನೆಲ್ಲಾ ಶೈತಾನನು ಆವರಿಸಿಕೊಂಡಿದ್ದಾನೆ. ಜೀಸಸ್‌ರು ಶೈತಾನನನ್ನು ಸೋಲಿಸಿದ ಹಾಗೆ ನಾವೂ ಸಹ ಸೋಲಿಸಬೇಕಾಗಿದೆ. ಆದರೆ ನಮಗೆ ಶೈತಾನನ್ನು ಗೆಲ್ಲುವ ದಾರಿ ತಿಳಿಯುತ್ತಿಲ್ಲ.

ಈ ಕಾರಣದಿಂದಾಗಿ ಅಲ್ಲಾಹನ ಅನುಗ್ರಹವನ್ನು ಪಡೆಯಲು ದೇವವಾಣಿಗಳು ನಮಗೆ ಸರಿಯಾದ ದಾರಿಯನ್ನು ತೋರಿಸುತ್ತದೆ. ದೇವವಾಣಿಗಳಾದ ಋಗ್ವೇದ, ಜೆನೆಸಿಸ್, ಪವಿತ್ರ ಕುರ್‌ಆನ್ ಮತ್ತು ಪಿರಮಿಡ್ ಧರ್ಮವು ದೈವೀವಾಣಿಯ ಅವತರಣಿಕೆಯಾಗಿದೆ. ಈ ದೇವವಾಣಿಗಳಲ್ಲಿ ಹೇಳಿರುವ ಭಗವಂತನೂ ಸಹ ಒಬ್ಬನೇ ಆಗಿರುವನು. ಈ ದೇವವಾಣಿಗಳು ಪರಸ್ಪರ ಸಹಸ್ರಾರು ವರ್ಷಗಳ ಅಂತರದಲ್ಲಿ ಬಂದಿದ್ದರೂ ಯಾರಿಗೂ ಗೊತ್ತಿಲ್ಲದ ಹಾಗೆ ಒಂದೇ ಸತ್ಯವು ದಾರದಂತೆ ಪೋಣಿಸಲ್ಪಟ್ಟಿದೆ. ಈ ಸತ್ಯವು ಇದುವರೆಗೂ ಯಾರಿಗೂ ಗೋಚರವಾಗದಿರುವುದು ಆಶ್ಚರ್ಯಕರವಾಗಿದೆ.

ಭಗವಂತನ ಅನುಗ್ರಹ ಮತ್ತು ದರ್ಶನ ಯಾರಿಗೆ ಆಗಿರುವುದೋ ಅವರು ಮಾತ್ರ ಈ ದೇವವಾಣಿಗಳ ರಹಸ್ಯವನ್ನು ತಿಳಿದುಕೊಳ್ಳಬಹುದು. ಅವರು ಮಾತ್ರ ಭಗವಂತನ ಮಹಿಮೆಯನ್ನೂ, ದೇವತೆಗಳ ರಹಸ್ಯವನ್ನೂ ಮತ್ತು ಸೃಷ್ಟಿರಹಸ್ಯವನ್ನೂ ತಿಳಿದುಕೊಳ್ಳಬಹುದು. ಕೇವಲ ಪಾಂಡಿತ್ಯದಿಂದ ಮತ್ತು ಅಜ್ಞಾನದಿಂದ ಕೂಡಿದ ಸಾಧನೆಯಿಂದ ಸಾಧ್ಯವಿಲ್ಲ. ಈಗ ಈ ದೇವವಾಣಿಗಳಲ್ಲಿ ಹೊಗಳಿರುವ ಭಗವಂತನು ಯಾರು ಮತ್ತು ಅವನ ಸ್ವರೂಪವೇನು ಎಂಬುದನ್ನು ತಿಳಿಯೋಣ. ಬೇರೆ ಬೇರೆ ಧರ್ಮಗಳಲ್ಲಿ ಭಗವಂತನ ಹೆಸರು ಅವರವರ ಬಾಷೆಗೆ ತಕ್ಕಂತೆ ಬೇರೆಯಾದರೂ, ಆತನ ಮಹಿಮೆಯಿಂದ ಈತನೇ ಭಗವಂತನೆಂದು ತಿಳಿದುಕೊಳ್ಳಬಹುದು.

- ಋಗ್ವೇದದಲ್ಲಿ ದೇವತೆಗಳ ಜ್ಯೇಷ್ಠನಾದ ಇಂದ್ರನೇ ಭಗವಂತನು ಎಂದು ಘೋಷಿಸುತ್ತಿದೆ. ಅನಾದಿಯಾದ ಮಹಾಸಮುದ್ರದ ಮೇಲಿರುವ ಬೆಳಕಿನ ಲೋಕದಲ್ಲಿ ಸಿಂಹಾಸನದ ಮೇಲೆ ಕುಳಿತಿರುವನೆಂದು ಹೇಳುತ್ತದೆ.
- ಪಿರಮಿಡ್ ಧರ್ಮದಲ್ಲಿ ದೇವತೆಗಳ ಜ್ಯೇಷ್ಠನಾದ ಓಸಿರಿಸ್ ಭಗವಂತನಾಗಿದ್ದಾನೆ. ಪಿರಮಿಡ್‌ಅನ್ನು ಓಸಿರಿಸ್‌ನ ಸಮಾದಿ ಎಂದು ಹೇಳುತ್ತಾರೆ. ಅಂದರೆ ಭಗವಂತನು ಪಿರಮಿಡ್ ಒಳಗೆ ಇದ್ದಾನೆ.

- ಯಹೂದಿಗಳು ಭಗವಂತನನ್ನು ಯಹ್ವಾ ಎಂದು ಕರೆಯುತ್ತಾರೆ. ಆತನು ಮೋಡಗಳ ಮೇಲೆ ಸಿಂಹಾಸನದಲ್ಲಿ ಕುಳಿತುಕೊಂಡು ಈ ವಿಶ್ವವನ್ನು ಆಳುತ್ತಿರುವನು ಎಂದು ಹೇಳುತ್ತಾರೆ.
- ಹಾಗೆಯೇ ಕ್ರಿಶ್ಚಿಯನ್ನರೂ ಸಹ ಭಗವಂತನನ್ನು ಜೆಹೋವಾ ಎಂದು ಕರೆಯುತ್ತಾರೆ. ಆತನು ಮೋಡಗಳ ಮೇಲೆ ಸಿಂಹಾಸನದಲ್ಲಿ ಕುಳಿತುಕೊಂಡು ಈ ವಿಶ್ವವನ್ನು ಆಳುತ್ತಿರುವನು ಎಂದು ಅವರೂ ಸಹ ಹೇಳುತ್ತಾರೆ.
- ಪವಿತ್ರ ಕುರಾನ್ ಹೇಳುವುದೇನೆಂದರೆ ಅಲ್ಲಾಹನು ನೀರಿನ ಮೇಲೆ ತನ್ನ ಸಿಂಹಾಸನವನ್ನು ಸ್ಥಾಪಿಸಿ ಭೂಮಿ ಮತ್ತು ಆಕಾಶವನ್ನು ಆಳುತ್ತಿರುವನು ಎಂದು ಹೇಳುತ್ತದೆ.

ಅಂದರೆ ಪೃಥ್ವಿಯ ಎಲ್ಲಾ ಧರ್ಮಗಳು ಅಲ್ಲಾಹನ ಕುರಿತೇ ಹೇಳುತ್ತಿದ್ದರೂ, ಅವರವರ ಭಾಷೆಯಲ್ಲಿ ಅಲ್ಲಾಹನ ಹೆಸರು ಬೇರೆ ಬೇರೆಯಾಗಿರುವುದರಿಂದ ಎಲ್ಲರೂ ನಮ್ಮ ಪುಸ್ತಕದಲ್ಲಿ ಹೇಳಿದ ಭಗವಂತನೇ ಸತ್ಯ ಎಂದು ತಿಳಿದುಕೊಂಡಿದ್ದಾರೆ. ಅವರವರ ಪುಸ್ತಕದಲ್ಲಿರುವ ಸೂಕ್ತಗಳ ಅರ್ಥವನ್ನು ತಿಳಿಯಲು ವಿಶ್ವದ ಜನಾಂಗಗಳಿಗೆ ಅಜ್ಞಾನದಿಂದ ಸಾಧ್ಯವಾಗಿಲ್ಲ. ಎಲ್ಲಾ ದೈವೀಪುಸ್ತಕದಲ್ಲಿರುವ ಸೂಕ್ತಗಳನ್ನು ಅರ್ಥಮಾಡಿಕೊಳ್ಳಲು ವಿಜ್ಞಾನದ ಅವಶ್ಯಕತೆ ಇದೆ. ಹಿಂದಿನ ಕಾಲದಲ್ಲಿ ವಿಜ್ಞಾನವು ಬೆಳೆದಿರದ ಕಾರಣ ಯಾರಿಗೂ ದೇವವಾಣಿಯನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗಿಲ್ಲ.

ವಿಜ್ಞಾನದ ಕೊಡುಗೆಯಲ್ಲಿ ಏನೇ ಕೊರತೆಯಿದ್ದರೂ ಇದರಿಂದ ಶೈತಾನನಿಂದ ಆವೃತರಾದ ಮಾನವರು ಸಂಪಾದಿಸಿರುವ ಜ್ಞಾನವನ್ನು ಹೊಗಳಲೇಬೇಕು. ವಿಜ್ಞಾನವು ಬೆಳೆದು ಕೆಲವು ಶತಮಾನಗಳೇ ಕಳೆದು ಹೋಗಿದೆ ಆದರೂ ಯಾರಿಗೂ ದೇವವಾಣಿಗಳ ಅರ್ಥವಾಗಿಲ್ಲ. ಆದ್ದರಿಂದ ವಿಜ್ಞಾನವು ಎಷ್ಟೇ ಬೆಳೆದರೂ ದೇವವಾಣಿಗಳನ್ನು ಅರ್ಥ ಮಾಡಿಕೊಳ್ಳಲು ಅಲ್ಲಾಹನ ಅನುಗ್ರಹವೇ ಮೂಲಕಾರಣ. ಮಾನವನು ವಿಜ್ಞಾನದ ಬೆಳವಣಿಗೆಯಿಂದ ಮತ್ತು ಅಲ್ಲಹನ ಅನುಗ್ರಹದಿಂದ ಸಕಲ ದೇವವಾಣಿಯನ್ನು ಅರ್ಥ ಮಾಡಿಕೊಳ್ಳಬೇಕಾಗಿದೆ.

೧. ಋಗ್ವೇದವು ಇಂದ್ರನು ನಮ್ಮ ಹೃದಯಗುಹೆಯಲ್ಲಿರುವನೆಂದು ತಿಳಿಸುತ್ತದೆ.
೨. ಅಲ್ಲಾಹನು ಹೇಳಿರುವುದೇನೆಂದರೆ "ನಾವು ಮಾನವನ ಕಂಠನಾಡಿಗಿಂತಲೂ ಹೆಚ್ಚು ಅವನಿಗೆ ಸಮೀಪವಿದ್ದೇವೆ" ಎಂದು ತಿಳಿಸಿರುವರು.
೩. ಜೀಸಸ್‌ರ ವಾಕ್ಯ ಲೂಕ್ ೧೭:೨೧: "ದೇವರ ರಾಜ್ಯವು ನಿಮ್ಮ ಹುಡುಕುವಿಕೆಯಿಂದ ಸಿಗುವುದಿಲ್ಲ ಆದರೆ ಜನರು "ಅದು ಇಲ್ಲಿದೆ ಅಥವಾ ಅಲ್ಲಿದೆ ಎಂದು ಹೇಳುವರು. ಆದರೆ ದೇವರ ರಾಜ್ಯವು ನಿಮ್ಮೊಳಗೆ ಇದೆ"
೪. ಗೋಸ್ಪೆಲ್ ಅಫ್ ಥಾಮಸ್: "ದೇವರ ರಾಜ್ಯವು ನಿಮ್ಮೊಳಗೆ ಮತ್ತು ಹೊರಗಡೆಯೂ ಇದೆ"

ಇದರ ಬಗ್ಗೆ ಎಂದಾದರೂ ಮುಸ್ಲೀಮರು ಯೋಚಿಸಿದ್ದಾರೆಯೇ? ನಮ್ಮ ಕಂಠನಾಡಿಯ ಹತ್ತಿರ ಇರುವ ಜ್ಯೋತಿಸ್ವರೂಪದ ಅಲ್ಲಾಹನನ್ನು ನೋಡಲು ಮುಸ್ಲೀಮರು ಪ್ರಯತ್ನಿಸಿರುವರೇ? ಸೃಷ್ಟಿಯ ರಹಸ್ಯವು ಅನಂತವಾಗಿದೆ. ಆದರೆ ಅವರಿಗೆ ಸೂಕ್ಷ್ಮಪ್ರಪಂಚದ ಮತ್ತು ಸೂಕ್ಷ್ಮಶರೀರದ ತಿಳುವಳಿಕೆಯೇ ಇಲ್ಲ. ಕುರ್‌ಆನ್‌ನಲ್ಲಿ ಹೇಳಿರುವ ಪರಲೋಕದ ಕಲ್ಪನೆಯಾಗಲಿ ದೇವಚರರು ಯಾರು, ಅವರ ಕಾರ್ಯಗಳು ಏನು ಮತ್ತು ಸೃಷ್ಟಿಯು ಹೇಗಾಯಿತು ಎಂಬ ಕಲ್ಪನೆ ಮಧ್ಯಪ್ರಾಚ್ಯಧರ್ಮದವರಿಗೆ ಇಲ್ಲ. ಆದ್ದರಿಂದ ಮಧ್ಯಪ್ರಾಚ್ಯಧರ್ಮದವರಿಗೆ ಅಲ್ಲಾಹನು ಕೇವಲ ಪ್ರಾರ್ಥನೆಯನ್ನು ಮಾಡಲು ಮಾತ್ರ ತಿಳಿಸಿರುವನು.

ಆದರೆ ಜೀಸಸ್‌ರವರೂ ಅಲ್ಲಾಹನ ಮಹಿಮೆಯನ್ನೂ, ಅಲ್ಲಾಹನ ಆಸ್ಥಾನಕ್ಕೆ ಹೋಗುವ ರಹಸ್ಯವನ್ನೂ ಮತ್ತು ಸೃಷ್ಟಿರಹಸ್ಯವನ್ನೂ ತಿಳಿದುಕೊಂಡಿದ್ದರು ಎಂದು ಅವರ ಹೇಳಿಕೆಗಳಿಂದ ತಿಳಿದುಬರುತ್ತದೆ. ಈ ರಹಸ್ಯಗಳನ್ನು ಕ್ರಿಶ್ಚಿಯನ್‌ರಿಗೆ ತಿಳಿಸಲು ಸಕಾಲವಲ್ಲವೆಂದು ಭಾವಿಸಿ ತಮ್ಮ ಶಿಷ್ಯರಿಗೆ ಜೆಹೋವಾನ ರಹಸ್ಯವನ್ನು ತಿಳಿಸಿಲ್ಲ.

ಜೀಸಸ್‌ರು ಮೇಲಿನ ಸೂಕ್ತಗಳಿಗೆ ಹೆಚ್ಚಿನ ವಿವರಣೆಯನ್ನು ಕೊಡದಿದ್ದರೂ, ಅವರು ಹೇಳಿದ್ದೇನೆಂದರೆ ಮುಂದೆ ಒಬ್ಬ ಸಹಾಯಕ/ಮಾರ್ಗದರ್ಶಕ/ಕಂಫರ್‌ಟರ್/ಪರಾಕ್ಲಿಟಸ್ ಬರುವನು. ಈ ಸಹಾಯಕನು ನನ್ನ ಎಲ್ಲ ಶಿಷ್ಯರಿಗೂ ಮಾರ್ಗದರ್ಶನ ಮಾಡುವನು. ಅವನು ಸಕಲ ಶಾಸ್ತ್ರಗಳ ರಹಸ್ಯವನ್ನು ವಿವರಿಸುವನು, ದೇವರಹಸ್ಯವನ್ನೂ ಸಹ ತಿಳಿಸುವನು. ಅವನು ತಾನಾಗೇ ಏನನ್ನೂ ಸಹ ಸ್ವಂತವಾಗಿ ತಿಳಿಸನು. ಅವನು ಮೊದಲೇ ಇದ್ದ ಶಾಸ್ತ್ರರಹಸ್ಯವನ್ನು ಎತ್ತಿ ತೋರಿಸುವನು. ನಾನು ಹೋದ ಮೇಲೆಯೇ ಅವನು ಬರುವನು ಮತ್ತು ಅವನು ಶಾಶ್ವತವಾಗಿ ನಿಮ್ಮ ಬಳಿ ಇರುವನು ಎಂದು ತಿಳಿಸಿರುವರು.

ಅಲ್ಲಾಹ್ ತೀರ್ಪು ಕೊಡುವ ಸಂದರ್ಭದಲ್ಲಿ ಕ್ರೈಸ್ತರೆಲ್ಲರೂ ಜೀಸಸ್‌ನನ್ನು ಅವಲಂಬಿಸಿರುವರು. ಯಾರು ನಿಜವಾಗಿ ಜೀಸಸ್‌ರು ಹೇಳಿದಂತೆ ನಡೆಯುವವರೋ ಅವರು ಇಲೋಹಿಂ ಸೃಷ್ಟಿಸಿರುವ ಸ್ವರ್ಗಕ್ಕೆ ಹೋಗಬಹುದು. ಆದರೆ ಅಲ್ಲಾಹನ ಸಾಮ್ರಾಜ್ಯಕ್ಕೆ ಹೋಗಲು ಸಾಧ್ಯವಿಲ್ಲ. ಜೀಸಸ್‌ರವರ ಹೇಳಿಕೆಯನ್ನು ನೋಡಿ

ಮಥಾಯಿ ೭-೨೨-೨೩ ಈ ರೀತಿ ಹೇಳುತ್ತದೆ. "ಆ ತೀರ್ಪಿನ ದಿನದಂದು ಬಹಳಷ್ಟು ಜನರು ಜೀಸಸ್‌ನನ್ನು ಮೊರೆ ಹೊಕ್ಕು, ಪ್ರಭು, ಪ್ರಭು, ನಾವು ನಿಮ್ಮ ಹೆಸರಲ್ಲಿ ಭವಿಷ್ಯವಾಣಿಯನ್ನು ನುಡಿದಿದ್ದೇವೆ. ನಿಮ್ಮ ಹೆಸರಿನಲ್ಲಿ ದೆವ್ವಗಳನ್ನು ಓಡಿಸಿದ್ದೇವೆ. ನಿಮ್ಮ ಹೆಸರನ್ನು ಹೇಳಿಕೊಂಡು ಆನೇಕ ಪವಾಡಗಳನ್ನು ಮಾಡಿದ್ದೇವೆ. ನಮ್ಮನು ರಕ್ಷಿಸಿ."

ಆದರೆ ಜೀಸಸ್‌ರವರು. "ನೀವು ಯಾರೆಂದು ನನಗೆ ತಿಳಿಯದು, ನೀವು ದೂರ ಹೋಗಿ." ಎಂದು ತಿರಸ್ಕರಿಸುವರು. <u>ಪವಾಡವನ್ನು ಮಾಡುವಂತಹ ಕ್ರಿಶ್ಚಿಯನ್‌ರನ್ನೇ ತಿರಸ್ಕರಿಸಿದ ಜೀಸಸ್‌ರು ಇತರ ಕ್ರಿಶ್ಚಿಯನ್‌ರ ಪಾಪಗಳನ್ನು ಕ್ಷಮಿಸುವರು ಎನ್ನುವುದು ಎಷ್ಟರಮಟ್ಟಿಗೆ ಸರಿ.</u> ಆದರೆ ಜೀಸಸ್‌ರು ಹೇಳಿದ ಮಾರ್ಗದಲ್ಲಿ ನಡೆದರೆ ಸ್ವರ್ಗಕ್ಕೆ ಹೋಗಬಹುದು.

ದೇವರ ರಾಜ್ಯವು ನಮ್ಮೊಳಗೆ ಇರುವುದೆಂಬುದರ ಆರ್ಥ ಬ್ರಹ್ಮಾಂಡದಲ್ಲಿ ಅಲ್ಲಾಹ್, ದೇವಚರರು ಮತ್ತು ಸಪ್ತಸ್ವರ್ಗಗಳು ಇರುವುವು. ಹೋಲಿಸ್ಪಿರಿಟ್ ಬ್ರಹ್ಮಾಂಡವನ್ನೆಲ್ಲಾ ವ್ಯಾಪಿಸಿರುವನು. ಅದರಂತೆಯೇ ಅಲ್ಲಾಹ್, ಸಕಲ ದೇವತೆಗಳು ಮತ್ತು ಸಕಲ ಸ್ವರ್ಗಗಳು ನಮ್ಮ ಶರೀರದಲ್ಲಿಯೂ ಇರುವದು. ಹೋಲಿಸ್ಪಿರಿಟ್ ನಮ್ಮ ಶರೀರವನ್ನೆಲ್ಲಾ ವ್ಯಾಪಿಸಿದೆ. ನಮ್ಮ ಶರೀರವೆಂದರೆ ಸ್ಥೂಲಶರೀರ ಒಂದೇ ಅಲ್ಲ, ಇದರ ಒಳಗಡೆ ಒಟ್ಟು ಐದು ಶರೀರಗಳಿವೆ. ಅವು ಯಾವುವೆಂದರೆ;

೧. ಅಲ್ಲಾಹನು ಸೃಷ್ಟಿಸಿದ ಸ್ವರ್ಗದ ಆಡಮ್‌ನ ಶರೀರ. ಈ ಶರೀರವನ್ನು, ಕಾರಣಶರೀರವೆಂದು ಕರೆಯುತ್ತಾರೆ.
೨. ಇನ್ನೊಂದು ಬ್ರಹ್ಮಾಂಡದ ಪ್ರತಿರೂಪವಾದ ಸೂಕ್ಷ್ಮಶರೀರ. ಬ್ರಹ್ಮಾಂಡದ ಈ ಶರೀರವನ್ನು ವಿರಾಟ್‌ಪುರುಷ ಅಥವಾ ಕಾಸ್ಮಿಕ್ ಮ್ಯಾನ್ ಎಂದು ಕರೆಯುತಾರೆ. ಇದರಲ್ಲಿ ದೇವತೆಗಳು ಅಸುರರು ಮತ್ತು ಶೈತಾನ ಇರುವರು.
೩. ಇವೆರಡನ್ನು ಆವರಿಸಿಕೊಂಡಿರುವ ಸ್ಥೂಲಶರೀರ. ಇದರಲ್ಲಿ ಇನ್ನೂ ಎರಡು ಶರೀರಗಳಿವೆ.
    - ಈ ಸ್ಥೂಲಶರೀರ ಜೀವಂತವಿರಲು ಹೋಲಿಸ್ಪಿರಿಟ್ ಶರೀರವನ್ನೆಲ್ಲಾ ವ್ಯಾಪಿಸಿಕೊಂಡಿದೆ. ಇದನ್ನು ಪ್ರಾಣಮಯ ಶರೀರ ಎಂದು ಕರೆಯುತ್ತಾರೆ.,
    - ಮತ್ತೊಂದು ಮನಸ್ಸಿನ ಶರೀರ (ಮನೋಮಯ ಶರೀರ). ಹೋಲಿಸ್ಪಿರಿಟ್‌ನಲ್ಲಿ ಇಂದ್ರಿಯಗಳ ಮುಖಾಂತರ ದಾಖಲಾದ ಸಂಗತಿಗಳೇ ಮನಸ್ಸಾಗಿದೆ. ಇದರ ವಿವರಣೆಯನ್ನು ಮುಂದೆ ನೋಡೋಣ.

ಈ ಪ್ರಾಣಶರೀರ ಮತ್ತು ಮನೋಮಯಶರೀರವನ್ನು ಜೀವ, ಸೋಲ್ ಅಥವಾ ಎನರ್ಜಿ ಬಾಡಿ ಎಂದು ಕರೆಯುತ್ತಾರೆ.

ಇದರ ಅರ್ಥ ನಾವು ಒಟ್ಟು ಐದು ಶರೀರಗಳನ್ನು ಹೊಂದಿದ್ದೇವೆ. ಮಧ್ಯಪ್ರಾಚ್ಯ ಧರ್ಮದವರಿಗೆ ಈ ಐದು ಶರೀರದ ತಿಳುವಳಿಕೆಯೇ ಇಲ್ಲ. ಪವಿತ್ರ ಕುರ್‌ಆನ್ ಸ್ವರ್ಗದ ಆಡಮ್ ಕುರಿತು ಹೇಳುತ್ತಿದೆ. ಈ ದೇವವಾಣಿಯಲ್ಲಿ ಅಲ್ಲಾಹ್ ನೇರವಾಗಿ ಮುಸ್ಲಿಮರಿಗೆ ಕೆಲವು ತಿಳುವಳಿಕೆಗಳನ್ನು ಕೊಡುಟ್ಟಿರುವನು. ಆದರೆ ಪೂರ್ಣ ಸತ್ಯವನ್ನು ತಿಳಿಸಿಲ್ಲ. ಸ್ವರ್ಗದ ಆಡಮ್ ಒಂದು ಬಾರಿ ಮಾತ್ರ ಸೃಷ್ಟಿಸಲ್ಪಟ್ಟನು ಮತ್ತು ಸೃಷ್ಟಿವಿನಾಶದ ನಂತರ ಅಲ್ಲಾಹನ ಬಳಿ ಹೋಗುವನು. ಆದರೆ ಸ್ಥೂಲಶರೀರದಲ್ಲಿರುವ ಜೀವನು (ಸೋಲ್) ಪದೇ ಪದೇ ಹೊಸ ಮನಸ್ಸಿನೊಂದಿಗೆ ಜನ್ಮವನ್ನು ತಾಳುವನು.

ಜೆನೆಸಿಸ್-೧ ಭೂಮಿಯಲ್ಲಿ ಸೃಷಿಯಾದ ಸ್ಥೂಲ ಶರೀರದ ಆಡಮ್ ಬಗ್ಗೆ ಹೇಳುತ್ತಿದೆ ಎಂಬುದನ್ನು ಎಲ್ಲರೂ ಗಮನಿಸಬೇಕು. ಈ ಆಡಮ್ ಪೃಥ್ವಿ, ಸೂರ್ಯ ಮತ್ತು ಸಪ್ತಸ್ವರ್ಗಗಳ ಬಂಧನಕ್ಕೆ ಸಿಲುಕಿರುವನು. ಈ ಆಡಮ್‌ನಲ್ಲಿರುವ ಪ್ರಾಣ-ಮನಸ್ಸು ಸ್ಥೂಲಶರೀರದ ಮುಖಾಂತರ ಪಾಪ-ಪುಣ್ಯ ಕಾರ್ಯಗಳನ್ನು ಮಾಡಿ ಅದಕ್ಕೆ ತಕ್ಕ ಫಲವನ್ನು ಇಲೋಹಿಂನಿಂದ ಪಡೆಯುತ್ತಿರುವನು. ವಿಶ್ವ ಪ್ರಳಯದ ನಂತರ ಮಾತ್ರ ಸ್ವರ್ಗದ ಆಡಮ್ ಅಲ್ಲಾಹನ ಬಳಿ ಹಿಂತಿರುಗುವನು.

ಯ್ಹವಾ ಅಥವಾ ಅಲ್ಲಾಹ್ ಯಾರು? ಇಲೋಹಿಂ ಯಾರು?

ಆದ್ದರಿಂದ ಪ್ರತಿಯೊಬ್ಬ ಮನುಷ್ಯನೂ ಸಹ ತನ್ನೊಳಗಿರುವ ದೇವರ ರಾಜ್ಯವನ್ನು ಕಾಣಬಹುದು ಮತ್ತು ಅಂತಿಮ ಕಾಲದಲ್ಲಿ ವಿಶ್ವಸಿಂಹಾಸನವಿರುವ ಭಗವಂತನ ಸನ್ನಿಧಾನಕ್ಕೆ ಹೋಗಬಹುದು. ಇದಕ್ಕೆ ಅಲ್ಲಾಹನ ಮತ್ತು ದೇವಚರರ ಮಹಿಮೆಯನ್ನು ತಿಳಿದುಕೊಂಡು ಅವರೆಲ್ಲರ ಅನುಗ್ರಹವನ್ನು ಪಡೆಯಬೇಕು. ಅಲ್ಲಾಹನೇ ಸರ್ವಶ್ರೇಷ್ಠನಾದರೂ ಸಹ ದೇವಚರರ ಮಹಿಮೆಯನ್ನು ತಿಳಿದುಕೊಳ್ಳಬೇಕಾಗುತ್ತದೆ. ಏಕೆಂದರೆ ದೇವಚರರು ನಮ್ಮ ಸ್ಥೂಲಶರೀರವನ್ನು ಸೃಷ್ಟಿಸಿರುವರು. ಇಲೋಹಿಂ ಮತ್ತು ದೇವಚರರು ನಾವು ಸ್ಥೂಲಶರೀರದಿಂದ ಮಾಡಿದ ಪಾಪಗಳನ್ನು ಕ್ಷಮಿಸಿ, ನಮ್ಮನ್ನು ಪರಿಶುದ್ಧಗೊಳಿಸಿ ಅಲ್ಲಾಹನು ಪ್ರಕಟವಾಗುವುದಕ್ಕೆ ಸಹಾಯ ಮಾಡುತ್ತಾರೆ. ನಮ್ಮ ಶರೀರವು ಪರಿಶುದ್ದವಾಗದಿದ್ದರೆ ನ್ಯಾಯತೀರ್ಮಾನವಾಗುವ ದಿನದವರೆಗೂ ಕಾಯಬೇಕಾಗುತ್ತದೆ. ಜೀಸಸ್‌ರವರ ಕೆಳಗಿನ ವಾಕ್ಯವನ್ನು ಗಮನಿಸಿ.

"(ದೇವರ ಬಳಿ ಹೋಗಲು) ಸಣ್ಣ ದ್ವಾರದಿಂದ ಪ್ರವೇಶಿಸಬೇಕು. ದೊಡ್ಡದಾದ ದ್ವಾರವು ಮತ್ತು ಅಗಲವಾದ ದ್ವಾರವು (ಇದರ ಮೂಲಕ ಪ್ರಾಣ ತ್ಯಜಿಸಿದರೆ) ನಮ್ಮ ವಿನಾಶವಾದ ಮಾರ್ಗವಾಗಿದೆ ಮತ್ತು ಬಹಳ ಜನರು ಈ ಮೂಲಕವಾಗಿಯೇ ಹೋಗುವರು. ಆದರೆ ಸಣ್ಣ ದ್ವಾರವು ಕಿರಿಯದ್ದಾಗಿದ್ದು, ಅದು ನಮ್ಮನ್ನು ಅಮೃತತತ್ವಕ್ಕೆ (ಅಲ್ಲಾಹನ ಬಳಿ) ಕರೆದುಕೊಂಡು ಹೋಗುವುದು ಆದರೆ ಕೆಲವರು ಮಾತ್ರ ಈ ದಾರಿಯನ್ನು ಕಂಡುಕೊಳ್ಳುತ್ತಾರೆ." (ಮಥಾಯಿ ೭–೧೩,೧೪)

ಆದರೆ ಪವಿತ್ರ ಅಗ್ನಿಯ ಮುಖಾಂತರ ಸ್ತೋತ್ರವನ್ನು ಮಾಡಿದರೆ ಇದೇ ಜನ್ಮದಲ್ಲಿ ಜೆಹೊವಾನ ಲೋಕಕ್ಕೆ ಹೋಗಬಹುದು.

ಮೇಲಿನ ಸೂಕ್ತದ ಅರ್ಥವೇನೆಂದು ನೋಡೋಣ. ಇಲೋಹಿಂ ಸೃಷ್ಟಿಸಿದ ಮನುಷ್ಯನ ಸ್ಥೂಲಶರೀರದ ಮರಣಾನಂತರ ಸ್ಥೂಲಶರೀರವು ನಶಿಸಿಹೋಗುವುದು. ಸ್ಥೂಲಶರೀರವು ಕೆಲಸಮಾಡಲು ಕಾರಣವಾಗಿರುವ ಸ್ಥೂಲಶರೀರದ ಉಸಿರು (ಪ್ರಾಣ) ಮತ್ತು ಮನಸ್ಸಿನ ಶರೀರವು (ಜೀವ/ಸೋಲ್) ಸಪ್ತಸ್ವರ್ಗಗಳ ಒಂದು ಸ್ಥಾನಕ್ಕೆ ಹೋಗುವುದು. ಅಂದರೆ ಸಾಮಾನ್ಯ ಜನರು ಸಾಯುವಾಗ ಅವರ ಪ್ರಾಣ–ಮನಸ್ಸಿನ ಶರೀರವು ದೊಡ್ಡ ಬಾಗಿಲುಳ್ಳ ಮಾರ್ಗದಿಂದ ಸಪ್ತಮಸ್ವರ್ಗದ ಯಾವುದಾದರೊಂದು ಲೋಕಕ್ಕೆ (ವರ್ಮ್‌ಹೋಲ್/ಟನಲ್/ಬೆಳಕಿನ ಸ್ತಂಭದ ಮೂಲಕ) ಪ್ರಯಾಣ ಮಾಡುವರು. ಇದನ್ನು ಸಾಮಾನ್ಯ ಮರಣ ಎಂದು ಕರೆಯಬಹುದು. ಅಲ್ಲಿನ ಜೀವನವು ನಾವು ಈ ಲೋಕದಲ್ಲಿ ಊಹಿಸಿಕೊಂಡಂತೆ ಇರುವುದಿಲ್ಲ.

ಏಕೆಂದರೆ ಅಲ್ಲಿ ನಮ್ಮ ಸ್ಥೂಲಶರೀರ ಮತ್ತು ಇಂದ್ರಿಯಗಳಿರುವುದಿಲ್ಲ. ಸ್ಥೂಲಶರೀರವು ಮಣ್ಣಲ್ಲಿ ಮಣ್ಣಾಗುತ್ತದೆ. ನಮ್ಮ ಸೂಕ್ಷ್ಮಶರೀರವು ಸಾಧನೆಯಿಂದ ಪರಿಪೂರ್ಣವಾಗಿಲ್ಲ. ನಮ್ಮ ಹೋಲಿಸ್ಪಿರಿಟ್–ಮನಸ್ಸಿನ ಶರೀರದ (ಜೀವ/ಸೋಲ್) ಭಾವನೆ ಮತ್ತು ಆಲೋಚನೆಗಳು ಮಾತ್ರ ಕೆಲಸ ಮಾಡುತ್ತದೆ. ನಮ್ಮ ಒಳಮನಸ್ಸಿನಲ್ಲಿರುವ ಪ್ರಮುಖ ವಿಷಯಗಳು ಮಾತ್ರ ಜಾಗೃತವಸ್ಥೆಯಲ್ಲಿರುತ್ತದೆ. ಆದ್ದರಿಂದ ಅಲ್ಲಿರುವ ಇತರರೊಂದಿಗೆ ನಾವು ಇಲ್ಲಿ ಮಾಡುವ ರೀತಿ ಸಂಭಾಷಣೆ ಸಾಧ್ಯವಿಲ್ಲ. ಉನ್ನತವಾದ ಸಪ್ತಮಸ್ವರ್ಗಕ್ಕೆ ಹೋದರೆ ದೇವತೆಗಳ ದರ್ಶನದ ಜೊತೆ ಆನಂದಮಯವಾಗಿರಬಹುದು. ಅಲ್ಲಿನ ಜೀವನವು ಅಹ್ಲಾದಕರವಾಗಿರುತ್ತದೆ. ಪ್ರತಿಯೊಂದು ಸ್ವರ್ಗಗಳಲ್ಲಿ ಬೇರೆ ಬೇರೆ ವ್ಯವಸ್ಥೆ ಇರುತ್ತದೆ ಮತ್ತು ಅಲ್ಲಿ ಸ್ಥೂಲಶರೀರ ಇಲ್ಲದಿರುವುದರಿಂದ ಅಲ್ಲಿ ಪೃಥ್ವಿಯಲ್ಲಿರುವಂತಹ ಜೀವನವು ಸಾಧ್ಯವಿಲ್ಲ.

ಜೀಸಸ್‌ರು ಹೇಳಿರುವ ನಮ್ಮೊಳಗಿರುವ ಕಿರಿದಾದ ದ್ವಾರವನ್ನು ಕಂಡುಕೊಂಡರೆ ಅದು ನಮ್ಮನ್ನು ಸರ್ವೋತ್ತಮನಾದ ದೇವರ ಬಳಿಗೆ ಕೊಂಡೊಯ್ಯುವುದು. ನಮ್ಮ ಆತ್ಮವು ಗಾಳಿ ಇಲ್ಲದಿರುವ ಸ್ಥಳದಲ್ಲಿರುವ ಜ್ಯೋತಿಯಂತೆ ಕಾಣುವುದು. ಈ ಕಿರಿದಾದ ದ್ವಾರವು ಸ್ವರ್ಗದ ಆಡಮ್‌ನ ಶರೀರದೊಳಗಡೆ ಇರುವುದು. (ಇದನ್ನು ಋಗ್ವೇದವು ಯೂಪಸ್ತಂಭ ಎಂದು ಹೇಳಿದೆ) ಈ ದ್ವಾರದ ಮೂಲಕ ನಮ್ಮ ಜ್ಯೋತಿಸ್ವರೂಪವನ್ನು ಮತ್ತು ಹೋಲಿಸ್ಪರಿಟ್‌ನ್ನು ತೆಗೆದುಕೊಂಡು ಮೇಲಕ್ಕೆ ಹೋಗಿ ಅಲ್ಲಾಹನ ಆಸ್ಥಾನವನ್ನು ತಲುಪಬಹುದು. ಆದ್ದರಿಂದ ನಾವು ಸ್ಥೂಲಶರೀರವಲ್ಲ, ಜ್ಯೋತಿಸ್ವರೂಪರಾಗಿದ್ದೇವೆ.

ಜೀಸಸ್‌ರ 'ದೇವರರಾಜ್ಯ ನಮ್ಮೊಳಗಿರುವುದು ಮತ್ತು ದೊಡ್ಡ ಅಥವಾ ಸಣ್ಣದ್ವಾರ' ಈ ಹೇಳಿಕೆಯನ್ನು ಒಂದು ತಕ್ಕಡಿಗೆ ಮತ್ತು ಬೈಬಲ್‌ನ್ನು ಇನ್ನೊಂದು ಕಡೆ ಹಾಕಿ ತೂಗಿದರೆ ಜೀಸಸ್‌ರ ಮೇಲಿನ ಹೇಳಿಕೆಗಳು ಅತ್ಯಂತ ತೂಕಯುಕ್ತ ಹೇಳಿಕೆಗಳಾಗಿವೆ. ಯಾರಾದರೂ ಈ ಹೇಳಿಕೆಗಳನ್ನು ಅರ್ಥೈಸಿಕೊಂಡು, ಸಾಧನೆಯ ಮಾರ್ಗವನ್ನು ಕಂಡುಕೊಂಡರೆ ಅವರು ಅಮೃತತತ್ವವನ್ನು ಹೊಂದುವರು. ಅವರು ದೇವರ ರಾಜ್ಯದ ಮಹಿಮೆಯನ್ನು ತಿಳಿದುಕೊಳ್ಳುವರು. ಆಗ ಅವರು 'ನಾನೂ ದೇವರ ಮಗನೇ' ಎಂದು ಅರಿತುಕೊಳ್ಳುವರು. ನಾವೂ ಸಹ ಈ ಜನ್ಮದಲ್ಲಿಯೇ ಹೋಗಬಹುದು. ಕಿಯಾಮತ್‌ವರೆಗೂ ಕಾಯುವ ಅಗತ್ಯವಿಲ್ಲ. ಆದ್ದರಿಂದ ಅಲ್ಲಾಹನ ಲೋಕಕ್ಕೆ ಹೋಗಲು, ಮೊದಲು ಹೋಗುವ ದಾರಿಯನ್ನು ತಿಳಿದಿರಬೇಕು.

ಮೊದಲು ನಾವು ಪವಿತ್ರ ಅಗ್ನಿಯ (ಅಗ್ನಿಹೋತ್ರದ) ಮೂಲಕ ದೇವರ ಮತ್ತು ದೇವತೆಗಳ ಆರಾಧನೆ ಮಾಡಬೇಕು. ನಮ್ಮೊಳಗಿರುವ ಸೂಕ್ಷ್ಮಶರೀರಗಳ ಬಗ್ಗೆ ತಿಳಿದಿರಬೇಕು. ನಮ್ಮ ಆತ್ಮ ಮತ್ತು ಅಲ್ಲಾಹನ ಬಗ್ಗೆ ತಿಳಿದಿರಬೇಕು. ನಮ್ಮ ಸೂಕ್ಷ್ಮಶರೀರವು ಪರಿಶುದ್ಧವಾಗಿರಬೇಕು. ದೇವತೆಗಳ ಮತ್ತು ಹೋಲಿಸ್ಪರಿಟ್‌ನ (ವಾಯು/ಪ್ರಾಣ) ಅನುಗ್ರಹವಾಗಿರಬೇಕು, ಎಲ್ಲಕ್ಕಿಂತಲೂ ಮುಖ್ಯವಾಗಿ ಅಲ್ಲಾಹನ ಅನುಗ್ರಹವಾಗಿರಬೇಕು. ಆಗ ಮಾತ್ರ ಜೀಸಸ್‌ರವರು ಹೇಳಿದ ಸೂಕ್ಷ್ಮದ್ವಾರದ ಮೂಲಕ ನಾವೂ ಸಹ ಅಲ್ಲಾಹನ ಆಸ್ಥಾನಕ್ಕೆ ಹೋಗಬಹುದು. ಅಲ್ಲಾಹನ ಅನುಗ್ರಹವಾಗಿರದಿದ್ದರೆ ಯಾರೂ ಸಹ ಅಲ್ಲಾಹನ ಲೋಕಕ್ಕೆ ಹೋಗಲು ಸಾಧ್ಯವಿಲ್ಲ. ಅವರೆಲ್ಲರೂ ಕಿಯಾಮತ್‌ವರೆಗೂ ಕಾಯಲೇಬೇಕು.

ತಿಸ್ರೋದ್ಯಾವಃ ಸವಿತುರ್ದ್ವಾ ಉಪಸ್ಥಾ ಏಕಾ ಯಮಸ್ಯ ಭುವನೇ ವಿರಾಷಾಟ್ ।
ಆಣಿಂ ನ ರಥ್ಯಮಮೃತಾದಿ ತಸ್ಥುರಿಹ ಬ್ರವೀತು ಯ ಉ ತಚ್ಚಿಕೇತತ್ ।। (ಋ ೧-೩೫-೬ ಸಾಭಾ)
"ಸಪ್ತಸ್ವರ್ಗಗಳಲ್ಲಿ (ಒಟ್ಟು ಮೂರು ಹಂತದ ಸ್ವರ್ಗ ವಿಭಾಗಗಳಿವೆ,) ದ್ಯುಲೋಕದ ಎರಡು ಮತ್ತು ಭೂಮಿಯು ಸೂರ್ಯ-ಸವಿತೃವಿನ ಸಾನಿಧ್ಯದಲ್ಲಿದೆ. ಉಳಿದ ಒಂದು, ಕೆಳಗಿನ ಹಂತದ ಸ್ವರ್ಗ ಮರಣಹೊಂದಿದ ಮಾನವರಿಗೆ (ಪ್ರೇತಗಳಿಗೆ) ಯಮನ ಲೋಕದ ಮಾರ್ಗವಾಗಿದೆ. ರಥವು ತನ್ನ ಆಧಾರಭೂತವಾದ ಇರಚಿಯನ್ನು ಅವಲಂಬಿಸಿರುವಂತೆ ನಾಶರಹಿತಗಳಾದ (ದ್ಯಾವಾಪೃಥಿವಿಗಳು) ಈ ಸವಿತೃವನ್ನೇ ಅವಲಂಬಿಸಿವೆ. ಈ ಸವಿತೃವಿನ ಸ್ವರೂಪವನ್ನು ತಿಳಿಯಲು ಮಾನವನಿಂದ ಸಾಧ್ಯವಾಗಲಾರದು. ಯಾವನಿಗದರೂ ತಿಳಿದಿದ್ದಲ್ಲಿ ಅವನಿ ಸವಿತೃದೇವತೆಯ ಅತಿಮಾನುಷವಾದ ಸ್ವರೂಪವನ್ನು ವರ್ಣಿಸಲಿ."
ಉದೀರತಾಮವರ ಉತ್ಪರಾಸ ಉನ್ಮಧ್ಯಮಾಃ ಪಿತರಃ ಸೋಮಾಸ್ಯಃ ।
ಅಸುಂ ಯ ಈಯುರವೃಕಾ ಋತಜ್ಞಾಸ್ತೇ ನೋಽವಂತ ಪಿತರೋ ಹವೇಷು ।। (ಋ ೧೦-೧೫-೧ ಸಾಭಾ)
"ಕೆಳಗಿನ ಲೋಕದಲ್ಲಿರುವ ಪಿತೃಗಳೂ, ಉತ್ತಮಲೋಕದಲ್ಲಿರುವವರೂ, ಮಧ್ಯಮಲೋಕದಲ್ಲಿರುವವರೂ ನಮ್ಮ ಹವಿಸ್ಸುಗಳನ್ನು ಸ್ವೀಕರಿಸಲಿ. ಅವರೆಲ್ಲರೂ ನಮ್ಮಲ್ಲಿ ಅನುಗ್ರಹಬುದ್ಧಿಯುಳ್ಳವರಾಗಿರಲಿ. ತೋಳಗಳಂತೆ ಕ್ರೂರಿಗಳಲ್ಲದವರೂ, ನಮ್ಮ ಯಜ್ಞಕರ್ಮಗಳನ್ನರಿತವರೂ, ನಮ್ಮ ಪ್ರಾಣವನ್ನು ರಕ್ಷಿಸಲು ಬಂದಿರುವವರೂ ಆದ ಆ ಪಿತೃಗಳು ನಮ್ಮ ಆಹ್ವಾನಕಾಲದಲ್ಲಿ ನಮ್ಮನ್ನು ರಕ್ಷಿಸಲಿ."
ನ ವಿ ಜಾನಾಮಿ ಯದಿವೇದಸ್ಮಿ ನಿಣ್ಯಂ ಸಂನದ್ಧೋ ಮನಸಾ ಚರಾಮಿ ।
ಯದಾ ಮಾಗನ್ಪ್ರಥಮಜಾ ಋತಸ್ಯಾದಿದ್ವಾಚೋ ಅಶ್ನುವೇ ಭಾಗಮಸ್ಯಾಃ ।। (ಋಗ್ವೇದ ೧-೧೬೪-೩೭ ಸಾಭಾ)
"ನಾನು ಈ ತತ್ತ್ವವೇ. ನಾನು ಯಾರು ಎಂಬುದನ್ನು ನಾನು ವಿಚಾರಮಾಡಿ ಅರಿತಿಲ್ಲ. ಆದ್ದರಿಂದಲೇ ಅವಿದ್ಯೆಯಿಂದ ಆವರಿಸದಲ್ಪಟ್ಟವನಾಗಿಯೂ, ವಿಷಯಾದಿಗಳಿಂದ ಬಂಧಿತನಾಗಿಯೂ, ಬಹಿರ್ಮುಖವಾದ ಮನಸ್ಸುಳ್ಳವನಾಗಿಯೂ ವ್ಯವಹರಿಸುತ್ತಿದ್ದೇನೆ. ಸತ್ಯಾತ್ಮಕವಾದ ಯಥಾರ್ಥ ಜ್ಞಾನವು ಯಾವಾಗ ಲಭಿಸುತ್ತದೆಯೋ ಆಗ ಋಕ್‌ಗಳ ಅರ್ಥವನ್ನು ಸಾಕ್ಷಾತ್ಕಾರಮಾಡಿಕೊಳ್ಳುತ್ತೇನೆ."

# ಅಧ್ಯಾಯ –೨ ಜಲ ಮತ್ತು ಹೋಲಿಸ್ಪಿರಿಟ್‌ನಿಂದಲೇ ಸೃಷ್ಟಿ

ಜೆನೆಸಿಸ್ ೧–೨: "ಈ ಪೃಥ್ವಿಯು ರೂಪವಿಲ್ಲದೇ ಇತ್ತು, ಶೂನ್ಯವಾಗಿತ್ತು; ಕತ್ತಲು ಆಳವಾದ ಗೂಡವಾದ ಏನನ್ನೋ ವ್ಯಾಪಿಸಿಕೊಂಡಿತ್ತು. ಮತ್ತು ದೇವರ ಉಸಿರು (ಹೋಲಿಸ್ಪರಿಟ್) ನೀರಿನ ಮೇಲೆ ಚಲಿಸುತ್ತಿತ್ತು."

ಅಲ್ಲಾಹನು ಪವಿತ್ರ ಕುರ್‌ಆನ್‌ನಲ್ಲಿ ನಮ್ಮೊಳಗೆ ದೇವರ ರಾಜ್ಯ ಇರುವುದರ ಬಗ್ಗೆ ಯಾವ ಸೂಚನೆಯನ್ನು ಕೊಟ್ಟಿಲ್ಲ ಆದರೆ ಅಲ್ಲಾಹ್ ರುವನೆಂದು ಮಾತ್ರ ಹೇಳಿದೆ. ಪವಿತ್ರ ಕುರ್‌ಆನ್ ಪ್ರಮುಖವಾಗಿ ಸ್ವರ್ಗದ ಆಡಮ್ ಬಗ್ಗೆ ಮಾತ್ರ ಹೇಳುತ್ತಿದೆ. ಸ್ವರ್ಗದ ಆಡಮ್ ಒಂದು ಬಾರಿ ಕೆಳಗೆ ಕಳುಹಿಸಲ್ಪಡುವನು ಮತ್ತೆ ಸೃಷ್ಟಿ ವಿನಾಶದ ನಂತರವೇ ಸ್ವರ್ಗದ ಆಡಮ್ ಅಲ್ಲಾಹನ ಬಳಿ ವಾಪಸ್ಸು ಹೋಗಲು ಸಾಧ್ಯವಾಗುವುದು. ಮುಸ್ಲೀಮರಿಗೆ ಅಲ್ಲಾಹನು ಅವ್ಯಕ್ತಸ್ವರೂಪನು, ಅವನಿಗೆ ಆಕಾರವಿಲ್ಲ ಎಂಬುದಷ್ಟೇ ಗೊತ್ತು. ಆದ್ದರಿಂದ ಮೊದಲು ಅಲ್ಲಾಹನು ಎಲ್ಲಿರುವನು ಎಂದು ತಿಳಿಯೋಣ.

ಪವಿತ್ರ ಕುರ್ ಆನ್ ೧೧–೭ ಹೇಳುವುದೇನೆಂದರೆ: "..... ಅದಕ್ಕಿಂತ (ಸೃಷ್ಟಿಗೆ) ಮುಂಚೆ ಅವನ ವಿಶ್ವಸಿಂಹಾಸನ ಅರ್ಥಾತ್ ಅಧಿಪತ್ಯವು <u>ನೀರಿನ ಮೇಲಿತ್ತು</u>....." ಏನೀ ವಾಕ್ಯದ ಅರ್ಥ? ಯಾವುದೂ ಈ ನೀರು? ಕೆಲವರು ಭಾವಿಸುವುದೇನೆಂದರೆ ಸಮುದ್ರದಲ್ಲಿ ಜೀವ ಉಗಮವಾಗಿರುವುದರಿಂದ ಸಮುದ್ರದ ಮೇಲೆ ಮೋಡಗಳ ಮಧ್ಯೆ ಅಲ್ಲಾಹನ ಸಿಂಹಾಸನವಿರಬಹುದೆಂದು ಬಾವಿಸುತ್ತಾರೆ. ಸಮುದ್ರದ ಬಗ್ಗೆ ಪವಿತ್ರ ಕುರ್‌ಆನ್ ಈ ರೀತಿ ಹೇಳುತ್ತಿದೆ.

"ಎರಡು ಸಮುದ್ರಗಳನ್ನು ಸೇರಿಸಿಟ್ಟಿರುವವನು ಅವನೇ. ಒಂದು ರುಚಿಕರವೂ ಸಿಹಿಯೂ ಆಗಿದೆ. ಇನ್ನೊಂದು ಉಪ್ಪೂ ಕಹಿಯೂ ಆಗಿದೆ. ಇವೆರಡರ ಮಧ್ಯೆ ಒಂದು ತೆರೆ ಇದೆ. ಅವು ಪರಸ್ಪರ ಬೆರೆಯದಂತೆ ಮಾಡುವ ಒಂದು ತಡೆ ಇದೆ." (೨೫–೫೩)

"ಅವನು ಎರಡು ಸಮುದ್ರಗಳನ್ನು ಪರಸ್ಪರ ಒಟ್ಟು ಸೇರಲು ಬಿಟ್ಟನು." (೫೫–೧೯)

".....ಆಕಾಶಗಳೂ ಭೂಮಿಯೂ ಕೂಡಿಕೊಂಡಿದ್ದು ಆನಂತರ ನಾವು ಅವುಗಳನ್ನು ಬೇರ್ಪಡಿಸಿದ್ದನ್ನೂ, ಪ್ರತಿಯೊಂದು ಜೀವಿಯನ್ನು ನೀರಿನಿಂದ ಸೃಷಿಸಿದ್ದನ್ನೂ ಕಾಣಲಿಲ್ಲವೇ?....." (೨೧–೩೦)

"ಅದರೂ ಅವುಗಳ ನಡುವೆ ಒಂದು ಪರದೆ ಅಡ್ಡಲಾಗಿದ್ದು ಅದನ್ನು ಅವು ಮೀರುವುದಿಲ್ಲ." (೫೫–೨೦)

ಮೇಲಿನ ಸೂಕ್ತಗಳ ಅರ್ಥ ಸಕಲ ಸೃಷ್ಟಿಯು ಮಹಾ ಸಮುದ್ರದಿಂದಲೇ ಆಗಿದೆ. ಇತರ ದೇವವಾಣಿಗಳು ಇದರ ಬಗ್ಗೆ ಏನು ಹೇಳುತ್ತದೆ ನೋಡೋಣ.

- ಋಗ್ವೇದವು ಸೃಷ್ಟಿಯ ಆದಿಯಲ್ಲಿ ಆಕಾಶದ ತುಂಬೆಲ್ಲಾ ಉದಕಗಳು ತುಂಬಿದ್ದಿತು ಮತ್ತು ಸಕಲವೂ ಮಹಾಸಮುದ್ರದಿಂದಲೇ ಸೃಷ್ಟಿಯಾಯಿತೆಂದು ಹೇಳುತ್ತದೆ ಹಾಗೂ ಭಗವಂತನ ಸಿಂಹಾಸನವು ಮಹಾಸಮುದ್ರದ ಮೇಲಿತ್ತು ಎಂದು ಹೇಳುತ್ತದೆ.
- ಪಿರಮಿಡ್ ಧರ್ಮವೂ ಸಹ ಮಹಾಸಮುದ್ರದಲ್ಲಿಯೇ ಸೃಷ್ಟಿಯಾಗಿ ಮಹಾಸಮುದ್ರದಲ್ಲಿಯೇ ಲಯವಾಗುತ್ತದೆ ಎಂದು ಹೇಳುತ್ತದೆ.
- ಜೆನೆಸಿಸ್ ೧–೨ರ ಪ್ರಕಾರ ಮೊದಲು ಪೃಥ್ವಿಯಾದಿ ಎಲ್ಲವೂ ಜಲರೂಪದಲ್ಲಿಯೇ ಇದ್ದಿತು.

ಪವಿತ್ರ ಕುರ್‌ಆನ್ ಮತ್ತು ಇತರ ದೇವವಾಣಿಗಳಲ್ಲಿ ಹೇಳಿರುವ ಎರಡು ಸಮುದ್ರ ಯಾವುದು ಮತ್ತು ಅದು ಎಲ್ಲಿದೆ? ಕೆಲವು ಮುಸ್ಲೀಮರು ಹಿಂದೂಮಹಾಸಾಗರ ಮತ್ತು ಅಟ್ಲಾಂಟಿಕ್ ಮಹಾಸಾಗರವಿರಬಹುದೆಂದು ಹೇಳುತ್ತಾರೆ. ಇನ್ನೂ ಕೆಲವರು ಅಟ್ಲಾಂಟಿಕ್ ಸಾಗರ ಮತ್ತು ಪೆಸಿಫಿಕ್ ಸಾಗರವು ಇರಬಹುದು ಎಂದು ಭಾವಿಸುತ್ತಾರೆ. ಅವರ ಪ್ರಕಾರ ಈ ಎರಡು ಸಮುದ್ರವು ಸಂಗಮವಾಗುವ ಸ್ಥಳದಲ್ಲಿ ನೋಡಿದರೆ ಈ ಎರಡೂ ಸಮುದ್ರವು ಒಂದರೊಳಗೊಂದು ಮಿಳಿತವಾಗುವುದಿಲ್ಲ. ಈ ಎರಡೂ ಸಮುದ್ರದ ಮಧ್ಯೆ ಒಂದು ತೆರನಾದ ತೆಳು ಪರದೆಯು ಇರುವುದೆಂದು ಹೇಳುತ್ತಾರೆ. ಆದ್ದರಿಂದ ಪವಿತ್ರ ಕುರ್‌ಆನ್‌ನಲ್ಲಿ ಹೇಳಿರುವ ಸಮುದ್ರವು ಇದೇ ಇರಬಹುದು ಎಂದು ಬಾವಿಸಿದ್ದಾರೆ. ಏಕೆಂದರೆ ವಿಜ್ಞಾನಿಗಳ ಪ್ರಕಾರ ಸಮುದ್ರದಲ್ಲಿಯೇ ಜೀವಿಗಳ ಉತ್ಪತ್ತಿಯಾಗಿದೆ. ಕೆಳಗಿನ ಚಿತ್ರದ ವಿವರಣೆಯನ್ನು ತಿಳಿಯೋಣ.




## ಚಿತ್ರದ ವಿವರಣೆ

೧. <u>ಮೊದಲನೆಯ ಚಿತ್ರ:</u> ಋ ೧೦-೧೨೯-೧ ಸರ್ವತ್ರ ಗಾಡಾಂಧಕಾರವು ಇದ್ದಿತು. ಅದರ ಮಧ್ಯದಲ್ಲಿ ಉದಕಗಳಿದ್ದಿತು. ಈಗಿರುವಂತೆ ಸೂರ್ಯ, ಗ್ರಹ, ನಕ್ಷತ್ರಾದಿಗಳು ಇರಲಿಲ್ಲ. ಕೇವಲ ಉದಕಗಳಿದ್ದಿತು.

೨. <u>ಎರಡನೇ ಚಿತ್ರ:</u> ಕತ್ತಲೆಯನ್ನು ಸರಿಸಿದಾಗ; ಮಧ್ಯದಲ್ಲಿ ಅನಾದಿಯಾದ ಮಹಾಸಮುದ್ರವಿದ್ದಿತು, ಅದರ ಸುತ್ತಲೂ ಉಸಿರು/ವಾಯು/ಶಕ್ತಿ ಇದ್ದಿತು ಮತ್ತು ಮಹಾಸಮುದ್ರದಲ್ಲಿ ಎರಡು ರೀತಿಯ ಸಮುದ್ರವಿದ್ದಿತು ೧. ಸಿಹಿ ಸಮುದ್ರ, ೨. ಉಪ್ಪು ಮತ್ತು ಕಹಿಯ ಸಮುದ್ರ. ಸಕಲವನ್ನು ಗಾಢಾಂಧಕಾರವು ವ್ಯಾಪಿಸಿತ್ತು.
**ಜೆನೆಸಿಸ್ ೧-೨ರ ಪ್ರಕಾರ: "ಈ ಪೃಥ್ವಿಯು ರೂಪವಿಲ್ಲದೇ ಇತ್ತು, ಶೂನ್ಯವಾಗಿತ್ತು; ಕತ್ತಲು ಆಳವಾದ ಗೂಡವಾದ ಏನನ್ನೋ ವ್ಯಾಪಿಸಿಕೊಂಡಿತ್ತು. ಮತ್ತು ದೇವರ ಉಸಿರು (ಹೋಲಿಸ್ಪರಿಟ್) ಉದಕದ ಮೇಲೆ ಚಲಿಸುತ್ತಿತ್ತು."**

೩. <u>ಮೂರನೆ ಚಿತ್ರ:</u> ಗಾಢಾಂಧಕಾರದ ಆಳದಿಂದ ಅವ್ಯಕ್ತಸ್ವರೂಪವು ಜಾಗೃತವಾಯಿತು. ಅದರಲ್ಲಿ ಸೃಷ್ಟಿಯ ಕಾಮಬೀಜ ಮತ್ತು ಸಕಲ ಜೀವಿಗಳ ಕರ್ಮಗಳು ಸೂಕ್ಷ್ಮವಾಗಿ ನೆಲೆಸಿತ್ತು. ಇದರ ಅರ್ಥ ಅದು ವಿಶ್ವಮನಸ್ಸಾಗಿರಬೇಕು. ವಿಶ್ವಮನಸ್ಸಿನಲ್ಲಿ ಎರಡು ಧೃವಗಳಿವೆ. ೧. ದೈವೀಮನಸ್ಸಿನ ಧೃವ, ೨. ಅಸುರೀಮನಸ್ಸಿನ ಧೃವ. ಈ ಎರಡೂ ಧೃವಗಳು ಉಸಿರಿನಲ್ಲಿ ಚಕ್ರಗಳನ್ನು ಸೃಷ್ಟಿಸಿ ಅನಾದಿಯಾದ ಮಹಾಸಮುದ್ರವನ್ನು ಪ್ರವೇಶಿಸಿದಾಗ ದೈವೀಧೃವವು ಸಿಹಿ ಸಮುದ್ರವನ್ನು ಊರ್ಧ್ವಮುಖವಾಗಿ ನದಿಗಳಂತೆ ಹರಿಯುವಂತೆ ಮಾಡಿತು ಮತ್ತು ಉಪ್ಪು ಮತ್ತು ಕಹಿ ಸಮುದ್ರವು ಅಸುರೀಧೃವದಿಂದ ಕೆಳಮುಖವಾಗಿ ಹರಿಯತೊಡಗಿತು. ದೈವೀಧೃವವು ಸಿಹಿ ಸಮುದ್ರದಲ್ಲಿ ದೇವತೆಗಳಿಗೆ ಜನ್ಮ ನೀಡಿತು ಮತ್ತು ಅಸುರೀಧೃವವು ಉಪ್ಪು ಮತ್ತು ಕಹಿ ಸಮುದ್ರದಲ್ಲಿ ಅಸುರರಿಗೆ ಜನ್ಮ ನೀಡಿತು.

೪. <u>ನಾಲ್ಕನೇ ಚಿತ್ರ:</u> ಅನಾದಿಯಾದ ಮಹಾಸಮುದ್ರವು ಪುರುಷ ರೂಪ ತಳೆಯಿತು. ಅದನ್ನು ವಿರಾಟ್ ಪುರುಷ ಅಥವಾ ಕಾಸ್ಮಿಕ್ ಮ್ಯಾನ್ ಎಂದು ಕರೆಯುತ್ತಾರೆ. ಪುರುಷನಲ್ಲಿ ದೇವತೆಗಳು ಪ್ರಥಮಬಾರಿಗೆ ಸೂಕ್ಷ್ಮ ಸೂರ್ಯನನ್ನು ಪ್ರಕಟಮಾಡಿದರು.

೫. ಐದನೇ ಚಿತ್ರ: ಉಪ್ಪು ಮತ್ತು ಕಹಿ ಸಮುದ್ರದಲ್ಲಿದ್ದ ಅಸುರರು ಸೂರ್ಯನ ತೇಜಸ್ಸನ್ನು ಸಹಿಸಲಾಗಲಿಲ್ಲ ಏಕೆಂದರೆ ದೂರದಲ್ಲಿ ನಡೆದ ಎಲ್ಲವೂ ಅವರ ಕಣ್ಮುಂದೆ ಇರುವಂತೆ ತೋರುವುದು. ಆದ್ದರಿಂದ ಅಸುರರಾಜ ವೃತ್ರಾಸುರನು ಸೂರ್ಯನ ಸುತ್ತಲೂ ಅಂಧಕಾರ ಮತ್ತು ಅಜ್ಞಾನದ ಕೋಟೆಯನ್ನು ಕಟ್ಟಿ ಅಹಿ ಎಂಬ ಹೆಬ್ಬಾವಿನ (ಲೆವಿಯಾಥನ್ ಬೀಸ್ಟ್) ಸ್ವರೂಪದಿಂದ ಕೋಟೆಯನ್ನು ಸುತ್ತಿಕೊಂಡು ಮಲಗಿದನು. ಸೂರ್ಯನಂ ಕತ್ತಲಲ್ಲಿ ಮುಳುಗಿದನು. ಊರ್ಧ್ವಮುಖವಾಗಿ ಹರಿಯುತ್ತಿದ್ದ ನದಿಗಳು ಸ್ತಬ್ಧವಾದವು. ಉದಕಗಳು ತಟಸ್ಥವಾದವು ಮತ್ತು ದೇವತೆಗಳು ದಿಕ್ಕಾಪಾಲಾಗಿ ಓಡಿದರು.

೬. <u>ಆರನೇ ಚಿತ್ರ</u>: ಆಗ ಇಂದ್ರನು ಅಹಿಯನ್ನು (ಲೆವಿಯಾಥನ್ ಬೀಸ್ಟ್) ಸಂಹಾರ ಮಾಡಿ, ಪಾತಾಳಕ್ಕೆ ತಳ್ಳಿ ಅದರ ದ್ವಾರವನ್ನು ಶಾಶ್ವತವಾಗಿ ಮುಚ್ಚಿ ಅಂಧಕಾರದಲ್ಲಿದ್ದ ಸೂಕ್ಷ್ಮ ಸೂರ್ಯನನ್ನು ಅಂತರಿಕ್ಷದಲ್ಲಿ ಅಂದರೆ ವಿರಾಟ್ ಪುರುಷ/ಕಾಸ್ಮಿಕ್ ಮ್ಯಾನ್ ಶಿರಸ್ಸಿನಲ್ಲಿ ಸ್ಥಾಪಿಸಿದನು. ಆನಂತರ ಸ್ಥೂಲ ಪ್ರಪಂಚದ ಸೃಷ್ಟಿಗೆ ಚಾಲನೆಯನ್ನು ಕೊಟ್ಟನು.

ನಮ್ಮನ್ನೂ ಸಹ ಶೈತಾನನು ಆವರಿಸಿಕೊಂಡಿರುವನು. ನಮ್ಮ ಪುಣ್ಯಕ್ಕೆ ಹಾವಿನ ರೂಪದಲ್ಲಿರುವ (ಲೆವಿಯಾಥನ್ ಬೀಸ್ಟ) ಶೈತಾನನು ನಿದ್ರಿಸುತ್ತಿರುವನು. ಆದರೆ ಮಾನವನು ಕಾಮ, ಕ್ರೋದ, ಲೋಭ, ಮೋಹ, ಮಧ, ಮಾತ್ಸರ್ಯವೆಂಬ ರಾಗದ್ವೇಷಗಳಿಗೆ ಒಳಗಾದಾಗ ಶೈತಾನನು ಜಾಗೃತನಾಗಿ ಮಾಡಬಾರದ ಪಾಪಗಳನ್ನು ಮಾಡುವನು. ಆನಂತರ ಮತ್ತೆ ನಿದ್ರಿಸುವನು. ಆದರೆ ರಾಜಕೀಯ ವ್ಯಕ್ತಿಗಳು, ಅಧಿಕಾರ ಇರುವವರು ಮತ್ತು ಸಾಹುಕಾರರು ಮಧದಿಂದ ಯುದ್ಧಗಳನ್ನೂ, ಕೊಲೆಗಳನ್ನು ಮಾಡುವರು ಮತ್ತು ಜನರನ್ನು ಗುಲಾಮರಾಗಿ ಮಾಡಿಕೊಳ್ಳುವರು. ಈ ವ್ಯಕ್ತಿಗಳಲ್ಲಿ ಶೈತಾನನು ವಿಜೃಂಭಿಸುವನು ಮತ್ತು ರಕ್ತದ ಕೋಡಿಯನ್ನು ಹರಿಸುವನು.

## ಸೃಷ್ಟಿಯ ವಿನಾಶ

ಪವಿತ್ರ ಕುರ್‌ಆನ್ ೨೧–೧೦೪: “ಗ್ರಂಥಗಳಗಾಗಿ ಸುರುಳಿಯಲ್ಲಿ ಹಾಳೆಗಳನ್ನು ಸುತ್ತುವ ಹಾಗೆ ನಾವು ಅಂದು ಆಕಾಶವನ್ನು ಸುತ್ತಿಬಿಡುವೆವು. ನಾವು ಹಿಂದೆ ಸೃಷ್ಟಿಯ ಆರಂಭ ಮಾಡಿದಂತೆಯೇ ಅದನ್ನು ಪುನರಾವರ್ತಿಸುವೆವು. ಇದು ನಮ್ಮ ಹೊಣೆಯಲ್ಲಿರುವ ಒಂದು ವಾಗ್ದಾನವಾಗಿದೆ ಮತ್ತು ಈ ಕಾರ್ಯವನ್ನು ನಾವು ಮಾಡಿಯೇ ತೀರುವೆವು.”

ಪವಿತ್ರ ಕುರ್‌ಆನ್ ೨೨–೧: “ಜನರೇ ನಿಮ್ಮ ಪ್ರಭುವಿನ ಕ್ರೋದವನ್ನು ಭಯಪಡಿರಿ. ವಾಸ್ತವದಲ್ಲಿ ಪುನರುತ್ಥಾನದ ಘಳಿಗೆಯ ಮಹಾಕಂಪನವು (ಭಯಾನಕ) ವಿಷಯವಾಗಿದೆ.”

ಪವಿತ್ರ ಕುರ್‌ಆನ್ ೩೬–೫೩: “ಅದೊಂದು ಘನಸ್ಫೋಟವಾಗಿರುವುದು ಮತ್ತು ಎಲ್ಲರೂ ನಮ್ಮ ಮುಂದೆ ಹಾಜರುಗೊಳಿಸಲ್ಪಡುವರು.”

ಪವಿತ್ರ ಕುರ್‌ಆನ್ ೩೪–೭: “ನಿಮ್ಮ ದೇಹದ ಪ್ರತಿಯೊಂದು ಕಣವೂ ಚೆಲ್ಲಾಪಿಲ್ಲಿಯಾಗಿ ಹೋಗಿ ಬಿಟ್ಟ ಬಳಿಕ ನೀವು ಪುನಃ ಹೊಸತಾಗಿ ಸೃಷ್ಟಿಸಲ್ಪಡುವಿರೆಂಬ ಸುದ್ದಿಯನ್ನು ತಿಳಿಸುವಂತಹ ಒಬ್ಬ ವ್ಯಕ್ತಿಯನ್ನು ನಾವು ನಿಮಗೆ ತೋರಿಸಿಕೊಡಲೇ?”

ಯಹೂದಿಗಳ ಜೆನೆಸಿಸ್‌ನ ಪ್ರಕಾರ ಸೃಷ್ಟಿಗೆ ಮೊದಲು ಹೋಲಿಸ್ಪರಿಟ್ ಮಹಾಸಮುದ್ರದ ಮೇಲೆ ವ್ಯಾಪಿಸಿಕೊಂಡಿದ್ದಿತು ಎಂದು ಹೇಳುತ್ತದೆ. ಜೆನೆಸಿಸ್‌ನ ಈ ಸೂಕ್ತವನ್ನು ನೋಡಿ.

ಜೆನೆಸಿಸ್ ೧–೨ರ ಪ್ರಕಾರ: “ಈ ಪೃಥ್ವಿಯು ರೂಪವಿಲ್ಲದೇ ಇತ್ತು, ಶೂನ್ಯವಾಗಿತ್ತು; ಕತ್ತಲು ಆಳವಾದ ಗೂಡವಾದ ಏನನ್ನೋ ವ್ಯಾಪಿಸಿಕೊಂಡಿತ್ತು. ಮತ್ತು ದೇವರ ಉಸಿರು (ಹೋಲಿಸ್ಪರಿಟ್) ಉದಕದ ಮೇಲೆ ಚಲಿಸುತ್ತಿತ್ತು.”

ಪೃಥ್ವಿಯು ರೂಪವಿಲ್ಲದೇ ಇತ್ತು ಎಂಬುದರ ಅರ್ಥ, ಗೆಲಾಕ್ಸಿಗಳಿಂದ ಕೂಡಿದ ಭೌತಿಕ ಪ್ರಪಂಚವು ರೂಪವಿಲ್ಲದೇ ಇತ್ತು ಅಂದರೆ ಜಲರೂಪದಲ್ಲಿತ್ತು. ವಿಶ್ವದ ನಾಲ್ಕುಶಕ್ತಿಗಳಾದ ಗುರುತ್ವಾಕರ್ಷಣಶಕ್ತಿ, ವಿದ್ಯುತ್–ಆಯಸ್ಕಾಂತಶಕ್ತಿ, ಬಲಯುತವಾದಶಕ್ತಿ ಮತ್ತು ಬಲಹೀನಶಕ್ತಿಗಳನ್ನು ಅಲ್ಲಾಹನು ಹಿಂತೆಗೆದುಕೊಂಡಾಗ ವಿಸ್ಫೋಟ ಉಂಟಾಗಿ ಸಕಲ ನಕ್ಷತ್ರಪುಂಜಗಳು ಮತ್ತು ಸಕಲ ಜೀವರಾಶಿಯೂ ಶಕ್ತಿಹೀನವಾದ ಪರಮಾಣುಗಳ ಮೂಲಕಣಗಳಾಗಿ ಮಾರ್ಪಟ್ಟಿತು. ವಿಸ್ಫೋಟದಿಂದ ಶಕ್ತಿಹೀನವಾದ ಪರಮಾಣುವಿನ ಮೂಲಕಣಗಳು ಸರ್ವತ್ರ ವ್ಯಾಪಿಸಿ ಆಕಾಶದ ತುಂಬೆಲ್ಲಾ ಹರಡಿತು. ಈ ಮೂಲಕಣಗಳು ಒಂದುಕಡೆ ಸೇರಿದಾಗ ಅದು ಮಹಾಸಮುದ್ರದಂತೆ ಕಾಣುತಿತ್ತು. **<u>ಆಕಾಶ ಮತ್ತು ಭೂಮಿಯು ಒಂದಾಯಿತು ಅಂದರೆ ಪರಮಾಣುಗಳು ಆಕಾಶವನ್ನೆಲ್ಲಾ ವ್ಯಾಪಿಸಿತು.</u>**

ಸಾಲಂ ೩೩–೭: “ಅವನು ಚದುರಿದ ಸಮುದ್ರದ ಜಲವನ್ನು ಒಂದು ಕಡೆ ರಾಶಿಯಂತೆ ಸೇರಿಸಿದನು...”

ಮೇಲಿನ ಸೂಕ್ತಗಳ ಪ್ರಕಾರ ಈಗಿರುವ ಸಕಲ ಜಗತ್ತು ಮಹಾಪ್ರಳಯವಾದಾಗ ಶಕ್ತಿಹೀನವಾದ ಪರಮಾಣುವಿನ ಮೂಲಕಣಗಳು ಒಂದುಗೂಡಿದವು. ಅವು ನೋಡಲು ಸಮುದ್ರದಂತೆ ಜಲರೂಪವನ್ನು ಪಡೆಯಿತು. ಜಲರೂಪವನ್ನು ಪಡೆದ ಈ ಮಹಾಸಮುದ್ರವು ಅತ್ಯಂತ ವಿಶಾಲವಾಗಿ ಅದರ ಆದಿ–ಅಂತ್ಯವನ್ನು ತಿಳಿಯಲು ಅಸಾಧ್ಯವಾಗಿತ್ತು. ಜಲದ ಸುತ್ತಲೂ ಹೋಲಿಸ್ಪಿರಿಟ್ ಚಲಿಸುತಿತ್ತು. ಈ ಹೋಲಿಸ್ಪಿರಿಟ್‌ನ ನಾಲ್ಕು ರೂಪಾಂತರವೇ ವಿಶ್ವದ ನಾಲ್ಕುಶಕ್ತಿಗಳಾಗಿದೆ. ಈ ನಾಲ್ಕು ಶಕ್ತಿಗಳು ವಿನಾಶಕಾಲದಲ್ಲಿ ಒಂದೇ ಶಕ್ತಿ/ವಾಯು/ಹೋಲಿಸ್ಪರಿಟ್/ಪ್ರಾಣವಾಗಿ ಜಲವನ್ನು ಸುತ್ತುವರೆದಿತ್ತು. ಗಾಡಾಂಧಕಾರವು ಎಲ್ಲವನ್ನೂ ಸುತ್ತುವರೆದು ಯಾವುದೂ ಕಾಣಿಸದಾಗಿದ್ದಿತು.

ವಿಜ್ಞಾನಿಗಳ ಪ್ರಕಾರ ವಿಶ್ವವನ್ನು ೪ ವಿಶ್ವಶಕ್ತಿಗಳು ನಿಯಂತ್ರಿಸುತ್ತಿದೆ. ಈ ಶಕ್ತಿಗಳೇ ಸಕಲ ನಕ್ಷತ್ರಪುಂಜಗಳು, ಸೂರ್ಯ, ಭೂಮಿ ಮತ್ತು ಚಂದ್ರ ಸೃಷ್ಟಿಗಳಿಗೆ ಕಾರಣವಾಗಿದೆ. ಇದೇ ರೀತಿ ಸಕಲ ಜೀವರಾಶಿಗಳ ಸೃಷ್ಟಿಗೂ ಕಾರಣವಾಗಿದೆ. ಪಂಚಭೂತಗಳಾದ ಆಕಾಶ, ಗಾಳಿ, ಅಗ್ನಿ, ನೀರು ಮತ್ತು ಭೂಮಿಯ ಸೃಷ್ಟಿಗೆ ಈ ಶಕ್ತಿಯೇ ಕಾರಣವಾಗಿದೆ. ಪ್ರಪಂಚದ ಪ್ರತಿಯೊಂದು ವಸ್ತುವಿನ ಸೃಷ್ಟಿಗೆ ಈ ಶಕ್ತಿಗಳೇ ಕಾರಣವಾಗಿದೆ. ಆದರೆ ಸೃಷ್ಟಿಯ ಮೂಲವಸ್ತು ಸಮುದ್ರವಾಗಿದೆ. ಅಂದರೆ ಮಹಾಸಮುದ್ರ ಮತ್ತು ವಾಯುನಿಂದಾಗಿ (ಹೋಲಿಸ್ಪಿರಿಟ್) ಸಕಲ ಸೃಷ್ಟಿಯು ಆಗಿದೆ.

ಆದ್ದರಿಂದ ಶಕ್ತಿ ಮತ್ತು ಭೌತದ್ರವ್ಯಗಳು ಒಂದೇ ಅಲ್ಲ. ಅವುಗಳು ರೂಪಾಂತರವನ್ನು ಹೊಂದುತ್ತವೆ ಆದರೆ ಅವುಗಳು ಬೇರೆ ಬೇರೆಯೇ ಆಗಿದೆ.

ಈ ಶಕ್ತಿಯನ್ನು ಯಹೂದಿಗಳು ಮತ್ತು ಕ್ರಿಶ್ಚಿಯನ್‌ರು 'ಹೋಲಿಸ್ಪಿರಿಟ್' ಎಂದು ಕರೆಯುತ್ತಾರೆ. ಹಿಂದುಗಳು ವಾಯು ಅಥವಾ ಪ್ರಾಣವೆಂದು ಕರೆಯುತ್ತಾರೆ. ಕ್ರೈಸ್ತರ ಪ್ರಕಾರ ಹೋಲಿಸ್ಪಿರಿಟ್ ಸ್ವಂತ ವ್ಯಕ್ತಿತ್ವವನ್ನು ಹೊಂದಿಲ್ಲ ಮತ್ತು ತಾನಾಗೇ ಏನನ್ನೂ ಸೃಷ್ಟಿಸಲು ಸಾಧ್ಯವಿಲ್ಲ. ಆದ್ದರಿಂದ ಅವ್ಯಕ್ತಸ್ವರೂಪರಾದ ಅಲ್ಲಾಹ್ ಮತ್ತು ದೇವಚರರು ಹೋಲಿಸ್ಪಿರಿಟ್‌ನ್ನು ಶರೀರವನ್ನಾಗಿ ಧರಿಸಿರುವರು ಮತ್ತು ಅದನ್ನು ಉಪಯೋಗಿಸಿಕೊಂಡು ವಿಶ್ವಸೃಷ್ಟಿಯನ್ನು ಮಾಡಿರುವರು. ಹೋಲಿಸ್ಪಿರಿಟ್‌ನ್ನು ಶರೀರವನ್ನಾಗಿ ಧರಿಸಿರುವುದರಿಂದ ನಾವು ಅಲ್ಲಾಹ್ ಮತ್ತು ದೇವಚರರ ದರ್ಶನವನ್ನು ನಮ್ಮ ಅಂತರಂಗದ ಕಣ್ಣಿನಿಂದ ಪಡೆಯಬಹುದು. ಆನಂತರ ಅಲ್ಲಾಹನ ಅನುಗ್ರಹದಿಂದ ಹೋಲಿಸ್ಪಿರಿಟ್ ವ್ಯಕ್ತಿತ್ವವನ್ನು ಮನಸ್ಸನ್ನು ಪಡೆಯುತ್ತಾನೆ.

ಹೋಲಿಸ್ಪಿರಿಟ್ ಮೂರು ಸ್ವರೂಪವನ್ನು ಪಡೆದಿದೆ. ಮೊದಲನೆಯದು ಅತಿ ಸೂಕ್ಷ್ಮವಾಗಿರುವುದು, ಇದನ್ನು ವಿಶ್ವಮನಸ್ಸು ಧಾರಣೆ ಮಾಡುತ್ತದೆ ಮತ್ತು ಇದು ನೀಲಿ ಬಣ್ಣದಿಂದ ಕೂಡಿರುತ್ತದೆ. ಹೋಲಿಸ್ಪಿರಿಟ್‌ನ ಎರಡನೆಯ ಸ್ವರೂಪವನ್ನು ಅಲ್ಲಾಹನು ಮತ್ತು ದೇವಚರರು ಧಾರಣೆಯನ್ನು ಮಾಡುತ್ತಾರೆ. ಈ ಹೋಲಿಸ್ಪಿರಿಟ್ ಬಂಗಾರದಂತೆ ಹೊಳೆಯುತ್ತದೆ. ಆದ್ದರಿಂದ ದೇವತೆಗಳು ಹಿರಣ್ಯವರ್ಣದಿಂದ ಕಂಗೊಳಿಸುತ್ತಾರೆ. ಅಲ್ಲಾಹನು ಮತ್ತು ದೇವಚರರು ಅವ್ಯಕ್ತ ಸ್ವರೂಪವನ್ನು ಹೊಂದಿರುವುದರಿಂದ ಯಾರೂ ಅವರನ್ನು ನೋಡಲಾಗುವುದಿಲ್ಲ ಆದರೆ ಸೃಷ್ಟಿಯಲ್ಲಿ ಅವರು ಪ್ರಾಣವನ್ನು ದೇಹದಂತೆ ಧರಿಸಿರುವುದರಿಂದ ಅವರನ್ನು ನಮ್ಮ ಒಳಗಣ್ಣಿನಿಂದ ನೋಡಬಹುದು. ಹೋಲಿಸ್ಪಿರಿಟ್‌ನ ಮೂರನೆಯ ಸ್ವರೂಪವು ನಮ್ಮ ಉಸಿರು ಅಂದರೆ ಪೃಥ್ವಿಯನ್ನು ವ್ಯಾಪಿಸಿರುವ ಗಾಳಿ. ಯಾವ ಜೀವರಾಶಿಗಳೂ ಕ್ಷಣಕಾಲ ಗಾಳಿ ಇಲ್ಲದಿದ್ದರೆ ಜೀವಿಸುವುದಿಲ್ಲ. ಆದ್ದರಿಂದ ಸೃಷ್ಟಿಯಲ್ಲಿ ಹೋಲಿಸ್ಪಿರಿಟ್‌ನ ಪಾತ್ರವು ಬಹಳ ದೊಡ್ಡದು.

ಕ್ರೈಸ್ತರು ಹೋಲಿಸ್ಪಿರಿಟ್ ಸಂಕಲ್ಪಶಕ್ತಿಯನ್ನೂ, ವಿವೇಕವನ್ನೂ ಮತ್ತು ಬುದ್ಧಿಶಕ್ತಿಯನ್ನು ಹೊಂದಿದೆ ಎಂದು ಹೇಳುತ್ತಾರೆ. ಇದಕ್ಕೆ ಕಾರಣ ಅಲ್ಲಾಹನು ಅವನಿಗೆ ವ್ಯಕ್ತಿತ್ವ ಮತ್ತು ಮನಸ್ಸನ್ನು ಅನುಗ್ರಹಿಸುವನು. ಹೋಲಿಸ್ಪಿರಿಟ್‌ನ್ನು ಕ್ರಿಸ್ತರು ಭಗವಂತನ ಮೂರನೆಯ ಸ್ವರೂಪ ಎಂದು ಹೇಳುತ್ತಾರೆ. ಆದರೆ ಹೋಲಿಸ್ಪಿರಿಟ್ ಸಹ ಅಲ್ಲಾಹನಂತೆ ಅನಾದಿಯಾಗಿದೆ. ಇದೇ ರೀತಿ ಮಹಾಸಮುದ್ರವೂ ಸಹ ಅನಾದಿಯಾಗಿದೆ.

ಕ್ರಿಶ್ಚಿಯನ್‌ರ ಪ್ರಕಾರ ಹೋಲಿಸ್ಪಿರಿಟ್ ಮೂರು ಕರ್ತವ್ಯವನ್ನು ಪಾಲಿಸುತ್ತಾನೆ.

೧. ಆತನು ಸೃಷ್ಟಿಯಲ್ಲಿ ಭಾಗಿಯಾಗಿದ್ದಾನೆ, ಸೂರ್ಯಗ್ರಹನಕ್ಷತ್ರಾದಗಳೆಲ್ಲವೂ ಹೋಲಿಸ್ಪಿರಿಟ್ನಿಂದಲೇ ಸೃಷ್ಟಿಯಾಗಿದೆ.
೨. ನಮಗೆ ಜೀವವನ್ನು ಕೊಡುತ್ತಾನೆ ಮತ್ತು ಇದು ಶರೀರದಲ್ಲಿರುವುದರಿಂದಲೇ ಶರೀರವು ಕೆಲಸ ಮಾಡುತ್ತದೆ. ಮರಣಾನಂತರ ಇದನ್ನೇ ಜೀವ/ಸೋಲ್/ಪ್ರೇತ ಎಂದು ಕರೆಯುತ್ತಾರೆ.)
೩. ದೈವೀವಾಣಿಯನ್ನು ಅನುಗ್ರಹಿಸುತ್ತಾನೆ.

ಇದರ ಜೊತೆಗೆ ಹೋಲಿಸ್ಪಿರಿಟ್ ಮಾನವನಿಗೆ ಸಕಲ ಸತ್ಯವನ್ನೂ ಮತ್ತು ಮಾರ್ಗದರ್ಶನವನ್ನು ಮಾಡಿಸುತ್ತಾನೆ. ಆದ್ದರಿಂದ ಅವನಿಂದ ಆಗದ ಕೆಲಸವು ಯಾವುದೂ ಇಲ್ಲ. ಏಕೆಂದರೆ ಸೃಷ್ಟಿಯಾದಾಗಿನಿಂದ ಸಂಭವಿಸಿದ ಸಕಲ ಘಟನೆಯನ್ನು ತನ್ನಲ್ಲಿ ದಾಖಲಿಸಿಕೊಂಡು ಮಹತ್ತರವಾದ ಜ್ಞಾನವನ್ನು ಶಕ್ತಿಯನ್ನು ಹೊಂದಿದ್ದಾನೆ.

ಹೋಲಿಸ್ಪಿರಿಟ್ ಕುರಿತು ಜೀಸಸ್ ಹೇಳುವುದೇನೆಂದರೆ "ನಾನು ನಿಮಗೆ ಹೇಳುತ್ತೇನೆ, ಪ್ರತಿಯೊಂದು ರೀತಿಯ ಪಾಪವನ್ನೂ ಮತ್ತು ನಿಂದನೆಯನ್ನು ಕ್ಷಮಿಸಬಹುದು ಆದರೆ ಹೋಲಿಸ್ಪಿರಿಟ್‌ನ ತೆಗಳಕೆಯನ್ನು ಕ್ಷಮಿಸಲು ಸಾಧ್ಯವಿಲ್ಲ. ಯಾರಾದರೂ ನನ್ನ ಬಗ್ಗೆ ನಿಂದನೆಯನ್ನು ಮಾಡಿದರೂ ಕ್ಷಮಿಸಲ್ಪಡುತ್ತಾನೆ ಆದರೆ ಹೋಲಿಸ್ಪಿರಿಟ್‌ನ ವಿರುದ್ಧ ಮಾಡುವ ತೆಗಳಕೆಯನ್ನು ಈ ಲೋಕದಲ್ಲಿಯಾಗಲಿ ಮುಂದೆ ಬರುವ ಪರಲೋಕದಲ್ಲಿಯೇ ಆಗಲಿ ಕ್ಷಮಿಸಲು ಆಗುವುದಿಲ್ಲ." (ಮಥಾಯ್ ೧೨-೩೧ ಮತ್ತು ೩೨)

ಹೋಲಿಸ್ಪಿರಿಟ್ ಯಾವ ರೀತಿಯಲ್ಲಿ ಸೃಷ್ಟಿಕ್ರಿಯೆಯಲ್ಲಿ ಭಾಗಿಯಾಗಿದ್ದಾನೆ?

ದೇವತೆಗಳ ಮುಖಾಂತರ ಹೋಲಿಸ್ಪಿರಿಟ್ ನಾಲ್ಕು ಶಕ್ತಿಗಳಾಗಿ ವಿಂಗಡಿಸಿಕೊಂಡು ಸೃಷ್ಟಿಕ್ರಿಯೆಯಲ್ಲಿ ಭಾಗಿಯಾಗಿದ್ದಾನೆ. ಅವು ಯಾವುವೆಂದರೆ ಗುರುತ್ವಾಕರ್ಷಣಸಕ್ತಿ, ವಿದ್ಯುತ್-ಆಯಸ್ಕಾಂತಶಕ್ತಿ, ಶಕ್ತಿಯುತ ಬಲ ಮತ್ತು ಶಕ್ತಿಹೀನ ಬಲವಾಗಿ ವಿಂಗಡಿಸಿಕೊಂಡು ಸೃಷ್ಟಿಕ್ರಿಯೆಯಲ್ಲಿ ಭಾಗಿಯಾಗಿದ್ದಾನೆ. ಹೋಲಿಸ್ಪಿರಿಟ್ ಒಂದು ರೀತಿಯಲ್ಲಿ ವಿದ್ಯುತ್ ಉಪಕರಣಗಳಲ್ಲಿರುವ ವಿದ್ಯುತ್‌ನಂತೆ ಇರುವನು. ವಿದ್ಯುತ್-ಆಯಸ್ಕಾಂತಶಕ್ತಿಯಿಂದ ಪ್ರಕಟವಾಗುವ ವಿದ್ಯುತ್ ಸಕಲ ಯಂತ್ರ ಮತ್ತು ಉಪಕರಣಗಳ ಹಿಂದಿರುವ ಶಕ್ತಿ ಆಗಿದೆ. ವಿದ್ಯುತ್ ಸಹ ತನ್ನಷ್ಟಕ್ಕೆ ತಾನೇ ಏನೂ ಮಾಡಲು ಸಾಧ್ಯವಿಲ್ಲ. ಆದರೆ ಉಪಕರಣಗಳಿಗೆ ವಿದ್ಯುತ್ ಹರಿಸಿದಾಗ ಸಕಲ ಯಂತ್ರ ಮತ್ತು ಉಪಕರಣಗಳು ಕೆಲಸ ಮಾಡುತ್ತದೆ.

ಇದೇ ರೀತಿಯಾಗಿ ಹೋಲಿಸ್ಪಿರಿಟ್ ತಾನಾಗಿ ಸೃಷ್ಟಿಕ್ರಿಯೆಯನ್ನು ಮಾಡಲು ಆಗುವುದಿಲ್ಲ. ದೇವಚರರು ಹೋಲಿಸ್ಪಿರಿಟ್ ಮತ್ತು ಸಿಹಿಸಮುದ್ರವನ್ನು ಉಪಯೋಗಿಸಿಕೊಂಡು ಸೂರ್ಯ ನಕ್ಷತ್ರಾದಿಗ್ರಹಗಳನ್ನು ಮತ್ತು ಸಕಲ ಜೀವರಾಶಿಗಳನ್ನು ಸೃಷ್ಟಿಸುತ್ತಾರೆ. ಹೋಲಿಸ್ಪಿರಿಟ್ ವಿಶ್ವಸೃಷ್ಟಿಯ ಹಿಂದಿರುವ ಶಕ್ತಿಯಾಗಿ ಅನಾದಿಯಾಗಿದೆ ಮತ್ತು ಅಲ್ಲಾಹನ ಕೃಪೆಯಿಂದ ಮನಸ್ಸನ್ನು ಹೊಂದಿದ್ದಾನೆ. ಕೊನೆಯಲ್ಲಿ ಸೃಷ್ಟಿವಿನಾಶದ ಕಾಲ ಬಂದಾಗ ಅಲ್ಲಾಹನು ಈ ಶಕ್ತಿಗಳನ್ನೆಲ್ಲಾ ಹಿಂತೆಗೆದುಕೊಂಡು ವಿಶ್ವವನ್ನು ನಾಶವನ್ನು ಮಾಡುತ್ತಾನೆ. ಆಗ ಮತ್ತೆ ಶಕ್ತಿಗಳೆಲ್ಲಾ ಒಂದಾಗಿ ಒಂದೇ ಶಕ್ತಿಯಾಗಿ ಜಲದ ಮೇಲೇ ನೆಲೆಸುವುದು. ಆಗ ಹೋಲಿಸ್ಪಿರಿಟ್ ತನ್ನ ವ್ಯಕ್ತಿತ್ವವನ್ನು ಕಳೆದುಕೊಳ್ಳುವನು.

ವಿಶ್ವಸೃಷ್ಟಿಯಲ್ಲಿ ಮತ್ತು ಜೀವರಾಶಿಗಳ ಸೃಷ್ಟಿಯಲ್ಲಿ ಉಸಿರಿನ ಪಾತ್ರ ಬಹಳ ದೊಡ್ಡದು ಎಂದು ತಿಳಿದೆವು. ಯಾವಾಗ ಅಲ್ಲಾಹನು ಸೃಷ್ಟಿಯ ಶಕ್ತಿಗಳನ್ನು ಹಿಂತೆಗೆದುಕೊಳ್ಳುವನೋ ಆಗ ಭೂಮಿ, ಗ್ರಹಗಳು ಮತ್ತು ಕೋಟ್ಯಾಂತರ ನಕ್ಷತ್ರಪುಂಜಗಳೊನ್ನೊಳಗೊಂಡ ಇಡೀ ವಿಶ್ವವೇ ಕಂಪನಕ್ಕೊಳಗಾಗಿ ಭಯಂಕರವಾದ ಶಬ್ದದೊಂದಿಗೆ ಸ್ಪೋಟಗೊಳ್ಳುತ್ತದೆ ಎಂದು ಪವಿತ್ರ ಕುರಾನ್ ಹೇಳುತ್ತಿದೆ.

ಆಗ ಪರಮಾಣುವಿನ ಮೂಲಕಣಗಳು ಚೈತನ್ಯರಹಿತವಾಗಿ ಸ್ಪೋಟದೊಂದಿಗೆ ಆಕಾಶದ ತುಂಬಾ ಹರಡಿಕೊಳ್ಳುವುದು. ಕ್ಷಣ ಮಾತ್ರದಲ್ಲಿ ಸಕಲ ಜೀವರಾಶಿಗಳ ಸಮೇತ ಸೃಷ್ಟಿಯು ಲಯವಾಗುವುದು. ಸೃಷ್ಟಿಯ ವಿನಾಶವಾದ ಕೂಡಲೆ ಎಲ್ಲಾ ಜೀವರಾಶಿಗಳಲ್ಲದ್ದ ಜೀವ/ಸೋಲ್ ವಿರಾಟ್ ಪುರುಷನಲ್ಲಿರುವ ಸೂಕ್ಷ್ಮ ಸೂರ್ಯ-ಸವಿತೃ ದೇವತೆಯ ಬಳಿ ಹೋಗುತ್ತಾನೆ. ಅಲ್ಲಿ ಅವರೆಲ್ಲರ ಕರ್ಮಗಳಿಗೆ ತೀರ್ಪನ್ನು ಕೊಡುತ್ತಾನೆ. ಆನಂತರ ಎಲ್ಲಾರೂ ಅಲ್ಲಾಹನ ಲೋಕಕ್ಕೆ ಹಿಂತಿರುಗುವರು. ಆನಂತರ ಈ ಚೈತನ್ಯರಹಿತ ಪರಮಾಣುವಿನ ಮೂಲಕಣಗಳು ಪ್ರಭುವಿನ ಇಚ್ಛೆಯಂತೆ ಒಂದುಗೂಡಿ ಮಹಾಸಮುದ್ರದಂತಾಗಿ ಆಕಾಶ-ಭೂಮಿಯೆಲ್ಲಾ ಒಂದಾಗುತ್ತದೆ.

ಸೃಷ್ಟಿಯ ಮೂಲಕಣಗಳಾದ ಶಕ್ತಿಹೀನ ಪರಮಾಣುವಿನ ಮಹಾಸಮುದ್ರದಲ್ಲಿ ಎರಡು ರೀತಿಯ ಸಮುದ್ರವು ಇದೆ. ಒಂದು ಸಿಹಿಸಮುದ್ರ ಮತ್ತಿನ್ನೊಂದು ಉಪ್ಪು ಮತ್ತು ಕಹಿಯಾಗಿರುವ ಸಮುದ್ರ. ಪವಿತ್ರ ಕುರ್‌ಆನ್‌ನ ಈ ಸೂಕ್ತಗಳನ್ನು ಮತ್ತೊಮ್ಮೆ ನೋಡೋಣ.

ಪವಿತ್ರ ಕುರ್‌ಆನ್ ೨೫-೫೩: "ಎರಡು ಸಮುದ್ರಗಳನ್ನು ಸೇರಿಸಿಟ್ಟಿರುವವನು ಅವನೇ. ಒಂದು ರುಚಿಕರವೂ ಸಿಹಿಯೂ ಆಗಿದೆ. ಇನ್ನೊಂದು ಉಪ್ಪೂ ಕಹಿಯೂ ಆಗಿದೆ. ಇವೆರಡರ ಮಧ್ಯೆ ಒಂದು ತೆರೆ ಇದೆ. ಅವು ಪರಸ್ಪರ ಬೆರೆಯದಂತೆ ಮಾಡುವ ಒಂದು ತಡೆ ಇದೆ."

ಪವಿತ್ರ ಕುರ್‌ಆನ್ ೫೫-೨೦: "ಅದರೂ ಅವುಗಳ ನಡುವೆ ಒಂದು ಪರದೆ ಅಡ್ಡಲಾಗಿದ್ದು ಅದನ್ನು ಅವು ಮೀರುವುದಿಲ್ಲ."

ಪವಿತ್ರ ಕುರ್‌ಆನ್ ೨೧-೩೦: ".....ಆಕಾಶಗಳೂ ಭೂಮಿಯೂ ಕೂಡಿಕೊಂಡಿದ್ದು ಆನಂತರ ನಾವು ಅವುಗಳನ್ನು ಬೇರ್ಪಡಿಸಿದ್ದನ್ನೂ, ಪ್ರತಿಯೊಂದು ಜೀವಿಯನ್ನು ನೀರಿನಿಂದ ಸೃಷಿಸಿದ್ದನ್ನೂ ಕಾಣಲಿಲ್ಲವೇ?....."

ವಿಶ್ವಮನಸ್ಸು ಎರಡು ಧೃವವನ್ನು ಹೊಂದಿದೆ. ಒಂದು ದೈವೀಧೃವ ಮತ್ತು ಇನ್ನೊಂದು ಅಸುರೀ ಧೃವ. ಅಲ್ಲಾಹ್ ದೈವೀಧೃವವನ್ನು ಪ್ರತಿನಿಧಿಸಿದರೆ ಶೈತಾನನು ಅಸುರೀಧೃವವನ್ನು ಪ್ರತಿನಿಧಿಸುತ್ತಾನೆ. ಸಿಹಿ ಸಮುದ್ರದಲ್ಲಿ ವಿಶ್ವಮನಸ್ಸಿನ ದೈವೀ ಮನಸ್ಸಿನ ಧೃವವಾದ ಅಲ್ಲಾಹ್ ಮತ್ತು ದೇವಚರರು ನೆಲೆಸಿರುವರು. ಉಪ್ಪು ಮತ್ತು ಕಹಿಯ ಸಮುದ್ರದಲ್ಲಿ ವಿಶ್ವಮನಸ್ಸಿನ ಅಸುರೀ ಧೃವವಾದ ಶೈತಾನ ಮತ್ತು ಅವನ ಸಹಚರರು ವಾಸಿಸುವರು.

ವಿಜ್ಞಾನವು ಹೇಳುವ ಮ್ಯಾಟರ್ (ಭೌತದ್ರವ್ಯ) ಮತ್ತು ಆಂಟಿಮ್ಯಾಟರ್ ಎಂದು ಹೇಳುವ ವಸ್ತುವು ಈ ಎರಡೂ ಸಮುದ್ರಗಳಾಗಿವೆ ಎಂದು ಭಾವಿಸುತ್ತೇನೆ. ಈ ಎರಡೂ ಸಮುದ್ರದ ಮಧ್ಯೆ ಒಂದು ಪರದೆ ಇದೆ. ಈ ಎರಡೂ ಸಮುದ್ರಗಳು ಪರಸ್ಪರ ಬೆರೆಯುವುದಿಲ್ಲ. ಆಂಟಿಮ್ಯಾಟರ್ ಎಂಬುವ ಭೌತದ್ರವ್ಯವು ಎಲ್ಲಿದೆ ಎಂದು ವಿಜ್ಞಾನಿಗಳು ಹುಡುಕುತ್ತಿದ್ದಾರೆ. ಸಿಹಿಜಲವು ಉಪ್ಪು ಮತ್ತು ಕಹಿಯ ಜಲವನ್ನು ಆವರಿಸಿಕೊಂಡಿದೆ. ಆದ ಕಾರಣ ವಿಜ್ಞಾನಿಗಳಿಗೆ ಆಂಟಿಮ್ಯಾಟರ್ ಕಾಣಿಸುತ್ತಿಲ್ಲ.

ಪವಿತ್ರ ಕುರ್‌ಆನ್ ೫೫-೧೯: "ಅವನು ಎರಡು ಸಮುದ್ರಗಳನ್ನು ಪರಸ್ಪರ ಒಟ್ಟು ಸೇರಲು ಬಿಟ್ಟನು." (೫೫-೧೯)

ವಿಶ್ವದಲ್ಲಿ ಅಸುರರ ಮೇಲೆ ವಿಜಯವನ್ನು ಸಾಧಿಸಿದ ಅಲ್ಲಾಹನು ಸಿಹಿ ಸಮುದ್ರವು ಕಪ್ಪುಜಲವನ್ನು ಸುತ್ತಲೂ ಆವರಿಸಿಕೊಂಡು ಒಂದು ಸಣ್ಣ ದ್ವಾರವಿರುವಂತೆ (ಬಿಲದಂತೆ) ರಚಿಸಿರುವನು ಮತ್ತು ಶೈತಾನ ಮತ್ತು ಅವನ ಅನುಚರರು ಮತ್ತೆ ಮೇಲೆ ಬರದಂತೆ ಆ ಬಿಲವನ್ನು ಮುಚ್ಚಿರುವನು. ಆದಾಗ್ಯೂ ಎರಡೂ ಜಲಗಳ ಮಧ್ಯೆ ಒಂದು ತೆರೆ ಇದೆ ಮತ್ತು ಅವುಗಳು ಬೇರೆ ಬೇರೆಯಾಗಿಯೇ ಇರುತ್ತವೆ. ಆದ್ದರಿಂದ ವಿಜ್ಞಾನಿಗಳು ಆಂಟಿಮ್ಯಾಟರ್‌ಅನ್ನು ಕಂಡುಹಿಡಿಯಲು ಅಸಾಧ್ಯವೆಂದು ಭಾವಿಸುತ್ತೇನೆ.

ವಿಜ್ಞಾನಿಗಳಿಗೆ ಒಂದು ಆಶ್ಚರ್ಯಕರವಾದ ವಿಷಯವೆಂದರೆ ಆಂಟಿಮ್ಯಾಟರ್ ನಮ್ಮೊಳಗೂ ಇದೆ.

# ಅಧ್ಯಾಯ – ೩
# ದೈವೀಮನಸ್ಸಿನ ಅಲ್ಲಾಹ್
## ಜೀಸಸ್‌ರ ಹೇಳಿಕೆಗಳು

"ಯಹೂದಿಗಳ ದೇವವಾಣಿ ಮತ್ತು ಅವರ ಪ್ರವಾದಿಗಳ ನಂಬಿಕೆಯನ್ನು ಪವಿತ್ರ ಕುರ್‌ಆನ್ ಅನುಮೋದಿಸುತ್ತದೆ. ಈ ದೇವವಾಣಿಗಳಲ್ಲಿ ಅಲ್ಲಾಹನ ಮಹಿಮೆಯನ್ನೂ, ದೇವಚರರ ಮಹಿಮೆಯನ್ನೂ ಸೃಷ್ಟಿರಹಸ್ಯವನ್ನು ಸಂಪೂರ್ಣವಾಗಿ ತಿಳಿಸಿಲ್ಲ. ಅಲ್ಲಾಹ್‌ನ ಲೋಕಕ್ಕೆ ಹೋಗುವ ವಿಧಾನವನ್ನು ತಿಳಿಸಿಲ್ಲ.

ಆದರೆ ಪ್ರಥಮ ದೇವವಾಣಿಯಾದ ಮತ್ತು ದೇವಭಾಷೆಯಲ್ಲಿ ಬಂದಿರುವಂತಹ ಋಗ್ವೇದವು ಅಲ್ಲಾಹನ ಮಹಿಮೆಯನ್ನೂ, ದೇವಚರರ ಮಹಿಮೆಯನ್ನೂ ಮತ್ತು ಸೃಷ್ಟಿಯ ರಹಸ್ಯವನ್ನು ಪೂರ್ಣಪ್ರಮಾಣದಲ್ಲಿ ತಿಳಿಸುತ್ತದೆ. ಪರಮ ಪವಿತ್ರವಾದ ಈ ಋಗ್ವೇದವು ದೇವಭಾಷೆಯಲ್ಲಿರುವುದರಿಂದ ಇದುವರೆಗೂ ಯಾರಿಗೂ ಅರ್ಥವಾಗಿಲ್ಲ. ಅಲ್ಲಾಹನ ಅನುಗ್ರಹವಿಲ್ಲದೇ ಯಾರಿಗೂ ಅದರ ರಹಸ್ಯವನ್ನು ತಿಳಿಯಲಾಗುವುದಿಲ್ಲ."

ಋಗ್ವೇದದ ಸೂಕ್ತಗಳು ಅಲ್ಲಾಹನ ಮತ್ತು ದೇವಚರರ ಹೊಗಳಿಕೆಯ ಮಂತ್ರಗಳಾಗಿದೆ. ಈ ಹೊಗಳುವಿಕೆಯ ಮಂತ್ರಗಳಲ್ಲಿಯೇ ಅಡಕವಾಗಿದೆ ಅಲ್ಲಾಹನ ಮತ್ತು ದೇವಚರರ ಮಹಿಮೆ, ಅವರ ಕಾರ್ಯಗಳೇನು ಅವರು ಯಾವುದರ ಮೇಲೆ ಪ್ರಭುತ್ವವನ್ನು ಪಡೆದಿರುವರೆಂದು ಮಂತ್ರಗಳು ತಿಳಿಸುತ್ತವೆ. ಉದಾಹರಣೆಗೆ ಹೇಳುವುದಾದರೆ, ರಾಷ್ಟ್ರದಲ್ಲಿ ಒಬ್ಬ ಅಧ್ಯಕ್ಷನಿರುತ್ತಾನೆ ಮತ್ತು ಅವನು ರಾಷ್ಟ್ರವನ್ನು ಮುನ್ನೆಡುಸುತ್ತಾನೆ. ಆದರೆ ನಿಜವಾಗಿಯೂ ಎಲ್ಲಾ ಕೆಲಸವನ್ನು ಮಂತ್ರಿಮಂಡಲ, ಅಧಿಕಾರಿಗಳು ಮತ್ತು ಸರ್ಕಾರಿ ನೌಕರರು ಮಾಡುತ್ತಾರೆ. ಅದೇ ರೀತಿ ಪ್ರಭುವಾದ ಅಲ್ಲಾಹನ ಇಚ್ಛೆಯಂತೆ ದೇವಚರರು ಅವರವರ ಕೆಲಸವನ್ನು ಮಾಡುತ್ತಾರೆ.

ಪ್ರಥಮಬಾರಿಗೆ ಸೃಷ್ಟಿಕ್ರಿಯೆಯು ಹೇಗಾಯಿತು ಎಂದು ನೋಡಿದಾಗ; ಜೆನೆಸಿಸ್‌ನಲ್ಲಿ ಹೇಳಿರುವ ಗಾಡಾಂಧಕಾರದಿಂದ ಶಾಖದಿಂದ ಕೂಡಿದ ಒಂದು ಅವ್ಯಕ್ತ ಸ್ವರೂಪವು ಜಾಗೃತವಾಯಿತು. ಜಗತ್‌ಸೃಷ್ಟಿ ಮಾಡಬೇಕೆಂಬ ಇಚ್ಛೆಯು ಅವ್ಯಕ್ತ ಸ್ವರೂಪದಲ್ಲಿದ್ದಿತು. ಸೃಷ್ಟಿಯ ಮೂಲಬೀಜವಾದ ಕಾಮವು ಅವ್ಯಕ್ತಸ್ವರೂಪದಲ್ಲಿ ಬೀಜಭೂತವಾಗಿ ನೆಲೆಸಿರುವುದು. ಸೃಷ್ಟಿಮಾಡಬೇಕೆಂಬ ಕಾಮವು ಮತ್ತು ಇಚ್ಛೆಯು ಅವ್ಯಕ್ತ ಸ್ವರೂಪದಲ್ಲಿ ನೆಲೆಸಿದೆಯೆಂದರೆ ಈ ಅವ್ಯಕ್ತ ಸ್ವರೂಪವು ವಿಶ್ವಮನಸ್ಸಾಗಿರಬೇಕು. ಏಕೆಂದರೆ ಸಕಲ ಕಾಮನೆಗಳ ಮೂಲ ಮನಸ್ಸಾಗಿದೆ.

ಈ ವಿಶ್ವಮನಸ್ಸು ಅವ್ಯಕ್ತ ಸ್ವರೂಪವಾಗಿದೆ, ನಿತ್ಯನಿರಂತರವಾಗಿದೆ. ಯಾವಾಗಲು ಮನಸ್ಸಿಗೆ ಎರಡು ವಿರುದ್ಧ ದೃವವಿರುತ್ತದೆ. ದೈವೀಮನಸ್ಸು ಮತ್ತು ಅಸುರೀಮನಸ್ಸು ಎಂಬ ಎರಡು ದೃವಗಳನ್ನು ಹೊಂದಿರುವ ವಿಶ್ವಮನಸ್ಸೇ ಸಕಲ ಸೃಷ್ಟಿಯನ್ನು ಮಾಡಿದೆ. (ಉದಾಹರಣೆಗೆ ಮನಸ್ಸಿನ ವಿರುದ್ಧ ದೃವಗಳು; ಬೆಳಕು–ಕತ್ತಲು, ಜ್ಞಾನ–ಅಜ್ಞಾನ, ಪ್ರೀತಿ–ದ್ವೇಷ ಬಿಳಿ–ಕಪ್ಪು. ಬಿಸಿ–ತಣ್ಣಗೆ ಇತ್ಯಾದಿ ವಿರುದ್ಧ ದೃವಗಳನ್ನು ಹೊಂದಿದೆ.)
೧. ದೈವೀ ವಿಶ್ವಮನಸ್ಸು ದೇವತೆಗಳು ಸೃಷ್ಟಿ ಮಾಡುತ್ತದೆ. ಅಲ್ಲಾಹ್ ದೈವೀಮನಸ್ಸಾಗಿದ್ದಾನೆ ಮತ್ತು ದೇವತೆಗಳು ರಾಜನಾಗಿದ್ದಾನೆ.
೨. ಅಸುರೀ ವಿಶ್ವಮನಸ್ಸು ಅಸುರರನ್ನು (ಶೈತಾನ) ಸೃಷ್ಟಿ ಮಾಡುತ್ತದೆ. ಅಸುರೀ ಮನಸ್ಸು ಶೈತಾನನಾಗಿದ್ದಾನೆ ಮತ್ತು ಅಸರು ರಾಜನಾಗಿದ್ದಾನೆ.

ವಿಶ್ವಮನಸ್ಸಿನ ಒಂದು ದೃವವಾದ ಬೆಳಕು–ದೈವೀಮನಸ್ಸು–ಅನಂತಜ್ಞಾನವನ್ನು ಅಲ್ಲಾಹನು ಪ್ರತಿನಿಧಿಸುತ್ತಾನೆ. ಇನ್ನೊಂದು ವಿರುದ್ಧ ದೃವವಾದ ಕತ್ತಲು–ಅಸುರಿ ಮನಸ್ಸು–ಅನಂತಜ್ಞಾನವನ್ನು ಶೈತಾನನನ್ನು ಪ್ರತಿನಿಧಿಸುತ್ತಾನೆ. ಶೈತಾನನೂ ಸಹ ಅಲ್ಲಾಹನಂತೆ ಸಕಲ ಜ್ಞಾನವನ್ನು ಹೊಂದಿರುವನು. ಏಕೆಂದರೆ ಜ್ಞಾನವು ಮನಸ್ಸಿನಲ್ಲಿದೆ ಎಂದರೆ ಆ ಜ್ಞಾನವು ಎರಡೂ ದೃವಗಳಲ್ಲಿರುತ್ತದೆ. ಆದ್ದರಿಂದ ಶೈತಾನನೂ ಸಹ ಸಕಲ ಜ್ಞಾನವನ್ನು ಹೊಂದಿದ್ದಾನೆ. ಆದರೆ ಅವನು ಬೆಳಕಿನ ಮತ್ತು ಅಲ್ಲಾಹನ ಶತ್ರುವಾಗಿದ್ದಾನೆ. ವಿಶ್ವಮನಸ್ಸಿನ ಎರಡು ದೃವಗಳನ್ನು ಅರ್ಥಮಾಡಿಕೊಂಡಾಗ ತಿಳಿಯುವುದೇನೆಂದರೆ;

- ಮನಸ್ಸೇ ಅಲ್ಲಾಹ್, ಮನಸ್ಸೇ ಶೈತಾನ.
- ಮನಸ್ಸೇ ಬೆಳಕು, ಮನಸ್ಸೇ ಕತ್ತಲು.
- ಮನಸ್ಸೇ ಸಕಲ ಸೃಷ್ಟಿ, ಸ್ಥಿತಿ ಮತ್ತು ಲಯವನ್ನು ಮಾಡುತ್ತಿದೆ.
- ಮನಸ್ಸೇ ಅನಂತವಾದ ಜ್ಞಾನವನ್ನು ಹೊಂದಿದೆ, ಮನಸ್ಸೇ ಜ್ಞಾನವನ್ನು ಅಂಧಕಾರ ಮತ್ತು ಅಜ್ಞಾನದಿಂದ ಮರೆಮಾಚಿದೆ.
- ನಮ್ಮ ಮನಸ್ಸನ್ನು ಯಾರು ಆವರಿಸಿದ್ದಾರೆ; ಅಲ್ಲಾಹನೋ ಅಥವಾ ಸೈತಾನನೋ?
- ನಮ್ಮ ಮನಸ್ಸಿಗೇ ತಿಳಿದಿದೆ ನಾವು ಸ್ವರ್ಗಕ್ಕೆ ಹೋಗುತ್ತೇವೋ ಅಥವಾ ನರಕಕ್ಕೋ ಎಂದು.

ಜೀವನದಲ್ಲಿ ಮಾಡಿದ ನಮ್ಮ ಕರ್ಮಗಳೇ ನಮಗೆ ತಿಳಿಸುತ್ತದೆ ನಾವು ಎಲ್ಲಿಗೆ ಹೋಗುತ್ತೇವೆಂದು. ನಾವು ಶೈತಾನನಿಂದ ಆವೃತವಾಗಿ ಆಸೆ, ದ್ವೇಷ, ಅಸೂಯೆ, ಕೊಲೆ, ಯುದ್ಧ ಇತ್ಯಾದಿಗಳನ್ನು ಮಾಡುತ್ತಿದ್ದೇವೆಂದರೆ ನಾವು ಶೈತಾನನಿಂದ ಆವೃತರಾಗಿ ನರಕಕ್ಕೆ ಹೋಗುತ್ತೇವೆ. ಅಲ್ಲಾಹನ ಕೃಪೆಗೆ ಪಾತ್ರರಾಗಿದ್ದೇವೋ ಇಲ್ಲವೋ ಎಂಬುದನ್ನು ಸುಲಭವಾಗಿ ತಿಳಿದುಕೊಳ್ಳಬಹುದು.

ನಾವು ಕಣ್ಣುಮುಚ್ಚಿದಾಗ ಜೀಸಸ್‌ರವರು ಹೇಳಿದ ದೇವರ ರಾಜ್ಯವನ್ನು ನಮ್ಮೊಳಗೆ ಕಾಣುತ್ತಿದ್ದರೆ ನಾವು ಅಲ್ಲಾಹನ ರಕ್ಷಣೆಯಲ್ಲಿದ್ದೇವೆಂಬುದು ಖಚಿತ. ನಮ್ಮೊಳಗೆ ಅಲ್ಲಾಹ್ ಮತ್ತು ದೇವಚರರು ಕಾಣಿಸುತ್ತಿದ್ದರೆ ನಾವು ಅಮರತ್ವದ ಮಾರ್ಗದಲ್ಲಿದ್ದೇವೆ. ನಮಗೆ ಏನೂ ಕಾಣಿಸದಿದ್ದರೆ ನಾವು ಸೈತಾನನ ವಶದಲ್ಲಿದ್ದೇವೆ ಎಂದು ಅರ್ಥ. ಏಕೆಂದರೆ ಅವನು ನಮ್ಮನ್ನು ಕತ್ತಲಿನಲ್ಲಿ ಮುಳುಗಿಸಿರುವನು. ಭೂಲೋಕದ ಪ್ರತಿಯೊಬ್ಬರನ್ನೂ ಶೈತಾನನು ಆವರಿಸಿಕೊಂಡಿದ್ದಾನೆ.

ಪಂಡಿತರು, ಮೌಲ್ವಿಗಳು, ಪಾದ್ರಿಗಳು ತಮ್ಮೊಳಗೆ ಏನನ್ನೂ ಕಾಣದಿದ್ದರೆ ಅವರೆಲ್ಲರೂ ಕೇವಲ ಪುಸ್ತಕದ ಪಂಡಿತರಾಗಿದ್ದಾರೆ. ಅಂತಹವರನ್ನು ಗುರುಗಳಾಗಿ ಪಡೆದರೆ ನಾವೂ ಸಹ ಅಂಧಕಾರದಲ್ಲಿಯೇ ಇರುತ್ತೇವೆ. ಆದ್ದರಿಂದ ನಾವೆಲ್ಲರೂ ಅಲ್ಲಾಹನ ಮೊರೆಹೋಗಬೇಕಾಗಿದೆ. ಯಾಕೆಂದರೆ ಅಲ್ಲಾಹನು ಅಸುರಶಕ್ತಿಗಳ ಶತ್ರುವಾಗಿದ್ದಾನೆ, ನಮ್ಮೆಲ್ಲರ ಉದ್ಧಾರಕನಾಗಿದ್ದಾನೆ. ಆದ್ದರಿಂದ ಅಲ್ಲಾಹನ ಮತ್ತು ಅಮರತ್ವದ ಮರ್ಮವನ್ನು ತಿಳಿಯಲು ದೈವವಾಣಿಯು ನಮಗೆ ಸಹಾಯ ಮಾಡುತ್ತದೆ. ಈ ಪುಸ್ತಕವು ಪವಿತ್ರ ಕುರ್‌ಆನ್‌ನನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತದೆಂದು ಭಾವಿಸುತ್ತೇನೆ.

ಆದ್ದರಿಂದ ನಮ್ಮ ಮೊದಲ ಕರ್ತವ್ಯ ಅಲ್ಲಾಹ್ ಮತ್ತು ದೇವತೆಗಳ ದರ್ಶನ ಮಾಡುವುದು ಮತ್ತು ಮರಣ ಕಾಲದಲ್ಲಿ ಅಲ್ಲಾಹನ ಲೋಕಕ್ಕೆ ಹೋಗುವುದು.

ಅಸುರಶಕ್ತಿಯ ಅಂಧಕಾರವು ಜೆನೆಸಿಸ್ ಹೇಳಿರುವ ಅಂಧಕಾರಕ್ಕಿಂತ ಭಿನ್ನವಾಗಿದೆ. ವಿಶ್ವಮನಸ್ಸಿನ ಎರಡು ಧೃವಗಳಾದ ಬೆಳಕು ಮತ್ತು ಅಂಧಕಾರವು ಅಲ್ಲಾಹ್ ಮತ್ತು ಅಸುರರಾಜನಾದ ಶೈತಾನನನ್ನು ಪ್ರತಿನಿಧಿಸುತ್ತದೆ. ಇವರಿಬ್ಬರ ಸಂಘರ್ಷದಿಂದ ಸಕಲ ಸೃಷ್ಟಿಯು ಉಂಟಾಗಿದೆ ಎಂದು ಓದಿದೆವು. ಅಸುರಶಕ್ತಿಗಳು ಕತ್ತಲಿನ ಸಮುದ್ರದಲ್ಲಿ ವಿಜೃಂಭಿಸಿದರೆ ದೇವತೆಗಳು ಸಿಹಿಯಾಗಿರುವ ಸಮುದ್ರದಲ್ಲಿದ್ದಾರೆ. ಸಿಹಿಸಮುದ್ರದಲ್ಲಿ ಸೃಷ್ಟಿಕ್ರಿಯೆಯನ್ನು ವಿರೋಧಿಸಿದ ಶೈತಾನನನ್ನು ಸದೆಬಡಿದು ಅವನನ್ನು ಪಾತಾಳಕ್ಕೆ ತಳ್ಳಿ ಅದರ ಬಿಲವನ್ನು ಮುಚ್ಚಿ ಎರಡೂ ಸಮುದ್ರದ ಮೇಲೆ ತನ್ನ ಸಾಮ್ರಾಜ್ಯವನ್ನು ಅಲ್ಲಾಹನು ಸ್ಥಾಪಿಸಿರುವನು.

ಎರಡು ಸಮುದ್ರದಿಂದ ಸೃಷ್ಟಿಯಾಗಿರುವ ವಿಶ್ವವನ್ನು ಬ್ರಹ್ಮಾಂಡವೆಂದು ಕರೆಯುತ್ತಾರೆ. ವಿಶ್ವದ ಪ್ರತಿರೂಪವಾದ ನಮ್ಮ ಶರೀರದಲ್ಲಿಯೂ ಎರಡೂ ಸಮುದ್ರವಿದೆ. ಇದರಿಂದ ಸೃಷ್ಟಿಯಾಗಿರುವ ನಮ್ಮ ಶರೀರವನ್ನು ಸೂಕ್ಷ್ಮಶರೀರ ಅಥವಾ ಪಿಂಡಾಂಡವೆಂದು ಕರೆಯುತ್ತಾರೆ. ಬ್ರಹ್ಮಾಂಡವು ಸಮುದ್ರದಿಂದಲೇ ಸೃಷ್ಟಿಯಾಗಿದೆ ಹಾಗೆಯೇ ಜೀವರಾಶಿಗಳ ಪಿಂಡಾಂಡವೂ (ಶರೀರ) ಸಹ ಎರಡು ಸಮುದ್ರದಿಂದಲೇ ಸೃಷ್ಟಿಯಾಗಿದೆ. ನಮ್ಮ ಗುದದ್ವಾರದ ಮೇಲೆ ಮತ್ತು ಲಿಂಗಸ್ಥಾನದ ಸಮೀಪ ಒಂದು ಬಾವಿಯಿದೆ. ಈ ಬಾವಿಯ ಒಳಗಡೆ ಕತ್ತಲಿದೆ ಮತ್ತು ಈ ಬಾವಿಯು ಕಹಿ ಮತ್ತು ಉಪ್ಪಿನ ಸಮುದ್ರಕ್ಕೆ ಹೋಗುವ ದ್ವಾರವಾಗಿದೆ. ಇದು ಶೈತಾನನ ಬಿಲವಾಗಿದೆ ಮತ್ತು ಈ ದ್ವಾರವು ನಮ್ಮಲ್ಲಿ ತೆರೆದಿದೆ.

ಹೇಗೆ ಬ್ರಹ್ಮಾಂಡದಲ್ಲಿ ಸೂರ್ಯನಿದ್ದಾನೋ, ಸಪ್ತಸ್ವರ್ಗಗಳಿರುವವೋ, ಅಲ್ಲಾಹನಿದ್ದಾನೋ ಮತ್ತು ದೇವಚರರಿರುವರೋ ಹಾಗೆಯೇ ನಮ್ಮಲ್ಲಿಯೂ ಇರುವರು.

ಅಲ್ಲಾಹನು ನಮ್ಮ ಶರೀರದಲ್ಲಿರುವ ಪಾತಾಳದ ಬಿಲವನ್ನು ಮುಚ್ಚಿಲ್ಲ ಆದ್ದರಿಂದ ಪಾತಾಳದಿಂದ ಶೈತಾನನು ಮೇಲೆ ಬಂದು ನಮ್ಮನ್ನು ಆವರಿಸಿಕೊಂಡಿರುವನು.

ನಮ್ಮಲ್ಲಿರುವ ಎರಡೂ ಸಮುದ್ರದ ಜಲವು ನಮ್ಮ ಕಣ್ಣಿಗೆ ಕಾಣಿಸುವುದಿಲ್ಲ ಮತ್ತು ಅಲ್ಲಾಹ್, ದೇವಚರರು, ಸಪ್ತಸ್ವರ್ಗಗಳು ಕಾಣಿಸುವುದಿಲ್ಲ. ಏಕೆಂದರೆ ಶೈತಾನನು ನಮ್ಮೊಳಗಿರುವ ಸೂರ್ಯನ ಬೆಳಕಿನಿಂದ ಕೋಪಗೊಂಡು ನಮ್ಮಲ್ಲಿರುವ ಸೂರ್ಯ ಮತ್ತು ದೇವರರಾಜ್ಯವನ್ನು ಅಂಧಕಾರ ಮತ್ತು ಅಜ್ಞಾನದಿಂದ ಆವರಿಸಿಕೊಂಡು ನಮಗೆ ಕಾಣದಂತೆ ಮಾಡಿರುವನು.

ಶೈತಾನನು ನಮ್ಮ ಸುತ್ತಲೂ ಕತ್ತಲಿನ ಕೋಟೆಯನ್ನು ಕಟ್ಟಿ ಕೈಕಾಲುಗಳುಳ್ಳ ಹೆಬ್ಬಾವಿನ ರೂಪವನ್ನು ತಾಳಿ, ಕೋಟೆಯನ್ನು ಸುತ್ತಿಕೊಂಡು ನಿದ್ರಿಸುತ್ತಿರುವನು ಮತ್ತು ನಮ್ಮ ಪಿಂಡಾಂಡವನ್ನು ವಶಪಡಿಸಿಕೊಂಡಿರುವನು. ಸಕಲ ಜೀವರಾಶಿಗಳನ್ನು ಅಂಧಕಾರ ಮತ್ತು ಅಜ್ಞಾನದಿಂದ ವ್ಯಾಪಿಸಿಕೊಂಡಿರುವನು. ಈ ಕಾರಣದಿಂದ ಜೀಸಸ್‌ರವರು ಹೇಳಿದ ದೈವಸಾಮ್ರಾಜ್ಯವನ್ನು ನಾವು ನಮ್ಮೊಳಗೆ ನೋಡಲು ಆಗುತ್ತಿಲ್ಲ. ಈ ಅಂಧಕಾರದಿಂದ ಹೊರಬರಲು ನಾವು ಅಲ್ಲಾಹನನ್ನು ಆಶ್ರಯಿಸಬೇಕಾಗಿದೆ.

ಆದ್ದರಿಂದ ಪ್ರತಿಯೊಬ್ಬರ ಜಿಹಾದ್ ಶೈತಾನನನ್ನು ಸೋಲಿಸುವುದಾಗಿದೆ. ಇಲ್ಲಿ ಒಂದು ವಿಷಯವನ್ನು ಗಮನಿಸಬೇಕು. ಶೈತಾನನ್ನು ಸಂಪೂರ್ಣವಾಗಿ ನಾಶಮಾಡಲು ಸಾಧ್ಯವಿಲ್ಲ. ಏಕೆಂದರೆ ಶೈತಾನನು ವಿಶ್ವಮನಸ್ಸಿನ ಒಂದು ಧೃವವಾಗಿ, ಕತ್ತಲಿನ ಧೃವವಾದ ಮನಸ್ಸನ್ನು ಶೈತಾನನು ಪ್ರತಿನಿಧಿಸುತ್ತಾನೆ. ಆದ್ದರಿಂದ ನಮ್ಮ ಮನಸ್ಸನ್ನೇ ನಾವು ನಾಶ ಮಾಡಲು ಸಾಧ್ಯವಿಲ್ಲ. ಆದರೆ ಅಲ್ಲಾಹನು ಶೈತಾನನನ್ನು ಸೋಲಿಸಿ ಪಾತಾಳದ ಬಿಲಕ್ಕೆ ತಳ್ಳಿ ಬಿಲವನ್ನು ಮುಚ್ಚಿ ನಮ್ಮ ಸೂಕ್ಷ್ಮಶರೀರವನ್ನು ಮತ್ತು ಹೋಲಿಸ್ಪಿರಿಟ್-ಮನಸ್ಸಿನ ಶರೀರವನ್ನು ಪರಿಶುದ್ಧಗೊಳಿಸಬಹುದು.

ಅಲ್ಲಾಹನು ನಮ್ಮೊಳಗಿದ್ದರೂ ಅವನು ಶೈತಾನನ ಜೊತೆ ಹೋರಾಡುವುದಿಲ್ಲ. ಅವನು ಎಲ್ಲವನ್ನೂ ನೋಡುತ್ತಾ ಸುಮ್ಮನೆ ಇರುವನು. ಏಕೆಂದರೆ ನಾವು ಅಜ್ಞಾನದಲ್ಲಿದ್ದು ಶೈತಾನನು ನಮ್ಮನ್ನು ಆವರಿಸಿಕೊಂಡಿರುವನು ಎಂದು ನಾವು ತಿಳಿಯದಿರುವುದರಿಂದ ನಾವು ಮಾಡುವ ಪೂಜೆ ಪ್ರಾರ್ಥನೆಯು ಫಲ ಕೊಡುತ್ತಿಲ್ಲ, ಅಲ್ಲಾಹನ ಪೂಜೆಯನ್ನು ಮಾಡುವ ವಿಧಾನವೂ ತಿಳಿದಿಲ್ಲ. ಆದ್ದರಿಂದ ಅಲ್ಲಾಹನು ನಾವು ಮಾಡುವುದನ್ನೆಲ್ಲಾ ನೋಡುತ್ತಾ ಸಾಕ್ಷಿಯಾಗಿರುವನು. ಅದೂ ಅಲ್ಲದೇ ಅಲ್ಲಾಹನ ಸ್ವರ್ಗದಲ್ಲಿದ್ದ ನಾವೆಲ್ಲರೂ ಭೂಮಿಯ ಆಕರ್ಷಣೆಗೆ ಒಳಗಾಗಿ ನಮ್ಮ ಇಚ್ಛೆಯಂತೆ ಇಲ್ಲಿ ಜನ್ಮವನ್ನು ತಾಳಿರುವೆವು.

ಶೈತಾನನು ಅನೇಕ ರೀತಿಯಾಗಿ ನಾವು ದಾರಿ ತಪ್ಪುವಂತೆ ಮಾಡುವನು. ನಾವು ಅಲ್ಲಾಹನ ದಾರಿಯಲ್ಲಿರುವಂತೆ ಕಂಡರೂ ನಾವು ಶೈತಾನನ ಕೆಲಸಗಳನ್ನು ಮಾಡುತ್ತಿರುತ್ತೇವೆ. ಶೈತಾನನ ಕಾರಣದಿಂದ ನಾವು ಕಾಮ, ಕ್ರೋದ, ಲೋಭ, ಮೋಹ, ಮದ ಮತ್ತು ಮಾತ್ಸರ್ಯವೆಂಬ ಅಸುರೀ ಗುಣದಿಂದ ಕೂಡಿದ್ದು, ಅದಕ್ಕೆ ಒಳಗಾದ ಮಾನವರು ದರೋಡೆ, ಕೊಲೆ, ಮಾನವರಲ್ಲಿ ವಿಷಬೀಜ ಬಿತ್ತುವುದು, ಧರ್ಮದ ಹೆಸರಲ್ಲಿ ಕೊಲೆಯನ್ನು ಮಾಡುವುದು, ದೇಶವನ್ನು ವಿಭಜಿಸುವುದು ಮತ್ತು ಸಮಾಜದಲ್ಲಿ ಕ್ಷೋಬೆಯನ್ನು ಉಂಟುಮಾಡುವುದು ಇತ್ಯಾದಿ ಕಾರ್ಯಗಳನ್ನು ಅಲ್ಲಾಹನ ಹೆಸರಲ್ಲಿ ಶೈತಾನನು ಮಾಡಿಸುತ್ತಾನೆ.

ಎಲ್ಲರಲ್ಲಿಯೂ ಅಲ್ಲಾಹ್ ಇರುವಾಗ ನಾವು ಹೇಗೆ ಇತರರನ್ನು ದ್ವೇಷಿಸುವುದು.
ಯಾರು ಹೆಚ್ಚು; ಯಾರು ಕೀಳು?

ಪವಿತ್ರ ಕುರ್‌ಆನ್‌ನ ಈ ಸೂಕ್ತವನ್ನು ನೋಡಿ.

"ಹೇ ಜನರೇ, ಭೂಮಿಯಲ್ಲಿರುವ ಧರ್ಮಸಮ್ಮತ ಹಾಗು ಶುದ್ಧ ವಸ್ತುಗಳನ್ನು ನೀವು ಉಣ್ಣಿರಿ. ಶೈತಾನನು ತೋರಿಸುವ ಹಾದಿಗಳಲ್ಲಿ ನಡೆಯಬೇಡಿರಿ. ಅವನು ನಿಮ್ಮ ಪ್ರತ್ಯಕ್ಷ ಶತ್ರು.. ಅವನು ನಿಮಗೆ ಪಾಪ ಕಾರ್ಯ ಮತ್ತು ಅಶ್ಲೀಲತೆಗಳ ಅಪ್ಪಣೆಕೊಟ್ಟು ಅದು ಅಲ್ಲಾಹ್‌ನ ಆದೇಶವೆಂದು ನಿಮಗೆ ತಿಳಿದಿಲ್ಲವಾದರೂ ಅಲ್ಲಾಹನ ಹೆಸರಿಂದ ನೀವು

ಅದನ್ನು ಹೇಳಿರೆಂದು ಬೋಧಿಸುತ್ತಾನೆ." (ಪವಿತ್ರ ಕುರ್‌ಆನ್ ೨–೧೬೮&೧೬೯) (ಎಲ್ಲಾ ಧರ್ಮಗಳ ಮೂಲಭೂತವಾದಿಗಳೇ ಗಮನಿಸಿ)

"ವಾಸ್ತವದಲ್ಲಿ ಧರ್ಮನಿಷ್ಠರಿಗೆ ಶೈತಾನನ ಪ್ರಭಾವದಿಂದ ದುರಾಲೋಚನೆಗಳು ಸೋಂಕಿದರೂ ಅವರು ತಕ್ಷಣ ಜಾಗೃತರಾಗುತ್ತಾರೆ ಮತ್ತು ಅವರಿಗೆ ಸರಿಯಾದ ಕರ್ಮವಿಧಾನ ಯಾವುದೆಂದು ಸ್ಪಷ್ಟವಾಗಿ ಗೋಚರಿಸುತ್ತದೆ. ಇನ್ನು ಇವರ (ಶೈತಾನನ) ಸಹೋದರರು. ಅವರನ್ನು ಕುಟಿಲ ಮಾರ್ಗದಲ್ಲಿ ಎಳೆದೊಯ್ಯುತ್ತಾರೆ. ಮತ್ತೆ ಅವರನ್ನು ದಾರಿ ತಪ್ಪಿಸುವುದರಲ್ಲಿ ಏನೂ ಲೋಪವಿರಿಸುವುದಿಲ್ಲ. (ಪವಿತ್ರ ಕುರ್‌ಆನ್ ೭–೨೦೧ &೨೦೨)

## ಸೈತಾನನ ಹೊಂಡ(ಪಾತಾಳಕ್ಕೆ ಹೋಗುವ ಮಾರ್ಗ)

ನಮ್ಮ ಶರೀರವೂ ಸಹ ಸಿಹಿಸಮುದ್ರದ ಜಲದಿಂದಲೇ ಉತ್ಪತ್ತಿಯಾಗಿದೆ ಎಂದು ತಿಳಿದೆವು. ನಮ್ಮಲ್ಲಿಯೂ ಸಹ ಸಿಹಿ ಸಮುದ್ರದ ಜಲ ಮತ್ತು ಸೈತಾನನ ಕತ್ತಲಿನ ಜಲವಿರುವುದು. ಯಾರು ತಮ್ಮ ಸಾಧನೆಯಿಂದ ಊರ್ಧ್ವಮುಖವಾಗಿ ಚಲಿಸುತ್ತಿರುವ ದೈವಿಜಲವನ್ನು ತನ್ನ ಶರೀರದಲ್ಲಿ ನೋಡುತ್ತಿರುವನೋ ಅಂತಹ ಯೋಗಿಯು ಕೆಳಗಿರುವ ಗುದದ್ವಾರದ ಮುಂದುಗಡೆ, ಸ್ವಲ್ಪ ಮೇಲೆ (ಸ್ವಲ್ಪ ಕಿಬ್ಬೊಟ್ಟೆಯ ಕೆಳಗೆ) ಒಂದು ಬಾವಿಯನ್ನೂ ಸಹ ಕಾಣುವನು. ಈ ಬಾವಿಯ ಹೊರ ಆವರಣದಿಂದ ದೈವೀಜಲವು ಊರ್ಧ್ವಮುಖವಾಗಿ ಚಲಿಸುವುದನ್ನು ಕಾಣುತ್ತಾನೆ. ಬಾವಿಯ ಒಳಗಡೆ ಇಣುಕಿ ನೋಡಿದರೆ ಅದು ಕತ್ತಲಿನಿಂದ ಕೂಡಿರುತ್ತದೆ. ಈ ಬಾವಿಯ ಒಳಗಡೆಯ ದಾರಿಯು ಅಸುರರ ಪಾತಾಳ ಲೋಕಕ್ಕೆ ಹೋಗುವ ದಾರಿಯಾಗಿದೆ.

ನನ್ನ ಅನುಭವವನ್ನು ಹೇಳುವುದಾದರೆ, ನಾನು ಕೆಲವು ತಿಂಗಳಿನಿಂದ ಅಲ್ಲಾಹ್‌ನ ಸ್ವರೂಪದಲ್ಲಿ ತನ್ಮಯತೆಯನ್ನು ಹೊಂದಿ ಧ್ಯಾನದಲ್ಲಿರುವಾಗ ಈ ಬಾವಿಯನ್ನು ನೋಡುತ್ತಿದ್ದೆನು ಮತ್ತು ಆ ಸ್ಥಾನದಿಂದ ಉದಕಗಳು ಊರ್ಧ್ವಮುಖವಾಗಿ ಹರಿಯುತ್ತಿದ್ದಿತು. ಬಾವಿಯ ಒಳಭಾಗವು ಕತ್ತಲಿನಿಂದ ಕೂಡಿತ್ತು. ಅದರ ಮಹತ್ವವೇನೆಂದು ನನಗೆ ತಿಳಿದಿರಲಿಲ್ಲ. ಒಂದು ದಿವಸ ಅಲ್ಲಾಹನ ಧ್ಯಾನದಲ್ಲಿ ಮಗ್ನನಾಗಿರುವಾಗ "ಈ ಬಾವಿಯ ದ್ವಾರವು ಪಾತಾಳಕ್ಕೆ ಹೋಗುವುದು" ಎಂಬ ಆಲೋಚನೆಯು ಮೋಡದಂತೆ ತೇಲಿಕೊಂಡು ಬಂದಿತು. ಕೂಡಲೆ ನನ್ನ ಮನಃಸಂಕಲ್ಪದಿಂದ ಬಾವಿಗೆ ಮುಚ್ಚಳವನ್ನು ಹಾಕಿ ಅದಕ್ಕೆ ಬೀಗವನ್ನು ಹಾಕಿ ಅದರ ಕೀಲಿಯನ್ನು ಅಲ್ಲಾಹನ ಕೈಗೆ ಕೊಟ್ಟೆನು. ಈ ಕ್ರಿಯೆಗಳೆಲ್ಲವೂ ಕ್ಷಣಮಾತ್ರದಲ್ಲಿ ನಡೆದು ಹೋಯಿತು. ಅಂದಿನಿಂದ ಆ ಬಾವಿಯನ್ನು ಮುಚ್ಚಿರುವ ಹಾಗೆ ಕಾಣುತ್ತಿರುವೆನು.

ಈ ಬಾವಿಯ ಮೂಲಕವಾಗಿಯೇ ಸೈತಾನನು ಮೇಲೆದ್ದು ನಮ್ಮೆಲ್ಲರನ್ನು ಅಂಧಕಾರ ಮತ್ತು ಅಜ್ಞಾನದಿಂದ ಆಕ್ರಮಿಸಿಕೊಂಡಿರುವನು. ಆದ್ದರಿಂದ ನಮ್ಮೊಳಗಿರುವ ಅಲ್ಲಾಹನು, ದೇವತೆಗಳು, ಸೂರ್ಯ ಮತ್ತು ದೇವಸಾಮ್ರಾಜ್ಯವು ಕಾಣುತ್ತಿಲ್ಲ. ಆದ್ದರಿಂದ ನಾವು ಅಲ್ಲಾಹ್‌ನನ್ನು ಆರಾಧಿಸುವ ಮಾರ್ಗವನ್ನು ತಿಳಿದುಕೊಂಡು ಜಲದಲ್ಲಿರುವ ಅತ್ಯಂತ ಮಧುರವಾದ ಮದವನ್ನುಂಟುಮಾಡುವ ಮದಿರೆಯನ್ನು (ಸೋಮರಸ) ಅಲ್ಲಾಹ್‌ನಿಗೆ ಅರ್ಪಿಸಿ ಶೈತಾನನ್ನು ಸಂಹರಿಸುವಂತೆ ಕೇಳಿದಾಗ, ಅಲ್ಲಾಹನು ಅದನ್ನು ಕುಡಿದು ಶೈತಾನನ್ನು ಸಂಹರಿಸಿ ನಮ್ಮನ್ನು ಪರಿಪೂರ್ಣ ಮಾಡುವನು. ಸಾವಿನ ಸಮಯ ಬಂದಾಗ ನಮ್ಮನ್ನು ತನ್ನ ರಾಜ್ಯಕ್ಕೆ ಕರೆದುಕೊಂಡು ಹೋಗುವನು. ಕಿಯಾಮತ್ ದಿನದವರೆಗೂ ಕಾಯುವ ಅಗತ್ಯವಿಲ್ಲ.

ಶೈತಾನನ ಕಾರಣದಿಂದ ನಾವು ಮಾಡುವ ಕರ್ಮಗಳಿಂದ ನಾವು ನರಕಕ್ಕೆ ಹೋಗುತ್ತೇವೆಯೇ ಹೊರತು ಅಲ್ಲಾಹನ ಬಳಿ ಹೋಗಲು ಸಾಧ್ಯವಿಲ್ಲ. ಜೀಸಸ್ ಹೇಳುತ್ತಾರೆ; ಭಗವಂತನ ಆಸ್ಥಾನವನ್ನು ಸೇರುವುದು ಎಲ್ಲರೂ ತಿಳಿದಷ್ಟು ಸುಲಭವಲ್ಲ. ಅಲ್ಲಿಗೆ ಕೆಲವೇ ಜನರು ಮಾತ್ರ ತಲುಪುತ್ತಾರೆ. ಕ್ರೈಸ್ತ ವಿಶ್ವಾಸಿಗಳೆಲ್ಲರೂ ಉನ್ನತ ಶಿಖರದಲ್ಲಿರುವ ಅಲ್ಲಾಹನ ಬಳಿ ಹೋಗಲು ಸಾಧ್ಯವಿಲ್ಲ. ಅವರೆಲ್ಲರೂ ಪ್ರಳಯ ಮತ್ತು ತೀರ್ಪಿನ ದಿನವನ್ನು ಕಾಯಬೇಕು

ಇದು ಏನನ್ನು ತೋರಿಸುತ್ತದೆ ಎಂದರೆ, ನಾವು ಜಪತಪಗಳನ್ನು ಮಾಡಿರಬಹುದು, ಪವಾಡಗಳನ್ನು ತೋರಿಸಿರಬಹುದು ಅಥವಾ ಜ್ಯೋತಿಷಿಗಳಂತೆ ಭವಿಷ್ಯವಾಣಿಯನ್ನು ಹೇಳಿರಬಹುದು, ಪ್ರತಿನಿತ್ಯ ೫ ಬಾರಿ ನಮಾಜನ್ನೂ ಮಾಡುತ್ತಿರಬಹುದು ಮತ್ತು ಜಕಾತ್‌ಅನ್ನು ಕೊಡುತ್ತಿರಬಹುದು ಆದರೆ ಭಗವಂತನ ಸನ್ನಿದಾನಕ್ಕೆ ಹೋಗಲು ಸಾಧ್ಯವಿಲ್ಲ, ಯಾರಿಗೆ ಜೀಸಸ್‌ರು ಹೇಳಿದ ಸಣ್ಣದ್ವಾರದ ಬಗ್ಗೆ ತಿಳಿದಿದೆಯೋ, ಅವರು ಮಾತ್ರ ಭಗವಂತನ ಸನ್ನಿಧಾನಕ್ಕೆ ಈ ಜನ್ಮದಲ್ಲಿಯೇ ಹೋಗಬಲ್ಲರು.

ಯಾರು ಮರಣ ಕಾಲದಲ್ಲಿ ಈ ಸಣ್ಣದ್ವಾರದ ಮುಖಾಂತರ ತಮ್ಮ ಜ್ಯೋತಿಯನ್ನೂ ಮತ್ತು ನಮ್ಮ ಶರೀರದಲ್ಲಿರುವ ಹೋಲಿಸ್ಪಿರಿಟ್‌ಅನ್ನು ತೆಗೆದುಕೊಂಡು ಹೋಗುವರೋ ಅವರು ಮಾತ್ರ ದೇವರ ಬಳ ಹೋಗುವರು. ಇಲ್ಲದಿದ್ದರೆ ಯಾರೂ ಸಹ ಈ ಜನ್ಮದಲ್ಲಿಯೇ ಅಲ್ಲಾಹನ ಬಳ ಹೋಗಲು ಸಾಧ್ಯವಿಲ್ಲ. ಎಲ್ಲರು ಅಂತಿಮ ತೀರ್ಪಿನ ದಿನದವರಿಗೂ ಕಾಯಬೇಕಾಗುತ್ತದೆ.

ಸೈತಾನನು ನಮ್ಮನ್ನು ಆಕ್ರಮಿಸಿಕೊಂಡಿದ್ದರೂ ಅವನು ಸಾಮಾನ್ಯ ಮನುಷ್ಯರಿಗೆ ಅಷ್ಟು ತೊಂದರೆ ಕೊಡುವುದಿಲ್ಲ. ಏಕೆಂದರೆ ಶೈತಾನನು ಹಾವಿನರೂಪವನ್ನು (ಲೆವಿಯಾಥನ್ ಬೀಸ್ಟ) ತಾಳಿ ನಮ್ಮ ಸುತ್ತಲೂ ಕಟ್ಟಿರುವ ಅಂಧಕಾರ ಮತ್ತು ಅಜ್ಞಾದ ಕೋಟೆಯನ್ನು ಸುತ್ತುಹಾಕಿಕೊಂಡು ಮಲಗಿರುವನು. ಯಾರು ರಾಜಕೀಯದ ನಾಯಕರಾಗಿರುತ್ತಾರೋ, ಅತಿ ಶ್ರೀಮಂತ ವ್ಯಕ್ತಿಗಳು ಮತ್ತು ದುಷ್ಟವ್ಯಕ್ತಿಗಳ ಮೇಲೆ ಶೈತಾನನ ಅವಿರ್ಭಾವವಾಗುತ್ತದೆ. ಈ ಕಾರಣಕ್ಕಾಗಿಯೇ ಬಹಳಷ್ಟು ರಾಜಕೀಯ ನಾಯಕರು ಘೋರವಾದ ಪಾಪಗಳನ್ನು ಮಾಡಿದ್ದಾರೆ. ಕೋಟ್ಯಾಂತರ ಜನರನ್ನು ಕೊಲೆಗೈದಿದ್ದಾರೆ, ದೇಶ ವಿದೇಶಗಳನ್ನು ನಾಶಮಾಡಿದ್ದಾರೆ ಮತ್ತು ಮನುಕುಲದ ಮೇಲೆ ಅತ್ಯಾಚಾರಗೈದಿದ್ದಾರೆ. ತಾವು ಶೈತಾನನಿಂದ ಆವೃತವಾಗಿದ್ದೇವೆ ಎಂದು ತಿಳಿಯದೇ ದೇಶವನ್ನು ತಮ್ಮ ತಮ್ಮ ಸಿದ್ಧಾಂತದ ಮೇಲೆ ವಿಭಜಿಸುತ್ತಿದ್ದಾರೆ, ಜನರ ಮಧ್ಯದಲ್ಲಿ ಕ್ಷೋಭೆಯನ್ನುಂಟು ಮಾಡುತ್ತಿದ್ದಾರೆ. ರಾಜಕೀಯವು ನರಕಕ್ಕೆ ಹೋಗುವ ಸುಲಭ ದಾರಿಯಾಗಿದೆ.

ಎರಡನೆಯ ಅತಿಕ್ರೂರವಾದ ಶಕ್ತಿಯು ಹಣದ ಶಕ್ತಿಯಾಗಿದೆ. ಹಣದ ಮದದಿಂದ ಕೆಲವು ಲೇವಾದೇವಿ ಮಾಡುವ ಬ್ಯಾಂಕ್‌ಗಳು ಮತ್ತು ಅಂತರರಾಷ್ಟ್ರೀಯ ಕಂಪನಿಗಳು ಮನುಕುಲದ ಕೋಟ್ಯಂತರ ಮನುಷ್ಯರ ಕೊಲೆಗೆ, ಅತ್ಯಾಚಾರಕ್ಕೆ ಕಾರಣರಾಗಿದ್ದಾರೆ. ದೇಶ ದೇಶಗಳಲ್ಲಿ ಯುದ್ಧವನ್ನು ಹುಟ್ಟು ಹಾಕಿ ಇವರು ಧನವನ್ನು ಸಂಪಾದಿಸುತ್ತಾರೆ. ಈ ವ್ಯಕ್ತಿಗಳು ಮಾನವರನ್ನು ತಮ್ಮ ಗುಲಾಮರಂತೆ ಭಾವಿಸುತ್ತಾರೆ. ಈ ಗುಂಪಿಗೆ ಭ್ರಷ್ಟ ಅಧಿಕಾರಿಗಳು, ನೌಕರರು ಮತ್ತು ಅವರ ಸಹಾಯಕರು ಹಾಗೂ ರಾಜಕೀಯ ನಾಯಕರು ಸೇರಿಕೊಳ್ಳುತ್ತಾರೆ. ಇವರೆಲ್ಲರೂ ಭ್ರಷ್ಟಾಚಾರದ ಮೂಲಕ ದೇಶವನ್ನು ಅಧೋಗತಿಗೆ ತಳ್ಳುತ್ತಿದ್ದಾರೆ.

ಮೂರನೆಯವರಾದ ದುಷ್ಟವ್ಯಕ್ತಿಗಳಿಗೆ ಯಾವುದೇ ಕಾರಣ ಬೇಕಾಗಿಲ್ಲ. ಯಾವುದೋ ಒಂದು ಸಂಸ್ಥೆಯ, ಸಂಘದ ಅಥವಾ ಧರ್ಮದ ಹೆಸರಿನಲ್ಲಿ ಮನುಕುಲದ ಮೇಲೆ ಅನೇಕ ದೌರ್ಜನ್ಯವನ್ನು ಎಸೆಗಿದ್ದಾರೆ. ಇವರೆಲ್ಲರ ಕೃತ್ಯವು ಶೈತಾನನಿಂದ ಪ್ರಚೋದಿಸಲ್ಪಟ್ಟಿದೆ. ಆದ್ದರಿಂದ ಜೀಸಸ್‌ರವರು ಹೇಳಿರುವುದೇನೆಂದರೆ ಸಾಮಾನ್ಯ ಮನುಷ್ಯರಾಗಿರುವವರ ಮೇಲೆ ಭಗವಂತನ ಅನುಗ್ರಹವಿದೆ.

ಯಾವಾಗ ನಾವು ಅಲ್ಲಾಹನ ಪ್ರಾರ್ಥನೆ ಮತ್ತು ಆರಾಧನೆಯಲ್ಲಿ ತೊಡಗುತ್ತೇವೂ ಆಗ ಶೈತಾನ ಮತ್ತು ಅವನ ಅನುಚರರರು ಜಾಗೃತರಾಗುತ್ತಾರೆ. ಆಗಲೇ ಅಲ್ಲಾನ ಆರಾಧಕರು ನಾನಾ ಕಷ್ಟಗಳಿಗೆ ಗುರಿಯಾಗುತ್ತಾರೆ. ಶೈತಾನನ ಅನುಚರರು ಹೇಗಾದರೂ ಮಾಡಿ ನಮ್ಮ ಆರಾಧನೆಯನ್ನು ತಪ್ಪಿಸಲು ಪ್ರಯತ್ನಿಸುತ್ತಾರೆ. ಆಗದಿದ್ದರೆ ಅವರ ದಾರಿಯಲ್ಲಿಯೇ ತಪ್ಪು ಭಾವನೆಗಳನ್ನು ಮನಸ್ಸಿನಲ್ಲಿ ಮೂಡಿಸುತ್ತಾರೆ. ಕೊನೆಯಲ್ಲಿ ನಮಗೇ ತಿಳಿಯುವುದಿಲ್ಲ ನಾವು ಹೇಗೆ ದಾರಿತಪ್ಪಿದೆವೆಂದು. ಯಾರನ್ನೂ ತಮ್ಮ ಕಪಿಮುಷ್ಟಿಯಿಂದ ತಪ್ಪಿಸಿಕೊಂಡು ಹೋಗಲು ಶೈತಾನನು ಬಿಡುವುದಿಲ್ಲ.

ಈಗ ಅಲ್ಲಾಹ್ ಮತ್ತು ಶೈತಾನನ ಸ್ವರೂಪವೇನೆಂದು ಯೋಚಿಸಿದರೆ ನಮಗೆ ತಿಳಿಯುವುದು

- ಅಲ್ಲಾಹನು ಅವ್ಯಕ್ತ ಸ್ವರೂಪನು ಮತ್ತು ದೈವೀಮನಸ್ಸನ್ನು ಹೊಂದಿದ್ದಾನೆ. ವಿಶ್ವ ಮನಸ್ಸಿನ ಶಾಖದ ಧೃವವು ಹೋಲಿಸ್ಪಿರಿಟ್‌ಅನ್ನು ಪ್ರವೇಶಿಸಿದಾಗ ದೀಪ ಅಥವಾ ಬೆಳಕಾಗಿ ಕಾಣುತ್ತಾನೆ. ಆದ್ದರಿಂದ ಅಲ್ಲಾಹ್ ಗಾಳಿಯಿಲ್ಲದ ಸ್ಥಾನದಲ್ಲಿರುವ ದೀಪದಂತೆ ಕಾಣುವನು. ಅಲ್ಲಾಹನು ಶೈತಾನನನ್ನು ಸೋಲಿಸಲು ತನ್ನ ಮಾನಸಿಕ ಶಕ್ತಿಯಿಂದ ಮಾನವಸ್ವರೂಪವನ್ನು ಪಡೆಯುತ್ತಾನೆ. ಅಂದರೆ ನಾವು ಅಲ್ಲಾಹನ ಮಾನವ ರೂಪದಲ್ಲಿ ಸೃಷ್ಟಿಸಲ್ಪಟ್ಟಿರುವೆವು. ಅಲ್ಲಾಹನು ತನ್ನ ಭಕ್ತರ ಶರೀರದಲ್ಲಿ ಯಾವಾಗಲೂ ಶೈತಾನನ ಜೊತೆಯಲ್ಲಿ ಯುದ್ಧವನ್ನು ಮಾಡುತ್ತಾ ಅವರನ್ನು ರಕ್ಷಿಸುತ್ತಿರುವನು. ಆದ್ದರಿಂದ ಅಲ್ಲಾಹನನ್ನು ಕ್ಷತ್ರಿಯ (ಯೋಧ) ಎಂದು ಕರೆಯುತ್ತಾರೆ. ಸಕಲ ಸೃಷ್ಟಿಯು ಅಲ್ಲಾಹನಿಂದಾಗಿದೆ ಮತ್ತು ನಮ್ಮೆಲ್ಲರನ್ನೂ ಅಲ್ಲಾಹನೇ ಸೃಷ್ಟಿಸಿರುವನು. ನಮ್ಮೆಲ್ಲರ ರಕ್ಷಕನೂ ಅವನೇ. ಆದ್ದರಿಂದ ನಾವು ಶೈತಾನನ ವಶದಲ್ಲಿದ್ದರೂ ಅವನ ಮಕ್ಕಳೇ.
- ಇದೇ ರೀತಿ ಶೈತಾನನೂ ಸಹ ಅವ್ಯಕ್ತ ಸ್ವರೂಪನು ಮತ್ತು ಅಸುರೀ ಮನಸ್ಸನ್ನು ಹೊಂದಿದ್ದಾನೆ. ಅವನ ಸಾಮ್ರಾಜ್ಯವು ಕತ್ತಲು ಆಗಿರುವುದರಿಂದ ಅವನು ಬೆಳಕಿನ ದ್ವೇಷಿಯಾಗಿದ್ದಾನೆ, ಯಾವಾಗ ಅಲ್ಲಾಹನ ಅಪ್ಪಣೆಯಂತೆ ದೇವಚರರು ವಿಶ್ವದಲ್ಲಿ ಸೂರ್ಯನನ್ನು ಪ್ರಕಟ ಮಾಡಿದರೋ ಆಗ ಕತ್ತಲಿನಲ್ಲಿದ್ದ ಶೈತಾನನು ಬೆಳಕನ್ನು ಸಹಿಸದೇ ಸೂರ್ಯನನ್ನೂ ಮತ್ತು ಸಿಹಿ ಸಮುದ್ರವನ್ನು ಕತ್ತಲಿನಿಂದ ಆವರಿಸಿಕೊಂಡನು. ಇದೇ ರೀತಿ

ನಮ್ಮ ಶರೀರದಲ್ಲಿಯೂ ದೇವಚರರು ಮತ್ತು ಸೂರ್ಯನಿರುವುದರಿಂದ ನಮ್ಮನ್ನು ಮತ್ತು ಸೂರ್ಯನನ್ನು ಕತ್ತಲಿನಲ್ಲಿ ಮುಚ್ಚಿರುವನು. ಆದ್ದರಿಂದ ಜೀಸಸ್‌ರವರು ಹೇಳಿದ ದೈವಸಾಮ್ರಾಜ್ಯವನ್ನು ನಾವು ನಮ್ಮೊಳಗೆ ಕಾಣಲು ಸಾಧ್ಯವಾಗುತ್ತಿಲ್ಲ.

ಹಾಗಾದರೆ ಅಲ್ಲಾಹ್ ಮತ್ತು ಶೈತಾನನು ಯಾವ ರೀತಿಯಲ್ಲಿ ಕಾಣಿಸುತ್ತಾರೆ?

ಅಲ್ಲಾಹನು ಎರಡೂ ರೀತಿಯಲ್ಲಿ ನಮಗೆ ದರ್ಶನವನ್ನು ಕೊಡುತ್ತಾನೆ. ಒಂದು ಜ್ಯೋತಿರೂಪ ದರ್ಶನ, ಗಾಳಿ ಇಲ್ಲದ ಸ್ಥಳದಲ್ಲಿರುವ ಮೇಣದ ಬತ್ತಿಯಂತಹ ಜ್ಯೋತಿಯಂತೆ ಕಾಣುವನು ಮತ್ತು ಜ್ಯೋತಿಯ ಒಳಗಡೆ ಸಿಂಹಾಸನದ ಮೇಲೆ ಕುಳಿತಿರುವನು. ಇನ್ನೊಂದು ಶೈತಾನನನ್ನು ಯುದ್ಧದಲ್ಲಿ ಸೋಲಿಸುವಾಗ ಮಾನವರೂಪದಲ್ಲಿ ದರ್ಶನವನ್ನು ಕೊಡುವನು. ಇದರ ಅರ್ಥ ನಾವು ಅಲ್ಲಾಹನ ರೂಪದಲ್ಲಿರುವೆವು.

ಕತ್ತಲಿನಲ್ಲಿದ್ದ ಅವ್ಯಕ್ತಸ್ವರೂಪನಾದ ಶೈತಾನನು ಬ್ರಹ್ಮಾಂಡದಲ್ಲಿ ಸೃಷ್ಟಿಯಾದ ಸೂರ್ಯನನ್ನು ಕತ್ತಲಿನಿಂದ ಮುಚ್ಚಿ, ಸಿಹಿ ಸಮುದ್ರದ ಸುತ್ತಲೂ ಕತ್ತಲಿನ ಕೋಟೆಯನ್ನು ಕಟ್ಟಿ ಕೈಕಾಲುಗಳಿರುವ ಸರ್ಪರೂಪವನ್ನು ಧರಿಸಿ (ಲೆವಿಯಾಥನ್ ಬೀಸ್ಟ), ಕೋಟೆಯನ್ನು ಸುತ್ತಿಕೊಂಡು ನಿದ್ರಿಸುತ್ತಿದ್ದನು. ಆಗ ಅಲ್ಲಾಹನು ಮಾನವರೂಪವನ್ನು ಧರಿಸಿ ಶೈತಾನನೊಡನೆ ಯುದ್ಧವನ್ನು ಮಾಡಿ ಅವನನ್ನು ಕತ್ತರಿಸಿ ಪಾತಾಳಕ್ಕೆ ತಳ್ಳಿ ಅದರ ಬಿಲವನ್ನು ಮುಚ್ಚಿದನು.

ಅಲ್ಲಾಹನು ನೋಡಲು ೧೬ ವರ್ಷದ ಯುವಕನಂತೆ, ತೆಳುಕಾಯವನ್ನು ಹೊಂದಿ ನೋಡಲು ಅತ್ಯಂತ ಸುಂದರನಾಗಿ ಹಿರಣ್ಯ ವರ್ಣದಿಂದ ಪ್ರಕಾಶಮಾನನಾಗಿ ಕಾಣಿಸಿಕೊಳ್ಳುತ್ತಾನೆ. ಅಂದರೆ ಆತನ ಶರೀರದಿಂದ ಹಿರಣ್ಯವರ್ಣದ ಕಾಂತಿಯು ಸತತವಾಗಿ ಹೊರಹೊಮ್ಮುತ್ತಿರುವುದು. ಅಲ್ಲಾಹನು ಕೈಯಲ್ಲಿ ವಜ್ರಾಯುದವನ್ನು ಧರಿಸಿರುವನು. ಅಲ್ಲಾಹ್‌ನನ್ನು ಮಾನವರೂಪದಲ್ಲಿ ನೋಡಬೇಕಾದರೆ ಯಜ್ಞಕುಂಡದಲ್ಲಿ ಅಗ್ನಿಯನ್ನು ಪ್ರತಿಷ್ಠಾಪಿಸಿ ಋಗ್ವೇದ ಮಂತ್ರಗಳಿಂದ ಆರಾಧಿಸಬೇಕು ಇಲ್ಲದಿದ್ದರೆ ಅಲ್ಲಾಹನು ಜ್ಯೋತಿರೂಪದಲ್ಲಿಯೇ ತನ್ನ ಆರಾಧಕರಿಗೆ ಕಾಣಿಸಿಕೊಳ್ಳುವನು.

ಅಲ್ಲಾಹನು ಬೆಳಕಿನ/ಜ್ಯೋತಿರೂಪದಲ್ಲಿ ಕಾಣಿಸುವನು ಎಂಬುದಕ್ಕೆ ಉದಾಹರಣೆ;

- ಋಗ್ವೇದವು ಪರಮಾತ್ಮನು ಮಾನವ ರೂಪದಲ್ಲಿ ಮತ್ತು ಜ್ಯೋತಿಸ್ವರೂಪದ ರೂಪದಲ್ಲಿಯೂ ಕಾಣಿಸಿಕೊಳ್ಳುವನು ಎಂದು ವರ್ಣಿಸುತ್ತದೆ.
- ಪಿರಮಿಡ್‌ನಲ್ಲಿ ಜ್ಯೋತಿರೂಪವಾಗಿಯೇ ಕಾಣಿಸಿಕೊಳ್ಳುವನು. ಪಿರಮಿಡ್ ಪದದ ಅರ್ಥವೇ "ಮಧ್ಯದಲ್ಲಿ ಅಗ್ನಿ ಇರುವುದು" ಎಂದಾಗುತ್ತದೆ. ಅಗ್ನಿ ಎಂದರೂ ಒಂದೇ ಜ್ಯೋತಿ ಎಂದರೂ ಒಂದೇ. ದೇವತೆಗಳ ಜ್ಯೇಷ್ಠನಾದ ಒಸಿರಿಸ್ ಪಿರಮಿಡ್‌ನ ಒಳಗಡೆ ಇರುವನು ಎಂದು ಪಿರಮಿಡ್ ಧರ್ಮವು ಹೇಳುತ್ತಿದೆ..
- ಯಹೂದಿಗಳ ಮೋಸಸ್‌ರವರು ಅಲ್ಲಾಹನನ್ನು "ಪೊದೆಯನ್ನು ದಹಿಸುವ ಅಗ್ನಿ" ಯಂತೆಯೇ ಕಂಡಿರುವರು. ಅಂದರೆ ಜ್ಯೋತಿಯಂತೆಯೇ ಕಂಡಿರುವರು.
- ಕ್ರಿಶ್ಚಿಯನ್‌ರ "ಪೆಂಟೆಕೋಸ್ಟ ದಿನ"ದಂದು ಆಕಾಶದಿಂದ ಅಗ್ನಿ ಮತ್ತು ಹೋಲಿಸ್ಪಿರಿಟ್‌ನಿಂದ ಕೂಡಿದ "ನಾಲಿಗೆಯಂತಹ ಅಗ್ನಿಯು" ಅಪೋಸ್ತಲರು ಮತ್ತು ಕೆಲವು ಜೀಸಸ್‌ರ ಅನುಯಾಯಿಗಳ ಮೇಲಿಳಿಯಿತು. ಅಲ್ಲಾಹನ ಮತ್ತು ನಮ್ಮ ಸ್ವರೂಪವು ಈ "ನಾಲಿಗೆಯಂತಹ ಅಗ್ನಿ"ಯ ಸ್ವರೂಪವಾಗಿದೆ. ಹೀಗೆ ಇಳಿದ "ನಾಲಿಗೆಯಂತಹ ಅಗ್ನಿಯು" ಜೀಸಸ್‌ರ ಆತ್ಮವಾಗಿದೆ ಎಂದು ಭಾವಿಸುತ್ತೇನೆ. ಜೀಸಸ್‌ರ ಆತ್ಮವು ಅನೇಕ ಭಾಗವಾಗಿ ವಿಭಜಿಸಿಕೊಂಡು ಅವರ ಮೇಲೆ ಇಳಿದಿದೆ.
- ಹಿಂದೂ ಧರ್ಮದಲ್ಲಿ ದೇವರ ಮೂರ್ತಿಗಳ ಮುಂದೆ ನಂದಾದೀಪವನ್ನು ಹಚ್ಚುತ್ತಾರೆ. ಈ ದೀಪವು ನಮ್ಮ ಆತ್ಮವನ್ನು ಪ್ರತಿನಿಧಿಸುತ್ತದೆ.
- ಪವಿತ್ರ ಕುರಾನ್‌ನ ಪ್ರಕಾರ ಅಲ್ಲಾಹನು ಜ್ಯೋತಿಸ್ವರೂಪದಲ್ಲಿಯೇ ಕಾಣಿಸಿಕೊಳ್ಳುತ್ತಾನೆ.

ಆಕಾರವಿಲ್ಲದ ಅಲ್ಲಾಹನು ಹೋಲಿಸ್ಪಿರಿಟ್‌ಅನ್ನು ಧರಿಸಿದಾಗ ಅವನು ಜ್ಯೋತಿಸ್ವರೂಪನಾಗಿ ಕಾಣುತ್ತಾನೆ. ಏಕೆಂದರೆ ವಿಶ್ವ ಮನಸ್ಸಿನ ಒಂದು ಧ್ರುವವು ಶಾಖದಿಂದ ಕೂಡಿದೆ ಎಂದು ಈಗಾಗಲೇ ಓದಿರುವೆವು. ಈ ಶಾಖವೇ ಜ್ಯೋತಿರೂಪದಲ್ಲಿ ಕಾಣಿಸಿಕೊಳ್ಳುತ್ತದೆ. ಮುಸ್ಲೀಮರು ಅಲ್ಲಾಹನು ಬೆಳಕು (ನೂರ್) ಎಂದು ಮಾತ್ರ ತಿಳಿದಿದ್ದಾರೆ. ಆದರೆ ಬೆಳಕಿಗೂ ಒಂದು ಆಕಾರವಿದೆ ಎಂದು ಅವರಿಗೆ ತಿಳಿದಿಲ್ಲ. ಸೂರ್ಯ, ಚಂದ್ರ ಅಥವಾ ಮೇಣದ ಬತ್ತಿಯ ಬೆಳಕು ಒಂದು ಆಕಾರವನ್ನು

ಪಡೆದಿದೆ. ಹಾಗೆಯೆ ಅಲ್ಲಾಹನ ಬೆಳಕೂ (ನೂರ್) ಸಹ ಮೇಣದ ಬತ್ತಿ ಅಥವಾ ನಂದಾದೀಪದಂತಹ ಆಕಾರವನ್ನು ಪಡೆದಿದೆ.

**ಅಲ್ಲಾಹನು ಜ್ಯೋತಿಯನ್ನು, ಬೆಳಕನ್ನು, ಪ್ರಕಾಶವನ್ನು ಪ್ರತಿನಿಧಿಸುವನು.**

ಈ ಪದಗಳೆಲ್ಲಾ ಅತ್ಯುಚ್ಛ ಬೆಳಕಿನ ಪರ್ಯಾಯ ಪದಗಳಾಗಿವೆ. ಮತ್ತು ಅಲ್ಲಾಹನು ಅನಂತವಾದ ಜ್ಞಾನವನ್ನು ಹೊಂದಿರುವನು. ಜ್ಞಾನವಿದೆಯೆಂದರೆ ಅದು ಮನಸ್ಸಿನಲ್ಲಿಯೇ ಇರುತ್ತದೆ. ಆದ್ದರಿಂದ ಪ್ರಭುವು ಜ್ಯೋತಿಸ್ವರೂಪನೂ ಮತ್ತು ದೈವೀಮನಸ್ಸಿನವನೂ ಆಗಿದ್ದಾನೆ. ಅಲ್ಲಾಹನ ದೈವೀಮನಸ್ಸಿನಲ್ಲಿ ಕಿಂಚಿತ್ತೂ ಶೈತಾನನ ಅಂಶವಿಲ್ಲ. ಅಲ್ಲಾಹನು ತನ್ನ ಜ್ಯೋತಿಯ ಅಂಶವನ್ನು ಸಕಲ ಜೀವರಾಶಿಗಳಲ್ಲಿ ಸ್ಥಾಪಿಸಿರುವನು. ಅದನ್ನು ಆತ್ಮ (ರೂಹ) ಎನ್ನುತ್ತಾರೆ.

ಆತ್ಮವೂ ಸಹ ಅನಾದಿ ಸ್ವರೂಪವಾಗಿದೆ. ಪ್ರಥಮಬಾರಿಗೆ ಸೃಷ್ಟಿಕ್ರಿಯೆಯು ಯಾವಾಗ ಶುರುವಾಯಿತೊ ಆಗ ನಾವು ಸೃಷ್ಟಿಸಲ್ಪಟ್ಟೆವು. ಅಲ್ಲಿಂದ ಇಲ್ಲಿಯವರೆಗೂ ಅನೇಕ ಬಾರಿ ಪ್ರಳಯವಾಗಿದೆ ಮತ್ತು ಸೃಷ್ಟಿಯಾಗಿದೆ. ನಮ್ಮ ಅಸ್ತಿತ್ವವೂ ಹೀಗೆಯೇ ಮುಂದುವರೆದಿದೆ. ಪ್ರತೀ ಸೃಷ್ಟಿಯಲ್ಲಿಯೂ ಅಪರಿಪೂರ್ಣನಾದ ಜೀವನು ಜನ್ಮವನ್ನು ತಾಳುತ್ತಾನೆ.

ಆಸೆಗಳಿಂದ ಕೂಡಿದ ಜ್ಯೋತಿಸ್ವರೂಪದ ಆಡಮ್ ಸ್ವರ್ಗದ ಉದ್ಯಾನವನದಲ್ಲಿರುವುದನ್ನು ಬಯಸದೇ ದೇವಚರರು ಸೃಷ್ಟಿಸಿದ ಬಹು ಆಕರ್ಷಕವಾದ ಭೂಲೋಕಕ್ಕೆ ಬಂದು ಸ್ಥೂಲಶರೀರವನ್ನು ಧರಿಸಿ ಆನಂದಪಡಲು ಬಯಸುತ್ತಾರೆ. ಆಗ ಅಲ್ಲಾಹನು ಜ್ಯೋತಿಸ್ವರೂಪನಾದ ನಮಗೆ ಕಾರಣಶರೀರವನ್ನು (ಸ್ವರ್ಗದ ಆಡಮ್) ಸೃಷ್ಟಿಸಿ, ನಮ್ಮ ರಕ್ಷಣೆಗೋಸ್ಕರ ಅದರೊಳಗೆ ತಾನೂ ಸಹ ಸೇರಿಕೊಳ್ಳುವನು ಮತ್ತು ಸ್ವರ್ಗದ ಆಡಮ್‌ನನ್ನು ಭೂಲೋಕಕ್ಕೆ ಕಳುಹಿಸಿಕೊಡುವನು. ಅಲ್ಲಾಹನು ನಮ್ಮ ಜೊತೆಯಲ್ಲಿ ಬರದೇ ಇದ್ದರೆ ನಮ್ಮನ್ನು ಶೈತಾನನು ಆವರಿಸಿಕೊಂಡು ನಾಶಮಾಡುತ್ತಿದ್ದನು. ಆದ್ದರಿಂದ ನಮ್ಮನ್ನು ಶೈತಾನನಿಂದ ರಕ್ಷಿಸಲು ನಮ್ಮ ಜೊತೆಯಲ್ಲಿ ಇಳಿದಿರುವನು.

ಸ್ವರ್ಗದ ಆಡಮ್ ಕೆಳಗೆ ಇಳಿದ ಕೂಡಲೇ ವಿಶ್ವಪುರುಷನ (ವಿರಾಟ್‌ಪುರುಷ/ಕಾಸ್ಮಿಕ್ ಮ್ಯಾನ್) ಪ್ರತಿರೂಪವಾದ ಸೂಕ್ಷ್ಮಶರೀರವು ನಮ್ಮನ್ನು ಆವರಿಸಿಕೊಳ್ಳುತ್ತದೆ. ಅಲ್ಲಾಹನು ಸೃಷ್ಟಿಸಿದ ಸ್ವರ್ಗದ ಶರೀರ ಮತ್ತು ಸೂಕ್ಷ್ಮಶರೀರವು ದೈವೀ ಶರೀರವಾಗಿದೆ. ಅಲ್ಲಾಹನು ನಮ್ಮ ಸ್ವರ್ಗದ ಆಡಮ್‌ನ ಹೃದಯಗುಹೆಯಲ್ಲಿ ನೆಲೆಸಿರುವನು ಮತ್ತು ನಮ್ಮ ಜ್ಯೋತಿಯು ಅಲ್ಲಾಹನ ಹೃದಯಗುಹೆಯಿಂದ ಒಂದು ನೂಲು ಕೆಳಗಿರುವ ಬಾಳೆಹೂವಿನ ಆಕಾರದಲ್ಲಿರುವ ನರನಾಡಿಗಳ ಒಳಗೆ ಇರುವನು. ಆದರೆ ಈ ಸೂಕ್ಷ್ಮಶರೀರದಲ್ಲಿ ಎರಡೂ ಸಮುದ್ರದ ನಡುವೆ ಇರುವ ಬಿಲದ ದ್ವಾರವು ತೆರೆದಿರುವುದು. ಶೈತಾನನು ಕೂಡಲೆ ಮೇಲೆ ಬಂದು ನಮ್ಮ ಶರೀರವನ್ನು ಆವರಿಸಿಕೊಳ್ಳುವನು. ಏಕೆಂದರೆ ಅವನು ಬೆಳಕಿನ ಶತ್ರುವಾಗಿದ್ದಾನೆ ಆದ್ದರಿಂದ ನಮ್ಮನ್ನು ಕತ್ತಲಿನಿಂದ ಮುಚ್ಚಿಬಿಡುವನು.

ಶೈತಾನನು ನಮ್ಮನ್ನು ಕತ್ತಲಿನಿಂದ ಮುಚ್ಚಿದ ಕೂಡಲೆ ಅಜ್ಞಾನವು ನಮ್ಮನ್ನು ಆವರಿಸಿಕೊಂಡು ನಾವು ಜ್ಯೋತಿಸ್ವರೂಪರಾದ ಸ್ವರ್ಗದ ಆಡಮ್ ಎಂಬುದನ್ನು ಮರೆತುಬಿಡುವೆವು. ಆನಂತರ ದೇವಚರರು ನೀರಿನಿಂದ ಸ್ಥೂಲಶರೀರವನ್ನು ರಚಿಸಿ ಕೊಡುತ್ತಾರೆ. ಈ ಸ್ಥೂಲಶರೀರದಲ್ಲಿ ಸ್ವರ್ಗದ ಆಡಮ್ ಮತ್ತು ಸೂಕ್ಷ್ಮಶರೀರವು ಬಂದು ಸೇರುತ್ತದೆ. ಪವಿತ್ರ ಕುರ್‌ಆನ್‌ನಲ್ಲಿ ಕೇವಲ ಸ್ವರ್ಗದ ಆಡಮ್ ಕುರಿತು ಹೇಳಲಾಗಿದೆ. ಸ್ವರ್ಗದ ಆಡಮ್ ಬೇರೆ ಮತ್ತು ಭೂಲೋಕದ ಆಡಮ್ ಬೇರೆ. ಅಲ್ಲಾಹನು ಜ್ಯೋತಿಸ್ವರೂಪನು ಎಂಬುದಕ್ಕೆ ಪವಿತ್ರ ಕುರ್‌ಆನ್‌ನ ಕೆಳಗಿನ ಸೂಕ್ತಗಳನ್ನು ನೋಡಿ.

ಪವಿತ್ರ ಕುರಾನ್ ೯–೩೨ ರ ಪ್ರಕಾರ: "ಅವರು ಅಲ್ಲಾಹನ ಜ್ಯೋತಿಯನ್ನು ತಮ್ಮ ಬಾಯಿಗಳಿಂದ ಊದಿ ನಂದಿಸಿ ಬಿಡಲು ಇಚ್ಛಿಸುತ್ತಾರೆ (ತಮ್ಮ ಶೈತಾನ ಕರ್ಮಗಳಿಂದ). ಆದರೆ ಅಲ್ಲಾಹನು ತನ್ನ ಜ್ಯೋತಿಯನ್ನು (ಅಂದರೆ ಸ್ವರ್ಗದ ಆಡಮ್‌ನನ್ನು) ಪರಿಪೂರ್ಣಗೊಳಿಸದೆ ಬಿಡುವವನಲ್ಲ. ಇದು ಸತ್ಯನಿಷೇಧಿಗಳಿಗೆ ಎಷ್ಟೇ ಅಪ್ರಿಯವಾಗಲಿ."

ಇಲ್ಲಿ ಅಲ್ಲಾಹನ ಜ್ಯೋತಿ ಎಂದರೆ ನಮ್ಮ ಆತ್ಮಜ್ಯೋತಿ. ಅಲ್ಲಾಹನ ಜ್ಯೋತಿಯನ್ನು ಪರಿಪೂರ್ಣಗೊಳಿಸುವ ಅವಶ್ಯಕತೆ ಇಲ್ಲ. ಅಲ್ಲಾಹನು ಯಾವಾಗಲೂ ಪರಿಪೂರ್ಣನೇ. ಆತನ ಅಂಶವಾದ ನಮ್ಮ ಜ್ಯೋತಿ ತನ್ನನ್ನೇ ಮರೆತು ಸ್ಥೂಲಶರೀರದ ಹೋಲಿಸ್ಪಿರಿಟ್–ಮನಸ್ಸನೊಂದಿಗೆ ಗುರುತಿಸಿಕೊಳ್ಳುತ್ತಾನೆ. ಸ್ವರ್ಗದ ಆಡಮ್ ತನ್ನನ್ನೇ ಮರೆತು ಶೈತಾನನ ವಶವಾಗಿ ಹೋಲಿಸ್ಪಿರಿಟ್–ಮನಸ್ಸು ಹೇಳಿದ ಹಾಗೆ ಮಾಡುತ್ತಾ ಅದರ ಕರ್ಮ ಫಲವನ್ನು ಅನುಭವಿಸುತ್ತಿರುನು. ನಮ್ಮನ್ನು ಶೈತಾನನು ಆಕ್ರಮಿಸಿಕೊಂಡಿರುವುದರಿಂದ ನಮ್ಮ ಜ್ಯೋತಿಯನ್ನು ಪರಿಪೂರ್ಣಗೊಳಿಸಬೇಕಾಗಿದೆ. ನಾನು ಶರೀರವಲ್ಲ; ನಾನು ಅಲ್ಲಾಹನ ಅಂಶವಾದ ಜ್ಯೋತಿಸ್ವರೂಪನು ಎಂಬುದನ್ನು ಅರ್ಥಮಾಡಿಕೊಳ್ಳಬೇಕಾಗಿದೆ. ಕಿಯಾಮತ್ ದಿನದಂದು ಜ್ಯೋತಿಸ್ವರೂಪರಾದ ನಾವೆಲ್ಲರೂ ಅಲ್ಲಾಹನ ಬಳಿ ಹೋದಾಗ

ಪವಿತ್ರ ಕುರಾನ್ ೬೬–ಲರ ಪ್ರಕಾರ: ....ಅವರ ಜ್ಯೋತಿಯು ಅವರ ಮುಂದಿನಿಂದಲೂ ಅವರ ಬಲಬದಿಯಲ್ಲೂ ಚಲಿಸುತ್ತಿರುವುದು ಮತ್ತು ಅವರು "ನಮ್ಮ ಪ್ರಭು, ನಮ್ಮ ಜ್ಯೋತಿಯನ್ನು ನಮಗಾಗಿ ಪರಿಪೂರ್ಣಗೊಳಿಸಿಬಿಡು ಮತ್ತು ನಮ್ಮನ್ನು ಕ್ಷಮಿಸು, ನೀನು ಸಕಲ ವಿಷಯಗಳ ಸಾಮರ್ಥ್ಯವಿರುವವನಾಗಿರುತ್ತಿ" ಎಂದು ಹೇಳುತ್ತಿರುವರು.

ಆದರೆ ಪ್ರಯೋಜನವಿಲ್ಲ. ಎಲ್ಲರನ್ನು ಅಲ್ಲಾಹ್ (ಇಲ್ಲಿ ಕಾಸ್ಮಿಕ್ ಮ್ಯಾನ್‌ನಲ್ಲಿರುವ ಇಲೋಹಿಂ) ವಿಚಾರಣೆಗೆ ಒಳಪಡಿಸಿ ತೀರ್ಮಾನವನ್ನು ಕೊಡುವನು. ನಮ್ಮ ಜ್ಯೋತಿರೂಪ ಆತ್ಮವನ್ನು ಭೂಲೋಕದಲ್ಲಿಯೇ ಅಲ್ಲಾಹನನ್ನು ಪ್ರಾರ್ಥಿಸಿ ಪರಿಶುದ್ಧಗೊಳಿಸಿಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ ಮತ್ತೆ ಸೃಷ್ಟಿಕ್ರಿಯೆ ಶುರುವಾದಾಗ ಯಾರ ಜ್ಯೋತಿರೂಪ ಆತ್ಮ ಪರಿಶುದ್ಧವಾಗಿಲ್ಲವೋ ಅವರು ಭೂಮಿಯ ಮೇಲೆ ಜನ್ಮ ತಾಳಬೇಕಾಗುತ್ತದೆ. ನಮ್ಮ ಹಿಂದಿನ ಕರ್ಮಗಳೆಲ್ಲವೂ ನಾವು ಜನ್ಮ ತಾಳಿದ ಕೂಡಲೆ ನಮ್ಮನ್ನು ಆವರಿಸಿಕೊಳ್ಳುವುದು. ಇಲೋಹಿಂ ಮತ್ತು ದೇವಚರರು ನಮ್ಮ ಕರ್ಮಗಳನ್ನೆಲ್ಲಾ ದಾಖಲಿಸಿಕೊಂಡಿರುವುದರಿಂದ ಮತ್ತೆ ನಾವು ಮೊದಲಿದ್ದ ಪರಿಸ್ಥಿತಿಯಲ್ಲಿಯೇ ಜನ್ಮ ತಾಳುವೆವು. ಆದ್ದರಿಂದ ಈ ಸ್ಥೂಲಶರೀರ ನಾವಲ್ಲ ಇದು ದೇವತೆಗಳಿಂದ ಸೃಷ್ಟಿಯಾದದ್ದು. ನಾವೂ ಸಹ ಅಲ್ಲಾಹನಂತೆ ಜ್ಯೋತಿಸ್ವರೂಪರಾಗಿದ್ದೇವೆ.

**ಇನ್ನೊಂದು ಜ್ಯೋತಿರೂಪ**

ಅನೇಕ ಸಾಧಕರು ಜ್ಯೋತಿಧ್ಯಾನವನ್ನು ಮಾಡುತ್ತಾರೆ. ಮುಸ್ಲೀಮರಿಗೆ ಇತರ ಶರೀರಗಳ ಬಗ್ಗೆ ತಿಳಿದಿಲ್ಲದೇ ಇರುವ ಕಾರಣ ಕೆಲವು ಮುಸ್ಲೀಮರು ಸ್ಥೂಲಶರೀದ ಹೃದಯದ ಮೇಲೆ ಅಲ್ಲಾಹನ ಧ್ಯಾನಮಾಡುತ್ತಾರೆ. ಅವರಲ್ಲಿ ಕೆಲವರಿಗೆ ಕ್ರಮೇಣ ಜ್ಯೋತಿಯ ದರ್ಶನವಾಗುವುದು. ಈ ಜ್ಯೋತಿಯು ಹೋಲಿಸ್ಪರಿಟ್‌ನದಾಗಿದೆ. ನಮ್ಮ ಶರೀರವನ್ನು ಆವರಿಸಿಕೊಂಡಿರುವ ಮತ್ತು ನಮ್ಮ ಸ್ಥೂಲಶರೀರದ ಕೆಲಸಕಾರ್ಯಗಳಲ್ಲಿ ತೊಡಗಿಕೊಂಡಿರುವ ಈ ಹೋಲಿಸ್ಪರಿಟ್ ಜ್ಯೋತಿಯ ಸ್ವರೂಪದಿಂದ ನಮಗೆ ಕಾಣಿಸುತ್ತದೆ. ಈ ಜ್ಯೋತಿಯ ಮೇಲೆ ಧ್ಯಾನಮಾಡುವವರಿಗೂ ಸಹ ಪವಾಡಗಳನ್ನು ಮಾಡುವ ಅನೇಕ ಶಕ್ತಿಗಳು ದೊರೆಯುತ್ತದೆ. ಏಕೆಂದರೆ ಎಲ್ಲಾ ಪವಾಡಗಳ ಹಿಂದಿರುವ ಶಕ್ತಿ ಮತ್ತು ಸೃಷ್ಟಿಯ ಶಕ್ತಿ ಹೋಲಿಸ್ಪರಿಟ್‌ನದಾಗಿದೆ.

ನಮ್ಮ ಆತ್ಮಜ್ಯೋತಿಯು ಬಾಳೆಹೂವಿನ ಆಕಾರದ ನಾಡಿಗಳ ಒಳಗಡೆ ಇದೆ. ಇದು ಹೃದಯ ಗುಹೆಯಿಂದ ೧/೨ ದಿಂದ ೧ ಸೆಮೀ ಕೆಳಗಡೆ ಹಳ್ಳದ ರೀತಿ ಇದೆ. ಈ ಬಾಳೆಹೂವಿನ ಆಕಾರದ ನಾಡಿಯನ್ನು ಜಾಗೃತಗೊಳಿಸಿದಾಗ ಅದು ಹಳ್ಳದಿಂದ ಹೊರಬಂದು ನಮ್ಮ ಆತ್ಮಜ್ಯೋತಿಯು ಕಾಣಿಸುವುದು. ಈ ಆತ್ಮಜ್ಯೋತಿಯು ಪರಿಪೂರ್ಣವಾಗಬೇಕಿದೆ. ಇದನ್ನು ಪರಿಪೂರ್ಣಗೊಳಿಸುವ ವಿಧಾನವನ್ನು ಗುರುಗಳಿಂದ ತಿಳಿದುಕೊಳ್ಳಬೇಕು. ಸೂಕ್ಷ್ಮದ್ವಾರದ ಮೂಲಕ ಈ ಆತ್ಮಜ್ಯೋತಿಯನ್ನು ಅಲ್ಲಾಹನ ಲೋಕಕ್ಕೆ ವಾಪಸ್ಸು ಕರೆದುಕೊಂಡು ಹೋಗಬೇಕಾಗಿದೆ.

# ಅಧ್ಯಾಯ ೪
# ಪಿರಮಿಡ್ ಧರ್ಮ

ಪ್ರಾಚೀನ ಈಜಿಪ್ಟ್ ಎಂದ ಕೂಡಲೆ ನಮ್ಮ ಮನಃಪಟಲಕ್ಕೆ ಪಿರಮಿಡ್ ಬರುತ್ತದೆ. ಚರಿತ್ರಕಾರರ ಪ್ರಕಾರ ಪಿರಮಿಡ್ ೪,೫೭೦ ವರ್ಷಗಳ ಹಿಂದೆ ಕಟ್ಟಿರಬಹುದೆಂದು ಅಂದಾಜಿಸಲಾಗಿದೆ. ಸುಮಾರು ೪೫೦೦ ವರ್ಷಗಳ ಹಿಂದೆ ಯಹೂದಿಗಳ ಮೂಲ ಪುರುಷನಾದ ಅಬ್ರಹಾಂನ ಕಾಲ ಘಟ್ಟವಾಗಿತ್ತು. ಆ ಕಾಲದಲ್ಲಿ ಪಿರಮಿಡ್ ಅಂತಹ ಮಹಾನ್ ಕಟ್ಟಡ ಕಟ್ಟಿದ್ದರೆ ಅದರ ಬಗ್ಗೆ ಆ ಕಾಲದ ಎಲ್ಲ ಜನಾಂಗಗಳ ಮನೆಮಾತಾಗಿರುತಿತ್ತು ಮತ್ತು ಅವರ ಚರಿತ್ರೆಯಲ್ಲಿ ಸಂಪೂರ್ಣವಾಗಿ ದಾಖಲಾಗುತಿತ್ತು. ಅದೂ ಅಲ್ಲದೇ ಯಹೂದಿಗಳು ಪ್ರಾಚೀನ ಈಜಿಪ್ಟ ರಾಜರ ಖೈದಿಗಳಾಗಿದ್ದರು. ಮೋಸಸ್‌ರವರು ಅವರನ್ನೆಲ್ಲಾ ಬಿಡಿಸಿಕೊಂಡು ಹೋದರು ಎಂದು ಯಹೂದಿಗಳ ಇತಿಹಾಸ ತಿಳಿಸುತ್ತದೆ. <u>ಇನ್ನೊಂದು ಪ್ರಮುಖ ವಿಷಯವೆಂದರೆ ಅವರಿಗೆ ಪಿರಮಿಡ್ ಕಟ್ಟುವ ಶಿಲ್ಪಕಲೆ ತಿಳಿದಿರಲಿಲ್ಲ.</u>

ಪ್ರಾಚೀನ ಈಜಿಪ್ಟ ಧರ್ಮದ ಇತಿಹಾಸವೂ ಕೂಡ ಪಿರಮಿಡ್ ಕಟ್ಟಿದ ಬಗ್ಗೆ ಏನನ್ನೂ ಹೇಳುವುದಿಲ್ಲ. ಅವರು ಎಲ್ಲಾ ರಾಜರ ಮತ್ತು ಇತರ ವಿಷಯಗಳ ದಾಖಲೆಯನ್ನು ಇಟ್ಟಿಕೊಂಡ್ಡಿದ್ದರೂ ಪಿರಮಿಡ್ ಕಟ್ಟಿದ ದಾಖಲೆಯು ಎಲ್ಲಿಯೂ ಇಲ್ಲ. ಪಿರಮಿಡ್ ಅವರ ಕಾಲದಲ್ಲಿ ಇರಲಿಲ್ಲವೇನೋ ಎಂಬಂತೆ ಆ ಕಾಲದ ಇತಿಹಾಸದ ಗ್ರಂಥಗಳು ವರ್ತಿಸಿವೆ. ಆದ್ದರಿಂದ ಪಿರಮಿಡ್ ಮೊದಲಿನಿಂದಲೂ ಇತ್ತು ಎಂದು ತಿಳಿಯಬಹುದು ಎಂದು ಕೆಲವರು ಹೇಳುತಾರೆ. ಕೆಲವರು ಪಿರಮಿಡ್ ೧೦,೦೦೦ ವರ್ಷಗಳಿಗಿಂತಲೂ ಹಿಂದೆ ಕಟ್ಟಲಾಗಿದೆ ಎಂದು ಹೇಳುತ್ತಾರೆ. ಆದರೆ ಪಿರಮಿಡ್‌ನ ಕಾಲವನ್ನು ನಿಖರವಾಗಿ ಹೇಳಲು ಆಗುವುದಿಲ್ಲ.

ಅವರ ಶಿಲ್ಪ ಕಲೆಯು ಎಷ್ಟು ಅದ್ಭುತವಾಗಿದ್ದಿತೆಂದರೆ ಒಂದು ಆಕೃತಿಯ ಬಲಗಡೆಯ ಭಾಗವು ಎಡಗಡೆಯ ತದ್ರೂಪವಾಗಿದೆ. ಅಷ್ಟು ನಿಖರವಾಗಿ ಕೆತ್ತುವ ಶಿಲ್ಪ ಕಲೆಯು ೪,೫೦೦ ವರ್ಷಗಳ ಹಿಂದೆ ಇದ್ದಿರಲೇ ಇಲ್ಲ. ಅವರ ಶಿಲ್ಪ ಕಲೆಯಲ್ಲಿ ಬರುವ ರಾಜರ ಪರಿಪೂರ್ಣವಾದ ಕೆತ್ತನೆಯನ್ನು ಈ ಕಾಲದಲ್ಲಿಯೂ ಕೆತ್ತಲಾಗುವುದಿಲ್ಲ. ಆದ್ದರಿಂದ ಕೆಲವರು ಬೇರೆ ಗ್ರಹದಿಂದ ಬಂದ ಏಲಿಯನ್ನರು ಪಿರಮಿಡ್‌ಅನ್ನು ಕಟ್ಟಿರಬಹುದೆಂದು ಹೇಳುತ್ತಾರೆ. ಪ್ರಾಚೀನ ಈಜಿಪ್ಟ್‌ನಲ್ಲಿ ಅನೇಕ ಪಿರಮಿಡ್‌ಗಳು ಇದ್ದರೂ ಅವುಗಳಲ್ಲಿ ಬಹು ಪ್ರಮುಖವಾದುದು ಗೀಜಾ ಪಿರಮಿಡ್ ಆಗಿದೆ. ಗೀಜಾ ಪಿರಮಿಡ್ ಎಷ್ಟು ಪರಿಪೂರ್ಣವಾಗಿದೆಯೆಂದರೆ ಅಂತಹ ಕಟ್ಟಡವನ್ನು ಇಂದಿನ ತಂತ್ರಜ್ಞಾನದಲ್ಲಿಯೂ ಕಟ್ಟಲಾಗುವುದಿಲ್ಲವೆಂದು ಹೇಳುತ್ತಾರೆ.

ಪಿರಮಿಡ್ ಎಷ್ಟು ದೊಡ್ಡದಾಗಿದೆಯೆಂದರೆ ಆಕಾಶವು ಮೋಡಗಳಿಂದ ಆವೃತವಾಗಿರದ್ದಿದ್ದರೆ ಪಿರಮಿಡ್‌ಅನ್ನು ಚಂದ್ರನಿಂದಲೂ ನೋಡಬಹುದು. ಪಿರಮಿಡ್‌ನ ಒಳಬಾಗವು ೧೩.೬ ಎಕರೆಯಷ್ಟು ದೊಡ್ಡದಾಗಿದೆ ಮತ್ತು ಅದನ್ನು ಸುಮಾರು ೨ ಟನ್‌ನಿಂದ ಹಿಡಿದು ೪೦ರಿಂದ ೭೦ ಟನ್ ತೂಕದ ದೊಡ್ಡದಾದ ಕಲ್ಲುಗಳಿಂದ ಕಟ್ಟಲಾಗಿದೆ. ಅಷ್ಟು ದೊಡ್ಡದಾದ ಕಲ್ಲುಗಳನ್ನು ನಿಖರವಾಗಿ ಚಚ್ಚೌಕ ಆಕಾರದಲ್ಲಿ ಕತ್ತರಿಸಿ ಪಾಲಿಶ್ ಮಾಡಿ ಒಂದರ ಮೇಲೆ ಇನ್ನೊಂದನ್ನು ಜೋಡಿಸಿದಾಗ ಸ್ವಲ್ಪವೂ ಸಂದು ಅಥವಾ ಅಂತರ ಬರದಂತೆ ಕಟ್ಟಿದ್ದಾರೆ. ಪಿರಮಿಡ್‌ಅನ್ನು ಕಟ್ಟಿದ ತರುವಾಯ ಅದರ ಮೇಲ್ಬಾಗವನ್ನು ನೂರು ಇಂಚು ದಪ್ಪದ ಪಾಲಿಶ್ ಮಾಡಿದ ಕಲ್ಲುಗಳಿಂದ ಮುಚ್ಚಿ ಜೋಡಿಸಿದ್ದರು.

ಹೊಸದಾಗಿ ಕಟ್ಟಿದ ಪಿರಮಿಡ್ ಸೂರ್ಯೋದಯ ಕಾಲದಲ್ಲಿ ದಿಗಂತದವರೆಗೂ ಪಳಪಳನೇ ಹೊಳೆಯುತ್ತಿದ್ದು ಪ್ರಯಾಣಿಕರು ಅನೇಕ ಕಿಲೋಮೀಟರ್ ದೂರದಿಂದಲೇ ಅದನ್ನು ನೋಡುತ್ತಿದ್ದರು. ಯಾವಾಗ ಪಿರಮಿಡ್ ಧರ್ಮವು ಅಳಿಯಿತೋ ಆಗ ಜನರು ಪಾಲಿಶ್ ಮಾಡಿದ ಕಲ್ಲುಗಳನ್ನು ತೆಗೆದು ತಮ್ಮ ಮನೆಗಳನ್ನು ಕಟ್ಟಲು ಉಪಯೋಗಿಸಿ ಕೊಂಡರು. ಅಂತಹ ಪ್ರಮುಖವಾದ ಪಿರಮಿಡ್ ಬಗ್ಗೆ ಸರಿಯಾದ ದಾಖಲೆಗಳಿಲ್ಲದಿರುವುದು ಆಶ್ಚರ್ಯವೇ ಸರಿ.

ಪಿರಮಿಡ್ ಕಟ್ಟಲು ಉಪಯೋಗಿಸಿದ ಅಳತೆಗೋಲುಗಳು ಎಷ್ಟು ನಿಖರವಾಗಿದೆಯೆಂದರೆ, ತಜ್ಞರ ಪ್ರಕಾರ ಅದು ಇಂದಿನ ಕಾಲದ ವಿಜ್ಞಾನಿಗಳು ಉಪಯೋಗಿಸುವ ಅಳತೆಗೆ ಸರಿಸಮಾನವಾಗಿದೆ. ಆದರೆ ಇಷ್ಟು ನಿಖರವಾದ ಅಳತೆ ೪,೫೦೦ ವರ್ಷಗಳ ಹಿಂದೆ ಉಪಯೋಗದಲ್ಲಿ ಇರಲಿಲ್ಲವೆಂಬುದನ್ನು ಇಲ್ಲಿ ಸ್ಮರಿಸಿಕೊಳ್ಳಬೇಕು. ಪಿರಮಿಡ್ ಇಂಜಿನಿಯರ್‌ಗಳ ಪ್ರಕಾರ ಪಿರಮಿಡ್ ಕಟ್ಟಡವು ವಿಶ್ವ ಗಣಿತ ತತ್ವದ ಆಧಾರದ ಮೇಲೆಯೆ ಕಟ್ಟಲಾಗಿದೆ. ಪಿರಮಿಡ್ ರೇಖಾಗಣಿತ ಶಾಸ್ತ್ರದ ಉದ್ದ, ಅಗಲ ಮತ್ತು ಎತ್ತರ, ವ್ಯಾಸ, ತ್ರಿಜ್ಯ ಮತ್ತು ವಕ್ರತೆಗಳ ಸಿದ್ಧಾಂತದ ಪ್ರಕಾರವೇ ಕಟ್ಟಲಾಗಿದೆ. ಪಿರಮಿಡ್ ಕಟ್ಟಿದ ವಾಸ್ತುಶಿಲ್ಪಿಗಳಿಗೆ ಭೂಮಿಯ ಸುತ್ತಳತೆ, ವರ್ಷ, ತಿಂಗಳು, ವಾರ, ನಕ್ಷತ್ರ ಇತ್ಯಾದಿ ಖಗೋಳಶಾಸ್ತ್ರ, ನಕ್ಷತ್ರಶಾಸ್ತ್ರಗಳ ಪರಿಪೂರ್ಣ ಜ್ಞಾನವಿತ್ತು ಎಂದು ಇಂಜಿನಿಯರ್‌ಗಳು ಹೇಳುತ್ತಾರೆ.

ಆದರೆ ಇಲ್ಲಿ ಕೆಲವು ಪ್ರಶ್ನೆಗಳು ಏಳುತ್ತವೆ. ಇಷ್ಟು ನಿಖರವಾದ, ಆ ಕಾಲದ ಯಾರಿಗೂ ತಿಳಿಯದ ಪರಿಪೂರ್ಣವಾದ ಗಣಿತ ಸಿದ್ಧಾಂತವೂ, ಖಗೋಳ ಶಾಸ್ತ್ರವೂ ಮತ್ತು ಇಂಜಿನಿಯರಿಂಗ್ ಕಲೆಯೂ ಹೇಗೆ ಪ್ರಕಟವಾಗಿ ಹೇಗೆ ಕಣ್ಮರೆಯಾಯಿತು ಎಂಬುದು ನಿಗೂಢವಾಗಿ ಉಳಿದಿದೆ. ಚೌಕಾಕಾರವಾದ ಅಷ್ಟು ದೊಡ್ಡ ಕಲ್ಲುಗಳನ್ನು ಅಷ್ಟು ನಿಖರವಾಗಿ ಹೇಗೆ ಕತ್ತರಿಸಿದರು ಮತ್ತು ಸಾಗಿಸಿದರು ಎಂಬುದು ಸಹಾ ಆಶ್ಚರ್ಯಕರವಾಗಿದೆ. ಅಷ್ಟು ಪರಿಪೂರ್ಣವಾದ ಗೀಜಾ ಪಿರಮಿಡ್ ಈಗಲೂ ಹಾಳಾಗದೆ ನಿಂತುಕೊಂಡಿದೆ.

ಆದರೆ ಅದರ ತರುವಾಯ ಕಟ್ಟಿದ ಪಿರಮಿಡ್‌ಗಳು ಗೀಜಾದಂತೆ ಪರಿಪೂರ್ಣವಾಗಿಲ್ಲ. ಏಕೆಂದರೆ ತಂತ್ರಜಾನವು ವೃದ್ಧಿಯಾಗುತ್ತಲೇ ಹೋಗುತ್ತದೆಯೇ ಹೊರತು ಶಿಥಿಲವಾಗುವುದಿಲ್ಲ. ಆ ತಂತ್ರಜ್ಞಾನವು ಕೇವಲ ಕೆಲವು ಪಿರಮಿಡ್‌ಗೆ ಸೀಮಿತ ಏಕೆ ಆಯಿತು ಎಂಬುದು ಪ್ರಶ್ನೆಯಾಗಿದೆ. ಆದ್ದರಿಂದ ಪ್ರಾಚೀನ ಈಜಿಪ್ಟನ ವಾಸ್ತುಶಿಲ್ಪಿಗಳು ಕಟ್ಟಲಿಲ್ಲವೆಂದೂ ಇತರ ಯಾರೋ ಅನ್ಯರು ಎಂದರೆ ಏಲಿಯನ್‌ರು ಕಟ್ಟಿರಬಹುದೆಂದು ಭಾವಿಸಿ ಕೆಲವು ವಿಚಾರಗಳನ್ನು ಮುಂದಿಡುತ್ತಾರೆ.

- ಪಿರಮಿಡ್‌ನ ಸುತ್ತಳತೆಯನ್ನು, ಅದರ ಎತ್ತರವನ್ನು ೨ ರಿಂದ ಭಾಗಿಸಿದಾಗ ನಮಗೆ ೧೫ ಸಂಖ್ಯೆಗಳ ಪೈ ಸಂಖ್ಯೆ ಸಿಗುತ್ತದೆ. ಪೈ ಬಗ್ಗೆ ಆ ಕಾಲದ ಜನರಿಗೆ ತಿಳಿದಿರಲಿಲ್ಲ.
- ಪಿರಮಿಡ್‌ನ ತಳ (ಃಚಿಜಿ) ೭೫೭ ಅಡಿ ಉದ್ದವಾಗಿದೆ, ಮತ್ತು ೯೦ ಡಿಗ್ರಿ ನಿಖರವಾದ ಕೋನವಾಗಿದೆ. ಆ ಕಾಲದಲ್ಲಿ ಇದು ಹೇಗೆ ಸಾದ್ಯವಾಯಿತು?
- ಪ್ರಾಚೀನ ಈಜಿಪ್ಟಿಯನ್ನರು ತಮ್ಮ ಕಾಲದ ಎಲ್ಲಾ ವಿಧವಾದ ದಾಖಲೆಗಳನ್ನು ಇಟ್ಟುಕೊಂಡಿದ್ದರೂ ಸಹಾ ಅವರು ಪಿರಮಿಡ್ ಕಟ್ಟಿದ ದಾಖಲೆಗಳು ಎಲ್ಲಿಯೂ ಇಲ್ಲ.
- ಪಿರಮಿಡ್‌ಗೋಸ್ಕರ ಸಾಗಿಸಿದ ಬೃಹದಾಕಾರದ ಕಲ್ಲುಗಳನ್ನು ಚಕ್ರ ಮತ್ತು ಅದರ ಬಳಕೆಯನ್ನೇ ತಿಳಿಯದಿದ್ದ ಕಾಲದಲ್ಲಿ ಬಹು ದೂರದಿಂದ ಹೇಗೆ ಸಾಗಿಸಿದರು?
- ಪಿರಮಿಡ್ ಕಟ್ಟಿದ ಸ್ಥಳದ ರೇಖಾಂಶ ೩೧ ಡಿಗ್ರಿ ಉತ್ತರ ಮತ್ತು ಅಕ್ಷಾಂಶವು ೩೧ ಡಿಗ್ರಿ ಪಶ್ಚಿಮವಾಗಿದೆ. ಇದು ಪೃಥ್ವಿಯ ಮಧ್ಯ ಬಿಂದುವನ್ನು ತೋರಿಸುತ್ತದೆ. ವಾಸ್ತುಶಿಲ್ಪಿಗಳು ಇಷ್ಟು ನಿಖರವಾಗಿ ಸ್ಥಳವನ್ನು ಹೇಗೆ ಆಯ್ದುಕೊಂಡರು ಅಥವಾ ಇದು ಆಕಸ್ಮಿಕವೇ?
- ಪಿರಮಿಡ್‌ನ ಎತ್ತರವು ೪೮೧ ಅಡಿ ಇದೆ. ಇದು ಭೂಮಿ ಮತ್ತು ಸೂರ್ಯನಿಗಿರುವ ದೂರದ ೧/೧ ಬಿಲಿಯನ್ ಆಗಿದೆ. ನಿಖರವಾದ ದೂರ ೪೮೦.೬ ಬಿಲಿಯನ್ ಅಡಿಗಳು.
- ಪಿರಮಿಡ್‌ನ ಕೆಲವು ಕಲ್ಲಗಳು ೪೦-೭೦ ಟನ್ ತೂಗುತ್ತದೆ. ಅದನ್ನು ೪೦ ಮೀಟರ್ ಎತ್ತರಕ್ಕೆ ಹೇಗೆ ಕೊಂಡೊಯ್ದರು. ಮತ್ತು ಮಧ್ಯದಲ್ಲಿ ಖಾಲಿ ಜಾಗ ಬರುವಂತೆ ಹೇಗೆ ನಿಲ್ಲಿಸಿದರು ಎಂಬುದು ರಹಸ್ಯವಾಗಿದೆ.
- ಕೊನೆಯದಾಗಿ ಬಹಳ ಪ್ರಮುಖವಾದ ಪ್ರಶ್ನೆ; ಪಿರಮಿಡ್ ಕಟ್ಟಲು ಇದ್ದ ಆರ್ಕಷಣೆಯಾದರೂ ಏನು?

ಈ ಪ್ರಶ್ನೆಯು ಬಹಳ ಪ್ರಮುಖವಾಗಿದೆ. ಸಾಮಾನ್ಯವಾಗಿ ಎಲ್ಲರ ಅಭಿಪ್ರಾಯ ಫಾರೋನನ್ನು ಮರಣ ಹೊಂದಿದ ತರುವಾಯ ಪಾರ್ಥೀವ ಶರೀರವನ್ನು ಇಡಲು ಕಟ್ಟಲಾಗಿತ್ತು ಎಂಬುದಾಗಿದೆ. ಆದರೆ ಗೀಜಾ ಪಿರಮಿಡ್‌ನ್ನು ಪ್ರವೇಶಿಸಿ ಪರಿಶೀಲಿಸಿದಾಗ ಒಳಗೆ ಯಾವುದೇ ಪಾರ್ಥೀವ ಶರೀರವಿರಲಿಲ್ಲ. ಆದರೆ ಬೇರೆ ಸಣ್ಣ ಪಿರಮಿಡ್‌ಗಳನ್ನು ಪರಿಶೀಲಿಸಿದಾಗ ರಾಜರ ಮತ್ತು ಪ್ರಮುಖ ವ್ಯಕ್ತಿಗಳೂ ತಮ್ಮ ಸಮಾಧಿಗಾಗಿ ಸಣ್ಣ ಪಿರಮಿಡ್‌ಗಳನ್ನು ಕಟ್ಟಿಕೊಳ್ಳುತ್ತಿದ್ದರು ಎಂಬುದು ಸಿದ್ಧವಾಗಿದೆ. ಆದ್ದರಿಂದ ಗೀಜಾ ಪಿರಮಿಡ್‌ನನ್ನು ಆರಾಧನೆಗೆ ಉಪಯೋಗಿಸುತ್ತಿದ್ದಿರಬಹುದು.

ಪಿರಮಿಡ್ ಒಂದು ರೀತಿಯ ಸಮಾಧಿಯಾದರೂ ಸಹಸ್ರಾರು ವರ್ಷಗಳಿಂದ ನಾಶವಾಗದಿರುವಂತೆ ಕಟ್ಟಲು ಕಾರಣವೇನು? ಅದರ ಹಿಂದೆ ಯಾವುದಾದರು ರಹಸ್ಯವಿದೆಯೆ? ಆ ರಹಸ್ಯವನ್ನು ಮುಂದಿನ ಮನುಕುಲಕ್ಕೆ ತಲುಪಿಸುವುದಕ್ಕಾಗಿ ಪ್ರಮುಖವಾದ ಗೀಜಾ ಪಿರಮಿಡ್‌ನ್ನು ಕಟ್ಟಲಾಯಿತೆ? ಅದಕ್ಕೆ ಚರಿತ್ರಕಾರರು ಕೊಡುವ ಕೆಲವು ಉತ್ತರಗಳು ಈ ರೀತಿ ಇವೆ.

- ಜಲ ಪ್ರಳಯವಾಗಬಹುದೆಂಬ ಭೀತಿಯಿಂದ ಕಟ್ಟಿದ್ದಾರೆ.
- ದೈವೀ ತೂಕ ಮತ್ತು ಅಳತೆಯನ್ನು ನಿಖರವಾಗಿ ತಿಳಿಸಲು ಕಟ್ಟಿದ್ದಾರೆ.
- ಬಾಹ್ಯಾಕಾಶ ನಿರೀಕ್ಷಣೆಗಾಗಿ ಕಟ್ಟಿದ್ದಾರೆ.
- ಸೈರಸ್ (ಖಿಡಿಣ) ನಕ್ಷತ್ರಪುಂಜದೊಂದಿಗೆ ಯಾವುದೋ ಸಂಬಂಧವಿದೆ.
- ವಿದ್ಯುತ್ ಉತ್ಪಾದನಾ ಕೇಂದ್ರವೆಂದು ಕೆಲವರು ಹೇಳುತ್ತಾರೆ.

- ರಾಜನು ತಮ್ಮ ರಾಜ್ಯದ ಪ್ರಜೆಗಳಿಗೆ ಕೆಲಸವನ್ನು ಕೊಡಲು ಪಿರಮಿಡ್ ಕಟ್ಟಿಸಿದ್ದಾನೆ. ನದಿಯ ನೀರಿನಿಂದ ಬೆಳೆಯನ್ನು ತೆಗೆದಾದ ಮೇಲೆ ಕೆಲಸವಿಲ್ಲದ ರೈತಾಪಿ ವರ್ಗದವರಿಗೆ ಕೆಲಸವನ್ನು ಕೊಡಲು ಕಟ್ಟಿಸಲಾಗಿದೆ ಎಂದು ಹೇಳುತ್ತಾರೆ.
- ರಾಜನ ಮರಣದ ನಂತರ ಅಟುಮ್ ಎಂಬ ದೇವತೆಯು ಆತನ ಆತ್ಮವನ್ನು ಪಿರಮಿಡ್‌ನಿಂದ ಸ್ವರ್ಗಕ್ಕೆ ತೆಗೆದುಕೊಂಡು ಹೋಗುವನು ಎಂದು ನಂಬಿದ್ದರು.
- ಪವಿತ್ರ ಅಗ್ನಿಯ ಸಂಕೇತವಾಗಿ ಕಟ್ಟಿದ್ದಾರೆ. ಪಿರಮಿಡ್ ಎನ್ನುವ ಪದದ ಅರ್ಥವೇ "ಮದ್ಯದಲ್ಲಿ ಅಗ್ನಿ" ಎಂಬುದಾಗಿದೆ.
  ಅಥವಾ ಇನ್ನೇನಾದರು ಬೇರೆ ಕಾರಣಗಳಿರಬಹುದೇ?

ಪಿರಮಿಡ್‌ನ್ನು ಯಾಕೆ ಕಟ್ಟುಸುತ್ತಿದ್ದರು ಎಂದು ತಿಳಿಯಬೇಕಾದರೆ ಅವರು ಪೂಜಿಸುತ್ತಿದ್ದ ದೇವತೆಗಳು ಯಾರು ಮತ್ತು ಅವರ ಮಹಿಮೆ ಏನು ಎಂದು ತಿಳಿದುಕೊಳ್ಳುವುದು ಬಹಳ ಅವಶ್ಯವಾಗಿದೆ. ಅವರು ಬಹಳಷ್ಟು ದೇವರನ್ನು ಪೂಜಿಸುತ್ತಿದ್ದರೂ ಅವರಲ್ಲಿ ಕೆಲವು ಪ್ರಮುಖ ದೇವರನ್ನು ನೋಡೋಣ.

- ಅಟುಮ್: ಅಟುಮ್ ಪ್ರಕಟವಾದ ಮೊದಲ ದೇವತೆ. ಅಟುಮ್ ದೇವತೆಯು ಸೃಷ್ಟಿಗೆ ಮೊದಲೇ ಇದ್ದನು ಮತ್ತು ಸೃಷ್ಟಿಯಾದ ನಂತರದಲ್ಲೂ ಇರುವಂತಹ ದೇವನಾಗಿದ್ದಾನೆ. ಅಟುಮ್ ತನ್ನಿಂದ ತಾನೇ ಉತ್ಪತ್ತಿಯಾದ ದೇವತೆ. ಗಾಡಾಂಧಕಾರದಿಂದ ಮತ್ತು ಆದಿ-ಅಂತ್ಯವಿಲ್ಲದ ಮಹಾಸಮುದ್ರದ ಪಾತಾಳದಿಂದ ಹೊರಹೊಮ್ಮಿ ಪ್ರಕಟವಾದ ದೇವತೆಯಾಗಿದ್ದಾನೆ. "ಬುಕ್ ಆಫ್ ದಿ ಡೆಡ್" ಎಂಬ ಪುಸ್ತಕದಲ್ಲಿ ದೇವನಾದ <u>ಅಟುಮ್ ಮಹಾಸಮುದ್ರದ ಪಾತಾಳದ ಮದ್ಯದಿಂದ ಹಾವಿನ ರೂಪದಲ್ಲಿ ಮೇಲೆದ್ದನು</u> ಎಂದು ತಿಳಿಸುತ್ತದೆ. "ಪಿರಮಿಡ್ ಟೆಕ್ಸ್ಟ್" ಎಂಬ ಗ್ರಂಥದಲ್ಲಿ ಅಟುಮ್ ದೇವತೆಗೆ ಪ್ರಮುಖ ಸ್ಥಾನವನ್ನು ಕೊಟ್ಟು, ಆತನನ್ನು 'ಸೃಷ್ಟಿಕರ್ತ ಮತ್ತು ದೇವತೆಗಳ ತಂದೆ' ಎಂದು ಹೇಳಿದೆ. ಅಟುಮ್ ಪದದ ಅರ್ಥ 'ಸಂಪೂರ್ಣ ಅಥವಾ ಮುಗಿಸು/ಮುಕ್ತಾಯಗೊಳಿಸು' ಎಂದಾಗಿದೆ.

  ಅಟುಮ್ ತನ್ನನ್ನು ಸೃಷ್ಟಿಸಿಕೊಂಡ ತರುವಾಯ ಮಹಾಸಮುದ್ರದಲ್ಲಿ ಉಗಮವಾದ ದಿಣ್ಣೆಯ ಮೇಲೆ ಕುಳಿತು ಸ್ವ-ಮೈಥುನದಿಂದ ಇತರ ದೇವತೆಗಳಿಗೆ ಜನ್ಮಕೊಟ್ಟನು. ಇನ್ನೊಂದು ಕಡೆ ತನ್ನ ಪರಿಚಾಯೆಯ ಜೊತೆ ಕೂಡಿ ದೇವತೆಗಳಿಗೆ ಜನ್ಮ ಕೊಟ್ಟನು ಎಂದು ಹೇಳಿದೆ. ಈಜಿಪ್ಶಿಯನ್‌ರ ಪ್ರಕಾರ <u>ಈತನ ಮೈಯಿಂದಲೇ ಸಕಲ ದೇವತೆಗಳು ಮತ್ತು ಸೃಷ್ಟಿಯು ಉಂಟಾಗಿದೆ.</u> ಈತನೇ ಸಕಲ ಸೃಷ್ಟಿಯ ತಿರುಳು. ಈತನೇ ಸಕಲ ದೇವತೆಗಳ ಮೂಲ. ಅಟುಮ್ ದೇವತೆಯು ಅತ್ಯಂತ ಶ್ರೇಷ್ಠವಾದ ದೇವನಾಗಿದ್ದಾನೆ. ಆದ್ದರಿಂದ ಈ ಸೃಷ್ಟಿಯನ್ನು ಸಂಪೂರ್ಣವಾಗಿ, ಪರಿಪೂರ್ಣವಾಗಿ ರಚಿಸಿದ ಕೀರ್ತಿ ಅಟುಮ್ ದೇವತೆಗೆ ಸಲ್ಲುತ್ತದೆ. ಹಾಗೆಯೆ ಕೊನೆಯಲ್ಲಿ ಇಡೀ ವಿಶ್ವವನ್ನು ಲಯ ಮಾಡಿ ಮೊದಲಿನಂತೆ ಮಹಾಸಮುದ್ರದಲ್ಲಿ ತಾನೂ ಸಹ ಲಯವಾಗುತ್ತಾನೆ. <u>**(ಅಟುಮ್ ವಿಶ್ವಮನಸ್ಸಿರಬಹುದು ಎಂದು ಭಾವಿಸುತ್ತೇನೆ.)**</u>
- ನು ಅಥವಾ ನನ್: ನು ಪದದ ಅರ್ಥ 'ನೀರನ್ನು ಪ್ರತಿನಿಧಿಸುವವನು' ಮತ್ತು ನನ್ ಪದದ ಅರ್ಥ 'ಜಡವಾಗಿರುವವನು' ಎಂದಾಗಿದೆ. ಕೆಲವು ಕಡೆ ನು ಪದದ ಅರ್ಥ 'ಸಮುದ್ರದ ಪಾತಾಳ' ಎಂದು ಹೇಳಿರುವರು. ಈತನು ಆದಿ-ಅಂತ್ಯವಿಲ್ಲದ ಮಹಾಸಮುದ್ರದ ಅಧಿದೇವತೆಯಾಗಿದ್ದಾನೆ. ಈಜಿಪ್ಶಿಯನ್ನರ ಪ್ರಕಾರ ಮಹಾಸಮುದ್ರದಲ್ಲಿ ಉಂಟಾದ ನೀರ್ಗುಳ್ಳೆಯ ಮದ್ಯದಲ್ಲಿ ಇಡೀ ವಿಶ್ವವು ಸೃಷ್ಟಿಯಾಗಿದೆ. ಈ ಮಹಾಸಮುದ್ರವೇ ಸಕಲ ಸೃಷ್ಟಿಯ ಮೂಲವಾಗಿದೆ. ಈ ನೀರ್ಗುಳ್ಳೆಯಲ್ಲಿ ಮೊದಲು ಒಂದು ದಿಣ್ಣೆಯು ಹೊರಹೊಮ್ಮಿತು. ಮದ್ಯಕಾಲೀನ ಈಜಿಪ್ಟ್‌ನವರ ಪ್ರಕಾರ ನನ್ ಅನ್ನು 'ದೇವತೆಗಳ ತಂದೆ" ಎಂದು ಕರೆದಿರುವರು. ಆದ್ದರಿಂದ ಉತ್ಕೃಷ್ಟವಾದ ಈ ಸೃಷ್ಟಿಯ ಮೂಲ ನನ್ ಮತ್ತು ಸೃಷ್ಟಿದೇವನಾದ ಅಟುಮ್ ಆಗಿದ್ದಾರೆ. (ಈ ದೇವತೆಯು ಮಹಾಸಮುದ್ರದ ಅಧಿದೇವತೆ ವರುಣ ಇರಬಹುದು)
- ಓಸಿರಿಸ್: ಪ್ರಾಚೀನ ಈಜಿಪ್ಟನ ದೇವತೆಗಳಲ್ಲಿ ಓಸಿರಿಸ್ ಬಹಳ ಪ್ರಮುಖ ದೇವತೆಯಾಗಿದ್ದನು ಮತ್ತು ಎಲ್ಲರೂ ಈ ದೇವತೆಯ ಆರಾದನೆ ಮಾಡುತ್ತಿದ್ದರು. ಓಸಿರಿಸ್ ದೇವನು ಭೂ ದೇವತೆ (ಗೆಬ್) ಮತ್ತು ಆಕಾಶದ ಸ್ತ್ರೀ ದೇವತೆಯ (ನಟ್) ಜ್ಯೇಷ್ಠ ಪುತ್ರನಾಗಿದ್ದಾನೆ. ಜ್ಯೇಷ್ಟಪುತ್ರನಾದ ಕಾರಣ ಅವನು ಸಿಂಹಾಸನದ ಮೇಲೆ ಕುಳಿತಿರುವನು. ಆತನ ವಿಶೇಷಣವು "ಪಶ್ಚಿಮದವರಲ್ಲಿ ಅಗ್ರೇಸರ". ಇದರ ಅರ್ಥ "ಸಾವಿನ ರಾಜ್ಯದ ರಾಜ" "ಮರಣ ಹೊಂದಿದವರನ್ನು ಶಾಸನ ಮಾಡುವವನು" ಎಂಬುದಾಗಿದೆ. ಕೆಲವು ಬಾರಿ "ಜೀವಿಸುತ್ತಿರುವವರ ರಾಜ" ಎಂದೂ ಸಹ ಕರೆಯಲಾಗುತ್ತದೆ.

(ಓಸಿರಿಸ್ ಜ್ಯೇಷ್ಠಪುತ್ರನೆಂದರೆ ಭೂಮಿಯ ಮೇಲೆ ಒಬ್ಬ ಸ್ತ್ರೀಯು ಮಗುವಿಗೆ ಜನ್ಮವನ್ನು ಕೊಡುವಂತಹದಲ್ಲ. ದೇವತೆಗಳೆಲ್ಲರೂ ಅವ್ಯಕ್ತಸ್ವರೂಪರು. ವಿಶ್ವಮನಸ್ಸಿನ ದೈವೀದ್ರುವದ ಮಾನಸಿಕ ಶಕ್ತಿಯಿಂದ ಒಬ್ಬೊಬ್ಬರಾಗಿ ಪ್ರಕಟವಾಗುತ್ತಾರೆ. ಆದರೆ ಇದನ್ನು ಭೂಮಿಯ ಮೇಲಿರುವ ನಮಗೆ ಅರ್ಥಮಾಡಿಸಲು ಪುತ್ರರೆಂದು ನಮ್ಮ ಪೃಥ್ವೀ ಬಾಷೆಯಲ್ಲಿ ಹೇಳಿದ್ದಾರೆ. ಆನಂತರ ವಿಶ್ವವನ್ನು ಆಳುವವರು ಮತ್ತು ಸೃಷ್ಟಿಸುವವರು ಅಲ್ಲಾಹ್ ಮತ್ತು ದೇವಚರರು.)

ಆತನ ಇನ್ನಿತರ ವಿಶೇಷಣಗಳು "ಪ್ರೀತಿಯ ದೇವತೆ", "ನಿರಂತರ ಯೌವನವನ್ನು ಹೊಂದಿರುವ ದಯಾಳು", "ಮೌನ ಅಥವಾ ನಿಶ್ಯಬ್ದದ ದೇವತೆ" ಆಗಿರುವುದು. ಕೆಲವು ಬಾರಿ ಆತನನ್ನು "ಚಂದ್ರನ ದೇವತೆ ಎಂದೂ ಸಹ ಕರೆಯಲಾಗಿದೆ. ಈಜಿಪ್ಟ್‌ನ ಪುರಾಣಗಳು ಓಸಿರಿಸ್ ಪಾತಾಳದ ದೊರೆಯಾಗಿದ್ದಾನೆ ಎಂದು ಹೇಳುತ್ತವೆ. ಆ ಕಾಲದಲ್ಲಿ ಮರಣಹೊಂದಿದ ವ್ಯಕ್ತಿಗಳನ್ನು ಊಳಲಾಗುತ್ತಿದ್ದುದರಿಂದ ಈ ರೀತಿ ಭಾವಿಸಿರಬಹುದು. ಮಾನವರೆಲ್ಲರೂ ಮರಣಾನಂತರ ಈ ದೇವತೆಯ ವಶಕ್ಕೆ ಹೋಗುತ್ತಾರೆ ಮತ್ತು ಅವನು ನಮ್ಮ ಕರ್ಮಗಳಿಗೆ ತೀರ್ಪನ್ನು ಕೊಡುತ್ತಾನೆ ಎಂದು ನಂಬಿದ್ದರು.

ಓಸಿರಸ್‌ನ್ನು ದಯಾಳುವಾದ ರಾಜ. ಅವನು ಮರಣಹೊಂದಿ ಪಾತಾಳಕ್ಕೆ ಹೋದವರಿಗೆ ನ್ಯಾಯವಾದ ರೀತಿಯಲ್ಲಿ ತೀರ್ಪನ್ನು ಕೊಡುತ್ತಾನೆ ಎಂದು ಭಾವಿಸಿದ್ದರು. ಓಸಿರಿಸ್ ತನ್ನ ತಮ್ಮನಿಂದ ಕೊಲೆಯಾಗಿ ಸಾವನ್ನು ಹೊಂದಿದ ನಂತರ ಆತನ ಪತ್ನಿಯಾದ ಐಸಿಸ್‌ನ ನಿರಂತರ ಪ್ರಯತ್ನದಿಂದ ಮತ್ತು ದೇವತೆಗಳ ಮಂತ್ರಘೋಷಣೆಯಿಂದ ಮರುಜೀವದಾನ ಪಡೆದನೆಂದು ಅವರ ಪುರಾಣಗಳು ಹೇಳುತ್ತವೆ. ಪಿರಮಿಡ್‌ಅನ್ನು ಪಾತಾಳದ ದೊರೆಯಾದ "ಓಸಿರಿಸ್‌ನ ಸಮಾಧಿ" ಎಂದು ಹೇಳುತ್ತಾರೆ. ದೇವತೆಗಳು ಮಂತ್ರ ಘೋಷಣೆಯಿಂದ ಓಸಿರಿಸ್‌ನ್ನು ಎಬ್ಬಿಸಿದ ಹಾಗೆ ಮರಣಹೊಂದಿದ ಇತರ ಜನರನ್ನೂ ಎಬ್ಬಿಸುವರು ಎಂದು ನಂಬಿ ಪಿರಮಿಡ್‌ಗಳನ್ನು ಕಟ್ಟುತ್ತಿದ್ದರು.

ರಾಜರು ತಮ್ಮ ಮರುಹುಟ್ಟು ಪಡೆಯಲಿಕ್ಕಾಗಿ ಮತ್ತು ಓಸಿರಿಸ್‌ನ ರಾಜ್ಯಕ್ಕೆ ಪ್ರವೇಶ ಪಡೆಯಲು ಪಿರಮಿಡ್‌ಗಳನ್ನು ಕಟ್ಟುತ್ತಿದ್ದರು. ಪ್ರಾಚೀನ ಈಜಿಪ್ಟ್‌ನವರ ಸಿದ್ಧಾಂತದ ಪ್ರಕಾರ ಮಾನವನು ಅಮರತ್ವ ಪಡೆಯಲು ಅವಕಾಶವಿದೆ. ಸಾಮಾನ್ಯ ಜನರೂ ಸಹ ಧರ್ಮದಿಂದ ನಡೆದುಕೊಂಡರೆ ಅಮರತ್ವವನ್ನು ಪಡೆಯಬಹುದು. ಮಾನವನು ಮರಣಿಸಿದ ನಂತರ ೪೨ ದೈವೀ ನ್ಯಾಯಮೂರ್ತಿಗಳ ಹತ್ತಿರ ಕರೆದುಕೊಂಡು ಹೋಗಲ್ಪಡುವನು. ಯಾರು ದೇವಿ ಮಾತೆ "ಮಾತ್"ಳ ನಿಯಮಗಳ ಪ್ರಕಾರ ಜೀವನವನ್ನು ನಡೆಸುವರೋ ಅವರು ಓಸಿರಿಸ್‌ನ ಸಾಮ್ರಾಜ್ಯದೊಳಗೆ ಸ್ವಾಗತಿಸಲ್ಪಡುವರು. ಯಾರು ತಪ್ಪಿತಸ್ಥರು ಎಂದು ಪರಿಗಣಿಸಲ್ಪಡುವರೋ ಅವರನ್ನು ನರಕದೊಳಗೆ ದೂಡಲ್ಪಡುವರು, ನರಕದೊಳಗೆ ತೆಗೆದುಕೊಂಡುಹೋದ ವ್ಯಕ್ತಿಯನ್ನು ಕಠಿಣವಾದ ಶಿಕ್ಷೆಗೆ ಗುರಿಪಡಿಸಿ ನಂತರ ಅವನನ್ನು ನಿರ್ನಾಮ ಮಾಡುವರು. ಅಂತಹ ವ್ಯಕ್ತಿಯು ಅಮರತ್ವಕ್ಕೆ ಭಾಗಿಯಾಗುವುದಿಲ್ಲ. **(ಓಸಿರಿಸ್ ಅಲ್ಲಾಹ್ ಇರಬಹುದು ಮತ್ತು ಆತನ ತಮ್ಮ ಶೈತಾನ್ ಆಗಿರಬಹುದು.)**

- **ಐಸಿಸ್ ದೇವತೆ:** ಈ ದೇವಿಯನ್ನು ಒಬ್ಬ ಆದರ್ಶವಾದ ತಾಯಿ ಮತ್ತು ಪತ್ನಿ ಎಂದು ಭಾವಿಸಿ ಈಜಿಪ್ಟ್‌ನವರು ಆಕೆಯನ್ನು ಆರಾಧಿಸುತ್ತಿದ್ದರು. ಐಸಿಸ್ ಪದದ ಅರ್ಥ "ಸಿಂಹಾಸನ". ಪುರಾಣದ ಪ್ರಕಾರ ಐಸಿಸ್ ದೇವತೆಯು "ಗೆಬ್" ಎಂಬ ಪೃಥಿವಿಯ ಪುತ್ರಿಯಾಗಿದ್ದಾಳೆ. ಐಸಿಸ್ ತನ್ನ ಸಹೋದರನಾದ ಓಸಿರಿಸ್‌ನ್ನು ಮದುವೆಯಾಗಿ "ಹೋರಸ್" ಎಂಬ ಮಗನಿಗೆ ಜನ್ಮ ಕೊಟ್ಟಿರುವಳು. ಐಸಿಸ್‌ನ ಇನ್ನೊಬ್ಬ ಸಹೋದರನಾದ "ಸೆತ್"ನು (ಶೈತಾನ ಇರಬಹುದು) ಅಸೂಯೆಯಿಂದ ಓಸಿರಿಸ್‌ನನ್ನು ಕೊಂದು ಆತನ ರಾಜ್ಯವನ್ನು ಅಪಹರಿಸಿದನು. (ನಮ್ಮೊಳಗಿರುವ ದೇವರ ರಾಜ್ಯವನ್ನು ಶೈತಾನ್ ಅಪಹರಿಸಿದ ಹಾಗೆ.) ಓಸಿರಿಸ್ ಮರಣ ಹೊಂದಿದಾಗ ಆಕೆಯು ನಾನಾ ಕಷ್ಟಗಳನ್ನು ಅನುಭವಿಸಿ ಓಸಿರಿಸ್‌ನ ತುಂಡಾದ ದೇಹವನ್ನು ಜೋಡಿಸಿ ತನ್ನ ಮಾಂತ್ರಿಕ ಶಕ್ತಿ ಮತ್ತು ದೇವತೆಗಳ ಅನುಗ್ರಹದಿಂದ ಓಸಿರಿಸ್‌ನನ್ನು ಬದುಕಿಸಿದಳು.
- **ಹೋರಸ್:** ಈತನು ಐಸಿಸ್ ಮತ್ತು ಓಸಿರಿಸ್‌ಗೆ ಜನಿಸಿದ ಮಗನಾಗಿದ್ದಾನೆ. ತನ್ನ ತಂದೆಯಾದ ಓಸಿರಿಸ್‌ನನ್ನು ಕೊಂದ "ಸೆತ್"ನನ್ನು ಕೊಂದು ತನ್ನ ಹಗೆತನವನ್ನು ತೀರಿಸಿಕೊಂಡನು. ಓಸಿರಿಸ್ ಪಾತಾಳದ ಅಧಿದೇವನಾದರೆ ಹೋರಸ್ ಆಕಾಶದ ಅಧಿದೇವತೆಯಾಗಿದ್ದಾನೆ. ಆದ್ದರಿಂದ ಸೂರ್ಯ ಅವನ ಬಲಗಣ್ಣು ಮತ್ತು ಚಂದ್ರನು ಅವನ ಎಡಗಣ್ಣು ಎಂದು ವರ್ಣಿಸಲಾಗಿದೆ. ಹೋರಸನು ಆಕಾಶದಲ್ಲಿ ಗಿಡುಗನ ರೂಪದಲ್ಲಿ ಸಂಚರಿಸಿದಾಗ ಸೂರ್ಯ ಚಂದ್ರರು ತಮ್ಮ ಪಥದಲ್ಲಿ ಸಂಚರಿಸುವರು. "ಹೋರಸ್‌ನ ಕಣ್ಣು" ಎಂಬ ಪದವು ನಮಗೆ ರಕ್ಷಣೆ ಮತ್ತು ರಾಜಯೋಗ್ಯವಾದ ಶಕ್ತಿಯನ್ನು ಕೊಡುತ್ತದೆ ಎಂಬ ನಂಬಿಕೆಯಿದೆ. ಹೋರಸ್‌ನು ಯುದ್ಧ ಮತ್ತು ಬೇಟೆಯ ಅಧಿದೇವತೆಯಾಗಿದ್ದಾನೆ. ಆದ್ದರಿಂದ ಹೋರಸ್‌ನು ಗಾಂಭೀರ್ಯದ ಮತ್ತು ಶಕ್ತಿಯ ಸಂಕೇತವಾಗಿದ್ದಾನೆ. ಪ್ರಾಚೀನ

ಈಜಿಪ್ಟ್‌ನವರು, ಭೂಮಿಯ ಮೇಲಿನ ರಾಜರಾದ ಫಾರೊಗಳು ಹೋರಸ್‌ನ ಸ್ವರೂಪವೆಂದು ಜನರು ಭಾವಿಸುತ್ತಿದ್ದರು. **<u>(ಸೂರ್ಯದೇವನಿರಬಹುದು</u>)**

- ರಾ (ಖಚಿ): ಓಸಿರಿಸ್‌ನ ಪೂಜೆಯು ಕಾಲಾಂತರದಲ್ಲಿ ಹಿಂದಕ್ಕೆ ಸರಿದಾಗ, ರಾ ದೇವನು ಪ್ರಾಚೀನ ಈಜಿಪ್ಟ್‌ನವರ ಧರ್ಮದಲ್ಲಿ ಪ್ರಮುಖಪಾತ್ರವನ್ನು ಪಡೆದನು. ರಾ ಪ್ರಾಚೀನ ಈಜಿಪ್ಟ್‌ನವರ ಪ್ರಕಾರ ಸೂರ್ಯಮಂಡಲದ ದೇವತೆಯಾಗಿದ್ದಾನೆ. ನಿಜವಾಗಿಯೂ ಹೇಳುವುದಾದರೆ ಇವರ ಧರ್ಮವು ಸೂರ್ಯೋಪಾಸನೆಯಾಗಿದೆ. ಅವರ ನಂಬಿಕೆಯ ಪ್ರಕಾರ ಭೂಮಿಯ ಎಲ್ಲಾ ಜೀವರಾಶಿಗಳ ಸೃಷ್ಟಿಯನ್ನು ರಾ ದೇವತೆಯೇ ಮಾಡಿದ್ದಾನೆ. ಪ್ರತಿಯೊಬ್ಬರ ರಹಸ್ಯ ಹೆಸರುಗಳನ್ನು ಉಚ್ಚರಿಸಿ, ಅವರು ಅಸ್ತಿತ್ವವನ್ನೂ, ಶರೀರವನ್ನೂ ಪಡೆದುಕೊಳ್ಳುವಂತೆ ಮಾಡಿದನು. ಇನ್ನೊಂದು ಸಿದ್ಧಾಂತದ ಪ್ರಕಾರ ಮಾನವರು ರಾ ದೇವನ ಕಣ್ಣೀರು ಮತ್ತು ಬೆವರಿನಿಂದ ಸೃಷ್ಟಿಸಲ್ಪಟ್ಟಿರುವರು.

  ಆದ್ದರಿಂದ ಈಜಿಪ್ಟ್‌ನ ಜನರು ತಮ್ಮನ್ನು "ರಾ ನ ಜಾನುವಾರುಗಳು" ಎಂದು ಕರೆದುಕೊಳ್ಳುತ್ತಾರೆ. ಅವರ ಸಿದ್ಧಾಂತದ ಪ್ರಕಾರ ರಾ ಎರಡು ಸೌರ ದೋಣಿಗಳ ಮುಖಾಂತರ ಆಕಾಶಗಮನ ಮಾಡುತ್ತಾನೆ. ಒಂದು ದೋಣಿಯು ಸೂರ್ಯ ಮುಳುಗುವ ದೋಣಿ. ರಾ ಅದರಲ್ಲಿ ಕುಳಿತು ಪಾತಾಳಗಮನ ಮಾಡುತ್ತಾನೆ. ಸೂರ್ಯೋದಯದ ದೋಣಿಯಲ್ಲಿ ಕುಳಿತು ಹಗಲಿನಲ್ಲಿ ಆಕಾಶಗಮನ ಮಾಡುತ್ತಾನೆ. ಆಗ ರಾ ಜೊತೆಯಲ್ಲಿ ಇತರ ದೇವತೆಗಳಾದ "ಸಿಯಾ" ಎಂಬ ಜ್ಞಾನಗ್ರಹಿಕೆಯ ದೇವತೆ, "ಹೂ" ಎಂಬ ಅಪ್ಪಣೆ ಮಾಡುವ ದೇವತೆ ಮತ್ತು "ಹೆಕಾ" ಎಂಬ ಮಾಂತ್ರಿಕ ಶಕ್ತಿಯನ್ನು ಹೊಂದಿರುವ ದೇವತೆಗಳು ಇರುತ್ತಾರೆ. ರಾ ದೇವತೆಯು ಬೆಳಕು, ಹಿತೋಷ್ಣ, ಬೆಳವಣಿಗೆಯನ್ನು (ವಿಸ್ತಾರ, ಅಭಿವೃದ್ಧಿ) ಪ್ರತಿಪಾದಿಸುತ್ತಾನೆ. **<u>(ರಾ ದೇವತೆಯು ಇಲೋಹಿಂ ಇರಬಹುದು. ಅವನ ಜೊತೆಯಲ್ಲಿ ಬರುವ ಉಷಸ್ ಮತ್ತು ಅಶ್ವಿನಿ ದೇವತೆಗಳಿರಬಹುದು.)</u>**

- ಪ್ಥಾ: ಈತನು ಸೃಷ್ಟಿಕಾರ್ಯದ ದೇವತೆಗಳಲ್ಲೇ ಶೇಷ್ಠಾತಿ ಶ್ರೇಷ್ಠನಾಗಿದ್ದಾನೆ. ಪ್ಥಾನನ್ನು ಒಬ್ಬ ಶಿಲ್ಪಿ ಎಂದು ಕರೆಯುತ್ತಾರೆ. ಅಂದರೆ ಸೃಷ್ಟಿಯ ಶಿಲ್ಪಿ. ಈತನು ಸೃಷ್ಟಿಗೆ ಮೊದಲೇ ಅಸ್ಥಿತ್ವದಲ್ಲಿದ್ದನು. ಈತನು ಮೊದಲು ಕಲ್ಪನೆ/ತನ್ನ ಹೃದಯದಿಂದ ಆಲೋಚನೆಮಾಡಿ ತನ್ನ ಮಾಂತ್ರಿಕ ಶಕ್ತಿಯಿಂದ ಜೀವನವನ್ನು ಕೊಟ್ಟು ಸೃಷ್ಟಿಮಾಡುತ್ತಾನೆ. ಆದ್ದರಿಂದ ಈ ದೇವನು ತನ್ನ ಆಲೊಚನೆ ಮತ್ತು ಶಬ್ದ/ಮಾತುಗಳಿಂದ ಸೃಷ್ಟಿಸುತ್ತಿದ್ದನು. ಪ್ಥಾ: ಸುಂದರ ಮುಖವುಳ್ಳವನು, ಪ್ಥಾ: ಸತ್ಯದ ದೇವತೆ, ಪ್ಥಾ: ನ್ಯಾಯದ ಅಧಿಪತಿ, ಪ್ಥಾ: ನಮ್ಮ ಪ್ರಾರ್ಥನೆಯನ್ನು ಕೇಳುವವನು, ಪ್ಥಾ: ನಮ್ಮ ಆಚಾರಗಳ ಅಧಿಪತಿ, ಪ್ಥಾ: ಅಮರತ್ವದ ದೇವತೆಯೆಂದು ಹೊಗಳಿದ್ದಾರೆ. **<u>(ಈತನು ಋಗ್ವೇದದಲ್ಲಿ ಹೇಳಿರುವ ತ್ವಷ್ಟಾ ದೇವತೆಯಿರಬಹುದು.)</u>**

ಪ್ರಾಚೀನ ಈಜಿಪ್ಟ್‌ನ ಪ್ರಕಾರ ಸೃಷ್ಟಿ ಕ್ರಿಯೆ:

ಇವರ ಪ್ರಕಾರ ಮೊದಲು ಗಾಡಾಂಧಕಾರವಾದ ಕತ್ತಲು ಎಲ್ಲೆಡೆಯೂ ವ್ಯಾಪಿಸಿತ್ತು. ಈ ಗಾಡಾಂಧಕಾರವು ಆದಿ–ಅಂತ್ಯವಿಲ್ಲದ ಮಹಾಸಮುದ್ರವನ್ನು ವ್ಯಾಪಿಸಿತ್ತು. ಸಕಲ ವಿಶ್ವವು ಆದಿ–ಅಂತ್ಯವಿಲ್ಲದ ಉದಕದ ಮಹಾಸಮುದ್ರದಿಂದ ಉಂಟಾಯಿತು. ಉದಕದ ಮಹಾಸಮುದ್ರವನ್ನು "ನು" ಎಂದು ಕರೆಯುತ್ತಾರೆ. ಈ ಮಹಾ ಸಮುದ್ರದಲ್ಲಿ ಎಂಟು ಮಂದಿ ದೇವತೆಗಳು ಸ್ಥಿತರಿದ್ದರು. ಅವರಲ್ಲಿ ಪುರುಷ ಮತ್ತು ಸ್ತ್ರೀ ದೇವತೆಗಳು ಇದ್ದರು. ಇವರು ಸಮುದ್ರದಲ್ಲಿದ್ದ ಪ್ರಾಣಿಗಳಾಗಿ; ಪುರುಷ ದೇವತೆಗಳು ಕಪ್ಪೆಯ ರೂಪದಲ್ಲಿ ಮತ್ತು ಸ್ತ್ರೀ ದೇವತೆಗಳು ಸರ್ಪದ ರೂಪದಲ್ಲಿದ್ದರೆಂದು ಹೇಳಲಾಗಿದೆ. ಈ ಎರಡೂ ಗುಂಪಿನ ದೇವತೆಗಳು ಸೇರಿ ಸಮುದ್ರದಲ್ಲಿ ದೊಡ್ಡಮಟ್ಟದ ತಳಮಳವನ್ನುಂಟು ಮಾಡಿದರು. ಆಗ ಮೊದಲು ಪಿರಮಿಡ್ ಆಕೃತಿಯ ದಿಣ್ಣೆಯು ಸಮುದ್ರದಿಂದ ಹೊರಬಂದಿತು. ನಂತರ ಸೂರ್ಯನನ್ನು ಹೊರ ತಂದರು. ಈ ರೀತಿಯಾಗಿ ಸೃಷ್ಟಿಯ ಮೂಲಕಾರಣನಾದ ಸೂರ್ಯನಿಂದಾಗಿ ಆಕಾಶ, ಬೆಳಕು ಮತ್ತು ಬ್ರಹ್ಮಾಂಡ ಸೃಷ್ಟಿಯಾಯಿತು.

ಪಿರಮಿಡ್ ಧರ್ಮದ ಮುಖ್ಯಾಂಶಗಳು

- ಸಕಲ ಸೃಷ್ಟಿಯು ಮಹಾಸಮುದ್ರದಿಂದಲೇ ಉಂಟಾಯಿತು. ಸೃಷ್ಟಿಯು ವಿನಾಶವಾದ ಮೇಲೆ ಮತ್ತೆ ಮಹಾಸಮುದ್ರವಾಗಿ ಪರಿವರ್ತನೆಯಾಗುವುದು.
- ದೇವತೆಗಳು ಜಲದಲ್ಲಿ ನೆಲೆಸಿರುವರು.
- ಮಹಾಸಮುದ್ರದಲ್ಲಿ ತಳಮಳವನ್ನುಂಟುಮಾಡಿ ಮೊದಲು ಮಹಾಸಮುದ್ರದ ಮೇಲೆ ಪಿರಮಿಡ್ ದಿಣ್ಣೆಯನ್ನು ಪ್ರಕಟಮಾಡಿದರು. ಓಸಿರಿಸ್ ಪಿರಮಿಡ್ ದಿಣ್ಣೆಯಲ್ಲಿರುವನು ಎಂದು ಪಿರಮಿಡ್ ಧರ್ಮವು ಹೇಳುವುದು.
- ದೇವಚರರು ಮಹಾಸಮುದ್ರದಲ್ಲಿ ತಳಮಳವನ್ನುಂಟುಮಾಡಿ ಸೂರ್ಯನನ್ನು ಸೃಷ್ಟಿಮಾಡಿದರು.

- ಪ್ರಾಚೀನ ಪಿರಮಿಡ್ ಧರ್ಮದಲ್ಲಿ ಮೊದಲಿಗೆ ದೇವತೆಗಳ ಜ್ಯೇಷ್ಠಪುತ್ರನಾದ ಓಸಿರಿಸ್‌ನ ಪೂಜೆ ಮಾಡುತ್ತಿದ್ದರು.
- ಆನಂತರದ ಕಾಲ ಘಟ್ಟದಲ್ಲಿ ಹೋರಸ್ ದೇವತೆಯನ್ನೂ ನಂತರ ರಾ ದೇವತೆಯನ್ನೂ (ಇಲೋಹಿಂ) ಪೂಜೆ ಮಾಡುತ್ತಿದ್ದರು.
- ಯಾರು ತಮ್ಮ ಜೀವನವನ್ನು ಉನ್ನತ ರೀತಿಯಲ್ಲಿ ಸಾಗಿಸುತ್ತಿದ್ದರೋ ಅವರು ಓಸಿರಿಸ್‌ನ ಲೋಕಕ್ಕೆ ಹೋಗುವರು ಎಂದು ಭಾವಿಸಿದ್ದರು.

ಮೇಲಿನ ಅಂಶವನ್ನು ಗಮನಿಸಿದಾಗ ಭಾರತೀಯ ಧರ್ಮವು ದಾರಿ ತಪ್ಪಿದ ಮೇಲೆ ಅಲ್ಲಾಹನು ಪಿರಮಿಡ್ ಧರ್ಮವನ್ನು ಪ್ರಕಟಮಾಡಿದನು ಎಂದು ಭಾವಿಸಬಹುದು.

ಪ್ರಾಚೀನ ಈಜಿಪ್ಟಿನ ರಾಜರು ಪಿರಮಿಡ್ ಕಟ್ಟಲು ಕಾರಣವೇನು ಎಂಬುದನ್ನು ಈಗ ನೋಡೋಣ. ಪಿರಮಿಡ್ ಪದದ ಅರ್ಥ 'ಅಗ್ನಿ ಕೇಂದ್ರ" ಅಥವಾ "ಅಗ್ನಿಯು ಮಧ್ಯದಲ್ಲಿದೆ" ಎಂದಾಗಿದೆ. ಓಸಿರಿಸ್ ಸ್ವರೂಪವು ಅಗ್ನಿಜ್ವಾಲೆಯಂತಿರುವುದರಿಂದ ಪಿರಮಿಡ್‌ಗೆ "ಅಗ್ನಿ ಕೇಂದ್ರದಲ್ಲಿದೆ" ಎಂಬ ಹೆಸರು ಬಂದಿರುವುದು. ಪಿರಮಿಡ್ ಓಸಿರಿಸ್‌ನ ಸಮಾಧಿಯಾಗಿದೆ. ಅಂದರೆ ವಿಶ್ವಪ್ರಭು ಓಸಿರಿಸ್ ಅಗ್ನಿ ಜ್ವಾಲೆಯ ರೂಪದಲ್ಲಿ ಪಿರಮಿಡ್ ಒಳಗೆ ನೆಲೆಸಿರುವನು. ಆದ್ದರಿಂದ ವಿಶ್ವಸಿಂಹಾಸನದಲ್ಲಿ ಕುಳಿತು ಮೂರು ಲೋಕಗಳನ್ನು ಆಳುತ್ತಿರುವ ಪ್ರಭುವು ಪಿರಮಿಡ್‌ನಲ್ಲಿ ನೆಲೆಸಿರುವನು.

ಪಿರಮಿಡ್ ಧರ್ಮವನ್ನು ಪಾಲಿಸುತ್ತಿದ್ದ ಜನರು ಸಂಪೂರ್ಣ ಜ್ಞಾನವನ್ನು ಹೊಂದಿಲ್ಲದಿದ್ದರೂ ಅವರು ಕೆಲವು ಮೂಲ ಸತ್ಯಗಳನ್ನು ಅರಿತಿದ್ದರು ಎಂದು ಭಾವಿಸಬಹುದು. ಮೇಲಿನ ಎಲ್ಲ ಸಂಗತಿಗಳ ಅರ್ಥ, ಪಿರಮಿಡ್‌ನ ಒಳಗೆ ಅಲ್ಲಾಹನ ಸಾನಿಧ್ಯವಿದೆ ಎಂದು ತಿಳಿದುಬರುತ್ತದೆ. ಈ ಕಾರಣಕ್ಕಾಗಿಯೇ ಪುರಾತನ ಸಂಸ್ಕೃತಿಯ ಜನಾಂಗಗಳು ಈ ಸತ್ಯವನ್ನು ಮುಂದಿನ ಜನಾಂಗಗಳಿಗೆ ಕಾಪಿಡಲು ಅಲ್ಲಾಹನ ಅಪ್ಪಣೆಯಂತೆ ಗೀಜಾ ಪಿರಮಿಡ್‌ಅನ್ನು ಕಟ್ಟಿರಬೇಕು.

## ನನ್ನ ಪಿರಮಿಡ್ ಅನುಭವ:

ಇಲ್ಲಿ ನನ್ನ ಅನುಭವವನ್ನು ಹೇಳಲೇಬೇಕಾಗಿದೆ. ಸೆಪ್ಟಂಬರ್ ೨೦೧೨ರ ಒಂದು ದಿನ ನಾನು ಬೆಂಗಳೂರಿನಲ್ಲಿರುವ ಪಿರಮಿಡ್ ಬಗ್ಗೆ ಒಂದು ಟೀವಿ ಕಾರ್ಯಕ್ರಮವನ್ನು ನೋಡಿದೆನು. ಆ ಕಾರ್ಯಕ್ರಮದಲ್ಲಿ ಪಿರಮಿಡ್‌ನ ಒಳಗೆ ರಾಜನ ಕೋಣೆಯಲ್ಲಿ ಕುಳಿತು ಧ್ಯಾನ ಮಾಡಿದರೆ ವಿಶ್ವದ ಶಕ್ತಿಯು ನಮ್ಮ ಮೇಲೆ ಇಳಿಯುವುದು ಮತ್ತು ಅದರಿಂದ ನಮ್ಮಲ್ಲಿರುವ ಅನೇಕ ಖಾಯಿಲೆಗಳು ವಾಸಿಯಾಗುವವು ಎಂದು ಬಣ್ಣಿಸುತ್ತಿದ್ದರು. ಅನೇಕರು ತಾವು ಪರಿಹರಿಸಿಕೊಂಡ ಖಾಯಿಲೆಯ ಬಗ್ಗೆ ತಿಳಿಸಿದರು. ಪಿರಮಿಡ್‌ನ ಬಗ್ಗೆ ನಾನು ಸಹ ಕೆಲವೊಂದು ವಿಷಯವನ್ನು ತಿಳಿದುಕೊಂಡಿದ್ದರಿಂದ ಮತ್ತು ಆ ಕಾರ್ಯಕ್ರಮದಿಂದ ಪ್ರಭಾವಿತನಾಗಿ, ಒಂದು ದಿನ ಅಲ್ಲಿ ಹೋಗಿ ಧ್ಯಾನವನ್ನು ಮಾಡಬೇಕೆಂದು ಯೋಚಿಸಿದೆನು.

ಅದಾದ ಒಂದು ವಾರದಲ್ಲಿ, ನಾನು ಧ್ಯಾನದಲ್ಲಿ ಮಗ್ನನಾಗಿ ವಿಶ್ವಸಿಂಹಾಸನದಲ್ಲಿ ಕುಳಿತಿರುವ ಪ್ರಭುವಿನಲ್ಲಿ ತಲ್ಲೀನವಾಗಿರುವಾಗ, ಒಂದು ಯೋಚನೆಯು ಮೋಡದಂತೆ ತೇಲಿಕೊಂಡು ಬಂದಿತು. ಅದು "ಪಿರಮಿಡ್‌ನ್ನು ಕೋಣೆಯಲ್ಲಿ ನಿರ್ಮಿಸು" ಎಂದಾಗಿತ್ತು. ನಾನು ಕೂಡಲೆ ಕೋಣೆಯಲ್ಲಿ ಮನಸ್ಸಿನ ಸಂಕಲ್ಪದಿಂದ ಪಿರಮಿಡ್‌ನ್ನು ರಚಿಸಿದೆನು. ಕೂಡಲೆ ಪ್ರಭುವು ತಲೆಯ ಸ್ವಲ್ಪ ಹಿಂದಿರುವ ಸ್ಥಾನದಿಂದ ತಲೆಯ ಮೇಲೆ ೯೦ ಡಿಗ್ರಿ ಕೋಣಕ್ಕೆ ನೆಲೆಯನ್ನು ಬದಲಾಯಿಸಿದರು. ನಾನು ಕೆಲ ಸಮಯ ಧ್ಯಾನದಲ್ಲಿದ್ದು ನಂತರ ಧ್ಯಾನವನ್ನು ಮುಗಿಸಿದೆನು.

ಆಶ್ಚರ್ಯದಿಂದ ನಾನು ಮಾರನೆಯ ದಿವಸ ಧ್ಯಾನಕ್ಕೆ ಕುಳಿತಾಗ, ಕೋಣೆಯಲ್ಲಿ ಸಂಕಲ್ಪದಿಂದ ಪಿರಮಿಡ್‌ನ್ನು ರಚಿಸಿದೆನು. ಪಿರಮಿಡ್ ರಚಿಸಿ ಶಿರಸ್ಸಿನ ಮೇಲೆ ಗಮನವನ್ನು ಹರಿಸಿದ ಒಂದು ನಿಮಿಷದಲ್ಲಿಯೇ ಸೂರ್ಯನು ನೆತ್ತಿಯ ಮೇಲೆ ಕಾಣಿಸಿಕೊಂಡನು. ಕೆಲವು ನಿಮಿಷ ಸೂರ್ಯಮಂಡಲದ ಮೇಲೆ ಧ್ಯಾನ ಮಾಡಿ ನಂತರ ಪ್ರಭುವನ್ನು ಆಹ್ವಾನಿಸಿದೆನು. ಆಗ ಸೂರ್ಯಮಂಡಲವು ಕೆಳಗೆ ಬಂದಿತು ಅಂದರೆ ತಲೆಯ ಒಳಗೆ ಇಳಿಯಿತು ಮತ್ತು ಅಲ್ಲಾಹನು ಪ್ರಕಟರಾದರು. ಈ ರೀತಿಯಾಗಿ ಪಿರಮಿಡ್‌ನ ರಹಸ್ಯವು ತಿಳಿಯಿತು.

ಪಿರಮಿಡನ ರಹಸ್ಯವನ್ನು ಪೂರ್ಣವಾಗಿ ತಿಳಿದುಕೊಂಡಂತಾಯಿತು ಎಂದು ಅನಿಸುವುದಿಲ್ಲ. ಇದಕ್ಕೆ ಕಾರಣ ಗೀಜಾ ಪಿರಮಿಡ್‌ನಲ್ಲಿ 'ರಾಣಿಯ ಕೋಣೆ' ಇದೆ. ಈ ಕೋಣೆಯಲ್ಲಿ ಏನಾದರು ರಹಸ್ಯ ಅಡಗಿದೆಯೇ ಎಂಬುದು ಯಾರಿಗೂ ತಿಳಿದಿಲ್ಲ. ಆದರೆ ಪುರಾತನ ಈಜಿಪ್ಟ್‌ನ ಪುರೋಹಿತರು ಪಿರಮಿಡ್‌ನ ಒಳಗಡೆ ಒಂದು ಸರ್ಪ ಇರುವುದು ಎಂದು

ಹೇಳುತ್ತಿದ್ದರು. ಇದು ಕಳ್ಳರನ್ನು ದೂರ ಇಡಲು ಹಬ್ಬಿಸಿದ ವದಂತಿಯೇ ಅಥವಾ ಸರ್ಪದ ಬೇರೆ ರಹಸ್ಯವೇನಾದರೂ ಇರುವುದೇ ತಿಳಿಯದು.

ಪ್ರೇಹಿ ಪ್ರೇಹಿ ಪಥಿಭಿಃ ಪೂರ್ವ್ಯೇಭಿರ್ಯತ್ರಾ ನಃ ಪೂರ್ವೇ ಪಿತರಃ ಪರೇಯುಃ ೧
ಉಭಾ ರಾಜಾನಾ ಸ್ವಧಯಾ ಮದಂತಾ ಯಮಂ ಪಶ್ಯಾಸಿ ವರುಣಂ ಚ ದೇವಂ ೧೧ (ಋ ೧೦-೧೪-೭ ಸಾಭಾ)
"ಎಲೈ ಪಿತೃವೇ (ಪ್ರೇತ), ಯಾವ ಮಾರ್ಗದಲ್ಲಿ ನಮ್ಮ ಪುರಾತನರಾದ ಪಿತಾಮಹಾದಿಗಳು ಮರಣಾನಂತರ ಹೋದರೋ, ಅನಾದಿಯಾದ ಅದೇ ಮಾರ್ಗಗಳಿಂದ ಪ್ರಯಾಣಮಾಡು. ಅಮೃತಾನ್ನದಿಂದ ತೃಪ್ತಿಯನ್ನು ಹೊಂದಿರುವವರೂ, ಪ್ರಭುಗಳೂ ಆದ ಯಮನನ್ನೂ, ಪ್ರಕಾಶಮಾನನಾದ ವರುಣನನ್ನೂ ಅಲ್ಲಿ ನೋಡುವೆ."

ವರುಣದೇವನೂ ಸಹ ಸ್ವರಾಟ್ ಆಗಿ ಸೂರ್ಯ-ಸವಿತೃ ಮತ್ತು ಯಮನಂತೆ ಆರಾಧಿಸಲ್ಪಡು ವವನಾಗಿದ್ದಾನೆ. ವರುಣ ಮತ್ತು ಇತರ ದೇವತೆಗಳ ತೇಜಸ್ಸೇ ಸೂರ್ಯನಂತೆ ಪ್ರಜ್ವಲಿಸುತ್ತಿರುವುದು. ಈ ಇಬ್ಬರನ್ನು ತಮ್ಮ ಲೋಕವನ್ನು ಆಳುವ ಪ್ರಭುಗಳೆಂದು ಕರೆಯಲ್ಪಡುತ್ತಾರೆ. ಏಕೆಂದರೆ ವರುಣನು ಜಲದ ಅಧಿಪತಿಯಾಗಿದ್ದಾನೆ. ವರುಣನ ಜಲದಿಂದಲೇ ನಮ್ಮ ಸ್ಥೂಲಶರೀರವು ಪ್ರಕಟವಾಗಿದೆ. ಯಮನು ಪುಣ್ಯವಂತರಿಗೆ ಸೌಮ್ಯರೂಪವುಳ್ಳವನಾಗಿಯೂ ಮತ್ತು ಪಾಪಿಷ್ಟರಿಗೆ ಕಠೋರವಾದ ರೂಪವುಳ್ಳವನಂತೆಯೂ ಕಾಣಿಸುತ್ತಾನೆ. ಯಮನ ಸಹಚರರು ಕಠೋರ ರೂಪದಿಂದ ಬಂದು ಪಾಪಿಗಳನ್ನು ಎಳೆದುಕೊಂಡು ಹೋಗುತ್ತಾರೆ. ಈ ಮಂತ್ರವನ್ನು ನೋಡಿ.

ಉರೂಣಸಾವಸುತೃಪಾ ಉದುಂಬಲೌ ಯಮಸ್ಯ ದೂತೌ ಚರತೋ ಜನಾನ್ ಅನು ೧
ತಾವಸ್ಮಭ್ಯಂ ದೃಶಯೇ ಸೂರ್ಯಾಯ ಪುನರ್ದಾತಾಮಸುಮದ್ಯೇಹ ಭದ್ರಂ ೧೧ (ಋ ೧೦-೧೪-೧೨ ಸಾಭಾ)
"ಉದ್ದವಾದ ನಾಸಿಕವುಳ್ಳವರೂ, ಇತರರ ಪ್ರಾಣಗಳನ್ನು ಹೀರಿ ತೃಪ್ತಿಯನ್ನು ಪಡೆಯತಕ್ಕವರೂ, ಅತ್ಯಧಿಕವಾದ ಶಕ್ತಿಯುಳ್ಳವರೂ, ಯಮನಿಗೆ ದೂತರೂ, ಪ್ರಾಣಿಗಳನ್ನು (ಪಾಪಿಗಳನ್ನು) ಅರಸುತ್ತಾ ಸಂಚರಿಸುತ್ತಾರೆ. ಇವರು ಸೂರ್ಯನ ದರ್ಶನಾರ್ಥವಾಗಿ ಇಂದು ಈ ಯಾಗ ಕರ್ಮದಲ್ಲಿ ಮಂಗಳಕರವಾದ ಪ್ರಾಣವನ್ನು ಪುನಃ ನಮಗೆ ಕೊಡಲಿ."
(ಪಾಪಿಗಳನ್ನು ಮಾತ್ರ ಯಮನ ದೂತರು ಎಳೆದೊಯ್ಯುವರು.)

ಸಂ ಗಚ್ಛಸ್ವ ಪಿತೃಭಿಃ ಸಂ ಯಮೇನೇಷ್ಟಾಪೂರ್ತೇನ ಪರಮೇ ವ್ಯೋಮನ್ ೧
ಹಿತ್ವಾಯಾವದ್ಯಂ ಪುನರಸ್ತಮೇಹಿ ಸಂಗಚ್ಛಸ್ವ ತನ್ವಾ ಸುವರ್ಚಾಃ ೧೧ (ಋ ೧೦-೧೪-೮ ಸಾಭಾ)
"ಎಲೈ ಪಿತೃವೇ, ಅತ್ಯುತ್ಕೃಷ್ಟವಾದ ಸ್ವರ್ಗಸ್ಥಾನದಲ್ಲಿ ಪಿತೃಗಳೊಡನೆ ಸೇರಿಕೊ. ನಿನ್ನ ಕಾಮವನ್ನು ತೃಪ್ತಿಗೊಳಿಸುವ ಯಮನೊಡನೆ ಸೇರು. ಪಾಪಕ್ಕೆ ಮೂಲವಾದ ದೇಹವನ್ನು ತ್ಯಜಿಸಿ ಉತ್ತಮವಾದ ಗೃಹಕ್ಕೆ ಪುನಃ ಬಂದು ಸೇರು. ಉತ್ತಮವಾದ ಕಾಂತಿಯುಳ್ಳ ದೇಹದೊಡನೆ ಸೇರಿಕೊ."

# ಅಧ್ಯಾಯ – ೫
# ಇಲೋಹಿಂ ಮತ್ತು ದೇವಚರರ ಮಹಿಮೆ

ಜೆನೆಸಿಸ್ ೧-೧: "ಇಲೋಹಿಂ (ದೇವತೆಗಳು) ಸ್ವರ್ಗ ಮತ್ತು ಪೃಥ್ವಿಯನ್ನು ಸೃಷ್ಟಿಸಿದರು. ಈ ಪೃಥ್ವಿಯು ರೂಪವಿಲ್ಲದೇ ಇತ್ತು, ಶೂನ್ಯವಾಗಿತ್ತು; ಕತ್ತಲು ಆಳವಾದ ಗೂಡವಾದ ಏನನ್ನೋ ವ್ಯಾಪಿಸಿಕೊಂಡಿತ್ತು. ಮತ್ತು ದೇವರ ಉಸಿರು (ಹೋಲಿಸ್ಪರಿಟ್) ನೀರಿನ ಮೇಲೆ ಚಲಿಸುತ್ತಿತ್ತು."

(ದೈವೀ ಮನಸ್ಸಿನ ಪ್ರಭು ಅಲ್ಲಾಹನಿಗೆ ಯಾವ ಕರ್ತವ್ಯವೂ, ಕೆಲಸವೂ ಇಲ್ಲ. ಅಲ್ಲಾಹನ ಇಚ್ಛೆಯಂತೆ ಇಲೋಹಿಂ ಮತ್ತು ದೇವಚರರು ಸೃಷ್ಟಿಯನ್ನು ಮಾಡುತ್ತಾರೆ. ಉದಾಹರಣೆಗೆ ನಮ್ಮ ಮನಸ್ಸು ನೀರನ್ನು ಕುಡಿಯಲು ಬಯಸಿದರೆ ನಮ್ಮ ಶರೀರವು ತಾನಾಗೆ ನೀರನ್ನು ತೆಗೆದುಕೊಂಡು ಕುಡಿಯುತ್ತದೆ)

ಅಲ್ಲಾಹನ ಅಪ್ಪಣೆಯಂತೆ ದೇವಚರರು ಯಾವ ರೀತಿ ಸ್ಥೂಲ ಪ್ರಪಂಚದ ಸೃಷ್ಟಿಕ್ರಿಯೆಯನ್ನು ಮುಂದುವರೆಸಿದರು ತಿಳಿಯೋಣ. ದೇವಚರರು ತಮ್ಮ ಬಾಹುಗಳಿಂದ ಸಿಹಿಸಮುದ್ರದ ಜಲವನ್ನು ಸಂಗ್ರಹಿಸಿದರು. ಜೊತೆಯಲ್ಲಿ ಹೋಲಿಸ್ಪಿರಿಟನ್ನು ಉಪಯೋಗಿಸಿಕೊಂಡು ಸಿಹಿಸಮುದ್ರದ ನೀರನ್ನು ಮತ್ತು ಹೋಲಿಸ್ಪಿರಿಟ್‌ನ್ನು ತೀವ್ರವಾದ ಒತ್ತಡಕ್ಕೊಳಪಡಿಸಿ ಅಲ್ಲಲ್ಲಿ ಗುಂಪಾಗುವಂತೆ ಮಾಡಿದರು. ಇದನ್ನು ಪವಿತ್ರವಾದ ಸರಸ್ಸು ಎಂದು ಋಗ್ವೇದ ಮತ್ತು ಪಿರಮಿಡ್ ಧರ್ಮವು ಹೇಳುತ್ತದೆ. ಗುಂಪಾದ ಜಲವು ತೀವ್ರವಾದ ಒತ್ತಡಕ್ಕೊಳಪಟ್ಟು ತಿರುಗಲಾರಂಬಿಸಿತು. ಯಾವಾಗ ಜಲ ಮತ್ತು ಹೋಲಿಸ್ಪಿರಿಟ್‌ನ್ನು ಸೇರಿಸಿ ದೇವಚರರು ಈ ಗುಂಪಾದ ನೀರಿನಲ್ಲಿ ಘರ್ಷಣೆಯನ್ನು ಉಂಟುಮಾಡಿದರೋ ಆಗ ಗುಂಡಗೆ ಚೆಂಡಿನಂತೆ ಇದ್ದ ನೀರಿನಲ್ಲಿ ತೀಕ್ಷ್ಣವಾದುದೂ ಆದ ತೇಜಸ್ಸಿನ ಅಂಶವು ಅಗ್ನಿರೂಪದಲ್ಲಿ ಪ್ರಕಟವಾಯಿತು ಎಂದು ಪ್ರಥಮ ದೇವವಾಣಿಯಾದ ಋಗ್ವೇದವು ಹೇಳುತ್ತದೆ.

ಈ ರೀತಿಯಾಗಿ ಅನಾದಿಯಾದ ಮತ್ತು ಆದಿ-ಅಂತ್ಯವನ್ನು ಅಳೆಯಲು ಅಸಾಧ್ಯವಾದ ಪರಮಾಣುಗಳ ಮಹಾಸಮುದ್ರವು ಸರಸ್ಸಿನಂತೆ ಅಲ್ಲಲ್ಲಿ ಗುಂಪುಗೂಡಿ ಅದರಲ್ಲಿ ಅಗ್ನಿಗೋಳವು ಪ್ರಕಟವಾಯಿತು. ದೇವಚರರ ತೇಜಸ್ಸು ಅಗ್ನಿಗೋಳವನ್ನು ಮೋಡದಂತೆ ಆವರಿಸಿಕೊಂಡಾಗ ಸೂರ್ಯನು ಪ್ರಕಟವಾದನು. ಮೊದಲು ಗೆಲಾಕ್ಸಿಗಳು ಮತ್ತು ಸೂರ್ಯರು ಪ್ರಕಟರಾದರು. ಪ್ರತಿಯೊಂದು ಸೂರ್ಯರಲ್ಲಿಯೂ ದೇವಚರರು ಇರುವರು. ಆದ್ದರಿಂದ ಸೂರ್ಯನನ್ನು ದೇವಚರರ ಕಣ್ಣು ಎಂದು ಹೇಳುತ್ತಾರೆ. ದೇವಚರರು ಅನೇಕ ಜನ್ಮಗಳನ್ನು ಹೊಂದಿ ವಿಶ್ವದಲ್ಲಿರುವ ಸಕಲ ನಕ್ಷತ್ರಪುಂಜ, ಸೂರ್ಯ ಮತ್ತು ಸಕಲ ಜೀವರಾಶಿಗಳಲ್ಲಿ ನೆಲೆಸಿರುವರು. ಆದ್ದರಿಂದ ಅವರನ್ನು ಅನೇಕ ಜನ್ಮಗಳನ್ನು ಹೊಂದಿರುವರು ಎಂದು ಋಗ್ವೇದವು ಹೊಗಳುತ್ತದೆ.

ಹೇಗೆ ಅಲ್ಲಾಹನು ಎಲ್ಲರ ಒಳಗೆ ಇರುವನೋ ಅದೇ ರೀತಿ ದೇವಚರರು ಸಕಲ ಜೀವರಾಶಿಗಳಲ್ಲಿ ನೆಲೆಸಿರುವರು. ಯಾವಾಗ ದೇವಚರರು ಸೂರ್ಯನನ್ನು ಸೃಷ್ಟಿಸಿದರೋ ಆಗ ಆ ಸೂರ್ಯನ ತೇಜಸ್ಸಿನ ಅಂಶದ ಮಧ್ಯದಲ್ಲಿ ತಾನಾಗೇ ಇಲೋಹಿಂ ದೇವರು ಪ್ರಕಟರಾದರು. ದೇವತೆಗಳು ಅಲ್ಲಾಹ್ ಇಲೋಹಿಂ ಮುಖಾಂತರ ಸ್ಥೂಲಪ್ರಪಂಚದ, ಜೀವರಾಶಿಗಳ ಸೃಷ್ಟಿಯನ್ನು ಮಾಡುತ್ತಾನೆ.

ಇಲೋಹಿಂ ಮತ್ತು ದೇವಚರರು ನಮ್ಮ ಶರೀರಗಳನ್ನು ಸೃಷ್ಟಿ ಮಾಡುತ್ತಾರೆ. ದೇವಚರರು ಎಲ್ಲರ ಹೃದಯ ಮಧ್ಯದಲ್ಲಿದ್ದು ಎಲ್ಲರೂ ಮಾಡಿದ ಕರ್ಮಗಳನ್ನು ದಾಖಲಿಸುತ್ತಾರೆ ಮತ್ತು ಮರಣಾನಂತರ ಸಪ್ತಸ್ವರ್ಗಗಳ ಯಾವುದಾದರು ಒಂದು ಸ್ವರ್ಗಕ್ಕೆ ಕಳುಹಿಸುತ್ತಾರೆ. ನಾವು ಸ್ಥೂಲಶರೀರದ ಮುಖಾಂತರ ಮಾಡಿದ ಕರ್ಮಗಳಿಗೆ ಫಲವನ್ನು ಇಲೋಹಿಂ ಮತ್ತು ದೇವತೆಗಳು ಕೊಡುತ್ತಾರೆ.

ಇಲೋಹಿಂ ಮತ್ತು ಅಲ್ಲಾಹನ ನಡುವೆ ಶ್ರೇಷ್ಟರು ಯಾರು ಎಂಬ ಪ್ರಶ್ನೆಯು ಎದ್ದಾಗ, ಈ ವಿಷಯದಲ್ಲಿ ಯಹೂದಿ ಧರ್ಮವು ಏನು ಹೇಳುತ್ತದೆ ಎಂಬುದನ್ನು ನೋಡೋಣ. ಮೋಸಸ್ ಬರೆದಿರುವ ಡ್ಯುಟೆರಾನಮಿ ೧೦-೧೭ ರಲ್ಲಿ ಪ್ರಕಟಣೆ ಇದೆ;

"ನಿಮ್ಮ ದೇವನು ದೇವರ ದೇವ, ಒಡೆಯರ ಒಡೆಯ."

ಅಂದರೆ ಅಲ್ಲಾಹನು ಇಲೋಹಿಂನ ಒಡೆಯನಾಗಿದ್ದಾನೆ. ಇಲೋಹಿಂನ ರಕ್ಷಕನಾಗಿದ್ದಾನೆ. ಯಾವಾಗ ದೇವಚರರು ಸೂಕ್ಷ್ಮ ಸೂರ್ಯನನ್ನು ಮತ್ತು ಇಲೋಹಿಂನನ್ನು ಕಾಸ್ಮಿಕ್ ಮ್ಯಾನ್‌ನಲ್ಲಿ ಪ್ರಕಟಮಾಡಿದರೋ ಆಗ ಬೆಳಕಿನ ದ್ವೇಷಿಯಾದ

ಶೈತಾನನು ಕಹಿ ಮತ್ತು ಉಪ್ಪಿನ ಸಮುದ್ರದಿಂದ ಮೇಲೆದ್ದು ಇಲೋಹಿಂ ಮತ್ತು ಸೂರ್ಯನನ್ನು ಕತ್ತಲಿನಿಂದ ಮುಚ್ಚಿ ಸಿಹಿ ಸಮುದ್ರವನ್ನು ಆವರಿಸಿಕೊಂಡನು. ಸಿಹಿಸಮುದ್ರವೆಲ್ಲವೂ ಕತ್ತಲಿನಲ್ಲಿ ಮುಚ್ಚಿಹೋಯಿತು. ಸಿಹಿಸಮುದ್ರದ ನೀರು ಊರ್ಧ್ವಮುಖವಾಗಿ ಹರಿಯುವುದು ನಿಂತುಹೋಯಿತು, ಆಗ ಸೃಷ್ಟಿಕ್ರಿಯೆಯು ಸ್ಥಗಿತವಾಯಿತು.

ಆಗ ಅಲ್ಲಾಹನು ಶೈತಾನನ ಜೊತೆಯಲ್ಲಿ ಯದ್ಧವನ್ನು ಮಾಡಿ ಅವನನ್ನು ಕತ್ತರಿಸಿ ಪಾತಾಳಕ್ಕೆ ತಳ್ಳಿ, ಬಿಲವನ್ನು ಮುಚ್ಚಿ, ಶೈತಾನನು ಮತ್ತೆ ಮೇಲೆ ಬರದಂತೆ ಮಾಡಿರುವನು. ಆನಂತರ ಕತ್ತಲಿನಲ್ಲಿದ್ದ ಸೂರ್ಯ-ಇಲೋಹಿಂನನ್ನು ಹುಡುಕಿ ಅಂತರಿಕ್ಷದಲ್ಲಿ ಅಂದರೆ ವಿರಾಟ್ ಪುರುಷನ (ಕಾಸ್ಮಿಕ್ ಮ್ಯಾನ್) ಶಿರಸ್ಸನಲ್ಲಿ ಸ್ಥಾಪಿಸಿರುವನು ಮತ್ತು ಸೃಷ್ಟಿಯು ಮುಂದುವರೆಯುವಂತೆ ಮಾಡಿದನು. ಆದ್ದರಿಂದ ಅಲ್ಲಾಹನೇ ಅತೀ ಶ್ರೇಷ್ಠದೇವನಾಗಿದ್ದಾನೆ. ಇದರ ಅರ್ಥ ಬ್ರಹ್ಮಾಂಡದಲ್ಲಿ ಶೈತಾನನ ಉಪಟಳವಿಲ್ಲ.

ಈಗ ತಿತಿತಿ.ಜಜುಟಜ್ಞು-ತಿಜ್ಞಾ.ಛಿಡು ನಲ್ಲಿ ಬಂದಂತಹ ಒಂದು ಲೇಖನವನ್ನು ವಿಶ್ಲೇಷಿಸೋಣ. ದೇವಚರರು ಯಾವ ರೀತಿಯಲ್ಲಿ ಸ್ಥೂಲಶರೀರವನ್ನು ಸೃಷ್ಟಿಮಾಡಿದರು ಎಂಬುದನ್ನು ನೋಡೋಣ. ಜೆನೆಸಿಸ್‌ನ ಆರಂಭಿಕ ವಾಕ್ಯಗಳಲ್ಲಿ 'ಇಲೋಹಿಂ' ಪದವು ಬಳಸಲ್ಪಟ್ಟಿದೆ. ಇದರಲ್ಲಿ ನಾವು ಎರಡು ರೀತಿಯ ಆಡಮ್‌ರನ್ನು ನೋಡುತ್ತೇವೆ.

ಈ ಕಾರಣಕ್ಕಾಗಿ ಜೆನೆಸಿಸ್‌ನ ಆರಂಭಿಕ ವಾಕ್ಯಗಳನ್ನು ಜೆನೆಸಿಸ್ ಅಧ್ಯಾಯ ೧ ಅನ್ನು ನೋಡೋಣ.

- ಮೊದಲು ದೇವಚರರು (ಇಲೋಹಿಂ), ಸ್ವರ್ಗ ಮತ್ತು ಭೂಮಿಯನ್ನು ಸೃಷ್ಟಿಸಿದರು.
- ದೇವತೆಗಳು(ಇಲೋಹಿಂ) ಹೇಳಿದರು, ಬೆಳಕು ಪ್ರಕಟವಾಗಲಿ.
  (ದೇವಚರರ ತೇಜಸ್ಸೇ ಸೂರ್ಯನಂತೆ ಹೊಳೆಯುತ್ತಿರುವುದು.)
- ಮತ್ತು ದೇವಚರರು(ಇಲೋಹಿಂ) ಹೇಳಿದರು, ಬೆಳಕು ಮತ್ತು ಕತ್ತಲನ್ನು ಬೇರೆ ಮಾಡೋಣ.
  (ಭೂಮಿಯು ತನ್ನ ಅಕ್ಷದಲ್ಲಿ ಸುತ್ತುತ್ತಿರುವುದರಿಂದ ಹಗಲು ಮತ್ತು ರಾತ್ರಿಯು ಪ್ರಕಟವಾಯಿತು. ಕೆಲವು ಗ್ರಹಗಳಲ್ಲಿ ಈ ರೀತಿ ಹಗಲು-ರಾತ್ರಿಗಳಾಗುವುದಿಲ್ಲ ಎಂಬುದನ್ನು ಗಮನಿಸಿ.)
- ಮತ್ತು ದೇವಚರರು(ಇಲೋಹಿಂ) ಹೇಳಿದರು, ಸ್ವರ್ಗಗಳು ಪ್ರಕಟವಾಗಲಿ.
  (ಅಂದರೆ ಮೊದಲು ಭೂಮಿ ಸೃಷ್ಟಿಯಾಯಿತು ನಂತರ ಪೃಥ್ವಿ ಮತ್ತು ಸೂರ್ಯನ ನಡುವೆ *ಸಪ್ತಸ್ವರ್ಗಗಳು ಪ್ರಕಟವಾದವು*. ಸೂರ್ಯನಲ್ಲಿ ದೇವತೆಗಳು ಮತ್ತು ಇಲೋಹಿಂ ಇರುವುದರಿಂದ ಇದೇ ಸ್ಥೂಲಪ್ರಪಂಚದ ಸಪ್ತಮ ಸ್ವರ್ಗವಾಗಿದೆ.)
- ಮತ್ತು ದೇವಚರರು (ಇಲೋಹಿಂ) ಹೇಳಿದರು, ನಾವು ಆಡಮ್‌ನನ್ನು ನಮ್ಮ ರೂಪದಲ್ಲಿ ಸೃಷ್ಟಿಸೋಣ.
  (ಸ್ಥೂಲಶರೀರದ ಮಾನವನನ್ನು ಪೃಥ್ವಿಯ ಮೇಲೆ ಸೃಷ್ಟಿಸಿದರು. ಹೇಗೆ ಸಿಹಿ ಸಮುದ್ರದಿಂದ ಸೂರ್ಯನನ್ನು ಪ್ರಕಟಮಾಡಿದರೋ ಹಾಗೆಯೇ ಮಾನವರನ್ನೂ (ಮತ್ತು ಸಕಲ ಜೀವರಾಶಿಗಳನ್ನೂ) ಸಹ ಸಿಹಿಸಮುದ್ರದಿಂದಲೇ ಸೃಷ್ಟಿ ಮಾಡಿರುವರು.)

ಪೃಥ್ವಿ, ಸಪ್ತಸ್ವರ್ಗಗಳು ಮತ್ತು ಸ್ಥೂಲಶರೀರವುಳ್ಳ ಜೀವರಾಶಿಗಳ ಒಡೆಯ ಇಲೋಹಿಂ ಆಗಿದ್ದಾನೆ.
ಹೀಗೆ (ಅಪರಿಪೂರ್ಣನಾದ) ಪ್ರಥಮ ಆಡಮ್‌ನು ಬಹುವಚನದ ಇಲೋಹಿಂನಿಂದ ಸೃಷ್ಟಿಯಾದನು. ಈ ಕಾರಣಕ್ಕೆ ಮೋಸಸ್‌ರ ಡ್ಯುಟೆರಾನಮಿ ೧೦-೧೭ರಲ್ಲಿ ಈ ರೀತಿಯ ಪ್ರಕಟಣೆ ಇದೆ;

"ನಿಮ್ಮ ದೇವನು 'ಯಹ್ವಾ' "ದೇವರ ದೇವ ಒಡೆಯರ ಒಡೆಯ."

ಅಲ್ಲಾಹನು ಚಕ್ರವರ್ತಿಯಾದುದರಿಂದ ಅವನಿಗೆ ಯಾವ ಕೆಲಸದ ಬಂಧನವೂ ಇಲ್ಲ. ಅವನನ್ನು ಯಾರೂ ಪ್ರಶ್ನೆಯನ್ನು ಮಾಡುವುವರಿಲ್ಲ. ಅವನು ಸ್ವೇಚ್ಛಾಚಾರದಿಂದ ತನಗೆ ಇಷ್ಟಬಂದ ವ್ಯಕ್ತಿಯ ಬಳಿ ಹೋಗುವನು. ಅಲ್ಲಾಹನು ತನ್ನ ಮನಸ್ಸಿನಲ್ಲಿ ಯೋಚಿಸಿದ ಕೂಡಲೆ ಅವನ ಇಚ್ಛೆಯಂತೆ ದೇವಚರರು ಕೆಲಸವನ್ನು ಮಾಡುವರು. ಉದಾಹರಣೆಗೆ ಹೇಳುವುದಾದರೆ, ನಮ್ಮ ಶರೀರವು ದೇವಚರರಿಂದ ರಚನೆಯಾಗಿದೆ. ನಮ್ಮ ಮನಸ್ಸು ನೀರನ್ನು ಕುಡಿಯಬೇಕೆಂದರೆ ನಮ್ಮ ಶರೀರವು ತಾನಾಗೆ ನೀರನ್ನು ಕುಡಿಯುವುದು. ಮನಸ್ಸಿನ ಕಡೆಯಿಂದ ಯಾವ ಪ್ರಯತ್ನವೂ ಇಲ್ಲ. ಇದೇ ರೀತಿಯಾಗಿ ಅಲ್ಲಾಹನ ಮನಸ್ಸಿನಲ್ಲಿ ಯಾವುದೇ ವಿಚಾರ ಬಂದರೂ ದೇವಚರರು ತಕ್ಷಣ ಕಾರ್ಯಪ್ರವೃತ್ತರಾಗುತ್ತಾರೆ ಮತ್ತು ಅದನ್ನು ಮಾಡಿ ಮುಗಿಸುತ್ತಾರೆ.

ಜೆನೆಸಿಸ್ ಮುಂದುವರೆದು ದೇವಚರರು ಮತ್ತು ಇಲೋಹಿಂ ಸೃಷ್ಟಿಸಿದ ಸ್ಥೂಲಶರೀರದ ಬಗ್ಗೆ ಈ ರೀತಿ ಹೇಳುತ್ತದೆ.

- ನಾವು ಆಡಮ್‌ನನ್ನು ನಮ್ಮ ರೂಪದಲ್ಲಿ ಸೃಷ್ಟಿಸೋಣ. (ಇಲೋಹಿನಿಂದ, ಯಹ್ವಾನಿಂದಲ್ಲ.) (೧–೨೬)
- ಸಂಗಡ ಇರುವ ಗಂಡು ಮತ್ತು ಹೆಣ್ಣನ್ನು ಸೃಷ್ಟಿಸಿದರು. (೧–೨೭)
- ದೇವಚರರಿಂದ 'ಆಶೀರ್ವದಿಸಲ್ಪಟ್ಟರು' ಆದರೆ ಅವರಿಗೆ 'ಆತ್ಮ'ವನ್ನು ಕೊಡಲಿಲ್ಲ ಮತ್ತು ವೃದ್ಧಿಯಾಗುವಂತೆ ಹೇಳಿದರು. (೧–೨೮) (ಹೋಲಿಸ್ಪಿರಿಟ್–ಮನಸ್ಸನ್ನು ಕೊಟ್ಟರು)

ಹೀಗೆ (ಅಪರಿಪೂರ್ಣನಾದ) ಪ್ರಥಮ ಆಡಮ್‌ನು ಬಹುವಚನದ ಇಲೋಹಿಂನಿಂದ ಸೃಷ್ಟಿಯಾದನು. ಈ ಕಾರಣಕ್ಕೆ ಮೋಸಸ್‌ರ ಡ್ಯುಟೆರಾನಮಿ ೧೦–೧೭ರಲ್ಲಿ ಈ ರೀತಿಯ ಪ್ರಕಟಣೆ ಇದೆ;

"ನಿಮ್ಮ ದೇವನು 'ಯಹ್ವಾ' "ದೇವರ ದೇವ ಒಡೆಯರ ಒಡೆಯ."

ಈ ಅಪರಿಪೂರ್ಣ ಆಡಮ್‌ಅನ್ನು ಪರಿಪೂರ್ಣಗೊಳಿಸಲು ಯಹ್ವಾ "ಎರಡನೆ" ಆಡಮ್‌ಅನ್ನು (ಅಲ್ಲಾಹ್‌ನ ಬೆಳಕು) (ಜೆನೆಸಿಸ್ ೨–೬) ತಾನೇ ಖುದ್ದಾಗಿ ಸೃಷ್ಟಿಸಿದನು.

ಒಬ್ಬ ಅಪರಿಪೂರ್ಣ ಆಡಮ್ (ಜೀವ/ಸೋಲ್) ಮತ್ತು ಒಬ್ಬ ಪರಿಪೂರ್ಣ ಆಡಮ್ (ಅಲ್ಲಾಹ್‌ನ ಬೆಳಕು)

ಆದ್ದರಿಂದ ಈ ಇಬ್ಬರು ಆಡಮ್‌ಗಳು ಬಹಳ ಮಹತ್ವಪೂರ್ಣವಾದ ಅವತರಣಿಕೆಯಾಗಿದೆ. ಅದು ಈ ಕೆಳಗಿನಂತಿದೆ.

<u>ಪ್ರಥಮ ಆಡಮ್</u>

- ನಾವು ಆಡಮ್‌ನನ್ನು ನಮ್ಮ ರೂಪದಲ್ಲಿ ಸೃಷ್ಟಿಸೋಣ. (೧–೨೬)
- ಸಂಗಡ ಇರುವ ಗಂಡು ಮತ್ತು ಹೆಣ್ಣನ್ನು ಸೃಷ್ಟಿಸಿದರು. (೧–೨೭)
- ಇಲೋಹಿನಿಂದ, ಯಹ್ವಾನಿಂದಲ್ಲ. (೧–೨೬)
- ಅವರಿಂದ 'ಆಶೀರ್ವದಿಸಲ್ಪಟ್ಟರು' ಆದರೆ ಅವರಿಗೆ 'ಆತ್ಮ'ವನ್ನು ಕೊಡಲಿಲ್ಲ (೧–೨೮)
- ಮತ್ತು ವೃದ್ಧಿಯಾಗುವಂತೆ ಹೇಳಿದರು. (೧–೨೮)

<u>ದ್ವಿತೀಯ ಆಡಮ್</u>

- ಯಹ್ವಾ ಭೂಮಿಯ ದೂಳಿನಿಂದ ಮಾನವನನ್ನು ಪ್ರಕಟಮಾಡಿದನು. ಆನಂತರ ಉಸಿರನ್ನು ಊದಿ 'ಆತ್ಮ'ನನ್ನು ಸೇರಿಸಿದನು. (೨–೫ ಮತ್ತು ೭) (ಸ್ವರ್ಗದ ನಂದನವನ/ಏಡನ್‌ನಲ್ಲಿ ಸೃಷ್ಟಿಯಾದ ಆಡಮ್)
- ಗಂಡನ್ನು ಸೃಷಿಸಿದನು ಹೆಣ್ಣನ್ನು ಅಲ್ಲ (೨–೧೮)
  (ಅಲ್ಲಾಹ್‌ನ ಬೆಳಕು ಗಂಡು ಹೆಣ್ಣು ಎಂಬ ಬೇಧವಿಲ್ಲದೇ ಸರ್ವರೊಳಗೂ ಇದೆ.)
- ಯಹ್ವಾನಿಂದ, ಇಲೋಹಿಂನಿಂದ ಅಲ್ಲ (೨–೮)
- ಪ್ರಥಮ ಆಡಮ್‌ನಂತಲ್ಲದೆ, ಆತ್ಮವನ್ನು ಕೊಟ್ಟನು (೨–೭)
- ಸ್ವರ್ಗದ ಮೇಲೆ ಅಧಿಕಾರವನ್ನು ಕೊಟ್ಟನು (೨–೧೫)

ಈ ರೀತಿಯಾಗಿ ಬರೆದಿರುವ ಮತ್ತು ಒಬ್ಬರಿಂದ ಒಬ್ಬರಿಗೆ ಬಾಯಿನಿಂದ ಹರಡಿರುವ "ತ್ಹೋರಾ"ದಲ್ಲಿ (ಅದರಲ್ಲೂ ಪ್ರಮುಖವಾಗಿ 'ಜೊಹರ್' ನಲ್ಲಿ) ಹೇಳಿರುವಂತೆ 'ಮೊದಲು' (ಆತ್ಮನಿಲ್ಲದ) ಆಡಮ್‌ನನ್ನು ಇಲೋಹಿಂನಿಂದ ಸೃಷ್ಟಿ ಮಾಡಲ್ಪಟ್ಟಿತು; ಯಹ್ವಾನಿಂದಲ್ಲ. ಆತ್ಮದಿಂದ ಕೂಡಿದ 'ಎರಡನೆಯ' ಆಡಮ್ ಯಹ್ವಾನಿಂದ ಸೃಷ್ಟಿಮಾಡಲ್ಪಟ್ಟಿತು.

(ಖಾಹಿಛಿಜ ಹಿಣಣಠಿ//ತಿತಿತಿ.ಜಚಿಟಿಚಿಟಿ–ತಿಚಿ.ಛಿಡಿ/ದಾಜಜಿಚಿಡಿಟ.ಹಿಣಟಟ)

ಮೇಲೆ ಹೇಳಿರುವ ಜೆನೆಸಿಸ್ ವಾಕ್ಯದ ಅರ್ಥ; ಮೊದಲು ಇಲೋಹಿಂ ಸ್ಥೂಲಶರೀರವನ್ನು ಸೃಷ್ಟಿಸಿದನು. ಆನಂತರ ಆ ಶರೀರದಲ್ಲಿ ಸ್ವರ್ಗದ ಆಡಮ್ ಪ್ರವೇಶಿಸಿದನು. ಇದನ್ನು ಒಂದು ಉದಾಹರಣೆಯಿಂದ ತಿಳಿಯೋಣ. ಇಲೋಹಿಂ ಮೊದಲು ಶಿಶುರೂಪಿ ಮಾನವನನ್ನು ತಾಯಿಯ ಗರ್ಭದಲ್ಲಿ ಸೃಷ್ಟಿಸುತ್ತಾನೆ. ಶಿಶುವಿನಲ್ಲಿಯೇ ಮೂಲಭೂತವಾಗಿ ಪ್ರಾಣ ಅಥವಾ ವಾಯು (ಹೋಲಿಸ್ಪಿರಿಟ್) ಇರುತ್ತದೆ. ಈ ಹೋಲಿಸ್ಪಿರಿಟ್‌ನ ಒಂದು ಅಂಶವಾದ ವಿದ್ಯುತ್–ಆಯಸ್ಕಾಂತ ಶಕ್ತಿಯಲ್ಲಿ

ಇಂದ್ರಿಯಗಳ ಮುಖಾಂತರ ದಾಖಲಾದ ಸಂಗತಿಯೇ ಮನಸ್ಸಾಗಿದೆ. ಶಿಶುವು ಪೂರ್ಣಪ್ರಮಾಣವಾಗಿ ಗರ್ಭದಲ್ಲಿ ಬೆಳೆದ ನಂತರ ದೈವೀ ಶರೀರದ ಆಡಮ್ ಮಗುವಿನ ಶರೀರದೊಳಗೆ ಪ್ರವೇಶಿಸುತ್ತಾನೆ.

ಇದು ಏನನ್ನು ಹೇಳುತ್ತಿದೆಯೆಂದರೆ ಸ್ಥೂಲಶರೀರವನ್ನು ಇಲೋಹಿಂ ಮತ್ತು ದೇವತೆಗಳು ಸೃಷ್ಟಿಸಿದರು. ಸ್ಥೂಲಶರೀರದಲ್ಲಿ ಹೋಲಿಸ್ಪಿರಿಟ್ ಮತ್ತು ಮನಸ್ಸು ಅಂತರ್ಗತವಾಗಿದೆ. ನಮ್ಮ ಸ್ಥೂಲಶರೀರವನ್ನು ಇಲೋಹಿಂ ಮತ್ತು ದೇವಚರರು ಸೃಷ್ಟಿ ಮಾಡಿರುವುದರಿಂದ ಅವರು ನಾವು ಸ್ಥೂಲಶರೀರದ ಮುಖಾಂತರ ಮಾಡಿದ ಪಾಪ ಮತ್ತು ಪುಣ್ಯಗಳ ದಾಖಲೆಯನ್ನು ಇಟ್ಟುಕೊಳ್ಳುವರು. ಮರಣಾನಂತರ ನಮ್ಮ ಹೋಲಿಸ್ಪಿರಿಟ್–ಮನಸ್ಸನ್ನು (ಜೀವ/ಸೋಲ್) ಅವರು ಸೃಷ್ಟಿಸಿದ ಸಪ್ತಸ್ವರ್ಗಗಳಲ್ಲಿ ಯಾವುದಾದರೂ ಒಂದಕ್ಕೆ ಕಳುಹಿಸಿ ನಮ್ಮನ್ನು ಶಿಕ್ಷೆ ಅಥವಾ ಸಪ್ತಮಸ್ವರ್ಗದ ಯಾವುದಾದರೂ ಒಂದಕ್ಕೆ ಕಳುಹಿಸಿ ಅನುಗ್ರಹಮಾಡುವರು. ಮಾನವರು ಕೆಲವು ಕಾಲ ಅಲ್ಲಿದ್ದು ನಂತರ ಮತ್ತೆ ಭೂಮಿಯ ಮೇಲೆ ಜನ್ಮ ತಾಳಬೇಕಾಗುತ್ತದೆ. ಆದ್ದರಿಂದ ಯಾರಾದರೂ ಇಲೋಹಿಂನನ್ನು ಉಪಾಸನೆ ಮಾಡಿದರೆ ಅವನು ನಮ್ಮ ಪಾಪಗಳನ್ನು ಕ್ಷಮಿಸಿ ಏಳನೇ ಸ್ವರ್ಗಕ್ಕೆ ಕಳುಹಿಸುವನು.

ಸ್ಥೂಲಶರೀರ, ಹೋಲಿಸ್ಪಿರಿಟ್ ಮತ್ತು ಮನಸ್ಸನ್ನು ನಮ್ಮದೆಂದು/ನಾವೆಂದು ತಿಳಿಯುತ್ತೇವೆ. ಆದರೆ ನಿಜವಾಗಿಯೂ 'ನಾನು' ಎಂಬ ಯಾವ ವ್ಯಕ್ತಿತ್ವವಿದೆಯೋ ಅದು ನಾನಲ್ಲ, ನಾನು ಜ್ಯೋತಿಸ್ವರೂಪನಾಗಿದ್ದೇನೆ. ಸ್ಥೂಲಶರೀರವನ್ನು ನಾವೆಂದು ಭಾವಿಸಿ ಆ ಮೂಲಕ ನಮ್ಮ ಆಸೆಗಳನ್ನು ಪೂರೈಸಿಕೊಳ್ಳುತ್ತೇವೆ. ಇದು ಏನನ್ನು ತೋರಿಸುತ್ತದೆಯೆಂದರೆ ನಮ್ಮ ಹೋಲಿಸ್ಪಿರಿಟ್–ಮನಸ್ಸು, ಪೃಥ್ವಿ ಮತ್ತು ಸೂರ್ಯನ ಮಧ್ಯೆ ಬಂದಿತವಾಗಿರುದು. ನಾವು ಈ ಬಂದನದಿಂದ ಬಿಡುಗಡೆ ಹೊಂದಲು ಸಾಧ್ಯವಿಲ್ಲ. ಸೂರ್ಯ–ಪೃಥ್ವಿಗಳ ವಿನಾಶದವರೆಗೂ ಪುನರ್ಜನ್ಮದ ಚಕ್ರದಲ್ಲಿ ತಿರುಗಾಡುತ್ತಿರಬೇಕಾಗುತ್ತದೆ. ಅಂದರೆ ಕಿಯಾಮತ್‌ವರೆಗೂ ನಾವು ಅಲ್ಲಾಹನ ಬಳಿ ಹೋಗಲು ಕಾಯಬೇಕಾಗುತ್ತದೆ.

ಸೂರ್ಯನ ಎದುರೇ ಏಳನೆಯ ಸ್ವರ್ಗವಿದೆ ಮತ್ತು ಇಲೋಹಿಂ ನಮ್ಮ ಪಾಪಗಳನ್ನು ಕ್ಷಮಿಸುತ್ತಾನೆ. ಈ ಕಾರಣದಿಂದಾಗಿ ಭಾರತದ ವೈದಿಕರು ಮತ್ತು ಪಿರಮಿಡ್ ಧರ್ಮದವರು ಸೂರ್ಯೋಪಾಸನೆಯನ್ನು ಮಾಡುತ್ತಿದ್ದರು. ವೈದಿಕರಲ್ಲಿ ಕೆಲವರೂ ಈಗಲೂ ಸೂರ್ಯೋಪಾಸನೆಯನ್ನು ಮುಂದುವರೆಸಿಕೊಂಡು ಹೋಗುತ್ತಿರುವರು. ಸೂರ್ಯೋಪಾಸನೆಯನ್ನು ಮಾಡಿದಾಗ ಇಲೋಹಿಂ ನಮ್ಮ ಪಾಪಗಳನ್ನು ಕ್ಷಮಿಸಿ ದೇವಚರರಿಗೆ ನಾವು ಪಾಪಗಳಿಂದ ಮುಕ್ತವಾಗಿದ್ದೇವೆ ಎಂದು ಘೋಷಿಸುವನು. ಆಗ ನಾವು ಮರಣಾನಂತರ ಸಪ್ತಮಸ್ವರ್ಗಕ್ಕೆ ಹೋಗಬಹುದು ಮತ್ತು ದೇವಚರರ ಜೊತೆಯಲ್ಲಿರಬಹುದು. ಕೆಲವು ಕಾಲಾನಂತರ ಮತ್ತೆ ಭೂಮಿಯ ಮೇಲೆ ನಾವು ಒಂದು ಉತ್ತಮ ಜನ್ಮವನ್ನು ಪಡೆಯುವೆವು. ಇದರ ಅರ್ಥ ಮಾನವರು ಸೃಷ್ಟಿಯಿಂದ ಹಿಡಿದು ಅದರ ವಿನಾಶದವರೆಗೂ ಪೃಥ್ವಿ–ಇಲೋಹಿಂ ಅಥವಾ ವಿರಾಟ್ ಪುರುಷನ (ಕಾಸ್ಮಿಕ್ ಮ್ಯಾನ್) ಶಿರಸ್ಸಿನಲ್ಲಿರುವ ಇಲೋಹಿಂನ ಆಧೀನದಲ್ಲಿರುವೆವು. ಸೃಷ್ಟಿ ವಿನಾಶದ ನಂತರ ಸಕಲ ಜೀವರಾಶಿಗಳ ಪಾಪದ ಮೊತ್ತಕ್ಕೆ ಅಲ್ಲಾಹನು ಸ್ವರ್ಗದ ಆಡಮ್‌ನನ್ನು ಜವಾಬ್ದಾರಿಯನ್ನಾಗಿ ಮಾಡುವನು.

ಜ್ಯೋತಿಸ್ವರೂಪರಾದ ನಾವು ನೇರವಾಗಿ ಧರೆಗಿಳಿದು ಬಂದು ಏನನ್ನು ಅನುಭವಿಸಲು ಸಾಧ್ಯವಿಲ್ಲ. ಆತನು ಅಲ್ಲಾಹನ ಸ್ವರ್ಗದಲ್ಲಿ ಆನಂದದಲ್ಲಿರಲು ಇಚ್ಚಿಸದೇ ಭೂಮಿಯ ಆಕರ್ಷಣೆಗೆ ತುತ್ತಾಗುತ್ತಾನೆ. ಆದ್ದರಿಂದ ಅಲ್ಲಾಹನು ತನ್ನ ಬೆಳಕಿನ ಲೋಕದಲ್ಲಿ ಆಡಮ್‌ಗಾಗಿ ಕಾರಣಶರೀರವನ್ನು ಪ್ರಥಮವಾಗಿ ಸೃಷ್ಟಿಸಿದನು. ಈ ಬಗ್ಗೆ ಈಗಾಗಲೇ ಓದಿ ತಿಳಿದಿದ್ದೇವೆ. ಪವಿತ್ರ ಕುರ್‌ಆನ್‌ನ ಈ ಸೂಕ್ತವನ್ನು ನೋಡಿ.

ಪವಿತ್ರ ಕುರ್‌ಆನ್ ೩–೧೪: "ಜನರಿಗೆ ಇಂದ್ರಿಯಾಭಿಲಾಷೆಗಳಾದ– ಸ್ತ್ರೀಯರು, ಮಕ್ಕಳು, ಚಿನ್ನಬೆಳ್ಳಿಗಳ ರಾಶಿ, ಆಯ್ದ ಕುದುರೆಗಳು, ಜಾನುವಾರುಗಳು ಮತ್ತು ಕೃಷಿಭೂಮಿ. ಇವುಗಳನ್ನು ಅತ್ಯಾಕರ್ಷಕವಾಗಿ ಮಾಡಲಾಗಿದೆ. ಆದರೆ, ಇವೆಲ್ಲ ಇಹಲೋಕದ ಕೆಲವೇ ದಿನಗಳ ಜೀವನ ಸಾಧನಗಳು, ಯಥಾರ್ಥದಲ್ಲಿ ಅತ್ಯುತ್ತಮ ವಾಸಸ್ಥಳವಂತು ಅಲ್ಲಾಹನ ಬಳಿಯಲ್ಲಿದೆ."

ಹೀಗೆ ಸ್ವರ್ಗದ ಆಡಮ್ ಭೂಮಿಯಿಂದ ಆಕರ್ಷಿತನಾಗಿ ಕೆಳಗಿಳಿಯುವನು. ಆ ನಂತರ ಸ್ವರ್ಗದ ಆಡಮ್‌ಗೆ ಸೂಕ್ಷ್ಮಶರೀರವನ್ನು ಜೋಡಿಸಲ್ಪಟ್ಟಿತು ಮತ್ತು ಸ್ಥೂಲಶರೀರವನ್ನು ದೇವಚರರು ಮತ್ತು ಇಲೋಹಿಂ ಅನುಗ್ರಹಿಸುವರು. ಸ್ವರ್ಗದ ಆಡಮ್ ತನ್ನ ಆಸೆಗಳನ್ನು ಸ್ಥೂಲಶರೀರದ ಮುಖಾಂತರ ಪೂರೈಸಿಕೊಳ್ಳವನು. ಸಕಲ ಜೀವರಾಶಿಗಳಲ್ಲಿ ಜ್ಯೋತಿರೂಪ ಅಲ್ಲಾಹ್ ಮತ್ತು ಆತ್ಮನಿರುವನು ಆದರೆ ಮಧ್ಯಪ್ರಾಚ್ಯ ಧರ್ಮಗಳು ಪ್ರಾಣಿಗಳಲ್ಲಿ ಆತ್ಮನಿರುವುದನ್ನು ನಂಬುವುದಿಲ್ಲ.

## ದೇವತೆಗಳಿಂದ ಪಂಚಭೂತಗಳ ಸೃಷ್ಟಿ

ಸಿಹಿನೀರಿನ ಸಮುದ್ರದ ನೀರಿನಿಂದಲೇ ಪಂಚಭೂತಗಳು ಸೃಷ್ಟಿಯಾಯಿತು. ಪಂಚಭೂತಗಳಾದ ಆಕಾಶ, ಗಾಳಿ, ಅಗ್ನಿ, ಜಲ ಮತ್ತು ಭೂಮಿ ಅವುಗಳು ಯಾವ ರೀತಿ ಪ್ರಕಟವಾದವು ಎಂಬ ವಿವರಣೆಯನ್ನು ನೋಡೋಣ.
ಆಕಾಶತತ್ವ: ಪರಮಾಣುಗಳ ಮೂಲಕಣಗಳ ಮಹಾಸಮುದ್ರವು ದೇವತೆಗಳ ಮಹಿಮೆಯಿಂದ ಒತ್ತಡಕ್ಕೊಳಗಾಗಿ ಅಲ್ಲಲ್ಲಿ

ಸರಸ್ಸಿನಂತೆ ಗುಂಪುಗೂಡಿತು. ಹಾಗೆಯೇ ದೇವಚರರ ಮಹಿಮೆಯಿಂದ ಅಗ್ನಿಗೋಳವಾಗಿ ಪರಿವರ್ತನೆಯಾಯಿತು ಮತ್ತು ದೇವತೆಗಳ ತೇಜಸ್ಸು ಅಗ್ನಿ ಗೋಳವನ್ನು ಆವರಿಸಿಕೊಂಡು ನಕ್ಷತ್ರಪುಂಜ ಮತ್ತು ಸೂರ್ಯನಂತೆ ಪರಿವರ್ತನೆಯಾಯಿತು. ನಕ್ಷತ್ರಪುಂಜ ಅಥವಾ ಸೂರ್ಯನಾಗಿ ಪರಿವರ್ತನೆಯಾದ ಮೇಲೆ ಉಂಟಾದ ಖಾಲಿ ಜಾಗವೇ ಆಕಾಶತತ್ವವಾಗಿದೆ.

**ಹೋಲಿಸ್ಪಿರಿಟ್/ವಾಯು:** ಅನಾದಿಯಾದ ಹೋಲಿಸ್ಪಿರಿಟ್‌ಗೆ ಸ್ವತಂತ್ರ ವ್ಯಕ್ತಿತ್ವವಿಲ್ಲ. ಬ್ರಹ್ಮಾಂಡವನ್ನು ವ್ಯಾಪಿಸಿರುವ ಹೋಲಿಸ್ಪಿರಿಟ್, ಮಹಾಸಮುದ್ರವನ್ನೂ ಸಹ ವ್ಯಾಪಿಸಿಕೊಂಡಿದೆ. ಅಲ್ಲಾಹನ ಅನುಗ್ರಹದಿಂದಾಗಿ ಹೋಲಿಸ್ಪಿರಿಟ್ ವ್ಯಕ್ತಿತ್ವವನ್ನು ಪಡೆಯುತ್ತಾನೆ. ಆದರೆ ಪೃಥ್ವಿಯನ್ನು ವ್ಯಾಪಿಸಿರುವ ಗಾಳಿಯು ಸಕಲ ಜೀವರಾಶಿಗಳ ಉಳಿವಿಗೆ ಕಾರಣವಾಗಿದೆ. ಗಾಳಿಯಿಲ್ಲದೇ ಕ್ಷಣಕಾಲವೂ ನಾವು ಜೀವಿಸಲಾಗುವುದಿಲ್ಲ. ಈ ಗಾಳಿಯು ಆಮ್ಲಜನಕ, ಇಂಗಾಲದ ಡೈ ಆಕ್ಸೈಡ್ ಇತ್ಯಾದಿ ಪರಮಾಣುಗಳಿಂದಾಗಿದೆ. ಅಂದರೆ ಇನ್ನೊಂದು ಅರ್ಥದಲ್ಲಿ ಪರಮಾಣುವಿನ ಮೂಲಕಣಗಳ ಮಹಾಸಮುದ್ರದ ರೂಪಾಂತರವೇ ಆಗಿದೆ.

**ಅಗ್ನಿತತ್ವ:** ದೇವಚರರ ಮಹಿಮೆಯಿಂದ ಸರಸ್ಸಿನಂತೆ ಪರಿವರ್ತನೆಯಾದ ಪರಮಾಣುಗಳ ಮಹಾ ಸಮುದ್ರದ ಗೋಳವು ಘರ್ಷಣೆಗೊಳಗಾಗಿ ಕ್ಷಿಪ್ರ ಮಂಥನಕ್ಕೊಳಪಟ್ಟು ಅಗ್ನಿಯು ಪ್ರಕಟವಾಗುತ್ತದೆ. ಆದರೆ ಭೂಮಿಯ ಮೇಲೆ ದಹನ ವಸ್ತುಗಳು ಮತ್ತು ಆಮ್ಲಜನಕವು ಘರ್ಷಣೆಗೆ ಒಳಗಾಗಿ ಅಗ್ನಿಯು ಪ್ರಕಟವಾಗುತ್ತದೆ. ದಹನ ವಸ್ತುಗಳು ಆಮ್ಲಜನಕವನ್ನು ಉಪಯೋಗಿಸಿಕೊಂಡು ಉರಿಯುತ್ತದೆ. ಆಮ್ಲಜನಕ ಮತ್ತು ದಹನ ವಸ್ತುಗಳು ಪರಮಾಣುವಿನಿಂದಲೇ ಆಗಿದೆ ಎಂದು ವಿಜ್ಞಾನವು ಹೇಳುತ್ತಿದೆ.
**ಜಲತತ್ವ:** ಪರಮಾಣುಗಳ ಮಹಾಸಮುದ್ರದ ಇನ್ನೊಂದು ರೂಪಾಂತರವೇ ಜೀವಜಲವಾಗಿ ಪರಿವರ್ತನೆಯಾಗಿದೆ. ಜಲಜನಕ ಮತ್ತು ಆಮ್ಲಜನಕದ ಪರಮಾಣುಗಳ ಸಂಯೋಗದಿಂದಾಗಿ ಜಲವು ಪ್ರಕಟವಾಗಿದೆ. ಜಲವು ಅತ್ಯಂತ ಮಹಿಮೆಯಿಂದ ಕೂಡಿದೆ. ಅದಕ್ಕೆ ಹೋಲಿಸ್ಪಿರಿಟ್‌ನ್ನು ಅಂದರೆ ದೈವೀಶಕ್ತಿಯನ್ನು ಆಕರ್ಷಿಸುವ ಮತ್ತು ವಿಕರ್ಷಿಸುವ ಗುಣವಿದೆ.
**<u>ಭೂತತ್ವ:</u>** ದೇವತೆಗಳು ಮತ್ತು ಸೂರ್ಯನನ ಮಹಿಮೆಯಿಂದ ಅಗ್ನಿಗೋಳವೇ ತಣ್ಣಗಾಗಿ ಪೃಥ್ವಿಯಾಗಿ ರೂಪಾಂತರ ಹೊಂದಿವೆಯಾದರೂ ಪೃಥ್ವಿಯೂ ಸಹ ಪರಮಾಣುಗಳಿಂದಾಗಿದೆ. ಪೃಥ್ವಿಯ ಊರ್ಧ್ವಭಾಗದಲ್ಲಿ ಸಪ್ತಮಸ್ವರ್ಗಗಳಿವೆ ಮತ್ತು ಪೃಥ್ವಿಯ ಒಳಗಡೆ ನರಕವಿದೆ ಈ ರೀತಿಯಾಗಿ ಪಂಚಭೂತಗಳು ಸಿಹಿ ಸಮುದ್ರದಿಂದಲೇ ಸೃಷ್ಟಿಯಾದಂತೆ ದೇವಚರರ ಅನುಗ್ರಹದಿಂದ ಮಹಾಸಮುದ್ರದ ಮೂಲವಸ್ತುವಿನಿಂದಲೇ ಸಕಲ ಜೀವ ಸೃಷ್ಟಿಯಾಗಿದೆ. ಮೇಲಿನ ಸೂಕ್ತವು ಉದಕಗಳು ಮಹಿಮೆಯಿಂದ ಕೂಡಿದೆ ಮತ್ತು ತನ್ನದೇ ಆದ ವ್ಯಕ್ತಿತ್ವವನ್ನು ಹೊಂದಿದೆ. ವಿಶ್ವದಲ್ಲಿ ವ್ಯಕ್ತಿತ್ವವಿಲ್ಲದ ಮನಸ್ಸಿಲ್ಲದ ಯಾವ ಜೀವರಾಶಿಗಳಾಗಲಿ, ಪೃಥ್ವಿಯಾಗಲಿ, ಆಕಾಶವಾಗಲಿ, ಸೂರ್ಯನಾಗಲಿ ಮತ್ತು ಸಪ್ತಸ್ವರ್ಗಗಳಾಗಲಿ ಇಲ್ಲ. ಇದೇ ರೀತಿಯಾಗಿ ಪಂಚಭೂತಗಳೂ ಸಹ ತಮ್ಮದೇ ಆದ ಮನಸ್ಸನ್ನು ಮತ್ತು ವ್ಯಕ್ತಿತ್ವವನ್ನು ಹೊಂದಿದೆ. ಆದ್ದರಿಂದ ವಿಶ್ವದಲ್ಲಿ ಸಕಲವೂ ಅಲ್ಲಾಹನ ಮಹಿಮೆಯನ್ನು ಹೊಗಳುತ್ತಿವೆ. ಅಂತಿಮವಾಗಿ ಹೇಳುವುದಾದರೆ ಸಕಲ ಜೀವರಾಶಿಗಳೂ ಪೃಥ್ವಿ ಮತ್ತು ಸೂರ್ಯನ ಪುನರ್ಜನ್ಮದ ಕಾಲಚಕ್ರದಲ್ಲಿ ಬಂಧಿತವಾಗಿರುವೆವು. ಯಾವಾಗ ಸೂರ್ಯ-ಪೃಥ್ವಿ ಮತ್ತು ವಿಶ್ವದ ನಾಶವಾಗುವುದೋ ಆಗ ಎಲ್ಲರೂ ಅಲ್ಲಾಹನ ಬಳಿ ತೆರಳುವೆವು.

ಪ್ರತ್ಯಙ್ ದೇವಾನಾಂ ವಿಶಃ ಪ್ರತ್ಯಙ್ಙುದೇಷಿ ಮಾನುಷಾನ್ ।
ಪ್ರತ್ಯಙಿವಿಶ್ವಂ ಸ್ವರ್ದೃಶೇ ।। (ಋಗ್ವೇದ ೧-೫೦-೫ ಸಾಭಾ)
"ಎಲೈ ಸೂರ್ಯದೇವನೇ, ನೀನು ದೇವಲೋಕದ ಪ್ರಜೆಗಳಾದ ಮರುದ್ದೇವತೆಗಳಿಗೂ, ಸಕಲ ಮಾನವರಿಗೂ ಸ್ವರ್ಲೋಕಕ್ಕೂ (ಸಪ್ತಮಸ್ವರ್ಗ) ಅಭಿಮುಖನಾಗಿ ಸಕಲರಿಗೂ ಗೋಚರನಾಗುವಂತೆ ಉದಯಿಸುತ್ತೀಯೆ."

ತೇ ಮಾಯಿನೋ ಮಮಿರೇ ಸುಪ್ರಚೇತಸೋ ಜಾಮೀ ಸಯೋನೀ ಮಿಥುನಾ ಸಮೋಕಸಾ ।
ನವ್ಯಂನವ್ಯಂ ತಂತುಮಾ ತನ್ವತೇ ದಿವಿ ಸಮುದ್ರೇ ಅಂತಃ ಕವಯಃ ಸುದೀತಯಃ ।। (ಋ ೧-೧೫೯-೪ ಸಾಭಾ)
"ಸಹೋದರಿಯರೂ, ಒಂದೇ (ಗರ್ಭೋ) ಉತ್ಪತ್ತಿಸ್ಥಾನವುಳ್ಳವರೂ ಆಕಾಶರೂಪವಾದ ಒಂದೇ ವಾಸಸ್ಥಾನವುಳ್ಳವರೂ ದ್ಯಾವಾಪೃಥ್ವಿಗಳು ತಮ್ಮ ವಿಷಯದಲ್ಲಿ ಪೂರ್ಣವಾದ ಪ್ರಜ್ಞೆಯುಳ್ಳವೂ ಚೈತನ್ಯ ಪ್ರದಾನವಾದ ಶಕ್ತಿಯುಳ್ಳವೂ ಆದ ರಶ್ಮಿಗಳನ್ನು ಪ್ರಮಾಣರೂಪದಲ್ಲಿ ನಿಯಮಿಸುತ್ತವೆ. ಮೇಧಾವಿಗಳೂ ಎಂದರೆ ತಮ್ಮ ಕರ್ತವ್ಯವನ್ನು ಚೆನ್ನಾಗಿ ತಿಳಿದವೂ, ಶ್ರೇಷ್ಠವಾಗಿ ಪ್ರಕಾಶಿಸುವುವೂ ಆದ ರಶ್ಮಿಗಳು ಪ್ರಕಾಶಮಾನವಾದ ಅಂತರಿಕ್ಷದ ಮಧ್ಯಭಾಗದಲ್ಲಿ ಅತ್ಯಂತ ನೂತನವಾದುದೂ ವಿಸ್ತೃತವಾಗತಕ್ಕದ್ದೂ ಆದ ತಮ್ಮ ಪ್ರಭೆಗಳನ್ನು ಸುತ್ತಲೂ ಪರಸರಿಸುವಂತೆ ಮಾಡುತ್ತವೆ."

ಪ್ರ ದ್ಯಾವಾ ಯಜ್ಞೈಃ ಪೃಥಿವೀ ಋತಾವೃಧಾ ಮಹೀ ಸ್ತುಷೇ ವಿದಥೇಷು ಪ್ರಚೇತಸಾ ।
ದೇವೇಭಿರ್ಯೇ ದೇವಪುತ್ರೇ ಸುದಂಸಸೇತ್ಥಾ ಧಿಯಾ ವಾರ್ಯಾಣಿ ಪ್ರಭೂಷತಃ (ಋಗೇದ ೧-೧೫೯-೧)
"ಯಜ್ಞವನ್ನು ವೃದ್ಧಿಯಾಗುವಂತೆ ಮಾಡುವವರೂ, ಮಹತ್ತಾದ ರೂಪವುಳ್ಳರೂ, ಯಜ್ಞಗಳಲ್ಲಿ ಸ್ತುತಿಸಲ್ಪಡುವವರೂ ಆದ ದ್ಯಾವಾಪೃಥ್ವಿಗಳನ್ನು ಹವಿರಾದ್ಯರ್ಪಣೆಗಾಗಿ ಸ್ತುತಿಸಿ ಪ್ರಾರ್ಥಿಸುತ್ತೇನೆ. (ಪಿತೃ) ದೇವತೆಗಳೇ ಪುತ್ರರಾಗಿ ಉಳ್ಳ

ದ್ಯಾವಾಪೃಥ್ವಿಗಳು ಯಜಮಾನರಿಂದ ನೆರವೇರಿಸಲ್ಪಟ್ಟ ಶ್ರೇಷ್ಠವಾದ ಕರ್ಮಗಳಿಂದ ಕೂಡಿದವರಾಗಿ ತಮ್ಮ ಅನುಗ್ರಹಾತ್ಮಕವಾದ ಬುದ್ಧಿಯಿಂದ ಯಜಮಾನರ ಇಷ್ಟಾರ್ಥಗಳನ್ನು ನೆರವೇರಿಸುತ್ತಾರೆ."

ಅಯಂ ದೇವಾನಾಮಪಸಾಮಸ್ತಮೋಯೋ ಜಜಾನ ರೋದಸೀವಿಶ್ವಶಂಭುವಾ ೧
ವಿ ಯೋ ಮಮೇ ರಜಸೀ ಸುಕ್ರತೂಯಯಾಜರೇಭಿಃ ಸ್ಕಂಭನೇಭಿಃ ಸಮಾನೃಚೇ ೧೧ (ಋ ೧-೧೬೦-೪ ಸಾ ಭಾ)
"ಯಾವ ಆದಿತ್ಯನು (ಸೂರ್ಯ-ಸವಿತೃ) ಲೋಕಕ್ಕೆಲ್ಲಾ ಸೌಖ್ಯವನ್ನು ಕೊಡತಕ್ಕ ದ್ಯಾವಾಪೃಥ್ವಿಗಳನ್ನು ಸೃಷ್ಟಿಸಿದನೋ, ಯಾವನು ದ್ಯಾವಾಪೃಥ್ವಿಗಳನ್ನು ಅಳೆದನೋ ಮತ್ತು ಶ್ರೇಷ್ಠವಾದ ಕರ್ಮಾಚರಣೆಗೆ ಸಹಾಯವನ್ನು ಮಾಡಬೇಕೆಂಬ ಇಚ್ಛೆಯಿಂದ ಕ್ಷಯಿಸದಿರುವ ಆಧಾರಸ್ತಂಭಗಳಿಂದ ಊರೆಯನ್ನು ಕೊಟ್ಟು ದ್ಯಾವಾಪೃಥ್ವಿಗಳನ್ನು ಸ್ಥಾಪಿಸಿದನೋ ಅಂತಹ ಆದಿತ್ಯನು ದೇವತೆಗಳ ನಡುವೆ ದೇವೋತ್ತಮನು ಮತ್ತು ಕರ್ಮಯುಕ್ತರ ನಡುವೆ ಶ್ರೇಷ್ಠವಾದ ಕರ್ಮಗಳನ್ನು ಮಾಡುವವನಾಗಿದ್ದಾನೆ."

ದ್ಯೌರ್ಮೇ ಪಿತಾ ಜನಿತಾ ನಾಭಿರತ್ರ ಬಂಧುರ್ಮೇ ಮಾತಾ ಪೃಥಿವೀ ಮಹೀಯಂ ೧
ಉತ್ತಾನಯೋಶ್ಚಮ್ವೋ ರ್ಯೋನಿರಂತರತ್ರಾ ಪಿತಾ ದುಹಿತುರ್ಗರ್ಭಮಾಧಾತ್ ೧೧ (ಋ ೧-೧೬೪-೩೩)
"ದ್ಯುಲೋಕವು ನನಗೆ ಪಾಲಕವೂ ನನ್ನ ಉತ್ಪತ್ತಿಹೇತುವೂ ಆಗಿದೆ. ನಾಭಿಯು ದ್ಯುಲೋಕ ಮತ್ತು ಪೃಥ್ವಿಯ ಬಂಧನಸ್ಥಾನ ಆಗಿರುವುವೂ, ವಿಸ್ತೃತವಾದುದೂ ಆದ ಈ ಪೃಥ್ವಿಯು ನನಗೆ ಮಾತೃರೂಪಳಾಗಿದ್ದಾಳೆ. ಊರ್ಧ್ವಮುಖವಾಗಿ ವಿಸ್ತೃತವಾದವೂ, ಚಮೂಪಾತ್ರೆಯಂತೆ ಬೋಗಸಾಧನಗಳಾದು ವಿಸ್ತೃತವಾದವೂ ಆದ ಈ ದ್ಯಾವಾಪೃಥ್ವಿಗಳ ಮಧ್ಯಭಾಗದಲ್ಲಿ ಸಕಲಭೂತಗಳಿಗೂ ನಿರ್ಮಾತೃಸ್ಥಾನವಾದ ಅಂತರಿಕ್ಷದಲ್ಲಿ ಆದಿತ್ಯನು ತನ್ನ ದುಹಿತೃವಾದ ಪೃಥ್ವಿಯ ಗರ್ಭರೂಪವಾದ ಉದಕವನ್ನು ಧರಿಸಿದ್ದಾನೆ."

# ಅಧ್ಯಾಯ – ೬
# ಪವಿತ್ರ ಕುರ್‌ಆನ್‌ನ ಪ್ರಮುಖ ಸೂಕ್ತಗಳು

ಪ್ರಪಂಚದಲ್ಲಿ ಜನರು ನಾನಾ ಸಿದ್ಧಾಂತಗಳನ್ನು ತಮ್ಮ ಬುದ್ಧಿಶಕ್ತಿಯಿಂದ ರಚಿಸಿಕೊಂಡು ತಮಗೆ ತಿಳಿದ ರೀತಿಯಲ್ಲಿ ಈತನೇ ಆರಾಧ್ಯನು ಎಂದು ಭಾವಿಸಿ ಯಾರು ಯಾರನ್ನೋ ಆರಾದಿಸುತ್ತಿರುವರು. ಅಲ್ಲಾಹನನ್ನು ಮತ್ತು ಇತರ ದೇವಚರರನ್ನು ಕಡೆಗಣಿಸಿರುವರು. ಮಾನವರಿಗೆ ಸರಿಯಾದ ದಾರಿಯನ್ನು ತೋರಿಸಲು ಋಷಿಗಳು ಮತ್ತು ಪ್ರವಾದಿಗಳ ಮುಖಾಂತರ ದೇವವಾಣಿಯನ್ನು ಕಳುಹಿಸಿ ಮಾನವರನ್ನು ಸರಿದಾರಿಯಲ್ಲಿ ತರಲು ಅಲ್ಲಾಹನು ಹಲವು ಬಾರಿ ಪ್ರಯತ್ನಿಸಿರುವನು. ಆದರೆ ಶೈತಾನನಿಂದ ಆವೃತವಾದ ಮಾನವನು ಅಜ್ಞಾನದಿಂದ ಅದನ್ನು ತಿರಸ್ಕರಿಸಿ ತನ್ನದೇ ರೀತಿಯಲ್ಲಿ ನಡೆದುಕೊಳ್ಳುತ್ತಿರುವನು. ಆದ್ದರಿಂದ ಅಲ್ಲಾಹನು ಹೇಳಿರುವುದೇನೆಂದರೆ;

ಪವಿತ್ರ ಕುರ್‌ಆನ್ ೨–೪೧ ಹೇಳುವುದನೆಂದರೆ: “ನಾನು ಕಳುಹಿಸಿದ ಗ್ರಂಥದ ಮೇಲೆ ವಿಶ್ವಾಸವಿಡಿರಿ. ಈ ಗ್ರಂಥವು ಈ ಮೊದಲೇ ನಿಮ್ಮ ಬಳಿಯಲ್ಲಿರುವ ಗ್ರಂಥವನ್ನು ಸಮರ್ಥಿಸುತ್ತದೆ. ಆದುದರಿಂದ ಅದನ್ನು ನಿಷೇಧಿಸುವವರಲ್ಲಿ ನೀವೇ ಮೊದಲಿಗರಾಗಬೇಡಿರಿ. ನನ್ನ ವಚನಗಳನ್ನು ಅಲ್ಪ ಬೆಲೆಗೆ ವಿಕ್ರಯಿಸಬೇಡಿರಿ ಮತ್ತು ನನ್ನ ಕ್ರೋದಕ್ಕೆ ಭಯಪಡಿರಿ.”

“ಈ ಕುರ್‌ಆನ್ ಅಲ್ಲಾಹನ ‘ದಿವ್ಯವಾಣಿ’ ಮತ್ತು ಬೋದನೆಯ ಹೊರತು ರಚಿಸಲ್ಪಡುವಂತಹ ವಸ್ತುವಲ್ಲ. ನಿಜವಾಗಿ ಇದು ಹಿಂದೆ ಬಂದಿದ್ದುದರ ದೃಡೀಕರಣವೂ ಪರಮ ಗ್ರಂಥದ ವಿವರಣೆಯೂ ಆಗಿರುತ್ತದೆ. ಇದು ಸರ್ವಲೋಕಾಧಿಪತಿಯ ಕಡೆಯಿಂದ ಬಂದಿರುವುದು ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ.” (ಪವಿತ್ರ ಕುರ್‌ಆನ್: ೧೦–೩೭)

ಆದರೆ ಎಲ್ಲಾ ಧರ್ಮದವರೂ ಅಲ್ಲಾಹನನ್ನು ಪೂರ್ಣವಾಗಿ ಅರ್ಥ ಮಾಡಿಕೊಳ್ಳಲು ಆಗಿಲ್ಲ. ಆದ್ದರಿಂದ ಪವಿತ್ರ ಕುರ್‌ಆನ್‌ನ ಕೆಲವು ಪ್ರಮುಖ ಸೂಕ್ತಗಳನ್ನು ನೋಡೋಣ.

### ಅಲ್ಲಾಹ್‌ನ ಮಹಿಮೆ

“ನಿಮ್ಮ ದೈವ ಏಕೈಕ ದೇವ. ಆ ದಯಾಮಯನೂ, ಕರುಣಾನಿಧಿಯೂ ಆಗಿರುವವನ ಹೊರತು ಇನ್ನೊಬ್ಬ ದೇವರಿಲ್ಲ.” (ಪವಿತ್ರ ಕುರ್‌ಆನ್: ೨–೧೬೩)

“ವಾಸ್ತವದಲ್ಲಿ ಆಕಾಶಗಳನ್ನೂ ಭೂಮಿಯನ್ನೂ ಆರು ದಿನಗಳಲ್ಲಿ ಸೃಷ್ಟಿಸಿದ. ಆ ನಂತರ ವಿಶ್ವ ಸಿಂಹಾಸನದಲ್ಲಿ ವಿರಾಜಿಸಿ ವಿಶ್ವಾಡಳಿತ ನಡೆಸುತ್ತಿರುವ ಅಲ್ಲಾಹನೇ ನಿಮ್ಮ ಪ್ರಭು.....” (ಪವಿತ್ರ ಕುರ್‌ಆನ್: ೧೦–೩)

“ಆ ದಯಾಮಯನು ವಿಶ್ವ ಸಿಂಹಾಸನದ ಮೇಲೆ ವಿರಾಜಿಸುತ್ತಿದ್ದಾನೆ.” (ಪವಿತ್ರ ಕುರ್‌ಆನ್: ೨೦–೫)

“ಅವನು ಎಲ್ಲರನ್ನೂ ಆವರಿಸಿಕೊಂಡಿದ್ದಾನೆ. ಅವನು ಅವರನ್ನು ಎಣಿಕೆ ಮಾಡಿರುತ್ತಾನೆ.” ( ಪವಿತ್ರ ಕುರ್‌ಆನ್: ೧೯–೯೪)

ಅಲ್ಲಾಹನು ತನ್ನ ತೇಜಸ್ಸಿನಿಂದ, ಮಾನಸಿಕ ಶಕ್ತಿಯಿಂದ ಎಲ್ಲರನ್ನೂ ಆವರಿಸಿಕೊಂಡಿರುವನು ಹಾಗೂ ಎಲ್ಲರೊಳಗಿರುವನು ಆದ ಕಾರಣದಿಂದ ಎಲ್ಲವನ್ನೂ ನೋಡುತ್ತಾ ಕೇಳುತ್ತಾ ಇರುವನು. ಆದರೆ ಭಾರತೀಯರು ಭಾವಿಸುವಂತೆ ಅಣು, ರೇಣು, ತೃಣ ಕಾಷ್ಟಾದಿಗಳಲ್ಲಿ ಇಲ್ಲ. ಸೂರ್ಯ ಪೃಥ್ವಿ ಚಂದ್ರಾದಿಗಳಲ್ಲಿ ಇಲ್ಲ.

“ಸಕಲ ಪ್ರತ್ಯಕ್ಷಾಪ್ರತ್ಯಕ್ಷಗಳ ಜ್ಞಾನವುಳ್ಳವನು ಅವನೇ. ಅವನು ಪ್ರಬಲನೂ ಕರುಣಾನಿಧಿಯೂ ಆಗಿರುತ್ತಾನೆ.” (ಪವಿತ್ರ ಕುರ್‌ಆನ್: ೩೨–೬)

“ವಾಸ್ತವದಲ್ಲಿ ಅಲ್ಲಾಹನೇ ನನ್ನ ಪ್ರಭುವೂ ನಿಮ್ಮ ಪ್ರಭುವೂ ಆಗಿರುತ್ತಾನೆ. ನೀವು ಅವನನ್ನೇ ಆರಾಧಿಸಿರಿ, ಇದುವೇ ನೇರ ಮಾರ್ಗ.” (ಪವಿತ್ರ ಕುರ್‌ಆನ್: ೪೩–೬೪)

"ಅವನೊಬ್ಬನೇ ಆಕಾಶದಲ್ಲೂ ಆರಾಧ್ಯನು ಮತ್ತು ಭೂಮಿಯಲ್ಲೂ ಆರಾದ್ಯನು. ಅವನೇ ಯುಕ್ತಿಪೂರ್ಣನೂ ಸರ್ವಜ್ಞನೂ ಆಗಿರುತ್ತಾನೆ." (ಪವಿತ್ರ ಕುರ್‌ಆನ್: ೪೩-೮೪)

"ಅವನು ಅತ್ಯುನ್ನತನಾಗಿದ್ದು ಭೂಮಿ-ಆಕಾಶಗಳು ಮತ್ತು ಅವುಗಳ ನಡುವೆ ಇರುವ ಪ್ರತಿಯೊಂದು ವಸ್ತುವು ಅವನದೇ ಪ್ರಭುತ್ವದಲ್ಲಿದೆ. ಪುನರುತ್ಥಾನದ ಘಳಿಗೆಯ ಜ್ಞಾನವೂ ಅವನಿಗೇ ಇದೆ ಮತ್ತು ನೀವೆಲ್ಲರೂ ಅವನ ಕಡೆಗೇ ಮರಳಿಸಲ್ಪಡುವಿರಿ." (ಪವಿತ್ರ ಕುರ್‌ಆನ್: ೪೩-೮೫)

"ಮತ್ತು ಆಕಾಶಗಳ ಹಾಗೂ ಭೂಮಿಯ ಸಕಲ ಸೃಷ್ಟಿಗಳ ಮಾಲಿಕನಾಗಿರುತ್ತಾನೆ. ಸತ್ಯನಿಷೇಧಿಗಳಿಗೆ ಅತ್ಯಂತ ವಿನಾಶಕಾರಿ ಶಿಕ್ಷೆಯಿದೆ." (ಪವಿತ್ರ ಕುರ್‌ಆನ್: ೧೪-೨)

"ನಾವು ಆಕಾಶವನ್ನೂ ಭೂಮಿಯನ್ನು ಅವುಗಳಲ್ಲಿ ಇರುವುದನ್ನೆಲ್ಲವನ್ನೂ ಬರಿಯ ಆಟಲೆಗಾಗಿ ಸೃಷ್ಟಿಸಲಿಲ್ಲ. ನಾವು ಒಂದು ಆಟದ ವಸ್ತುವನ್ನು ತಯಾರಿಸಲಿಚ್ಛಿಸಿದರೆ ಮತ್ತು ಅಷ್ಟು ಮಾತ್ರ ನಮಗೆ ಮಾಡಲಿಕ್ಕಿರುತ್ತಿದ್ದರೆ ನಾವದನ್ನು ನಮ್ಮ ಬಳಿಯೇ ಮಾಡಿಕೊಳ್ಳುತ್ತಿದ್ದೆವು. (ಪವಿತ್ರ ಕುರ್‌ಆನ್: ೨೧-೧೬&೧೭)

(ಅಲ್ಲಾಹನು ನಮ್ಮೆಲ್ಲರ ಆಸೆಗಳನ್ನು ಪೂರೈಸಲು ಮತ್ತು ನಮ್ಮ ಕರ್ಮಗಳ ಫಲವನ್ನು ಕೊಡಲು ವಿಶ್ವವನ್ನು ಸೃಷ್ಟಿಸಿದ್ದಾನೆ. ಇಲ್ಲದಿದ್ದರೇ ಅಲ್ಲಾಹನು ಸೃಷ್ಟಿ ಮಾಡುವ ಯಾವ ಕಾರಣವೂ ಇಲ್ಲ.)

"ಆಕಾಶದಲ್ಲೂ ಭೂಮಿಯಲ್ಲೂ ಇರುವ ಸೃಷ್ಟಿಗಳೆಲ್ಲವೂ ಅಲ್ಲಾಹನವು ಮತ್ತು ಅವನ ಬಳಿಯಲ್ಲಿರುವವರು (ದೇವಚರರು) ತಾವು ದೊಡ್ಡವರೆಂದೆಣಿಸಿ ಅವನ ದಾಸ್ಯ ಆರಾಧನೆಯಿಂದ ವಿಮುಖರಾಗುವುದೂ ಇಲ್ಲ ಬಳಲುವುದೂ ಇಲ್ಲ." (೨೧-೧೯)

(ಅಲ್ಲಾಹನು ಶೈತಾನನನ್ನು ಸೋಲಿಸಿ ಮಹಾಸಮುದ್ರದ ಮೇಲೆ ಅಧಿಪತ್ಯವನ್ನು ಸ್ಥಾಪಿಸಿರುವನು. ಅಲ್ಲಾಹನ ಅಪ್ಪಣೆಯಂತೆ ಸಕಲ ವಿಶ್ವವನ್ನು ರಚಿಸಿರುವ ಮತ್ತು ಸಕಲ ಜೀವರಾಶಿಗಳ ಹೃದಯದಲ್ಲಿರುವ ದೇವತೆಗಳು ಬಳಲುವುದಿಲ್ಲ. ಕಾರಣವೇನೆಂದರೆ ಅವರಿಗೆ ಸ್ಥೂಲಶರೀರವಿಲ್ಲ. ಸ್ಥೂಲಶರೀರ ದಣಿದಾಗ ಆಯಾಸವಾಗುವುದು.)

"ಅವನು ತನ್ನ ಕಾರ್ಯಗಳಿಗಾಗಿ (ಯಾರ ಮುಂದೆಯೂ) ಪ್ರಶ್ನಿಸಲ್ಪಡುವವನಲ್ಲ. ಉಳಿದವರೆಲ್ಲರೂ ಪ್ರಶ್ನಿಸಲ್ಪಡುವರು." (ಪವಿತ್ರ ಕುರ್‌ಆನ್: ೨೧-೨೩)

".....ಓ ನಮ್ಮ ಪ್ರಭು, ನಮ್ಮಿಂದ ಈ ಸೇವೆಯನ್ನು ಸ್ವೀಕರಿಸು; ನಿಶ್ಚಯವಾಗಿ ನೀನು ಎಲ್ಲವನ್ನೂ ಆಲಿಸುವವನೂ, ಎಲ್ಲವನ್ನೂ ತಿಳಿದವನೂ ಆಗಿರುತ್ತೀ." (ಪವಿತ್ರ ಕುರ್‌ಆನ್: ೨-೧೨೭)

"ಓ ನಮ್ಮ ಪ್ರಭೂ, ನೀನು ನಿಶ್ಚಯವಾಗಿಯೂ ಅದೊಂದು ದಿನ ಎಲ್ಲ ಜನರನ್ನು ಒಟ್ಟುಗೂಡಿಸಲಿರುವೆ. ಆ ದಿನ ಬಂದೊದಗುವುದರಲ್ಲಿ, ಏನೇನೂ ಸಂಶಯವಿಲ್ಲ. ನೀನು ಎಷ್ಟು ಮಾತ್ರಕ್ಕೂ ವಚನಭಂಗ ಮಾಡುವವನಲ್ಲ." (ಪವಿತ್ರ ಕುರ್‌ಆನ್: ೩-೯)

"ಅಲ್ಲಾಹನ ಹೊರತು ನಾನೂ ಒಬ್ಬ ದೇವನೆಂದು ಅವರ ಪೈಕಿ ಯಾರಾದರೂ ಹೇಳಿಬಿಟ್ಟನೆಂದರೆ ಅವನಿಗೆ ನಾವು ನರಕಾಗ್ನಿಯ ಶಿಕ್ಷೆ ಕೊಡುವೆವು. ನಮ್ಮಲ್ಲಿ ಅಕ್ರಮಿಗಳಿಗೆ ಇದೇ ಪ್ರತಿಫಲವಿದೆ." (ಪವಿತ್ರ ಕುರ್‌ಆನ್: ೨೧-೨೯)

(ನಾವು ಅಲ್ಲಾಹನು ಸೃಷ್ಟಿಸಿರುವ ಅವನ ಮಕ್ಕಳಾಗಿದ್ದೀವಿಯೇ ಹೊರತು ದೇವಚರರಾಗಲಿ ಮಾನವರಾಗಲಿ ಯಾರೂ ಸಹ ಅಲ್ಲಾಹ್ ಆಗಲು ಸಾಧ್ಯವಿಲ್ಲ. ಅಲ್ಲಾಹನು ಅನಂತವಾದ ಜ್ಞಾನವನ್ನು ಅನಂತವಾದ ಶಕ್ತಿಯನ್ನು ಹೊಂದಿರುವನು, ಅಸಮರ್ಥನಾದ ಮಾನವನು ಅಲ್ಪವಾದ ಜ್ಞಾನವನ್ನು ಶಕ್ತಿಯನ್ನು ಹೊಂದಿರುವನು.)

"ಅವನ ದುರ್ಭೋಧನೆಗೆ ಮರುಳಾಗಿ ನನ್ನ ಬಳಿಗೆ ಬಂದಿದ್ದ ಸದ್ಬೋಧನೆಯನ್ನು ನಾನು ಸ್ವೀಕರಿಸಲಿಲ್ಲ. ಶೈತಾನನು ಮಾನವನ ಮಟ್ಟಿಗೆ ಮಹಾ ವಿಶ್ವಾಸಘಾತುಕನಾಗಿಬಿಟ್ಟನು ಎಂದು ಹೇಳುವನು." (ಪವಿತ್ರ ಕುರ್‌ಆನ್: ೨೫-೨೯)

(ಮಾನವನು ಮಾತ್ರ ಸೈತಾನನಿಂದ ತೊಂದರೆಗಳಿಗೆ ಒಳಗಾಗಿದ್ದಾನೆ. ಪ್ರಾಣಿಗಳು ಮಾನವರಂತೆ ಪರಿಪೂರ್ಣರಾಗಿರದ ಕಾರಣ ಅವರು ಸೈತಾನನಿಂದ ಆವರಿಸಲ್ಪಟ್ಟಿದ್ದರೂ ತೊಂದರೆಗೆ ಒಳಗಾಗುವುದಿಲ್ಲ. ಭಾರತದಲ್ಲಿ ಕೆಲವು ಗುರುಗಳು ತಾವು ದೇವರ ಅವತಾರವೆಂದು ಹೇಳಿಕೊಳ್ಳುವರು. ಸಕಲರಲ್ಲಿಯೂ ಅಲ್ಲಾಹನು ಇರುವಾಗ ಅವತಾರವಾಗುವ ಕಾರಣವೆಲ್ಲಿದೆ? ಆದರೆ ಪರಿಶುದ್ದಾತ್ಮರು ಅಲ್ಲಾಹನ ಅಪ್ಪಣೆಯಂತೆ ಜನ್ಮವನ್ನು ತಾಳುವರು. ಅವನು ನಮ್ಮನ್ನು ರಕ್ಷಿಸಲು ನಮ್ಮೊಳಗಿರುವನು.)

## ಅಲ್ಲಾಹನನ್ನು ದೇವತೆಗಳಾಗಲಿ ಅಥವಾ ಇತರರಾಗಲಿ ಪ್ರಶ್ನಿಸುವಂತಿಲ್ಲ

"ಅವನು ತನ್ನ ಕಾರ್ಯಗಳಿಗಾಗಿ (ಯಾರ ಮುಂದೆಯೂ) ಪ್ರಶ್ನಿಸಲ್ಪಡುವವನಲ್ಲ. ಉಳಿದವರೆಲ್ಲರೂ ಪ್ರಶ್ನಿಸಲ್ಪಡುವವರು." (ಪವಿತ್ರ ಕುರ್‌ಆನ್: ೨೧-೨೩)

ಏಕೆಂದರೆ ಅಲ್ಲಾಹನು ವಿಶ್ವದ ಸಾರ್ವಭೌಮನಾಗಿದ್ದಾನೆ ದೇವಚರರು ಮತ್ತು ನಾವೆಲ್ಲರೂ ಅವನ ದಾಸರಾಗಿದ್ದೇವೆ. ಅಲ್ಲಾಹನ ಇಚ್ಛೆಯಂತೆ ನಡೆಯುವುದೇ ನಮ್ಮ ಕರ್ತವ್ಯ.

## ಅಲ್ಲಾಹನೇ ಪೂಜಾರ್ಹನು.

"ನಿಮ್ಮ ಪ್ರಭುವನ್ನು ಭಯ ವಿನಯದೊಂದಿಗೆ ಮತ್ತು ರಹಸ್ಯವಾಗಿ ಪ್ರಾರ್ಥಿಸಿರಿ. ನಿಶ್ಚಯವಾಗಿಯೂ ಅವನು ಮಿತಿಮೀರುವವರನ್ನು ಮೆಚ್ಚುವುದಿಲ್ಲ." (ಪವಿತ್ರ ಕುರ್‌ಆನ್: ೭-೫೫)

(ದಿನದ ೨೪ ಘಂಟೆಯೂ ಮಾಡುವ ಪ್ರಾರ್ಥನೆಯನ್ನು ಅಲ್ಲಾಹನು ಒಪ್ಪುವುದಿಲ್ಲ. ತಮ್ಮ ಸಾಂಸಾರಿಕ ಜವಾಬ್ದಾರಿಯನ್ನು ನಿಭಾಯಿಸುತ್ತಾ ನಮ್ಮ ಮನಸ್ಸನ್ನು ಅಲ್ಲಾಹನಲ್ಲಿಯೇ ಕೇಂದ್ರೀಕರಿಸಬೇಕು.)

"ಅಲ್ಲಾಹ್ ತನ್ನೊಂದಿಗೆ ಇತರರನ್ನು ಭಾಗೀದಾರರನ್ನಾಗಿ ಮಾಡುವುದನ್ನು ಮಾತ್ರ ಎಂದೆಂದಿಗೂ ಕ್ಷಮಿಸುವುದಿಲ್ಲ. ಅದರ ಹೊರತು ಅವನು ಕ್ಷಮಿಸಇಚ್ಛಿಸುವ ಇತರ ಎಲ್ಲವನ್ನೂ ಕ್ಷಮಿಸುವನು. ಅಲ್ಲಾಹನೊಂದಿಗೆ ಯಾರನ್ನಾದರೂ ಭಾಗೀದಾರರನ್ನಾಗಿ ಮಾಡಿದವನು ಪಥಭ್ರಷ್ಟತೆಯಲ್ಲಿ ಬಹುದೂರ ಸಾಗಿಬಿಟ್ಟನು."
(ಪವಿತ್ರ ಕುರ್‌ಆನ್: ೪-೧೧೬)

"ಅವರು ಅಲ್ಲಾಹನನ್ನು ಬಿಟ್ಟು ದೇವಿಗಳನ್ನು ಆರಾಧ್ಯರನ್ನಾಗಿ ಮಾಡುತ್ತಾರೆ. ಅವರು ಅಲ್ಲಾಹನು ಶಪಿಸಿರುವ ಆ ಬಂಡುಕೋರ ಶೈತಾನನನ್ನು ಆರಾಧ್ಯನನ್ನಾಗಿ ಮಾಡುತ್ತಾರೆ." (ಪವಿತ್ರ ಕುರ್‌ಆನ್: ೪-೧೧೭)

"ಕಪಟವಿಶ್ವಾಸಿಗಳು ನರಕದ ಅತ್ಯಂತ ತಳಭಾಗಕ್ಕೆ ಹೋಗುವರೆಂಬುದನ್ನು ಖಾತ್ರಿಯಾಗಿ ತಿಳಿದುಕೊಳ್ಳಿರಿ. ಅವರ ಸಹಾಯಕರಾಗಿ ನೀವು ಯಾರನ್ನೂ ಕಾಣಲಾರಿರಿ." (ಪವಿತ್ರ ಕುರ್‌ಆನ್: ೪-೧೪೫)

## ಸೃಷ್ಟಿಯಲ್ಲಿರುವ ಸಕಲವೂ ಅಲ್ಲಾಹ್‌ನ ಮಹಿಮೆಯನ್ನು ಕೊಂಡಾಡುತ್ತಿರುವುದು

"ಸಪ್ತಗಗನಗಳೂ (ಸಪ್ತಸ್ವರ್ಗಗಳು) ಭೂಮಿಯೂ ಅವುಗಳಲ್ಲಿರುವ ಸಕಲ ವಸ್ತಗಳೂ ಅವನ ಪಾವಿತ್ರ್ಯವನ್ನು ಕೊಂಡಾಡುತ್ತಿವೆ. ಅವನ ಪ್ರಶಂಸೆಯೊಂದಿಗೆ ಅವನ ಜಪ ಮಾಡದ ಯಾವ ವಸ್ತುವೂ ಇಲ್ಲ. ಆದರೆ ನೀವು ಅವುಗಳ ಜಪವನ್ನು ಗ್ರಹಿಸುವುದಿಲ್ಲ. ವಾಸ್ತವದಲ್ಲಿ ಅವನು ಅತ್ಯಂತ ಸಹನಶೀಲನೂ ಕ್ಷಮಾದಾನಿಯೂ ಆಗಿರುತ್ತಾನೆ." (ಪವಿತ್ರ ಕುರ್‌ಆನ್: ೧೭-೪೪)

"(ದೇವತೆಗಳು) ಹಗಲೂ ಇರುಳೂ ಅವನ ಕೀರ್ತನೆ ಮಾಡುತ್ತಿರುತ್ತಾರೆ; ವಿಶ್ರಮಿಸುವುದಿಲ್ಲ."
(ಪವಿತ್ರ ಕುರ್‌ಆನ್: ೨೧-೨೦)

ಅಲ್ಲಾಹನು ಬ್ರಹ್ಮಾಂಡವನ್ನೂ ಸಕಲ ದೇವತೆಗಳನ್ನೂ ಆವರಿಸಿಕೊಂಡಿದ್ದಾನೆ. ಆಕಾಶಾದಿ ಪಂಚಭೂತಗಳೂ ಕೂಡ ಮನಸ್ಸನ್ನು ಹೊಂದಿವೆ. ಹೋಲಿಸ್ಪಿರಿಟ್ ಮನಸ್ಸನ್ನು ಹೊಂದಿದೆ. ಸ್ವರ್ಗ ಮತ್ತು ಪೃಥ್ವಿಗಳು ಜೀವಂತವಾಗಿರುವವು ಮತ್ತು ಅವುಗಳಿಗೆ ತಮ್ಮದೇ ಆದ ಮನಸ್ಸಿದೆ. ಪೃಥ್ವಿಮಾತೆಗೂ ಮನಸ್ಸಿದೆ. ಪೃಥ್ವಿಮಾತೆಯ ಮಕ್ಕಳು ನಾವಾಗಿದ್ದೇವೆ. ಸಕಲ ಜೀವರಾಶಿಗಳ ಮನಸ್ಸು ವಿಶ್ವಮನಸ್ಸಿನ ಭಾಗವೇ ಆಗಿದೆ. ನಿಜವಾಗಿಯೂ ಹೇಳುವುದಾದರೆ ಇಡೀ ವಿಶ್ವವೇ ಜೀವಂತ ವಸ್ತುವಾಗಿದೆ. ಸಕಲ ನಕ್ಷತ್ರಪುಂಜಗಳು, ಸೂರ್ಯ, ಜೀವ ಸಂಕುಲವಿರುವ ಗ್ರಹ ಇತ್ಯಾದಿಗಳಿಗೆ ತಮ್ಮದೇ ಆದ ಮನಸ್ಸಿದೆ. ಏಕೆಂದರೆ ಅದರಲ್ಲೆಲ್ಲಾ ದೇವಚರರು ಇರುವರು. ಇವೆಲ್ಲವೂ ಅಲ್ಲಾಹನ ಜಪವನ್ನು ಮಾಡುತ್ತಿವೆ. ಅವು 'ಓಮ್' ಎಂಬ ಮಂತ್ರೋಚ್ಚಾರಣೆ ಮಾಡುತ್ತಿವೆ.

ನಾಸಾದವರು ಈ ಮಂತ್ರದ ಶಬ್ದವು ಸೂರ್ಯನಿಂದ ಹೊರಹೊಮ್ಮುತ್ತಿರುವುದನ್ನು ದಾಖಲಿಸಿದ್ದಾರೆ. ಎಲ್ಲ ಮಾನವರು ಇತರ ಜೀವರಾಶಿಗಳನ್ನು ಸೇರಿ ಈ ಶಬ್ದವನ್ನು ಹೊರಡಿಸುತ್ತಿದ್ದಾರೆ, ಆದರೆ ಕೇವಲ ಅಲ್ಲಾಹನ ಅನುಗ್ರಹವನ್ನು ಪಡೆದಿರುವರು ಮಾತ್ರ ತನ್ನೊಳಗಿನಿಂದ ಹೊರಹೊಮ್ಮುತ್ತಿರುವ ಈ ಶಬ್ದವನ್ನು ಸತತವಾಗಿ ಕೇಳುತ್ತಿರುತ್ತಾರೆ. ಯಾರು ಓಂಕಾರದ ಮಹಿಮೆಯನ್ನು ತಿಳಿದುಕೊಳ್ಳುವರೋ ಅವರು ಸಕಲ ವಿಶ್ವದ ರಹಸ್ಯವನ್ನು ತಿಳಿದುಕೊಂಡಂತೆ.

ಸಾಮಾನ್ಯವಾಗಿ ಶಬ್ದವುಂಟಾಗಬೇಕಾದರೆ ಎರಡು ವಸ್ತುಗಳ ಘರ್ಷಣೆಯಾದಾಗ ಮಾತ್ರ ಶಬ್ದವು ಕೇಳಸುವುದು. ಆದರೆ ಈ ಶಬ್ದವು ಯಾವುದೇ ಘರ್ಷಣೆಯಿಲ್ಲದೇ ಹೊರಹೊಮ್ಮುತ್ತಿರುತ್ತದೆ. ಆದ್ದರಿಂದ ಈ ಶಬ್ದವನ್ನು ಅನಾಹತ ನಾದವೆಂದು ಕರೆಯುತ್ತಾರೆ. ಈ ಶಬ್ದದಿಂದಲೇ ಅಲ್ಲಾಹ್‌ನು ಸಕಲ ವಿಶ್ವವನ್ನು ತನ್ನ ಮನಸ್ಸಿನಿಂದ ಹಿಡಿದಿಟ್ಟಿರುವನು. ಸಕಲ ವಸ್ತುಗಳೂ ಅಲ್ಲಾಹನಿಂದಲೇ ನಿರ್ಮಿತವಾಗಿವೆ. ಅಲ್ಲಾಹನು ಇವೆಲ್ಲವನ್ನೂ ತನ್ನ ಮನಃಸಂಕಲ್ಪದಿಂದಲೇ ಧರಿಸಿದ್ದಾನೆ. ಋಗ್ವೇದದ ಈ ವಾಕ್ಯವನ್ನು ನೋಡಿ

"ಎಲೈ ಇಂದ್ರನೇ, ಸರ್ವರಿಗೂ ತಿಳಯುವಂತಿರುವುದೂ, ಅತಿ ಪ್ರವೃದ್ಧವಾದುದೂ, ವಿಸ್ತೃತವಾಗಿ ವ್ಯಾಪಿಸಿರುವುವೂ ಅತ್ಯುತ್ಕೃಷ್ಟವಾದ ಬಲವುಳ್ಳವೂ ಆದ ಸಕಲ ವಸ್ತುಗಳೂ ನಿನ್ನಿಂದಲೇ ನಿರ್ಮಿತವಾಗಿವೆ. ಇವೆಲ್ಲವನ್ನೂ <u>ನಿನ್ನ ಮನಃಸಂಕಲ್ಪದಿಂದಲೇ ಧರಿಸಿದ್ದೀಯೆ</u>." (ಋ ೮-೭೭-೯ ಸಾ ಭಾ)

ಅಲ್ಲಾಹನ ಮಹಿಮೆಯನ್ನು ನೋಡಿ. ನಾವು ಒಂದು ಆಲೋಚನೆಯನ್ನು ೧೦ ಸೆಕೆಂಡುಗಳ ಕಾಲ ಹಿಡಿದಿಟ್ಟುಕೊಳ್ಳಲು ಆಗುವುದಿಲ್ಲ ಆದರೆ ಅಲ್ಲಾಹನು ಇಡೀ ಬ್ರಹ್ಮಾಂಡವನ್ನೂ ಅದರಲ್ಲಿರುವ ಸಕಲ ಜೀವರಾಶಿಗಳನ್ನೂ ತನ್ನ ಮನಃಸಂಕಲ್ಪದಿಂದ ಹಿಡಿದಿಟ್ಟಿದ್ದಾನೆ.

## ಅಲ್ಲಾಹನ ಜನ್ನತ್ ಹೇಗಿದೆ

ಅಲ್ಲಾಹನು ಜ್ಯೋತಿಸ್ವರೂಪನೆಂದು ತಿಳದೆವು. ಅವ್ಯಕ್ತಸ್ವರೂಪನಾದ ಅಲ್ಲಾಹನು ಹೋಲಿಸ್ಪಿರಿಟ್‌ನ್ನು ಧರಿಸಿದಾಗ ಜ್ಯೋತಿಯಂತೆ ಕಾಣುವನು. ವಿಶ್ವವನ್ನೇ ರೂಪವಾಗಿರುವ ವಿರಾಟ್‌ಪುರುಷನ ತಲೆಯ ಮೇಲೆ ಜ್ಯೋತಿಸ್ವರೂಪನಾಗಿ ನೆಲೆಸಿರುವನು. (ನಾವು ಪುರುಷರಾದರೆ ವಿಶ್ವವು ವಿರಾಟ್‌ಪುರುಷ. ನಮ್ಮ ಶರೀರವು ನೀರಿನಿಂದಾಗಿದೆ ಹಾಗೆಯೆ ವಿರಾಟ್ ಪುರುಷನ ಶರೀರವೂ ಸಹ ನೀರಿನಿಂದಾಗಿದೆ.) ಮರುತ್ ದೇವತೆಗಳು (ಅಲ್ಲಾಹನ ಸೈನಿಕರು), ಋಷಿಗಳು, ಯೋಗಿಗಳು, ಪ್ರವಾದಿಗಳು ಅಲ್ಲಾಹನ ಆಸ್ಥಾನದಲ್ಲಿ ಅಲ್ಲಾಹನ ಮಹಿಮೆಯನ್ನು ಋಗ್ವೇದ ಮಂತ್ರಗಳ ಮೂಲಕ ಹೊಗಳುತ್ತಿರುವರು.

ಪ್ರವಾದಿಗಳು ಮತ್ತು ಋಷಿಗಳು ಅಲ್ಲಾಹನನ್ನು ಹೊಗಳುತ್ತಿರುವಾಗ ಅಲ್ಲಾಹನ ಜ್ಯೋತಿಯು ಮತ್ತು ಅಲ್ಲಾಹನ ರೂಪವು ವಿಸ್ತರಿಸುತ್ತಾ ಬೆಳೆಯುತ್ತಾ ಹೋಗುವುದು. ಈ ಜ್ಯೋತಿಯ ಮಧ್ಯೆ ಇರುವ ಅರಮನೆಯಲ್ಲಿರುವ ಸಭಾಂಗಣದಲ್ಲಿರುವ ಸಿಂಹಾಸನದ ಮೇಲೆ ಜ್ಯೋತಿರೂಪದಲ್ಲಿ ಅಥವಾ ಮಾನವರೂಪದಲ್ಲಿ ಅಲ್ಲಾಹನು ಕುಳತಿರುವನು. ಅರಮನೆಯ ಕೆಳಭಾಗದಲ್ಲಿ ಜನ್ನತ್ ಎಂಬುವ ಉದ್ಯಾನವನವಿದೆ.

ಪರಿಪೂರ್ಣಗೊಂಡವರಲ್ಲಿ ಕೆಲವರು ಅಲ್ಲಾಹನ ಜ್ಯೋತಿಯಲ್ಲಿ ಒಂದಾಗುವರು. ಅವರು ಇಚ್ಛೆ ಬಂದಷ್ಟು ಕಾಲ ಜ್ಯೋತಿಯಲ್ಲಿ ನೆಲೆಸಿದ್ದು ನಂತರ ಅಲ್ಲಾಹನ ಜ್ಯೋತಿಯಿಂದ ಹೊರಬರುವರು. ಕೆಲವರು ಅಲ್ಲಾಹನ ಸಮ್ಮುಖದಲ್ಲಿಯೇ ಇದ್ದು ಆನಂದದಿಂದ ಅಲ್ಲಾಹನನ್ನು ನೋಡುತ್ತಾ ಹೊಗಳುತ್ತಿರುವರು. ಯಾರ ಜ್ಯೋತಿಯನ್ನು ಅಲ್ಲಾಹನು ಪರಿಪೂರ್ಣಮಾಡಿರುವನೋ ಅವರು ಮಾತ್ರ ಅರಮನೆಯಲ್ಲಿ ಅಲ್ಲಾಹನ ಸಮೀಪವಿರುವರು.

ಇತರರು ಅಲ್ಲಾಹನ ಉದ್ಯಾನವನದಲ್ಲಿ ಆನಂದದಿಂದ ತಮಗೆ ಇಚ್ಛೆ ಬಂದಂತೆ ಸಕಲ ಭೋಗಗಳನ್ನು ಅನುಭವಿಸುತ್ತಿರುವರು. ಅವರೂ ಸಹ ಉದ್ಯಾನವನದಲ್ಲಿ ಅಲ್ಲಾಹನನ್ನು ನೋಡುತ್ತಾ ಆನಂದದಿಂದ ಇರುವರು. ಈ ಜೀವರಾಶಿಗಳ ಜ್ಯೋತಿಯು ಪರಿಪೂರ್ಣವಾಗದಿರುವುದರಿಂದ ಮತ್ತು ಆಸೆಗಳಂದ ಕೂಡಿರುವುದರಿಂದ ಅವರೆಲ್ಲರೂ ಮತ್ತೆ ವಿಶ್ವಸೃಷ್ಟಿಯಾದಾಗ ಭೂಮಿಯಲ್ಲಿ ಜನ್ಮ ತಾಳುವರು.

## ಜನ್ನತ್‌ನಲ್ಲಿರುವ ಆನಂದದಾಯಕವಾದ ನದಿಗಳು

ಅತ್ಯಂತ ಆನಂದದಾಯಕವಾದ ಆ ಸ್ವರ್ಗದಲ್ಲಿ ಅಲ್ಲಾಹ್‌ನು ವಿಶ್ವಸಿಂಹಾಸನದಲ್ಲಿ ಕುಳತು, ಎಲ್ಲರನ್ನೂ ಅನುಗ್ರಹಿಸುತ್ತಾನೆ. ಆ ಪರಮ ಪ್ರಭುವಾದ ಅಲ್ಲಾಹ್‌ನು ಎಲ್ಲರ ಇಚ್ಛೆಗಳನ್ನೂ ಪೂರೈಸುತ್ತಾನೆ. ಆನಂದಮಯವಾದ ಸ್ವರ್ಗದಲ್ಲಿ ಎಲ್ಲರೂ ಆನಂದದಿಂದ ಅಲ್ಲಾಹ್‌ನ ಸಮಕ್ಷಮದಲ್ಲಿರುತ್ತಾರೆ. ಸ್ವರ್ಗದಲ್ಲಿ ಉದ್ಯಾನವನಗಳು ಕಣ್ಮನ ಸೆಳೆಯುವಂತಿರುವುವು ಮತ್ತು ಅಲ್ಲಿ ನಾಲ್ಕು ನದಿಗಳು ಹರಿಯುತ್ತಿರುವುವು. ಒಂದು ಪರಿಶುದ್ದವಾದ ಜಲದಿಂದ ಕೂಡಿರುವ ನದಿ, ಎರಡನೆಯದು ಕ್ಷೀರದ ನದಿ, ಮೂರನೆಯದು ತಿಳಜೇನಿನ ನದಿ ಮತ್ತು ನಾಲ್ಕನೆಯದಾದ ಮದ್ಯದಂತೆ ಮತ್ತು ಬರಿಸುವ ಆನಂದದಾಯಕವಾದ ತಿಳ ಜೇನಿನ ಬಣ್ಣದ ನದಿಯು ಹರಿಯುತ್ತಿರುವುವು. ಈ ಪಾನೀಯವು ಮುಖ ಮುರಿಯದೆ

ಕುಡಿಯಲಾಗದಂತಹ ದುರ್ಗಂಧ ಅಥವಾ ಅರುಚಿ, ತಲೆ ಸುತ್ತುವಿಕೆ, ತಲೆನೋವು ಇತ್ಯಾದಿ ಆರೋಗ್ಯಕ್ಕೆ ಹಾನಿಕರವಾದ ಅಂಶವಿರುವುದಿಲ್ಲ. ಪವಿತ್ರ ಕುರ್‌ಆನ್‌ನ ಈ ಸೂಕ್ತಗಳನ್ನು ನೋಡಿ.

"ಅದರಿಂದ ದೇಹಕ್ಕೆ ಹಾನಿಯಾಗುವುದಿಲ್ಲ, ಅದರಿಂದ ಅವರ ಬುದ್ಧಿಯು ಪ್ರಭಾವಿತವಾಗದು. (ಅಂದರೆ ಮದ್ಯದಂತೆ ಬುದ್ಧಿಯನ್ನು ಕೆಡಿಸುವುದಿಲ್ಲ.) ಅಸಂಬದ್ಧ ಮಾತಾಗಲೀ, ದುರ್ನಡತೆಯಾಗಲಿ ಅಲ್ಲಿರಲಾರದು" (ಪವಿತ್ರ ಕುರ್‌ಆನ್: ಅಸ್ಸಾಫ್ಫಾತ್:೪೭)

"ಧರ್ಮನಿಷ್ಠರಿಗೆ ವಾಗ್ದಾನ ಮಾಡಲಾಗಿರುವ ಆ ಸ್ವರ್ಗದ ವಿಶೇಷತೆಯೇನೆಂದರೆ ಅದರಲ್ಲಿ ತಿಳಿ ನೀರಿನ ಕಾಲುವೆಗಳು ಹರಿಯುತ್ತಿರುವುವು. ಸ್ವಲ್ಪವೂ ರುಚಿ ಬದಲಾಗಿರದಂತಹ ಹಾಲಿನ ಕಾಲುವೆಗಳು ಹರಿಯುತ್ತಿರುವುವು. ಕುಡಿಯುವವರಿಗೆ ಅತ್ಯಂತ ರುಚಿಕರವಾಗಿರುವ ಮದಿರೆಯ ಕಾಲುವೆಗಳು ಹರಿಯುತ್ತಿರುವುವು. ಅತ್ಯಂತ ತಿಳಿಯಾದ ಜೇನಿನ ಕಾಲುವೆಗಳು ಹರಿಯುತ್ತಿರುವುವು." (ಪವಿತ್ರ ಕುರ್‌ಆನ್: ಮುಹಮ್ಮದ್:೧೫)

ಅಲ್ಲಿ ಇನ್ನೊಂದು ವಿಧವಾದ ಚಿಲುಮೆಯೂ ಇದೆ. ಆ ನೀರಿಗೆ ಶುಂಠಿಯ ಸ್ವಾದವಿರುವುದು. ಆದರೆ ಶುಂಠಿಯನ್ನು ಅರೆದು ಸೇರಿಸಿದ್ದಲ್ಲ. ಅದು ನೀರಿನ ಸಹಜ ಸ್ವಾದವಾಗಿರುವುದು. 'ಝುಂಜಬೀಲ್' ಎಂದು ಅದರ ಹೆಸರು.

"ಅಲ್ಲಿ ಅವರಿಗೆ ಶುಂಠಿ ಬೆರೆತಿರುವಂತಹ ಮದಿರೆಯನ್ನು ಕುಡಿಸಲಾಗುವುದು" (ಪವಿತ್ರ ಕುರ್‌ಆನ್: ಅದ್ದಹ್ರ್:೧೭)

## ಈ ಎಲ್ಲಾ ನದಿಗಳ ಉಗಮ ಸ್ಥಾನವೆಲ್ಲಿ?

"ಸ್ವರ್ಗದ ಅತ್ಯುನ್ನತ ಸ್ತರವಾಗಿರುವ ಫಿರ್‌ದೌಸಿನಿಂದ ಈ ನದಿಗಳು ಹುಟ್ಟಿ ಹರಿಯುತ್ತವೆ ತರುವಾಯ ಸ್ವರ್ಗದ ಅತಿ ಕೆಳಗಿನ ಸ್ತರದ ಎಲ್ಲ ಮೂಲೆಗಳಿಗೂ ತಲುಪಿ ಬಯಸಿದೆಡೆ ತಿರುಗಿಸಬಹುದಾದ ರೀತಿಯಲ್ಲಿ ಉಕ್ಕಿ ಹರಿಯುತ್ತಿರುವುದು." (ಪವಿತ್ರ ಕುರ್‌ಆನ್: ಅದ್ರಹ್:೬)

## ಸೃಷ್ಟಿಸಮುದ್ರವು ಸಿಹಿಯಾಗಿರುವ ಕಾರಣ

ಸೃಷ್ಟಿ ಸಮುದ್ರವು ಸಿಹಿಯಾಗಿರುವ ಕಾರಣ ಜನ್ನತ್‌ನಲ್ಲಿರುವ ನಾಲ್ಕೂ ಆನಂದ ರಸವು ಈ ಸಮುದ್ರದಲ್ಲಿದೆ. ಆ ಕಾರಣಕ್ಕಾಗಿಯೇ ಈ ಸಮುದ್ರವು 'ಸಿಹಿಸಮುದ್ರ'ವಾಗಿದೆ.

## ಜನ್ನತ್‌ನಲ್ಲಿ ಸ್ತ್ರೀಪುರುಷರೆಂಬ ಭೇದವಿಲ್ಲ

ಈ ಮೊದಲೇ ಓದಿದ ಹಾಗೆ ನಾವೆಲ್ಲರೂ ಜ್ಯೋತಿಸ್ವರೂಪವಾಗಿದ್ದೇವೆ. ಆದ್ದರಿಂದ ಜ್ಯೋತಿಗೆ ಸ್ತ್ರೀಪುರುಷರೆಂಬ ಭೇದಭಾವ ಎಲ್ಲಿದೆ. ಸ್ತ್ರೀಪುರುಷನೆಂಬ ಭಾವನೆ ಕೇವಲ ಭೂಮಿಯ ಮೇಲೆ ಹುಟ್ಟಿದ ನಂತರದ ಮಾನಸಿಕ ಸ್ಥಿತಿ. ನಮ್ಮ ಜ್ಯೋತಿಯನ್ನು ಅಲ್ಲಾಹನು ಪರಿಶುದ್ಧಿಗೊಳಿಸಿದ ಮೇಲೆ ಸ್ತ್ರೀಪುರುಷರಲ್ಲಿ ಯಾವುದೇ ವ್ಯತ್ಯಾಸವಿಲ್ಲ. ಪರಿಶುದ್ಧಗೊಳ್ಳದ ಮಾನವರಲ್ಲಿ ಆಸೆಗಳಿರುತ್ತವೆ. ಭೂಮಿಯ ಮೇಲೆ ಹುಟ್ಟಿದ ನಂತರ ಮಾತ್ರ ಈ ಮಾನಸಿಕ ಸ್ಥಿತಿಯು ನಮ್ಮ ಕರ್ಮಗಳಂತೆ ಆಗಾಗ ಬೇರೆ ಬೇರೆ ಜನ್ಮಗಳಲ್ಲಿ ಹೆಣ್ಣಾಗಿರುವವರು ಗಂಡಾಗುತ್ತಾರೆ ಮತ್ತು ಗಂಡಾಗಿರುವವರು ಹೆಣ್ಣಾಗುತ್ತಾರೆಂದು ಭಾರತದ ಋಷಿಗಳು ಹೇಳುತ್ತಾರೆ. ಇದರ ಬಗ್ಗೆ ಪವಿತ್ರ ಕುರ್‌ಆನ್‌ನ ಈ ಸೂಕ್ತವನ್ನು ನೋಡಿ.

"...... ಪುರುಷರಾಗಲಿ ಸ್ತ್ರೀಯರಾಗಲಿ ನೀವೆಲ್ಲ ಒಂದೇ ವರ್ಗದವರು....." (ಪವಿತ್ರ ಕುರ್‌ಆನ್: ೩–೧೯೫)

ಅಷ್ಟೇ ಅಲ್ಲ ಸಕಲ ಪ್ರಾಣಿಗಳಲ್ಲಿಯೂ ಯಾವ ಭೇದ ಭಾವವಿಲ್ಲ.

"ಭೂಮಿಯ ಮೇಲೆ ಚಲಿಸುವ ಪ್ರಾಣಿಗಳನ್ನೂ ವಾಯುವಿನಲ್ಲಿ ರೆಕ್ಕೆಗಳಿಂದ ಹಾರಾಡುವ ಪಕ್ಷಿಗಳನ್ನೂ ನೋಡಿಕೊಳ್ಳಿರಿ. ಇವೆಲ್ಲವೂ ನಿಮ್ಮಂತೆಯೇ ಇರುವ ವರ್ಗಗಳು......." (ಪವಿತ್ರ ಕುರ್‌ಆನ್: ೬–೩೮)

ಸಕಲ ಜೀವರಾಶಿಗಳು ಮತ್ತು ಮಾನವರಲ್ಲಿ ಯಾವುದೇ ಭೇದವಿಲ್ಲ. ನಾವೆಲ್ಲರೂ ಒಂದೇ ವರ್ಗದವರು. ಇದರ ಅರ್ಥ ನಾವೆಲ್ಲರೂ ಸಹ ಜ್ಯೋತಿಸ್ವರೂಪರು. ಮಾನವನ ಶ್ರೇಷ್ಟತೆ ಏನೆಂದರೆ ಅವನಲ್ಲಿ ವಾಕ್‌ಶಕ್ತಿಯು ಮತ್ತು ಮನಸ್ಸಿನ ಧೀಶಕ್ತಿಯು ಉನ್ನತ ಮಟ್ಟದಲ್ಲಿದೆ. ಇದರ ಹೊರತು ಜೀವನದ ಅನುಭವಗಳು ಪ್ರಾಣಿಗಳಲ್ಲಿ ಮತ್ತು ಮಾನವರಲ್ಲಿ ಒಂದೇ ಆಗಿದೆ. ಭಾರತದ ಋಷಿಗಳ ಪ್ರಕಾರ ಮಾನವರು ತಮ್ಮ ಕ್ರೂರಕರ್ಮಗಳಿಂದಾಗಿ ಪ್ರಾಣಿಗಳಾಗಿ ಜನ್ಮವನ್ನೆತ್ತುತಾರೆಂದು ಹೇಳಿರುವರು.

## ಅಲ್ಲಾಹನು ಭೂಮಿಯ ಮೇಲೆ ಅವತರಿಸುವುದಿಲ್ಲ

"ಪೈಗಂಬರರೇ ನಾವು ನಿಮಗಿಂತ ಮುಂಚೆಯೂ ಮನುಷ್ಯರನ್ನೇ ಸಂದೇಶವಾಹಕರಾಗಿ ರವಾನಿಸಿದ್ದೆವು. ಅವರ ಮೇಲೆ ನಾವು 'ದಿವ್ಯ ವಾಣಿ' ಮಾಡುತ್ತಿದ್ದೆವು. ನಿಮಗೆ ಗೊತ್ತಿಲ್ಲದಿದ್ದರೆ ಗ್ರಂಥದವರೊಡನೆ ಕೇಳಿರಿ. ನಾವು ಆ ಸಂದೇಶವಾಹಕರಿಗೆ ಆಹಾರವನ್ನು ಸೇವಿಸದಂತಹ ಶರೀರವನ್ನು ನೀಡಿರಲಿಲ್ಲ ಮತ್ತು ಅವರು ಸದಾಕಾಲ ಬದುಕುವವರೂ ಆಗಿರಲಿಲ್ಲ." (ಪವಿತ್ರ ಕುರ್‌ಆನ್: ೨೧-೭&೮)

ಅಲ್ಲಾಹನು ಎಲ್ಲರ ಹೃದಯಗುಹೆಯಲ್ಲಿರುವಾಗ ಪ್ರಭುವು ಮತ್ತೆ ಪ್ರತ್ಯೇಕವಾಗಿ ಸ್ಥೂಲಶರೀರವನ್ನು ಧರಿಸುವ ಅವಶ್ಯಕತೆ ಇಲ್ಲ. ಆ ರೀತಿ ಸ್ಥೂಲಶರೀರವನ್ನು ಧರಿಸುವುದೂ ಇಲ್ಲ. ಯಾರನ್ನಾದರೂ ಅನುಗ್ರಹಿಸಬೇಕಾದರೆ ಅಲ್ಲಾಹನು ನಮ್ಮ ಬುದ್ಧಿಯನ್ನು ಪ್ರಚೋದಿಸುತ್ತಾನೆ. ಭಾರತದ ಪುರಾಣದ ಅವತಾರದ ಕಲ್ಪನೆಯನ್ನು ಪವಿತ್ರ ಕುರ್‌ಆನ್ ತಿರಸ್ಕರಿಸುತ್ತದೆ.

## ಅಲ್ಲಾಹ್ ವಿಶ್ವದ ಮೇಲಿರುವನೇ

ಹೌದು, ಅಲ್ಲಾಹನು ವಿಶ್ವದ ಮೇಲಿರುವ ಸಿಂಹಾಸನದಲ್ಲಿ ಕುಳಿತು ವಿಶ್ವದಲ್ಲಿ ನಡೆಯುತ್ತಿರುವ ಸಕಲ ಕಾರ್ಯವನ್ನು ನೋಡುತ್ತಾನೆ ಮತ್ತು ಕೇಳುತ್ತಾನೆ. ಆದರೆ ಭಾರತೀಯರು ಹೇಳುವಂತೆ ಅಲ್ಲಾಹನು ಅಣು, ರೇಣು, ತೃಣ, ಕಾಷ್ಠದಲ್ಲಿಲ್ಲ, ಆಕಾಶ, ಸೂರ್ಯ, ಚಂದ್ರ, ಪೃಥ್ವಿ, ಆಕಾಶಕಾಯ ಮತ್ತು ಗೆಲಾಕ್ಸಿಗಳ ಒಳಗೆ ಇಲ್ಲ. ಅಲ್ಲಾಹನು ಜೀವರಾಶಿಯ ಹೃದಯಗುಹೆಯಲ್ಲಿರುವನು ದೇವಚರರ ಸೃಷ್ಟಿಯಾದ ಜಡವಸ್ತುಗಳಲ್ಲಿ ಇಲ್ಲ.

"..... ಅದಕ್ಕಿಂತ (ಸೃಷ್ಟಿಗೆ) ಮುಂಚೆ ಅವನ ವಿಶ್ವಸಿಂಹಾಸನ ಅರ್ಥಾತ್ ಅಧಿಪತ್ಯವು ನೀರಿನ ಮೇಲಿತ್ತು....." (ಪವಿತ್ರ ಕುರ್ ಆನ್ ೧೧-೭)

## ಅಲ್ಲಾಹನು ಬಹಳ ದೂರದಲ್ಲಿರುವನೇ?

"ನಾವು ಇವರ ರಹಸ್ಯ ಮಾತುಗಳನ್ನು ಪಿಸು ನುಡಿಗಳನ್ನೂ ಕೇಳುವುದಿಲ್ಲವೆಂದು ಇವರು ಗ್ರಹಿಸಿಕೊಂಡಿರುವರೇ? ನಾವು ಎಲ್ಲವನ್ನೂ ಆಲಿಸುತ್ತಿದ್ದೇವೆ ಮತ್ತು ನಮ್ಮ ದೂತರು (ದೇವತೆಗಳು) ಇವರ ಬಳಿಯಲ್ಲೇ ಬರೆಯುತ್ತಿದ್ದಾರೆ." (ಪವಿತ್ರ ಕುರ್‌ಆನ್: ೪೩-೮೦)

"ನಾವು ಮಾನವನನ್ನು ಸೃಷ್ಟಿಸಿದ್ದೇವೆ ಮತ್ತು ನಾವು ಅವನ ಮನಸ್ಸಿನಲ್ಲಿ ಉದ್ಭವಿಸುವ ದುರ್ಭಾವನೆಗಳನ್ನೂ ಬಲ್ಲೆವು. ನಾವು ಅವನ ಕಂಠನಾಡಿಗಿಂತಲೂ ಹೆಚ್ಚು ಅವನಿಗೆ ಸಮೀಪವಿದ್ದೇವೆ. (ಮತ್ತು ನಮ್ಮ ಈ ಪ್ರತ್ಯಕ್ಷ ಜ್ಞಾನ ಮಾತ್ರವಲ್ಲದೇ) ಇಬ್ಬರು ಲೇಖಕರು ಅವನ ಬಲ ಹಾಗು ಎಡಭಾಗಗಳಲ್ಲಿ ಕುಳಿತು ಪ್ರತಿಯೊಂದು ವಿಷಯವನ್ನು ದಾಖಲಿಸುತ್ತಿರುವರು." (ಪವಿತ್ರ ಕುರ್‌ಆನ್: ೫೦-೧೬&೧೭)

ಅಲ್ಲಾಹನು ನಮ್ಮನ್ನು ಸೈತಾನನಿಂದ ರಕ್ಷಿಸಲು ನಮ್ಮೊಳಗೇ ಇದ್ದು ಸಕಲವನ್ನು ನೋಡುತ್ತಾನೆ ಮತ್ತು ಕೇಳುತ್ತಾನೆ. ಅಲ್ಲಾಹನು ಸಕಲ ಜೀವರಾಶಿಗಳ ಹೃದಯದೊಳಗೆ ಇದ್ದು ಎಲ್ಲರೂ ಮಾಡುವ ಮತ್ತು ಹೇಳುವುದನ್ನು ಅಲ್ಲಾಹ್ ತಿಳಿಯುತ್ತಾನೆ.

## ಹಾಗಾದರೆ ಅಲ್ಲಾಹ್ ಎರಡೂ ಕಡೆಗಳಲ್ಲಿರುವನೇ

ಹೌದು ಅಲ್ಲಾಹ್ ತನ್ನ ಮಹಿಮೆಯಿಂದ ಅನೇಕ ರೂಪವನ್ನು ಹೊಂದುತ್ತಾನೆ. ಅಲ್ಲಾಹ್ ತನ್ನ ಸಿಂಹಾಸನವನ್ನು ಬ್ರಹ್ಮಾಂಡದ ಮೇಲೆ ಸ್ಥಾಪಿಸಿರುವನು ಮತ್ತು ಪ್ರತಿಯೊಬ್ಬ ಮಾನವರ ಹೃದಯ ಗುಹೆಯಲ್ಲಿ ಸೈತಾನನಿಂದ ನಮ್ಮನ್ನು ರಕ್ಷಿಸಲು ನೆಲೆಸಿರುವನು. ಮಾನವ ಮಾತ್ರರಲ್ಲದೇ ಸಕಲ ಜೀವರಾಶಿಗಳ ಒಳಗಡೆಯೂ ನೆಲೆಸಿರುವನು.

ಇದೇ ರೀತಿ ದೇವಚರರೂ ಸಹ ಅನೇಕ ಜನ್ಮವನ್ನು ಹೊಂದುತ್ತಾರೆ. ಅವರು ನಕ್ಷತ್ರಪುಂಜಗಳಲ್ಲಿ, ಸೂರ್ಯನಲ್ಲಿ ಮತ್ತು ಸಕಲ ಜೀವರಾಶಿಗಳ ಹೃದಯದಲ್ಲಿ ನೆಲೆಸಿರುವರು.

ಸಕಲವು ಸೃಷ್ಟಿಯಾಗಲು ಎಷ್ಟು ಕಾಲವು ಬೇಕಾಯಿತು

"ಆಕಾಶಗಳನ್ನು ಭೂಮಿಯನ್ನೂ ಅವುಗಳ ನಡುವೆ ಇರುವ ಸಕಲವಸ್ತುಗಳನ್ನು ಆರು ದಿನಗಳಲ್ಲಿ ಸೃಷ್ಟಿಸಿ, ಆನಂತರ ವಿಶ್ವಸಿಂಹಾಸನಾರೂಢನಾದವನು, ಅಲ್ಲಾಹನೇ....." (ಪವಿತ್ರ ಕುರ್‌ಆನ್: ೩೨–೪)

"ಅವನು ಆಕಾಶದಿಂದ ಭೂಮಿಯವರೆಗೂ ಲೋಕಾಡಳಿತ ವ್ಯವಸ್ಥೆ ನಡೆಸುತ್ತಾನೆ. ಈ ವ್ಯವಸ್ಥೆಯ ವರದಿಯು ನಿಮ್ಮ ಗಣನೆಯ ಪ್ರಕಾರ ಒಂದು ಸಾವಿರ ವರ್ಷವಾಗಿರುವ ಒಂದು ದಿನದಂದು ಮೇಲಕ್ಕೆ ಅವನ ಸನ್ನಿಧಿಗೆ ಹೋಗುತ್ತದೆ." (ಪವಿತ್ರ ಕುರ್‌ಆನ್: ೩೨–೫)

ಅಲ್ಲಾಹನಿಗೆ ಯಾವ ಕಾಲಮಾನವು ಇಲ್ಲದಿದ್ದರೂ ಇಲ್ಲಿ ಹೇಳಿರುವ ಆರು ದಿನ, ಸೃಷ್ಟಿಯ ಆಯಸ್ಸಿನ ಕಾಲಮಾನವಾಗಿದೆ. ಅಂದರೆ ನಮ್ಮ ಸಾವಿರ ವರ್ಷಗಳು ಸೃಷ್ಟಿಯ ಒಂದು ದಿನವಾಗಿದೆ. ಅಂದರೆ ಸೃಷ್ಟಿಯ ೬ ದಿವಸಗಳು ನಮ್ಮ ಕಾಲಮಾನದ ಪ್ರಕಾರ ೬೦೦೦ ವರ್ಷಗಳಾಗುತ್ತದೆ.

ವಿಜ್ಞಾನಿಗಳು ಯೋಚಿಸಬೇಕಾದುದು ಏನೆಂದರೆ ಅಲ್ಲಾಹನು ವಿಶ್ವದ ನಾಲ್ಕು ಶಕ್ತಿಯನ್ನು ಹಿಂತೆಗೆದುಕೊಂಡಾಗ, ವಿಶ್ವ ವಿನಾಶಕ್ಕೆ ಎಷ್ಟು ವೇಳೆಯು ತೆಗೆದುಕೊಳ್ಳಬಹುದು. ಕೆಲವು ನಿಮಿಷಗಳಲ್ಲಿ ವಿಸ್ಫೋಟವುಂಟಾಗಿ ವಿಶ್ವ ವಿನಾಶವಾಗಬಹುದು. ಹಾಗೆಯೇ ದೇವಚರರು ಜಲವನ್ನು ಸಂಗ್ರಹಿಸಿ, ಅಗ್ನಿಗೋಳವನ್ನಾಗಿ ಮಾಡಿ ನಕ್ಷತ್ರಪುಂಜ ಮತ್ತು ಸೂರ್ಯರಾಗಲು ಎಷ್ಟು ವೇಳೆಯು ತೆಗೆದುಕೊಳ್ಳುವುದು ಎಂಬುದನ್ನು ಚಿಂತಿಸಬೇಕಾಗಿದೆ. ವಿಶ್ವಮನಸ್ಸಿನಿಂದ ಜೀವಕೋಶಗಳು ಸೃಷ್ಟಿಸಲ್ಪಟ್ಟವು ಮತ್ತು ಅವು ವ್ಯಾಪಕವಾಗಿ ಮಹಾಸಮುದ್ರದಲ್ಲಿ ಹರಡಿಕೊಂಡಿದೆ ಎಂದು ಋಗ್ವೇದವು ಹೇಳುತ್ತದೆ. ಆದ್ದರಿಂದ ಸೂಕ್ತ ವಾತಾವರಣ ಸೃಷ್ಟಿಯಾದ ಕೂಡಲೆ ಜೀವಿಗಳ ವಿಕಾಸವಾಗುತ್ತದೆ.

ಅಗಾಧವಾದ ಬ್ರಹ್ಮಾಂಡದ ಸೃಷ್ಟಿ ಮತ್ತು ಲಯವು ಯಾವಾಗ ಶುರುವಾಯಿತು ಮತ್ತು ಯಾವಾಗ ಲಯವಾಗುವುದು ಎಂಬುದನ್ನು ತಿಳಿದುಕೊಳ್ಳುವ ಅಗತ್ಯವಿಲ್ಲ. ನಾವು ಈ ಹಿಂದೆ ಓದಿದ ಹಾಗೆ ನಕ್ಷತ್ರಪುಂಜ ಮತ್ತು ಸೂರ್ಯರು ಸೃಷ್ಟಿಯಾಗಲು ಬಹಳ ಸಮಯ ಬೇಕಾಗಿಲ್ಲ. ನಮ್ಮ ಆಯಸ್ಸು ಕೇವಲ ೧೦೦ ವರ್ಷಗಳು ಮಾತ್ರ. ನಮಗೆ ಬೇಕಾಗಿರುವುದು ಸೃಷ್ಟಿಯು ಲಯವಾಗುವವರೆಗೂ ಕಾಯದೇ ಈ ಜನ್ಮದಲ್ಲಿಯೇ ಭಗವಂತನ ಬಳಿ ಹೋಗುವುದು. ಕಿಯಾಮತ್‌ನವರೆಗೂ ಕಾಯುವ ಅವಶ್ಯಕತೆಯಿಲ್ಲ.

## ಸೃಷ್ಟಿ ಮತ್ತು ವಿನಾಶ ನಿರಂತರ

"ನಿಮಗೆಲ್ಲರಿಗೂ ಅವನ ಕಡೆಗೇ ಮರಳಿಹೋಗಲಿಕ್ಕಿದೆ. ಇದು ಅಲ್ಲಾಹನ ಪರಿಪಕ್ವ ವಾಗ್ದಾನ. ನಿಶ್ಚಯವಾಗಿಯೂ ಸೃಷ್ಟಿಯ ಆರಂಭವನ್ನು ಅವನೇ ಮಾಡುತ್ತಾನೆ. ಆನಂತರ ಅವನೇ ಇನ್ನೊಮ್ಮೆ ಸೃಷ್ಟಿಸುವನು....." (ಪವಿತ್ರ ಕುರ್‌ಆನ್: ೧೦–೪)

"ನಾವೇನು ಪ್ರಥಮ ಬಾರಿ ಸೃಷ್ಟಿಸಿ ಬಳಲಿದ್ದೇವೆಯೇ? ಆದರೂ ಇವರು ಒಂದು ಹೊಸ ಸೃಷ್ಟಿಯ ಬಗ್ಗೆ ಸಂಶಯಗ್ರಸ್ಥರಾಗಿದ್ದಾರೆ." (ಪವಿತ್ರ ಕುರ್‌ಆನ್: ೫೦–೧೫)

ಯಾರ ಜ್ಯೋತಿಯನ್ನು ಅಲ್ಲಾಹ್ ಪರಿಪೂರ್ಣಗೊಳಿಸಿಲ್ಲವೋ ಅವರು ಕಿಯಾಮತ್‌ನ ನಂತರ ಕೆಲವು ಕಾಲ ಜನ್ನತ್‌ನಲ್ಲಿರುತ್ತಾರೆ ಆನಂತರ ಮತ್ತೆ ಸೃಷ್ಟಿಯು ಶುರುವಾದಾಗ ಪೃಥ್ವಿಯ ಮೇಲೆ ಜನನ ತಾಳಬೇಕಾಗುವುದು. ಏಕೆಂದರೆ ಅವರ ವಾಸನೆ ಮತ್ತು ಆಸೆಗಳು ಅವರನ್ನು ಭೂಮಿಯ ಕಡೆಗೆ ಎಳೆಯುತ್ತದೆ. ಈ ವಾಸನೆ ಮತ್ತು ಆಸೆಗಳಿಂದ ಮುಕ್ತನಾಗಲು ಮಾನವನಿಗೆ ಸಾಧ್ಯವಿಲ್ಲ. ಆದ್ದರಿಂದ ಅದರಿಂದ ಮುಕ್ತನಾಗಲು ಅಲ್ಲಾಹನ ಮೊರೆ ಹೋಗಬೇಕಾಗುತ್ತದೆ. ಏಕೆಂದರೆ ಅಲ್ಲಾಹ್ ಮಾತ್ರ ನಮ್ಮನ್ನು ಪರಿಶುದ್ಧಗೊಳಿಸಬಲ್ಲ.

ಆದ್ದರಿಂದ ಸೃಷ್ಟಿ ಮತ್ತು ಪ್ರಳಯ ಚಕ್ರವು ನಿರಂತರವಾಗಿ ನಡೆಯುತ್ತಿರುತ್ತದೆ. ಕೆಲವು ಸಮಯದವರೆಗೆ ಸೃಷ್ಟಿಯು ಇರುತ್ತದೆ. ಹಾಗೆಯೇ ಪ್ರಳಯದ ನಂತರ ಅಲ್ಲಾಹನ ಬಳಿ ಇರುವ ಸಮಯವು ನಿಗದಿಯಾಗಿದೆ. ಅವದಿ ಮುಗಿದ ನಂತರ ಮತ್ತೆ ಸೃಷ್ಟಿಯು ಆರಂಭವಾಗುತ್ತದೆ.

## ಬ್ರಹ್ಮಾಂಡದ ಸಕಲ ಕಾರ್ಯವು ಅಲ್ಲಾಹನ ಇಚ್ಛೆಯಂತಲೇ ನಡೆಯುತ್ತದೆ.

"ಭೂಮಿ–ಆಕಾಶಗಳ ಅಧಿಪತ್ಯ ಅಲ್ಲಾಹನಿಗೆ ಮಾತ್ರ ಇರುವುದೆಂದೂ ಅಲ್ಲಾಹನ ಹೊರತು ನಿಮ್ಮ ಸಂರಕ್ಷಕನೂ ಸಹಾಯಕನೂ ಯಾರೂ ಇಲ್ಲವೆಂದೂ ನಿಮಗೆ ತಿಳಿಯದೇ?" (ಪವಿತ್ರ ಕುರ್‌ಆನ್: (೨–೧೦೭)

"ಆತನು ಭೂಮಿ-ಆಕಾಶಗಳ ನಿರ್ಮಾತೃ. ಅವು ಯಾವುದಾದರೊಂದು ಕಾರ್ಯದ ನಿರ್ಧಾರ ಮಾಡಿಕೊಂಡೊಡನೆ 'ಸಂಭವಿಸು' ಎಂದು ಆಜ್ಞಾಪಿಸುತ್ತಾನೆ. ಆಗಲೇ ಅದು ಸಂಭವಿಸುತ್ತದೆ." ((ಪವಿತ್ರ ಕುರ್‌ಆನ್: ೨-೧೧೭)

ದೇವತೆಗಳಲ್ಲಿ ಮತ್ತು ಅಲ್ಲಾಹನಲ್ಲಿ ಪರಸ್ಪರ ಐಕಮತ್ಯವಿದೆ. ಅಲ್ಲಾಹ್ ಮತ್ತು ದೇವತೆಗಳು ಬೆಳಕು, ಜ್ಞಾನ, ಐಕಮತ್ಯ, ಅಮರತ್ವವನ್ನು ಪ್ರತಿಪಾದಿಸುತ್ತಾರೆ ಅಲ್ಲದೇ ದೈವೀಶಾಸನದ ನಿಯಮವನ್ನು ಚಾಚೂ ತಪ್ಪದೆ ಪಾಲಿಸುವರು ಮತ್ತು ಯಾವಾಗಲು ಸತ್ಯದಲ್ಲಿ ಸ್ಥಾಪಿತವಾಗಿರುವರು. ಉದಾಹರಣೆಗೆ ಹೇಳುವುದಾದರೆ ನಮ್ಮ ಮನಸ್ಸು ನಮ್ಮ ಶರೀರವನ್ನೆಲ್ಲಾ ವ್ಯಾಪಿಸಿಕೊಂಡಿದೆ. ಶರೀರದ ಯಾವುದೇ ಭಾಗವನ್ನು ಮುಟ್ಟಿದರೂ ನಮಗೆ ತಕ್ಷಣ ಗೊತ್ತಾಗುತ್ತದೆ. ಅಲ್ಲಾಹನಿಗೆ ವಿಶ್ವವೇ ಶರೀರವಾಗಿದೆ. ವಿಶ್ವ ಸಿಂಹಾಸನದಲ್ಲಿ ಕುಳಿತಿರುವ ಅಲ್ಲಾಹನು ತನ್ನ ಮನಸ್ಸಿನಿಂದ ಬ್ರಹ್ಮಾಂಡವನ್ನು ವ್ಯಾಪಿಸಿಕೊಂಡಿರುವನು.

ನಮ್ಮ ಶರೀರವನ್ನು ದೇವತೆಗಳು ನಿರ್ಮಿಸಿರುವರು. ಎಲ್ಲರ ಮನಸ್ಸು ಅಲ್ಲಾಹನ ಅನುಗ್ರಹದ ಅಂಶವಾಗಿದೆ. ನಮ್ಮ ಮನಸ್ಸು ನೀರು ಕುಡಿಯಬೇಕೆನಿಸಿದರೆ ನಮ್ಮ ಶರೀರವು ತನ್ನಷ್ಟಕ್ಕೆ ತಾನೇ ಕೈಯನ್ನು ಚಾಚಿ ನೀರನ್ನು ತೆಗೆದುಕೊಂಡು ಕುಡಿಯುವುದು. ನಮ್ಮ ಮನಸ್ಸಿನಲ್ಲಿ ಏನೇನು ಮಾಡಬೇಕೆಂದು ಭಾವನೆಯು ಮೂಡುತ್ತದೋ ಹಾಗೆಯೇ ನಮ್ಮ ಶರೀರವು ಮಾಡುತ್ತದೆ.

ಇದೇ ರೀತಿಯಾಗಿ ಅಲ್ಲಾಹನ ಮನಸ್ಸಿನಲ್ಲಿ ಯಾವುದು ಮಾಡಬೇಕೆಂದು ಸಂಕಲ್ಪ ಮೂಡುತ್ತದೆಯೋ ಅದೇ ರೀತಿಯಾಗಿ ದೇವತೆಗಳು ಮಾಡುತ್ತಾರೆ. ಅವರಲ್ಲಿ ಯಾವ ಭೇದಭಾವವೂ ಇಲ್ಲ. ನೀನು ಹೀಗೆ ಮಾಡು ಎಂದು ಅಪ್ಪಣೆಯನ್ನು ಕೊಡುವ ಅಗತ್ಯವಿಲ್ಲ. ಅಲ್ಲಾಹನು ಮನಸ್ಸಿನಲ್ಲಿ ಅಂದುಕೊಂಡಿದ್ದು ದೇವತೆಗಳಿಗೆ ಗೊತ್ತಾಗುತ್ತದೆ ಅದರಂತೆಯೇ ದೇವಚರರು ವರ್ತಿಸುವರು.

## ನಾವು ಕ್ರೂಸೇಡ್‌ನಿಂದಾಗಲಿ ಜಿಹಾದ್‌ನಿಂದಾಗಲಿ ಅಲ್ಲಾಹ್‌ನನ್ನು ಪಡೆಯಬಹುದೇ

ಅಲ್ಲಾಹ್‌ನನ್ನು ಯುದ್ಧ ಇತ್ಯಾದಿ ಪ್ರಯತ್ನಾದಿಗಳಿಂದ ಒಲಿಸಿಕೊಳ್ಳಲು ಸಾಧ್ಯನಲ್ಲ. ಸ್ತುತಿರೂಪವಾದ ಮಂತ್ರಗಳಿಂದ ಸ್ತೋತ್ರ ಮಾಡುವಾಗ ಸುಲಭಸಾಧ್ಯನು. ಆದ್ದರಿಂದ ಯಾರನ್ನಾದರೂ ಕೊಂದು ಸ್ವರ್ಗಕ್ಕೆ ಹೋಗುತ್ತೇವೆಂದು ಯಾರಾದರೂ ಭಾವಿಸಿದರೇ ಅದು ಅವರ ಮೂರ್ಖತನ. ಜಿಹಾದಿಗಳಾಗಲಿ ಮತ್ತು ಹಿಂಸಾ ಮಾರ್ಗವನ್ನು ಹಿಡಿದಿರುವವರಾಗಲಿ ಅವರು ಸತ್ತ ನಂತರ ನರಕಕ್ಕೆ ಹೋಗುವುದು ಶತಃಸಿದ್ಧ. ಎಲ್ಲರೂ ಜ್ಯೋತಿಸ್ವರೂಪರಾಗಿದ್ದಾರೆ ಮತ್ತು ಎಲ್ಲರಲ್ಲೂ ಅಲ್ಲಾಹನು ಇರುವಾಗ, ಎಲ್ಲರೂ ನಮ್ಮ ಬಂಧುಗಳೇ ಆಗಿದ್ದಾರೆ.

## ಶಿಯಾ-ಸುನ್ನಿಗಳ ಒಳಜಗಳದ ಬಗ್ಗೆ

"ನೀವು ಪರಸ್ಪರ ರಕ್ತಪಾತ ಮಾಡಬಾರದೆಂದೂ, ಪರಸ್ಪರರನ್ನು ಗೃಹಬಾಹಿರರನ್ನಾಗಿ ಮಾಡಬಾರದೆಂದು ನಾವು ನಿಮ್ಮೊಡನೆ ಬಲವಾದ ಕರಾರನ್ನು ಪಡೆದ ಆ ಸಂದರ್ಭವನ್ನು ಸ್ಮರಿಸಿರಿ. ನೀವು ಅದನ್ನು ಒಪ್ಪಿಕೊಂಡಿದ್ದಿರಿ. ಅದಕ್ಕೆ ನೀವೇ ಸಾಕ್ಷಿಗಳಾಗಿರುತ್ತೀರಿ." (ಪವಿತ್ರ ಕುರ್‌ಆನ್: ೨-೮೪)

"ಆದರೆ, ಈಗ ನೀವೆ ನಿಮ್ಮ ಬಂದುಬಳಗದವರ ಕೊಲೆಗೈಯುತ್ತೀರಲ್ಲದೆ ನಿಮ್ಮೊಳಗಿರುವವರನ್ನೇ ಗೃಹಬಾಹಿರರನ್ನಾಗಿ ಮಾಡುತ್ತೀರಿ. ಅವರ ವಿರುದ್ಧ ಅಕ್ರಮ ಗುಂಪುಗಾರಿಕೆ ಮಾಡಿಕೊಳ್ಳುತ್ತೀರಿ. ಅವರು ಯುದ್ಧಸೆರೆಯಾಳುಗಳಾಗಿ ಬಂದಾಗ ಅವರ ವಿಮೋಚನೆಗಾಗಿ 'ವಿಮೋಚನಾ ಮೌಲ್ಯ' ಪಡೆದೇ ಅವರನ್ನು ಬಿಡುತ್ತೀರಿ. ವಸ್ತುತಃ ಅವರನ್ನು ಗೃಹಬಾಹಿರರನ್ನಾಗಿ ಮಾಡುವುದನ್ನೇ ನಿಮಗೆ ನಿಷೇಧಿಸಲಾಗಿತ್ತು. ನೀವೇನು ಗ್ರಂಥದ ಒಂದಂಶದ ಮೇಲೆ ವಿಶ್ವಾಸವಿಟ್ಟು ಇನ್ನೊಂದಂಶವನ್ನು ನಿಷೇಧಿಸುತ್ತೀರಾ? ನಿಮ್ಮ ಪೈಕಿ ಹೀಗೆ ಮಾಡುವವರ ಶಿಕ್ಷೆಯು ಇಹದಲ್ಲಿ ಅವಮಾನಿತ ಜೀವನವೂ ಪರದಲ್ಲಿ ಘೋರ ಯಾತನೆಯ ಕಡೆಗೆ ತಳ್ಳಲ್ಪಡುವುದೂ ಆಗಿರಬೇಕಲ್ಲದೆ ಇನ್ನೇನು? ನೀವು ಮಾಡುವುದರ ಬಗ್ಗೆ ಅಲ್ಲಾಹನು ಅಶ್ರದ್ಧನಲ್ಲ. (ಪವಿತ್ರ ಕುರ್‌ಆನ್: ೨-೮೫)

ಸಕಲರಲ್ಲೂ ಅಲ್ಲಾಹನೇ ಇರುವಾಗ ನಮ್ಮ ಕರ್ತವ್ಯವು ಅಲ್ಲಾಹನ ಮೊರೆಹೋಗಬೇಕೆ ಹೊರತು ಪಂಗಡಗಳನ್ನು ಮಾಡಿಕೊಂಡು ಒಬ್ಬರೊನ್ನೊಬ್ಬರು ಸಾಯಿಸುವುದಲ್ಲ, ದ್ವೇಷವನ್ನು ಮಾಡುವುದಲ್ಲ.

## ಶೈತಾನನು ಎಲ್ಲರನ್ನೂ ಆವರಿಸಿಕೊಂಡಿರುವನು.

"ಜನರೇ, ಶೈತಾನನು ಯಾರ ಮೇಲೆ ಇಳಯುತ್ತಾರೆಂದು ಹೇಳಲೆ? ಅವರು ಪ್ರತಿಯೊಬ್ಬ ಸುಳ್ಳುಗಾರ ಪಾಪಿಯ ಮೇಲೆ ಇಳಯುತ್ತಾನೆ." (ಪವಿತ್ರ ಕುರ್‌ಆನ್: ೨೬–೨೨೧, ೨೨೨)

| |
|---|
| ಶೈತಾನನು ಸಾಮಾನ್ಯವಾಗಿ ನಿದ್ರಿಸುತ್ತಿರುತ್ತಾನೆ. ಆದರೆ ನಮ್ಮಲ್ಲಿರುವ ಕಾಮ, ಕ್ರೋದ, ಲೋಭ, ಮೋಹ, ಮದ, ಮಾತ್ಸರ್ಯಗಳು ಶೈತಾನನ್ನು ಜಾಗೃತಮಾಡುತ್ತದೆ. ಆತನು ಜಾಗೃತವಾದರೆಮಾನವರು ಮಾಡಬಾರದ ಕೆಲಸವನ್ನು ಮಾಡುತ್ತಾರೆ. |

ಪೃಥ್ವಿಯ ಪ್ರತಿಯೊಬ್ಬರ ಮೇಲೆಯೂ ಶೈತಾನನು ಇಳದಿರುವನು. ಈಗಾಗಲೇ ಶೈತಾನನ ಬಿಲವು ನಮ್ಮಲ್ಲಿ ತೆರೆದಿರುವುದೆಂದು ತಿಳದೆವು. ಆದ್ದರಿಂದಲೇ ನಾವೆಲ್ಲರೂ ಭೂಮಿಯಲ್ಲಿ ಜನಿಸಿ ಪಾಪಪುಣ್ಯ ಕರ್ಮಗಳನ್ನು ಮಾಡುತ್ತಿರುವೆವು.

## ಯಾರು ಅಲ್ಲಾಹ್‌ನ ಮೊರೆಹೋಗುವರೋ ಅವರನ್ನು ರಕ್ಷಿಸುವನು

"ಅದರ ಮೂಲಕ (ಪ್ರಾರ್ಥನೆ) ಅಲ್ಲಾಹನು ತನ್ನ ಸಂಪ್ರೀತಿಯನ್ನು ಆಪೇಕ್ಷಿಸುವವರಿಗೆ ರಕ್ಷಾ ಮಾರ್ಗವನ್ನು ತೋರಿಸಿ ತನ್ನ ಇಚ್ಛೆಯಿಂದ ಅವರನ್ನು ಅಂಧಕಾರಗಳಂದ ಹೊರತೆಗೆದು ಪ್ರಕಾಶದ ಕಡೆಗೆ ಒಯ್ಯುತ್ತಾನೆ ಮತ್ತು ಸನ್ಮಾರ್ಗದತ್ತ ಅವನಿಗೆ ಮಾರ್ಗದರ್ಶನ ಮಾಡುತ್ತಾನೆ." (ಪವಿತ್ರ ಕುರ್‌ಆನ್: ೫–೧೬)

"ಅಲ್ಲಾಹ್ ವಿಶ್ವಾಸಿಗಳ ರಕ್ಷಕ ಮಿತ್ರನಾಗಿರುತ್ತಾನೆ ಮತ್ತು ಅವನು ಇವರನ್ನು ಅಂಧಕಾರದಿಂದ ಪ್ರಕಾಶಕ್ಕೆ ತರುತ್ತಾನೆ. ಮತ್ತು ನಿರಾಕರಣೆಯ ಮಾರ್ಗವನ್ನನುಸರಿಸುವವರ ರಕ್ಷಕ ಮಿತ್ರರು ಅತಿಕ್ರಮಿಗಳಾಗಿದ್ದಾರೆ. ಅವರು ಇವರನ್ನು ಪ್ರಕಾಶದಿಂದ ಅಂಧಕಾರಗಳ ಕಡೆಗೆ ಎಳೆದೊಯ್ಯುತ್ತಾರೆ. ಇವರು ನರಕಾಗ್ನಿಯವರಾಗಿದ್ದು ಸದಾ ಅಲ್ಲೇ ಇರುವರು." (ಪವಿತ್ರ ಕುರ್‌ಆನ್: ೨–೨೫೭)

"…. ಓ ಮುಹಮ್ಮದರೇ, ಇದೊಂದು ಗ್ರಂಥ. ನೀವು ಜನರನ್ನು ಅವರ ಪ್ರಭುವಿನ ಅನುಜ್ಞೆಯಂತೆ ಅಂಧಕಾರಗಳಂದ ಹೊರತೆಗೆದು ಪ್ರಕಾಶದ ಕಡೆಗೆ ತರಲಿಕ್ಕಾಗಿ ನಾವು ಇದನ್ನು ಅವತೀರ್ಣಗೊಳಸಿರುತ್ತೇವೆ ….."(ಪವಿತ್ರ ಕುರ್‌ಆನ್: ೧೪–೧)

"….. ಸತ್ಯದ ಕಡೆಗೆ ಮಾರ್ಗದರ್ಶನ ಮಾಡುವವನು ಕೇವಲ ಅಲ್ಲಾಹನೇ….." (ಪವಿತ್ರ ಕುರ್‌ಆನ್: ೧೦–೩೫)

ಶೈತಾನನು ನಮ್ಮನ್ನು ಅಂಧಕಾರ ಮತ್ತು ಅಜ್ಞಾನದಲ್ಲಿ ಮುಳುಗಿಸಿರುವನು. ನಾವು ಅಲ್ಲಾಹನನ್ನು ಒಲಿಸಿಕೊಂಡರೆ ಅವನು ನಮ್ಮನ್ನು ಅಂಧಕಾರದಿಂದ ಪ್ರಕಾಶದ ಕಡೆಗೆ ಒಯ್ಯುವನು. ಆದರೆ ಇದು ಅಷ್ಟು ಸುಲಭವಲ್ಲ.

ಅಲ್ಲಾಹನು ಮಾತ್ರ ನಮ್ಮನ್ನು ಸರಿಯಾದ ಮಾರ್ಗದಲ್ಲಿ ಕರೆದೊಯ್ಯುವನು

"ನನಗೆ ಸಂಬಂಧವಿರುವುದು ನನ್ನನ್ನು ಸೃಷ್ಟಿಸಿದವನೊಂದಿಗೆ ಮಾತ್ರ. ಅವನೇ ನನಗೆ ಮಾರ್ಗದರ್ಶನ ಮಾಡುವನು." (ಪವಿತ್ರ ಕುರ್‌ಆನ್: ೪೩–೨೭)

ನಮಗೆ ಯಾವ ಧರ್ಮವೂ ಇಲ್ಲ ಮತ್ತು ಇತರರ ನಡುವೆ ಯಾವ ಸಂಬಂಧವೂ ಇಲ್ಲ, ಇರುವುದು ಕೇವಲ ಅಲ್ಲಾಹನ ಸಂಬಂಧ ಮಾತ್ರ. ಧರ್ಮಗಳೆಲ್ಲವೂ ಮಾನವರು ಮಾಡಿಕೊಂಡಿರುವುದು. ಅಲ್ಲಾಹನು ಜ್ಯೋತಿಸ್ವರೂಪನು ಹಾಗೆಯೇ ನಾವೂ ಸಹ ಜ್ಯೋತಿಸ್ವರೂಪರು. ಆದರೆ ನಮಗೆ ಆಸೆಗಳವೆ ಮತ್ತು ಅದನ್ನು ಪೂರೈಸಿಕೊಳ್ಳುವುದಕ್ಕಾಗಿ ಭೂಮಿಗೆ ಬಂದಿರುವೆವು.

## ಈ ಅಜ್ಞಾನ ಮತ್ತು ಅಂಧಕಾರದಿಂದಾಗಿ

"ವಾಸ್ತವವಾಗಿ ಅವರ ಪೈಕಿ ಹೆಚ್ಚಿನವರು ಊಹೆ ಮತ್ತು ಗುಮಾನಿಗಳನ್ನು ಮಾತ್ರ ಹಿಂಬಾಲಿಸುತ್ತಾರೆ. ವಸ್ತುತಃ ಗುಮಾನಿಯು ಸತ್ಯದ ಅವಶ್ಯಕತೆಯನ್ನು ಎಷ್ಟಕ್ಕೂ ಪೂರೈಸುವುದಿಲ್ಲ. ಇವರು ಮಾಡುತ್ತಿರುವುದನ್ನೆಲ್ಲಾ ಅಲ್ಲಾಹನು ಚೆನ್ನಾಗಿ ಅರಿಯುತ್ತಾನೆ." (ಪವಿತ್ರ ಕುರ್‌ಆನ್: ೧೦–೩೬) (ಅಲ್ಲಾಹನ ಅನುಗ್ರಹದಿಂದ ಸತ್ಯವನ್ನು ಕಂಡುಕೊಳ್ಳಬೇಕು.)

## ಅಲ್ಲಾಹ್‌ನನ್ನು ತಿರಸ್ಕರಿಸಿದರೆ ಅವರನ್ನು ಅಲ್ಲಾಹ್ ಸಹ ತಿರಸ್ಕರಿಸುವನು

“ಅಲ್ಲಾಹ್ ತನ್ನನ್ನು ತಿರಸ್ಕರಿಸುವವರನ್ನು ತಾನು ತಿರಸ್ಕರಿಸಿ ಅವರನ್ನು ದಂಡಿಸುವನು. ಹೇ ಜನರೇ, ನಿಮಗಿಂತ ಮುಂಚಿನ ಜನಾಂಗಗಳು ಅಕ್ರಮವೆಸಗಿದಾಗ ನಾವು ಅವುಗಳನ್ನು ನಾಶಗೊಳಿಸಿದೆವು...” (ಪವಿತ್ರ ಕುರ್‌ಆನ್: ೧೦–೧೩)

“ಫಿರ್‌ಔನನ ಜನಾಂಗ ಮತ್ತು ಅವರಿಗಿಂತ ಮುಂಚಿನ ಇತರ ಜನಾಂಗಗಳೊಂದಿಗೆ ಸಂಭವಿಸುತ್ತ ಬಂದಂತೆ ಅವರ ಮೇಲೂ ಸಂಭವಿಸಿತು. ಅವರು ಅಲ್ಲಾಹನ ನಿದರ್ಶನಗಳನ್ನು ನಿರಾಕರಿಸಿದರು ಮತ್ತು ಅಲ್ಲಾಹನ ಅವರ ಪಾಪಗಳಿಗೆ ಅವರನ್ನು ಹಿಡಿದುಬಿಟ್ಟನು. ಅಲ್ಲಾಹನು ಪ್ರಬಲನೂ ಅತ್ಯಂತ ಕಠಿಣವಾಗಿ ದಂಡಿಸುವವನೂ ಆಗಿರುತ್ತಾನೆ.” (ಪವಿತ್ರ ಕುರ್‌ಆನ್: ೮–೫೨)

“ಇದೇಕೆಂದರೆ ಅಲ್ಲಾಹನು ಯಾವುದೇ ಜನಾಂಗದ ಮೇಲೆ ತೋರಿದ ಕೃಪೆಯನ್ನು ಆ ಜನಾಂಗ ತನ್ನನ್ನು ತಾನೇ ಬದಲಾಯಿಸಿಕೊಳ್ಳುವವರೆಗೂ ಬದಲಾಯಿಸುವ ಪರಿಪಾಟ ಅವನಿಗಿಲ್ಲ. ಅಲ್ಲಾಹ್ ಸರ್ವಶ್ರುತನೂ ಸರ್ವಜ್ಞನು ಆಗಿರುತ್ತಾನೆ.” (ಪವಿತ್ರ ಕುರ್‌ಆನ್: ೮–೫೩)

“ಪಿರ್‌ಔನನ ಜನಾಂಗ ಮತ್ತು ಅದಕ್ಕಿಂತ ಮುಂಚಿನ ಜನಾಂಗದವರ ಮೇಲೆ ಸಂಭವಿಸಿದುದೆಲ್ಲ ಇದೇ ನಿಯಮಕ್ಕನುಸಾರವಾಗಿತ್ತು. ಅವರು ತಮ್ಮ ಪ್ರಭುವಿನ ನಿದರ್ಶನಗಳನ್ನು ಸುಳ್ಳಾಗಿಸಿದರು. ಆಗ ನಾವು ಅವರ ಪಾಪಗಳ ಫಲವಾಗಿ ಅವರನ್ನು ನಾಶಗೊಳಿಸಿದೆವು ಮತ್ತು ಫಿರ್‌ಔನನ ಜನಾಂಗವನ್ನು ಮುಳುಗಿಸಿದೆವು. ಇವರೆಲ್ಲರೂ ಅಕ್ರಮಿಗಳಾಗಿದ್ದರು.” (ಪವಿತ್ರ ಕುರ್‌ಆನ್: ೮–೫೪)

“ನಿಮಗಿಂತ ಮುಂಚೆ ಒಂದು ಜನಾಂಗವು ಇದೇ ತರದ ಪ್ರಶ್ನೆಗಳನ್ನು ಕೇಳಿತ್ತು (ನಿಮಗೆ ಅಪ್ರಿಯವಾಗಬಹುದಾದಂತಹ ವಿಷಯಗಳ ಬಗ್ಗೆ ಪ್ರಶ್ನಿಸಬೇಡಿ). ಮುಂದೆ ಅವರು ಈ ವಿಷಯಗಳಿಂದಾಗಿಯೇ ‘ಸತ್ಯನಿಷೇಧದಲ್ಲಿ ಸಿಲುಕಿಬಿಟ್ಟರು’.” (ಪವಿತ್ರ ಕುರ್‌ಆನ್: ೫–೧೦೨)

“.... ಇಷ್ಟಾಗಿಯೂ ಜನರು ‘ಯಕ್ಷರನ್ನು ಅಲ್ಲಾಹನಿಗೆ ಸಹಭಾಗಿಗಳಾಗಿಸಿಬಿಟ್ಟರು’ ವಸ್ತುತಃ ಅವನು ಅವರನ್ನು ಸೃಷ್ಟಿಸಿದವನು. ಆದರೆ ಅವರು ವಿಚಾರ ಮಾಡದೆ ಅವನಿಗೆ ಪುತ್ರ ಮತ್ತು ಪುತ್ರಿಯರನ್ನು ಕಲ್ಪಸಿಕೊಂಡನು....”
(ಪವಿತ್ರ ಕುರ್‌ಆನ್: ೬–೧೦೦)

“ನಿಶ್ಚಯವಾಗಿಯೂ ಭೂಮಿಯ ಮೇಲೆ ಚಲಿಸುವ ಸೃಷ್ಟಿಗಳಲ್ಲಿ ಸತ್ಯವನ್ನು ನಿರಾಕರಿಸುವವರೇ ಅಲ್ಲಾಹನ ಬಳಿ ಅತ್ಯಂತ ನಿಕೃಷ್ಟರು. ಅವರು ಎಷ್ಟು ಮಾತ್ರಕ್ಕೂ ವಿಶ್ವಾಸವಿರಿಸುವವರಲ್ಲ.” (ಪವಿತ್ರ ಕುರ್‌ಆನ್: ೮–೫೫)

“ಓ ಪೈಗಂಬರರೇ, ನಾವು ನೂಹ್ ಮತ್ತು ಆನಂತರದ ಪ್ರವಾದಿಗಳ ಕಡೆಗೆ ದಿವ್ಯವಾಣಿ ಕಳುಹಿಸಿದಂತೆಯೇ ನಿಮ್ಮ ಕಡೆಗೂ ‘ದಿವ್ಯವಾಣಿ’ ಕಳುಹಿಸಿರುತ್ತೇವೆ. ನಾವು ಇಬ್ರಾಹಿಮ್, ಇಸ್ಮಾಈಲ್, ಇಸ್ಹಾಕ್, ಯಲ್‌ಕೂಬ್ ಮತ್ತು ಯಲ್‌ಕೂಬರ ಸಂತತಿ, ಈಸಾ, ಅಯ್ಯೂಬ್, ಯೂನಸ್, ಹಾರೂನ್ ಮತ್ತು ಸುಲೈಮಾನರ ಕಡೆಗೂ ‘ದಿವ್ಯವಾಣಿ’ ಕಳುಹಿಸಿದೆವು. ನಾವು ದಾವೂದರಿಗೂ ‘ಝುಬೂರ್’ ನೀಡಿದೆವು.” (ಪವಿತ್ರ ಕುರ್‌ಆನ್: ೩–೧೬೩)

## ಅಲ್ಲಾಹ್‌ನ ಸಂದೇಶವನ್ನು ತಿರಸ್ಕರಿದರೆ ಎಚ್ಚರಿಕೆ

“ಅಲ್ಲಾಹ್ ಅವನ ಸಂದೇಶವಾಹಕರನ್ನು ನಿಷೇದಿಸುವವರೂ, ಅಲ್ಲಾಹ್ ಹಾಗು ಅವನ ಸಂದೇಶವಾಹಕರ ನಡುವೆ ತಾರತಮ್ಯ ಮಾಡಬೇಕೆಂದು ಬಯಸುವವರೂ, ನಾವು ಕೆಲವರನ್ನು ಸ್ವೀಕರಿಸುವೆವು ಇನ್ನು ಕೆಲವರನ್ನು ನಿಷೇಧಿಸುವೆವು ಎನ್ನುತ್ತ ಸತ್ಯನಿಷೇಧ ಮತ್ತು ಸತ್ಯವಿಶ್ವಾಸದ ಮಧ್ಯೆ ಒಂದು ನಡುಮಾರ್ಗವನ್ನು ಸ್ವೀಕರಿಸುವ ಇಚ್ಛೆಯುಳ್ಳವರೂ ನೈಜ ಸತ್ಯನಿಷೇಧಿಗಳಾಗಿದ್ದಾರೆ.” (ಪವಿತ್ರ ಕುರ್‌ಆನ್: ೩–೧೫೦)

“ನೀವು ಇತರರಿಗೆ ಸನ್ಮಾರ್ಗವನ್ನನುಸರಿಸಲು ಉಪದೇಶ ನೀಡುತ್ತೀರಿ. ಆದರೆ ನಿಮ್ಮನ್ನು ನೀವು ಮರೆತೇ ಬಿಡುತ್ತೀರಾ? ವಸ್ತುತಃ ನೀವು ದಿವ್ಯ ಗ್ರಂಥವನ್ನು ಪಠಿಸುತ್ತೀರಿ. ನೀವು ಒಂದಿಷ್ಟೂ ಯೋಚಿಸುವುದಿಲ್ಲವೇ?”( ಪವಿತ್ರ ಕುರ್‌ಆನ್: ೨–೪೪)

“ಹೀಗೆ ಸತ್ಯನಿಷೇಧ ಹಾಗೂ ವಿದ್ರೋಹ ಮಾರ್ಗವನ್ನು ಸ್ವೀಕರಿಸಿಕೊಂಡು ಅನ್ಯಾಯ ಅತ್ಯಾಚಾರಕ್ಕಿಳಿದವರನ್ನು ಅಲ್ಲಾಹನು ಎಂದಿಗೂ ಕ್ಷಮಿಸಲಾರನು.” (ಪವಿತ್ರ ಕುರ್‌ಆನ್: ೩–೧೬೮)

(ಬೇರೆ ಬೇರೆ ವಿಗ್ರಹ ದೇವತೆಗಳನ್ನು ಅಲ್ಲಾಹನೆಂದು ಪೂಜಿಸುವುದನ್ನು ಸತ್ಯ ನಿಷೇಧವಾಗುತ್ತದೆ ಎಂಬುದನ್ನು ಎಲ್ಲರೂ ಗಮನಿಸಬೇಕು)

"ಮತ್ತು ಅವರಿಗೆ ನರಕದ ವಿನಾ ಬೇರಾವ ಮಾರ್ಗವನ್ನು ತೋರಿಸಲಾರನು. ಅವರು ಅದರಲ್ಲೇ ಸದಾಕಾಲ ವಾಸಿಸುವರು. ಅಲ್ಲಾಹನಿಗೆ ಇದೇನೂ ಕಷ್ಟಕಾರ್ಯವಲ್ಲ." (ಪವಿತ್ರ ಕುರ್‌ಆನ್: ೩–೧೬೯)

## ಸಮಾಜವನ್ನು ತಿದ್ದುವ ಕೆಲಸ ಮಾಡುವವರು

ಕೆಲವರು ತಾವು ಸ್ವತಃ ಅಲ್ಲಾಹನ ಬಗೆಗೆ ಏನನ್ನೂ ತಿಳಿಯದಿದರೂ ಸಮಾಜಕ್ಕೆ ಉಪದೇಶವನ್ನು ಮಾಡುತ್ತಾರೆ. ಕೇವಲ ಕುರ್‌ಆನ್‌ನನ್ನು ತಮ್ಮ ಬುದ್ದಿಶಕ್ತಿಯಿಂದ ಕಲಿತುಕೊಂಡು ತಾವು ಅಲ್ಲಾಹನ ಬಗ್ಗೆ ಎಲ್ಲವನ್ನು ತಿಳಿದಿದ್ದೇವೆಂದು ಬಾವಿಸುತ್ತಾರೆ.

"ಭೂಮಿಯ ಮೇಲೆ ಕ್ಷೋಭೆಯನ್ನುಂಟು ಮಾಡದಿರಿ ಎಂದು ಅವರೊಂದಿಗೆ ಹೇಳಿದಾಗೆಲ್ಲಾ ಅವರು, 'ನಾವು ಸುಧಾರಕರು ಮಾತ್ರ' ಎಂದು ಹೇಳುತ್ತಾರೆ. ಜಾಗ್ರತೆ, ವಾಸ್ತವದಲ್ಲಿ ಅವರೇ ಗೊಂದಲಕಾರಿಗಳು. ಆದರೆ ಅವರಿಗೆ ಬೋದವಿರುವುದಿಲ್ಲ." (ಪವಿತ್ರ ಕುರ್‌ಆನ್: ೨–೧೧, ೧೨)

ಆದ್ದರಿಂದ ದಾರಿ ತಪ್ಪಿಸುವ ವ್ಯಕ್ತಿಗಳಿಂದ ದೂರವಿರಿ.

## ಕೇವಲ ಪವಿತ್ರ ಕುರ್‌ಆನ್ ಪಠನೆಯಿಂದ ಲಾಭವಿಲ್ಲ

ಅಲ್ಲಾಹನ ಅನುಗ್ರಹವನ್ನು ಪಡೆಯುವುದೇ ಬಹಳ ಮುಖ್ಯವಾಗಿದೆ. ಇದು ನೈಜ ಪ್ರಾರ್ಥನೆಯಿಂದ ಮಾತ್ರ ಸಾಧ್ಯ. ಅಲ್ಲಾಹನ ಮಾರ್ಗದಲ್ಲಿ ಮುಂದುವರೆಯಬೇಕಾದರೆ ತಿಳಿದವರನ್ನು ಗುರುಗಳಾಗಿ ಸ್ವೀಕರಿಸಬೇಕು.

## ಸಕಲರೂ ವಿದ್ಯೆಯನ್ನು ಕಲಿಯಬೇಕು

ಏಕೆಂದರೆ ವಿದ್ಯೆಯಿಂದ ವಿವೇಚನಾಶಕ್ತಿಯು ಬೆಳೆಯುವುದು.

"ಅವರ ಪೈಕಿ ಇನ್ನೊಂದು ಪಂಗಡವು ನಿರಕ್ಷರಿಗಳದ್ದಿದೆ. ಅವರು ಗ್ರಂಥ ಜ್ಞಾನವನ್ನೇನೂ ಹೊಂದಿರುವುದಿಲ್ಲ. ಕೇವಲ ತಮ್ಮ ನಿರಾಧಾರ ಭರವಸೆ ಹಾಗೂ ಆಕಾಂಕ್ಷೆಗಳಲ್ಲಿದ್ದುಕೊಂಡು ಕೆಲವು ಊಹಾಪೋಹಗಳಲ್ಲೇ ನಿರತರಾಗಿದ್ದಾರೆ." (ಪವಿತ್ರ ಕುರ್‌ಆನ್: ೨–೭೮)

"ವಾಸ್ತವದಲ್ಲಿ ಅವರ ಪೈಕಿ ಹೆಚ್ಚಿನವರು ಊಹೆ ಮತ್ತು ಗುಮಾನಿಗಳನ್ನು ಮಾತ್ರ ಹಿಂಬಾಲಿಸುತ್ತಾರೆ. ವಸ್ತುತಃ ಗುಮಾನಿಯು ಸತ್ಯದ ಅವಶ್ಯಕತೆಯನ್ನು ಎಷ್ಟಕ್ಕೂ ಪೂರೈಸುವುದಿಲ್ಲ. ಇವರು ಮಾಡುತ್ತಿರುವುದನ್ನೆಲ್ಲಾ ಅಲ್ಲಾಹನು ಚೆನ್ನಾಗಿ ನೋಡುತ್ತಿರುವನು." ((ಪವಿತ್ರ ಕುರ್‌ಆನ್: ೧೦–೩೬)

ಅಲ್ಲಾಹನು ವಿಚಾರಶೀಲತೆಯನ್ನು ಧಿಕ್ಕರಿಸಿರುವ ಅರಬ್ಬರಿಗೆ ಈ ಪ್ರಶ್ನೆಯನ್ನು ಕೇಳುತ್ತಿರುವನು. ಪ್ರಶ್ನೆ ಕೇಳುವವರುನ್ನು ಅರಬ್ ಸಂಸ್ಕೃತಿಯು ಕಠಿಣ ಶಿಕ್ಷೆಗೆ ಗುರಿಪಡಿಸುತ್ತದೆ.

ಪ್ರವಾದಿಗಳು ಇಸ್ಲಾಮ್‌ಅನ್ನು ಸ್ಥಾಪಿಸಿದ ಮೇಲೆ ಮತ್ತೆ ಅದನ್ನು ಪೃಥ್ವಿಯಲ್ಲೆಲ್ಲಾ ಸ್ಥಾಪಿಸಲು ಕ್ಷೋಭೆಯನ್ನುಂಟು ಮಾಡಬಾರದು

"ಭೂಮಿಯಲ್ಲಿ ಸುಧಾರಣೆಯಾಗಿರುವಾಗ (ಇಸ್ಲಾಮ್ ನೆಲೆಸಿದ ಮೇಲೆ) ಕ್ಷೋಭೆಯನ್ನು ಮಾಡಬೇಡಿರಿ...."

(ಪವಿತ್ರ ಕುರ್‌ಆನ್: ೭–೫೬)

ಈ ಸೂಕ್ತವು ಇಸ್ಲಾಮ್‌ಅನ್ನು ಸ್ಥಾಪಿಸುವಾಗ ಬಂದಿರುವುದು. ಕೆಲವರು ಪೃಥ್ವಿಯ ಮೇಲೆ ಇಸ್ಲಾಮ್ ಧರ್ಮವನ್ನು ಸ್ಥಾಪಿಸಲು ಪ್ರಯತ್ನಿಸುತ್ತಿರುವರು. ಈಗ ಇಸ್ಲಾಮ್ ಮತ ಸ್ಥಾಪನೆಗಾಗಿ ಭೂಮಿಯಲ್ಲಿ ಕ್ಷೋಭೆಯನ್ನುಂಟು ಮಾಡುವುದನ್ನು ಅಲ್ಲಾಹನು ಸಹಿಸುವುದಿಲ್ಲ.

## ಇತರರು ಅಲ್ಲಾಹನನ್ನು ಒಪ್ಪಿಕೊಳ್ಳುವಂತೆ ಬಲಪ್ರಯೋಗವನ್ನು ಮಾಡಬಹುದೇ?

"ಯಾರೊಬ್ಬನೂ ಅಲ್ಲಾಹನ ಅನುಮತಿಯ ಹೊರತು ವಿಶ್ವಾಸವಿಡಲಾರನು. ಬುದ್ಧಿಶಕ್ತಿಯನ್ನು ಉಪಯೋಗಿಸದವರ ಮೇಲೆ ಅಲ್ಲಾಹ್ ಕೊಳೆಯನ್ನು ಹೇರುತ್ತಾನೆ." (ಪವಿತ್ರ ಕುರ್‌ಆನ್: ೧೦–೧೦೦)

"(ಭೂಮಿಯಲ್ಲಿರುವವರೆಲ್ಲರೂ ಸತ್ಯವಿಶ್ವಾಸಿಗಳು ಮತ್ತು ಆಜ್ಞಾಪಾಲಕರೇ ಆಗಿರಬೇಕೆಂದು) ನಿಮ್ಮ ಪ್ರಭುವಿನ ವಿಧಿ ನಿಯಮವಿರುತ್ತಿದ್ದರೆ, ಭೂಮಿವಾಸಿಗಳೆಲ್ಲರೂ ವಿಶ್ವಾಸವಿಟ್ಟೇತೀರುತ್ತಿದ್ದರು. ಹೀಗಿರುವಾಗ ಜನರೆಲ್ಲರೂ ಸತ್ಯವಿಶ್ವಾಸಿಗಳಾಗಬೇಕೆಂದು ನೀವು ಒತ್ತಾಯಪಡಿಸುವಿರಾ? (ಪವಿತ್ರ ಕುರ್‌ಆನ್: ೧೦–೯೯)

ಅಲ್ಲಾಹನಿಗೆ ಮೊದಲೇ ಗೊತ್ತಿತ್ತು ಕೆಲವರು ಈ ರೀತಿ ವರ್ತಿಸುವರೆಂದು. ಆದರೆ ಪ್ರತಿಯೊಬ್ಬರೂ ಶೈತಾನನಿಂದ ಆವರಿಸಿಕೊಳ್ಳಲ್ಪಟ್ಟಿದ್ದಾರೆ. ಎಲ್ಲರೂ ಶೈತಾನನು ಹೇಳಿದ ಹಾಗೆ ಕೇಳುತ್ತಿದ್ದಾರೆ. ಕೆಲವರು ಶೈತಾನನಿಂದಾಗಿ ಕ್ರೂರಕಾರ್ಯಗಳಲ್ಲಿ ತೊಡಗುತ್ತಾರೆ ಮತ್ತು ತಮ್ಮ ವಿಶ್ವಾಸವನ್ನು ಅಂದರೆ ವಹಾಬಿ, ತಾಲಿಬಾನ್, ಸುನ್ನಿ, ಶಿಯಾ, ಜಾತಿ, ಮತ್ತು ಪಂಗಡವು ಶ್ರೇಷ್ಠವೆಂದು ಇತರರ ಮೇಲೆ ಹೇರಲು ಬಯಸುತ್ತಾರೆ.

## ನಾವು ನಮಗೆ ಮಾತ್ರ ಜವಾಬ್ದಾರರು

"ಓ ಸತ್ಯವಿಶ್ವಾಸಿಗಳೇ, ನೀವು ನಿಮ್ಮ ಬಗ್ಗೆ ಚಿಂತಿಸಿಕೊಳ್ಳಿರಿ. ನೀವು ಸ್ವತಃ ಸತ್ಪಥದಲ್ಲಿದ್ದರೆ ಇತರರ ಪಥಭ್ರಷ್ಟತೆಯಿಂದ ನಿಮಗೇನೂ ಕೇಡುಂಟಾಗದು.... " (ಪವಿತ್ರ ಕುರ್‌ಆನ್: ೫–೧೦೫)

ಇತರರನ್ನು ಪರಿವರ್ತಿಸಿದಾಗ ನಮಗೇನು ಲಾಭವಿಲ್ಲ. ಅದರಿಂದ ನಮ್ಮ ಅಹಂಕಾರವು ಬೆಳೆಯುವುದು ಮತ್ತು ಇದು ಶೈತಾನನ ಲಕ್ಷಣವೆಂಬುದನ್ನು ತಿಳಿದುಕೊಳ್ಳಿರಿ. ಪವಿತ್ರ ಕುರ್‌ಆನ್‌ನ ಜ್ಞಾನವನ್ನು ಸಕಲರಿಗೂ ಹಂಚಬೇಕೆಂದು ಅಲ್ಲಾಹನ ಅಪ್ಪಣೆಯಾಗಿದ್ದರೂ, ತಾವೇ ಶ್ರೇಷ್ಟರು ಎಂಬ ಅಹಂಕಾರದಿಂದ ಇತರರಿಗೆ ಬೋಧನೆ ಮಾಡುವುದು ಅನುಚಿತವಾಗಿರುತ್ತದೆ.

## ಮುಸ್ಲೀಮರಿಗೆ ಐದು ವೇಳೆ ನಮಾಜನ್ನು ಹೇಳಿದ್ದರೂ, ಪವಿತ್ರ ಕುರಾನ್ ಏನು ಹೇಳುತ್ತದೆ.

"..... ಪ್ರಭಾತ ಪ್ರದೋಷಗಳಲ್ಲಿ ಅವನ ಸ್ತುತಿಗೈಯುತ್ತಿರಬೇಕು." (ಪವಿತ್ರ ಕುರ್‌ಆನ್: ೩–೪೧)

"ಯಾರು ತಮ್ಮ ಪ್ರಭುವನ್ನು ಸಂಜೆ ಮುಂಜಾನೆಗಳಲ್ಲಿ ಪ್ರಾರ್ಥಿಸುತ್ತಾರೋ ಹಾಗೂ ಅವನ ಸಂಪ್ರೀತಿಯನ್ನರಸುತ್ತಿರುತ್ತಾರೋ ಅವರನ್ನು ನಿಮ್ಮಿಂದ ದೂರಕ್ಕೆ ಅಟ್ಟಬೇಡಿರಿ....." (ಪವಿತ್ರ ಕುರ್‌ಆನ್: ೬–೫೨)

"ಓ ಪೈಗಂಬರರೇ, ನಿಮ್ಮ ಪ್ರಭುವನ್ನು ಸಂಜೆ ಮುಂಜಾನೆಗಳಲ್ಲಿ ಮನಸ್ಸಿನೊಳಗೂ ಭಯಭರಿತರಾಗಿಯೂ ಮೆಲುದನಿಯೊಂದಿಗೆ ಸ್ಮರಿಸುತ್ತಲಿರಿ....." (ಪವಿತ್ರ ಕುರ್‌ಆನ್: ೭–೨೦೫)

ಬೆಳಗಿನ ಪ್ರಾರ್ಥನೆಯು ಬಹಳ ಮುಖ್ಯವಾಗಿದೆ. ಸೂರ್ಯೋದಯದ ಕಾಲದಲ್ಲಿ ಪೃಥ್ವಿಯ ಮೇಲೆ ಶಾಂತ ವಾತಾವರಣವಿರುತ್ತದೆ. ಸಕಲ ಜೀವರಾಶಿಗಳು ಉಲ್ಲಾಸಭರಿತರಾಗಿರುತ್ತಾರೆ. ಸೂರ್ಯನ ಕಿರಣಗಳು ಇನ್ನು ಉದಯವಾಗದಿರುವುದರಿಂದ ಸೂರ್ಯನಿಂದ ಹೊರಹೊಮ್ಮುತ್ತಿರುವ ಪ್ರಾಣಶಕ್ತಿಯು (ಹೋಲಿಸ್ಪಿರಿಟ್) ಸೌಮ್ಯವಾಗಿರುತ್ತದೆ. ಆದ್ದರಿಂದ ಈ ಕಾಲವು ಬಹಳ ಶ್ರೇಷ್ಠವಾಗಿದೆ. ಅಲ್ಲಾಹನು ಮತ್ತು ಸಕಲ ದೇವತೆಗಳು ಆಹ್ವಾನಿಸಿದವರ ಬಳಿ ಬರುತ್ತಾರೆ.

"ಸೂರ್ಯನ ಇಳಿಮುಖಾರಂಭದಿಂದ ನಿಶಾಂಧಕಾರದ ತನಕ ನಮಾಝನ್ನು ಸಂಸ್ಥಾಪಿಸಿರಿ ಮತ್ತು ಪ್ರಾತಃಕಾಲದ ಕುರ್‌ಆನ್‌ನನ್ನು ರೂಢಿಗೊಳಿಸಿಕೊಳ್ಳಿರಿ. ಏಕೆಂದರೆ ಪ್ರಾತಃಕಾಲದ ಕುರ್‌ಆನ್ ಪ್ರಮಾಣಿತವಾಗಿದೆ."

ಋಗ್ವೇದದ ಪ್ರಕಾರವೂ ಸಹ ಪ್ರಾತಃಕಾಲವು, ಯಜ್ಞದಿಂದ ಅಲ್ಲಾಹ್ ಮತ್ತು ದೇವಚರರನ್ನು ವೇದಮಂತ್ರಗಳಿಂದ ಆರಾಧಿಸುವುದಕ್ಕೆ ಬಹಳ ಶ್ರೇಷ್ಟವಾಗಿದೆ ಯಾರಿಗೆ ಮಧ್ಯಾನ್ಹದ ವೇಳೆ ಸಮಯವಿರುವುದೋ ಅಥವಾ ನಿವೃತ್ತರಾಗಿರುವರೋ ಅವರು ಮೂರು ವೇಳೆ ಅಲ್ಲಾಹನ ಪ್ರಾರ್ಥನೆಯನ್ನು ಮಾಡಬಹುದು.

ಆದರೆ ಪೈಗಂಬರ್‌ರವರು ೫ ಬಾರಿ ನಮಾಜ್ ಮಾಡುವ ಅಪ್ಪಣೆಯನ್ನು ಅಲ್ಲಾಹನಿಂದ ಪಡೆದಿರುವರು.

## ನಮಗೇ ಗೊತ್ತಿದೆ ಮರಣದ ನಂತರ ನಾವು ಎಲ್ಲಿಗೆ ಹೋಗುತ್ತೇವೆಂದು–ಸ್ವರ್ಗಕ್ಕೋ ನರಕಕ್ಕೋ

"ಪ್ರತಿಯೊಬ್ಬ ಮನುಷ್ಯನು ಶಕುನವನ್ನು (ಕರ್ಮಪತ್ರ) ನಾವು ಅವನ ಕೊರಳಿಗೆ ಕಟ್ಟಿ ಬಿಡುತ್ತೇವೆ. ಪುನರುತ್ಥಾನದ ದಿನದಂದು ನಾವು ಅವನಿಗಾಗಿ ಒಂದು ಲಿಖಿತವನ್ನು ಹೊರಡಿಸುವೆವು. ಅವನು ಅದನ್ನು ತೆರೆದ ಗ್ರಂಥದಂತೆ ಕಾಣುವನು. ನಿನ್ನ ಕರ್ಮಪತ್ರವನ್ನು ಓದು. ಇಂದು ನಿನ್ನ ಲೆಕ್ಕ ತೆಗೆಯಲು ನೀನೆ ಸಾಕು." (ಪವಿತ್ರ ಕುರ್‌ಆನ್: ೧೭–೧೩ ಮತ್ತು ೧೪)

## ನಾವು ಮರಣಿಸಿದರೂ ಜೀವಂತವಾಗಿರುತ್ತೇವೆ

ಅಲ್ಲಾಹನ ಭಕ್ತರಾಗಲಿ ಶೈತಾನನ ವಶದಲ್ಲಿರುವವರಾಗಲಿ ಮರಣದ ನಂತರವೂ ಜೀವಂತರಾಗಿರುತ್ತಾರೆ. ಇಲೋಹಿಂ ಸೃಷ್ಟಿಸಿದ ಸ್ಥೂಲಶರೀರವು ಮಾತ್ರ ಮಣ್ಣಾಗುತ್ತದೆ ಆದರೆ ಸ್ಥೂಲಶರೀರದಲ್ಲಿರುವ ಮನಸ್ಸು ಮತ್ತು ಪ್ರಾಣಶರೀರ ಜೀವಂತವಾಗಿರುತ್ತದೆ. ಇದನ್ನು ಪ್ರೇತ  ಎಂದು ಕರೆಯುತ್ತಾರೆ. ಪುಣ್ಯ ಕಾರ್ಯಗಳನ್ನು ಮಾಡಿದವರು ಸಪ್ತಸ್ವರ್ಗಗಳಲ್ಲಿ ಒಂದಕ್ಕೆ ಹೋಗುತ್ತಾರೆ ಮತ್ತು ಪಾಪಿಗಳು ನರಕಕ್ಕೆ ಹೋಗುತ್ತಾರೆ. ಸೂಕ್ಷ್ಮಶರೀರ ಮತ್ತು ಸ್ವರ್ಗದ ಆಡಮ್ ದೈವೀಶರೀರವಾಗುವುದರಿಂದ ಅದು ವಿಶ್ವಮಾನವನ/ವಿರಾಟ್‌ಪುರುಷನ ಬಳಿ ಹೋಗುವುದು.

"......ಓ ಪೈಗಂಬರರೇ, ಮರಣಾನಂತರ ನೀವು ಇನ್ನೊಮ್ಮೆ ಎಬ್ಬಿಸಲ್ಪಡುವಿರಿರೆಂದು ಅವರೊಡನೆ ಹೇಳಿದಾಗ ಸತ್ಯನಿಷೇದಿಗಳು, "ಇದಂತು ಸುಸ್ಪಷ್ಟ ಮಾಟಗಾರಿಕೆ" ಎಂದು ತಟ್ಟನೆ ಹೇಳಿಬಿಡುವರು." (ಪವಿತ್ರ ಕುರ್‌ಆನ್: ೧೧-೭)

ಮಾನವರು ಅಂದರೆ ಹೋಲಿಸ್ಪಿರಿಟ್-ಮನಸ್ಸಿನ ಶರೀರವು ಕೆಲಕಾಲ ಸಪ್ತಮಸ್ವರ್ಗದಲ್ಲಿದ್ದು ಮತ್ತೆ ಹುಟ್ಟುತ್ತಾರೆ. ನರಕದಲ್ಲಿದ್ದವರು ಪ್ರಾಣಿಗಳಾಗಿ ಹುಟ್ಟುತ್ತಾರೆಂದು ಭಾರತದ ಋಷಿಗಳು ಹೇಳುತ್ತಾರೆ.

## ನಮ್ಮ ಪಾಪ ನಮಗೆ, ಅವರ ಪಾಪ ಅವರಿಗೆ

".....ಅವರು ಗಳಿಸಿದ್ದು ಅವರಿಗೆ ಮತ್ತು ನೀವು ಗಳಿಸಿದ್ದು ನಿಮಗೆ. ಅವರ ಕರ್ಮಗಳ ಕುರಿತು ನಿಮ್ಮೊಡನೆ ವಿಚಾರಣೆ ನಡೆಯಲಾರದು." (ಪವಿತ್ರ ಕುರ್‌ಆನ್: ೨-೧೩೪)

"ಅವರೊಡನೆ ಹೇಳಿರಿ, "ಅಲ್ಲಾಹ್ ನಮ್ಮ ಪ್ರಭುವೂ ನಿಮ್ಮ ಪ್ರಭುವೂ ಆಗಿರುವಾಗ, ನೀವು ಅಲ್ಲಾಹ ಬಗ್ಗೆ ನಮ್ಮೊಡನೆ ಜಗಳವಾಡುತ್ತೀರಾ? ನಮ್ಮ ಕರ್ಮಗಳು ನಮಗೆ, ನಿಮ್ಮ ಕರ್ಮಗಳು ನಿಮಗೆ, ನಾವು ನಮ್ಮ ದಾಸ್ಯ-ಆರಾಧನೆಯನ್ನು ಅಲ್ಲಾಹನಿಗೆ ನಿಷ್ಕಳಂಕಗೊಳಿಸಿದ್ದೇವೆ." (ಪವಿತ್ರ ಕುರ್‌ಆನ್: ೨-೧೩೯)

## ಯಹೂದಿಯರು ಅಥವಾ ಕ್ರೈಸ್ತರಿಗೆ ಮಾತ್ರವೇ ಸ್ವರ್ಗದೊಳಗೆ ಪ್ರವೇಶವೇ? ಅದಕ್ಕೆ ಉತ್ತರ

ಪುಸ್ತಕವನ್ನು ಇಲ್ಲಿಯವರೆಗೂ ಓದಿದ ಮೇಲೆ ಈ ಪ್ರಶ್ನೆಯು ಮೂರ್ಖತನವಾಗಿದೆಯೆಂದು ಎಲ್ಲರಿಗೂ ತಿಳಿಯುತ್ತದೆ. ಈ ವಿಷಯದ ಬಗ್ಗೆ ಅಲ್ಲಾಹನು ಏನು ಹೇಳಿರುವನು ಎಂಬುದನ್ನು ತಿಳಿಯೋಣ.

"ಹಾಗೇನೂ ಇಲ್ಲ. (ಅಂತಹ ವೈಶಿಷ್ಟ್ಯವೇನೂ ಯಾರಿಗೂ ಇಲ್ಲ) ಅಲ್ಲಾಹನಿಗೆ ಆತ್ಮಾರ್ಪಣೆಗೈಯುವ (ಪ್ರಾಣಾರ್ಪಣೆಯಲ್ಲ) ಮತ್ತು ಸತ್ಸಂಪ್ರದಾಯದಲ್ಲಿ ನಡೆಯುವಾತನು ಯಾರೇ ಇರಲಿ, ಅವನಿಗೆ ಅವನ ಪ್ರಭುವಿನ ಬಳಿ ಅವನ ಪ್ರತಿಫಲವಿದೆ. ಅಂತಹವರಿಗೆ ಯಾವುದೇ ಭಯ ಮತ್ತು ವ್ಯಥೆಯ ಸಂಭವವೇ ಇರಲಾರದು."
(ಪವಿತ್ರ ಕುರ್‌ಆನ್ ೨-೧೧೨)

ಪ್ರತಿಯೊಬ್ಬರೂ ಅವರವರ ಕರ್ಮಗಳಿಗೆ ಅವರೇ ಜವಾಬ್ದಾರರಾಗುತ್ತಾರೆ. ಜೀಸಸ್ ನಮ್ಮ ಪಾಪಗಳಿಗಾಗಿ ಶಿಲುಭೆಗೆ ಏರಿದನು ಎನ್ನುವುದು ಮೂರ್ಖತನ. ಬೈಬಲ್‌ನ ಈ ವಾಕ್ಯವನ್ನು ನೋಡಿ

ಮ್ಯಾಥ್ಯು ೭-೨೨: (ಕಿಯಾಮತ್‌ನ ದಿನ) ಆ ದಿನ ನನಗೆ ಬಹಳಷ್ಟು ಜನರು ಬಂದು ಹೇಳುವರು "ಪ್ರಭು ಪ್ರಭು, ನಿಮ್ಮ ಹೆಸರಲ್ಲಿ ಭವಿಷ್ಯವನ್ನು ಹೇಳಿರುವೆವು, ನಿಮ್ಮ ಹೆಸರಲ್ಲಿ ದೆವ್ವಗಳನ್ನು ಓಡಿಸಿರುವೆವು ಮತ್ತು ನಿಮ್ಮ ಹೆಸರಲ್ಲಿ ಅನೇಕ ಪವಾಡಗಳನ್ನು ಮಾಡಿರುವೆವು (ನಮ್ಮನ್ನು ರಕ್ಷಿಸಿ)" ಎಂದು ಹೇಳುವರು.

ಮ್ಯಾಥ್ಯು ೭-೨೩: ಆಗ ಅವರಿಗೆ ನಾನು ಹೇಳುವುದೇನೆಂದರೆ "ನಾನು ನಿಮ್ಮನ್ನು ತಿಳಿದಿಲ್ಲ, ಕೆಟ್ಟ ಕೆಲಸವನ್ನು ಮಾಡುವ ನೀವು ದೂರ ಹೋಗಿ"

ಇಂತಹ ಹೆಸರಾಂತ ಪಾದ್ರಿಗಳ ಕಥೆಯೇ ಈ ರೀತಿಯಾದರೆ, ಸಾಮಾನ್ಯ ಕ್ರೈಸ್ತರ ಗತಿ ಏನು?

ಆದ್ದರಿಂದ ಅಲ್ಲಾಹನ ಮೊರೆ ಹೋಗಿ ಪ್ರಾಥಿಸುವುದೇ ಸರಿಯಾದ ದಾರಿ. ಆದರೆ ಇದರ ಅರ್ಥ ಜೀಸಸ್‌ರವರನ್ನು ಅಗೌರಿಸುವುದಲ್ಲ. ಅವರ ಹೇಳಿಕೆಗಳಾದ ದೇವರ ರಾಜ್ಯ, ಸಣ್ಣ ದ್ವಾರ ಮತ್ತು ದೊಡ್ಡದಾದ ದ್ವಾರವನ್ನು

ಅರ್ಥಮಾಡಿಕೊಂಡು ಅದರಂತೆ ನಡೆಯುವುದೇ ಸರಿ ದಾರಿಯಾಗಿದೆ. ನಾವು ಮಾಡುವ ನಮ್ಮ ಕರ್ಮಗಳಿಂದಲೇ ಗೊತ್ತಾಗುತ್ತದೆ, ನಾವು ಸ್ವರ್ಗಕ್ಕೆ ಹೋಗುತ್ತೇವೋ ಅಥವಾ ನರಕಕ್ಕೆ ಹೋಗುತ್ತೇವೋ ಎಂದು.

## ಅಧಿಕಾರಿಗಳಾಗಲಿ ಇತರ ಯಾರಾದರೂ ಆಗಲಿ ತಮ್ಮ ಕೆಳಗಿನವರನ್ನು ಬೈಯ್ಯುವುದನ್ನು ಮೆಚ್ಚುವುದಿಲ್ಲ.

"ಮನುಷ್ಯನು ಬಯ್ಗುಳಗಳನ್ನು ಅಲ್ಲಾಹ್ ಮೆಚ್ಚುವುದಿಲ್ಲ. ಆದರೆ ಮರ್ದಿತನು ಇದಕ್ಕೆ ಹೊರತಾಗಿದ್ದಾನೆ....." (ಪವಿತ್ರ ಕುರ್‌ಆನ್ ೪–೧೪೮) (ಶೋಷಿತನು ಶೋಷಕನ ವಿರುದ್ಧ ಸ್ವರ ಎತ್ತುವ ಹಕ್ಕಿದೆ)

ಅಧಿಕಾರಿಗಳು ಮತ್ತು ಪೋಲಿಸರು ದರ್ಪದಿಂದ ಇತರರನ್ನು ತಿರಸ್ಕಾರದಿಂದ ನೋಡುವವರು ಎಚ್ಚರವಾಗಿರಬೇಕು.

## ಇತರರೊಡನೆ ನಮ್ಮ ವರ್ತನೆ ಹೇಗಿರಬೇಕು?

"ಜನರೊಡನೆ ಮುಖ ತಿರುಗಿಸಿ ಮಾತಾಡಬೇಡ. ಭೂಮಿಯ ಮೇಲೆ ದರ್ಪದಿಂದ ನಡೆಯಬೇಡ, ದುರಭಿಮಾನ ಹಾಗು ಅಹಂಕಾರಪಡುವವನನ್ನು ಅಲ್ಲಾಹನು ಮೆಚ್ಚುವುದಿಲ್ಲ." (ಪವಿತ್ರ ಕುರ್‌ಆನ್ ೩೧–೧೮)

"ನಿನ್ನ ನಡೆಯಲ್ಲಿ ಇತಿಮಿತಿಯನ್ನಿರಿಸು. ನಿನ್ನ ಸ್ವರವನ್ನು ಸ್ವಲ್ಪ ತಗ್ಗಿಸು. ಎಲ್ಲಾ ಸ್ವರಗಳಿಗಿಂತ ಕೆಟ್ಟ ಸ್ವರವು ಕತ್ತೆಯ ಸ್ವರವಾಗಿರುತ್ತದೆ." (ಪವಿತ್ರ ಕುರ್‌ಆನ್ ೩೧–೧೯)

## ಸುಮ್ಮಸುಮ್ಮನೆ ಆಣೆ ಪ್ರಮಾಣ ಮಾಡಬೇಡಿ.

"ನೀವು ಮಾಡುವ ಅರ್ಥವಿಲ್ಲದ ಶಪಥಗಳಿಗೆ ಅಲ್ಲಾಹನು ನಿಮ್ಮನ್ನು ಹಿಡಿಯುವುದಿಲ್ಲ. ಆದರೆ ನೀವು ಉದ್ದೇಶಪೂರ್ವಕವಾಗಿ ಮಾಡುವ ಶಪಥಗಳ ಕುರಿತು ಅವನು ಅಗತ್ಯವಾಗಿ ವಿಚಾರಣೆ ನಡೆಸುವನು...." (ಪವಿತ್ರ ಕುರ್‌ಆನ್ ೫–೮೯)

"ಅಲ್ಲಾಹನ ಜೊತೆ ದೃಢವಾದ ಕರಾರು ಮಾಡಿಕೊಂಡ ಬಳಿಕ ಅದನ್ನು ಮುರಿದು ಹಾಕುವರು, ಅಲ್ಲಾಹನು ಜೋಡಿಸಲು ಆಜ್ಞಾಪಿಸಿದ್ದನ್ನು ಮುರಿದು ಹಾಕುವರು ಮತ್ತು ಭೂಮಿಯ ಮೇಲೆ ಕ್ಷೋಭೆಯನ್ನುಂಟು ಮಾಡುವವರು ಯಥಾರ್ಥವಾಗಿ ಇವರೇ ನಷ್ಟಕ್ಕೊಳಗಾಗುವರು. (ಪವಿತ್ರ ಕುರ್‌ಆನ್ ೨–೨೭)

ಅಲ್ಲಾಹನ ಹೆಸರಲ್ಲಿ ಎಂದೂ ಪ್ರಮಾಣ ಮಾಡಬಾರದು.

## ಯಾರು ಭ್ರಷ್ಟಚಾರಿಗಳೋ, ಭಯೋತ್ಪಾದನೆ, ಸಮಾಜದಲ್ಲಿ ಗಲಬೆಯನ್ನು ಉಂಟುಮಾಡುವರೋ ಅವರು ಕೆಳಗಿನ ವಾಕ್ಯವನ್ನು ಗಮನಿಸಬೇಕು

"ಕರ್ಮಗಳ ಪ್ರತಿಫಲವು ಖಂಡಿತವಾಗಿಯೂ ಮುಂದೆ ಬರಲಿಕ್ಕಿದೆ." (ಪವಿತ್ರ ಕುರ್‌ಆನ್ ೫೧–೬)

ಈಗಿನ ಕಾಲದ ಮಾನವರು ಯಾವುದೇ ಅಥವಾ ಯಾರ ಭಯವಿಲ್ಲದೇ ಭ್ರಷ್ಟ ಕಾರ್ಯಗಳಲ್ಲಿ ತೊಡಗಿರುವರು. ದೇವರೇ ಇಲ್ಲ ಎಂದು ತಿಳಿದು ದುಷ್ಟ ಕಾರ್ಯಗಳನ್ನು ಮಾಡುತ್ತಿರುವರು. ಮಾನವನ ಆಯಸ್ಸು ಕೇವಲ ೧೦೦ ವರ್ಷಗಳಿಗೆ ಸೀಮಿತವಾಗಿದೆ. ಆನಂತರ ತಮ್ಮ ದುಷ್ಟ ಕಾರ್ಯಗಳಿಗೆ ಬೆಲೆ ತೆತ್ತಬೇಕಾಗುವುದು.

## ನಾವು ಇನ್ನೊಬ್ಬರನ್ನು ತಿದ್ದಲು ಸಾಧ್ಯವೇ?

"ಓ ಸತ್ಯವಿಶ್ವಾಸಿಗಳೇ, ನೀವು ನಿಮ್ಮ ಬಗ್ಗೆ ಚಿಂತಿಸಿಕೊಳ್ಳಿರಿ. ನೀವು ಸ್ವತಃ ಸತ್ಪಥದಲ್ಲಿದ್ದರೆ ಇತರರ ಪಥಭ್ರಷ್ಟತೆಯಿಂದ ನಿಮಗೇನೂ ಕೇಡುಂಟಾಗದು. ನಿಮಗೆಲ್ಲರಿಗೂ ಅಲ್ಲಾಹನ ಕಡೆಗೆ ಮರಳಿ ಸಾಗಲಿಕ್ಕಿದೆ. ನೀವೇನು ಮಾಡುತ್ತಿದ್ದಿರೆಂದು ಆಗ ಅವನು ನಿಮಗೆ ತೋರಿಸಿ ಕೊಡುವನು." (ಪವಿತ್ರ ಕುರ್‌ಆನ್ ೫–೧೦೫)

ಧರ್ಮವನ್ನು ಅರ್ಥಮಾಡಿಕೊಳ್ಳದ ಜನರನ್ನು ದ್ವೇಷಿಸುವ ಕೆಲಸವು ಶೈತಾನನದಾಗಿದೆ ಎಂಬುದನ್ನು ತಿಳಿದುಕೊಳ್ಳಬೇಕಾಗಿದೆ. ಏಕೆಂದರೆ ನಿಮ್ಮ ಕರ್ಮ ನಿಮಗೆ ಅವರ ಕರ್ಮ ಅವರಿಗೆ.

## ಇತರ ದೇವತೆಗಳನ್ನು ಆರಾಧಿಸಿದರೆ

ದೇವಚರರನ್ನು ಆರಾಧಿಸಿದರೆ ಸಪ್ತಮ ಸ್ವರ್ಗಕ್ಕೆ ಹೋಗಬಹುದು ಆದರೆ ಮತ್ತೆ ಭೂಮಿಗೆ ಬರಬೇಕಾಗುತ್ತದೆ. <u>ಅಲ್ಲಾಹನ ಮಾರ್ಗವನ್ನು ತಿಳಿದು</u> ಆರಾಧಿಸಿದರೆ ಜನ್ನತ್‌ಗೆ ಹೋಗಿ ಅಲ್ಲಾಹನ ಜೊತೆಯಲ್ಲಿಯೇ ನಿರಂತರವಾಗಿ ಇರಬಹುದು. ಕಿಯಾಮತ್‌ವರೆಗೂ ಕಾಯುವ ಅಗತ್ಯವಿಲ್ಲ.

ಋಗ್ವೇದವೂ ಈ ಜನ್ಮದಲ್ಲಿಯೇ ಜನ್ನತ್‌ಗೆ ಹೋಗುವ ಮಾರ್ಗವನ್ನು ತೋರಿಸುತ್ತದೆ.

## ವಿಗ್ರಹಾರಾಧನೆಯ ಫಲ ಕ್ಷಣಿಕ

"ಇಬ್ರಾಹಿಮ್ ತನ್ನ ತಂದೆ ಆಝರನೊಡನೆ, "ನೀವು ವಿಗ್ರಹಗಳನ್ನು ದೇವರನ್ನಾಗಿ ಮಾಡುತ್ತೀರಾ? ನಾನು ನಿಮ್ಮನ್ನು ನಿಮ್ಮ ಜನಾಂಗವನ್ನು ವ್ಯಕ್ತವಾದ ಪಥಭ್ರಷ್ಟತೆಯಲ್ಲಿ ಕಾಣುತ್ತಿರುವೆನು" ಎಂದು ಹೇಳಿದ ಸಂದರ್ಭವನ್ನು ಸ್ಮರಿಸಿರಿ."
(ಪವಿತ್ರ ಕುರ್‌ಆನ್ ೬-೭೪)

ವಿಶ್ವವಿನಾಶದ ನಂತರ ಅಲ್ಲಾಹನು ವಿಗ್ರಹಾರಾಧಕರನ್ನು ಈ ರೀತಿ ಪ್ರಶ್ನಿಸುವನು.

"ನಾವು ಅವರನ್ನು ಒಟ್ಟುಗೂಡಿಸುವಂದು 'ಬಹುದೇವವಿಶ್ವಾಸಿಗಳೊಡನೆ, "ನೀವು ನಿಮ್ಮ ದೇವರೆಂದು ತಿಳಿದು ವೃಥಾ ಅಭಿಮಾನಪಡುತ್ತಿದ್ದ ಸಹಭಾಗಿಗಳು ಈಗ ಎಲ್ಲಿದ್ದಾರೆ?" ಎಂದು ಕೇಳುವೆವು." (ಪವಿತ್ರ ಕುರ್‌ಆನ್ ೬-೨೨)

ಮಾನವರ ಮನಸ್ಸಿನಿಂದ ನಿರ್ಮಿತವಾದ ವಿಗ್ರಹದ ದೇವರುಗಳು. ಕೆಲವರು ಅದರಲ್ಲೂ ಪ್ರಮುಖವಾಗಿ ಭಾರತೀಯರು ವಿಗ್ರಹದಲ್ಲಿ ಪ್ರಾಣ/ಹೋಲಿಸ್ಪಿರಿಟ್‌ಅನ್ನು ಪ್ರತಿಷ್ಠಾಪನೆ ಮಾಡಿ ವಿಗ್ರಹದೇವರನ್ನು ಪೂಜಿಸುವರು ಇವರನ್ನು ಪ್ರಾಣದೇವತೆಗಳು ಎಂದು ಕರೆಯುತ್ತಾರೆ.

ಏಕೆಂದರೆ ವಿಶ್ವದ ಮತ್ತು ಸಕಲ ಜೀವರಾಶಿಗಳ ಅಧಿಪತ್ಯವನ್ನು ವಾಯು/ಹೋಲಿಸ್ಪಿರಿಟ್‌ಗೆ ಕೊಡಲಾಗಿದೆ ಎಂದು ಋಗ್ವೇದವು ಹೇಳುತ್ತದೆ. ಉಸಿರಿಲ್ಲದೇ ಕ್ಷಣಕಾಲವೂ ನಾವು ಜೀವಿಸಲು ಸಾಧ್ಯವಿಲ್ಲ. ಹಾಗೆಯೇ ಹೋಲಿಸ್ಪಿರಿಟ್‌ನ ಶಕ್ತಿಯಿಲ್ಲದೇ ವಿಶ್ವವೂ ಸಹ ಕ್ಷಣಮಾತ್ರದಲ್ಲಿ ವಿನಾಶವನ್ನು ಹೊಂದುವುದು. ಹೋಲಿಸ್ಪಿರಿಟ್‌ನ ಮಹಿಮೆಯನ್ನು ಈಗಾಗಲೇ ಓದಿದ್ದೇವೆ. ಅಲ್ಲಾಹನ ಬಗ್ಗೆ ನಮಗೆ ತಿಳಿಯದಿದ್ದರೂ ಹೋಲಿಸ್ಪಿರಿಟ್ ನಮ್ಮ ಪ್ರಾರ್ಥನೆಗೆ ಫಲವನ್ನು ಕೊಡುತ್ತಾನೆ.

ವಿಗ್ರಹಾರಾಧನೆಯ ಫಲವು ಕ್ಷಣಿಕವಾಗಿರುತ್ತದೆ. ಸೃಷ್ಟಿಯು ಲಯವಾದ ಕೂಡಲೆ ವಿಗ್ರಹದೇವತೆಗಳು ಮಾಯವಾಗುವರು. ಏಕೆಂದರೆ ಸೃಷ್ಟಿ ವಿನಾಶದ ಬಳಿಕ ವಿವಿಧ ಪ್ರಾಣದೇವತೆಗಳು ಹೋಲಿಸ್ಪಿರಿಟ್‌ನಲ್ಲಿ ಒಂದಾಗುವರು. ಸೃಷ್ಟಿಯ ನಾಲ್ಕು ಶಕ್ತಿಗಳು ಒಂದಾಗಿ ನೀರಿನ ಮೇಲೆ ಸಂಚರಿಸುವುದು. ಆದ್ದರಿಂದ ದೇವವಾಣಿಗಳನ್ನು ಸರಿಯಾಗಿ ಅರ್ಥಮಾಡಿಕೊಂಡು ಅಲ್ಲಾಹನ ಮಾರ್ಗವನ್ನು ತಿಳಿದುಕೊಳ್ಳಬೇಕಾಗಿದೆ.

"ಆಗ ಅವರು ತಾವೇ ತಮ್ಮ ಮೇಲೆ ಹೇಗೆ ಸುಳ್ಳನ್ನು ಸೃಷ್ಟಿಸಿಕೊಳ್ಳುವರೆಂದು ನೋಡಿರಿ. ಅಲ್ಲಿ ಅವರ ಕೃತಕ ದೇವರುಗಳೆಲ್ಲ ಹೋಗಿ ಬಿಡುವರು." (ಪವಿತ್ರ ಕುರ್‌ಆನ್ ೬-೨೪)

"ಈಗ ಅವರು "ಓ ನಮ್ಮ ಪ್ರಭೂ, ನಿನ್ನಾಣೆ ನಾವು 'ಬಹುದೇವ ವಿಶ್ವಾಸಿಗಳಾಗಿರಲಿಲ್ಲ" ಎಂಬ (ಸುಳ್ಳು ಹೇಳಿಕೆ ಕೊಡುವ) ಹೊರತು ಇನ್ನಾವ ಕುತಂತ್ರವನ್ನೂ ಹೂಡಲಾರರು." (ಪವಿತ್ರ ಕುರ್‌ಆನ್ ೬-೨೩)

"ಇವರು ತಮ್ಮ ಪ್ರಭುವಿನ ಮುಂದೆ ನಿಲ್ಲಿಸಲ್ಪಡುವ ಆ ದೃಶ್ಯವನ್ನು ನೋಡಲು ನಿಮ್ಮಿಂದ ಸಾಧ್ಯವಾಗುತ್ತಿದ್ದರೆ! ಆಗ ಪ್ರಭು ಇವರೊಡನೆ, "ಇದು ನಿಜಸ್ಥಿತಿಯಲ್ಲವೇ?" ಎಂದು ಕೇಳುವನು, "ಹೌದು ನಮ್ಮ ಪ್ರಭು, ಇದು ನಿಜಸ್ಥಿತಿಯೇ" ಎಂದು ಅವರು ಹೇಳುವರು. ಅವನು, "ಸರಿ ಹಾಗಾದರೆ ಈಗ ನೀವು ನಿಜಸ್ಥಿತಿಯ ನಿರಾಕರಣೆಯ ಫಲವಾಗಿ ಯಾತನೆಯ ಸವಿಯುನ್ನುಣ್ಣಿರಿ" ಎನ್ನುವನು." (ಪವಿತ್ರ ಕುರ್‌ಆನ್ ೬-೩೦)

## ಸಲಿಂಗಕಾಮದ ಬಗ್ಗೆ ಭಗವಂತನ ವಚನ

“ನೀವು ಸ್ತ್ರೀಯರನ್ನು ಬಿಟ್ಟು ಪುರುಷರೊಂದಿಗೆ ನಿಮ್ಮ ಕಾಮಾಭಿಲಾಷೆಯನ್ನು ನೀಗಿಸಿಕೊಳ್ಳುತ್ತೀರಾ? ವಾಸ್ತವದಲ್ಲಿ ನೀವು ಸ್ಪಷ್ಟವಾಗಿ ಹದಮೀರುವವರಾಗಿರುತ್ತೀರಿ.” (ಪವಿತ್ರ ಕುರ್‌ಆನ್ ೭–೮೧)

ಇದು ಏನನ್ನು ಹೇಳುತ್ತಿದೆಯೆಂದರೆ ಮಧ್ಯಪ್ರಾಚ್ಯ ದೇಶಗಳಲ್ಲಿ ಸಲಿಂಗಕಾಮವು ಸಾಮಾನ್ಯ ಪದ್ಧತಿಯಾಗಿತ್ತೆಂದು ತಿಳಿದುಬರುತ್ತದೆ. ಸಲಿಂಗಕಾಮವು ಸೈತಾನನ ಪ್ರಚೋಧನೆಯಾಗಿದೆ. ಇಲ್ಲಿ ಸಕಲ ದೇಶಗಳವರಿಗೂ ಒಂದು ಪಾಠವಿದೆ. ಅಲ್ಲಾಹ್ ಸಲಿಂಗಕಾಮವನ್ನು ಕಾನೂನಾತ್ಮಕವಾಗಿ ಒಪ್ಪಿಕೊಳ್ಳುವುದನ್ನೂ, ನೀತಿಗೆಟ್ಟ ನಡತೆಯನ್ನೂ, ಅಶ್ಲೀಲ ಚಿತ್ರಗಳನ್ನು ತೋರಿಸುವುದನ್ನೂ, ಆಫೀಮ್ ಇತ್ಯಾದಿಗಳನ್ನು ಮಾರುವವರನ್ನೂ ಮತ್ತು ಇತರರ ದೇಶಗಳನ್ನು ಆಕ್ರಮಿಸುವವರನ್ನೂ ಮತ್ತು ಮನುಷ್ಯರನ್ನು ಗುಲಾಮರನ್ನಾಗಿ ಮಾಡಿಕೊಳ್ಳುವವರನ್ನೂ ಅಲ್ಲಾಹ್ ಎಂದಿಗೂ ಕ್ಷಮಿಸುವುದಿಲ್ಲ. ಅಂತಹ ದೇಶಗಳನ್ನು ಅಲ್ಲಾಹ್ ನಾಶಮಾಡುತ್ತಾನೆ.

**ಪ್ರಪಂಚದ ಕೆಲವು ದೇಶಗಳು, ಕೆಲವು ಧಾರ್ಮಿಕ ಗುಂಪುಗಳು ಮತ್ತು ಕೆಲವು ವ್ಯಕ್ತಿಗಳು ಪ್ರಪಂಚದಾದ್ಯಂತ ಯುದ್ಧಭೀತಿ, ಕೊಲೆ, ಸುಲಿಗೆ, ಅತ್ಯಾಚಾರ ಮತ್ತು ಜನರಲ್ಲಿ ಭೀತಿಯನ್ನುಂಟುಮಾಡಲು ಪ್ರಯತ್ನಿಸುತ್ತಿರುವರು. ಕೆಲವರು ದೇವರ ಹೆಸರಿನಲ್ಲಿ ತಮ್ಮನ್ನು ತಾವೇ ಹಿಂಸಿಸಿಕೊಳ್ಳುತ್ತಾರೆ. ಆದರೆ ಅಲ್ಲಾಹನ ಕೆಳಗಿನ ಸೂಕ್ತಗಳನ್ನು ನೋಡಿ.**

“ವಾಸ್ತದಲ್ಲಿ ಅಲ್ಲಾಹನು ಜನರ ಮೇಲೆ ಅಕ್ರಮವೆಸಗುವುದಿಲ್ಲ. ಜನರು ತಾವೇ ತಮ್ಮ ಮೇಲೆ ಅಕ್ರಮವೆಸಿಗಿಕೊಳ್ಳುತ್ತಾರೆ.”
(ಪವಿತ್ರ ಕುರ್‌ಆನ್೧೦–೪೪)
(ಶೈತಾನನ ಕಾರಣದಿಂದ ಜನರು ಈ ರೀತಿ ವರ್ತಿಸುತ್ತಾರೆ.)

“ಕರ್ಮಗಳ ಪ್ರತಿಫಲವು ಖಂಡಿತವಾಗಿಯೂ ಮುಂದೆ ಬರಲಿಕ್ಕಿದೆ.” (ಪವಿತ್ರ ಕುರ್‌ಆನ್ ೫೧–೬)

ಅರಾಜಕತೆಯನ್ನು ಸೃಷ್ಟಿಸುವ, ವಿಧ್ವಂಸಕ ಕೃತ್ಯಗಳನ್ನು ಮಾಡುವವರ, ರಾಜಕೀಯ ಸಿದ್ಧಾಂತದಿಂದ ತಮ್ಮದೇ ಪ್ರಜೆಗಳನ್ನು ಗುಲಾಮರನ್ನಾಗಿ ಮಾಡಿಕೊಳ್ಳುವರು, ಇತರ ದೇಶಗಳ ಮೇಲೆ ದಬ್ಬಾಳಿಕೆ ನಡೆಸುವುದು ಅಥವಾ ಆಕ್ರಮಿಸಿಕೊಳ್ಳುವುದು, ದೇಶದ ಹಣವನ್ನು ಕೊಳ್ಳೆಹೊಡೆಯುವವರ ಕರ್ಮಗಳ ಫಲವು ಅವರಿಗೆ ಖಂಡಿತವಾಗಿ ದೊರಕಲಿದೆ. ಭ್ರಷ್ಟಾಚಾರ, ಭಯೋತ್ಪಾದನೆ, ಕೊಲೆ ಸುಲಿಗೆಗಳಲ್ಲಿ ಮಗ್ನರಾಗಿರುವವರು ಸ್ವರ್ಗಕ್ಕೆ ಹೋಗುತ್ತಾರೊ ಅಥವಾ ನರಕಕ್ಕೋ ಎಂದು ಸಾಮಾನ್ಯ ಜ್ಞಾನವುಳ್ಳ ಮನುಷ್ಯನಿಗೇ ತಿಳಿದಿದೆ.

“ಜನರ ಪೈಕಿ ಯಾವನಾದವರೊಬ್ಬನ ಮಾತುಗಳು ಐಹಿಕ ಜೀವನದಲ್ಲಿ ನಿಮಗೆ ಅತ್ಯಂತ ಹಿತವಾಗಿ ತೋರುತ್ತವೆ. ಅವನು ತನ್ನ ನಿಷ್ಕಾಪಟ್ಯದ ಬಗ್ಗೆ ಪದೇ ಪದೇ ಅಲ್ಲಾಹನನ್ನು ಸಾಕ್ಷವಿರಿಸುತ್ತಾನೆ. ಆದರೆ ವಾಸ್ತವ್ಯದಲ್ಲಿ ಅವನು ಅತ್ಯಂತ ಕೆಟ್ಟ ಶತ್ರುವಾಗಿದ್ದಾನೆ.” (ಪವಿತ್ರ ಕುರ್‌ಆನ್ ೨–೨೦೪)
“ಅಂತಹವನಿಗೆ ಅಧಿಕಾರ ಪ್ರಾಪ್ತವಾದಾಗ ಭೂಮಿಯ ಮೇಲೆ ಅವನ ಚಟುವಟಿಕೆಗಳೆಲ್ಲ ಕ್ಷೋಭೆಯನ್ನುಂಟು ಮಾಡಲಿಕ್ಕೂ ಹೊಲ–ಬೆಳೆಗಳನ್ನು ಹಾಳುಮಾಡಲಿಕ್ಕೂ, ಮಾನವ ವಂಶವನ್ನು ನಾಶಮಾಡಲಿಕ್ಕೂ ಆಗಿರುತ್ತದೆ. (ಅವನು ಸಾಕ್ಷ್ಯವಿರುಸುತ್ತಿರುವ) ಅಲ್ಲಾಹ್ ಕ್ಷೋಭೆಯನ್ನು ಎಷ್ಟು ಮಾತ್ರಕ್ಕೂ ಮೆಚ್ಚುವುದಿಲ್ಲ.” (ಪವಿತ್ರ ಕುರ್‌ಆನ್ ೨–೨೦೫)

(ಧಾರ್ಮಿಕ ಗುಂಪುಗಳನ್ನು ಅಥವಾ ರಾಜಕೀಯ ಸಿದ್ಧಾಂತವನ್ನು ಹೊಸದಾಗಿ ಸ್ಥಾಪಿಸುವಾಗ ಅವುಗಳ ಉದ್ದೇಶವು ಒಳ್ಳೆಯದೇ ಆಗಿರುತ್ತದೆ. ಆದರೆ ಅಧಿಕಾರ ತಮ್ಮ ಕೈಗೆ ಬಂದ ಕೂಡಲೆ ಎಲ್ಲರ ಮೇಲೂ ತಮ್ಮ ಸಿದ್ಧಾಂತವನ್ನು ಹೇರಲು ಬಯಸುತ್ತಾರೆ. ಅದಕ್ಕಾಗಿ ಕೊಲೆಗಳನ್ನು ಮಾಡಲು ಹೇಸುವುದಿಲ್ಲ. ಈ ಸೂಕ್ತವನ್ನು ಗಮನಿಸಬೇಕು.)

“ಒಬ್ಬ ಮಾನವನ ಕೊಲೆಯ ಬದಲಿಗೆ ಅಥವಾ ಭೂಮಿಯಲ್ಲಿ ಕ್ಷೋಭೆಯನ್ನುಂಟುಮಾಡುವ ಕಾರಣಕ್ಕಾಗಿ ಹೊರತು ಯಾರಾದರೂ ಒಬ್ಬ ಮನುಷ್ಯನನ್ನು ವಧಿಸಿದರೆ ಅವನು ಸಕಲ ಮಾನವಕೋಟಿಯನ್ನು ವಧಿಸಿದಂತೆ ಮತ್ತು ಒಬ್ಬನು ಇನ್ನೊಬ್ಬನಿಗೆ ಜೀವದಾನ ಮಾಡಿದರೆ ಅವನು ಸಕಲ ಮಾನವಕೋಟಿಗೆ ಜೀವದಾನ ಮಾಡಿದಂತೆ” (ಪವಿತ್ರ ಕುರ್‌ಆನ್ ೫–೩೨)

(ಮಾನವನು ಸೈತಾನನಿಂದ ಆವರಿಸಲ್ಪಟ್ಟಿದ್ದರೂ ಆತನು ದೈವಾಂಶ ಸಂಭೂತನಾಗಿದ್ದಾನೆ. ಆದರೆ ಭೂಮಿಯಲ್ಲಿ ಕ್ಷೋಭೆಯನ್ನುಂಟುಮಾಡುವವರನ್ನು ವಧಿಸಬೇಕೆಂದು ಹೇಳಲಾಗಿದೆ.)

"ತಮ್ಮ ಧರ್ಮವನ್ನು ಚಿನ್ನವಿಚ್ಛಿನ್ನಗೊಳಿಸಿ ಗುಂಪುಗುಂಪುಗಳಾಗಿ ಬಿಟ್ಟವರ ಜೊತೆ ನಿಶ್ಚಯವಾಗಿಯೂ ನಿಮಗೆ ಯಾವ ಸಂಬಂದವೂ ಇಲ್ಲ. ಅವರ ಪ್ರಕರಣ ಅಲ್ಲಾಹನ ಬಳ ಇದೆ. ಅವರು ಏನು ಮಾಡಿರುತ್ತಾರೆಂಬುದನ್ನು ಅವನೇ ಅವರಿಗೆ ತೋರಿಸುವನು." (ಪವಿತ್ರ ಕುರ್‌ಆನ್ ೬–೧೫೯)

(ಭಾರತೀಯರು ಜಾತಿಯ ಭ್ರಮೆಯಿಂದ, ಕ್ರೈಸ್ತ, ಷಿಯಾ, ಸುನ್ನಿ ಮತ್ತಿತರ ಪಂಗಡಗಳಲ್ಲಿಯೂ ಜಾತಿಗಳವೆ ಮತ್ತು ಅವರು ತಾವೇ ಶ್ರೇಷ್ಟರು ಎಂಬ ಭ್ರಮೆಯಿಂದ ಹೊರಬರಬೇಕು.)

"ಆದರೆ ಆ ಬಳಿಕ ಜನರು ತಮ್ಮ ಧರ್ಮವನ್ನು ಪರಸ್ಪರ ತುಂಡು ತುಂಡು ಮಾಡಿಬಿಟ್ಟರು. ಪ್ರತಿಯೊಂದು ವರ್ಗವೂ ತನ್ನ ಬಳ ಇರುವುದರಲ್ಲೇ ಮಗ್ನವಾಗಿದೆ." (ಪವಿತ್ರ ಕುರ್‌ಆನ್ ೨೩–೫೩)

ಹೀಗಾಗಿ ಇವರು ಇನ್ನೊಬ್ಬರ ಧರ್ಮಸಿದ್ಧಾಂತವನ್ನು ಕೇಳಲೂ ಸಹ ಇಚ್ಛಿಸುವುದಿಲ್ಲ. ಅವರ ಉತ್ತರ "ನಾವು ನಮ್ಮ ಪೂರ್ವಜರು ಏನು ಮಾಡಿದರೋ ಅದನ್ನೇ ಅನುಸರಿಸುತ್ತೇವೆ" ಎಂಬುದಾಗಿದೆ. ಸತ್ಯವನ್ನು ತಿಳಿದ ಯಾರಾದರೂ ಬಂದು ತಿಳಿಸಿದರೂ ಅದರ ಕಡೆ ಗಮನಕೊಡುವುದಿಲ್ಲ.

## ಅಲ್ಲಾಹನು ಯಾರನ್ನು ಅನುಗ್ರಹಿಸಬೇಕು ಎಂಬುದು ಅವನ ಇಚ್ಛೆ.

"ಅವನು ತನಗಿಷ್ಟ ಬಂದವರಿಗೆ 'ಸದ್ವಿವೇಕ' ಪ್ರದಾನ ಮಾಡುತ್ತಾನೆ. ಸದ್ವಿವೇಕ ಪ್ರಾಪ್ತನಾದವನಿಗೆ ವಾಸ್ತವದಲ್ಲಿ ಮಹಾ ಸಂಪತ್ತು ಪ್ರಾಪ್ತವಾಯಿತೆಂದೇ ಅರ್ಥ. ಇವುಗಳಿಂದ ಬುದ್ಧಿಜೀವಿಗಳು ಮಾತ್ರ ಉಪದೇಶ ಪಡೆಯುತ್ತಾರೆ." (ಪವಿತ್ರ ಕುರ್‌ಆನ್ ೨–೨೬೯)

" .....ಅಲ್ಲಾಹ್‌ನು ತನ್ನ ಅನುಗ್ರಹವನ್ನು (ದಿವ್ಯವಾಣಿ ಮತ್ತು ಪ್ರವಾದಿತ್ವ) ತನ್ನ ದಾಸರ ಪೈಕಿ ತನಗಿಷ್ಟ ಬಂದವನಿಗೆ ಅನುಗ್ರಹಿಸುವನು....." (ಪವಿತ್ರ ಕುರ್‌ಆನ್ ೨–೯೦)

"ಅಲ್ಲಾಹನು ಜನರಿಗಾಗಿ ಯಾವ ಕೃಪಾದ್ವಾರವನ್ನು ತೆರೆದರೂ ಅವನನ್ನು ಯಾರೂ ಕೇಳುವವನಿಲ್ಲ. ಅವನು ಯಾವುದನ್ನು ಮುಚ್ಚಿಬಿಟ್ಟನೋ ಅವನ ಹೊರತು ಇನ್ನಾರೂ ಅದನ್ನು ತೆರೆಯುವವನಿಲ್ಲ. ಅವನು ಅತ್ಯಂತ ಪ್ರಬಲನೂ ಯುಕ್ತಿಪೂರ್ಣನೂ ಆಗಿರುತ್ತಾನೆ." (ಪವಿತ್ರ ಕುರ್‌ಆನ್ ೩೫–೨)

ಅಲ್ಲಾಹನ ಅನುಗ್ರಹ ಪಡೆದ ವ್ಯಕ್ತಿಯೇ ಧನ್ಯನು. ಆತನ ಭಾಗ್ಯದ ಬಾಗಿಲು ತೆರೆಯಿತೆಂದೇ ಅರ್ಥ.

ಓಂ ಶಾಂತಿಃ, ಶಾಂತಿಃ, ಶಾಂತಿಃ

ಆ ಪಪ್ರೌ ಪಾರ್ಥಿವಂ ರಜೋ ಬದ್ಬಧೇ ರೋಚನಾ ದಿವಿ ।
ನ ತ್ವಾವಾನ್ ಇಂದ್ರ ಕಶ್ಚನ ನ ಜಾತೋ ನ ಜನಿಷ್ಯತೇಽತಿ ವಿಶ್ವಂ ವವಕ್ಷಿಥ ।। (ಋ ೧–೮೧–೫ ಸಾಭಾ)
"ಎಲೈ ಇಂದ್ರನೆ, ನೀನು ನಿನ್ನ ಮಹಿಮೆಯಿಂದ ಪೃಥ್ವಿ ಅಂತರಿಕ್ಷ ಲೋಕಗಳನ್ನೆಲ್ಲಾ ತುಂಬಿದ್ದೀಯೇ. ದ್ಯುಲೋಕದಲ್ಲಿ ಪ್ರಕಾಶಿಸುತ್ತಿರುವ ಸ್ವರ್ಗವನ್ನು ಭದ್ರವಾಗಿ ನೆಲೆಗೊಳಿಸಿದ್ದೀಯೆ. ಎಲೈ ಇಂದ್ರನೇ, ನಿನಗೆ ಸದೃಶನಾದವನು ಹಿಂದೆಯೂ ಹುಟ್ಟಿಲ್ಲ, ಮುಂದೆಯೂ ಹುಟ್ಟುವುದಿಲ್ಲ. ಅಂತಹ ಮಹಾ ಮಹಿಮನಾದ ನೀನು ಸಕಲ ಜಗತ್ತನ್ನೂ ಅತಿ ಸುರಕ್ಷಿತವಾಗಿ ಎತ್ತಿ ಹಿಡಿಯುತ್ತೀಯಾ.

ರೂಪಂ ರೂಪಂ ಪ್ರತಿರೂಪೋ ಬಭೂವ ತದಸ್ಯ ರೂಪಂ ಪ್ರತಿಚಕ್ಷಣಾಯ ।
ಇಂದ್ರೋ ಮಾಯಾಭಿಃಪುರುರೂಪ ಈಯತೇ ಯುಕ್ತಾಹ್ಯಸ್ಯ ಹರಯಃ ಶತಾದಶ ।।
(ಋಗ್ವೇದ ೬–೪೭–೧೮ ಸಾಭಾ)

"ಇಂದ್ರನು ಅನೇಕ ರೂಪಾಂತರಗಳನ್ನು ತನ್ನ ಇಷ್ಟಾನುಸಾರವಾಗಿ ಹೊಂದುತ್ತಾನೆ. ಈ ಇಂದ್ರನಿಗೆ ಆಯಾ ವೈಯುಕ್ತಿಕವಾದ ಸ್ವರೂಪವು ಅನೇಕ ರೂಪಗಳಲ್ಲಿ ಲೋಕಕ್ಕೆಲ್ಲಾ ಗೋಚರವಾಗಲು ಸಾಧನವಾಗಿದೆ. ಇಂದ್ರನು ತನ್ನ ಅನಂತ ಶಕ್ತಿಗಳಿಂದ ಅನೇಕ ರೂಪಗಳನ್ನು ಹೊಂದಿ ಯಜಮಾನನಲ್ಲಿಗೆ ಹೋಗುತ್ತಾನೆ. ಈ ಇಂದ್ರನ ಅಶ್ವಗಳು ಸಾವಿರಸಂಖ್ಯೆಯುಳ್ಳವಾಗಿ ರಥಕ್ಕೆ ಯೋಜಿತವಾಗಿವೆಯಲ್ಲವೇ" (ಸಾವಿರವೆಂದರೆ ಅನಂತವಾದ ವಾಯುವಿನ ಶಕ್ತಿ)